॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

# ಮಹಾಭಾರತ

## ವನಪರ್ವ

## ಭಾಗ-೬

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ

ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)


ಅನುಗ್ರಹ :

**ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಪ್ರಕಾಶಕರು :

**ತತ್ವಸಂಶೋಧನಸಂಸತ್ (ರಿ.)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

**ಮಹಾಭಾರತ** - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಅಕ್ಕಿಮುಹೂರ್ತದ ಶುಭಸಂದರ್ಭದಲ್ಲಿ(20.01.2017) ದಂದು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

## ವನಪರ್ವ
## ಭಾಗ-೬

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-52-1

**ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ**

| | | |
|---|---|---|
| **ಪುಟಗಳು** | - | XXIV + 696 = 720 |
| **ಮುದ್ರಿತ ಪ್ರತಿಗಳು** | - | 1000 |
| **ಬೆಲೆ** | - | **ರೂ. 425/-** |
| **ಅನುವಾದಕರು** | - | ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು. |
| **ಪ್ರಕಾಶಕರು** | - | ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ. |
| **ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ** | - | ಶ್ರೀ ಎಂ. ಶರತ್ ಚಂದ್ರ ಮತ್ತು ಶ್ರೀಮತಿ ನಾಗಲತಾ |
| **ಮುದ್ರಕರು** | - | ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್, ಮೈಸೂರು. ✆ : 7899779255 |
| **ಗ್ರಂಥಪ್ರಾಪ್ತಿ** | - | ಪಲಿಮಾರು ಮಠ, ಉಡುಪಿ. |

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಂ



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಂ



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಯುನೀನ್ನುಮಃ



ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

---

# ಅನುಗ್ರಹ ಸಂದೇಶ

ವನಪರ್ವವು ಬ್ರಹ್ಮಸೂತ್ರದ ಸಾಧನಾಧ್ಯಾಯವೆನಿಸಿದೆ. ಬ್ರಹ್ಮಸೂತ್ರದಲ್ಲಿ ಯಾವ ಸಾಧನದ ಮಜಲನ್ನು ವಿವರಿಸಿದ್ದಾರೆಯೋ ಅದರ ವಿಶ್ಲೇಷಣ-ವಿವರಣಾತ್ಮಕವಾದದ್ದು ವನಪರ್ವ ಎನ್ನಬಹುದು. ಇದೊಂದು ಸಾಧನೆಯ ವಿಶಿಷ್ಟವಾದ ಅನುಭೂತಿ.

ರಾಮಾಯಣ ಅರಣ್ಯಕಾಂಡದ ವಿವರಣೆಯೇ ಮಹಾಭಾರತದ ವನಪರ್ವ. ರಾಮದೇವರು ಅಲ್ಲಿ ಏನು ಮಾಡಿ ತೋರಿಸಿದರೋ ಅದನ್ನು ಇಲ್ಲಿ ಭೀಮಸೇನಾದಿಗಳು ಅನುಷ್ಠಾನಕ್ಕೆ ತಂದರು.

'ಯದ್ಯದಾಚರತಿಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥'

ದೇವರಿಗೆ ಸಾಧನೆಯ ಅವಶ್ಯಕತೆ ಇಲ್ಲ. ಆದರೆ ಭಕ್ತರು ಹೇಗೆ ಸಾಧನೆ ಮಾಡಬೇಕು ಎನ್ನುವುದನ್ನು ಭಗವಂತ ಸ್ವತಃ ಮಾಡಿ ತೋರಿಸಿದ್ದನ್ನು ನಾವು ರಾಮಾಯಣದಲ್ಲಿ ನೋಡುತ್ತೇವೆ. ಇದನ್ನೇ ಪಾಂಡವರು ವನವಾಸದಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ.

ವನವಾಸ ಎಂದರೆ ಪಾಂಡವರಿಗೆ ಇದೊಂದು ಸಹಜ ಕ್ರಿಯೆ. ಇದು ಬಲಾತ್ಕಾರವಾಗಿ ಮಾಡಿಸಿದ ಒತ್ತಾಯದ ಮಾಫಸ್ಸಾನವೂ ಖಂಡಿತಾ ಅಲ್ಲ. ಪಾಂಡವರು ಇಂದ್ರಪ್ರಸ್ಥದಲ್ಲಿರುವಾಗ ಎಷ್ಟು ಐಷಾರಾಮವಾಗಿದ್ದರೋ ಹಾಗೆಯೇ ವನದಲ್ಲಿಯೂ ಇದ್ದರು. ಅಂದರೆ ಅದೊಂದು ರೀತಿ ಫಲಾತ್ಮಕ ಸಾಧನೆ. ಸಾಧನೆಯನ್ನು ನಾವು ದುಃಖದಿಂದ ಮಾಡುವುದಲ್ಲ. ಅದನ್ನು ಆನಂದದಿಂದ ಮಾಡಬೇಕು. ಖುಷಿಯಲ್ಲಿ ಮಾಡಬೇಕು. ಭಗವಂತನ ಪ್ರೀತಿಗಾಗಿ ಅವನನ್ನು ಉದ್ದೇಶವಾಗಿ ಮಾಡುವಾಗ ಅದರಲ್ಲಿ ಚಿಂತೆ-ವ್ಯಾಕುಲತೆಗಳು-ವಿಷಾದಗಳು-ವಿಕೃತಿಗಳು ಆಗಲೇಬಾರದು. ಪಾಂಡವರು ಅದನ್ನು ಯಥಾವತ್ತಾಗಿ ಮಾಡಿ ತೋರಿಸಿದ್ದಾರೆ. ಉದಾಹರಣೆಗೆ ಭೀಮಸೇನದೇವರು ಎಂದರೆ ವಾಯುದೇವರು. ಇವರು ಪಂಚಪಾಂಡವರಲ್ಲಿಯೂ ಇದ್ದರು. ಹಾಗಾಗಿ ಒಬ್ಬೊಬ್ಬರದ್ದು ಒಂದೊಂದು ವಿಶಿಷ್ಟವಾದ

ಸಾಧನೆಗಳು. ಧರ್ಮರಾಜ ವನವಾಸದಲ್ಲಿ ಇದ್ದ. ವನವಾಸದಲ್ಲಿ ಇದ್ದ ಎಂದರೆ ಇದೊಂದು ಸಾಧನೆ. ಸಾಧನೆಯಲ್ಲಿ ಮಹತ್ತರವಾದ ಸಾಧನೆ ಎಂದರೆ ಶ್ರವಣ-ಮನನ-ಧ್ಯಾನಗಳು. ಅದನ್ನು ಉಪನಿಷತ್ತೇ ಹೇಳುತ್ತದೆ. 'ಸಾಧ್ಯಾಯ ಪ್ರವಚನ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿತಪಸ್ತದ್ಧಿಪ್ತಃ ॥' ಎಂದು. ಅದೇ ತಪಸ್ಸು ಮುಖ್ಯವಾದ ತಪಸ್ಸು ಇದೇ. ಶ್ರವಣ-ಮನನ-ನಿಧಿಧ್ಯಾಸನಗಳು. ಧರ್ಮರಾಜ ವನವಾಸಕ್ಕೆ ಹೋಗುವಾಗ ಒಂಟಿಯಾಗಿ ಹೋಗಿಲ್ಲ. ಎಲ್ಲರನ್ನು ಸೇರಿಸಿಕೊಂಡು ಹೋದ. ಯತಿ-ಮುನಿಗಳು ಸಾಧಕರು ಎಲ್ಲರೂ ಅವರ ಬೆನ್ನಹಿಂದೆ ದಾಪುಕಾಲು ಹಾಕಿಕೊಂಡು ವನಕ್ಕೆ ಪ್ರವೇಶ ಮಾಡಿದರು. ರಾಮದೇವರು ವನಕ್ಕೆ ಹೊರಟರೇ ಸಮಗ್ರ ಅಯೋಧ್ಯೆಯೇ ಹೊರಟು ನಿಂತಿತು. ರಾಮದೇವರು ನಿಷೇಧ ಮಾಡಿದರು. ಆದರೂ ಬೆನ್ನತ್ತಿ ಬಂದರು. ದೇವರು ರಾತ್ರಿವೇಳೆ ಕಣ್ಣುತಪ್ಪಿಸಿ ವನವಾಸಕ್ಕೆ ಹೋದರು. ಪಾಂಡವರೂ ಹಾಗೆಯೇ ಬರಬೇಡಿರೆಂದು ಒತ್ತಾಯ ಮಾಡಿ, ಊರ ಜನರಿಗೆ, ತನ್ನ ಆತ್ಮೀಯ ಬಂಧು-ಬಳಗಕ್ಕೆ ಹೇಳಿದ್ದಾರೆ. ಆದರೂ ಧರ್ಮರಾಜನ ಜೊತೆಗೆ ಬಂದಾಗ ನಿರಾಕರಣೆ ಮಾಡಲಿಲ್ಲ. ಯಾಕೆಂದರೆ ನಾನು ಸಾಧನೆ ಮಾಡುವಾಗ ಉಳಿದವರೂ ಸಾಧನೆ ಮಾಡಲಿ ಎನ್ನುವ ಧರ್ಮಚಿಂತನೆ ಧರ್ಮರಾಜನಲ್ಲಿತ್ತು. ಧರ್ಮರಾಜನು ಧರ್ಮದ ಸಾಕಾರಮೂರ್ತಿ. ತಾನು ಧರ್ಮಾನುಷ್ಠಾನ ಮಾಡುವಾಗ ಜೊತೆಗೆ ಮಾಡುವುದಾದರೆ ಮಾಡಲಿ ಎನ್ನುವ ದೃಷ್ಟಿಯಲ್ಲಿ ಅವರನ್ನು ಕರೆದುಕೊಂಡು ಕಾಡಿಗೆ ಹೋದ ಧರ್ಮರಾಯ. ಧರ್ಮರಾಜನ ಜೊತೆಗೆ ಯತಿಗಳಿದ್ದರು, ಗೃಹಸ್ಥರಿದ್ದರು, ವಟುಗಳಿದ್ದರು. ಸಾಧಕರೆಲ್ಲರೂ ಇದ್ದರು. ಧರ್ಮರಾಜನು ತನ್ನ ಜೀವನದಲ್ಲಿ ಒಂದು ರೀತಿಯಲ್ಲಿ ದ್ರೌಪದೀದೇವಿಯರನ್ನು ಬಿಟ್ಟು ಬ್ರಹ್ಮಚರ್ಯದಲ್ಲಿ ವನವಾಸದಲ್ಲಿದ್ದ ಎನ್ನುವುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಧರ್ಮರಾಜನು ದಿನನಿತ್ಯ ಮುನಿಗಳಿಂದ ಪ್ರವಚನವನ್ನು ಕೇಳುತ್ತಿದ್ದ, ಹೇಳುತ್ತಿದ್ದ. ಇದು ಒಂದು ರೀತಿಯಾದ ವಿಶಿಷ್ಟವಾದ ತಪಸ್ಸು. ಇದು ಮಾಡಬೇಕು. ತಪಸ್ಸು ಎಂದರೆ ಕಣ್ಮುಚ್ಚಿ ಕುಳಿತ ಕೂಡಲೇ ತಪಸ್ಸಾಗುವುದಿಲ್ಲ. ಮನಸ್ಸು ವ್ಯಗ್ರವಾದಾಗ ತಪಸ್ಸಾಗುವುದಿಲ್ಲ. ತಪಸ್ಸು ಆಗಬೇಕಾಗಿದ್ದರೆ ಭಗವಂತನ ಚಿಂತನೆ-ಮಂಥನೆಯಲ್ಲಿ ಪರ್ಯವಸಾನ ಆಗಬೇಕು.

ಶ್ರವಣ-ಮನನದಲ್ಲಿ ಆಗುವ ಏಕಾಗ್ರತೆ ಒಂದೊಂದು ಬಾರಿ ಜಪ-ತಪದಲ್ಲಿ ಆಗದೇ ಇರಬಹುದು. ಅದಕ್ಕೇ ಉಪನಿಷತ್ತು ಒತ್ತುಕೊಟ್ಟದ್ದು 'ತದ್ಧಿತಸ್ತದ್ಧಿತಪಃ' ಎಂದು ಅದನ್ನು ಧರ್ಮರಾಜ ಅನುಷ್ಠಾನ ಮಾಡಿದ. ಇವತ್ತು ಧರ್ಮರಾಜ ವನಪರ್ವದಲ್ಲಿ ಜ್ಞಾನಿಗಳಿಂದ ಕೇಳಿದ ಚಿಂತನೆಗಳ ಕೆಲವು ಮುಖ್ಯಗಳನ್ನು ನಾವು ಹೀಗೆ ನೋಡಬಹುದು. ಧರ್ಮರಾಜ ಕೇಳುವಾಗ ಅವನ ಜೊತೆಗೆ ಎಲ್ಲ ಗೃಹಸ್ಥರು, ಎಲ್ಲ ಸಂನ್ಯಾಸಿಗಳು,

ಎಲ್ಲರೂ ಕಿವಿ ಅರಳಿಸಿ ಕೇಳುತ್ತಿದ್ದರು. ಅವರಿಗೂ ಸಾಧನೆ ಆಯಿತು. ಅಂದರೆ ಒಬ್ಬರ ಸಾಧನೆ ಉಳಿದವರ ಸಾಧನೆಗೆ ಪೂರಕವಾಯಿತು. ಇದು ಪಾಂಡವರ ವನವಾಸದ ವೈಶಿಷ್ಟ್ಯ. ಪಾಂಡವರು ವನವಾಸದಲ್ಲಿರುವಾಗ ಸಾವಿರ-ಸಾವಿರ ಮಂದಿಗೆ ಅನ್ನದಾನ ಮಾಡಿದ್ದಾರೆ. ಹೋಗುವಾಗ ಊರಿನಿಂದ ಏನೂ ಹಿಡಿದುಕೊಂಡು ಹೋಗಿರಲಿಲ್ಲ. ಇದು ಪಾಂಡವರ ಸಾಧನೆಯ ಮಜಲು. ಅಂದರೆ ಸಾಧಕರಿಗೆ ಬೇಕಾದ ಎಲ್ಲ ಪೋಷಕಾಂಶಗಾಳೆಲ್ಲವನ್ನೂ ನೀಡಿದ್ದರು. ಇದು ಹೇಗೆ ಸಾಧ್ಯ ಆಯಿತು? ಅವರಲ್ಲೇನೂ ಇರಲಿಲ್ಲ. ವನದಲ್ಲಿ ಹೇಗೆ ಲಕ್ಷಗಟ್ಟಲೇ ಮಂದಿಗೆ ಅನ್ನದಾನ ಮಾಡಿದರು ಎಂದರೆ ಇದು ಸಾಧನೆಯ ಫಲರೂಪವಾದದ್ದು. ಏನು ಎಂದರೆ ಸಾಧನೆ ಧರ್ಮರಾಜ ಸೂರ್ಯೋಪಾಸನೆ ಮಾಡಿದ. ಸೂರ್ಯನೊಳಗಿದ್ದ ವಾಯುದೇವರನ್ನು ಉಪಾಸನೆ ಮಾಡಿದ. ಅಕ್ಷಯಪಾತ್ರೆಯನ್ನು ಪಡೆದ.

ನೋಡಿ! ವನವಾಸ ಸಾಧನವೂ ಹೌದು, ಫಲವೂ ಹೌದು. ಸಾಧನೆ ಮಾಡಿ ಫಲವನ್ನು ಪಡೆದ. ಅಂತಿಮ ಫಲ ಭಗವಂತನ ಅನುಗ್ರಹ. ಮೋಕ್ಷರೂಪಫಲವೇ ಆಗಿದ್ದರೂ ಕೂಡ ತಾತ್ಕಾಲಿಕ ಫಲ ಈ ಅಕ್ಷಯಪಾತ್ರೆ ಸಿಕ್ಕಿದ್ದು. ಇದನ್ನು ಅಪಲಾಪ ಮಾಡಲಿಕ್ಕಾಗುವುದಿಲ್ಲ. ಯಾಕೆಂದರೆ ಇದು ಅದರ ಜೊತೆಗೆ ಬರುವಂತದ್ದು. **'ಸರ್ವೇಪಿ ಪುರುಷಾರ್ಥಸ್ಯುಃಜ್ಞಾನಾದೇವ ನ ಸಂಶಯಃ ॥'** ಜ್ಞಾನದ ಜೊತೆ ಜ್ಞಾನ ಬಂದಾಗ ಅದರ ಜೊತೆಗೆ ಎಲ್ಲ ಪುರುಷಾರ್ಥಗಳೂ ಸಿದ್ಧಿಸುತ್ತದೆ. **'ಪುರುಷಾರ್ಥೋತಃ ಶಬ್ದಾತ್ ಇತಿ ಬಾದರಾಯಣಃ'** ಎಂಬಲ್ಲಿ ವೇದವ್ಯಾಸರು ಇದನ್ನು ನಿರ್ಣಯ ಮಾಡಿದ್ದಾರೆ. ಎಂದರೆ ಜ್ಞಾನ ಸಂಪಾದನೆ ಮಾಡಲಿಕ್ಕೆ ಹೊರಟಾಗ ಲೌಕಿಕಫಲಗಳು ಅನಾಯಾಸವಾಗಿ ಬರುತ್ತವೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಅಕ್ಷಯಪಾತ್ರೆಯ ಫಲವಾಗಿ ಎಲ್ಲರನ್ನೂ ತಣಿಸಿದ. ದುರ್ವಾಸರು ಕೆಣಕಲಿಕ್ಕೆ ಬಂದರೆ ಅವರನ್ನೂ ತಣಿಸಿರತಕ್ಕಂತಹದ್ದು ಇದೇ ಅಕ್ಷಯಪಾತ್ರೆಯಿಂದ. ಅಕ್ಷಯಪಾತ್ರೆಯ ಮೂಲಕ ಭಗವಂತನನ್ನು ಒಲಿಸಿಕೊಂಡು ಎನ್ನುವುದನ್ನು ನಾವು ಪಾಂಡವರ ಈ ವನವಾಸದ ಸಾಧನೆಯಲ್ಲಿ ಕಾಣುತ್ತೇವೆ. ಹನ್ನೆರಡು ವರ್ಷದ ಈ ವನವಾಸದಲ್ಲಿ ನಿರಂತರವಾಗಿ ಧರ್ಮರಾಜ ಕೇಳುವುದರ ಮೂಲಕ ಸಮಗ್ರ ಜಗತ್ತಿಗೇ ಕೊಟ್ಟಿರತಕ್ಕಂತಹ ಸಂದೇಶವು ನಮ್ಮ ಬಾಳೂ ಹೀಗೆ ಸಾಧನೆ ಆಗಬೇಕು ಎಂದು.

ವನ ಎಂಬ ಶಬ್ದಕ್ಕೆ ಉಪನಿಷತ್ತಿನಲ್ಲಿ ತದ್ವನಮಿತ್ಯುಪಾಸೀತ ಎಂದು ತಲವಕಾರ ಉಪನಿಷತ್ತು ಭಗವಂತನನ್ನು ವನ ಎಂದು ಉಪಾಸನೆ ಮಾಡಬೇಕು. ವನನೀಯತ್ವಾತ್ ವನಂ ನಾಮ ವನನೀಯನಾದ ಭಜನೀಯನಾದ ಭಗವಂತನನ್ನು ವನ ಎಂದು ಕರೆದಿದ್ದರು. ಹಾಗಾಗಿ ಧರ್ಮರಾಜನ ಪಾಲಿಗೆ ಪಾಂಡವರ ಪಾಲಿಗೆ ವನವಾಸ

ಭಗವಂತನ ಉಪಾಸನೆಯ ಫಲವಾಯಿತು. ಉಪಾಸನೆಯ ಮುಖ ಆಯಿತು ಅನ್ನುವುದನ್ನು ನಾವು ಚಿಂತನೆ ಮಾಡಬೇಕಾದದ್ದು. ಕೇವಲ ಧರ್ಮರಾಜ ಮಾತ್ರ ಅಲ್ಲ ಭೀಮಸೇನದೇವರ ಜೀವನವೇ ಹಾಗೆ. ಪೂಜೆ ಇಲ್ಲದೇ ಅವರು ಇರುವುದೇ ಇಲ್ಲ. ಏನು ಮಾಡಿದರೂ ಅದು ಭಗವಂತನ ಪೂಜೆ ಎಂದು ಕಿರ್ಮೀರಾದಿಗಳನ್ನು ಸಂಹಾರ ಮಾಡಿದರು ಭೀಮಸೇನದೇವರು. ಆದರೆ ಕೇವಲ ಅದು ರಾಗ-ದ್ವೇಷದ ಒಂದು ಮನೋವಿಕ್ಷೇಪ ಅಷ್ಟೇ ಅಲ್ಲ. ಅದು ಒಂದು ರೀತಿಯಾದ ಭಗವಂತನ ಪೂಜೆ. ಜರಾಸಂಧನ ವಧೆಯ ಕಾಲದಲ್ಲಿ ಇದನ್ನು ಸ್ಪಷ್ಟೀಕರಣ ಮಾಡಿದ್ದರು. ಜರಾಸಂಧನವಧೆ ಎಂದರೆ ಭಗವಂತ ಪ್ರತ್ಯಕ್ಷವಾಗಿ ಸ್ವೀಕಾರ ಮಾಡಿದ ಒಂದು ಪೂಜೆ ಎಂದು. ಬ್ರಾಹ್ಮಣನಿಗೆ ದೇವರ ಶಾಲಿಗ್ರಾಮಾದಿಗಳ ಪೂಜೆ ಹೇಗೋ ಹಾಗೆ ಕ್ಷತ್ರಿಯನಾದವನಿಗೆ ಯುದ್ಧ-ದುಷ್ಟರ ಸಂಹಾರ ಎನ್ನುವುದು ಭಗವಂತನ ಪೂಜೆ. ಭೀಮಸೇನದೇವರು ದ್ವೇಷದಿಂದ ಮಾಡಲಿಲ್ಲ. ಭಗವಂತನ ಮೇಲೆ ಭಕ್ತ್ಯುದ್ರೇಕದಿಂದ, ಅವನ ವಿರೋಧಿಗಳಾದ ಕಿರ್ಮೀರದಲ್ಲಿ ದ್ವೇಷ. ದ್ವೇಷ ಎಂದರೆ ಭಗವಂತನ ದ್ವೇಷಿಗಳಲ್ಲಿದ್ವೇಷ. ಅದು ಮನೋವಿಕಾರವಲ್ಲ. ವೈಯಕ್ತಿಕವಾದ ದ್ವೇಷವಾದರೆ ಅದು ದೋಷ. ಆದರೆ ಭಗವಂತನ ವಿರೋಧಿಗಳಿದ್ದರೆ ದ್ವೇಷ ಮಾಡಿದರೆ ಇದು ಭಗವಂತನ ಪ್ರೀತಿಗೆ ಕಾರಣವಾದ್ದರಿಂದ ಭಗವಂತನ ಪೂಜೆಯಲ್ಲಿ ಪರ್ಯವಸಾನವಾಗುತ್ತದೆ. ಹಾಗಾಗಿ ಭೀಮಸೇನದೇವರು ಯುದ್ಧ ಮಾಡಿದರೂ ಭಗವಂತನ ದ್ವೇಷಿ ಅನ್ನುವ ಕಾರಣದಿಂದ ಮಾಡಿದ್ದಾರೆ. ಇದೊಂದು ಪೂಜೆಯೇ ಆಯಿತು. ಇಂತಹ ಪೂಜಾತ್ಮಕವಾದ ಸಾಧನೆ ಭೀಮಸೇನದೇವರದ್ದು. ಸೌಗಂಧಿಕಾ ಪುಷ್ಪ ತರುವುದಿರಬಹುದು, ಅಥವಾ ಅಲ್ಲಿರತಕ್ಕಂತಹ ರಾಕ್ಷಸರನ್ನು ಸಂಹಾರ ಮಾಡಿದ್ದಿರಬಹುದು. ಎಲ್ಲ ಭಗವಂತನ ಪೂಜೆ, ಹಾಗಾಗಿ ಇದೊಂದು ಸಾಧನಾಧ್ಯಾಯ.

ಅರ್ಜುನನಂತು ಸಾಧನಫಲ. ಸಾಧನ ಎಂತಂದರೆ ಕಿರಾತಾರ್ಜುನೀಯ. ಕಿರಾತನ ಜೊತೆಗೆ ಎಂದರೆ ರುದ್ರದೇವರನ್ನು ಒಲಿಸಿಕೊಂಡಿದ್ದಾರೆ. ರುದ್ರದೇವರ ಆರಾಧನೆ ತಪ್ಪೇನು ಅಲ್ಲ. ತಂತ್ರಸಾರ ಸಂಗ್ರಹದಲ್ಲಿ ಆಚಾರ್ಯರು ಹೇಳುತ್ತಾರೆ. ಒಂದು ರೀತಿಯಲ್ಲಿ ಅರ್ಜುನ ಇಂದ್ರ. ಇಂದ್ರನಿಗೆ ಗುರುರುದ್ರದೇವರು. ಅವರ ಮೂಲಕ ಪಾಠಪ್ರವಚನ ಮಾಡಿಕೊಂಡರೆ ಅದು ದೋಷ ಏನೂ ಅಲ್ಲ. ಅದು ಗುಣವೇ ಭೂಷವೇ. ಸ್ವೋತ್ತಮರಿಂದ ಅವನು ಅಧ್ಯಯನ ಮಾಡಿದ್ದು. ಅದನ್ನು ವೇದವ್ಯಾಸದೇವರು ಹೇಳಿ ಧರ್ಮರಾಜನ ಮೂಲಕ ಪಂಚಾಕ್ಷರಮಂತ್ರ ಉಪದೇಶ ಮಾಡಿಸಿ, ಅರ್ಜುನನಿಗೆ ದೀಕ್ಷೆಯನ್ನು ಕೊಟ್ಟರು. ಅರ್ಜುನ ಧ್ಯಾನ ಮಾಡಿದ. ಅದು

ಯುದ್ಧವೇ ಆಯಿತು. ಕ್ಷತ್ರಿಯವಿಹಿತ ಪೂಜೆ ಆಯಿತು. ಅದರಿಂದ ಇದೊಂದು ಅರ್ಜುನನ ಪಾಲಿಗೆ ಸಾಧನೆಯೇ ಆಯಿತು. ಸ್ವರ್ಗಕ್ಕೆ ಹೋದ ಎಂಬುದೂ ಫಲನೂ ಆಯಿತು. ಹೀಗೆ ದ್ರೌಪದೀ ದೇವಿಯರಂತೂ ನಿತ್ಯ ಭಗವಂತನ ಉಪಾಸನೆ ಮಾಡುವವರು. ಪರಶುಕ್ಷತ್ರಿಯದಲ್ಲಿ ಪ್ರವಿಷ್ಟರಾದವರು. ಶುದ್ಧರಾದವರು. ಶುದ್ಧ ಭಾಗವತಧರ್ಮದಲ್ಲಿ ಇರುವವರು. ಹನ್ನೆರಡು ವರ್ಷ ವನವಾಸದಲ್ಲಿ ಭೀಮಸೇನದೇವರ ಕಿಂಕರಿಯಾಗಿ ಅವರ ಮೂಲಕ ಭಗವಂತನನ್ನು ವಿಶೇಷವಾಗಿ ಉಪಾಸನೆ ಮಾಡಿದವರು. ಧ್ಯಾನ ಮಾಡಿದವರು. ಅಕ್ಷಯಪಾತ್ರೆಯ ಮೂಲಕ ಅನ್ನವನ್ನು ಸಿದ್ಧಪಡಿಸಿ ಅಡುಗೆಯನ್ನು ಬಡಿಸುವಾಗಲೂ ಕೂಡ ವೈಶ್ವಾನರನನ್ನು ಚಿಂತನೆ ಮಾಡಿ ಇದು ಭಗವಂತನ ಪೂಜೆಯನ್ನಾಗಿ ಮಾಡಿದವರು. ಒಂದು ದಿನವೂ ಭಗವಂತನನ್ನು ನೆನೆಯದೇ ಇರಲಿಲ್ಲ.

ಹೀಗೆ ಪಾಂಡವರ ಕಥೆಯನ್ನು ಬಣ್ಣಿಸುವ ಅಪೂರ್ವವಾದ ಈ ಭಾಗ ಒಂದು ರೀತಿಯಲ್ಲಿ ಸಾಧನಾಧ್ಯಾಯ. ಇದರಲ್ಲಿ ನೂರಾರು ಕಥೆಗಳಿವೆ. ಕಥೆಗಳ ಹಿನ್ನೆಯಲ್ಲಿ ನಮ್ಮ ಜೀವನದಲ್ಲಿರತಕ್ಕ ವ್ಯಥೆಯ ಕಥೆಯನ್ನು ದೂರ ಮಾಡಿ, ಸಂತೋಷದ ಘಟ್ಟವನ್ನು ಮುಟ್ಟಿಸುವ ಚಿಂತನೆ-ಮಂಥನೆಗಳಿವೆ. ಸಾಧನೆಗೆ ಬೇಕಾದ ಪೂರಕ ವಸ್ತುಗಳಿವೆ. ಅದನ್ನು ವೇದವ್ಯಾಸದೇವರು ಇಲ್ಲಿ ಜೋಡಿಸಿದ್ದಾರೆ. ಇದಕ್ಕೆ ಮಹಾಜ್ಞಾನಿಗಳೆಲ್ಲ ವ್ಯಾಖ್ಯಾನದ ಮೂಲಕ ಇದನ್ನು ವೈಭವೀಕರಿಸಿದ್ದಾರೆ. ನಮ್ಮ ಆಚಾರ್ಯರು ನಿರ್ಣಯಿಸಿದ ತಾತ್ಪರ್ಯನಿರ್ಣಯದ ಭಾಗ ಇಲ್ಲಿ ಉಲ್ಲೇಖ ಮಾಡಲಾಗಿದೆ. ಶ್ರೀವಾದಿರಾಜ ಗುರುಸಾರ್ವಭೌಮರು ಕೊಟ್ಟರತಕ್ಕಂತಹ ಲಕ್ಷಾಲಂಕಾರದ ಚಿಂತನೆ ಮೂಲವಿಲ್ಲಿದೆ. ಅದರ ಹಿನ್ನೆಲೆಯಲ್ಲಿ ಕನ್ನಡದ ಅನುವಾದ ಇಲ್ಲಿ ಇದೆ. ನಮ್ಮ ವಿದ್ವಾಂಸರಾದ ತನ್ನ ಜೀವನವನ್ನೇ ಶಾಸ್ತ್ರಕ್ಕೆ ಮುಡುಪಾಗಿಟ್ಟ ಪರಿಮಾಪಟ್ಣ ಶೇಷಗಿರಿ ಆಚಾರ್ಯರ ಶುದ್ಧ ಕನ್ನಡದ ಅನುವಾದ ಇದೆ. ಶ್ಲೋಕ ಶ್ಲೋಕಗಳ ಅನುವಾದ ಇದೆ. ಪದ ಪದಗಳ ಅನುಸಂಧಾನ ಇಲ್ಲಿ ಇದೆ. ಇದರ ಹಿನ್ನೆಲೆಯಲ್ಲಿ ನಾವು ಸಮಗ್ರ ಮಹಾಭಾರತವನ್ನು ವನಪರ್ವವನ್ನು ಚಿಂತನೆ ಮಾಡಬೇಕು. ಅದರ ಹಿನ್ನೆಲೆಯಲ್ಲಿ ಬೆ.ನಾ. ವಿಜಯೀಂದ್ರಾಚಾರ್ಯರ ಪರಿಶ್ರಮ ತುಂಬಾ ಇದೆ. ಅವರನ್ನೂ ಕೂಡ ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದಿಸಿ, ಈ ಜ್ಞಾನಕಾರ್ಯದ ಪೂರ್ಣಪ್ರಯೋಜನ ನಮ್ಮ ಸಮಾಜ ಪಡೆಯಬೇಕು ಅಂತ ನಾವು ಆಶಿಸುತ್ತೇವೆ.

ನಾರಾಯಣ ಸ್ಮರಣೆಗಳು

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು**

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

# ಪ್ರಕಾಶಕರ ನುಡಿ

ಮಹಾಭಾರತ ವನಪರ್ವ ಮತ್ತು ಅದರ ಕನ್ನಡಾನುವಾದವನ್ನು ಹರಿವಾಯು ಗುರುಗಳ ದಯದಿಂದ ಜಿಜ್ಞಾಸುಗಳಿಗೆ ಒದಗಿಸುತ್ತಿದ್ದೇವೆ. ಈ ಪರ್ವದಲ್ಲಿ ಆರಣ್ಯಕಪರ್ವ, ಕಿರ್ಮೀರವಧಪರ್ವ, ಅರ್ಜುನಾಭಿಗಮನ ಪರ್ವ, ಕೈರಾತ ಪರ್ವ, ಇಂದ್ರಲೋಕಾಭಿಗಮನಪರ್ವ, ನಳೋಪಾಖ್ಯಾನಪರ್ವ, ತೀರ್ಥಯಾತ್ರಾಪರ್ವ, ಜಟಾಸುರವಧಪರ್ವ, ಯಕ್ಷಯುದ್ಧಪರ್ವ, ನಿವಾತಕವಚ ಯುದ್ಧ ಪರ್ವ, ಆಜಗರಪರ್ವ, ಮಾರ್ಕಂಡೇಯಸಮಾಸ್ಯಾಪರ್ವ, ದ್ರೌಪದೀಸತ್ಯಭಾಮಾ ಸಂವಾದ ಪರ್ವ, ಘೋಷಯಾತ್ರಾಪರ್ವ, ಮೃಗಸ್ವಪ್ನೋದ್ಭವಪರ್ವ, ವ್ರೀಹಿದ್ರೌಣಿಕಪರ್ವ, ದ್ರೌಪದೀಹರಣ ಪರ್ವ, ಜಯದ್ರಥವಿಮೋಕ್ಷಣ ಪರ್ವ, ರಾಮೋಪಾಖ್ಯಾನ ಪರ್ವ, ಪತಿವ್ರತಾ ಮಹಾತ್ಮ್ಯಪರ್ವ, ಕುಂಡಲಾಹರಣ ಪರ್ವ, ಆರಣೇಯ ಪರ್ವ ಎಂಬ ಅವಾಂತರ ಪರ್ವಗಳಿವೆ. ಶ್ರೀಮದಾಚಾರ್ಯರು ವನಪರ್ವದ ಕಥೆಯನ್ನು ಮಹಾಭಾರತ ತಾತ್ಪರ್ಯನಿರ್ಣಯದ 22ನೆಯ ಅಧ್ಯಾಯದಲ್ಲಿ ಸಂಗ್ರಹಿಸಿ ತಾತ್ಪರ್ಯಗಳನ್ನು ತಿಳಿಸಿದ್ದಾರೆ.

ವನವಾಸ ಸಮಯದಲ್ಲಿಯೂ ಯುಧಿಷ್ಠಿರನ ಜೊತೆಯಲ್ಲಿ ಎಂಬತ್ತೆಂಟು ಸಾವಿರ ಯತಿಗಳೂ ಮತ್ತು ಸ್ನಾತಕರೂ ಇದ್ದು ಅವರಿಗೆ ಯುಧಿಷ್ಠಿರನು ಆಶ್ರಯವನ್ನು ನೀಡಿದ ವಿಷಯವು ಹರಿಭಕ್ತರು ಯಾವ ಪರಿಸ್ಥಿತಿಯಲ್ಲಿದ್ದರೂ ಅವರಿಗೆ ದುರ್ದಶೆಯುಂಟಾಗುವುದಿಲ್ಲವೆಂದು ಸಿದ್ಧಪಡಿಸುತ್ತದೆ. ಅರ್ಜುನನು ಸ್ವರ್ಗಲೋಕದಲ್ಲಿ ಊರ್ವಶಿಯ ಜೊತೆಯಲ್ಲಿ ಮಾಡುವ ಸಂವಾದವು ಅವನ ಪರಿಶುದ್ಧತೆಯನ್ನು ತೋರಿಸುವುದಲ್ಲದೆ ಮಹಾತ್ಮರ ಮನಸ್ಸು ಶುದ್ಧ ಜಲದಂತೆ ಇರುತ್ತದೆ ಎಂದೂ ತೋರಿಸುತ್ತದೆ. ತೀರ್ಥಯಾತ್ರಾಪರ್ವದಲ್ಲಿ ಉಲ್ಲೇಖಿಸಲ್ಪಟ್ಟಿರುವ ತೀರ್ಥಕ್ಷೇತ್ರಗಳು ಇಷ್ಟು ವಿಸ್ತಾರವಾಗಿ ಬೇರೆ ಯಾವ ಪುರಾಣದಲ್ಲಿಯೂ ನಿರೂಪಿತವಾಗಿಲ್ಲ. ಆದಿಪರ್ವ ಮತ್ತು ಸಭಾಪರ್ವಗಳಲ್ಲಿ ಆಚಾರ್ಯರು ಉದಾಹರಿಸಿದ ಅನೇಕ ಶ್ಲೋಕಗಳು ದೊರೆತಂತೆ ವನಪರ್ವದಲ್ಲಿಯೂ ದೊರೆಯುತ್ತವೆ. ಆಚಾರ್ಯರು ಪೃಥಗಧಿಕರಣದ ಅನುವ್ಯಾಖ್ಯಾನದಲ್ಲಿ ಉದಾಹರಿಸಿರುವ 'ಆಚಕ್ಷ್ವ ಮೇ ಪರಂ ಮೋಕ್ಷಂ' ಮೊದಲಾದ ಶ್ಲೋಕಗಳು ಮಾರ್ಕಂಡೇಯ ಸಮಾಸ್ಯಾಪರ್ವದಲ್ಲಿ ತಾರ್ಕ್ಷ್ಯ ಸರಸ್ವತೀ ಸಂವಾದದಲ್ಲಿ ದೊರೆಯುತ್ತವೆ. ಮಾರ್ಕಂಡೇಯ ಸಮಾಸ್ಯಾಪರ್ವವು ಅನೇಕ ತತ್ತ್ವವಿಷಯಗಳಿಂದ

ತುಂಬಿದೆ'. ದ್ರೌಪದೀಸತ್ಯಭಾಮಾಸಂವಾದಪರ್ವವು ಅನೇಕ ಪತಿವ್ರತಾಧರ್ಮಗಳನ್ನು ನಿರೂಪಿಸುತ್ತದೆ. ರಾಮಾಯಣದ ಕಥೆಯಂತೂ ರಾಮೋಪಾಖ್ಯಾನ ಪರ್ವದಲ್ಲಿ ಇಪ್ಪತ್ತು ಅಧ್ಯಾಯಗಳಲ್ಲಿ ಮೂಡಿಬಂದಿದೆ. ಭಾಗವತದಲ್ಲಿಯಾದರೆ ನವಮಸ್ಕಂದದಲ್ಲಿ ಕೇವಲ ಮೂರು ಅಧ್ಯಾಯಗಳಲ್ಲಿ ಬಹಳ ಸಂಕ್ಷಿಪ್ತವಾಗಿ ಹೇಳಲ್ಪಟ್ಟಿದೆ. ಮೂಲರಾಮಾಯಣವು ನಮಗೆ ಈಗ ದೊರೆಯದಿರುವ ಸಂದರ್ಭದಲ್ಲಿ ಈ ರಾಮಕಥೆಯೇ ವೇದವ್ಯಾಸರ ಮುಖದಿಂದ ಹೊರಹೊಮ್ಮಿದ ರಾಮಕಥೆಗಳಲ್ಲಿ ವಿಸ್ತಾರವಾದುದೆಂದು ಗಮನಿಸಬೇಕು. ಇಲ್ಲಿ ಹೇಳಿರುವ ಪ್ರತಿಯೊಂದು ವಿಷಯವನ್ನೂ ಸಹ, ತಾತ್ಪರ್ಯನಿರ್ಣಯವನ್ನೂ ಸೇರಿಸಿ ಶ್ರೀನಾರಾಯಣಪಂಡಿತಾಚಾರ್ಯರು ಸಂಗ್ರಹರಾಮಾಯಣದಲ್ಲಿ ನಿರೂಪಣೆ ಮಾಡಿರುವುದೂ ಸಹ ಗಮನಾರ್ಹವಾದ ಸಂಗತಿ.

ಇಂತಹ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ವನಪರ್ವದ ಭಾಗವನ್ನು ಅರ್ಥಸಹಿತ ನಾಲ್ಕು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಅಕ್ಕಿ ಮುಹೂರ್ತದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅದ್ಭುತವಾದ ಶ್ರೀಮಹಾಭಾರತ ಶುದ್ಧಪಾಠದ ಮುದ್ರಣಕಾರ್ಯಕ್ಕೆ ಪೂರ್ಣವಾಗಿ ಆರ್ಥಿಕ ನೆರವನ್ನು ನೀಡಿರುವುದು ನಮ್ಮ ಘನವೆತ್ತ ಕರ್ನಾಟಕ ಸರ್ಕಾರ. ಹಿಂದಿನ ಕಾಲದಲ್ಲಿ ರಾಜಾಶ್ರಯ ಇತ್ತು. ಈಗಲೂ ಇಂತಹ ಚಾರಿತ್ರಾತ್ಮಕ ಕಾರ್ಯದಲ್ಲಿ ನಮಗೆ ಸರ್ಕಾರದ ಆಶ್ರಯ ದೊರಕಿದೆ. ಸರ್ಕಾರದ ಹಾಗೂ ಕರ್ನಾಟಕ ಸಂಸ್ಕೃತ

ವಿಶ್ವವಿದ್ಯಾಲಯದ ಎಲ್ಲಾ ಪದಾಧಿಕಾರಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಕೃತಿಯ ಸಂಪಾದನಾ ಕಾರ್ಯದಲ್ಲಿ ಸಂಪೂರ್ಣವಾಗಿ ಮುತುವರ್ಜಿ ವಹಿಸಿ ಗ್ರಂಥ ಸಂಶೋಧನೆ-ಸಂಪಾದನೆ-ಅರ್ಥ ವಿವರಣೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಶ್ರೀ ಪಿ.ಎಸ್. ಶೇಷಗಿರಿ ಆಚಾರ್ಯರಿಗೆ ನಮನಗಳ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತ, ನಮ್ಮ ನಾಡಿನ ಉತ್ತಮವಾಗ್ಮಿಗಳು, ಪ್ರಭಾವೀ ಪ್ರವಚನಕಾರರು-ಲೇಖಕರು-ಒಳ್ಳೆಯ ಸಂಯೋಜಕರು ಆದ ಡಾ|| ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಯನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ದೋಷರಹಿತವಾಗಿ, ಸುಂದರವಾಗಿ ಅಕ್ಷರಜೋಡನೆಯನ್ನು ಮಾಡಿದ ಶ್ರೀಮತಿ ನಾಗಲತಾ ಹಾಗೂ ಶ್ರೀ ಶರತ್‌ಚಂದ್ರ ಎಂ. ಅವರಿಗೂ ಮತ್ತು ಅಂದವಾಗಿ, ಅಚ್ಚುಕಟ್ಟಾಗಿ ಕೃತಿಗಳನ್ನು ಮುದ್ರಿಸಿಕೊಟ್ಟಿರುವ ಮೈಸೂರಿನ ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್‌ರವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಆಸ್ತಿಕ ಸಮಾಜಕ್ಕೆ ನಮ್ಮ ಸಂಸ್ಥೆಯ ಹಾಗೂ ವಿದ್ವನ್ಮಂಡಲಿಯ ಅನನ್ಯವಾದ ಉಪಾಯನ ಈ ಗ್ರಂಥ. ಇದನ್ನು ಸ್ವೀಕರಿಸಿ ಅಧ್ಯಯನ ಮಾಡಿ ಆಂತರಿಕ ಸಂಪತ್ತನ್ನು ಸಭ್ಯ ಸಮಾಜ ಬೆಳೆಸಿಕೊಳ್ಳಲಿ, ತನ್ಮೂಲಕ ವಿದ್ವಾಂಸರ ಈ ಶ್ರಮ ಸಾರ್ಥಕವಾಗಲಿ ಎಂದು ಅಪೇಕ್ಷಿಸುತ್ತಿದ್ದೇನೆ.

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ತ್ವಸಂಶೋಧನಸಂಸತ್,
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

# ವನಪರ್ವವನ್ನು ಕುರಿತು

ವನಪರ್ವವು ಮಹಾಭಾರತದ ಮೂರನೆಯ ಪರ್ವ. ಇದನ್ನು ಅರಣ್ಯಪರ್ವವೆಂದೂ ಕರೆಯುವುದುಂಟು. ಪಾಂಡವರ ವನವಾಸದ ಹನ್ನೆರಡು ವರ್ಷಗಳ ಕಥೆಯ ಮೂಲ ಚೌಕಟ್ಟಿನಲ್ಲಿ ಇಲ್ಲಿ ಅನೇಕಾನೇಕ ಉಪಾಖ್ಯಾನಗಳು ಬರುತ್ತವೆ. ಈ ಪರ್ವದಲ್ಲಿರುವ ಅಧ್ಯಾಯಗಳ ಒಟ್ಟು ಸಂಖ್ಯೆ, ಕುಂಭಕೋಣ ಪ್ರತಿಯಂತೆ ೩೧೫, ಪೂನಾ ಪ್ರತಿಯಂತೆ ೨೯೯, ಮದ್ರಾಸ್ ಪ್ರತಿಯಂತೆ ೨೬೯, ಲಕ್ಷಾಲಂಕದಂತೆ ೩೦೨ ತಾಳೆಗರಿಗಳನ್ನು ಆಧರಿಸಿದ ನಮ್ಮ ಪಾಠದ ಪ್ರಕಾರ ೩೦೫ ಅಧ್ಯಾಯಗಳು ಆಗುತ್ತವೆ.

ಈ ಪರ್ವದಲ್ಲಿ ೨೧ ಅವಾಂತರ ಪರ್ವಗಳಿದೆ. ಅವುಗಳು :-

೧. ಕಿರ್ಮೀರವಧಪರ್ವ, ೨. ಅರ್ಜುನಾಗಮನಪರ್ವ, ೩. ಕೈರಾತಪರ್ವ, ೪. ಇಂದ್ರಲೋಕಾಭಿಗಮನ ಪರ್ವ, ೫. ನಳಪರ್ವ, ೬. ತೀರ್ಥಯಾತ್ರಾಪರ್ವ, ೭. ಜಟಾಸುರವಧ ಪರ್ವ, ೮. ಯಕ್ಷಯುದ್ಧಪರ್ವ, ೯. ನಿವಾತಕವಚ ಯುದ್ಧ ಪರ್ವ, ೧೦. ಆಜಗರಪರ್ವ, ೧೧. ಮಾರ್ಕಂಡೇಯ ಸಾಮಾಸ್ಯಾಪರ್ವ, ೧೨. ದ್ರೌಪದೀಸತ್ಯಭಾಮಾಸಂವಾದ ಪರ್ವ, ೧೩. ಘೋಷಯಾತ್ರಾಪರ್ವ, ೧೪. ಮೃಗಸ್ವಪ್ನೋದ್ಭವ ಪರ್ವ, ೧೫. ವ್ರೀಹಿದ್ರೌಣಿಕಪರ್ವ, ೧೬. ದ್ರೌಪದೀಹರಣಪರ್ವ, ೧೭. ಜಯದ್ರಥವಿಮೋಕ್ಷಣಪರ್ವ, ೧೮. ರಾಮೋಪಾಖ್ಯಾನಪರ್ವ, ೧೯. ಪತಿವ್ರತಾ ಮಹಾತ್ಮ್ಯಪರ್ವ, ೨೦. ಕುಂಡಲಾಹರಣಪರ್ವ, ೨೧. ಆರಣೇಯ ಪರ್ವ.

ಇದರಲ್ಲಿ ಮಾರ್ಕಂಡೇಯ ಸಮಾಸ್ಯಾಪರ್ವವು ೫೦ ಅಧ್ಯಾಯಗಳಿಂದ ಕೂಡಿದ ದೊಡ್ಡ ಅವಾಂತರಪರ್ವ. ಈ ಪರ್ವದ ಅಧ್ಯಾಯಗಳಲ್ಲಿ ಬೇರೆ ಬೇರೆ ಪಾಠಗಳಲ್ಲಿ ಮತ್ತು ತಾಳೆಗರಿಗಳಲ್ಲಿ ಪೌರ್ವಾಪರ್ಯದ ವ್ಯತ್ಯಾಸಗಳಿದೆ. ನಾವು ಹೆಚ್ಚಾಗಿ ಲಕ್ಷಾಲಂಕಾರದಲ್ಲಿ ಸೂಚಿತವಾದ ಅಧ್ಯಾಯಕ್ರಮವನ್ನನುಸರಿಸಿ ಅಧ್ಯಾಯಗಳನ್ನು ಜೋಡಿಸಿದ್ದೇವೆ.

ವನಪರ್ವದ ಒಟ್ಟು ಅಧ್ಯಾಯ ಸಂಖ್ಯೆಯಲ್ಲಿರುವ ವ್ಯತ್ಯಾಸಕ್ಕೆ ಒಂದೊಂದು ಸಾರದಲ್ಲಿ ಒಂದೊಂದು ಕಡೆ ಅಧ್ಯಾಯಗಳನ್ನು ನಿಲ್ಲಿಸುವುದು (ಅಧ್ಯಾಯ ವಿರಾಮ

ವೈಚಿತ್ರವು) ಒಂದು ಕಾರಣ. ಇದರಿಂದ ಒಂದು ಪ್ರತಿಯಲ್ಲಿ ಒಂದು ಅಧ್ಯಾಯದಲ್ಲಿ ಬರುವ ಕೊನೆಯ ಶ್ಲೋಕಗಳು ಇನ್ನೊಂದು ಪ್ರತಿಯಲ್ಲಿ ಮುಂದಿನ ಅಧ್ಯಾಯದ ಆರಂಭದಲ್ಲಿ ಬರುತ್ತವೆ. ಈ ವ್ಯತ್ಯಾಸದಿಂದ ಅಧ್ಯಾಯದ ಸಂಖ್ಯೆಯು ವ್ಯತ್ಯಾಸವಾದರೂ ಒಟ್ಟು ಶ್ಲೋಕಗಳು ನಷ್ಟವಾಗಿರುವುದಿಲ್ಲ. ಇನ್ನೊಂದು ಕಾರಣವೆಂದರೆ ಕುಂಭಕೋಣ ಪ್ರತಿಯಲ್ಲಿ ಉಳಿದ ಪ್ರತಿಗಳಲ್ಲಿ ಇಲ್ಲದಿರುವ ಎಷ್ಟೋ ಅಧ್ಯಾಯಗಳು ಕಂಡುಬರುತ್ತವೆ. ಇದೂ ಅಧ್ಯಾಯ ಸಂಖ್ಯೆಯ ವ್ಯತ್ಯಾಸಕ್ಕೆ ಕಾರಣ. ಹೀಗಾದಾಗ ಶ್ಲೋಕಗಳ ಸಂಖ್ಯೆಯೂ ವ್ಯತ್ಯಾಸವನ್ನು ಹೊಂದುತ್ತದೆ. ಅರ್ಜುನಾಭಿಗಮನ ಪರ್ವದಲ್ಲಿ ಯುಧಿಷ್ಠಿರನ ಜೊತೆಯಲ್ಲಿ ಯುಧಿಷ್ಠಿರನ ಜೊತೆಯಲ್ಲಿ ದ್ರೌಪದಿಯ ಮತ್ತು ಭೀಮಸೇನನ ಸಂವಾದವಿದೆ. ಇದನ್ನು ಆಚಾರ್ಯರು ತಾತ್ಪರ್ಯನಿರ್ಣಯದ ೩೩ನೆಯ ಅಧ್ಯಾಯದಲ್ಲಿ ಸಂಗ್ರಹಿಸಿದ್ದಾರೆ. ಅದರಂತೆ ಹಠವಾದದ ಬಗ್ಗೆ ವಿಸ್ತಾರವಾಗಿ ಮಾತನಾಡುವವನು ಭೀಮಸೇನ. ದ್ರೌಪದಿಯು ಮೊದಲು ಸ್ವಲ್ಪ ಮಾತನಾಡಿ ಯುಧಿಷ್ಠಿರನ ಆದೇಶದಂತೆ ಒಳಗೆ ಹೋಗಿರುತ್ತಾಳೆ. ಆದರೆ ನಮಗೆ ದೊರೆತಿರುವ ಮೂಲ ಪಾಠಗಳಲ್ಲಿ ದ್ರೌಪದಿಯೇ ಹಠವಾದದ ಬಗ್ಗೆ ಧರ್ಮರಾಜನ ಜೊತೆಯಲ್ಲಿ ಮಾತನಾಡುತ್ತಾಳೆ. ಇದೊಂದು ವ್ಯತ್ಯಾಸವಿದೆ. ಲಕ್ಷಾಲಂಕಾರದಲ್ಲಿ ದ್ರೌಪದಿಯ ಈ ಸಂದರ್ಭದ ವಚನಗಳಿಗೆ ಸಾಕಷ್ಟು ವ್ಯಾಖ್ಯಾನವಿದೆ. ಅದರಂತೆಯೂ ಹಠವಾದದ ಪ್ರಸ್ತಾಪ ಮಾಡುವವಳ ದ್ರೌಪದಿಯೇ. ಆದ್ದರಿಂದ ಇದೊಂದು ವ್ಯತ್ಯಾಸವಿದೆ.

ಆಚಾರ್ಯರು ಅನುವ್ಯಾಖ್ಯಾನದಲ್ಲಿ ಪೃಥಗಧಿಕರಣದಲ್ಲಿ ಉದಾಹರಿಸಿರುವ–

ಆಚಕ್ಷ್ವ ಮೇ ಪರಾ ಮೋಕ್ಷಂ ಧೀರಾ ಯಂ ಪ್ರವದಂತಿ ತಮ್ ।
ಇತ್ಯುಕ್ತ ಆಹ ವಾಗ್ದೇವೀ ಪರಂ ಮೋಕ್ಷಂ ಪ್ರಜಾಪತೇಃ ।
ಶಾಖಾಂಶಾಖಾಂ ಮಹಾನವ್ಯಃ ಸಂಯಾಂತಿ ಪರಿತ್ರಃಸ್ರವಾಃ ।
ಧಾನಾಪೂಪೂ ಮಾಂಸಕಾಮಾಃ ಸದಾ ಪಾಯಸಕರ್ದಮಾಃ ।
ಯಸ್ಮಿನ್ನಗ್ನಿಮುಖಾ ದೇವಾಃ ಸೇಂದ್ರಾಃ ಸಹಮರುದ್ಗಣಾಃ ।
ಈಜಿರೇ ಕ್ರತುಭಿಃ ಶ್ರೇಷ್ಠೈಸ್ತದಕ್ಷರಮುಪಾಸತೇ ।

ಎಂಬ ಶ್ಲೋಕಗಳು ಮಾರ್ಕಂಡೇಯ ಸಮಾಸ್ಯಾಪರ್ವದಲ್ಲಿ ತಾರ್ಕ್ಷ್ಯಸರಸ್ವತೀ ಸಂವಾದದಲ್ಲಿ ಕಂಡುಬರುತ್ತವೆ.

ಅದರಂತೆ ಆಚಾರ್ಯರು ಸೂತ್ರಭಾಷ್ಯದಲ್ಲಿ ಆತ್ಮಾದಿವಚ್ಚ ತದನುಪಪತ್ತಿ ಸೂತ್ರದಲ್ಲಿ ಉದಾಹರಿಸಿರುವ–

ಯಥಾ ದಾರುಮಯಿಂ ಯೋಷಾಂ ನರಃ ಸ್ಥಿರಸಮಾಹಿತಃ ।
ಇಂಗಯತ್ಯಂಗಮಂಗಾನಿ ತಥಾ ರಾಜನ್ನಿಮಾಂ ಪ್ರಜಾಃ ॥

ಎಂಬ ಶ್ಲೋಕವೂ ದ್ರೌಪದಿಯ ಮಾತಿನಲ್ಲಿ ೩೦ನೇ ಅಧ್ಯಾಯದಲ್ಲಿ ಕಂಡುಬರುತ್ತದೆ.

ಶ್ಲೋಕಗಳಿಗೆ ಅನುವಾದ ಮಾಡುವಾಗ ಲಕ್ಷಾಲಂಕಾರ ವ್ಯಾಖ್ಯಾನವು ಇದ್ದಲ್ಲೆಲ್ಲಾ ಅದನ್ನೇ ಪೂರ್ಣವಾಗಿ ಅನುಸರಿಸಲಾಗಿದೆ. ಒಂದೆರಡು ಕಡೆಗಳಲ್ಲಿ ಲಕ್ಷಾಲಂಕಾರದ ಪಾಠವನ್ನೂ ಶೋಧಿಸಬೇಕಾಗಿದೆ. ಆದ್ದರಿಂದ ಲಕ್ಷಾಲಂಕಾರದಲ್ಲಿ ವಿಭಕ್ತಿ ವ್ಯತ್ಯಾಸಗಳನ್ನು ಮಾಡಿ ಅರ್ಥವನ್ನು ಹೇಳಿರುವ ಸ್ಥಳದಲ್ಲಿ ನಾವು ಹಾಗೆಯೇ ಮಾಡಿದ್ದೇವೆ. ಮೂಲದಿಂದ ಇಂತಹ ಅರ್ಥವು ಹೇಗೆ ಬರುತ್ತದೆ ಎಂದು ಸಂಶಯಪಡುವ ಕಾರಣವಿಲ್ಲ. ಬಹಳ ಅಪರೂಪವಾಗಿ ಹೊಸ ಅರ್ಥಗಳನ್ನು ಹೇಳಿದಾಗ ಅನುವಾದದ ನಂತರ ಲಕ್ಷಾಲಂಕಾರ' ಎಂದು ಆವರಣಗಳಲ್ಲಿ ಕೊಡಲಾಗಿದೆ. ಆದರೆ ಈ ಕ್ರಮವನ್ನು ಯಾವಾಗಲೂ ಅನುಸರಿಸಿಲ್ಲ. ಆಂಗಿರಸೋಪಾಖ್ಯಾನ ಮತ್ತು ಷಣ್ಮುಖೋಪಾಖ್ಯಾನಗಳಲ್ಲಿ ಲಕ್ಷಾಲಂಕಾರವಿಲ್ಲದೆ ವ್ಯಾಖ್ಯಾನ ಮಾಡಲು ಸಾಧ್ಯವೇ ಇಲ್ಲ ಎಂದು ಅಂಶವನ್ನು ಸಹೃದಯರು ಗಮನಿಸಬೇಕು. ಆದ್ದರಿಂದಲೇ ಈ ಸ್ಥಳಗಳಲ್ಲಿ ಬೇರೆ ವ್ಯಾಖ್ಯಾನಗಳಿಗಿಂತ ಅತ್ಯಂತ ಭಿನ್ನವಾದ ಅನುವಾದವು ನಮ್ಮ ಈ ಗ್ರಂಥದಲ್ಲಿ ಕಂಡುಬರುತ್ತದೆ.

ದುರ್ಯೋಧನನು ದುರ್ವಾಸರಿಗೆ ಆತಿಥ್ಯವನ್ನು ಮಾಡಿ ಕಾಡಿನಲ್ಲಿ ಕಾಮ್ಯಕವನದಲ್ಲಿ ಪಾಂಡವರನ್ನು ಸಂಧಿಸಿ ದ್ರೌಪದಿಯ ಭೋಜನವಾದ ಮೇಲೆ ಭಿಕ್ಷೆಯನ್ನು ನೀಡಬೇಕೆಂದು ಒತ್ತಾಯಮಾಡಿ ಎಂದು ಹೇಳಿ ಕಳುಹಿಸಿದ ಕಥೆಯನ್ನು ಹೇಳುವ ಎರಡು ಅಧ್ಯಾಯಗಳು ಯಾವ ನಾವು ನೋಡಿದ ಐದಾರು ತಾಳೆಗರಿಗಳಲ್ಲಿಯೂ ಇಲ್ಲ. ಆಚಾರ್ಯರೂ ತಾತ್ಪರ್ಯನಿರ್ಣಯದಲ್ಲಿ ಈ ವಿಷಯವನ್ನು ಉಲ್ಲೇಖಿಸಿಲ್ಲ. ಲಕ್ಷಾಲಂಕಾರದಲ್ಲಿಯೂ ಈ ಎರಡು ಅಧ್ಯಾಯಗಳ ಯಾವ ಶ್ಲೋಕದ ಪ್ರತೀಕವನ್ನೂ ಹಿಡಿದಿಲ್ಲ. ಲಕ್ಷಾಲಂಕಾರದಲ್ಲಿ 'ಸತಾಂ ಸಪ್ತಪದಂ' ಎಂಬ ಪ್ರತೀಕವನ್ನು ೨೫೩ನೆಯ ಅಧ್ಯಾಯದಲ್ಲಿ ಹಿಡಿದಿದ್ದಾರೆ. ಆದಾದನಂತರದಲ್ಲಿ ವ್ರೀಹಿದ್ರೋಹಿಕ ಪರ್ವದಲ್ಲಿ ಇನ್ನೂ

ಒಂದು ಅಧ್ಯಾಯವಿದೆ. ಅದಾದನಂತರ ದ್ರೌಪದೀಹರಣಪರ್ವದಲ್ಲಿ ಎರಡನೆಯ ಅಧ್ಯಾಯದ ಕೊನೆಯಲ್ಲಿ 'ವ್ಯಜಿನಾಗ್ರಕೇಶಿ' ಎಂಬ ಪ್ರತೀಕವನ್ನು ಹಿಡಿದು ವ್ಯಾಖ್ಯಾನ ಮಾಡಿದ್ದಾರೆ. ಈ ಪ್ರತೀಕವನ್ನು ೨೫೫ನೆಯ ಅಧ್ಯಾಯದ್ದೆಂದು ಗುರುತಿಸಿದ್ದಾರೆ. ಆದ್ದರಿಂದ ವ್ರೀಹಿದ್ರೌಣಕ ಪರ್ವ ಮುಗಿದ ಮೇಲೆ ದ್ರೌಪದೀಹರಣ ಪರ್ವದ ಮಧ್ಯದಲ್ಲಿ ಈ ಎರಡು ಅಧ್ಯಾಯಗಳು ಬರಲು ಸಾಧ್ಯವಿಲ್ಲ. ಕುಂಭಕೋಣ ಪ್ರತಿಯಲ್ಲಿ ಮಾತ್ರ ಈ ಎರಡು ಅಧ್ಯಾಯಗಳನ್ನು ದ್ರೌಪದೀಹರಣಪರ್ವದ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಹಾಕಿದ್ದಾರೆ. ಅದರಲ್ಲಿಯೂ ತಾವು ಪರಿಶೀಲಿಸಿದ ಅನೇಕ ಮಾತೃಕೆಗಳಲ್ಲಿ ಕೇವಲ ಒಂದು ಮಾತೃಕೆಯಲ್ಲಿ ಮಾತ್ರ (ಯು.ಪುಸ್ತಕ) ಇವೆರಡು ಅಧ್ಯಾಯಗಳಿವೆ. ಉಳಿದ ಮಾತೃಕೆಗಳಲ್ಲಿ ಇಲ್ಲ ಎಂದು ಅಡಿ ಟಿಪ್ಪಣಿಯನ್ನು ಹಾಕಿದ್ದಾರೆ. ಈ ಕಾರಣಗಳಿಂದ ಈ ಅಧ್ಯಾಯಗಳು ಬಹುತೇಕ ಪ್ರಕ್ಷಿಪ್ತವಾದವುಗಳು ಆ ಕಾರಣದಿಂದ ನಾವು ಇವನ್ನು ಪರಿಶಿಷ್ಟದಲ್ಲಿ ಹಾಕಿದ್ದೇವೆ.

- ಪಿ.ಎಸ್. ಶೇಷಗಿರಿ ಆಚಾರ್ಯ

ಮೈಸೂರು

★ ★ ★ ★ ★

# ವಿಷಯಾನುಕ್ರಮಣಿಕೆ

## ಮಹಾಭಾರತ - ಭಾಗ-೬

## ವನಪರ್ವ (ಭಾಗ-೧)


ಪುಟ ಸಂ.

1. ಪಾಂಡವರ ವನಾಗಮನ. ಅನುರಕ್ತರಾದ ಪೌರರಿಂದ ಹಿಂಬಾಲಿಸುವಿಕೆ, ಬ್ರಾಹ್ಮಣರ ಆಗಮನ. ಗಂಗಾತೀರದ ವಟದಲ್ಲಿ ವಾಸ 1

2. ಬ್ರಾಹ್ಮಣರನ್ನು ಪೋಷಿಸಲು ತನ್ನ ಅಶಕ್ತಿಯನ್ನು ತಿಳಿಸಿ ಧರ್ಮರಾಜನಿಂದ ಅವರು ಹಿಂದಿರುಗುವಂತೆ ಪ್ರಾರ್ಥನೆ. ಬ್ರಾಹ್ಮಣರಿಂದ ಆದರ ನಿರಾಕರಣೆ. ಶೌನಕರಿಂದ ಯುಧಿಷ್ಠಿರನಿಗೆ ಸೂರ್ಯೋಪಾಸನೆಯ ಪ್ರೇರಣೆ 14

3. ಯುಧಿಷ್ಠಿರನ ಸೂರ್ಯೋಪಾಸನೆ. ಪ್ರಸನ್ನನಾದ ಸೂರ್ಯನಿಂದ ಅಕ್ಷಯ ಪಾತ್ರೆಯ ದಾನ 32

4. ವಿದುರನಿಂದ ಧೃತರಾಷ್ಟ್ರನಿಗೆ ಹಿತೋಪದೇಶ. ಧೃತರಾಷ್ಟ್ರನಿಂದ ಆದರ ತಿರಸ್ಕಾರ. ಪಾಂಡವರ ಬಳಿಗೆ ವಿದುರನ ಗಮನ. 43

5. ಕಾಮ್ಯಕವನದಲ್ಲಿ ವಿದುರನಿಂದ ಪಾಂಡವರಿಗೆ ಹಿತೋಪದೇಶ 51

6. ಸಂಜಯವಚನದಂತೆ ವಿದುರನು ಹಸ್ತಿನಾವತಿಗೆ ಹಿಂದಿರುಗಿ ಧೃತರಾಷ್ಟ್ರನನ್ನು ಸಮಾಧಾನ ಪಡಿಸುವುದು 57

7. ಹಿಂದಿರುಗಿದ ವಿದುರನನ್ನು ನೋಡಿ ದುರ್ಯೋಧನಾದಿಗಳ ಕುಮಂತ್ರ. ವ್ಯಾಸರ ಆಗಮನ 66

8. ಧೃತರಾಷ್ಟ್ರನನ್ನು ಕುರಿತು ವ್ಯಾಸರ ಹಿತವಚನ ಮತ್ತು ಇಂದ್ರ-ಸುರಭಿ ಸಂವಾದ 71

9. ದುರ್ಯೋಧನನಿಗೆ ಉಪದೇಶಮಾಡಲು ನಿರಾಕರಿಸಿ ವ್ಯಾಸರ ಗಮನ, ಮೈತ್ರೇಯರ ಆಗಮನ ಮತ್ತು ದುರ್ಯೋಧನನಿಗೆ ಅವರ ಶಾಪ 79

10. ವಿದುರನಿಂದ ಭೀಮಸೇನನು ಮಾಡಿದ ಕಿರ್ಮೀರ ವಧೆಯ ಕಥನ 89

11. ಕೃಷ್ಣನಿಂದ ದ್ವೈತವನಕ್ಕೆ ಆಗಮನ. ಸಿಟ್ಟುಗೊಂಡ ಕೃಷ್ಣನನ್ನು ಸಂತೈಸಲು ಅರ್ಜುನನ ಸ್ತೋತ್ರ, ದ್ರೌಪದಿಯ ವಿಲಾಪ ಮತ್ತು ಕೃಷ್ಣನ ಪ್ರತಿಜ್ಞೆ 109

12. ಸಾಲ್ವನ ಜೊತೆಯಲ್ಲಿ ಯುದ್ಧವನ್ನು ಮಾಡಲು ತಾನು ದ್ವಾರಕೆಯನ್ನು ಬಿಟ್ಟುಹೋದದ್ದು ಈ ಅನರ್ಥಕ್ಕೆ ಕಾರಣವಾಯಿತೆಂದು ಕೃಷ್ಣನಿಂದ ನಿರೂಪಣೆ 140

13. ಧರ್ಮರಾಜನ ಪ್ರಶ್ನೆಗೆ ಉತ್ತರವಾಗಿ ಕೃಷ್ಣನಿಂದ ಸಾಲ್ವಪ್ರಸಂಗದ ವರ್ಣನೆ 144

14. ವಿಸ್ತಾರವಾಗಿ ಸಾಲ್ವನ ಜೊತೆಯಲ್ಲಿ ಮಾಡಿದ ಯುದ್ಧದ ವರ್ಣನೆ 149

15. ಕೃಷ್ಣನಿಂದ ಪ್ರದ್ಯುಮ್ನ ಮತ್ತು ಸಾಲ್ವರ ಯುದ್ಧದ ವರ್ಣನೆ 160

16. ಸಾರಥಿಯಿಂದ ಪ್ರದ್ಯುಮ್ನನ. ಅಪಯಾನ ಪ್ರಜ್ಞೆಯನ್ನು ಮರಳಿಪಡೆದು ಯುದ್ಧಮಾಡಿ ಪ್ರದ್ಯುಮ್ನನಿಂದ ಸಾಲ್ವನ ಪರಾಜಯ. ಸಾಲ್ವನ ಅಪಯಾನ 165

17. ಕೃಷ್ಣನಿಂದ ಯುಧಿಷ್ಠಿರನನ್ನು ಕುರಿತು ತಾನು ಸಾಲ್ವನ ಜೊತೆಯಲ್ಲಿ ಮಾಡಿದ ಯುದ್ಧದ ವರ್ಣನೆ 177

18. ಕೃಷ್ಣಸಾಲ್ವರ ಯುದ್ಧ ಸಾಲ್ವನಿಂದ ಮಾಯಾ ಸೃಷ್ಟಿ, ಕೃಷ್ಣನ ಪ್ರತಿಬೋಧ 186

19. ಕೃಷ್ಣನಿಂದ ಸಾಲ್ವನ ವಧೆ. ಸುಭದ್ರೆ ಮತ್ತು ಅಭಿಮನ್ಯುವನ್ನು ಕರೆದುಕೊಂಡು ದ್ವಾರಕಾಗಮನ. ಧೃಷ್ಟದ್ಯುಮ್ನಾದಿಗಳ ಗಮನ 192

20. ಪಾಂಡವರು ಪೌರರನ್ನು ಸಮಾಧಾನಪಡಿಸಿ ಹಿಂದೆ ಕಳುಹಿಸುವುದು 205

21. ಪಾಂಡವರ ದ್ವೈತವನ ಪ್ರವೇಶ 210

22. ಮಾರ್ಕಂಡೇಯರ ಆಗಮನ. ಧರ್ಮೋಪದೇಶವನ್ನು ಮಾಡಿ ನಿರ್ಗಮನ 216

23. ದಾಲ್ಭ್ಯಪುತ್ರರಾದ ಬಕ ಋಷಿಗಳಿಂದ ಬ್ರಾಹ್ಮಣ ಮಾಹಾತ್ಮ್ಯ ಕಥನ ಮತ್ತು ಮಹರ್ಷಿಗಳ ಆಗಮನ 222

24. ಭೀಮನ ಸನ್ನಿಧಿಯಲ್ಲಿ ದ್ರೌಪದಿಯಿಂದ ಧರ್ಮರಾಜನನ್ನು ಕುರಿತು ಚುಚ್ಚುಮಾತುಗಳು 231

25. ಪ್ರಕೃತದಲ್ಲಿ ಕ್ಷಮೆಯನ್ನು ಬಿಟ್ಟು ಪರಾಕ್ರಮವನ್ನು ಆಶ್ರಯಿಸುವಂತೆ ದ್ರೌಪದಿಯಿಂದ ಧರ್ಮರಾಜನಿಗೆ ಉಪದೇಶ. ಅದಕ್ಕಾಗಿ ಬಲಿಪ್ರಹ್ಲಾದಸಂವಾದಕಥನ 239

26. ಯುಧಿಷ್ಠಿರನಿಂದ ದ್ರೌಪದಿಗೆ ಕ್ಷಮೆಯ ಉಪದೇಶ 246

27. ಯುಧಿಷ್ಠಿರನನ್ನು ಕುರಿತು ಪೌರುಷಕ್ಕಿಂತಲೂ ವಿಧಿಯೇ ಪ್ರಬಲವೆಂದು ದ್ರೌಪದಿಯ ಸಮರ್ಥನೆ 258

28. ದ್ರೌಪದಿಯನ್ನು ಕುರಿತು ಯುಧಿಷ್ಠಿರನಿಂದ ಧರ್ಮದ ಸಫಲತ್ವಪ್ರತಿಪಾದನೆ 267

29. ಯುಧಿಷ್ಠಿರನನ್ನು ಕುರಿತು ದ್ರೌಪದಿಯಿಂದ ಬೃಹಸ್ಪತಿಗಳು ಹೇಳಿದ ನೀತಿಯ ಕಥನ 276

30. ಭೀಮಸೇನನ ವಚನ. ತಕ್ಷಣ ಯುದ್ಧಕ್ಕೆ ಹೊರಡುವಂತೆ ಒತ್ತಾಯ 306

3.1 ಯುಧಿಷ್ಠಿರನ ಪ್ರತ್ಯುತ್ತರ. ಹದಿಮೂರುವರ್ಷದ ನಂತರ ಪರಾಕ್ರಮವನ್ನು ತೋರಿಸುವ ಪ್ರತಿಜ್ಞೆ 327

32. ಭೀಮನಿಂದ ಯುಧಿಷ್ಠಿರನನ್ನು ಕುರಿತು ಯುಕ್ತಿಪೂರ್ವಕವಾಗಿ ವನವಾಸಮುಗಿಯುವುದಕ್ಕಿಂತ ಮೊದಲೇ ದುರ್ಯೋಧನನನ್ನು ನಿಗ್ರಹಿಸಲು ಒತ್ತಾಯ 334

33. ವೇದವ್ಯಾಸರ ಆಗಮನ. ಯುಧಿಷ್ಠಿರನಿಗೆ ಮಂತ್ರೋಪದೇಶ. ಪಾಂಡವರಿಂದ ದ್ವೈತವನದಿಂದ ಕಾಮ್ಯಕವನಕ್ಕೆ ಗಮನ 342

34. ಬಂಧುಗಳನ್ನು ವಂದಿಸಿ ಅರ್ಜುನನ ಇಂದ್ರಕೀಲಪರ್ವತ ಗಮನ ಮತ್ತು ಇಂದ್ರನ ಜೊತೆಯಲ್ಲಿ ಸಂವಾದ 355

35. ಅರ್ಜುನನ ತಪಸ್ಸು, ಋಷಿಗಳ ಪ್ರಾರ್ಥನೆ. ಮತ್ತು ಮಹೇಶ್ವರನಿಂದ ಸಮಾಶ್ವಾಸನೆ 373

36. ಕಿರಾತಾರ್ಜುನಯುದ್ಧ. ಅರ್ಜುನನ ಪರಾಜಯ. ಮಹೇಶ್ವರನ ಅನುಗ್ರಹ. ಪಾಶುಪತಾಸ್ತ್ರದಾನ 380

37. ಯಮ ವರುಣ ಕುಬೇರ ಇವರಿಂದ ಅರ್ಜುನನಿಗೆ ಅಸ್ತ್ರದಾನ. ಇಂದ್ರನಿಂದ ಸ್ವರ್ಗಕ್ಕೆ ಬರುವಂತೆ ಅರ್ಜುನನಿಗೆ ಪ್ರೇರಣೆ 403

38. ಅರ್ಜುನನಿಂದ ಮಾತಲಿಯ ರಥದಲ್ಲಿ ಸ್ವರ್ಗಗಮನ 412

39. ಅರ್ಜುನನಿಗೆ ಇಂದ್ರನಿಂದ ಬಹುಮಾನಪೂರ್ವಕವಾಗಿ ಅರ್ಧಾಸನ ದಾನ 420

40. ಅರ್ಜುನೋರ್ವಶೀ ಸಮಾಗಮ ಪ್ರಸಂಗ 427

41. ಲೋಮಶರ ಸ್ವರ್ಗಾಗಮನ. ಅರ್ಜುನನ ಸ್ವರೂಪವನ್ನು ತಿಳಿಸಿ ಇಂದ್ರನಿಂದ ಲೋಮಶರಿಗೆ ಕಾಮ್ಯಕವನಕ್ಕೆ ಹೋಗುವಂತೆ ಆದೇಶ 445

42. ಅರ್ಜುನನ ಅದ್ಭುತ ಕರ್ಮಗಳನ್ನು ಕೇಳಿ ಸಂಜಯನ ಎದುರಿಗೆ ಧೃತರಾಷ್ಟ್ರನ ಶೋಕ 452

43. ಕಾಡಿನಲ್ಲಿ ಪಾಂಡವರ ಭೋಜ್ಯವಸ್ತು ಕಥನ 462

44. ಸಂಜಯನ ಎದುರಿನಲ್ಲಿ ಧೃತರಾಷ್ಟ್ರನ ಶೋಕ ಮತ್ತು ಸಂಜಯನ ಉತ್ತರ 465

45. ಕಾಮ್ಯಕವನಕ್ಕೆ ಬೃಹದಶ್ವರ ಆಗಮನ. ಯುಧಿಷ್ಠಿರನನ್ನು ಕುರಿತು
ನಳ ಚರಿತ್ರೆಯ ಕಥನ 474

46. ನಳಚರಿತೆ. ಹಂಸಸಂದೇಶ 486

47. ದಮಯಂತಿಯ ಸ್ವಯಂವರದ ಘೋಷಣೆ.
ದೇವತೆಗಳ ಆಗಮನ, ನಳನ ದೌತ್ಯ 493

48. ನಳದಮಯಂತಿ ಸಂವಾದ. ನಳನಿಂದ ದಮಯಂತಿಗೆ ಸಂದೇಶ ಹರಣ 504

49. ಸ್ವಯಂವರದಲ್ಲಿ ದಮಯಂತಿಯಿಂದ ನಳನ ವರಣ ಮತ್ತು ಅವರ ವಿವಾಹ 508

50. ದೇವತೆಗಳ ಮತ್ತು ಕಲಿಯ ಸಂವಾದ. ಕಲಿಯ ದುಷ್ಟಪ್ರತಿಜ್ಞೆ
ಮತ್ತು ದ್ವಾಪರನ ಸಹಾಯಯಾಚನೆ 517

51. ಅಕ್ಷದ್ಯೂತ ಮತ್ತು ನಳನ ಪರಾಜಯ 520

52. ದ್ಯೂತದಲ್ಲಿ ನಳನ ಪರಾಜಯವನ್ನು ನೋಡಿ ದಮಯಂತಿಯಿಂದ
ತನ್ನ ತೌರುಮನೆಗೆ ಯಮಳರ ಪ್ರೇಷಣ 524

53. ನಳದಮಯಂತಿಯರ ವನಗಮನ, ದಿಗಂಬರನಾದ ನಳನಜೊತೆಯಲ್ಲಿ
ದಮಯಂತಿಯ ಸಂವಾದ 529

54. ನಿದ್ರಿಸುತ್ತಿದ್ದ ದಮಯಂತಿಯನ್ನು ಬಿಟ್ಟು ನಳನ ಗಮನ 536

55. ದಮಯಂತಿಯ ರೋದನ. ಅಜಗರದಿಂದ ಅವಳ ಗ್ರಹಣ.
ವ್ಯಾಧನಿಂದ ಮೋಚನ ಮತ್ತು ವ್ಯಾಧನ ಮರಣ 542

56. ಅರಣ್ಯದಲ್ಲಿ ದಮಯಂತಿಯ ವಿಲಾಪ. ತಾಪಸಾಶ್ರಮ ದರ್ಶನ.
ವರ್ತಕರ ಗುಂಪಿನಲ್ಲಿ ಪ್ರವೇಶ 550

57. ವರ್ತಕರ ಗುಂಪಿನ ಮೇಲೆ ರಾತ್ರಿಯಲ್ಲಿ ಆನೆಗಳ ದಾಳಿ.
ದಮಯಂತಿಯಮೇಲೆ ಆ ವರ್ತಕರ ಆಕ್ರೋಶ.
ಅಲ್ಲಿಂದ ದಮಯಂತಿಯ ಪಲಾಯನ 575

58. ವ್ಯಾಪಾರಿಜನಗಳ ಜೊತೆಯಲ್ಲಿ ದಮಯಂತಿಯ ಗಮನ.
ರಾತ್ರಿಯಲ್ಲಿ ಗಜಗಳಿಂದ ಉಪದ್ರವ. ಚೇದಿರಾಜ ಪುರಕ್ಕೆ
ಹೋಗಿ ಅಂತಃಪುರದಲ್ಲಿ ನಿವಾಸ 585

59. ನಳನಿಗೆ ಕಾರ್ಕೋಟಕನ ದಂಶನ. ಕಾರ್ಕೋಟಕನಿಂದ
ಆಶ್ವಾಸನ ಮತ್ತು ವಸ್ತ್ರಪ್ರದಾನ 596

60. ಕಾರ್ಕೋಟಕವಚನದಂತೆ ನಳನಿಂದ ಋತುಪರ್ಣಸಾರಥ್ಯ ಸ್ವೀಕಾರ 601

61. ನಳದಮಯಂತಿರನ್ನು ಹುಡುಕಲು ಭೀಮರಾಜನಿಂದ ಬ್ರಾಹ್ಮಣರ ಪ್ರೇಷಣ.
ಅಯೋಧ್ಯೆಯಲ್ಲಿ ಸುದೇವನಿಂದ ದಮಯಂತಿಯ ದರ್ಶನ
ಮತ್ತು ಅವರ ಸಂವಾದ 606

62. ರಾಜಮಾತೆಗೆ ಸುದೇವನಿಂದ ದಮಯಂತಿಯ ಸ್ವರೂಪಕಥನ 614

63. ತಾಯಿಯನ್ನು ಸಮಾಧಾನ ಪಡಿಸಿ ದಮಯಂತಿಯಿಂದ ಸ್ವಯಂವರವನ್ನು
ಘೋಷಣೆಮಾಡುವಂತೆ ಪ್ರಾರ್ಥನೆ 620

64. ಪರ್ಣಾದನೆಂಬ ಬ್ರಾಹ್ಮಣನಿಂದ ದಮಯಂತಿಗೆ ನಳನ ವಾರ್ತಾಕಥನ 625

65. ಸುದೇವನ ಮಾತುಗಳನ್ನು ಕೇಳಿ ನಳಸಾರಥ್ಯದಲ್ಲಿ ಋತುಪರ್ಣನಿಂದ
ವಿದರ್ಭದೇಶಕ್ಕೆ ಆಗಮನ 631

66. ಬಾಹುಕನ ಸಾರಥ್ಯ. ಋತುಪರ್ಣನಿಂದ ಅಶ್ವಹೃದಯಪ್ರಾಪ್ತಿ.
ನಳದೇಹದಿಂದ ಕಲಿಯ ನಿರ್ಗಮನ ನಳನ ಪ್ರಕೃತಿಸ್ಥಿತಿ 639

67. ಋತುಪರ್ಣನ ಕುಂಡಿನ ಪ್ರವೇಶ. ನಳರಥಘೋಷದಂತೆ ಇದ್ದ
ರಥಘೋಷವನ್ನು ಕೇಳಿ ದಮಯಂತಿಯ ಊಹೆ 647

68. ಕೇಶಿನಿ ಬಾಹುಕರ ಸಂವಾದ 655

69. ದಮಯಂತಿಯಿಂದ ಕೇಶಿನಿಯ ಮೂಲಕ ಬಾಹುಕನ ಪರೀಕ್ಷೆ 661

70. ದಮಯಂತಿಯ ಮರ್ಮವಚನಗಳು, ಬಾಹುಕ ದಮಯಂತಿ ಸಮಾಗಮ 668

71. ನಳದಯಮಯಂತಿಯರ ಸಮಾಗಮ 673

72. ಭೀಮನಿಂದ ನಳನಿಗೆ ಸತ್ಕಾರ. ಪ್ರೀತಿಯ ಮಾತುಗಳನ್ನಾಡಿ
ಋತುಪರ್ಣನ ಪ್ರಯಾಣ 679

73. ತನ್ನ ಪಟ್ಟಣಕ್ಕೆ ಹಿಂದಿರುಗಿ ಪುಷ್ಕರನನ್ನು ದ್ಯೂತದಲ್ಲಿ
ಸೋಲಿಸಿ ಅವನಿಗೆ ನಳನಿಂದ ಪ್ರಾಣದಾನ 683

74. ನಳಚರಿತೆಸಮಾಪ್ತಿ. ಯುಧಿಷ್ಠಿರನನ್ನು ಸಮಾಧಾನಪಡಿಸಿ ಬೃಹದಶ್ವಗಮನ.
ಯುಧಿಷ್ಠಿರನಿಗೆ ಅರ್ಜುನನನ್ನು ನೋಡಿವ ತವಕ 690

# ಮಹಾಭಾರತ ವನಪರ್ವ

## ೧. ಆರಣ್ಯಕಪರ್ವ

### ಒಂದನೆಯ ಅಧ್ಯಾಯ

(ಪಾಂಡವರ ವನಾಗಮನ. ಅನುರಕ್ತರಾದ ಪೌರರಿಂದ ಹಿಂಬಾಲಿಸುವಿಕೆ, ಬ್ರಾಹ್ಮಣರ ಆಗಮನ. ಗಂಗಾತೀರದ ವಟದಲ್ಲಿ ವಾಸ.)

ಜನಮೇಜಯಃ

ಏವಂ ದ್ಯೂತಜಿತಾಃ ಪಾರ್ಥಾಃ ಕೋಪಿತಾಶ್ಚ ದುರಾತ್ಮಭಿಃ ।
ಧಾರ್ತರಾಷ್ಟ್ರೈಃ ಸಹಾಮಾತ್ಯೈರ್ನಿಕೃತ್ಯಾ ದ್ವಿಜಸತ್ತಮ ॥೧॥

ಶ್ರಾವಿತಾಃ ಪರುಷಾ ವಾಚಃ ಸೃಜದ್ಭಿರ್ವೈರಮುತ್ತಮಮ್ ।
ಕಿಮಕುರ್ವತ ಕೌರವ್ಯಾ ಮಮ ಪೂರ್ವಪಿತಾಮಹಾಃ ॥೨॥

ಎಲೈ ಬ್ರಾಹ್ಮಣಶ್ರೇಷ್ಠನೇ! ಕುರುಕುಲದಲ್ಲಿ ಜನಿಸಿದ ನನ್ನ ಪೂರ್ವಪಿತಾಮಹರಾದ ಪಾಂಡವರು ದುಷ್ಟರಾದ ಮತ್ತು ಮಂತ್ರಿಗಳಿಂದ ಸಹಿತರಾದ ಧೃತರಾಷ್ಟ್ರಪುತ್ರರಿಂದ ಮೋಸದಿಂದ ದ್ಯೂತದಲ್ಲಿ ಸೋಲಿಸಲ್ಪಟ್ಟು ಮಹಾವೈರವನ್ನು ಉತ್ಪಾದನೆಮಾಡುವ ಕ್ರೂರವಾದ ಮಾತುಗಳನ್ನು ಆಲಿಸಿ ಕೋಪಗೊಂಡವರಾಗಿ ಮುಂದೇನು ಮಾಡಿದರು?

ಕಥಮೈಶ್ವರ್ಯಭೂಯಿಷ್ಠಾಃ ಸಹಸಾ ದುಃಖಮೀಯುಷಃ ।
ವನೇ ವಿಜಹ್ರಿರೇ ಪಾರ್ಥಾಃ ಶಕ್ರಪ್ರತಿಮತೇಜಸಃ ॥೩॥

ಐಶ್ವರ್ಯದ ತುತ್ತ ತುದಿಯಲ್ಲಿದ್ದ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಪಾಂಡವರು ಒಮ್ಮೆಲೇ ದುಃಖವನ್ನು ಪಡೆದವರಾಗಿ ಕಾಡಿನಲ್ಲಿ ಹೇಗೆ ವಿಹರಿಸಿದರು?

ಕೇ ಚೈನಾನನ್ವವರ್ತಂತ ಪ್ರಾಪ್ತಾನ್ ವ್ಯಸನಮುತ್ತಮಮ್ ।
ಕಿಮಾಹಾರಾಃ ಕಿಮಾಚಾರಾಃ ಕ್ವಚ ವಾಸೋ ಮಹಾತ್ಮನಾಮ್ ॥೪॥

ಇಂತಹ ಉಗ್ರವಾದ ವ್ಯಸನವನ್ನು ಹೊಂದಿದ ಪಾಂಡವರನ್ನು ಯಾರು ಹಿಂಬಾಲಿಸಿದರು? ಮಹಾತ್ಮರಾದ ಆ ಪಾಂಡವರು ಎಲ್ಲಿ ವಾಸಮಾಡಿದರು? ಯಾವ ಆಹಾರವನ್ನು ಸ್ವೀಕರಿಸಿದರು? ಮತ್ತು ಯಾವ ಕಾರ್ಯಗಳನ್ನು ಮಾಡಿದರು?

ಕಥಂ ದ್ವಾದಶ ವರ್ಷಾಣಿ ವನೇ ತೇಷಾಂ ಮಹಾತ್ಮನಾಮ್ ।
ವ್ಯತೀಯುರ್ಬ್ರಾಹ್ಮಣಶ್ರೇಷ್ಠ ಶೂರಾಣಾಮನಿವರ್ತಿನಾಮ್ ॥೫॥

ಎಲೈ ಬ್ರಾಹ್ಮಣಶ್ರೇಷ್ಠನೇ! ಶೂರರೂ ಯುದ್ಧದಿಂದ ಎಂದೂ ಹಿಮ್ಮೆಟ್ಟದವರೂ ಮಹಾತ್ಮರೂ ಆದ ಅವರು ಕಾಡಿನಲ್ಲಿ ಹೇಗೆ ಹನ್ನೆರಡು ವರ್ಷಗಳನ್ನು ಕಳೆದರು?

ಕಥಂ ಚ ರಾಜಪುತ್ರೀ ಸಾ ಪ್ರವರಾ ಸರ್ವಯೋಷಿತಾಮ್ ।
ಪತಿವ್ರತಾ ಮಹಾಭಾಗಾ ಸತತಂ ಸತ್ಯವಾದಿನೀ ॥೬॥

ವನವಾಸಮದುಃಖಾರ್ಹಾ ದಾರುಣಂ ಸಮಪದ್ಯತ ।
ಏತದಾಚಕ್ಷ್ವ ಮೇ ಸರ್ವಂ ವಿಸ್ತರೇಣ ತಪೋಧನ ॥೭॥

ಎಲ್ಲ ಸ್ತ್ರೀಯರಿಗಿಂತಲೂ ಉತ್ಕೃಷ್ಟಳಾದವಳೂ ಪತಿವ್ರತೆಯೂ ಸತ್ಯವನ್ನು ನುಡಿಯುವವಳೂ ಸತತವಾಗಿ ಮಹಾನುಭಾವಳೂ ದುಃಖಕ್ಕೆ ಅನರ್ಹಳೂ ಆದ ರಾಜಕುಮಾರಿಯಾದ ದ್ರೌಪದಿಯು ದಾರುಣವಾದ ವನವಾಸವನ್ನು ಹೇಗೆ ಅನುಭವಿಸಿದಳು? ಎಲೈ ತಪೋಧನನೇ ! ಎಲ್ಲಾ ವಿಷಯವನ್ನು ನನಗೆ ವಿಸ್ತಾರವಾಗಿ ಹೇಳು.

ಶ್ರೋತುಮಿಚ್ಛಾಮಿ ಚರಿತಂ ಭೂರಿದ್ರವಿಣತೇಜಸಾಮ್ ।
ಕಥ್ಯಮಾನಂ ತ್ವಯಾ ವಿಪ್ರ ಪರಂ ಕೌತೂಹಲಂ ಹಿ ಮೇ ॥೮॥

ಎಲೈ ಬ್ರಾಹ್ಮಣನೇ! ಬಹುವಾದ ಸಂಪತ್ತು ಮತ್ತು ಪರಾಕ್ರಮವುಳ್ಳವರಾದ ಅವರ ಚರಿತ್ರೆಯನ್ನು ನಾನು ನಿನ್ನಿಂದ ಕೇಳಬಯಸುತ್ತೇನೆ. ನನಗೆ ಈ ವಿಷಯದಲ್ಲಿ ಬಹಳ ಕುತೂಹಲವಿದೆ.

**ವೈಶಂಪಾಯನಃ**

**ಏವಂ ದ್ಯೂತಜಿತಾಃ ಪಾರ್ಥಾಃ ಕೋಪಿತಾಶ್ಚ ದುರಾತ್ಮಭಿಃ ।**
**ಧಾರ್ತರಾಷ್ಟ್ರೈಃ ಸಹಾಮಾತ್ಯೈರ್ನಿರ್ಯಯುರ್ಗಜಸಾಹ್ವಯಾತ್ ॥೯॥**

ಹೀಗೆ ದ್ಯೂತದಲ್ಲಿ ಪರಾಭವವನ್ನು ಹೊಂದಿ ದುರಾತ್ಮರಾದ ಧೃತರಾಷ್ಟ್ರಪುತ್ರರಿಂದ ಮತ್ತು ಅವರ ಮಂತ್ರಿಗಳಿಂದ ಕೋಪಗೊಂಡ ಪಾಂಡವರು ಹಸ್ತಿನಾವತಿಯನ್ನು ಬಿಟ್ಟು ಹೊರಟರು.

**ವರ್ಧಮಾನಪುರದ್ವಾರಾನ್ನಿಃಸೃತ್ಯ ಪುರುಷರ್ಷಭಾಃ ।**
**ಉದಙ್ಮುಖಾಃ ಶಸ್ತ್ರಭೃತಃ ಪ್ರಯಯುಃ ಸಹ ಕೃಷ್ಣಯಾ ॥೧೦॥**

ಪುರುಷಶ್ರೇಷ್ಠರಾದ ಅವರು ಕೋಟೆಬಾಗಿಲನ್ನು ದಾಟಿ ಕೈಯಲ್ಲಿ ಶಸ್ತ್ರಗಳನ್ನು ಹಿಡಿದು ದ್ರೌಪದಿಯ ಜೊತೆಯಲ್ಲಿ ಉತ್ತರಾಭಿಮುಖವಾಗಿ ಹೊರಟರು.

**ಇಂದ್ರಸೇನಾದಯಶ್ಚೈತಾನ್ ಭೃತ್ಯಾಃ ಪರಿಚತುರ್ದಶೈಃ ।**
**ರಥೈರನುಯಯುಃ ಶೀಘ್ರೈಃ ಸ್ತ್ರಿಯ ಆದಾಯ ಸರ್ವಶಃ ॥೧೧॥**

ಇಂದ್ರಸೇನ ಮೊದಲಾದ ಅವರ ಸಾರಥಿಗಳು ಮತ್ತು ಭೃತ್ಯರು ಶೀಘ್ರವಾಗಿ ಚಲಿಸುವ ಹದಿನಾಲ್ಕು ರಥಗಳಲ್ಲಿ ಪಾಂಡವರ ರಾಣಿವಾಸದ ಎಲ್ಲರನ್ನೂ ಕರೆದುಕೊಂಡು ಪಾಂಡವರನ್ನು ಹಿಂಬಾಲಿಸಿದರು.

**ತತಸ್ತೇ ರಥಮಾಸ್ಥಾಯ ಸಹಧೌಮ್ಯಾಶ್ಚ ಭಾರತ ।**
**ದದೃಶುರ್ಜಾಹ್ನವೀತೀರೇ ಪ್ರಮಾಣಾಖ್ಯಂ ಮಹಾವಟಮ್ ॥೧೨॥**

ಎಲೈ ಭಾರತನೇ! ಅನಂತರ ಅವರು ಧೌಮ್ಯರ ಜೊತೆಯಲ್ಲಿ ರಥಗಳನ್ನು ಏರಿ ಗಂಗಾತಟದಲ್ಲಿ ಪ್ರಮಾಣವೆಂಬ ಹೆಸರಿನ ಒಂದು ದೊಡ್ಡ ವಟವೃಕ್ಷವನ್ನು ನೋಡಿದರು.

ವ್ರಜತಸ್ತಾನ್ ವಿದಿತ್ವಾ ತು ಪೌರಾಃ ಶೋಕಾಭಿಪೀಡಿತಾಃ ।
ಗರ್ಹಯಂತೋಽಸಕೃದ್ ಭೀಷ್ಮವಿದುರದ್ರೋಣಗೌತಮಾನ್ ।
ಊಚುರ್ವೈ ಸಮಯಂ ಕೃತ್ವಾ ಸಮಾಗಮ್ಯ ಪರಸ್ಪರಮ್ ॥೧೩॥

ಹಸ್ತಿನಾವತಿಯಿಂದ ಹೊರಟ ಪಾಂಡವರನ್ನು ನೋಡಿ ಶೋಕಪೀಡಿತರಾದ ಪೌರರು ಭೀಷ್ಮ ವಿದುರ ದ್ರೋಣ ಮತ್ತು ಕೃಪಾಚಾರ್ಯರನ್ನು ಪುನಃಪುನಃ ನಿಂದಿಸುತ್ತಾ ತಮ್ಮತಮ್ಮಲ್ಲಿ ಒಂದು ಸಮಯ(ಒಪ್ಪಂದ)ವನ್ನು ಮಾಡಿಕೊಂಡು ಪರಸ್ಪರವಾಗಿ ಮಾತನಾಡಿದರು.

ನೇದಮಸ್ತಿ ಕುಲಂ ಕೃತ್ಸ್ನಂ ನ ವಯಂ ನ ಚ ನೋ ಗೃಹಾಃ ।
ಯತ್ರ ದುರ್ಯೋಧನಃ ಪಾಪಃ ಸೌಬಲೇನಾಭಿಪಾಲಿತಃ ॥೧೪॥

ಎಲ್ಲಿ ಪಾಪಿಯಾದ ದುರ್ಯೋಧನನು ಶಕುನಿಯ ಜೊತೆಯಲ್ಲಿ ಕೂಡಿಕೊಂಡಿದ್ದಾನೆಯೋ ಅಲ್ಲಿ ಈ ನಮ್ಮ ಸಮಗ್ರವಾದ ಕುಲವೇ ಇಲ್ಲ. ನಮ್ಮ ಗೃಹಗಳೂ ಇಲ್ಲ. ಮತ್ತು ನಾವೂ ಇಲ್ಲ.

ಕರ್ಣದುಶ್ಶಾಸನಾಭ್ಯಾಂ ಚ ರಾಜ್ಯಮೇವ ಬುಭೂಷತೇ ।
ನ ತತ್ ಕುಲಂ ನ ಚಾಚಾರೋ ನ ಧರ್ಮೋಽರ್ಥಃ ಕುತಃ ಸುಖಮ್ ।
ಯತ್ರ ಪಾಪಸಹಾಯೋಽಯಂ ಪಾಪೋ ರಾಜ್ಯಂ ಬುಭೂಷತೇ ॥೧೫॥

ಕರ್ಣ ದುಶ್ಶಾಸನರ ಸಹಾಯದಿಂದ ದುರ್ಯೋಧನನು ರಾಜ್ಯವನ್ನು ಹೊಂದಲು ಬಯಸುತ್ತಿದ್ದಾನೆ. ನಮಗೆ ಕುಲವಾಗಲೀ ಆಚಾರವಾಗಲೀ ಧರ್ಮವಾಗಲೀ ಅರ್ಥವಾಗಲೀ ಯಾವುದೂ ಉಳಿದಿಲ್ಲ. ಪಾಪಿಯಾದ ಶಕುನಿಯ ಸಹಾಯವನ್ನು ಪಡೆದ ಪಾಪಿಯಾದ ದುರ್ಯೋಧನನು ಎಲ್ಲಿ ರಾಜ್ಯವನ್ನು ಬಯಸುತ್ತಾನೆಯೋ ಅಲ್ಲಿ ಸುಖವು ಎಲ್ಲಿಂದ ಬರಬೇಕು?

ಅರ್ಥಲುಬ್ಧೋಽತಿಮಾನೀ ಚ ನೀಚಃ ಪ್ರಕೃತಿನಿರ್ಘೃಣಃ ।
ನೇಯಮಸ್ತಿ ಮಹೀ ಸರ್ವಾ ಯತ್ರ ದುರ್ಯೋಧನೋ ನೃಪಃ ॥೧೬॥

ದುರ್ಯೋಧನನು ಬಹಳ ಧನಲೋಭವುಳ್ಳವನು ದುರಹಂಕಾರಿ ನೀಚ ಮತ್ತು ಸ್ವಾಭಾವಿಕವಾಗಿಯೇ ನಿರ್ದಯವಾದವನು. ಎಲ್ಲಿ ದುರ್ಯೋಧನನು ರಾಜನೋ ಅಂತಹ ಭೂಮಿಯು ಇಲ್ಲವೆಂದು ತಿಳಿಯಬೇಕು.

ಸಾಧು ಗಚ್ಛಾಮಹೇ ಸರ್ವೇ ಯತ್ರ ಗಚ್ಛಂತಿ ಪಾಂಡವಾಃ ।
ಸಾನುಕ್ರೋಶಾ ಮಹಾತ್ಮಾನೋ ವಿಜಿತೇಂದ್ರಿಯಶತ್ರವಃ ।
ಹ್ರೀಮಂತಃ ಕೀರ್ತಿಮಂತಶ್ಚ ಧರ್ಮಾಚಾರಪರಾಯಣಾಃ ॥೧೭॥

ಪಾಂಡವರು ದಯಾಪೂರ್ಣರೂ ಮಹಾನುಭಾವರೂ ಜಿತೇಂದ್ರಿಯರೂ ಜಿತಶತ್ರುಗಳೂ ವಿನಯಸ್ವಭಾವದವರೂ ಕೀರ್ತಿವಂತರೂ ಧರ್ಮಾಚಾರನಿಷ್ಠರೂ ಆಗಿದ್ದಾರೆ. ಆದ್ದರಿಂದ ಪಾಂಡವರು ಎಲ್ಲಿ ಹೋಗುತ್ತಾರೆಯೋ ನಾವೆಲ್ಲರೂ ಅಲ್ಲಿಗೇ ಹೋಗೋಣ.

ಏವಮುಕ್ತ್ವಾನುಜಗ್ಮುಸ್ತಾನ್ ಪಾಂಡವಾಂಸ್ತೇ ಸಮೇತ್ಯ ಚ ।
ಊಚುಃ ಪ್ರಾಂಜಲಯಃ ಸರ್ವೇ ತಾನ್ ಕುಂತೀಮಾದ್ರಿನಂದನಾನ್ ॥

ಹೀಗೆ ಮಾತನಾಡಿಕೊಂಡು ಆ ಪೌರರೆಲ್ಲರೂ ಒಟ್ಟುಗೂಡಿ ಪಾಂಡವರನ್ನು ಹಿಂಬಾಲಿಸಿದರು. ಅವರೆಲ್ಲರೂ ಕುಂತಿ ಮತ್ತು ಮಾದ್ರಿಯ ಮಕ್ಕಳಾದ ಪಾಂಡವರನ್ನು ಸಮೀಪಿಸಿ ಕೈಗಳನ್ನು ಜೋಡಿಸಿ ಹೀಗೆ ಮಾತನಾಡಿದರು.

ಕ್ವ ಗಮಿಷ್ಯಥ ಭದ್ರಂ ವಸ್ಯುಕ್ತ್ವಾಽಸ್ಮಾನ್ ದುಃಖಭಾಗಿನಃ ।
ವಯಮಪ್ಯನುಯಾಸ್ಯಾಮೋ ಯತ್ರ ಯೂಯಂ ಗಮಿಷ್ಯಥ ॥೧೯॥

ನಿಮಗೆ ಮಂಗಳವಾಗಲಿ. ದುಃಖಭಾಗಿಗಳಾದ ನಮ್ಮನ್ನು ತೊರೆದು ನೀವು ಎಲ್ಲಿಗೆ ಹೋಗುವಿರಿ? ನೀವು ಹೋಗುವ ಸ್ಥಳಕ್ಕೆ ನಾವು ನಿಮ್ಮನ್ನು ಹಿಂಬಾಲಿಸಿ ಬರುತ್ತೇವೆ.

ಅಧರ್ಮೇಣ ಜಿತಾನ್ ಶ್ರುತ್ವಾ ಯುಷ್ಮಾಂಸ್ತ್ಯಕ್ತಘೃಣೈಃ ಪರೈಃ ।
ಉದ್ವಿಗ್ನಾಃ ಸ್ಮೋ ಭೃಶಂ ಸರ್ವೇ ನಾಸ್ಮಾನ್ ಹಾತುಮಿಹಾರ್ಹಥ ॥೨೦॥

ನಿರ್ದಯರಾದ ನಿಮ್ಮ ಶತ್ರುಗಳು ನಿಮ್ಮನ್ನು ಅನ್ಯಾಯದಿಂದ ಸೋಲಿಸಿದುದನ್ನು ಕೇಳಿ ನಾವೆಲ್ಲರೂ ಬಹಳ ಉದ್ವಿಗ್ನರಾಗಿದ್ದೇವೆ. ನೀವು ನಮ್ಮನ್ನು ತೊರೆಯಬಾರದು.

ಭಕ್ತಾನುರಕ್ತಾಃ ಸುಹೃದಃ ಸದಾ ಪ್ರಿಯಹಿತೇ ರತಾಃ ।
ಕುರಾಜಾಧಿಷ್ಠಿತೇ ರಾಜ್ಯೇ ನ ವಿನಶ್ಯೇಮ ಸರ್ವಶಃ ॥೨೧॥

ನಿಮ್ಮ ವಿಶ್ವಾಸಪಾತ್ರರೂ ನಿಮ್ಮಲ್ಲಿ ಭಕ್ತಿಯನ್ನು ಉಳ್ಳವರೂ. ಸ್ನೇಹವನ್ನು ಉಳ್ಳವರೂ. ನಿಮ್ಮ ಪ್ರಿಯಹಿತಗಳಲ್ಲೇ ಆಸಕ್ತರಾದವರೂ ಆದ ನಾವೆಲ್ಲರೂ ಕೆಟ್ಟರಾಜನಿಂದ ಆಳಲ್ಪಡುವ ಈ ರಾಜ್ಯದಲ್ಲಿ ವಿನಾಶವನ್ನು ಹೊಂದಬಾರದು.

ಶ್ರೂಯತಾಂ ಚಾಭಿಧಾಸ್ಯಾಮೋ ಗುಣದೋಷಾನ್ ನರಾಧಿಪಾಃ ।
ಶುಭಾಶುಭಾಧಿವಾಸೇನ ಸಂಸರ್ಗಂ ಕುರುತೇ ಯಥಾ ॥೨೨॥

ಎಲೈ ನರಶ್ರೇಷ್ಠರೇ! ಒಳ್ಳೆಯವರ ಮತ್ತು ದುಷ್ಟರ ಜೊತೆಯಲ್ಲಿ ವಾಸಮಾಡುವುದರಿಂದ ಎಂತಹ ಗುಣದೋಷಗಳು ಉಂಟಾಗುವವು ಎಂದು ನಾವು ಹೇಳುತ್ತೇವೆ. ಅದನ್ನು ಕೇಳಿ.

ವಸ್ತ್ರಮಂಭಸ್ಥಿಲಾನ್ ಭೂಮಿಂ ಗಂಧೋ ವಾಸಯತೇ ಯಥಾ।
ಪುಷ್ಪಾಣಾಮಧಿವಾಸೇನ ತಥಾ ಸಂಸರ್ಗಜಾ ಗುಣಾಃ ॥೨೩॥

ಹೂವುಗಳು ಹೇಗೆ ತಮ್ಮ ಸಂಪರ್ಕಕ್ಕೆ ಬಂದ ವಸ್ತ್ರವನ್ನಾಗಲೀ ನೀರನ್ನಾಗಲೀ ಎಳ್ಳನ್ನಾಗಲೀ ಅಥವಾ ಭೂಮಿಯನ್ನಾಗಲೀ ಗಂಧಯುಕ್ತವನ್ನಾಗಿ ಮಾಡುತ್ತವೆಯೋ ಅದರಂತೆ ಸಜ್ಜನರ ಮತ್ತು ದುರ್ಜನರ ಸಂಸರ್ಗದಿಂದ ಅವರ ಗುಣಗಳು ಇನ್ನೊಂದು ಕಡೆಯಲ್ಲಿ ಉಂಟಾಗುತ್ತವೆ.

ಮೋಹಜಾಲಸ್ಯ ಯೋನಿರ್ಹಿ ಮೂಢೈರೇವ ಸಮಾಗಮಃ ।
ಅಹನ್ಯಹನಿ ಧರ್ಮಸ್ಯ ಯೋನಿಃ ಸಾಧುಸಮಾಗಮಃ ॥೨೪॥

ಮೂಢರ ಜೊತೆಯಲ್ಲಿ ಸಂಸರ್ಗವು ಮೋಹಜಾಲಕ್ಕೇ ಕಾರಣವಾದುದು. ಸಜ್ಜನರ ಸಮಾಗಮವು ದಿನದಿನದಲ್ಲಿ ಧರ್ಮದ ವೃದ್ಧಿಗೆ ಕಾರಣವಾದುದು.

ತಸ್ಮಾತ್ ಪ್ರಾಜ್ಞೈಶ್ಚ ವೃದ್ಧೈಶ್ಚ ಸ್ಥಿರಭಾವೈಸ್ತಪಸ್ವಿಭಿಃ ।
ಸದ್ಭಿಶ್ಚ ಸಹ ಸಂಸರ್ಗಃ ಕಾರ್ಯಃ ಶಮಪರಾಯಣೈಃ ।
ನ ನೀಚೈರ್ನಾಢ್ಯವಿದ್ವದ್ಭಿರ್ನಾತ್ಮಜ್ಞೈರ್ವಿಶೇಷತಃ ॥೨೫॥

ಆದ್ದರಿಂದ ಪ್ರಾಜ್ಞರೂ ವೃದ್ಧರೂ ಅಚಂಚಲರೂ ತಪಃಶೀಲರೂ ಶಾಂತರೂ ಆದ ಸಜ್ಜನರ ಜೊತೆಯಲ್ಲಿ ಸಂಸರ್ಗವನ್ನು ಹೊಂದಬೇಕು. ಹೊರತು ನೀಚರ ದುರಹಂಕಾರಿಗಳ ತಮ್ಮ ಸ್ವರೂಪವನ್ನೇ ತಿಳಿಯದವರ ಜೊತೆಯಲ್ಲಿ ಎಂದೂ ಸಂಸರ್ಗವನ್ನು ಹೊಂದಬಾರದು.

ಯೇಷಾಂ ತ್ರೀಣ್ಯವದಾತಾನಿ ವಿದ್ಯಾ ಯೋನಿಶ್ಚ ಕರ್ಮ ಚ ।
ತೇ ಸೇವ್ಯಾಸ್ಸೈಃ ಸಮಾಸ್ಯಾ ಹಿ ಶಾಸ್ತ್ರೇಭ್ಯೋಽಪಿ ವಿಶಿಷ್ಯತೇ ॥೨೬॥

ಯಾರಿಗೆ ವಿದ್ಯೆ ಕುಲ ಮತ್ತು ಕರ್ಮ ಈ ಮೂರೂ ಶುದ್ಧವಾಗಿರುತ್ತವೆಯೋ ಅಂತಹವರು ಸೇವನೀಯರು. ಅವರ ಜೊತೆಯಲ್ಲಿ ಕುಳಿತುಕೊಳ್ಳವುದು ಸಹ ಶಾಸ್ತ್ರಾಧ್ಯಯನಕ್ಕಿಂತಲೂ ಮಿಗಿಲಾದುದು.

ಯೇಷಾಮೇತತ್ ತ್ರಯಂ ನಾಸ್ತಿ ಶಾಸ್ತ್ರಮೇಷಾಂ ನ ವಿದ್ಯತೇ ।
ತೇಷಾಂ ಸಂಗೋ ನ ಧನ್ಯಃ ಸ್ಯಾದಿತಿ ನೋ ನಿಶ್ಚಿತಂ ವಚಃ ॥೨೭॥

ಯಾರಿಗೆ ಈ ಮೂರೂ ಇಲ್ಲವೋ ಅವರ ಬಳಿ ಶಾಸ್ತ್ರವೂ ಇರುವುದಿಲ್ಲ. ಅವರ ಸಂಸರ್ಗವು ಎಂದೂ ಶುಭವಾದುದಲ್ಲ ಎಂದು ನಮ್ಮ ನಿಶ್ಚಿತವಾದ ಅಭಿಪ್ರಾಯ.

ನಿರಾರಂಭಾಹ್ಯಪಿ ವಯಂ ಪುಣ್ಯಶೀಲೇಷು ಸಾಧುಷು ।
ಪುಣ್ಯಮೇವಾಪ್ನುಯಾಮೇಹ ಪಾಪಂ ಪಾಪೋಪಸೇವನಾತ್ ।
ಪುಣ್ಯಾರ್ಥಂ ವಸ್ತುಮಿಚ್ಛಾಮಃ ಪಾಪಂ ಸ್ಯಾತ್ ಪಾಪಸೇವನಾತ್ ॥೨೮॥

ನಾವು ಯಾವ ಕಾರ್ಯವನ್ನು ಮಾಡದಿದ್ದರೂ ಪುಣ್ಯಶೀಲರಾದ ಸಾಧುಗಳ ಜೊತೆಯಲ್ಲಿ ಇದ್ದರೆ ಇಲ್ಲಿ ಪುಣ್ಯವನ್ನೇ ಗಳಿಸುತ್ತೇವೆ. ಪಾಪವನ್ನು ಸಂಪಾದಿಸುವವರ ಜೊತೆಯಲ್ಲಿ ಇದ್ದರೆ ಪಾಪವನ್ನೇ ಗಳಿಸುತ್ತೇವೆ. ನಾವು ಪುಣ್ಯವನ್ನು ಸಂಪಾದಿಸುವ ಉದ್ದೇಶದಿಂದ ನಿಮ್ಮ ಜೊತೆಯಲ್ಲಿ ವಾಸಿಸಲು ಬಯಸುತ್ತೇವೆ. ಪಾಪಿಗಳ ಜೊತೆಯಲ್ಲಿ ವಾಸಿಸಿದರೆ ಪಾಪವೇ ಉಂಟಾಗುವುದಷ್ಟೇ ?

ಅಸತಾಂ ದರ್ಶನಾತ್ ಸ್ಪರ್ಶಾತ್ ಸಂಜಲ್ಪೇನ ಸಹಾಸನಾತ್ ।
ಧರ್ಮಾಚಾರಾಃ ಪ್ರಹೀಯಂತೇ ನಚ ಸಿದ್ಧ್ಯಂತಿ ಮಾನವಾಃ ॥೨೯॥

ದುಷ್ಟರ ದರ್ಶನದಿಂದ ಸ್ಪರ್ಶದಿಂದ ಅವರ ಜೊತೆಯಲ್ಲಿ ಮಾತನಾಡುವುದರಿಂದ ಮತ್ತು ಅವರ ಜೊತೆಯಲ್ಲಿ ಕುಳಿತುಕೊಳ್ಳುವುದರಿಂದ ಧರ್ಮವು ಮತ್ತು ಆಚಾರವು ನಶಿಸಿಹೋಗುತ್ತದೆ. ಮತ್ತು ಮನುಷ್ಯರಿಗೆ ಯಾವ ಸಿದ್ಧಿಯೂ ಉಂಟಾಗುವುದಿಲ್ಲ.

ಬುದ್ಧಿಶ್ಚ ಹೀಯತೇ ಪುಂಸಾಂ ನೀಚೈಃ ಸಹ ಸಮಾಗಮಾತ್ ।
ಮಧ್ಯಮೈರ್ಮಧ್ಯತಾಂ ಯಾತಿ ಶ್ರೇಷ್ಠತಾಂ ಯಾತಿ ಚೋತ್ತಮೈಃ ॥೩೦॥

ನೀಚರ ಸಮಾಗಮದಿಂದ ಮನುಷ್ಯರಿಗೆ ಬುದ್ಧಿಯು ನಾಶಹೊಂದುತ್ತದೆ. ಮಧ್ಯಮರ ಸಹವಾಸದಿಂದ ಬುದ್ಧಿಯು ಮಧ್ಯಸ್ಥವಾಗುತ್ತದೆ. ಉತ್ತಮರ ಜೊತೆಯಲ್ಲಿ ಇದ್ದರೆ ಮಾತ್ರ ಬುದ್ಧಿಯು ಶ್ರೇಷ್ಠವಾಗುತ್ತದೆ.

ಯೇ ಗುಣಾಃ ಕೀರ್ತಿತಾ ಲೋಕೇ ಧರ್ಮಕಾಮಾರ್ಥಸಂಭವಾಃ ।
ಲೋಕಾಚಾರಾಚ್ಚ ಸಂಭೂತಾ ವೇದೋಕ್ತಾಃ ಶಿಷ್ಟಸಂಮತಾಃ ॥೩೧॥

ತೇ ಯುಷ್ಮಾಸು ಸಮಸ್ತಾಶ್ಚ ವ್ಯಸ್ತಾಶ್ಚೈವೇಹ ಸದ್ಗುಣಾಃ ।
ಇಚ್ಛಾಮೋ ಗುಣವನ್ಮಧ್ಯೇ ವಸ್ತುಂ ಶ್ರೇಯೋಭಿಕಾಂಕ್ಷಿಣಃ ॥೩೨॥

ಲೋಕದಲ್ಲಿ ಧರ್ಮ ಅರ್ಥ ಮತ್ತು ಕಾಮಜನಕವಾದ ಯಾವಯಾವ ಗುಣಗಳು ಹೇಳಲ್ಪಟ್ಟಿವೆಯೋ ಲೋಕದ ನಡೆವಳಿಕೆಯಿಂದ ಯಾವಯಾವ ಗುಣಗಳು ಉಂಟಾಗುತ್ತವೆಯೋ ಮತ್ತು ವೇದೋಕ್ತವಾದ ಸಜ್ಜನಸಂಮತವಾದ ಯಾವ ಗುಣಗಳು ಇವೆಯೋ ಆ ಎಲ್ಲ ಸದ್ಗುಣಗಳೂ ನಿಮ್ಮಲ್ಲಿ ಪ್ರತ್ಯೇಕವಾಗಿಯೂ ಮತ್ತು ಒಟ್ಟಾಗಿಯೂ ಇವೆ. ಶ್ರೇಯಸ್ಕಾಮಿಗಳಾದ ನಾವು ಗುಣವಂತರ ಮಧ್ಯದಲ್ಲಿ ವಾಸಿಸಲು ಬಯಸುತ್ತೇವೆ.

ಯುಧಿಷ್ಠಿರಃ

ಧನ್ಯಾ ವಯಂ ಯದಸ್ಮಾನ್ ವೈ ಸ್ನೇಹಕಾರುಣ್ಯಯಂತ್ರಿತಾಃ ।
ಅಸತೋಽಪಿ ಗುಣಾನಾಹುರ್ಬ್ರಾಹ್ಮಣಪ್ರಮುಖಾಃ ಪ್ರಜಾಃ ॥೩೩॥

ಎಲೈ ಪ್ರಜೆಗಳೇ! ಬ್ರಾಹ್ಮಣರೇ ಮೊದಲಾದ ನೀವು ಸ್ನೇಹ ಮತ್ತು ಕಾರುಣ್ಯಪರವಶರಾಗಿ ನಮ್ಮಲ್ಲಿ ಇಲ್ಲದಿರುವ ಗುಣಗಳನ್ನೂ ಸಹ ನಮ್ಮಲ್ಲಿ ಅನುಸಂಧಾನಮಾಡಿ ಹೇಳುತ್ತಿರುವುದರಿಂದ ನಾವು ಧನ್ಯರೆಂದು ಭಾವಿಸುತ್ತೇವೆ.

ತದಹಂ ಭ್ರಾತೃಸಹಿತಃ ಸರ್ವಾನ್ ವಿಜ್ಞಾಪಯಾಮಿ ವಃ ।
ನಾನ್ಯಥಾ ತದ್ಧಿ ಕರ್ತವ್ಯಮಸ್ಮತ್ಸ್ನೇಹಾನುಕಂಪಯಾ ॥೩೪॥

ನಾನು ನನ್ನ ಎಲ್ಲ ತಮ್ಮಂದಿರ ಜೊತೆಯಲ್ಲಿ ನಿಮಗೆ ವಿಜ್ಞಾಪನೆಯನ್ನು ಮಾಡುತ್ತಿದ್ದೇನೆ. ನಮ್ಮ ಮೇಲಿನ ಸ್ನೇಹ ಮತ್ತು ದಯದಿಂದ ಅದನ್ನು ಹಾಗೆಯೇ ನಡೆಸಿಕೊಡಬೇಕು. ವ್ಯತ್ಯಾಸಮಾಡಬಾರದು.

ಭೀಷ್ಮಃ ಪಿತಾಮಹೋ ರಾಜಾ ಜನನೀ ವಿದುರಶ್ಚ ಮೇ ।
ಸುಹೃಜ್ಜನಶ್ಚ ಪ್ರಾಯೋ ಮೇ ನಗರೇ ನಾಗಸಾಹ್ವಯೇ ॥೩೫॥

ತೇ ಹ್ಯಸ್ಮದ್ಧಿತಕಾಮಾರ್ಥಂ ಪಾಲನೀಯಾಃ ಪ್ರಯತ್ನತಃ ।
ಯುಷ್ಮಾಭಿಃ ಸಹಿತೈಃ ಸರ್ವೈಃ ಶೋಕಸಂತಾಪವಿಹ್ವಲೈಃ ॥೩೬॥

ನಮ್ಮ ಪಿತಾಮಹರಾದ ಭೀಷ್ಮ, ಧೃತರಾಷ್ಟ್ರರಾಜ, ತಾಯಿಯಾದ ಕುಂತಿ ವಿದುರ ಮತ್ತು ಹಸ್ತಿನಾವತಿಯಲ್ಲಿರುವ ಹೆಚ್ಚಾದ ನಮ್ಮ ಸುಹೃತ್‌ಜನರು ಇವರೆಲ್ಲರನ್ನೂ ನಮ್ಮ ಹಿತವನ್ನು ಬಯಸುವ ನೀವು ಪ್ರಯತ್ನಪೂರ್ವಕವಾಗಿ ರಕ್ಷಣೆಮಾಡಬೇಕು. ಶೋಕಸಂತಾಪ ವಿಹ್ವಲರಾದ ನೀವೆಲ್ಲರೂ ಒಟ್ಟುಗೂಡಿ ಅವರ ರಕ್ಷಣೆಯನ್ನು ಮಾಡಬೇಕು.

ನಿವರ್ತಧ್ವಂ ಗತಾ ದೂರಂ ಮಮಾಗಮನಕಾಂಕ್ಷಿಣಃ ।
ಸ್ವಜನೇ ನ್ಯಾಸಭೂತೇ ಮೇ ಕಾರ್ಯಾ ಸ್ನೇಹಾನ್ವಿತಾ ಮತಿಃ ॥೩೭॥

ನನ್ನ ಆಗಮನವನ್ನು ಬಯಸಿ ನೀವೆಲ್ಲರೂ ಬಹಳ ದೂರ ಬಂದಿದ್ದೀರಿ. ನೀವು ದಯವಿಟ್ಟು ಹಿಂದಿರುಗಿ. ನಾವು ನಿಮ್ಮಲ್ಲಿ ನ್ಯಾಸವಾಗಿ ಇಟ್ಟಿರುವ ಈ ಭೀಷ್ಮಾದಿಗಳಲ್ಲಿ ನಿಮ್ಮ ಸ್ನೇಹಪೂರ್ಣವಾದ ಬುದ್ಧಿಯನ್ನು ತೋರಿಸಿ.

ಏತದ್ಧಿ ಮಮ ಕಾರ್ಯಾಣಾಂ ಪರಮಂ ಹೃದಿ ಸಂಸ್ಥಿತಮ್ ।
ಕೃತೇನಾನೇನ ತುಷ್ಟಿರ್ಮೇ ಸತ್ಕಾರಶ್ಚ ಕೃತೋ ಭವೇತ್ ॥೩೮॥

ನೀವು ಮಾಡಬೇಕಾದ ಕಾರ್ಯದಲ್ಲಿ ಅತ್ಯಂತ ಶ್ರೇಷ್ಠವಾದ ಕಾರ್ಯವೆಂದರೆ ಇದೇ ಎಂಬುದಾಗಿ ನನ್ನ ಮನಸ್ಸಿನಲ್ಲಿ ದೃಢವಾಗಿದೆ. ನೀವು ಹೀಗೆ ನಡೆದುಕೊಂಡರೆ ನನಗೆ ಸಂತೋಷ ಉಂಟಾಗುತ್ತದೆ. ಮತ್ತು ನನಗೆ ಸತ್ಕಾರವನ್ನೂ ಮಾಡಿದಂತೆ ಆಗುತ್ತದೆ.

ತಥಾऽನುಮಂತ್ರಿತಾಸ್ತೇನ ಧರ್ಮರಾಜೇನ ವೈ ಪ್ರಜಾಃ ।
ಚಕ್ರುರಾರ್ತಸ್ವರಂ ಘೋರಂ ಹಾ ರಾಜನ್ನಿತಿ ದುಃಖಿತಾಃ ॥೩೯॥

ಹೀಗೆ ಧರ್ಮರಾಜನಿಂದ ಹೇಳಲ್ಪಟ್ಟ ಆ ಪ್ರಜೆಗಳು ದುಃಖದಿಂದ ಕೂಡಿದವರಾಗಿ, ಹಾ ರಾಜ ! ಎಂದು ಹೇಳುತ್ತಾ ಘೋರವಾದ ಆರ್ತಸ್ವರವನ್ನು ಮಾಡಿದರು.

ಗುಣಾನ್ ಪಾರ್ಥಸ್ಯ ಸಂಸ್ಮೃತ್ಯ ದುಃಖಾರ್ತಾಃ ಪರಮಾತುರಾಃ ।
ಅಕಾಮಾಃ ಸಂನ್ಯವರ್ತಂತ ಸಮಾಗಮ್ಯಾಥ ಪಾಂಡವೈಃ ॥೪೦॥

ಪಾಂಡವರ ಜೊತೆಯಲ್ಲಿ ಸಮಾಗಮವನ್ನು ಹೊಂದಿದ್ದ ಅವರು ಪಾಂಡವರ ಗುಣಗಳನ್ನು ಸ್ಮರಿಸುತ್ತಾ ದುಃಖದಿಂದ ಕೂಡಿದವರಾಗಿ ಪಾಂಡವರ ವಿರಹದಿಂದ ಆತುರರಾಗಿ ತಮಗೆ ಇಷ್ಟವಿಲ್ಲದಿದ್ದರೂ ಹಸ್ತಿನಾವತಿಗೆ ಹಿಂದಿರುಗಿದರು.

ವಿನಿವೃತ್ತೇಷು ಪೌರೇಷು ರಥಾನಾಸ್ಥಾಯ ಪಾಂಡವಾಃ ।
ಪ್ರಜಗ್ಮುರ್ಜಾಹ್ನವೀತೀರೇ ಪ್ರಮಾಣಾಖ್ಯಂ ಮಹಾವಟಮ್ ॥೪೧॥

ಪೌರರು ಹಿಂದಿರುಗಿದ ಮೇಲೆ ಪಾಂಡವರು ರಥಗಳನ್ನು ಏರಿ ಗಂಗಾತೀರದಲ್ಲಿ ಇದ್ದ ಪ್ರಮಾಣ ಎಂಬ ಹೆಸರಿನ ದೊಡ್ಡ ವಟವೃಕ್ಷವನ್ನು ತಲುಪಿದರು.

ತತೋ ದಿವಸಶೇಷೇಣ ವಟಂ ಗತ್ವಾऽಥ ಪಾಂಡವಾಃ ।
ಊಷುಸ್ತಾಂ ರಜನೀಂ ವೀರಾಃ ಸಂಸ್ಪೃಶ್ಯ ಸಲಿಲಂ ಶುಚಿ ॥೪೨॥

ವೀರರಾದ ಪಾಂಡವರು ದಿವಸದ ಉಳಿದ ಭಾಗದಲ್ಲಿ ಪ್ರಯಾಣವನ್ನು ಮಾಡಿ ಆ ವಟವೃಕ್ಷವನ್ನು ತಲುಪಿ ಕೈಕಾಲುಗಳನ್ನು ತೊಳೆದು ಶುಚಿರ್ಭೂತರಾಗಿ ಅವರು ಆ ರಾತ್ರಿಯನ್ನು ಅಲ್ಲಿಯೇ ಕಳೆದರು.

ಉದಕೇನೈವ ತಾಂ ರಾತ್ರಿಮೂಷುಸ್ತೇ ಶ್ರಮಕರ್ಶಿತಾಃ ।
ಅನುಜಗ್ಮುಶ್ಚ ತತ್ರೈತಾನ್ ಸ್ನೇಹಾತ್ ಕೇಚಿದ್ ದ್ವಿಜಾತಯಃ ॥೪೩॥

ಶ್ರಮದಿಂದ ಬಳಲಿದ ಅವರು ಆ ರಾತ್ರಿಯನ್ನು ಉದಕದ ಆಹಾರದಿಂದಲೇ ಕಳೆದರು. ಕೆಲವು ಬ್ರಾಹ್ಮಣರು ಅವರ ಮೇಲಿನ ಸ್ನೇಹದಿಂದ ಅವರನ್ನು ಅಲ್ಲಿಯೂ ಹಿಂಬಾಲಿಸಿದರು.

ಸಾಗ್ನಯೋಽನಗ್ನಯಶ್ಚೈವ ಸಶಿಷ್ಯಗಣಬಾಂಧವಾಃ ।
ಸ ತೈಃ ಪರಿವೃತೋ ರಾಜಾ ಶುಶುಭೇ ಬ್ರಹ್ಮವಾದಿಭಿಃ ॥೪೪॥

ಅಗ್ನಿಗಳನ್ನು ಹೊಂದಿದ ಮತ್ತು ನಿರಗ್ನಿಗಳಾದ ಮತ್ತು ಶಿಷ್ಯಪರಿವಾರಬಾಂಧವರಿಂದ ಒಡಗೂಡಿದ ಅಂತಹ ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟ ಧರ್ಮರಾಜನು ಅಲ್ಲಿ ಶೋಭಿಸಿದನು.

ತೇಷಾಂ ಪ್ರಾದುಷ್ಕೃತಾಗ್ನೀನಾಂ ಮುಹೂರ್ತೇ ರಮ್ಯದಾರುಣೇ ।
ಬ್ರಹ್ಮಘೋಷಪುರಸ್ಕಾರಃ ಸಂಜಲ್ಪಃ ಸಮಜಾಯತ ॥೪೫॥

ಸಾಧುಗಳಿಗೆ ರಮ್ಯವೂ ದೈತ್ಯರಿಗೆ ದಾರುಣವೂ ಆದ ಸೂರ್ಯಾಸ್ತಕ್ಕಿಂತ ಮುಂಚಿನ ಕಾಲದಲ್ಲಿ ಅವರು ತಮ್ಮ ಅಗ್ನಿಗಳ ಪ್ರಾದುಷ್ಕಾರಗಳನ್ನು ಮಾಡಿ ವೇದಘೋಷಗಳನ್ನು ಮಾಡಿ ಪರಸ್ಪರವಾಗಿ ಮಾತನಾಡಿಕೊಂಡರು.

ರಾಜಾನಂ ತು ಕುರುಶ್ರೇಷ್ಠಂ ತೇ ಹಂಸಮಧುರಸ್ವರಾಃ ।
ಆಶ್ವಾಸಯಂತೋ ವಿಪ್ರೇಂದ್ರಾಃ ಕ್ಷಪಾಂ ಸರ್ವಾಮನೋದಯನ್ ॥

ಹಂಸದಂತೆ ಮಧುರಸ್ವರವನ್ನು ಹೊಂದಿದ್ದ ಆ ಬ್ರಾಹ್ಮಣಶ್ರೇಷ್ಠರು ಕುರುರಾಜನಾದ ಧರ್ಮರಾಜನನ್ನು ಸಮಾಧಾನಪಡಿಸುತ್ತಾ ಆ ರಾತ್ರಿಯನ್ನೆಲ್ಲಾ ಕಳೆದರು.

ರಾಜಾ ತು ಭ್ರಾತೃಭಿಃ ಸಾರ್ಧಂ ತಥಾ ಸರ್ವೈಃ ಸುಹೃದ್ಗಣೈಃ ।
ಅತೀಯಾತ್ ತಾಂ ನಿಶಾಂ ರಾಜನ್ ದುಃಖಶೋಕಸಮಾಹತಃ ॥

ಎಲೈ ಜನಮೇಜಯನೇ! ಧರ್ಮರಾಜನಾದರೋ ತನ್ನ ಎಲ್ಲ ತಮ್ಮಂದಿರ ಜೊತೆಯಲ್ಲಿ ಮತ್ತು ಎಲ್ಲ ಸುಹೃದ್ಗಣಗಳ ಜೊತೆಯಲ್ಲಿ ದುಃಖಶೋಕಾಭಿತಪ್ತನಾಗಿ ಆ ರಾತ್ರಿಯನ್ನು ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪ್ರಥಮೋಽಧ್ಯಾಯಃ ॥
॥ ಆರಣ್ಯಕಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★★★★★

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ನಿಹತ್ಯ ರಕ್ಷೋ ವನಮಧ್ಯಸಂಸ್ಥಾ-
ಸ್ತದಾ ಯತೀನಾಮಯುತೈಃ ಸಮೇತಾಃ ।
ಅಶೀತಿಸಾಹಸ್ರಮುನಿಪ್ರವೀರೈ
ರ್ದಶಾಂಶಯುಕ್ತೈಃ ಸಹಿತಾ ವ್ಯಚಿಂತಯನ್ ॥೪॥

ಪಾಂಡವರು ಕಿರ್ಮೀರನನ್ನು ಕೊಂದ ಬಳಿಕ ತಮ್ಮೊಡನೆ ಬಂದಿದ್ದ ಹತ್ತು ಸಾವಿರ ಯತಿಗಳ ಮತ್ತು ಎಂಬತ್ತೆಂಟು ಸಾವಿರ ಮುನೀಶ್ವರರ ಜೊತೆಗೆ ಅರಣ್ಯಮಧ್ಯದಲ್ಲಿ ವಾಸಮಾಡುತ್ತ ಅವರ ಪೋಷಣೆಯ ಬಗ್ಗೆ ಚಿಂತಿಸಿದರು.

ವಿಂಚಿತ್ಯ ತೇಷಾಂ ಭರಣಾಯ ಧರ್ಮಜಃ
ಸಂಪೂಜ್ಯ ಸೂರ್ಯಸ್ಥಿತಮಚ್ಯುತಂ ಪ್ರಭುಂ ।
ದಿನೇಽಕ್ಷಯಾನ್ನಂ ಪಿಠರಂ ತದಾಪ
ರತ್ನಾದಿದಂ ಕಾಮವರಾನ್ನದಂ ಚ ॥೫॥

ಆ ಯತಿಗಳ ಮತ್ತು ಮುನಿಗಳ ಪೋಷಣೆಗೆ ತಕ್ಕ ಉಪಾಯವನ್ನು ಆಲೋಚಿಸಿ ಹಗಲಿನಲ್ಲಿ ಸೂರ್ಯಾಂತರ್ಗತನಾದ ಶ್ರೀನಾರಾಯಣನನ್ನು ಆರಾಧಿಸಿ ಪ್ರತಿದಿನವೂ ಅಕ್ಷಯ ಅನ್ನವನ್ನೂ ಬೇಕಾದ ಉತ್ತಮ ಭಕ್ಷ್ಯಾದಿಗಳನ್ನೂ ರತ್ನ ಮುಂತಾದವುಗಳನ್ನೂ ಕೊಡಬಲ್ಲ ಒಂದು ಅಕ್ಷಯಪಾತ್ರೆಯನ್ನು ಪಡೆದರು.

ಬಭಾರ ತೇನೈವ ಯುಧಿಷ್ಠಿರಸ್ತಾನ್
ಪ್ರತೇಕಶಸ್ತ್ರಿಂಶತದಾಸದಾಸಿಕಾನ್ ।
ಸುವರ್ಣಪಾತ್ರೇಷು ಹಿ ಭುಂಜತೇ ಯೇ
ಗೃಹೇ ತದೀಯೇ ಬಹುಕೋಟಿದಾಸಕೇ ॥೬॥

ಹಿಂದೆ ಕೋಟಿಗಟ್ಟಲೆ ದಾಸರುಗಳಿದ್ದ ತನ್ನ ಅರಮನೆಯಲ್ಲಿ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಮೂವತ್ತು ಮಂದಿ ದಾಸದಾಸಿಯರುಗಳಿಂದ ಯುಕ್ತರಾಗಿದ್ದು ಸುವರ್ಣ ಪಾತ್ರೆಗಳಲ್ಲಿ ಅನ್ನ ಉಣ್ಣುತ್ತಿದ್ದ ಆ ಯತಿಗಳು ಮುಂತಾದವರನ್ನು ಯುಧಿಷ್ಠಿರ ಅರಣ್ಯದಲ್ಲಿಯೂ ಆ ಅಕ್ಷಯ ಪಾತ್ರೆಯ ಬಲದಿಂದ ಹಾಗೇ ಪೋಷಿಸಿದ.

ಸತ್ಸಂಗಮಾಕಾಂಕ್ಷಿಣ ಏವ ತೇಽವಸನ್
ಪಾರ್ಥೈಃ ಸಹಾನ್ಯೇ ಚ ಮುನೀಂದ್ರಬೃಂದಾಃ ।
ಶೃಣ್ವಂತ ಏಭ್ಯಃ ಪರಮಾರ್ಥಸಾರಾಃ
ಕಥಾ ವದಂತಶ್ಚ ಪುರಾತನಾಸ್ತಥಾ ॥೭॥

ಆ ಯತಿಗಳೂ ಬೇರೆ ಮುನೀಶ್ವರರ ಸಮೂಹಗಳೂ ಸರ್ವೋತ್ತಮನಾದ ಶ್ರೀಹರಿಯ ಕುರಿತಾದ ಮಾತುಕತೆಗಳನ್ನು ಪಾಂಡವರಿಂದ ಕೇಳುತ್ತಲೂ ಅವರಿಗೆ ಪ್ರಾಚೀನ ಕಥೆಗಳನ್ನು ಹೇಳುತ್ತಲೂ ಕೇವಲ ಸತ್ಸಂಗದಲ್ಲಿ ಇರುವುದನ್ನು ಬಯಸಿಯೆ ಅವರೊಂದಿಗೆ ವಾಸ ಮಾಡಿದರು.

ಏವಂ ಗಜಾನಾಂ ಬಹುಕೋಟಿಬೃಂದಾನ್
ತಥಾ ರಥಾನಾಂ ಚ ಹಯಾಂಶ್ಚ ಬೃಂದಶಃ ।
ವಿಸೃಜ್ಯ ರತ್ನಾನಿ ನರಾಂಶ್ಚ ಬೃಂದಶೋ
ವನೇ ವಿಜಹ್ರುರ್ದಿವಿ ದೇವವತ್ ಸುಖಂ ॥೮॥

ಹಿಂದೆ ಇಂದ್ರಪ್ರಸ್ಥದಲ್ಲಿದ್ದ ಬಹುಕೋಟಿ ವೃಂದ ಆನೆ ರಥಗಳನ್ನೂ ವೃಂದ ಕುದುರೆಗಳನ್ನೂ ವೃಂದ ದಾಸದಾಸಿಯರನ್ನೂ ರತ್ನಗಳನ್ನೂ ಪರಿತ್ಯಜಿಸಿ ಪಾಂಡವರು ಕಾಡಿನಲ್ಲಿಯೂ ಹೀಗೆ ಸ್ವರ್ಗದಲ್ಲಿ ದೇವತೆಗಳಂತೆ ಸುಖವಾಗಿಯೇ ವಿಹರಿಸಿದರು.

ಗವಾಂ ಚ ಲಕ್ಷಂ ಪ್ರದದಾತಿ ನಿತ್ಯಶಃ
ಸುವರ್ಣಭಾರಾಂಶ್ಚ ಶತಂ ಯುಧಿಷ್ಠಿರಃ ।
ಸಭ್ರಾತೃಕೋಽಸೌ ವನಮಾಪ್ಯ ಶಕ್ರವ-
ನ್ಮುಮೋದ ವಿಪ್ರೈಃ ಸಹಿತೋ ಯಥಾಸುಖಂ ॥೯॥

ಯುಧಿಷ್ಠಿರ ಹಿಂದೆ ನಿತ್ಯವೂ ಲಕ್ಷ ಗೋವುಗಳನ್ನೂ ನೂರು ಸುವರ್ಣ ಭಾರಗಳನ್ನು ದಾನ ಮಾಡುತ್ತಿದ್ದ. ಈಗಲೂ ಸೋದರರೊಂದಿಗೆ ಕಾಡಿಗೆ ಹೋಗಿ ಮುನಿಗಳಿಂದ ಕೂಡಿ ಹಿಂದಿನಂತೆಯೇ ಸುಖವಾಗಿ ಇಂದ್ರನಂತೆಯೇ ಆನಂದಿಸಿದ.

★ ★ ★ ★

## ಎರಡನೆಯ ಅಧ್ಯಾಯ

(ಬ್ರಾಹ್ಮಣರನ್ನು ಪೋಷಿಸಲು ತನ್ನ ಅಶಕ್ತಿಯನ್ನು ತಿಳಿಸಿ ಧರ್ಮರಾಜನಿಂದ ಅವರು ಹಿಂದಿರುಗುವಂತೆ ಪ್ರಾರ್ಥನೆ. ಬ್ರಾಹ್ಮಣರಿಂದ ಅದರ ನಿರಾಕರಣೆ. ಶೌನಕರಿಂದ ಯುಧಿಷ್ಠಿರನಿಗೆ ಸೂರ್ಯೋಪಾಸನೆಯ ಪ್ರೇರಣೆ)

**ವೈಶಂಪಾಯನಃ**

**ಪ್ರಭಾತಾಯಾಂ ತು ಶರ್ವರ್ಯಾಂ ತೇಷಾಮಕ್ಲಿಷ್ಟಕರ್ಮಣಾಮ್।**
**ವನಂ ಯಿಯಾಸತಾಂ ವಿಪ್ರಾಃ ತಸ್ಥುರ್ಭಿಕ್ಷಾಭುಜೋऽಗ್ರತಃ ।**
**ತಾನುವಾಚ ತತೋ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ॥೧॥**

ಬೆಳಗಾದನಂತರ ಅಕ್ಲಿಷ್ಟಕಾರಿಗಳಾದ ಪಾಂಡವರು ವನಕ್ಕೆ ಹೊರಡಲು ಉದ್ಯುಕ್ತರಾಗುತ್ತಿರಲು ಭಿಕ್ಷಾನ್ನ ಜೀವಿಗಳಾದ ಬ್ರಾಹ್ಮಣರು ಅವರ ಎದುರಿಗೆ ನಿಂತರು. ಕುಂತೀಪುತ್ರನಾದ ಧರ್ಮರಾಜನು ಆಗ ಅವರನ್ನುಕುರಿತು ಮಾತನಾಡಿದನು.

**ವಯಂ ಹಿ ಹೃತಸರ್ವಸ್ವಾ ಹೃತರಾಜ್ಯಾ ಹೃತಶ್ರಿಯಃ ।**
**ಫಲಮೂಲಾಮಿಷಾಹಾರಾ ವನಂ ಯಾಸ್ಯಾಮ ದುಃಖಿತಾಃ ॥೨॥**

ನಾವಾದರೋ ರಾಜ್ಯವನ್ನೂ ಸಂಪತ್ತನ್ನೂ ಸರ್ವಸ್ವವನ್ನೂ ಕಳೆದುಕೊಂಡು ಫಲಮೂಲಾಹಾರರಾಗಿ ಮತ್ತು ಕಾಡಿನಲ್ಲಿ ದೊರಕುವ ಮಾಂಸಾಹಾರಿಗಳಾಗಿ ದುಃಖದಿಂದ ಕಾಡಿಗೆ ಹೋಗುತ್ತಿದ್ದೇವೆ.

**ವನಂ ಚ ದೋಷಬಹುಲಂ ಬಹುವ್ಯಾಲಸರೀಸೃಪಮ್ ।**
**ಪರಿಕ್ಲೇಶಶ್ಚ ವೋ ಮನ್ಯೇ ಧ್ರುವಂ ತತ್ರ ಭವಿಷ್ಯತಿ ॥೩॥**

ಕಾಡಿನಲ್ಲಿ ಅನೇಕ ಗಜಗಳ ಮತ್ತು ಸರ್ಪಗಳಿಂದ ಬಹಳ ಉಪದ್ರವವಿದೆಯಷ್ಟೇ? ನಿಮಗೆ ನಿಶ್ಚಯವಾಗಿ ಅಲ್ಲಿ ಬಹಳ ತೊಂದರೆಯಾಗುವುದೆಂದು ನಾನು ಭಾವಿಸುತ್ತೇನೆ.

**ಬ್ರಾಹ್ಮಣಾನಾಂ ಚ ಸಂಕ್ಲೇಶೋ ದೈವತಾನ್ಯಪಿ ಸಾದಯೇತ್ ।**
**ಕಿಂ ಪುನರ್ಮಾಮಿತೋ ವಿಪ್ರಾ ನಿವರ್ತಧ್ವಂ ಯಥಾಗತಮ್ ॥೪॥**

ಬ್ರಾಹ್ಮಣರಿಗೆ ಕ್ಲೇಶವುಂಟಾದರೆ ಅದು ದೇವತೆಗಳನ್ನೂ ನಾಶಮಾಡೀತು. ಇನ್ನು ನನ್ನ ಪಾಡೇನು? ಆದ್ದರಿಂದ ಎಲೈ ಬ್ರಾಹ್ಮಣರೇ ನೀವು ಇಲ್ಲಿಂದ ಬಂದದಾರಿಯಲ್ಲೇ ಹಿಂದಿರುಗಿ ಹೋಗಿ.

ಬ್ರಾಹ್ಮಣಾಃ

ಯಾ ಗತಿರ್ಭವತಾಂ ರಾಜನ್ ತಾಂ ವಯಂ ಗಂತುಮುದ್ಯತಾಃ ।
ನಾರ್ಹಥಾಸ್ಮಾನ್ ಪರಿತ್ಯಕ್ತುಂ ಭಕ್ತಾನ್ ಸದ್ಧರ್ಮದರ್ಶಿನಃ ॥೫॥

ರಾಜನೇ! ನಿನಗೆ ಯಾವ ಗತಿಯು ಉಂಟಾಗುತ್ತದೆಯೋ ನಾವೂ ಅದನ್ನೇ ಹೊಂದಲು ಸಿದ್ದರಾಗಿದ್ದೇವೆ. ಸದ್ಧರ್ಮದರ್ಶಿಗಳೂ ಭಕ್ತರೂ ಆದ ನಮ್ಮನ್ನು ನೀವು ಪರಿತ್ಯಾಗಮಾಡಬಾರದು.

ಅನುಕಂಪಾಂ ಹಿ ಭಕ್ತೇಷು ದೈವತಾನ್ಯಪಿ ಕುರ್ವತೇ ।
ವಿಶೇಷತೋ ಬ್ರಾಹ್ಮಣೇಷು ಸದಾಚಾರಾವಲಂಬಿಷು ॥೬॥

ದೇವತೆಗಳೂ ಸಹ ತಮ್ಮ ಭಕ್ತರಲ್ಲಿ ಅನುಕಂಪೆಯನ್ನು ಮಾಡುತ್ತಾರಷ್ಟೇ? ಅದರಲ್ಲಿಯೂ ಸದಾಚಾರನಿಷ್ಠರಾದ ಬ್ರಾಹ್ಮಣರಲ್ಲಿ ವಿಶೇಷವಾಗಿ ಅನುಗ್ರಹವನ್ನು ಮಾಡುತ್ತಾರೆ.

ಯುಧಿಷ್ಠಿರಃ

ಮಮಾಪಿ ಪರಮಾ ಭಕ್ತಿರ್ಬ್ರಾಹ್ಮಣೇಷು ಸದಾ ದ್ವಿಜಾಃ ।
ಸಹಾಯವಿಪರಿಭ್ರಂಶಸ್ತ್ವಯಂ ಸಾದಯತೀವ ಮಾಮ್ ॥೭॥

ಎಲೈ ಬ್ರಾಹ್ಮಣರೇ ನನಗೂ ಸಹ ಯಾವಾಗಲೂ ಬ್ರಾಹ್ಮಣರಲ್ಲಿ ಪರಮಭಕ್ತಿಯೇ ಇದೆ. ಆದರೆ ಧನಧಾನ್ಯಾದಿ ಸಹಾಯನಾಶವು ನನ್ನನ್ನು ಹೀಗೆ ವಿಷಾದಗೊಳಿಸುತ್ತಿದೆ.

ಆಹರೇಯುರ್ಹಿ ಮೇ ಕಿಂಚಿತ್ ಫಲಮೂಲಮೃಗಾಂಸ್ತಥಾ ।
ತ ಇಮೇ ಶೋಕಜೈರ್ದುಃಖೈರ್ಭ್ರಾತರೋ ಮೇ ವಿಮೋಹಿತಾಃ ॥೮॥

ಶೋಕದುಃಖಗಳಿಂದ ಭರಿತರಾದ ವಿಮೋಹಕ್ಕೆ ಒಳಗಾದ ನನ್ನ ಈ ತಮ್ಮಂದಿರು ನನಗಾಗಿ ಸ್ವಲ್ಪ ಫಲಮೂಲಗಳನ್ನು ಅಥವಾ ಮೃಗಗಳನ್ನು ತರಬಹುದು.

ದ್ರೌಪದ್ಯಾ ವಿಪ್ರಕರ್ಷೇಣ ರಾಜ್ಯಾಪಹರಣೇನ ಚ ।
ದುಃಖಾನ್ವಿತಾನಿಮಾನ್ ಕ್ಲೇಶೈರ್ನಾಹಂ ವಕ್ತುಮಿಹೋತ್ಸಹೇ ॥೯॥

ದ್ರೌಪದಿಯನ್ನು ಎಳೆದಾಡುವುದರಿಂದಲೂ ಮತ್ತು ರಾಜ್ಯವನ್ನು ಕಳೆದುಕೊಂಡಿರುವುದರಿಂದಲೂ ದುಃಖದಿಂದ ಕೂಡಿದ ಇವರನ್ನು ಇನ್ನೂ ಕ್ಲೇಶಗೊಳಿಸುವಂತೆ ನಾನು ಅವರನ್ನು ಕುರಿತು ಮಾತನಾಡಲಾರೆ.

ಬ್ರಾಹ್ಮಣಾಃ

ಅಸ್ಮತ್ಪೋಷಣಜಾ ಚಿಂತಾ ಮಾ ಭೂತ್ ತೇ ಹೃದಿ ಪಾರ್ಥಿವ ।
ಸ್ವಯಮಾಹೃತ್ಯ ವನ್ಯಾನಿ ಹ್ಯನುಯಾಸ್ಯಾಮಹೇ ವಯಮ್ ॥೧೦॥

ಎಲೈ ರಾಜನೇ! ನಮ್ಮನ್ನು ಸಾಕುವ ಚಿಂತೆಯು ನಿನ್ನ ಮನಸ್ಸಿಗೆ ಬಾರದಿರಲಿ. ಕಾಡಿನಲ್ಲಿ ಸಿಗುವ ಫಲಮೂಲಾದಿಗಳನ್ನು ನಾವೇ ತಂದುಕೊಂಡು ನಿಮ್ಮನ್ನು ಹಿಂಬಾಲಿಸುತ್ತೇವೆ.

ಅನುಧ್ಯಾನೇನ ಜಪ್ಯೇನ ವಿಧಾಸ್ಯಾಮಃ ಶಿವಂ ತವ ।
ಕಥಾಭಿಶ್ಚಾನುಕೂಲಾಭಿಃ ಸಹ ರಂಸ್ಯಾಮಹೇ ವನೇ ॥೧೧॥

ಜಪವನ್ನು ಮಾಡಿ ಮತ್ತು ಆಶೀರ್ವಾದವನ್ನು ಮಾಡಿ ನಿನಗೆ ಮಂಗಳವನ್ನು ಉಂಟುಮಾಡುವೆವು. ಕಾಡಿನಲ್ಲಿ ನಿನಗೆ ಹಿತಕರವಾದ ಕಥೆಗಳನ್ನು ಹೇಳಿ ನಿನ್ನ ಜೊತೆಯಲ್ಲಿ ಸಂತೋಷಪಡುತ್ತೇವೆ.

ಯುಧಿಷ್ಠಿರಃ

ಏವಮೇತನ್ನ ಸಂದೇಹೋ ರಮೇಯಂ ಬ್ರಾಹ್ಮಣೈಃ ಸಹ ।
ನ್ಯೂನಭಾವಾತ್ತು ಪಶ್ಯಾಮಿ ಪ್ರತ್ಯಾದೇಶಮಿವಾತ್ಮನಃ ॥೧೨॥

ಅದು ಹಾಗೆಯೇ ಸರಿ. ನಾನೂ ಸಹ ಬ್ರಾಹ್ಮಣರ ಜೊತೆಯಲ್ಲಿ ಸಂತೋಷದಿಂದ ಇರುತ್ತೇನೆ. ಆದರೆ ನನ್ನ ಕೈಯು ಬರಿದಾಗಿರುವುದರಿಂದ ನಿಮ್ಮನ್ನು ನಿರಾಕರಣೆಮಾಡುತ್ತಿದ್ದೇನೆ.

ಕಥಂ ದ್ರಕ್ಷ್ಯಾಮಿ ವಃ ಸರ್ವಾನ್ ಸ್ವಯಮಾಹೃತಭೋಜನಾನ್ ।
ಮದ್ಭಕ್ತಾನ್ ಕ್ಲಿಶ್ಯತೋಽನರ್ಹಾನ್ ಧಿಕ್ ಪಾಪಾನ್ ಧೃತರಾಷ್ಟ್ರಜಾನ್ ॥

ನನ್ನ ಭಕ್ತರಾದ ಕ್ಲೇಶಕ್ಕೆ ಅನರ್ಹರಾದ ನೀವೆಲ್ಲರೂ ನಿಮ್ಮ ಆಹಾರವನ್ನು ನೀವೇ ಸಂಪಾದಿಸಿಕೊಂಡು ಕ್ಲೇಶಪಡುವುದನ್ನು ನಾನು ಹೇಗೆ ನೋಡಲಿ? ಪಾಪಿಗಳಾದ ದುರ್ಯೋಧನಾದಿಗಳಿಗೆ ಧಿಕ್ಕಾರವಿರಲಿ.

ವೈಶಂಪಾಯನ

ಇತ್ಯುಕ್ತ್ವಾ ನೃಪತಿಃ ಶೋಚನ್ ನಿಷಸಾದ ಮಹೀತಲೇ ॥೧೪॥

ತಮಧ್ಯಾತ್ಮರತೋ ವಿದ್ವಾನ್ ಶೌನಕೋ ನಾಮ ವೈ ದ್ವಿಜಃ ।
ಯೋಗೇ ಸಾಂಖ್ಯೇ ಚ ಕುಶಲೋ ರಾಜಾನಮಿದಮಬ್ರವೀತ್ ॥ ೧೫॥

ಹೀಗೆ ಹೇಳಿ ರಾಜನು ಶೋಕಪಡುತ್ತಾ ಭೂಮಿಯ ಮೇಲೆ ಕುಳಿತನು. ಆಗ ಸಾಂಖ್ಯದಲ್ಲಿಯೂ ಯೋಗದಲ್ಲಿಯೂ ನಿಪುಣನಾದ ಅಧ್ಯಾತ್ಮನಿಷ್ಠನಾದ ವಿದ್ವಾಂಸನಾದ ಶೌನಕನೆಂಬ ಒಬ್ಬ ಬ್ರಾಹ್ಮಣನು ರಾಜನನ್ನು ಕುರಿತು ಈ ಮಾತುಗಳನ್ನು ಆಡಿದನು.

ಶೌನಕಃ

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೧೬॥

ಮೂಢನಾದ ಮನುಷ್ಯನಿಗೆ ಪ್ರತಿದಿವಸದಲ್ಲಿಯೂ ಶೋಕಕ್ಕೆ ಕಾರಣವಾದ ಸಹಸ್ರವಿಷಯಗಳೂ ಭಯಕ್ಕೆ ಕಾರಣವಾದ ನೂರು ವಿಷಯಗಳೂ ಉಂಟಾಗುತ್ತವೆ. ಪಂಡಿತನಿಗೆ ಅವು ಉಂಟಾಗುವುದಿಲ್ಲ.

ನಹಿ ಜ್ಞಾನನಿರುದ್ಧೇಷು ಬಹ್ವಪಾಯೇಷು ಕರ್ಮಸು ।
ಶ್ರೇಯೋಘಾತಿಷು ಸಜ್ಜಂತೇ ಬುದ್ಧಿಮಂತೋ ಭವದ್ವಿಧಾಃ ॥೧೭॥

ನಿನ್ನಂತಹ ಬುದ್ಧಿವಂತರು ಜ್ಞಾನಕ್ಕೆ ಪ್ರತಿಬಂಧಕವಾದ ಶ್ರೇಯೋವಿಘಾತಕವಾದ ಮತ್ತು ಅನೇಕ ಅಪಾಯಗಳಿಂದ ಕೂಡಿದ ಕರ್ಮಗಳಲ್ಲಿ ಎಂದೂ ನಿರತರಾಗಿರುವುದಿಲ್ಲ.

ಅಷ್ಟಾಂಗಾಂ ಬುದ್ಧಿಮಾಹುರ್ಹಿ ಸರ್ವಶ್ರೇಯೋऽವಿಘಾತಿನೀಮ್ ।
ಶ್ರುತಿಸ್ಮೃತಿಸಮಾಯುಕ್ತಾಂ ಸಾ ರಾಜನ್ ತ್ವಯ್ಯವಸ್ಥಿತಾ ॥೧೮॥

ಅಷ್ಟಾಂಗಯುತವಾದ ಬುದ್ಧಿಯನ್ನು ಸರ್ವಶ್ರೇಯಃ ಸಂಪಾದಕವೆಂದು ಹೇಳುತ್ತಾರಷ್ಟೇ ? ಎಲೈ ರಾಜನೇ! ಶ್ರುತಿಸ್ಮೃತಿ ಯುಕ್ತವಾದ ಅಂತಹ ಬುದ್ಧಿಯು ನಿನ್ನಲ್ಲಿದೆ.

ಶುಶ್ರೂಷಾ, ಶ್ರವಣ, ಮನನ ಧ್ಯಾನ ಉತ್ಪೇಕ್ಷಾ ಮಿಥ್ಯಾಜ್ಞಾನರಾಹಿತ್ಯ ಪದಾರ್ಥಗಳ ವಿಶೇಷವಾದ ಜ್ಞಾನ ಮತ್ತು ತತ್ವಜ್ಞಾನ ಇವುಗಳು ಬುದ್ಧಿಯ ಅಷ್ಟಾಂಗಗಳೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ.

ಅರ್ಥಕೃಚ್ಛ್ರೇಷು ದುರ್ಗೇಷು ವ್ಯಾಪತ್ಸು ಸ್ವಜನೇಷ್ವಪಿ ।
ಶಾರೀರೇ ಮಾನಸೇ ದುಃಖೇ ನ ಸೀದಂತಿ ಭವಾದೃಶಾಃ ॥೧೯॥

ನಿನ್ನಂತಹ ಮೇಧಾವಿಗಳು ದುರ್ಗಮವಾದ ಅರ್ಥಕ್ಲೇಶವು ಒದಗಿದಾಗ ಅಥವಾ ಸ್ವಜನರಿಗೆ ವಿಪತ್ತು ಉಂಟಾದಾಗ ಅಥವಾ ಶರೀರ ಅಥವಾ ಮನಸ್ಸಿನಲ್ಲಿ ದುಃಖವುಂಟಾಗುವ ಸಂದರ್ಭ ಬಂದಾಗಲೂ ವಿಷಾದವನ್ನು ಹೊಂದುವುದಿಲ್ಲ.

ಶ್ರೂಯತಾಂ ಚಾಭಿಧಾಸ್ಯಾಮಿ ಜನಕೇನ ಯಥಾ ಪುರಾ ।
ಆತ್ಮವ್ಯವಸ್ಥಾನಕರಾ ಗೀತಾಃ ಶ್ಲೋಕಾ ಮಹಾತ್ಮನಾ ॥೨೦॥

ಹಿಂದೆ ಮಹಾತ್ಮನಾದ ಜನಕನು ತನ್ನ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುವಂತಹ ಶ್ಲೋಕಗಳನ್ನು ಹೇಗೆ ಗಾನಮಾಡಿದನೆಂದು ನಾನು ಹೇಳುವೆನು. ಕೇಳು.

ಮನೋದೇಹಸಮುತ್ಥಾಭ್ಯಾಂ ದುಃಖಾಭ್ಯಾಮರ್ದಿತಂ ಜಗತ್ ।
ತಯೋರ್ವ್ಯಾಸಸಮಾಸಾಭ್ಯಾಂ ಶಮೋಪಾಯಮಿಮಂ ಶೃಣು ॥೨೧॥

ಮಾನಸದುಃಖದಿಂದ ಅಥವಾ ದೇಹದಿಂದ ಉಂಟಾದ ದುಃಖದಿಂದ ಈ ಜಗತ್ತು ಪೀಡೆಗೆ ಒಳಗಾಗಿದೆ. ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ಆ ದುಃಖಗಳನ್ನು ಪರಿಹಾರಮಾಡುವ ಈ ಉಪಾಯವನ್ನು ಕೇಳು.

ವ್ಯಾಧೇರನಿಷ್ಟಸಂಯೋಗಾತ್ ಶ್ರಮಾದಿಷ್ಟವಿವರ್ಜನಾತ್ ।
ದುಃಖಂ ಚತುರ್ಭಿಃ ಶಾರೀರಂ ಕಾರಣೈಃ ಸಂಪ್ರವರ್ತತೇ ॥೨೨॥

ವ್ಯಾಧಿಯಿಂದ ಅನಿಷ್ಟಪ್ರಾಪ್ತಿಯಿಂದ ಶ್ರಮದಿಂದ ಮತ್ತು ಇಷ್ಟಹಾನಿಯಿಂದ ಹೀಗೆ ನಾಲ್ಕುವಿಧವಾದ ಕಾರಣಗಳಿಂದ ಶಾರೀರಕವಾದ ದುಃಖವು ಉಂಟಾಗುತ್ತದೆ.

ವ್ಯಾಧಯಶ್ಚ ಶರೀರೇಽಸ್ಮಿನ್ ವಾತಪಿತ್ತಕಫೋದ್ಭವಾಃ ।
ಅಜೀರ್ಣಪ್ರಭವಾಃ ಸರ್ವೇ ದುಃಖಪಾಪೋದ್ಭವಾ ನೃಣಾಮ್ ॥೨೩॥

ವಾತ ಪಿತ್ತ ಮತ್ತು ಕಫಗಳ ವೈಷಮ್ಯದಿಂದ ಈ ಶರೀರದಲ್ಲಿ ಉಂಟಾಗುವ ಎಲ್ಲ ರೋಗಗಳೂ ಅಜೀರ್ಣದಿಂದ ಉಂಟಾಗುತ್ತವೆ. ದುಃಖವನ್ನು ಕೊಡುವ ಈ ಎಲ್ಲ ರೋಗಗಳು ಮನುಷ್ಯರಿಗೆ ಪಾಪದ ಫಲವಾಗಿ ಉಂಟಾಗುವುಗಳು.

ತದಾಶುಪ್ರತಿಕಾರಾಚ್ಚ ಸತತಂ ಚಾಪಿ ಚಿಂತನಾತ್ ।
ಆಧಿವ್ಯಾಧಿಪ್ರಶಮನಂ ಕ್ರಿಯಾಯೋಗಂ ಫಲೇನ ಚ ॥೨೪॥

ಮತಿಮಂತೋ ವಿದೋ ವೈದ್ಯಾಃ ಶಮಂ ಪ್ರಾಯೇಣ ಕುರ್ವತೇ ।
ಮಾನಸೇನ ಹಿ ದುಃಖೇನ ಶರೀರಮುಪತಪ್ಯತೇ ॥೨೫॥

ಮೇಧಾವಿಗಳಾದ ವಿದ್ವಾಂಸರು ಸರ್ವಕರ್ಮಸಾಕ್ಷಿಯಾದ ಶ್ರೀಹರಿಯ ಚಿಂತನೆಯೇ ಈ ಪಾಪ ಮತ್ತು ದುಃಖಗಳ ಪರಿಹಾರರೂಪವೆಂದು ತಿಳಿದು ಕ್ರಿಯಾಯೋಗಜನ್ಯವಾದ ಹರಿಪ್ರಸಾದದಿಂದ ಆಧಿವ್ಯಾಧಿ ಪ್ರಶಮನವನ್ನು ಮಾಡುವವರಾಗಿ ಹರ್ಯರ್ಪಣಬುದ್ಧಿಯಿಂದ ಮಾಡುವ ನಿತ್ಯನೈಮಿತ್ತಿಕಕರ್ಮರೂಪವಾದ ಉಪಾಯವನ್ನು ಅನುಷ್ಠಾನವನ್ನು ಮಾಡುತ್ತಾರೆ.

ಮಾನಸಸ್ಯ ಪ್ರಿಯಾಖ್ಯಾನೈಃ ಸಂಭೋಗೋಪನಯೈರ್ನೃಣಾಂ ।
ಅಯಃ ಪಿಂಡೇನ ತಪ್ತೇನ ಕುಂಭಸಂಸ್ಥಮಿವೋದಕಮ್ ॥೨೬॥

ಹಾಗೆಯೇ ಮಾನಸದುಃಖವನ್ನು ಪ್ರಿಯೆಯ ಜೊತೆಯಲ್ಲಿ ಸಲ್ಲಾಪಮಾಡುವುದರಿಂದಲೂ ಸಂಭೋಗಮಾಡುವುದರಿಂದಲೂ ಕಳೆದುಕೊಳ್ಳಬಹುದು. ಕಾದ ಕಬ್ಬಿಣದ ಪಿಂಡದಿಂದ ಸಂಬಂಧವನ್ನು ಹೊಂದಿದ ಪಾತ್ರೆಯಲ್ಲಿರುವ ನೀರು ಕಾಯುವಂತೆ ಮಾನಸದುಃಖದಿಂದ ಶರೀರವು ಪೀಡಿಸಲ್ಪಡುತ್ತದೆ.

ಮಾನಸಂ ಶಮಯೇತ್ ತಸ್ಮಾತ್ ಜ್ಞಾನೇನಾಗ್ನಿಮಿವಾಂಬುನಾ ।
ಪ್ರಶಾಂತೇ ಮಾನಸೇ ದುಃಖೇ ಶಾರೀರಮುಪಶಾಮ್ಯತಿ ॥೨೭॥

ಅಗ್ನಿಯನ್ನು ನೀರಿನಿಂದ ಉಪಶಮನಮಾಡಿದಂತೆ ಮಾನಸದುಃಖವನ್ನು ಜ್ಞಾನದಿಂದ ನಾಶಮಾಡಬೇಕು. ಮಾನಸದುಃಖವು ನಾಶಹೊಂದಿದರೆ ಶರೀರದ ದುಃಖವು ನಾಶಹೊಂದುತ್ತದೆ.

ಮನಸೋ ದುಃಖಮೂಲಂ ತು ಸ್ನೇಹ ಇತ್ಯುಪಲಭ್ಯತೇ ।
ಸ್ನೇಹಾತ್ತು ಸಜ್ಜತೇ ಜಂತುರ್ದುಃಖಯೋಗಮುಪೈತಿ ಚ ॥೨೮॥

ಮನಸ್ಸಿನ ದುಃಖಕ್ಕೆ ಕಾರಣವಾದುದು ಸ್ನೇಹವೆಂದು ತಿಳಿಯಲ್ಪಡುತ್ತದೆ. ಮನುಷ್ಯನು (ಪ್ರಾಣಿಯು)ಸ್ನೇಹದಿಂದ ಒಂದು ವಸ್ತುವಿನಲ್ಲಿ ಆಸಕ್ತನಾಗಿ ಅದರಿಂದ ದುಃಖದ ಸಂಬಂಧವನ್ನು ಪಡೆಯುತ್ತಾನೆ.

ಸ್ನೇಹಮೂಲಾನಿ ದುಃಖಾನಿ ಸ್ನೇಹಜಾನಿ ಭಯಾನಿ ಚ ।
ಶೋಕಹರ್ಷೌ ತಥಾऽऽಯಾಸಃ ಸ್ನೇಹಾತ್ ಸರ್ವಂ ಪ್ರವರ್ತತೇ ॥೨೯॥

ದುಃಖವು ಸ್ನೇಹಮೂಲವಾದುದು. ಭಯಗಳು ಸಹ ಸ್ನೇಹದಿಂದಲೇ ಉಂಟಾಗುವವು. ಶೋಕ ಹರ್ಷ ಅದರಂತೆ ಆಯಾಸ ಇವೆಲ್ಲವೂ ಸ್ನೇಹದಿಂದಲೇ ಉಂಟಾಗುತ್ತವೆ.

ಸ್ನೇಹಾತ್ ಕಾರುಣ್ಯರಾಗೌ ಚ ಪ್ರಜಾಸ್ವೀರ್ಷ್ಯಾऽನಯಸ್ತಥಾ ।
ಅಶ್ರೇಯಸ್ಕಾವುಭಾವೇತೌ ಪೂರ್ವಸ್ತತ್ರ ಗುರುಃ ಸ್ಮೃತಃ ॥೩೦॥

ಸ್ನೇಹದಿಂದಲೇ ಕರುಣೆ ಮತ್ತು ರಾಗ ಎರಡೂ ಉಂಟಾಗುತ್ತವೆ. ಅದರಂತೆಯೇ ಅಸೂಯೆ ಮತ್ತು ದುರ್ನೀತಿಗಳು ಸ್ನೇಹದಿಂದಲೇ ಜನರಲ್ಲಿ ಉಂಟಾಗುತ್ತವೆ. ಅಸೂಯೆ ಮತ್ತು ದುರ್ನೀತಿಗಳೆರಡೂ ಅಶ್ರೇಯಸ್ಸಿಗೆ ಕಾರಣವಾದವುಗಳು ಅದರಲ್ಲಿಯೂ ಅಸೂಯೆಯು ಬಹಳ ಪ್ರಬಲವಾದುದು ಎಂದು ಹೇಳಲ್ಪಡುತ್ತದೆ.

ಕೋಟರಾಗ್ನಿರ್ಯಥಾऽಶೇಷಂ ಸಮೂಲಂ ಪಾದಪಂ ದಹೇತ್ ।
ಧರ್ಮಾರ್ಥಿನಂ ತಥಾऽಲ್ಪೋऽಪಿ ರಾಗದ್ವೇಷೋ ವಿನಾಶಯೇತ್॥೩೧॥

ವೃಕ್ಷದ ಪೊಟರೆಯಲ್ಲಿದ್ದ ಅಲ್ಪವಾದ ಅಗ್ನಿಯು ಹೇಗೆ ಮೂಲಸಹಿತವಾದ ವೃಕ್ಷವನ್ನೇ ಸುಡುತ್ತದೆಯೋ ಹಾಗೆ ಧರ್ಮವನ್ನು ಅಪೇಕ್ಷಿಸುವ ಪುರುಷನನ್ನು ಅಲ್ಪವಾದ ರಾಗ ದ್ವೇಷಾದಿಗಳೂ ಸಹ ವಿನಾಶಗೊಳಿಸುತ್ತವೆ.

ವಿಪ್ರಯೋಗೇನ ತು ತ್ಯಾಗೀ ದೋಷದರ್ಶೀ ಸಮಾಗಮಾತ್ ।
ವಿರಾಗಂ ಭಜತೇ ಜಂತುರ್ನಿರ್ವೈರೋ ನಿಷ್ಪರಿಗ್ರಹಃ ॥೩೨॥

ವಿಷಯವನ್ನು ಪರಿತ್ಯಾಗಮಾಡುವುದರಿಂದ ದೋಷವನ್ನು ಪರಿತ್ಯಾಗಮಾಡುವ ಮತ್ತು ವಿಷಯಗಳ ಸಮಾಗಮಗಳಿಂದ ದೋಷವನ್ನು ಅನುಸಂಧಾನಮಾಡುವ ವ್ಯಕ್ತಿಯು ವೈರಾಗ್ಯವನ್ನು ಹೊಂದಿ ನಿರ್ವೈರನೂ ನಿಷ್ಪರಿಗ್ರಹನೂ ಆಗುತ್ತಾನೆ.

ತಸ್ಮಾತ್ ಸ್ನೇಹಂ ನ ಲಿಪ್ಸೇತ ಮಿತ್ರೇಭ್ಯೋ ಧನಸಂಚಯಾತ್ ।
ಸ್ವಶರೀರಸಮುತ್ಥಂ ತು ಜ್ಞಾನೇನ ವಿನಿವರ್ತತೇ ॥೩೨॥

ಆದ್ದರಿಂದ ಮಿತ್ರರಿಂದ ಧನಸಂಚಯ ಕಾರಣದಿಂದ ಸ್ನೇಹವನ್ನು ಹೊಂದಬಾರದು. ತನ್ನ ಶರೀರದಲ್ಲಿ ಉಂಟಾದ ದುಃಖವು ಜ್ಞಾನದಿಂದಲೇ ನಿವೃತ್ತವಾಗುತ್ತದೆ.

ಜ್ಞಾನಾನ್ವಿತೇಷು ದುಃಖೇಷು ಶಾಸ್ತ್ರಜ್ಞೇಷು ಕೃತಾತ್ಮಸು ।
ನ ತೇಷು ಸಜ್ಜತೇ ಸ್ನೇಹಃ ಪದ್ಮಪತ್ರೇಷ್ವಿವೋದಕಮ್ ॥೩೩॥

ದುಃಖಗಳು ಉಂಟಾದಾಗ ಜ್ಞಾನನಿಷ್ಠರಾದ ಶಾಸ್ತ್ರಜ್ಞರಾದ ಸಜ್ಜನರು (ಕುಶಲರಾದವರು) ಅಂತಹ ಸ್ನೇಹವನ್ನು ಹೊಂದುವುದಿಲ್ಲ. ಪದ್ಮಪತ್ರದಲ್ಲಿ ಇರುವ ಉದಕದಂತೆ ಅಂತಹ ದುಃಖಕರವಾದ ಸ್ನೇಹವು ಅವರಿಗೆ ಅಂಟುವುದಿಲ್ಲ.

ರಾಗಾಭಿಭೂತಃ ಪುರುಷಃ ಕಾಮೇನ ಪರಿಕೃಷ್ಯತೇ ।
ಇಚ್ಛಾ ಸಂಜಾಯತೇ ಚಾಸ್ಯ ತತಸ್ತೃಷ್ಣಾ ಪ್ರವರ್ತತೇ ॥೩೪॥

ವಿಷಯದಲ್ಲಿ ಸ್ನೇಹವುಳ್ಳ ಪುರುಷನು ಸ್ತ್ರೀಭೋಗಾದಿ ಆಸಕ್ತಿಯನ್ನು ಹೊಂದುತ್ತಾನೆ. ಅದರಂತೆಯೇ ಅನ್ನ ಪಾನಾದಿ ಆಸೆಯನ್ನು ಹೊಂದುತ್ತಾನೆ. ಅನಂತರ ಭೋಗಗಳಲ್ಲಿ ಅತೃಪ್ತಿಯನ್ನು ಹೊಂದುತ್ತಾನೆ.

ತೃಷ್ಣಾ ಹಿ ಸರ್ವಪಾಪಿಷ್ಠಾ ನಿತ್ಯೋದ್ವೇಗಕರೀ ಸ್ಮೃತಾ ।
ಅಧರ್ಮಬಹುಲಾ ಚೈವ ಘೋರಾ ಪಾಪಾನುಬಂಧಿನೀ ॥೩೫॥

ಭೋಗಗಳಲ್ಲಿ ಅತೃಪ್ತಿಯು ಎಂದರೆ ಅಲಂಬುದ್ಧಿಯು ಇಲ್ಲದಿರುವಿಕೆಯು ಎಲ್ಲಕ್ಕಿಂತಲೂ ಪಾಪಿಷ್ಠವಾದುದು. ಅದು ಯಾವಾಗಲೂ ಮನಸ್ಸಿಗೂ ಉದ್ವೇಗವನ್ನು ಉಂಟುಮಾಡುವುದು ಎಂದು ಹೇಳಲ್ಪಡುತ್ತದೆ. ಅದು ಘೋರವಾದುದೂ ಅಧರ್ಮದ ಕಡೆಗೆ ಎಳೆಯುವುದೂ ಮತ್ತು ಪಾಪಕರ್ಮಗಳನ್ನು ಮಾಡಿಸುವುದೂ ಆಗಿದೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಃ ತಾಂ ತೃಷ್ಣಾಂ ತ್ಯಜತಃ ಸುಖಮ್ ॥

ದುರ್ಮತಿಗಳಾದವರು ಆ ತೃಷ್ಣೆಯನ್ನು ಎಂದೂ ಬಿಡಲು ಸಾಧ್ಯವಿಲ್ಲ. ಅದು ವಯಸ್ಸಾದಂತೆ ಕಡಿಮೆಯಾಗುವುದಿಲ್ಲ. ಅದೊಂದು ಪ್ರಾಣಾಂತಿಕರೋಗ. ಆ ಅತೃಪ್ತಿಯನ್ನು ಬಿಟ್ಟರೆ ಮಾತ್ರ ಸುಖವುಂಟಾಗುತ್ತದೆ.

ಅನಾದ್ಯಂತಾ ತು ಸಾ ತೃಷ್ಣಾ ಅಂತರ್ದೇಹಗತಾ ನೃಣಾಮ್ ।
ವಿನಾಶಯತಿ ಸಂಭೂತಾ ಅಯೋರಜ ಇವಾನಲಃ ॥೩೭॥

ಆ ಅತೃಪ್ತಿಗೆ ಕೊನೆಮೊದಲಿಲ್ಲ. ಅದು ದೇಹದೊಳಗೆ ಹುಟ್ಟಿಬೆಳೆದು ಅಗ್ನಿಯು ಕಬ್ಬಿಣದ ಧೂಳನ್ನು ನಾಶಮಾಡುವಂತೆ ಮನುಷ್ಯನನ್ನು ನಾಶಮಾಡುತ್ತದೆ.

ಯಥೈಧಃ ಸ್ವಸಮುತ್ಥೇನ ವಹ್ನಿನಾ ನಾಶಮೃಚ್ಛತಿ ।
ತಥಾಽಕೃತಾತ್ಮಾ ಲೋಭೇನ ಸಹಜೇನ ವಿನಶ್ಯತಿ ॥೩೮॥

ಹೇಗೆ ಕಟ್ಟಿಗೆಯು ತನ್ನಿಂದಲೇ ಉಂಟಾದ ವಹ್ನಿಯಿಂದ ನಾಶವನ್ನು ಹೊಂದುತ್ತದೆಯೋ ಹಾಗೆ ಅವಿವೇಕಿಯಾದವನು ತನ್ನ ದೇಹದಲ್ಲೇ ಬೆಳೆದು ಬಂದ ಲೋಭದಿಂದ ನಾಶವನ್ನು ಹೊಂದುತ್ತಾನೆ.

ರಾಜತಃ ಸಲಿಲಾದಗ್ನೇಃ ಚೋರತಃ ಸ್ವಜನಾದಪಿ ।
ಭಯಮರ್ಥವತಾಂ ನಿತ್ಯಂ ಮೃತ್ಯೋಃ ಪ್ರಾಣಭೃತಾಮಿವ ॥೩೯॥

ಎಲ್ಲ ಪ್ರಾಣಿಗಳಿಗೂ ಯಾವಾಗಲೂ ಮೃತ್ಯು ಭಯವಿರುವಂತೆ, ಧನವನ್ನು ಹೊಂದಿದವನು ರಾಜರಿಂದ ಜಲಾಗ್ನಿ ಪ್ರಕೋಪಗಳಿಂದ ಕಳ್ಳರಿಂದ ಮತ್ತು ಸ್ವಜನರಿಂದಲೂ ಯಾವಾಗಲೂ ಭಯಪಡುತ್ತಾನೆ.

ಯಥಾ ಹ್ಯಾಮಿಷಮಾಕಾಶೇ ಪಕ್ಷಿಭಿಃ ಶ್ವಾಪದೈರ್ಭುವಿ ।
ಭಕ್ಷ್ಯತೇ ಸಲಿಲೇ ಮತ್ಸ್ಯೈಸ್ತಥಾ ಸರ್ವೇಣ ವಿತ್ತವಾನ್ ॥೪೦॥

ಹೇಗೆ ಒಂದು ಮಾಂಸದ ಚೂರು ಆಕಾಶದಲ್ಲಿ ಪಕ್ಷಿಗಳಿಂದಲೂ ಭೂಮಿಯಲ್ಲಿ ಮಾಂಸಾಹಾರಿ ಪ್ರಾಣಿಗಳಿಂದಲೂ ನೀರಿನಲ್ಲಿ ಮತ್ಸ್ಯಗಳಿಂದಲೂ ನುಂಗಲ್ಪಡುತ್ತದೆಯೋ ಅದರಂತೆ ದ್ರವ್ಯವುಳ್ಳ ಮನುಷ್ಯನು ಎಲ್ಲರಿಂದಲೂ ಭಕ್ಷಿಸಲ್ಪಡುತ್ತಾನೆ.

ಅರ್ಥ ಏವ ಹಿ ಕೇಷಾಂಚಿದನರ್ಥೋ ಭವಿತಾ ನೃಣಾಮ್ ।
ಅರ್ಥಶ್ರೇಯಸಿ ಚಾಸಕ್ತೋ ನ ಶ್ರೇಯೋ ವಿಂದತೇ ನರಃ ।
ತಸ್ಮಾದರ್ಥಾಗಮಾಃ ಸರ್ವೇ ಮದಮೋಹವಿವರ್ಧನಾಃ ॥೪೧॥

ಕೆಲವು ಪುರುಷರಿಗೆ ಅರ್ಥವೇ ಅನರ್ಥಕ್ಕೆ ಕಾರಣವಾಗುತ್ತದೆ. ದ್ರವ್ಯರೂಪವಾದ ಶ್ರೇಯಸ್ಸಿನಲ್ಲಿಯೇ ಆಸಕ್ತನಾದ ಮನುಷ್ಯನು ಮೋಕ್ಷರೂಪವಾದ ಶ್ರೇಯಸ್ಸನ್ನು ಹೊಂದುವುದಿಲ್ಲ. ಆದ್ದರಿಂದ ಧನಪ್ರಾಪ್ತಿ ಎಲ್ಲವೂ ಮದಮೋಹಗಳನ್ನು ಹೆಚ್ಚುಸುವವೇ ಆಗಿವೆ.

ಕಾರ್ಪಣ್ಯಂ ದರ್ಪಮಾನೌ ಚ ಭಯಮುದ್ವೇಗ ಏವ ಚ ।
ಅರ್ಥಜಾನಿ ವಿದುಃ ಪ್ರಾಜ್ಞಾ ದುಃಖಾನ್ಯೇತಾನಿ ದೇಹಿನಾಮ್ ॥೪೨॥

ಅರ್ಥಸ್ಯೋಪಾರ್ಜನೇ ದುಃಖಂ ಪಾಲನೇ ರಕ್ಷಣೇ ತಥಾ ।
ನಾಶೇ ದುಃಖಂ ವ್ಯಯೇ ದುಃಖಂ ಘ್ನಂತಿ ಚಾಪ್ಯರ್ಥಕಾರಣಾತ್ ॥೪೩॥

ಕಾರ್ಪಣ್ಯ ಭಯ ಲೋಭ ದರ್ಪ ಅಹಂಕಾರ ಮತ್ತು ಉದ್ವೇಗ ಇವುಗಳು ಅರ್ಥದಿಂದ ಮನುಷ್ಯರಿಗೆ ಉಂಟಾಗುವ ದುಃಖಗಳೆಂದು ಪ್ರಾಜ್ಞರು ತಿಳಿಯುತ್ತಾರೆ. ಧನವನ್ನು ಸಂಪಾದಿಸುವುದು ದುಃಖ. ಅದನ್ನು ರಕ್ಷಣೆಮಾಡುವುದು ದುಃಖ. ಅದು

ನಾಶವಾದರೆ ದುಃಖ. ಖರ್ಚಾದರೂ ದುಃಖ. ಅಷ್ಟೇ ಅಲ್ಲದೆ ಧನದ ಸಲುವಾಗಿ ಇನ್ನೊಬ್ಬರು ಕೊಲ್ಲುತ್ತಾರೆ.

ಅರ್ಥಾ ದುಃಖಂ ಪರಿತ್ಯಕ್ತುಃ ಪಾಲಿತಾಶ್ಚಾಪಿ ತೇऽಸುಖಾಃ ।
ದುಃಖೇನ ಚಾಧಿಗಮ್ಯಂತೇ ತೇಷಾಂ ನಾಶಂ ನ ಚಿಂತಯೇತ್ ॥೪೫॥

ಅರ್ಥವನ್ನು ಪರಿತ್ಯಾಗಮಾಡುವವನಿಗೂ ಅರ್ಥವು ದುಃಖವನ್ನು ಕೊಡುತ್ತದೆ. ಅರ್ಥವನ್ನು ರಕ್ಷಣೆಮಾಡುವವನಿಗೂ ದುಃಖವನ್ನು ಕೊಡುತ್ತದೆ. ಅರ್ಥಪ್ರಾಪ್ತಿಯೂ ದುಃಖದಿಂದಲೇ ಆಗುತ್ತದೆ. ಅರ್ಥದ ನಾಶವನ್ನು ಕುರಿತು ಚಿಂತಾಕ್ರಾಂತರಾಗಬಾರದು.

ಅಸಂತೋಷಪರಾ ಮೂಢಾಃ ಸಂತೋಷಂ ಯಾಂತಿ ಪಂಡಿತಾಃ ।
ಅತೋ ನಾಸ್ತಿ ವಿವಿತ್ಸಾಯಾಃ ಸಂತೋಷಃ ಪರಮಂ ಸುಖಮ್ ।
ತಸ್ಮಾತ್ ಸಂತೋಷಮೇವೇಹ ಧನಂ ಪಶ್ಯಂತಿ ಪಂಡಿತಾಃ ॥೪೬॥

ಮೂಢರು ಯಾವಾಗಲೂ ಅಸಂತುಷ್ಟರಾಗಿರುತ್ತಾರೆ. ಪ್ರಾಜ್ಞರು ಸಂತುಷ್ಟರಾಗಿರುತ್ತಾರೆ. ಆದ್ದರಿಂದ ಧನಲಾಭೇಚ್ಛೆಯಿಂದ ಎಂದಿಗೂ ತೃಪ್ತಿಯೂ ಶ್ರೇಷ್ಠವಾದ ಸುಖವೂ ಉಂಟಾಗುವುದಿಲ್ಲ. ಆದ್ದರಿಂದ ಪಂಡಿತರಾದವರು ಸಂತೋಷವನ್ನೇ ಎಂದರೆ ತೃಪ್ತಿಯನ್ನೇ ಧನವೆಂದು ಭಾವಿಸುತ್ತಾರೆ.

ಅನಿತ್ಯಂ ಯೌವನಂ ರೂಪಂ ಜೀವಿತಂ ದ್ರವ್ಯಸಂಚಯಃ ।
ಆರೋಗ್ಯಂ ಪ್ರಿಯಸಂವಾಸೋ ಗೃದ್ಧ್ಯೇದೇಷು ನ ಪಂಡಿತಃ ॥೪೭॥

ಯೌವನ ರೂಪ ಜೀವನ ಧನಸಂಚಯ ಆರೋಗ್ಯ ಪ್ರಿಯರ ಜೊತೆಯಲ್ಲಿ ವಾಸ ಇವೆಲ್ಲವೂ ಅನಿತ್ಯವಾದವು ವಿವೇಕಿಯಾದವನು ಇವುಗಳಿಗಾಗಿ ಆಸೆಪಡಬಾರದು.

ತ್ಯಜೇತ ಸಂಚಯಾಂಸ್ತಸ್ಮಾತ್ ತಜ್ಜಂ ಕ್ಲೇಶಂ ಸಹೇತುಕಃ ।
ನಹಿ ಸಂಚಯವಾನ್ ಕಶ್ಚಿದ್ ದೃಶ್ಯತೇ ನಿರುಪದ್ರವಃ ॥೪೮॥

ಆದ್ದರಿಂದ ಧನಸಂಚಯಗಳನ್ನು ಅದರಿಂದ ಉಂಟಾಗುವ ಕ್ಲೇಶಗಳ ಜೊತೆಯಲ್ಲಿ ಪರಿತ್ಯಜಿಸಬೇಕು. ಧನ ಸಂಚಯವುಳ್ಳಯಾವನೂ ಭೂಮಿಯಲ್ಲಿ ಉಪದ್ರವಕ್ಕೆ ಒಳಗಾಗದಿರುವುದು ಕಂಡುಬರುವುದಿಲ್ಲ.

ಅತಶ್ಚ ಧರ್ಮಿಭಿಃ ಸದ್ಭಿರ್ನ ಚೇಹಾರ್ಥಃ ಪ್ರಶಸ್ಯತೇ ।
ಪ್ರಕ್ಷಾಲನಾದ್ಧಿ ಪಂಕಸ್ಯ ಶ್ರೇಯೋ ನಸ್ಪರ್ಶನಂ ನೃಣಾಮ್ ॥೪೯॥

ಆದ್ದರಿಂದಲೇ ಧರ್ಮಿಷ್ಠರಾದ ಸಜ್ಜನರು ಅರ್ಥವನ್ನು ಹೊಗಳುವುದಿಲ್ಲ. ಕೆಸರನ್ನು ಮೆಟ್ಟಿ ತೊಳೆದುಕೊಳ್ಳುವುದಕ್ಕಿಂತಲೂ ಮನುಷ್ಯರಿಗೆ ಕೆಸರನ್ನು ಮುಟ್ಟದಿರುವುದೇ ಲೇಸು.

ಯುಧಿಷ್ಠಿರ ತ್ವಮರ್ಥೇಷು ನ ಸ್ಪೃಹಾಂ ಕರ್ತುಮರ್ಹಸಿ ।
ಧರ್ಮೇಣ ಯದಿ ತೇ ಕಾರ್ಯಂ ವಿಮುಕ್ತೇಷ್ವರ್ಥವಾರ್ಥತಃ ॥೫೦॥

ಎಲೈ ಯುಧಿಷ್ಠಿರನೇ! ನೀನು ಅರ್ಥದ ಆಸೆಯನ್ನು ಮಾಡಬೇಡ. ನಿನಗೆ ಧರ್ಮದ ಸಂಪಾದನೆಯನ್ನು ಮಾಡುವ ಅಭಿಪ್ರಾಯವಿದ್ದರೆ ಅರ್ಥಪ್ರಾಪ್ತಿಯ ಇಚ್ಛೆಯಿಂದ ವಿಮುಕ್ತನಾಗು.

ಯುಧಿಷ್ಠಿರಃ

ನ ಬ್ರಹ್ಮನ್ ಭೋಗಲಿಪ್ಸಾರ್ಥಮಿಯಮರ್ಥೇಷ್ವಪುತಾ ಮಮ ।
ಭರಣಾರ್ಥಂ ತು ವಿಪ್ರಾಣಾಂ ಬ್ರಹ್ಮನ್ ಕಾಂಕ್ಷೇ ನ ಲೋಭತಃ ॥೫೧॥

ಪೂಜ್ಯರೇ! ನನ್ನ ಭೋಗದ ಸಲುವಾಗಿ ನಾನು ಈ ಧನವನ್ನು ಬಯಸುತ್ತಿಲ್ಲ. ಪೂಜ್ಯರೇ! ಬ್ರಾಹ್ಮಣರನ್ನು ಪೋಷಿಸಲು ಮಾತ್ರ ನಾನು ಧನವನ್ನು ಅಪೇಕ್ಷಿಸುತ್ತೇನೆ. ಲೋಭದಿಂದಲ್ಲ.

ಕಥಂ ಹ್ಯಸ್ಮದ್ವಿಧೋ ಬ್ರಹ್ಮನ್ ವರ್ತಮಾನೋ ಗೃಹಾಶ್ರಮೇ ।
ಭರಣಂ ಪಾಲನಂ ಚಾಪಿ ನ ಕುರ್ಯಾದನುಯಾಯಿನಾಮ್ ॥೫೨॥

ಬ್ರಾಹ್ಮಣರೇ! ಗೃಹಸ್ಥಾಶ್ರಮಿಯಾದ ನನ್ನಂಥವನು ನಮ್ಮನ್ನು ಅನುಸರಿಸಿ ಬರುವ ಬ್ರಾಹ್ಮಣರ ರಕ್ಷಣೆ ನತ್ತು ಪಾಲನೆಗಳನ್ನು ಹೇಗೆ ಮಾಡದೆ ಇರಲು ಸಾಧ್ಯ?

ಸಂವಿಭಾಗೋ ಹಿ ಭೂತಾನಾಂ ಸರ್ವೇಷಾಮೇವ ಶಿಷ್ಯತೇ ।
ತಥೈವ ಯಾಚಮಾನೇಭ್ಯಃ ಪ್ರದೇಯಂ ಗೃಹಮೇಧಿನಾ ॥೫೩॥

ಹಂಚಿಕೊಂಡು ಭೋಗಿಸುವುದು ಎಲ್ಲ ಪ್ರಾಣಗಳಿಗೂ ಶ್ರೇಷ್ಠವಾದುದು. ಅದರಂತಯೇ ಗೃಹಸ್ಥಾಶ್ರಮಿಯಾದವನು ಬೇಡಿದವರಿಗೆ ನೀಡಬೇಕಾದುದು ಶ್ರೇಷ್ಠವಾದುದೇ.

ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ ।
ಸತಾಮೇತಾನಿ ಗೇಹೇಷು ನೋಚ್ಛಿದ್ಯಂತೇ ಕದಾಚನ ॥೫೪॥

ಒಂದು ದರ್ಭೆಯ ಚಾಪೆ, ಕುಳಿತುಕೊಳ್ಳುವ ಭೂಮಿ, ಕುಡಿಯಲು ನೀರು, ಒಳ್ಳೆಯ ಮಾತು ಈ ನಾಲ್ಕು ವಸ್ತುಗಳು ಸಜ್ಜನರ ಮನೆಯಲ್ಲಿ ಎಂದೂ ವಿನಾಶವನ್ನು ಹೊಂದುವುದಿಲ್ಲ.

ದೇಯಮಾರ್ತಸ್ಯ ಶಯನಂ ಸತಿ ಶ್ರಾಂತಸ್ಯ ಚಾಸನಮ್ ।
ತೃಷಿತಸ್ಯ ಚ ಪಾನೀಯಂ ಕ್ಷುಧಿತಸ್ಯ ಚ ಭೋಜನಮ್ ॥೫೫॥

ನಾವು ಕೊಡಬೇಕಾದ ವಸ್ತುಗಳಿದ್ದರೆ ಆರ್ತನಾದವನಿಗೆ ಶಯನವನ್ನು ಕೊಡಬೇಕು. ದಣಿದವನಿಗೆ ಆಸನವನ್ನು ಕೊಡಬೇಕು. ಬಾಯಾರಿದವನಿಗೆ ನೀರನ್ನು ಕೊಡಬೇಕು. ಮತ್ತು ಹಸಿದವನಿಗೆ ಅನ್ನವನ್ನು ಕೊಡಬೇಕು.

ಚಕ್ಷುರ್ದದ್ಯಾನ್ಮನೋ ದದ್ಯಾದ್ ವಾಚಂ ದದ್ಯಾಚ್ಚ ಸೂನೃತಾಮ್ ।
ಉತ್ಥಾಯ ಚಾಸನಂ ದದ್ಯಾದೇಷ ಧರ್ಮಃ ಸನಾತನಃ ।
ಪ್ರತ್ಯುತ್ಥಾಯಾಭಿಗಮನಂ ಕುರ್ಯಾನ್ನ್ಯಾಯೇನ ಚಾರ್ಚನಮ್ ॥೫೬॥

ಬಂದ ಅತಿಥಿಗೆ ನಮ್ಮ ದೃಷ್ಟಿಯನ್ನು ಕೊಡಬೇಕು. ಮನಸ್ಸನ್ನು ಕೊಡಬೇಕು. ಒಳ್ಳೆಯಮಾತನ್ನು ಕೊಡಬೇಕು. ಎದ್ದು ಆಸನವನ್ನು ಕೊಡಬೇಕು. ಇದು ಸನಾತನವಾದ ಧರ್ಮ. ಎದ್ದು ಅಭಿಮುಖವಾಗಿ ಹೋಗಿ ನ್ಯಾಯರೀತಿಯಿಂದ ಅವರ ಅರ್ಚನೆಯನ್ನು ಮಾಡಬೇಕು.

ಅಗ್ನಿಹೋತ್ರಮನಡ್ವಾಂಶ್ಚ ಜ್ಞಾತಯೋಽತಿಥಿಬಾಂಧವಾಃ ।
ಪುತ್ರದಾರಭೃತಾಶ್ಚೈವ ನಿರ್ದಹೇಯುರಪೂಜಿತಾಃ ॥೫೭॥

ಅಗ್ನಿಹೋತ್ರ, ಗೋಸಂಪತ್ತು, ಜ್ಞಾತಿಗಳು, ಅತಿಥಿಗಳು, ಬಾಂಧವರು, ಪುತ್ರರು, ಪತ್ನಿ, ಸೇವಕರು ಇವರು ಪೂಜಿಸಲ್ಪಡದಿದ್ದರೆ ಯಜಮಾನನನ್ನು ದಹಿಸುತ್ತಾರೆ.

ನಾತ್ಮಾರ್ಥೇ ಪಾಚಯೇದನ್ನಂ ನ ವೃಥಾ ಘಾತಯೇತ್ ಪಶೂನ್ ।
ನ ಚೈಕಃ ಸ್ವಯಮಶ್ನೀಯಾದ್ ವಿಧಿವದ್ ಯನ್ನ ನಿರ್ವಪೇತ್ ॥೫೮॥

ತನ್ನ ಸಲುವಾಗಿ ಎಂದೂ ಅಡುಗೆಯನ್ನು ಮಾಡಬಾರದು. ವ್ಯರ್ಥವಾಗಿ ಪಶುಗಳನ್ನು ಘಾತಿಸಬಾರದು. ಒಬ್ಬನೇ ಕುಳಿತು ಊಟಮಾಡಬಾರದು. ಯಾವುದು ಶಾಸ್ತ್ರಶುದ್ಧವಾಗಿಲ್ಲವೋ ಅಂತಹ ವಸ್ತುವಿನಿಂದ ಹೋಮವನ್ನು ಮಾಡಬಾರದು.

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ ಭುವಿ ।
ವೈಶ್ವದೇವಂ ಹಿ ನಾಮೈತತ್ ಸಾಯಂಪ್ರಾತರ್ವಿಧೀಯತೇ ॥೫೯॥

ನಾಯಿಗಳಿಗೂ ಶ್ವಪಚರಿಗೂ ಮತ್ತು ಪಕ್ಷಿಗಳಿಗೂ ಭೂಮಿಯಲ್ಲಿ ಅನ್ನವನ್ನು ಚೆಲ್ಲಬೇಕು. ಇದಕ್ಕೆ ವೈಶ್ವದೇವ ಎಂದು ಹೆಸರು. ಇದನ್ನು ಹಗಲು ಮತ್ತು ರಾತ್ರಿಯಲ್ಲಿ ಮಾಡಬೇಕು.

ವಿಘಸಾಶೀ ಭವೇನ್ನಿತ್ಯಂ ನಿತ್ಯಂ ಚಾಮೃತಭೋಜನಃ ।
ವಿಘಸಂ ಭೃತ್ಯಶೇಷಂ ಸ್ಯಾದ್ ಯಜ್ಞಶೇಷಸ್ತಥಾऽಮೃತಮ್ ॥೬೦॥

ನಿತ್ಯವೂ ವಿಘಸಾನ್ನವನ್ನು ಭುಂಜಿಸಬೇಕು. ನಿತ್ಯವೂ ಅಮೃತವನ್ನು ಭುಂಜಿಸಬೇಕು. ಭೃತ್ಯರು ಊಟಮಾಡಿ ಉಳಿದುದು ವಿಘಸ. ಯಜ್ಞಶೇಷವು ಅಮೃತವೆನಿಸುತ್ತದೆ.

ದೇವಾನ್ ಪಿತೄನ್ ಮನುಷ್ಯಾಂಶ್ಚ ಭಿಕ್ಷೂನತಿಥಿಪಂಚಮಾನ್ ।
ಅನುವ್ರಜೇದುಪಾಸೀತ ಸ ಯಜ್ಞಃ ಪಂಚದಕ್ಷಿಣಃ ॥೬೧॥

ದೇವತೆಗಳು ಪಿತೃಗಳು ಮನುಷ್ಯರು ಸಂನ್ಯಾಸಿಗಳು ಮತ್ತು ಐದನೆಯವರಾದ ಅತಿಥಿಗಳು ಇವರನ್ನು ಹಿಂಬಾಲಿಸಬೇಕು. ಅವರ ಸಮೀಪದಲ್ಲಿ ಕುಳಿತುಕೊಳ್ಳಬೇಕು. ಇದಕ್ಕೆ ಪಂಚದಕ್ಷಿಣವುಳ್ಳ ಯಜ್ಞ ಎಂದು ಹೆಸರು.

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ತಿಷ್ಠತೇ ।
ಶ್ರಾಂತಾಯಾದೃಷ್ಟಪೂರ್ವಾಯ ತಸ್ಯ ಪುಣ್ಯಫಲಂ ಮಹತ್ ॥೬೨॥

ಯಾವನು ಹಿಂದೆ ನೋಡದಿದ್ದ ಬಳಲಿದ ದಾರಿಹೋಕನಿಗೆ ಶುದ್ಧವಾದ ಅನ್ನವನ್ನು ಕೊಡುತ್ತಾನೆಯೋ ಅವನ ಪುಣ್ಯಫಲವು ಬಹಳ ದೊಡ್ಡದು.

ಏತಾಂ ಯೋ ವರ್ತತೇ ವೃತ್ತಿಂ ವರ್ತಮಾನೋ ಗೃಹಾಶ್ರಮೇ ।
ತಸ್ಯ ಧರ್ಮಂ ಪರಂ ಪ್ರಾಹುಃ ಕಥಂ ವಾ ವಿಪ್ರ ಮನ್ಯಸೇ ॥೬೩॥

ಎಲೈ ಪೂಜ್ಯರೇ! ಯಾವ ಗೃಹಸ್ಥಾಶ್ರಮಿಯು ಇಂತಹ ಆಚರಣೆಯಲ್ಲಿ ಇರುತ್ತಾನೆಯೋ ಅವನ ಧರ್ಮವು ಬಹಳ ಶ್ರೇಷ್ಠವಾದುದು ಎಂದು ಹೇಳುತ್ತಾರೆ. ತಮ್ಮ ಅಭಿಪ್ರಾಯವೇನು?

**ಶೌನಕಃ**

**ಅಹೋ ಬತ ಮಹತ್ ಕಷ್ಟಂ ವಿಪರೀತಮಿದಂ ಜಗತ್ ।**
**ಯೇನಾಪತ್ರಪತೇ ಸಾಧುರಸಾಧುಸ್ತೇನ ತುಷ್ಯತಿ ॥೬೪॥**

ಅಯ್ಯೋ ಬಹಳ ಕಷ್ಟವಾಗಿದೆ. ಈ ಜಗತ್ತು ತಲೆಕೆಳಗಾಗಿದೆ. ಏಕೆಂದರೆ ಸಜ್ಜನರು ನಾಚಿ ಹಿಂದೆ ಸರಿಯುತ್ತಾರೆ. ದುರ್ಜನರು ಸಂತೋಷದಿಂದ ಇರುತ್ತಾರೆ.

**ಶಿಶ್ನೋದರಕೃತೇ ಚಾಜ್ಞಃ ಕರೋತಿ ವಿಘಸಂ ಬಹು ।**
**ಮೋಹರಾಗಸಮಾಕ್ರಾಂತ ಇಂದ್ರಿಯಾರ್ಥವಶಾನುಗಃ ॥೬೫॥**

ಶಿಶ್ನೋದರಪರಾಯಣನಾದ ಅಜ್ಞನು ಮೋಹರಾಗಗಳಿಗೆ ವಶನಾಗಿ ಇಂದ್ರಿಯಪ್ರೀತಿಯನ್ನು ಉಂಟುಮಾಡುವ ಸಲುವಾಗಿ ಅನ್ಯಾಯದಿಂದ ಧನವನ್ನು ಗಳಿಸಿ ಅದರಿಂದ ಭೃತ್ಯರನ್ನು ಪೋಷಿಸುತ್ತಾ ಅವರ ಶೇಷವನ್ನು ಭುಂಜಿಸುತ್ತಾನೆ. (ವೈರಾಗ್ಯಾದಿ ಮಹಾಭಾಗ್ಯವನ್ನು ತೊರೆಯುತ್ತಾನೆ.)

**ಹ್ರಿಯತೇ ಬುಧ್ಯಮಾನೋಽಪಿ ಮನೋಹಾರಿಭಿರಿಂದ್ರಿಯೈಃ ।**
**ವಿಮೂಢಸಂಜ್ಞೋ ದುಷ್ಟಾಶ್ವೈರುದ್ಭ್ರಾಂತೈರಿವ ಸಾರಥಿಃ ॥೬೬॥**

ವಿವೇಕವುಳ್ಳವನೂ ಸಹ ಮನಸ್ಸನ್ನು ಸೆಳೆಯುವ ಇಂದ್ರಿಯಗಳಿಗೆ ವಶನಾಗಿ ಅವುಗಳಿಂದ ಸೆಳೆಯಲ್ಪಡುತ್ತಾನೆ. ದಿಗ್ಭ್ರಾಂತವಾದ ದುಷ್ಟಕುದುರೆಗಳನ್ನು ನಿಯಂತ್ರಿಸದ ಸಾರಥಿಯಂತೆ ತನ್ನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ.

**ಪಡಿಂದ್ರಿಯಾಣಿ ವಿಷಯಂ ಸಮಾಗಚ್ಛಂತಿ ವೈ ಯದಾ ।**
**ತದಾ ಪ್ರಾದುರ್ಭವತ್ಯೇಷಾಂ ಪೂರ್ವಸಂಕಲ್ಪಜಂ ಮನಃ ॥೬೭॥**

ಆರು ಇಂದ್ರಿಯಗಳು ತಮ್ಮತಮ್ಮ ವಿಷಯಗಳ ಸಂಪರ್ಕವನ್ನು ಪಡೆದಾಗ ಮನಸ್ಸು ಹಿಂದಿನ ಸಂಸ್ಕಾರದಿಂದ ಉದ್ಬುದ್ಧವಾಗುತ್ತದೆ.

ಮನೋ ಯಸ್ಯೇಂದ್ರಿಯಗ್ರಾಮವಿಷಯಂ ಪ್ರತಿ ಚೋದಿತಮ್ ।
ತಸ್ಯೌತ್ಸುಕ್ಯಂ ಸಂಭವತಿ ಪ್ರವೃತ್ತಿಶ್ಚೋಪಜಾಯತೇ ॥೬೮॥

ಯಾವನಿಗೆ ಇಂದ್ರಿಯಗಳ ವಿಷಯದಲ್ಲಿ ಮನಸ್ಸು ಎಳೆಯಲ್ಪಡುತ್ತದೆಯೋ ಅವನಿಗೆ ಕುತೂಹಲವೂ ಅನಂತರ ಪ್ರವೃತ್ತಿಯೂ ಉಂಟಾಗುತ್ತದೆ.

ತತಃ ಸಂಕಲ್ಪವೀರ್ಯೇಣ ಕಾಮೇನ ವಿಷಯೇಷುಭಿಃ ।
ವಿದ್ಧಃ ಪತತಿ ಲೋಭಾಗ್ನೌ ಜ್ಯೋತಿರ್ಲೋಭಾತ್ ಪತಂಗವತ್ ॥೬೯॥

ಅನಂತರ ಮನಸ್ಸಿನ ಸಂಕಲ್ಪಸಾಮರ್ಥ್ಯದಿಂದ ಉಂಟಾಗುವ ಕಾಮದಿಂದ ವಿಷಯ ಎಂಬ ಬಾಣದಿಂದ ಹೊಡೆಯಲ್ಪಟ್ಟವನಾಗಿ ಅಗ್ನಿಯ ಲೋಭದಿಂದ ಪತಂಗವು ಅಗ್ನಿಯಲ್ಲಿ ಬೀಳುವಂತೆ ಲೋಭಾಗ್ನಿಯಲ್ಲಿ ಬೀಳುತ್ತಾನೆ.

ತತೋ ದಾರೈರ್ವಿಹಾರೈಶ್ಚ ಮೋಹಿತಶ್ಚ ಮಹೇಪ್ಸಯಾ ।
ಮಹಾಮೋಹಮುಖೇ ಮಗ್ನೋ ನಾತ್ಮಾನಮವಬುಧ್ಯತೇ ॥೭೦॥

ಅನಂತರ ಹೆಂಡತಿ ಅವಳ ಜೊತೆಯಲ್ಲಿ ವಿಹಾರ ಮತ್ತು ಮಹಾಧನಪ್ರಾಪ್ತಿಯ ಇಚ್ಛೆ ಇವುಗಳಿಂದ ಮೋಹಿತನಾಗಿ ಮಹಾಮೋಹದ ಮುಖದಲ್ಲಿ ಬಿದ್ದು ತನ್ನನ್ನೇ ತಾನು ಮರೆಯುತ್ತಾನೆ.

ಏವಂ ಪತತಿ ಸಂಸಾರೇ ತಾಸು ತಾಸ್ವಿಹ ಯೋನಿಷು ।
ಅವಿದ್ಯಾಕರ್ಮತೃಷ್ಣಾಭಿರ್ಭ್ರಾಮ್ಯಮಾಣೋऽಥ ಚಕ್ರವತ್ ॥೭೧॥

ಹೀಗೆ ಅವಿದ್ಯೆ ಕರ್ಮ ಅತೃಪ್ತಿ ಇವುಗಳಿಂದ ತಿರುಗಿಸಲ್ಪಟ್ಟವನಾಗಿ ಸಂಸಾರದಲ್ಲಿ ನಾನಾ ಯೋನಿಗಳಲ್ಲಿ ಬಿದ್ದು ಚಕ್ರದಂತೆ ತಿರುಗುತ್ತಾನೆ.

ಬ್ರಹ್ಮಾದಿಷು ತೃಣಾಂತೇಷು ಭೂತೇಷು ಪರಿವರ್ತತೇ ।
ಜಲೇ ಭುವಿ ತಥಾऽऽಕಾಶೇ ಜಾಯಮಾನಃ ಪುನಃ ಪುನಃ ॥೭೨॥

ಜನಿಸುವವನು ಬ್ರಹ್ಮಾದಿ ತೃಣಾಂತಯೋನಿಗಳಲ್ಲಿ ನೀರಿನಲ್ಲಿ ಭೂಮಿಯಲ್ಲಿ ಮತ್ತು ಆಕಾಶದಲ್ಲಿ ಪುನಃಪುನಃ ಜನಿಸುವವನಾಗಿ ಸುತ್ತುತ್ತಾನೆ.

ಅಬುಧಾನಾಂ ಗತಿಸ್ತ್ವೇಷಾ ಬುಧಾನಾಮಪಿ ಮೇ ಶೃಣು ।
ಯೇ ಧರ್ಮೇ ಶ್ರೇಯಸಿ ರತಾ ವಿಮೋಕ್ಷರತಯೋ ಜನಾಃ ॥೭೩॥

ಇದು ಅಜ್ಞಾನಿಗಳಿಗೆ ಉಂಟಾಗುವ ಗತಿ. ಯಾರು ಧರ್ಮವೆಂಬ ಶ್ರೇಯಸ್ಸಿನಲ್ಲಿ ಮತ್ತು ಮೋಕ್ಷದಲ್ಲಿ ರತರಾಗಿರುತ್ತಾರೆಯೋ ಅಂತಹ ಬುಧ ಜನರ ಗತಿಯನ್ನು ಹೇಳುತ್ತೇನೆ ಕೇಳು.

ಯದಿದಂ ವೇದವಚನಂ ಕುರು ಕರ್ಮ ತ್ಯಜೇತಿ ಚ ।
ತಸ್ಮಾತ್ ಸರ್ವಾನಿಮಾನ್ ಧರ್ಮಾನಭಿಜಾನನ್ ಸಮಾಚರೇತ್ ॥೭೪॥

ಪ್ರವೃತ್ತಿಕರ್ಮವನ್ನು ಬಿಡು ನಿವೃತ್ತಿಕರ್ಮವನ್ನುಮಾಡು ಎಂಬ ಯಾವ ವೇದವಚನವಿದೆಯೋ ಅದನ್ನು ಅನುಸರಿಸಿ ಈ ಎಲ್ಲಾ ಧರ್ಮಗಳನ್ನುತಿಳಿದು ಆಚರಿಸಬೇಕು.(ಆಚರಿಸುತ್ತಾನೆ)

ಇಜ್ಯಾಧ್ಯಯನದಾನಾನಿ ತಪಃ ಸತ್ಯಂ ಕ್ಷಮಾ ದಮಃ ।
ಅಲೋಭ ಇತಿ ಮಾರ್ಗೋಽಯಂ ಧರ್ಮಸ್ಯಾಷ್ಟವಿಧಃ ಸ್ಮೃತಃ ॥೭೫॥

ಪೂಜೆ ಅಧ್ಯಯನ ದಾನ ತಪಸ್ಸು ಯಥಾರ್ಥಜ್ಞಾನ ಕ್ಷಮೆ ಇಂದ್ರಿಯನಿಗ್ರಹ ಲೋಭವಿಲ್ಲದಿರುವಿಕೆ ಇವುಗಳು ಧರ್ಮದ ಅಷ್ಟವಿಧವಾದ ಮಾರ್ಗಗಳೆಂದು ಹೇಳಲ್ಪಡುತ್ತವೆ.

ತತ್ರ ಪೂರ್ವಶ್ಚತುರ್ಭಾಗಃ ಪಿತೃಯಾನಪಥೇ ಸ್ಥಿತಃ ।
ಕರ್ತವ್ಯಮಿತಿ ಯತ್ ಕಾರ್ಯಂ ನಾಭಿಮಾನಾನ್ನ ಮತ್ಸರಾತ್ ॥೭೬॥

ಉತ್ತರಂ ದೇವಯಾನಂ ತು ಸದ್ಭಿರಾಚರಿತಂ ಸದಾ ।
ಅಷ್ಟಾಂಗೇನೈವ ಮಾರ್ಗೇಣ ವಿಶುದ್ಧಾತ್ಮಾ ಸಮಾಚರೇತ್ ॥೭೭॥

ಅದರಲ್ಲಿ ಮೊದಲನೆಯ ನಾಲ್ಕು ಪಿತೃಯಾನದಲ್ಲಿ ಕರೆದುಕೊಂಡು ಹೋಗುವಂತಹವು. ಇವುಗಳನ್ನು ಇದು ನಮ್ಮ ಕರ್ತವ್ಯ ಎಂದು ಆಚರಿಸಬೇಕು. ಅಹಂಕಾರದಿಂದಲಾಗಲೀ ಅಥವಾ ಮಾತ್ಸರ್ಯದಿಂದಲಾಗಲೀ ಆಚರಿಸಬಾರದು. ಕೊನೆಯ ನಾಲ್ಕು ಸಜ್ಜನರಿಂದ ಆಚರಿಸಲ್ಪಡುತ್ತದೆ. ಅದು ಯಾವಾಗಲೂ ದೇವಯಾನಕ್ಕೆ

ಕರೆದುಕೊಂಡು ಹೋಗುತ್ತದೆ. ಮನಸ್ಸಿನ ಶುದ್ಧಿಯುಳ್ಳವನು ಈ ಎಂಟು ವಿಧವಾದ ಅಂಗಗಳಿಂದ ಕೂಡಿದ ಪ್ರಕಾರದಿಂದ ಧರ್ಮಾಚರಣೆಯನ್ನು ಮಾಡಬೇಕು.

ಸಮ್ಯಕ್ಸಂಕಲ್ಪಯೋಗಾಚ್ಚ ಸಮ್ಯಕ್ಚೇಂದ್ರಿಯಗೋಚರಾತ್ ।
ಸಮ್ಯಗ್ವ್ರತವಿಶೇಷಾಚ್ಚ ಸಮ್ಯಕ್ ಚ ಗುರುಸೇವನಾತ್ ॥೭೮॥

ಸಮ್ಯಗಾಹಾರಯೋಗಾಚ್ಚ ಸಮ್ಯಕ್ ಚಾಧ್ಯಯನಾಗಮಾತ್ ।
ಸಮ್ಯಕ್ ಕರ್ಮೋಪಸಂನ್ಯಾಸಾತ್ ಸಮ್ಯಕ್ ಚಿತ್ತನಿರೋಧನಾತ್ ॥೭೯॥

ಸಮ್ಯಕ್ ಕರ್ಮಾಣಿ ಕುರ್ವಂತಿ ಸಂಸಾರವಿಜಿಗೀಷವಃ ।
ರಾಗದ್ವೇಷವಿನಿರ್ಮುಕ್ತಾ ಐಶ್ವರ್ಯವಶತಾಂ ಗತಾಃ ॥೮೦॥

ಸಂಸಾರವನ್ನು ಗೆಲ್ಲುವ ಇಚ್ಛೆಯುಳ್ಳ ರಾಗದ್ವೇಷದಿಂದ ಮುಕ್ತರಾದ ಸಜ್ಜನರು ಸಾಮರ್ಥ್ಯವನ್ನು ಹೊಂದಿದವರಾಗಿ ಒಳ್ಳೆಯ ಸಂಕಲ್ಪವನ್ನುಮಾಡಿ, ಎಲ್ಲ ಇಂದ್ರಿಯಗಳನ್ನು ವಿದ್ಯಾನಿಷ್ಠವನ್ನಾಗಿ ಮಾಡಿ ಅನೇಕ ವ್ರತಗಳನ್ನು ಆಚರಿಸಿ ಗುರುಶುಶ್ರೂಷೆಯನ್ನು ಮಾಡಿ, ಯೋಗ್ಯ ಮಿತ ಆಹಾರವನ್ನು ಹೊಂದಿದವರಾಗಿ ಆಗಮಗಳನ್ನು ಚೆನ್ನಾಗಿ ಅಧ್ಯಾಯನ ಮಾಡಿ ಚಿತ್ತ ನಿರೋಧವನ್ನುಮಾಡಿ, ಕರ್ಮಫಲವನ್ನು ದೇವರಿಗೆ ಸಮರ್ಪಿಸಿ ಕರ್ಮಗಳನ್ನು ಆಚರಿಸುತ್ತಾರೆ.

ರುದ್ರಾಃ ಸಾಧ್ಯಾಸ್ತಥಾऽऽದಿತ್ಯಾ ವಸವೋऽಥಾಶ್ವಿನಾವಪಿ ।
ಯೋಗೈಶ್ವರ್ಯೇಣ ಸಂಯುಕ್ತಾ ಧಾರಯಂತಿ ಪ್ರಜಾ ಇಮಾಃ ॥೮೧॥

ತಥಾ ತ್ವಮಪಿ ಕೌಂತೇಯ ತಪ ಆಸ್ಥಾಯ ಪುಷ್ಕಲಮ್ ।
ತಪಸಾ ಸಿದ್ಧಿಮನ್ವಿಚ್ಛ ಯೋಗಸಿದ್ಧಿಂ ಚ ಭಾರತ ॥೮೨॥

ರುದ್ರರು ಸಾಧ್ಯರು ಆದರಂತೆ ಆದಿತ್ಯರು ವಸುಗಳು ಅಶ್ವಿನಿಗಳೂ ಸಹ ತಮ್ಮ ಯೋಗೈಶ್ವರ್ಯದಿಂದ ಕೂಡಿದವರಾಗಿ ಈ ಜಗತ್ತಿನ ಪ್ರಜೆಗಳನ್ನು ರಕ್ಷಿಸುತ್ತಾರೆ. ಎಲೈ ಧರ್ಮರಾಜನೇ! ಅದರಂತೆ ನೀನೂ ಸಹ ಪುಷ್ಕಳವಾದ ತಪಸ್ಸನ್ನು ಮಾಡಿ ತಪಸ್ಸಿದ್ಧಿಯನ್ನು ಯೋಗ ಸಿದ್ಧಿಯನ್ನು ಪಡೆಯುವವನಾಗು.

ಪಿತೃಮಾತೃಮಯೀ ಸಿದ್ಧಿಃ ಪ್ರಾಪ್ತಾ ಕರ್ಮಮಯೀ ಚ ತೇ ।
ತಪಸಾ ಸಿದ್ಧಿಮನ್ವಿಚ್ಛ ದ್ವಿಜಾನಾಂ ಭರಣಾಯ ವೈ ॥೮೩॥

ಒಳ್ಳೆಯ ತಂದೆತಾಯಿಗಳ ಪ್ರಾಪ್ತಿ ಎಂಬ ಸಿದ್ಧಿ ಮತ್ತು ಕರ್ಮಗಳಿಂದ ಉಂಟಾಗುವ ಸಿದ್ಧಿಯನ್ನು ನೀನು ಈಗಾಗಲೇ ಪಡೆದಿದ್ದೀಯೆ. ಬ್ರಾಹ್ಮಣರನ್ನು ಪೋಷಿಸುವುದಕ್ಕಾಗಿ ತಪಸ್ಸಿನ ಸಿದ್ಧಿಯನ್ನು ಪಡೆಯುವವನಾಗು.

ಸಿದ್ಧಾ ಹಿ ಯದ್ಯದಿಚ್ಛಂತಿ ಕುರ್ವತೇ ತದನುಗ್ರಹಮ್ ।
ತಸ್ಮಾತ್ ತಪಃ ಸಮಾಸ್ಥಾಯ ಕುರುಷ್ವಾತ್ಮಮನೋರಥಮ್ ॥೮೪॥

ಸಿದ್ಧರಾದವರು ಹೇಗೆಹೇಗೆ ಇಚ್ಛಿಸುತ್ತಾರೋ ಅದರಂತೆ ಅನುಗ್ರಹವನ್ನು ಮಾಡುತ್ತಾರೆ. ಆದ್ದರಿಂದ ತಪಸ್ಸನ್ನು ಆಚರಿಸಿ ನಿನ್ನ ಮನೋರಥವನ್ನು ಪೂರ್ಣಗೊಳಿಸಿಕೊಳ್ಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿತೀಯೋಽಧ್ಯಾಯಃ ॥
॥ ಆರಣ್ಯಕಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★★★★★

## ಮೂರನೆಯ ಅಧ್ಯಾಯ

(ಯುಧಿಷ್ಠಿರನ ಸೂರ್ಯೋಪಾಸನೆ. ಪ್ರಸನ್ನನಾದ ಸೂರ್ಯನಿಂದ ಅಕ್ಷಯ ಪಾತ್ರೆಯ ದಾನ.)

### ವೈಶಂಪಾಯನಃ

ಶೌನಕೇನೈವಮುಕ್ತಸ್ತು ಕುಂತೀಪುತ್ರೋ ಯುಧಿಷ್ಠಿರಃ ।
ಪುರೋಹಿತಮುಪಾಗಮ್ಯ ಭ್ರಾತೃಭಿಃ ಸಹಿತೋಽಬ್ರವೀತ್ ॥೧॥

ಶೌನಕನಿಂದ ಹೀಗೆ ಹೇಳಲ್ಪಟ್ಟ ಕುಂತೀಸುತನಾದ ಯುಧಿಷ್ಠಿರನು ತಮ್ಮಂದಿರ ಜೊತೆಯಲ್ಲಿ ಪುರೋಹಿತರಾದ ಧೌಮ್ಯರನ್ನು ಸಮೀಪಿಸಿ ಮಾತನಾಡಿದನು.

ಪ್ರಸ್ಥಿತಾನನುಯಾತಾ ನೋ ಬ್ರಾಹ್ಮಣಾ ವೇದಪಾರಗಾಃ ।
ನ ಚಾಸ್ಮಿ ಪಾಲನೇ ಶಕ್ತೋ ಬಹುದುಃಖಸಮನ್ವಿತಃ ॥೨॥

ಕಾಡಿಗೆ ಹೊರಟ ನಮ್ಮನ್ನು ವೇದಪಾರಂಗತರಾದ ಅನೇಕ ಬ್ರಾಹ್ಮಣರು ಹಿಂಬಾಲಿಸಿದ್ದಾರೆ. ಬಹುದುಃಖದಿಂದ ಕೂಡಿದ ನಾನು ಅವರ ರಕ್ಷಣೆಯನ್ನು ಮಾಡಲು ಸಮರ್ಥನಾಗಿಲ್ಲ.

ಪರಿತ್ಯಕ್ತುಂ ನ ಶಕ್ನೋಮಿ ದಾನಶಕ್ತಿಶ್ಚ ನಾಸ್ತಿ ಮೇ ।
ಕಥಮತ್ರ ಮಯಾ ಕಾರ್ಯಂ ತದ್ ಭವಾನ್ ಪ್ರಬ್ರವೀತು ಮೇ ॥೩॥

ನಾನು ಅವರನ್ನು ಬಿಡಲಾರೆ. ಅವರನ್ನು ಸಾಕುವ ಶಕ್ತಿಯೂ ನನಗಿಲ್ಲ. ನಾನು ಏನು ಮಾಡಲಿ. ತಾವು ಅದನ್ನು ನನಗೆ ಹೇಳಬೇಕು.

ವೈಶಂಪಾಯನಃ

ಮುಹೂರ್ತಂ ಮನಸಾ ಧ್ಯಾತ್ವಾ ಧರ್ಮಜ್ಞೋಽನ್ವೀಕ್ಷ್ಯ ತಾಂ ಗತಿಮ್ ।
ಯುಧಿಷ್ಠಿರಮುವಾಚೇದಂ ಧೌಮ್ಯೋ ಧರ್ಮಕೃತಾಂ ವರಃ ॥೪॥

ಧರ್ಮಿಷ್ಠರಲ್ಲೇ ಶ್ರೇಷ್ಠರಾದ ಧೌಮ್ಯರು ಈ ಮಾತುಗಳನ್ನು ಕೇಳಿ ಒಂದು ಮುಹೂರ್ತಕಾಲ ಮನಸ್ಸಿನಲ್ಲಿ ಆಲೋಚಿಸಿ ಮುಂದೆಮಾಡಬೇಕಾದ ವಿಧಾನವನ್ನು ಜ್ಞಾನದೃಷ್ಟಿಯಿಂದ ನೋಡಿ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿದರು.

ಪುರಾ ಸೃಷ್ಟಾನಿ ಭೂತಾನಿ ಪೀಡ್ಯಂತೇ ಕ್ಷುಧಯಾ ಭೃಶಮ್ ।
ತತೋಽನುಕಂಪಯಾ ತೇಷಾಂ ಸವಿತಾ ಸ್ವಪಿತಾ ಇವ ॥೫॥

ಗತ್ವೋತ್ತರಾಯಣಂ ತೇಜೋ ಲೋಕಾದುದ್ಧೃತ್ಯ ರಶ್ಮಿಭಿಃ ।
ದಕ್ಷಿಣಾಯನಮಾವೃತ್ತೋ ಮಹೀಂ ವರ್ಷತಿ ವಾರಿಣಾ ॥೬॥

ಹಿಂದೆ ಸೃಷ್ಟಿಸಲ್ಪಟ್ಟ ಪ್ರಾಣಿಗಳೆಲ್ಲವೂ ಹಸಿವೆಯಿಂದ ಬಹಳವಾಗಿ ಬಳಲಿದವು. ಆಗ ಸೂರ್ಯನು ತಂದೆಯಂತೆ ಆ ಪ್ರಾಣಿಗಳ ಮೇಲಿನ ಅನುಕಂಪೆಯಿಂದ ಉತ್ತರಾಯಣಮಾರ್ಗಕ್ಕೆ ಹೋಗಿ ತನ್ನ ಕಿರಣಗಳಿಂದ ಎಲ್ಲ ಲೋಕಗಳ ಸಾಮರ್ಥ್ಯವನ್ನು ಸೆಳೆದುಕೊಂಡು ದಕ್ಷಿಣಾಯನಮಾರ್ಗಕ್ಕೆ ಬಂದು ಭೂಮಿಯ ಮೇಲೆ ಮಳೆಯನ್ನು ಸುರಿಸುತ್ತಾನೆ.

ದಿವಸ್ತೇಜಃ ಸಮುದ್ಧೃತ್ಯ ಸೂಯತೇ ಜಗತೋ ರವಿಃ ।
ಓಷಧ್ಯಃ ಪಡ್ರಸಾ ಮೇಧ್ಯಾಸ್ತದನ್ನಂ ಪ್ರಾಣಿನಾಂ ಭುವಿ ॥೭॥

ಅಂತರಿಕ್ಷಲೋಕದ ತೇಜಸ್ಸನ್ನು ತನ್ನ ಕಿರಣಗಳಿಂದ ಹೀರಿ ಸೂರ್ಯನು ಜಗತ್ತಿಗೆ ಅದನ್ನು ಪ್ರಸವಿಸುತ್ತಾನೆ. ಆಗ ಷಡ್ರಸೋಪೇತವಾದ ಆಯಾ ಪ್ರಾಣಿಗಳ ಸ್ವೀಕಾರಕ್ಕೆ ಯೋಗ್ಯವಾದ ಅನೇಕ ಓಷಧಿಗಳು ಭೂಮಿಯಲ್ಲಿ ಉಂಟಾಗುತ್ತವೆ. ಅವು ಪ್ರಾಣಿಗಳಿಗೆ ಆಹಾರವಾಗುತ್ತವೆ.

ಏವಂ ಭಾನುಮಯಂ ಹ್ಯನ್ನಂ ಭೂತಾನಾಂ ಪ್ರಾಣಧಾರಣಮ್ ।
ನಾಥೋऽಯಂ ಸರ್ವಭೂತಾನಾಂ ತಸ್ಮಾತ್ ತಂ ಶರಣಂ ವ್ರಜ ॥

ಹೀಗೆ ಪ್ರಾಣಿಗಳ ಅನ್ನವು ಆದಿತ್ಯನನ್ನು ಅವಲಂಬಿಸಿದೆ. ಅವನ ಅನುಗ್ರಹದಿಂದ ಎಲ್ಲರೂ ಪ್ರಾಣಧಾರಣೆಯನ್ನು ಮಾಡುತ್ತಾರೆ. ಎಲ್ಲ ಪ್ರಾಣಿಗಳಿಗೂ ಅವನು ಒಡೆಯನಾದವನು. ಆದ್ದರಿಂದ ಸೂರ್ಯನನ್ನು ಶರಣುಹೊಂದು.

ರಾಜಾನೋ ಹಿ ಮಹಾತ್ಮಾನೋ ಯೋನಿಕರ್ಮವಿಶೋಧಿತಾಃ ।
ಉದ್ಧರಂತಿ ಪ್ರಜಾಃ ಸರ್ವಾಃ ತಪ ಆಸ್ಥಾಯ ಪುಷ್ಕಲಮ್ ॥೯॥

ಕುಲಶುದ್ಧಿಯುಳ್ಳ ಮತ್ತು ಕರ್ಮಶುದ್ಧಿಯುಳ್ಳ ಮಹಾತ್ಮರಾದ ರಾಜರು ಪುಷ್ಕಲವಾದ ತಪಸ್ಸನ್ನು ಮಾಡಿ ಎಲ್ಲ ಪ್ರಜೆಗಳನ್ನೂ ದುಃಖದಿಂದ ಪಾರುಮಾಡುತ್ತಾರೆ.

ಭೌಮೇನ ಕಾರ್ತವೀರ್ಯೇಣ ವೈನ್ಯೇನ ನಹುಷೇಣ ಚ ।
ತಪೋಯೋಗಸಮಾಧಿಸ್ಥೈರುದ್ಧೃತಾ ಹ್ಯಾಪದಃ ಪ್ರಜಾಃ ॥೧೦॥

ಸಾರ್ವಭೌಮನಾದ ಕಾರ್ತವೀರ್ಯನೂ ಪೃಥುವೂ ಮತ್ತು ನಹುಷನೂ ಸಹ ತಪೋಯೋಗಸಮಾಧಿಗಳನ್ನು ಆಚರಿಸಿ ಪ್ರಜೆಗಳನ್ನು ಆಪತ್ತಿನಿಂದ ಪಾರುಮಾಡಿದ್ದಾರಷ್ಟೆ.

ತಥಾ ತ್ವಮಪಿ ಕೌಂತೇಯ ಕರ್ಮಣಾ ಚ ವಿಶೋಧಿತಃ ।
ತಪ ಆಸ್ಥಾಯ ಧರ್ಮೇಣ ದ್ವಿಜಾತೀನ್ ಭರ ಭಾರತ ॥೧೧॥

ಎಲೈ ಕೌಂತೇಯನೇ! ಎಲೈ ಭಾರತನೇ! ನೀನೂ ಸಹ ಕರ್ಮಶುದ್ಧಿಯನ್ನು ಹೊಂದಿದವನಾಗಿದ್ದೀಯೆ. ತಪಸ್ಸನ್ನು ಆಚರಿಸಿ ಧರ್ಮದಿಂದ ಬ್ರಾಹ್ಮಣರನ್ನು ರಕ್ಷಿಸಿ ಪೋಷಿಸು.

ವೈಶಂಪಾಯನಃ

ಏವಮುಕ್ತಸ್ತು ಧೌಮ್ಯೇನ ತತ್ಕಾಲಸದೃಶಂ ವಚಃ ।
ಧರ್ಮರಾಜೋ ವಿಶುದ್ಧಾತ್ಮಾ ತಪ ಆತಿಷ್ಠದುತ್ತಮಮ್ ॥೧೨॥

ಹೀಗೆ ಧೌಮ್ಯರಿಂದ ಆ ಕಾಲಕ್ಕೆ ಉಚಿತವಾದ ಮಾತುಗಳನ್ನು ಆಡಲ್ಪಟ್ಟವನಾಗಿ ಶುದ್ಧವಾದ ಮನಸ್ಸುಳ್ಳ ಧರ್ಮರಾಜನು ಶ್ರೇಷ್ಠವಾದ ತಪಸ್ಸನ್ನು ಆಚರಿಸಿದನು.

ಪುಷ್ಪೋಪಹಾರೈರ್ಬಹುಭಿರಂಚಯಿತ್ವಾ ದಿವಾಕರಮ್ ।
ಯೋಗಮಾಸ್ಥಾಯ ಧರ್ಮಾತ್ಮಾ ವಾಯುಭಕ್ಷೋ ಜಿತೇಂದ್ರಿಯಃ ।
ಗಾಂಗೇಯಂ ವಾರ್ಯುಪಸ್ಪೃಶ್ಯ ಪ್ರಾಣಾಯಾಮೇನ ತಸ್ಥಿವಾನ್ ॥೧೩॥

ಧರ್ಮಾತ್ಮನೂ ಜಿತೇಂದ್ರಿಯನೂ ಆದ ಧರ್ಮರಾಜನು ಗಂಗೆಯ ನೀರಿನಲ್ಲಿ ಸ್ನಾನವನ್ನುಮಾಡಿ ಅನೇಕವಿಧವಾದ ಪುಷ್ಪ ಮತ್ತು ನೈವೇದ್ಯದಿಂದ ಸೂರ್ಯನನ್ನು ಅರ್ಚಿಸಿ ಕೇವಲ ವಾಯುಭಕ್ಷನಾಗಿ ಯೋಗದ ಮಾರ್ಗವನ್ನು ಹಿಡಿದು ಪ್ರಾಣಾಯಾಮಮಾಡಿ ಸೂರ್ಯನ ಧ್ಯಾನತತ್ಪರನಾದನು.

ತತೋ ದಿವಾಕರಃ ಪ್ರೀತೋ ದರ್ಶಯಾಮಾಸ ಪಾಂಡವಮ್ ।
ದೀಪ್ಯಮಾನಃ ಸ್ವವಪುಷಾ ಜ್ವಲನ್ನಿವ ಹುತಾಶನಃ ॥೧೪॥

ಆಗ ಪಾಂಡವನ ತಪಸ್ಸಿಗೆ ಮೆಚ್ಚಿದ ಸೂರ್ಯನು ಉರಿಯುತ್ತಿರುವ ಅಗ್ನಿಯಂತೆ ತನ್ನ ನಿಜ ದೇಹದಿಂದ ಪ್ರಕಾಶಿಸುವವನಾಗಿ ಧರ್ಮರಾಜನಿಗೆ ದರ್ಶನವನ್ನು ಕೊಟ್ಟನು.

ಯತ್ತೇಽಭಿಲಷಿತಂ ರಾಜನ್ ಸರ್ವಮೇತದವಾಪ್ಸ್ಯಸಿ ।
ಅಹಮನ್ನಂ ಪ್ರದಾಸ್ಯಾಮಿ ನವ ವರ್ಷಾಣಿ ತ್ರೀಣಿ ಚ ॥೧೫॥

ರಾಜನೇ! ನಿನ್ನ ಮನಸ್ಸಿನಲ್ಲಿ ಇರುವ ಅಭಿಲಾಷೆಯೆಲ್ಲವೂ ಪೂರ್ಣಗೊಳ್ಳುವುದು. ಹನ್ನೆರಡುವರ್ಷಗಳ ಕಾಲ ನಾನು ಅನ್ನವನ್ನು ಕೊಡುವೆನು.

ಫಲಮೂಲಾಮಿಷಂ ಶಾಕಂ ಸಂಸ್ಕೃತಂ ಯನ್ಮಹಾನಸೇ ।
ಗೃಹ್ಣೀಷ್ಟ ಪಿಠರಂ ತಾಮ್ರಂ ಮಯಾ ದತ್ತಂ ನರಾಧಿಪ ॥೧೬॥

ಪಾಕಶಾಲೆಯಲ್ಲಿ ಸಿದ್ಧಪಡಿಸಿದ ಫಲಮೂಲಾದಿಗಳಾಗಲೀ ಮಾಂಸಾದಿಗಳಾಗಲೀ ತರಕಾರಿಗಳಾಗಲೀ ಅಭಿವೃದ್ಧಿಯನ್ನು ಹೊಂದುತ್ತವೆ. ಎಲೈ ರಾಜನೇ ನಾನು ಕೊಡುವ ಈ ತಾಮ್ರದ ಪಾತ್ರೆಯನ್ನು ಸ್ವೀಕರಿಸು.

ಯಾವದ್ ವಾಂಛತಿ ಪಾಂಚಾಲೀ ಪಾತ್ರೇಣಾನೇನ ಸುವ್ರತಾ ।
ಚತುರ್ವಿಧಂ ತದನ್ನಾದ್ಯಮಕ್ಷಯಂ ತೇ ಭವಿಷ್ಯತಿ ।
ಧನಂ ಚ ವಿವಿಧಂ ತುಭ್ಯಮಿತ್ಯುಕ್ತ್ವಾಂತರಧೀಯತ ॥೧೭॥

ಒಳ್ಳೆಯ ವ್ರತಧಾರಿಣಿಯಾದ ದ್ರೌಪದಿಯು ಈ ಪಾತ್ರೆಯಿಂದ ಯಾವ ಚತುರ್ವಿಧವಾದ ಅನ್ನವನ್ನು ಬಯಸುತ್ತಾಳೆಯೋ ಅವೆಲ್ಲವೂ ಅಕ್ಷಯವಾಗುವುದು ಅಲ್ಲದೆ ಈ ಪಾತ್ರೆಯು ನಿನಗೆ ಅನೇಕ ವಿಧವಾದ ಧನವನ್ನು ಕೊಡುತ್ತದೆ ಎಂದು ಹೇಳಿ ದಿವಾಕರನು ಅದೃಶ್ಯನಾದನು.

ವೈಶಂಪಾಯನಃ

ಲಬ್ಧ್ವಾ ವರಂ ತು ಕೌಂತೇಯೋ ಜಲಾದುತ್ತೀರ್ಯ ಧರ್ಮವಿತ್ ।
ಜಗ್ರಾಹ ಪಾದೌ ಧೌಮ್ಯಸ್ಯ ಭ್ರಾತೃಭಿಃ ಸ್ವಜನೈಃ ಸಹ ॥೧೮॥

ಕೌಂತೇಯನಾದ ಧರ್ಮರಾಜನು ಹೀಗೆ ವರವನ್ನು ಪಡೆದು ನೀರಿನಿಂದ ಮೇಲೆ ಬಂದು ಧರ್ಮಜ್ಞನಾದ ಅವನು ತನ್ನ ತಮ್ಮಂದಿರ ಮತ್ತು ಸ್ವಜನರ ಜೊತೆಯಲ್ಲಿ ಧೌಮ್ಯರ ಪಾದಗಳಿಗೆ ನಮಸ್ಕರಿಸಿದನು.

ದ್ರೌಪದ್ಯಾ ಸಹ ಸಂಗಮ್ಯ ವಂದ್ಯಮಾನೋ ಹ್ಯಯಾತ್ ಪ್ರಭುಃ ।
ಮಹಾನಸೇ ತದಾಽನ್ನಂ ತು ಸಾಧಯಾಮಾಸ ಪಾಂಡವಃ ॥೧೯॥

ದ್ರೌಪದಿಯಿಂದ ನಮಸ್ಕರಿಸಲ್ಪಟ್ಟವನಾಗಿ ಪ್ರಭುವಾದ ಅವನು ದ್ರೌಪದಿಯ ಜೊತೆಯಲ್ಲಿ ಮಹಾನಸಕ್ಕೆ (ಬಾಣಸಾಗಾರ- ಅಡುಗೆಯಮನೆ) ಹೋಗಿ ಸಾಧ್ಯವಾದ ಅನ್ನವನ್ನು ಸಿದ್ಧಪಡಿಸಿದನು.

ಸಂಸೃತಂ ಪ್ರಸವಂ ಯಾತಿ ವನ್ಯಮನ್ನಂ ಚತುರ್ವಿಧಮ್ ।
ಅಕ್ಷಯಂ ವರ್ಧತೇ ಚಾನ್ನಂ ತೇನಾಭೋಜಯತ ದ್ವಿಜಾನ್ ॥೨೦॥

ಸಿದ್ಧಪಡಿಸಿದ ವನಜನ್ಯವಾದ ಆ ಚತುರ್ವಿಧವಾದ ಅನ್ನವು ಆ ಪಾತ್ರೆಯಲ್ಲಿ ಅಭಿವೃದ್ಧಿಯನ್ನು ಹೊಂದಿ ಅಕ್ಷಯವಾಗುತ್ತದೆ. ಧರ್ಮರಾಜನು ಬ್ರಾಹ್ಮಣರಿಗೆ ಆ ಅನ್ನದಿಂದ ಭೋಜನವನ್ನು ಮಾಡಿಸಿದನು.

ಭುಕ್ತವತ್ಸ್ವಥ ವಿಪ್ರೇಷು ಭೋಜಯಿತ್ವಾऽನುಜಾನಪಿ ।
ಶೇಷಂ ವಿಘಸಸಂಜ್ಞಂ ತು ಪಶ್ಚಾದ್ಭುಂಕ್ತೇ ಯುಧಿಷ್ಠಿರಃ ।
ಯುಧಿಷ್ಠಿರಂ ಭೋಜಯಿತ್ವಾ ಶೇಷಮಶ್ನಾತಿ ಪಾರ್ಷತೀ ॥೨೧॥

ಎಲ್ಲ ಬ್ರಾಹ್ಮಣರೂ ಭೋಜನವನ್ನು ಮಾಡಿದ ಮೇಲೆ ತನ್ನ ತಮ್ಮಂದರಿಗೂ ಭೋಜನವನ್ನು ಮಾಡಿಸಿ ಉಳಿದ ವಿಘಸವೆಂದು ಕರೆಯಲ್ಪಡುವ ಶೇಷಾನ್ನವನ್ನು ಯುಧಿಷ್ಠಿರನು ಅನಂತರ ಭುಂಜಿಸುತ್ತಿದ್ದನು. ಯುಧಿಷ್ಠಿರನ ಭೋಜನವಾದ ಮೇಲೆ ಶೇಷವನ್ನು ದ್ರೌಪದಿಯು ಭೋಜನಮಾಡುತ್ತಾಳೆ.

ಏವಂ ದಿವಾಕರಾತ್ ಪ್ರಾಪ್ಯ ದಿವಾಕರಸಮದ್ಯುತಿಃ ।
ಕಾಮಾನ್ ಮನೋಭಿಲಷಿತಾನ್ ಬ್ರಾಹ್ಮಣೇಭ್ಯೋऽದದಾತ್ ಪ್ರಭುಃ ॥

ಹೀಗೆ ಸೂರ್ಯನ ಸಮಾನವಾದ ಕಾಂತಿಯುಳ್ಳ ಧರ್ಮರಾಜನು ಸೂರ್ಯನಿಂದ ತನ್ನ ಮನೋಭೀಷ್ಟವಾದ ವರಗಳನ್ನು ಪಡೆದು ಬ್ರಾಹ್ಮಣರಿಗೆ ಅನ್ನಾದಿಗಳನ್ನು ನೀಡಿದನು.

ಪುರೋಹಿತಪುರೋಗಾಶ್ಚ ತಿಥಿನಕ್ಷತ್ರಪರ್ವಸು ।
ಇಜ್ಯಾರ್ಥೇಷು ಪ್ರವರ್ತಂತೇ ವಿಧಿಮಂತ್ರಪ್ರಮಾಣತಃ ॥೨೩॥

ಯೋಗ್ಯ ತಿಥಿ ನಕ್ಷತ್ರ ಮತ್ತು ಪರ್ವಕಾಲಗಳಲ್ಲಿ ಪುರೋಹಿತರಾದ ಧೌಮ್ಯರೇ ಮೊದಲಾದವರು ವಿಧಿಮಂತ್ರಪ್ರಮಾಣಪೂರ್ವಕವಾಗಿ ಮಾಡಬೇಕಾದ ಹೋಮಗಳಲ್ಲಿ ತೊಡಗುತ್ತಾರೆ.

ತತಃ ಕೃತಸ್ವಸ್ತ್ಯಯನಾ ಧೌಮ್ಯೇನ ಸಹ ಪಾಂಡವಾಃ ।
ದ್ವಿಜಸಂಘೈಃ ಪರಿವೃತಾಃ ಪ್ರಯಯುಃ ಕಾಮ್ಯಕಂ ವನಮ್ ॥೨೪॥

ಅನಂತರ ಸ್ವಸ್ತಿವಾಚನವನ್ನು ಮಾಡಿಸಿಕೊಂಡ ಪಾಂಡವರು ಧೌಮ್ಯರಜೊತೆಯಲ್ಲಿ ಬ್ರಾಹ್ಮಣರ ಸಮೂಹಗಳಿಂದ ರಕ್ಷಿಸಲ್ಪಟ್ಟವರಾಗಿ ಕಾಮ್ಯಕವನಕ್ಕೆ ತೆರಳಿದರು.

ಜನಮೇಜಯಃ

ಕಥಂ ಕುರೂಣಾಮೃಷಭಃ ಸ ವೈ ರಾಜಾ ಯುಧಿಷ್ಠಿರಃ ।
ವಿಪ್ರಾರ್ಥಮಾರಾಧಿತವಾನ್ ಸೂರ್ಯಮದ್ಭುತವಿಕ್ರಮಃ ॥೨೫॥

ಕುರುಶ್ರೇಷ್ಠನೂ ಮತ್ತು ಅದ್ಭುತಪರಾಕ್ರಮವುಳ್ಳವನೂ ಆದ ಯುಧಿಷ್ಠಿರರಾಜನು ಬ್ರಾಹ್ಮಣರ ಸಲುವಾಗಿ ಸೂರ್ಯನನ್ನು ಹೇಗೆ ಆರಾಧಿಸಿದನು?

ವೈಶಂಪಾಯನಃ

ಶೃಣುಷ್ವಾವಹಿತೋ ರಾಜನ್ ಶುಚಿರ್ಭೂತ್ವಾ ಸಮಾಹಿತಃ ।
ಕ್ಷಣಂ ಚ ಕುರು ರಾಜೇಂದ್ರ ಸಂಪ್ರವಕ್ಷ್ಯಾಮ್ಯಶೇಷತಃ ॥೨೬॥

ಎಲೈರಾಜನೇ! ಶುಚಿಯಾಗಿ ಸಮಾಧಾನದಿಂದ ಏಕಚಿತ್ತದಿಂದ ಕೇಳು. ರಾಜೇಂದ್ರನೇ! ಕೇಳಲು ಅವಕಾಶವನ್ನು ಮಾಡಿಕೋ. ನಾನು ಎಲ್ಲವನ್ನೂ ವಿಸ್ತಾರವಾಗಿ ಹೇಳುವೆನು.

ಧೌಮ್ಯೇನ ತು ಯಥಾ ಪೂರ್ವಂ ಪಾರ್ಥಾಯ ಸುಮಹಾತ್ಮನೇ ।
ನಾಮಾಷ್ಟಶತಮಾಖ್ಯಾತಂ ತಚ್ಛೃಣುಷ್ವ ಮಹಾದ್ಯುತೇ ॥೨೭॥

ಎಲೈ ಮಹಾದ್ಯುತಿಯೇ! ಹಿಂದೆ ಧೌಮ್ಯರು ಶ್ರೇಷ್ಠಮಹಾತ್ಮನಾದ ಧರ್ಮರಾಜನಿಗೆ ಯಾವ ಸೂರ್ಯನ ಅಷ್ಟೋತ್ತರ ಶತನಾಮವನ್ನು ಹೇಳಿದರೋ ಅದನ್ನು ಕೇಳು.

ಸೂರ್ಯೋಽರ್ಯಮಾ ಭಗಸ್ತ್ವಷ್ಟಾ ಪೂಷಾಽರ್ಕಃ ಸವಿತಾ ರವಿಃ ।
ಗಭಸ್ತಿಮಾನಜಃ ಕಾಲೋ ಮೃತ್ಯುರ್ಧಾತಾ ಪ್ರಭಾಕರಃ ॥೨೮॥

ಸೂರ್ಯ ಅರ್ಯಮಾ ಭಗ ತ್ವಷ್ಟಾ ಪೂಷಾ ಅರ್ಕ ಸವಿತಾ ರವಿ ಗಭಸ್ತಿಮಾನ್ ಅಜ ಕಾಲ ಮೃತ್ಯು ಧಾತೃ ಪ್ರಭಾಕರ.

ಪೃಥಿವ್ಯಾಪಶ್ಚ ತೇಜಶ್ಚ ಖಂ ವಾಯುಶ್ಚ ಪರಾಯಣಮ್ ।
ಸೋಮೋ ಬೃಹಸ್ಪತಿಃ ಶುಕ್ರೋ ಬುಧೋಽಂಗಾರಕ ಏವ ಚ ॥೨೯॥

ಪೃಥಿವಿ ಆಪ ತೇಜಸ್ ಖ ವಾಯು ಪರಾಯಣ ಸೋಮ ಬೃಹಸ್ಪತಿ ಶುಕ್ರ ಬುಧ ಮತ್ತು ಅಂಗಾರಕ.

ಇಂದ್ರೋ ವಿವಸ್ವಾನ್ ದೀಪ್ತಾಂಶುಃ ಶುಚಿಃ ಶೌರಿಃ ಶನೈಶ್ಚರಃ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಸ್ಕಂದೋ ವೈಶ್ರವಣೋ ಯಮಃ ॥೩೦॥

ಇಂದ್ರ ವಿವಸ್ವಾನ್ ದೀಪ್ತಾಂಶು ಶುಚಿ ಶೌರಿ ಶನೈಶ್ಚರ ಬ್ರಹ್ಮ ವಿಷ್ಣು ರುದ್ರ ಸ್ಕಂದ ವೈಶ್ರವಣ ಮತ್ತು ಯಮ.

ವೈದ್ಯುತೋ ಜಾಠರಶ್ಚಾಗ್ನಿರೈಂಧನಸ್ತೇಜಸಾಂ ಪತಿಃ ।
ಧರ್ಮಧ್ವಜೋ ವೇದಕರ್ತಾ ವೇದಾಂಗೋ ವೇದವಾಹನಃ ॥೩೧॥

ವೈದ್ಯುತ ಜಾಠರ ಅಗ್ನಿ ಐಂಧನ ತೇಜಸಾಂಪತಿ ಧರ್ಮಧ್ವಜ ವೇದಕರ್ತಾ ವೇದಾಂಗ ವೇದವಾಹನ.

ಕೃತಂ ತ್ರೇತಾ ದ್ವಾಪರಶ್ಚ ಕಲಿಃ ಸರ್ವಾಮರಾಶ್ರಯಃ ।
ಕಲಾಃ ಕಾಷ್ಠಾ ಮುಹೂರ್ತಾಶ್ಚ ಪಕ್ಷಾ ಮಾಸಾ ಋತುಸ್ತಥಾ ॥೩೨॥

ಕೃತ ತ್ರೇತಾ ದ್ವಾಪರ ಕಲಿ ಸರ್ವಾಮರಾಶ್ರಯ ಕಲಾ ಕಾಷ್ಠಾ ಮೂಹೂರ್ತ ಪಕ್ಷ ಮಾಸ ಹಾಗೆಯೇ ಋತು.

ಸಂವತ್ಸರಕರೋಽಶ್ವತ್ಥಃ ಕಾಲಚಕ್ರೋ ವಿಭಾವಸುಃ ।
ಪುರುಷಃ ಶಾಶ್ವತೋ ಯೋಗೀ ವ್ಯಕ್ತಾವ್ಯಕ್ತಃ ಸನಾತನಃ ॥೩೩॥

ಸಂವತ್ಸರಕರ ಅಶ್ವತ್ಥ ಕಾಲಚಕ್ರ ವಿಭಾವಸು ಪುರುಷ ಶಾಶ್ವತ ಯೋಗೀ ವ್ಯಕ್ತಾವ್ಯಕ್ತ ಸನಾತನ.

ಲೋಕಾಧ್ಯಕ್ಷಃ ಪ್ರಜಾಧ್ಯಕ್ಷೋ ವಿಶ್ವಕರ್ಮಾ ತಮೋನುದಃ ।
ವರುಣಃ ಸಾಗರೋಂಽಶುಶ್ಚ ಜೀಮೂತೋ ಜೀವನೋಽರಿಹಾ ॥೩೪॥

ಲೋಕಾಧ್ಯಕ್ಷ ಪ್ರಜಾಧ್ಯಕ್ಷ ವಿಶ್ವಕರ್ಮ ತಮೋನುದ ವರುಣ ಸಾಗರ ಅಂಶು ಜೀಮೂತ ಜೀವನ ಅರಿಹಾ.

ಭೂತಾಶ್ರಯೋ ಭೂತಪತಿಃ ಸರ್ವಭೂತನಿಷೇವಿತಃ ।
ಮನುಃ ಸುವರ್ಣೋ ಭೂತಾದಿಃ ಕಾಮದಃ ಸರ್ವತೋಮುಖಃ ॥೩೫॥

ಭೂತಾಶ್ರಯ ಭೂತಪತಿ ಸರ್ವಭೂತನಿಷೇವಿತ ಮನು ಸುವರ್ಣ ಭೂತಾದಿ ಕಾಮದ ಸರ್ವತೋಮುಖ

ಜಯೋ ವಿಶಾಲೋ ವರದಃ ಶೀಘ್ರಗಃ ಪ್ರಾಣಧಾರಣಃ ।
ಧನ್ವಂತರಿರ್ಧೂಮಕೇತುರಾದಿದೇವೋಽದಿತೇಃ ಸುತಃ ॥೩೬॥

ಜಯ ವಿಶಾಲ ವರದ ಶೀಘ್ರಗ ಪ್ರಾಣಧಾರಣ ಧನ್ವಂತರಿ ಧೂಮಕೇತು ಆದಿದೇವ ಅದಿತಿಸುತ

ದ್ವಾದಶಾತ್ಮಾಽರವಿಂದಾಕ್ಷಃ ಪಿತಾ ಮಾತಾ ಪಿತಾಮಹಃ ।
ಸ್ವರ್ಗದ್ವಾರಂ ಪ್ರಜಾದ್ವಾರಂ ಮೋಕ್ಷದ್ವಾರಂ ತ್ರಿವಿಷ್ಟಪಮ್ ॥೩೭॥

ದ್ವಾದಶಾತ್ಮಾ ಅರವಿಂದಾಕ್ಷ ಪಿತಾ ಮಾತಾ ಪಿತಾಮಹ ಸ್ವರ್ಗದ್ವಾರ ಪ್ರಜಾದ್ವಾರ ಮೋಕ್ಷದ್ವಾರ ತ್ರಿವಿಷ್ಟಪ

ದೇವಕರ್ತಾ ಪ್ರಶಾಂತಾತ್ಮಾ ವಿಶ್ವಾತ್ಮಾ ವಿಶ್ವತೋಮುಖಃ ।
ಚರಾಚರಾತ್ಮಾ ಸೂಕ್ಷ್ಮಾತ್ಮಾ ಮೈತ್ರೇಣ ವಪುಷಾಽನ್ವಿತಃ ॥೩೮॥

ದೇವಕರ್ತಾ ಪ್ರಶಾಂತಾತ್ಮಾ ವಿಶ್ವಾತ್ಮಾ ವಿಶ್ವತೋಮುಖ ಚರಾಚರಾತ್ಮಾ ಸೂಕ್ಷ್ಮಾತ್ಮಾ ಮೈತ್ರವಪುಷಾನ್ವಿತ.

ಏತದ್ವೈ ಕೀರ್ತನೀಯಸ್ಯ ಸೂರ್ಯಸ್ಯಾಮಿತತೇಜಸಃ ।
ನಾಮ್ನಾಮಷ್ಟಶತಂ ಪುಣ್ಯಂ ಶಕ್ರೇಣೋಕ್ತಂ ಮಹಾತ್ಮನಾ ॥೩೯॥

ಇವು ಕೀರ್ತನೀಯನಾದ ಅಮಿತಪರಾಕ್ರಮಿಯಾದ ಸೂರ್ಯನ ಪವಿತ್ರವಾದ ಅಷ್ಟೋತ್ತರಶತನಾಮಗಳು. ಇವುಗಳನ್ನು ಮಹಾತ್ಮನಾದ ಶಕ್ರನು ಹಿಂದೆ ಹೇಳಿದನು.

ಶಕ್ರಾಚ್ಚ ನಾರದಃ ಪ್ರಾಪ್ತೋ ಧೌಮ್ಯಸ್ತು ತದನಂತರಮ್ ।
ಧೌಮ್ಯಾದ್ ಯುಧಿಷ್ಠಿರಃ ಪ್ರಾಪ್ಯ ಸರ್ವಾನ್ ಕಾಮಾನವಾಪ್ತವಾನ್ ॥

ಇಂದ್ರನಿಂದ ನಾರದರು ಅದನ್ನು ಪಡೆದರು. ಅನಂತರ ಧೌಮ್ಯರು ಅದನ್ನು ಪಡೆದರು. ಯುಧಿಷ್ಠಿರನು ಧೌಮ್ಯರಿಂದ ಅದನ್ನು ಪಡೆದು ತನ್ನ ಎಲ್ಲ ಕಾಮಗಳನ್ನೂ ಹೊಂದಿದರು.

ಸುರಪಿತೃಗಣಯಕ್ಷಸೇವಿತಂ ಅಸುರನಿಶಾಚರಸಿದ್ಧವಂದಿತಮ್ ।
ವರಕನಕಹುತಾಶನಪ್ರಭಂ ತ್ವಮಪಿ ನಮಸ್ಯ ಹಿತಾಯ ಭಾಸ್ಕರಮ್॥೪೧॥

ಎಲೈ ಜನಮೇಜಯನೇ! ನೀನೂ ಸಹ ನಿನ್ನ ಶ್ರೇಯಸ್ಸಿಗಾಗಿ ದೇವತೆಗಳಿಂದಲೂ ಪಿತೃಗಣಗಳಿಂದಲೂ ಯಕ್ಷರಿಂದಲೂ ಸೇವಿತನಾದ, ಅಸುರರಿಂದಲೂ ರಾಕ್ಷಸರಿಂದಲು ಸಿದ್ಧರಿಂದಲೂ ವಂದ್ಯನಾದ, ಶ್ರೇಷ್ಠವಾದ ಸುವರ್ಣ ಮತ್ತು ಅಗ್ನಿಗಳ ಪ್ರಭೆಯುಳ್ಳ ಭಾಸ್ಕರನನ್ನು ನಮಸ್ಕರಿಸು.

**ಸೂರ್ಯೋದಯೇ ಯಃ ಸುಸಮಾಹಿತಃ ಪಠೇತ್**
**ಸ ಪುತ್ರಲಾಭಂ ಧನರತ್ನಸಂಚಯಮ್ ।**
**ಲಭೇತ ಜಾತಿಸ್ಮರತಾಂ ಸದಾ ನರೋ**
**ಧೃತಿಂ ಚ ಮೇಧಾಂ ಚ ಸ ವಿಂದತೇ ವರಾಮ್ ॥೪೨॥**

ಯಾವ ಪುರುಷನು ಸೂರ್ಯೋದಯದ ಸಮಯದಲ್ಲಿ ಸಮಚಿತ್ತನಾಗಿ ಈ ಸ್ತೋತ್ರವನ್ನು ಹೇಳುತ್ತಾನೆಯೋ (ಈ ಅಷ್ಟೋತ್ತರಶತನಾಮಗಳನ್ನು ಹೇಳುತ್ತಾನೆಯೋ) ಅವನು ಪುತ್ರಲಾಭವನ್ನೂ ಧನರತ್ನಗಳ ರಾಶಿಯನ್ನೂ ಪೂರ್ವಜನ್ಮ ಸ್ಮರಣೆಯನ್ನೂ ಧೈರ್ಯವನ್ನೂ ಮತ್ತು ಶ್ರೇಷ್ಠವಾದ ಮೇಧಾ ಶಕ್ತಿಯನ್ನೂ ಪಡೆಯುತ್ತಾನೆ.

**ಇಮಂ ಸ್ತವಂ ದೇವವರಸ್ಯ ಯೋ ನರಃ**
**ಪ್ರಕೀರ್ತಯೇತ್ ಶುದ್ಧಮನಾಃ ಸಮಾಹಿತಃ**
**ಸ ಮುಚ್ಯತೇ ಶೋಕದವಾಗ್ನಿಸಾಗರಾ-**
**ಲ್ಲಭೇತ ಕಾಮಾನ್ ಮನಸಾ ಯಥೇಪ್ಸಿತಾನ್ ॥೪೩॥**

ದೇವಶ್ರೇಷ್ಠನಾದ ಇಂದ್ರನು ಹೇಳಿದ ಈ ಸ್ತೋತ್ರವನ್ನು ಯಾವ ಮನುಷ್ಯನು ಶುದ್ಧವಾದ ಮನಸ್ಸಿನಿಂದ ಸಮಚಿತ್ತನಾಗಿ ಪಠಿಸುತ್ತಾನೆಯೋ ಅವನು ಸಾಗರದಂತಹ ಶೋಕದಾವಾಗ್ನಿಗಳನ್ನು ದಾಟಿ ಮನಸ್ಸಿನಿಂದ ಇಚ್ಛಿಸಿದ ಎಲ್ಲಾ ಕಾಮಗಳನ್ನೂ ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತೃತೀಯೋಽಧ್ಯಾಯಃ ॥
॥ ಆರಣ್ಯಕಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★★★★★

## ಮಹಾಭಾರತ ತಾತ್ಪರ್ಯನಿರ್ಣಯ -೨೨ನೇ ಅಧ್ಯಾಯ

ಪಾರ್ಥೇಷು ಯಾತೇಷು ಕಿಮತ್ರ ಕಾರ್ಯ-
ಮಿತಿ ಸ್ಮಪೃಷ್ಟೋ ವಿದುರೋಽಗ್ರಜೇನ ।
ಆಹೂಯ ರಾಜ್ಯಂ ಪ್ರತಿಪಾದಯೇತಿ
ಪ್ರಾಹೈನಮಾಹಾಥ ರುಷಾಂಬಿಕೇಯಃ ॥೧೦॥

ಪಾಂಡವರು ಕಾಡಿಗೆ ಹೋದ ಬಳಿಕ ಧೃತರಾಷ್ಟ್ರ ವಿದುರನ ಮುಂದೆ 'ಈಗ ನಾವು ಮಾಡಬೇಕಾದುದೇನು?' ಎಂದು ಕೇಳಿದಾಗ 'ಪಾಂಡವರನ್ನು ಕರೆಸಿಕೊಂಡು ಅವರ ರಾಜ್ಯವನ್ನು ಅವರಿಗೇ ಹಿಂತಿರುಗಿ ಕೊಡು' ಎಂದ, ವಿದುರ. ಧೃತರಾಷ್ಟ್ರ ಸಿಟ್ಟಿನಿಂದ ಅವನಿಗೆ ಹೇಳಿದ.

ಜ್ಞಾತಂ ಪ್ರತೀಪೋಽಸಿ ಮಮಾತ್ಮಜಾನಾಂ
ನಮೇ ತ್ವಯಾ ಕಾರ್ಯಮಿಹಾಸ್ತಿ ಕಿಂಚಿತ್ ।
ಯಥೇಷ್ಟತಸ್ತಿಷ್ಠ ವಾ ಗಚ್ಛವೇತಿ
ಪ್ರೋಕ್ತೋ ಯಯೌ ವಿದುರಃ ಪಾಂಡುಪುತ್ರಾನ್ ॥೧೧॥

'ನೀನು ನನ್ನ ಮಕ್ಕಳಿಗೆ ವಿರೋಧಿಯಾಗಿರುವಿ ಎಂದು ನನಗೆ ಈಗ ತಿಳಿಯಿತು. ಇನ್ನು ನಿನ್ನಿಂದ ನನಗೆ ಏನೂ ಕೆಲಸವಿಲ್ಲ. ನೀನು ನಿನ್ನಿಷ್ಟದಂತೆ ಇಲ್ಲಿ ಇರು ಇಲ್ಲವೆ ಹೋಗು' ಎಂದು ಧೃತರಾಷ್ಟ್ರ ಹೇಳಿದಾಗ ವಿದುರ ಪಾಂಡವರ ಬಳಿಗೆ ನಡೆದ.

ತಸ್ಮಿನ್ ಗತೇ ಭ್ರಾತೃವಿಯೋಗಕರ್ಶಿತಃ
ಪಪಾತ ಭೂಮೌ ಸಹಸೈವ ರಾಜಾ ।
ಸಂಜ್ಞಾಮವಾಪ್ಯಾದಿಶದಾಶು ಸಂಜಯಂ
ಜೀವಾಮಿ ಚೇದಾಶು ಮಮಾನಯಾನುಜಂ ॥೧೨॥

ವಿದುರ ಹೊರಟುಹೋದಾಗ ಧೃತರಾಷ್ಟ್ರ ತಮ್ಮನ ವಿಯೋಗದಿಂದ ದುಃಖಿತನಾಗಿ ನೆಲಕ್ಕೆ ಒರಗಿದ. ಬಳಿಕ ಎಚ್ಚರಗೊಂಡು ಸಂಜಯನಿಗೆ ಹೇಳಿದ– 'ನಾನು ಬದುಕಬೇಕೆಂದಿದ್ದರೆ ತಮ್ಮನನ್ನು ಬೇಗನೆ ಕರೆದು ತಾ'.

ಇತೀರಿತಃ ಸಂಜಯಃ ಪಾಂಡವೇಯಾನ್
ಪ್ರಾಪ್ಯಾನಯದ್ ವಿದುರಂ ಶೀಘ್ರಮೇವ ।
ಸೋಽಪ್ಯಾಗತಃ ಕ್ಷಿಪ್ರಮಪಾಸ್ತದೋಷೋ
ಜ್ಯೇಷ್ಠಂ ವವಂದೇಽಥ ಸಚ್ಚೈನಮಾಶ್ಲಿಷತ್ ॥೧೩॥

ಧೃತರಾಷ್ಟ್ರ ಹೀಗೆ ಹೇಳಿದೊಡನೆ ಸಂಜಯ ಬೇಗನೆ ಪಾಂಡವರ ಬಳಿಗೆ ಹೋಗಿ ವಿದುರನನ್ನು ಕರೆದುತಂದ. ದೋಷರಹಿತನಾದ ವಿದುರ ಬೇಸರಿಸದೆ ಬೇಗನೆ ಹಿಂತಿರುಗಿ ಬಂದು ಧೃತರಾಷ್ಟ್ರನನ್ನು ನಮಿಸಿದ. ಧೃತರಾಷ್ಟ್ರ ಅವನನ್ನು ಬಿಗಿದಪ್ಪಿಕೊಂಡ.

★ ★ ★ ★

## ನಾಲ್ಕನೆಯ ಅಧ್ಯಾಯ

(ವಿದುರನಿಂದ ಧೃತರಾಷ್ಟ್ರನಿಗೆ ಹಿತೋಪದೇಶ. ಧೃತರಾಷ್ಟ್ರನಿಂದ ಅದರ ತಿರಸ್ಕಾರ. ಪಾಂಡವರ ಬಳಿಗೆ ವಿದುರನ ಗಮನ.)

ವೈಶಂಪಾಯನಃ

ವನಂ ಪ್ರವಿಷ್ಟೇಷ್ವಥ ಪಾಂಡವೇಷು
ಪ್ರಜ್ಞಾಚಕ್ಷುಸ್ತಪ್ಯಮಾನೋಽಂಬಿಕೇಯಃ ।
ಧರ್ಮಾತ್ಮಾನಂ ವಿದುರಮಗಾಧಬುದ್ಧಿಂ
ಸುಖಾಸೀನಂ ವಾಕ್ಯಮುವಾಚ ರಾಜಾ ॥೧॥

ಪಾಂಡವರು ಕಾಡಿಗೆ ಹೋಗುತ್ತಿರಲು ಪ್ರಜ್ಞಾಚಕ್ಷುವಾದ ಅಂಬಿಕಾಪುತ್ರನಾದ ಧೃತರಾಷ್ಟ್ರರಾಜನು ತಾಪವನ್ನು ಪಡುತ್ತಾ, ಧರ್ಮಾತ್ಮನೂ ಅಗಾಧಬುದ್ಧಿಯೂ ಆದ ಸುಖಾಸೀನನಾದ ವಿದುರನನ್ನು ಕುರಿತು ಮಾತನಾಡಿದನು.

ಪ್ರಜ್ಞಾ ಹಿ ತೇ ಭಾಸ್ಕರಸ್ಯೇವ ವೃದ್ಧಾ
ಧರ್ಮಂ ಚ ತ್ವಂ ಪರಮಂ ವೇತ್ಥ ಸೂಕ್ಷ್ಮಮ್ ।
ಸಮಶ್ಚ ತ್ವಂ ಸಮ್ಮತಃ ಕೌರವಾಣಾಂ
ಪಥ್ಯಂ ಚೈಷಾಂ ಮಮ ಚೈವ ಬ್ರವೀಹಿ ॥೨॥

ನಿನ್ನ ಪ್ರಜ್ಞೆಯು ಸೂರ್ಯಪ್ರಕಾಶದಂತೆ ವಿಸ್ತಾರವಾಗಿದೆ. ನೀನು ಪರಮಸೂಕ್ಷ್ಮವಾದ ಧರ್ಮವನ್ನು ತಿಳಿದಿದ್ದೀಯೆ. ನೀನು ಕೌರವರಿಗೂ ಮತ್ತು ಪಾಂಡವರಿಗೂ ಸಮಾನನಾದವನು ಮತ್ತು ಸಮ್ಮತನಾದವನು ನನಗೂ ಮತ್ತು ಪಾಂಡವರಿಗೂ ಯಾವುದು ಹಿತವೋ ಅದನ್ನು ಹೇಳು.

ಏವಂ ಗತೇ ವಿದುರ ಯದದ್ಯ ಕಾರ್ಯಂ
ಪೌರಾಶ್ಚೇಮೇ ಕಥಮಸ್ಮಾನ್ ಭಜೇರನ್ ।
ತೇ ಚಾಪ್ಯಸ್ಮಾನ್ ನೋದ್ಧರೇಯುಃ ಸಮೂಲಾನ್
ನ ಕಾಮಯೇ ತಾಂಶ್ಚ ವಿನಶ್ಯಮಾನಾನ್ ॥೩॥

ವಿದುರನೇ! ಪರಿಸ್ಥಿತಿಯು ಹೀಗಿರುವಾಗ ನಾನು ಏನನ್ನು ಮಾಡಬೇಕು? ಏನನ್ನು ಮಾಡಿದರೆ ಈ ಪೌರರು ನಮ್ಮಲ್ಲಿ ಅನುರಾಗವುಳ್ಳವರಾಗುತ್ತಾರೆ ಮತ್ತು ನಮ್ಮನ್ನು ಮೂಲಸಹಿತವಾಗಿ ಕಿತ್ತು ಒಗೆಯುವುದಿಲ್ಲ? ಮತ್ತು ಆ ಪೌರರು (ಪಾಂಡವರು) ವಿನಾಶವನ್ನು ಹೊಂದುವುದನ್ನೂ ನಾನು ಬಯಸುವುದಿಲ್ಲ.

ವಿದುರಃ

ತ್ರಿವರ್ಗೋಽಯಂ ಧರ್ಮಮೂಲೋ ನರೇಂದ್ರ
ರಾಜ್ಯಂ ಚೇದಂ ಧರ್ಮಮೂಲಂ ವದಂತಿ ।
ಧರ್ಮೇ ರಾಜನ್ ವರ್ತಮಾನಃ ಸ್ವಶಕ್ಯಾ
ಪುತ್ರಾನ್ ಸರ್ವಾನ್ ಪಾಹಿ ಕುಂತೀಸುತಾಂಶ್ಚ ॥೪॥

ಎಲೈ ನರೇಂದ್ರನೇ! ಧರ್ಮ ಅರ್ಥ ಕಾಮಗಳ ಈ ಸಮುದಾಯವು ಧರ್ಮಮೂಲವಾದುದು. ಈ ರಾಜ್ಯವನ್ನು ಧರ್ಮಮೂಲವೆಂದೇ ಹೇಳುತ್ತಾರೆ. ಎಲೈರಾಜನೇ! ನಿನಗೆ ಶಕ್ತಿಯಿದ್ದಷ್ಟು ಧರ್ಮದಲ್ಲಿಯೇ ಇರುವವನಾಗಿ ನಿನ್ನ ಎಲ್ಲಾ ಮಕ್ಕಳನ್ನೂ ಮತ್ತು ಕುಂತೀ ಪುತ್ರರನ್ನೂ ರಕ್ಷಿಸು.

ಸ ವೈ ಧರ್ಮೋ ವಿಪ್ರಲುಪ್ತಃ ಸಭಾಯಾಂ
ಪಾಪಾತ್ಮಭಿಃ ಸೌಬಲೇಯಪ್ರಧಾನೈಃ ।
ಆನಾಯ್ಯ ಕುಂತೀಸುತಮಕ್ಷವತ್ಯಾಂ

ಪರಾಜೈಷೀತ್ ಸತ್ಯಸಂಧಂ ಸುತಸ್ತೇ ॥೫॥

ಆ ಧರ್ಮವು ಸಭೆಯಲ್ಲಿ ಪಾಪಾತ್ಮರಾದ ಶಕುನಿ ಮೊದಲಾದವರಿಂದ ನಾಶವನ್ನು ಹೊಂದಿತು. ನಿನ್ನ ಮಗನು ಸತ್ಯಸಂಧನಾದ ಕುಂತೀಸುತನಾದ ಧರ್ಮರಾಜನನ್ನು ಕರೆಸಿ ಅಕ್ಷಗೋಷ್ಠಿಯಲ್ಲಿ ಅವನನ್ನು ಪರಾಭವ ಗೊಳಿಸಿದನು.

ಏತಸ್ಯ ತೇ ದುಷ್ಕೃತಸ್ಯ ರಾಜನ್
ದ್ವೇಷಸ್ಯಾಹಂ ಪರಿಪಶ್ಯಾಮ್ಯುಪಾಯಮ್ ।
ತಥಾ ಪುತ್ರಸ್ತವ ಕೌರವ್ಯ ಪಾಪಾ-
ನ್ಮುಕ್ತೋ ಲೋಕೇ ಪ್ರತಿತಿಷ್ಠೇತ ಸಾಧು ॥೬॥

ಎಲೈ ರಾಜನೇ! ಇಂತಹ ನಿನ್ನ ದುರ್ನೀತಿಯಿಂದ ಉಂಟಾದ ದ್ವೇಷದ ಪರಿಹಾರಕ್ಕಾಗಿ ನಾನು ಇದನ್ನೇ ಉಪಾಯವೆಂದು ತಿಳಿಯುತ್ತೇನೆ. ಹಾಗೆ ಮಾಡಿದರೆ ಧೃತರಾಷ್ಟ್ರನೇ ನಿನ್ನ ಪುತ್ರನೂ ಸಹ ಪಾಪದಿಂದ ಮುಕ್ತನಾಗಿ ಲೋಕದಲ್ಲಿ ಸುಪ್ರತಿಷ್ಠೆಯನ್ನು ಪಡೆಯುವನು.

ತದ್ಧ್ವಲ ಸರ್ವಂ ಪಾಂಡುಪುತ್ರಾ ಲಭಂತಾಂ
ಯತ್ತದ್ರಾಜನ್ ವಿನಿಸೃಷ್ಟಂ ತ್ವಯಾऽऽಸೀತ್ ।
ಏಷ ಧರ್ಮಃ ಪರಮೋ ಯತ್ ಸ್ವಕೇನ
ರಾಜಾ ತುಷ್ಯೇನ್ನ ಪರಸ್ವೇಷು ಗೃದ್ಧ್ಯೇತ್ ॥೭॥

ಎಲೈ ರಾಜನೇ! ನೀನು ಮೊದಲು ಪಾಂಡವರಿಗೆ ಏನನ್ನು ನೀಡಿದ್ದೆಯೋ ಅವೆಲ್ಲವನ್ನೂ ಪಾಂಡವರು ಪುನಃ ಪಡೆಯಲಿ. ರಾಜನು ತನ್ನ ಸಂಪತ್ತಿನಲ್ಲಿ ತೃಪ್ತಿಯನ್ನು ಹೊಂದಿ ಇನ್ನೊಬ್ಬರ ಸಂಪತ್ತನ್ನು ಆಶಿಸಬಾರದು ಎಂಬುದು ಪರಮಧರ್ಮ.

ಏತತ್ ಕಾರ್ಯಂ ತವ ಚೈವ ಪ್ರಧಾನಂ
ತೇಷಾಂ ತುಷ್ಟಿಃ ಶಕುನೇಶ್ಚಾವಮಾನಃ ।
ಏತಚ್ಛ್ರೇಯಸ್ತವ ಪುತ್ರೇಷು ವೈ ಸ್ಯಾದ್
ಏತದ್ ರಾಜನ್ ತ್ವರಮಾಣಃ ಕುರುಷ್ವ ॥೮॥

ಪಾಂಡವರ ಸಂತೋಷ ಮತ್ತು ಶಕುನಿಗೆ ಅವಮಾನ. ಇದು ನೀನು ಈಗ

ಪ್ರಧಾನವಾಗಿ ಮಾಡಬೇಕಾಗಿರುವ ಕಾರ್ಯ. ನಿನ್ನ ಪುತ್ರರಿಗೂ ಇದು ಶ್ರೇಯಸ್ಸನ್ನು ಉಂಟುಮಾಡುತ್ತದೆ. ರಾಜನೇ! ಶೀಘ್ರವಾಗಿ ಈ ಕೆಲಸವನ್ನು ಮಾಡು.

ಅಥೈತದೇವಂ ನ ಕರೋಷಿ ರಾಜನ್
ಧ್ರುವಂ ಕುರೂಣಾಂ ಭವಿತಾ ವಿನಾಶಃ ।
ನಹಿ ಕ್ರುದ್ಧೌ ಭೀಮಸೇನಾರ್ಜುನೌ ಚ
ಶೇಷಂ ಕುರ್ಯಾತಾಂ ಶಾತ್ರವಾಣಾಮನೀಕೇ ॥೯॥

ರಾಜನೇ! ನೀನು ಒಂದು ಪಕ್ಷ ಹೀಗೆ ಮಾಡದಿದ್ದರೆ ಕುರುಗಳ ವಿನಾಶವು ನಿಶ್ಚಯವಾಗಿ ಉಂಟಾಗುತ್ತದೆ. ಕ್ರುದ್ಧರಾದ ಭೀಮಾರ್ಜುನರು ಶತ್ರು ಸೈನ್ಯದಲ್ಲಿ ಯಾರನ್ನೂ ಉಳಿಸುವುದಿಲ್ಲ.

ಯೇಷಾಂ ಯೋದ್ಧಾ ಸವ್ಯಸಾಚೀ ಕೃತಾಸ್ತ್ರೋ
ಧನುರ್ಯೇಷಾಂ ಗಾಂಡಿವಂ ಲೋಕಸಾರಮ್ ।
ಯೇಷಾಂ ಭೀಮೋ ಬಾಹುಶಾಲೀ ಚ ಯೋದ್ಧಾ
ತೇಷಾಂ ಲೋಕೇ ಕಿಂ ನು ನಪ್ರಾಪ್ಯಮಸ್ತಿ ॥೧೦॥

ಯಾರಿಗೆ ಸವ್ಯಸಾಚಿಯೂ ಮತ್ತು ಸರ್ವಾಸ್ತ್ರಗಳನ್ನೂ ಬಲ್ಲ ಅರ್ಜುನನು ಯೋಧನಾಗಿದ್ದಾನೆಯೋ ಲೋಕ ಶ್ರೇಷ್ಠವಾದ ಗಾಂಡೀವವು ಯಾರಿಗೆ ಧನುಸ್ಸಾಗಿದೆಯೋ ಯಾರಿಗೆ ಭುಜಬಲವುಳ್ಳ ಭೀಮಸೇನನು ಯೋಧನಾಗಿದ್ದಾನೆಯೋ ಅವರಿಗೆ ಲೋಕದಲ್ಲಿ ಯಾವುದು ಅಪ್ರಾಪ್ಯವಾಗುತ್ತದೆ?

ಉಕ್ತಂ ಪೂರ್ವಂ ಜಾತಮಾತ್ರೇ ಸುತೇ ತೇ
ಮಯಾ ಯತ್ ತೇ ಹಿತಮಾಸೀತ್ ತದಾನೀಮ್ ।
ಪುತ್ರಂ ತ್ಯಜೈನಮಹಿತಂ ಕುಲಸ್ಯೇ-
ತ್ಯೇತದ್ರಾಜನ್ ನಾಕರೋಸ್ತ್ವಂ ಚಕರ್ಥ ॥೧೧॥

ಇದಾನೀಂ ತೇ ಹಿತಮುಕ್ತಂ ಚ ರಾಜನ್
ಕರ್ತಾ ನ ಚೇತ್ ಪರಿತಪ್ತಾಽಸಿ ಪಶ್ಚಾತ್ ॥೧೨॥

ನಾನು ನಿನ್ನ ಪುತ್ರನು ಹುಟ್ಟಿದಾಗಲೇ ಆಗ ನಿನಗೆ ಯಾವುದು ಹಿತವೆಂದು ಹೇಳಿದೆ. ರಾಜನೇ ಕುಲಕ್ಕೆ ಅಹಿತನಾದ ಈ ಪುತ್ರನನ್ನು ತ್ಯಜಿಸು ಎಂದು ಹೇಳಿದೆನು. ನೀನು ಹಾಗೆ ಮಾಡಲಿಲ್ಲ. ಆದರೆ ಈಗ ಪ್ರಶ್ನೆಯನ್ನು ಮಾಡುತ್ತಿದ್ದೀಯೆ. ರಾಜನೇ! ಈಗಲೂ ನಿನಗೆ ಹಿತವನ್ನು ಹೇಳಿದ್ದೇನೆ. ಇದನ್ನು ಮಾಡದಿದ್ದರೆ ನೀನು ಮುಂದೆ ಪರಿತಾಪವನ್ನು ಪಡಬೇಕಾಗುತ್ತದೆ.

ಯದ್ಯೇತದೇವಮನುಮಂತಾ ಸುತಸ್ತೇ
ಸಂಪ್ರೀಯಮಾಣಃ ಪಾಂಡವೈರೇಕರಾಜ್ಯಮ್ ।
ತಾಪೋ ನ ತೇ ಭವಿತಾ ಪ್ರೀತಿಯೋಗಾತ್
ನಚೇನ್ನಿಗೃಹ್ಣೀಷ್ವ ಸುತಂ ಸುಖಾಯ ॥೧೨॥

ಪಾಂಡವರ ಜೊತೆಯಲ್ಲಿ ಒಂದುರಾಜ್ಯವನ್ನು ಅನುಭವಿಸುವುದನ್ನು ನಿನ್ನ ಸುತನು ಒಪ್ಪುವುದಾದರೆ ಪರಸ್ಪರ ಪ್ರೀತಿ ಉಂಟಾಗುವುದರಿಂದ ನಿನಗೆ ತಾಪವುಂಟಾಗುವುದಿಲ್ಲ. ಒಪ್ಪದಿದ್ದರೆ ಈಗಲಾದರೂ ನಿನ್ನ ಪುತ್ರನನ್ನು ನಿಗ್ರಹಿಸು. ಸುಖವನ್ನು ಅನುಭವಿಸು.

ಅಪಜ್ವರೋ ಭವಸಿ ಹಿ ತಂ ಪ್ರಗೃಹ್ಯ
ಪಾಂಡೋಃ ಪುತ್ರಂ ಪ್ರಕುರುಷ್ವಾಧಿರಾಜ್ಯೇ
ಜ್ಯೇಷ್ಠಂ ಸುತಂ ಧರ್ಮರಾಜಂ ನರೇಂದ್ರ
ಧ್ರುವಂ ವಿನಾಶಃ ಸಹಪುತ್ರೇಣ ಧೀಮನ್ ॥೧೩॥

ದುರ್ಯೋಧನನನ್ನು ನಿಗ್ರಹಿಸಿ ಪಾಂಡುಪುತ್ರನಾದ ಧರ್ಮರಾಜನನ್ನು ರಾಜ್ಯದಲ್ಲಿ ಸ್ಥಾಪಿಸಿದರೆ ನಿನ್ನ ಎಲ್ಲಾ ಮಾನಸಜ್ವರವೂ ದೂರವಾಗುತ್ತದೆ. ನರೇಂದ್ರನೇ! ಜೇಷ್ಠಪುತ್ರನಾದ ಧರ್ಮರಾಜನ್ನು ರಾಜ್ಯದಲ್ಲಿ ಸ್ಥಾಪಿಸು. ಇಲ್ಲದಿದ್ದರೆ ಎಲೈ ಮೇಧಾವಿಯೆ! ನಿನ್ನ ಮಕ್ಕಳ ಜೊತೆಯಲ್ಲಿ ನಿನ್ನ ವಿನಾಶವು ನಿಶ್ಚಯವಾಗಿ ಉಂಟಾಗುತ್ತದೆ.

ಚತುರ್ದಶೇ ಚೈವ ವರ್ಷೇ ನರೇಂದ್ರ
ಕುಲಕ್ಷಯಂ ಪ್ರಾಪ್ಸ್ಯಸಿ ರಾಜಸಿಂಹ ।
ತಸ್ಮಾತ್ ಕುರುಷ್ವಾಧಿಪತ್ಯೇ ನರೇಂದ್ರಂ
ಯುಧಿಷ್ಠಿರಂ ಧರ್ಮಭೃತಾಂ ಪ್ರಧಾನಮ್ ॥೧೪॥

ಎಲೈ ನರೇಂದ್ರನೇ! ರಾಜಸಿಂಹನೇ! ಇಂದಿಗೆ ಹದಿನಾಲ್ಕನೆಯ ವರ್ಷದಲ್ಲಿ ನೀನು ಕುಲಕ್ಷಯವನ್ನು ಹೊಂದುತ್ತೀಯೆ. ಆದ್ದರಿಂದ ಧರ್ಮಿಷ್ಠರಲ್ಲಿ ಪ್ರಧಾನನಾದ ಯುಧಿಷ್ಠಿರನನ್ನು ಇಂದೇ ರಾಜ್ಯಾಧಿಪತ್ಯದಲ್ಲಿ ಕುಳ್ಳಿರಿಸು.

ಅಜಾತಶತ್ರುರ್ಹಿ ವಿಮುಕ್ತರಾಗೋ
ಧರ್ಮೇಣೇಮಾಂ ಪೃಥಿವೀಂ ಶಾಸ್ತು ರಾಜಾ ।
ರಾಜಾನಸ್ತೇ ವಶ್ಯಭೂತಾ ಭವಂತು
ವೈಶ್ಯಾ ಇವಾಸ್ಮಾನುಪತಿಷ್ಠಂತು ಸದ್ಯಃ ॥೧೫॥

ರಾಗಾದಿದೋಷರಹಿತನಾದ ಅಜಾತಶತ್ರುವು ರಾಜನಾಗಿ ಧರ್ಮದಿಂದ ಈ ಭೂಮಿಯನ್ನು ಆಳಲಿ. ಉಳಿದೆಲ್ಲ ರಾಜರು ನಿನಗೆ ಅಧೀನರಾಗಿ ತಕ್ಷಣದಲ್ಲಿಯೇ ವೈಶ್ಯರಂತೆ ಕಪ್ಪಕಾಣಿಕೆಗಳನ್ನು ಕೊಡುವವರಾಗಲಿ.

ದುರ್ಯೋಧನಃ ಶಕುನಿಃ ಸೂತಪುತ್ರಃ
ಪ್ರೀತ್ಯಾ ರಾಜನ್ ಪಾಂಡುಪುತ್ರಂ ಭಜಂತಾಮ್ ।
ದುಃಶಾಸನೋ ಯಾಚತು ಭೀಮಸೇನಂ
ಸಭಾಮಧ್ಯೇ ದ್ರುಪದಸ್ಯಾತ್ಮಜಾಂ ಚ ॥೧೬॥

ದುರ್ಯೋಧನ ಕರ್ಣ ಶಕುನಿ ಎಲ್ಲರೂ ಪಾಂಡುಪುತ್ರನಾದ ಧರ್ಮರಾಜನನ್ನು ಪ್ರೀತಿಯಿಂದ ಭಜಿಸಲಿ. ರಾಜನೇ, ದುಶ್ಶಾಸನನು ಸಭೆಯ ಮಧ್ಯದಲ್ಲಿ ಭೀಮಸೇನನನ್ನು ಮತ್ತು ದ್ರುಪದಕುಮಾರಿಯನ್ನು ಕ್ಷಮೆಯನ್ನು ಯಾಚಿಸಲಿ.

ಯುಧಿಷ್ಠಿರಂ ತ್ವಂ ಪರಿಸಾಂತ್ವಯಸ್ವ
ರಾಜ್ಯೇ ಚೈನಂ ಸ್ಥಾಪಯಿತ್ವಾಽಭಿಪೂಜ್ಯ ।
ತ್ವಯಾ ಪೃಷ್ಟೋ ಹಿತಮೇತದ್ ವದೇಯಂ
ಏತತ್ ಕೃತ್ವಾ ಕೃತಕೃತ್ಯೋಽಸಿ ರಾಜನ್ ॥೧೭॥

ನೀನು ರಾಜ್ಯದಲ್ಲಿ ಯುಧಿಷ್ಠಿರನನ್ನು ಸ್ಥಾಪಿಸಿ ಅವನನ್ನು ಸಮಾಧಾನಪಡಿಸು. ಎಲೈ ರಾಜನೇ ನೀನು ಕೇಳಿದುದಕ್ಕಾಗಿ ನಿನಗೆ ಹಿತವನ್ನು ಹೇಳುತ್ತಿದ್ದೇನೆ. ಇದನ್ನು ಮಾಡಿ ನೀನು ಕೃತಕೃತ್ಯನಾಗು.

ಧೃತರಾಷ್ಟ್ರಃ

ಏತದ್ವಾಕ್ಯಂ ವಿದುರೋಕ್ತಂ ಸಭಾಯಾಮ್
ಇಹ ಪ್ರೋಕ್ತಂ ಪಾಂಡವಾನ್ ಪ್ರಾಪ್ಯ ಮಾಂ ಚ ।
ಹಿತಂ ತೇಷಾಮಹಿತಂ ಮಾಮಕಾನಾಮ್
ಏತತ್ ಸರ್ವಂ ಮಮ ನಾಸ್ಯೈತಿ ಚೇತಃ ॥೧೭॥

ಎಲೈ ವಿದುರನೇ! ಪಾಂಡವರ ವಿಷಯದಲ್ಲಿ ಈ ಮಾತುಗಳನ್ನು ಹಿಂದೆ ಸಭೆಯಲ್ಲಿ ಆಡಿದ್ದೀಯೆ. ಈಗ ನನ್ನ ಬಳಿಗೂ ಬಂದು ಹೇಳುತ್ತಿದ್ದೀಯೆ. ಇದು ಪಾಂಡವರಿಗೆ ಹಿತವಾದದ್ದು. ಮತ್ತು ನನ್ನವರಿಗೆ ಅಹಿತವಾದದ್ದು. ನೀನು ಹೇಳಿದ ಯಾವುದೂ ನನ್ನ ಮನಸ್ಸಿಗೆ ಬರುವುದಿಲ್ಲ. (ಒಪ್ಪುವುದಿಲ್ಲ.)

ಇದಂ ತ್ವಿದಾನೀಂ ಕೃತಮೇವ ನಿಶ್ಚಿತಂ
ತೇಷಾಮರ್ಥೇ ಪಾಂಡವಾನಾಂ ಯಥಾರ್ಥಮ್ ।
ತೇನಾದ್ಯ ಮನ್ಯೇ ಹ್ಯಹಿತೋ ಮಮೇತಿ
ಕಥಂ ನು ಪುತ್ರಂ ಪಾಂಡವಾರ್ಥೇ ತ್ಯಜೇಯಮ್ ॥೧೮॥

ನೀನು ಪಾಂಡವರ ಸಲುವಾಗಿ ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿದ್ದೀಯೆ. ಆ ಕಾರಣದಿಂದ ನೀನು ನನಗೆ ಅಹಿತನಾದವನು. (ಪಾಂಡವರಿಗೆ ಮಾತ್ರ ಹಿತನಾದವನು) ಪಾಂಡವರ ಸಲುವಾಗಿ ನನ್ನ ಮಗನನ್ನು ನಾನು ಹೇಗೆ ತೊರೆಯಲು ಸಾಧ್ಯ ?

ಅಸಂಶಯಂ ತೇऽಪಿ ಮಮೈವ ಪುತ್ರಾ
ದುರ್ಯೋಧನೋ ಮಮ ದೇಹಾತ್ ಪ್ರಸೂತಃ ।
ತ್ವಂ ವೈ ಪ್ರಾಹ ಪರಹೇತೋಸ್ತ್ಯಜೇತಿ
ಕೋ ನು ಬ್ರೂಯಾತ್ ಸಮತಾಮನ್ವವೇಕ್ಷನ್ ॥೧೯॥

ನಿಸ್ಸಂಶಯವಾಗಿಯೂ ಪಾಂಡವರು ನನ್ನ ಮಕ್ಕಳೇ ಸರಿ. ಆದರೆ ದುರ್ಯೋಧನನು ನನ್ನ ದೇಹದಿಂದ ಹುಟ್ಟಿದವನು. ನೀನು ಪರರ ಸಲುವಾಗಿ ಸ್ವಂತ

ಮಗನನ್ನು ಬಿಡು ಎಂದು ಹೇಳುತ್ತಿದ್ದೀಯೆ. ಬುದ್ಧಿ ಸಾಮ್ಯವಿದ್ದ ಯಾವ ವ್ಯಕ್ತಿಯು ಹೀಗೆ ಹೇಳಲು ಸಾಧ್ಯ ?

ಸ ಮೇ ಸರ್ವಂ ವಿದುರ ಜಿಹ್ಮಂ ಬ್ರವೀಷಿ
ಮನ್ಯುಂ ತೇऽಹಮಧಿಕಂ ಧಾರಯಾಮಿ ।
ಯಥೇಷ್ಟಕಂ ಗಚ್ಛ ವಾ ತಿಷ್ಠ ವಾ ತ್ವಂ
ಸುಸಾಂತ್ವ್ಯಮಾನಾऽಪ್ಯಸತೀ ಸ್ತ್ರೀ ಜಹಾತಿ ॥೨೦॥

ಎಲೈ ವಿದುರನೇ! ನೀನು ನನಗೆ ಎಲ್ಲಾ ಮೋಸದ ಮಾತುಗಳನ್ನೇ ಆಡುತ್ತಿದ್ದೀಯೆ. ನಿನ್ನ ಮೇಲೆ ನನಗೆ ಅಧಿಕವಾದ ಕೋಪವುಂಟಾಗಿದೆ. ನಿನ್ನ ಇಚ್ಛೆಯಿದ್ದಂತೆ ಹೊರಟು ಹೋಗು ಅಥವಾ ಇಲ್ಲಿಯೇ ಇರು. ಎಷ್ಟು ಸಮಾಧಾನಪಡಿಸಿದರೂ. ದುಷ್ಟಳಾದ ಸ್ತ್ರೀಯು ಪತಿಯನ್ನು ಬಿಟ್ಟು ಹೋಗುತ್ತಾಳೆ.

ವೈಶಂಪಾಯನಃ

ಏವಮುಕ್ತ್ವಾ ಧೃತರಾಷ್ಟ್ರೋऽನ್ವಪದ್ಯದ್
ಅಂತರ್ವೇಶ್ಮ ಸಹಸೋತ್ಥಾಯ ರಾಜನ್ ।
ನೇದಮಸ್ತೀತಿ ವಿದುರೋ ಭಾಷಮಾಣಃ
ಸಂಪ್ರಾದ್ರವದ್ಯತ್ರ ಪಾರ್ಥಾ ಬಭೂವುಃ ॥೨೧॥

ಎಲೈ ಜನಮೇಜಯರಾಜನೇ! ಹೀಗೆ ಹೇಳಿ ಧೃತರಾಷ್ಟ್ರನು ತಕ್ಷಣ ಒಳಗಿನ ಗೃಹಕ್ಕೆ ಎದ್ದು ಹೋದನು. ವಿದುರನಾದರೂ ಈ ಸಂಧಿಕಾರ್ಯವು ಎಂದಿಗೂ ಉಂಟಾಗುವುದಿಲ್ಲವೆಂದು ಹೇಳುತ್ತಾ ಪಾಂಡವರಿದ್ದ ಕಡೆಗೆ ಓಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ಥೋऽಧ್ಯಾಯಃ ॥
॥ ಆರಣ್ಯಕಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

# ಐದನೆಯ ಅಧ್ಯಾಯ

(ಕಾಮ್ಯಕವನದಲ್ಲಿ ವಿದುರನಿಂದ ಪಾಂಡವರಿಗೆ ಹಿತೋಪದೇಶ.)

**ವೈಶಂಪಾಯನಃ**

ಪಾಂಡವಾಸ್ತು ವನೇ ವಾಸಮುದ್ದಿಶ್ಯ ಭರತರ್ಷಭಾಃ ।
ಪ್ರಯಯುರ್ಜಾಹ್ನವೀಕೂಲಾತ್ ಕುರುಕ್ಷೇತ್ರಂ ಸಹಾನುಗಾಃ ॥೧॥

ಭರತಶ್ರೇಷ್ಠರಾದ ಆ ಪಾಂಡವರು ವನವಾಸವನ್ನು ಉದ್ದೇಶಿಸಿ ಜಾಹ್ನವೀತೀರದಿಂದ ತಮ್ಮ ಪರಿವಾರ ಸಹಿತರಾಗಿ ಕುರುಕ್ಷೇತ್ರಕ್ಕೆ ಹೊರಟರು.

ಸರಸ್ವತೀದೃಷದ್ವತ್ಯೌ ಯಮುನಾಂ ಚ ನಿಷೇವ್ಯ ತೇ ।
ಯಯುರ್ವನೇನೈವ ವನಂ ಸತತಂ ಪಶ್ಚಿಮಾಂ ದಿಶಮ್ ॥೨॥

ಅವರು ಸರಸ್ವತಿ ದೃಷದ್ವತಿ ಮತ್ತು ಯಮುನಾನದಿಗಳನ್ನು ದಾಟಿ ಕಾಡಿನಿಂದ ಕಾಡಿಗೆ ಹೋಗುತ್ತಾ ಸತತವಾಗಿ ಪಶ್ಚಿಮಾಭಿಮುಖವಾಗಿ ನಡೆದರು.

ತತಃ ಸರಸ್ವತೀತೀರೇ ಸಮೇಷು ಮರುಧನ್ವಸು ।
ಕಾಮ್ಯಕಂ ನಾಮ ದದೃಶುರ್ವನಂ ಮುನಿಜನಪ್ರಿಯಮ್ ॥೩॥

ಅನಂತರ ಮರುಭೂಮಿಯಲ್ಲಿ ಸರಸ್ವತೀ ನದಿಯ ಸಮತಟ್ಟಾದ ಒಂದುತೀರದಲ್ಲಿ ಮುನಿಜನಪ್ರಿಯವಾದ ಕಾಮ್ಯಕವನವೆಂಬ ವನವನ್ನು ನೋಡಿದರು.

ತತ್ರ ತೇ ನ್ಯವಸನ್ ವೀರಾ ವನೇ ಬಹುಮೃಗದ್ವಿಜೇ ।
ಅನಾಸ್ಯಮಾನಾ ಮುನಿಭಿಃ ಸಾಂತ್ವ್ಯಮಾನಾಶ್ಚ ಭಾರತ ॥೪॥

ಎಲೈ ಭಾರತನೇ! ಧೀರರಾದ ಅವರು ಅನೇಕ ಮೃಗಪಕ್ಷಿಗಳಿಂದ ಕೂಡಿದ ಆ ವನದಲ್ಲಿ ಋಷಿಗಳಿಂದ ಸುತ್ತುವರಿಯಲ್ಪಟ್ಟು ಮತ್ತು ಸಮಾಧಾನಮಾಡಲ್ಪಟ್ಟು ವಾಸಮಾಡಿದರು.

ವಿದುರಸ್ತ್ವಥ ಪಾಂಡೂನಾಂ ಸದಾ ದರ್ಶನಲಾಲಸಃ ।
ಜಗಾಮೈಕರಥೇನೈವ ಕಾಮ್ಯಕಂ ವನಮೃದ್ಧಿಮತ್ ॥೫॥

ಅನಂತರ ಪಾಂಡವರ ದರ್ಶನವನ್ನು ಮಾಡಲು ಯಾವಾಗಲೂ ಹಾತೊರೆಯುತ್ತಿದ್ದ ವಿದುರನು ಒಂದೇ ರಥವನ್ನು ತೆಗೆದುಕೊಂಡು ಸಂಪದ್ಭರಿತವಾದ ಕಾಮ್ಯಕವನಕ್ಕೆ ಬಂದನು.

ತತೋ ಯಾತ್ವಾ ವಿದುರಃ ಕಾನನಂ ತತ್
ಶೀಘ್ರೈರಶ್ವೈರ್ವಾಹಿತಃ ಸ್ಯಂದನೇನ ।
ದದರ್ಶಾಸೀನಂ ಧರ್ಮಾತ್ಮಾನಂ ವಿವಿಕ್ತೇ
ಸಾರ್ಧಂ ದ್ರೌಪದ್ಯಾ ಭ್ರಾತೃಭಿರ್ಬ್ರಾಹ್ಮಣೈಶ್ಚ ॥೫॥

ಅನಂತರ ಶೀಘ್ರವಾಗಿ ನಡೆಯುವ ಅಶ್ವಗಳನ್ನು ಹೂಡಿದ ರಥದಲ್ಲಿ ಕುಳಿತು ಕಾನನವನ್ನು ತಲುಪಿ ವಿದುರನು ಏಕಾಂತದಲ್ಲಿ ದ್ರೌಪದಿಯ ತಮ್ಮಂದಿರ ಮತ್ತು ಬ್ರಾಹ್ಮಣರ ಜೊತೆಯಲ್ಲಿ ಕುಳಿತಿದ್ದ ಧರ್ಮಾತ್ಮನಾದ ಧರ್ಮರಾಜನನ್ನು ನೋಡಿದನು.

ತತೋಽಪಶ್ಯದ್ ವಿದುರಂ ತೂರ್ಣಮೇಕಮ್
ಅಭ್ಯಾಗತಂ ಸತ್ಯಸಂಧಃ ಸ ರಾಜಾ ।
ಅಥಾಬ್ರವೀದ್ ಭೀಮಸೇನಂ ಸಮೀಕ್ಷ್ಯ
ಕಿಂ ನು ಕ್ಷತ್ತಾ ವಕ್ಷ್ಯತಿ ನಃ ಸಮೇತ್ಯ ॥೬॥

ಆಗ ಸತ್ಯಸಂಧನಾದ ಆ ಧರ್ಮರಾಜನು ಶೀಘ್ರವಾಗಿ ವಿದುರನು ಒಬ್ಬನೇ ಅಲ್ಲಿಗೆ ಬಂದುದನ್ನು ನೋಡಿ ಭೀಮಸೇನನನ್ನು ಕುರಿತು ವಿದುರನು ಇಲ್ಲಿಗೆ ಬಂದು ನಮಗೆ ಏನನ್ನು ಹೇಳುವನು ಎಂದು ನುಡಿದನು.

ಕಚ್ಚಿನ್ನಾಯಂ ವಚನಾತ್ ಸೌಬಲಸ್ಯ
ಸಮಾಹ್ವಾತುಂ ದೇವನಾಯೋಪಯಾತಿ ।
ಕಚ್ಚಿತ್ ಕ್ಷುದ್ರಃ ಶಕುನಿಶ್ಚಾಯುಧಾನಿ
ಜೇಷ್ಯತ್ಯಸ್ಮಾಕಂ ಪುನರೇವಾಕ್ಷವತ್ಯಾಮ್ ॥೭॥

ಶಕುನಿಯ ವಚನದಂತೆ ಇನ್ನೊಮ್ಮೆ ದ್ಯೂತಕ್ಕೆ ಆಹ್ವಾನಮಾಡಲು ಇಲ್ಲಿಗೆ ಬಂದಿಲ್ಲವಷ್ಟೇ? ಆ ಕ್ಷುದ್ರನಾದ ಶಕುನಿಯು ಪುನಃ ಅಕ್ಷದ್ಯೂತದಲ್ಲಿ ನಮ್ಮನ್ನು ಕರೆದು ನಮ್ಮ ಆಯುಧಗಳನ್ನು ಗೆಲ್ಲುತ್ತಾನೆಯೇ.

ಸಮಾಹೂತಃ ಕೇನಚಿದಾಹವಾಯ
ನಾಹಂ ಶಕ್ತೋ ಭೀಮಸೇನಾಪಯಾತುಮ್ ।
ಗಾಂಡೀವೇ ವಾ ಸಂಶಯಿತೇ ಕಥಂಚಿದ್
ರಾಜ್ಯಪ್ರಾಪ್ತಿಃ ಸಂಶಯಿತಾ ಭವೇನ್ನಃ ॥೮॥

ಎಲೈ ಭೀಮಸೇನನೇ! ಯಾರಾದರೂ ನನ್ನನ್ನು ದ್ಯೂತಕ್ಕೆ ಯುದ್ಧಕ್ಕೆ ಕರೆದರೆ ನಾನು ಅದನ್ನು ನಿರಾಕರಿಸಲು ಶಕ್ತನಾಗುವುದಿಲ್ಲ. ದ್ಯೂತದಲ್ಲಿ ಪಣಕ್ಕಿಟ್ಟ ಗಾಂಡೀವ ಧನುಸ್ಸು ಸಹ ಶತ್ರುಗಳ ಮನೆಯಲ್ಲಿ ಮಲಗಿದರೆ ನಮ್ಮ ರಾಜ್ಯಪ್ರಾಪ್ತಿಯು ಸಂಶಯಗ್ರಸ್ತವಾಗುತ್ತದೆ.

ತತ ಉತ್ಥಾಯ ವಿದುರಂ ಪಾಂಡವೇಯಾಃ
ತಂ ಪ್ರತ್ಯಗೃಹ್ಣನ್ ನೃಪತೇ ಸರ್ವ ಏವ ।
ತೈಃ ಸತೃತಃ ಸ ಚ ತಾನಾಜಮೀಢೋ
ಯಥೋಚಿತಂ ಪಾಂಡುಪುತ್ರಾನ್ ಸಮೇಯಾತ್ ॥೯॥

ಎಲೈ ರಾಜನೇ! ಅನಂತರ ಪಾಂಡವರೆಲ್ಲರೂ ಎದ್ದು ವಿದುರನನ್ನು ಸ್ವೀಕರಿಸಿದರು. ಅವರಿಂದ ಸತ್ಕರಿಸಲ್ಪಟ್ಟ ಅಜಮೀಢನಾದ ವಿದುರನು ಯಥಾಯೋಗ್ಯವಾಗಿ ಪಾಂಡವರ ಜೊತೆಯಲ್ಲಿ ಬೆರೆತನು.

ಸಮಾಶಸ್ತಂ ವಿದುರಂ ತೇ ನರರ್ಷಭಾಃ
ತತೋಽಪೃಚ್ಛನ್ನಾಗಮನಾಯ ಹೇತುಮ್ ।
ಸ ಚಾಪಿ ತೇಭ್ಯೋ ವಿಸ್ತರತಃ ಶಶಂಸ
ಯಥಾವೃತ್ತೋ ಧೃತರಾಷ್ಟ್ರೋಽಂಬಿಕೇಯಃ ॥೧೦॥

ಸುಧಾರಿಸಿಕೊಂಡ ವಿದುರನನ್ನು ಕುರಿತು ಆ ನರಶ್ರೇಷ್ಠರು ಅನಂತರ ಅಲ್ಲಿಗೆ ಬರುವುದಕ್ಕೆ ಕಾರಣವನ್ನು ಕೇಳಿದರು. ವಿದುರನಾದರೂ ಕೂಡ ಅವರಿಗೆ ಅಂಬಿಕೇಯನಾದ ಧೃತರಾಷ್ಟ್ರನ ನಡತೆಯನ್ನು ವಿಸ್ತಾರವಾಗಿ ಹೇಳಿದನು.

ಅವೋಚನ್ಕಾಂ ಧೃತರಾಷ್ಟ್ರೋಽಭಿತಪ್ತಮ್
ಅಜಾತಶತ್ರೋ ಪರಿಗೃಹ್ಯಾಭಿಪೂಜ್ಯ ಚ ।

ಏವಂ ಗತೇ ಸಮತಾಮಭ್ಯುಪೇತ್ಯ
ಪಥ್ಯಂ ತೇಷಾಂ ಮಮ ಚ ಬ್ರೂಹಿ ಸೌಮ್ಯ ॥೧೧॥

ಎಲೈ ಅಜಾತಶತ್ರುವೇ ಧೃತರಾಷ್ಟ್ರನು ಶೋಕಾಭಿತಪ್ತನಾದ ನನ್ನನ್ನು ಸ್ವೀಕರಿಸಿ ಸತ್ಕರಿಸಿ ನನ್ನನ್ನು ಕುರಿತು ಪರಿಸ್ಥಿತಿಯು ಹೀಗಿರುವಾಗ ಸಮಾನದೃಷ್ಟಿಯನ್ನು ಹೊಂದಿ ನನಗೂ ಮತ್ತು ಪಾಂಡವರಿಗೂ ಹಿತವಾದುದುನ್ನು ಹೇಳು ಎಂದು ಹೇಳಿದನು.

ಮಯಾ ಹ್ಯುಕ್ತಃ ಸ ಚ ಯತ್ ಕೌರವಾಣಾಂ
ಹಿತಂ ಪಥ್ಯಂ ಧೃತರಾಷ್ಟ್ರಸ್ಯ ಚೈವ ।
ತದ್ವೈ ಪಥ್ಯಂ ತನ್ಮನೋ ನಾಭ್ಯುಪೈತಿ
ತತಶ್ಚಾಹಂ ಕ್ಷಮಮನ್ಯಂ ನ ಮನ್ಯೇ ॥೧೨॥

ನಾನಾದರೋ ಧೃತರಾಷ್ಟ್ರನಿಗೂ ಮತ್ತು ಕೌರವರಿಗೂ ಹಿತವೂ ಮತ್ತು ಪಥ್ಯವೂ ಆದ ವಿಷಯವನ್ನೇ ಹೇಳಿದೆ. ಆದರೆ ಅವನ ಮನಸ್ಸು ಅದನ್ನು ಒಪ್ಪುತ್ತಿಲ್ಲ. ಅದನ್ನು ಬಿಟ್ಟು ಬೇರೆಮಾರ್ಗವು ನನಗೆ ತೋರುತ್ತಿಲ್ಲ.

ಪರಂ ಶ್ರೇಯಃ ಪಾಂಡವೇಯಾ ಮಯೋಕ್ತಂ
ನ ವೈ ಮತ್ತಃ ಶ್ರುತವಾನಂಬಿಕೇಯಃ ।
ಯಥಾऽऽತುರಸ್ಯೇವ ಹಿ ಪಥ್ಯಮೌಷಧಂ
ನ ರೋಚತೇ ಸ್ಮಾಸ್ಯ ತದುಚ್ಯಮಾನಮ್ ॥೧೩॥

ಎಲೈ ಪಾಂಡವರೇ! ನಾನು ಶ್ರೇಷ್ಠವಾದ ಶ್ರೇಯೋಮಾರ್ಗವನ್ನು ಅವನಿಗೆ ಹೇಳಿದೆ. ಆದರೆ ಅಂಬಿಕೇಯನಾದ ಧೃತರಾಷ್ಟ್ರನು ನನ್ನ ಮಾತುಗಳನ್ನು ಕೇಳಲಿಲ್ಲ. ಮರಣಸನ್ನಿಹಿತವಾದ ರೋಗಿಗೆ ಹೇಗೆ ಪಥ್ಯವಾದ ಔಷಧವು ಹಿಡಿಸುವುದಿಲ್ಲವೋ ಅದರಂತೆ ನನ್ನ ಮಾತುಗಳು ಅವನಿಗೆ ಹಿಡಿಸಲಿಲ್ಲ.

ನ ಶ್ರೇಯಸೇ ನೀಯತೇऽಜಾತಶತ್ರೋ
ಸ್ತ್ರೀ ಶ್ರೋತ್ರಿಯಸ್ಯೇವ ಗೃಹೇ ಪ್ರದುಷ್ಟಾ ।
ಬ್ರುವನ್ ನ ರುಚ್ಯೈ ಭರತರ್ಷಭಸ್ಯ
ಪತಿಃ ಕುಮಾರ್ಯಾ ಇವ ಷಷ್ಟಿವರ್ಷಃ ॥೧೪॥

ಎಲೈ ಅಜಾತಶತ್ರುವೇ! ಶ್ರೋತ್ರಿಯನ ಮನೆಯನ್ನು ಸೇರಿದ ದುಷ್ಟಸ್ತ್ರೀಯಂತೆ ಅವನ ಮನಸ್ಸು ಶ್ರೇಯೋಮಾರ್ಗದಲ್ಲಿ ಹೋಗುವುದಿಲ್ಲ. ಅರವತ್ತು ವರ್ಷದ ಪತಿಯು ಹೇಗೆ ಕನ್ಯೆಗೆ ರುಚಿಸುವುದಿಲ್ಲವೋ ಅದರಂತೆ ನಾನು ಹೇಳುವ ಮಾತುಗಳು ಭರತಶ್ರೇಷ್ಠನಾದ ಧೃತರಾಷ್ಟ್ರನಿಗೆ ರುಚಿಸುವುದಿಲ್ಲ.

ಧ್ರುವಂ ವಿನಾಶೇ ನೃಪ ಕೌರವಾಣಾಂ
ನ ವೈ ಶ್ರೇಯೋ ಧೃತರಾಷ್ಟ್ರಃ ಪಶ್ಯತಿ ।
ಯಥಾ ಪರ್ಣೇ ಪುಷ್ಕರಸ್ಯಾವಸಿಕ್ತಂ
ಜಲಂ ನ ತಿಷ್ಠೇತ್ ಪಥ್ಯಮುಕ್ತಂ ತಥಾಽಸ್ಮಿನ್ ॥೧೫॥

ಎಲೈ ರಾಜನೇ! ಕೌರವರಿಗೆ ವಿನಾಶವು ನಿಶ್ಚಯವಾಗಿ ಸನ್ನಿಹಿತವಾಗಿರುವಾಗ ಧೃತರಾಷ್ಟ್ರನು ಶ್ರೇಯಸ್ಸನ್ನು ಕಾಣುತ್ತಿಲ್ಲ. ಕಮಲಪತ್ರದ ಮೇಲೆ ಹಾಕಿದ ನೀರು ಹೇಗೆ ನಿಲ್ಲುವುದಿಲ್ಲವೋ ಹಾಗೆ ನನ್ನ ಪಥ್ಯವಾದ ಮಾತುಗಳು ಅವನ ಮನಸ್ಸಿನಲ್ಲಿ ನಿಲ್ಲುತ್ತಿಲ್ಲ.

ತತಃ ಕ್ರುದ್ಧೋ ಧೃತರಾಷ್ಟ್ರೋಽಬ್ರವೀನ್ಮಾಂ
ಯತ್ರ ಶ್ರದ್ಧಾ ತಾತ ತತ್ರ ಪ್ರಯಾಹಿ ।
ನಾಹಂ ಭೂಯಃ ಕಾಮಯೇ ತ್ವಾಂ ಸಹಾಯಂ
ಮಹೀಮಿಮಾಂ ಪಾಲಯಿತುಂ ಪುರಂ ವಾ ॥೧೬॥

ಆಗ ಕ್ರುದ್ಧನಾದ ಧೃತರಾಷ್ಟ್ರನು ನನ್ನನ್ನು ಕುರಿತು ನಿನಗೆ ಎಲ್ಲಿ ವಿಶ್ವಾಸವಿದೆಯೋ ಅಲ್ಲಿಗೆ ಹೊರಟುಹೋಗು. ರಾಜ್ಯವನ್ನು ಆಳುವುದಕ್ಕೆ ಅಥವಾ ರಾಜಧಾನಿಯನ್ನು ಆಳುವುದಕ್ಕೆ ನನಗೆ ಇನ್ನು ನಿನ್ನ ಸಹಾಯದ ಅಗತ್ಯವಿಲ್ಲ ಎಂದು ಹೇಳಿದನು.

ಸೋಽಹಂ ತ್ಯಕ್ತೋ ಧೃತರಾಷ್ಟ್ರೇಣ ರಾಜನ್
ತ್ವಾಂ ಶಂಸಿತುಂ ಸಮುಪಾಯಾತಸ್ತ್ವರಾವಾನ್ ।
ಯುಕ್ತಂ ಸರ್ವಂ ಯನ್ಮಯೋಕ್ತಂ ಸಭಾಯಾಂ
ತದ್ ಧಾರ್ಯತಾಂ ಯಚ್ಚ ವಕ್ಷ್ಯಾಮಿ ಭೂಯಃ ॥೧೭॥

ಎಲೈ ರಾಜನೇ! ಧೃತರಾಷ್ಟ್ರನಿಂದ ಪರಿತ್ಯಕ್ತನಾಗಿ ನಾನು ನಿನಗೆ ಈ ವಿಷಯವನ್ನು ತಿಳಿಸಲು ಇಲ್ಲಿಗೆ ಶೀಘ್ರವಾಗಿ ಬಂದೆನು. ನಾನು ಸಭೆಯಲ್ಲಿ ಹೇಳಿದ ಯೋಗ್ಯವಾದ

ಮಾತುಗಳೆಲ್ಲವನ್ನೂ ಮನಸ್ಸಿನಲ್ಲಿ ಇಡು. ಮತ್ತು ಈಗ ಹೇಳುವ ಮಾತುಗಳನ್ನೂ ಮನಸ್ಸಿನಲ್ಲಿ ಇಟ್ಟುಕೊ.

ಕ್ಲೇಶೈಸ್ತೀವ್ರೈರ್ಯುಜ್ಯಮಾನಃ ಸಪತ್ನೈಃ
ಕ್ಷಮಾಂ ಕುರ್ವನ್ ಕಾಲ ಉಪಾಗತೇ ಯಃ ।
ಸಂವರ್ಧಯನ್ ಸ್ತೋಕಮಿವಾಗ್ನಿಮಾತ್ಮವಾನ್
ಸ ವೈ ಭುಂಕ್ತೇ ಪೃಥಿವೀಮೇಕ ಏವ ॥೧೮॥

ಯಾವನು ಶತ್ರುಗಳಿಂದ ತೀವ್ರವಾದ ಕ್ಲೇಶಗಳಿಗೆ ತುತ್ತಾದರೂ ಸಹನೆಯನ್ನು ತಾಳಿ ಯೋಗ್ಯವಾದ ಕಾಲವು ಬಂದಾಗ ಅಲ್ಪವಾದ ಅಗ್ನಿಯು ವೃದ್ಧಿಯನ್ನು ಹೊಂದುವಂತೆ ಧೈರ್ಯದಿಂದ ಬೆಳೆಯುತ್ತಾನೆಯೋ ಅವನೊಬ್ಬನೇ ಪೃಥಿವಿಯನ್ನು ಭೋಗಿಸುತ್ತಾನೆ.

ಯಸ್ಯಾವಿಭಕ್ತಂ ವಸು ರಾಜನ್ ಸಹಾಯೈಃ
ತಸ್ಯ ದುಃಖಸ್ಯಾಂಶಭಾಜಃ ಸಹಾಯಾಃ ।
ಸಹಾಯಾನಾಮೇಷ ಸಂಗ್ರಹಣೇऽಭ್ಯುಪಾಯಃ
ಸಹಾಯವಾಪ್ತೌ ಪೃಥಿವೀಪ್ರಾಪ್ತಿಮಾಹುಃ ॥೧೯॥

ರಾಜನೇ ಯಾರ ಸಂಪತ್ತು ಸಹಾಯಭೂತರಾದ ಜನರಿಗೆ ಬೆನ್ನಾಗಿ ಹಂಚಲ್ಪಡುತ್ತದೆಯೋ ಸಹಾಯಭೂತರಾದ ಆ ಜನರು ಆ ರಾಜನ ದುಃಖದ ಒಂದು ಅಂಶವನ್ನು ಸ್ವೀಕರಿಸುತ್ತಾರೆ. ಸಹಾಯಕರನ್ನು ಸಂಗ್ರಹಿಸುವುದಕ್ಕೆ ಇದೇ ಒಳ್ಳೆಯ ಉಪಾಯ. ಒಳ್ಳೆಯ ಸಹಾಯವಿದ್ದರೆ ಮಾತ್ರ ಪೃಥ್ವಿಯ ಪ್ರಾಪ್ತಿಯಾಗುತ್ತದೆ ಎಂದು ಹೇಳುತ್ತಾರೆ.

ಸತ್ಯಂ ಶ್ರೇಷ್ಠಂ ಪಾಂಡವಾ ನಿಷ್ಫಲಾಪಾಃ
ತುಲ್ಯಂ ಚಾನ್ಯತ್ ಸಹ ಭೋಜ್ಯಂ ಸಹಾಯೈಃ ।
ಆತ್ಮಾ ಚೈಷಾಮಗ್ರತೋ ನಾತಿವರ್ತೇದ್
ಏವಂವೃತ್ತಿರ್ವರ್ಧತೇ ಭೂಮಿಪಾಲ ॥೨೦॥

ಪಾಂಡವರು ವ್ಯರ್ಥವಾದ ಮಾತುಗಳನ್ನು ಆಡುವುದಿಲ್ಲ ಎಂಬುದು ಸತ್ಯವಾದುದು ಮತ್ತು ಶ್ರೇಷ್ಠವಾದುದು. ಶ್ರೀಮದ್ ದ್ರವ್ಯವು ಸಹಾಯಭೂತರಾದವರ ಜೊತೆಯಲ್ಲಿಯೇ ಸಮಾನವಾಗಿ ಭೋಗಿಸಲ್ಪಡಬೇಕು. ಎಲೈ ರಾಜನೇ ! ಯಾವನು

ಅಂತಹ ಭೋಗದ ವಿಷಯದಲ್ಲಿ ಸಹಾಯರಾದವರನ್ನು ಮೀರಿ ಮುಂದೆ ಹೋಗುವುದಿಲ್ಲವೋ ಅಂತಹ ರಾಜನೇ ಸಂವೃದ್ಧಿಯನ್ನು ಹೊಂದುತ್ತಾನೆ.

**ಯುಧಿಷ್ಠಿರಃ**

**ತಥಾ ಕರಿಷ್ಯಾಮಿ ಯಥಾ ಬ್ರವೀಷಿ**
**ಪರಾಂ ಬುದ್ಧಿಮುಪಗಮ್ಯಾಪ್ರಮತ್ತಃ ।**
**ಯಚ್ಚಾಪ್ಯನ್ಯದ್ ದೇಶಕಾಲೋಪಪನ್ನಂ**
**ತದ್ವೈ ವಾಚ್ಯಂ ತತ್ ಕರಿಷ್ಯಾಮಿ ಭೂಯಃ** ॥೨೧॥

ಎಲೈ ವಿದುರನೇ ! ನೀನು ಹೇಗೆ ಹೇಳುತ್ತಿಯೋ ಹಾಗೆಯೇ ಶ್ರೇಷ್ಠವಾದ ಬುದ್ಧಿಯನ್ನು ಹೊಂದಿ ಬಹಳ ಎಚ್ಚರಿಕೆಯಿಂದ ಅದನ್ನು ಮಾಡುತ್ತೇನೆ. ದೇಶಕಾಲೋಚಿತವಾಗಿ ನಾನು ಮಾಡಬೇಕಾದ ಅದನ್ನು ತಿಳಿಸಬೇಕು. ಅದನ್ನು ಪುನಃ ನೆರವೇರಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಮೋऽಧ್ಯಾಯಃ ॥
॥ ಆರಣ್ಯಕಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★★★★★

## ಆರನೆಯ ಅಧ್ಯಾಯ

(ಸಂಜಯವಚನದಂತೆ ವಿದುರನು ಹಸ್ತಿನಾವತಿಗೆ ಹಿಂದಿರುಗಿ ಧೃತರಾಷ್ಟ್ರನನ್ನು ಸಮಾಧಾನ ಪಡಿಸುವುದು.)

**ವೈಶಂಪಾಯನಃ**

**ಗತೇ ತು ವಿದುರೇ ರಾಜನ್ನಾಶ್ರಮಂ ಪಾಂಡವಾನ್ ಪ್ರತಿ ।**
**ಧೃತರಾಷ್ಟ್ರೋ ಮಹಾಪ್ರಾಜ್ಞಃ ಪರ್ಯತಪ್ಯತ ದುರ್ಮನಾಃ** ॥೧॥

ಎಲೈ ರಾಜನೇ! ಪಾಂಡವರನ್ನು ನೋಡಲು ವಿದುರನು ಕಾಮ್ಯಕವನದ ಆಶ್ರಮಕ್ಕೆ ಹೋಗುತ್ತಿರಲು ಮಹಾಪ್ರಾಜ್ಞನಾದ ಧೃತರಾಷ್ಟ್ರನು ವಿಷಣ್ಣವಾದ ಮನಸ್ಸಿನಿಂದ ಪರಿತಾಪವನ್ನು ಹೊಂದಿದನು.

ಸ ಸಭಾದ್ವಾರಮಾಗಮ್ಯ ವಿದುರಸ್ಮಾರಮೋಹಿತಃ ।
ಸಮಕ್ಷಂ ಪಾರ್ಥಿವೇಂದ್ರಾಣಾಂ ವಿಸಂಜ್ಞಃ ಪ್ರಾಪತದ್ ಭುವಿ ॥೨॥

ಅವನು ಸಭಾದ್ವಾರಕ್ಕೆ ಬಂದು ವಿದುರನ ಸ್ಮರಣೆಯಿಂದ ಮೋಹಕ್ಕೆ ಒಳಗಾಗಿ ಎಲ್ಲ ರಾಜರ ಕಣ್ಣೆದುರಿಗೆ ಜ್ಞಾನವನ್ನು ಕಳೆದುಕೊಂಡು ನೆಲದಲ್ಲಿ ಬಿದ್ದನು.

ಸ ತು ಲಬ್ಧ್ವಾ ಚಿರಾತ್ ಸಂಜ್ಞಾಂ ಸಮುತ್ಥಾಯ ಮಹೀತಲಾತ್ ।
ಸಮೀಪೋಪಸ್ಥಿತಂ ರಾಜಾ ಸಂಜಯಂ ವಾಕ್ಯಮಬ್ರವೀತ್ ॥೩॥

ಬಹಳ ಕಾಲದ ಮೇಲೆ ಅವರು ಸಂಜ್ಞೆಯನ್ನು ಮರಳಿಪಡೆದು ಭೂಮಿಯಿಂದ ಎದ್ದು ಸಮೀಪದಲ್ಲಿ ಇದ್ದ ಸಂಜಯನನ್ನು ಕುರಿತು ಹೀಗೆ ಮಾತನಾಡಿದನು.

ಭ್ರಾತಾ ಮಮ ಸುಹೃಚ್ಚೈವ ಸಾಕ್ಷಾದ್ಧರ್ಮ ಇವಾಪರಃ ।
ತಸ್ಯ ಸ್ಮೃತ್ಯಾऽದ್ಯ ಹೃದಯಂ ಸುಭೃಶಂ ದೀರ್ಯತೇ ಮಮ ॥೪॥

ನನ್ನ ತಮ್ಮನೂ ಮತ್ತು ವಿಶ್ವಾಸಪಾತ್ರನೂ ಆದ ವಿದುರನು ಇನ್ನೊಬ್ಬ ಸಾಕ್ಷಾತ್ ಧರ್ಮದೇವತೆಯಂತೆ ಇದ್ದಾನೆ. ಅವನ ಸ್ಮರಣೆಯಿಂದ ಈ ದಿನ ನನ್ನ ಹೃದಯವು ಬಹಳ ಬಿರಿದು ಹೋಗುತ್ತಿದೆ.

ತಮಾನಯಸ್ವ ಧರ್ಮಜ್ಞಂ ಮಮ ಭ್ರಾತರಮಾಶು ವೈ ।
ಇತಿ ಬ್ರುವನ್ ಸಂತಪತಿ ಕರುಣಂ ಪರ್ಯದೇವಯತ್ ॥೫॥

ಅಂತಹ ಧರ್ಮಜ್ಞನಾದ ನನ್ನ ತಮ್ಮನನ್ನು ಬೇಗ ಕರೆದುಕೊಂಡು ಬಾ ಎಂದು ಹೇಳುತ್ತಾ ಕರುಣಾ ಜನಕವಾಗಿ ಗೋಳಾಡುತ್ತಾ ಸಂತಾಪಪಟ್ಟನು.

ಪಶ್ಚಾತ್ತಾಪಾಭಿಸಂತಪ್ತೋ ವಿದುರಸ್ಮಾರಕರ್ಶಿತಃ ।
ಭ್ರಾತೃಸ್ನೇಹಾದಿದಂ ರಾಜಾ ಸಂಜಯಂ ವಾಕ್ಯಮಬ್ರವೀತ್ ॥೬॥

ಪಶ್ಚಾತ್ತಾಪದಿಂದ ಬೆಂದುಹೋದ ಧೃತರಾಷ್ಟ್ರರಾಜನು ವಿದುರನ ಸ್ಮರಣೆಯಿಂದ ದುಃಖಿತನಾಗಿ ತಮ್ಮನ ಮೇಲಿನ ಸ್ನೇಹದಿಂದ ಸಂಜಯನನ್ನು ಕುರಿತು ಈ ಮಾತನ್ನು ಆಡಿದನು.

ಗಚ್ಛ ಸಂಜಯ ಜಾನೀಹಿ ಭ್ರಾತರಂ ವಿದುರಂ ಮಮ ।
ಮಯಾ ಮೂಢೇನ ನಿಕೃತಃ ಕಚ್ಚಿಜ್ಜೀವತಿ ವಾ ನ ವಾ ॥೭॥

ಎಲೈ ಸಂಜಯನೇ! ನೀನು ಹೋಗಿ ಮೂಢನಾದ ನನ್ನಿಂದ ಅಪಕೃತನಾದ ವಿದುರನು ಬದುಕಿದ್ದಾನೆಯೋ ಅಥವಾ ಇಲ್ಲವೋ ಎಂದು ತಿಳಿ.

ನಹಿ ತೇನ ಮಮ ಭ್ರಾತ್ರಾ ಸುಸೂಕ್ಷ್ಮಮಪಿ ಕಿಂಚನ ।
ವ್ಯಲೀಕಂ ಕೃತಪೂರ್ವಂ ಮೇ ಪ್ರಾಜ್ಞೇನಾಮಿತಬುದ್ಧಿನಾ ॥೮॥

ನನ್ನ ತಮ್ಮನೂ ಅಮಿತಬುದ್ಧಿಯೂ ಪ್ರಾಜ್ಞನೂ ಆದ ಅವನು ಹಿಂದೆಂದೂ ಸಹ ನನಗೆ ಅಲ್ಪವಾದ ಅಪ್ರಿಯವನ್ನೂ ಉಂಟುಮಾಡಿಲ್ಲ.

ಸ ವ್ಯಲೀಕಂ ಕಥಂ ಪ್ರಾಪ್ತೋ ಮತ್ತಃ ಪರಮಬುದ್ಧಿಮಾನ್ ।
ನ ಜಹ್ಯಾಜ್ಜೀವಿತಂ ಪ್ರಾಜ್ಞಸ್ತಂ ಗಚ್ಛಾನಯ ಸಂಜಯ ॥೯॥

ಪರಮಮೇಧಾವಿಯಾದ ಅವನು ನನ್ನಿಂದ ಅಪಕೃತನಾಗಿ ತನ್ನ ಜೀವಿತವನ್ನು ತೊರೆಯಬಾರದು. ಸಂಜಯನೇ ಹೋಗಿ ಪ್ರಾಜ್ಞನಾದ ಅವನನ್ನು ಕರೆದುಕೊಂಡು ಬಾ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ರಾಜ್ಞಸ್ತಮನುಮಾನ್ಯ ಚ ।
ಸಂಜಯೋ ಬಾಢಮಿತ್ಯುಕ್ತ್ವಾ ಪ್ರಾದ್ರವತ್ ಕಾಮ್ಯಕಂ ವನಮ್ ॥೧೦॥

ರಾಜನ ಆ ಮಾತುಗಳನ್ನು ಕೇಳಿ ರಾಜನ ಅನುಮತಿಯನ್ನು ಪಡೆದು ಹಾಗೆಯೇ ಮಾಡುತ್ತೇನೆ ಎಂದು ಹೇಳಿ ಸಂಜಯನು ಕಾಮ್ಯಕವನಕ್ಕೆ ಶೀಘ್ರವಾಗಿ ಹೊರಟು ಬಂದನು.

ಸೋಽಚಿರೇಣ ಸಮಾಸಾದ್ಯ ತದ್ವನಂ ಯತ್ರ ಪಾಂಡವಾಃ ।
ರೌರವಾಜಿನಸಂವೀತಂ ದದರ್ಶಾಥ ಯುಧಿಷ್ಠಿರಮ್ ॥೧೧॥

ಅವನು ಶೀಘ್ರವಾಗಿ ಪಾಂಡವರಿದ್ದವನಕ್ಕೆ ಬಂದು ರೌರವಾಜಿನವನ್ನು ಧರಿಸಿದ್ದ ಯುಧಿಷ್ಠಿರನನ್ನು ನೋಡಿದನು.

ವಿದುರೇಣ ಸಹಾಸೀನಂ ಬ್ರಾಹ್ಮಣೈಶ್ಚ ಸಹಸ್ರಶಃ ।
ಭ್ರಾತೃಭಿಶ್ಚಾಭಿಸಂಗುಪ್ತಂ ದೇವೈರಿವ ಶತಕ್ರತುಮ್ ॥೧೨॥

ವಿದುರನ ಜೊತೆಯಲ್ಲಿ ಸಹಸ್ರಾರು ಬ್ರಾಹ್ಮಣರಿಂದ ಪರಿವೃತನಾಗಿ ತನ್ನ ತಮ್ಮಂದಿರಿಂದ ರಕ್ಷಿಸಲ್ಪಟ್ಟ ದೇವತೆಗಳಿಂದ ಸುತ್ತುವರೆಯಲ್ಪಟ್ಟ ಇಂದ್ರನಂತಿರುವ ಧರ್ಮರಾಜನನ್ನು ನೋಡಿದನು.

ಯುಧಿಷ್ಠಿರಮಥಾಭ್ಯೇತ್ಯ ಪೂಜಯಾಮಾಸ ಸಂಜಯಃ ।
ಭೀಮಾರ್ಜುನಯಮಾಂಶ್ಚಾಪಿ ತದರ್ಹಂ ಪ್ರತ್ಯಪದ್ಯತ ॥೧೩॥

ಅನಂತರ ಸಂಜಯನು ಯುಧಿಷ್ಠಿರನನ್ನು ಸಮೀಪಿಸಿ ಅವನ್ನು ಸತ್ಕರಿಸಿದನು. ಭೀಮಾರ್ಜುನನಕುಲ ಸಹದೇವರನ್ನು ಯಥಾಯೋಗ್ಯವಾಗಿ ಸಮೀಪಿಸಿದನು.

ರಾಜ್ಞಾ ಪೃಷ್ಟಃ ಸ ಕುಶಲಂ ಸುಖಾಸೀನಶ್ಚ ಸಂಜಯಃ ।
ಶಶಂಸಾಗಮನೇ ಹೇತುಮಿದಂ ಚೈವಾಬ್ರವೀದ್ ವಚಃ ॥೧೪॥

ಸುಖವಾಗಿ ಕುಳಿತ ಸಂಜಯನು ರಾಜನಿಂದ ಕುಶಲಪ್ರಶ್ನೆಯನ್ನು ಮಾಡಲ್ಪಟ್ಟು ತಾನು ಅಲ್ಲಿಗೆ ಬರಲು ಪಾಂಡವರ ದರ್ಶನಲಾಭವೇ ಪರಮ ಪ್ರಯೋಜನ ಎಂದು ಹೇಳಿ ಈ ಮಾತನ್ನು ಆಡಿದನು.

ರಾಜಾ ಸ್ಮರತಿ ತೇ ಕ್ಷತ್ತಃ ಧೃತರಾಷ್ಟ್ರೋಽಂಬಿಕಾಸುತಃ ।
ತಂ ಪಶ್ಯ ಗತ್ವಾ ತ್ವಂ ಕ್ಷಿಪ್ರಂ ಸಂಜೀವಯ ನರಾಧಿಪಮ್ ॥೧೫॥

ಎಲೈ ವಿದುರನೇ! ಅಂಬಿಕಾಸುತನಾದ ಧೃತರಾಷ್ಟ್ರರಾಜನು ನಿನ್ನನ್ನು ಸ್ಮರಿಸುತ್ತಿದ್ದಾನೆ. ಬೇಗ ಹೋಗಿ ರಾಜನನ್ನು ನೋಡಿ ಅವನನ್ನು ಉಜ್ಜೀವನಗೊಳಿಸು.

ಸೋಽನುಮಾನ್ಯ ಕುರುಶ್ರೇಷ್ಠಾನ್ ಪಾಂಡವಾನ್ ಕುರುನಂದನಾನ್ ।
ನಿಯೋಗಾದ್ ರಾಜಸಿಂಹಸ್ಯ ಗಂತುಮರ್ಹಸಿ ಮಾನದ ॥೧೬॥

ಎಲೈ ಮಾನದನೇ! ಅಂತಹ ನೀನು ಕುರುನಂದನರಾದ ಮತ್ತು ಕುರುಶ್ರೇಷ್ಠರಾದ ಪಾಂಡವರ ಅನುಮತಿಯನ್ನು ಪಡೆದು ರಾಜಸಿಂಹನಾದ ಧೃತರಾಷ್ಟ್ರನ ಆಪ್ತೆಯಂತೆ ಇಲ್ಲಿಂದ ಹೊರಡಬೇಕು.

ಏವಮುಕ್ತಸ್ತು ವಿದುರೋ ಧೀಮಾನ್ ಸ್ವಜನವತ್ಸಲಃ ।
ಯುಧಿಷ್ಠಿರಸ್ಯಾನುಮತೇ ಪುನರಾಯಾದ್ ಗಜಾಹ್ವಯಮ್ ॥೧೭॥

ಹೀಗೆ ಹೇಳಲ್ಪಟ್ಟ ಮೇಧಾವಿಯೂ ಸುಜನವತ್ಸಲನೂ ಆದ ವಿದುರನು ಯುಧಿಷ್ಠಿರನ ಅನುಮತಿಯನ್ನು ಪಡೆದು ಪುನಃ ಹಸ್ತಿನಾವತಿಗೆ ಬಂದನು.

ಸೋಽಭಿಗತ್ಯಾ ತದಾ ವೇಶ್ಮ ರಾಜ್ಞಃಸಮಭಿವಾದ್ಯ ಚ ।
ಉಪಾತಿಷ್ಠನ್ಮಹಾತ್ಮಾನಂ ರಾಜಾನಂ ಪ್ರತ್ಯವರ್ತತ ।
ತಮಬ್ರವೀನ್ಮಹಾಪ್ರಾಜ್ಞೋ ಧೃತರಾಷ್ಟ್ರೋಽಂಬಿಕಾಸುತಃ ॥೧೮॥

ಅವನು ರಾಜನ ಅಂಮನೆಗೆ ಹೋಗಿ ಅವನಿಗೆ ನಮಸ್ಕರಿಸಿ ಮಹಾತ್ಮನಾದ ಆ ರಾಜನ ಸಮೀಪದಲ್ಲಿ ನಿಂತನು. ಮಹಾಪ್ರಾಜ್ಞನಾದ ಅಂಬಿಕಾಸುತನಾದ ಧೃತರಾಷ್ಟ್ರನು ಅವನನ್ನು ಕುರಿತು ಮಾತನಾಡಿದನು.

ದಿಷ್ಟ್ಯಾ ಪ್ರಾಪ್ತೋಽಸಿ ಧರ್ಮಜ್ಞ ದಿಷ್ಟ್ಯಾ ಸ್ಮರಸಿ ಮೇಽನಘ ।
ಅದ್ಯ ರಾತ್ರೌ ದಿವಾ ಚಾಹಂ ತ್ವತ್ಕೃತೇ ಭರತರ್ಷಭ ।
ಪ್ರಜಾಗರೇ ಪ್ರಪಶ್ಯಾಮಿ ವಿಚಿತ್ರಂ ದೇಹಮಾತ್ಮನಃ ॥೧೯॥

ಎಲೈ ಧರ್ಮಜ್ಞನೇ! ದೇವರದಯೆಯಿಂದ ಇಲ್ಲಿಗೆ ಬಂದಿದ್ದೀಯೆ. ಎಲೈ ಪರಿಶುದ್ಧನೇ ನನ್ನನ್ನು ಸ್ಮರಿಸುತ್ತಿದ್ದೀಯೆ. ಎಲೈ ಭರತವಂಶದಲ್ಲಿ ಶ್ರೇಷ್ಠನೇ! ದಿನ ಹಗಲೂ ಮತ್ತು ರಾತ್ರಿಯೂ ನಿನ್ನನ್ನು ಚಿಂತಿಸುತ್ತಾ ನಿದ್ರೆಯನ್ನು ಮಾಡದೆ ನನ್ನ ದೇಹವು ವಿಚಿತ್ರವಾಗಿರುವುದನ್ನು ನೋಡುತ್ತಿದ್ದೇನೆ.

ವೈಶಂಪಾಯನಃ

ಸೋಽಂಕಮಾರೋಪ್ಯ ವಿದುರಂ ಮೂರ್ಧ್ನ್ಯುಪಾಘ್ರಾಯ ಚೈವ ಹ ।
ಕ್ಷಮ್ಯತಾಮಿತಿ ಹೋವಾಚ ಯದುಕ್ತೋಽಸಿ ಮಯಾ ರುಷಾ ॥೨೦॥

ಅವನು ವಿದುರನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ಶಿರಸ್ಸನ್ನು ಆಘ್ರಾಣಿಸಿ ನಾನು ಕೋಪದಲ್ಲಿ ಆಡಿದ ಮಾತುಗಳಿಗೋಸ್ಕರ ನನ್ನನ್ನು ಕ್ಷಮಿಸು ಎಂದು ಹೇಳಿದನು.

ವಿದುರಃ

ಕ್ಷಾಂತಮೇವ ಮಯಾ ರಾಜನ್ ಗುರುರ್ನಃ ಪರಮೋ ಭವಾನ್।
ತಥಾऽಹಮಾಗತಃ ಕ್ಷಿಪ್ರಂ ತ್ವದ್ದರ್ಶನಪರಾಯಣಃ ॥೨೧॥

ಎಲೈ ರಾಜನೇ! ನಾನು ಯಾವಾಗಲೋ ಕ್ಷಮಿಸಿದ್ದೇನೆ. ನೀನು ನಮ್ಮೆಲ್ಲರಿಗೂ ಶ್ರೇಷ್ಠವಾದ ಗುರುವಾದವನು. ನಾನೂ ಸಹ ನಿನ್ನನ್ನು ನೋಡುವ ತವಕದಿಂದಲೇ ಶೀಘ್ರವಾಗಿ ಬಂದಿದ್ದೇನೆ.

ಭವಂತಿ ಹಿ ಕುರುಶ್ರೇಷ್ಠ ಪುರುಷಾ ಧರ್ಮವೇತನಾಃ ।
ದೀನಾನುಪಾತಿನೋ ರಾಜನ್ ನಾತ್ರ ಕಾರ್ಯಾ ವಿಚಾರಣಾ ॥೨೨॥

ಎಲೈ ಕುರುಶ್ರೇಷ್ಠನೇ! ರಾಜನೇ! ಧರ್ಮವನ್ನೇ ಜೀವನೋಪಾಯನ್ನಾಗಿ ಮಾಡಿಕೊಂಡ ಸಜ್ಜನರು ದೀನಾನುಕಂಪಿಗಳಾಗಿರುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ. ವಿಚಾರಮಾಡಬೇಕಾದ ಅಗತ್ಯವಿಲ್ಲ.

ಪಾಂಡವಾ ಯಾದೃಶಾ ಮೇ ವೈ ತಾದೃಶಾಸ್ತೇ ಮತಾ ಮಮ ।
ಪಾಂಡೋಃ ಪುತ್ರಾ ಯಾದೃಶಾಸ್ತೇ ತಾದೃಶಾ ಮೇ ಸುತಾಸ್ತವ ।
ದೀನಾ ಇತಿ ಹಿ ಮೇ ಬುದ್ಧಿರಭಿಪನ್ನಾऽದ್ಯ ತಾನ್ ಪ್ರತಿ ॥೨೩॥

ನನಗೆ ಪಾಂಡವರು ಯಾವ ರೀತಿಯೋ ನಿನ್ನ ಮಕ್ಕಳೂ ಸಹ ಅದೇ ರೀತಿ. ಪಾಂಡುವಿನ ಮಕ್ಕಳು ಯಾವ ರೀತಿಯೋ ನಿನ್ನ ಮಕ್ಕಳೂ ಸಹ ಅದೇ ರೀತಿ. ಪಾಂಡವರು ಕಷ್ಟದಲ್ಲಿ ಇದ್ದಾರೆ ಎಂಬ ಕಾರಣದಿಂದ ನನ್ನ ಬುದ್ಧಿಯು ಅವರೆಡೆಗೆ ಹೋಯಿತು.

ವೈಶಂಪಾಯನಃ

ಅನ್ಯೋನ್ಯಮನುನೀಯೈವಂ ಭ್ರಾತರೌ ತೌ ಮಹಾದ್ಯುತೀ ।
ವಿದುರೋ ಧೃತರಾಷ್ಟ್ರಶ್ಚ ಲೇಭಾತೇ ಪರಮಾಂ ಮುದಮ್ ॥೨೪॥

ಹೀಗೆ ಮಹಾತೇಜಸ್ಸಳ್ಳ ಅಣ್ಣತಮ್ಮಂದಿರಾದ ಆ ವಿದುರಧೃತರಾಷ್ಟ್ರರು ಪರಸ್ಪರವಾಗಿ ಸಮಾಧಾನಮಾಡಿಕೊಂಡು ಬಹಳ ಸಂತೋಷವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಷ್ಠೋಽಧ್ಯಾಯಃ ॥
॥ ಆರಣ್ಯಕಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★★★★★

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಅಂಕಂ ಸಮಾರೋಪ್ಯಸ ಮೂರ್ಧ್ನಿ ಚೈನ-
ಮಾಘ್ರಾಯ ಲೇಭೇ ಪರಮಾಂ ಮುದಂ ತದಾ ।
ಕ್ಷತ್ತಾರಮಾಯಾಂತಮುದೀಕ್ಷ್ಯ ಸರ್ವೇ
ಸಸೌಬಲಾ ಧಾರ್ತರಾಷ್ಟ್ರಾ ಅಮರ್ಷಾತ್ ।
ಸಂಮಂತ್ರ್ಯ ಹಂತುಂ ಪಾಂಡವಾನಾಮುತೈಕಂ
ಛನ್ನೋಪಧೇನೈವ ಸಸೂತಜಾ ಯಯುಃ ॥೧೪॥

ಧೃತರಾಷ್ಟ್ರವಿದುರನನ್ನು ತೊಡೆಯ ಮೇಲೇರಿಸಿಕೊಂಡು ನೆತ್ತಿಯಲ್ಲಿ ಆಘ್ರಾಣನ ಮಾಡಿ ಪರಮಾನಂದ ಹೊಂದಿದ. ಆದರೆ ವಿದುರ ಪುನಃ ಬರುವುದನ್ನು ಕಂಡು ಅಸಹನೆಯಿಂದ ಶಕುನಿಯೂ ಎಲ್ಲ ಕೌರವರೂ ಮಂತ್ರಾಲೋಚನ ಮಾಡಿ ಪಾಂಡವರಲ್ಲಿ ಒಬ್ಬರನ್ನಾದರೂ ಕೊಲ್ಲುವುದಕ್ಕಾಗಿ, ಈ ದುರುದ್ದೇಶ ಯಾರಿಗೂ ತಿಳಿಯದಂತೆ ಆರಣ್ಯದರ್ಶನದ ನೆಪದಿಂದ ಕರ್ಣನೊಂದಿಗೆ ಹೊರಟರು.

ವಿಜ್ಞಾಯ ತೇಷಾಂ ಗಮನಂ ಸಮಸ್ತ-
ಲೋಕಾಂತರಾತ್ಮಾ ಪರಮೇಶ್ವರೇಶ್ವರಃ ।

ವ್ಯಾಸೋಽಭಿಗಮ್ಯಾವದದಾಂಬಿಕೇಯಂ
ನಿವಾರಯಾಶ್ವೇವ ಸುತಂ ತವೇತಿ ॥೧೫॥

ಕೌರವರು ದುರುದ್ದೇಶದಿಂದ ಕಾಮ್ಯಕವನಕ್ಕೆ ಹೊರಟದ್ದನ್ನು ಸಕಲ ಲೋಕದ ಅಂತರಾತ್ಮರಾದ ಪರಮೇಶ್ವರನಿಗೂ ಈಶ್ವರರಾದ ವೇದವ್ಯಾಸರು ತಿಳಿದು ಧೃತರಾಷ್ಟ್ರನ ಬಳಿ ಹೋಗಿ ನಿನ್ನ ಮಗನನ್ನು ಬೇಗನೆ ತಡೆದು ನಿಲ್ಲಿಸು ಎಂದರು.

ಅವಾಪ್ಯ ಪಾರ್ಥಾನಯಮದ್ಯ ಮೃತ್ಯುಂ
ಸಹಾನುಬಂಧೋ ಗಮಿತಾ ಹ್ಯಸಂಶಯಂ ।
ಇತೀರಿತೇ ತೇನ ನಿವಾರಯೇತಿ
ಪ್ರೋಕ್ತೋ ಹರಿಃ ಪ್ರಾಹ ನ ಸಂವದೇ ತೈಃ ॥೧೬॥

ಈತ ಪಾಂಡವರನ್ನು ಕೊಲ್ಲಲು ಹೋಗಿ ತಾನೇ ಪರಿವಾರ ಸಮೇತನಾಗಿ ಈಗಲೇ ಮರಣ ಹೊಂದುತ್ತಾನೆ. ಸಂಶಯವಿಲ್ಲ' ಎಂದು ವೇದವ್ಯಾಸರು ಹೇಳಿದಾಗ 'ನೀನೆ ತಡೆ' ಎಂದ ಧೃತರಾಷ್ಟ್ರ. ಆದರೆ ವೇದವ್ಯಾಸರು ಹೇಳಿದರು 'ನಾನು ಅವರೊಡನೆ ಮಾತನಾಡೆನು'.

ಮೈತ್ರೇಯ ಆಯಾಸ್ಯತಿ ಸೋಽಪಿ ವಾಚಂ
ಶಿಕ್ಷಾರ್ಥಮೇತೇಷ್ವಭಿಧಾಸ್ಯತೀಹ ।
ತಾಂ ಚೇತ್ ಕರೋತ್ಯೇಷ ಸುತಸ್ತವಾಸ್ಯ
ಭದ್ರಂ ತದಾ ಶಪ್ಸ್ಯತಿ ತ್ವನ್ಯಥಾ ಸಃ ॥೧೭॥

'ಮೈತ್ರೇಯ ಮುನಿ ಬರುತ್ತಾನೆ, ಬುದ್ಧಿ ಹೇಳುತ್ತಾನೆ. ನಿನ್ನ ಮಗ ಅವನ ಮಾತಿನಂತೆ ನಡೆದುಕೊಂಡರೆ ಒಳ್ಳೆಯದು. ಇಲ್ಲದಿದ್ದಲ್ಲಿ ಅವನು ಶಪಿಸುತ್ತಾನೆ'.

ಉಕ್ತ್ವೇತಿ ರಾಜಾನಮನಂತಶಕ್ತಿ-
ರ್ವ್ಯಾಸೋ ಯಯೌ ತತ್ರ ಗತೇಷು ತೇಷು ।
ಸುಯೋಧನಾದ್ಯೇಷು ಹತೇಷು ಪಾರ್ಥೈ
ರ್ಭೂಭಾರಹಾನಿರ್ನ ಭವೇದಿತಿ ಪ್ರಭುಃ ॥೧೮॥

ಅನಂತಶಕ್ತಿ ಉಳ್ಳ ವೇದವ್ಯಾಸರು ಧೃತರಾಷ್ಟ್ರನಿಗೆ ಹೀಗೆ ಹೇಳಿ ಹೊರಟು ಹೋದರು. ದುರ್ಯೋಧನ ಮುಂತಾದವರು ಕಾಡಿಗೆ ಹೋಗಿ ಪಾಂಡವರಿಂದ ಹತರಾದರೆ ಭೂಭಾರ ನಾಶವಾದಂತಾಗದೆಂದು ಪ್ರಭು ವೇದವ್ಯಾಸರು ತಡೆದು ನಿಲ್ಲಿಸಲು ಹೇಳಿದರು.

ಸರ್ವಾಶ್ಚ ಚೇಷ್ಟಾ ಭಗವನ್ನಿಯುಕ್ತಾಃ
ಸದಾ ಸಮಸ್ತಸ್ಯ ಚಿತೋಽಚಿತಶ್ಚ ।
ತಥಾಪಿ ವಿಷ್ಣುರ್ವಿವಾರಯೇತ್ಕ್ವಚಿದ್-
ವಾಚಾ ವಿಧತ್ತೇ ಚ ಜನಾನ್ ವಿಡಂಬಯನ್ ॥೧೯॥

ಎಲ್ಲ ಚೇತನ ಅಚೇತನಗಳ ಎಲ್ಲ ವ್ಯಾಪಾರಗಳೂ ಸದಾ ಅಂತರ್ಯಾಮಿಯಾದ ಭಗವಂತನಿಂದಲೇ ಪ್ರೇರಿತವಾಗಿರುತ್ತವೆ. ಆದರೂ ಅವನು ಕೆಲವೊಮ್ಮೆ ಅಕಾರ್ಯ ನಡೆಯುತ್ತಿದ್ದರೆ ಮಾತಿನಿಂದಲೇ ತಡೆಯುತ್ತಾನೆ. ಸತ್ಕಾರ್ಯವಾಗಿದ್ದರೆ ಮಾತಿನಿಂದಲೇ ವಿಧಿಸುತ್ತಾನೆ. ಇದು ಲೋಕದ ಜನರನ್ನು ಅನುಕರಿಸುವುದಕ್ಕಾಗಿ.

ಮೈತ್ರೇಯ ಆಗಾದಥ ಭೂಪತಿಶ್ಚ
ಪುತ್ರಾನ್ ಸಮಾಹೂಯ ಸಕರ್ಣಸೌಬಲಾನ್ ।
ಸಂಪೂಜಯಾಮಾಸ ಮುನಿಂ ಸ ಚಾಹ
ದಾತುಂ ರಾಜ್ಯಂ ಪಾಂಡವಾನ್ ಸಂಪ್ರಶಂಸನ್ ॥೨೦॥

ಬಳಿಕ ಮೈತ್ರೇಯ ಮುನಿ ಬಂದ. ಧೃತರಾಷ್ಟ್ರ ತನ್ನ ಮಕ್ಕಳನ್ನು ಕರ್ಣ ಶಕುನಿಗಳನ್ನೂ ಕರೆದು ಅವರೊಂದಿಗೆ ಕೂಡಿ ಮುನಿಯನ್ನು ಸತ್ಕರಿಸಿದ. ಮುನಿ ಪಾಂಡವರನ್ನು ಹೊಗಳುತ್ತ ಅವರಿಗೆ ರಾಜ್ಯವನ್ನು ಕೊಡಲು ಹೇಳಿದ.

ವಿಶೇಷತೋ ಭೀಮಬಲಂ ಶಶಂಸ
ಕಿರ್ಮೀರಾನಾಶಾದಿ ವದನ್ ಮುನೀಂದ್ರಃ ।
ಶ್ರುತ್ವಾಹಸಂಸ್ತದ್ ಧೃತರಾಷ್ಟ್ರಪುತ್ರ
ಆಸ್ಫಾಲಯಾಮಾಸ ನಿಜೋರುಮುಗ್ರಃ ॥೨೧॥

ಮುನೀಶ್ವರನಾದ ಮೈತ್ರೇಯ ಕಿರ್ಮೀರ ವಧೆ ಮುಂತಾದುವನ್ನು ವರ್ಣಿಸುತ್ತ ವಿಶೇಷವಾಗಿ ಭೀಮನ ಬಲವನ್ನು ಹೊಗಳಿದ. ಕ್ರೂರ ದುರ್ಯೋಧನ ಅದನ್ನು ಕೇಳಿ ಸಹಿಸದೆ ತನ್ನ ತೊಡೆಯನ್ನು ತಟ್ಟಿಕೊಂಡ.

ಶಶಾಪ ಚೈನಂ ಮುನಿರುಗ್ರತೇಜಾ-
ಸ್ತವೋರುಭೇದಾಯ ಭವೇತ್‌ಸುಯುದ್ಧಂ ।
ಇತ್ಯೂಚಿವಾನ್ ಧೃತರಾಷ್ಟ್ರನತೋಽಪಿ
ಯಯೌ ನ ಚೇದ್ ರಾಜ್ಯದಸ್ತ್ವಂ ತಥೇತಿ ॥೨೨॥

ಭಯಂಕರ ತೇಜಸ್ವಿಯಾದ ಮೈತ್ರೇಯ ದುರ್ಯೋಧನನನ್ನು ಶಪಿಸಿದ. 'ಭೀಮನೊಡನೆ ನಿನಗೆ ಒಂದು ಮಹಾಯುದ್ಧ ನಡೆಯುವುದು. ಅದರಲ್ಲಿ ನಿನ್ನ ತೊಡೆ ಮುರಿಯುವುದು' ಎಂದು. ಬಳಿಕ ಧೃತರಾಷ್ಟ್ರನಮಿಸಿದರೂ 'ನೀನು ಪಾಂಡವರಿಗೆ ರಾಜ್ಯ ಕೊಡದಿದ್ದರೆ ನಾನು ಹೇಳಿದ್ದು ಆಗಿಯೇ ತೀರುವುದು' ಎಂದು ಹೇಳಿ ಹೊರಟು ಹೋದ.

★ ★ ★ ★

## ಏಳನೆಯ ಅಧ್ಯಾಯ

(ಹಿಂದಿರುಗಿದ ವಿದುರನನ್ನು ನೋಡಿ ದುರ್ಯೋಧನಾದಿಗಳ ಕುಮಂತ್ರ. ವ್ಯಾಸರ ಆಗಮನ)

### ವೈಶಂಪಾಯನಃ

ಶ್ರುತ್ವಾ ತು ವಿದುರಂ ಪ್ರಾಪ್ತಂ ರಾಜ್ಞಾ ತು ಪರಿಸಾಂತ್ವಿತಮ್ ।
ಧೃತರಾಷ್ಟ್ರಾತ್ಮಜೋ ರಾಜನ್ ಪರ್ಯತಪ್ಯತ ದುರ್ಮತಿಃ ॥೧॥

ಎಲೈ ರಾಜನೇ! ವಿದುರನು ಹಿಂದಿರುಗಿದುದನ್ನು ಮತ್ತು ಧೃತರಾಷ್ಟ್ರನಿಂದ ಸಾಂತ್ವನಗೊಳಿಸಲ್ಪಟ್ಟುದುದನ್ನು ಕೇಳಿ ದುರ್ಮತಿಯಾದ ದುರ್ಯೋಧನನು ಬಹಳವಾಗಿ ಪರಿತಪಿಸಿದನು.

ಸ ಸೌಬಲಂ ಸಮಾನಾಯ್ಯ ಕರ್ಣದುಶ್ಶಾಸನೌ ತಥಾ ।
ಅಬ್ರವೀದ್ ವಚನಂ ರಾಜಾ ಪ್ರವಿಶ್ಯಾಬುದ್ಧಿಜಂ ತಮಃ ॥೨॥

ಆ ರಾಜನಾದ ದುರ್ಯೋಧನನು ಶಕುನಿಯನ್ನು ಮತ್ತು ಕರ್ಣದುಶ್ಶಾಸನರನ್ನು ಕರೆಸಿ ಅವಿವೇಕದಿಂದ ಉಂಟಾದ ಅಜ್ಞಾನಕ್ಕೆ ವಶನಾಗಿ ಮಾತನಾಡಿದನು.

ಏಷ ಪ್ರತ್ಯಾಗತೋ ಮಂತ್ರೀ ಧೃತರಾಷ್ಟ್ರಸ್ಯ ಸಮ್ಮತಃ ।
ವಿದುರಃ ಪಾಂಡುಪುತ್ರಾಣಾಂ ಸುಹೃದ್ ವಿದ್ವಾನ್ ಹಿತೇ ರತಃ ॥೩॥

ಪಾಂಡುಪುತ್ರರ ಹಿತೈಷಿಯಾದ ಮತ್ತು ಅವರಿಗೆ ಪ್ರಿಯನಾದ ಮತ್ತು ಧೃತರಾಷ್ಟ್ರನಿಗೆ ಸಮ್ಮತನಾದ ಮಂತ್ರಿಯಾದ ಮೇಧಾವಿಯಾದ ಈ ವಿದುರನು ಹಿಂದಿರುಗಿ ಬಂದಿದ್ದಾನೆ.

ಯಾವದಸ್ಯ ಪುನರ್ಬುದ್ಧಿಂ ವಿದುರೋ ನಾಪಕರ್ಷತಿ ।
ಪಾಂಡವಾನಯನೇ ತಾವನ್ಮಂತ್ರಯಧ್ವಂ ಹಿತಂ ಮಮ ॥೪॥

ಎಲ್ಲಿಯವರೆಗೆ ವಿದುರನು ಈ ಧೃತರಾಷ್ಟ್ರನ ಬುದ್ಧಿಯನ್ನು ಕೆಡಿಸಿ ಪಾಂಡವರನ್ನು ಹಿಂದಿರುಗಿ ಕರೆದುಕೊಂಡು ಬರುವಂತೆ ಮಾಡುವುದಿಲ್ಲವೋ ಅಷ್ಟರೊಳಗೆ ನನ್ನ ಹಿತವನ್ನು ಕುರಿತು ಮಂತ್ರಾಲೋಚನೆಯನ್ನು ನಡೆಸಿ.

ಅಥ ಪಶ್ಯಾಮ್ಯಹಂ ಪಾರ್ಥಾನ್ ಪ್ರಾಪ್ತಾನಿಹ ಕಥಂಚನ ।
ಪುನಃ ಶೋಕಂ ಗಮಿಷ್ಯಾಮಿ ನಿರಾಸೂನ್ ನಿಷ್ಕೃತಿಗ್ರಹಾನ್ ॥೫॥

ಒಂದು ಪಕ್ಷ ನಾನು ಪುನಃ ಶತ್ರುಗಳನ್ನು ಸಂಹರಿಸುವ ಸ್ವಭಾವವುಳ್ಳ ನಿಷ್ಕೃತಿಗ್ರಹರಾದ ಪಾಂಡವರು ಇಲ್ಲಿಗೆ ಬಂದುದನ್ನು ನೋಡಿದರೆ ಪುನಃ ಶೋಕಕ್ಕೆ ಒಳಗಾಗುವೆನು.

ಕ್ಷಿಪ್ರಮುದ್ಬಂಧನಂ ಚೈವ ಶಸ್ತ್ರಮಗ್ನಿಪ್ರವೇಶನಮ್ ।
ಕರಿಷ್ಯೇ ನ ಹಿ ತಾನ್ ವೃದ್ಧಾನ್ ಪುನರ್ದ್ರಷ್ಟುಮಿಹೋತ್ಸಹೇ ॥೬॥

ತಕ್ಷಣ ನೇಣುಹಾಕಿಕೊಳ್ಳುತ್ತೇನೆ. ಅಥವಾ ಶಸ್ತ್ರದಿಂದ ಮರಣಹೊಂದುವೆನು. ಅಥವಾ ಅಗ್ನಿಪ್ರವೇಶವನ್ನು ಮಾಡುವೆನು. ಪುನಃ ಸಂವೃದ್ಧಿಯನ್ನು ಹೊಂದಿದ ಆ ಪಾಂಡವರನ್ನು ನಾನು ನೋಡಲಾರೆ.

ಶಕುನಿಃ

ಕಿಂ ಬಾಲಿಶಮತಿಂ ರಾಜನ್ನಾಸ್ಥಿತೋಽಸಿ ವಿಶಾಂಪತೇ ।
ಗತಾಸ್ತೇ ಸಮಯಂ ಕೃತ್ವಾ ನೈತದೇವಂ ಭವಿಷ್ಯತಿ ॥೭॥

ಎಲೈ ರಾಜನೇ! ಏಕೆ ಇಂತಹ ಹುಡುಗಬುದ್ಧಿಯನ್ನು ಹೊಂದಿದ್ದೀಯೆ? ಅವರು ಶಪಥವನ್ನು ಮಾಡಿ ಹೋಗಿದ್ದಾರೆ. ಹಿಂದಿರುಗಿ ಬರುವುದಿಲ್ಲ.

ಸತ್ಯವಾಕ್ಯೇ ಸ್ಥಿತಾಃ ಸರ್ವೇ ಪಾಂಡವಾ ಭರತರ್ಷಭ ।
ಪಿತುಸ್ತೇ ವಚನಂ ತಾತ ನ ಗ್ರಹೀಷ್ಯಂತಿ ಕರ್ಹಿಚಿತ್ ॥೮॥

ಎಲೈ ಭರತರ್ಷಭನೇ! ಪಾಂಡವರು ಸತ್ಯವಚನದಲ್ಲಿ ಸ್ಥಿರರಾದವರು. ಪ್ರೀತಿಪಾತ್ರನೇ ನಿನ್ನ ತಂದೆಯು ಹಿಂದೆ ಬರಬೇಕೆಂದು ಹೇಳಿದರೂ ಆ ಮಾತುಗಳನ್ನು ಅವರು ಸ್ವೀಕರಿಸುವುದಿಲ್ಲ.

ಅಥವಾ ತೇ ಗ್ರಹೀಷ್ಯಂತಿ ಪುನರೇಷ್ಯಂತಿ ವಾ ಗೃಹಮ್ ।
ನಿರಸ್ಯ ಸಮಯಂ ಭೂಯಃ ಪಣೋಽಸ್ಮಾಕಂ ಭವಿಷ್ಯತಿ ॥೯॥

ಅಥವಾ ಅವರು ಧೃತರಾಷ್ಟ್ರನ ಮಾತನ್ನು ಸ್ವೀಕರಿಸಿ ತಮ್ಮ ಶಪಥವನ್ನು ಮುರಿದು ಪುನಃ ಅರಮನೆಗೆ ಹಿಂದಿರುಗಿದರೆ ನಾವು ಪುನಃ ದ್ಯೂತವನ್ನು ಆಡೋಣ.

ಸರ್ವೇ ಭವಾಮೋ ಮಧ್ಯಸ್ಥಾ ರಾಜ್ಞಶ್ಛಂದಾನುವರ್ತಿನಃ ।
ಛಿದ್ರಂ ಬಹು ಪ್ರಪಶ್ಯಂತಃ ಪಾಂಡವಾನಾಂ ಸುಸಂವೃತಾಃ ॥೧೦॥

ನಾವೆಲ್ಲರೂ ರಾಜನ ಅಭಿಪ್ರಾಯದಂತೆ ನಡೆದುಕೊಳ್ಳುತ್ತಾ ಮಧ್ಯಸ್ಥರಂತೆ ಇದ್ದು ಯಾರಿಗೂ ತಿಳಿಯದಂತೆ ಪಾಂಡವರ ದೌರ್ಬಲ್ಯವನ್ನು ಚೆನ್ನಾಗಿ ತಿಳಿಯೋಣ.

ದುಶ್ಶಾಸನಃ

ಏವಮೇತನ್ಮಹಾಪ್ರಾಜ್ಞ ಯಥಾ ವದಸಿ ಮಾತುಲ ।
ನಿತ್ಯಂ ಹಿ ಮೇ ಕಥಯತಸ್ತವ ಬುದ್ಧಿರ್ಹಿ ರೋಚತೇ ॥೧೧॥

ಎಲೈ ಮಹಾಪ್ರಾಜ್ಞನಾದ ಸೋದರಮಾವನೇ! ನೀನು ಆಡುವ ಮಾತು ಸರಿಯಾಗಿದೆ. ನೀನು ಹೀಗೆ ನಿತ್ಯವೂ ಮಾತನಾಡುವಾಗ ನಿನ್ನ ಬುದ್ಧಿಯು ನನಗೆ ಬಹಳವಾಗಿ ಹಿಡಿಸುತ್ತದೆ.

ಕರ್ಣಃ

ಕಾಮಮೀಕ್ಷಾಮಹೇ ಸರ್ವೇ ದುರ್ಯೋಧನ ತವೇಪ್ಸಿತಮ್ ।
ಏಕಮತ್ಯಂ ಹಿ ನೋ ರಾಜನ್ ಸರ್ವೇಷಾಮೇವ ಲಕ್ಷ್ಯತೇ ॥೧೨॥

ದುರ್ಯೋಧನನೇ! ನಾವೆಲ್ಲರೂ ನಿನ್ನ ಇಷ್ಟವನ್ನು ಚೆನ್ನಾಗಿ ಗಮನಿಸೋಣ. ಎಲೈ ರಾಜನೇ! ನಮ್ಮೆಲ್ಲರಿಗೂ ಈ ವಿಷಯದಲ್ಲಿ ಏಕಮತ್ಯವು ಕಂಡುಬರುತ್ತಿದೆ.

ವೈಶಂಪಾಯನಃ

ಏವಮುಕ್ತಸ್ತು ಕರ್ಣೇನ ರಾಜಾ ದುರ್ಯೋಧನಸ್ತದಾ ।
ನಾತಿಹೃಷ್ಟಮನಾಃ ಕ್ಷಿಪ್ರಮಭವತ್ ಸ ಪರಾಂಗ್ಮುಖಃ ॥೧೩॥

ಕರ್ಣನಿಂದ ಹೀಗೆ ಹೇಳಲ್ಪಟ್ಟ ರಾಜನಾದ ದುರ್ಯೋಧನನು ಮನಸ್ಸಿನಲ್ಲಿ ಸಂತೋಷಹೊಂದದೆ ಬೇಗ ಮುಖವನ್ನು ಬೇರೆಕಡೆಗೆ ತಿರುಗಿಸಿದನು.

ಉಪಲಭ್ಯ ತತಃ ಕರ್ಣೋ ವಿವೃತ್ಯ ನಯತೇ ಶುಭೇ ।
ರೋಷಾದ್ ದುಶ್ಶಾಸನಂ ಚೈವ ಸೌಬಲೇಯಂ ಚ ತಾವುಭೌ ॥೧೪॥

ಉವಾಚ ಪರಮಕ್ರುದ್ಧ ಉದ್ಯಮ್ಯಾತ್ಮಾನಮಾತ್ಮನಾ ।
ಅಹೋ ಮಮ ಮತಂ ಯತ್ತು ತನ್ನಿಬೋಧ ನರಾಧಿಪಾಃ ॥೧೫॥

ಅದನ್ನು ಗಮನಿಸಿದ ಕರ್ಣನು ತನ್ನ ಶುಭ್ರವಾದ ಕಣ್ಣುಗಳನ್ನು ಅಗಲವಾಗಿ ತೆರೆದು ರೋಷದಿಂದ ದುಶ್ಶಾಸನ ಮತ್ತು ಶಕುನಿಯನ್ನು ಉದ್ದೇಶಿಸಿ ತನ್ನ ಬಾಹುಗಳನ್ನು ತಾನೇ ಎತ್ತಿ ಪರಮಕ್ರುದ್ಧನಾಗಿ ಮಾತನಾಡಿದನು. ಎಲೈ ರಾಜರೇ! ನನ್ನ ಅಭಿಪ್ರಾಯವೇನಿದೆಯೋ ಅದನ್ನು ತಿಳಿಯಿರಿ.

ಪ್ರಿಯಂ ಸರ್ವೇ ಚಿಕೀರ್ಷಾಮೋ ರಾಜ್ಞಃ ಕಿಂ ಕರವಾಮಹೇ ।
ನ ಚಾಸ್ಯ ಶಕ್ನುಮಃ ಸರ್ವೇ ಹ್ಯವಸ್ಥಾತುಮತಂದ್ರಿತಾಃ ॥೧೬॥

ನಾವೆಲ್ಲರೂ ರಾಜನಿಗೆ ಪ್ರಿಯನ್ನು ಉಂಟುಮಾಡಲು ಬಯಸುತ್ತೇವೆ. ಬೇರೆ ಏನುಮಾಡಲು ಸಾಧ್ಯ? ಆದರೆ ಯಾವಾಗಲೂ ಜಾಗರೂಕರಾಗಿದ್ದು ರಾಜನಿಗೆ ಪ್ರಿಯವನ್ನು ಉಂಟುಮಾಡಲು ನಾವು ಶಕ್ತರಾಗಿಲ್ಲ.

ವಯಂ ತು ಶಸ್ತ್ರಾಣ್ಯಾದಾಯ ರಥಾನಾಸ್ಥಾಯ ದಂಶಿತಾಃ ।
ಗಚ್ಛಾಮಃ ಸಹಿತಾ ಹಂತುಂ ಪಾಂಡವಾನ್ ವನಗೋಚರಾನ್ ॥೧೭॥

ನಾವು ರಥಗಳನ್ನು ಸಜ್ಜುಗೊಳಿಸಿ ಶಸ್ತ್ರಗಳನ್ನು ತೆಗೆದುಕೊಂಡು ಕಾಡಿನಲ್ಲಿರುವ ಪಾಂಡವರನ್ನು ಕೊಲ್ಲಲು ಒಟ್ಟಿಗೆ ಹೋಗೋಣ.

ತೇಷು ಸರ್ವೇಷು ಶಾಂತೇಷು ಗತೇಷ್ವವಿದಿತಾಂ ಗತಿಮ್ ।
ನಿರ್ವಿಶಂಕಾ ಭವಿಷ್ಯಾಮೋ ಧಾರ್ತರಾಷ್ಟ್ರಾಸ್ತಥಾ ವಯಮ್ ॥೧೮॥

ಅವರೆಲ್ಲರೂ ನಾಶವನ್ನು ಹೊಂದಿ ಅಜ್ಞಾತಲೋಕವನ್ನು ಸೇರಿದ ಮೇಲೆ ನಾವು ಮತ್ತು ದುರ್ಯೋಧನಾದಿಗಳು ನಿರಾತಂಕವಾಗಿ ಇರುವೆವು.

ಯಾವದೇವ ಪರಿಮ್ಲಾನಾ ಯಾವಚ್ಚೋಕಪರಾಯಣಾಃ ।
ಯಾವನ್ಮಂತ್ರವಿಹೀನಾಶ್ಚ ತಾವದ್ ಗಚ್ಛಾಮ ಮಾಚಿರಮ್ ॥೧೯॥

ಎಲ್ಲಿಯವರೆಗೆ ಪಾಂಡವರು ಕೃಶರಾಗಿದ್ದು ಶೋಕಪರಾಯಣರಾಗಿದ್ದು ಮಂತ್ರಾಲೋಚನೆ ರಹಿತರಾಗಿರುತ್ತಾರೆಯೋ ಅಷ್ಟರೊಳಗೆ ಶೀಘ್ರವಾಗಿ ಪಾಂಡವರ ಮೇಲೆ ಎರಗೋಣ.

ತಸ್ಯ ತದ್ವಚನಂ ಶ್ರುತ್ವಾ ಪೂಜಯಂತಃ ಪುನಃ ಪುನಃ ।
ಪ್ರಸನ್ನಮನಸಃ ಸರ್ವೇ ಪ್ರತ್ಯೂಚುಃ ಸೂತಜಂ ತದಾ ॥೨೦॥

ಕರ್ಣನ ಮಾತುಗಳನ್ನು ಕೇಳಿ ಎಲ್ಲರೂ ಅವನನ್ನು ಮತ್ತೆ ಮತ್ತೆ ಸತ್ಕರಿಸಿ ಪ್ರಸನ್ನಮನಸ್ಕರಾಗಿ ಆಗ ಅವನನ್ನು ಕುರಿತು ಮಾತನಾಡಿದರು.

ಏತತ್ ಕೃತ್ಯತಮಂ ರಾಜ್ಞಃ ಕೌರವಸ್ಯ ಮಹಾತ್ಮನಃ ॥೨೧॥

ಮಹಾತ್ಮನಾದ ದುರ್ಯೋಧನರಾಜನ ಸಲುವಾಗಿ ಮಾಡಬೇಕಾದುದು ಇದೇ ಅತ್ಯಂತ ಶ್ರೇಷ್ಠವಾದ ಕಾರ್ಯ.

ವೈಶಂಪಾಯನಃ

ಏವಮುಕ್ತ್ವಾ ಸುಸಂಕ್ರುದ್ಧಾ ರಥೈಃ ಸರ್ವೇ ಪೃಥಕ್ಪೃಥಕ್ ।
ನಿರ್ಯಯುಃ ಪಾಂಡವಾನ್ ಹಂತುಂ ಸಂಘಶಃ ಕೃತನಿಶ್ಚಯಾಃ ॥೨೨॥

ಹೀಗೆ ಹೇಳಿ ಎಲ್ಲರೂ ಬಹಳ ಸಂಕ್ರುದ್ಧರಾಗಿ ಬೇರೆಬೇರೆ ರಥಗಳನ್ನು ಹೂಡಿ ಪಾಂಡವರನ್ನು ಕೊಲ್ಲಲು ಗುಂಪುಗುಂಪುಗಳಾಗಿ ಹೊರಟರು.

ತಾನ್ ಪ್ರಸ್ಥಿತಾನ್ ಪರಿಜ್ಞಾಯ ಕೃಷ್ಣದ್ವೈಪಾಯನಸ್ತದಾ ।
ಆಜಗಾಮ ಮಹಾಯೋಗೀ ದೃಷ್ಟ್ವಾ ದಿವ್ಯೇನ ಚಕ್ಷುಷಾ ॥೨೩॥

ಆಗ ಮಹಾಯೋಗೀಶ್ವರರಾದ ವೇದವ್ಯಾಸರು ತಮ್ಮ ದಿವ್ಯದೃಷ್ಟಿಯಿಂದ ಅವರೆಲ್ಲರೂ ಹೊರಟದ್ದನ್ನು ನೋಡಿ ಅಲ್ಲಿಗೆ ಆಗಮಿಸಿದರು.

ಪ್ರತಿಷಿಧ್ಯ ತು ತಾನ್ ಸರ್ವಾನ್ ಭಗವಾಂಲ್ಲೋಕಪೂಜಿತಃ ।
ಪ್ರಜ್ಞಾಚಕ್ಷುಷಮಾಸೀನಮುವಾಚಾಭ್ಯೇತ್ಯ ಸತ್ವರಮ್ ॥೨೪॥

ಲೋಕಪೂಜಿತರಾದ ಸಾಕ್ಷಾತ್ ಭಗವದವತಾರರಾದ ವೇದವ್ಯಾಸರು ಅವರೆಲ್ಲರನ್ನು ನಿವಾರಿಸಿ ಸುಖಾಸೀನನಾಗಿದ್ದ ಪ್ರಜ್ಞಾಚಕ್ಷುವಾದ ಧೃತರಾಷ್ಟ್ರನ ಬಳಿಗೆ ಶೀಘ್ರವಾಗಿ ಬಂದು ಮಾತನಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿಸಪ್ತಮೋಽಧ್ಯಾಯಃ ॥
॥ ಆರಣ್ಯಕಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★★★★★

## ಎಂಟನೆಯ ಅಧ್ಯಾಯ

(ಧೃತರಾಷ್ಟ್ರನನ್ನು ಕುರಿತು ವ್ಯಾಸರ ಹಿತವಚನ ಮತ್ತು
ಇಂದ್ರ- ಸುರಭಿ ಸಂವಾದ.)

### ವ್ಯಾಸಃ

ಧೃತರಾಷ್ಟ್ರ ಮಹಾಪ್ರಾಜ್ಞ ನಿಬೋಧ ವಚನಂ ಮಮ ।
ವಕ್ಷ್ಯಾಮಿ ತ್ವಾಂ ಕೌರವಾಣಾಂ ಸರ್ವೇಷಾಂ ಹಿತಮುತ್ತಮಮ್ ॥೧॥

ಎಲೈ ಮಹಾಪ್ರಾಜ್ಞನಾದ ಧೃತರಾಷ್ಟ್ರನೇ ನನ್ನ ಮಾತನ್ನು ಕೇಳು. ನಾನು ಎಲ್ಲ ಕೌರವರಿಗೂ ಹಿತವಾದ ಶೇಷ್ಠವಾದ ವಿಷಯವನ್ನು ನಿನಗೆ ಹೇಳುವೆನು.

ನ ಮೇ ಪ್ರಿಯಂ ಮಹಾಬಾಹೋ ಯದ್ಗತಾಃ ಪಾಂಡವಾ ವನಮ್ ।
ನಿಕೃತ್ಯಾ ನಿರ್ಜಿತಾಶ್ಚೈವ ದುರ್ಯೋಧನವಶಾನುಗೈಃ ॥೨॥

ಎಲೈ ಮಹಾಬಾಹುವೇ! ಪಾಂಡವರು ವನಕ್ಕೆ ಹೋದುದು ನನಗೆ ಇಷ್ಟವಿಲ್ಲ.

ಅವರು ದುರ್ಯೋಧನನ ವಶವರ್ತಿಗಳಿಂದ ಮೋಸವನ್ನು ಆಶ್ರಯಿಸಿ ಸೋಲಿಸಲ್ಪಟ್ಟರು.

ತೇ ಸ್ಮರಂತಃ ಪರಿಕ್ಲೇಶಾನ್ ವರ್ಷೇ ಪೂರ್ಣೇ ತ್ರಯೋದಶೇ ।
ವಿಮೋಕ್ಷ್ಯಂತಿ ವಿಷಂ ಕ್ರುದ್ಧಾಃ ಕೌರವೇಯೇಷು ಭಾರತ ॥೩॥

ಎಲೈ ಭಾರತನೇ! ಹದಿಮೂರು ವರ್ಷಗಳು ತುಂಬಿದ ಮೇಲೆ ಅವರು ಹಿಂದೆ ಅನುಭವಿಸಿದ ಕ್ಲೇಶವನ್ನು ಸ್ಮರಿಸಿಕೊಂಡು ದುರ್ಯೋಧನಾದಿಗಳಲ್ಲಿ ಕ್ರುದ್ಧರಾಗಿ ವಿಷವನ್ನು ಕಾರುವರು.

ತದಯಂ ಕಿಂ ನು ಪಾಪಾತ್ಮಾ ತವ ಪುತ್ರಃ ಸುಮಂದಧೀಃ ।
ಪಾಂಡವಾನ್ ನಿತ್ಯಸಂಕ್ರುದ್ಧಾನ್ ರಾಜ್ಯಹೇತೋರ್ಜಿಘಾಂಸತಿ ॥೪॥

ನಿನ್ನ ಪುತ್ರನಾದ ಅತ್ಯಂತ ಮಂದಬುದ್ಧಿಯುಳ್ಳ ಪಾಪಾತ್ಮನಾದ ಈ ದುರ್ಯೋಧನನು ನಿತ್ಯ ಸಂಕ್ರುದ್ಧರಾದ ಪಾಂಡವರನ್ನು ರಾಜ್ಯದ ಸಲುವಾಗಿ ಏಕೆ ಕೊಲ್ಲಲು ಬಯಸುತ್ತಾನೆ?

ವಾರ್ಯತಾಂ ಸಾಧ್ವಯಂ ಮೂಢಃ ಶಮಂ ಗಚ್ಛತು ತೇ ಸುತಃ।
ವನಸ್ಥಾಂಸ್ತಾನಯಂ ಹಂತುಮಿಚ್ಛನ್ ಪ್ರಾಣೈರ್ವಿಮೋಕ್ಷ್ಯತೇ ॥೫॥

ಈ ಮೂಢನನ್ನು ತಡೆಯಿರಿ. ನಿನ್ನ ಮಗನು ಪಾಂಡವರ ಜೊತೆಯಲ್ಲಿ ಶಾಂತಿಯನ್ನು ಹೊಂದಲಿ. ವನಗತರಾದ ಅವರನ್ನು ಕೊಲ್ಲಲು ಬಯಸಿದರೆ ಇವನೇ ಪ್ರಾಣಗಳನ್ನು ಬಿಡುತ್ತಾನೆ.

ಯಥಾऽऽಹ ವಿದುರಃ ಪ್ರಾಜ್ಞೋ ಯಥಾ ಭೀಷ್ಮೋ ಯಥಾ ವಯಮ್ ।
ಯಥಾ ಕೃಪಶ್ಚ ದ್ರೋಣಶ್ಚ ತಥಾ ಸಾಧು ವಿಧೀಯತಾಮ್ ॥೬॥

ಪ್ರಾಜ್ಞನಾದ ವಿದುರನು ಹೇಗೆ ಹೇಳಿದನೋ ಭೀಷ್ಮರು ನಾನು ಕೃಪರು ಮತ್ತು ದ್ರೋಣರು ಹೇಗೆ ಹೇಳಿದೆವೋ ಅದರಂತೆ ಚೆನ್ನಾಗಿ ನಡೆದುಕೊಳ್ಳಿ.

ವಿಗ್ರಹೋ ಹಿ ಮಹಾಪ್ರಾಜ್ಞ ಸ್ವಜನೇನ ವಿಗರ್ಹಿತಃ ।
ಅಧರ್ಮ್ಯಮಯಶಸ್ಯಂ ಚ ಮಾ ರಾಜನ್ ಪ್ರತಿಪದ್ಯಥಾಃ ॥೭॥

ಎಲೈ ಮಹಾಪ್ರಾಜ್ಞನೇ! ಸ್ವಜನರ ಜೊತೆಯಲ್ಲಿ ವಿರೋಧವು ನಿಂದ್ಯವಾದುದು. ಅದು ಧರ್ಮವನ್ನು ಮತ್ತು ಕೀರ್ತಿಯನ್ನು ಹಾಳುಮಾಡುವಂತಹದು. ರಾಜನೇ ಅಂತಹ ವಿರೋಧವನ್ನು ಹೊಂದಬೇಡ.

ಸಮೀಕ್ಷಾ ಯಾದೃಶೀ ಹ್ಯಸ್ಯ ಪಾಂಡವಾನ್ ಪ್ರತಿ ಭಾಷತಃ ।
ಉಪೇಕ್ಷ್ಯಮಾಣಾ ಸಾ ರಾಜನ್ ಮಹಾಂತಮನಯಂ ಸೃಜೇತ್ ॥೮॥

ಪಾಂಡವರ ವಿಷಯದಲ್ಲಿ ಮಾತನಾಡುವ ಇವನ ದೃಷ್ಟಿಯು ಹೇಗಿದೆಯೋ ಅದನ್ನು ಉಪೇಕ್ಷೆಮಾಡಿದರೆ ಎಲೈ ರಾಜನೇ! ಅದು ದೊಡ್ಡ ಅನರ್ಥವನ್ನು ಉಂಟುಮಾಡುತ್ತದೆ.

ಅಥವಾಽಯಂ ಸುಮಂದಾತ್ಮಾ ವನಂ ಗಚ್ಛತು ತೇ ಸುತಃ ।
ಪಾಂಡವೈಃ ಸಹಿತೋ ರಾಜನ್ನೇಕ ಏವಾಸಹಾಯವಾನ್ ॥೯॥

ಎಲೈ ರಾಜನೇ! ಮಂದಬುದ್ಧಿಯಾದ ಈ ನಿನ್ನ ಮಗನು ಪಾಂಡವರ ಜೊತೆಯಲ್ಲಿ ಒಬ್ಬನೇ ಅಸಹಾಯಕನಾಗಿ ಕಾಡಿಗೆ ಹೋಗಲಿ.

ತತಃ ಸಂಸರ್ಗಜಃ ಸ್ನೇಹಃ ಪುತ್ರಸ್ಯ ತವ ಪಾಂಡವೈಃ ।
ಯದಿ ಸ್ಯಾತ್ ಕೃತಕೃತ್ಯಸ್ತ್ವಂ ಭವೇಥಾಃ ಪುರುಷರ್ಷಭ ॥೧೦॥

ಆಗ ಜೊತೆಯಲ್ಲಿ ವಾಸಮಾಡುವುದರಿಂದ ಪಾಂಡವರಿಗೂ ನಿನ್ನ ಪುತ್ರನಿಗೂ ಸ್ನೇಹವುಂಟಾದರೆ ಎಲೈ ಪುರುಷರ್ಷಭನೇ! ನೀನು ಧನ್ಯನಾಗುತ್ತೀಯೆ.

ಅಥವಾ ಜಾಯಮಾನಸ್ಯ ಯಚ್ಛೀಲಮನುಜಾಯತೇ ।
ಭೂಯಸ್ತದೇತನ್ಮಾ ರಾಜನ್ ನಾಮೃತಸ್ಯಾಪಸರ್ಪತಿ ॥೧೧॥

ಎಲೈ ರಾಜನೇ! ಹುಟ್ಟುವಾಗ ಮನುಷ್ಯನಿಗೆ ಯಾವ ಸ್ವಭಾವವಿರುತ್ತದೆಯೋ ಆ ಸ್ವಭಾವವು ಅವನು ಬದುಕಿರುವವರೆಗೆ ಅವನನ್ನು ಬಿಟ್ಟುಹೋಗುವುದಿಲ್ಲ.

ಕಥಂ ವಾ ಮನ್ಯತೇ ಭೀಷ್ಮೋ ದ್ರೋಣೋಽಥ ವಿದುರೋಽಪಿ ವಾ ।
ಭವಾನ್ ವಾಽತ್ರ ಪರಂ ಕಾರ್ಯಂ ಪುರಾಽಪಾರ್ಥೋ ನಿವರ್ತತೇ ॥

ಪಾಂಡವರ ವಿರೋಧಿಯಾದ ಈ ದುರ್ಯೋಧನನು ನಿಷ್ಪ್ರಯೋಜನವಾಗಿ ಪಾಂಡವರ ಮೇಲೆ ಎರಗುವ ಕಾರ್ಯವನ್ನು ನಿವಾರಣೆಮಾಡಲು, ಭೀಷ್ಮರಾಗಲೀ ದ್ರೋಣರಾಗಲೀ ಅಥವಾ ವಿದುರನಾಗಲೀ ಅಥವಾ ನೀನೇ ಆಗಲೀ ಯಾವ ಉಪಾಯವನ್ನು ಮಾಡುತ್ತೀರಿ?

ಧೃತರಾಷ್ಟ್ರಃ

ಭಗವನ್ ನಾಹಮಪ್ಯೇತದ್ ರೋಚಯೇ ದ್ಯೂತಸಂಸ್ತವಮ್।
ಮನ್ಯೇ ತು ವಿಧಿನಾऽऽಕ್ರಮ್ಯ ಕಾರಿತೋऽಸ್ಮೀತಿ ವೈ ಮುನೇ ॥೧೩॥

ಪೂಜ್ಯರೇ! ನಾನೂ ಸಹ ಈ ದ್ಯೂತ ಪ್ರಶಂಸೆಯನ್ನು ಒಪ್ಪುವುದಿಲ್ಲ. ವಿಧಿಯ ಪ್ರಭಾವಕ್ಕೆ ಒಳಗಾಗಿ ನಾನು ಈ ಕೆಲಸವನ್ನು ಬಲಾತ್ಕಾರದಿಂದ ಮಾಡಿದ್ದೇನೆ ಎಂದು ನಾನು ಭಾವಿಸುತ್ತೇನೆ.

ನ ತದ್ ರೋಚಯತೇ ಭೀಷ್ಮೋ ನ ದ್ರೋಣೋ ವಿದುರೋ ನ ಚ ।
ಗಾಂಧಾರ್ಯಾ ನೇಷ್ಯತೇ ದ್ಯೂತಂ ತಚ್ಚ ಮೋಹಾತ್ ಪ್ರವರ್ತಿತಮ್॥೧೪॥

ಭೀಷ್ಮರು ದ್ಯೂತವನ್ನು ಇಷ್ಟಪಡುವುದಿಲ್ಲ, ದ್ರೋಣರು ವಿದುರ ಇಷ್ಟಪಡುವುದಿಲ್ಲ. ಗಾಂಧಾರಿಯೂ ಇಷ್ಟಪಡುವುದಿಲ್ಲ. ನಾನು ಮೋಹದಿಂದ ದ್ಯೂತವನ್ನು ಪ್ರವರ್ತನೆಮಾಡಿದೆ.

ಪರಿತ್ಯಕ್ತುಂ ನ ಶಕ್ನೋಮಿ ದುರ್ಯೋಧನಮಚೇತನಮ್ ।
ಪುತ್ರಸ್ನೇಹೇನ ಭಗವನ್ ಜಾನನ್ನಪಿ ಯತವ್ರತ ॥೧೫॥

ಪೂಜ್ಯರೇ! ಮತ್ತು ನಿಯತವ್ರತರೇ! ನನಗೆ ತಿಳಿದಿದ್ದರೂ ಸಹ ಪುತ್ರಸ್ನೇಹಕ್ಕೆ ವಶನಾಗಿ ದುರ್ಬುದ್ಧಿಯಾದ ದುರ್ಯೋಧನನ್ನು ಪರಿತ್ಯಾಗಮಾಡಲು ಸಾಧ್ಯವಾಗುತ್ತಿಲ್ಲ.

ವ್ಯಾಸಃ

ವೈಚಿತ್ರವೀರ್ಯ ನೃಪತೇ ಸತ್ಯಮಾಹ ಯಥಾ ಭವಾನ್ ।
ದೃಢಂ ವೇದ್ಮಿ ಪರಂ ಪುತ್ರ ಪರಂ ಪುತ್ರಾನ್ನ ವಿದ್ಯತೇ ॥೧೬॥

ಎಲೈ ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರರಾಜನೇ! ನೀನು ಆಡಿದಮಾತು ಸತ್ಯವಾಗಿದೆ. ಪುತ್ರನೇ! ಪುತ್ರನಿಗಿಂತ ಅಧಿಕವಾದ ವಸ್ತುವಿಲ್ಲವೆಂದು ನಾನು ಚೆನ್ನಾಗಿ ತಿಳಿದಿದ್ದೇನೆ.

ಇಂದ್ರೋಽಪ್ಯಶ್ರುನಿಪಾತೇನ ಸುರಭ್ಯಾ ಪ್ರತಿಬೋಧಿತಃ ।
ಅನ್ಯೈಃ ಸಮೃದ್ಧೈರಪ್ಯರ್ಥೈರ್ನ ಸುತಾನ್ಮನ್ಯತೇ ಪರಮ್ ॥೧೭॥

ಇಂದ್ರನೂ ಸಹ ಕಣ್ಣೀರು ಸುರಿಸುವ ಸುರಭಿಯಿಂದ ತಿಳಿಸಲ್ಪಟ್ಟವನಾಗಿ ಉಳಿದ ಎಲ್ಲಾಶ್ರೇಷ್ಠವಾದ ವಸ್ತುಗಳಿಗಿಂತ ಪುತ್ರನೇ ಶ್ರೇಷ್ಠವೆಂದು ತಿಳಿದಿದ್ದಾನೆ.

ಅತ್ರ ತೇ ಕಥಯಿಷ್ಯಾಮಿ ಮಹದಾಖ್ಯಾನಮುತ್ತಮಮ್ ।
ಸುರಭ್ಯಾಶ್ಚೈವ ಸಂವಾದಮಿಂದ್ರಸ್ಯ ಚ ವಿಶಾಂಪತೇ ॥೧೮॥

ಎಲೈ ರಾಜನೇ! ನಾನು ಈ ವಿಷಯದಲ್ಲಿ ಸುರಭಿಗೂ ಇಂದ್ರನಿಗೂ ನಡೆದ ಸಂವಾದರೂಪವಾದ ಶ್ರೇಷ್ಠವಾದ ಕಥೆಯನ್ನು ನಿನಗೆ ಹೇಳುವೆನು.

ತ್ರಿವಿಷ್ಟಪಗತಾ ರಾಜನ್ ಸುರಭಿಃ ಪ್ರಾರುದತ್ ಕಿಲ ।
ಗವಾಂ ಮಾತಾ ಪುರಾ ತಾತ ತಾಮಿಂದ್ರೋಽನ್ವಕೃಪಾಯತ ॥೧೯॥

ಎಲೈ ರಾಜನೇ! ಹಿಂದೆ ಗೋಮಾತೆಯಾದ ಸುರಭಿಯು ಸ್ವರ್ಗಲೋಕಕ್ಕೆ ಹೋಗಿ ಇಂದ್ರನ ಮುಂದೆ ಅತ್ತಳು. ಇಂದ್ರನು ಅವಳಲ್ಲಿ ಅನುಕಂಪೆಯನ್ನು ಮಾಡಿದನು.

ಇಂದ್ರಃ

ಕಿಮಿದಂ ರೋದಿಷಿ ಶುಭೇ ಕಚ್ಚಿತ್ ಕ್ಷೇಮಂ ದಿವೌಕಸಾಮ್ ।
ಮನುಷ್ಯೇಷ್ವಥವಾ ಗೋಷು ನೈತದಲ್ಪಂ ಭವಿಷ್ಯತಿ ॥೨೦॥

ಎಲೌ ಶುಭವಾದವಳೇ! ಏಕೆ ಅಳುತ್ತಿದ್ದೀಯೆ? ದೇವತೆಗಳಿಗೆಲ್ಲಾಕ್ಷೇಮವಷ್ಟೇ ? ಮನುಷ್ಯರಿಗೆ ಗೋವುಗಳಿಗೆ ಕ್ಷೇಮವಷ್ಟೇ ? ನೀನು ಅಳುವುದಕ್ಕೆ ಅಲ್ಪವಾದ ಕಾರಣವು ಇರಲಾರದು.

ಸುರಭಿಃ

ವಿನಿಪಾತೋ ನ ವಃ ಕಶ್ಚಿದ್ ದೃಶ್ಯತೇ ತ್ರಿದಶಾಧಿಪ ।
ಅಹಂ ತು ಪುತ್ರಂ ಶೋಚಾಮಿ ತೇನ ರೋದಿಮಿ ಕೌಶಿಕ ॥೨೧॥

ಎಲೈ ದೇವರಾಜನೇ! ನಿಮಗೆ ಯಾವ ಸ್ಥಾನಭ್ರಂಶವೂ ಇಲ್ಲ. ನಾನು ನನ್ನ ಮಗನನ್ನು ಕುರಿತು ಶೋಕಪಡುತ್ತಿದ್ದೇನೆ. ಇಂದ್ರನೇ, ಆ ಕಾರಣದಿಂದ ಅಳುತ್ತಿದ್ದೇನೆ.

ಪಶ್ಯೈನಂ ಕರ್ಷಕಂ ರೌದ್ರಂ ದುರ್ಬಲಂ ಮಮ ಪುತ್ರಕಮ್ ।
ಪ್ರತೋದೇನಾಭಿನಿಘ್ನಂತಂ ಲಾಂಗಲೇನಾಭಿಪೀಡಿತಮ್ ॥೨೨॥

ನನ್ನ ದುರ್ಬಲನಾದ ಪುತ್ರನನ್ನೂ ಈ ಉಗ್ರವಾಗಿ ಉಳುವವನನ್ನೂ ನೋಡು. ಇವನು ಉಗ್ರವಾದ ಚಾವಟಿಯಿಂದ ಹೊಡೆಯುತ್ತಾ ಬಾಲವನ್ನು ಮುರಿಯುತ್ತಾ ಪೀಡಿಸುತ್ತಿದ್ದಾನೆ.

ಏನಂ ದೃಷ್ಟ್ವಾ ಭೃಶಂ ಶ್ರಾಂತಂ ವಧ್ಯಮಾನಂ ಸುರಾಧಿಪ ।
ಕೃಪಾವಿಷ್ಟಾಸ್ಮಿ ದೇವೇಂದ್ರ ಮನಶ್ಚೋದ್ವೇಪತೇ ಮಮ ॥೨೩॥

ಎಲೈ ದೇವೇಂದ್ರನೇ! ಸುರಾಧಿಪನೇ! ಬಹಳ ಆಯಾಸಗೊಂಡಿದ್ದರೂ ಬಹಳವಾಗಿ ಹೊಡೆಯಲ್ಪಡುವ ಈ ನನ್ನ ಪುತ್ರನನ್ನು ನೋಡಿ ನನಗೆ ಅವನಲ್ಲಿ ಕೃಪೆಯುಂಟಾಗಿದೆ. ನನ್ನ ಮನಸ್ಸು ಅವನಿಗಾಗಿ ಹೊಯ್ದಾಡುತ್ತಿದೆ.

ಏಕಸ್ತ್ವತ್ರ ಬಲೋಪೇತೋ ಧುರಮುದ್ವಹತೇಽಧಿಕಾಮ್ ।
ಅಪರೋಽಲ್ಪಬಲಪ್ರಾಣಃ ಕೃಶೋ ಧಮನಿಸಂತತಃ ।
ಕೃಚ್ಛ್ರಾದುದ್ವಹತೇ ಭಾರಂ ತಂ ವೈ ಶೋಚಾಮಿ ವಾಸವ ॥೨೪॥

ಆ ಕೃಷಿಕನು ಹೂಡಿರುವ ಎರಡು ಎತ್ತುಗಳಲ್ಲಿ ಒಂದು ಎತ್ತು ಬಲಾಢ್ಯವಾಗಿದ್ದು ಹೆಚ್ಚಿನ ಭಾರವನ್ನು ಹೊರುತ್ತಿದೆ. ಇನ್ನೊಂದು ಎತ್ತು ಕೃಶವಾಗಿದ್ದು ಧಮನಿಗಳು ಕಾಣುತ್ತಾ ಅಲ್ಪಬಲ ಅಲ್ಪಪ್ರಾಣವುಳ್ಳದ್ದಾಗಿ ಕಷ್ಟಪಟ್ಟು ಭಾರವನ್ನು ಹೊರುತ್ತಿದೆ. ಇಂದ್ರನೇ ಆ ಕೃಶವಾದ ಎತ್ತನ್ನು ನೋಡಿ ನಾನು ಶೋಕಪಡುತ್ತಿದ್ದೇನೆ.

ವಧ್ಯಮಾನಃ ಪ್ರತೋದೇನ ತುದ್ಯಮಾನಸ್ತಥೈವ ಚ ।
ನೈವ ಶಕ್ನೋತಿ ತಂ ಭಾರಮುದ್ವೋಢುಂ ಪಶ್ಯ ವಾಸವ ॥೨೫॥

ಇಂದ್ರನೇ ಚಾವಟಿಯಿಂದ ಹೊಡೆದರೂ ಮತ್ತು ಬಹಳವಾಗಿ ಚುಚ್ಚಿ ಪ್ರಯೋಗಿಸಿದರೂ ಆ ಎತ್ತು ಭಾರವನ್ನು ಹೊರಲಾರದು ಎಂಬುದನ್ನು ನೋಡು.

ತತೋಽಹಂ ತಸ್ಯ ದುಃಖಾರ್ತಾ ಏರೋಮಿ ಭೃಶದುಃಖಿತಾ ।
ಅಶ್ರೂಣ್ಯಾವರ್ತಯಂ ಚೈವ ನೇತ್ರಾಭ್ಯಾಂ ಕರುಣಾವತೀ ॥೨೬॥

ಆದ್ದರಿಂದ ನಾನು ಅವನ ದುಃಖದಿಂದ ದುಃಖಿತಳಾಗಿ ಅವನ ಮೇಲೆ ಕರುಣೆಯನ್ನುಹೊಂದಿ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಅಳುತ್ತಿದ್ದೇನೆ.

ಇಂದ್ರಃ

ತವ ಪುತ್ರಸಹಸ್ರೇಷು ಪೀಡ್ಯಮಾನೇಷು ಶೋಭನೇ ।
ಕಿಂ ಕೃಪಾಯಿತವತ್ಯತ್ರ ಪುತ್ರ ಏಕೋಽತ್ರ ಪೀಡ್ಯತೇ ॥೨೭॥

ಎಲೌ ಶೋಭನಳೇ! ನಿನ್ನ ಸಹಸ್ರಪುತ್ರರು ಹೀಗೆ ಪೀಡಿಸಲ್ಪಡುತ್ತಿರುವಾಗ ಈ ಒಬ್ಬ ಪುತ್ರನ ಪೀಡೆಯನ್ನು ಮಾತ್ರ ನೋಡಿ ನಿನಗೆ ಏಕೆ ಕೃಪೆಯುಂಟಾಗಿದೆ?

ಸುರಭಿಃ

ಯದಿ ಪುತ್ರಸಹಸ್ರಂ ಮೇ ಸರ್ವತ್ರ ಸಮಮೇವ ಮೇ ।
ದೀನಸ್ಯ ತು ತತಃ ಶಕ್ರ ಪುತ್ರಸ್ಯಾಭ್ಯಧಿಕಾ ಕೃಪಾ ॥೨೮॥

ನನಗೆ ಸಹಸ್ರ ಮಕ್ಕಳಿದ್ದರೂ ಎಲ್ಲರೂ ಸಮರಾದವರೇ. ಆದರೆ ಎಲೈ ಇಂದ್ರನೇ ಅವರಲ್ಲಿ ದುರ್ಬಲನಾದ ಪುತ್ರನಲ್ಲಿ ನನ್ನ ಕೃಪೆಯು ಅಧಿಕವಾಗಿರುತ್ತದೆ.

ವ್ಯಾಸಃ

ತದಿಂದ್ರಃ ಸುರಭೇರ್ವಾಕ್ಯಂ ನಿಶಮ್ಯ ಭೃಶವಿಸ್ಮಿತಃ ।
ಜೀವಿತೇನಾಪಿ ಕೌರವ್ಯ ಮೇನೇಽಭ್ಯಧಿಕಮಾತ್ಮಜಮ್ ॥೨೯॥

ಎಲೈ ಕೌರವ್ಯನೇ! ಇಂದ್ರನು ಸುರಭಿಯ ಆ ವಾಕ್ಯವನ್ನು ಕೇಳಿ ಬಹಳ ವಿಸ್ಮಿತನಾಗಿ ತನ್ನ ಜೀವನಕ್ಕಿಂತಲೂ ಪುತ್ರನೇ ಶ್ರೇಷ್ಠನೆಂದು ತಿಳಿದನು.

ಪ್ರವವರ್ಷ ಚ ತತ್ರೈವ ಸಹಸಾ ತೋಯಮುಲ್ಬಣಮ್ ।
ಕರ್ಷಕಸ್ಯಾಚರನ್ ವಿಘ್ನಂ ಭಗವಾನ್ ಪಾಕಶಾಸನಃ ॥೩೦॥

ತಕ್ಷಣದಲ್ಲಿ ಅಲ್ಲಿಯೇ ಇದ್ದಕ್ಕಿದ್ದಂತೆ ಬಹಳವಾದ ಮಳೆಯನ್ನು ಸುರಿಸಿ ಪೂಜ್ಯನಾದ ಇಂದ್ರನು ಆ ಕರ್ಷಕನಿಗೆ ವಿಘ್ನವನ್ನು ತಂದೊಡ್ಡಿದನು.

ತದ್ಯಥಾ ಸುರಭಿಃ ಪ್ರಾಹ ಸಮಮೇವಾಸ್ತು ತೇ ತಥಾ ।
ಸುತೇಷು ರಾಜನ್ ಸರ್ವೇಷು ದೀನೇಷ್ವಭ್ಯಧಿಕಾ ಕೃಪಾ ॥೩೧॥

ಎಲೈ ರಾಜನೇ! ಸುರಭಿಯು ಹೇಳಿದಂತೆ ನಿನ್ನ ದೃಷ್ಟಿಯು ಎಲ್ಲ ಮಕ್ಕಳಲ್ಲಿಯೂ ಸಮವಾಗಿಯೇ ಇರಲಿ. ಆದರೆ ದೀನರಾದವರಲ್ಲಿ ಹೆಚ್ಚಾಗಿ ಕೃಪೆಯಿರಲಿ.

ಯಾದೃಶೋ ಮೇ ಸುತಃ ಪಾಂಡುಸ್ತಾದೃಶೋ ಮೇಽಪಿ ಪುತ್ರಕ।
ವಿದುರಶ್ಚ ಮಹಾಪ್ರಾಜ್ಞಃ ಸ್ನೇಹಾದೇತದ್ ಬ್ರವೀಮ್ಯಹಮ್ ॥೩೨॥

ಎಲೈ ಪುತ್ರನೇ! ನನಗೆ ಪಾಂಡವು ಹೇಗೋ ನೀನೂ ಹಾಗೆಯೇ ಮತ್ತು ಮಹಾಪ್ರಾಜ್ಞನಾದ ವಿದುರನೂ ಹಾಗೆಯೇ ಪುತ್ರನಾಗಿದ್ದಾನೆ. ನಾನು ಈ ವಿಷಯವನ್ನು ಸ್ನೇಹದಿಂದ ಹೇಳುತ್ತಿದ್ದೇನೆ.

ಚಿರಾಯ ತವ ಪುತ್ರಾಣಾಂ ಶತಮೇಕಂ ಚ ಪಾರ್ಥಿವ ।
ಪಾಂಡೋಃ ಪಂಚೈವ ಲಕ್ಷ್ಯಂತೇ ತೇಽಪಿ ಮಂದಾಃ ಸುದುಃಖಿತಾಃ ॥

ಎಲೈ ರಾಜನೇ! ನಿನಗೆ ನೂರು ಮಕ್ಕಳಿದ್ದಾರೆ. ಪಾಂಡುವಿಗಾದರೆ ಐದೇ ಮಕ್ಕಳು. ಅವರೂ ಸಹ ಮಂದರೂ ಮತ್ತು ದುಃಖಪೂರ್ಣರು ಆಗಿದ್ದಾರೆ.

ಕಥಂ ಜೀವೇಯುರಿತ್ಯೇವ ಕಥಂ ವರ್ಧೇಯುರಿತ್ಯಪಿ ।
ಇತಿ ದೀನೇಷು ಪಾರ್ಥೇಷು ಮನೋ ಮೇ ಪರಿತಪ್ಯತೇ ॥೩೪॥

ಅವರು ಹೇಗೆ ಜೀವಿಸುತ್ತಾರೆ ಹೇಗೆ ಅಭಿವೃದ್ಧಿಯನ್ನು ಹೊಂದುತ್ತಾರೆ ಎಂದು ದೀನರಾದ ಪಾಂಡವರ ವಿಷಯದಲ್ಲಿ ನನ್ನ ಮನಸ್ಸು ಪರಿತಪಿಸುತ್ತದೆ.

ಯದಿ ಪಾರ್ಥಿವ ಕೌರವ್ಯಾನ್ ಜೀವಮಾನಾನಿಹೇಚ್ಛಸಿ ।
ದುರ್ಯೋಧನಸ್ತವ ಸುತಃ ಶಮಂ ಗಚ್ಛತು ಪಾಂಡವೈಃ ॥೩೫॥

ಎಲೈ ರಾಜನೇ ನೀನು ಕುರುವಂಶದವರೆಲ್ಲರೂ ಬದುಕಿರಬೇಕೆಂದು ಬಯಸುವುದಾದರೆ ನಿನ್ನ ಪುತ್ರನಾದ ದುರ್ಯೋಧನನು ಪಾಂಡವರ ಜೊತೆಯಲ್ಲಿ ಸಂಧಾನವನ್ನು ಮಾಡಿಕೊಳ್ಳಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಮೋಽಧ್ಯಾಯಃ ॥
॥ ಆರಣ್ಯಕಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★★★★★

## ಒಂಭತ್ತನೆಯ ಅಧ್ಯಾಯ

(ದುರ್ಯೋಧನನಿಗೆ ಉಪದೇಶಮಾಡಲು ನಿರಾಕರಿಸಿ ವ್ಯಾಸರ ಗಮನ, ಮೈತ್ರೇಯರ ಆಗಮನ ಮತ್ತು ದುರ್ಯೋಧನನಿಗೆ ಅವರ ಶಾಪ)

### ಧೃತರಾಷ್ಟ್ರಃ

ಏವಮೇತನ್ಮಹಾಪ್ರಾಜ್ಞ ಯಥಾ ವದಸಿ ನೋ ಮುನೇ ।
ಅಹಂ ಚೈವ ವಿಜಾನಾಮಿ ಸರ್ವೇ ಚೇಮೇ ನರಾಧಿಪಾಃ ॥೧॥

ಎಲೈ ಮಹಾಪ್ರಾಜ್ಞರಾದ ಮುನಿಗಳೇ! ನೀವು ಹೇಳಿದಂತೆಯೇ ಸರಿ. ಅದರಂತೆಯೇ ನಾನೂ ಮತ್ತು ಈ ಎಲ್ಲ ರಾಜರೂ ತಿಳಿದಿದ್ದೇವೆ.

ಭವಾಂಸ್ತು ಮನ್ಯತೇ ಸಾಧು ಯತ್ ಕುರೂಣಾಂ ಸುಖೋದಯಮ್ ।
ತದೇವ ವಿದುರೋಽಪ್ಯಾಹ ಭೀಷ್ಮೋ ದ್ರೋಣಶ್ಚ ಮಾಂ ಮುನೇ ॥

ನೀವು ಕುರುಗಳಿಗೆ ಸುಖಾವಹವೆಂದು ಯಾವುದನ್ನು ಭಾವಿಸಿದ್ದೀರೋ ಅದನ್ನೇ ವಿದುರನೂ ಭೀಷ್ಮರೂ ಮತ್ತು ದ್ರೋಣರೂ ನನ್ನನ್ನು ಕುರಿತು ಹೇಳಿದ್ದಾರೆ.

ಯದಿ ತ್ವಹಮನುಗ್ರಾಹ್ಯಃ ಕೌರವೇಷು ದಯಾ ಯದಿ ।
ಅನುಶಾಧಿ ದುರಾತ್ಮಾನಂ ಪುತ್ರಂ ದುರ್ಯೋಧನಂ ಮಮ ॥೩॥

ನನ್ನ ಮೇಲೆ ನಿಮ್ಮ ಅನುಗ್ರಹವಿದ್ದರೆ ಮತ್ತು ಕೌರವರಲ್ಲಿ ದಯೆ ಇದ್ದರೆ ನನ್ನ ದುಷ್ಪಪುತ್ರನಾದ ದುರ್ಯೋಧನನಿಗೆ ಅನುಶಾಸನವನ್ನು ಮಾಡಿ.

ವ್ಯಾಸಃ

ಅಯಮಾಯಾತಿ ವೈ ರಾಜನ್ ಮೈತ್ರೇಯೋ ಭಗವಾನೃಷಿಃ ।
ಅನ್ವೀಕ್ಷ್ಯ ಪಾಂಡವಾನ್ ಭ್ರಾತೄ ನ್ ಇಹೈವಾऽಸ್ಮದ್ದಿದೃಕ್ಷಯಾ ॥೪॥

ಪೂಜ್ಯರಾದ ಮೈತ್ರೇಯಋಷಿಗಳು ಅಣ್ಣತಮ್ಮಂದಿರಾದ ಪಾಂಡವರನ್ನು ನೋಡಿ ನನ್ನನ್ನು ನೋಡುವ ಇಚ್ಛೆಯಿಂದ ಇಲ್ಲಿಗೇ ಬರುತ್ತಿದ್ದಾರೆ.

ಏಷ ದುರ್ಯೋಧನಂ ಪುತ್ರಂ ತವ ರಾಜನ್ ಮಹಾನೃಷಿಃ ।
ಅನುಶಾಸ್ತು ಯಥಾನ್ಯಾಯಂ ಶಮಾಯಾಸ್ಯ ಕುಲಸ್ಯ ತೇ ॥೫॥

ಎಲೈ ಮಹಾರಾಜನೇ! ಈ ಮಹರ್ಷಿಗಳು ನಿನ್ನ ಪುತ್ರನಾದ ದುರ್ಯೋಧನನಿಗೆ ನ್ಯಾಯಕ್ಕೆ ಅನುಗುಣವಾಗಿ ನಿನ್ನ ಕುಲದ ಹಿತಕ್ಕೋಸ್ಕರವಾಗಿ ಅನುಶಾಸನಮಾಡುತ್ತಾರೆ.

ಬ್ರೂಯಾದ್ ಯದೇಷ ರಾಜೇಂದ್ರ ತತ್ ಕಾರ್ಯಮವಿಶಂಕಯಾ ।
ಅಕ್ರಿಯಾಯಾಂ ಹಿ ಕಾರ್ಯಸ್ಯ ಪುತ್ರಂ ತೇ ಶಪ್ಸ್ಯತೇ ರುಷಾ ॥೬॥

ಎಲೈ ರಾಜೇಂದ್ರನೇ, ಅವರು ಏನನ್ನು ಹೇಳುತ್ತಾರೆಯೋ ಅದನ್ನು ನಿಃಶಂಕೆಯಿಂದ ನೆರವೇರಿಸಬೇಕು. ಆ ಕಾರ್ಯವನ್ನು ಮಾಡದಿದ್ದರೆ ಅವರು ಸಿಟ್ಟಿನಿಂದ ನಿನ್ನ ಮಗನಿಗೆ ಶಾಪವನ್ನು ಕೊಡುವರು.

ವೈಶಂಪಾಯನಃ

ಏವಮುಕ್ತ್ವಾ ಯಯೌ ವ್ಯಾಸೋ ಮೈತ್ರೇಯಃ ಪ್ರತ್ಯದೃಶ್ಯತ ।
ಪೂಜಯಾ ಪ್ರತಿಜಗ್ರಾಹ ಸಸುತಸ್ತಂ ನರಾಧಿಪಃ ॥೭॥

ಹೀಗೆ ಹೇಳಿ ವ್ಯಾಸರು ಹೊರಟುಹೋದರು. ಮೈತ್ರೇಯರು ಕಾಣಿಸಿಕೊಂಡರು. ರಾಜನು ತನ್ನ ಮಕ್ಕಳ ಜೊತೆಯಲ್ಲಿ ಅವರನ್ನು ಪೂಜಿಸಿ ಸ್ವೀಕರಿಸಿದನು.

ಕೃತ್ವಾऽರ್ಘ್ಯಾದ್ಯಾಃ ಕ್ರಿಯಾಃ ಸರ್ವಾ ವಿಶ್ರಾಂತಂ ಮುನಿಪುಂಗವಮ್ ।
ಪ್ರಶ್ರಯೇಣಾಬ್ರವೀದ್ ರಾಜಾ ಧೃತರಾಷ್ಟ್ರೋऽಂಬಿಕಾಸುತಃ ॥೮॥

ಅಂಬಿಕಾಸುತನಾದ ಧೃತರಾಷ್ಟ್ರರಾಜನು ಅವರಿಗೆ ಅರ್ಘ್ಯಾದಿ ಉಚಿತಕ್ರಿಯೆಗಳನ್ನು ಮಾಡಿ ಅವರು ವಿಶ್ರಾಂತಿಯನ್ನು ತೆಗೆದುಕೊಂಡಮೇಲೆ ಆ ಮುನಿಪುಂಗವರನ್ನು ಕುರಿತು ವಿನಯದಿಂದ ಮಾತನಾಡಿದನು.

ಸುಖೇನಾಗಮನಂ ಕಚ್ಚಿದ್ ಭಗವನ್ ಕುರುಜಾಂಗಲಾನ್ ।
ಕಚ್ಚಿತ್ ಕುಶಲಿನೋ ವೀರಾ ಭ್ರಾತರಃ ಪಂಚ ಪಾಂಡವಾಃ ॥೯॥

ಪೂಜ್ಯರೇ! ತಾವು ಸುಖವಾಗಿ ಕುರುಜಾಂಗಲಕ್ಕೆ ಆಗಮನವನ್ನು ಮಾಡಿದ್ದೀರಾ? ವೀರರೂ, ಅಣ್ಣತಮ್ಮಂದಿರೂ ಆದ ಪಂಚಪಾಂಡವರು ಕ್ಷೇಮದಿಂದಿದ್ದಾರೆಯೇ?

ಸಮಯೇ ಸ್ಥಾತುಮಿಚ್ಛಂತಿ ಕಚ್ಚಿಚ್ಚ ಪುರುಷರ್ಷಭಾಃ ।
ಕಚ್ಚಿತ್ ಕುರೂಣಾಂ ಸೌಭ್ರಾತ್ರಮವಿಚ್ಛಿನ್ನಂ ಭವಿಷ್ಯತಿ ॥೧೦॥

ಪುರುಷರ್ಷಭರಾದ ಆ ಪಾಂಡವರು ತಾವು ಮಾಡಿದ ಹದಿಮೂರುವರ್ಷದ ನಿಯಮವನ್ನು ಪಾಲಿಸುವ ಇಚ್ಛೆಯುಳ್ಳವ- ರಾಗಿದ್ದಾರೆಯೇ? ಕುರುಗಳಿಗೆ ಅವಿಚ್ಛಿನ್ನವಾದ ಭ್ರಾತೃಪ್ರೇಮವು ಉಂಟಾಗುವುದೇ?

ಮೈತ್ರೇಯಃ

ತೀರ್ಥಯಾತ್ರಾಂ ಪರಿಕ್ರಾಮನ್ ಪ್ರಾಪ್ತೋ ವೈ ಕುರುಜಾಂಗಲಮ್ ।
ಯದೃಚ್ಛಯಾ ಧರ್ಮರಾಜಂ ದೃಷ್ಟವಾನ್ ಕಾಮ್ಯಕೇ ವನೇ ॥೧೧॥

ನಾನು ತೀರ್ಥಯಾತ್ರೆಯನ್ನು ಮಾಡುತ್ತಾ ಯದೃಚ್ಛೆಯಿಂದ ಕಾಮ್ಯಕವನಲ್ಲಿ ಧರ್ಮರಾಜನನ್ನು ನೋಡಿ ಕುರುಜಾಂಗಲಕ್ಕೆ ಬಂದಿದ್ದೇನೆ.

ತಂ ಜಟಾಜಿನಸಂವೀತಂ ತಪೋವನನಿವಾಸಿನಃ ।
ಸಮಾಜಗ್ಮುರ್ಮಹಾತ್ಮಾನಂ ದ್ರಷ್ಟುಂ ಮುನಿಗಣಾಃ ಪ್ರಭೋ ॥೧೨॥

ಪ್ರಭುವೇ! ಜಟಾಜಿನಧಾರಿಯಾದ ಆ ಮಹಾತ್ಮನನ್ನು ನೋಡಲು ತಪೋವನನಿವಾಸಿಗಳಾದ ಮುನಿಗಳ ಸಮೂಹವೆಲ್ಲವೂ ಅಲ್ಲಿಗೆ ಬಂದವು.

ತತ್ರಾಶ್ರೌಷಮಹಂ ರಾಜನ್ ಪುತ್ರಾಣಾಂ ತವ ವಿಗ್ರಹಮ್ ।
ಅನಯಂ ದ್ಯೂತರೂಪೇಣ ಮಹಾಪಾಯಮುಪಸ್ಥಿತಮ್ ॥೧೩॥

ಎಲೈರಾಜನೇ! ಅಲ್ಲಿನಾನು ನಿನ್ನ ಪುತ್ರರ ವಿರೋಧವನ್ನೂ ದ್ಯೂತರೂಪದಿಂದ ಉಂಟಾದ ಅನ್ಯಾಯವನ್ನೂ ಮತ್ತು ಸನ್ನಿಹಿತವಾಗಿರುವ ದೊಡ್ಡ ಅಪಾಯವನ್ನೂ ಕೇಳಿದೆನು.

ತತೋಽಹಂ ತ್ವಾಮನುಪ್ರಾಪ್ತಃ ಕೌರವಾಣಾಮವೇಕ್ಷಯಾ ।
ಸದಾ ಹ್ಯಭ್ಯಧಿಕಃ ಸ್ನೇಹಃ ಪ್ರೀತಿಶ್ಚ ತ್ವಯಿ ಮೇ ವಿಭೋ ॥೧೪॥

ಆದ್ದರಿಂದ ಕೌರವರ ಮೇಲಿನ ಅನುಕಂಪೆಯಿಂದ ನಾನು ನಿನ್ನ ಬಳಿಗೆ ಬಂದಿದ್ದೇನೆ. ನಿನ್ನಲ್ಲಿನನಗೆ ಯಾವಾಗಲೂ ಬಹಳ ಅಧಿಕವಾದ ಪ್ರೀತಿಯಿದೆ.

ನೈತದೌಪಯಿಕಂ ರಾಜನ್ ತ್ವಯಿ ಭೀಷ್ಮೇ ಚ ಜೀವತಿ ।
ಯದನ್ಯೋನ್ಯೇನ ತೇ ಪುತ್ರಾ ವಿರುಧ್ಯಂತೇ ನರಾಧಿಪ ॥೧೫॥

ಎಲೈ ನರಾಧಿಪನೇ! ರಾಜನೇ! ನೀನು ಮತ್ತು ಭೀಷ್ಮರು ಬದುಕಿರುವಾಗ ನಿನ್ನ ಮಕ್ಕಳು ಪರಸ್ಪರವಾಗಿ ವಿರೋಧವನ್ನು ಮಾಡುವುದು ಯುಕ್ತವಲ್ಲ.

ಮೇಢೀಭೂತಃ ಸ್ವಯಂ ರಾಜನ್ ನಿಗ್ರಹೇ ಪ್ರಗ್ರಹೇ ಭವಾನ್ ।
ಕಿಮರ್ಥಮನಯಂ ಘೋರಮುತ್ಪತಂತಮುಪೇಕ್ಷಸೇ ॥೧೬॥

ರಾಜನೇ! ನೀನು ಯಾರನ್ನು ನಿಗ್ರಹಮಾಡಬೇಕಾದರೂ ಅಥವಾ ಸ್ವೀಕಾರಮಾಡಬೇಕಾದರೂ ಮೇಟಿಯಂತೆ ಪ್ರಧಾನನಾದವನು. ಘೋರವಾಗಿ ಎದ್ದುಬರುತ್ತಿರುವ ಈ ಅನ್ಯಾಯವನ್ನು ಏತಕ್ಕೆ ಉಪೇಕ್ಷೆಮಾಡುತ್ತಿದ್ದೀಯೆ?

ದಸ್ಯೂನಾಮಿವ ಯದ್ ವೃತ್ತಂ ಸಭಾಯಾಂ ಕುರುನಂದನ ।
ತೇನ ನ ಭ್ರಾಜಸೇ ರಾಜನ್ ತಾಪಸಾನಾಂ ಸಮಾಗಮೇ ॥೧೭॥

ಎಲೈ ಕುರುನಂದನನೇ! ಸಭೆಯಲ್ಲಿ ದಸ್ಯುಗಳ ನಡೆವಳಿಕೆಯಂತೆ ಏನು ನಡೆಯಿತೋ ಅದರಿಂದ ನೀನು ತಾಪಸರ ಸಮೂಹದಲ್ಲಿ ಶೋಭಿಸುವುದಿಲ್ಲ.

ವೈಶಂಪಾಯನಃ

ತತೋ ವ್ಯಾವೃತ್ಯ ರಾಜಾನಂ ದುರ್ಯೋಧನಮಮರ್ಷಣಮ್ ।
ಉವಾಚ ಶ್ಲಕ್ಷ್ಣಯಾ ವಾಚಾ ಮೈತ್ರೇಯೋ ಭಗವಾನೃಷಿಃ ॥೧೮॥

ಅನಂತರ ರಾಜನಿಂದ ಮುಖವನ್ನು ತಿರುಗಿಸಿ ಕ್ರೋಧಶೀಲನಾದ ದುರ್ಯೋಧನನ್ನು ಕುರಿತು ಪೂಜ್ಯರಾದ ಮೈತ್ರೇಯ ಋಷಿಗಳು ಮಧುರವಾಗಿ ಮಾತನಾಡಿದರು.

ದುರ್ಯೋಧನ ಮಹಾಬಾಹೋ ನಿಬೋಧ ವದತಾಂವರ ।
ವಚನಂ ಮೇ ಮಹಾಪ್ರಾಜ್ಞ ಬ್ರುವತೋ ಯದ್ಧಿತಂ ತವ ॥೧೯॥

ಮಹಾಬಾಹುವಾದ ದುರ್ಯೋಧನನೇ! ಮಾತನಾಡುವವರಲ್ಲಿ ಶ್ರೇಷ್ಠನಾದವನೇ! ಮಹಾಪ್ರಾಜ್ಞನಾದವನೇ ನಾನು ಹೇಳುವ ನಿನ್ನ ಹಿತವನ್ನು ಕೇಳು.

ಮಾ ದ್ರುಹಃ ಪಾಂಡವಾನ್ ರಾಜನ್ ಕುರುಷ್ವ ಹಿತಮಾತ್ಮನಃ ।
ಕುರೂಣಾಂ ಪಾಂಡವಾನಾಂ ಚ ಲೋಕಸ್ಯ ಚ ನರರ್ಷಭ ॥೨೦॥

ಎಲೈ ರಾಜನೇ! ಪಾಂಡವರಿಗೆ ದ್ರೋಹವನ್ನು ಮಾಡದೆ ನಿನಗೆ ಹಿತವನ್ನು ಸಂಪಾದಿಸಿಕೋ. ಎಲೈ ನರಶ್ರೇಷ್ಠನೇ! ಕುರುಗಳಿಗೂ ಪಾಂಡವರಿಗೂ ಮತ್ತು ಲೋಕಕ್ಕೂ ಹಿತವನ್ನು ಉಂಟುಮಾಡು.

ಪಾಂಡವಾನ್ ಪ್ರಾಪ್ಯ ತಾನ್ ರಾತ್ರೌ ಕಿರ್ಮೀರೋ ನಾಮ ರಾಕ್ಷಸಃ ।
ಆವೃತ್ಯ ಮಾರ್ಗಂ ರೌದ್ರಾತ್ಮಾ ತಸ್ಥೌ ಗಿರಿರಿವಾಚಲಃ ॥೨೧॥

ರಾತ್ರಿಯ ವೇಳೆಯಲ್ಲಿ ಕಿರ್ಮೀರ ಎಂಬ ರಾಕ್ಷಸನು ಪಾಂಡವರ ಸಮೀಪಕ್ಕೆ ಬಂದು ಮಾರ್ಗವನ್ನು ಅಡ್ಡಗಟ್ಟಿ ಅಚಲವಾದ ಪರ್ವತದಂತೆ ಘೋರ ಸ್ವರೂಪವನ್ನು ಧರಿಸಿ ನಿಂತನು.

ತಂ ಭೀಮಃ ಸಮರಶ್ಲಾಘೀ ಬಲೇನ ಬಲಿನಾಂ ವರಃ ।
ಜಘಾನ ಪಶುಮಾರೇಣ ವ್ಯಾಘ್ರಃ ಕ್ಷುದ್ರಮೃಗಂ ಯಥಾ ॥೨೨॥

ಯುದ್ಧಪ್ರಿಯನಾದ ಮತ್ತು ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನು ವ್ಯಾಘ್ರವು ಕ್ಷುದ್ರಮೃಗವನ್ನು ಕೊಲ್ಲುವಂತೆ ಪಶುಮರಣದಂತೆ ಅವನನ್ನು ಕೊಂದನು.

ಪಶ್ಯ ದಿಗ್ವಿಜಯೇ ರಾಜನ್ ಯಥಾ ಭೀಮೇನ ಪಾತಿತಃ ।
ಜರಾಸಂಧೋ ಮಹೇಷ್ವಾಸೋ ನಾಗಾಯುತಬಲೋ ಯುಧಿ ॥೨೩॥

ಎಲೈ ರಾಜನೇ! ದಿಗ್ವಿಜಯ ಸಮಯದಲ್ಲಿ ಹತ್ತುಸಾವಿರ ಆನೆಗಳ ಬಲವುಳ್ಳ ಮಹಾಧನುರ್ಧಾರಿಯಾದ ಜರಾಸಂಧನು ಯುದ್ಧದಲ್ಲಿ ಹೇಗೆ ಭೀಮನಿಂದ ಹತನಾದನು ಎಂಬುದನ್ನು ನೋಡು.

ಸಂಬಂಧೀ ಯಸ್ಯ ಶ್ರೀಕೃಷ್ಣೋ ಯೇಷಾಂ ಸ್ಯಾಲಶ್ಚ ಪಾರ್ಷತಃ।
ತೇ ತೇ ಸರ್ವೇ ನರವ್ಯಾಘ್ರಾಃ ಶೂರಾ ವಿಕ್ರಾಂತಯೋಧಿನಃ ॥೨೪॥

ಯಾರಿಗೆ ಶ್ರೀಕೃಷ್ಣನು ಬಂಧುವೋ ಯಾರಿಗೆ ಧೃಷ್ಟದ್ಯುಮ್ನನು ಭಾವಮೈದುನನೋ ಅಂತಹ ಪಾಂಡವರೆಲ್ಲರೂ ನರವ್ಯಾಘ್ರರು ಶೂರರು ಮತ್ತು ವಿಕ್ರಮದಿಂದ ಯುದ್ಧಮಾಡುವವರು.

ಸರ್ವೇ ನಾಗಾಯುತಪ್ರಾಣಾ ವಜ್ರಸಂಹನನಾ ದೃಢಾಃ ।
ರಾಜನ್ ಪ್ರೀತಿಕರಾಃ ಸರ್ವೇ ಸರ್ವೇ ಪುರುಷಮಾನಿನಃ ॥೨೫॥

ಎಲ್ಲರೂ ಹತ್ತುಸಾವಿರ ಆನೆಗಳ ಬಲವುಳ್ಳವರು ವಜ್ರ ಸಮಾನವಾದ ಶರೀರವನ್ನು ಧರಿಸಿದವರು ಮತ್ತು ದೃಢರಾದವರು. ರಾಜನೇ! ಎಲ್ಲರೂ ಪ್ರೀತಿಯುಕ್ತರಾದವರು ಮತ್ತು ಇನ್ನೊಬ್ಬರಿಗೆ ಗೌರವವನ್ನು ನೀಡುವವರು.

ಹಂತಾರೋ ದೇವಶತ್ರೂಣಾಂ ರಕ್ಷಸಾಂ ಕಾಮರೂಪಿಣಾಮ್।
ಹಿಡಿಂಬಬಕಮುಖ್ಯಾನಾಂ ಕಿರ್ಮೀರಸ್ಯ ಚ ರಕ್ಷಸಃ ॥೨೬॥

ದೇವಶತ್ರುಗಳಾದ ಇಚ್ಛೆಯಂತೆ ಬೇರೆ ಬೇರೆ ರೂಪಗಳನ್ನು ಧರಿಸುವ ರಾಕ್ಷಸರನ್ನು ಕೊಲ್ಲುವವರು. ಹಿಡಿಂಬ ಬಕ ಕಿರ್ಮೀರ ಮೊದಲಾದ ಅನೇಕ ರಾಕ್ಷಸರನ್ನು ಸಂಹರಿಸಿದವರು.

ಕಸ್ತಾನ್ ಯುಧಿ ಸಮಾಸೀತ ಜರಾಮರಣವಾನ್ ನರಃ ।
ತಸ್ಯ ತೇ ಶಮ ಏವಾಸ್ತು ಪಾಂಡವೈರ್ಭರತರ್ಷಭ ।
ಕುರುಷ್ವ ವಚನಂ ರಾಜನ್ ಮಾ ಮೃತ್ಯುವಶಮನ್ವಗಾಃ ॥೨೭॥

ಜರಾಮರಣವುಳ್ಳ ಯಾವ ಮನುಷ್ಯನು ಅವರ ಎದುರಿಗೆ ಯುದ್ಧದಲ್ಲಿ ನಿಲ್ಲಲು ಸಾಧ್ಯ ? ಎಲೈ ಭರತರ್ಷಭನೇ! ಅಂತಹ ಪಾಂಡವರ ಜೊತೆಯಲ್ಲಿ ನಿನಗೆ ಶಾಂತಿಯೇ ಉಂಟಾಗಲಿ. ರಾಜನೇ! ನನ್ನ ಮಾತನ್ನು ನಡೆಸಿಕೊಡು. ಮೀರಿ ಮೃತ್ಯುವಶನಾಗಬೇಡ.

ಏವಂ ತು ಬ್ರುವತಸ್ತಸ್ಯ ಮೈತ್ರೇಯಸ್ಯ ವಿಶಾಂಪತೇ ।
ಊರುಂ ಗಜಕರಾಕಾರಂ ಮೈತ್ರೇಯಾಯ ಜಘಾನ ಸಃ ॥೨೮॥

ಎಲೈ ರಾಜನೇ! ಮೈತ್ರೇಯರು ಹೀಗೆ ಹೇಳುತ್ತಿರಲು ದುರ್ಯೋಧನನು ಆನೆಯ ಸೊಂಡಿಲಿನಂತಿದ್ದ ತನ್ನ ತೊಡೆಯನ್ನು ಮೈತ್ರೇಯರಿಗೆ ಕಾಣುವಂತೆ ತಟ್ಟಿದನು.

ದುರ್ಯೋಧನಃ ಸ್ಮಿತಂ ಕೃತ್ವಾ ಚರಣೇನೋಲ್ಲಿಖನ್ ಮಹೀಮ್।
ನ ಕಿಂಚಿದುಕ್ತ್ವಾ ದುರ್ಮೇಧಾಸ್ತಸ್ಥೌ ಕಿಂಚಿದವಾಂಗ್ಮುಖಃ ॥೨೯॥

ದುರ್ಯೋಧನನು ಮುಗುಳ್ನಗೆಯನ್ನು ನಕ್ಕು ಪಾದದಿಂದ ಭೂಮಿಯನ್ನು ಕೆದಕುತ್ತಾ ಏನೂ ಮಾತನಾಡದೆ ಮುಖವನ್ನು ಸ್ವಲ್ಪ ತಗ್ಗಿಸಿ ದುರ್ಬುದ್ಧಿಯಿಂದ ಹಾಗೆಯೇ ನಿಂತನು.

ತಮಶುಶ್ರೂಷಮಾಣಂ ತು ವಿಲಿಖಂತಂ ವಸುಂಧರಾಮ್ ।
ದೃಷ್ಟ್ವಾ ದುರ್ಯೋಧನಂ ರಾಜನ್ ಮೈತ್ರೇಯಂ ಕೋಪ ಆವಿಶತ್ ॥

ಎಲೈ ಜನಮೇಜಯರಾಜನೇ! ತಮ್ಮ ಮಾತನ್ನು ಕೇಳದೆ ಕಾಲಿನಿಂದ ಭೂಮಿಯನ್ನು ಬರೆಯುತ್ತಿರುವ ದುರ್ಯೋಧನನ್ನು ನೋಡಿ ಮೈತ್ರೇಯರಿಗೆ ಕೋಪವುಂಟಾಯಿತು.

ಸ ಕೋಪವಶಮಾಪನ್ನೋ ಮೈತ್ರೇಯೋ ಭಗವಾನೃಷಿಃ ।
ವಿಧಿನಾ ಸಂಪ್ರಯುಕ್ತಶ್ಚ ಶಾಪಾಯಾಸ್ಯ ಮನೋ ದಧೇ ॥೩೧॥

ಕೋಪಕ್ಕೆ ವಶರಾದ ಪೂಜ್ಯರಾದ ಆ ಮೈತ್ರೇಯಋಷಿಗಳು ವಿಧಿಯಿಂದ ಪ್ರೇರಿಸಲ್ಪಟ್ಟವರಾಗಿ ದುರ್ಯೋಧನನಿಗೆ ಶಾಪವನ್ನು ಕೊಡಲು ನಿರ್ಧರಿಸಿದರು.

ತತಃ ಸ ವಾರ್ಯುಪಸ್ಪೃಶ್ಯ ಕೋಪಸಂರಕ್ತಲೋಚನಃ ।
ಮೈತ್ರೇಯೋ ಧಾರ್ತರಾಷ್ಟ್ರಂ ತಮಶಪದ್ ದುಷ್ಟಚೇತಸಮ್ ॥೩೨॥

ಆ ಮೈತ್ರೇಯರು ಜಲವನ್ನು ಉಪಸ್ಪರ್ಶಮಾಡಿ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ದುಷ್ಟಮನಸ್ಸುಳ್ಳ ಆ ದುರ್ಯೋಧನನಿಗೆ ಶಾಪವನ್ನು ನೀಡಿದರು.

ಯಸ್ಮಾತ್ ತ್ವಂ ಮಾಮನಾದೃತ್ಯ ನ ಮೇ ವಾಚಂ ಚಿಕೀರ್ಷಸಿ ।
ತಸ್ಮಾದಸ್ಯಾತಿಮಾನಸ್ಯ ಸದ್ಯಃ ಫಲಮವಾಪ್ಸ್ಯಸಿ ॥೩೩॥

ನನ್ನನ್ನು ಆದರಿಸದೆ ನನ್ನ ಮಾತನ್ನು ನಡೆಸಿಕೊಡಲು ಬಯಸದೇ ಇರುವ ಕಾರಣದಿಂದ ನೀನು ಈ ಅತಿಗರ್ವದ ಫಲವನ್ನು ಸದ್ಯದಲ್ಲಿಯೇ ಹೊಂದುವಿ.

ತ್ವದಭಿದ್ರೋಹಸಂಯುಕ್ತಂ ಯುದ್ಧಮುತ್ಪತ್ಸ್ಯತೇ ಮಹತ್ ।
ಯತ್ರ ಭೀಮೋ ಗದಾಘಾತೈಸ್ತವೋರುಂ ಭೇತ್ಸ್ಯತೇ ಬಲಾತ್ ॥೩೪॥

ನೀನು ಮಾಡಿದ ದ್ರೋಹದಿಂದ ಪ್ರಯುಕ್ತವಾದ ದೊಡ್ಡಯುದ್ಧವು ಜರುಗುವುದು. ಅಲ್ಲಿ ಭೀಮಸೇನನು ಗದೆಯ ಹೊಡೆತಗಳಿಂದ ತನ್ನ ಬಲದಿಂದ ನಿನ್ನ ತೊಡೆಯನ್ನು ಮುರಿಯುವನು.

ಇತ್ಯೇವಮುಕ್ತೇ ವಚನೇ ಧೃತರಾಷ್ಟ್ರೋ ಮಹೀಪತಿಃ ।
ಪ್ರಸಾದಯಾಮಾಸ ಮುನಿಂ ನೈತದೇವಂ ಭವೇದಿತಿ ॥೩೫॥

ಋಷಿಗಳು ಹೀಗೆ ಹೇಳುತ್ತಿರಲು ರಾಜನಾದ ಧೃತರಾಷ್ಟ್ರನು ಹೀಗೆ ಆಗದಂತೆ ಅನುಗ್ರಹಿಸಿ ಎಂದು ಅವರನ್ನು ಕೇಳಿಕೊಂಡನು.

ಮೈತ್ರೇಯಃ

ಶಮಂ ಯಾಸ್ಯತಿ ಚೇತ್ ಪುತ್ರಸ್ತವ ರಾಜನ್ ಯಥಾ ತಥಾ ।
ಶಾಪೋ ನ ಭವಿತಾ ತಾತ ವಿಪರೀತೇ ಭವಿಷ್ಯತಿ ॥೩೬॥

ಎಲೈ ರಾಜನೇ! ನಿನ್ನ ಪುತ್ರನು ನಾನು ಹೇಳಿದಂತೆ ಪಾಂಡವರ ಜೊತೆಯಲ್ಲಿ ಶಾಂತಿ ಸಂಧಾನವನ್ನು ಮಾಡಿಕೊಂಡರೆ ಶಾಪದ ಫಲವು ಉಂಟಾಗುವುದಿಲ್ಲ. ಇಲ್ಲದಿದ್ದರೆ ಅವಶ್ಯವಾಗಿ ಶಾಪದಫಲವು ಉಂಟಾಗುವುದು.

**ವೈಶಂಪಾಯನಃ**

**ಸ ವಿಲಕ್ಷಸ್ತು ರಾಜೇಂದ್ರ ದುರ್ಯೋಧನಪಿತಾ ತದಾ ।**
**ಮೈತ್ರೇಯಂ ಪ್ರಾಹ ಕಿಮ್ಮೀರಃ ಕಥಂ ಭೀಮೇನ ಪಾತಿತಃ ॥೩೭॥**

ಎಲೈ ರಾಜೇಂದ್ರನೇ! ಆಗ ದುರ್ಯೋಧನನ ತಂದೆಯಾದ ಧೃತರಾಷ್ಟ್ರನು ತನ್ನ ಲಕ್ಷ್ಯವನ್ನು ಬೇರೆ ಕಡೆಗೆ ತಿರುಗಿಸಿ ಮೈತ್ರೇಯರನ್ನು ಕುರಿತು ಕಿಮ್ಮೀರನು ಭೀಮನಿಂದ ಹೇಗೆ ಹತನಾದನು ಎಂದು ಕೇಳಿದನು.

**ಮೈತ್ರೇಯಃ**

**ನಾಹಂ ವಕ್ಷ್ಯಾಮ್ಯಸೂಯಾ ಮೇ ನ ತೇ ಶುಶ್ರೂಷತೇ ಸುತಃ ।**
**ಏಷ ತೇ ವಿದುರಃ ಸರ್ವಮಾಖ್ಯಾಸ್ಯತಿ ಗತೇ ಮಯಿ ॥೩೮॥**

ಅದನ್ನು ನಾನು ಹೇಳುವೆನು ನನಗೆ ಅಸೂಯೆ ಇಲ್ಲ. ಆದರೆ ನಿನ್ನ ಮಗನು ಕೇಳುವುದಿಲ್ಲ. ಆದ್ದರಿಂದ ನಾನು ಹೋದಮೇಲೆ ಈ ವಿದುರನು ನಿನಗೆ ಎಲ್ಲವನ್ನೂ ಹೇಳುವನು.

**ಇತ್ಯೇವಮುಕ್ತ್ವಾ ಮೈತ್ರೇಯಃ ಸ ಪ್ರಾತಿಷ್ಠದ್ ಯಥಾಗತಮ್ ।**
**ಕಿಮ್ಮೀರವಧಸಂವಿಗ್ನೋ ಭಯಂ ದುರ್ಯೋಧನೋಽಗಮತ್ ॥೩೯॥**

ಹೀಗೆ ಹೇಳಿ ಮೈತ್ರೇಯರು ಬಂದ ದಾರಿಯಲ್ಲಿಯೇ ಹಿಂದಿರುಗಿದರು. ಕಿಮ್ಮೀರನ ವಧೆಯನ್ನು ಕೇಳಿದುದರಿಂದ ಉಂಟಾದ ಭಯವು ದುರ್ಯೋಧನನನ್ನು ಆವರಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ನವಮೋಽಧ್ಯಾಯಃ ॥ ॥ ಆರಣ್ಯಕಪರ್ವಣಿ ನವಮೋಽಧ್ಯಾಯಃ ॥

**॥ ಆರಣ್ಯಕಪರ್ವ ಸಮಾಪ್ತಮ್ ॥**

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಆರಣ್ಯಕಪರ್ವವು ಮುಗಿಯಿತು.

★ ★ ★ ★

## ೨. ಕಿರ್ಮೀರವಧಪರ್ವ

### ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಓಂ ಆಗಂತುಕಾಮಾನ್ ಪುರವಾಸಿನಸ್ತೇ
ಸಂಸ್ಥಾಪ್ಯಕೃಚ್ಛ್ರೇಣ ಕುರುಪ್ರವೀರಾಃ ।
ರಾತ್ರೌ ಪ್ರವಿಷ್ಟಾ ಗಹನಂ ವನಂ ಚ
ಕಿರ್ಮೀರಮಾಸೇದುರಥೋ ನರಾಶಂ ॥೧॥

ಪಾಂಡವರು ತಮ್ಮ ಜೊತೆಗೆ ಕಾಡಿಗೆ ಬರಲು ಬಯಸಿದ ನಗರವಾಸಿಗಳನ್ನು ಕಷ್ಟದಿಂದ ತಡೆದು ನಿಲ್ಲಿಸಿ ರಾತ್ರಿಯಲ್ಲಿ ದಟ್ಟವಾದ ಕಾಡನ್ನು ಪ್ರವೇಶಿಸಿದರು. ಅಲ್ಲಿ ಕಿರ್ಮೀರನೆಂಬ ನರಭಕ್ಷಕ ರಾಕ್ಷಸನನ್ನು ಸಂಧಿಸಿದರು.

ಬಕಾನುಜೋಽಸೌ ನಿಖಿಲೈರಜೇಯೋ
ವರಾದ್ ಗಿರೀಶಸ್ಯ ನಿಹಂತುಕಾಮಃ ।
ಸದಾರಸೋದರ್ಯಮಭಿಪ್ರವಸ್ರೇ
ಭೀಮಂ ಮಹಾವೃಕ್ಷಗಿರೀನ್ ಪ್ರಮುಂಚನ್ ॥೨॥

ಕಿರ್ಮೀರ ಬಕಾಸುರನ ತಮ್ಮ ರುದ್ರನ ವರಬಲದಿಂದ ಎಲ್ಲರಿಗೂ ಅಜೇಯನಾಗಿದ್ದ. ಪತ್ನೀ ಸೋದರರ ಸಮೇತ ಭೀಮನನ್ನು ಕೊಲ್ಲಲು ಬಯಸಿ ಅವನು ದೊಡ್ಡ ಮರಗಳನ್ನೂ ಬೆಟ್ಟಗಳನ್ನೂ ಎಸೆಯುತ್ತ ಇದಿರಿಗೆ ಬಂದ.

ಸ ಸಂಪ್ರಹಾರಂ ಸಹ ತೇನ ಕೃತ್ವಾ
ಭೀಮೋ ನಿಪಾತ್ಯಾಶು ಧರಾತಲೇ ತಂ ।
ಚಕ್ರೇ ಮಖೇ ಸಂಗರನಾಮಧೇಯೇ
ಪ್ರಸಹ್ಯ ನಾರಾಯಣದೈವತೇ ಪಶುಂ ॥೩॥

ಭೀಮ ಕಿರ್ಮೀರನೊಡನೆ ಹೋರಾಡಿ ಬೇಗನೆ ನೆಲದ ಮೇಲೆ ಕೆಡವಿ ನಾರಾಯಣ ದೇವತಾಕವಾದ ಯುದ್ಧವೆಂಬ ಯಜ್ಞದಲ್ಲಿ ಅವನನ್ನು ಬಲಾತ್ಕಾರವಾಗಿ ಬಲಿಪಶುವನ್ನಾಗಿ ಮಾಡಿದ.

★★★★★

## ಹತ್ತನೆಯ ಅಧ್ಯಾಯ

(ವಿದುರನಿಂದ ಭೀಮಸೇನನು ಮಾಡಿದ ಕಿರ್ಮೀರ ವಧೆಯ ಕಥನ.)

### ಧೃತರಾಷ್ಟ್ರ

ಕಿರ್ಮೀರಸ್ಯ ವಧಂ ಕ್ಷತ್ತಃ ಶ್ರೋತುಮಿಚ್ಛಾಮಿ ಕಥ್ಯತಾಮ್ ।
ರಕ್ಷಸಾ ಭೀಮಸೇನಸ್ಯ ಕಥಮಾಸೀತ್ ಸಮಾಗಮಃ ॥೧॥

ವಿದುರನೇ! ಕಿರ್ಮೀರವಧೆಯನ್ನು ಕೇಳಲು ಬಯಸುತ್ತೇನೆ ಅದನ್ನು ಹೇಳು. ಆ ರಾಕ್ಷಸನಿಗೂ ಭೀಮಸೇನನಿಗೂ ಹೇಗೆ ಸಮಾಗಮವು ಉಂಟಾಯಿತು?

### ವಿದುರಃ

ಶೃಣು ಭೀಮಸ್ಯ ಕರ್ಮೇದಮತಿಮಾನುಷಕರ್ಮಣಃ ।
ಶ್ರುತಪೂರ್ವಂ ಮಯಾ ತೇಷಾಂ ಕಥಾಂತೇಷು ಪುನಃ ಪುನಃ ॥೨॥

ರಾಜನೇ! ಅತಿಮಾನುಷಕರ್ಮವನ್ನು ಮಾಡುವ ಭೀಮನ ಈ ಕಿರ್ಮೀರವಧೆಯನ್ನು ಕೇಳು. ನಾನು ಇದನ್ನು ಪಾಂಡವರ ಕಥೆಯ ಮಧ್ಯದಲ್ಲಿ ಹಿಂದೆ ಪುನಃ ಪುನಃ ಕೇಳಿದ್ದೇನೆ.

ಇತಃ ಪ್ರಯಾತಾ ರಾಜೇಂದ್ರ ಪಾಂಡವಾ ದ್ಯೂತನಿರ್ಜಿತಾಃ ।
ಜಗ್ಮುಸ್ತ್ರಿರಹೋರಾತ್ರೈಃ ಕಾಮ್ಯಕಂ ನಾಮ ತದ್ವನಮ್ ॥೩॥

ರಾಜೇಂದ್ರನೇ! ದ್ಯೂತದಲ್ಲಿ ಪರಾಭವವನ್ನು ಹೊಂದಿದ ಪಾಂಡವರು ಇಲ್ಲಿಂದ ಹೊರಟು ಮೂರು ಹಗಲು ರಾತ್ರಿಗಳಲ್ಲಿ ನಡೆದು ಕಾಮ್ಯಕವನವನ್ನು ತಲುಪಿದರು.

ರಾತ್ರೌ ನಿಶೀಥೇ ಸ್ವಾಲೀಢೇ ಗತೇಽರ್ಧಸಮಯೇ ನೃಪ ।
ಪ್ರಚಾರೇ ಪುರುಷಾದಾನಾಂ ರಕ್ಷಸಾಂ ಭೀಮಕರ್ಮಣಾಮ್ ॥೪॥

ತದ್ವನಂ ತಾಪಸಾ ನಿತ್ಯಂ ಗೋಪಾಶ್ಚ ವನಚಾರಿಣಃ ।
ದೂರಾತ್ ಪರಿಹರಿಷ್ಯಂತಿ ಪುರುಷಾದಭಯಾತ್ ಕಿಲ ॥೫॥

ರಾತ್ರಿಯಲ್ಲಿ ಅರ್ಧಸಮಯವು ಕಳೆದ ಮೇಲೆ ಇದು ತಮ್ಮ ಸಮಯ ಎಂದು ಆಸ್ವಾದಿಸಿ ಕ್ರೂರಕರ್ಮಿಗಳೂ ಮನುಷ್ಯಭಕ್ಷಕರೂ ಆದ ರಾಕ್ಷಸರು ಮತ್ತು ಪಿಶಾಚಗಳು ಸಂಚಾರಮಾಡುವ ಸಮಯದಲ್ಲಿ ತಾಪಸರು ಗೋಪಾಲಕರು ಮತ್ತು ವನಚಾರಿಗಳು ರಾಕ್ಷಸಭಯದಿಂದ ಆ ವನವನ್ನು ದೂರದಲ್ಲಿಯೇ ತ್ಯಜಿಸುತ್ತಾರೆ.

ತೇಷಾಂ ಪ್ರವಿಶತಾಂ ತತ್ರ ಮಾರ್ಗಮಾವೃತ್ಯ ಭಾರತ ।
ದೀಪ್ತಾಕ್ಷಂ ಭೀಷಣಂ ರಕ್ಷಃ ಸೋಲ್ಮುಕಂ ಸಮದೃಶ್ಯತ ॥೬॥

ಎಲೈ ಭಾರತನೇ! ಅವರು ಕಾಮ್ಯಕವನನ್ನು ಪ್ರವೇಶಿಸುತ್ತಿರುವಷ್ಟರಲ್ಲೇ ತಮ್ಮ ದಾರಿಯನ್ನು ಅಡ್ಡಗಟ್ಟಿನಿಂತ ಭಯಂಕರವಾದ ಹೊಳೆಯುತ್ತಿರುವ ಕಣ್ಣುಗಳುಳ್ಳ ಕೈಯಲ್ಲಿ ಒಂದು ಉಲ್ಮುಕವನ್ನು (ಕೊಳ್ಳಿಯನ್ನು) ಹಿಡಿದ ರಾಕ್ಷಸನು ಕಾಣಿಸಿಕೊಂಡನು.

ಬಾಹೂ ಮಹಾಂತೌ ಕೃತ್ವಾ ತು ತಥಾಽಽಸ್ಯಂ ಚ ಭಯಾನಕಮ್ ।
ಸ್ಥಿತಮಾವೃತ್ಯ ಪಂಥಾನಂ ಯೇನ ಯಾಂತಿ ಕುರೂದ್ವಹಾಃ ॥೭॥

ದಷ್ಟೌಷ್ಠದ್ರಂಷ್ಟ್ರಂ ತಾಮ್ರಾಕ್ಷಂ ಪ್ರದೀಪ್ತೋರ್ಧ್ವಶಿರೋರುಹಮ್ ।
ಸಾರ್ಕರಶ್ಮಿತಡಿಚ್ಚಕ್ರಂ ಸಬಾಲಾರ್ಕಮಿವಾಂಬುದಮ್ ॥೮॥

ತನ್ನ ಬಾಹುಗಳನ್ನು ಚಾಚಿ, ಬಾಯಿಯನ್ನು ಭಯಂಕರವಾಗಿ ತೆರೆದು ಪಾಂಡವರು ಹೋಗುವ ದಾರಿಯನ್ನು ಅಡ್ಡಗಟ್ಟಿನಿಂತನು. ತುಟಿಯನ್ನು ಹಲ್ಲು ಮುಡಿಯನ್ನು ಕಚ್ಚಿ ಕೆಂಪಾದ ಕಣ್ಣುಳ್ಳವನಾಗಿ ಹೊಳೆಯುವ ಊರ್ಧ್ವಮುಖವಾದ ಕೇಶವುಳ್ಳವನಾಗಿ ಸೂರ್ಯರಶ್ಮಿಯಂತೆ ಮೇಲ್ಮುಖವಾದ ಜಟೆ ಮಿಂಚಿನ ಮಂಡಲದಂತೆ ಕ್ಷಣಕ್ಷಣಕ್ಕೆ

ತಿರುಗುವ ಉಲ್ಮುಕ ಮತ್ತು ಬಾಲಸೂರ್ಯನಂತೆ ಕಣ್ಣುಗಳನ್ನು ಹೊಂದಿ ಸ್ವತಃ ಕಪ್ಪುಮೋಡದ ಕಾಂತಿಯುಳ್ಳವನಾಗಿ ನಿಂತನು.

ಸೃಜಂತಂ ರಾಕ್ಷಸೀಂ ಮಾಯಾಂ ಮಹಾರಾವವಿಗರ್ವಿಣೇಮ್ ।
ಮುಂಚಂತಂ ವಿಪುಲಂ ನಾದಂ ಸತೋಯಮಿವ ತೋಯದಮ್ ॥೯॥

ರಾಕ್ಷಸಮಾಯೆಯನ್ನು ಸೃಷ್ಟಿಸುತ್ತಾ ದೊಡ್ಡ ಗರ್ಜನೆಯನ್ನುಮಾಡಿ ಗರ್ವಪಡುತ್ತಾ ನೀರಿನಿಂದ ಕೂಡಿದ ಮೋಡದಂತೆ ವಿಪುಲವಾದ ನಾದವನ್ನುಮಾಡುತ್ತಾ ನಿಂತನು.

ಯಸ್ಯ ನಾದೇನ ಸಂತ್ರಸ್ತಾಃ ಪಕ್ಷಿಣಃ ಸರ್ವತೋದಿಶಮ್ ।
ವಿಮುಕ್ತನಾದಾಃ ಸಂಪೇತುಃ ಸ್ಥಲಜಾ ಜಲಜೈಃ ಸಹ ॥೧೦॥

ಅವನ ಆ ನಾದಕ್ಕೆ ಹೆದರಿದ ಸ್ಥಲಜ ಮತ್ತು ಜಲಜ ಪಕ್ಷಿಗಳು ಚೀರುತ್ತಾ ದಿಕ್ಕುದಿಕ್ಕುಗಳಿಗೆ ಹಾರಿಹೋದವು.

ಸಂಪ್ರದ್ರುತಮೃಗದ್ವೀಪಿಮಹಿಷರ್ಕ್ಷಸಮಾಕುಲಮ್ ।
ತದ್ವನಂ ತಸ್ಯ ನಾದೇನ ವಿತ್ರಸ್ತಮಿವ ಚಾಭವತ್ ॥೧೧॥

ಜಿಂಕೆಗಳು ಹುಲಿಗಳು ಮಹಿಷಗಳು ಕರಡಿಗಳು ಎಲ್ಲವೂ ಓಡಿಹೋಗಿ ಅವನ ನಾದದಿಂದ ಆ ವನವೇ ಭಯಗ್ರಸ್ತವಾದಂತೆ ಇದ್ದಿತು.

ತಸ್ಯೋರುವಾತಾಭಿಹತಾಃ ತಾಮ್ರಪಲ್ಲವಬಾಹವಃ ।
ವಿದೂರಜಾತಾಶ್ಚ ಲತಾಃ ಸಮಾಶ್ಲಿಷ್ಯಂತ ಪಾದಪಾನ್ ॥೧೨॥

ತಸ್ಮಿನ್ ಕ್ಷಣೇऽಥ ಪ್ರವವೌ ಮಾರುತೋ ಭೃಶದಾರುಣಃ ।
ರಜಸಾ ಸಂವೃತಂ ತೇನ ನಷ್ಟರ್ಕ್ಷಮಭವನ್ನಭಃ ॥೧೩॥

ಅವನ ಪ್ರಬಲವಾದ ಶ್ವಾಸವಾಯುವಿನಿಂದ ಬಡಿಯಲ್ಪಟ್ಟ ಕೆಂಪಾದ ಎಳೆಯ ಚಿಗುರುಗಳುಳ್ಳ ಲತೆಗಳು ಅವನಿಗೆ ದೂರದಲ್ಲಿದ್ದರೂ ವೃಕ್ಷಗಳನ್ನು ಆಲಿಂಗಿಸಿದವು. ಆ ಸಮಯದಲ್ಲಿ ಭಯಂಕರವಾದ ಗಾಳಿಯು ಬೀಸಿ ಧೂಳಿನಿಂದ ಆಕಾಶದಲ್ಲಿದ್ದ ನಕ್ಷತ್ರಗಳು ಕಾಣಲಿಲ್ಲ.

ಪಂಚಾನಾಂ ಪಾಂಡವೇಯಾನಾಮವಿಜ್ಞಾತೋ ಮಹಾರಿಪುಃ ।
ಪಂಚಾನಾಮಿಂದ್ರಿಯಾಣಾಂ ತು ಶೋಕವೇಗ ಇವಾತುರಃ ॥೧೪॥

ಪಂಚೇಂದ್ರಿಯಗಳಿಗೆ ಇದ್ದಕ್ಕಿದ್ದಂತೆಯೇ ಶೋಕವೇಗ ಉಂಟಾದಂತೆ ಆ ಮಹಾಶತ್ರುವು ಐವರು ಪಾಂಡವರು ಮೊದಲು ಯೋಚನೆಮಾಡದಿದ್ದಂತೆಯೇ ಅವರ ಮುಂದೆ ನಿಂತನು.

ಸ ದೃಷ್ಟ್ವಾ ಪಾಂಡವಾನ್ ದೂರಾತ್ ಕೃಷ್ಣಾಜಿನಸಮಾವೃತಾನ್ ।
ಆವೃಣೋತ್ ತದ್ವನದ್ವಾರಂ ಮೈನಾಕ ಇವ ಪರ್ವತಃ ॥೧೫॥

ಕೃಷ್ಣಾಜಿನವನ್ನು ಧರಿಸಿದ ಪಾಂಡವರನ್ನು ಅವನು ದೂರದಿಂದಲೇ ನೋಡಿ, ಆ ವನದ ಪ್ರವೇಶದ್ವಾರವನ್ನು ಮೈನಾಕಪರ್ವತದಂತೆ ಅಡ್ಡಗಟ್ಟಿ ನಿಂತನು.

ತಂ ಸಮಾಸಾದ್ಯ ವಿತ್ರಸ್ತಾ ಕೃಷ್ಣಾ ಕಮಲಲೋಚನಾ ।
ಅದೃಷ್ಟಪೂರ್ವಮತ್ಯರ್ಥಂ ವಿಷಾದಮಗಮತ್ ಪರಮ್ ॥೧೬॥

ಹಿಂದೆಂದೂ ನೋಡದಿದ್ದಂತಹ ಅವನನ್ನು ನೋಡಿ ಹೆದರಿದ ಕಮಲಲೋಚನೆಯಾದ ದ್ರೌಪದಿಯು ಬಹಳ ವಿಷಾದವನ್ನು ಹೊಂದಿದಳು.

ದುಶ್ಶಾಸನಕರಸ್ಪರ್ಶವಿಪ್ರಕೀರ್ಣಶಿರೋರುಹಾ ।
ಪಂಚಪರ್ವತಮಧ್ಯಸ್ಥಾ ನದೀವಾಕುಲತಾಂ ಗತಾ ॥೧೭॥

ದುಶ್ಶಾಸನನ ಕರಸ್ಪರ್ಶದಿಂದ ಕೆದರಿದ ಕೂದಲುಗಳುಳ್ಳ ಅವಳು ಐದು ಪರ್ವತಗಳ ಮಧ್ಯದಲ್ಲಿ ಇರುವ ನದಿಯಂತೆ ಪ್ರಕ್ಷುಬ್ಧಳಾದಳು.

ಮೋಮುಹ್ಯಮಾನಾಂ ತಾಂ ತತ್ರ ಜಗೃಹುಃ ಪಂಚ ಪಾಂಡವಾಃ ।
ಇಂದ್ರಿಯಾಣಿ ಪ್ರಸಕ್ತಾನಿ ವಿಷಯೇಷು ಯಥಾ ಗತಿಮ್ ॥೧೮॥

ವಿಷಯಗಳಲ್ಲಿ ಪ್ರಸಕ್ತವಾದ ಇಂದ್ರಿಯಗಳು ರತಿಯನ್ನು (ಇಂದ್ರಿಯಸುಖವನ್ನು) ಹಿಡಿದುಕೊಂಡಂತೆ ಪುನಃಪುನಃ ಮೋಹಕ್ಕೆ ಒಳಗಾಗುತ್ತಿದ್ದ ಅವಳನ್ನು ಪಂಚಪಾಂಡವರು ಹಿಡಿದುಕೊಂಡರು.

ಅಥ ತಾಂ ರಾಕ್ಷಸೀಂ ಮಾಯಾಮುತ್ಥಿತಾಂ ಘೋರದರ್ಶನಾಮ್ ।
ರಕ್ಷೋಘ್ನೈರ್ವಿವಿಧೈರ್ಮಂತ್ರೈರ್ಧರ್ಮ್ಯೈಃ ಸಮ್ಯಕ್ಪ್ರಯೋಜಿತೈಃ ।
ಪಶ್ಯತಾಂ ಪಾಂಡುಪುತ್ರಾಣಾಂ ನಾಶಯಾಮಾಸ ವೀರ್ಯವಾನ್ ॥೧೯॥

ಆಗ ಪರಾಕ್ರಮಶಾಲಿಗಳಾದ ಧೌಮ್ಯರು ರಾಕ್ಷಸರನ್ನು ನಿವಾರಣೆಮಾಡುವ ಅನೇಕ ಮಂತ್ರಗಳನ್ನು ಚೆನ್ನಾಗಿ ಪ್ರಯೋಗಿಸಿ ಪಾಂಡವರ ಕಣ್ಣೆದುರಿಗೇ ಆ ಭಯಂಕರವಾಗಿ ಮೂಡಿಬಂದ ರಾಕ್ಷಸಮಾಯೆಯನ್ನು ನಾಶಪಡಿಸಿದರು.

ಸ ನಷ್ಟಮಾಯೋಽತಿಬಲಃ ಕ್ರೋಧವಿಷ್ಫಾರಿತೇಕ್ಷಣಃ ।
ಕಾಮಮೂರ್ತಿಧರಃ ಕ್ರುದ್ಧಃ ಕಾಲಕಲ್ಪೋ ಹ್ಯದೃಶ್ಯತ ॥೨೦॥

ತನ್ನ ಮಾಯೆಯು ನಷ್ಟವಾದಮೇಲೆ ಮಹಾಬಲಶಾಲಿಯಾದ ಕ್ರೋಧದಿಂದ ಅರಳಿದ ಕಣ್ಣುಳ್ಳ ಕಾಮರೂಪಧರನಾದ ಮೃತ್ಯುವಿನಂತಿದ್ದ ಆ ಕೋಪಗೊಂಡ ರಾಕ್ಷಸನು ಕಾಣಿಸಿದನು.

ತಮುವಾಚ ತತೋ ರಾಜಾ ದೀರ್ಘಪ್ರಜ್ಞೋ ಯುಧಿಷ್ಠಿರಃ ।
ಕೋ ಭವಾನ್ ಕಸ್ಯ ವಾ ಕಿಂ ತೇ ಕ್ರಿಯತಾಂ ಕಾರ್ಯಮುಚ್ಯತಾಮ್ ।
ಪ್ರತ್ಯುವಾಚಾಥ ತದ್ರಕ್ಷೋ ಧರ್ಮರಾಜಂ ಯುಧಿಷ್ಠಿರಮ್ ॥೨೧॥

ದೀರ್ಘಪ್ರಜ್ಞೆಯುಳ್ಳ ಯುಧಿಷ್ಠಿರನು ಆ ರಾಕ್ಷಸನನ್ನು ಕುರಿತು ಆಗ ನೀನು ಯಾರು? ಯಾರ ಪುತ್ರ? ನಮ್ಮಿಂದ ನಿನಗೆ ಏನು ಆಗಬೇಕಾಗಿದೆ? ಎಂದು ಕೇಳಿದನು. ಆಗ ಆ ರಾಕ್ಷಸನು ಧರ್ಮರಾಜನಾದ ಯುಧಿಷ್ಠಿರನನ್ನು ಕುರಿತು ಉತ್ತರವನ್ನು ನೀಡಿದನು.

ಅಹಂ ಬಕಸ್ಯ ವೈ ಭ್ರಾತಾ ಕಿರ್ಮೀರ ಇತಿ ವಿಶ್ರುತಃ ।
ವನೇಽಸ್ಮಿನ್ ಕಾಮ್ಯಕೇ ಶೂನ್ಯೇ ನಿವಸಾಮಿ ಗತಜ್ವರಃ ।
ಯುಧಿ ನಿರ್ಜಿತ್ಯ ಪುರುಷಾನಾಹಾರಂ ನಿತ್ಯಮಾಚರನ್ ॥೨೩॥

ನಾನು ಬಕನ ಸಹೋದರ. ಕಿರ್ಮೀರನೆಂದು ನನ್ನ ಹೆಸರು ಪ್ರಸಿದ್ಧವಾಗಿದೆ. ಈ ನಿರ್ಜನವಾದ ಕಾಮ್ಯಕವನದಲ್ಲಿ ನಿರಾತಂಕವಾಗಿ ವಾಸಮಾಡುತ್ತಿದ್ದೇನೆ. ಯುದ್ಧದಲ್ಲಿ ಮನುಷ್ಯರನ್ನು ಸೋಲಿಸಿ ನಿತ್ಯವೂ ಅವರನ್ನು ಆಹಾರವಾಗಿ ಸ್ವೀಕರಿಸುತ್ತೇನೆ.

ಕೇ ಯೂಯಮಿಹ ಸಂಪ್ರಾಪ್ತಾ ಭಕ್ಷ್ಯಭೂತಾ ಮಮಾಂತಿಕಮ್ ।
ಯುಧಿ ನಿರ್ಜಿತ್ಯ ವಃ ಸರ್ವಾನ್ ಭಕ್ಷಯಿಷ್ಯೇ ಗತಜ್ವರಃ ॥೨೪॥

ನನಗೆ ಆಹಾರಭೂತರಾಗಿ ನನ್ನ ಸಮೀಪಕ್ಕೆ ಇಲ್ಲಿಗೆ ಬಂದ ನೀವು ಯಾರು? ಯುದ್ಧದಲ್ಲಿ ನಿಮ್ಮೆಲ್ಲರನ್ನೂ ಸೋಲಿಸಿ ನಿರಾತಂಕವಾಗಿ ನಿಮ್ಮನ್ನು ಭಕ್ಷಿಸುವೆನು.

ವಿದುರಃ

ಯುಧಿಷ್ಠಿರಸ್ತು ತಚ್ಛ್ರುತ್ವಾ ವಚಸ್ತಸ್ಯ ದುರಾತ್ಮನಃ ।
ಆಚಚಕ್ಷೇ ತತಃ ಸರ್ವಂ ಗೋತ್ರನಾಮಾದಿ ಭಾರತ ॥೨೫॥

ಎಲೈ ಭಾರತನೇ! ಯುಧಿಷ್ಠಿರನು ಆ ದುರಾತ್ಮನ ಮಾತುಗಳನ್ನು ಕೇಳಿ ತನ್ನ ಗೋತ್ರ ನಾಮ ಎಲ್ಲವುಗಳನ್ನೂ ಹೇಳಿದನು.

ಪಾಂಡವೋ ಧರ್ಮರಾಜೋಽಹಂ ಯದಿ ತೇ ಶ್ರೋತ್ರಮಾಗತಃ ।
ಸಹಿತೋ ಭ್ರಾತೃಭಿಃ ಸರ್ವೈರ್ಭೀಮಸೇನಾರ್ಜುನಾದಿಭಿಃ ॥೨೬॥

ಹೃತರಾಜ್ಯೋ ವನೇ ವಾಸಂ ವಸ್ತುಂ ಕೃತಮತಿಸ್ತತಃ ।
ವನಮಭ್ಯಾಗತೋ ಘೋರಮಿದಂ ತವ ಪರಿಗ್ರಹಮ್ ॥೨೭॥

ನಿನ್ನ ಕಿವಿಗೆ ಬಿದ್ದಿದ್ದರೆ ನಾನು ಪಾಂಡುಪುತ್ರನಾದ ಧರ್ಮರಾಜ. ತಮ್ಮಂದಿರಾದ ಭೀಮಸೇನ ಅರ್ಜುನ ಇವರೆಲ್ಲರಿಂದಲೂ ಸಹಿತನಾಗಿ ರಾಜ್ಯವನ್ನು ಕಳೆದುಕೊಂಡು ವನವಾಸವನ್ನು ಮಾಡಲು ನಿಶ್ಚಯಿಸಿ ನೀನು ವಾಸಸ್ಥಾನವಾಗಿ ಸ್ವೀಕರಿಸಿರುವ ಈ ಘೋರವಾದ ಅರಣ್ಯಕ್ಕೆ ಬಂದಿದ್ದೇನೆ.

ವಿದುರಃ

ಕಿಮ್ಮೀರಸ್ತ ಬ್ರವೀದೇನಂ ದಿಷ್ಟ್ಯಾ ದೇವೈರಿದಂ ಮಮ ।
ಉಪಪಾದಿತಮದ್ಯೇಹ ಚಿರಕಾಲಾನ್ಮನೋರಥಮ್ ॥೨೮॥

ಕಿಮ್ಮೀರನು ಅವನನ್ನು ಕುರಿತು ದೇವತೆಗಳ ದಯೆಯಿಂದ ನೀನು ಇಲ್ಲಿಗೆಬಂದಿದ್ದೀಯೆ. ಬಹುಕಾಲದಿಂದ ಬಯಸಿದ ನನ್ನ ಮನೋರಥವನ್ನು ದೇವತೆಗಳು ಇಂದು ಪೂರ್ಣಮಾಡಿದ್ದಾರೆ ಎಂದು ಹೇಳಿದನು.

ಭೀಮಸೇನವಧಾರ್ಥಂ ಹಿ ನಿತ್ಯಮಭ್ಯುದ್ಯತಾಯುಧಃ ।
ಚರಾಮಿ ಪೃಥಿವೀಂ ಕೃತ್ಸ್ನಾಂ ನೈನಂ ಚಾಸಾದಯಾಮ್ಯಹಮ್ ॥೨೯॥

ಭೀಮಸೇನನನ್ನು ಕೊಲ್ಲಲು ನಾನು ಆಯುಧವನ್ನು ಎತ್ತಿ ಹಿಡಿದು ಸಮಗ್ರವಾದ ಭೂಮಿಯನ್ನೆಲ್ಲಾ ತಿರುಗುತ್ತಿದ್ದೇನೆ. ಆದರೆ ಎಂದೂ ಅವನು ನನಗೆ ಕಾಣಲಿಲ್ಲ.

ಸೋಽಯಮಾಸಾದಿತೋ ದಿಷ್ಟ್ಯಾ ಭ್ರಾತೃಹಾ ಕಾಂಕ್ಷಿತಶ್ಚಿರಮ್ ।
ಅನೇನ ಹಿ ಮಮ ಭ್ರಾತಾ ಬಕೋ ವಿನಿಹತಃ ಪ್ರಿಯಃ ॥೩೦॥

ಆದರೆ ಈ ದಿನ ದೇವತೆಗಳ ಅನುಗ್ರಹದಿಂದ ನನ್ನ ಅಣ್ಣನನ್ನು ಕೊಂದ ಚಿರಕಾಲದಿಂದ ಅಪೇಕ್ಷಿತನಾದ ಅವನೇ ಇಲ್ಲಿಗೆ ಬಂದಿದ್ದಾನೆ. ಇವನೇ ನನ್ನ ಪ್ರಿತಿಪಾತ್ರನಾದ ಸಹೋದರನನ್ನು ಕೊಂದವನು.

ವೇತ್ರಕೀಯಗೃಹೇ ರಾಜನ್ ಬ್ರಾಹ್ಮಣಚ್ಛದ್ಮರೂಪಿಣಾ ।
ವಿದ್ಯಾಬಲಮುಪಾಶ್ರಿತ್ಯ ನ ಹ್ಯಸ್ಯಸ್ಯೌರಸಂ ಬಲಮ್ ॥೩೧॥

ರಾಜನೇ! ಏಕಚಕ್ರನಗರದಲ್ಲಿ ಮೋಸದಿಂದ ಬ್ರಾಹ್ಮಣವೇಷವನ್ನು ಧರಿಸಿ ತನ್ನ ವಿದ್ಯೆಯಬಲದಿಂದ ಬಕನನ್ನು ಕೊಂದನು. ಇವನಿಗೆ ಸಹಜವಾದ ಔರಸ ಬಲವಿಲ್ಲ.

ಹಿಡಿಂಬಶ್ಚ ಸಖಾ ಮಹ್ಯಂ ದಯಿತೋ ವನಗೋಚರಃ ।
ಹತೋ ದುರಾತ್ಮನಾಽನೇನ ಸ್ವಸಾ ಚಾಸ್ಯ ಹೃತಾ ಪುನಃ ॥೩೨॥

ನನ್ನ ಪ್ರೀತಿಪಾತ್ರನಾದ ಸ್ನೇಹಿತನಾದ ಹಿಡಿಂಬನೂ ಸಹ ಕಾಡಿನಲ್ಲಿ ಈ ದುರಾತ್ಮನಿಂದ ಕೊಲ್ಲಲ್ಪಟ್ಟನು. ಮತ್ತು ಅವನ ತಂಗಿಯೂ ಸಹ ಇವನಿಂದ ಅಪಹರಿಸಲ್ಪಟ್ಟಿದ್ದಾಳೆ.

ಸೋಽಯಮಭ್ಯಾಗತೋ ಮೂಢೋ ಮಮೇದಂ ಗಹನಂ ವನಮ್ ।
ಪ್ರಚಾರಸಮಯೇಽಸ್ಮಾಕಮರ್ದ್ಧರಾತ್ರೇ ಸಮಾಸ್ಥಿತೇ ॥೩೩॥

ಅಂತಹ ಈ ಮೂರ್ಖನು ಅರ್ಧರಾತ್ರಿಯಲ್ಲಿ ನಮ್ಮಂತಹವರ ಸಂಚಾರಸಮಯದಲ್ಲಿ ನನ್ನ ದಟ್ಟವಾದ ಕಾಡಿಗೆ ತಾನೇ ಬಂದಿದ್ದಾನೆ.

ಅದ್ಯಾಸ್ಯ ಯಾತಯಿಷ್ಯಾಮಿ ತದ್ವೈರಂ ಚಿರಸಂಭೃತಮ್ ।
ತರ್ಪಯಿಷ್ಯಾಮಿ ಚ ಬಕಂ ರುಧಿರೇಣಾಸ್ಯ ಭೂರಿಣಾ ॥೩೪॥

ಬಹಳ ಸಮಯದಿಂದ ಇವನ ಮೇಲಿದ್ದ ವೈರವನ್ನು ಈ ದಿನ ತೀರಿಸುವೆನು. ಇವನ ಬಹುವಾದ ರಕ್ತದಿಂದ ಬಕನಿಗೆ ತರ್ಪಣವನ್ನು ಕೊಡುವೆನು.

ಅದ್ಯಾಹಮನೃಣೋ ಭೂತ್ವಾ ಭ್ರಾತುಃ ಸಖ್ಯುಸ್ತಥೈವ ಚ ।
ಶಾಂತಿಂ ಲಬ್ಧಾಸ್ಮಿ ಪರಮಾಂ ಹತ್ವಾ ರಾಕ್ಷಸಕಂಟಕಮ್ ॥೩೫॥

ಈ ದಿನ ನಾನು ನನ್ನ ಅಣ್ಣನಾದ ಬಕನ ಮತ್ತು ಸ್ನೇಹಿತನಾದ ಹಿಡಂಬನ ಋಣವನ್ನು ತೀರಿಸಿ ರಾಕ್ಷಸಕಂಟಕನಾದ ಇವನನ್ನು ಕೊಂದು ಪರಮ ಶಾಂತಿಯನ್ನು ಪಡೆಯುವೆನು.

ಯುಧಿ ತೇನ ಪುರಾ ಮುಕ್ತೋ ಭೀಮಸೇನೋ ಬಕೇನ ವೈ ।
ಅದ್ಯೈನಂ ಭಕ್ಷಯಿಷ್ಯಾಮಿ ಪಶ್ಯತಸ್ತೇ ಯುಧಿಷ್ಠಿರ ॥೩೬॥

ಹಿಂದೆ ಬಕನು ಯುದ್ಧದಲ್ಲಿ ಭೀಮಸೇನನನ್ನು ಬೇಕೆಂತಲೇ ಉಳಿಸಿದನು. ಎಲೈ ಯುಧಿಷ್ಠಿರನೇ! ಈ ದಿನ ನಿನ್ನ ಕಣ್ಣೆದುರಿಗೇ ಅವನನ್ನು ತಿನ್ನುವೆನು.

ಏನಂ ಹಿ ವಿಪುಲಪ್ರಾಣಮದ್ಯ ಹತ್ವಾ ವೃಕೋದರಮ್ ।
ಸಂಭಕ್ಷ್ಯ ಜರಯಿಷ್ಯಾಮಿ ಯಥಾಽಗಸ್ತ್ಯೋ ಮಹಾಸುರಮ್ ॥೩೭॥

ಮಹಾಬಲಶಾಲಿಯಾದ ಈ ವೃಕೋದರನನ್ನು ತಿಂದು ಅಗಸ್ತ್ಯರು ಮಹಾಸುರನಾದ ವಾತಾಪಿಯನ್ನು ಅರಗಿಸಿಕೊಂಡಂತೆ ನಾನು ಇವನನ್ನು ಅರಗಿಸಿಕೊಳ್ಳುವೆನು.

ಏವಮುಕ್ತಸ್ತು ಧರ್ಮಾತ್ಮಾ ಸತ್ಯಸಂಧೋ ಯುಧಿಷ್ಠಿರಃ ।
ನೈತದಸ್ತೀತಿ ಸಂಕ್ರುದ್ಧೋ ಭರ್ತ್ಸಯಾಮಾಸ ರಾಕ್ಷಸಮ್ ॥೩೮॥

ಹೀಗೆ ಹೇಳಲ್ಪಟ್ಟ ಧರ್ಮಾತ್ಮನೂ ಸತ್ಯಸಂಧನೂ ಆದ ಯುಧಿಷ್ಠಿರನು ಇದು ಎಂದೂ ಆಗುವುದಿಲ್ಲ ಎಂದು ಹೇಳಿ ಸಿಟ್ಟಿನಿಂದ ಆ ರಾಕ್ಷಸನನ್ನು ನಿಂದಿಸಿದನು.

ತತೋ ಭೀಮೋ ಮಹಾಬಾಹುರಾರುಜ್ಯ ತರಸಾ ದ್ರುಮಮ್ ।
ಶತವ್ಯಾಮಮಿವೋದ್ವಿದ್ಧಂ ನಿಷ್ಪತ್ರಮಕರೋತ್ತದಾ ॥೩೯॥

ಆಗ ಮಹಾಬಾಹುವಾದ ಭೀಮನು ಶೀಘ್ರವಾಗಿ ನೂರು ಮಾರು ಎತ್ತರವಾಗಿ ಬೆಳೆದಿದ್ದ ಒಂದು ಮರವನ್ನು ಕಿತ್ತು ಅದನ್ನು ನೆಲದ ಮೇಲೆ ಬಡಿದು ಎಲ್ಲಾ ಎಲೆಗಳನ್ನೂ ಉದುರಿಸಿದನು.

ಚಕಾರ ಸಜ್ಯಂ ಗಾಂಡೀವಂ ವಜ್ರನಿಷ್ಪೇಷಭೈರವಮ್ ।
ನಿಮೇಷಾಂತರಮಾತ್ರೇಣ ತಥೈವ ವಿಜಯೋऽರ್ಜುನಃ ॥೪೦॥

ಅದರಂತೆಯೇ ಅರ್ಜುನನು ಕಣ್ಣುಮುಚ್ಚಿ ಬಿಡುವಷ್ಟರಲ್ಲಿ ವಜ್ರಾಯುಧದಂತೆ ಭಯಂಕರವಾದ ತನ್ನ ಗಾಂಡೀವ ಧನುಸ್ಸಿಗೆ ಹೆದೆಯನ್ನು ಏರಿಸಿದನು.

ನಿವಾರ್ಯ ಜಿಷ್ಣುಂ ಭೀಮೋऽಥ ತದ್ರಕ್ಷೋ ಭೀಮಗರ್ಜಿತಮ್ ।
ಅಭಿದ್ರುತ್ಯಾಬ್ರವೀದ್ ವಾಕ್ಯಂ ತಿಷ್ಠ ತಿಷ್ಠೇತಿ ಭಾರತ ॥೪೧॥

ಎಲೈ ಭಾರತನೇ! ಆಗ ಭೀಮಸೇನನು ಅರ್ಜುನನನ್ನು ತಡೆದು ಭಯಂಕರವಾಗಿ ಗರ್ಜಿಸುತ್ತಿದ್ದ ಆ ರಾಕ್ಷಸನ ಕಡೆಗೆ ಓಡಿಹೋಗಿ ಅವನನ್ನು ಕುರಿತು ನಿಲ್ಲುನಿಲ್ಲು ಎಂದು ಹೇಳಿದನು.

ಇತ್ಯುಕ್ತ್ವಾ ತಮಭಿಕ್ರುದ್ಧಂ ಕಕ್ಷ್ಯಾಮುತ್ಪೀಡ್ಯ ಪಾಂಡವಃ ।
ನಿಷ್ಪಿಷ್ಯ ಪಾಣಿನಾ ಪಾಣಿಂ ಸಂದಷ್ಟೌಷ್ಠಪುಟೋ ಬಲೀ ।
ಅಭ್ಯಧಾವತ ವೇಗೇನ ಭೀಮೋ ವೃಕ್ಷಾಯುಧಸ್ತದಾ ॥೪೨॥

ಯಮದಂಡಪ್ರತೀಕಾಶಂ ತತಸ್ತಂ ತಸ್ಯ ಮೂರ್ಧನಿ ।
ಪಾತಯಾಮಾಸ ವೇಗೇನ ಕುಲಿಶಂ ಮಘವಾನಿವ ॥೪೩॥

ಹೀಗೆ ಹೇಳಿ ಬಲಿಷ್ಠನಾದ ಭೀಮಸೇನನು ಆ ಕಾಡಿನಲ್ಲಿದ್ದ ಲತಾಗುಲ್ಮಗಳನ್ನು ಕಿತ್ತು ಕೈಯಿಂದ ಕೈಯನ್ನು ಉಜ್ಜುತ್ತಾ ಹಲ್ಲುಮುಡಿಯನ್ನು ಕಚ್ಚಿ ಕೈಯಲ್ಲಿ ವೃಕ್ಷಾಯುಧವನ್ನು ಹಿಡಿದು ವೇಗದಿಂದ ಸಿಟ್ಟುಗೊಂಡ ಆ ರಾಕ್ಷಸನ ಎಡೆಗೆ ಧಾವಿಸಿದನು. ಭೀಮನು ಯಮದಂಡದಂತಿದ್ದ ಆ ವೃಕ್ಷವನ್ನು ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿದಂತೆ ಆ ರಾಕ್ಷಸನ ತಲೆಯ ಮೇಲೆ ಬಲವಾಗಿ ಹೊಡೆದನು.

ಅಸಂಭ್ರಾಂತಂ ತು ತದ್ರಕ್ಷಃ ಸಮರೇ ಪ್ರತ್ಯದೃಶ್ಯತ ।
ಚಿಕ್ಷೇಪ ಚೋಲ್ಕಂ ದೀಪ್ತಾಂತಮಶನಿಂ ಜ್ವಲಿತಾಮಿವ ॥೪೪॥

ಆ ರಾಕ್ಷಸನು ಅದರಿಂದ ಏನೂ ಗಾಬರಿಗೊಳ್ಳದೆ ಯುದ್ಧಮಾಡುವುದು ಕಂಡುಬಂದಿತು. ಆ ರಾಕ್ಷಸನು ಉರಿಯುತ್ತಿರುವ ಉಲ್ಕೆಯನ್ನು ಸಿಡಿಲಿನಂತೆ ಭೀಮಸೇನನ ಕಡೆಗೆ ಎಸೆದನು.

ತದುದಸ್ತಮಲಾತಂ ತು ಭೀಮಃ ಪ್ರಹರತಾಂ ವರಃ ।
ಪದಾ ಸವ್ಯೇನ ಚಿಕ್ಷೇಪ ತದ್ರಕ್ಷಃ ಪುನರಾವ್ರಜತ್ ॥೪೫॥

ಆ ರಾಕ್ಷಸನು ಪ್ರಯೋಗಿಸಿದ ಆ ಉಲ್ಮುಕವು ಭೀಮಸೇನನ ಬಳಿಗೆ ಬರುತ್ತಿರಲು ಯುದ್ಧಮಾಡುವವರಲ್ಲಿ ಶ್ರೇಷ್ಠನಾದ ಭೀಮಸೇನನು ಅದನ್ನು ತನ್ನ ಎಡಗಾಲಿನಿಂದ ಒದ್ದನು. ಆ ಉಲ್ಮುಕವು ಪುನಃ ರಾಕ್ಷಸನ ಬಳಿಗೆ ಬಂದಿತು.

ಕಿರ್ಮ್ಮೀರಶ್ಚಾಪಿ ಸಹಸಾ ವೃಕ್ಷಮುತ್ಪಾಟ್ಯ ಪಾಂಡವಮ್ ।
ದಂಡಪಾಣಿರಿವ ಕ್ರುದ್ಧಃ ಸಮರೇ ಪ್ರತ್ಯದೃಶ್ಯತ ॥೪೬॥

ಕಿರ್ಮ್ಮೀರನೂ ಸಹ ಬೇಗ ಒಂದು ವೃಕ್ಷವನ್ನು ಕಿತ್ತು ದಂಡಪಾಣಿಯಾದ ಯಮನಂತೆ ಸಿಟ್ಟಿನಿಂದ ಯುದ್ಧದಲ್ಲಿ ಪಾಂಡವನ ಎದುರಿಗೆ ನಿಂತನು.

ತದ್ವೃಕ್ಷಯುದ್ಧಮಭವನ್ಮಹೀರುಹವಿನಾಶನಮ್ ।
ವಾಲಿಸುಗ್ರೀವಯೋಃ ಪೂರ್ವಂ ಭ್ರಾತೃೋಃ ಸ್ತ್ರೀಕಾಂಕ್ಷಿಣೋರಿವ ॥೪೭॥

ಅಣ್ಣತಮ್ಮಂದಿರಾದ ವಾಲಿಸುಗ್ರೀವರು ಹಿಂದೆ ಸುಗ್ರೀವನ ಪತ್ನಿಯ ಸಲುವಾಗಿ ಹೊಡೆದಾಡಿದಂತೆ ಆ ಕಾಡಿನ ಮರಗಳೆಲ್ಲವನ್ನು ವಿನಾಶಮಾಡುವ ವೃಕ್ಷಯುದ್ಧವು ನಡೆಯಿತು.

ಶೀರ್ಷಯೋಃ ಪತಿತಾ ವೃಕ್ಷಾ ಬಿಭಿದುರ್ನೈಕಧಾ ತಯೋಃ ।
ಯಥೈವೋತ್ಪಲಪತ್ರಾಣಿ ಮತ್ತಯೋರ್ದ್ವಿಪಮುಖ್ಯಯೋಃ ॥೪೮॥

ಎರಡು ಮದಿಸಿದ ಆನೆಗಳು ಹೋರಾಡುವಾಗ ನೈದಿಲೆಪತ್ರಗಳು ಚೂರುಚೂರಾದಂತೆ ಅವರ ತಲೆಯ ಮೇಲೆ ಬಿದ್ದ ಆ ಮರಗಳು ಚೂರುಚೂರಾದವು.

ಮೂರ್ಧ್ನಿ ಕ್ಷುರ್ಣ್ಣರಭೂತಾಸ್ತು ಬಹವಸ್ತತ್ರ ಪಾದಪಾಃ ।
ಚೀರಾಣೀವ ವ್ಯದಸ್ತಾನಿ ವಿರೇಜುಸ್ತತ್ರ ಭಾರತ ॥೪೯॥

ಎಲೈ ಭಾರತನೇ! ಅವರ ತಲೆಯ ಮೇಲೆ ಬಿದ್ದು ಚೂರುಚೂರಾದ ಅನೇಕ ವೃಕ್ಷಗಳು ಅಲ್ಲಿ ಹರಡಿದ ಚಿಂದಿ ಬಟ್ಟೆಯಂತೆ ಕಂಗೊಳಿಸಿದವು.

ತದ್ಭೂತ್ಕ್ಷ ಯುದ್ಧಮಭವತ್ ಮುಹೂರ್ತಂ ತು ವಿಶಾಂಪತೇ ।
ರಾಕ್ಷಸಾನಾಂ ಚ ಮುಖ್ಯಸ್ಯ ನರಾಣಾಮುತ್ತಮಸ್ಯ ಚ ॥೫೦॥

ಎಲೈ ರಾಜನೇ! ಹೀಗೆ ರಾಕ್ಷಸರ ಅಧಿಪತಿಗೂ ಮತ್ತು ಮನುಷ್ಯರಲ್ಲಿ ಸರ್ವಶ್ರೇಷ್ಠನಾದ ಭೀಮಸೇನನಿಗೂ ಒಂದು ಮುಹೂರ್ತಕಾಲ ವೃಕ್ಷಯುದ್ಧವು ನಡೆಯಿತು.

ತತಃ ಶಿಲಾಂ ಸಮುತ್ಕ್ಷಿಪ್ಯ ಭೀಮಸ್ಯ ಯುಧಿ ತಿಷ್ಠತಃ ।
ಪ್ರಾಹಿಣೋದ್ರಾಕ್ಷಸಃ ಕ್ರುದ್ಧೋ ಭೀಮಶ್ಚ ನ ಚಚಾಲ ಹ ॥೫೧॥

ಅನಂತರ ಆ ರಾಕ್ಷಸನು ಯುದ್ಧದಲ್ಲಿ ಎದುರಿಗೆ ನಿಂತಿದ್ದ ಭೀಮಸೇನನ ಮೇಲೆ ಒಂದು ದೊಡ್ಡ ಬಂಡೆಯನ್ನು ಎತ್ತಿ ಎಸೆದನು. ಕೋಪಗೊಂಡ ಭೀಮಸೇನನು ಅಲುಗಾಡದೆ ನಿಂತನು.

ತಂ ಶಿಲಾತಾಡನಜಡಂ ಪರ್ಯಧಾವತ ರಾಕ್ಷಸಃ ।
ಬಾಹುವಿಕ್ಷಿಪ್ತಕಿರಣಃ ಸ್ವರ್ಭಾನುರಿವ ಭಾಸ್ಕರಮ್ ॥೫೨॥

ಬಂಡೆಯ ಹೊಡೆತದಿಂದ ಸ್ವಲ್ಪಸ್ತಂಭಿತನಾದ ಭೀಮಸೇನನ ಕಡೆಗೆ ಆ ರಾಕ್ಷಸನು ತನ್ನ ಬಾಹುಗಳೆಂಬ ಕಿರಣಗಳನ್ನು ಚಾಚಿ ರಾಹುವು ಸೂರ್ಯನನ್ನು ಹಿಡಿಯಲು ಬಂದಂತೆ ಓಡಿ ಬಂದನು.

ತಾವನ್ಯೋನ್ಯಂ ಸಮಾಶ್ಲಿಷ್ಯ ಪ್ರಕರ್ಷಂತೌ ಪರಸ್ಪರಮ್ ।
ಉಭಾವಪಿ ಚಕಾಶೇತೇ ಪ್ರಯುದ್ಧೌ ವೃಷಭಾವಿವ ॥೫೩॥

ಅವರಿಬ್ಬರೂ ಪರಸ್ಪರವಾಗಿ ಬಿಗಿಯಾಗಿ ಹಿಡಿದು ಒಬ್ಬರನ್ನೊಬ್ಬರು ಎಳೆದಾಡುತ್ತಾ ಹೋರಾಡುವ ಎರಡು ಗೂಳಿಗಳಂತೆ ಕಂಗೊಳಿಸಿದರು.

ತಯೋರಾಸೀತ್ ಸುತುಮುಲಃ ಸಂಪ್ರಹಾರಃ ಸುದಾರುಣಃ ।
ನಖದಂಷ್ಟ್ರಾಯುಧವತೋರ್ವ್ಯಾಘ್ರಯೋರಿವ ದೃಪ್ತಯೋಃ ॥೫೪॥

ನಖ ಮತ್ತು ದಂಷ್ಟ್ರಗಳಿಂದ ಹೊಡೆದಾಡುವ ಎರಡು ಗರ್ವಿಷ್ಠ ವ್ಯಾಘ್ರಗಳಂತೆ ಅವರಿಬ್ಬರಿಗೂ ದಾರುಣವಾದ ತೀವ್ರವಾದ ಯುದ್ಧವು ಪರಸ್ಪರವಾಗಿ ನಡೆಯಿತು.

ದುರ್ಯೋಧನನಿಕಾರಾಚ್ಚ ಬಾಹುವೀರ್ಯಾಚ್ಚ ದರ್ಪಿತಃ ।
ಕೃಷ್ಣಾನಯನಹೃಷ್ಟಶ್ಚ ವ್ಯವರ್ಧತ ವೃಕೋದರಃ ॥೫೫॥

ದೃಷ್ಟಿಯುದ್ಧವನ್ನುಮಾಡುವ ಕಿಮ್ಮೀರನ ಮೇಲಿನ ತಿರಸ್ಕಾರದಿಂದಲೂ ತನ್ನ ಬಾಹುಬಲದಿಂದಲೂ ದರ್ಪವನ್ನು ಹೊಂದಿದ ಮತ್ತು ದ್ರೌಪದಿಯ ಕಟಾಕ್ಷವೀಕ್ಷಣದಿಂದ ಸಂತೋಷಗೊಂಡ ವೃಕೋದರನು ಬಲದಲ್ಲಿ ಬೆಳೆದನು.

ಅಭಿಹತ್ಯಾಥ ಬಾಹುಭ್ಯಾಂ ಪ್ರತ್ಯಗೃಹ್ಣಾದಮರ್ಷಿತಃ ।
ಮಾತಂಗಮಿವ ಮಾತಂಗಃ ಪ್ರಭಿನ್ನಕರಟಾಮುಖಿಮ್ ॥೫೬॥

ಎರಡು ಬಾಹುಗಳಿಂದ ಆ ರಾಕ್ಷಸನನ್ನು ಹೊಡೆದು ಒಂದು ಮದಿಸಿದ ಆನೆಯು ಇನ್ನೊಂದು ಮದಿಸಿದ ಆನೆಯನ್ನು ಹಿಡಿಯುವಂತೆ ಸಿಟ್ಟಿನಿಂದ ಆ ರಾಕ್ಷಸನನ್ನು ಬಾಹುಗಳಿಂದ ಹಿಡಿದನು.

ತಚ್ಚಾಪ್ಯೇನಂ ತತೋ ರಕ್ಷಃ ಪ್ರತಿಜಗ್ರಾಹ ವೀರ್ಯವತ್ ।
ತದಾಕ್ಷಿಪದ್ ಭೀಮಸೇನೋ ಬಲೇನ ಬಲಿನಾಂ ವರಃ ॥೫೭॥

ಆ ಬಲಶಾಲಿಯಾದ ರಾಕ್ಷಸನೂ ಕೂಡ ಭೀಮನನ್ನು ಹಾಗೆಯೇ ಹಿಡಿದನು. ಆಗ ಬಲಶಾಲಿಗಳಲ್ಲಿ ಅಗ್ರಗಣ್ಯನಾದ ಭೀಮಸೇನನು ಆ ರಾಕ್ಷಸನನ್ನು ಎತ್ತಿ ಎಸೆದನು.

ತಯೋರ್ಭುಜವಿನಿಷ್ಪೇಷಾದುಭಯೋರ್ಬಲಿನೋಸ್ತಥಾ ।
ಶಬ್ದಃ ಸಮಭವದ್ ಘೋರೋ ವೇಣುಸ್ಫೋಟಸಮೋ ಯುಧಿ ॥೫೮॥

ಆ ಬಲಶಾಲಿಗಳಾದ ಅವರಿಬ್ಬರೂ ಭುಜದಿಂದ ಭುಜಕ್ಕೆ ಹೊಡೆದಾಡುವಾಗ ಉಂಟಾದ ಶಬ್ದವು ಬಿದಿರು ಸಿಡಿಯುವ ಶಬ್ದಕ್ಕೆ ಸದೃಶವಾಗಿ ಆ ಯುದ್ಧದಲ್ಲಿ ಭಯಂಕರವಾಗಿ ಕೇಳುತ್ತಿದ್ದಿತು.

ಅಥೈನಮಾಕ್ಷಿಪ್ಯ ಬಲಾದ್ ಗೃಹ್ಯ ಮಧ್ಯೇ ವೃಕೋದರಃ ।
ಧೂನಯಾಮಾಸ ವೇಗೇನ ವಾಯುಶ್ಚಂಡ ಇವ ದ್ರುಮಮ್ ॥೫೯॥

ಅನಂತರ ಭೀಮಸೇನನು ಅವನನ್ನು ತನ್ನ ಬಲದಿಂದ ಮೇಲಕ್ಕೆ ಎಸೆದು ಅವನ ಮಧ್ಯಭಾಗದಲ್ಲಿ ಹಿಡಿದು ಚಂಡವಾಯುವು ಮರವನ್ನು ತೂಗಾಡಿಸುವಂತೆ ವೇಗವಾಗಿ ಅವನನ್ನು ತೂಗಾಡಿಸಿದನು.

ಸ ಭೀಮೇನ ಪರಾಮೃಷ್ಟೋ ದುರ್ಬಲೋ ಬಲಿನಾ ರಣೇ ।
ಪ್ರಾಸ್ಪಂದತ ಯಥಾಪ್ರಾಣಂ ವಿಚಕರ್ಷ ಚ ಪಾಂಡವಃ ॥೬೦॥

ಯುದ್ಧದಲ್ಲಿ ಭೀಮಸೇನನಿಂದ ಹಸ್ತದಲ್ಲಿ ಹಿಡಿಯಲ್ಪಟ್ಟ ಆ ದುರ್ಬಲವಾದ ರಾಕ್ಷಸನು ತನ್ನ ಶಕ್ತಿಯಿದ್ದಷ್ಟು ಅಲುಗಾಡಲು ಪ್ರಯತ್ನಿಸಿದನು. ಭೀಮಸೇನನು ಅವನನ್ನು ಎಳೆದಾಡಿದನು.

ತತ ಏನಂ ಪರಿಶ್ರಾಂತಮುಪಲಕ್ಷ್ಯ ವೃಕೋದರಃ ।
ಯೋಕ್ತ್ರಯಾಮಾಸ ಬಾಹುಭ್ಯಾಂ ಪಶುಂ ರಶನಯಾ ಯಥಾ ॥೬೧॥

ಅನಂತರ ಭೀಮಸೇನನು ಅವನು ದಣಿದಿರುವುದನ್ನು ಗಮನಿಸಿ ತನ್ನ ಬಾಹುಗಳಿಂದ ಪಶುವನ್ನು ಹಗ್ಗದಿಂದ ಕಟ್ಟಿದಂತೆ ಅವನಿಗೆ ನೇಗಿಲಿನಂತೆ ಪಟ್ಟು ಹಾಕಿದನು.

ನದಂತಂ ತಂ ಮಹಾನಾದಂ ಭಿನ್ನಭೇರೀನಿಭಸ್ವನಮ್ ।
ಭ್ರಾಮಯಾಮಾಸ ಸುಚಿರಂ ವಿಸ್ಫುರಂತಮಚೇತನಮ್ ॥೬೨॥

ಒಡೆದ ಭೇರಿಯಸದ್ದಿನಂತೆ ದೊಡ್ಡ ಶಬ್ದವನ್ನು ಮಾಡುತ್ತಿದ್ದ ಮತ್ತು ಚೇತನವನ್ನು ಕಳೆದುಕೊಂಡು ಹಾಗೆಯೇ ಮಿಸುಕಾಡುತ್ತಿದ್ದ ಆ ರಾಕ್ಷಸನನ್ನು ಬಹಳ ಸಮಯದವರೆಗೆ ತಿರುಗಿಸಿದನು.

ತಂ ವಿಷೀದಂತಮಾಜ್ಞಾಯ ರಾಕ್ಷಸಂ ಪಾಂಡುನಂದನಃ ।
ಪ್ರಗೃಹ್ಯ ತರಸಾ ದೋರ್ಭ್ಯಾಂ ಪಶುಮಾರಮಮಾರಯತ್ ॥೬೩॥

ಪಾಂಡುನಂದನನಾದ ಭೀಮಸೇನನು ಆ ರಾಕ್ಷಸನು ಕ್ಷೀಣಿಸುತ್ತಿರುವುದನ್ನು ಗಮನಿಸಿ ತನ್ನ ಬಾಹುಗಳಲ್ಲಿ ಹಿಡಿದು ಭೂಮಿಯ ಮೇಲೆ ಬಡಿದು ಪಶುವಿನಂತೆ ಕೊಂದನು.

ಆಕ್ರಮ್ಯ ಚ ಕಟೀದೇಶೇ ಜಾನುನಾ ರಾಕ್ಷಸಾಧಮಮ್ ।
ಅಪೀಡಯತ್ ಸ್ವಬಾಹುಭ್ಯಾಂ ತಸ್ಯ ಕಂಠಂ ವೃಕೋದರಃ ॥೬೪॥

ಅವನ ಸೊಂಟದಲ್ಲಿ ತನ್ನ ಮಂಡಿಯನ್ನು ಊರಿ ತನ್ನ ಬಾಹುಗಳಿಂದ ವೃಕೋದರನು ಅವನ ಕಂಠವನ್ನು ಬಿಗಿಯಾಗಿ ಹಿಡಿದನು.

ಅಥ ತಂ ಜಡಸರ್ವಾಂಗಂ ವ್ಯಾವೃತ್ತನಯನೋಲ್ಬಣಮ್ ।
ಭೂತಳೇ ಪಾತಯಾಮಾಸ ವಾಕ್ಯಂ ಚೇದಮುವಾಚ ಹ ॥೬೫॥

ಅನಂತರ ತನ್ನ ಸರ್ವಾಂಗಗಳೂ ಜಡವಾಗಿ ದೊಡ್ಡದಾಗಿ ಕಣ್ಣುತೆರೆದು ಭಯಂಕರವಾಗಿ ಕಾಣುತ್ತಿದ್ದ ಆ ರಾಕ್ಷಸನನ್ನು ಭೂಮಿಯ ಮೇಲೆ ಕೆಡವಿ ಈ ಮಾತನ್ನು ಆಡಿದನು.

ಹಿಡಿಂಬಬಕಯೋಃ ಪಾಪ ನ ತ್ವಮಶ್ರುಪ್ರಮಾರ್ಜನಮ್ ।
ಕರಿಷ್ಯಸಿ ಗತಶ್ಚಾಸಿ ಯಮಸ್ಯ ಸದನಂ ಪ್ರತಿ ॥೬೬॥

ಪಾಪಿಯೇ ನೀನು ಹಿಡಿಂಬ ಮತ್ತು ಬಕರ ಕಣ್ಣೀರನ್ನು ಒರೆಸಲು ಸಾಧ್ಯವಿಲ್ಲ. ನೀನೇ ಯಮಲೋಕಕ್ಕೆ ಹೋಗಿದ್ದೀಯೆ.

ಇತ್ಯೇವಮುಕ್ತ್ವಾ ಪುರುಷಪ್ರವೀರಃ ।
ತಂ ರಾಕ್ಷಸಂ ಕ್ರೋಧವಿವೃತ್ತನೇತ್ರಃ ।
ವಿಸ್ರಸ್ತವಸ್ತ್ರಾಭರಣಂ ಸ್ಫುರಂತಮ್ ।
ಉದ್ಭ್ರಾಂತಚಿತ್ತಂ ವ್ಯಸುಮುತ್ಸಸರ್ಜ ॥೬೭॥

ಹೀಗೆ ಹೇಳಿ ಪುರುಷಶ್ರೇಷ್ಠನಾದ ಆ ಭೀಮಸೇನನು ಕ್ರೋಧದಿಂದ ಅರಳಿದ ಕಣ್ಣುಳ್ಳವನಾಗಿ ವಸ್ತ್ರ ಮತ್ತು ಆಭರಣಗಳು ಅಸ್ತವ್ಯಸ್ತವಾಗಿದ್ದ ಭ್ರಾಂತಚಿತ್ತನಾಗಿ ಇನ್ನೂ ಸ್ವಲ್ಪ ಅಲುಗಾಡುತ್ತಾ ಪ್ರಾಣವನ್ನು ತೊರೆದ ಆ ರಾಕ್ಷಸನನ್ನು ಪರಿತ್ಯಜಿಸಿದನು.

ತಸ್ಮಿನ್ ಹತೇ ತೋಯದತುಲ್ಯರೂಪೇ
ಕೃಷ್ಣಾಂ ಪುರಸ್ಕೃತ್ಯ ನರೇಂದ್ರಮುಖ್ಯಾಃ ।
ಭೀಮಂ ಪರಿಷ್ವಜ್ಯ ಗುಣೈರನೇಕೈಃ ।
ಸ್ತುತ್ವಾ ತತೋ ದ್ವೈತವನಾಯ ಜಗ್ಮುಃ ॥೬೮॥

ಮೋಡದಂತೆ ಇದ್ದ ಆ ರಾಕ್ಷಸನು ಹತನಾದ ಮೇಲೆ ನರಶ್ರೇಷ್ಠರಾದ ಆ ಪಾಂಡವರು ದ್ರೌಪದಿಯನ್ನು ಮುಂದೆಮಾಡಿಕೊಂಡು ಭೀಮಸೇನನನ್ನು ಆಲಿಂಗಿಸಿ ಅವನ ಅನೇಕ ಗುಣಗಳನ್ನು ಸ್ತೋತ್ರಮಾಡುತ್ತಾ ಅಲ್ಲಿಂದ ದ್ವೈತವನಕ್ಕೆ ಹೊರಟರು.

ಏವಂ ವಿನಿಹತಃ ಸಂಖೇ ಕಿರ್ಮೀರೋ ಮನುಜಾಧಿಪ ।
ಭೀಮೇನ ವಚನಾತ್ ತಸ್ಯ ಧರ್ಮರಾಜಸ್ಯ ಕೌರವ ॥೬೯॥

ಎಲೈ ಕೌರವರಾಜನಾದ ಧೃತರಾಷ್ಟ್ರನೇ! ಹೀಗೆ ಧರ್ಮರಾಜನ ವಚನದಂತೆ ಭೀಮಸೇನನು ಯುದ್ಧದಲ್ಲಿ ಕಿರ್ಮೀರನನ್ನು ನಾಶಪಡಿಸಿದನು.

ತತೋ ನಿಷ್ಕಂಟಕಂ ಕೃತ್ವಾ ವನಂ ತದಪರಾಜಿತಾಃ ।
ದ್ರೌಪದ್ಯಾ ಸಹ ಧರ್ಮಜ್ಞಾ ವಸತೀರವಸನ್ ತತಃ ॥೭೦॥

ಅನಂತರ ಅಪರಾಜಿತರಾದ ಮತ್ತು ಧರ್ಮಜ್ಞರಾದ ಆ ಪಾಂಡವರು ಆ ವನವನ್ನು ನಿರ್ಭಯವನ್ನಾಗಿಮಾಡಿ ದ್ರೌಪದಿಯ ಜೊತೆಯಲ್ಲಿ ವಾಸವನ್ನು ಮಾಡಿದರು.

ಸಮಾಶ್ವಾಸ್ಯ ಚ ತೇ ಸರ್ವೇ ದ್ರೌಪದೀಂ ಭರತರ್ಷಭಾಃ ।
ಪ್ರಹೃಷ್ಟಮನಸಃ ಸರ್ವೇ ಪ್ರಶಶಂಸುರ್ವೃಕೋದರಮ್ ॥೭೧॥

ಆ ಭರತಶ್ರೇಷ್ಠರೆಲ್ಲರೂ ದ್ರೌಪದಿಯನ್ನು ಸಮಾಧಾನಪಡಿಸಿ ಎಲ್ಲರೂ ಸಂತುಷ್ಟಚಿತ್ತರಾಗಿ ವೃಕೋದರನನ್ನು ಪ್ರಶಂಸೆಮಾಡಿದರು.

ಭೀಮಬಾಹುಬಲೋತ್ಪಿಷ್ಟೇ ವಿನಷ್ಟೇ ರಾಕ್ಷಸೇ ತತಃ ।
ವಿವಿಶುಸ್ತದ್ವನಂ ವೀರಾಃ ಕ್ಷೇಮಂ ನಿಹತಕಂಟಕಮ್ ॥೭೨॥

ಭೀಮನ ಬಾಹುಬಲದಿಂದ ಆ ರಾಕ್ಷಸನು ಒರೆಸಲ್ಪಡುತ್ತಿರಲು ವೀರರಾದ ಪಾಂಡವರು ಕ್ಷೇಮವೂ ನಿಷ್ಕಂಟಕವೂ ಆದ ಆ ವನವನ್ನು ಪ್ರವೇಶಿಸಿದರು.

ಸ ಮಯಾ ಗಚ್ಛತಾ ಮಾರ್ಗೇ ವಿನಿಕೀರ್ಣೋ ಭಯಾನಕಃ ।
ವನೇ ಮಹತಿ ದುಷ್ಟಾತ್ಮಾ ದೃಷ್ಟೋ ಭೀಮಬಲಾಹತಃ ॥೭೩॥

ನಾನು ಆ ವನಕ್ಕೆ ಹೋಗುತ್ತಾ ಮಾರ್ಗದಲ್ಲಿ ಭೀಮಸೇನನಿಂದ ಹತನಾದ ಆ ದುಷ್ಟನ ಭಯಂಕರವಾಗಿ ಶಿಥಿಲವಾಗಿದ್ದ ದೇಹವನ್ನು ನೋಡಿದೆನು.

ತತ್ರಾಶ್ಚರ್ಯಮಹಂ ರಾಜನ್ ಕರ್ಮ ಭೀಮಸ್ಯ ಸಂಯುಗೇ ।
ಬ್ರಾಹ್ಮಣಾನಾಂ ಕಥಯತಾಂ ಯೇ ತತ್ರಾಸನ್ ಸಮಾಗತಾಃ ॥೭೪॥

ಎಲೈ ರಾಜನೇ! ನಾನು ಅಲ್ಲಿಗೆ ಬಂದ ಬ್ರಾಹ್ಮಣರಿಂದ ಆ ಯುದ್ಧದಲ್ಲಿ ಭೀಮಸೇನನು ಮಾಡಿದ ಅದ್ಭುತಕರ್ಮವನ್ನು ಕೇಳಿದೆನು.

ವೈಶಂಪಾಯನಃ

ಏವಂ ವಿನಿಹತಂ ಸಂಖ್ಯೇ ಕಿರ್ಮ್ಮೀರಂ ರಾಕ್ಷಸಾಧಮಮ್ ।
ಶ್ರುತ್ವಾ ಧ್ಯಾನಪರೋ ರಾಜಾ ನಿಶಸ್ವಾಸಾರ್ತವತ್ ತದಾ ॥೭೫॥

ಹೀಗೆ ರಾಕ್ಷಸಾಧಮನಾದ ಕಿರ್ಮ್ಮೀರನು ಯುದ್ಧದಲ್ಲಿ ಭೀಮಸೇನನಿಂದ ಹತನಾದುದನ್ನು ಕೇಳಿ ಧೃತರಾಷ್ಟ್ರನು ಚಿಂತಾಪರವಶನಾಗಿ ದುಃಖದಿಂದ ನಿಟ್ಟುಸಿರನ್ನು ಬಿಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವನಪರ್ವಣಿ
ದಶಮೋऽಧ್ಯಾಯಃ ॥
॥ ಕಿರ್ಮ್ಮೀರವಧಪರ್ವ ಪ್ರಥಮೋऽಧ್ಯಾಯಃ ॥

## ॥ ಕಿರ್ಮ್ಮೀರವಧಪರ್ವಣಿ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಕಿರ್ಮ್ಮೀರವಧಪರ್ವವು ಮುಗಿಯಿತು.

★★★★★

# ೩. ಕೈರಾತಪರ್ವ

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಶ್ರುತ್ವಾ ತು ಕಿರ್ಮೀರವಧಂ ಸ್ವಪಿತ್ರಾ
ಪೃಷ್ಟಂ ಕ್ಷತ್ತ್ರೋಕ್ತಂ ಸೋಽತ್ರಸದ್ಧಾರ್ತರಾಷ್ಟ್ರಃ ।
ವನೇ ವಸಂತೋಽಥ ಪೃಥಾಸುತಾಸ್ತೇ
ವಾರ್ತಾಂ ಸ್ವಕೀಯಾಂ ಪ್ರಾರ್ಪಯಾಮಾಸುರಾಶು ॥೨೩॥

ಕೃಷ್ಣೇ ಸೋಽಪಿ ದ್ರುತಮಾಯಾತ್ಸಸತ್ಯಃ
ಸಂಬಂಧಿನೋ ಯೇ ಚ ಪಾಂಚಾಲಮುಖ್ಯಾಃ ।
ಕ್ರುದ್ಧಂ ಕೃಷ್ಣಂ ಧಾರ್ತರಾಷ್ಟ್ರಾಯ ಪಾರ್ಥಾಃ
ಕ್ಷಮಾಪಯಾಮಾಸುರುಚ್ಚೈರ್ಗುಣಂತಃ ॥೨೪॥

ಗುಣಾಂಸ್ತದೀಯನಮಿತಾನ್ ಪ್ರಣಮ್ಯ
ತದಾ ರುದಂತೀ ದ್ರೌಪದೀ ಚಾಪ ಪಾದೌ ।
ಸಾ ಪಾದಯೋಃ ಪತಿತಾ ವಾಸುದೇವ-
ಮಸ್ತೌತ್ ಸಮಸ್ತಪ್ರಭುಮಾತ್ಮತಂತ್ರಂ ॥೨೫॥

ಧೃತರಾಷ್ಟ್ರ ವಿದುರನನ್ನು ಕೇಳಿದಾಗ ಅವನು ಕಿರ್ಮೀರ ವಧೆಯನ್ನು ಬಣ್ಣಿಸಿದ. ಅದನ್ನು ಕೇಳಿ ದುರ್ಯೋಧನ ಭಯಪಟ್ಟ. ಪಾಂಡವರು ಕಾಡಿನಲ್ಲಿ ವಾಸ ಮಾಡುತ್ತ

ತಮ್ಮ ಕಷ್ಟದ ಸಮಾಚಾರವನ್ನು ಶ್ರೀಕೃಷ್ಣನಿಗೂ ದ್ರುಪನಿಗೂ ಹೇಳಿ ಕಳಿಸಿದರು. ಕೂಡಲೇ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ಬಂದ. ದ್ರುಪದ ಮುಂತಾದ ಬಾಂಧವರೂ ಬಂದರು. ಶ್ರೀಕೃಷ್ಣ ಎಲ್ಲ ಸಮಾಚಾರವನ್ನು ಕೇಳಿತಿಳಿದು ದುರ್ಯೋಧನನ ಬಗ್ಗೆ ಕುಪಿತನಾದಾಗ ಪಾಂಡವರು ಅವನ ಅಪರಿಮಿತ ಗುಣಗಳನ್ನು ಹೊಗಳುತ್ತ ನಮಿಸಿ ಸಮಾಧಾನಗೊಳಿಸಿದರು. ದ್ರೌಪದಿ ಅಳುತ್ತ ಅವನ ಕಾಲುಗಳನ್ನು ಹಿಡಿದಳು. ಸ್ವತಂತ್ರ ಸರ್ವಶಕ್ತನಾದ ಅವನನ್ನು ಸ್ತೋತ್ರ ಮಾಡಿದಳು.

ಅಚಿಂತ್ಯನಿತ್ಯಾವ್ಯಯಪೂರ್ಣಸದ್ಗುಣಾ-
ರ್ಣವೈಕದೇಹಾಖಿಲದೋಷದೂರ ।
ರಮಾಬ್ಜಜೇರೇಶಸುರೇಂದ್ರಪೂರ್ವ-
ಬೃಂದಾರಕಾರ್ಚ್ಯಾಂ ಸತತಾಭಿವಂದ್ಯ ॥೨೬॥

ಸಮಸ್ತ ಚೇಷ್ಟಾಪ್ರದ ಸರ್ವಜೀವ-
ಪ್ರಭೋ ವಿಮುಕ್ತಾಶ್ರಯ ಸರ್ವಸಾರ ।
ಇತಿ ಬ್ರುವಂತೀ ಸಕಲಾನುಭೂತಂ
ಜಗಾದ ಸರ್ವೇಶತುರಚ್ಯುತಸ್ಯ ॥೨೭॥

'ಹೇ ಅಚಿಂತ್ಯ ನಿತ್ಯ ಅವ್ಯಯ ಪೂರ್ಣಸದ್ಗುಣ ಸಾಗರ ಮಾತ್ರ ಶರೀರ! ಸಕಲದೋಷ ವಿದೂರ! ಲಕ್ಷ್ಮೀ ಬ್ರಹ್ಮವಾಯು ಶಿವ ಇಂದ್ರಾದಿ ದೇವತೆಗಳಿಂದ ಸದಾವಂದ್ಯ ! ಎಲ್ಲಕ್ಕೂ ಚೇಷ್ಟಾಪ್ರದ! ಸರ್ವಜೀವೇಶ್ವರ! ಮುಕ್ತಾಶ್ರಯ! ಸರ್ವೋತ್ತಮ!' ಎಂದು ಸ್ತೋತ್ರ ಮಾಡುತ್ತ ದ್ರೌಪದಿ ಸರ್ವೇಶನಾದ ಶ್ರೀಕೃಷ್ಣನಿಗೆ ತಾನು ಅನುಭವಿಸಿದ ಎಲ್ಲ ದುಃಖವನ್ನೂ ಹೇಳಿಕೊಂಡಳು.

ಯಸ್ಯಾಧಿಕಾನುಗ್ರಹಪಾತ್ರಭೂತಾ
ಸ್ವಯಂ ಹಿ ಶೇಷೇಶವಿಪಾದಿಕೇಭ್ಯಃ ।
ಶ್ರುತ್ವಾ ಸಮಸ್ತಂ ಭಗವಾನ್ ಪ್ರತಿಜ್ಞಾಂ
ಚಕಾರ ತೇಸಾಮಖಿಲಾಶ್ಚ ಯೋಷಾಃ ॥
ಪತೀನ್‌ಸಮಾಲಿಂಗ್ಯ ವಿಮುಕ್ತಕೇಶಾ
ಭೀಮಾಹತಾನ್ ದರ್ಶಯೇ ನಾನ್ಯಥೇತಿ ॥೨೮॥

ತಾಂ ಸಾಂತ್ವಯಿತ್ವಾ ಮಧುರೈಃ ಸುವಾಕ್ಯೈ
ರ್ನಾರಾಯಣೋ ವಾಚಮಿಮಾಂ ಜಗಾದ ॥೨೯॥

ಶ್ರೀಕೃಷ್ಣನಿಗೆ ದ್ರೌಪದಿ ಸ್ವಯಂ ಶೇಷ ಶಿವ ಗರುಡಾದಿಗಳಿಗಿಂತ ಹೆಚ್ಚು ಅನುಗ್ರಹ ಪಾತ್ರಳಾದ್ದರಿಂದ ಅವನು ಎಲ್ಲವನ್ನೂ ಕೇಳಿ ಪ್ರತಿಜ್ಞೆ ಮಾಡಿದ, 'ಕೌರವರ ಹೆಂಡಂದಿರೆಲ್ಲರೂ ಭೀಮನಿಂದ ಹತರಾದ ತಮ್ಮ ಪತಿಗಳನ್ನು ಆಲಿಂಗಿಸಿ ಮುಕ್ತಕೇಶರಾಗುವುದನ್ನು ನಿಶ್ಚಯವಾಗಿ ನಿನಗೆ ತೋರಿಸುವೆನು' ಎಂದು.

ಯದೀಹಾಹಂ ಸ್ಥಿತೋ ನೈವಂ ಭವಿತಾಹಂ ತ್ವಯೋಧಯಂ ।
ಸಾಲ್ವರಾಜಂ ದುರಾತ್ಮಾನಂ ಹತಶ್ಚಾಸೌ ಸುಪಾಪಕೃತ್ ॥೩೦॥

ಶ್ರೀಕೃಷ್ಣದ್ರೌಪದಿಯನ್ನು ಒಳ್ಳೆಯ ಸವಿನುಡಿಗಳಿಂದ ಸಂತೈಸಿ ಈ ಮಾತನ್ನು ನುಡಿದ 'ನಾನು ಇಲ್ಲಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ನಾನು ಆಗ ದುರಾತ್ಮನಾದ ಸಾಲ್ವನೊಡನೆ ಯುದ್ಧ ಮಾಡುತ್ತಿದ್ದೆ. ಮಹಾಪಾಪಕಾರಿಯಾದ ಆತ ಹತನಾಗಿದ್ದಾನೆ'.

ಸನ್ನಿಧಾನೇऽಥ ದೂರೇ ವಾ ಕಾಲವ್ಯವಹಿತೇऽಪಿ ವಾ ।
ಸ್ವಭಾವಾದ್ವಾ ವ್ಯವಹಿತೇ ವಸ್ತುವ್ಯವಹಿತೇऽಪಿ ವಾ ॥೩೧॥

ನಾಶಕ್ತಿರ್ವಿದ್ಯತೇ ವಿಷ್ಣೋರ್ನಿತ್ಯಾವ್ಯವಹಿತತ್ವತಃ ।
ತಥಾಪಿ ನರಲೋಕಸ್ಯ ಕಲೋತ್ಯನುಕೃತಿಂ ಪ್ರಭುಃ ॥೩೨॥

ವಸ್ತು ಹತ್ತಿರವಿರಲಿ ದೂರವಿರಲಿ, ಕಾಲ ಸ್ವಭಾವ ವಸ್ತುಗಳಿಂದ ವ್ಯವಧಾನದಲ್ಲಿರಲಿ. ನಿತ್ಯ ಅವ್ಯವಹಿತನಾದ ವಿಷ್ಣುವಿಗೆ ಅಶಕ್ತಿ ಇರುವುದಿಲ್ಲ. ಆದರೂ ಸರ್ವಶಕ್ತನಾದ ಅವನು ನರಲೋಕದ ಅನುಕರಣೆ ಮಾಡುತ್ತಾನೆ.

ದುಷ್ಪಾನಾಂ ದೋಷವೃದ್ಧ್ಯರ್ಥಂ
ಭೀಮಾದೀನಾಂ ಗುಣೋನ್ನತೇಃ ।
ಯುಧಿಷ್ಠಿರೇऽತಿವೃದ್ಧಂತು ರಾಜಸೂಯಾದಿಸಂಭವಂ ॥೩೩॥

ಧರ್ಮಂ ಚ ಸಂಕ್ರಾಮಯಿತುಂ ಕೃಷ್ಣಾಯಾನುಚೇಷು ಚ ।
ಯೋಗ್ಯತಾಕ್ರಮಮತೋ ವಿಷ್ಣುರಿಚ್ಛಯೇತ್ಥಮಚೀಕ್ಲೃಪತ್ ॥೩೪॥

ಶ್ರೀಕೃಷ್ಣ ಮಾಡಿದ ಈ ನರಲೋಕದ ಅನುಕರಣೆ ದುಷ್ಪರಲ್ಲಿ ದೋಷವೃದ್ಧಿಯಾಗುಡವವುದಕ್ಕಾಗಿ ಮತ್ತು ಭೀಮು ಮುಂತಾದವರಲ್ಲಿ ಗುಣವೃದ್ಧಿಯಾಗುವುದಕ್ಕಾಗಿ ಧರ್ಮರಾಜನಿಗೆ ರಾಜಸೂಯಾದಿಗಳಿಂದ ಉಂಟಾದ ಪುಣ್ಯ ಯೋಗ್ಯತೆಗೆ ಮೀರಿದ್ದರಿಂದ ಅದನ್ನು ಯೋಗ್ಯತಾನುಸಾರ ದ್ರೌಪದಿಯಲ್ಲಿಯೂ ತಮ್ಮಂದಿರಲ್ಲಿಯೂ ಹರಿದು ಬರುವಂತೆ ಮಾಡುವ ಉದ್ದೇಶದಿಂದಲೂ ಶ್ರೀಕೃಷ್ಣ ಸ್ವೇಚ್ಛೆಯಿಂದಲೇ ಹಾಗೆ ಮಾಡಿದ್ದ.

ಏಧಮಾನದ್ವಿಡಿತ್ಯೇವ ವಿಷ್ಣೋರ್ನಾಮ ಹಿ ವೈದಿಕಂ ॥೩೫॥

ಏಧಮಾನದ್ವಿಟ್ ಎಂಬ ವೈದಿಕನಾಮ ವಿಷ್ಣುವಿಗೆ ಪ್ರಸಿದ್ಧವಾಗಿದೆ.

ಸ್ವಯೋಗ್ಯತಾಯಾ ಅಧಿಕಂ ಧರ್ಮಾಜ್ಞಾನಾದಿಜಂ ಫಲಂ ।
ಭೀಷ್ಮದ್ರೋಣಾಂಬಿಕೇಯಾದೇಃ ಪಾರ್ಥೇಷ್ವೇವ ನಿಧಾಪಿತುಂ ॥೩೬॥

ಭೀಷ್ಮದ್ರೋಣ ಧೃತರಾಷ್ಟ್ರ ಮುಂತಾದವರು ಗಳಿಸಿದ ಧರ್ಮಜ್ಞಾನಾದಿಗಳ ಫಲವಾದ ಪುಣ್ಯವನ್ನು ಪಾಂಡವರಲ್ಲಿತಂದು ಸೇರಿಸುವ ಉದ್ದೇಶದಿಂದಲೂ ಶ್ರೀಕೃಷ್ಣ ಹಾಗೆ ಮಾಡಿದ.

ಪುನಶ್ಚ ಪಾಪವೃದ್ಧ್ಯರ್ಥಮಜ್ಞೋ ದುರ್ಯೋಧನಾದಿಷು ।
ವ್ಯಾಸೋಽಂಬಿಕಾಸುತಂ ಪ್ರಾಹ ಪಾರ್ಥಾ ಮೇಽಭ್ಯಧಿಕಂ ಪ್ರಿಯಾಃ ॥

ದುರ್ಯೋಧನಾದಿಗಳಲ್ಲಿ ಪುನಃ ಪಾಪಸಂಗ್ರಹ ಹೆಚ್ಚಲೆಂದು ವೇದವ್ಯಾಸರು ಧೃತರಾಷ್ಟ್ರನ ಮುಂದೆ ತನಗೆ ಪಾಂಡವರೇ ಹೆಚ್ಚು ಪ್ರಿಯರು ಎಂದರು.

ತೇಷಾಂ ಪ್ರವಾಸನಂ ಚೈವ ಪ್ರಿಯಂ ನ ಮಮ ಸರ್ವಥಾ ।
ಇತಿ ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಮೇವ ಸಃ ।
ಪ್ರಿಯಾ ಇತ್ಯೇವ ಕಥನಾತ್ ಪಾಂಡವಾನಾಂ ಶುಭೋನ್ನತೇ ॥೩೮॥

ಪಾಂಡವರನ್ನು ಕಾಡಿಗೆ ಅಟ್ಟಿದುದು ನನಗೆ ಸರ್ವಥಾ ಪ್ರಿಯವಲ್ಲ ಎನ್ನುತ್ತ ಪಾಂಡವರೇ ನನಗೆ ಪ್ರಿಯರೆಂದು ಹೇಳುವ ಮೂಲಕ ದುರ್ಯೋಧನಾದಿಗಳಲ್ಲಿ ಪಾಪವನ್ನು ಹೆಚ್ಚಿಸುವುದಕ್ಕಾಗಿಯೂ ಪಾಂಡವರಲ್ಲಿ ಪುಣ್ಯವನ್ನು ಹೆಚ್ಚಿಸುವುದಕ್ಕಾಗಿಯೂ ವೇದವ್ಯಾಸರು ಧೃತರಾಷ್ಟ್ರನ ಬಳಿಗೆ ಬಂದಿದ್ದರು.

ಗುರುತ್ವಾದ್ ಭೀಮಸೇನಸ್ಯ ಕ್ಷಮಾ ದ್ಯೂತೇऽರ್ಜುನಾದಿನಾಂ ।
ನಾತಿಧರ್ಮಸ್ವರೂಪೋऽತ್ರ ಧರ್ಮೋ ಭೀಮೇ ನಿರೌಪಧಃ ॥೩೯॥

ದ್ರೌಪದ್ಯಾ ಅಪ್ಯತಿಕ್ಲೇಶಾತ್ ಕ್ಷಮಾ ಧರ್ಮೋ ಮಹಾನಭೂತ್ ।
ಸಾ ಹಿ ಭೀಮಮನೋ ವೇದ ನ ಕಾರ್ಯಃ ಶಾಪ ಇತ್ಯಲಂ ॥೪೦॥

ಭೀಮಸೇನ ಅರ್ಜುನಾದಿಗಳಿಗೆ ಹಿರಿಯನಾದ್ದರಿಂದ ಕೌರವರು ಮಾಡುತ್ತಿದ್ದ ಅನ್ಯಾಯಗಳನ್ನು ಅರ್ಜುನಾದಿಗಳು ಸಹಿಸಿಕೊಂಡಿದ್ದುದು ಅವರಿಗೆ ಹೆಚ್ಚು ಪುಣ್ಯಕರವಾಗಿರಲಿಲ್ಲ. ಭೀಮ ಸಹಿಸಿಕೊಂಡಿದ್ದುದು ಅವನಿಗೆ ಬಹಳ ಪುಣ್ಯಕರವಾಗಿತ್ತು. ದ್ರೌಪದಿ ಅತ್ಯಂತ ಕ್ಲೇಶವನ್ನು ಸಹನೆ ಮಾಡಿದ್ದರಿಂದ ಅವಳಿಗೆ ಅದು ಮಹಾಪುಣ್ಯಕರವಾಯಿತು. ಅವಳು ಭೀಮನ ಇಚ್ಛೆಯನ್ನು ತಿಳಿದಿದ್ದಳು, ಶಾಪ ಕೊಡಬಾರದು ಎಂದು.

ತಸ್ಮಾದ್ ಯಥಾಯೋಗ್ಯತಯಾ ಹರಿಣಾ ಧರ್ಮವರ್ಧನಂ ।
ಕೃತಂ ತತ್ರಾಸನ್ನಿಧಾನಕಾರಣಂ ಕೇಶವೋऽಬ್ರವಿತ್ ॥೪೧॥

ಅದರಿಂದ ಶ್ರೀಕೃಷ್ಣ ಜೂಜಿನ ಸಂದರ್ಭದಲ್ಲಿ ಪಾಂಡವರಲ್ಲಿ ಅವರವರ ಯೋಗ್ಯತಾನುಸಾರವೆ ಪುಣ್ಯವೃದ್ಧಿ ಉಂಟುಮಾಡಿದ. ತಾನು ಪಾಂಡವರ ಬಳಿ ಇರದಿದ್ದುದಕ್ಕೆ ಕಾರಣವನ್ನೂ ಹೇಳಿದ.

★ ★ ★ ★

## ಹನ್ನೊಂದನೆಯ ಅಧ್ಯಾಯ

(ಕೃಷ್ಣನಿಂದ ದ್ವೈತವನಕ್ಕೆ ಆಗಮನ. ಸಿಟ್ಟುಗೊಂಡ ಕೃಷ್ಣನನ್ನು ಸಂತೈಸಲು ಅರ್ಜುನನ ಸ್ತೋತ್ರ, ದ್ರೌಪದಿಯ ವಿಲಾಪ ಮತ್ತು ಕೃಷ್ಣನ ಪ್ರತಿಜ್ಞೆ.)

**ವೈಶಂಪಾಯನಃ**

ಭೋಜಾಃ ಪ್ರವ್ರಜಿತಾನ್ ಶ್ರುತ್ವಾ ವೃಷ್ಣಯಶ್ಚಾಂಧಕೈಃ ಸಹ ।
ಪಾಂಡವಾನ್ ದುಃಖಸಂತಪ್ತಾನ್ ಸಮಾಜಗ್ಮುರ್ಮಹಾವನೇ ॥೧॥

ಪಾಂಡವರು ದುಃಖಸಂತಪ್ತರಾಗಿ ಕಾಡಿಗೆ ತೆರಳಿದುದನ್ನು ಕೇಳಿ ಭೋಜರು ವೃಷ್ಣಿಗಳು ಮತ್ತು ಅಂಧಕರು ಸಹ ವನಕ್ಕೆ ಬಂದರು.

ಪಾಂಚಾಲಸ್ಯ ತು ದಾಯಾದೋ ಧೃಷ್ಟಕೇತುಶ್ಚ ಚೇದಿಪಃ ।
ಕೇಕಯಾಶ್ಚ ಮಹೇಷ್ವಾಸಾ ಭ್ರಾತರೋ ಲೋಕವಿಶ್ರುತಾಃ ॥೨॥

ವನೇ ತೇऽಭಿಯಯುಃ ಪಾರ್ಥಾನ್ ಕ್ರೋಧಾಮರ್ಷಸಮನ್ವಿತಾನ್ ।
ಗರ್ಹಯಂತೋ ಧಾರ್ತರಾಷ್ಟ್ರಾನ್ ಕಿಂ ಕುರ್ಮ ಇತಿ ಚಾಬ್ರುವನ್ ॥೩॥

ಪಾಂಚಾಲರಾಜನ ದಾಯಾದಿಯಾದ ಚೇದಿರಾಜನಾದ ಧೃಷ್ಟಕೇತುವೂ ಕೇಕಯದೇಶದ ರಾಜರುಗಳಾದ ಲೋಕವಿಶ್ರುತರಾದ ಅಣ್ಣತಮ್ಮಂದಿರೂ ಕ್ರೋಧಾಮರ್ಷಗಳಿಂದ ಕೂಡಿದ್ದ ಪಾಂಡವರನ್ನು ನೋಡಲು ಕಾಡಿಗೆ ಬಂದರು. ಅವರು ದುರ್ಯೋಧನಾದಿಗಳನ್ನು ನಿಂದಿಸುತ್ತಾ ನಾವು ಏನುಮಾಡೋಣ ಎಂದು ಕೇಳಿದರು.

ವಾಸುದೇವಂ ಪುರಸ್ಕೃತ್ಯ ಸರ್ವೇ ತೇ ಕ್ಷತ್ರಿಯರ್ಷಭಾಃ ।
ಪರಿವಾರ್ಯೋಪವಿವಿಶುರ್ಧರ್ಮರಾಜಂ ಯುಧಿಷ್ಠಿರಮ್ ॥೪॥

ಆ ಕ್ಷತ್ರಿಯಶ್ರೇಷ್ಠರೆಲ್ಲರೂ ಶ್ರೀಕೃಷ್ಣನನ್ನು ಮುಂದೆ ಮಾಡಿಕೊಂಡು ಧರ್ಮರಾಜನಾದ ಯುಧಿಷ್ಠಿರನ ಸುತ್ತಲೂ ಸಮೀಪದಲ್ಲಿ ಕುಳಿತರು.

ಶ್ರೀವಾಸುದೇವಃ

ದುರ್ಯೋಧನಸ್ಯ ಕರ್ಣಸ್ಯ ಶಕುನೇಶ್ಚ ದುರಾತ್ಮನಃ ।
ದುಶ್ಶಾಸನಚತುರ್ಥಾನಾಂ ಭೂಮಿಃ ಪಾಸ್ಯತಿ ಶೋಣಿತಮ್ ॥೫॥

ದುರ್ಯೋಧನ ಕರ್ಣ ದುರಾತ್ಮನಾದ ಶಕುನಿ ಮತ್ತು ನಾಲ್ಕನೆಯನಾದ ದುಶ್ಶಾಸನ ಇವರ ರಕ್ತವನ್ನು ಭೂಮಿಯು ಪಾನಮಾಡುವುದು.

ತತಃ ಸರ್ವೇऽಭಿಷಿಂಚಾಮೋ ಧರ್ಮರಾಜಂ ಯುಧಿಷ್ಠಿರಮ್ ।
ನಿಕೃತ್ಯಾ ಚ ಚರನ್ ವಧ್ಯ ಏಷ ಧರ್ಮಃ ಸನಾತನಃ ॥೬॥

ಅನಂತರ ನಾವೆಲ್ಲರೂ ಸೇರಿ ಧರ್ಮರಾಜನಾದ ಯುಧಿಷ್ಠಿರನಿಗೆ ಪಟ್ಟಾಭಿಷೇಕವನ್ನು ಮಾಡೋಣ ಮೋಸಮಾಡುವವರನ್ನು ಕೊಲ್ಲಲೇ ಬೇಕು. ಇದು ಸನಾತನವಾದ ಧರ್ಮ.

ವೈಶಂಪಾಯನಃ

ಪಾರ್ಥಾನಾಮಭಿಷಂಗೇಣ ತಥಾ ಕ್ರುದ್ಧಂ ಜನಾರ್ದನಮ್ ।
ಅರ್ಜುನಃ ಶಮಯಾಮಾಸ ದಿಧಕ್ಷಂತಮಿವ ಪ್ರಜಾಃ ॥೭॥

ಪಾಂಡವರ ಮೇಲಿನ ಪ್ರೀತಿಯಿಂದ ಅವರ ಕಾರ್ಪಣ್ಯವನ್ನು ನೋಡಿ ಹಾಗೆ ಕೋಪಗೊಂಡು ಎಲ್ಲಾ ಪ್ರಜೆಗಳನ್ನೂ ಸುಟ್ಟುಬಿಡುವಂತೆ ತೋರುವ ಜನಾರ್ದನನನ್ನು ಅರ್ಜುನನು ಸಮಾಧಾನಗೊಳಿಸಿದನು.

ಸಂಕ್ರುದ್ಧಂ ಕೇಶವಂ ದೃಷ್ಟ್ವಾ ಪೂರ್ವದೇವೇಷು ಭಾರತ ।
ಕೀರ್ತಯಾಮಾಸ ಕರ್ಮಾಣಿ ಸತ್ಯಕೀರ್ತೇರ್ಮಹಾತ್ಮನಃ ॥೮॥

ಪುರುಷಸ್ಯಾಪ್ರಮೇಯಸ್ಯ ಸತ್ಯಸ್ಯಾಮಿತತೇಜಸಃ ।
ಪ್ರಜಾಪತಿಪತೇರ್ವಿಷ್ಣೋರ್ಲೋಕನಾಥಸ್ಯ ಧೀಮತಃ ॥೯॥

ಎಲೈ ಭಾರತನೇ! ಮೊದಲು ಅಕ್ಷದ್ಯೂತವನ್ನು ಆಡಿ ಈ ದುರವಸ್ಥೆಯನ್ನು ತಂದ ದೈತ್ಯರಾದ ದುರ್ಯೋಧನಾದಿಗಳ ಮೇಲೆ ಸಂಕ್ರುದ್ಧನಾದ ಕೃಷ್ಣನನ್ನು ನೋಡಿ ಅರ್ಜುನನು ಸತ್ಯಕೀರ್ತಿಯುಳ್ಳ ಮಹಾತ್ಮನಾದ ಅಪ್ರಮೇಯನಾದ ಅನಂತಗುಣಪೂರ್ಣನಾದ ಅಮಿತಪರಾಕ್ರಮಿಯಾದ ಬ್ರಹ್ಮದೇವರ ತಂದೆಯಾದ ಲೋಕನಾಥನಾದ ಮೇಧಾವಿಯಾದ ಪರಮಪುರುಷನಾದ ವಿಷ್ಣುವಿನ ಅದ್ಭುತ ಕರ್ಮಗಳನ್ನು ಹೊಗಳಿದನು.

ಅರ್ಜುನಃ

ದಶವರ್ಷಸಹಸ್ರಾಣಿ ಯತ್ರ ಸಾಯಂಗೃಹೋ ಮುನಿಃ ।
ವ್ಯಚರಸ್ತ್ವಂ ಪುರಾ ಕೃಷ್ಣ ಪರ್ವತೇ ಗಂಧಮಾದನೇ ॥೧೦॥

ಕೃಷ್ಣನೇ! ನೀನು ಹಿಂದೆ ಗಂಧಮಾದನಪರ್ವತದಲ್ಲಿ ಹತ್ತುಸಹಸ್ರವರ್ಷಗಳ ಕಾಲ ಎಲ್ಲಿ ಸಾಯಂಕಾಲವಾಗುತ್ತದೆಯೋ ಅಲ್ಲಿಯೇ ಬಿಡಾರಮಾಡಿ ಸಂಚರಿಸಿದೆ. (ವಿಷ್ಣುವಿನ ಎಲ್ಲಾ ರೂಪಗಳಿಗೂ ಅಭೇದವಿರುವುದರಿಂದ ಬದರೀನಾರಾಯಣರೂಪದಿಂದ ಮಾಡಿದ ತಪಸ್ಸನ್ನು ಅರ್ಜುನನು ಇಲ್ಲಿ ಹೇಳುತ್ತಿದ್ದಾನೆ.)

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಪುಷ್ಕರೇಷ್ವವಸಃ ಕೃಷ್ಣ ತ್ವಮಪೋ ಭಕ್ಷಯನ್ ಪುರಾ ॥೧೧॥

ಕೃಷ್ಣನೇ! ನೀನು ಹಿಂದೆ ಪುಷ್ಕರಕ್ಷೇತ್ರದಲ್ಲಿ ಹತ್ತು ಸಾವಿರವರ್ಷಗಳು ಮತ್ತು ಹತ್ತುನೂರು ವರ್ಷಗಳ ಕಾಲ ಕೇವಲ ಜಲಭಕ್ಷಣೆಮಾಡಿ ವಾಸಮಾಡಿ ತಪಸ್ಸನ್ನು ಮಾಡಿದೆ.

ಊರ್ಧ್ವಬಾಹುರ್ವಿಶಾಲಾಯಾಂ ಬದರ್ಯಾಂ ಮಧುಸೂದನ ।
ಅತಿಷ್ಠಸ್ತ್ವೇಕಪಾದೇನ ವಾಯುಭಕ್ಷಃ ಶತಂ ಸಮಾಃ ॥೧೨॥

ಎಲೈ ಮಧುಸೂದನನೇ! ನೀನು ವಿಶಾಲಾ ಎಂದು ಕರೆಯಲ್ಪಡುವ ಬದರೀಕ್ಷೇತ್ರದಲ್ಲಿ ಊರ್ಧ್ವಬಾಹುವಾಗಿ ಒಂದೇ ಪಾದದಮೇಲೆ ನಿಂತು ನೂರುವರ್ಷಗಳ ಕಾಲ ವಾಯುಭಕ್ಷನಾಗಿ ತಪಸ್ಸನ್ನು ಮಾಡಿದೆ.

ಕೃಷ್ಣಾಜಿನೋತ್ತರಾಸಂಗಃ ಕೃಶೋ ಧಮನಿಸಂತತಃ ।
ಆಸೀಃ ಕೃಷ್ಣ ಸರಸ್ವತ್ಯಾಂ ಸತ್ರೇ ದ್ವಾದಶವಾರ್ಷಿಕೇ ॥೧೩॥

ಎಲೈ ಕೃಷ್ಣನೇ! ನೀನು ಸರಸ್ವತೀ ನದಿಯ ತೀರದಲ್ಲಿ ಹನ್ನೆರಡುವರ್ಷ ನಡೆದ ಸತ್ರಯಾಗದಲ್ಲಿ ಕೃಷ್ಣಾಜಿನದ ಉತ್ತರೀಯವನ್ನು ಧರಿಸಿ ಧಮನಿಗಳು ಕಾಣುವಂತೆ ಕೃಶನಾಗಿ ವಾಸಮಾಡಿದೆ. (ತಪಸ್ಸನ್ನು ಮಾಡಿದೆ)

ಪ್ರಭಾಸಮಪ್ಯಥಾಸಾದ್ಯ ತೀರ್ಥಂ ಪುಣ್ಯಜನಾರ್ಚಿತಮ್ ।
ತತ್ರ ಕೃಷ್ಣ ಮಹಾಬಾಹೋ ದಿವ್ಯಂ ವರ್ಷಸಹಸ್ರಕಮ್ ।
ಅತಿಷ್ಠಸ್ತಪ ಏಕೇನ ಪಾದೇನ ನಿಯಮೇ ಸ್ಥಿತಃ ॥೧೪॥

ಎಲೈ ಮಹಾಬಾಹುವಾದ ಕೃಷ್ಣನೇ! ಪುಣ್ಯಜನರಿಂದ ಪ್ರಾರ್ಥಿಸಲ್ಪಡುವ ಪ್ರಭಾಸಕ್ಷೇತ್ರಕ್ಕೆ ಬಂದು ಎಲೈ ಮಹಾಬಾಹುವೇ ಅಲ್ಲಿ ದೇವಮಾನದ ಸಹಸ್ರವರ್ಷಗಳ ಕಾಲ ಒಂದು ಪಾದದಮೇಲೆ ನಿಂತು ನಿಯಮವನ್ನು ಧರಿಸಿ ತಪಸ್ಸನ್ನು ಆಚರಿಸಿದೆ.

ಕ್ಷೇತ್ರಜ್ಞಃ ಸರ್ವಭೂತಾನಾಮಾದಿರಂತಶ್ಚ ಕೇಶವ ।
ತಪಸಾಂ ಚ ನಿಧಿಃ ಕೃಷ್ಣ ಯಜ್ಞಸ್ತ್ವಂ ಚ ಸನಾತನಃ ॥೧೫॥

ಎಲೈ ಕೇಶವನೇ! ನೀನು ಎಲ್ಲ ಜೀವರ ಹೃದಯದಲ್ಲಿ ಇದ್ದು ಕ್ಷೇತ್ರಜ್ಞನೆನಿಸಿದವನು. ನೀನು ಈ ಜಗತ್ತಿಗೆ ಆದಿ ಮತ್ತು ಅಂತನಾದವನು. ಕೃಷ್ಣನೇ! ನೀನು ತಪಸ್ಸಿಗೆ ನಿಧಿಯಾದವನು. ಸನಾತನನಾದವನು. ನೀನೇ ಯಜ್ಞವೆಂದು ಕರೆಯಲ್ಪಡುವವನು.

ನಿಹತ್ಯ ನರಕಂ ಭೌಮಮಾಹೃತ್ಯ ಮಣಿಕುಂಡಲೇ ।
ಪ್ರಾದಾಸ್ತ್ವಮದಿತೇಃ ಕೃಷ್ಣ ಭವಾನ್ ನಃ ಪರಮಾ ಗತಿಃ ॥೧೬॥

ಕೃಷ್ಣನೇ! ನೀನು ಭೂದೇವಿಯ ಮಗನಾದ ನರಕಾಸುರನನ್ನು ಸಂಹರಿಸಿ ಮಣಿಕುಂಡಲಗಳನ್ನು ತೆಗೆದುಕೊಂಡು ಬಂದು ಅದಿತಿಗೆ ಸಮರ್ಪಿಸಿದೆ. ಅಂತಹ ನೀನು ನಮಗೆ ಶ್ರೇಷ್ಠವಾದ ಗತಿ.

ಪ್ರಥಮೋತ್ಪಾದಿತಂ ಕೃಷ್ಣ ಮೇಧ್ಯಮಶ್ವಮವಾಸೃಜಃ ।
ಕೃತ್ವಾ ತತ್ ಕರ್ಮ ಲೋಕಾನಾಮೃಷಭಃ ಸರ್ವಲೋಕಜಿತ್ ।
ಅವಧೀಸ್ತ್ವಂ ರಣೇ ಸರ್ವಾನ್ ಸಮೇತಾನ್ ದೈತ್ಯದಾನವಾನ್ ॥೧೭॥

ಕೃಷ್ಣನೇ, ಮೊದಲು ಸೃಷ್ಟಿಸಿದ ಮೇಧ್ಯಾಶ್ವವನ್ನು ಸಂಚರಿಸಲು ಬಿಟ್ಟು ಎಲ್ಲ ಲೋಕಗಳಲ್ಲಿ ಶ್ರೇಷ್ಠನಾದ ನೀನು ಲೋಕಗಳನ್ನು ಗೆದ್ದು ಅಶ್ವಮೇಧಯಾಗವನ್ನು ಮಾಡಿ ಯುದ್ಧದಲ್ಲಿ ಸಮೇತರಾದ ಸರ್ವ ದೈತ್ಯದಾನವರನ್ನು ಸಂಹರಿಸಿದೆ.

ತತಃ ಸರ್ವೇಶ್ವರತ್ವಂ ಚ ಸಂಪ್ರದಾಯ ಶಚೀಪತೇಃ ।
ಮಾನುಷೇಷು ಮಹಾಬಾಹೋ ಪ್ರಾದುರ್ಭೂತೋಽಸಿ ಕೇಶವ ॥೧೮॥

ಅನಂತರ ಶಚೀಪತಿಯಾದ ಇಂದ್ರನಿಗೆ ಮೂರುಲೋಕಾಧಿಪತ್ಯವನ್ನು ಕೊಟ್ಟು, ಎಲೈ ಮಹಾಬಾಹುವಾದ ಕೇಶವನೇ! ನೀನು ಮನುಷ್ಯಲೋಕದಲ್ಲಿ ಅವತರಿಸಿದ್ದೀಯೆ.

ಸ ತ್ವಂ ನಾರಾಯಣೋ ಭೂತ್ವಾ ಹರಿರಾಸೀಃ ಸನಾತನಃ ।
ಬ್ರಹ್ಮಾ ಸೋಮಶ್ಚ ಸೂರ್ಯಶ್ಚ ಧರ್ಮೋ ಧಾತಾ ಯಮೋಽನಲಃ ॥

ವಾಯುರ್ವೈಶ್ರವಣೋ ರುದ್ರಃ ಕಾಲಃ ಖಂ ಪೃಥಿವೀ ದಿಶಃ ।
ಅಜಶ್ಚರಾಚರಗುರುಃ ಸ್ರಷ್ಟಾ ತ್ವಂ ಪುರುಷೋತ್ತಮಃ ॥೨೦॥

ನೀನು ಹಿಂದೆ ನಾರಾಯಣನಾಗಿ ಅನಂತರ ಸನಾತನನಾದ ಹರಿಯಾಗಿ ಅವತಾರಮಾಡಿದೆ. ನೀನೇ ಬ್ರಹ್ಮ ಸೋಮ ಸೂರ್ಯ ಧರ್ಮ ಧಾತೃ ಯಮ ಅಗ್ನಿ ವಾಯು ಕುಬೇರ ರುದ್ರ ಕಾಲ ಆಕಾಶ ಪೃಥಿವೀ, ದಿಕ್ಕುಗಳು( ಬ್ರಹ್ಮಾದಿಗಳಲ್ಲಿ ಇದ್ದು ಆಯಾ ಹೆಸರುಗಳಿಂದ ಮುಖ್ಯವಾಗಿ ಕರೆಸಿಕೊಳ್ಳಲ್ಪಡುವವನು) ನೀನು ಜನನರಹಿತನಾದವನು. ಚರಾಚರ ಸ್ವರೂಪವಾದ ಜಗತ್ತಿಗೆ ಗುರುವಾದವನು. ನೀನೇ ಸೃಷ್ಟಿಕರ್ತನಾದ ಪುರುಷೋತ್ತಮನು.

ನಾರಾಯಣೋ ಹ್ಯಭೂಃ ಪೂರ್ವಂ ಕ್ರತುಭಿರ್ಭೂರಿದಕ್ಷಿಣೈಃ ।
ಅಯಜೋ ಭೂರಿತೇಜಾಸ್ತ್ವಂ ಕೃಷ್ಣ ಚೈತ್ರರಥೇ ವನೇ ॥೨೧॥

ಎಲೈ ಮಹಾತೇಜಸ್ವಿಯಾದ ಕೃಷ್ಣನೇ! ನೀನು ಹಿಂದೆ ನಾರಾಯಣನಾಗಿ ಚೈತ್ರರಥವನದಲ್ಲಿ ಬಹಳವಾದ ದಕ್ಷಿಣೆಗಳನ್ನು ಕೊಟ್ಟು ಅನೇಕ ಯಾಗಗಳನ್ನು ಮಾಡಿದೆ.

ಶತಂ ಶತಸಹಸ್ರಾಣಿ ಸುವರ್ಣಸ್ಯ ಜನಾರ್ದನ ।
ಏಕೈಕಸ್ಮಿಂಸ್ತಥಾ ಯಜ್ಞೇ ಪರಿಪೂರ್ಣಾನಿ ದತ್ತವಾನ್ ॥೨೨॥

ಎಲೈ ಜನಾರ್ದನನೇ! ಒಂದೊಂದು ಯಜ್ಞದಲ್ಲಿಯೂ ನೀನು ಪ್ರತಿಯೊಬ್ಬರಿಗೂ ಪರಿಪೂರ್ಣವಾದ ಹತ್ತು ಸಹಸ್ರ ಸುವರ್ಣಗಳನ್ನು ದಕ್ಷಿಣೆಯಾಗಿ ಕೊಟ್ಟಿದ್ದೀಯೆ.

ಅದಿತೇರಪಿ ಪುತ್ರತ್ವಮಾಪ್ಯ ಯಾದವನಂದನ ।
ತ್ವಂ ವಿಷ್ಣುರಿತಿ ವಿಖ್ಯಾತ ಇಂದ್ರಾದವರಜೋಽಭವಃ ॥೨೩॥

ಯಾದವನಂದನನೇ! ನೀನು ಅದಿತಿಯ ಮಗನಾಗಿ ವಿಷ್ಣು ಎಂಬ ಹೆಸರಿನಿಂದ ಪ್ರಖ್ಯಾತನಾಗಿ ಇಂದ್ರನ ತಮ್ಮನಾಗಿ ಅವತಾರಮಾಡಿದೆ.

ಶಿಶುರ್ಭೂತ್ವಾ ದಿವಂ ಖಂ ಚ ಪೃಥಿವೀಂ ಚ ಪರಂತಪ ।
ತ್ರಿಭಿರ್ವಿಕ್ರಮಣೈಃ ಕೃಷ್ಣ ಪೂರ್ವಂ ತ್ವಂ ಕ್ರಾಂತವಾನಸಿ ॥೨೪॥

ಎಲೈ ಪರಂತಪನೇ! ನೀನು ವಾಮನರೂಪದಿಂದ ಅವತಾರಮಾಡಿ ಸ್ವರ್ಗ ಅಂತರಿಕ್ಷ ಮತ್ತು ಭೂಮಿಗಳನ್ನು ಮೂರುಹೆಜ್ಜೆಗಳಿಂದ ಹಿಂದೆ ಅಳೆದವನಾಗಿದ್ದೀಯೆ.

ಸಂಪ್ರಾಪ್ಯ ದಿವಮಾಕಾಶಮಾದಿತ್ಯಸದನೇ ಸ್ಥಿತಃ ।
ಅತ್ಯರೋಚಶ್ಚ ಭೂತಾತ್ಮನ್ ಭಾಸ್ಕರಂ ಸ್ವೇನ ತೇಜಸಾ ॥೨೫॥

ಎಲೈ ಭೂತಾತ್ಮನೇ! ಸೂರ್ಯಲೋಕಕ್ಕೆ ಹೋಗಿ ಸೂರ್ಯನ ಗೃಹದಲ್ಲಿ ಇದ್ದು ನಿನ್ನ ತೇಜಸ್ಸಿನಿಂದ ಸೂರ್ಯನಿಗಿಂತಲೂ ಚೆನ್ನಾಗಿ ಬೆಳಗಿದ್ದೀಯೆ.

ಮೌರವಾಃ ಸಾದಿತಾಃ ಪಾಶಾ ನಿಶುಂಭನರಕೌ ಹತೌ ।
ಕೃತಃ ಕ್ಷೇಮಃ ಪುನಃ ಪಂಥಾಃ ಪ್ರಾಗ್ಜ್ಯೋತಿಷಪುರಂ ಪ್ರತಿ ॥೨೬॥

ಹಿಂದೆ ಪ್ರಾಗ್ಜ್ಯೋತಿಷಪಟ್ಟಣದಲ್ಲಿ ಮುರ ಎಂಬ ಅಸುರ ನಿರ್ಮಿಸಿದ ಪಾಶಗಳನ್ನು ಕತ್ತರಿಸಿ ನಿಶುಂಭ ಮತ್ತು ನರಕಾಸುರರನ್ನು ಕೊಂದು ಆ ನಗರದ ಮಾರ್ಗವು ಪುನಃ ಕ್ಷೇಮದಿಂದ ಇರುವಂತೆ ಮಾಡಿದ್ದೀಯೆ.

ಜಾರುಥ್ಯಾಮಾವೃತಿಃ ಕ್ರುದ್ಧಃ ಶಿಶುಪಾಲೋ ನೃಪೈಃ ಸಹ ।
ಭೀಮಧನ್ವಾ ಚ ಶೈಬ್ಯಶ್ಚ ಶತಧನ್ವಾ ಚ ನಿರ್ಜಿತಃ ॥೨೭॥

ಅಗ್ರಪೂಜೆಯ ಸಮಯದಲ್ಲಿ ಅಗ್ರಪೂಜೆಗೆ ಪ್ರತಿಬಂಧಕನಾದ ಸಂಕ್ರುದ್ಧನಾದ ಶಿಶುಪಾಲನನ್ನು ಮತ್ತು ಭಯಂಕರ ಧನುಸ್ಸುಳ್ಳ ಶೈಬ್ಯರಾಜನನ್ನು ಮತ್ತು ಶತಧನ್ವನನ್ನು ಉಳಿದ ರಾಜರುಗಳ ಜೊತೆಯಲ್ಲಿ ಪರಾಭವಗೊಳಿಸಿದ್ದೀಯೆ.

ತಥಾ ಪರ್ಜನ್ಯಘೋಷೇಣ ರಥೇನಾದಿತ್ಯವರ್ಚಸಾ ।
ಅಹಾರ್ಷೀ ರುಗ್ಮಿಣೀಂ ಭೈಷ್ಮೀಂ ನಿರ್ಜಿತ್ಯ ರುಗ್ಮಿಣಂ ಮೃಧೇ ॥೨೮॥

ಅದರಂತೆ ಮೇಘಗರ್ಜನೆಯನ್ನು ಹೊಂದಿದ ಸೂರ್ಯನಂತೆ ಪ್ರಕಾಶಿಸುವ ರಥದಲ್ಲಿ ಕುಳಿತು ಯುದ್ಧದಲ್ಲಿ ರುಗ್ಮಿಯನ್ನು ಸೋಲಿಸಿ ಭೀಷ್ಮರಾಜನ ಮಗಳಾದ ರುಗ್ಮಿಣಿಯನ್ನು ಕರೆತಂದಿದ್ದೀಯೆ.

ಇಂದ್ರದ್ಯುಮ್ನೋ ಹತಃ ಕೋಪಾದ್ ಯವನಶ್ಚ ಕಶೇರುಕಃ ।
ಹತಃ ಸೌಭಪತಿಃ ಸಾಲ್ವಃ ತ್ವಯಾ ಸೌಭಂ ಚ ಪಾತಿತಮ್ ॥೨೯॥

ಕೋಪದಿಂದ ಇಂದ್ರದ್ಯುಮ್ನನನ್ನು ಸಂಹರಿಸಿದ್ದೀಯೆ. ಯವನ ರಾಜನಾದ ಕಶೇರುಕನನ್ನು ಕೊಂದಿದ್ದೀಯೆ. ಸೌಭಪತಿಯಾದ ಸಾಲ್ವನನ್ನು ಸಂಹರಿಸಿ ಸೌಭವನ್ನು

ನೆಲಕ್ಕೆ ಉರುಳಿಸಿದ್ದೀಯೆ.

ಇರಾವತ್ಯಾಂ ತಥಾ ಭೋಜಃ ಕಾರ್ತವೀರ್ಯಸಮೋ ಯುಧಿ ।
ಗೋಪತಿಸ್ತಾಳಕೇತುಶ್ಚ ತ್ವಯಾ ವಿನಿಹತಾವುಭೌ ॥೩೦॥

ಯುದ್ಧದಲ್ಲಿ ಇರಾವತಿಯಲ್ಲಿ ಕಾರ್ತವೀರ್ಯನಿಗೆ ಸಮಾನನಾದ ಭೋಜನನ್ನು ಸಂಹರಿಸಿದ್ದೀಯೆ. ಅದರಂತೆ ಗೋಪತಿ ಮತ್ತು ತಾಳಕೇತು ಇವರಿಬ್ಬರೂ ನಿನ್ನಿಂದ ಹತರಾಗಿದ್ದಾರೆ.

ತಾಂ ಚ ಭೋಗವತೀಂ ಪುಣ್ಯಾಮೃಷಿಕಾಂತಾಂ ಜನಾರ್ದನ ।
ದ್ವಾರಕಾಮಾತ್ಮಸಾತ್ ಕೃತ್ವಾ ಸಮುದ್ರಂ ಗಮಯಿಷ್ಯಸಿ ॥೩೧॥

ಎಲೈ ಜನಾರ್ದನನೇ! ಭೋಗಪೂರ್ಣವಾದ, ಋಷಿಗಳಿಗೆ ಪ್ರಿಯವಾದ, ಪವಿತ್ರವಾದ ಆ ದ್ವಾರಕಾಪಟ್ಟಣವನ್ನು ಸ್ವಾಧೀನಮಾಡಿಕೊಂಡು ಸಮುದ್ರವನ್ನು ದೂರಕ್ಕೆ ತಳ್ಳಿದ್ದೀಯೆ.

ನ ಕ್ರೋಧೋ ನ ಚ ಮಾತ್ಸರ್ಯಂ ನಾನೃತಂ ಮಧುಸೂದನ ।
ತ್ವಯಿ ತಿಷ್ಠತಿ ದಾಶಾರ್ಹ ನ ನೃಶಂಸಃ ಕುತೋಽನೃಜುಃ ॥೩೨॥

ಎಲೈ ದಾಶಾರ್ಹನೇ! ಎಲೈ ಮಧುಸೂದನನೇ! ನಿನ್ನಲ್ಲಿ ಕ್ರೋಧವಾಗಲೀ ಮಾತ್ಸರ್ಯವಾಗಲೀ ಅನೃತವಾಗಲೀ ಎಂದೂ ಇಲ್ಲ. ನೀನು ಎಂದೂ ಕ್ರೂರಿಯಲ್ಲ. ಇನ್ನು ವಕ್ರತೆಯು ಎಲ್ಲಿಂದ ಬರಬೇಕು?

ಆಸೀನಂ ಚಿತ್ತಮಧ್ಯೇ ತ್ವಾಂ ದೀಪ್ಯಮಾನಂ ಸ್ವತೇಜಸಾ ।
ಆಗಮ್ಯ ಋಷಯಃ ಸರ್ವೇ ಯಾಚಂತ್ಯಭಯಮುಚ್ಯುತ ॥೩೩॥

ಎಲೈ ಅಚ್ಯುತನೇ! ಹೃದಯಮಧ್ಯದಲ್ಲಿ ನಿನ್ನ ಕಾಂತಿಯಿಂದ ಬೆಳಗುತ್ತಿರುವ ನಿನ್ನನ್ನು ಋಷಿಗಳು ಚೆನ್ನಾಗಿ ತಿಳಿದು ನಿನ್ನಿಂದ ಮೋಕ್ಷವನ್ನು ಯಾಚಿಸುತ್ತಾರೆ.

ಯುಗಾಂತೇ ಸರ್ವಭೂತಾನಿ ಸಂಕ್ಷಿಪ್ಯ ಮಧುಸೂದನ ।
ಆತ್ಮನ್ಯೇವಾತ್ಮನಾ ಕೃತ್ವಾ ಜಗದಾಸ್ಸೇ ಪರಂತಪ ॥೩೪॥

ಎಲೈ ಮಧುಸೂದನನೇ! ಎಲೈ ಪರಂತಪನೇ! ಯುಗಾಂತಸಮಯದಲ್ಲಿ ಎಲ್ಲಾ ಪ್ರಾಣಿಗಳನ್ನೂ ಸಂಹರಿಸಿ ಜಗತ್ತನ್ನು ನಿನ್ನ ಉದರದಲ್ಲೇ ಇಟ್ಟುಕೊಂಡಿರುತ್ತೀಯೆ.

ನೈವ ಪೂರ್ವೇ ಪರೇ ಚೈವ ಕರಿಷ್ಯಂತಿ ಕೃತಾನಿ ತೇ ।
ಕರ್ಮಾಣಿ ಯಾನಿ ದೇವ ತ್ವಂ ಬಾಲ ಏವ ಮಹಾದ್ಯುತೇ ॥೩೫॥

ಕೃತವಾನ್ ಪುಂಡರೀಕಾಕ್ಷ ಬಲದೇವಸಹಾಯವಾನ್ ।
ವೈರಾಜಭವನೇ ಚಾಪಿ ಬ್ರಹ್ಮಣಾ ನ್ಯವಸಃ ಸಹ ॥೩೬॥

ಎಲೈ ದೇವನೇ! ಎಲೈ ಮಹಾದ್ಯುತಿಯೇ! ನೀನು ಬಾಲಕನಾಗಿಯೇ ಯಾವ ಕಾರ್ಯಗಳನ್ನು ಮಾಡಿದೆಯೋ ಅದನ್ನು ನಿನ್ನ ಹಿಂದಿನವರು ಯಾರೂ ಮಾಡಲಿಲ್ಲ. ಮುಂದಿನವರು ಮಾಡುವುದಿಲ್ಲ. ಎಲೈ ಪುಂಡರೀಕಾಕ್ಷನೇ! ಬಲರಾಮನ ಜೊತೆಯಲ್ಲಿ ನೀನು ಅಂತಹ ಕಾರ್ಯಗಳನ್ನು ಮಾಡಿದೆ. ಬ್ರಹ್ಮದೇವರ ಸದನದಲ್ಲಿಯೂ ಸಹ ಅವರ ಜೊತೆಯಲ್ಲಿ ವಾಸವನ್ನು ಮಾಡಿದೆ.

ವೈಶಂಪಾಯನಃ

ಏವಮುಕ್ತ್ವಾ ಸ್ವಮಾತ್ಮಾನಮಾತ್ಮಾ ಕೃಷ್ಣಸ್ಯ ಪಾಂಡವಃ ।
ತೂಷ್ಣೀಮಾಸೀತ್ ತತಃ ಪಾರ್ಥಮಿತ್ಯುವಾಚ ಜನಾರ್ದನಃ ॥೩೭॥

ಕೃಷ್ಣನಿಗೆ ಪ್ರಿಯನಾದ ಪಾಂಡವನಾದ ಅರ್ಜುನನು ತನ್ನ ಸ್ವಾಮಿಯಾದ ಪರಮಾತ್ಮನಾದ ಕೃಷ್ಣನನ್ನು ಕುರಿತು ಹೀಗೆ ಮಾತನಾಡಿ ಸುಮ್ಮನಾದನು. ಅನಂತರ ಜನಾರ್ದನನು ಅರ್ಜುನನನ್ನು ಕುರಿತು ಮಾತನಾಡಿದನು.

ಮಮೈವ ತ್ವಂ ತವೈವಾಹಂ ಯೇ ಮದೀಯಾಸ್ತವೈವ ತೇ ।
ಯಸ್ತ್ವಾಂ ದ್ವೇಷ್ಟಿ ಸ ಮಾಂ ದ್ವೇಷ್ಟಿ ಯಸ್ತ್ವಮನು ಸ ಮಾಮನು॥೩೮॥

ನೀನು ನನ್ನವನು ಮತ್ತು ನಾನು ನಿನ್ನವನು. ನನ್ನವರೆಲ್ಲರೂ ನಿನಗೆ ಸೇರಿದವರೇ ಆಗಿದ್ದಾರೆ. ಯಾರು ನಿನ್ನನ್ನು ದ್ವೇಷಿಸುತ್ತಾರೆಯೋ ಅವರು ನನ್ನನ್ನು ದ್ವೇಷಿಸುತ್ತಾರೆ. ಯಾರು ನಿನಗೆ ಅನುಕೂಲವಾಗಿದ್ದಾರೆಯೋ ಅವರು ನನಗೂ ಅನುಕೂಲರಾಗಿದ್ದಾರೆ.

ನರಸ್ತ್ವಮಸಿ ದುರ್ಧರ್ಷ ಹರಿರ್ನಾರಾಯಣೋಽಸ್ಮ್ಯಹಮ್ ।
ಲೋಕಾಲ್ಲೋಕಮಿಮಂ ಪ್ರಾಪ್ತೌ ನರನಾರಾಯಣಾವೃಷೀ ॥೫೯॥

ಎಲೈ ದುರ್ಧರ್ಷನೇ! ನೀನು ಹಿಂದೆ ನರನಾಗಿದ್ದೀಯೆ. ನಾನು ಹರಿನಾರಾಯಣನಾಗಿದ್ದೆ. ನಾವಿಬ್ಬರೂ ಬೇರೆ ಲೋಕದಿಂದ ಈ ಲೋಕಕ್ಕೆ ಬಂದ ನರನಾರಾಯಣ ಋಷಿಗಳು.

ಅನನ್ಯಃ ಪಾರ್ಥ ಮತ್ತಸ್ತ್ವಮ್ ಅಹಂ ತ್ವತ್ತಶ್ಚ ಭಾರತ ।
ನಾವಯೋರಂತರಂ ಶಕ್ಯಂ ವೇದಿತುಂ ಭರತರ್ಷಭ ॥೬೦॥

ಎಲೈ ಪಾರ್ಥನೇ! ನನ್ನ ಮೂಲರೂಪದಿಂದ ನಾನು ಅಭಿನ್ನನಾಗಿದ್ದೇನೆ. ನೀನು ನೀನೇ ಆಗಿದ್ದೀಯೆ. ಎಲೈ ಭರತರ್ಷಭನೇ! ನನ್ನ ಮೂಲರೂಪಕ್ಕೂ ಅವತಾರರೂಪಕ್ಕೂ ದೇಶದಿಂದ ಕಾಲದಿಂದ ಅಥವಾ ಅವಧಿಯಿಂದ ಅಥವಾ ಗುಣದಿಂದ ವ್ಯತ್ಯಾಸವನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಅಥವಾ ನಿನಗೂ ನನಗೂ ಇರುವ ತಾರತಮ್ಯವನ್ನು ಸಹ ತಿಳಿಯುವುದೂ ಅಶಕ್ಯವಾದುದು.

ವೈಶಂಪಾಯನಃ

ತಸ್ಮಿನ್ ವೀರಸಮಾವಾಯೇ ಸಂಕ್ರುದ್ಧೇಷ್ವಥ ರಾಜಸು ।
ಧೃಷ್ಟದ್ಯುಮ್ನಮುಖೈರ್ವೀರೈರ್ಭ್ರಾತೃಭಿಃ ಪರಿವಾರಿತಾ ॥೬೧॥

ಪಾಂಚಾಲೀ ಪುಂಡರೀಕಾಕ್ಷಮಾಸೀನಂ ಯಾದವೈಃ ಸಹ ।
ಅಭಿಗಮ್ಯಾಬ್ರವೀತ್ ಕೃಷ್ಣಾ ಶರಣ್ಯಂ ಶರಣೈಷಿಣೀ ॥೬೨॥

ಆ ವೀರಸಮುದಾಯದಲ್ಲಿ ಎಲ್ಲ ರಾಜರೂ ಕೋಪಗೊಂಡಿರಲು ಧೃಷ್ಟದ್ಯುಮ್ನ ಮೊದಲಾದ ವೀರರಿಂದಲೂ ಮತ್ತು ಉಳಿದ ಸಹೋದರರಿಂದಲೂ ಸುತ್ತುವರಿಯಲ್ಪಟ್ಟ ಶರಣಾರ್ಥಿಯಾದ ಪಾಂಚಾಲಿಯಾದ ದ್ರೌಪದಿಯು ಯಾದವರ ಜೊತೆಯಲ್ಲಿ ಕುಳಿತಿದ್ದ ಕೃಷ್ಣನನ್ನು ಸಮೀಪಿಸಿ ಮಾತನಾಡಿದಳು

ಪೂರ್ವೇ ಪ್ರಜಾನಿಸರ್ಗೇ ತ್ವಾಮಾಹುರೇಕಂ ಪ್ರಜಾಪತಿಮ್ ।
ಸ್ರಷ್ಟಾರಂ ಸರ್ವಲೋಕಾನಾಮಸಿತೋ ದೇವಲೋಽಬ್ರವೀತ್ ॥೬೩॥

ಹಿಂದಿನ ಪ್ರಜಾಸರ್ಗದಲ್ಲಿ ನೀನೇ ಮುಖ್ಯವಾದ ಪ್ರಜಾಪತಿ ಎಂದು ಹೇಳುತ್ತಾರೆ. ಅಸಿತ ಮತ್ತು ದೇವಲರು ನೀನೇ ಎಲ್ಲ ಲೋಕಗಳ ಸೃಷ್ಟಿಕರ್ತನೆಂದು ಹೇಳಿದ್ದಾರೆ.

ವಿಷ್ಣುಸ್ತ್ವಮಸಿ ದುರ್ಧರ್ಷಸ್ತ್ವಂ ಯಜ್ಞೋ ಮಧುಸೂದನ ।
ಯಷ್ಟಾ ತ್ವಮಸಿ ಯಷ್ಟವ್ಯೋ ಜಾಮದಗ್ನ್ಯೇ ಯಥಾಽಬ್ರವೀತ್ ॥೪೪॥

ದುರ್ಧರ್ಷನಾದ ಮಧುಸೂದನನೇ! ನೀನೇ ವಿಷ್ಣು. ನೀನೇ ಯಜ್ಞ. ಯಜ್ಞವನ್ನು ಮಾಡುವವನೂ ನೀನೇ ಯಜ್ಞದಿಂದ ಪೂಜಿಸಲ್ಪಡುವವನೂ ನೀನೇ ಎಂದು ಜಾಮದಗ್ನ್ಯರು ಹೇಳಿದ್ದಾರೆ.

ಋಷಯಸ್ತ್ವಾಂ ಕ್ಷಮಾಮಾಹುಃ ಸತ್ಯಂ ಚ ಪುರುಷೇಶ್ವರ ।
ಸತ್ಯಾದ್ ಯಜ್ಞೋಽಸಿ ಸಂಭೂತಃ ಕಾಶ್ಯಪಸ್ತ್ವಾಂ ಯಥಾಽಬ್ರವೀತ್ ॥

ಎಲೈ ಪುರುಷೇಶ್ವರನೇ! ಋಷಿಗಳು ನಿನ್ನನ್ನು ಕ್ಷಮೆಯೆಂದೂ ಸತ್ಯವೆಂದೂ ಕರೆಯುತ್ತಾರೆ. ಕಾಶ್ಯಪರು ಹೇಳಿದಂತೆ ನೀನು ಸತ್ಯದಿಂದ ಯಜ್ಞನಾಗಿ ಆವಿರ್ಭವಿಸಿದ್ದೀಯೆ.

ಸಾಧ್ಯಾನಾಮಪಿ ದೇವಾನಾಂ ವಸೂನಾಮೀಶ್ವರೇಶ್ವರಃ ।
ಲೋಕಭಾವನ ಲೋಕೇಶ ಯಥಾ ತ್ವಾಂ ನಾರದೋಽಬ್ರವೀತ್ ॥೪೬॥

ನೀನು ಸಾಧ್ಯರಿಗೂ ದೇವತೆಗಳಿಗೂ ಮತ್ತು ವಸುಗಳಿಗೂ ರಾಜಾಧಿರಾಜನಾಗಿದ್ದೀಯೆ. ಎಲೈ ಲೋಕಭಾವನನೇ! ನೀನು ಸಮಸ್ತಲೋಕಗಳಿಗೂ ಒಡೆಯನೆಂದು ನಾರದರು ಹೇಳಿದರು.

ದ್ಯೌಶ್ಚ ತೇ ಶಿರಸಾ ವ್ಯಾಪ್ತಾ ಪದ್ಭ್ಯಾಂ ಚ ಪೃಥಿವೀ ವಿಭೋ ।
ಜಠರೇ ತ ಇಮೇ ಲೋಕಾಃ ಪುರುಷೋಽಸಿ ಸನಾತನಃ ॥೪೭॥

ಎಲೈ ವಿಭುವೇ! ದ್ಯುಲೋಕವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ಭೂಲೋಕವು ನಿನ್ನ ಪಾದಗಳಿಂದ ವ್ಯಾಪ್ತವಾಗಿದೆ. ಈ ಎಲ್ಲ ಲೋಕಗಳೂ ಉದರಲ್ಲಿವೆ. ನೀನು ಸನಾತನನಾದ ಪರಮ ಪುರುಷ.

ವಿದ್ಯಾತಪೋಭಿತೃಪ್ತಾನಾಂ ತಪಸಾ ಭಾವಿತಾತ್ಮನಾಮ್ ।
ಆತ್ಮದರ್ಶನಸಿದ್ಧಾನಾಮೃಷೀಣಾಮಸಿ ಸತ್ತಮಃ ॥೪೮॥

ವಿದ್ಯಾ ಮತ್ತು ತಪಸ್ಸುಗಳಿಂದ ಸಂತುಷ್ಟಗೊಂಡ, ತಪಸ್ಸಿನಿಂದ ತಮ್ಮ ಮನಸ್ಸಿನ ಶುದ್ಧೀಕರಿಸಿಕೊಂಡು ನಿನ್ನ ದರ್ಶನವನ್ನು ಪಡೆದು ಸಿದ್ಧರಾದ, ಋಷಿಗಳಿಗೆ ನೀನು ನಿರ್ದೋಷಗುಣಪರಿಪೂರ್ಣ ವಸ್ತುವಾಗಿದ್ದೀಯೆ.

ರಾಜರ್ಷೀಣಾಂ ಪುಣ್ಯಕೃತಾಮಾಹವೇಷ್ವನಿವರ್ತಿನಾಮ್ ।
ಸರ್ವಧರ್ಮೋಪಪನ್ನಾನಾಂ ತ್ವಂ ಗತಿಃ ಪುರುಷೋತ್ತಮ ॥೪೯॥

ಎಲೈ ಪುರುಷೋತ್ತಮನೇ! ಪುಣ್ಯವನ್ನು ಮಾಡಿ ಯುದ್ಧದಲ್ಲಿ ಹಿಂದಿರುಗದೆ ಸರ್ವಧರ್ಮಗಳನ್ನು ಸಾಧಿಸಿದ ರಾಜರ್ಷಿಗಳಿಗೆ ನೀನು ಗತಿಯಾಗಿದ್ದೀಯೆ.

ತ್ವಂ ಪ್ರಭುಸ್ತ್ವಂ ವಿಭುಶ್ಚ ತ್ವಮಾತ್ಮಭೂಸ್ತ್ವಂ ಸನಾತನಃ ।
ಲೋಕಪಾಲಾಶ್ಚ ಲೋಕಾಶ್ಚ ನಕ್ಷತ್ರಾಣಿ ದಿಶೋ ದಶ ।
ನಭಶ್ಚಂದ್ರಶ್ಚ ಸೂರ್ಯಶ್ಚ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೫೦॥

ನೀನು ಸಮರ್ಥನಾಗಿದ್ದೀಯೆ. ನೀನು ವ್ಯಾಪ್ತನಾಗಿದ್ದೀಯೆ. ನಿನ್ನಿಂದ ನೀನೇ ಹುಟ್ಟುವವನಾಗಿದ್ದೀಯೆ. ನೀನು ವೇದಪ್ರತಿಪಾದ್ಯನಾಗಿದ್ದೀಯೆ. ಎಲ್ಲ ಲೋಕಗಳು ಲೋಕಪಾಲಕರು ನಕ್ಷತ್ರಗಳು ಹತ್ತು ದಿಕ್ಕುಗಳು ಅಂತರಿಕ್ಷಲೋಕವು ಸೂರ್ಯಚಂದ್ರರು ಈ ಎಲ್ಲರೂ ನಿನ್ನಲ್ಲೇ ಪ್ರತಿಷ್ಠಿತರಾಗಿದ್ದಾರೆ. (ಆಶ್ರಿತರಾಗಿದ್ದಾರೆ)

ಮರ್ತ್ಯತಾ ಚೈವ ಭೂತಾನಾಮಮರತ್ವಂ ದಿವೌಕಸಾಮ್ ।
ತ್ವಯಿ ಸರ್ವಂ ಮಹಾಬಾಹೋ ಲೋಕಕಾರ್ಯಂ ಪ್ರತಿಷ್ಠಿತಮ್ ॥೫೧॥

ಸಾ ತೇಽಹಂ ದುಃಖಮಾಖ್ಯಾಸ್ಯೇ ಪ್ರಣಯಾನ್ಮಧುಸೂದನ ।
ಈಶಸ್ತ್ವಂ ಸರ್ವಲೋಕಾನಾಂ ಯೇ ದಿವ್ಯಾ ಯೇ ಚ ಮಾನುಷಾಃ ॥

ಮಹಾಬಾಹುವೇ! ಎಲ್ಲ ಪ್ರಾಣಿಗಳ ಮರಣ ಶೀಲತೆಯೂ ದೇವತೆಗಳ ಅಮೃತ್ಯುತ್ವವೂ ನಿನ್ನ ಅಧೀನವಾಗಿದೆ. ಲೋಕಕಾರ್ಯವು ನಿನ್ನನ್ನೇ ಆಶ್ರಯಿಸಿದೆ. ಎಲೈ

ಮಧುಸೂಧನನೇ! ಅಂತಹ ನಾನು ನಿನ್ನ ಮೇಲಿನ ಪ್ರೀತಿಯಿಂದ ನನ್ನ ದುಃಖವನ್ನು ಹೇಳಿಕೊಳ್ಳುವೆನು. ಎಷ್ಟು ದಿವ್ಯ ಲೋಕಗಳು ಮತ್ತು ಮನುಷ್ಯಲೋಕಗಳು ಇವೆಯೋ ಅವೆಲ್ಲಕ್ಕೂ ನೀನೇ ಒಡೆಯನಾದವನು.

ಕಥಂ ನು ಭಾರ್ಯಾ ಪಾರ್ಥಾನಾಂ ತವ ಕೃಷ್ಣ ಸಖೀ ವಿಭೋ ।
ಧೃಷ್ಟದ್ಯುಮ್ನಸ್ಯ ಭಗಿನೀ ಪರಿಕೃಷ್ಯೇತ ಮಾದೃಶೀ ॥೫೩॥

ಎಲೈ ಕೃಷ್ಣನೇ! ಪಾಂಡವರ ಭಾರ್ಯೆಯಾದ, ನಿನ್ನ ಗೆಳತಿಯಾದ, ಧೃಷ್ಟದ್ಯುಮ್ನನ ತಂಗಿಯಾದ ನನ್ನಂತಹವಳನ್ನು ಸಭೆಯಲ್ಲಿ ಹೇಗೆ ತಾನೆ ಎಳೆದಾಡಿದರು?

ಸ್ತ್ರೀಧರ್ಮಿಣೀ ವೇಪಮಾನಾ ರುಧಿರೇಣ ಸಮುಕ್ಷಿತಾ ।
ಏಕವಸ್ತ್ರಾ ವಿಕೃಷ್ಟಾಽಸ್ಮಿ ದುಃಖಿತಾ ಕುರುಸಂಸದಿ ॥೫೪॥

ರಜಸ್ವಲೆಯಾಗಿ ನಾನು ರಕ್ತದಿಂದ ಒದ್ದೆಯಾಗಿ ಒಂದು ವಸ್ತ್ರವನ್ನು ಧರಿಸಿ ದುಃಖದಿಂದ ನಡುಗುತ್ತಿರುವಾಗ ಕುರುರಾಜರ ಸಭೆಯಲ್ಲಿ ಎಳೆದಾಡಲ್ಪಟ್ಟೆ.

ರಾಜಮಧ್ಯೇ ಸಭಾಯಾಂ ತು ರಜಸಾಽಭಿಸಮೀರಿತಾಃ ।
ದಾಸೀಭಾವೇನ ಭೋಕ್ತುಂ ಮಾಮೀಪ್ಸುಸ್ತೇ ಮಧುಸೂದನ ॥೫೫॥

ಎಲೈ ಮಧುಸೂದನನೇ! ರಾಗಾಭಿಭೂತರಾದ ಆ ದುಷ್ಟರು ಸಭೆಯಲ್ಲಿ ರಾಜರ ಮಧ್ಯದಲ್ಲಿ ನನ್ನನ್ನು ದಾಸಿ ಎಂದು ಮಾಡಿ ನನ್ನನ್ನು ಭೋಗಿಸಲು ಬಯಸಿದರು.

ದೃಷ್ಟ್ವಾ ಚ ಮಾಂ ಧಾರ್ತರಾಷ್ಟ್ರಾಃ ಪ್ರಾಹಸನ್ ಪಾಪಚೇತಸಃ ।
ಜೀವತ್ಸು ಪಾಂಡುಪುತ್ರೇಷು ಪಾಂಚಾಲೇಷ್ವಥ ವೃಷ್ಣಿಷು ॥೫೬॥

ಪಾಂಡವರೂ ಪಾಂಚಾಲರೂ ಮತ್ತು ವೃಷ್ಣಿಗಳೂ ಬದುಕಿರುವಾಗ ನನ್ನನ್ನು ನೋಡಿ ಪಾಪಮನಸ್ಸುಳ್ಳ ಧೃತರಾಷ್ಟ್ರಪುತ್ರರು ಅಪಹಾಸವನ್ನು ಮಾಡಿದರು.

ನನ್ವಹಂ ಕೃಷ್ಣ ಭೀಷ್ಮಸ್ಯ ಧೃತರಾಷ್ಟ್ರಸ್ಯ ಚೋಭಯೋಃ ।
ಸ್ನುಷಾ ಭವಾಮಿ ಧರ್ಮೇಣ ಸಾಽಹಂ ದಾಸೀಕೃತಾ ಬಲಾತ್ ॥೫೭॥

ಎಲೈ ಕೃಷ್ಣನೇ! ನಾನು ಭೀಷ್ಮ ಮತ್ತು ಧೃತರಾಷ್ಟ್ರ ಇಬ್ಬರಿಗೂ ಧರ್ಮದಿಂದಲೇ ಸೊಸೆಯಾಗುತ್ತೇನಷ್ಟೇ? ಅಂತಹ ನನ್ನನ್ನು ಬಲಾತ್ಕಾರದಿಂದ ದಾಸಿ ಎಂದು ಕರೆದರು.

ಗರ್ಹಯೇ ಪಾಂಡವಾಂಸ್ತ್ವೇವ ಯುಧಿ ಶ್ರೇಷ್ಠಾನ್ ಮಹಾಬಲಾನ್ ।
ಯೇ ಕ್ಲಿಶ್ಯಮಾನಾಂ ಪಶ್ಯಂತಿ ಧರ್ಮಪತ್ನೀಂ ಯಶಸ್ವಿನೀಮ್ ॥೫೮॥

ಯಾವ ಪಾಂಡವರು ಯಶಸ್ವಿನಿಯಾದ ತಮ್ಮ ಧರ್ಮಪತ್ನಿಯು ಸಭೆಯಲ್ಲಿ ಕ್ಲೇಶಪಡುವುದನ್ನು ನೋಡುತ್ತಾ ಕುಳಿತಿದ್ದರೋ ಅಂತಹ ಮಹಾಬಲರಾದ ಯುದ್ಧದಲ್ಲಿ ಶ್ರೇಷ್ಠರಾದ ಪಾಂಡವರನ್ನೇ ನಿಂದಿಸುತ್ತೇನೆ.

ಧಿಗ್‌ಬಲಂ ಭೀಮಸೇನಸ್ಯ ಧಿಕ್ ಪಾರ್ಥಸ್ಯ ಧನುಷ್ಮತಃ ।
ಯೌ ಮಾಂ ವಿಪ್ರಕೃತಾಂ ಧಿಕ್ಕೌರ್ಮರ್ಷಯೇತಾಂ ಜನಾರ್ದನ ॥೫೯॥

ಎಲೈ ಜನಾರ್ದನನೇ! ಯಾವ ಭೀಮಾರ್ಜುನರು ಸಭೆಯಲ್ಲಿ ತುಚ್ಛಪುರುಷರಿಂದ ಅವಮಾನಿತಳಾದ ನನ್ನನ್ನು ಸಹಿಸಿ ನಿಂತರೋ ಅಂತಹ ಭೀಮಸೇನನ ಬಲಕ್ಕೆ ಧಿಕ್ಕಾರವಿರಲಿ. ಅರ್ಜುನನ ಧನುರ್ವಿದ್ಯೆಗೂ ಧಿಕ್ಕಾರವಿರಲಿ.

ಶಾಶ್ವತೋಽಯಂ ಧರ್ಮಪಥಃ ಸದ್ಭಿರಾಚರಿತಃ ಸದಾ ।
ಯದ್ ಭಾರ್ಯಾಂ ಪರಿರಕ್ಷಂತೇ ಭರ್ತಾರೋಽಲ್ಪಬಲಾ ಅಪಿ ॥೬೦॥

ಅಲ್ಪಬಲವುಳ್ಳ ಗಂಡಂದಿರೂ ಸಹ ತಮ್ಮ ಪತ್ನಿಯರನ್ನು ರಕ್ಷಿಸುವುದು ಯಾವಾಗಲೂ ಸಜ್ಜನರಿಂದ ಆಚರಿಸಲ್ಪಟ್ಟ ಶಾಶ್ವತವಾದ ಧರ್ಮಮಾರ್ಗ.

ಭಾರ್ಯಾಯಾಂ ರಕ್ಷ್ಯಮಾಣಾಯಾಂ ಪ್ರಜಾ ಭವತಿ ರಕ್ಷಿತಾ ।
ಪ್ರಜಾಯಾಂ ರಕ್ಷ್ಯಮಾಣಾಯಾಮಾತ್ಮಾ ಭವತಿ ರಕ್ಷಿತಃ ॥೬೧॥

ಭಾರ್ಯೆಯನ್ನು ರಕ್ಷಿಸಿದರೆ ಪ್ರಜೆಯು ರಕ್ಷಿತನಾಗುತ್ತಾನೆ. ಪ್ರಜೆಯು ರಕ್ಷಿತನಾಗುತ್ತಿರಲು ತಾನೇ ರಕ್ಷಿತನಾಗುತ್ತಾನೆ.

ಆತ್ಮಾ ಹಿ ಜಾಯತೇ ತಸ್ಯಾಂ ತಸ್ಮಾಜ್ಜಾಯಾ ಭವತ್ಯುತ ।
ಭರ್ತಾ ಚ ಭಾರ್ಯಯಾ ರಕ್ಷ್ಯಃ ಕಥಂ ಜಾಯೇನ್ಮಮೋದರೇ ॥೬೨॥

ತಾನೇ ಪತ್ನಿಯಲ್ಲಿ ಹುಟ್ಟುತ್ತಾನೆ ಎಂಬ ಕಾರಣದಿಂದ ಪತ್ನಿಯನ್ನು ಜಾಯಾ ಎಂದು ಕರೆಯುತ್ತಾರೆ. ಪತಿಯನ್ನು ಸಹ ಭಾರ್ಯೆಯು ರಕ್ಷಿಸಬೇಕು. ಇಲ್ಲದಿದ್ದರೆ ಅವನು ನನ್ನ ಉದರದಲ್ಲಿ ಜನಿಸುವುದು ಹೇಗೆ?

ನನ್ವಿಮೇ ಶರಣಂ ಪ್ರಾಪ್ತಂ ನ ತ್ಯಜಂತಿ ಕದಾಚನ ।
ತೇ ಮಾಂ ಶರಣಮಾಪನ್ನಮನ್ವಪದ್ಯನ್ ಕಥಂ ಪರಾನ್ ॥೬೩॥

ಈ ಪಾಂಡವರು ಶರಣಾಗತರಾದವರನ್ನು ಎಂದೂ ಬಿಡುವುದಿಲ್ಲವಷ್ಟೇ ? ಅಂತಹ ಈ ಪಾಂಡವರು ಶರಣಾಗತಳಾದ ನನ್ನನ್ನು ಶತ್ರುಗಳಿಗೆ ಹೇಗೆ ಒಪ್ಪಿಸಿದರು?

ಪಂಚೇಮೇ ಪಂಚಭಿರ್ಜಾತಾಃ ಕುಮಾರಾ ಭೂರಿತೇಜಸಃ ।
ಏತೇಷಾಮಪ್ಯವೇಕ್ಷಾರ್ಥಂ ತ್ರಾತವ್ಯಾऽಸ್ಮಿ ಜನಾರ್ದನ ॥೬೪॥

ಮಹಾತೇಜಸ್ವಿಗಳಾದ ಪ್ರತಿವಿಂಧ್ಯ ಮೊದಲಾದ ಐದು ಕುಮಾರರು ಪಂಚಪಾಂಡವರಿಂದ ಜನಿಸಿದ್ದಾರೆ. ಎಲೈ ಜನಾರ್ದನನೇ! ಇವರನ್ನು ನೋಡಿಕೊಳ್ಳುವ ಸಲುವಾಗಿಯಾದರೂ ಪಾಂಡವರು ನನ್ನನ್ನು ರಕ್ಷಿಸಬೇಕಾಗಿತ್ತಷ್ಟೆ?

ಪ್ರತಿವಿಂಧ್ಯೋ ಯುಧಿಷ್ಠಿರಾತ್ ಸುತಸೋಮೋ ವೃಕೋದರಾತ್ ।
ಅರ್ಜುನಾಚ್ಛ್ರುತಕೀರ್ತಿಸ್ತು ಶತಾನೀಕಸ್ತು ನಾಕುಲಿಃ ॥೬೫॥

ಕನಿಷ್ಠಾಚ್ಛ್ರುತಸೇನಶ್ಚ ಸರ್ವೇ ಸತ್ಯಪರಾಕ್ರಮಾಃ ।
ಪ್ರದ್ಯುಮ್ನೋ ಯಾದೃಶಃ ಕೃಷ್ಣ ತಾದೃಶಾಸ್ತೇ ಮಹಾರಥಾಃ ॥೬೬॥

ಪ್ರತಿವಿಂಧ್ಯನು ಯುಧಿಷ್ಠಿರನಿಂದಲೂ ಸುತಸೋಮನು ವೃಕೋದರನಿಂದಲೂ ಶ್ರುತಕೀರ್ತಿಯು ಅರ್ಜುನನಿಂದಲೂ ಶ್ರುತಾನೀಕನು ನಕುಲನಿಂದಲೂ ಶ್ರುತಸೇನನು ಸಹದೇವನಿಂದಲೂ ಜನಿಸಿದ್ದಾರೆ. ಎಲ್ಲರೂ ಸತ್ಯಪರಾಕ್ರಮ ಉಳ್ಳವರು. ಎಲೈ ಕೃಷ್ಣನೇ! ಪ್ರದ್ಯುಮ್ನನು ಹೇಗೋ ಹಾಗೆ ಇವರೆಲ್ಲರೂ ಮಹಾರಥರು.

ನನ್ವಿಮೇ ಧನುಷಿ ಶ್ರೇಷ್ಠಾ ಅಜೇಯಾ ಯುಧಿ ಶಾತ್ರವೈಃ ।
ಕಿಮರ್ಥಂ ಧಾರ್ತರಾಷ್ಟ್ರಾಣಾಂ ಸಹಂತೇ ದುರ್ಬಲೀಯಸಾಮ್ ॥೬೭॥

ಇವರೆಲ್ಲರೂ ಧನ್ರ್ವಿದ್ಯೆಯಲ್ಲಿ ಪಾರಂಗತರಾಗಿ ಯುದ್ಧದಲ್ಲಿ ಶತ್ರುಗಳಿಂದ ಪರಾಭವವನ್ನು ಹೊಂದುವವರಲ್ಲವಷ್ಟೇ? ಇವರು ದುರ್ಬಲರಾದ ಧೃತರಾಷ್ಟ್ರಪುತ್ರರ ಅನ್ಯಾಯವನ್ನು ಹೇಗೆ ಸಹಿಸುತ್ತಿದ್ದಾರೆ?

ಅಧರ್ಮೇಣ ಹೃತಂ ರಾಜ್ಯಂ ಸರ್ವೇ ದಾಸಾಸ್ತಥಾ ಕೃತಾಃ ।
ಸಭಾಯಾಂ ಪರಿಕೃಷ್ಟಾಽಹಮೇಕವಸ್ತ್ರಾ ರಜಸ್ವಲಾ ॥೬೮॥

ಅಧರ್ಮದಿಂದ ನಮ್ಮ ರಾಜ್ಯವನ್ನು ಕಸಿದುಕೊಂಡರು. ಹಾಗೆಯೇ ನಮ್ಮೆಲ್ಲರನ್ನೂ ದಾಸರನ್ನಾಗಿ ಮಾಡಿದರು. ಏಕವಸ್ತ್ರಳೂ ರಜಸ್ವಲೆಯೂ ಆದ ನನ್ನನ್ನು ಸಭೆಯಲ್ಲಿ ಎಳೆದಾಡಿದರು.

ನಾಧಿಜ್ಯಮಪಿ ತಚ್ಚಕ್ಯಂ ಕರ್ತುಮನ್ಯೇನ ಗಾಂಡಿವಮ್ ।
ಅನ್ಯತ್ರಾರ್ಜುನಭೀಮಾಭ್ಯಾಂ ತ್ವಯಾ ವಾ ಮಧುಸೂದನ ॥೬೯॥

ಎಲೈ ಮಧುಸೂದನನೇ! ಭೀಮಾರ್ಜುನರನ್ನು ಮತ್ತು ನಿನ್ನನ್ನು ಬಿಟ್ಟು ಬೇರೆಯಾರಿಗೂ ಗಾಂಡೀವ ಧನುಸ್ಸನ್ನು ಹೆದೆಏರಿಸಲು ಸಹ ಸಾಧ್ಯವಿಲ್ಲ.

ಧಿಗ್ ಬಲಂ ಭೀಮಸೇನಸ್ಯ ಧಿಕ್ ಪಾರ್ಥಸ್ಯ ಚ ಗಾಂಡಿವಮ್ ।
ಯತ್ರ ದುರ್ಯೋಧನಃ ಪಾಪೋ ಮುಹೂರ್ತಮಪಿ ಜೀವತಿ ॥೭೦॥

ಯ ಏತಾನಾಕ್ಷಿಪದ್ ರಾಷ್ಟ್ರಾತ್ ಸಹ ಮಾತ್ರಾ ವಿಹಿಂಸಕಾನ್ ।
ಅಧೀಯಾನಾನ್ ಪುರಾ ಬಾಲಾನ್ ವ್ರತಸ್ಥಾನ್ ಮಧುಸೂದನ ॥೭೧॥

ಯಾವ ದುರ್ಯೋಧನನು ಬಾಲಕರಾಗಿ ವ್ರತವನ್ನು ಧರಿಸಿ ವೇದಾಧ್ಯಯನಮಾಡುತ್ತಾ ಇನ್ನೊಬ್ಬರಿಗೆ ಹಿಂಸೆಕೊಡದಿರುವ ಪಾಂಡವರನ್ನು ತಾಯಿಯ ಜೊತೆಯಲ್ಲಿ ರಾಷ್ಟ್ರದಿಂದ ಹೊರಗೆ ಕಳುಹಿಸಿದನೋ ಅಂತಹ ಪಾಪಿಯಾದ ದುರ್ಯೋಧನನು ಒಂದು ಮುಹೂರ್ತ ಬದುಕಿದ್ದರೂ ಸಹ ಭೀಮಸೇನನ ಬಲಕ್ಕೆ ಧಿಕ್ಕಾರವಿರಲಿ. ಅರ್ಜುನನ ಗಾಂಡೀವ ಧನುಸ್ಸಿಗೆ ಧಿಕ್ಕಾರವಿರಲಿ.

ಭೋಜನೇ ಭೀಮಸೇನಸ್ಯ ಪಾಪಃ ಪ್ರಾಕ್ಷೇಪಯದ್ ವಿಷಮ್ ।
ಕಾಲಕೂಟನಿಭಂ ತೀಕ್ಷ್ಣಂ ಸಂಭೃತಂ ರೋಮಹರ್ಷಣಮ್ ॥೭೨॥

ಪಾಪಿಯಾದ ದುರ್ಯೋಧನನು ಭೀಮಸೇನನ ಭೋಜನದಲ್ಲಿ ರೋಮಾಂಚಕಾರಿಯಾದ ಸಾಂದ್ರವಾದ ತೀಕ್ಷ್ಣವಾದ ಮತ್ತು ಕಾಲಕೂಟ ವಿಷಕ್ಕೆ ಸಮಾನವಾದ ವಿಷವನ್ನು ಬೆರೆಸಿದನು.

ತಜ್ಜೀರ್ಣಮವಿಕಾರೇಣ ಸಹಾನ್ನೇನ ಜನಾರ್ದನ ।
ಸಶೇಷತ್ವಾನ್ಮಹಾಬಾಹೋ ಭೀಮಸ್ಯ ಪುರುಷೋತ್ತಮ ॥೭೩॥

ಎಲೈ ಜನಾರ್ದನನೇ! ಎಲೈ ಮಹಾಬಾಹುವೇ! ಎಲೈ ಪುರುಷೋತ್ತಮನೇ! ಭೀಮಸೇನನಿಗೆ ವಿಶೇಷಸಾಮರ್ಥ್ಯವಿದ್ದುದರಿಂದ ಅವನು ಅನ್ನದ ಜೊತೆಯಲ್ಲಿ ಅವಿಕಾರನಾಗಿ ವಿಷವನ್ನು ಅರಗಿಸಿಕೊಂಡನು.

ಪ್ರಮಾಣಕೋಟ್ಯಾಂ ವಿಶ್ವಸ್ತಂ ಪಾಶೈರ್ಬದ್ಧ್ವಾ ವೃಕೋದರಮ್ ।
ತೋಯೇ ಸುಭೀಮೇ ಗಂಗಾಯಾಃ ಪ್ರಾಕ್ಷಿಪ್ಯ ಗೃಹಮಾವ್ರಜನ್ ॥೭೪॥

ಪ್ರಮಾಣಕೋಟಿ ಮಡುವಿನಲ್ಲಿ ಒಳ್ಳೆಯ ನಿದ್ದೆಯಲ್ಲಿದ್ದ ಭೀಮಸೇನನನ್ನು ಪಾಶಗಳಿಂದ ಕಟ್ಟಿ ಗಂಗೆಯ ಭಯಂಕರವಾದ ಒಂದು ಮಡುವಿನಲ್ಲಿ ಎಸೆದು ಮನೆಗೆ ಹಿಂದಿರುಗಿದರು.

ಯದಾ ವಿಬುದ್ಧಃ ಕೌಂತೇಯಸ್ತದಾ ಸಂಛಿದ್ಯ ಬಂಧನಮ್ ।
ಉದತಿಷ್ಠನ್ಮಹಾಬಾಹುರ್ಭೀಮಸೇನೋ ಮಹಾಬಲಃ ॥೭೫॥

ಭೀಮಸೇನನು ಯಾವಾಗ ಎಚ್ಚರಗೊಂಡನೋ ಆಗ ಮಹಾಬಾಹುವೂ ಮಹಾಬಲನೂ ಆದ ಆ ಕೌಂತೇಯನು ತನ್ನ ಬಂಧನಗಳನ್ನು ಕಿತ್ತುಹಾಕಿ ನೀರಿನಿಂದ ಮೇಲೆದ್ದನು.

ಆಶೀವಿಷೈಃ ಕೃಷ್ಣಸರ್ಪೈಃ ಸುಪ್ತಂ ಚೈನಮದಂಶಯತ್ ।
ಸರ್ವೇಷ್ವೇವಾಂಗದೇಶೇಷು ನ ಮಮಾರ ಹ ಶತ್ರುಹಾ ॥೭೬॥

ದೃಷ್ಟಿಯಲ್ಲಿಯಲ್ಲಿಯೇ ವಿಷವುಳ್ಳ ಕೃಷ್ಣಸರ್ಪಗಳಿಂದ ಸುಪ್ತನಾದ ಭೀಮನನ್ನು ಸರ್ವಾಂಗಗಳಲ್ಲಿ ಕಚ್ಚಿಸಿದರು. ಆದರೆ ಶತ್ರುಸಂಹಾರಕನಾದ ಭೀಮನು ಅದರಿಂದ ಮರಣ ಹೊಂದಲಿಲ್ಲ.

ಪ್ರತಿಬುದ್ಧಸ್ತು ಕೌಂತೇಯಃ ಸರ್ಪಾನ್ ಸರ್ವಾನಪೋಥಯತ್ ।
ಸಾರಥಿಂ ಚಾಸ್ಯ ದಯಿತಮಪಹಸ್ತೇನ ಜಘ್ನಿವಾನ್ ॥೭೭॥

ಎಚ್ಚರಗೊಂಡ ಭೀಮಸೇನನು ಎಲ್ಲ ಸರ್ಪಗಳನ್ನೂ ಕೊಂದುಹಾಕಿದನು. ಮತ್ತು ದುರ್ಯೋಧನನ ಪ್ರಿಯವಾದ ಸಾರಥಿಯನ್ನು ತನ್ನ ಎಡಗೈಯಿಂದಲೇ ಹೊಡೆದು ಕೊಂದನು.

ತತಃ ಪುನರುಪಾಧಾಕ್ಷೀದ್ ಬಾಲಕಾನ್ ವಾರಣಾವತೇ ।
ಶಯಾನಾನಾರ್ಯಯಾ ಸಾರ್ಧಂ ಕೋ ನು ತತ್ ಕರ್ತುಮರ್ಹತಿ ॥

ಅನಂತರ ಪುನಃ ವಾರಣಾವತದಲ್ಲಿ ಅರಗಿನಮನೆಯಲ್ಲಿ ಪೂಜ್ಯಳಾದ ಕುಂತಿಯ ಜೊತೆಯಲ್ಲಿ ಮಲಗಿದ್ದ ಈ ಬಾಲಕರನ್ನು ಸುಟ್ಟುಹಾಕಲು ಪ್ರಯತ್ನಿಸಿದರು. ಯಾವನು ತಾನೇ ಅಂತಹ ಕೆಲಸವನ್ನು ಮಾಡಲು ಸಾಧ್ಯ ?

ತತ್ರಾರ್ಯಾ ರುದತೀ ಭೀತಾ ಪಾಂಡವಾನಿದಮಬ್ರವೀತ್ ।
ಮಹದ್ವ್ಯಸನಮಾಪನ್ನಾ ಶಿಖಿನಾ ಪರಿವಾರಿತಾ ॥೭೯॥

ಹಾ ಹತಾऽಸ್ಮಿ ಕುತೋ ನ್ವದ್ಯ ಭವೇಚ್ಛಾಂತಿರಿಹಾನಲಾತ್ ।
ಅನಾಥಾ ವಿನಶಿಷ್ಯಾಮಿ ಬಾಲಕೈಃ ಪುತ್ರಕೈಃ ಸಹ ॥೮೦॥

ಆಗ ಆರ್ಯೆಯಾದ ಕುಂತಿಯು ಭಯಗ್ರಸ್ತಳಾಗಿ ಅಳುತ್ತಾ ಪಾಂಡವರನ್ನುದ್ದೇಶಿಸಿ ಹೀಗೆ ಹೇಳಿದಳು. ನಾನು ದೊಡ್ಡ ಸಂಕಟಕ್ಕೆ ಸಿಲುಕಿದ್ದೇನೆ. ಅಗ್ನಿಯು ನನ್ನನ್ನು ಸುತ್ತುವರಿದಿದೆ. ಅಯ್ಯೋ ನಾನು ಸಾಯುತ್ತಿದ್ದೇನೆ. ಈ ಅಗ್ನಿಯಿಂದ ನನಗೆ ಈ ದಿನ ಶಾಂತಿಯು ಹೇಗೆ ಉಂಟಾಗುತ್ತದೆ. ಅನಾಥಳಾದ ನಾನು ಬಾಲಕರಾದ ಪುತ್ರರಿಂದ ಒಡಗೂಡಿ ವಿನಾಶವನ್ನು ಹೊಂದುವೆನು.

ತತ್ರ ಭೀಮೋ ಮಹಾಬಾಹುರ್ವಾಯುವೇಗಪರಾಕ್ರಮಃ ।
ಆರ್ಯಾಮಾಶ್ವಾಸಯಾಮಾಸ ಭ್ರಾತೄಂಶ್ಚಾಪಿ ವೃಕೋದರಃ ॥೮೧॥

ಆಗ ಮಹಾಬಾಹುವೂ ವಾಯುವೇಗವನ್ನೂ ವಾಯುಪರಾಕ್ರಮವನ್ನೂ ಹೊಂದಿದ್ದ ವೃಕೋದರನು ಆರ್ಯೆಯಾದ ಕುಂತಿಯನ್ನು ಮತ್ತು ಅಣ್ಣತಮ್ಮಂದಿರನ್ನು ಸಮಾಧಾನಪಡಿಸಿದನು.

ವೈನತೇಯೋ ಯಥಾ ಪಕ್ಷೀ ಗರುಡಃ ಪತತಾಂ ವರಃ ।
ತಥೈವಾಭಿಪತಿಷ್ಯಾಮಿ ಭಯಂ ವೋ ನೇಹ ವಿದ್ಯತೇ ॥೮೨॥

ಹೇಗೆ ಪಕ್ಷಿಶ್ರೇಷ್ಠನಾದ ವಿನತೆಯ ಮಗನಾದ ಗರುಡನು ಹಾರುತ್ತಾನೋ ಹಾಗೆ ನಿಮ್ಮೆಲ್ಲರನ್ನೂ ಕರೆದು ಕೊಂಡು ಹೋಗುತ್ತೇನೆ. ನೀವು ಇಲ್ಲಿ ಭಯಪಡಬೇಕಾದ ಕಾರಣವಿಲ್ಲ.

ಆರ್ಯಾಮಂಕೇನ ವಾಮೇನ ದಕ್ಷಿಣೇನ ಯುಧಿಷ್ಠಿರಮ್ ।
ಅಂಸಯೋಶ್ಚ ಯಮೌ ಕೃತ್ವಾ ಪೃಷ್ಠೇ ಬೀಭತ್ಸುಮೇವ ಚ ॥೮೩॥

ಸಹಸೋತ್ಪತ್ಯ ವೇಗೇನ ಸರ್ವಾನಾದಾಯ ವೀರ್ಯವಾನ್ ।
ಭ್ರಾತೄನಾರ್ಯಾಂ ಚ ಬಲವಾನ್ ಮೋಕ್ಷಯಾಮಾಸ ಪಾವಕಾತ್ ॥

ಕುಂತಿಯನ್ನು ಎಡತೊಡೆಯಲ್ಲಿ ಧರಿಸಿ ದಕ್ಷಿಣ ತೊಡೆಯಲ್ಲಿ ಯುಧಿಷ್ಠಿರನನ್ನು ಧರಿಸಿ ಎರಡೂ ಭುಜಗಳಲ್ಲಿ ನಕುಲ ಸಹದೇವರನ್ನು ಧರಿಸಿ ಬೆನ್ನಿನ ಮೇಲೆ ಅರ್ಜುನನನ್ನು ಧರಿಸಿ ಮಹಾಸಾಮರ್ಥ್ಯೋಪೇತನಾದ ಭೀಮನು ಎಲ್ಲರನ್ನೂ ಎತ್ತಿಕೊಂಡು ವೇಗವಾಗಿ ಹಾರಿ ಅಣ್ಣತಮ್ಮಂದಿರನ್ನೂ ಮತ್ತು ತಾಯಿಯನ್ನೂ ಅಗ್ನಿಯಿಂದ ರಕ್ಷಿಸಿದನು.

ತೇ ರಾತ್ರೌ ಪ್ರಸ್ಥಿತಾಃ ಸರ್ವೇ ಮಾತ್ರಾ ಸಹ ಯಶಸ್ವಿನಃ ।
ಅಭ್ಯಗಚ್ಛನ್ ಮಹಾರಣ್ಯಂ ಹಿಡಿಂಬವನಮಂತಿಕಾತ್ ॥೮೫॥

ರಾತ್ರಿಯಲ್ಲಿ ತಾಯಿಯ ಜೊತೆಯಲ್ಲಿ ಹೊರಟ ಯಶಸ್ವಿಗಳಾದ ಆ ಪಾಂಡವರೆಲ್ಲರೂ ಸಮೀಪದಲ್ಲಿ ಇದ್ದ ಹಿಡಿಂಬವನವಾಗಿದ್ದ ಮಹಾರಣ್ಯವನ್ನು ತಲುಪಿದರು.

ಶ್ರಾಂತಾಃ ಪ್ರಸುಪ್ತಾಸ್ತತ್ರೇಮೇ ಮಾತ್ರಾ ಸಹ ಸುಖೇಧಿತಾಃ ।
ಸುಪ್ತಾಂಶ್ಚೈನಾನಭ್ಯಗಚ್ಛದ್ಧಿಡಿಂಬಾ ನಾಮ ರಾಕ್ಷಸೀ ॥೮೬॥

ಸುಖವಾಗಿ ಬೆಳೆದ ಇವರು ಬಹಳ ದಣಿದವರಾಗಿ ತಾಯಿಯ ಜೊತೆಯಲ್ಲಿ ಅಲ್ಲಿ ಮಲಗಿ ನಿದ್ರಿಸಿದರು. ಇವರು ಮಲಗಿದ ಸಮಯದಲ್ಲಿ ಅಲ್ಲಿಗೆ ಹಿಡಿಂಬೆಯೆಂಬ ರಾಕ್ಷಸಿಯು ಬಂದಳು.

ಸಾ ದೃಷ್ಟ್ವಾ ಪಾಂಡವಂ ಭೀಮಂ ಶಯಾನಂ ಭ್ರಾತೃಭಿಃ ಸಹ ।
ಹೃಚ್ಛಯೇನಾಭಿಭೂತಾಂಗೀ ಭೀಮಸೇನಮಕಾಮಯತ್ ॥೮೭॥

ಅವಳು ಪಾಂಡುಪುತ್ರನಾದ ಭೀಮಸೇನನು ಸಹೋದರರ ಜೊತೆಯಲ್ಲಿ ಮಲಗಿರುವುದನ್ನು ನೋಡಿ ಕಾಮಪೀಡಿತಳಾಗಿ ಭೀಮಸೇನನನ್ನು ಕಾಮಿಸಿದಳು.

ಭೀಮಸ್ಯ ಪಾದೌ ಕೃತ್ವಾ ತು ಸ್ವಉತ್ಸಂಗೇ ತತೋ ಬಲಾತ್ ।
ಪರ್ಯಷ್ವಜತ ಸಂಹೃಷ್ಟಾ ಕಲ್ಯಾಣೀ ಮೃದುಪಾಣಿನಾ ॥೮೮॥

ಮಲಗಿ ನಿದ್ರಿಸುತ್ತಿದ್ದ ಭೀಮಸೇನನ ಪಾದಗಳನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಶುಭಸ್ವರೂಪಳಾದ ಅವಳು ಸಂತೋಷದಿಂದ ತನ್ನ ಮೃದುವಾದ ಹಸ್ತಗಳಿಂದ ಅವನನ್ನು ಬಲವಾಗಿ ಆಲಿಂಗಿಸಿದಳು.

ತಾಮಬುದ್ಧ್ಯದಮೇಯಾತ್ಮಾ ಬಲವಾನ್ ಸತ್ಯವಿಕ್ರಮಃ ।
ಪರ್ಯಪೃಚ್ಛಚ್ಛ ತಾಂ ಭೀಮಃ ಕಸ್ಯ ತ್ವಮಸಿ ಶೋಭನೇ ॥೮೯॥

ಸತ್ಯವಿಕ್ರಮನೂ ಬಲಶಾಲಿಯೂ ಅಪರಿಮಿತ ಮಹಿಮೆಯುಳ್ಳವನೂ ಆದ ಭೀಮಸೇನನು ಎದ್ದು ಅವಳನ್ನು ನೋಡಿ ಶೋಭನಸ್ವರೂಪಳೇ, ನೀನು ಯಾರು ಎಂದು ಅವಳನ್ನು ಕೇಳಿದನು.

ಸೈವಮುಕ್ತಾ ತು ಭೀಮೇನ ರಾಕ್ಷಸೀ ಕಾಮರೂಪಿಣೀ ।
ಭೀಮಸೇನಂ ಮಹಾತ್ಮಾನಮಿದಮಾಹ ಶುಚಿಸ್ಮಿತಾ ॥೯೦॥

ಭೀಮಸೇನನಿಂದ ಹೀಗೆ ಹೇಳಲ್ಪಟ್ಟ ಕಾಮರೂಪಿಣಿಯಾದ ಆ ರಾಕ್ಷಸಿಯು ಮಹಾತ್ಮನಾದ ಭೀಮಸೇನನನ್ನು ಕುರಿತು ಮುಗುಳ್ನಗುತ್ತಾ ಹೀಗೆ ಮಾತನಾಡಿದಳು.

ಪಲಾಯಧ್ವಮಿತಃ ಕ್ಷಿಪ್ರಂ ಮಮ ಭ್ರಾತಾ ಸುವೀರ್ಯವಾನ್ ।
ಆಗಮಿಷ್ಯತಿ ಸಂಹರ್ತುಂ ತಸ್ಮಾದ್ ಗಚ್ಛತ ಮಾಚಿರಮ್ ॥೯೧॥

ಇಲ್ಲಿಂದ ಎಲ್ಲರೂ ಬೇಗ ಓಡಿಹೋಗಿರಿ. ಮಹಾಬಲಶಾಲಿಯಾದ ನನ್ನ ಅಣ್ಣನು ನಿಮ್ಮನ್ನು ಸಂಹರಿಸಲು ಇಲ್ಲಿಗೆ ಬರುತ್ತಿದ್ದಾನೆ. ಆದ್ದರಿಂದ ತಡಮಾಡದೆ ಹೊರಟು ಹೋಗಿ.

ಅಥ ತಾಂ ಪ್ರತ್ಯುವಾಚೈಷ ಸಾಮ್ನಾ ಪರಮವಲ್ಗುನಾ ।
ನೋದ್ವಿಜಾಮಿ ತವ ಭ್ರಾತುರ್ನೈತಾಂಶ್ಚ ಪ್ರತಿಬೋಧಯೇ ।
ಆಗತಂ ಪ್ರತಿಪತ್ಸ್ಯಾಮಿ ಭ್ರಾತರಂ ರಾಕ್ಷಸಂ ತವ ॥೯೨॥

ಆಗ ಭೀಮಸೇನನು ಮಧುರವಾದ ಸ್ವರದಿಂದ ಅವಳನ್ನು ಕುರಿತು ಮಾತನಾಡಿದನು. ನಾನು ನಿನ್ನ ಅಣ್ಣನಿಗೆ ಹೆದರುವುದೂ ಇಲ್ಲ. ಮತ್ತು ನಿದ್ರಿಸುತ್ತಿರುವ ಇವರನ್ನು ಎಬ್ಬಿಸುವುದೂ ಇಲ್ಲ. ಇಲ್ಲಿಗೆ ಬರುವ ರಾಕ್ಷಸನಾದ ನಿನ್ನ ಅಣ್ಣನನ್ನು ಎದುರಿಸುತ್ತೇನೆ.

ತಯೋಃ ಶ್ರುತ್ವಾ ತು ಕಥಿತಮಾಗಚ್ಛದ್ ರಾಕ್ಷಸಾಧಮಃ ।
ಭೀಮರೂಪೋ ಮಹಾನಾದಾನ್ ವಿನದನ್ ಭೀಮದರ್ಶನಃ ॥೯೩॥

ಅವರಿಬ್ಬರ ಸಂವಾದವನ್ನು ದೂರದಿಂದ ಕೇಳಿದ ರಾಕ್ಷಸಾಧಮನಾದ ಆ ಹಿಡಿಂಬನು ಭಯಂಕರ ರೂಪವನ್ನು ಧರಿಸಿ ಮಹಾನಾದಗಳನ್ನು ಮಾಡಿ ಕಿರುಚುತ್ತಾ ಉಗ್ರವಾಗಿ ಕಾಣಿಸುತ್ತಾ ಅಲ್ಲಿಗೆ ಬಂದನು.

ಕೇನ ಸಾರ್ಧಂ ಕಥಯಸಿ ಆನಯೈನಂ ಮಮಾಂತಿಕಮ್ ।
ಹಿಡಿಂಬೇ ಭಕ್ಷಯಿಷ್ಯಾವೋ ನ ಚಿರಂ ಕರ್ತುಮರ್ಹಸಿ ॥೯೪॥

ಹಿಡಿಂಬಿಯೇ, ಯಾರ ಜೊತೆಯಲ್ಲಿ ಮಾತನಾಡುತ್ತಿದ್ದೀಯೆ? ಅವನನ್ನು ನನ್ನ ಬಳಿಗೆ ಕರೆದು ತಾ. ಇಬ್ಬರೂ ಸೇರಿ ಅವನನ್ನು ಹರಿದು ತಿನ್ನೋಣ. ತಡಮಾಡಬೇಡ.

ದ್ರೌಪದೀ

ಸಾ ಕೃಪಾಸಂಗೃಹೀತೇನ ಹೃದಯೇನ ಮನಸ್ವಿನೀ ।
ನೈನಮೈಚ್ಛತ್ ತದಾऽऽಖ್ಯಾತುಮನುಕ್ರೋಶಾದನಿಂದಿತಾ ॥೯೫॥

ಆಗ ನಿರ್ದುಷ್ಟಸ್ವಭಾವದವಳಾದ ಧೈರ್ಯಶಾಲಿನಿಯಾದ ಆ ಹಿಡಿಂಬೆಯು ಕೃಪೆಯಿಂದ ಕೂಡಿದ ಮನಸ್ಸುಳ್ಳವಳಾಗಿ ತನ್ನ ಪ್ರೀತಿಯ ಕಾರಣದಿಂದಾಗಿ ಭೀಮಸೇನನನ್ನು ಹಿಡಿಂಬನಿಗೆ ತಿಳಿಸಲು ಇಷ್ಟಪಡಲಿಲ್ಲ.

ಸ ನಾದಾನ್ ವಿನದನ್ ಘೋರಾನ್ ರಾಕ್ಷಸಃ ಪುರುಷಾದಕಃ ।
ಅಭ್ಯದ್ರವತ ವೇಗೇನ ಭೀಮಸೇನಂ ತದಾ ಕಿಲ ॥೯೬॥

ಆ ನರಭಕ್ಷಕನಾದ ಘೋರರಾಕ್ಷಸನಾದರೋ ಭಯಂಕರನಾದವನ್ನು ಮಾಡುತ್ತಾ ವೇಗವಾಗಿ ಭೀಮಸೇನನಿದ್ದ ಕಡೆಗೆ ಓಡಿಬಂದನು.

ಅವಳು ಪಾಂಡುಪುತ್ರನಾದ ಭೀಮಸೇನನು ಸಹೋದರರ ಜೊತೆಯಲ್ಲಿ ಮಲಗಿರುವುದನ್ನು ನೋಡಿ ಕಾಮಪೀಡಿತಳಾಗಿ ಭೀಮಸೇನನನ್ನು ಕಾಮಿಸಿದಳು.

ಭೀಮಸ್ಯ ಪಾದೌ ಕೃತ್ವಾ ತು ಸ್ವಉತ್ಸಂಗೇ ತತೋ ಬಲಾತ್ ।
ಪರ್ಯಷ್ವಜತ ಸಂಹೃಷ್ಟಾ ಕಲ್ಯಾಣೀ ಮೃದುಪಾಣಿನಾ ॥೮೮॥

ಮಲಗಿ ನಿದ್ರಿಸುತ್ತಿದ್ದ ಭೀಮಸೇನನ ಪಾದಗಳನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಶುಭಸ್ವರೂಪಳಾದ ಅವಳು ಸಂತೋಷದಿಂದ ತನ್ನ ಮೃದುವಾದ ಹಸ್ತಗಳಿಂದ ಅವನನ್ನು ಬಲವಾಗಿ ಆಲಿಂಗಿಸಿದಳು.

ತಾಮಬುದ್ಧ್ಯದಮೇಯಾತ್ಮಾ ಬಲವಾನ್ ಸತ್ಯವಿಕ್ರಮಃ ।
ಪರ್ಯಪೃಚ್ಛಚ್ಚ ತಾಂ ಭೀಮಃ ಕಸ್ಯ ತ್ವಮಸಿ ಶೋಭನೇ ॥೮೯॥

ಸತ್ಯವಿಕ್ರಮನೂ ಬಲಶಾಲಿಯೂ ಅಪರಿಮಿತ ಮಹಿಮೆಯುಳ್ಳವನೂ ಆದ ಭೀಮಸೇನನು ಎದ್ದು ಅವಳನ್ನು ನೋಡಿ ಶೋಭನಸ್ವರೂಪಳೇ, ನೀನು ಯಾರು ಎಂದು ಅವಳನ್ನು ಕೇಳಿದನು.

ಸೈವಮುಕ್ತಾ ತು ಭೀಮೇನ ರಾಕ್ಷಸೀ ಕಾಮರೂಪಿಣೀ ।
ಭೀಮಸೇನಂ ಮಹಾತ್ಮಾನಮಿದಮಾಹ ಶುಚಿಸ್ಮಿತಾ ॥೯೦॥

ಭೀಮಸೇನನಿಂದ ಹೀಗೆ ಹೇಳಲ್ಪಟ್ಟ ಕಾಮರೂಪಿಣಿಯಾದ ಆ ರಾಕ್ಷಸಿಯು ಮಹಾತ್ಮನಾದ ಭೀಮಸೇನನನ್ನು ಕುರಿತು ಮುಗುಳ್ನಗುತ್ತಾ ಹೀಗೆ ಮಾತನಾಡಿದಳು.

ಪಲಾಯಧ್ವಮಿತಃ ಕ್ಷಿಪ್ರಂ ಮಮ ಭ್ರಾತಾ ಸುವೀರ್ಯವಾನ್ ।
ಆಗಮಿಷ್ಯತಿ ಸಂಹರ್ತುಂ ತಸ್ಮಾದ್ ಗಚ್ಛತ ಮಾಚಿರಮ್ ॥೯೧॥

ಇಲ್ಲಿಂದ ಎಲ್ಲರೂ ಬೇಗ ಓಡಿಹೋಗಿರಿ. ಮಹಾಬಲಶಾಲಿಯಾದ ನನ್ನ ಅಣ್ಣನು ನಿಮ್ಮನ್ನು ಸಂಹರಿಸಲು ಇಲ್ಲಿಗೆ ಬರುತ್ತಿದ್ದಾನೆ. ಆದ್ದರಿಂದ ತಡಮಾಡದೆ ಹೊರಟು ಹೋಗಿ.

ಅಥ ತಾಂ ಪ್ರತ್ಯುವಾಚೈಷ ಸಾಮ್ನಾ ಪರಮವಲ್ಗುನಾ ।
ನೋದ್ವಿಜಾಮಿ ತವ ಭ್ರಾತುರ್ನೈತಾಂಶ್ಚ ಪ್ರತಿಬೋಧಯೇ ।
ಆಗತಂ ಪ್ರತಿಪತ್ಸ್ಯಾಮಿ ಭ್ರಾತರಂ ರಾಕ್ಷಸಂ ತವ ॥೯೨॥

ಆಗ ಭೀಮಸೇನನು ಮಧುರವಾದ ಸ್ವರದಿಂದ ಅವಳನ್ನು ಕುರಿತು ಮಾತನಾಡಿದನು. ನಾನು ನಿನ್ನ ಅಣ್ಣನಿಗೆ ಹೆದರುವುದೂ ಇಲ್ಲ. ಮತ್ತು ನಿದ್ರಿಸುತ್ತಿರುವ ಇವರನ್ನು ಎಬ್ಬಿಸುವುದೂ ಇಲ್ಲ. ಇಲ್ಲಿಗೆ ಬರುವ ರಾಕ್ಷಸನಾದ ನಿನ್ನ ಅಣ್ಣನನ್ನು ಎದುರಿಸುತ್ತೇನೆ.

ತಯೋಃ ಶ್ರುತ್ವಾ ತು ಕಥಿತಮಾಗಚ್ಛದ್ ರಾಕ್ಷಸಾಧಮಃ ।
ಭೀಮರೂಪೋ ಮಹಾನಾದಾನ್ ವಿನದನ್ ಭೀಮದರ್ಶನಃ ॥೯೩॥

ಅವರಿಬ್ಬರ ಸಂವಾದವನ್ನು ದೂರದಿಂದ ಕೇಳಿದ ರಾಕ್ಷಸಾಧಮನಾದ ಆ ಹಿಡಿಂಬನು ಭಯಂಕರ ರೂಪವನ್ನು ಧರಿಸಿ ಮಹಾನಾದಗಳನ್ನು ಮಾಡಿ ಕಿರುಚುತ್ತಾ ಉಗ್ರವಾಗಿ ಕಾಣಿಸುತ್ತಾ ಅಲ್ಲಿಗೆ ಬಂದನು.

ಕೇನ ಸಾರ್ಧಂ ಕಥಯಸಿ ಆನಯೈನಂ ಮಮಾಂತಿಕಮ್ ।
ಹಿಡಿಂಬೇ ಭಕ್ಷಯಿಷ್ಯಾವೋ ನ ಚಿರಂ ಕರ್ತುಮರ್ಹಸಿ ॥೯೪॥

ಹಿಡಿಂಬಿಯೇ, ಯಾರ ಜೊತೆಯಲ್ಲಿ ಮಾತನಾಡುತ್ತಿದ್ದೀಯೆ? ಅವನನ್ನು ನನ್ನ ಬಳಿಗೆ ಕರೆದು ತಾ. ಇಬ್ಬರೂ ಸೇರಿ ಅವನನ್ನು ಹರಿದು ತಿನ್ನೋಣ. ತಡಮಾಡಬೇಡ.

ದ್ರೌಪದೀ

ಸಾ ಕೃಪಾಸಂಗೃಹೀತೇನ ಹೃದಯೇನ ಮನಸ್ವಿನೀ ।
ನೈನಮೈಚ್ಛತ್ ತದಾऽऽಖ್ಯಾತುಮನುಕ್ರೋಶಾದನಿಂದಿತಾ ॥೯೫॥

ಆಗ ನಿರ್ದುಷ್ಟಸ್ವಭಾವದವಳಾದ ಧೈರ್ಯಶಾಲಿನಿಯಾದ ಆ ಹಿಡಿಂಬೆಯು ಕೃಪೆಯಿಂದ ಕೂಡಿದ ಮನಸ್ಸುಳ್ಳವಳಾಗಿ ತನ್ನ ಪ್ರೀತಿಯ ಕಾರಣದಿಂದಾಗಿ ಭೀಮಸೇನನನ್ನು ಹಿಡಿಂಬನಿಗೆ ತಿಳಿಸಲು ಇಷ್ಟಪಡಲಿಲ್ಲ.

ಸ ನಾದಾನ್ ವಿನದನ್ ಘೋರಾನ್ ರಾಕ್ಷಸಃ ಪುರುಷಾದಕಃ ।
ಅಭ್ಯದ್ರವತ ವೇಗೇನ ಭೀಮಸೇನಂ ತದಾ ಕಿಲ ॥೯೬॥

ಆ ನರಭಕ್ಷಕನಾದ ಘೋರರಾಕ್ಷಸನಾದರೋ ಭಯಂಕರನಾದವನ್ನು ಮಾಡುತ್ತಾ ವೇಗವಾಗಿ ಭೀಮಸೇನನಿದ್ದ ಕಡೆಗೆ ಓಡಿಬಂದನು.

ತಮಭಿದ್ರುತ್ಯ ವೇಗೇನ ಸಂಕ್ರುದ್ಧೋ ಮಹತಾ ಬಲೀ ।
ಅಗೃಹ್ಣಾತ್ ಪಾಣಿನಾ ಪಾಣಿಂ ಭೀಮಸೇನಸ್ಯ ರಾಕ್ಷಸಃ ॥೯೭॥

ಹೀಗೆ ಬಹಳ ವೇಗವಾಗಿ ಓಡಿಬಂದು ಕೋಪಗೊಂಡವನೂ, ಬಲಿಷ್ಠನೂ ಆದ ಆ ರಾಕ್ಷಸನು ಭೀಮಸೇನನ ಕೈಯನ್ನು ತನ್ನ ಕೈಯಿಂದ ಹಿಡಿದು ಕೊಂಡನು.

ಇಂದ್ರಾಶನಿಸಮಸ್ಪರ್ಶಂ ವಜ್ರಸಂಹನನಂ ದೃಢಮ್ ।
ಸಂಹತ್ಯ ಭೀಮಸೇನಸ್ಯ ವ್ಯಾಕ್ಷಿಪತ್ ಸಹಸಾ ಕರಮ್ ॥೯೮॥

ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ ವಜ್ರದಂತೆ ದೃಢವಾದ ಭೀಮಸೇನನ ಕೈಗೆ ಹೊಡೆದು ತಕ್ಷಣ ದೂರ ತಳ್ಳಿದನು.

ಗೃಹೀತಃ ಪಾಣಿನಾ ಪಾಣಿಂ ಭೀಮಸೇನೋಽಥ ರಕ್ಷಸಾ ।
ನಾಮೃಷ್ಯತ ಮಹಾಬಾಹುಸ್ತತ್ಯಾಕ್ರುದ್ಧ್ಯದ್ ವೃಕೋದರಃ ॥೯೯॥

ರಾಕ್ಷಸನಿಂದ ಕೈಯಲ್ಲಿ ಹಿಡಿಯಲ್ಪಟ್ಟ ಮಹಾಬಾಹುವಾದ ವೃಕೋದರನಾದ ಭೀಮಸೇನನು ಅದನ್ನು ಸಹಿಸಲಿಲ್ಲ.

ಅಥಾಸೀತ್ ತುಮುಲಂ ಯುದ್ಧಂ ಭೀಮಸೇನಹಿಡಿಂಬಯೋಃ ।
ಸರ್ವಾಸ್ತ್ರವಿದುಷೋಘೋರಂ ವೃತ್ರವಾಸವಯೋರಿವ ॥೧೦೦॥

ಅನಂತರ ಸರ್ವಾಸ್ತ್ರಗಳನ್ನು ತಿಳಿದ ಭೀಮಸೇನ ಮತ್ತು ಹಿಡಿಂಬರಿಗೆ ಇಂದ್ರ ವೃತ್ರರ ನಡುವೆ ನಡೆದಂತೆ ಘೋರವಾದ ಯುದ್ಧವು ನಡೆಯಿತು.

ಹತ್ವಾ ಹಿಡಿಂಬಂ ಭೀಮೋಽಥ ಪ್ರಸ್ಥಿತೋ ಭ್ರಾತೃಭಿಃ ಸಹ ।
ಹಿಡಿಂಬಾಮಗ್ರತಃ ಕೃತ್ವಾ ಯಸ್ಯಾಂ ಜಾತೋ ಘಟೋತ್ಕಚಃ ॥೧೦೧॥

ಆಗ ಭೀಮನು ಹಿಡಿಂಬನನ್ನು ಕೊಂದು ಹಿಡಿಂಬೆಯನ್ನು ಮುಂದೆಮಾಡಿಕೊಂಡು ತನ್ನ ಸಹೋದರರ ಜೊತೆಯಲ್ಲಿ ಮುಂದಕ್ಕೆ ಹೊರಟನು. ಹಿಡಿಂಬೆಯಲ್ಲಿ ಘಟೋತ್ಕಚನು ಜನಿಸಿದನು.

ತತಸ್ತೇ ಭ್ರಾತರಃ ಸರ್ವೇ ಸಹ ಮಾತ್ರಾ ಯಶಸ್ವಿನಃ ।
ಏಕಚಕ್ರಾಮಭಿಗತಾಃ ಸಂವೃತಾ ಬ್ರಾಹ್ಮಣವ್ರಜೈಃ ॥೧೦೨॥

ಅನಂತರ ಆ ಎಲ್ಲಾ ಯಶಸ್ವಿಗಳಾದ ಸಹೋದರರು ತಾಯಿಯ ಜೊತೆಯಲ್ಲಿ ಬ್ರಾಹ್ಮಣಸಮೂಹಗಳಿಂದ ಸುತ್ತುವರಿಯಲ್ಪಟ್ಟವರಾಗಿ ಏಕಚಕ್ರನಗರಕ್ಕೆ ಬಂದರು.

ಪ್ರಸ್ಥಾನೇ ವ್ಯಾಸ ಏಷಾಂ ಚ ಮಂತ್ರೀ ಪ್ರಿಯಹಿತೋಽಭವತ್ ।
ತತೋಽಗಚ್ಛನ್ನೇಕಚಕ್ರಾಂ ಪಾಂಡವಾಃ ಸಂಶಿತವ್ರತಾಃ ॥೧೦೩॥

ಅಲ್ಲಿಂದ ಹೊರಡುವ ಸಮಯದಲ್ಲಿ ವ್ಯಾಸರು ಬಂದು ಅವರಿಗೆ ಪ್ರಿಯಹಿತವಾದ ಮಂತ್ರಾಲೋಚನೆಯನ್ನು ನೀಡಿದರು. ಅನಂತರ ಒಳ್ಳೆಯ ವ್ರತಧಾರಿಗಳಾದ ಪಾಂಡವರು ಏಕಚಕ್ರನಗರವನ್ನು ತಲುಪಿದರು.

ತತ್ರಾಪ್ಯಾಸಾದಯಾಮಾಸುರ್ಬಕಂ ನಾಮ ಮಹಾಬಲಮ್ ।
ಪುರುಷಾದಂ ಪ್ರತಿಭಯಂ ಹಿಡಿಂಬೇನೈವ ಸಮ್ಮಿತಮ್ ॥೧೦೪॥

ಅಲ್ಲಿಯೂ ಸಹ ಮಹಾಬಲಿಷ್ಠನಾದ ನರಭಕ್ಷಕನಾದ ಭಯಂಕರನಾದ ಹಿಡಿಂಬನಿಗೆ ಸಮನಾದ ಬಕನನ್ನು ಸಮೀಪಿಸಿದರು.

ತಂ ಚಾಪಿ ವಿನಿಹತ್ಯೋಗ್ರಂ ಭೀಮಃ ಪ್ರಹರತಾಂ ವರಃ ।
ಸಹಿತೋ ಭ್ರಾತೃಭಿಃ ಸರ್ವೈರ್ದ್ರುಪದಸ್ಯ ಪುರಂ ಯಯೌ ॥೧೦೫॥

ಪ್ರಹಾರಮಾಡುವವರಲ್ಲಿ ಶ್ರೇಷ್ಠನಾದ ಭೀಮಸೇನನು ಆ ಉಗ್ರನಾದ ಅಸುರನನ್ನು ಕೊಂದು ಎಲ್ಲಾ ತಮ್ಮಂದಿರ ಜೊತೆಯಲ್ಲಿ ದ್ರುಪದಪಟ್ಟಣಕ್ಕೆ ಹೋದನು.

ಲಬ್ಧಾಽಹಮಪಿ ತತ್ರೈವ ವಸತಾ ಸವ್ಯಸಾಚಿನಾ ।
ಯಥಾ ತ್ವಯಾ ಜಿತಾ ಕೃಷ್ಣ ರುಗ್ಮಿಣೀ ಭೀಷ್ಮಕಾತ್ಮಜಾ ॥೧೦೬॥

ದ್ರುಪದನ ಪಟ್ಟಣದಲ್ಲಿ ವಾಸಿಸುವಾಗ ಸವ್ಯಸಾಚಿಯಾದ ಅರ್ಜುನನು ನೀನು ಭೀಷ್ಮ ಪುತ್ರಿಯಾದ ರುಗ್ಮಿಣಿಯನ್ನು ಜಯಿಸಿದಂತೆ ನನ್ನನ್ನು ಪಡೆದನು.

ಏವಂ ಸುಯುದ್ಧೇ ಪಾರ್ಥೇನ ಜಿತಾऽಹಂ ಮಧುಸೂದನ ।
ಸ್ವಯಂವರೇ ಮಹತ್ ಕರ್ಮ ಕೃತ್ವಾ ಹ್ಯಸುಕರಂ ಪರೈಃ ॥೧೦೭॥

ಎಲೈ ಮಧುಸೂದನನೇ, ಹೀಗೆ ಸ್ವಯಂವರದಲ್ಲಿ ಇನ್ನೊಬ್ಬರಿಂದ ಸಾಧ್ಯವಿಲ್ಲದ ಮಹಾಕಾರ್ಯವನ್ನು ಮಾಡಿ ಯುದ್ಧದಲ್ಲಿ ಅರ್ಜುನನು ನನ್ನನ್ನು ಗೆದ್ದನು.

ಏವಂ ಕ್ಲೇಶೈಃ ಸುಬಹುಭಿಃ ಕ್ಲಿಶ್ಯಮಾನಾ ಸುದುಃಖಿತಾ ।
ನಿವಸಾಮ್ಯಾರ್ಯಯಾ ಹೀನಾ ಕೃಷ್ಣ ಧೌಮ್ಯಪುರಸ್ಸರಾ ॥೧೦೮॥

ಎಲೈ ಕೃಷ್ಣನೇ! ಅನೇಕ ಕ್ಲೇಶಗಳಿಗೆ ಒಳಗಾಗಿ ಅತ್ಯಂತ ದುಃಖಿತಳಾದ ನಾನು ಕುಂತಿಯ ಸಾನ್ನಿಧ್ಯವೂ ಇಲ್ಲದೆ ಧೌಮ್ಯರನ್ನು ಮುಂದೆಮಾಡಿಕೊಂಡು ಹೀನಳಾಗಿ ವಾಸಿಸುತ್ತಿದ್ದೇನೆ.

ತ ಇಮೇ ಸಿಂಹವಿಕ್ರಾಂತಾ ವೀರ್ಯೇಣಾಭ್ಯಧಿಕಾಃ ಪರೈಃ ।
ವಿಹೀನೈಃ ಪರಿಕೃಷ್ಯಂತೀಂ ಸಮುಪೈಕ್ಷಂತ ಮಾಂ ಕಥಮ್ ॥೧೦೯॥

ಈ ನನ್ನ ಪತಿಗಳೆಲ್ಲರೂ ಸಿಂಹಪರಾಕ್ರಮಿಗಳು ಮತ್ತು ಮಹಾ ಸಾಮರ್ಥ್ಯಶಾಲಿಗಳು. ತುಚ್ಛರಾದ ಶತ್ರುಗಳು ನನ್ನನ್ನು ಎಳೆದಾಡುವಾಗ ಇವರು ಹೇಗೆ ಉಪೇಕ್ಷೆಮಾಡಿದರು?

ಏತಾದೃಶಾನಿ ದುಃಖಾನಿ ಸಹಂತೇ ದುರ್ಬಲೀಯಸಾಮ್ ।
ದೀರ್ಘಕಾಲಂ ಪ್ರದೀಪ್ತಾನಿ ಪಾಪಾನಾಂ ಕ್ಷುದ್ರಕರ್ಮಣಾಮ್ ॥೧೧೦॥

ದುರ್ಬಲರಾದ ನೀಚಕರ್ಮವನ್ನು ಮಾಡುವ ಪಾಪಿಷ್ಠರಾದ ದುರ್ಯೋಧನಾದಿಗಳಿಂದ ಉಂಟಾದ ಇಂತಹ ಘೋರವಾದ ದುಃಖವನ್ನು ಇವರು ಬಹುಕಾಲದಿಂದಲೂ ಸಹಿಸುತ್ತಿದ್ದಾರೆ.

ಕುಲೇ ಮಹತಿ ಜಾತಾऽಸ್ಮಿ ದಿವ್ಯೇನ ವಿಧಿನಾ ಕಿಲ ।
ಪಾಂಡವಾನಾಂ ಪ್ರಿಯಾ ಭಾರ್ಯಾ ಸ್ನುಷಾ ಪಾಂಡೋರ್ಮಹಾತ್ಮನಃ ॥

ನಾನು ಶ್ರೇಷ್ಠವಾದ ಕುಲದಲ್ಲಿ ದಿವ್ಯವಾದ ರೀತಿಯಿಂದ ಹುಟ್ಟಿದವಳಷ್ಟೇ? ನಾನು ಪಾಂಡವರ ಪ್ರೀತಿಯ ಭಾರ್ಯೆ ಮತ್ತು ಮಹಾತ್ಮನಾದ ಪಾಂಡುವಿನ ಸೊಸೆ.

ಕಚಗ್ರಹಮನುಪ್ರಾಪ್ತಾ ಕಾ ನು ಜೀವೇತ ಮಾದೃಶೀ ।
ಪಂಚಾನಾಮಿಂದ್ರಕಲ್ಪಾನಾಂ ಪ್ರೇಕ್ಷತಾಂ ಮಧುಸೂದನ ॥೧೧೨॥

ಎಲೈ ಮಧುಸೂದನನೇ! ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಐವರು ಪತಿಗಳ ಕಣ್ಣೆದುರಿಗೇ ಮುಂದಲೆಯನ್ನು ಹಿಡಿಸಿಕೊಂಡ ನನ್ನಂತಹ ಯಾವಳು ಬದುಕಿರುತ್ತಾಳೆ?

ಇತ್ಯುಕ್ತ್ವಾ ಪ್ರಾರುದತ್ ಕೃಷ್ಣಾ ಮುಖಂ ಪ್ರಚ್ಛಾದ್ಯ ಪಾಣಿನಾ ।
ಪದ್ಮಕೋಶಪ್ರಕಾಶೇನ ಮೃದುನಾ ಮೃದುಭಾಷಿಣೀ ॥೧೧೩॥

ಹೀಗೆ ಹೇಳಿ ಮೃದುಭಾಷಿಣಿಯಾದ ದ್ರೌಪದಿಯು ಮೃದುವಾದ ಪದ್ಮ ಮೊಗ್ಗಿನಂತಿರುವ ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅತ್ತಳು.

ಸ್ತನಾವಪತಿತಾ ಪೀನೌ ಸುಜಾತೌ ಶುಭಲಕ್ಷಣೌ ।
ಅಭ್ಯವರ್ಷತ ಪಾಂಚಾಲೀ ದುಃಖಜೈರಶ್ರುಬಿಂದುಭಿಃ ॥೧೧೪॥

ಕೆಳಗೆ ಬೀಳದಿದ್ದ ಪೀನವಾದ ಚೆನ್ನಾಗಿ ಬೆಳೆದ ಶುಭಲಕ್ಷಣವುಳ್ಳ ತನ್ನ ಸ್ತನಗಳನ್ನು ದುಃಖದಿಂದ ಉಂಟಾದ ಕಣ್ಣೀರಿನ ಬಿಂದುಗಳಿಂದ ಪಾಂಚಾಲಿಯು ತೋಯಿಸಿದಳು.

ಚಕ್ಷುಷೀ ಪರಿಮಾರ್ಜಂತೀ ನಿಃಶ್ವಸಂತೀ ಪುನಃ ಪುನಃ ।
ಬಾಷ್ಪಪೂರ್ಣೇನ ಕಂಠೇನ ಕ್ರುದ್ಧಾ ವಚನಮಬ್ರವೀತ್ ॥೧೧೫॥

ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಪುನಃಪುನಃ ನಿಟ್ಟುಸಿರನ್ನು ಬಿಡುತ್ತಾ ಬಾಷ್ಪಗದ್ಗದವಾದ ಕಂಠದಿಂದ ಕೋಪದಿಂದ ಈ ಮಾತನ್ನು ಆಡಿದಳು.

ನೈವ ಮೇ ಪತಯಃ ಸಂತಿ ನ ಪುತ್ರಾ ಮಧುಸೂದನ ।
ನ ಭ್ರಾತರೋ ನ ಚ ಪಿತಾ ನೈವ ತ್ವಂ ನ ಚ ಬಾಂಧವಾಃ ॥೧೧೬॥

ಮಧುಸೂದನನೇ! ನನಗೆ ಪತಿಗಳಿಲ್ಲ. ಪುತ್ರರಿಲ್ಲ. ಸಹೋದರರಿಲ್ಲ. ತಂದೆಯಿಲ್ಲ. ಬಾಂಧವರಿಲ್ಲ. ನೀನೂ ಸಹ ಇಲ್ಲ.

ಯೇ ಮಾಂ ವಿಪ್ರಕೃತಾಂ ಕ್ಷುದ್ರೈರುಪೇಕ್ಷಂತೇ ವಿಶೋಕವತ್ ।
ನಹಿ ಮೇ ಶಾಮ್ಯತೇ ದುಃಖಂ ಕರ್ಣೋ ಯತ್ ಪ್ರಾಹಸತ್ ತದಾ ॥

ಯಾವ ಇವರೆಲ್ಲರೂ ಕ್ಷುದ್ರರಿಂದ ಅವಮಾನಕ್ಕೆ ಒಳಗಾದ ನನ್ನನ್ನು ಶೋಕರಹಿರಂತೆ ಉಪೇಕ್ಷೆಮಾಡಿದರೋ ಮತ್ತು ಆ ಸಮಯದಲ್ಲಿ ಕರ್ಣನು ನನ್ನನ್ನು ಹೇಗೆ ಅಪಹಾಸಮಾಡಿದನೋ ಅದರಿಂದ ಉಂಟಾದ ನನ್ನ ದುಃಖವು ಶಮನವನ್ನು ಹೊಂದುವುದಿಲ್ಲ.

ವೈಶಂಪಾಯನಃ

ಅಥೈನಾಮಬ್ರವೀತ್ ಕೃಷ್ಣಸ್ತಸ್ಮಿನ್ ವೀರಸಮಾಗಮೇ ।
ರೋದಿಷ್ಯಂತಿ ಸ್ತ್ರಿಯೋ ಹ್ಯೇವಂ ಯೇಷಾಂ ಕ್ರುದ್ಧಾಽಸಿ ಭಾಮಿನಿ ॥

ಅನಂತರ ಆ ವೀರಸಮುದಾಯದಲ್ಲಿ ಕೃಷ್ಣನು ಅವಳನ್ನು ಕುರಿತು ಮಾತನಾಡಿದನು. ಭಾಮಿನಿಯೇ, ನೀನು ಯಾರಮೇಲೆ ಕೋಪಗೊಂಡಿದ್ದೀಯೋ ಅವರ ಪತ್ನಿಯರೂ ಸಹ ಹೀಗೆಯೇ ಮುಂದೆ ರೋದಿಸುವರು.

ಬೀಭತ್ಸುಶರಸಂಛನ್ನಾನ್ ಶೋಣಿತೌಘಪರಿಪ್ಲುತಾನ್ ।
ದ್ರಕ್ಷ್ಯಸಿ ಹ್ಯನವದ್ಯಾಂಗಿ ದುರ್ಯೋಧನಮುಖಾನ್ ರಿಪೂನ್ ॥೧೧೯॥

ಅರ್ಜುನನ ಬಾಣಗಳಿಂದ ಕತ್ತರಿಸಲ್ಪಟ್ಟ ರಕ್ತದ ಮಡುವಿನಲ್ಲಿ ಮುಳುಗಿದ ದುರ್ಯೋಧನ ಮೊದಲಾದ ಶತ್ರುಗಳನ್ನು ಎಲೌ ದೋಷರಹಿತ ಅವಯವವನ್ನುಳ್ಳವಳೇ, ನೀನು ಖಂಡಿತವಾಗಿ ನೋಡುವಿ.

ನಿಹತಾನ್ ಜೀವಿತಂ ತ್ಯಕ್ತ್ವಾ ಶಯಾನಾನ್ ವಸುಧಾತಳೇ ।
ಸತ್ಯಂ ತೇ ಪ್ರತಿಜಾನಾಮಿ ರಾಜ್ಞೋ ರಾಜ್ಞೀ ಭವಿಷ್ಯಸಿ ॥೧೨೦॥

ಎಲೌ ದ್ರೌಪದಿಯೇ! ತಮ್ಮ ಜೀವವನ್ನು ತೊರೆದು ಭೂತಳದಲ್ಲಿ ಮಲಗಿದ ಅವರೆಲ್ಲರನ್ನೂ ನೀನು ನೋಡುವಿ. ಸತ್ಯವಾಗಿ ನಿನಗೆ ನಾನು ಪ್ರತಿಜ್ಞೆಯನ್ನು ಮಾಡಿ ಹೇಳುತ್ತಿರುವೆ. ನೀನು ರಾಜನ ರಾಣಿಯಾಗುವಿ.

ಪತೇದ್ ದ್ಯೌರ್ಹಿಮವಾನ್ ಶೀರ್ಯೇತ್ ಪೃಥಿವೀ ಶಕಲೀಭವೇತ್ ।
ಶುಷ್ಯೇತ್ ತೋಯನಿಧಿಃ ಕೃಷ್ಣೇ ನ ಮೇ ಮಿಥ್ಯಾ ವಚೋ ಭವೇತ್ ॥

ಅಂತರಿಕ್ಷಲೋಕವು ಕೆಳಗೆ ಬಿದ್ದೀತು ಹಿಮಾಲಯವು ಬಿರಿದೀತು. ಭೂಮಿಯು ಪುಡಿಪುಡಿಯಾದೀತು. ಸಮುದ್ರವು ಬತ್ತಿಹೋದೀತು. ಆದರೆ ನನ್ನ ವಚನವು ಎಂದೂ ಸುಳ್ಳಾಗುವುದಿಲ್ಲ.

ತಚ್ಛ್ರುತ್ವಾ ದ್ರೌಪದೀ ವಾಕ್ಯಪ್ರತಿವಾಕ್ಯಮಥಾಚ್ಯುತಾ ।
ಸಾಚೀಕೃತಮವೈಕ್ಷತ್ ಸಾ ಪಾಂಚಾಲೀ ಮಧ್ಯಮಂ ಪತಿಮ್ ॥೧೨೨॥

ತನ್ನ ವಾಕ್ಯಕ್ಕೆ ಪ್ರತ್ಯುತ್ತರವನ್ನು ನೀಡಿದ ಆ ಕೃಷ್ಣನ ವಾಕ್ಯಗಳನ್ನು ಕೇಳಿ ದ್ರೌಪದಿಯು ಧೈರ್ಯದಿಂದ ಚ್ಯುತಳಾಗದೆ ಮುಖವನ್ನು ತಿರುಗಿಸಿ ತನ್ನ ಮಧ್ಯಮ ಪತಿಯಾದ ಭೀಮಸೇನನನ್ನು ನೋಡಿದಳು.

## ಧೃಷ್ಟದ್ಯುಮ್ನಃ

ಅಹಂ ದ್ರೋಣಂ ಹನಿಷ್ಯಾಮಿ ಶಿಖಂಡೀ ಚ ಪಿತಾಮಹಮ್ ।
ದುರ್ಯೋಧನಂ ಭೀಮಸೇನಃ ಕರ್ಣಂ ಹಂತಾ ಧನಂಜಯಃ ॥೧೨೩॥

ನಾನು ದ್ರೋಣರನ್ನು ಕೊಲ್ಲುವೆನು. ಶಿಖಂಡಿಯು ಭೀಷ್ಮರನ್ನು ಕೊಲ್ಲುತ್ತಾನೆ. ದುರ್ಯೋಧನನನ್ನು ಭೀಮಸೇನನು ಕೊಲ್ಲುವನು. ಕರ್ಣನನ್ನು ಅರ್ಜುನನು ಕೊಲ್ಲುವನು.

ಅಬಭಾಷೇ ತಥಾ ಕೃಷ್ಣಾಮರ್ಜುನಃ ಪ್ರಹಸನ್ನಿವ ।
ಮಾ ರೋದೀಃ ಶುಭತಾಮ್ರಾಕ್ಷಿ ಯಥಾऽऽಹ ವರವರ್ಣಿನಿ ।
ಕೃಷ್ಣೋऽಯಂ ತತ್ ತಥಾ ದೇವಿ ನಾನ್ಯಥಾ ಚಾರುಲೋಚನೇ ॥೧೨೪॥

ಹಾಗೆಯೇ ಅರ್ಜುನನು ದ್ರೌಪದಿಯನ್ನು ನೋಡಿ ನಗುತ್ತಾ ಮಾತನಾಡಿದನು. ಸುಂದರವಾದ ನೇತ್ರವುಳ್ಳವಳೇ, ಅಳಬೇಡ. ಕೃಷ್ಣನು ಹೇಗೆ ಹೇಳಿದನೋ ಹಾಗೆಯೇ ಎಲ್ಲವೂ ನಡೆಯುತ್ತದೆ. ದೇವಿಯೇ, ಅದು ಎಂದೂ ವ್ಯತ್ಯಾಸವಾಗುವುದಿಲ್ಲ.

ರಾಮಕೃಷ್ಣೌ ವ್ಯಪಾಶ್ರಿತ್ಯ ಅಜೇಯಾಃ ಸ್ಮ ಶುಚಿಸ್ಮಿತೇ ।
ಅಪಿ ವೃತ್ರಹಣಾ ಯುದ್ಧೇ ಕಿಂ ಪುನರ್ಧೃತರಾಷ್ಟ್ರಜೈಃ ॥೧೨೫॥

ಎಲೌ ಶುಚಿಸ್ಮಿತೆಯೇ! ನಾವು ಕೃಷ್ಣಬಲರಾಮರನ್ನು ಆಶ್ರಯಿಸಿ ಯುದ್ಧದಲ್ಲಿ ವೃತ್ರಹಂತಕನಾದ ಇಂದ್ರನಿಗೂ ಅಜೇಯರಾಗಿದ್ದೇವೆ. ಇನ್ನು ಧೃತರಾಷ್ಟ್ರರ ಪುತ್ರರ ಮಾತೇನು?

ಇತ್ಯುಕ್ತ್ವಾ ಽಭಿಮುಖಾ ವೀರಾ ವಾಸುದೇವಮುಪಸ್ಥಿತಾಃ ।
ತೇಷಾಂ ಮಧ್ಯೇ ಮಹಾಬಾಹುಃ ಕೇಶವೋ ವಾಕ್ಯಮಬ್ರವೀತ್ ॥೧೨೬॥

ಹೀಗೆ ಹೇಳಿ ಆ ವೀರರೆಲ್ಲರೂ ಕೃಷ್ಣನ ಕಡೆಗೆ ತಿರುಗಿದರು. ಮಹಾಬಾಹುವಾದ ಕೇಶವನು ಅವರ ಮಧ್ಯದಲ್ಲಿ ಕುಳಿತು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾದಶೋಽಧ್ಯಾಯಃ ॥
॥ ಕೈರಾತಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★★★★★

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಸಾಲ್ವಂ ಶ್ರುತ್ವಾ ಸಮಾಯಾಂತಂ ರೌಕ್ಮಿಣೇಯಾದಯೋ ಮಯಾ ।
ಪ್ರಸ್ಥಾಪಿತಾ ಹಿ ಭವತಾಂ ಸಕಾಶೇ ತೇ ಯಯುಃ ಪುರೀಂ ।
ತದಾ ಸಾಲ್ವೋಽಪಿ ಸೌಭೇನ ದ್ವಾರಕಾಮರ್ದಯದ್ಭೃಶಂ ॥೪೨॥

ನಾನು ನಿಮ್ಮಲ್ಲಿದ್ದಾಗ ಸಾಲ್ವ ಬರುತ್ತಿರುವ ವಾರ್ತೆಯನ್ನು ಕೇಳಿ ಪ್ರದ್ಯುಮ್ನ ಮೊದಲಾದವರನ್ನೇ ದ್ವಾರಕೆಗೆ ಕಳಿಸಿದೆ. ಅವರು ಹೋದರು. ಸಾಲ್ವ ಸೌಭ ವಿಮಾನದ ಬಲದಿಂದ ದ್ವಾರಕೆಯನ್ನು ಬಹಳ ಪೀಡಿಸಿದ.

ಪ್ರದ್ಯುಮ್ನ ಆಶು ನಿರಗಾದಥ ಸರ್ವಸೈನ್ಯೈ
ರನ್ವೇಶ್ಚ ಯಾದವಗಣೈಃ ಸಹಿತೋಽನುಚೈಶ್ಚ ।

ಸಾಲ್ವೋಽವಗಮ್ಯ ತನಯಂ ಮಮ ತದ್ವಿಮಾನಾತ್
ಪಾಪೋಽವರುಹ್ಯ ರಥಮಾರುಹದತ್ರ ಯೋದ್ಧುಂ ॥೪೩॥

ಒಡನೆ ಪ್ರದ್ಯುಮ್ನ ಎಲ್ಲಸೈನ್ಯಗಳಿಂದಲೂ ಬೇರೆ ಯಾದವ ಗುಂಪುಗಳಿಂದಲೂ ತಮ್ಮಂದಿರಿಂದಲೂ ಕೂಡಿಕೊಂಡು ಸಾಲ್ವನೊಡನೆ ಯುದ್ಧಕ್ಕೆ ಹೊರಟ. ಆ ಪಾಪಿ ಪ್ರದ್ಯುಮ್ನನನ್ನು ನನ್ನ ಮಗನೆಂದು ತಿಳಿದು ಯುದ್ಧ ಮಾಡುವುದಕ್ಕೆ ವಿಮಾನದಿಂದ ಕೆಳಗಿಳಿದು ರಥವನ್ನೇರಿದ.

ಕೃತ್ವಾ ಸುಯುದ್ಧಮಮುನಾ ಮಮ ಪುತ್ರಕೋಽಸಾ-
ವಸ್ತ್ರೈ ತಸ್ಯ ವಿನಿವಾರ್ಯ ಮಹಾಸ್ತ್ರಜಾಲೈಃ ।
ದತ್ತಂ ಮಯಾ ಶರಮಾಮೋಘಮಥಾದದೇ ತಂ
ಹಂತುಂ ನೃಪಂ ಕೃತಮತಿಸ್ತ್ವಶೃಣೋದ್ ವಚಃ ಖೇ ॥೪೪॥

ನನ್ನ ಮಗ ಪ್ರದ್ಯುಮ್ನ ಸಾಲ್ವನೊಡನೆ ಚೆನ್ನಾಗಿ ಯುದ್ಧ ಮಾಡಿ ಅವನ ಅಸ್ತ್ರಗಳನ್ನು ಮಹಾ ಅಸ್ತ್ರಸಮೂಹಗಳಿಂದ ತಡೆದು ಅವನನ್ನು ಕೊಲ್ಲಲು ನಿಶ್ಚಯ ಮಾಡಿ ನಾನು ಕೊಟ್ಟಿದ್ದ ಒಂದು ಅಮೋಘವಾದ ಬಾಣವನ್ನು ಎತ್ತಿಕೊಂಡ. ಅಷ್ಟರಲ್ಲಿ ಆಕಾಶದಲ್ಲಿ ಅಶರೀರವಾಣಿಯನ್ನು ಕೇಳಿದ.

ನಾರಾಯಣೇನ ಹಿ ಪುರಾ ಮನಸಾಭಿಕ್ಲೃಪ್ತಂ
ಕೃಷ್ಣಾವತಾರಮುಪಗಮ್ಯ ನಿಹನ್ಮಿ ಸಾಲ್ವಂ ।
ಇತ್ಯೇವ ತೇನ ಹರಿಣಾಪಿ ಸ ಭಾರ್ಗವೇಣ
ವಿದ್ರಾವಿತೋ ನ ನಿಹತಃ ಸ್ವಮನೋಽನುಸಾರಾತ್ ॥೪೫॥

'ನಾರಾಯಣ ಹಿಂದೆಯೇ, ಮನಸ್ಸಿನಲ್ಲಿ ಸಂಕಲ್ಪಿಸಿದ್ದಾನೆ. ಕೃಷ್ಣಾವತಾರ ಮಾಡಿಯೇ ಸಾಲ್ವನನ್ನು ಕೊಲ್ಲುವೆನು ಎಂದು. ಅದರಿಂದಲೇ ಪರಶುರಾಮ ರೂಪನಾದ ಆ ಹರಿಯೂ ಕೂಡ ತನ್ನ ಈ ಸಂಕಲ್ಪಾನುಸಾರವಾಗಿ ಸಾಲ್ವನನ್ನು ಓಡಿಸಿದನೇ ಹೊರತು ಕೊಲ್ಲಲಿಲ್ಲ.

ವಧ್ಯಸ್ತ್ವಯಾ ನ ಹಿ ತತೋಽಯಮಯಂ ಚ ಬಾಣ-
ಶ್ಚಕ್ರಾಯುಧಸ್ಯ ದಯಿತೋ ನಿತರಾಮಮೋಘಾಃ ।

ಮಾ ಮುಂಚ ತೇನ ತಮಿಮಂ ವಿನಿವರ್ತಯೇಽಹಂ
ಸಾಲ್ವಂ ಹೃದಿ ಸ್ಥಿತ ಇತೀರಿತಮೀರಣೇನ ॥೪೬॥

ಅದರಿಂದ ಈ ಸಾಲ್ವನಿನ್ನಿಂದ ಹತನಾಗುವವನಲ್ಲ. ಈ ಬಾಣ ಶ್ರೀಹರಿಗೆ ಬಹಳ ಪ್ರಿಯವಾದುದು. ಅಮೋಘವಾದುದು. ಅದನ್ನು ಪ್ರಯೋಗಿಸಬೇಡ. ನಾನೇ ಸಾಲ್ವನನ್ನು ಅವನ ಹೃದಯದಲ್ಲಿನಿಂತು ಪ್ರೇರಿಸಿ ಹಿಂತಿರುವಂತೆ ಮಾಡುತ್ತೇನೆ ಎಂದು ನುಡಿದ, ವಾಯು.

ಶ್ರುತ್ವಾವಚಃ ಸ ಪವನಸ್ಯ ಶರಂ ತ್ವಮೋಘಂ
ಸಂಜಹ್ರ ಆಶು ಸ ಚ ಸಾಲ್ವಪತಿಃ ಸ್ವಸೌಭಂ ।
ಆರುಹ್ಯ ಬಾಲಕಲಹೇನ ಕಿಮತ್ರ ಕಾರ್ಯಂ
ಕೃಷ್ಣೇನ ಸಂಗರ ಇತಿ ಪ್ರಯಯೌ ಸ್ವದೇಶಂ ॥೪೭॥

ವಾಯು ವಚನವನ್ನು ಕೇಳಿ ಪ್ರದ್ಯುಮ್ನ ಆ ಅಮೋಘ ಬಾಣವನ್ನು ಹಿಂತೆಗೆದುಕೊಂಡ. ಸಾಲ್ವ 'ಬಾಲಕನೊಡನೆ ಯುದ್ಧಮಾಡಿ ಏನು ಪ್ರಯೋಜನ? ಕೃಷ್ಣನೊಡನೆಯೆ ಯುದ್ಧ' ಎಂದು ಹೇಳುತ್ತ ವಿಮಾನವನ್ನು ಹತ್ತಿ ತನ್ನ ದೇಶಕ್ಕೆ ಹೊರಟ.

ಪ್ರದ್ಯುಮ್ನಸಾಂಬಗದಸಾರಣಚಾರುದೇಷ್ಣಾಃ
ಸೇನಾಂ ನಿಹತ್ಯ ಸಹ ಮಂತ್ರಿಗಣೈಸ್ತದೀಯಾಂ ।
ಆಹ್ಲಾದಿನಃ ಸ್ವಪುರಮಾಯಯುರಪ್ಯಹಂ ಚ
ತತ್ಸಾಗಮಂ ಸಪದಿ ತೈಃ ಶ್ರುತವಾನಶೇಷಂ ॥೪೮॥

ಯಾವ ಬಾಣ ಕೈಯಲ್ಲಿದ್ದರೆ ನನ್ನ ಪ್ರಭಾವದಿಂದ ವಿಜಯ ನಿಶ್ಚಯವಾಗಿ ದೊರೆಯುವುದೋ ಆ ಬಾಣವನ್ನು ಪ್ರದ್ಯುಮ್ನ ಹಿಡಿದಿದ್ದುದರಿಂದ ಶತ್ರು ಹೊರಟು ಹೋದ. ಈ ಸಮಾಚಾರವನ್ನು ಕೇಳಿ ಮತ್ತು ಶತ್ರು ನಮ್ಮ ಪಟ್ಟಣವನ್ನು ನಾಶಮಾಡಿರುವುದನ್ನೂ ಕಂಡು ಒಡನೆಯೇ ಅವನ ಬೆನ್ನುಹತ್ತಿದೆ.

ತಂ ಸಾಗರೋಪರಿಗಸೌಭಗತಂ ನಿಶಾಮ್ಯ
ಮುಕ್ತೇ ಚ ತೇನ ಮಯಿ ಶಸ್ತ್ರಮಹಾಸ್ತ್ರವರ್ಷೇ ।
ತಂ ಸನ್ನಿವಾರ್ಯ ಚ ಮಯಾ ಶರಪೂಗವಿದ್ಯೋ
ಮಾಯಾಂ ಯಯೋಜ ಮಯಿ ಪಾಪತಮಃ ಸ ಸಾಲ್ವಃ ॥೪೯॥

ಸಾಲ್ವಸಮುದ್ರದ ಮೇಲೆ ಸೌಭವಿಮಾನದಲ್ಲಿ ಸಂಚರಿಸುತ್ತಿದ್ದುದನ್ನು ನಾನು ಕಂಡೆ. ನನ್ನ ಮೇಲೆ ಅವನು ಪ್ರಯೋಗಿಸಿದ ಶಸ್ತ್ರಮಹಾಸ್ತ್ರಗಳ ಮಳೆಯನ್ನೂ ತಡೆದೆ. ಬಾಣ ಸಮೂಹಗಳಿಂದ ಅವನನ್ನು ಹೊಡೆದೆ. ಆಗ ಆ ಮಹಾಪಾಪಿ ಸಾಲ್ವ ನನ್ನಲ್ಲಿ ಮಾಯೆಗಳನ್ನು ಪ್ರಯೋಗಿಸಿದ.

ತಾಃ ಕ್ರೀಡಯಾ ಕ್ಷಣಮಹಂ ಸಮರೇ ನಿಶಾಮ್ಯ
ಜ್ಞಾನಾಸ್ತ್ರತಃ ಪ್ರತಿವಿಧಾಯ ಬಹೂಂಶ್ಚ ದೈತ್ಯಾನ್ ।
ಹತ್ವಾಶು ತಂ ಚ ಗಿರಿವರ್ಷಿಣಮಾಶು ಸೌಭಂ
ವಾರ್ಧಾ ನ್ಯಪಾತಯಮರೀಂದ್ರ ವಿಭಿನ್ನಬಂಧಂ ॥೫೧॥

ಆ ಮಾಯೆಗಳನ್ನು ಯುದ್ಧದಲ್ಲಿ ನಾನು ಕ್ಷಣ ಕಾಲ ಲೀಲೆಯಿಂದ ನೋಡಿ ವಿಜ್ಞಾನಾಸ್ತ್ರದಿಂದ ನಿವಾರಿಸಿ ಬಹಳ ದಾನವರನ್ನು ಸಂಹರಿಸಿದೆ. ಸಾಲ್ವ ಬೆಟ್ಟಗಳನ್ನೇ ಮಳೆಗರೆದ. ನಾನು ಬೇಗನೆ ಚಕ್ರದಿಂದ ಅವನ ಸೌಭವನ್ನು ಕತ್ತರಿಸಿ ಸಮುದ್ರದಲ್ಲಿ ಬೀಳಿಸಿದೆ. ಅವನನ್ನು ಸಮುದ್ರದಲ್ಲಿ ಹಾಕಿದೆ.

ತಂ ಸ್ಯಂದನೇ ಸ್ಥಿತಮಥೋ ವಿಭುಜಂ ವಿಧಾಯ
ಬಾಣೇನ ತದ್ರಥವರಂ ಗದಯಾ ವಿಭಿದ್ಯ ।
ಚಕ್ರೇಣ ತಸ್ಯ ಚ ಶಿರೋ ವಿನಿಕೃತ್ತ್ಯಧಾತ್ಯ
ಶರ್ವಾದಿಭಿಃ ಪ್ರತಿನುತಃ ಸ್ವಾಪುರೀಮಗಾಂ ಚ ॥೫೨॥

ಸಾಲ್ವ ರಥವೇರಿ ಬಂದ. ನಾನು ಅವನ ಬಾಹುಗಳನ್ನು ಬಾಣಗಳಿಂದ ಕತ್ತರಿಸಿ, ಉತ್ತಮವಾದ ರಥವನ್ನು ಗದೆಯಿಂದ ಮುರಿದು, ಶಿರವನ್ನು ಚಕ್ರದಿಂದ ತರಿದು ಬ್ರಹ್ಮರುದ್ರಾದಿಗಳಿಂದ ಹೊಗಳಿಸಿಕೊಳ್ಳುತ್ತ ನನ್ನ ಪಟ್ಟಣಕ್ಕೆ ಹಿಂತಿರುಗಿದೆ.

ತಸ್ಮಾದಿದಂ ವ್ಯಸನಮಾಸ ಹಿ ವಿಪ್ರಕರ್ಷಾತ್
ಮೇ ಕಾರ್ಯತಸ್ತ್ವಿತಿ ನಿಗದ್ಯ ಪುನಶ್ಚ ಪಾರ್ಥಾನ್ ।
ಕೃಷ್ಣಾಂ ಚ ಸಾಂತ್ವಯಿತುಮತ್ರ ದಿನಾನ್ಯುವಾಸ
ಸತ್ಯಾ ಚ ಸೋಮಕಸುತಾಮನುಸಾಂತ್ವಯಂತೀ ॥೫೩॥

ನನ್ನ ಈ ಸಾಲ್ವವಧ ಕಾರ್ಯದ ದೆಸೆಯಿಂದ ನಾನು ದೂರವಿರಬೇಕಾಯಿತು. ಅದರಿಂದ ಈ ಕಷ್ಟ ಬಂದೊದಗಿತು - ಹೀಗೆ ಹೇಳಿ ಶ್ರೀಕೃಷ್ಣ ಪಾಂಡವರನ್ನೂ ದ್ರೌಪದಿಯನ್ನೂ ಸಂತೈಸುವುದಕ್ಕಾಗಿ ಪುನಃ ಕೆಲವು ದಿನಗಳ ಕಾಲ ಅವರೊಡನೆ ವಾಸ ಮಾಡಿದ, ಸತ್ಯಭಾಮೆಯೂ ದ್ರೌಪದಿಯನ್ನು ಸಂತೈಸಲು ಅಲ್ಲಿ ವಾಸ ಮಾಡಿದಳು.

★ ★ ★ ★

## ಹನ್ನೆರಡನೆಯ ಅಧ್ಯಾಯ

(ಸಾಲ್ವನ ಜೊತೆಯಲ್ಲಿ ಯುದ್ಧವನ್ನು ಮಾಡಲು ತಾನು ದ್ವಾರಕೆಯನ್ನು ಬಿಟ್ಟುಹೋದದ್ದು ಈ ಅನರ್ಥಕ್ಕೆ ಕಾರಣವಾಯಿತೆಂದು ಕೃಷ್ಣನಿಂದ ನಿರೂಪಣೆ.)

ಶ್ರೀಭಗವಾನ್

ನೇದಂ ಕೃಚ್ಛ್ರಮನುಪ್ರಾಪ್ತೋ ಭವಾನ್ ಸ್ಯಾದ್ ವಸುಧಾಧಿಪ ।
ಯದ್ಯಹಂ ದ್ವಾರಕಾಯಾಂ ಸ್ಯಾಂ ರಾಜನ್ ಸನ್ನಿಹಿತಃ ಪುರಾ ॥೧॥

ಎಲೈ ರಾಜನೇ! ನಾನು ದ್ವಾರಕೆಯಲ್ಲಿ ಇದ್ದಿದ್ದರೆ ನಿನಗೆ ಇಂತಹ ಅನರ್ಥವು ಪ್ರಾಪ್ತವಾಗುತ್ತಿರಲಿಲ್ಲ.

ಆಗಚ್ಛೇಯಮಹಂ ದ್ಯೂತಮನಾಹೂತೋಽಪಿ ಕೌರವೈಃ ।
ಆಂಬಿಕೇಯೇನ ದುರ್ಧರ್ಷ ರಾಜ್ಞಾ ದುರ್ಯೋಧನೇನ ಚ ।
ವಾರಯೇಯಮಹಂ ದ್ಯೂತಂ ಬಹೂನ್ ದೋಷಾನ್ ಪ್ರದರ್ಶಯನ್

ಎಲೈ ದುರ್ಧರ್ಷನೇ! ಕೌರವರಾಗಲೀ ಧೃತರಾಷ್ಟ್ರನಾಗಲೀ ಅಥವಾ ದುರ್ಯೋಧನನಾಗಲೀ ಆಹ್ವಾನಮಾಡದಿದ್ದರೂ ನಾನಾಗಿಯೇ ಬಂದು ದ್ಯೂತದಿಂದ ಉಂಟಾಗುವ ಅನೇಕ ದೋಷಗಳನ್ನು ತೋರಿಸಿ ನಾನು ದ್ಯೂತವನ್ನು ನಿಲ್ಲುಸುತ್ತಿದ್ದೆ.

ಭೀಷ್ಮದ್ರೋಣೌ ಸಮಾಸಾದ್ಯ ಕೃಪಂ ಬಾಹ್ಲೀಕಮೇವ ಚ ।
ವೈಚಿತ್ರವೀರ್ಯಂ ರಾಜಾನಮಲಂ ದ್ಯೂತೇನ ಕೌರವ ॥೩॥

ಪುತ್ರಾಣಾಂ ತವ ರಾಜೇಂದ್ರ ತ್ವನ್ನಿಮಿತ್ತಮಿತಿ ಪ್ರಭೋ ।
ತತ್ರ ವಕ್ಷ್ಯಾಮ್ಯಹಂ ದೋಷಾನ್ ಯೈರ್ಭವಾನವರೋಪಿತಃ ॥೪॥

ಭೀಷ್ಮದ್ರೋಣರ ಸಮಾಗಮವನ್ನು ಮಾಡಿ ಕೃಪರನ್ನು ಮತ್ತು ಬಾಹ್ಲೀಕರನ್ನು ಸಂಧಿಸಿ ಧೃತರಾಷ್ಟ್ರರಾಜನ ಬಳಿಗೆ ಹೋಗಿ ಎಲೈ ಕೌರವನೇ! ರಾಜೇಂದ್ರನೇ! ನಿನ್ನ ನಿಮಿತ್ತದಿಂದ ನಿನ್ನ ಪುತ್ರರಿಗೆ ಉಂಟಾದ ದ್ಯೂತವನ್ನು ನಿಲ್ಲಿಸು ಎಂದು ಹೇಳುತ್ತಿದ್ದೆ. ಯಾವ ದೋಷಗಳಿಂದ ನೀನು ರಾಜ್ಯ ಭ್ರಷ್ಟನಾದೆಯೋ ಅಂತಹ ದೋಷಗಳನ್ನು ನಾನು ಹೇಳುತ್ತಿದ್ದೆ.

ವೀರಸೇನಸುತೋ ಯೈಶ್ಚ ರಾಜ್ಯಾತ್ ಪ್ರಭ್ರಂಶಿತಃ ಪುರಾ ।
ಅಲಕ್ಷಿತವಿನಾಶಶ್ಚ ದೇವನೇನ ವಿಶಾಂಪತೇ ॥೫॥

ಸ್ವಾತಂತ್ರ್ಯಂ ದ್ಯೂತಸಂಗಸ್ಯ ವರ್ಣಯೇಯಂ ಯಥಾತಥಮ್ ॥೬॥

ಎಲೈ ರಾಜನೇ! ತನ್ನ ನಾಶವನ್ನೇ ನಿರೀಕ್ಷಣೆ ಮಾಡದಿದ್ದ ವೀರಸೇನನ ಸುತನಾದ ನಳನು ಹಿಂದೆ ಯಾವ ದೋಷಗಳಿಂದ ದ್ಯೂತವನ್ನು ಆಡಿ ರಾಜ್ಯಭ್ರಷ್ಟನಾದನೋ ಅದನ್ನೂ ಮತ್ತು ದ್ಯೂತಪ್ರಸಂಗವು ಎಲ್ಲರನ್ನೂ ತನ್ನ ವಶವನ್ನಾಗಿ ಮಾಡಿಕೊಳ್ಳುತ್ತದೆ ಎಂದೂ ಯಥಾರ್ಥವಾಗಿ ವರ್ಣಿಸುತ್ತಿದ್ದೆ.

ಸ್ತ್ರಿಯೋಽಕ್ಷಾ ಮೃಗಯಾ ಪಾನಮೇತತ್ ಕಾಮಸಮುತ್ಥಿತಮ್ ।
ವ್ಯಸನಂ ಚತುಷ್ಟಯಂ ಪ್ರೋಕ್ತಂ ಯೈ ರಾಜಾ ಭ್ರಶ್ಯತೇ ಶ್ರಿಯಃ ॥೭॥

ಸ್ತ್ರೀಯರು, ಅಕ್ಷಕ್ರೀಡೆ, ಬೇಟೆ ಮತ್ತು ಮದ್ಯಪಾನ ಇವೆಲ್ಲವೂ ಕಾಮದಿಂದ ಉಂಟಾಗುವಂತಹವು. ಈ ನಾಲ್ಕನ್ನು ರಾಜನ ಚಟಗಳೆಂದು ಹೇಳುತ್ತಾರೆ. ಅವುಗಳಿಂದ ರಾಜನು ತನ್ನ ಸಂಪತ್ತನ್ನು ಕಳೆದುಕೊಳ್ಳುತ್ತಾನೆ.

ತತ್ರ ಸರ್ವತ್ರ ವಕ್ತವ್ಯಂ ಮನ್ಯಂತೇ ಶಾಸ್ತ್ರಕೋವಿದಾಃ ।
ಏಕಾಹ್ನಾ ದ್ರವ್ಯನಾಶೋಽತ್ರ ಧ್ರುವಂ ವ್ಯಸನಮೇವ ಚ ।
ವಿಶೇಷತಶ್ಚ ವಕ್ತವ್ಯಂ ದ್ಯೂತೇ ಪಶ್ಯಂತಿ ತದ್ವಿದಃ ॥೮॥

ಈ ನಾಲ್ಕರಲ್ಲಿಯೂ ಶಾಸ್ತ್ರಕೋವಿದರು ಅನೇಕ ದೋಷಗಳನ್ನು ಹೇಳುತ್ತಾರೆ. ಅದರಲ್ಲಿಯೂ ದ್ಯೂತದಲ್ಲಿ ವಿಶೇಷವಾಗಿ ಒಂದೇ ದಿನದಲ್ಲಿ ಸಮಸ್ತದ್ರವ್ಯನಾಶವನ್ನು ಮತ್ತು ಶಾಶ್ವತವಾದ ದುಃಖವನ್ನು ಜ್ಞಾನಿಗಳು ದೋಷವೆಂದು ಪರಿಗಣಿಸುತ್ತಾರೆ.

ಅಭುಕ್ತನಾಶಶ್ಚಾರ್ಥಾನಾಂ ವಾಕ್ಪಾರುಷ್ಯಂ ಚ ಕೇವಲಮ್ ।
ಅವಿಶ್ವಾಸ್ಯಮನರ್ಥಂ ಚ ಪ್ರಸಂಗೇ ಕಟುಕೋದಯಃ ।
ದ್ಯೂತೇ ಬ್ರೂಯಾಂ ಮಹಾಬಾಹೋ ಸಮಾಸಾದ್ಯಾಂಬಿಕಾಸುತಮ್ ॥

ಎಲೈ ಮಹಾಬಾಹುವೇ! ತಾನು ಭೋಗಿಸದಿರುವ ಎಲ್ಲಾ ದ್ರವ್ಯಗಳ ನಾಶ, ವ್ಯರ್ಥವಾದ ಉಗ್ರವಾದ ಮಾತುಗಳು, ಪರಸ್ಪರ ಅವಿಶ್ವಾಸ, ಅನರ್ಥ, ವೈರದ ಉದ್ಭವ, ಇವೆಲ್ಲವೂ ದ್ಯೂತ ಪ್ರಸಂಗದಲ್ಲಿ ಉದ್ಭವವಾಗುತ್ತವೆ ಎಂದು ನಾನು ಅಂಬಿಕಾಸುತನಾದ ಧೃತರಾಷ್ಟ್ರನಿಗೆ ಹೇಳುತ್ತಿದ್ದೆ.

ಏವಮುಕ್ತೋ ಯದಿ ಮಯಾ ಗೃಹ್ಣೀಯಾದ್ ವಚನಂ ಮಮ ।
ಅನಾಮಯಂ ಸ್ಯಾದ್ ಧರ್ಮಜ್ಞ ಕುರೂಣಾಂ ಕುರುನಂದನ ॥೧೦॥

ಎಲೈ ಧರ್ಮಜ್ಞನಾದ ಕುರುನಂದನನೇ! ಹೀಗೆ ಹೇಳಿದ ನನ್ನ ಮಾತನ್ನು ಧೃತರಾಷ್ಟ್ರನು ಏನನ್ನಾದರೂ ಕೇಳಿದರೆ ಎಲ್ಲಾ ಕುರುಗಳಿಗೆ ಕ್ಷೇಮವುಂಟಾಗುತ್ತದೆ.

ನ ಚೇತ್ತನ್ಮಮ ರಾಜೇಂದ್ರ ಗೃಹ್ಣೀಯಾತ್‌ಮಧುರಂ ವಚಃ ।
ಪಥ್ಯಂ ಚ ಭರತಶ್ರೇಷ್ಠ ನಿಗೃಹ್ಣೀಯಾಂ ಬಲೇನ ತಮ್ ॥೧೧॥

ಎಲೈ ರಾಜೇಂದ್ರನೇ! ಎಲೈ ಭರತಶ್ರೇಷ್ಠನೇ! ನನ್ನ ಮಧುರವಾದ ಪಥ್ಯವಾದ ಈ ಮಾತುಗಳನ್ನು ಧೃತರಾಷ್ಟ್ರನು ಕೇಳದಿದ್ದರೆ ನನ್ನ ಬಲದಿಂದ ಅವನನ್ನು ನಿಗ್ರಹಿಸುತ್ತಿದ್ದೆ.

ಅಥೈನಾನಾಪನೀಯೈವಂ ದುರ್ಹೃದಾನಾಮದುರ್ಹೃದಮ್ ।
ಸಭಾಸದಶ್ಚ ತಾನ್ ಸರ್ವಾನ್ ಭೇದಯೇಯಂ ದುರೋದರಾತ್ ॥೧೨॥

ಅಥವಾ ದುಷ್ಟ ಹೃದಯವುಳ್ಳ ಇವರೆಲ್ಲರನ್ನೂ ಸಭೆಯಿಂದ ಹೊರಗೆ ಕಳುಹಿಸಿ ಶಾಂತನಾದ ಧೃತರಾಷ್ಟ್ರನನ್ನು ಮತ್ತು ಶಾಂತರಾದ ಸಭಾಸದರನ್ನು ಉದ್ದೇಶಿಸಿ ಈ ದ್ಯೂತಪ್ರಸಂಗದಿಂದ ಅವರೆಲ್ಲರನ್ನೂ ಬೇರ್ಪಡಿಸುತ್ತಿದ್ದೆ.

ಅಸಾನ್ನಿಧ್ಯಂ ತು ಕೌಂತೇಯ ಮಮಾನರ್ಥೇಷ್ಟಭೂತ್ ತದಾ ।
ಯೇನೇದಂ ವ್ಯಸನಂ ಪ್ರಾಪ್ತಾ ಭವಂತೋ ದ್ಯೂತಕಾರಿತಮ್ ॥೧೩॥

ಎಲೈ ಕೌಂತೇಯನೇ! ನಾನು ದ್ವಾರಕಾಪಟ್ಟಣದಲ್ಲಿ ಇಲ್ಲದಿದ್ದುದು ದ್ಯೂತದಿಂದ ನೀವು ಅನುಭವಿಸುತ್ತಿರುವ ಈ ದುಃಖಕ್ಕೆ ಕಾರಣವಾಯಿತು.

ಸೋಽಹಮೇತ್ಯ ಕುರುಶ್ರೇಷ್ಠ ದ್ವಾರಕಾಂ ಪಾಂಡುನಂದನ ।
ಅಶ್ರೌಷಂ ತ್ವಾ ವ್ಯಸನಿನಂ ಯುಯುಧಾನಾದ್ ಯಥಾತಥಮ್ ॥೧೪॥

ಎಲೈ ಕುರುಶ್ರೇಷ್ಠನೇ! ಪಾಂಡುನಂದನನೇ! ನಾನು ದ್ವಾರಕೆಗೆ ಹಿಂದಿರುಗಿ ಯುಯುಧಾನನಿಂದ ನಿಮಗೆ ಉಂಟಾದ ವ್ಯಸನವನ್ನೆಲ್ಲಾ ಯಥಾರ್ಥವಾಗಿ ಕೇಳಿದೆ.

ಶ್ರುತ್ವೈವ ಚಾಹಂ ರಾಜೇಂದ್ರ ಪರಮೋದ್ವಿಗ್ನಮಾನಸಃ ।
ತೂರ್ಣಮಭ್ಯಾಗತೋಽಸ್ಮಿ ತ್ವಾಂ ದ್ರಷ್ಟುಕಾಮೋ ಮಹೀಪತೇ ॥೧೫॥

ಎಲೈ ಮಹೀಪತಿಯೇ, ಎಲೈ ರಾಜೇಂದ್ರನೇ!ಆ ವಾರ್ತೆಯನ್ನು ಕೇಳಿದ ತಕ್ಷಣ ನಾನು ಬಹಳ ಉದ್ವಿಗ್ನವಾದ ಮನಸ್ಸುಳ್ಳವನಾಗಿ ಶೀಘ್ರವಾಗಿ ನಿನ್ನನ್ನು ನೋಡಲು ಇಲ್ಲಿಗೆ ಬಂದೆ.

ಅಹೋ ಕೃಚ್ಛ್ರಮನುಪ್ರಾಪ್ತಾಃ ಸರ್ವೇ ಸ್ಮ ಪುರುಷರ್ಷಭ ।
ಯೇ ವಯಂ ತ್ವಾಂ ವ್ಯಸನಿನಂ ಪಶ್ಯಾಮ ಸಹ ಸೋದರೈಃ ॥೧೬॥

ಎಲೈ ಪುರುಷ ಶ್ರೇಷ್ಠನೇ! ನೀವೆಲ್ಲರೂ ಬಹಳ ಕಷ್ಟಕ್ಕೆ ಸಿಲುಕಿದ್ದೀರಿ. ಇಂತಹ ವ್ಯಸನಕ್ಕೆ ಸಿಲುಕಿದ ನಿನ್ನನ್ನು ನಿನ್ನ ಸಹೋದರರ ಜೊತೆಯಲ್ಲಿ ನೋಡುತ್ತಿರುವ ನಮಗೂ ಸಂಕಟವು ಪ್ರಾಪ್ತವಾಗಿದೆ. ಇದು ವಿಷಾದಕರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾದಶೋಽಧ್ಯಾಯಃ ॥
॥ ಕೈರಾತಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★★★★★

## ಹದಿಮೂರನೆಯ ಅಧ್ಯಾಯ

(ಧರ್ಮರಾಜನ ಪ್ರಶ್ನೆಗೆ ಉತ್ತರವಾಗಿ ಕೃಷ್ಣನಿಂದ ಸಾಲ್ವಪ್ರಸಂಗದ ವರ್ಣನೆ.)

**ಯುಧಿಷ್ಠಿರಃ**

ಅಸಾನ್ನಿಧ್ಯಂ ಕಥಂ ಕೃಷ್ಣ ತವಾಸೀದ್ ವೃಷ್ಣಿನಂದನ ।
ಕ್ವ ಚಾಸೀದ್ ವಿಪ್ರವಾಸಸ್ತೇ ಕಿಂ ಚಾಕಾರ್ಷೀಃ ಪ್ರವಾಸಿತಃ ॥೧॥

ವೃಷ್ಣಿನಂದನನಾದ ಎಲೈ ಕೃಷ್ಣನೇ! ನೀನು ದ್ವಾರಕೆಯಲ್ಲಿ ಏಕೆ ಇರಲಿಲ್ಲ? ಎಲ್ಲಿಗೆ ಪ್ರವಾಸವನ್ನು ಕೈಗೊಂಡಿದ್ದೆ? ಮತ್ತು ಆ ಪ್ರವಾಸಸಮಯದಲ್ಲಿ ಏನನ್ನು ಮಾಡಿದೆ?

**ಕೃಷ್ಣಃ**

ಸಾಲ್ವಸ್ಯ ನಗರಂ ಸೌಭಂ ಗತೋಽಹಂ ಭರತರ್ಷಭ ।
ನಿಹಂತುಂ ಭರತಶ್ರೇಷ್ಠ ಶೃಣು ಮೇ ತತ್ರ ಕಾರಣಮ್ ॥೨॥

ಎಲೈ ಭರತಶ್ರೇಷ್ಠನೇ! ನಾನು ಸಾಲ್ವನ ನಗರವಾದ ಸೌಭವನ್ನು ನಾಶಪಡಿಸಲು ಹೋಗಿದ್ದೆ. ಅದಕ್ಕೆ ಕಾರಣವನ್ನು ನನ್ನಿಂದ ಕೇಳು.

ಮಹಾತೇಜಾ ಮಹಾಬಾಹುರ್ಯಃ ಸ ರಾಜಾ ಮಹಾಯಶಾಃ ।
ದಮಘೋಷಾತ್ಮಜೋ ವೀರಃ ಶಿಶುಪಾಲೋ ಮಯಾ ಹತಃ ॥೩॥

ಮಹಾತೇಜಸ್ವಿಯೂ ಮಹಾಬಾಹುವೂ ಮಹಾಕೀರ್ತಿವಂತನೂ ವೀರನೂ ಆದ ದಮಘೋಷಪುತ್ರನಾದ ಶಿಶುಪಾಲರಾಜನು ನನ್ನಿಂದ ಹತನಾದನು.

ಯಜ್ಞೇ ತೇ ಭರತಶ್ರೇಷ್ಠ ರಾಜಸೂಯೇಽರ್ಹಣಾಂ ಪ್ರತಿ ।
ಸರೋಷಮನುಸಂಪ್ರಾಪ್ತೋ ನಾಮೃಷ್ಯತ ದುರಾತ್ಮವಾನ್ ॥೪॥

ಎಲೈ ಭರತಶ್ರೇಷ್ಠನೇ! ನಿನ್ನ ರಾಜಸೂಯಯಾಗದಲ್ಲಿ ಅಗ್ರಪೂಜೆಯ ಸಂದರ್ಭದಲ್ಲಿ ಅವನು ನನ್ನಿಂದ ಹತನಾದನು. ರೋಷದಿಂದ ಅಲ್ಲಿಗೆ ಬಂದಿದ್ದ ಆ ದುರಾತ್ಮನಾದ ಅವನು ನನಗೆ ಮಾಡಿದ ಅಗ್ರಪೂಜೆಯನ್ನು ಸಹಿಸಲಿಲ್ಲ.

ಶ್ರುತ್ವಾ ತಂ ನಿಹತಂ ಸಾಲ್ವಃ ತೀವ್ರಕೋಪಸಮನ್ವಿತಃ ।
ಉಪಾಯಾದ್ ದ್ವಾರಕಾಂ ಶೂನ್ಯಾಮಿಹಸ್ಥೇ ಮಯಿ ಭಾರತ ॥೫॥

ಎಲೈ ಭಾರತನೇ! ಶಿಶುಪಾಲನು ಹತನಾದುದನ್ನು ಕೇಳಿದ ಸಾಲ್ವನು ಬಹಳ ಕೋಪದಿಂದ ಕೂಡಿದವನಾಗಿ ನಾನು ಇಲ್ಲಿ ಇದ್ದ ಕಾರಣದಿಂದ ದ್ವಾರಕೆಯಲ್ಲಿ ಇಲ್ಲದಿದ್ದ ಸಮಯದಲ್ಲಿ ದ್ವಾರಕೆಗೆ ಬಂದನು.

ಸ ತತ್ರ ಯೋಧಿತೋ ರಾಜನ್ ಬಾಲಕೈರ್ವೃಷ್ಣಿಪುಂಗವೈಃ ।
ನಿವೃತ್ತಃ ಕಾಮಗಂ ಸೌಭಮಾರುಹ್ಯೈವ ನೃಶಂಸಕೃತ್ ।
ಚಿರಜೀವೀ ನೃಪಃ ಸೋಽಪಿ ಪ್ರಸಾದಾತ್ ಪದ್ಮಜನ್ಮನಃ ॥೬॥

ಎಲೈ ರಾಜನೇ! ವೃಷ್ಣಿಪುಂಗವರಾದ ಬಾಲಕರು ಅವನ ಜೊತೆಯಲ್ಲಿ ಯುದ್ಧಮಾಡಿದರು. ಆ ಕ್ರೂರಕರ್ಮಿಯಾದ ಅವನು ತನ್ನ ಕಾಮಗಾಮಿಯಾದ ವಿಮಾನವನ್ನು ಏರಿ ಹೊರಟು ಹೋದನು. ಬ್ರಹ್ಮದೇವರ ವರದಿಂದ ಅವನೂ ಕೂಡ ಚಿರಜೀವಿಯಾದವನು.

ತತೋ ವೃಷ್ಣಿಪ್ರವೀರಾಂಸ್ತಾನ್ ಬಾಲಾನ್ ಹತ್ವಾ ಬಹೂಂಸ್ತದಾ ।
ಪುರೋದ್ಯಾನಾನಿ ಸರ್ವಾಣಿ ಭೇದಯಾಮಾಸ ದುರ್ಮತಿಃ ॥೭॥

ಅವನು ಹೋಗುವುದಕ್ಕಿಂತ ಮೊದಲು ಅನೇಕ ವೃಷ್ಣಿವೀರರಾದ ಬಾಲಕರನ್ನು ಕೊಂದನು ಮತ್ತು ದುರ್ಮತಿಯಾದ ಅವನು ಎಲ್ಲಾ ಪುರೋದ್ಯಾನಗಳನ್ನೂ ನಾಶಪಡಿಸಿದನು.

ಉಕ್ತವಾಂಶ್ಚ ಮಹಾಬಾಹೋ ಕ್ವಾಸೌ ವೃಷ್ಣಿಕುಲಾಧಮಃ ।
ವಾಸುದೇವಃ ಸ ಮಂದಾತ್ಮಾ ವಸುದೇವಸುತೋ ಗತಃ ॥೮॥

ಎಲೈ ಮಹಾಬಾಹುವೇ! ಅವನು ವೃಷ್ಣಿಕುಲಾಧಮನಾದ ವಾಸುದೇವನು ಎಲ್ಲಿದ್ದಾನೆ? ಆ ಮಂದಾತ್ಮನಾದ ವಸುದೇವಸುತನು ಎಲ್ಲಿಗೆ ಹೋಗಿದ್ದಾನೆ? ಎಂದು ಕೇಳುತ್ತಿದ್ದನು.

ತಸ್ಯ ಯುದ್ಧಾರ್ಥಿನೋ ದರ್ಪಂ ಯುದ್ಧೇ ವಿನಯಿತಾಽಸ್ಮ್ಯಹಮ್ ।
ಆನರ್ತಾಃ ಸರ್ವಮಾಖ್ಯಾತ ತತ್ರ ಗಂತಾಸ್ಮಿ ಯತ್ರ ಸಃ ॥೯॥

ಯುದ್ಧಪ್ರಿಯನಾದ ಅವನ ದರ್ಪವನ್ನು ನಾನು ಈ ದಿನ ಯುದ್ಧದಲ್ಲಿ ವಿನಾಶಮಾಡುತ್ತೇನೆ. ದ್ವಾರಕಾವಾಸಿಗಳೇ, ನನಗೆ ಎಲ್ಲವನ್ನೂ ಹೇಳಿ. ಅವನು ಎಲ್ಲಿದ್ದಾನೋ ಅಲ್ಲಿಗೆ ಹೋಗುವೆನು.

ತಂ ಹತ್ವಾ ವಿನಿವರ್ತಿಷ್ಯೇ ಕಂಸಕೇಶಿನಿಷೂದನಮ್ ।
ಅಹತ್ವಾ ನ ವಿವರ್ತಿಷ್ಯೇ ಸತ್ಯೇನಾಯುಧಮಾಲಭೇ ॥೧೦॥

ಕಂಸ ಮತ್ತು ಕೇಶಿಗಳನ್ನು ಕೊಂದ ಅವನನ್ನು ಕೊಂದು ಹಿಂದಿರುಗುವೆನು. ಅವನನ್ನು ಕೊಲ್ಲದೆ ಹಿಂದಿರುಗುವುದಿಲ್ಲ. ನನ್ನ ಆಯುಧವನ್ನು ಮುಟ್ಟಿ ಪ್ರತಿಜ್ಞೆಯನ್ನು ಮಾಡುತ್ತೇನೆ.

ಕ್ವಾಸೌ ಕ್ವಾಸಾವಿತಿ ಪುನಸ್ತತ್ರ ತತ್ರ ಪ್ರಧಾವತಿ ।
ಮಯಾ ಕಿಲ ರಣೇ ಯೋದ್ಧುಂ ಕಾಂಕ್ಷಮಾಣಃ ಸ ಸೌಭರಾಟ್ ॥೧೧॥

ಆ ಸೌಭಪತಿಯು ನನ್ನ ಜೊತೆಯಲ್ಲಿ ಯುದ್ಧಮಾಡುವ ಆಸೆಯಿಂದ ಹೀಗೆ ಅವನೆಲ್ಲಿ ಅವನೆಲ್ಲಿ ಎಂದು ಕೇಳುತ್ತಾ ಅಲ್ಲೆಲ್ಲಾ ಓಡಾಡಿದನು.

ಅದ್ಯಾಹಂ ಪಾಪಕರ್ಮಾಣಂ ಕ್ಷುದ್ರಂ ವಿಶ್ವಾಸಘಾತಿನಮ್ ।
ಶಿಶುಪಾಲವಧಾಮರ್ಷಾದ್ ಗಮಯಿಷ್ಯೇ ಯಮಕ್ಷಯಮ್ ॥೧೨॥

ಈ ದಿನ ನಾನು ಶಿಶುಪಾಲವಧೆಯಿಂದ ಕೋಪಗೊಂಡವನಾಗಿ ಪಾಪಕರ್ಮವನ್ನು ಮಾಡುವ ವಿಶ್ವಾಸ ಘಾತುಕನಾದ ಆ ನೀಚನನ್ನು ಯಮಲೋಕಕ್ಕೆ ಕಳುಹಿಸುವೆನು.

ಮಮ ಪಾಪಸ್ವಭಾವೇನ ಭ್ರಾತಾ ಯೇನ ನಿಪಾತಿತಃ ।
ಶಿಶುಪಾಲೋ ಮಹಾವೀರ್ಯಂ ತಂ ಹನಿಷ್ಯಾಮ್ಯಹಂ ರಣೇ ॥೧೩॥

ಪಾಪಸ್ವಭಾವವುಳ್ಳ ಯಾವನಿಂದ ನನ್ನ ಸಹೋದರನಾದ ಶಿಶುಪಾಲನು ಕೊಲ್ಲಲ್ಪಟ್ಟನೋ ಅಂತಹ ಮಹಾವೀರ್ಯಶಾಲಿಯಾದ ಆ ಕೃಷ್ಣನನ್ನು ಯುದ್ಧದಲ್ಲಿ ಕೊಲ್ಲುವೆನು.

ಭ್ರಾತಾ ಬಾಲಶ್ಚ ರಾಜಾ ಚ ನ ಚ ಸಂಗ್ರಾಮಮೂರ್ದ್ಧನಿ ।
ಪ್ರಮತ್ತಶ್ಚ ಹತೋ ವೀರಃ ತಂ ವಧಿಷ್ಯೇ ಜನಾರ್ದನಮ್ ॥೧೪॥

ನನ್ನ ಸಹೋದರ, ಬಾಲಕ ಮತ್ತು ರಾಜ. ಅವನು ಪ್ರಮತ್ತನಾಗಿದ್ದನು(ಯುದ್ಧಕ್ಕೆ ಸಿದ್ಧನಾಗಿರಲಿಲ್ಲ) ಅವನು ಯುದ್ಧದಲ್ಲಿ ಕೊಲ್ಲಲ್ಪಡಲಿಲ್ಲ. ಅಂತಹ ಜನಾರ್ದನನನ್ನು ಇಂದು ಯುದ್ಧದಲ್ಲಿ ಕೊಲ್ಲುವೆನು.

ಏವಮಾದಿ ಮಹಾರಾಜ ವಿಲಪ್ಯ ದಿವಮಾಸ್ಥಿತಃ ।
ಕಾಮಗೇನ ಸ ಸೌಭೇನ ಕ್ಷಿಪ್ತ್ವಾ ಮಾಂ ಕುರುನಂದನ ॥೧೫॥

ಎಲೈ ಮಹಾರಾಜನೇ! ಈ ರೀತಿಯಾಗಿ ಬಹಳ ನನ್ನನ್ನು ಮಾತನಾಡಿ ನಿಂದಿಸಿ ತನ್ನ ಕಾಮಗಾಮಿಯಾದ ವಿಮಾನದಲ್ಲಿ ಅಂತರಿಕ್ಷಕ್ಕೆ ಹಾರಿದನು.

ತಮಶ್ರೌಷಮಹಂ ಗತ್ವಾ ಯಥಾವೃತ್ತಃ ಸ ದುರ್ಮತಿಃ ।
ಗತಃ ಕೌರವ್ಯ ದುಷ್ಟಾತ್ಮಾ ಮಾರ್ತಿಕಾವತಕೋ ನೃಪಃ ॥೧೬॥

ಎಲೈ ಕೌರವ್ಯನೇ! ನಾನು ದ್ವಾರಕೆಗೆ ಹಿಂದಿರುಗಿ ನಡೆದ ವೃತ್ತಾಂತವನ್ನೂ ಮತ್ತು ಆ ದುರ್ಮತಿಯೂ ದುಷ್ಟಾತ್ಮನೂ ಆದ ಮಾರ್ತಿಕಾವತಿಯ ದೇಶದ ರಾಜನಾದ ಸಾಲ್ವನು ಹೇಗೆ ಹಿಂದಿರುಗಿದನು ಎಂಬುದನ್ನೂ ಕೇಳಿದೆನು.

ತತೋಽಹಮಪಿ ಕೌರವ್ಯ ರೋಷವ್ಯಾಕುಲಲೋಚನಃ ।
ನಿಶ್ಚಿತ್ಯ ಮನಸಾ ರಾಜನ್ ವಧಾಯಾಸ್ಯ ಮನೋ ದಧೇ ॥೧೭॥

ಎಲೈ ಕೌರವ್ಯರಾಜನೇ! ಆಗ ನಾನೂ ಸಹ ರೋಷದಿಂದ ತುಂಬಿದ ಕಣ್ಣುಳ್ಳವನಾಗಿ ಅವನ ವಧೆಯನ್ನು ಮಾಡುವುದೆಂದು ಮನಸ್ಸಿನಲ್ಲಿ ನಿಶ್ಚಯಿಸಿದೆ.

ಆನರ್ತೇಷು ವಿಮರ್ದಂ ಚ ಕ್ಷೇಪಂ ಚಾತ್ಮನಿ ಕೌರವ ।
ಪ್ರವೃದ್ಧಮವಲೇಪಂ ಚ ತಸ್ಯ ದುಷ್ಕೃತಕರ್ಮಣಃ ॥೧೮॥

ತತಃ ಸೌಭವಧಾಯಾಹಂ ಪ್ರಸ್ಥಿತಃ ಪೃಥಿವೀಪತೇ ।
ಸ ಮಯಾ ಸಾಗರೋಪಾಂತೇ ದೃಷ್ಟ ಆಸೀತ್ ಪರೀಪ್ಸತಾ ॥೧೯॥

ಎಲೌ ಕೌರವ್ಯನೇ! ದ್ವಾರಕಾಪಟ್ಟಣದ ಧ್ವಂಸವನ್ನೂ ನನಗೆ ಮಾಡಿದ ನಿಂದನೆಯನ್ನೂ ಆ ದುಷ್ಕರ್ಮಕಾರಿಯು ಹೊಂದಿದ್ದ ದುರಹಂಕಾರವನ್ನೂ ಗಮನಿಸಿ ಎಲೈ ರಾಜನೇ!

ನಾನು ಅವನ ವಧೆಗಾಗಿ ಹೊರಟೆನು. ನಾನು ಅವನನ್ನು ಹುಡುಕುತ್ತಾ ಸಾಗರದ ಸಮೀಪದಲ್ಲಿ ಅವನನ್ನು ನೋಡಿದೆನು.

ತತಃ ಪ್ರಧ್ಮಾಪ್ಯ ಜಲಜಂ ಪಾಂಚಜನ್ಯಮಹಂ ನೃಪ ।
ಆಹೂಯ ಸಾಲ್ವಂ ಸಮರೇ ಯುದ್ಧಾಯ ಸಮವಸ್ಥಿತಃ ॥೨೦॥

ಎಲೈ ರಾಜನೇ! ಆಗ ನಾನು ಪಾಂಚಜನ್ಯಶಂಖವನ್ನು ಊದಿ ಸಾಲ್ವನನ್ನು ಆಹ್ವಾನಿಸಿ ಯುದ್ಧಕ್ಕೆ ಸಿದ್ಧವಾಗಿ ನಿಂತೆನು.

ಮುಹೂರ್ತಮಭವದ್ ಯುದ್ಧಂ ತತ್ರ ಮೇ ದಾನವೈಃ ಸಹ ।
ವಶೀಭೂತಾಶ್ಚ ಮೇ ಸರ್ವೇ ಭೂತಳೇ ಚ ನಿಪಾತಿತಾಃ ॥೨೧॥

ಒಂದು ಮುಹೂರ್ತದ ಕಾಲ ದಾನವರಿಗೂ ಮತ್ತು ನನಗೂ ಯುದ್ಧವಾಯಿತು. ಅನಂತರ ಅವರೆಲ್ಲರೂ ನನ್ನ ವಶವಾಗಿ ಭೂತಳದಲ್ಲಿ ಬಿದ್ದರು.

ಏತತ್ ಕಾರ್ಯಂ ಮಹಾಬಾಹೋ ಯೇನಾಹಂ ನಾಗತಸ್ತದಾ ।
ಶ್ರುತ್ವೈವ ಹಸ್ತಿನಪುರೇ ದ್ಯೂತಂ ಚಾವಿನಯೋತ್ಥಿತಮ್ ॥೨೨॥

ಎಲೈ ಮಹಾಬಾಹುವೇ! ದ್ಯೂತದ ಸಮಯದಲ್ಲಿ ನಾನು ಬರದೆ ಇರುವುದಕ್ಕೆ ಇದೇ ಕಾರಣ. ಈಗ ಹಸ್ತಿನಪುರದಲ್ಲಿ ಅವಿನಯದಿಂದ ಉಂಟಾದ ದ್ಯೂತವನ್ನು ಕೇಳಿ ಇಲ್ಲಿಗೆ ಬಂದಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋದಶೋಽಧ್ಯಾಯಃ ॥
॥ ಕೈರಾತಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

# ಹದಿನಾಲ್ಕನೆಯ ಅಧ್ಯಾಯ

(ವಿಸ್ತಾರವಾಗಿ ಸಾಲ್ವನ ಜೊತೆಯಲ್ಲಿ ಮಾಡಿದ ಯುದ್ಧದ ವರ್ಣನೆ. )

**ಯುಧಿಷ್ಠಿರಃ**

ವಾಸುದೇವ ಮಹಾಬಾಹೋ ವಿಸ್ತರೇಣ ಮಹಾಮತೇ ।
ಸೌಭಸ್ಯ ವಧಮಾಚಕ್ಷ್ವ ನ ಹಿ ತೃಪ್ಯಾಮಿ ಕಥ್ಯತಾಮ್ ॥೧॥

ಮಹಾಮತಿಯಾದ ಮಹಾಬಾಹುವಾದ ವಾಸುದೇವನೇ! ಸೌಭವಧೆಯ ಕಥೆಯನ್ನು ವಿಸ್ತಾರವಾಗಿ ಹೇಳು. ನೀನು ಹೇಳುವ ಕಥೆಯನ್ನು ಕೇಳುತ್ತಿದ್ದರೆ ನನಗೆ ತೃಪ್ತಿಯೇ ಉಂಟಾಗುವುದಿಲ್ಲ.

**ಶ್ರೀಭಗವಾನ್**

ಹತಂ ಶ್ರುತ್ವಾ ಮಹಾಬಾಹೋ ಮಯಾ ಶ್ರೌತಶ್ರವಂ ನೃಪಮ್ ।
ಉಪಾಯಾದ್ ಭರತಶ್ರೇಷ್ಠ ಸಾಲ್ವೋ ದ್ವಾರವತೀಂ ಪುರೀಮ್ ॥೨॥

ಮಹಾಬಾಹುವೇ! ಭರತಶ್ರೇಷ್ಠನೇ! ಶ್ರುತಶ್ರವೆಯ (ಶ್ರುತಶ್ರವಾ ಎಂಬುದು ಧಮಘೋಷನ ಪತ್ನಿಯ ಹೆಸರು) ಪುತ್ರನಾದ ಶಿಶುಪಾಲನು ಹತನಾದುದನ್ನು ಕೇಳಿ ಸಾಲ್ವನು ದ್ವಾರಾವತಿಗೆ ಮುತ್ತಿಗೆಯನ್ನು ಹಾಕಲು ಬಂದನು.

ಅರುಧತ್ ತಾಂ ಸುದುಷ್ಪಾತ್ಮಾ ಸರ್ವತಃ ಪಾಂಡುನಂದನ ।
ಸಾಲ್ವೋ ವೈಹಾಯಸಂ ಚಾಪಿ ತತ್ ಪುರಂ ವ್ಯೂಹ್ಯ ವಿಷ್ಠಿತಃ ॥೩॥

ಎಲೈ ಪಾಂಡುನಂದನನೇ! ಸುದುಷ್ಟನಾದ (ಬಹಳ ದುಷ್ಟನಾದ) ಅವನು ತನ್ನ ಅಂತರಿಕ್ಷಗಾಮಿಯಾದ ಸೌಭದಲ್ಲಿ ತನ್ನ ಸೈನ್ಯವನ್ನು ವ್ಯೂಹಮಾಡಿ ಎಲ್ಲ ಕಡೆಗಳಿಂದಲೂ ದ್ವಾರಕಾಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದನು.

ತತ್ರ ಸೋಽಥ ಮಹೀಪಾಲೋ ಯೋಧಯಾಮಾಸ ತಾಂ ಪುರೀಮ್ ।
ಅಭಿಸಾರೇಣ ಸೌಭೇನ ತತ್ರ ಯುದ್ಧಮವರ್ತತ ॥೪॥

ಅನಂತರ ಆ ರಾಜನು ದ್ವಾರಕಾಪಟ್ಟಣದ ಜೊತೆಯಲ್ಲಿ ಯುದ್ಧಮಾಡಿದನು. ಸರ್ವತ್ರ ಸಂಚರಿಸುವ ಸೌಭದ ಸಹಾಯದಿಂದ ಅವನ ಯುದ್ಧವು ಜರುಗಿತು.

ಪುರೀ ಸಮಂತಾದ್ ವಿಹಿತಾ ಸಪತಾಕಾ ಸತೋರಣಾ ।
ಸಚಕ್ರಾ ಸಹುಳಾ ಚೈವ ಸಯಂತ್ರಖನಕಾ ತಥಾ ॥೫॥

ದ್ವಾರಾಕವತಿಪಟ್ಟಣವಾದರೂ ಸಹ ಎಲ್ಲ ಕಡೆಗಳಲ್ಲಿ ಪತಾಕೆಗಳಿಂದಲೂ ತೋರಣಗಳಿಂದಲೂ ಚಕ್ರ ಮತ್ತು ಹುಳಾ ಎಂಬ ಆಯುಧಗಳಿಂದಲೂ ಯಂತ್ರಗಳು ಮತ್ತು ಅಗೆಯುವ ಸಾಧನಗಳಿಂದಲೂ ಸಜ್ಜಾಗಿದ್ದಿತು.

ಸೋಪತಲ್ಪಪ್ರತೋಲೀಕಾ ಸಾಟ್ಟಾಟ್ಟಾಲಕಗೋಪುರಾ ।
ಸಚಕ್ರಗ್ರಾಹಿಣೀ ಚೈವ ಸೋಲ್ಕಾಲಾತಾವಪೋಥಿಕಾ ॥೬॥

ಎಲೈ ಭರತಶ್ರೇಷ್ಠನೇ ಆ ನಗರವು ಉಪಕಲ್ಪ, ಪ್ರತೋಲಿಕೆ, ಅಟ್ಟ ಅಟ್ಟಾಲಕ ಗೋಪುರಗಳಿಂದ ಶೋಭಿತವಾಗಿದ್ದಿತು. ಮತ್ತು ಶತ್ರುಗಳಿಂದ ಪ್ರಯುಕ್ತವಾದ ಚಕ್ರಗಳನ್ನು ನಾಶಮಾಡುವ ಸಾಧನಗಳಿಂದಲೂ ಮತ್ತು ಶತ್ರುಗಳಿಂದ ಪ್ರಯೋಗಿಸಲ್ಪಟ್ಟ ಉಲ್ಕೆಗಳು ಮತ್ತು ಅಲಾತಗಳನ್ನು ನಾಶಮಾಡುವ ಸಾಧನಗಳಿಂದಲೂ ಸಜ್ಜಾಗಿದ್ದಿತು.

ಸೋಷ್ಟಿಕಾ ಭರತಶ್ರೇಷ್ಠ ಸಭೇರೀಪಣವಾನಕಾ ।
ಸೋಷ್ಟಿಕಾ ಸಾಂಕುಶಾ ರಾಜನ್ ಸಶತಘ್ನೀ ಸಲಾಂಗಲಾ ॥೭॥

ಎಲೈ ಭರತಶ್ರೇಷ್ಠನೇ! ಹೆಣ್ಣು ಒಂಟೆಗಳಿಂದಲೂ ಭೇರೀಪಣವಗಳಿಂದಲೂ ಅಂಕುಶ ಶತಘ್ನೀ ಮತ್ತು ಲಾಂಗಲಗಳಿಂದಲೂ ನಗರವು ಸಜ್ಜಾಗಿದ್ದಿತು.

ಸಸುತೂಣೀ ಸಾಸಿಧರಾ ಸಾಯುಧಾ ಸಪರಶ್ವಧಾ ।
ಲೋಹಚರ್ಮವತೀ ಚಾಪಿ ಸಾಗ್ನಿಃ ಸಹುಲಶೃಂಗಿಕಾ ।
ಶಾಸ್ತ್ರದೃಷ್ಟೇನ ವಿಧಿನಾ ಸುಯುಕ್ತಾ ಭರತರ್ಷಭ ॥೮॥

ಎಲೈ ಭರತರ್ಷಭನೇ! ಒಳ್ಳೆಯ ಬತ್ತಳಿಕೆಗಳಿಂದಲೂ ಒಳ್ಳೆಯ ಖಡ್ಗಧಾರಿಗಳಿಂದಲೂ ಪರಶು ಹುಳ ಮತ್ತು ಇತರ ಆಯುಧಗಳಿಂದಲೂ ಚರ್ಮಮಯವಾದ ಲೋಹಕೋಶಗಳಿಂದಲೂ ಅಗ್ನಿಗಳಿಂದಲೂ ಶಾಸ್ತ್ರದೃಷ್ಟವಾದ ರೀತಿಯಲ್ಲಿ ನಗರವು ಸಜ್ಜಾಗಿದ್ದಿತು.

ದ್ರವ್ಯೈರನೇಕೈರ್ವಿವಿಧೈರ್ಗದಸಾಂಬೋದ್ಭವಾದಿಭಿಃ ।
ಪುರುಷೈ ರಾಜಶಾರ್ದೂಲ ಸರಥ್ಯೈಃ ಪರಿಪಾಲಿತಾ ॥೯॥

ಎಲೈ ರಾಜಶಾರ್ದೂಲನೇ! ಅನೇಕವಿಧವಾದ ದ್ರವ್ಯಗಳಿಂದಲೂ ರಥಸಹಿತರಾದ ಗದ ಸಾಂಬ ಉದ್ಧವಾದಿಗಳಿಂದಲೂ ಆ ನಗರವು ರಕ್ಷಿತವಾಗಿದ್ದಿತು.

ಅಭಿಜ್ಞಾತಕುಲೈರ್ವಿರೈ ರ್ದರ್ಪವೀರ್ಯೈಶ್ಚ ಸಂಯುಗೇ ।
ಮಧ್ಯಮೇನ ಚ ಗುಲ್ಮೇನ ರಕ್ಷಿತಾ ಸಾ ಪುರೀ ತದಾ ॥೧೦॥

ಚೆನ್ನಾಗಿ ಪರೀಕ್ಷಿಸಲ್ಪಟ್ಟ ಕುಲವುಳ್ಳ ಯುದ್ಧದಲ್ಲಿ ಶೌರ್ಯವನ್ನು ಪ್ರದರ್ಶಿಸಿದಪುರುಷರಿಂದ ಮತ್ತು ಮಧ್ಯಮವಾದ ಸೈನ್ಯಕಟಕದಿಂದ ಆ ಪಟ್ಟಣವು ರಕ್ಷಿತವಾಗಿದ್ದಿತು.

ಉತ್ಕ್ಷಿಪ್ತಗುಲ್ಮೈಶ್ಚ ತಥಾ ಹಯೈಶ್ಚ ಸಪತಾಕಿಭಿಃ ।
ಆಘೋಷಿತಂ ಚ ನಗರೇ ನ ಪಾತವ್ಯಾ ಸುರೇತಿ ಹ ॥೧೧॥

ಪ್ರಮಾದಂ ಪರಿರಕ್ಷದ್ಭಿರುಗ್ರಸೇನೋದ್ಧವಾದಿಭಿಃ ।
ಪ್ರಮತ್ತೇಷ್ವಭಿಘಾತಂ ಹಿ ಕುರ್ಯಾತ್ ಸಾಲ್ವೋ ನರಾಧಿಪಃ ।
ಇತಿ ಕೃತ್ವಾಽಪ್ರಮತ್ತಾಸ್ತೇ ಸರ್ವೇ ವೃಷ್ಣ್ಯಂಧಕಾಃ ಸ್ಥಿತಾಃ ॥೧೨॥

ಗುಲ್ಮಗಳಿಂದಲೂ ಮೇಲೆಕ್ಕೆತ್ತಿದ ಪತಾಕೆಗಳನ್ನು ಹಿಡಿದ ಪುರುಷರಿಂದ ಅಧಿಷ್ಠಿತವಾದ ಅಶ್ವಗಳಿಂದಲೂ ನಗರವು ರಕ್ಷಿತವಾಗಿದ್ದಿತು. ಉಗ್ರಸೇನ ಉದ್ಧವ ಮೊದಲಾದವರು ಯಾವುದೇ ಪ್ರಮಾದ ಉಂಟಾಗದಿರಲು ನಗರದಲ್ಲಿ ಯಾರೂ ಸುರಾಪಾನವನ್ನು ಮಾಡಬಾರದೆಂದು ಘೋಷಿಸಿದರು. ಪಾನದಿಂದ ಮತ್ತರಾಗಿ ಮೈಮರೆತವರ ಮೇಲೆ ಸಾಲ್ವರಾಜನು ಎರಗಬಹುದೆಂದು ಆಲೋಚಿಸಿ ಎಲ್ಲಾ ವೃಷ್ಣ್ಯಂಧಕರು ಅಪ್ರಮತ್ತರಾಗಿ ಜಾಗರೂಕರಾಗಿದ್ದರು.

ಆನರ್ತಾಶ್ಚ ತಥಾ ಸರ್ವೇ ನಟನರ್ತಕಗಾಯಕಾಃ ।
ಬಹಿರ್ನಿರ್ವಾಸಿತಾಃ ಕ್ಷಿಪ್ರಂ ರಕ್ಷದ್ಭಿರ್ವಿತ್ತಸಂಚಯಾನ್ ॥೧೩॥

ಸಂಕ್ರಮಾ ಭೇದಿತಾಃ ಸರ್ವೇ ನಾವಶ್ಚ ಪ್ರತಿಷೇಧಿತಾಃ ।
ಪರಿಘಾಶ್ಚಾಪಿ ಕೌರವ್ಯ ಕೀಲಕೈಶ್ಚ ಸುಕೀಲಿತಾಃ ॥೧೪॥

ನಗರದ ವಿತ್ತಕೋಶಗಳನ್ನು ರಕ್ಷಿಸಲು ದ್ವಾರಕೆಯ ಎಲ್ಲ ನಟ ನರ್ತಕ ಗಾಯಕರು ಶೀಘ್ರವಾಗಿ ಊರಿನಿಂದ ಹೊರಗೆ ಕಳುಹಿಸಲ್ಪಟ್ಟರು. ದ್ವಾರಕೆಯನ್ನು ಪ್ರವೇಶಿಸುವ

ಎಲ್ಲ ಸೇತುವೆಗಳು ಒಡೆಯಲ್ಪಟ್ಟವು. ಹಡಗುಗಳು ಪ್ರತಿಷೇಧಿಸಲ್ಪಟ್ಟವು. ಎಲೈ ಕೌರವ್ಯನೇ! ದ್ವಾರಕೆಯಲ್ಲಿ ಇದ್ದ ಕಂದಕಗಳೆಲ್ಲವೂ ಬೀಗ ಮುದ್ರೆಗಳಿಂದ ಬಂಧಿಸಲ್ಪಟ್ಟವು.

ಉದಪಾನಾಃ ಕುರುಶ್ರೇಷ್ಠ ತಥಾ ವಾಪ್ಯಃ ಕೃತಾಸ್ತಥಾ ।
ಸಮಂತಾತ್ ಕ್ರೋಶಮಾತ್ರಂ ತು ಕಾರಿತಾ ವಿಷಮಾ ಚ ಭೂಃ ॥೧೫॥

ಎಲೈ ಕುರುಶ್ರೇಷ್ಠನೇ! ನಗರದ ಸುತ್ತಲೂ ಒಂದು ಕ್ರೋಶದವರೆಗೆ ಇರುವ ಭಾವಿಗಳು ಮತ್ತು ಜಲಾಶಯಗಳು ಒಡೆಯಲ್ಪಟ್ಟು ಭೂಮಿಯು ವಿಷಮವಾಗಿ ಮಾಡಲ್ಪಟ್ಟಿತು.

ಪ್ರಕೃತ್ಯಾ ವಿಷಮಂ ದುರ್ಗಂ ಪ್ರಕೃತ್ಯಾ ಚ ಸುರಕ್ಷಿತಮ್ ।
ಪ್ರಕೃತ್ಯಾ ಚಾಯುಧೋಪೇತಂ ವಿಶೇಷೇಣ ತದಾಽನಘ ॥೧೬॥

ಎಲೈ ಅನಘನೇ! ಸ್ವಾಭಾವಿಕವಾಗಿಯೇ ವಿಷಮವಾದ ಸ್ವಾಭಾವಿಕವಾಗಿಯೇ ಸುರಕ್ಷಿತವಾದ ಸ್ವಾಭಾವಿಕವಾಗಿಯೇ ಎಲ್ಲ ಆಯುಧಗಳಿಂದ ಕೂಡಿದ ಕೋಟೆಯು ಆಗ ವಿಶೇಷವಾಗಿ ಸಜ್ಜುಗೊಂಡಿತು.

ಸುರಕ್ಷಿತಂ ಸುಗುಪ್ತಂ ಚ ಸರ್ವಾಯುಧಸಮನ್ವಿತಮ್ ।
ತತ್ ಪುರಂ ಭರತಶ್ರೇಷ್ಠ ಯಥೇಂದ್ರಭವನಂ ತಥಾ ॥೧೭॥

ಎಲೈ ಭರತಶ್ರೇಷ್ಠನೇ! ಆ ಪಟ್ಟಣವು ಇಂದ್ರಭವನದಂತೆ ಸರ್ವಾಯುಧಗಳಿಂದ ಕೂಡಿದ್ದು ಸುರಕ್ಷಿತವೂ ಸುಗುಪ್ತವೂ ಆಗಿದ್ದಿತು.

ನ ಚಾಮುದ್ರೋಽಭಿನಿರ್ಯಾತಿ ನ ಚಾಮುದ್ರಃ ಪ್ರವೇಶ್ಯತೇ ।
ವೃಷ್ಣ್ಯಂಧಕಪುರೇ ರಾಜನ್ ತದಾ ಸೌಭಸಮಾಗಮೇ ॥೧೮॥

ಎಲೈ ರಾಜನೇ! ಸೌಭಪತಿಯು ದ್ವಾರಕೆಗೆ ಬಂದಾಗ ಆ ವೃಷ್ಣ್ಯಂಧಕಪಟ್ಟಣದಲ್ಲಿ ರಾಜಮುದ್ರೆಯಿಲ್ಲದೆ ಯಾವನೂ ಹೊರಗೆ ಹೋಗುವಂತೆ ಇರಲಿಲ್ಲ, ಮತ್ತು ಯಾವನೂ ಒಳಗೆ ಬರುವಂತೆ ಇರಲಿಲ್ಲ.

ಅನುರಥ್ಯಾಸು ಸರ್ವಾಸು ಚತ್ವರೇಷು ಚ ಕೌರವ ।
ಬಲಂ ಬಭೂವ ರಾಜೇಂದ್ರ ಪ್ರಭೂತಗಜವಾಜಿಮತ್ ॥೧೯॥

ಎಲೈ ಕೌರವನೇ! ರಾಜಬೀದಿಗೆ ಸೇರುವ ಎಲ್ಲಾ ಸಣ್ಣಮಾರ್ಗಗಳಲ್ಲಿಯೂ ಚತ್ವರ(ನಾಲ್ಕು ಮಾರ್ಗಸಂಗಮ)ಗಳಲ್ಲಿಯೂ ಬಹಳವಾದ ಅಶ್ವಗಜಸೈನ್ಯವು ಸಿದ್ಧವಾಗಿದ್ದಿತು.

ದತ್ತವೇತನಭಕ್ತಂ ಚ ದತ್ತಾಯುಧಪರಿಚ್ಛದಮ್ ।
ಕೃತಾಪದಾನಂ ಚ ತದಾ ಬಲಮಾಸೀದ್ ವಿಶಾಂಪತೇ ॥೨೦॥

ಎಲೈ ರಾಜನೇ! ಆ ಸೈನ್ಯವು ಕಾಲಕಾಲಕ್ಕೆ ವೇತನ ಮತ್ತು ಭತ್ಯಗಳನ್ನು ಕೊಟ್ಟಿದ್ದಾಗಿಯೂ ಎಲ್ಲ ಆಯುಧಗಳು ಮತ್ತು ಸಲಕರಣೆಗಳಿಂದ ಸುಸನ್ನದ್ಧವಾಗಿಯೂ ಮತ್ತು ಶೌರ್ಯವನ್ನು ತೋರಿಸಿದವರಿಗೆ ಸತ್ಕಾರ್ಯವನ್ನು ಮಾಡಿದುದಾಗಿಯೂ ಇದ್ದಿತು.

ನ ಕೋಽಪ್ಯವೇತನಃ ಕಶ್ಚಿನ್ನ ಚಾತಿಕ್ರಾಂತವೇತನಃ ।
ನಾನುಗ್ರಹಭೃತಃ ಕಶ್ಚಿನ್ನ ಚಾದೃಷ್ಟಪರಾಕ್ರಮಃ ॥೨೧॥

ಆ ಸೈನ್ಯದಲ್ಲಿ ಸಂಬಳವನ್ನು ಪಡೆಯದವನಾಗಲೀ, ಅಥವಾ ಕಾಲವನ್ನು ಮೀರಿ ಸಂಬಳವನ್ನು ಪಡೆಯುವವನಾಗಲೀ, ಕೇವಲ ರಾಜನ ಅನುಗ್ರಹಕ್ಕೆ ಪಾತ್ರ ಎಂಬ ಕಾರಣಕ್ಕೆ ಸೈನ್ಯವನ್ನು ಸೇರಿದವನಾಗಲೀ, ಪರಾಕ್ರಮವನ್ನು ತೋರಿಸದವನಾಗಲೀ ಯಾವನೂ ಇರಲಿಲ್ಲ.

ಏವಂ ಸುವಿಹಿತಾ ರಾಜನ್ ದ್ವಾರಕಾ ಭೂರಿದಕ್ಷಿಣೈಃ ।
ಆಹುಕೇನ ಸುಗುಪ್ತಾ ಚ ರಾಜ್ಞಾ ರಾಜೀವಲೋಚನ ॥೨೨॥

ಎಲೈ ರಾಜನೇ! ರಾಜೀವಲೋಚನನೇ! ಹೀಗೆ ದ್ವಾರಕೆಯು ಬಹಳ ವಿತ್ತವನ್ನು ಪಡೆದ ಸೈನ್ಯದ ಸಹಾಯದಿಂದ ಆಹುಕರಾಜನಿಂದ ಚೆನ್ನಾಗಿ ಸಜ್ಜಾಗಿ ರಕ್ಷಿತವಾಗಿದ್ದಿತು.

ತತ್ರಾಪಯಾತ್ವಾ ರಾಜೇಂದ್ರ ಸಾಲ್ವಃ ಸೌಭಪತಿಸ್ತದಾ ।
ಪ್ರಭೂತನರನಾಗೇನ ಬಲೇನೋಪವಿವೇಶ ಹ ॥೨೩॥

ಎಲೈ ರಾಜೇಂದ್ರನೇ! ಆಗ ಸೌಭಪತಿಯಾದ ಸಾಲ್ವನು ಅಲ್ಲಿಗೆ ಬಹಳವಾದ ಗಜ ಮತ್ತು ಪದಾತಿಗಳನ್ನು ಕರೆದುಕೊಂಡು ಹೋಗಿ ತನ್ನ ಸೈನ್ಯದ ಜೊತೆಯಲ್ಲಿ ನಗರ ಸಮೀಪದಲ್ಲಿ ಬೀಡುಬಿಟ್ಟನು.

ಸಮೇ ನಿವಿಷ್ಟಾ ಸಾ ಸೇನಾ ಪ್ರಭೂತಸಲಿಲಾಶಯೇ ।
ಚತುರಂಗಬಲೋಪೇತಾ ಸಾಲ್ವರಾಜಾಭಿರಕ್ಷಿತಾ ॥೨೪॥

ಸಾಲ್ವರಾಜನಿಂದ ಚೆನ್ನಾಗಿ ರಕ್ಷಿತವಾದ ಚತುರಂಗಬಲವುಳ್ಳ ಆ ಸೈನ್ಯವು ಚೆನ್ನಾಗಿ ನೀರಿರುವ ಸಮತಟ್ಟಾದಸ್ಥಳದಲ್ಲಿ ಬೀಡುಬಿಟ್ಟಿತು.

ವರ್ಜಯಿತ್ವಾ ಶ್ಮಶಾನಾನಿ ದೇವತಾಯತನಾನಿ ಚ ।
ವಲ್ಮೀಕಾಂಶ್ಚೈವ ಚೈತ್ಯಾಂಶ್ಚ ಸನ್ನಿವಿಷ್ಟಮಭೂದ್ ಬಲಮ್ ॥೨೫॥

ಸ್ಮಶಾನಗಳನ್ನು ದೇವಾಲಯಗಳನ್ನು ವಲ್ಮೀಕಗಳನ್ನು ಪೂಜಾವೃಕ್ಷಗಳನ್ನು ಬಿಟ್ಟು ಆ ಸೈನ್ಯವು ಬೀಡು ಬಿಟ್ಟಿತು.

ಅನೀಕಾನಾಂ ವಿಧಾನೇನ ಪಂಥಾನಃ ಸಂವೃತಾಭವನ್ ।
ಪ್ರವಣಾನಿ ಚ ಸರ್ವಾಣಿ ಸಾಲ್ವಸ್ಯ ಶಿಬಿರೇ ನೃಪ ॥೨೬॥

ಎಲೈ ರಾಜನೇ! ಸಾಲ್ವನ ಶಿಬಿರದಲ್ಲಿ ಸೈನ್ಯದ ಪದ್ಧತಿಯಂತೆ ಮಾರ್ಗಗಳು ಮುಚ್ಚಲ್ಪಟ್ಟವು. ಮತ್ತು ಎಲ್ಲಾತಗ್ಗುಪ್ರದೇಶಗಳು ಮುಚ್ಚಲ್ಪಟ್ಟವು.

ಸರ್ವಾಯುಧಸಮೋಪೇತಂ ಸರ್ವಶಸ್ತ್ರವಿಶಾರದಮ್ ।
ರಥನಾಗಾಶ್ವಕಲಿಲಂ ಪದಾತಿಧ್ವಜಸಂಕುಲಮ್ ॥೨೭॥

ತುಷ್ಟಪುಷ್ಟಜನೋಪೇತಂ ವೀರಲಕ್ಷಣಲಕ್ಷಿತಮ್ ।
ವಿಚಿತ್ರಧ್ವಜಸನ್ನಾಹಂ ವಿಚಿತ್ರರಥಕಾರ್ಮುಕಮ್ ॥೨೮॥

ಸನ್ನಿವೇಶ್ಯ ತು ಕೌರವ್ಯ ದ್ವಾರಕಾಯಾಂ ನರರ್ಷಭ ।
ಅಭಿಸಾರಯಾಮಾಸ ತದಾ ವೇಗೇನ ಪತಗೇಂದ್ರವತ್ ॥೨೯॥

ಎಲೈ ನರಶ್ರೇಷ್ಠನೇ! ಸಾಲ್ವನು ಸರ್ವಾಯುಧಗಳಿಂದ ಕೂಡಿದ, ಸರ್ವಶಸ್ತ್ರಗಳಲ್ಲಿಯೂ ಪರಿಣತವಾದ, ರಥಗಜ ಅಶ್ವಗಳಿಂದ ತುಂಬಿದ, ಪದಾತಿಗಳು

ಮತ್ತು ಧ್ವಜಗಳಿಂದ ನಿಬಿಡವಾದ, ಸಂತುಷ್ಟರಾದ ಪುಷ್ಟಸೈನಿಕರಿಂದ ಕೂಡಿದ, ವೀರರ ರಕ್ಷಣದಿಂದ ಯುಕ್ತವಾದ, ವಿಚಿತ್ರವಾದ ಧ್ವಜ ವಿಚಿತ್ರವಾದ ರಥ ವಿಚಿತ್ರವಾದ ಧನುಸ್ಸು ವಿಚಿತ್ರವಾದ ಸಲಕರಣೆಗಳು ಇವುಗಳಿಂದ ಕೂಡಿದ ಸೈನ್ಯವನ್ನು ದ್ವಾರಕೆಯ ಸುತ್ತಲೂ ಜಮಾಯಿಸಿ ಗರುಡನಂತೆ ವೇಗದಿಂದ ದ್ವಾರಕೆಯ ಕಡೆಗೆ ನಡೆಸಿದನು.

ತದಾಪತತ್ತು ಸಂದೃಶ್ಯ ಬಲಂ ಸಾಲ್ವಪತೇಸ್ತದಾ ।
ನಿರ್ಯಾಯ ಯೋಧಯಾಮಾಸುಃ ಕುಮಾರಾಃ ವೃಷ್ಣಿನಂದನಾಃ ॥೩೦॥

ಆಗ ಆ ಸಾಲ್ವರಾಜನ ಆ ಸೈನ್ಯವು ಎರಗಿಬರುತ್ತಿರುವುದನ್ನು ನೋಡಿ ವೃಷ್ಣಿಕುಮಾರರು ಊರಿನಿಂದ ಹೊರಗೆ ಬಂದು ಯುದ್ಧವನ್ನು ಮಾಡಿದರು.

ಅಸಹಂತೋಽಭಿಯಾನಂ ತತ್ ಸಾಲ್ವರಾಜೇನ ಕೌರವ ।
ಚಾರುದೇಷ್ಣಶ್ಚ ಸಾಂಬಶ್ಚ ಪ್ರದ್ಯುಮ್ನಶ್ಚ ಮಹಾರಥಃ ॥೩೧॥

ತೇ ರಥೈರ್ದಂಶಿತಾಃ ಸರ್ವೇ ವಿಚಿತ್ರಾಭರಣಧ್ವಜಾಃ ।
ಸಂಸಕ್ತಾಃ ಸಾಲ್ವರಾಜಸ್ಯ ಬಹುಭಿರ್ಯೋಧಪುಂಗವೈಃ ॥೩೨॥

ಎಲೈ ಕೌರವನೇ! ಸಾಲ್ವರಾಜನ ಆ ಎರಗುವಿಕೆಯನ್ನು ಸಹಿಸದ ಮಹಾರಥರಾದ ಚಾರುದೇಷ್ಣ ಸಾಂಬ ಪ್ರದ್ಯುಮ್ನ ಮೊದಲಾದವರು ವಿಚಿತ್ರ ಆಭರಣ ಮತ್ತು ಧ್ವಜಗಳುಳ್ಳ ರಥಗಳಿಂದ ಸನ್ನದ್ಧರಾಗಿ ಸಾಲ್ವರಾಜನ ಅನೇಕ ಯೋಧಶ್ರೇಷ್ಠರ ಜೊತೆಯಲ್ಲಿ ಯುದ್ಧದಲ್ಲಿ ತೊಡಗಿದರು.

ಗೃಹೀತ್ವಾ ತು ಧನುಃ ಸಾಂಬಃ ಸಾಲ್ವಸ್ಯ ಸಚಿವಂ ರಣೇ ।
ಯೋಧಯಾಮಾಸ ಸಂಹೃಷ್ಟಃ ಕ್ಷೇಮಧೂರ್ತಿಂ ಚಮೂಪತಿಮ್ ॥೩೩॥

ಸಾಂಬನು ಕೈಯಲ್ಲಿ ಧನುಸ್ಸನ್ನು ತೆಗೆದುಕೊಂಡು ಸಾಲ್ವನ ಸಚಿವನೂ ಮತ್ತು ಯುದ್ಧದಲ್ಲಿ ಸೇನಾಪತಿಯೂ ಆದ ಕ್ಷೇಮಧೂರ್ತಿಯ ಜೊತೆಯಲ್ಲಿ ಸಂತೋಷದಿಂದ ಯುದ್ಧಮಾಡಿದನು.

ತಸ್ಯ ಬಾಣಮಯಂ ವರ್ಷಂ ಜಾಂಬವತ್ಯಾಃ ಸುತೋ ಮಹತ್ ।
ಮುಮೋಚ ಭರತಶ್ರೇಷ್ಠ ಯಥಾ ವರ್ಷಂ ಸಹಸ್ರದೃಕ್ ॥೩೪॥

ಎಲೈ ಭರತಶ್ರೇಷ್ಠನೇ! ಜಾಂಬವತಿಯ ಸುತನಾದ ಸಾಂಬನು ಇಂದ್ರನು ಮಳೆಯನ್ನು ಸುರಿಸಿದಂತೆ ಕ್ಷೇಮಧೂರ್ತಿಯ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತದ್ಬಾಣವರ್ಷಂ ತುಮುಲಂ ವಿಷೇಹೇ ಸ ಚಮೂಪತಿಃ ।
ಕ್ಷೇಮಧೂರ್ತಿರ್ಮಹಾರಾಜ ಹಿಮವಾನಿವ ನಿಶ್ಚಲಃ ॥೩೫॥

ಎಲೈ ಮಹಾರಾಜನೇ! ಸೇನಾಪತಿಯಾದ ಆ ಕ್ಷೇಮಧೂರ್ತಿಯು ಅಚಲನಾಗಿ ಹಿಮಾಲಯದಂತೆ ಬಾಣಗಳ ಮಳೆಯನ್ನು ಸಹಿಸಿದನು.

ತತಃ ಸಾಂಬಾಯ ರಾಜೇಂದ್ರ ಕ್ಷೇಮಧೂರ್ತಿರಪಿ ಸ್ಮ ಹ ।
ಮುಮೋಚ ಮಾಯಾವಿಹಿತಂ ಶರಜಾಲಂ ಮಹತ್ತರಮ್ ॥೩೬॥

ಎಲೈ ರಾಜೇಂದ್ರನೇ! ಅನಂತರ ಕ್ಷೇಮಧೂರ್ತಿಯೂ ಸಹ ಮಾಯಾಯುಕ್ತವಾದ ಬಾಣಗಳ ದೊಡ್ಡ ಸಮೂಹವನ್ನು ಸಾಂಬನ ಮೇಲೆ ಪ್ರಯೋಗಿಸಿದನು.

ತತೋ ಮಾಯಾಮಯಂ ಜಾಲಂ ಮಾಯಯೈವ ವಿದಾರ್ಯ ಸಃ ।
ಸಾಂಬಃ ಶರಸಹಸ್ರೇಣ ರಥಮಸ್ಯಾಭ್ಯವರ್ಷತ ॥೩೭॥

ಆಗ ಸಾಂಬನು ಕ್ಷೇಮಧೂರ್ತಿಯ ಮಾಯಾಮಯವಾದ ಬಾಣಗಳ ಸಮೂಹವನ್ನು ಮಾಯೆಯಿಂದಲೇ ನಾಶಮಾಡಿ ಅವನ ರಥದ ಮೇಲೆ ಸಹಸ್ರಬಾಣಗಳ ಮಳೆಯನ್ನು ಕರೆದನು.

ತತಃ ಸ ವಿದ್ಧಃ ಸಾಂಬೇನ ಕ್ಷೇಮಧೂರ್ತಿಶ್ಚಮೂಪತಿಃ ।
ಅಪಾಯಾಜ್ಜವನೈರಶ್ವೈಃ ಸಾಂಬಬಾಣಪ್ರಪೀಡಿತಃ ॥೩೮॥

ಆಗ ಸಾಂಬನ ಪ್ರಹಾರಕ್ಕೆ ಸಿಕ್ಕಿ ಬಾಣಗಳಿಂದ ಚೆನ್ನಾಗಿ ಪೀಡಿಸಲ್ಪಟ್ಟ ಸೇನಾಪತಿಯಾದ ಕ್ಷೇಮಧೂರ್ತಿಯು ರಣರಂಗವನ್ನು ಬಿಟ್ಟು ವೇಗವಾದ ಅಶ್ವಗಳಿಂದ ಹೊರಗೆ ಹೋದನು.

ತಸ್ಮಿನ್ ವಿಪ್ರದ್ರುತೇ ಶೂರೇ ಸಾಲ್ವಸ್ಯಾಥ ಚಮೂಪತೌ ।
ವೇಗವಾನ್ ನಾಮ ದೈತೇಯಃ ಸುತಂ ಮೇಽಭ್ಯದ್ರವದ್ ಬಲೀ ॥೩೯॥

ಶೂರನಾದ ಸಾಲ್ವನ ಸೇನಾಪತಿಯು ಯುದ್ಧಭೂಮಿಯಿಂದ ಓಡಿಹೋಗುತ್ತಿರಲು ವೇಗವಾನ್ ಎಂಬ ಬಲಿಷ್ಠನಾದ ಇನ್ನೊಬ್ಬ ದೈತ್ಯನು ನನ್ನ ಪುತ್ರನ ಕಡೆಗೆ ಧಾವಿಸಿದನು.

ಅಭಿದ್ರುತಸ್ಯ ರಾಜೇಂದ್ರ ಸಾಂಬೋ ವೃಷ್ಣಿಕುಲೋದ್ವಹಃ ।
ವೇಗಂ ವೇಗವತೋ ರಾಜನ್ ತಸ್ಥೌ ವೀರೋ ವಿಧಾರಯನ್ ॥೪೦॥

ಎಲೈ ರಾಜೇಂದ್ರನೇ! ವೃಷ್ಣಿಕುಲೋದ್ಭವನಾದ ವೀರನಾದ ಸಾಂಬನು ಹಾಗೆ ಓಡಿಬಂದ ವೇಗವಂತನ ವೇಗವನ್ನು ಸಹಿಸಿತಡೆದನು.

ಸ ವೇಗವತಿ ಕೌಂತೇಯ ಸಾಂಬೋ ವೇಗವತೀಂ ಗದಾಮ್ ।
ಚಿಕ್ಷೇಪ ತರಸಾ ವೀರೋ ವ್ಯಾವಿದ್ಧ್ಯತ್ ಸತ್ಯವಿಕ್ರಮಃ ॥೪೧॥

ಕೌಂತೇಯನೇ! ಸತ್ಯವಿಕ್ರಮನಾದ ವೀರನಾದ ಸಾಂಬನು ವೇಗವಂತನ ಮೇಲೆ ವೇಗವುಳ್ಳ ತನ್ನ ಗದೆಯನ್ನು ಎಸೆದು ಅವನಿಗೆ ಹೊಡೆದನು.

ತಯಾ ತ್ವಭಿಹತೋ ರಾಜನ್ ವೇಗವಾನ್ ನ್ಯಪತದ್ ಭುವಿ ।
ವಾತರುಗ್ಣ ಇವ ಕ್ಷುಣ್ಣಃ ಶೀರ್ಣಮೂಲೋ ವನಸ್ಪತಿಃ ॥೪೨॥

ಎಲೈ ರಾಜನೇ! ಗದೆಯಿಂದ ತಾಡಿತನಾದ ವೇಗವಂತನು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಬೇರನ್ನು ಕಡಿದುಕೊಂಡು ಪುಡಿಪುಡಿಯಾಗಿ ಬಿದ್ದ ವೃಕ್ಷದಂತೆ ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ನಿಪತಿತೇ ವೀರೇ ಗದಯಾ ದಾನವಾಧಮೇ ।
ಪ್ರವಿಶ್ಯ ಮಹತೀಂ ಸೇನಾಂ ಯೋಧಯಾಮಾಸ ಮೇ ಸುತಃ ॥೪೩॥

ಆ ದಾನವಾಧಮನಾದ ವೀರನು ನನ್ನ ಪುತ್ರನಿಂದ ಗದೆಯಿಂದ ಬೀಳಿಸಲ್ಪಟ್ಟ ಮೇಲೆ ನನ್ನ ಪುತ್ರನು ಸಾಲ್ವನ ದೊಡ್ಡ ಸೈನ್ಯವನ್ನು ಪ್ರವೇಶಿಸಿ ಯುದ್ಧವನ್ನು ಮಾಡಿದನು.

ಚಾರುದೇಷ್ಣೇನ ಸಂಸಕ್ತೋ ವಿವಿಂಧ್ಯೋ ನಾಮ ದಾನವಃ ।
ಮಹಾರಥಃ ಸಮಾಜ್ಞಾತೋ ಮಹಾರಾಜ ಮಹಾಧನುಃ ॥೪೪॥

ಎಲೈ ಮಹಾರಾಜನೇ! ಚಾರುದೇಷ್ಣನ ಜೊತೆಯಲ್ಲಿ ವಿವಿಂಧ್ಯ ಎಂಬ ದಾನವನು ಯುದ್ಧಮಾಡಿದನು ಅವನು ಮಹಾರಥನೂ ಮಹಾಧನುಸ್ಸುಳ್ಳವನೂ ಆಗಿದ್ದನು.

ತತಃ ಸುತುಮುಲಂ ಯುದ್ಧಂ ಚಾರುದೇಷ್ಣವಿವಿಂಧ್ಯಯೋಃ ।
ವೃತ್ರವಾಸವಯೋ ರಾಜನ್ ಯಥಾಪೂರ್ವಂ ತಥಾऽಭವತ್ ॥೪೫॥

ಎಲೈ ರಾಜನೇ! ಅನಂತರ ಚಾರುದೇಷ್ಣಮತ್ತು ವಿವಿಂಧ್ಯರಿಗೆ ಹಿಂದೆ ವೃತ್ರ ಮತ್ತು ಇಂದ್ರನಿಗೆ ನಡೆದ ದೊಡ್ಡಯುದ್ಧದಂತೆ ಘೋರವಾದ ಯುದ್ಧವು ನಡೆಯಿತು.

ಅನ್ಯೋನ್ಯಸ್ಯಾಭಿಸಂಕ್ರುದ್ಧಾವನ್ಯೋನ್ಯಂ ಜಘ್ನತುಃ ಶರೈಃ ।
ವಿನದಂತೌ ಮಹಾರಾಜ ಸಿಂಹಾವಿವ ಮಹಾಬಲೌ ॥೪೬॥

ಎಲೈ ಮಹಾರಾಜನೇ! ಅವರು ಪರಸ್ಪರವಾಗಿ ಸಂಕ್ರುದ್ಧರಾಗಿ ಮಹಾಬಲವುಳ್ಳ ಸಿಂಹಗಳಂತೆ ಗರ್ಜನೆಯನ್ನು ಮಾಡುತ್ತಾ ಒಬ್ಬರನ್ನೊಬ್ಬರು ಬಾಣಗಳಿಂದ ಹೊಡೆದರು.

ರೌಗ್ಮಿಣೇಯಸ್ತತೋ ಬಾಣಮಗ್ನ್ಯರ್ಕೋಪಮವರ್ಚಸಮ್ ।
ಅಭಿಮಂತ್ರ್ಯ ಮಹಾಸ್ತ್ರೇಣ ಸಂದಧೇ ಶತ್ರುನಾಶನಮ್ ॥೪೭॥

ಆಗ ರುಗ್ಮಿಣಿಯ ಪುತ್ರನಾದ ಚಾರುದೇಷ್ಣನು ಅಗ್ನಿ ಮತ್ತು ಸೂರ್ಯನಂತೆ ಪ್ರಕಾಶವುಳ್ಳ ಬಾಣವನ್ನು ಮಹಾಸ್ತ್ರದಿಂದ ಅಭಿಮಂತ್ರಿಸಿ ಶತ್ರುನಾಶವನ್ನು ಮಾಡಲು ಆ ಬಾಣವನ್ನು ಹೂಡಿದನು.

ಸ ವಿವಿಂಧ್ಯಾಯ ಸಕ್ರೋಧಃ ಸಮಾಹೂಯ ಮಹಾರಥಃ ।
ಚಿಕ್ಷೇಪ ಮೇ ಸುತೋ ರಾಜನ್ ಸ ಗತಾಸುರವಾಪತತ್ ॥೪೮॥

ರಾಜನೇ! ಮಹಾರಥನಾದ ನನ್ನ ಪುತ್ರನು ಕ್ರೋಧದಿಂದ ವಿವಿಂಧ್ಯವನ್ನು ಆಹ್ವಾನಿಸಿ ಅವನ ಮೇಲೆ ಆ ಬಾಣಪ್ರಯೋಗವನ್ನು ಮಾಡಿದನು. ವಿವಿಂಧ್ಯನು ಪ್ರಾಣವನ್ನು ಕಳೆದುಕೊಂಡು ನೆಲಕ್ಕೆ ಉರುಳಿದನು.

ವಿವಿಂಧ್ಯಂ ನಿಹತಂ ದೃಷ್ಟ್ವಾ ತಾಂ ಚ ವಿಕ್ಷೋಭಿತಾಂ ಚಮೂಮ್ ।
ಕಾಮಗೇನ ಸ ಸೌಭೇನ ಸಾಲ್ವಃ ಪುನರುಪಾಗಮತ್ ॥೪೯॥

ವಿವಿಂಧ್ಯನು ಹತವಾದುದನ್ನು ಮತ್ತು ತನ್ನ ಸೈನ್ಯವು ಚದುರಿಹೋದುದನ್ನು ನೋಡಿದ ಸಾಲ್ವನು ಕಾಮಗಾಮಿಯಾದ ತನ್ನ ವಿಮಾನದಲ್ಲಿ ಪುನಃ ಸಮೀಪದಲ್ಲಿ ಯುದ್ಧವನ್ನು ಮಾಡಲು ಬಂದನು.

ತತೋ ವ್ಯಾಕುಲಿತಂ ಸರ್ವಂ ದ್ವಾರಕಾವಾಸಿತಂ ಬಲಮ್ ।
ದೃಷ್ಟ್ವಾ ಸಾಲ್ವಂ ಮಹಾಬಾಹೋ ಸೌಭಸ್ಥಂ ಭೂಪತಿಂ ತದಾ ॥೫೦॥

ಎಲೈ ಮಹಾಬಾಹುವೇ! ಆಗ ದ್ವಾರಕಾವಾಸಿಯಾದ ಸೈನ್ಯವೆಲ್ಲವೂ ವಿಮಾನದಲ್ಲಿದ್ದ ಸಾಲ್ವರಾಜನನ್ನು ನೋಡಿ ವ್ಯಾಕುಲಕ್ಕೆ ಒಳಗಾಯಿತು.

ತತೋ ನಿರ್ಯಾಯ ಕೌಂತೇಯ ವ್ಯವಸ್ಥಾಪ್ಯ ಚ ತದ್ಬಲಮ್ ।
ಆನಾರ್ತಾನಾಂ ಮಹಾರಾಜ ಪ್ರದ್ಯುಮ್ನೋ ವಾಕ್ಯಮಬ್ರವೀತ್ ॥೫೧॥

ಎಲೈ ಕೌಂತೇಯನೇ! ಮಹಾರಾಜನೇ! ಆಗ ಪ್ರದ್ಯುಮ್ನನು ದ್ವಾರಕಾಪಟ್ಟಣದ ಆ ಸೈನ್ಯವನ್ನು ಸಮಾಧಾನಗೊಳಿಸಿ ನಿಲ್ಲಿಸಿ ಹೊರಗೆ ಬಂದು ಮಾತನಾಡಿದನು.

ಸರ್ವೇ ಭವಂತಸ್ತಿಷ್ಠಂತು ಸರ್ವೇ ಪಶ್ಯಂತು ಮಾಂ ಯುಧಿ ।
ನಿವಾರಯಂತಂ ಸಂಗ್ರಾಮೇ ಬಲಾತ್ ಸೌಭಂ ಸರಾಜಕಮ್ ॥೫೨॥

ನೀವೆಲ್ಲರೂ ಸುಮ್ಮನಿದ್ದು ನಾನು ಯುದ್ಧಮಾಡುವುದನ್ನು ನೋಡಿ. ನಾನು ಯುದ್ಧದಲ್ಲಿ ಸಾಲ್ವನನ್ನು ಮತ್ತು ಅವನ ವಿಮಾನವನ್ನು ತಡೆಯುತ್ತೇನೆ.

ಅಯಂ ಸೌಭಪತೇಃ ಸೇನಾಮಾಯಸೈರ್ಭೃಜಗೋಪಮೈಃ ।
ಧನುರ್ಮುಕ್ತೈಶ್ಚ ನಾರಾಚೈರ್ನಾಶಯಾಮ್ಯದ್ಯ ಯಾದವಾಃ ॥೫೩॥

ಎಲೈ ಯಾದವರೇ! ನಾನು ಈ ದಿನ ಸರ್ಪದಂತೆ ಇರುವ ಕಬ್ಬಿಣದಿಂದ ನಿರ್ಮಿತವಾದ ಬಾಣಗಳನ್ನು ನನ್ನ ಧನುಸ್ಸಿನಿಂದ ಪ್ರಯೋಗಿಸಿ ಸೌಭಪತಿಯ ಸೈನ್ಯವನ್ನು ನಾಶಮಾಡುತ್ತೇನೆ.

ಆಶ್ವಸಧ್ವಂ ನ ಭೀಃ ಕಾರ್ಯಾ ಸೌಭರಾಡದ್ಯ ನಶ್ಯತಿ ।
ಮಯಾಽಭಿಪನ್ನೋ ದುಷ್ಟಾತ್ಮಾ ಸಸೌಭಃ ಸಪದಾನುಗಃ ॥೫೪॥

ನನ್ನನ್ನು ಸಂಧಿಸಿದ ದುಷ್ಟನಾದ ಸಾಲ್ವನು ತನ್ನ ಸೈನ್ಯ ಮತ್ತು ಪದಾತಿಗಳ ಜೊತೆಯಲ್ಲಿ ಈ ದಿನ ವಿನಾಶವನ್ನು ಹೊಂದುತ್ತಾನೆ. ನೀವು ಸಮಾಧಾನದಿಂದಿರಿ.

ಏವಂ ಬ್ರುವತಿ ಸಂಹೃಷ್ಟೇ ಪ್ರದ್ಯುಮ್ನೇ ಪಾಂಡುನಂದನ ।
ವಿಷ್ಠಿತಂ ತದ್ಬಲಂ ದ್ವಾರಿ ಯುಯುಧೇ ಚ ಯಥಾಸುಖಮ್ ॥೫೫॥

ಪಾಂಡವನಂದನನೇ! ಪ್ರದ್ಯುಮ್ನನು ಹೀಗೆ ಹೇಳುತ್ತಿರಲು ಆ ಸೈನ್ಯವು ದ್ವಾರದಲ್ಲಿಯೇ ನಿಂತು ಅನಾಯಾಸವಾಗಿ ಯುದ್ಧವನ್ನು ಮಾಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ದಶೋऽಧ್ಯಾಯಃ ॥
॥ ಕೈರಾತಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

## ಹದಿನೈದನೆಯ ಅಧ್ಯಾಯ

(ಕೃಷ್ಣನಿಂದ ಪ್ರದ್ಯುಮ್ನ ಮತ್ತು ಸಾಲ್ವರ ಯುದ್ಧದ ವರ್ಣನೆ.)

ಶ್ರೀಭಗವಾನ್

ಏವಮುಕ್ತ್ವಾ ರೌಕ್ಮಿಣೇಯೋ ಯಾದವಾನ್ ಯಾದವರ್ಷಭಃ ।
ದಂಶಿತೈರ್ಹರಿಭಿರ್ಯುಕ್ತಂ ರಥಮಾಸ್ಥಾಯ ಕಾಂಚನಮ್ ॥೧॥

ಉಚ್ಛ್ರಿತ್ಯ ಮಕರಂ ಕೇತುಂ ವ್ಯಾತ್ತಾನನಮಲಂಕೃತಮ್ ।
ಉತ್ಪತದ್ಭಿರಿವಾಕಾಶಂ ಹಯೈರಭ್ಯಪತತ್ ಪರಾನ್ ॥೨॥

ಯಾದವಶ್ರೇಷ್ಠನಾದ ರುಗ್ಮಿಣಿಯ ಮಗನಾದ ಪ್ರದ್ಯುಮ್ನನು ಯಾದವರನ್ನುದ್ದೇಶಿಸಿ ಹೀಗೆ ಹೇಳಿ ಸಜ್ಜಾದ ಅಶ್ವಗಳನ್ನು ಹೂಡಿದ ಸುವರ್ಣಮಯವಾದ ರಥದಲ್ಲಿ ಕುಳಿತು ಬಾಯಿಯನ್ನು ದೊಡ್ಡದಾಗಿ ತೆರೆದ ಅಲಂಕೃತವಾದ ತನ್ನ ಮಕರಧ್ವಜವನ್ನು ಮೇಲೆತ್ತಿ ಆಕಾಶಕ್ಕೆ ಹಾರುವಂತಿರುವ ಅಶ್ವಗಳಿಂದ ಶತ್ರುಗಳ ಕಡೆಗೆ ಧಾವಿಸಿದನು.

ವಿಕ್ಷಿಪನ್ನಾದದಾನಶ್ಚ ಧನುರ್ಜ್ಯಾಮಾಕ್ಷಿಪನ್ ಮುಹುಃ ।
ತೂಣಖಡ್ಗಧರಃ ಶೂರೋ ಬದ್ಧಗೋಧಾಂಗುಲಿತ್ರವಾನ್ ॥೩॥

ಸವಿದ್ಯುಚ್ಚಪಲಂ ಚಾಪಂ ವಿಚರನ್ ವೈ ತಳಾತ್ ತಳಮ್ ।
ಮೋಹಯಾಮಾಸ ದೈತೇಯಾನ್ ಸರ್ವಾನ್ ಸೌಭನಿವಾಸಿನಃ ॥೪॥

ಬಾಣವನ್ನು ಪ್ರಯೋಗಮಾಡುತ್ತಾ ಬತ್ತಳಿಕೆಯಿಂದ ಬಾಣವನ್ನು ತೆಗೆದು ಕೊಳ್ಳುತ್ತಾ ಮತ್ತೆ ಮತ್ತೆ ಧನುಸ್ಸಿನ ಹೆದೆಯನ್ನು ಹಿಂದಕ್ಕೆ ಎಳೆಯುತ್ತಾ ಬತ್ತಳಿಕೆಯನ್ನೂ ಖಡ್ಗವನ್ನೂ ಹಸ್ತ ರಕ್ಷಣೆಯ ಕವಚವನ್ನೂ ಧರಿಸಿದ ಶೂರನಾದ ಅವನು ಮಿಂಚಿನಂತೆ ಚಂಚಲವಾದ ತನ್ನ ಧನುಸ್ಸನ್ನು ಒಂದು ಕೈಯಿಂದ ಒಂದು ಕೈಗೆ ಬದಲಾಯಿಸುತ್ತಾ ಸೌಭನಿವಾಸಿಗಳಾದ ಎಲ್ಲ ದೈತ್ಯರನ್ನೂ ಮೋಹಗೊಳಿಸಿದನು.

ಅಸ್ಯ ವಿಕ್ಷಿಪತಶ್ಚಾಪಂ ಸಂದಧಾನಸ್ಯ ಚಾಸಕೃತ್ ।
ನಾಂತರಂ ದದೃಶೇ ಕಶ್ಚಿನ್ನಿಘ್ನತಃ ಶಾತ್ರವಾನ್ ರಣೇ ॥೫॥

ಅವನು ಪುನಃಪುನಃ ಬಾಣವನ್ನು ಪ್ರಯೋಗಿಸುವುದಕ್ಕೂ ಮತ್ತು ಬಾಣವನ್ನು ಹೂಡುವುದಕ್ಕೂ ಮತ್ತು ಶತ್ರುಗಳನ್ನು ಪ್ರಹಾರಮಾಡುವುದಕ್ಕೂ ಮಧ್ಯೆ ಯುದ್ಧದಲ್ಲಿ ಯಾವ ಅಂತರವೂ ಕಾಣುತ್ತಿರಲಿಲ್ಲ.

ಮುಖಸ್ಯ ವರ್ಣೋ ನ ವಿಕಂಪತೇಽಸ್ಯ
ಚೇಲುಶ್ಚ ಗಾತ್ರಾಣಿ ನ ಚಾಪಿ ತಸ್ಯ ।
ಸಿಂಹೋನ್ನತಂ ಚಾಪ್ಯಭಿಗರ್ಜತೋಽಸ್ಯ
ಶುಶ್ರಾವ ಲೋಕೋಽದ್ಭುತವೀರ್ಯಮಗ್ರ್ಯಮ್ ॥೬॥

ಅವನ ಮುಖದಲ್ಲಿ ವರ್ಣವ್ಯತ್ಯಾಸವಾಗಲಿಲ್ಲ. ಅವನ ದೇಹದಲ್ಲಿ ಕಂಪವುಂಟಾಗಲಿಲ್ಲ. ಸಿಂಹದಂತೆ ಎತ್ತರದ ಧ್ವನಿಯಲ್ಲಿ ಗರ್ಜನೆಯನ್ನುಮಾಡುವ ಅವನ ಶ್ರೇಷ್ಠವಾದ ಮತ್ತು ಅದ್ಭುತವಾದ ಸಾಮರ್ಥ್ಯವನ್ನು ಎಲ್ಲರೂ ನೋಡಿದರು.

ಜಲೇಚರಃ ಕಾಂಚನಯಷ್ಟಿಸಂಸ್ಥೋ
ವ್ಯಾತ್ತಾನನಃ ಶತ್ರುಬಲಪ್ರಮಾಥೀ ।
ವ್ಯತ್ರಾಸಯದ್ ದಾನವರಾಜಮುಖ್ಯಾನ್
ಸಾಲ್ವಸ್ಯ ಸೇನಾಪ್ರಮುಖೇ ಧ್ವಜಾಗ್ರ್ಯಃ ॥೭॥

ಸುವರ್ಣಮಯವಾದ ಧ್ವಜಸ್ತಂಭದಲ್ಲಿ ಇದ್ದ ಮಕರವು ಬಾಯಿಯನ್ನು ತೆರೆದು ಶತ್ರುಗಳ ಸೈನ್ಯವನ್ನು ಕಲಕುತ್ತಾ ಸಾಲ್ವನ ಸೈನ್ಯದ ಮುಂಬಾಗದಲ್ಲಿ ಇದ್ದ ದಾನವೇಂದ್ರಶ್ರೇಷ್ಠರಿಗೆ ಭಯವನ್ನು ಉಂಟುಮಾಡಿತು.

ತತಸ್ತೂರ್ಣಂ ವಿನಿಷ್ಪತ್ಯ ಪ್ರದ್ಯುಮ್ನಃ ಶತ್ರುಕರ್ಶನಃ ।
ಸಾಲ್ವಮೇವಾಭಿದುದ್ರಾವ ನಿವಾರ್ಯಾರಿಬಲಂ ರುಷಾ ॥೮॥

ಆಗ ಶತ್ರುಗಳನ್ನು ಹಿಂಸಿಸುವ ಪ್ರದ್ಯುಮ್ನನು ವೇಗವಾಗಿ ನುಗ್ಗಿ ಸಿಟ್ಟಿನಿಂದ ಉಳಿದ ಶತ್ರುಸೈನ್ಯವನ್ನು ನಿವಾರಿಸಿ ಸಾಲ್ವನ ಕಡೆಗೆ ವೇಗದಿಂದ ಓಡಿದನು.

ಅಭಿಯಾನಂ ತು ವೀರೇಣ ಪ್ರದ್ಯುಮ್ನೇನ ಮಹಾಹವೇ ।
ನಾಮರ್ಷಯತ ಸಂಕ್ರುದ್ಧಃ ಸಾಲ್ವಃ ಸೌಭಪತಿಸ್ತಥಾ ॥೯॥

ಆ ಮಹಾಯುದ್ಧದಲ್ಲಿ ವೀರನಾದ ಪ್ರದ್ಯುಮ್ನನು ತನ್ನ ಮೇಲೆ ಎರಗುತ್ತಿರುವುದನ್ನು ನೋಡಿ ಸೌಭಪತಿಯಾದ ಸಾಲ್ವನು ಸಂಕ್ರುದ್ಧನಾಗಿ ಅದನ್ನು ಸಹಿಸಲಿಲ್ಲ.

ಸ ರೋಷಮದಮತ್ತೋ ವೈ ಕಾಮಗಾದವರುಹ್ಯ ಚ ।
ಪ್ರದ್ಯುಮ್ನಂ ಯೋಧಯಾಮಾಸ ಸಾಲ್ವಃ ಪರಪುರಂಜಯಃ ॥೧೦॥

ರೋಷದಿಂದಲೂ ಮತ್ತು ಮದದಿಂದಲೂ ಮತ್ತನಾದ ಶತ್ರುಗಳ ಪಟ್ಟಣವನ್ನು ಗೆಲ್ಲುವ ಸಾಲ್ವನು ತನ್ನ ಕಾಮಗಾಮಿಯಾದ ವಿಮಾನದಿಂದ ಇಳಿದು ಪ್ರದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಯೋಃ ಸುತುಮುಲಂ ಯುದ್ಧಂ ಸಾಲ್ವವೃಷ್ಣಿಪ್ರವೀರಯೋಃ ।
ಸಮೇತಾ ದದೃಶುರ್ಲೋಕಾ ವೃತ್ರವಾಸವಯೋರಿವ ॥೧೧॥

ಸಾಲ್ವನಿಗೂ ಮತ್ತು ವೃಷ್ಣಿವೀರನಾದ ಪ್ರದ್ಯುಮ್ನನಿಗೂ ನಡೆದ ಘೋರವಾದ ಯುದ್ಧವನ್ನು ವೃತ್ರ ಮತ್ತು ಇಂದ್ರರ ಯುದ್ಧವನ್ನು ನೋಡಿದಂತೆ ಎಲ್ಲ ಜನರೂ ಸೇರಿ ನೋಡಿದರು.

ತಸ್ಯ ಮಾಯಾಮಯೋ ವೀರ ರಥೋ ಹೇಮಪರಿಷ್ಕೃತಃ ।
ಸಧ್ವಜಃ ಸಪತಾಕಶ್ಚ ಸಾನುಕರ್ಷಃ ಸತೂಣವಾನ್ ॥೧೨॥

ಎಲೈ ವೀರನೇ! ಸಾಲ್ವನ ರಥವು ಮಾಯಾಮಯವೂ ಸುವರ್ಣಾಲಂಕೃತವೂ ಧ್ವಜ ಪತಾಕ ಅನುಕರ್ಷ ಮತ್ತು ಬತ್ತಳಿಕೆಗಳಿಂದ ಸುಸಜ್ಜಿತವಾಗಿಯೂ ಇದ್ದಿತು.

ಸ ತಂ ರಥವರಂ ಶ್ರೀಮಾನ್ ಸಮಾರುಹ್ಯ ಕಿಲ ಪ್ರಭೋ ।
ಮುಮೋಚ ಬಾಣಾನ್ ಕೌರವ್ಯ ಪ್ರದ್ಯುಮ್ನಾಯ ಮಹಾಬಲಃ ॥೧೩॥

ಎಲೈ ಕೌರವ್ಯನೇ! ಮಹಾಬಲನಾದ ಕಾಂತಿಯುಕ್ತನಾದ ಆ ಸಾಲ್ವನು ಅಂತಹ ಶ್ರೇಷ್ಠವಾದ ರಥವನ್ನು ಏರಿ ಪ್ರದ್ಯುಮ್ನನ ಮೇಲೆ ಬಾಣಗಳನ್ನು ಪ್ರಯೋಗಿಸಿದನು.

ತತೋ ಬಾಣಮಯಂ ವರ್ಷಂ ವ್ಯಸೃಜತ್ ತರಸಾ ರಣೇ ।
ಪ್ರದ್ಯುಮ್ನೋ ಭುಜವೇಗೇನ ಸಾಲ್ವಂ ಸಮ್ಮೋಹಯನ್ನಿವ ॥೧೪॥

ಆಗ ಪ್ರದ್ಯುಮ್ನನು ಯುದ್ಧದಲ್ಲಿ ಸಾಲ್ವನನ್ನು ಸಂಮೋಹಿಸುವವನಂತೆ ಬಾಣಮಯವಾದ ಮಳೆಯನ್ನು ತನ್ನ ಭುಜಬಲದಿಂದ ಅವನ ಮೇಲೆ ಶೀಘ್ರವಾಗಿ ಕರೆದನು.

ಸ ತೈರಭಿಹತಃ ಸಂಖೇ ನಾಮರ್ಷಯತ ಸೌಭರಾಟ್ ।
ಶರಾನ್ ದೀಪ್ತಾಗ್ನಿಸಂಕಾಶಾನ್ ಮುಮೋಚ ತನಯೇ ಮಮ ॥೧೫॥

ಯುದ್ಧದಲ್ಲಿ ಆ ಬಾಣಗಳಿಂದ ಹೊಡೆಯಲ್ಪಟ್ಟ ಆ ಸೌಭಪತಿಯು ಅದನ್ನು ಸಹಿಸಲಿಲ್ಲ. ಜ್ವಲಿಸುತ್ತಿರುವ ಅಗ್ನಿಯಂತಿರುವ ಬಾಣಗಳನ್ನು ನನ್ನ ತನಯನ ಮೇಲೆ ಪ್ರಯೋಗಿಸಿದನು.

ಸ ಸಾಲ್ವಬಾಣೈ ರಾಜೇಂದ್ರ ವಿದ್ಧೋ ರುಗ್ಮಿಣೀನಂದನಃ ।
ಮುಮೋಚ ಬಾಣಂ ತ್ವರಿತೋ ಮರ್ಮಭೇದಿನಮಾಹವೇ ॥೧೬॥

ರಾಜೇಂದ್ರನೇ! ಸಾಲ್ವಬಾಣಗಳಿಂದ ಪೀಡಿತನಾದ ರುಗ್ಮಿಣೀನಂದನನು ಶೀಘ್ರವಾಗಿ ಅವನ ಮೇಲೆ ಮರ್ಮಭೇದಿಯಾದ ಬಾಣವನ್ನು ಪ್ರಯೋಗಿಸಿದನು.

ತಸ್ಯ ಮರ್ಮ ವಿಭಿದ್ಯಾಶು ಸ ಬಾಣೋ ಮತ್ಸುತೇರಿತಃ ।
ವಿವೇಶ ಹೃದಯಂ ಪತ್ರೀ ಸ ಪಪಾತ ಭೃಶಾಹತಃ ॥೧೭॥

ನನ್ನ ಪುತ್ರನಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಅವನ ಮರ್ಮವನ್ನು ಭೇದಿಸಿ ಹೃದಯವನ್ನು ಪ್ರವೇಶಿಸಿತು. ಆ ಬಾಣದಿಂದ (ಬಹಳ ಏಟನ್ನು ತಿಂದ) ಸಾಲ್ವನು ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ನಿಪತಿತೇ ವೀರೇ ಸಾಲ್ವರಾಜೇ ವಿಚೇತಸಿ ।
ಸಂಪ್ರಾದ್ರವನ್ ದಾನವೇಂದ್ರಾ ದಾರಯಂತೋ ವಸುಂಧರಾಮ್ ॥೧೮॥

ಆ ವೀರನಾದ ಸಾಲ್ವರಾಜನು ಪ್ರಜ್ಞೆಯನ್ನು ಕಳೆದುಕೊಂಡು ಭೂಮಿಯ ಮೇಲೆ ಬೀಳುತ್ತಿರಲು ಅವನ ಸೈನ್ಯದ ದಾನವೇಂದ್ರರು (ತಮ್ಮ ಭಾರದಿಂದ) ಭೂಮಿಯನ್ನು ಸೀಳುವಂತೆ ಓಡಿ ಹೋದರು.

ಹಾಹಾಕೃತಮಭೂತ್ ಸೈನ್ಯಂ ಸಾಲ್ವಸ್ಯ ಪೃಥಿವೀಪತೇ ।
ನಷ್ಟಸಂಜ್ಞೇ ನಿಪತಿತೇ ತದಾ ಸೌಭಪತೌ ನೃಪೇ ॥೧೯॥

ಎಲೈ ರಾಜನೇ! ಸೌಭಪತಿಯಾದ ಸಾಲ್ವನು ಮೂರ್ಛಾಕ್ರಾಂತನಾಗಿ ಬೀಳುತ್ತಿರಲು ಅವನ ಸೈನ್ಯದಲ್ಲಿ ಹಾಹಾಕಾರ ಉಂಟಾಯಿತು.

ತತ ಉತ್ಥಾಯ ರಾಜೇಂದ್ರ ಪ್ರತಿಲಭ್ಯ ಚ ಚೇತನಾಮ್ ।
ಮುಮೋಚ ಬಾಣಂ ತರಸಾ ಪ್ರದ್ಯುಮ್ನಾಯ ಮಹಾಬಲಃ ॥೨೦॥

ರಾಜೇಂದ್ರನೇ! ಅನಂತರ ಮಹಾಬಲನಾದ ಸಾಲ್ವನು ಪ್ರಜ್ಞೆಯನ್ನು ಮರಳಿಪಡೆದು ಮೇಲೆದ್ದು ಶೀಘ್ರವಾಗಿ ಪ್ರದ್ಯುಮ್ನನ ಮೇಲೆ ಬಾಣಪ್ರಯೋಗವನ್ನು ಮಾಡಿದನು.

ತೇನ ಬಾಣೇನ ಮಹತಾ ಪ್ರದ್ಯುಮ್ನಃ ಸಮರೇ ಸ್ಥಿತಃ ।
ಜತ್ರುದೇಶೇ ಭೃಶಂ ವಿದ್ಧೋ ವ್ಯವಾಸೀದದ್ ರಥೋತ್ತಮೇ ॥೨೧॥

ಯುದ್ಧದಲ್ಲಿ ಆ ದೊಡ್ಡ ಬಾಣದಿಂದ ಪ್ರದ್ಯುಮ್ನನು ಕಂಠದೇಶದಲ್ಲಿ ಚೆನ್ನಾಗಿ ಹೊಡೆಯಲ್ಪಟ್ಟವನಾಗಿ ತನ್ನ ಶ್ರೇಷ್ಠವಾದ ರಥದಲ್ಲಿ ಕುಸಿದನು.

ತಂ ಸ ವಿದ್ಧ್ವಾ ತು ರಾಜೇಂದ್ರ ಸಾಲ್ವೋ ರುಗ್ಮಿಣಿನಂದನಮ್ ।
ನನಾದ ಸಿಂಹನಾದಂ ಚ ನಾದೇನಾಪೂರಯನ್ ಮಹೀಮ್ ॥೨೨॥

ರಾಜೇಂದ್ರನೇ! ಸಾಲ್ವನು ರುಗ್ಮಿಣಿಯ ಸುತನನ್ನು ತನ್ನಬಾಣದಿಂದ ಹೊಡೆದು ಸಿಂಹನಾದವನ್ನು ಮಾಡಿ ತನ್ನ ನಾದದಿಂದ ಭೂಮಿಯನ್ನೆಲ್ಲಾ ತುಂಬಿದನು.

ತತೋ ಮೋಹಂ ಸಮಾಪನ್ನೇ ತನಯೇ ಮಮ ಭಾರತ ।
ಮುಮೋಚ ಬಾಣಾಂಸ್ತ್ವರಿತಃ ಪುನರನ್ಯಾನ್ ದುರಾತ್ಮವಾನ್ ॥೨೩॥

ಎಲೈ ಭಾರತನೇ! ನನ್ನ ಪುತ್ರನು ಮೂರ್ಛೆಯನ್ನು ಹೊಂದುತ್ತಿರಲು ದುರಾತ್ಮನಾದ ಸಾಲ್ವನು ಶೀಘ್ರವಾಗಿ ಬೇರೆ ಬಾಣಗಳನ್ನು ಪ್ರಯೋಗಿಸಿದನು.

**ಸ ತೈರಭಿಹತೋ ಬಾಣೈರ್ಬಹುಭಿಸ್ತೇನ ಮೋಹಿತಃ ।**
**ನಿಶ್ಚೇಷ್ಟಃ ಕೌರವಶ್ರೇಷ್ಠ ಪ್ರದ್ಯುಮ್ನೋಽಭೂದ್ ರಣಾಜಿರೇ ॥೨೪॥**

ಎಲೈ ಕೌರವ ಶ್ರೇಷ್ಠನೇ! ಅಂತಹ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಪ್ರದ್ಯುಮ್ನನು ಮೂರ್ಛೆಯನ್ನು ಹೊಂದಿ ಯುದ್ಧಭೂಮಿಯಲ್ಲಿ ನಿಶ್ಚೇಷ್ಟನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾ ವೈಯಾಸಿಕ್ಯಾಂ
ವನಪರ್ವಣಿ ಪಂಚದಶೋಽಧ್ಯಾಯಃ ॥
॥ ಕೈರಾತಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★★★★★

## ಹದಿನಾರನೆಯ ಅಧ್ಯಾಯ

(ಸಾರಥಿಯಿಂದ ಪ್ರದ್ಯುಮ್ನನ. ಅಪಯಾನ ಪ್ರಜ್ಞೆಯನ್ನು ಮರಳಿಪಡೆದು ಯುದ್ಧಮಾಡಿ ಪ್ರದ್ಯುಮ್ನನಿಂದ ಸಾಲ್ವನ ಪರಾಜಯ. ಸಾಲ್ವನ ಅಪಯಾನ.)

**ವಾಸುದೇವಃ**

**ಸಾಲ್ವಬಾಣಾರ್ದಿತೇ ತಸ್ಮಿನ್ ಪ್ರದ್ಯುಮ್ನೇ ರಥಿನಾಂ ವರೇ ।**
**ವೃಷ್ಣಯೋ ಭಗ್ನಸಂಕಲ್ಪಾ ವಿವ್ಯಥುಃ ಪೃತನಾಮುಖೇ ॥೧॥**

ರಥಿಕರಲ್ಲಿ ಶ್ರೇಷ್ಠನಾದ ಪ್ರದ್ಯುಮ್ನನು ಸಾಲ್ವಬಾಣದಿಂದ ಪೀಡಿಸಲ್ಪಡುತ್ತಿರಲು ಸೈನ್ಯದ ಮುಂಭಾಗದಲ್ಲಿದ್ದ ವೃಷ್ಣಿಗಳೆಲ್ಲರೂ ಭಗ್ನಸಂಕಲ್ಪರಾಗಿ ವ್ಯಥೆಯನ್ನು ಪಟ್ಟರು.

**ಹಾಹಾಕೃತಮಭೂತ್ ಸರ್ವಂ ವೃಷ್ಣ್ಯಂಧಕಬಲಂ ತದಾ ।**
**ಪ್ರದ್ಯುಮ್ನೇ ಪತಿತೇ ರಾಜನ್ ಸಾಲ್ವಃ ಪ್ರಮುದಿತೋಽಭವತ್ ॥೨॥**

ಪ್ರದ್ಯುಮ್ನನು ಪತಿತನಾಗುತ್ತಿರಲು ವೃಷ್ಣ್ಯಂಧಕ ಸೈನ್ಯದಲ್ಲೆಲ್ಲಾ ಹಾಹಾಕಾರ ಉಂಟಾಯಿತು. ಆಗ ಸಾಲ್ವನು ಸಂತೋಷಗೊಂಡನು.

ತಂ ತಥಾ ಮೋಹಿತಂ ದೃಷ್ಟ್ವಾ ಸಾರಥಿರ್ಜವನೈರ್ಹಯೈಃ ।
ರಣಾದಪಾಹರತ್ ತೂರ್ಣಂ ಶಿಕ್ಷಿತೋ ದಾರುಕಿಸ್ತದಾ ॥೩॥

ದಾರುಕನಿಂದ ಶಿಕ್ಷಿತನಾದ ಪ್ರದ್ಯುಮ್ನನ ಸಾರಥಿಯು ಮೂರ್ಛೆಹೋದ ಪ್ರದ್ಯುಮ್ನನನ್ನು ನೋಡಿ ಶೀಘ್ರಗಾಮಿಯಾದ ಹಯಗಳಿಂದ ಅವನನ್ನು ಬೇಗ ರಣಾಂಗಣದಿಂದ ಹೊರಗೆ ಕರೆದುಕೊಂಡು ಹೋದನು.

ನಾತಿದೂರಾಪಯಾತೇ ತು ರಥೇ ರಥಿವರಸ್ತತಃ ।
ಧನುರ್ಗೃಹೀತ್ವಾ ಯಂತಾರಂ ಲಬ್ಧಸಂಜ್ಞೋಽಬ್ರವೀದಿದಮ್ ॥೪॥

ಸ್ವಲ್ಪದೂರ ಹೋಗುವಷ್ಟರಲ್ಲೇ ರಥಿಶ್ರೇಷ್ಠನಾದ ಪ್ರದ್ಯುಮ್ನನು ಪ್ರಜ್ಞೆಯನ್ನು ಮರಳಿಪಡೆದು ರಥದಲ್ಲಿ ಕುಳಿತು ಧನುಸ್ಸನ್ನು ಹಿಡಿದು ಸಾರಥಿಯನ್ನು ಕುರಿತು ಹೀಗೆ ಹೇಳಿದನು.

ಸೌತೇ ಕಿಂ ತೇ ವ್ಯವಸಿತಂ ಕಸ್ಮಾದ್ ಯಾಸಿ ಪರಾಙ್ಮುಖಃ ।
ನೈಷ ವೃಷ್ಣಿಪ್ರವೀರಾಣಾಮಾಹವೇ ಧರ್ಮ ಉಚ್ಯತೇ ॥೫॥

ಸೂತಪುತ್ರನೇ! ಏನುಮಾಡಲು ನಿಶ್ಚಯಿಸಿದ್ದೀಯೆ? ರಣಪರಾಙ್ಮುಖವಾಗಿ ಏಕೆ ಹೋಗುತ್ತಿದ್ದೀಯೆ? ವೃಷ್ಣಿವೀರರಿಗೆ ಯುದ್ಧದಲ್ಲಿ ಇದು ಧರ್ಮವಲ್ಲ.

ಕಚ್ಚಿತ್ ಸೌತೇ ನ ತೇ ಮೋಹಃ ಸಾಲ್ವಂ ದೃಷ್ಟ್ವಾ ಮಹಾಹವೇ ।
ವಿಷಾದೋ ವಾ ರಣಂ ದೃಷ್ಟ್ವಾ ಬ್ರೂಹಿ ಮೇ ತ್ವಂ ಯಥಾತಥಮ್ ॥೬॥

ಸೂತಪುತ್ರನೇ! ಮಹಾಯುದ್ಧದಲ್ಲಿ ಸಾಲ್ವನನ್ನು ನೋಡಿ ನಿನಗೇನಾದರೂ ಮೋಹ ಉಂಟಾಗಿಲ್ಲವಷ್ಟೇ ? ಅಥವಾ ಯುದ್ಧವನ್ನು ನೋಡಿ ವಿಷಾದ ಉಂಟಾಯಿತೇ? ನನಗೆ ನಿಜವಾಗಿ ಹೇಳು.

ಸೂತಃ

ಜಾನಾರ್ದನೇ ನ ಮೇ ಮೋಹೋ ನಾಪಿ ಮಾಂ ಭಯಮಾವಿಶತ್ ।
ಅತಿಭಾರಂ ತು ತೇ ಮನ್ಯೇ ಸಾಲ್ವಂ ಕೇಶವನಂದನ ॥೭॥

ಜನಾರ್ದನನ ಪುತ್ರನೇ! ನನಗೆ ಮೋಹವಾಗಲೀ ಭಯವಾಗಲೀ ಉಂಟಾಗಲಿಲ್ಲ. ಕೇಶವನಂದನನೇ! ಸಾಲ್ವನು ನಿನಗೆ ಮೀರಿದವನು ಎಂದು ನಾನು ತಿಳಿದೆ.

ಸೋಽಪಯಾಮಿ ರಣೇ ವೀರ ಬಲವಾನೇಷ ಪಾಪಕೃತ್ ।
ಮೋಹಿತಶ್ಚ ರಣೇ ಶೂರೋ ರಕ್ಷ್ಯಃ ಸಾರಥಿನಾ ರಥೀ ॥೮॥

ವೀರನೇ! ಈ ಪಾಪಿಯು ಬಲಿಷ್ಠನಾದವನು. ಆದ್ದರಿಂದ ಅಪಯಾನವನ್ನು ಮಾಡುತ್ತಿದ್ದೇನೆ. ಶೂರನಾದ ರಥಿಯು ಮೂರ್ಛೆಗೆ ಒಳಗಾದರೆ ಸಾರಥಿಯಿಂದ ರಕ್ಷಿಸಲ್ಪಡಬೇಕು.

ಆಯುಷ್ಮಾನ್ ಹಿ ಮಯಾ ನಿತ್ಯಂ ರಕ್ಷಿತವ್ಯಸ್ತ್ವಯಾಽಪ್ಯಹಮ್ ।
ರಕ್ಷಿತವ್ಯೋ ರಣೇ ನಿತ್ಯಮಿತಿ ಮತ್ವಾಽಪಯಾಮ್ಯಹಮ್ ॥೯॥

ಚಿರಂಜೀವಿಯೇ! ಯುದ್ಧದಲ್ಲಿ ನಾನು ನಿನ್ನನ್ನು ಯಾವಾಗಲೂ ರಕ್ಷಿಸಬೇಕು. ನೀನೂ ಸಹ ನನ್ನನ್ನು ರಕ್ಷಿಸಬೇಕು. ಎಂದು ತಿಳಿದು ಅಪಯಾನವನ್ನು ಮಾಡುತ್ತಿದ್ದೇನೆ.

ಏಕಶ್ಚಾಸಿ ಮಹಾಬಾಹೋ ಬಹವಶ್ಚಾಪಿ ದಾನವಾಃ ।
ನ ಸಮಂ ರೌಗ್ಮಿಣೇಯಾಹಮಿತಿ ಮತ್ವಾಽಪಯಾಮಿ ಚ ॥೧೦॥

ಮಹಾಬಾಹುವೇ! ನೀನು ಒಬ್ಬನೇ ಇದ್ದೀಯೆ. ದಾನವರಾದರೋ ಅನೇಕರಿದ್ದಾರೆ. ರುಗ್ಮಿಣಿಯ ಪುತ್ರನೇ! ಇದು ಸಮವಾದ ಯುದ್ಧವಲ್ಲವೆಂದು ತಿಳಿದು ನಾನು ಅಪಯಾನವನ್ನು ಮಾಡುತ್ತಿದ್ದೇನೆ.

ಏವಂ ಬ್ರುವತಿ ಸೂತೇ ತು ತದಾ ಮಕರಕೇತುಮಾನ್ ।
ಉವಾಚ ಸೂತಂ ಕೌರವ್ಯ ಸನ್ನಿವರ್ತ್ಯ ರಥಂ ಪುನಃ ॥೧೧॥

ಕೌರವ್ಯನೇ! ಸೂತನು ಹೀಗೆ ಹೇಳುತ್ತಿರಲು ಮಕರಧ್ವಜನಾದ ಪ್ರದ್ಯುಮ್ನನು ರಥವನ್ನು ತಿರುಗಿಸಿ ಸೂತನನ್ನು ಕುರಿತು ಹೇಳಿದನು.

ದಾರುಕಾತ್ಮಜ ಮೈವಂ ತ್ವಂ ಪುನಃ ಕಾರ್ಷೀಃ ಕಥಂಚನ ।
ಅಪಯಾನಂ ರಣಾತ್ ಸೌತೇ ಜೀವತೋ ಮಮ ಕರ್ಹಿಚಿತ್ ॥೧೨॥

ದಾರುಕಪುತ್ರನಾದ ಸೂತನೇ, ಇನ್ನೊಮ್ಮೆ ಹೀಗೆ ನಾನು ಬದುಕಿರುವಾಗ ಯಾವ ಕಾರಣದಿಂದಲೂ ಯುದ್ಧದಿಂದ ಅಪಯಾನವನ್ನು ಮಾಡಬೇಡ.

ನಾಸೌ ವೃಷ್ಣಿಕುಲೇ ಜಾತೋ ಯೋ ವೈ ತ್ಯಜತಿ ಸಂಗರಮ್ ।
ಯಶ್ಚಾಪಿ ಪತಿತಂ ಹಂತಿ ತವಾಸ್ಮೀತಿ ಚ ವಾದಿನಮ್ ॥೧೩॥

ತಥಾ ಸ್ತ್ರಿಯಂ ವೈ ಯೋ ಹಂತಿ ವೃದ್ಧಾನ್ ಬಾಲಾಂಸ್ತಥೈವ ಚ ।
ವಿರಥಂ ಮುಕ್ತಕೇಶಂ ಚ ಭಗ್ನಶಸ್ತ್ರರಥಂ ತಥಾ ॥೧೪॥

ವೃಷ್ಣಿಕುಲದಲ್ಲಿ ಜನಿಸಿ ಯುದ್ಧದಿಂದ ಹಿಮ್ಮೆಟ್ಟಿದವರು ಯಾರೂ ಇಲ್ಲ. ಹಾಗೆಯೇ ಕೆಳಗೆಬಿದ್ದವರನ್ನು ಕೊಲ್ಲುವವರೂ, ನಾನು ನಿನ್ನವನು ಎಂದು ಶರಣಾಗತರಾಗುವವರನ್ನು ಕೊಲ್ಲುವವರೂ, ಸ್ತ್ರೀಯರನ್ನು ಕೊಲ್ಲುವವರೂ ವೃದ್ಧರನ್ನು ಮತ್ತು ಬಾಲರನ್ನು ಕೊಲ್ಲುವವರೂ ರಥವಿಲ್ಲದವನನ್ನು ತಲೆಕೆದರಿದವನನ್ನು ರಥ ಮತ್ತು ಶಸ್ತ್ರಗಳನ್ನು ಮುರಿದವನನ್ನು ಕೊಲ್ಲುವವರೂ ವೃಷ್ಣಿಕುಲದಲ್ಲಿ ಯಾರೂ ಇಲ್ಲ.

ತ್ವಂ ಚ ಸೂತಕುಲೇ ಜಾತೋ ವಿನೀತಃ ಸೂತಕರ್ಮಣಿ ।
ವ್ರತಂ ಜಾನಾಸಿ ವೃಷ್ಣೀನಾಮಾಹವೇಷ್ವನಿವರ್ತಿನಾಮ್ ॥೧೫॥

ನೀನಾದರೋ ಸೂತಕುಲದಲ್ಲಿ ಜನಿಸಿ ಸೂತನ ಕರ್ತವ್ಯಗಳಲ್ಲಿ ಶಿಕ್ಷಿಸಲ್ಪಟ್ಟಿದ್ದೀಯೆ. ಯುದ್ಧದಲ್ಲಿ ಅಪಯಾನವನ್ನು ಮಾಡದಿರುವ ವೃಷ್ಣಿಗಳ ವ್ರತವನ್ನು ತಿಳಿದಿದ್ದೀಯೆ.

ಸ ಜಾನನ್ ಚರಿತಂ ಕೃತ್ಸ್ನಂ ವೃಷ್ಣೀನಾಂ ಪೃತನಾಮುಖೇ ।
ಅಪಯಾನಂ ಪುನಃ ಸೌತೇ ನೈವಂ ಕಾರ್ಷೀಃ ಕಥಂಚನ ॥೧೬॥

ಹೀಗೆ ವೃಷ್ಣಿಗಳ ಸಮಗ್ರವಾದ ಚರಿತ್ರೆಯನ್ನು ತಿಳಿದ ನೀನು ಇನ್ನೊಮ್ಮೆ ಯಾವ ಕಾರಣದಿಂದಲೂ ಸೇನಾಮುಖದಿಂದ ಹೀಗೆ ಅಪಯಾನವನ್ನು ಮಾಡಬೇಡ.

ಅಪಯಾತಂ ಹತಂ ಪೃಷ್ಠೇ ಭೀರುಂ ರಣಪಲಾಯಿನಮ್ ।
ಗದಾಗ್ರಜೋ ದುರಾಧರ್ಷಃ ಕಿಂ ಮಾಂ ವಕ್ಷ್ಯತಿ ಮಾಧವಃ ॥೧೭॥

ಯುದ್ಧದಿಂದ ಓಡಿ ಹೋಗಿ ಅಪಯಾನವನ್ನುಮಾಡಿ ಬೆನ್ನಿನಲ್ಲಿ ಏಟುತಿಂದ ಭಯಗ್ರಸ್ತನಾದ ನನ್ನನ್ನು ಕುರಿತು ಎಂದೂ ಪರಾಭವವನ್ನು ಹೊಂದದ ಗದಾಗ್ರಜನಾದ ಕೃಷ್ಣನು ಏನು ಹೇಳುವನು?

ಕೇಶವಸ್ಯಾಗ್ರಜೋ ವಾऽಪಿ ನೀಲವಾಸಾ ಮದೋತ್ಕಟಃ ।
ಕಿಂ ವಕ್ಷ್ಯತಿ ಮಹಾಬಾಹುರ್ಬಲದೇವಃ ಸಮಾಗತಃ ॥೧೮॥

ಕೃಷ್ಣನ ಅಣ್ಣನಾದ ನೀಲಾಂಬರನಾದ ಮದೋತ್ಕಟನಾದ ಮಹಾಬಾಹುವಾದ ಬಲರಾಮನೂ ಸಹ ಹಿಂದಿರುಗಿ ಬಂದು ಏನು ಹೇಳುವನು?

ಕಿಂ ವಕ್ಷ್ಯತಿ ಶಿನೇರ್ನಪ್ತಾ ನರಸಿಂಹೋ ಮಹಾರಥಃ ।
ಅಪಯಾತಂ ರಣಾತ್ ಸೌತೇ ಸಾಂಬಶ್ಚ ಸಮಿತಿಂಜಯಃ ॥೧೯॥

ಚಾರುದೇಷ್ಣಶ್ಚ ದುರ್ಧರ್ಷಸ್ತಥೈವ ಗದಸಾರಣೌ ।
ಅಕ್ರೂರಶ್ಚ ಮಹಾಬಾಹುಃ ಕಿಂ ಮಾಂ ವಕ್ಷ್ಯತಿ ಸಾರಥೇ ॥೨೦॥

ಸೂತಪುತ್ರನೇ, ಮಹಾರಥನೂ ನರರಲ್ಲಿ ಉತ್ತಮನೂ ಆದ ಸಾತ್ಯಕಿಯೂ ಯುದ್ಧದಲ್ಲಿ ಜಯವನ್ನುಗಳಿಸುವ ಸ್ವಭಾವವುಳ್ಳ ಸಾಂಬನೂ ಯುದ್ಧದಲ್ಲಿ ಅಪಯಾನವನ್ನು ಮಾಡಿದ ನನ್ನನ್ನು ನೋಡಿ ಏನು ಹೇಳುವರು? ದುರ್ಧರ್ಷನಾದ ಚಾರುದೇಷ್ಣನೂ ಗದಸಾರಣರೂ ಮಹಾಬಾಹುವಾದ ಅಕ್ರೂರನೂ ನನ್ನನ್ನು ನೋಡಿ ಏನನ್ನು ಹೇಳುವರು?

ಶೂರಂ ಸಂಭಾವಿನಂ ಸಂತಂ ನಿತ್ಯಂ ಪುರುಷಮಾನಿನಮ್ ।
ಸ್ತ್ರಿಯಶ್ಚ ವೃಷ್ಣಿವೀರಾಣಾಂ ಕಿಂ ಮಾಂ ವಕ್ಷ್ಯಂತಿ ಸಂಗತಾಃ ॥೨೧॥

ಪ್ರದ್ಯುಮ್ನೋऽಯಮಪಾಯಾತಿ ಭೀತಸ್ಯಕ್ತ್ವಾ ರಣಾಜಿರಮ್ ।
ಧಿಗೇನಮಿತಿ ವಕ್ಷ್ಯಂತಿ ನ ತು ವಕ್ಷ್ಯಂತಿ ಸಾಧ್ವಿತಿ ॥೨೨॥

ಶೂರನೂ ಆತ್ಮಗೌರವವುಳ್ಳವನೂ ನಿತ್ಯವೂ ತನ್ನ ಪೌರುಷದಲ್ಲಿ ಅಭಿಮಾನವುಳ್ಳವನೂ ಆದ ನನ್ನನ್ನು ನೋಡಿ ನನ್ನ ಬಳಿಗೆ ಬಂದು ವೃಷ್ಣಿವೀರರ ಪತ್ನಿಯರು ಏನು ಹೇಳುವರು? ಈ ಪ್ರದ್ಯುಮ್ನನು ಭಯದಿಂದ ಯುದ್ಧಭೂಮಿಯನ್ನು ತ್ಯಜಿಸಿ ಅಪಯಾನವನ್ನು ಮಾಡಿ ಬರುತ್ತಿದ್ದಾನೆ. ಇವನಿಗೆ ಧಿಕ್ಕಾರವಿರಲಿ ಎಂದು ಹೇಳುವರು. ಒಳ್ಳೆಯ ಕೆಲಸವನ್ನು ಮಾಡಿದ್ದಾನೆ ಎಂದು ಯಾರೂ ಹೇಳುವುದಿಲ್ಲ.

ಧಿಗ್ವಚಃ ಪರಿಹಾಸೋ ವಾ ಮಮ ವಾ ಮದ್ವಿಧಸ್ಯ ವಾ ।
ಮೃತ್ಯುತೋऽಭ್ಯಧಿಕಃ ಸೌತೇ ತಸ್ಮಾನ್ನಾ ವ್ಯಪಯಾಃ ಪುನಃ ॥೨೩॥

ಸೂತಪುತ್ರನೇ, ನನಗಾಗಲೀ ಅಥವಾ ನನ್ನಂತಹವನಿಗಾಗಲೀ ಧಿಕ್ಕಾರವಚನವಾಗಲೀ ಅಥವಾ ಪರಿಹಾಸವಾಗಲೀ ಮರಣಕ್ಕಿಂತಲೂ ಹೆಚ್ಚು ದುಃಖದಾಯಕವಾದುದು. ಆದುದರಿಂದ ಇನ್ನೊಮ್ಮೆ ಅಪಯಾನವನ್ನು ಮಾಡಬೇಡ.

ಭಾರಂ ಹಿ ಮಯಿ ಸಂನ್ಯಸ್ಯ ಯಾತೋ ಮಧುನಿಹಾ ಹರಿಃ ।
ಯಜ್ಞಂ ಭಾರತಸಿಂಹಸ್ಯ ಸ ನ ಶಕ್ಷ್ಯೇ ಪಲಾಯಿತುಮ್ ॥೨೪॥

ಮಧುಸೂದನನಾದ ಕೃಷ್ಣನು ರಕ್ಷಣೆಯ ಭಾರವನ್ನು ನನಗೆ ಒಪ್ಪಿಸಿ ಭರತಶ್ರೇಷ್ಠನಾದ ಧರ್ಮರಾಜನ ಯಜ್ಞಕ್ಕೆ ಹೋಗಿದ್ದಾನೆ. ನಾನು ಯುದ್ಧ ಭೂಮಿಯಿಂದ ಪಲಾಯನಮಾಡುವುದು ಸಾಧ್ಯವಿಲ್ಲ.

ಕೃತವರ್ಮಾ ಮಯಾ ವೀರೋ ನಿರ್ಯಾಸ್ಯನ್ನೇವ ವಾರಿತಃ ।
ಸಾಲ್ವಂ ನಿವಾರಯಿಷ್ಯೇಽಹಂ ತಿಷ್ಠ ತ್ವಮಿತಿ ಸೂತಜ ॥೨೫॥

ಎಲೈ ಸೂತಪುತ್ರನೇ! ವೀರನಾದ ಕೃತವರ್ಮನು ಯುದ್ಧಕ್ಕೆ ಹೊರಡುತ್ತಿರುವಾಗಲೇ ನಾನು ಸಾಲ್ವನನ್ನು ತಡೆಯುತ್ತೇನೆ ನೀನು ಇಲ್ಲಿಯೇ ನಿಲ್ಲು ಎಂದು ಹೇಳಿ ಅವನನ್ನು ತಡೆದೆ.

ಸ ಚ ಸಂಭಾವಯನ್ಮಾಂ ವೈ ನಿವೃತ್ತೋ ಹೃದಿಕಾತ್ಮಜಃ ।
ತಂ ಸಮೇತ್ಯ ರಣಂ ತ್ಯಕ್ತ್ವಾ ಕಿಂ ವಕ್ಷ್ಯಾಮಿ ಮಹಾರಥಮ್ ॥೨೬॥

ಹೃದಿಕಾತ್ಮಜನಾದ ಆ ಕೃತವರ್ಮನು ನನಗೆ ಸತ್ಕಾರವನ್ನು ಮಾಡಿ ಹಿಂದಿರುಗಿದನು. ಯುದ್ಧವನ್ನು ಬಿಟ್ಟು ಆ ಮಹಾರಥವನ್ನು ಸಂಧಿಸಿ ನಾನು ಏನು ಹೇಳಲಿ?

ಉಪಯಾಂತಂ ದುರಾಧರ್ಷಂ ಶಂಕಚಕ್ರಗದಾಧರಮ್ ।
ಪುರುಷಂ ಪುಂಡರೀಕಾಕ್ಷಂ ಕಿಂ ವಕ್ಷ್ಯಾಮಿ ಮಹಾದ್ಭುತಮ್ ॥೨೭॥

ದುರಾಧರ್ಷನಾದ ಶಂಖಚಕ್ರಗದಾಧಾರಿಯಾದ ಮಹಾ ಅದ್ಭುತಪುರುಷನಾದ ಪುಂಡರೀಕಾಕ್ಷನಾದ ಕೃಷ್ಣನು ಹಿಂದಿರುಗಿ ಬಂದಾಗ ನಾನು ಏನು ಹೇಳಲಿ?

ಸಾತ್ಯಕಿಂ ಬಲದೇವಂ ಚ ಯೇ ಚಾನ್ಯೇಽಂಧಕವೃಷ್ಣಯಃ ।
ಮಯಾ ಸ್ಪರ್ಧಂತಿ ಸತತಂ ಕಿಂ ನು ವಕ್ಷ್ಯಾಮಿ ತಾನಹಮ್ ॥೨೮॥

ಸಾತ್ಯಕಿ ಬಲರಾಮ ಮತ್ತು ಇನ್ನೂ ಎಷ್ಟೋ ಅಂಧಕವೃಷ್ಣಿಗಳು ನನ್ನ ಜೊತೆಯಲ್ಲಿ ಯಾವಾಗಲೂ ಸ್ಪರ್ಧಿಸುತ್ತಾರೆ. ನಾನು ಅವರನ್ನು ಕುರಿತು ಏನು ಹೇಳಲಿ?

ತ್ಯಕ್ತ್ವಾ ರಣಮಿಮಂ ಸೌತೇ ಪೃಷ್ಠತೋಽಭ್ಯಾಹತಃ ಶರೈಃ ।
ತ್ವಯಾಽಪನೀತೋ ವಿವಶೋ ನ ಜೀವೇಯಂ ಕಥಂಚನ ॥೨೯॥

ಸೂತಪುತ್ರನೇ! ರಣಾಂಗಣವನ್ನು ಪರಿತ್ಯಜಿಸಿ ಶತ್ರುಗಳಿಂದ ಬೆನ್ನಿನಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟು ನೀನು ವಿವಶನಾಗಿ ಅಪಯಾನವನ್ನು ಮಾಡಿದರೆ ನಾನು ಬದುಕಿರಲಾರೆ.

ಕದಾ ಮಾಂ ಸೂತಪುತ್ರ ತ್ವಂ ಜಾನೀಷೇ ವಾ ಭಯಾರ್ದಿತಮ್ ।
ಅಪಯಾತಂ ರಣಂ ಹಿತ್ವಾ ಯಥಾ ಕಾಪುರುಷಸ್ತಥಾ ॥೩೦॥

ಸೂತಪುತ್ರನೇ! ನಾನು ನೀಚಪುರುಷನಂತೆ ಯುದ್ಧವನ್ನು ಬಿಟ್ಟು ಭಯದಿಂದ ಅಪಯಾನವನ್ನು ಮಾಡಿರುವುದನ್ನು ನೀನು ಯಾವಾಗ ನೋಡಿದ್ದೀಯೆ?

ನ ಚ ಯುಕ್ತಂ ತವ ತ್ಯಕ್ತುಂ ಸಂಗ್ರಾಮಂ ದಾರುಕಾತ್ಮಜ ।
ಮಯಿ ಯುದ್ಧಾರ್ಥಿನಿ ಭೃಶಂ ಸ ತ್ವಂ ಯಾಹಿ ಯತೋ ರಣಮ್ ॥

ದಾರುಕಾತ್ಮಜನೇ! ನಾನು ಯುದ್ಧಾರ್ಥಿಯಾಗಿರುವಾಗ ನೀನು ಯುದ್ಧಭೂಮಿಯನ್ನು ತ್ಯಜಿಸುವುದು ಸರ್ವಥಾ ಯುಕ್ತವಲ್ಲ. ನೀನು ಈಗ ರಣಾಂಗಣಕ್ಕೆ ಹೋಗು.

ಶ್ರೀಭಗವಾನ್

ಏವಮುಕ್ತಸ್ತು ಕೌಂತೇಯ ಸೂತಪುತ್ರಸ್ತದಾ ಮೃಧೇ ।
ಪ್ರದ್ಯುಮ್ನಮಬ್ರವೀತ್ ಶ್ಲಕ್ಷ್ಣಂ ಮಧುರಂ ವಾಕ್ಯಮಂಜಸಾ ॥೩೨॥

ಕೌಂತೇಯನೇ! ಹೀಗೆ ಹೇಳಲ್ಪಟ್ಟ ದಾರುಕಾತ್ಮಜನು ಆಗ ಯುದ್ಧದ ವಿಷಯದಲ್ಲಿ ಪ್ರದ್ಯುಮ್ನನನ್ನು ಕುರಿತು ಮಧುರವಾದ ಮತ್ತು ನಯವಾದ ಮಾತುಗಳನ್ನು ಚೆನ್ನಾಗಿ ಹೇಳಿದನು.

ನ ಮೇ ಭಯಂ ರೌಗ್ಮಿಣೇಯ ಸಂಗ್ರಾಮೇ ಯಚ್ಛತೋ ಹಯಾನ್ ।
ಯುದ್ಧಜ್ಞಶ್ಚಾಸ್ಮಿ ವೃಷ್ಣೀನಾಂ ನಾತ್ರ ಕಿಂಚಿದತೋಽನ್ಯಥಾ ॥೩೩॥

ರುಗ್ಮಿಣಿಪುತ್ರನೇ! ನನಗೆ ಯುದ್ಧದಲ್ಲಿ ಅಶ್ವಗಳನ್ನು ನಿಯಂತ್ರಿಸಲು ಯಾವ ಭಯವೂ ಇಲ್ಲ. ವೃಷ್ಣಿಗಳ ಯುದ್ಧದ ರೀತಿಯನ್ನು ನಾನು ಬಲ್ಲೆ. ಈ ವಿಷಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಆಯುಷ್ಮನ್ನುಪದೇಶಸ್ತು ಸಾರಥ್ಯೇ ಶಿಕ್ಷಿತೈಃ ಕೃತಃ ।
ಸರ್ವಾಪತ್ಸು ರಥೀ ರಕ್ಷ್ಯಃ ತ್ವಂ ಚಾಪಿ ಭೃಶಪೀಡಿತಃ ॥೩೪॥

ಚಿರಂಜೀವಿಯೇ! ಸಾರಥ್ಯವಿದ್ಯೆಯಲ್ಲಿ ನಾನು ಚೆನ್ನಾಗಿ ತಿಳಿದವರಿಂದ ಶಿಕ್ಷಿಸಲ್ಪಟ್ಟಿದ್ದೇನೆ. ಎಲ್ಲಾ ಆಪತ್ತುಗಳಲ್ಲಿಯೂ ರಥಿಕನು ರಕ್ಷಿಸಲ್ಪಡಬೇಕು. ನೀನಾದರೋ ಬಹಳ ಪೀಡೆಗೆ ಒಳಗಾಗಿದ್ದೆ.

ತ್ವಂ ಹಿ ಸಾಲ್ವಪ್ರಮುಕ್ತೇನ ಪತ್ರಿಣಾಽಭಿಹತೋ ಭೃಶಮ್ ।
ಕಶ್ಮಲಾಭಿಹತೋ ವೀರ ತತೋಽಹಮಪಯಾತವಾನ್ ॥೩೫॥

ವೀರನೇ! ನೀನಾದರೋ ಸಾಲ್ವನು ಪ್ರಯೋಗಿಸಿದ ಬಾಣದಿಂದ ಬಹಳವಾಗಿ ಹೊಡೆಯಲ್ಪಟ್ಟವನಾಗಿ ಮೂರ್ಛೆಯನ್ನು ಹೊಂದಿದ್ದಿ. ಆದ್ದರಿಂದ ನಾನು ಅಪಯಾನವನ್ನು ಮಾಡಿದೆ.

ಸ ತ್ವಂ ಸಾತ್ವತಮುಖ್ಯಾದ್ಯ ಲಬ್ಧಸಂಜ್ಞೋ ಯದೃಚ್ಛಯಾ ।
ಪಶ್ಯ ಮೇ ಹಯಸಂಯಾನೇ ಶಿಕ್ಷಾಂ ಕೇಶವನಂದನ ॥೩೬॥

ಸಾತ್ವತಶ್ರೇಷ್ಠನೇ! ಈಗ ನೀನು ದೈವಾನುಗ್ರಹದಿಂದ ಪ್ರಜ್ಞೆಯನ್ನು ಮರಳಿಪಡೆದಿದ್ದೀಯೆ. ಕೇಶವ ಪುತ್ರನೇ!ಅಶ್ವಗಳನ್ನು ನಿಯಂತ್ರಿಸುವುದರಲ್ಲಿ ನನ್ನ ಚಾತುರ್ಯವನ್ನು ನೋಡು.

ದಾರುಕಾಚ್ಚಾಹಮುತ್ಪನ್ನೋ ಯಥಾವಚ್ಚೈವ ಶಿಕ್ಷಿತಃ ।
ವೀತಭೀಃ ಪ್ರವಿಶಾಮ್ಯೇತಾಂ ಸಾಲ್ವಸ್ಯ ಮಹತೀಂ ಚಮೂಮ್ ॥೩೭॥

ನಾನು ದಾರುಕನ ಪುತ್ರ. ಚೆನ್ನಾಗಿ ವಿದ್ಯೋಪದೇಶವನ್ನು ಪಡೆದಿದ್ದೇನೆ. ಸಾಲ್ವನ ಈ ದೊಡ್ಡ ಸೈನ್ಯವನ್ನು ನಿರ್ಭಯವಾಗಿ ಪ್ರವೇಶಿಸುತ್ತೇನೆ.

ಏವಮುಕ್ತ್ವಾ ತತೋ ವೀರೋ ಹಯಾನ್ ಸಂಚೋದ್ಯ ಸಂಯುಗೇ ।
ರಶ್ಮಿಭಿಶ್ಚ ಸಮುದ್ಯಮ್ಯ ಜವೇನಾಭ್ಯಪತತ್ ತದಾ ॥೩೮॥

ಹೀಗೆ ಹೇಳಿ ಆ ವೀರನು ಅಶ್ವಗಳನ್ನು ಪ್ರೇರಿಸಿ ಕಡಿವಾಣಗಳನ್ನು ಹಿಡಿದು ವೇಗದಿಂದ ಶತ್ರುಸೈನ್ಯವನ್ನು ಪ್ರವೇಶಿಸಿದನು.

ಮಂಡಲಾನಿ ವಿಚಿತ್ರಾಣಿ ದಕ್ಷಿಣಾನಿ ಚ ಸವ್ಯತಃ ।
ಸವ್ಯಾನಿ ಚ ವಿಚಿತ್ರಾಣಿ ದಕ್ಷಿಣಾನಿ ಚ ಸರ್ವಶಃ ॥೩೯॥

ಯುದ್ಧಭೂಮಿಯಲ್ಲಿ ವಿಚಿತ್ರವಾದ ಪ್ರದಕ್ಷಿಣಾಕಾರವಾದ ಮತ್ತು ಅಪ್ರದಕ್ಷಿಣಾಕಾರವಾದ ಮಾರ್ಗಗಳನ್ನು ಎಲ್ಲ ಕಡೆಗಳಲ್ಲಿಯೂ ರಚಿಸುತ್ತಾ (ಪ್ರವೇಶಿಸಿದನು.)

ಪ್ರತೋದೇನಾಹತಾ ರಾಜನ್ ರಶ್ಮಿಭಿಶ್ಚ ಸಮುದ್ಯತಾಃ ।
ಉತ್ಪತಂತ ಇವಾಕಾಶೇ ಬಭೂವುಸ್ತೇ ಹಯೋತ್ತಮಾಃ ॥೪೦॥

ರಾಜನೇ! ಚಾವಟಿಯಿಂದ ಹೊಡೆಯಲ್ಪಟ್ಟ ಕಡಿವಾಣಗಳಿಂದ ನಿಯಂತ್ರಿಸಲ್ಪಟ್ಟ ಆ ಶ್ರೇಷ್ಠವಾದ ಅಶ್ವಗಳು ಆಕಾಶದಲ್ಲಿ ಹಾರುವಂತೆ ನೆಗೆದವು.

ತೇ ಹಸ್ತಲಾಘವೋಪೇತಂ ವಿಜ್ಞಾಯ ನೃಪ ದಾರುಕಿಮ್ ।
ದಹ್ಯಮಾನಾ ಇವ ತದಾ ಪಸ್ಪೃಶುಶ್ಚರಣೈರ್ಮಹೀಮ್ ॥೪೧॥

ಆ ಅಶ್ವಗಳು ದಾರುಕಿಯ ಹಸ್ತಲಾಘವವನ್ನು ಗಮನಿಸಿ ಅಗ್ನಿಸ್ಪರ್ಶಮಾಡಿದಂತೆ ಪಾದಗಳಿಂದ ಭೂಮಿಯನ್ನು ಮುಟ್ಟುತ್ತಿದ್ದವು.

ಸೋಽಪಸವ್ಯಾಂ ಚಮೂಂ ತಸ್ಯ ಸಾಲ್ವಸ್ಯ ಭರತರ್ಷಭ ।
ಚಕಾರ ನಾತಿಯತ್ನೇನ ತದದ್ಭುತಮಿವಾಭವತ್ ॥೪೨॥

ಭರತಶ್ರೇಷ್ಠನೇ! ಅವನು ಸಾಲ್ವನ ಆ ಸೈನ್ಯವನ್ನು ಬಹಳ ಪ್ರಯತ್ನವಿಲ್ಲದಯೇ ತನ್ನ ಎಡಕ್ಕೆ ತಿರುಗಿಸಿ ಮುಂದೆ ಹೋದನು. ಅದು ಅದ್ಭುತವಾಗಿ ತೋರುತ್ತಿತ್ತು.

ಅಮೃಷ್ಯಮಾಣೋಽಪಸವ್ಯಂ ಸಾಲ್ವಃ ಸಮಿತಿದಾರುಣಃ ।
ಯಂತಾರಮಸ್ಯ ಸಹಸಾ ತ್ರಿಭಿರ್ಬಾಣೈಃ ಸಮರ್ದಯತ್ ॥೪೩॥

ತನ್ನ ಸೈನ್ಯದ ಈ ಎಡಕ್ಕೆ ತಿರುಗಿದ್ದನ್ನು ಸಹಿಸದ ಯುದ್ಧದಲ್ಲಿ ಭಯಂಕರನಾದ ಸಾಲ್ವನು ಪ್ರದ್ಯುಮ್ನನ ಸಾರಥಿಯನ್ನು ಮೂರು ಬಾಣಗಳಿಂದ ಬಹಳವಾಗಿ ಪೀಡಿಸಿದನು.

ದಾರುಕಸ್ಯ ಸುತಸ್ತಂ ತು ಬಾಣವೇಗಮಚಿಂತಯನ್ ।
ಭೂಯ ಏವ ಮಹಾಬಾಹುಃ ಪ್ರಯಯೌ ಹಯಸಮ್ಮಿತಃ ॥೪೪॥

ದಾರುಕಪುತ್ರನಾದರೋ ಆ ಬಾಣಗಳ ವೇಗವನ್ನು ಗಮನಿಸದೆ ಮಹಾಬಾಹುವಾದ ಅವನು ಅಶ್ವಗಳನ್ನು ನಿಯಂತ್ರಿಸಿ ಪುನಃ ಮುಂದಕ್ಕೆ ಹೋದನು.

ತತೋ ಬಾಣಾನ್ ಬಹುತರಾನ್ ಪುನರೇವ ಸ ಸೌಭರಾಟ್ ।
ಮುಮೋಚ ತನಯೇ ವೀರ ಮಮ ರುಗ್ಮಿಣೀನಂದನೇ ॥೪೫॥

ವೀರನೇ! ಆಗ ಆ ಸೌಭಪತಿಯು ಪುನಃ ಅನೇಕವಿಧವಾದ ಬಾಣಗಳನ್ನು ರುಗ್ಮಿಣಿಪುತ್ರನಾದ ನನ್ನ ತನಯನ ಮೇಲೆ ಪ್ರಯೋಗಿಸಿದನು.

ತಾನಪ್ರಾಪ್ತಾನ್ ಶಿತೈರ್ಬಾಣೈಶ್ಚಿಚ್ಛೇದ ಪರವೀರಹಾ ।
ರೌಗ್ಮಿಣೇಯಃ ಸ್ಮಿತಂ ಕೃತ್ವಾ ದರ್ಶಯನ್ ಪಾಣಿಲಾಘವಮ್ ॥೪೬॥

ಆ ಬಾಣಗಳು ತನ್ನನ್ನು ತಲುಪುವುದಕ್ಕೆ ಮೊದಲೇ ಪರವೀರರನ್ನು ಕೊಲ್ಲುವ ರುಗ್ಮಿಣಿನಂದನನು ನಕ್ಕು ತನ್ನ ಹಸ್ತಲಾಘವವನ್ನು ತೋರಿಸುತ್ತಾ ತನ್ನ ಬಾಣಗಳಿಂದ ಅವುಗಳನ್ನು ಛೇದಿಸಿದನು.

ಭಗ್ನಾನ್ ದೃಷ್ಟ್ವಾ ತು ತಾನ್ ಬಾಣಾನ್ ಪ್ರದ್ಯುಮ್ನೇನ ಸ ಸೌಭರಾಟ್ ।
ಆಸುರೀಂ ದಾರುಣೀಂ ಮಾಯಾಮಾಸ್ಥಾಯ ವ್ಯಸೃಜಚ್ಛರಾನ್ ॥೪೭॥

ತನ್ನ ಬಾಣಗಳು ಪ್ರದ್ಯುಮ್ನನಿಂದ ಕತ್ತರಿಸಲ್ಪಟ್ಟಿದ್ದನ್ನು ನೋಡಿದ ಸೌಭಪತಿಯು ಘೋರವಾದ ಆಸುರೀಮಾಯೆಯನ್ನು ಆಶ್ರಯಿಸಿ ಬಾಣಗಳನ್ನು ಪ್ರಯೋಗಿಸಿದನು.

ಪ್ರಯುಜ್ಯಮಾನಂ ತಂ ಜ್ಞಾತ್ವಾ ದೈತೇಯಾಸ್ತ್ರಂ ಮಹಾಬಲಃ ।
ಬ್ರಹ್ಮಾಸ್ತ್ರೇಣಾಂತರಾ ಚ್ಛಿತ್ತ್ವಾ ಮುಮೋಚಾನ್ಯಾಂಶ್ಚ ಪತ್ರಿಣಃ ॥೪೮॥

ದೈತೇಯಾಸ್ತ್ರವನ್ನು ಪ್ರಯೋಗಿಸಿದ್ದನ್ನು ತಿಳಿದ ಮಹಾಬಲನಾದ ಪ್ರದ್ಯುಮ್ನನು ಮಧ್ಯದಲ್ಲಿಯೇ ಅದನ್ನು ಬ್ರಹ್ಮಾಸ್ತ್ರದಿಂದ ಕತ್ತರಿಸಿ ಇನ್ನೂ ಅನೇಕ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತೇ ತದಸ್ತ್ರಂ ವಿಧೂಯಾಥ ವಿವಿಶೂ ರುಧಿರಾಶನಾಃ ।
ಶಿರಸ್ಯುರಸಿ ವಕ್ತ್ರೇ ಚ ಸ ಮುಮೋಹ ಪಪಾತ ಚ ॥೪೯॥

ರಕ್ತಪಿಪಾಸುವಾದ ಆ ಬಾಣಗಳು ಸಾಲ್ವನ ಅಸ್ತ್ರಗಳನ್ನು ನಿವಾರಿಸಿ ಅವನ ಶಿರಸ್ಸಿನಲ್ಲಿಯೂ ಎದೆಯಲ್ಲಿಯೂ ಮತ್ತು ಮುಖದಲ್ಲಿಯೂ ಪ್ರವೇಶಿಸಿದವು. ಸಾಲ್ವನು ಮೂರ್ಛೆಯನ್ನು ಹೊಂದಿ ಕೆಳಗೆ ಬಿದ್ದನು.

ತಸ್ಮಿನ್ ನಿಪತಿತೇ ಕ್ಷುದ್ರೇ ಸಾಲ್ವೇ ಬಾಣಪ್ರಪೀಡಿತೇ ।
ರೌಗ್ಮಿಣೇಯೋಽಪರಂ ಬಾಣಂ ಸಂದಧೇ ಶತ್ರುತಾಪನಮ್ ॥೫೦॥

ಆ ಕ್ಷುದ್ರನಾದ ಸಾಲ್ವನು ಬಾಣಗಳಿಂದ ಪೀಡಿತನಾಗಿ ನೆಲಕ್ಕೆ ಉರುಳುತ್ತಿರಲು ರುಗ್ಮಿಣಿಯ ಪುತ್ರನು ಶತ್ರುನಾಶಕರವಾದ ಇನ್ನೊಂದು ಬಾಣವನ್ನು ಹೂಡಿದನು.

ತಮರ್ಚಿತಂ ಸರ್ವದಾಶಾರ್ಹಮುಖ್ಯೈಃ
ಆಶೀರ್ಭಿರಗ್ನಿಜ್ವಲನಪ್ರಕಾಶಮ್ ।
ದೃಷ್ಟ್ವಾ ಶರಂ ಜ್ಯಾಮಭಿನೀಯಮಾನಂ
ಬಭೂವ ಹಾಹಾರುತಮಂತರಿಕ್ಷಮ್ ॥೫೧॥

ಸರ್ವದಾಶಾರ್ಹಶ್ರೇಷ್ಠರ ಆಶೀರ್ವಾದಗಳಿಂದ ಸತ್ಕರಿಸಲ್ಪಟ್ಟ, ಅಗ್ನಿಯ ಜ್ವಾಲೆಯಂತೆ ಹೊಳೆಯುವ, ಅವನು ಬಾಣವನ್ನು ಹೆದೆಯಲ್ಲಿ ಸಂಧಾನವನ್ನು ಮಾಡಿ ಹೆದೆಯನ್ನು ಹಿಂದಕ್ಕೆ ಎಳೆಯುತ್ತಿರುವುದನ್ನು ನೋಡಿ ಅಂತರಿಕ್ಷವೆಲ್ಲಾ ಹಾಹಾಕಾರದಿಂದ ತುಂಬಿಹೋಯಿತು.

ತತೋ ದೇವಗಣಾಃ ಸರ್ವೇ ಸೇಂದ್ರಾಃ ಸಹಗಣೇಶ್ವರಾಃ ।
ನಾರದಂ ಪ್ರೇಷಯಾಮಾಸುಃ ಶ್ವಸನಂ ಚ ಮಹಾಬಲಮ್ ।
ತೌ ರೌಗ್ಮಿಣೇಯಮಾಗಮ್ಯ ವಚೋಽಬ್ರೂತಾಂ ದಿವೌಕಸಃ ॥೫೨॥

ಆಗ ಎಲ್ಲಾ ದೇವಗಣಗಳೂ ಇಂದ್ರನಿಂದ ಸಹಿತರಾದ ಅನೇಕ ಗಣಾಧ್ಯಕ್ಷರೂ ನಾರದರನ್ನೂ ಮತ್ತು ಮಹಾಬಲನಾದ ವಾಯುವನ್ನೂ ಪ್ರದ್ಯುಮ್ನನ ಬಳಿಗೆ ಕಳುಹಿಸಿದರು. ಅವರಿಬ್ಬರೂ ರುಗ್ಮಿಣಿಯ ಪುತ್ರನ ಬಳಿಗೆ ಬಂದು ದೇವತೆಗಳ ಮಾತನ್ನು ತಿಳಿಸಿದರು.

ನೈಷ ವಧ್ಯಸ್ತ್ವಯಾ ವೀರ ಸಾಲ್ವರಾಜಃ ಕಥಂಚನ ।
ಸಂಹರಸ್ವ ಪುನರ್ಬಾಣಮವಧ್ಯೋಽಯಂ ತ್ವಯಾ ರಣೇ ।
ಏತಸ್ಯ ಹಿ ಶರಸ್ಯಾಜೌ ನಾವಧ್ಯೋಽಸ್ತಿ ಪುಮಾನ್ ಕ್ವಚಿತ್ ॥೫೩॥

ವೀರನೇ! ಈ ಸಾಲ್ವರಾಜನು ನಿನ್ನಿಂದ ವಧ್ಯನಲ್ಲ. ನೀನು ಬಾಣವನ್ನು ಹಿಂದಕ್ಕೆ ತೆಗೆದುಕೋ. ಯುದ್ಧದಲ್ಲಿ ಅವನು ನಿನಗೆ ಅವಧ್ಯನಾದವನು. ನೀನು ಹೂಡಿರುವ ಈ ಬಾಣಕ್ಕೆ ಯಾವ ಪುರುಷನೂ ಅವಧ್ಯನಾಗುವುದಿಲ್ಲ.

ಮೃತ್ಯುರಸ್ಯ ಮಹಾಬಾಹೋ ರಣೇ ದೇವಕಿನಂದನಃ ।
ಕೃಷ್ಣಃ ಸಂಕಲ್ಪಿತೋ ಧಾತ್ರಾ ತನ್ಮಿಥ್ಯಾ ನ ಭವೇದಿತಿ ॥೫೪॥

ಎಲೈ ಮಹಾಬಾಹುವೇ! ದೇವಕಿನಂದನನಾದ ಕೃಷ್ಣನು ಇವನ ಮೃತ್ಯುವೆಂದು ಬ್ರಹ್ಮದೇವರ ಸಂಕಲ್ಪವಿದೆ. ಅದು ಸುಳ್ಳಾಗಬಾರದು.

ತತಃ ಪರಮಸಂಹೃಷ್ಟಃ ಪ್ರದ್ಯುಮ್ನಃ ಶರಮುತ್ತಮಮ್ ।
ಸಂಜಹಾರ ಧನುಃಶ್ರೇಷ್ಠಾತ್ ತೂಷ್ಣೀಂ ಚೈವ ನ್ಯವೇಶಯತ್ ॥೫೫॥

ಆಗ ಬಹಳ ಸಂತೋಷದಿಂದ ಕೂಡಿದ ಪ್ರದ್ಯುಮ್ನನು ತನ್ನ ಶ್ರೇಷ್ಠವಾದ ಬಾಣವನ್ನು ಧನುಸ್ಸಿನಿಂದ ತೆಗೆದು ಬತ್ತಳಿಕೆಯಲ್ಲಿ ಇಟ್ಟನು.

ತತ ಉತ್ಥಾಯ ರಾಜೇಂದ್ರ ಸಾಲ್ವಃ ಪರಮದುರ್ಮನಾಃ ।
ವ್ಯಪಾಯಾತ್ ಸಬಲಸ್ತೂರ್ಣಂ ಪ್ರದ್ಯುಮ್ನಶರಪೀಡಿತಃ ॥೫೬॥

ಅನಂತರ ರಾಜೇಂದ್ರನೇ! ಪ್ರದ್ಯುಮ್ನನ ಬಾಣಗಳಿಂದ ಪೀಡಿತನಾದ ಸಾಲ್ವನು ಬಹಳ ವಿಷಾದವನ್ನು ಹೊಂದಿ ತನ್ನ ಸೈನ್ಯದ ಜೊತೆಯಲ್ಲಿ ಶೀಘ್ರವಾಗಿ ರಣದಿಂದ ಅಪಯಾನವನ್ನು ಮಾಡಿದನು.

ಸ ದ್ವಾರಕಾಂ ಪರಿತ್ಯಜ್ಯ ಸಾಲ್ವೋ ವೃಷ್ಣಿಭಿರರ್ದಿತಃ ।
ಸೌಭಮಾಸ್ಥಾಯ ರಾಜೇಂದ್ರ ದಿವಮಾಚಕ್ರಮೇ ತದಾ ॥೫೮॥

ಎಲೈ ರಾಜೇಂದ್ರನೇ! ವೃಷ್ಣಿಗಳಿಂದ ಪೀಡೆಗೆ ಒಳಗಾದ ಸಾಲ್ವನು ದ್ವಾರಕಾಪಟ್ಟಣವನ್ನು ತ್ಯಜಿಸಿ ಸೌಭವನ್ನು ಏರಿ ಆಗ ಆಕಾಶಕ್ಕೆ ಹಾರಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷೋಡಶೋಽಧ್ಯಾಯಃ ॥
॥ ಕೈರಾತಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★★★★★

## ಹದಿನೇಳನೆಯ ಅಧ್ಯಾಯ

(ಕೃಷ್ಣನಿಂದ ಯುಧಿಷ್ಠಿರನನ್ನು ಕುರಿತು ತಾನು ಸಾಲ್ವನ ಜೊತೆಯಲ್ಲಿ ಮಾಡಿದ ಯುದ್ಧದ ವರ್ಣನೆ.)

### ಶ್ರೀಭಗವಾನ್

ತತಸ್ತೇನಾಗಮಂ ಮುಕ್ತಾಂ ಆನರ್ತನಗರೀಂ ನೃಪ ।
ಮಹಾಕ್ರತೌ ರಾಜಸೂಯೇ ನಿವೃತ್ತೇ ತವ ಭಾರತ ॥೧॥

ಎಲೈ ರಾಜನೇ! ಭಾರತನೇ! ನಿನ್ನ ರಾಜಸೂಯ ಮಹಾಯಾಗವು ಮುಗಿದ ನಂತರ ನಾನು ಸಾಲ್ವನಿಂದ ಮುಕ್ತವಾದ ದ್ವಾರಕೆಗೆ ಬಂದೆನು.

ಅಪಶ್ಯಂ ದ್ವಾರಕಾಂ ಚಾಹಂ ಮಹಾರಾಜ ಹತತ್ವಿಷಮ್ ।
ನಿಃಸ್ವಾಧ್ಯಾಯವಷಟ್‌ಕಾರಾಂ ನಿರ್ಭೂಷಣವರಸ್ತ್ರಿಯಮ್ ॥೨॥

ಮಹಾರಾಜನೇ! ದ್ವಾರಕಾಪಟ್ಟಣವು ತನ್ನ ಕಾಂತಿಯನ್ನು ಕಳೆದುಕೊಂಡು ಸ್ವಾಧ್ಯಾಯವಷಟ್‌ಕಾರ (ವೇದಾಧ್ಯಯನ, ಯಜ್ಞ) ರಹಿತವಾಗಿ ಭೂಷಣಗಳಿಲ್ಲದ ಉತ್ತಮ ವನಿತೆಯಂತೆ ಇರುವುದನ್ನು ನೋಡಿದೆನು.

ಅನಭಿಜ್ಞೇಯರೂಪಾಣಿ ದ್ವಾರಕೋಪವನಾನಿ ಚ ।
ದೃಷ್ಟ್ವಾ ಶಂಕೋಪಪನ್ನೋಽಹಮಪೃಚ್ಛಂ ಹೃದಿಕಾತ್ಮಜಮ್ ॥೩॥

ದ್ವಾರಕೆಯ ಉಪವನಗಳೆಲ್ಲವೂ ಯಾವುದೂ ಗುರುತು ಸಿಗುವಂತೆ ಇರಲಿಲ್ಲ. ಅದನ್ನು ನೋಡಿ ಸಂಶಯಗ್ರಸ್ತನಾಗಿ ಕೃತವರ್ಮನನ್ನು ಕೇಳಿದೆನು.

ಅಸ್ವಸ್ಥನರನಾರೀಕಮಿದಂ ವೃಷ್ಣಿಪುರಂ ಭೃಶಮ್ ।
ಕಿಮಿದಂ ನರಶಾರ್ದೂಲ ಶ್ರೋತುಮಿಚ್ಛಾಮಹೇ ವಯಮ್ ॥೪॥

ನರಶಾರ್ದೂಲನೇ! ಈ ವೃಷ್ಣಿನಗರವು ಬಹಳ ಅಸ್ವಸ್ಥರಾದ ಪುರುಷ ಮತ್ತು ಸ್ತ್ರೀಯರಿಂದ ಕೂಡಿದೆ. ಇದಕ್ಕೆ ಏನು ಕಾರಣವೆಂದು ನಾನುಕೇಳಲು ಬಯಸುತ್ತೇನೆ.

ಏವಮುಕ್ತಸ್ತು ಸ ಮಯಾ ವಿಸ್ತರೇಣೇದಮಬ್ರವೀತ್ ।
ರೋಧಂ ಮೋಕ್ಷಂ ಚ ಸಾಲ್ವೇನ ಹಾರ್ದಿಕ್ಯೋ ವೃಷ್ಣಿಸತ್ತಮಃ ॥೫॥

ನನ್ನಿಂದ ಹೀಗೆ ಕೇಳಲ್ಪಟ್ಟವನಾಗಿ ಹೃದಿಕನ ಮಗನಾದ ವೃಷ್ಣಿಶ್ರೇಷ್ಠನಾದ ಕೃತವರ್ಮನು ವಿಸ್ತಾರವಾಗಿ ಸಾಲ್ವನು ಮುತ್ತಿಗೆ ಹಾಕಿದುದನ್ನೂ ಮತ್ತು ನಗರವನ್ನು ಬಿಟ್ಟುಹೋದುದನ್ನೂ ತಿಳಿಸಿದನು.

ತತೋಽಹಂ ಕೌರವಶ್ರೇಷ್ಠ ಶ್ರುತ್ವಾಽಪ್ರಿಯಮನುತ್ತಮಮ್ ।
ವಿನಾಶೇ ಸಾಲ್ವರಾಜಸ್ಯ ತದೈವಾಕರವಂ ಮತಿಮ್ ॥೬॥

ಎಲೈ ಕೌರವಶ್ರೇಷ್ಠನೇ! ಆಗ ನಾನು ಈ ಘೋರವಾದ ಅಪ್ರಿಯವಾರ್ತೆಯನ್ನು ಕೇಳಿ ಸಾಲ್ವರಾಜನನ್ನು ಕೊಲ್ಲಬೇಕೆಂದು ಆಗಲೇ ಮನಸ್ಸಿನಲ್ಲಿ ನಿರ್ಧರಿಸಿದೆ.

ತತೋಽಹಂ ಭರತಶ್ರೇಷ್ಠ ಸಮಾಶ್ವಾಸ್ಯ ಪುರೇ ಜನಮ್ ।
ರಾಜಾನಮಾಹುಕಂ ಚೈವ ತಥೈವಾನಕದುಂದುಭಿಮ್ ॥೭॥

ಸರ್ವ ವೃಷ್ಣಿಪ್ರವೀರಾಂಶ್ಚ ಹರ್ಷಯನ್ನಬ್ರುವಂ ತದಾ ।
ಅಪ್ರಮಾದಃ ಸದಾ ಕಾರ್ಯೋ ನಗರೇ ಯಾದವರ್ಷಭಾಃ ॥೮॥

ಎಲೈ ಭರತಶ್ರೇಷ್ಠನೇ! ಅನಂತರ ನಾನು ಪಟ್ಟಣದಲ್ಲಿದ್ದ ಎಲ್ಲಾ ಜನರನ್ನೂ ಆಹುಕರಾಜನನ್ನೂ ಹಾಗೆಯೇ ವಸುದೇವನನ್ನೂ ಮತ್ತು ಎಲ್ಲಾ ವೃಷ್ಣಿವೀರರನ್ನೂ ಸಮಾಧಾನಪಡಿಸಿ ಅವರಿಗೆ ಸಂತೋಷವಾಗುವಂತೆ ಮಾತನಾಡಿದೆನು. ಯಾದವರ್ಷಭರೇ! ಪಟ್ಟಣದಲ್ಲಿ ಯಾವಾಗಲೂ ಎಚ್ಚರಿಕೆಯಿಂದ ಇರಬೇಕು.

ಸಾಲ್ವರಾಜವಿನಾಶಾಯ ಪ್ರಯಾತಂ ಮಾಂ ನಿಬೋಧತ ।
ನಾಹತ್ವಾ ತಂ ನಿವರ್ತಿಷ್ಯೇ ಪುರೀಂ ದ್ವಾರವತೀಂ ಪ್ರತಿ ॥೯॥

ನಾನು ಸಾಲ್ವರಾಜನ ವಧೆಗಾಗಿ ಹೋಗುತ್ತಿದ್ದೇನೆ ಎಂದು ತಿಳಿಯಿರಿ. ಅವನನ್ನು ಕೊಲ್ಲದೆ ನಾನು ದ್ವಾರವತಿಯ ಪಟ್ಟಣಕ್ಕೆ ಹಿಂದಿರುಗುವುದಿಲ್ಲ.

ಸಸಾಲ್ವಂ ಸೌಭನಗರಂ ಹತ್ವಾ ದ್ರಷ್ಟಾಸ್ಮಿ ವಃ ಪುನಃ ।
ತ್ರಿಸಾಮಾ ಹನ್ಯತಾಮೇಷಾ ದುಂದುಭಿಃ ಶತ್ರುಭೀಷಣೇ ॥೧೦॥

ನಾನು ಸಾಲ್ವನನ್ನೂ ಅವನ ಸೌಭಪಟ್ಟಣವನ್ನೂ ವಿನಾಶಮಾಡಿ ಪುನಃ ನಿಮ್ಮನ್ನು ನೋಡುವೆನು. ಶತ್ರು ಭಯಂಕರವಾದ ಈ ತ್ರಿಸಾಮ ಎಂಬ ನಗಾರಿಯು ಮೊಳಗಿಸಲ್ಪಡಲಿ.

ತೇ ಮಯಾऽऽಶ್ವಾಸಿತಾ ವೀರಾ ಯಥಾವದ್ ಭರತರ್ಷಭ ।
ಸರ್ವೇ ಮಾಮಬ್ರುವನ್ ಹೃಷ್ಟಾಃ ಪ್ರಯಾಹಿ ಜಹಿ ಶಾತ್ರವಾನ್ ॥೧೧॥

ಎಲೈ ಭರತರ್ಷಭನೇ! ನನ್ನಿಂದ ಯಥಾರ್ಥವಾಗಿ ಆಶ್ವಾಸಿತರಾದ ಆ ವೀರರೆಲ್ಲರೂ ನನ್ನನ್ನು ಕುರಿತು ಹೋಗಿ ಶತ್ರುಗಳನ್ನು ಸಂಹರಿಸು ಎಂದು ಸಂತೋಷದಿಂದ ಹೇಳಿದರು.

ತೈಃ ಪ್ರಹೃಷ್ಟಾತ್ಮಭಿರ್ವೀರೈರಾಶೀರ್ಭಿರಭಿನಂದಿತಃ ।
ವಾಚಯಿತ್ವಾ ದ್ವಿಜಶ್ರೇಷ್ಠಾನ್ ಪ್ರಣಮ್ಯ ಶಿರಸಾऽಭವಮ್ ॥೧೨॥

ಸಂತೋಷಗೊಂಡ ಮನಸ್ಸುಳ್ಳ ಆ ವೀರರ ಆಶೀರ್ವಾದಗಳಿಂದ ಅಭಿನಂದಿತನಾದ ನಾನು ಬ್ರಾಹ್ಮಣ ಶ್ರೇಷ್ಠರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಅವರಿಗೆ ಶಿರಸಾಪ್ರಣಾಮಗಳನ್ನು ಮಾಡಿದೆನು.

ಶೈಬ್ಯಸುಗ್ರೀವಯುಕ್ತೇನ ರಥೇನಾನಾದಯನ್ ದಿಶಃ ।
ಪ್ರಧ್ಮಾಪ್ಯ ಶಂಖಿಪ್ರವರಂ ಪಾಂಚಜನ್ಯಂ ಭಯಾವಹಮ್ ॥೧೩॥

ಪ್ರಯಾತೋಽಸ್ಮಿ ನರವ್ಯಾಘ್ರ ಬಲೇನ ಮಹತಾ ವೃತಃ ।
ಕ್ಲೃಪ್ತೇನ ಚತುರಂಗೇಣ ಬಲೇನ ಜಿತಕಾಶಿನಾ ॥೧೪॥

ಶೈಬ್ಯಸುಗ್ರೀವ ಎಂಬ ಹೆಸರಿನ ಕುದುರೆಗಳನ್ನು ಹೂಡಿದ ರಥದ ನಾದದಿಂದ ದಿಕ್ಕುಗಳನ್ನು ಪ್ರತಿಧ್ವನಿಸುತ್ತಾ ಶತ್ರುಭಯಂಕರವಾದ ಶ್ರೇಷ್ಠ ಶಂಖವಾದ ಪಾಂಚಜನ್ಯವನ್ನು ಊದುತ್ತಾ ಅಲ್ಲಿಂದ ಹೊರಟೆ. ಎಲೈ ನರವ್ಯಾಘ್ರನೇ! ಸಿದ್ಧವಾದ ದೊಡ್ಡ ಚತುರಂಗ ಸೈನ್ಯದಿಂದ ಯುಕ್ತನಾಗಿ ಜಯವನ್ನು ಬಯಸಿ ಅಲ್ಲಿಂದ ಹೊರಟೆ.

ಸಮತೀತ್ಯ ಬಹೂನ್ ದೇಶಾನ್ ಗಿರೀಂಶ್ಚ ಬಹುಪಾದಪಾನ್ ।
ಸರಾಂಸಿ ಸರಿತಶ್ಚೈವ ಮಾರ್ತಿಕಾವತಮಾಸದಮ್ ॥೧೫॥

ಅನೇಕ ದೇಶಗಳನ್ನೂ ಪರ್ವತಗಳನ್ನೂ ಅನೇಕ ವೃಕ್ಷಗಳನ್ನೂ ಸರೋವರಗಳನ್ನೂ ನದಿಗಳನ್ನೂ ದಾಟಿ ಸಾಲ್ವರಾಜನ ಪಟ್ಟಣವಾದ ಮಾರ್ತಿಕಾವತವನ್ನು ತಲುಪಿದೆ.

ತತ್ರಾಶ್ರೌಷಂ ನರವ್ಯಾಘ್ರ ಸಾಲ್ವಂ ನಗರಮಂತಿಕಾತ್ ।
ಪ್ರಯಾಂತಂ ಸೌಭಮಾಸ್ಥಾಯ ತಮಹಂ ಪೃಷ್ಠತೋಽನ್ವಯಾಮ್ ।
ದೃಷ್ಟವಾನಸ್ಮಿ ರಾಜೇಂದ್ರ ಸಾಲ್ವರಾಜಮಥಾಂತಿಕೇ ॥೧೬॥

ನರವ್ಯಾಘ್ರನೇ! ಅಲ್ಲಿ ನಾನು ಸಾಲ್ವನು ನಗರ ಸಮೀಪದಲ್ಲಿ ಸೌಭವನ್ನು ಏರಿ ಹೋಗುತ್ತಿದ್ದಾನೆ ಎಂದು ಕೇಳಿದೆ. ಎಲೈ ರಾಜೇಂದ್ರನೇ! ನಾನು ಅವನನ್ನು ಹಿಂಬಾಲಿಸಿ ಸಮೀಪದಿಂದ ಆ ಸಾಲ್ವರಾಜನನ್ನು ನೋಡಿದೆ.

ತತಃ ಸಾಗರಮಾಸಾದ್ಯ ಕುಕ್ಷೌ ತಸ್ಯ ಚಲೋರ್ಮಿಣಃ ।
ಸಮುದ್ರನಾಭ್ಯಾಂ ಸಾಲ್ವೋಽಭೂತ್ ಸೌಭಮಾಸ್ಥಾಯ ಶತ್ರುಹನ್ ॥

ಎಲೈ ಶತ್ರುಸಂಹಾರಕನೇ! ಅನಂತರ ಸಾಲ್ವನು ಸೌಭದಲ್ಲಿ ಕುಳಿತು ಸಾಗರವನ್ನು ತಲುಪಿ ಅಲೆಗಳಿಂದ ಚಂಚಲಿತವಾದ ಸಾಗರದ ಕುಕ್ಷಿಯಲ್ಲಿ ಸಮುದ್ರದ ಮಧ್ಯದಲ್ಲಿ ನೆಲೆಸಿದನು.

ಸ ಸಮಾಲೋಕ್ಯ ಸಹಸಾ ಸ್ಮಯನ್ನಿವ ಯುಧಿಷ್ಠಿರ ।
ಆಹ್ವಯಾಮಾಸ ದುಷ್ಟಾತ್ಮಾ ಯುದ್ಧಾಯೈವ ಮುಹುರ್ಮುಹುಃ ॥೧೮॥

ಯುಧಿಷ್ಠಿರನೇ! ಆ ದುಷ್ಟಾತ್ಮನು ಇದ್ದಕ್ಕಿದ್ದಂತೆ ನನ್ನನ್ನು ನೋಡಿ ನಗುತ್ತಾ ಯುದ್ಧಕ್ಕಾಗಿ ಪುನಃಪುನಃ ಆಹ್ವಾನ ಮಾಡಿದನು.

ಸ ಚಾಪಿ ಪಾಪಪ್ರಕೃತಿರ್ದೈತೇಯಾಪಶದೋ ನೃಪ ।
ಪರ್ಯವರ್ಷತ ದುರ್ಧರ್ಷಃ ಶರಧಾರಾಂ ಮಮೋಪರಿ ।
ಸೈನಿಕಾನ್ ಮಮ ಸೂತಂ ಚ ಹಯಾಂಶ್ಚ ಸಮವಾಕಿರತ್ ॥೧೯॥

ಎಲೈ ರಾಜನೇ! ಆ ಪಾಪಸ್ವಭಾವದ ದೈತೇಯಾಧಮನಾದರೂ ದುರ್ಧರ್ಷನಾಗಿ ನನ್ನ ಮೇಲೆ ಬಾಣಗಳ ಮಳೆಗಳನ್ನು ಕರೆದನು. ನನ್ನ ಸೈನಿಕರ ಮೇಲೂ ಸಾರಥಿ ಮತ್ತು ಅಶ್ವಗಳ ಮೇಲೆಯೂ ಬಾಣಗಳ ಮಳೆಗಳನ್ನು ಕರೆದನು.

ತಸ್ಯ ಶಾರ್ಙ್ಗವಿನಿರ್ಮುಕ್ತೈರ್ಬಹುಭಿರ್ಮರ್ಮಭೇದಿಭಿಃ ।
ಪುರಂ ನಾಸಾದ್ಯತ ಶರೈಸ್ತತೋ ಮಾಂ ರೋಷ ಆವಿಶತ್ ।
ಅಚಿಂತಯಂತಸ್ತು ಶರಾನ್ ವಯಂ ಯೋತ್ಸ್ಯಾಮ ಭಾರತ ॥೨೦॥

ನಾನು ಮರ್ಮಭೇದಿಗಳಾದ ಅನೇಕ ಬಾಣಗಳನ್ನು ಶಾರ್ಙ್ಗಧನುಸ್ಸಿನಿಂದ ಪ್ರಯೋಗಿಸಿದರೂ ಅವು ಯಾವವೂ ಅವನ ಪಟ್ಟಣವನ್ನು ತಲುಪಲಿಲ್ಲ. ಆಗ ನನಗೆ ರೋಷ ಉಂಟಾಯಿತು. ಎಲೈ ಭಾರತನೇ! ಅವನ ಬಾಣಗಳನ್ನು ಲೆಕ್ಕಿಸದೆ ನಾನು ಯುದ್ಧವನ್ನು ಮಾಡಿದೆ.

ತತಃ ಶತಸಹಸ್ರಾಣಿ ಶರಾಣಾಂ ನತಪರ್ವಣಾಮ್ ।
ಚಿಕ್ಷಿಪುಃ ಸಮರೇ ವೀರಾ ಮಯಿ ಸಾಲ್ವಪದಾನುಗಾಃ ॥೨೧॥

ಅನಂತರ ಸಾಲ್ವನ ಅನುಯಾಯಿಗಳಾದ ವೀರರಾದ ಸೈನಿಕರು ಬಾಗಿದ ತುದಿಯುಳ್ಳ ಹತ್ತಾರುಸಾವಿರ ಬಾಣಗಳನ್ನು ಯುದ್ಧದಲ್ಲಿ ನನ್ನ ಮೇಲೆ ಎಸೆದರು.

ತೇ ಹಯಾನ್ ಮೇ ರಥಂ ಚೈವ ಧ್ವಜಂ ದಾರುಕಮೇವ ಚ ।
ಛಾದಯಾಮಾಸುರಸುರಾಃ ಸಾಲ್ವರಾಜೇನ ಚೋದಿತಾಃ ॥೨೨॥

ಸಾಲ್ವರಾಜನಿಂದ ಪ್ರೇರಿತರಾದ ಆ ಅಸುರರು ನನ್ನ ಕುದುರೆಗಳನ್ನೂ ರಥವನ್ನೂ ಧ್ವಜವನ್ನೂ ಮತ್ತು ದಾರುಕನನ್ನೂ ಬಾಣಗಳ ಮಳೆಯಿಂದ ಮುಚ್ಚಿಹಾಕಿದರು.

ನ ಹಯಾ ನ ರಥೋ ವೀರ ನ ಧ್ವಜೋ ನ ಚ ದಾರುಕಃ ।
ಅದೃಶ್ಯಂತ ಶರೈಶ್ಛನ್ನಾಸ್ತಥಾऽಹಂ ಸೈನಿಕಾಶ್ಚ ಮೇ ॥೨೩॥

ಎಲೈ ವೀರನೇ! ನನ್ನ ಅಶ್ವಗಳಾಗಲೀ ರಥವಾಗಲೀ ಧ್ವಜವಾಗಲೀ ದಾರುಕನಾಗಲೀ ಎಲ್ಲವೂ ಬಾಣಗಳಿಂದ ಮುಚ್ಚಲ್ಪಟ್ಟು ಯಾವುದೂ ಕಾಣಲಿಲ್ಲ. ಹಾಗೆಯೇ ನಾನು ಮತ್ತು ನನ್ನ ಸೈನಿಕರು ಮುಚ್ಚಲ್ಪಟ್ಟು ಕಾಣಲಿಲ್ಲ.

ತತೋऽಹಮಪಿ ಕೌರವ್ಯ ಶರಾಣಾಮಯುತಾನ್ ಬಹೂನ್ ।
ಅಭಿಮಂತ್ರ್ಯ ತೇನ ಧನುಷಾ ದಿವ್ಯೇನ ವಿಧಿನಾऽಕ್ಷಿಪಮ್ ॥೨೪॥

ಎಲೈ ಕೌರವ್ಯನೇ! ಆಗ ನಾನೂ ಸಹ ಅನೇಕ ಹತ್ತಾರುಸಾವಿರ ಬಾಣಗಳನ್ನು ದಿವ್ಯಮಂತ್ರಗಳಿಂದ ಅಭಿಮಂತ್ರಿಸಿ ಧನುಸ್ಸಿನಿಂದ ಪ್ರಯೋಗಮಾಡಿದೆ.

ನ ತತ್ರ ವಿಷಯಸ್ತಾ ಸ್ತೀನ್ಮಮ ಸೈನ್ಯಸ್ಯ ಭಾರತ ।
ಖೇ ವಿಪಕ್ತಂ ಹಿ ತತ್ಸೈನ್ಯಂ ಕ್ರೋಶಮಾತ್ರಾತ್ ತದಾऽಭವತ್ ॥೨೫॥

ಎಲೈ ಭಾರತನೇ! ಅಲ್ಲಿ ಯಾರೂ ನನ್ನ ಸೈನ್ಯದ ಬಾಣಗಳಿಗೆ ಗುರಿಯಾಗಲಿಲ್ಲ. ಆಕಾಶದಲ್ಲಿದ್ದ ಸಾಲ್ವನ ಸೈನ್ಯವು ಒಂದು ಕ್ರೋಶದೂರ ಹಿಂದೆಕ್ಕೆ ಸರಿಯಿತು.

ತತಸ್ತೇ ಪ್ರೇಕ್ಷಕಾಃ ಸರ್ವೇ ದೇವಾ ಯೇ ದಿವಮಾಸ್ಥಿತಾಃ ।
ಹರ್ಷಯಾಮಾಸುರುಚ್ಚೈರ್ಮಾಂ ಸಿಂಹನಾದತಲಸ್ವನೈಃ ॥೨೬॥

ಆಗ ಆಕಾಶದಲ್ಲಿನಿಂತು ಪ್ರೇಕ್ಷಕರಾಗಿದ್ದ ದೇವತೆಗಳೆಲ್ಲರೂ ಸಿಂಹನಾದಗಳನ್ನೂ ಚಪ್ಪಾಳೆಯ ಶಬ್ದಗಳನ್ನೂ ಮಾಡಿ ನನ್ನನ್ನು ಬಹಳವಾಗಿ ಉತ್ಸಾಹಗೊಳಿಸಿದರು.

ಮತ್ಕಾರ್ಮುಕವಿನಿರ್ಮುಕ್ತಾ ಬಾಣಾಸ್ತೇ ವಾತರಂಹಸಃ ।
ಅಂಗೇಷು ರುಧಿರಾಭ್ಯಕ್ತಾ ವಿವಿಶುಃ ಶಲಭಾ ಇವ ॥೨೭॥

ನನ್ನ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ವಾಯುವೇಗವುಳ್ಳ ಆ ಬಾಣಗಳು ದೀಪದ ಹುಳುಗಳಂತೆ ಅವರ ದೇಹಗಳಲ್ಲಿ ರಕ್ತದಿಂದ ಲೇಪಿತವಾಗಿ ಪ್ರವೇಶಿಸಿದವು.

ತತೋ ಹಲಹಲಾಶಬ್ದಃ ಸೌಭಮಧ್ಯೇऽಭ್ಯವರ್ತತ ।
ವಧ್ಯತಾಂ ವಿಶಿಖೈಸ್ತೀಕ್ಷ್ಣೈಃ ಪತತಾಂ ಚ ಮಹಾರ್ಣವೇ ॥೨೮॥

ಅನಂತರ ಹರಿತವಾದ ಬಾಣಗಳಿಂದ ವಧಿಸಲ್ಪಟ್ಟು ದೊಡ್ಡ ಸಮುದ್ರದಲ್ಲಿ ಬೀಳುವ ಆ ಸೈನ್ಯಿಕರ ದೊಡ್ಡ ಹಾಹಾಕಾರ ಶಬ್ದವು ಸೌಭಮಧ್ಯದಲ್ಲಿ ಉಂಟಾಯಿತು.

ತೇ ನಿಕೃತ್ತಭುಜಸ್ಕಂಧಾಃ ಕಬಂಧಾಃ ಕ್ರೂರದರ್ಶನಾಃ ।
ನದಂತೋ ಭೈರವಾನ್ ನಾದಾನ್ ನಿಪತಂತಿ ಸ್ಮ ದಾನವಾಃ ।
ಪತಿತಾಸ್ತೇ ವಿಲಕ್ಷ್ಯಂತೇ ಸಮುದ್ರಾಂಭೋನಿವಾಸಿಭಿಃ ॥೨೯॥

ದಾನವರು ಭುಜ ಮತ್ತು ಕಂಠಗಳಲ್ಲಿ ಕತ್ತರಿಸಲ್ಪಟ್ಟು ಕಬಂಧ ರುಂಡವಿಲ್ಲದ ಮುಂಡಗಳು ಭಯಂಕರವಾಗಿ ಕಾಣಿಸುತ್ತಾ ಘೋರನಾದವನ್ನು ಮಾಡುತ್ತಾ ಸಮುದ್ರದೊಳಗೆ ಬೀಳುತ್ತಿದ್ದವು. ಅವು ಬೀಳುವುದನ್ನು ಸಮುದ್ರಜಲದಲ್ಲಿ ವಾಸಿಸುವವರು ನೋಡುತ್ತಿದ್ದರು.

ತತೋ ಗೋಕ್ಷೀರಕುಂದೇಂದುಮೃಣಾಲರಜತಪ್ರಭಮ್ ।
ಜಲಜಂ ಪಾಂಚಜನ್ಯಂ ಚ ಪ್ರಾಣೇನಾಹಮಪೂರಯಮ್ ॥೩೦॥

ಆಗ ಗೋಕ್ಷೀರದಂತೆ ಮಲ್ಲಿಗೆ ಪುಷ್ಪದಂತೆ ಚಂದ್ರನಂತೆ ಕಮಲದ ಎಳೆಯಂತೆ ಬೆಳ್ಳಿಯಂತೆ ಕಾಂತಿಯುಳ್ಳ ನನ್ನ ಪಾಂಚಜನ್ಯ ಶಂಖವನ್ನು ನಾನು ಗಟ್ಟಿಯಾಗಿ ಊದಿದೆನು.

ತಾನ್ ದೃಷ್ಟ್ವಾ ಪತಿತಾಂಸ್ತತ್ರ ಸಾಲ್ವಃ ಸೌಭಪತಿಸ್ತದಾ ।
ಮಾಯಾಯುದ್ಧೇನ ಮಹತಾ ಯೋಧಯಾಮಾಸ ಮಾಂ ಯುಧಿ ॥

ತನ್ನ ಸೈನ್ಯಿಕರು ಬೀಳುತ್ತಿರುವುದನ್ನು ನೋಡಿದ ಸೌಭಪತಿಯಾದ ಸಾಲ್ವನು ಆಗ ದೊಡ್ಡ ಮಾಯಾಯುದ್ಧವನ್ನು ಮಾಡಿ ನನ್ನ ಜೊತೆಯಲ್ಲಿ ಹೋರಾಡಿದನು.

ಅಸಯಃ ಶಕ್ತಿಮುಸಲಾಃ ಪ್ರಾಸರ್ಷ್ಟಿಪರಿಘಾಃ ಶರಾಃ ।
ತತೋ ಹುಳಹುಳಾಃ ಪ್ರಾಸಾ ಗದಾಶೂಲಪರಶ್ವಧಾಃ ।
ಪಟ್ಟಸಾಶ್ಚ ಮುಸುಂಡ್ಯಶ್ಚ ಪ್ರಪತಂತ್ಯನಿಶಂ ಮಯಿ ॥೩೨॥

ಖಡ್ಗಗಳು ಶಕ್ತ್ಯಾಯುಧಗಳು ಮುಸಲಗಳು ಪ್ರಾಸಗಳು ಋಷ್ಟಿಗಳು ಪರಿಘಗಳು ಬಾಣಗಳು ಹುಳಹುಳಗಳು ಗದೆಗಳು ಶೂಲಗಳು ಪರಶುಗಳು ಪಟ್ಟಸಗಳು ಮುಸುಂಡಿಗಳು ಎಲ್ಲವೂ ನನ್ನ ಮೇಲೆ ಸತತವಾಗಿ ಬಿದ್ದವು.

ತಾಮಹಂ ಮಾಯಯೈವಾಶು ಪ್ರತಿಗೃಹ್ಯ ವ್ಯನಾಶಯಮ್ ।
ತಸ್ಯಾಂ ಹತಾಯಾಂ ಮಾಯಾಯಾಂ ಗಿರಿಶೃಂಗೈರಯೋಧಯತ್ ॥೩೩॥

ಆ ಆಸುರೀಮಾಯೆಯನ್ನು ನಾನು ತಕ್ಷಣ ನನ್ನ ಮಾಯೆಯಿಂದಲೇ ಎದುರಿಸಿ ನಾಶಮಾಡಿದೆನು. ತನ್ನ ಮಾಯೆಯು ನಾಶಹೊಂದಿದ ಮೇಲೆ ಸಾಲ್ವನು ಗಿರಿಶೃಂಗಗಳಿಂದ ಯುದ್ಧವನ್ನು ಮಾಡಿದನು.

ತತೋಽಭವತ್ ತಮ ಇವ ಪ್ರಕಾಶ ಇವ ಚಾಭವತ್ ।
ದುರ್ದಿನಂ ಸುದಿನಂ ಚೈವ ಶೀತಮುಷ್ಣಂ ಚ ಭಾರತ ।
ಅಂಗಾರಪಾಂಸುವರ್ಷಂ ಚ ಶಸ್ತ್ರವೃಷ್ಟಿಶ್ಚ ಭಾರತ ॥೩೪॥

ಅನಂತರ ಇದ್ದಕ್ಕಿದ್ದಂತೆ ಕತ್ತಲೆ ಮತ್ತು ಪ್ರಕಾಶಗಳು ಉಂಟಾದವು. ಮೋಡಗಳು ಕವಿದವು ಮತ್ತು ಚದುರಿದವು. ಉಷ್ಣವಾಯಿತು ಮತ್ತು ಶೀತಲವಾಯಿತು. ಅಂಗಾರದ ಮಳೆಯೂ ಧೂಳಿನ ಮಳೆಯೂ ಮತ್ತು ಶಸ್ತ್ರಗಳ ಮಳೆಯೂ ನನ್ನ ಮೇಲೆ ಉಂಟಾಯಿತು.

ಏವಂ ಮಾಯಾಂ ವಿಕುರ್ವಾಣೋ ಯೋಧಯಾಮಾಸ ಮಾಂ ರಿಪುಃ ।
ವಿಜ್ಞಾಯ ತದಹಂ ಸರ್ವಂ ಮಾಯಯೈವ ವ್ಯನಾಶಯಮ್ ॥೩೫॥

ಹೀಗೆ ವಿಧವಿಧವಾದ ಮಾಯೆಯನ್ನು ಮಾಡುತ್ತಾ ಶತ್ರುವು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ನಾನು ಅದನ್ನು ತಿಳಿದು ಎಲ್ಲವನ್ನೂ ನನ್ನ ಮಾಯೆಯಿಂದಲೇ ನಾಶಮಾಡಿದೆನು.

ಯಥಾಕಾಲಂ ತು ಯುದ್ಧೇನ ವ್ಯಧಮಂ ಸರ್ವತಃ ಶರೈಃ ।
ತತೋ ವ್ಯೋಮ ಮಹಾರಾಜ ಶತಸೂರ್ಯಮಿವಾಭವತ್ ॥೩೬॥

ಶತಚಂದ್ರಂ ಚ ಕೌಂತೇಯ ಸಹಸ್ರಾಯುತತಾರಕಮ್ ।
ತತೋ ನಾಜ್ಞಾಯತ ತದಾ ದಿವಾರಾತ್ರಂ ತಥಾ ದಿಶಃ ॥೩೭॥

ತತೋಽಹಂ ಮೋಹಮಾಪನ್ನಃ ಪ್ರಜ್ಞಾಸ್ತ್ರಂ ಸಮಯೋಜಯಮ್ ।
ತತಸ್ತದಸ್ತ್ರಂ ಮಂತ್ರೇಣ ವಿಧೂತಂ ಶರಜಾಲವತ್ ॥೩೮॥

ಆ ಕಾಲಕ್ಕೆ ಅನುಗುಣವಾಗಿ ಯುದ್ಧದಲ್ಲಿ ನನ್ನ ಬಾಣಗಳಿಂದ ಅವನ ಮಾಯೆಯನ್ನು ನಾಶವಪಡಿಸಿದೆನು. ಮಹಾರಾಜನೇ! ಆಗ ಆಕಾಶದಲ್ಲಿ ಇದ್ದಕ್ಕಿದ್ದಂತೆಯೇ ಸಹಸ್ರಸೂರ್ಯರು ಶತಚಂದ್ರರು ಹತ್ತಾರು ಸಹಸ್ರ ನಕ್ಷತ್ರಗಳು ಕಂಡು ಬಂದವು ಆಗ ಹಗಲಾಗಲೀ ರಾತ್ರಿಯಾಗಲೀ ಅಥವಾ ದಿಕ್ಕುಗಳಾಗಲೀ ತಿಳಿಯಲಿಲ್ಲ. ಆಗ ನಾನು ವಿಜ್ಞಾನಾಸ್ತ್ರವನ್ನು ತೆಗೆದುಕೊಂಡು ಅದನ್ನು ಪ್ರಯೋಗಿಸಿದೆನು. ಶರಜಾಲವನ್ನುಳ್ಳ ಆ ಅಸ್ತ್ರವು ನನ್ನ ಮಂತ್ರದ ಬಲದಿಂದ ಸಾಲ್ವನ ಅಸ್ತ್ರವನ್ನು ನಾಶಮಾಡಿತು.

ಏವಂ ತದಭವದ್ಯುದ್ಧಂ ತುಮುಲಂ ರೋಮಹರ್ಷಣಮ್ ।
ಲಬ್ಧ್ವಾSSಲೋಕಂ ಚ ರಾಜೇಂದ್ರ ಪುನಃಶತ್ರುಮಯೋಧಯಮ್ ॥

ರಾಜೇಂದ್ರನೇ! ಹೀಗೆ ತೀವ್ರವೂ ಮತ್ತು ರೋಮಾಂಚಕಾರಿಯೂ ಆದ ಆ ಯುದ್ಧವು ಜರುಗಿತು. ನಾನು ಪುನಃ ಬೆಳಕನ್ನು ಕಂಡು ಶತ್ರುವಿನ ಜೊತೆಯಲ್ಲಿ ಯುದ್ಧವನ್ನು ಮಾಡಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತದಶೋಽಧ್ಯಾಯಃ ॥
॥ ಕೈರಾತಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★★★★★

## ಹದಿನೆಂಟನೆಯ ಅಧ್ಯಾಯ

(ಕೃಷ್ಣಸಾಲ್ವರ ಯುದ್ಧಸಾಲ್ವನಿಂದ ಮಾಯಾ ಸೃಷ್ಟಿ ಕೃಷ್ಣನ ಪ್ರತಿಬೋಧ.)

**ಶ್ರೀಭಗವಾನ್**

ಏವಂ ಸ ಪುರುಷವ್ಯಾಘ್ರ ಸಾಲ್ವರಾಜೋ ಮಹಾರಿಪುಃ ।
ಯುಧ್ಯಮಾನೋ ಮಯಾ ಸಂಖೇ ವಿಯದಭ್ಯಗಮತ್ ಪುನಃ ॥೧॥

ಪುರುಷವ್ಯಾಘ್ರನೇ! ಮಹಾಶತ್ರುವಾದ ಆ ಸಾಲ್ವರಾಜನು ಹೀಗೆ ನನ್ನ ಜೊತೆಯಲ್ಲಿ ಯುದ್ಧಮಾಡುತ್ತಾ ಪುನಃ ಆಕಾಶವನ್ನು ಏರಿದನು.

ತತಃ ಶತಘ್ನೀಶ್ಚ ಮಹಾಗದಾಶ್ಚ
ದೀಪ್ತಾನ್ ಶೂಲಾನ್ಮುಸಲಾನಸೀಂಶ್ಚ ।
ಚಿಕ್ಷೇಪ ರೋಷನ್ಮಯಿ ಮಂದಬುದ್ಧಿಃ
ಸಾಲ್ವೋ ಮಹಾರಾಜ ಜಯಾಭಿಕಾಂಕ್ಷೀ ॥೨॥

ಎಲೈ ಮಹಾರಾಜನೇ! ಅನಂತರ ಜಯವನ್ನು ಬಯಸುತ್ತಾ ಮಂದಬುದ್ಧಿಯಾದ ಆ ಸಾಲ್ವನು ರೋಷದಿಂದ ನನ್ನ ಮೇಲೆ ಶತಘ್ನಿಗಳನ್ನು ಮಹಾಗದೆಗಳನ್ನು ಜ್ವಲಿಸುವ ಶೂಲಗಳನ್ನು ಮುಸಲಗಳನ್ನು ಮತ್ತು ಖಡ್ಗಗಳನ್ನು ಎಸೆದನು.

ತಾನಾಶುಗೈರಾಪತತೋಽಹಮಾಶು
ನಿವಾರ್ಯ ತೂರ್ಣಂ ಖಗಮಾನ್ ಖ ಏವ ।
ದ್ವಿಧಾ ತ್ರಿಧಾ ವಾಽಚ್ಛಿದಮಸ್ತ್ರಮುಕ್ತೈಃ
ತತೋಽಂತರಿಕ್ಷೇ ನಿನದೋ ಬಭೂವ ॥೩॥

ಆಕಾಶದಲ್ಲಿ ಬರುತ್ತಿರುವಾಗಲೇ ನಾನು ಅವುಗಳನ್ನು ತಡೆದು ನನ್ನ ಅಸ್ತ್ರಮುಕ್ತವಾದ ಬಾಣಗಳಿಂದ ಆಕಾಶದಲ್ಲಿಯೇ ಅವುಗಳನ್ನು ಎರಡು ಮೂರು ತುಂಡುಗಳಾಗಿ ಕತ್ತರಿಸಿದೆನು. ಆಗ ಅಂತರಿಕ್ಷದಲ್ಲಿ ದೊಡ್ಡ ನಾದವುಂಟಾಯಿತು.

ತತಃ ಶತಸಹಸ್ರೇಣ ಶರಾಣಾಂ ನತಪರ್ವಣಾಮ್ ।
ದಾರುಕಂ ವಾಜಿನಶ್ಚೈವ ರಥಂ ಚ ಸಮವಾಕಿರತ್ ॥೪॥

ಆಗ ಸಾಲ್ವನು ಬಾಗಿದ ತುದಿಯುಳ್ಳ ಒಂದು ಲಕ್ಷಬಾಣಗಳಿಂದ ದಾರುಕನನ್ನೂ ಅಶ್ವಗಳನ್ನೂ ಮತ್ತು ರಥವನ್ನೂ ಮಳೆಗೆರೆದನು.

ತತೋ ಬಾಣವಧೋತ್ಪೀಡೋ ದಾರುಕೋ ವಿಹ್ವಲನ್ನಿವ ।
ಸ್ಥಾತವ್ಯಮಿತಿ ತಿಷ್ಠಾಮಿ ಸಾಲ್ವಬಾಣಪ್ರಪೀಡಿತಃ ॥೫॥

ಆಗ ಬಾಣಗಳ ಪ್ರಹಾರದಿಂದ ಬಹಳವಾಗಿ ಪೀಡೆಯನ್ನು ಹೊಂದಿದ ದಾರುಕನು ವೇದನೆಯಿಂದ ವಿಹ್ವಲನಾಗಿ ಸಾಲ್ವಬಾಣಪೀಡಿತನಾದ ತಾನು ಯುದ್ಧದಲ್ಲಿ ಇರಬೇಕೆಂಬ ಒಂದೇ ನಿಯಮದಿಂದ ಇಲ್ಲಿ ಇದ್ದೇನೆ ಎಂದು ಹೇಳಿದನು.

ಇತಿ ತಸ್ಯ ನಿಶಮ್ಯಾಹಂ ಸಾರಥೇಃ ಕರುಣಂ ವಚಃ ।
ಅವೇಕ್ಷಮಾಣೋ ಯಂತಾರಮವಶಂ ಶರಪೀಡಿತಮ್ ॥೬॥

ನ ತಸ್ಯೋರಸಿ ನೋ ಮೂರ್ಧ್ನಿ ನ ಕಾಯೇ ನ ಭುಜದ್ವಯೇ ।
ಅಂತರಂ ಪಾಂಡವಶ್ರೇಷ್ಠ ಪಶ್ಯಾಮಿ ನಿಚಿತಂ ಶರೈಃ ॥೭॥

ಹೀಗೆ ನಾನು ಸಾರಥಿಯ ಕರುಣಾಜನಕವಾದ ಮಾತುಗಳನ್ನು ಕೇಳಿ ಅವನ ಕಡೆಗೆ ನೋಡಿ ಅವನು ಶರಪೀಡಿತನಾಗಿ ವಿವಶನಾಗಿರುವುದನ್ನು ಗಮನಿಸಿದೆನು. ಎಲೈ ಪಾಂಡವಶ್ರೇಷ್ಠನೇ! ಅವನ ಎದೆಯಲ್ಲಾಗಲೀ ತಲೆಯಲ್ಲಾಗಲೀ ಭುಜದಲ್ಲಾಗಲೀ ದೇಹದಲ್ಲಾಗಲೀ ಬಾಣವು ನೆಡದಿದ್ದ ಒಂದು ಸ್ವಲ್ಪ ಸ್ಥಳವೂ ಇರಲಿಲ್ಲ.

ಸ ತು ಬಾಣವಧೋತ್ಪೀಡೋ ವ್ಯಸೃಜದ್ ರುಧಿರಂ ಬಹು ।
ಅಭಿವೃಷ್ಟೋ ಯಥಾ ಮೇಘೈರ್ಗಿರಿರ್ಗೈರಿಕಧಾತುಮಾನ್ ॥೮॥

ಅವನು ಬಾಣಪ್ರಹಾರದಿಂದ ಬಹಳ ಬಾದೆಗೆ ಒಳಗಾಗಿ ಮೋಡಗಳು ಮಳೆಗರೆದ ಗೈರಿಕಾದಿಧಾತುವುಳ್ಳ ಪರ್ವತದಂತೆ ಬಹಳವಾಗಿ ರಕ್ತಸ್ರಾವವನ್ನು ಹೊಂದಿದನು.

ಅಭೀಶುಹಸ್ತಂ ತಂ ದೃಷ್ಟ್ವಾ ಸೀದಂತಂ ಸಾರಥಿಂ ರಣೇ ।
ಸಂಸ್ತಂಭಯಂ ಮಹಾಬಾಹೋ ಸಾಲ್ವಬಾಣಪ್ರಪೀಡಿತಮ್ ॥೯॥

ಎಲೈ ಮಹಾಬಾಹುವೇ! ಸಾಲ್ವಬಾಣಗಳಿಂದ ಪೀಡಿತನಾಗಿದ್ದರೂ ಕೈಯಲ್ಲಿ ಕಡಿವಾಣವನ್ನು ಹಿಡಿದು ಯುದ್ಧದಲ್ಲಿ ವಿಷಾದಕ್ಕೆ ಒಳಗಾಗುತ್ತಿದ್ದ ಸಾರಥಿಯನ್ನು ನೋಡಿ ಅವನನ್ನು ನಾನು ಸಮಾಧಾನಗೊಳಿಸಿದೆನು. (ಸ್ತಂಭನಗೊಳಿಸಿದೆನು)

ತ್ವರಿತೋ ರಥಮಾರೋಪ್ಯ ಸೌಹೃದಾದಿವ ಭಾರತ ।
ಆಹುಕಸ್ಯ ವಚೋ ವೀರ ತಸ್ಯೈವ ಪರಿಚಾರಕಃ ।
ವಿಷಣ್ಣಾನ್ಯಸನ್ನಕಂಠೇನ ತನ್ನಿಬೋಧ ಯುಧಿಷ್ಠಿರ ॥೧೦॥

ಎಲೈ ಭಾರತನೇ! ಎಲೈ ಯುಧಿಷ್ಠಿರನೇ! ಆಗ ಇದ್ದಕ್ಕಿದ್ದಂತಯೇ ಆಹುಕನ ಒಬ್ಬ ಪರಿಚಾರಕನು ಸ್ನೇಹದಿಂದಲೋ ಎಂಬಂತೆ ಶೀಘ್ರವಾಗಿ ನನ್ನ ರಥವನ್ನು ಏರಿ ವಿಷಾದಯುಕ್ತವಾದ ಕಂಠದಿಂದ ಏನು ಹೇಳಿದನೆಂಬುದನ್ನು ನೀನು ಕೇಳು.

ದ್ವಾರಕಾಧಿಪತಿರ್ವೀರ ಆಹ ತ್ವಾಮಾಹುಕೋ ವಚಃ ।
ಕೇಶವೇಹ ವಿಜಾನೀಷ್ವ ಯತ್ತಾ ತ್ವಂ ಪಿತೃಸಖೋಽಬ್ರವೀತ್ ॥೧೧॥

ಎಲೈ ವೀರನೇ! ದ್ವಾರಕಾಧಿಪತಿಯಾದ ಆಹುಕನು ನಿನಗೆ ಈ ಮಾತನ್ನು ಹೇಳಿಕಳುಹಿಸಿದ್ದಾನೆ. ಎಲೈ ಕೇಶವನೇ! ನಿನ್ನ ತಂದೆಯ ಸ್ನೇಹಿತನಾದ ಆಹುಕನು ಹೇಳಿದ ವಿಷಯವನ್ನು ನೀನು ತಿಳಿದುಕೋ.

ಉಪಯಾತ್ವಾದ್ಯ ಸಾಲ್ವೇನ ದ್ವಾರಕಾಂ ವೃಷ್ಣಿನಂದನ ।
ವಿಷಕ್ತೇ ತ್ವಯಿ ದುರ್ಧರ್ಷ ಹತಃ ಶೂರಸುತೋ ಬಲಾತ್ ॥೧೨॥

ಎಲೈ ದುರ್ಧರ್ಷನೇ! ವೃಷ್ಣಿನಂದನನೇ! ನೀನು ಸಾಲ್ವನ ಸೈನ್ಯದ ಜೊತೆಯಲ್ಲಿ ಯುದ್ಧಮಾಡುತ್ತಿರುವಾಗ ಸಾಲ್ವನು ದ್ವಾರಕೆಗೆ ಬಂದು ಈ ದಿನ ಶೂರಸುತನಾದ ವಸುದೇವನನ್ನು ತನ್ನ ಬಲದಿಂದ ಕೊಂದಿದ್ದಾನೆ.

ತದಲಂ ಸಾಧು ಯುದ್ಧೇನ ನಿವರ್ತಸ್ವ ಜನಾರ್ದನ ।
ದ್ವಾರಕಾಮೇವ ರಕ್ಷಸ್ವ ಕಾರ್ಯಮೇತನ್ಮಹತ್ ತವ ॥೧೩॥

ಜನಾರ್ದನನೇ! ಯುದ್ಧಮಾಡುವುದು ಸಾಕು. ಯುದ್ಧದಿಂದ ಹಿಂದಿರುಗಿ ದ್ವಾರಕೆಯನ್ನು ರಕ್ಷಿಸು. ಇದು ನೀನು ಮಾಡಬೇಕಾದ ದೊಡ್ಡ ಕಾರ್ಯ.

ಶ್ರೀಭಗವಾನ್

ಇತ್ಯೇವಂ ತಸ್ಯ ವಚನಂ ಶ್ರುತ್ವಾ ಪರಮದುರ್ಮನಾಃ ।
ನಿಶ್ಚಯಂ ನಾಧಿಗಚ್ಛಾಮಿ ಕರ್ತವ್ಯಸ್ಯೇತರಸ್ಯ ವಾ ॥೧೪॥

ಹೀಗೆ ಅವನ ಮಾತನ್ನು ಕೇಳಿ ಬಹಳ ವಿಷಾದದಿಂದ ಕೂಡಿದ ಮನಸ್ಸುಳ್ಳವನಾಗಿ ನಾನು ಏನು ಮಾಡಬೇಕು ಏನು ಮಾಡಬಾರದು ಎಂದು ನಿಶ್ಚಯಸಲು ಸಾಧ್ಯವಾಗಲಿಲ್ಲ.

ಸಾತ್ಯಕಿಂ ಬಲದೇವಂ ಚ ಪ್ರದ್ಯುಮ್ನಂ ಚ ಮಹಾಬಲಮ್ ।
ವಿಗರ್ಹೇ ಮನಸಾ ವೀರಾಂಸ್ತಚ್ಛ್ರುತ್ವಾ ಚಾಪ್ರಿಯಂ ವಚಃ ॥೧೫॥

ಆ ಅಪ್ರಿಯವಾದ ವಾರ್ತೆಯನ್ನು ಕೇಳಿ ವೀರರಾದ ಸಾತ್ಯಕಿಯನ್ನೂ ಬಲದೇವನನ್ನೂ ಮಹಾಬಲಶಾಲಿಯಾದ ಪ್ರದ್ಯುಮ್ನನನ್ನೂ ಮನಸ್ಸಿನಲ್ಲಿಯೇ ನಿಂದಿಸಿದೆ.

ಅಹಂ ಹಿ ದ್ವಾರಕಾಯಾಶ್ಚ ಪಿತುಶ್ಚ ಕುರುನಂದನ ।
ತೇಷು ರಕ್ಷಾಂ ಸಮಾಧಾಯ ಪ್ರಯಾತಃ ಸೌಭಪಾತನೇ ।
ಬಲದೇವೋ ಮಹಾಬಾಹುಃ ಕಚ್ಚಿಜ್ಜೀವತಿ ಶತ್ರುಹಾ ॥೧೬॥

ಎಲೈ ಕುರುನಂದನನೇ! ನಾನಾದರೂ ದ್ವಾರಕೆ ಮತ್ತು ವಸುದೇವನ ರಕ್ಷಣೆಯನ್ನು ಇವರಿಗೆ ವಹಿಸಿ ಸೌಭನನ್ನು ಕೊಲ್ಲುವುದಕ್ಕೆ ಹೊರಟುಬಂದಿದ್ದೆ. ಈಗ ಮಹಾಬಾಹುವೂ ಶತ್ರುಘಾತಕನೂ ಆದ ಬಲದೇವನು ಬದುಕಿದ್ದಾನೆಯೋ ಇಲ್ಲವೋ?

ಸಾತ್ಯಕಿಶ್ಚಾರುದೇಷ್ಣಶ್ಚ ರೌಗ್ಮಿಣೇಯಶ್ಚ ವೀರ್ಯವಾನ್ ।
ಸಾಂಬಪ್ರಭೃತಯಶ್ಚೈವೇತ್ಯಹಮಾಸಂ ಸುದುರ್ಮನಾಃ ॥೧೭॥

ಹಾಗೆಯೇ ಸಾತ್ಯಕಿ ರುಗ್ಮಿಣಿಯ ಪುತ್ರನಾದ ಪ್ರತಾಪಶಾಲಿಯಾದ ಚಾರುದೇಷ್ಣ ಮತ್ತು ಸಾಂಬ ಮೊದಲಾದವರು ಜೀವಿಸಿದ್ದಾರೆಯೋ ಇಲ್ಲವೋ ಎಂದು ಚಿಂತಿಸಿ ನಾನು ಬಹಳ ವಿಷಾದಗೊಂಡೆನು.

ಏತೇಷು ಹಿ ನರವ್ಯಾಘ್ರ ಜೀವತ್ಸು ನ ಕಥಂಚನ ।
ಶಕ್ಯಃ ಶೂರಸುತೋ ಹಂತುಮಪಿ ವಜ್ರಭೃತಾ ಸ್ವಯಮ್ ॥೧೮॥

ಎಲೈ ನರವ್ಯಾಘ್ರನೇ! ಈ ವೀರರು ಬದುಕಿರುವಾಗ ಇಂದ್ರನೂ ಕೂಡ ತಾನೇ ಬಂದರೂ ಶೂರಸುತನಾದ ವಸುದೇವನನ್ನು ಕೊಲ್ಲಲು ಸಾಧ್ಯವಿಲ್ಲ.

ಹತಃ ಶೂರಸುತೋ ವ್ಯಕ್ತಂ ವ್ಯಕ್ತಂ ತೇ ಚ ಪರಾಸವಃ ।
ಬಲದೇವಮುಖಾಃ ಸರ್ವ ಇತಿ ಮೇ ನಿಶ್ಚಿತಾ ಮತಿಃ ॥೧೯॥

ಆದರೆ ಸ್ಪಷ್ಟವಾಗಿ ವಸುದೇವನು ಮೃತನಾಗಿದ್ದಾನೆ. ಬಲರಾಮ ಮೊದಲಾದವರೂ ಸ್ಪಷ್ಟವಾಗಿ ಮೃತರಾಗಿದ್ದಾರೆ ಎಂದು ನಾನು ನಿಶ್ಚಯಿಸಿದೆ.

ಸೋಽಹಂ ಸರ್ವವಿನಾಶಂ ತಂ ಚಿಂತಯಾನೋ ಮುಹುರ್ಮುಹುಃ ।
ಸುವಿಹ್ವಲೋ ಮಹಾರಾಜ ಪುನಃ ಸಾಲ್ವಮಯೋಧಯಮ್ ॥೨೦॥

ಎಲೈ ಮಹಾರಾಜನೇ! ಅಂತಹ ನಾನು ಮತ್ತೆ ಮತ್ತೆ ಸರ್ವವಿನಾಶವನ್ನು ಚಿಂತಿಸುತ್ತಾ ಬಹಳ ವಿಹ್ವಲನಾಗಿ ಪುನಃ ಸಾಲ್ವನ ಜೊತೆಯಲ್ಲಿ ಯುದ್ಧವನ್ನು ಮಾಡಿದೆ.

ತತೋಽಪಶ್ಯಂ ಮಹಾರಾಜ ಪ್ರಪತಂತಮಹಂ ನೃಪ ।
ಸೌಭಾಚ್ಛೂರಸುತಂ ವೀರ ತತೋ ಮಾಂ ಮೋಹ ಆವಿಶತ್ ॥೨೧॥

ಮಹಾರಾಜನೇ! ಆಗ ನಾನು ಸೌಭದಿಂದ ವಸುದೇವನು ಕೆಳಗೆ ಬೀಳುತ್ತಿರುವುದನ್ನು ನೋಡಿದೆನು. ಎಲೈ ವೀರನೇ! ಆಗ ನನ್ನನ್ನು ಮೋಹವು ಆವರಿಸಿತು.

ತಸ್ಯ ರೂಪಂ ಪ್ರಪತತಃ ಪಿತುರ್ಮಮ ನರಾಧಿಪ ।
ಯಯಾತೇಃ ಕ್ಷೀಣಪುಣ್ಯಸ್ಯ ಸ್ವರ್ಗಾದಿವ ಮಹೀತಲಮ್ ॥೨೨॥

ಎಲೈ ನರಾಧಿಪನೇ! ಸೌಭದಿಂದ ಕೆಳಗೆ ಬೀಳುತ್ತಿದ್ದ ನನ್ನ ತಂದೆಯ ರೂಪವು ಪುಣ್ಯವನ್ನು ಕಳೆದುಕೊಂಡು ಸ್ವರ್ಗದಿಂದ ಭೂಮಿಗೆ ಬೀಳುತ್ತಿದ್ದ ಯಯಾತಿಯ ರೂಪದಂತಿದ್ದಿತು.

ವಿಶೀರ್ಣಗಲಿತೋಷ್ಣೀಷಃ ಪ್ರಕೀರ್ಣಾಂಬರಮೂರ್ಧಜಃ ।
ಪ್ರಪತನ್ ದೃಶ್ಯತೇ ಹ ಸ್ಮ ಕ್ಷೀಣಪುಣ್ಯ ಇವ ಗ್ರಹಃ ॥೨೩॥

ಹರಿದು ಹೋಗಿ ಜಾರುತ್ತಿರುವ ತಲೆಯರುಮಾಲು ಮತ್ತು ಕೆದರಿದ ಬಟ್ಟೆ ಕೂದಲುಗಳಿಂದ ಬೀಳುತ್ತಿದ್ದ ಅವನು ಪುಣ್ಯವನ್ನು ಕಳೆದುಕೊಂಡು ಭೂಮಿಗೆ ಬೀಳುತ್ತಿರುವ ಒಂದು ಗ್ರಹದಂತೆ ಕಂಡನು.

ತತಃ ಶಾರ್ಙ್ಗಂ ಧನುಃಶ್ರೇಷ್ಠಂ ಕರಾತ್ ಪ್ರಪತಿತಂ ಮಮ ।
ಮೋಹಾಪನ್ನಸ್ತು ಕೌಂತೇಯ ರಥೋಪಸ್ಥ ಉಪಾವಿಶಮ್ ॥೨೪॥

ಎಲೈ ಕೌಂತೇಯನೇ! ಆಗ ನನ್ನ ಶ್ರೇಷ್ಠವಾದ ಶಾರ್ಙ್ಗ ಧನುಸ್ಸು ಕೈಯಿಂದ ಕೆಳಗೆ ಬಿದ್ದಿತು. ಮೋಹಾವಿಷ್ಟನಾಗಿ ರಥದ ಪೀಠದಲ್ಲಿ ಕುಳಿತುಕೊಂಡೆನು.

ತತೋ ಹಾಹಾಕೃತಂ ಸರ್ವಂ ಸೈನ್ಯಂ ಮೇ ಗತಚೇತನಮ್ ।
ಮಾಂ ದೃಷ್ಟ್ವಾ ರಥನೀಡಸ್ಥಂ ಗತಾಸುಮಿವ ಭಾರತ ॥೨೫॥

ಎಲೈ ಭಾರತನೇ! ಆಗ ನನ್ನ ಸೈನ್ಯವೆಲ್ಲವೂ ರಥದ ಪೀಠದಲ್ಲಿ ಮೃತನಂತೆ ಕುಳಿತಿದ್ದ ನನ್ನನ್ನು ನೋಡಿ ನಿಶ್ಚೇತನವಾಗಿ ಹಾಹಾಕಾರವನ್ನು ಮಾಡಿತು.

ಪ್ರಸಾರ್ಯ ಬಾಹೂ ಪತತಃ ಪ್ರಸಾರ್ಯ ಚರಣಾವಪಿ ।
ರೂಪಂ ಪಿತುರಪಶ್ಯಂ ತತ್ ಶಕುನೇಃ ಪತತೋ ಯಥಾ ॥೨೬॥

ಕೈಗಳನ್ನು ಮತ್ತು ಕಾಲುಗಳನ್ನು ಚಾಚಿ ಬೀಳುತ್ತಿರುವ ನನ್ನ ತಂದೆಯ ರೂಪವು ಕೆಳಗೆ ಬೀಳುತ್ತಿರುವ ಒಂದು ಪಕ್ಷಿಯ ರೂಪದಂತೆ ಇದ್ದಿತು. ಅಂತಹ ರೂಪವನ್ನು ನೋಡಿದೆನು.

ತಂ ಪತಂತಂ ಮಹಾಬಾಹೋ ಶೂಲಪಟ್ಟಸಪಾಣಯಃ ।
ಅಭಿಘ್ನಂತೋ ಭೃಶಂ ವೀರ ಮಮ ಚೇತೋ ವ್ಯಕಂಪಯನ್ ॥೨೭॥

ಎಲೈ ಮಹಾಬಾಹುವೇ! ಹಾಗೆ ಬೀಳುತ್ತಿದ್ದ ಅವನನ್ನು ಶೂಲ ಮತ್ತು ಪಟ್ಟಸಗಳನ್ನು ಹಿಡಿದ ಸಾಲ್ವನ ಸೈನಿಕರು ಬಹಳವಾಗಿ ಹೊಡೆಯುತ್ತಾ ನನ್ನ ಮನಸ್ಸನ್ನು ಅಲ್ಲಾಡಿಸಿದರು.

ತತೋ ಮುಹೂರ್ತಾತ್ ಪ್ರತಿಲಭ್ಯ ಸಂಜ್ಞಾಮ್
ಅಹಂ ತದಾ ವೀರ ಮಹಾವಿಮರ್ದೇ ।
ನ ತತ್ರ ಸೌಭಂ ನ ರಿಪುಂ ನ ಸಾಲ್ವಂ
ಪಶ್ಯಾಮಿ ವೃದ್ಧಂ ಪಿತರಂ ನ ಚಾಪಿ ॥೨೮॥

ಎಲೈ ವೀರನೇ! ಒಂದು ಮುಹೂರ್ತದ ನಂತರ ನಾನು ನನ್ನ ಮೋಹದಿಂದ ಎದ್ದು ಸಂಜ್ಞೆಯನ್ನು ಮರಳಿ ಪಡೆದು ನೋಡಿದಾಗ ಆ ಮಹಾಸೇನಸಾಟದಲ್ಲಿ ಸೌಭವಾಗಲೀ ಶತ್ರುವಾದ ಸಾಲ್ವನಾಗಲೀ ವೃದ್ಧನಾದ ನನ್ನ ತಂದೆಯಾಗಲೀ ಕಾಣಲಿಲ್ಲ.

ತತೋ ಮಮಾಸೀನ್ಮನಸಿ ಮಾಯೇಯಮಿತಿ ನಿಶ್ಚಿತಮ್ ।
ಪ್ರಬುದ್ಧೋಽಸ್ಮಿ ತತೋ ಭೂಯಃ ಶತಶೋಽವಾಕಿರಂ ಶರಾನ್ ॥೨೯॥

ಆಗ ನಾನು ಇದು ಸಾಲ್ವನ ಮಾಯೆಯೆಂದು ಮನಸ್ಸಿನಲ್ಲಿ ನಿಶ್ಚಯಿಸಿ ಎಚ್ಚರಗೊಂಡವನಾಗಿ ಪುನಃ ನೂರಾರುಬಾಣಗಳನ್ನು ಸಾಲ್ವನ ಮೇಲೆ ಪ್ರಯೋಗಿಸಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾದಶೋಽಧ್ಯಾಯಃ ॥
॥ ಕೈರಾತಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★★★★★

## ಹತ್ತೊಂಬತ್ತನೆಯ ಅಧ್ಯಾಯ

(ಕೃಷ್ಣನಿಂದ ಸಾಲ್ವನ ವಧೆ. ಸುಭದ್ರೆ ಮತ್ತು ಅಭಿಮನ್ಯುವನ್ನು ಕರೆದುಕೊಂಡು ದ್ವಾರಕಾಗಮನ. ಧೃಷ್ಟದ್ಯುಮ್ನಾದಿಗಳ ಗಮನ.)

**ಶ್ರೀಭಗವಾನ್**

ತತೋಽಹಂ ಭರತಶ್ರೇಷ್ಠ ಪ್ರಗೃಹ್ಯ ರುಚಿರಂ ಧನುಃ ।
ಶರೈರಪಾತಯಂ ಸೌಭಾತ್ ಶಿರಾಂಸಿ ವಿಬುಧದ್ವಿಷಾಮ್ ॥೧॥

ಎಲೈ ಭರತಶ್ರೇಷ್ಠನೇ! ಆಗ ನಾನು ಮನೋಹರವಾದ ಧನುಸ್ಸನ್ನು ಕೈಯಲ್ಲಿ ಹಿಡಿದು ಬಾಣಗಳಿಂದ ದೇವಶತ್ರುಗಳ ಶಿರಸ್ಸುಗಳನ್ನು ಸೌಭದಿಂದ ಕೆಳಗೆ ಉರುಳಿಸಿದೆನು.

ಶರಾನಾಶೀವಿಷಾಕಾರಾನ್ ಊರ್ಧ್ವಗಾಂಸ್ತಿಗ್ಮತೇಜಸಃ ।
ಪ್ರೇಷಯಂ ಸಾಲ್ವರಾಜಾಯ ಶಾರ್ಂಗಮುಕ್ತಾನ್ ಸುವಾಸಸಃ ॥೨॥

ಸರ್ಪಗಳ ಆಕಾರವುಳ್ಳ ಕ್ರೂರ ಸಾಮಾರ್ಥ್ಯವನ್ನು ಹೊಂದಿದ ಒಳ್ಳೆಯ ಪುಂಖಗಳನ್ನು ಹೊಂದಿದ್ದ ಬಾಣಗಳನ್ನು ಸಾಲ್ವರಾಜನನ್ನು ಉದ್ದೇಶಿಸಿ ಶಾರ್ಙ್ಗಧನುಸ್ಸಿನಿಂದ ಊರ್ಧ್ವಮುಖವಾಗಿ ಪ್ರಯೋಗಿಸಿದೆನು.

ತತೋ ನಾದೃಶ್ಯತ ರಣೇ ಸೌಭಃ ಕುರುಕುಲೋದ್ವಹ ।
ಅಂತರ್ಹಿತೋ ಮಾಯಯಾऽಭೂತ್ ತತೋऽಹಂ ವಿಸ್ಮಿತೋऽಭವಮ್ ॥

ಎಲೈ ಕುರುಕುಲೋದ್ವಹನೇ! ಆಗ ಯುದ್ಧದಲ್ಲಿ ಸೌಭ ಕಾಣಲಿಲ್ಲ. ಸಾಲ್ವನು ಮಾಯೆಯಿಂದ ಅಂತರ್ಧಾನವನ್ನು ಹೊಂದಿದನು. ಆಗ ನಾನು ಆಶ್ಚರ್ಯಗೊಂಡೆನು.

ಅಥ ದಾನವಸಂಘಾಸ್ತೇ ವಿಕೃತಾನನಮೂರ್ಧಜಾಃ ।
ಉದಕ್ರೋಶನ್ಮಹಾರಾಜ ವಿಷ್ಠಿತೇ ಮಯಿ ಭಾರತ ॥೪॥

ಎಲೈ ಭಾರತನೇ, ಮಹಾರಾಜನೇ! ನಾನು ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುತ್ತಿರಲು ಆಗ ವಿಕೃತವಾದ ಮುಖ ಮತ್ತು ಕೇಶಗಳುಳ್ಳ ದಾನವ ಸಮೂಹಗಳು ಜೋರಾಗಿ ಕಿರುಚಿದವು.

ತತೋऽಸ್ತ್ರಂ ಶಬ್ದಸಾಹಂ ವೈ ತ್ವರಮಾಣೋ ಮಹಾಹವೇ ।
ಅಯೋಜಯಂ ತದ್ವಧಾಯ ತತಃ ಶಬ್ದ ಉಪಾರಮತ್ ॥೫॥

ಆಗ ನಾನು ಶಬ್ದಗಳನ್ನು ನಿಲ್ಲಿಸುವ ಒಂದು ಅಸ್ತ್ರವನ್ನು ಆ ಯುದ್ಧದಲ್ಲಿ ಶೀಘ್ರವಾಗಿ ಆ ದಾನವರ ವಧೆಗಾಗಿ ಪ್ರಯೋಗಿಸಿದೆ. ಆಗ ಆ ಶಬ್ದವು ಶಾಂತವಾಯಿತು.

ಹತಾಸ್ತೇ ದಾನವಾಃ ಸರ್ವೇ ಯೈಃ ಸ ಶಬ್ದ ಉದೀರಿತಃ ।
ಶರೈರಾದಿತ್ಯಸಂಕಾಶೈರ್ಜ್ವಲಿತೈಃ ಶಬ್ದಸಾಧನೈಃ ॥೬॥

ಯಾವ ದಾನವರು ಅಂತಹಶಬ್ದವನ್ನು ಉತ್ಪಾದನೆಮಾಡಿದ್ದರೋ ಅವರೆಲ್ಲರೂ ಶಬ್ದವನ್ನು ಹಿಂಬಾಲಿಸಿ ಹೋಗುವ, ಆದಿತ್ಯನಂತೆ ಪ್ರಜ್ವಲಿಸುವ, ಬಾಣಗಳಿಂದ ಹತರಾದರು.

ತಸ್ಮಿನ್ನುಪರತೇ ಶಬ್ದೇ ಪುನರೇವಾನ್ಯತೋऽಭವತ್ ।
ಶಬ್ದೋऽಪರೋ ಮಹಾರಾಜ ತತ್ರಾಪಿ ಪ್ರಾಹರಂ ಶರಾನ್ ॥೭॥

ಎಲೈ ಮಹಾರಾಜನೇ! ಆ ಶಬ್ದವು ಶಾಂತವಾಗುತ್ತಿರಲು ಇನ್ನೊಂದು ದಿಕ್ಕಿನಲ್ಲಿ ಅಂತಹದೇ ಇನ್ನೊಂದು ಶಬ್ದವುಂಟಾಯಿತು. ನಾನು ಅಲ್ಲಿಯೂ ಬಾಣಗಳನ್ನು ಪ್ರಯೋಗಿಸಿದೆ.

ಏವಂ ದಶ ದಿಶಃ ಸರ್ವಾಸ್ತಿರ್ಯಗೂರ್ಧ್ವಂ ಚ ಭಾರತ ।
ನಾದಯಾಮಾಸುರಸುರಾಸ್ತೇ ಚಾಪಿ ನಿಹತಾ ಮಯಾ ॥೮॥

ಎಲೈ ಭಾರತನೇ! ಹೀಗೆ ಊರ್ಧ್ವಮುಖವಾಗಿ ಮತ್ತೆ ಕೆಳಮುಖವಾಗಿ ಒಟ್ಟು ಹತ್ತು ದಿಕ್ಕುಗಳಲ್ಲಿಯೂ ಅಸುರರು ಮಹಾನಾದವನ್ನು ಮಾಡಿದರು. ನಾನು ಅವರೆಲ್ಲರನ್ನೂ ಸಂಹರಿಸಿದೆನು.

ತತಃ ಪ್ರಾಗ್ಜ್ಯೋತಿಷಂ ಗತ್ವಾ ಪುನರೇವ ವ್ಯದೃಶ್ಯತ ।
ಸೌಭಂ ಕಾಮಗಮಂ ವೀರ ಮೋಹಯನ್ಮಮ ಚಕ್ಷುಷೀ ॥೯॥

ಆಗ ಆ ಕಾಮಗಾಮಿಯಾದ ಸೌಭವು ಪ್ರಾಗ್ಜ್ಯೋತಿಷನಗರದ ಮೇಲೆ ಹೋಗಿ ಪುನಃ ಕಾಣಿಸಿಕೊಂಡಿತು. ಎಲೈ ವೀರನೇ! ನನ್ನ ಕಣ್ಣುಗಳಿಗೆ ಮೋಹ ಉಂಟಾಯಿತು.

ತತೋ ಲೋಕಾಂತಕರಣೋ ದಾನವೋಽಥ ನರಾಕೃತಿಃ ।
ಶಿಲಾವರ್ಷೇಣ ಮಹತಾ ಸಹಸಾ ಮಾಂ ಸಮಾವೃಣೋತ್ ॥೧೦॥

ಮನುಷ್ಯನ ಆಕೃತಿಯುಳ್ಳ, ಲೋಕವನ್ನೇ ನಾಶಮಾಡುವ, ಒಬ್ಬ ದಾನವನು ದೊಡ್ಡ ಬಂಡೆಗಳನ್ನು ನನ್ನ ಮೇಲೆ ಎಸೆದು ಬೇಗ ನನ್ನನ್ನು ಮುಚ್ಚಿಹಾಕಿದನು.

ಸೋಽಹಂ ಪರ್ವತವರ್ಷೇಣ ವಧ್ಯಮಾನಃ ಸಮಂತತಃ ।
ವಲ್ಮೀಕ ಇವ ರಾಜೇಂದ್ರ ಪರ್ವತೋಪಚಿತೋಽಭವಮ್ ॥೧೧॥

ಎಲೈ ರಾಜಶ್ರೇಷ್ಠನೇ, ಹೀಗೆ ಪರ್ವತವರ್ಷದಿಂದ ಪೀಡಿಸಲ್ಪಡುವ ನಾನು ಎಲ್ಲಕಡೆಯಲ್ಲಿ ಪರ್ವತವು ಬಿದ್ದ ಒಂದು ಹುತ್ತದಂತೆ ಆದೆನು.

ತತೋಽಹಂ ಪರ್ವತಚಿತಃ ಸಹಯಃ ಸಹಸಾರಥಿಃ ।
ಅಪ್ರಖ್ಯಾತಿಂ ಗತೋ ರಾಜನ್ ಸಧ್ವಜಃ ಸಾಯುಧಸ್ತದಾ ॥೧೨॥

ಎಲೈ ರಾಜನೇ! ಆಗ ಪರ್ವತದಿಂದ ಮುಚ್ಚಲ್ಪಟ್ಟ ನಾನೂ ನನ್ನ ಅಶ್ವಗಳೂ ನನ್ನ ಸಾರಥಿಯೂ ಆಯುಧ ಮತ್ತು ಧ್ವಜಗಳಿಂದ ಕೂಡಿದ ನನ್ನ ರಥವೂ ಯಾರಿಗೂ ಕಾಣಲಿಲ್ಲ.

ತತೋ ವೃಷ್ಣಿಪ್ರವೀರಾ ಯೇ ಮಮಾಸನ್ ಸೈನಿಕಾಸ್ತದಾ ।
ತೇ ಭಯಾರ್ತಾ ದಿಶಃ ಸರ್ವೇ ಸಹಸಾ ವಿಪ್ರದುದ್ರುವುಃ ॥೧೩॥

ಎಲೈ ರಾಜನೇ! ಆಗ ನನ್ನ ಸೈನ್ಯಿಕರಾದ ವೃಷ್ಣಿವೀರರು ಭಯದಿಂದ ನಡುಗಿ ಎಲ್ಲರೂ ದಿಕ್ಕುದಿಕ್ಕುಗಳಿಗೆ ಶೀಘ್ರವಾಗಿ ಓಡಿಹೋದರು.

ತತೋ ಹಾಹಾಕೃತಂ ಸರ್ವಮಭೂತ್ ತತ್ರ ವಿಶಾಂಪತೇ ।
ದ್ಯೌರಂತರಿಕ್ಷಂ ಭೂಶ್ಚೈವಾದೃಶ್ಯಮಾನೇ ತದಾ ಮಯಿ ॥೧೪॥

ಎಲೈ ರಾಜನೇ! ಹಾಗೆ ನಾನು ಕಾಣದೆ ಹೋಗುತ್ತಿರಲು ಭೂಮಿಯಲ್ಲಿ ಅಂತರಿಕ್ಷದಲ್ಲಿ ಮತ್ತು ಸ್ವರ್ಗದಲ್ಲಿ ಎಲ್ಲ ಕಡೆಯಲ್ಲಿಯೂ ಹಾಹಾಕಾರವುಂಟಾಯಿತು.

ತತೋ ವಿಷಣ್ಣವದನಾ ಮಮ ರಾಜನ್ ಸುಹೃಜ್ಜನಾಃ ।
ರುರುದುಶ್ಚುಕ್ರುಶುಶ್ಚೈವ ದುಃಖಶೋಕಸಮನ್ವಿತಾಃ ॥೧೫॥

ಎಲೈ ರಾಜನೇ! ಆಗ ದುಃಖಶೋಕಯುಕ್ತರಾದ ನನ್ನ ಸುಹೃದ್ ಜನರು ಕಳೆಗುಂದಿದ ಮುಖವುಳ್ಳವರಾಗಿ ರೋದನವನ್ನು ಮಾಡಿ ಕಿರುಚಿದರು.

ದ್ವಿಷತಾಂ ಸಂಪ್ರಹರ್ಷೋ೯ಭೂದಾರ್ತಿಶ್ಚಾದ್ವಿಷತಾಂ ಮಯಿ ।
ಏವಮಜ್ಞಾತವಾನ್ ವೀರ ಪಶ್ಚಾದ್ ಜ್ಞಾಸಿಷಮಚ್ಯುತ ॥೧೬॥

ನನ್ನ ಶತ್ರುಗಳಿಗೆ ಹರ್ಷವೂ ನನ್ನ ಸುಹೃದ್ ಜನಕ್ಕೆ ದುಃಖವೂ ಉಂಟಾಯಿತು. ಎಲೈ ವೀರನೇ! ಎಲೈ ಸದ್ಗುಣಗಳಿಂದ ಚ್ಯುತನಾಗದವನೇ! ನನಗೆ ಮೊದಲು ಏನೂ ತಿಳಿಯಲಿಲ್ಲ. ಅನಂತರ ತಿಳಿಯಿತು.

ತತೋ೯ಹಮಿಂದ್ರದಯಿತಂ ಸರ್ವಪಾಷಾಣಭೇದನಮ್ ।
ವಜ್ರಮುದ್ಯಮ್ಯ ತಾನ್ ಸರ್ವಾನ್ ಪರ್ವತಾನ್ ಸಮಶಾತಯಮ್ ॥

ಅನಂತರ ನಾನು ಬಂಡೆ ಕಲ್ಲುಗಳನ್ನು ಒಡೆಯಲು ಇಂದ್ರನಿಗೆ ಪ್ರಿಯವಾದ ವಜ್ರಾಸ್ತ್ರವನ್ನು ಎತ್ತಿ ಪ್ರಯೋಗಿಸಿ ಆ ಎಲ್ಲ ಪರ್ವತಗಳನ್ನೂ ನಾಶಪಡಿಸಿದೆನು.

ತತಃ ಪರ್ವತಭಾರಾರ್ತಾ ಮಂದಪ್ರಾಣವಿಚೇಷ್ಟಿತಾಃ ।
ಹಯಾ ಮೇ ಸಹಸಾ ರಾಜನ್ ವೇಪಮಾನಾ ಇವಾಭವನ್ ॥೧೮॥

ಎಲೈ ರಾಜನೇ! ಆಗ ಪರ್ವತಭಾರಕ್ಕೆ ಬಳಲಿ ಅಲ್ಪಪ್ರಾಣ ಮತ್ತು ಚೇಷ್ಟೆಯುಳ್ಳ ನನ್ನ ಅಶ್ವಗಳು ನಡುಗಲು ಪ್ರಾರಂಬಿಸಿದವು.

ಮೇಘಜಾಲ ಇವಾಕಾಶೇ ವಿದಾರ್ಯಾಭ್ಯುದಿತಂ ರವಿಮ್ ।
ದೃಷ್ಟ್ವಾ ಮಾಂ ಬಾಂಧವಾಃ ಸರ್ವೇ ಹರ್ಷಮಾಹಾರಯನ್ ಪುನಃ ।
ತತೋ ಮಾಮಬ್ರವೀತ್ ಸೂತಃ ಪ್ರಾಂಜಲಿಃ ಪ್ರಣತಃ ಸ್ಥಿತಃ ॥೧೯॥

ಆಕಾಶದಲ್ಲಿ ಮೇಘಜಾಲವನ್ನು ಭೇದಿಸಿ ಸೂರ್ಯನು ಉದಯಿಸಿದಂತೆ ನಾನು ಉದಯಿಸಿದುದನ್ನು ನೋಡಿ ನನ್ನ ಬಾಂಧವರೆಲ್ಲರೂ ಪುನಃ ಹರ್ಷವನ್ನು ತಾಳಿದರು. ಆಗ ಸೂತನು ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿ ನನ್ನೆದುರಿಗೆ ನಿಂತು ಹೀಗೆ ಹೇಳಿದನು.

ಸಾಧು ಸಂಪಶ್ಯ ವಾರ್ಷ್ಣೇಯ ಸಾಲ್ವಂ ಸೌಭಪತಿಂ ಸ್ಥಿತಮ್ ।
ಅಲಂ ಕೃಷ್ಣಾವಮನ್ಯೈನಂ ಸಾಧು ಯತ್ನಂ ಸಮಾಚರ ॥೨೦॥

ಎಲೈ ವಾರ್ಷ್ಣೇಯನೇ! ಸೌಭಪತಿಯಾದ ಸಾಲ್ವನು ಇರುವುದನ್ನು ಚೆನ್ನಾಗಿ ನೋಡು. ಅವನನ್ನು ಉಪೇಕ್ಷೆಮಾಡುವುದು ಸಾಕು. ಅವನನ್ನು ಕೊಲ್ಲಲು ಒಳ್ಳೆಯ ಪ್ರಯತ್ನವನ್ನು ಮಾಡು.

ಮಾರ್ದವಂ ಸಖಿತಾಂ ಚೈವ ಸಾಲ್ವಾದನ್ಯತ್ರ ಕೇಶವ ।
ಜಹಿ ಸಾಲ್ವಂ ಮಹಾಬಾಹೋ ಮೈನಂ ಜೀವಯ ಕೇಶವ ॥೨೧॥

ಎಲೈ ಕೇಶವನೇ! ಮೃದುತನವನ್ನು ಮತ್ತು ಸ್ನೇಹವನ್ನು ಸಾಲ್ವನನ್ನು ಬಿಟ್ಟು ಬೇರೆಯ ಕಡೆ ತೋರಿಸು. ಮಹಾಬಾಹುವೇ! ಸಾಲ್ವನನ್ನು ಸಂಹರಿಸು. ಕೇಶವನೇ ಅವನನ್ನು ಜೀವಿಸಲು ಬಿಡಬೇಡ.

ಸರ್ವೈಃ ಪರಾಕ್ರಮೈರ್ವೀರ ವಧ್ಯಃ ಶತ್ರುರಮಿತ್ರಹನ್ ।
ನ ಶತ್ರುರವಮಂತವ್ಯೋ ದುರ್ಬಲೋಽಪಿ ಬಲೀಯಸಾ ।
ಸೋಽಪಿ ಸ್ಯಾತ್ ಪೀಡಕಃ ಕಶ್ಚಿತ್ ಕಿಂ ಪುನಃ ಸಮರೇ ಸ್ಥಿತಃ ॥೨೨॥

ಎಲೈ ವೀರನೇ! ಎಲೈ ಶತ್ರುಸಂಹಾರಕನೇ! ಪೂರ್ಣಪರಾಕ್ರಮದಿಂದ ಶತ್ರುವನ್ನು ಕೊಲ್ಲಬೇಕು. ಬಲಿಷ್ಠನಾದವನು ದುರ್ಬಲನಾದ ಶತ್ರುವನ್ನೂ ಉಪೇಕ್ಷೆಮಾಡಬಾರದು. ಅವನೂ ಒಂದುದಿನ ಪೀಡಕನಾಗಬಹುದು. ಹೀಗಿರುವಾಗ ಯುದ್ಧದಲ್ಲಿ ಎದುರಿಗೆ ನಿಂತವನು ಪೀಡಕನಾಗುವುದರಲ್ಲಿ ಏನು ಆಶ್ಚರ್ಯ?

ಸ ತ್ವಂ ಪುರುಷಶಾರ್ದೂಲ ಸರ್ವಯತ್ನೈರಿಮಂ ಪ್ರಭೋ ।
ಜಹಿ ವೃಷ್ಣಿಕುಲಶ್ರೇಷ್ಠ ಮಾ ತೇ ಕಾಲೋಽತ್ಯಗಾದಯಮ್ ॥೨೩॥

ಎಲೈ ಪುರುಷಶಾರ್ದೂಲನೇ! ಎಲೈ ಪ್ರಭುವೇ! ಸರ್ವಪ್ರಯತ್ನದಿಂದ ಈ ಶತ್ರುವನ್ನು ಕೊಲ್ಲು. ಎಲೈ ವೃಷ್ಣಿಕುಲಶ್ರೇಷ್ಠನೇ! ನಿನಗೆ ಈ ಕಾಲವು ಮೀರಿಹೋಗದಿರಲಿ.

ನೈಷ ಮಾರ್ದವಸಾಧ್ಯೋ ಹಿ ನಾಪಿ ಚೈವ ಸಖಾ ತವ ।
ಯೇನ ತ್ವಂ ಬಾಧಿತೋ ವೀರ ದ್ವಾರಕಾ ಚಾಪಿ ಮರ್ದಿತಾ ॥೨೪॥

ಎಲೈ ವೀರನೇ! ಯಾವ ಈ ಸಾಲ್ವನು ದ್ವಾರಕಾಪಟ್ಟಣವನ್ನು ಮರ್ದಿಸಿ ನಿನ್ನನ್ನು ಬಾಧಿಸುತ್ತಿದ್ದಾನೆಯೋ ಅವನು ಸುಲಭಸಾಧ್ಯನಲ್ಲ ಮತ್ತು ನಿನ್ನ ಸ್ನೇಹಿತನೂ ಅಲ್ಲ.

ಏವಮಾದಿ ತು ಕೌಂತೇಯ ಶ್ರುತ್ವಾಽಹಂ ಸಾರಥೇರ್ವಚಃ ।
ತತ್ತ್ವಮೇತದಿತಿ ಜ್ಞಾತ್ವಾ ಯುದ್ಧೇ ಮತಿಮಧಾರಯಮ್ ॥೨೫॥

ಎಲೈ ಕೌಂತೇಯನೇ! ಇವೇ ಮೊದಲಾದ ಸಾರಥಿಯ ಮಾತುಗಳನ್ನು ಕೇಳಿ ಇದು ಸತ್ಯವಾದುದು ಎಂದು ನಿಶ್ಚಯಿಸಿ ನಾನು ಯುದ್ಧವನ್ನು ಮಾಡಲು ನಿಶ್ಚಯಿಸಿದೆ.

ವಧಾಯ ಸಾಲ್ವರಾಜಸ್ಯ ಸೌಭಸ್ಯ ವಿನಿಪಾತನೇ ।
ದಾರುಕಂ ಚಾಬ್ರುವಂ ವೀರ ಮುಹೂರ್ತಂ ಸ್ಥೀಯತಾಮಿತಿ ॥೨೬॥

ಸಾಲ್ವರಾಜನನ್ನು ಸಂಹರಿಸಿ ಸೌಭವನ್ನು ಕೆಳಗೆ ಉರುಳಿಸಲು ನಿಶ್ಚಯಿಸಿ ದಾರುಕನನ್ನು ಕುರಿತು ವೀರನೇ! ಒಂದು ಮುಹೂರ್ತದ ಕಾಲ ಸಹನೆಯಿಂದ ಇರು ಎಂದು ಹೇಳಿದೆನು.

ತತೋಽಪ್ರತಿಹತಂ ದಿವ್ಯಮಭೇದ್ಯಮತಿವೀರ್ಯವತ್ ।
ಆಗ್ನೇಯಮಸ್ತ್ರಂ ದಯಿತಂ ಸರ್ವದಾಹಂ ಮಹಾಪ್ರಭಮ್ ॥೨೭॥

ಯಕ್ಷಾಣಾಂ ರಾಕ್ಷಸಾನಾಂ ಚ ದಾನವಾನಾಂ ಚ ಸಂಯುಗೇ ।
ರಾಜ್ಞಾಂ ಚ ಪ್ರತಿಲೋಮಾನಾಂ ಭಸ್ಮಾಂತಕರಣಂ ಮಹತ್ ॥೨೮॥

ಕ್ಷುರಾಂತಮಮಲಂ ಚಕ್ರಂ ಕಾಲಾಂತಕಯಮೋಪಮಮ್ ।
ಅಭಿಮಂತ್ರ್ಯಾಹಮತುಲಂ ದ್ವಿಷತಾಂ ವಿನಿಬರ್ಹಣಮ್ ॥೨೯॥

ಜಹಿ ಸೌಭಂ ಸ್ವವೀರ್ಯೇಣ ಯೇ ಚಾತ್ರ ರಿಪವೋ ಮಮ ।
ಇತ್ಯುಕ್ತ್ವಾ ಭುಜವೀರ್ಯೇಣ ತಸ್ಮೈ ಪ್ರಾಹಿಣವಂ ರುಷಾ ॥೩೦॥

ಅನಂತರ ಅಪ್ರತಿಹತವಾದ ದಿವ್ಯವಾದ ಅಭೇದ್ಯವಾದ ಮಹಾಸಾಮರ್ಥ್ಯವುಳ್ಳ ಮಹಾಪ್ರಭೆಯುಳ್ಳ, ಸರ್ವವನ್ನೂ ದಹಿಸುವ, ಯಕ್ಷರನ್ನೂ ರಾಕ್ಷಸರನ್ನೂ ದಾನವರನ್ನೂ ಪ್ರತಿಲೋಮದಲ್ಲಿ ಜನಿಸಿದ ರಾಜರನ್ನೂ ಭಸ್ಮವನ್ನಾಗಿ ಮಾಡುವ, ಕತ್ತಿಯ ಅಲುಗಿನಂತೆ ಹರಿತವಾದ, ಸ್ವಚ್ಛವಾದ, ಕಾಲಾಂತಕ ಯಮನಂತಿರುವ, ನನಗೆ ಪ್ರಿಯವಾದ, ಆಗ್ನೇಯಾಸ್ತ್ರವಾದ, ಶತ್ರುಗಳನ್ನು ನಾಶಮಾಡುವ ಅಸದೃಶವಾದ ಸುದರ್ಶನವನ್ನು ಅಭಿಮಂತ್ರಿಸಿ ನಿನ್ನ ಪರಾಕ್ರಮದಿಂದ ಸೌಭವನ್ನು ಉರುಳಿಸು ಮತ್ತು ಇಲ್ಲಿರುವ ನನ್ನ ಶತ್ರುಗಳನ್ನು ಸಂಹರಿಸು ಎಂದು ಹೇಳಿ ನನ್ನ ಭುಜವೇಗದಿಂದ ಅದನ್ನು ಸೌಭದ ಮೇಲೆ ಸಿಟ್ಟಿನಿಂದ ಪ್ರಯೋಗಿಸಿದೆ.

ರೂಪಂ ಸುದರ್ಶನಸ್ಯಾಸೀದ್ ಆಕಾಶೇ ಪತತಸ್ತದಾ ।
ದ್ವಿತೀಯಸ್ಯೇವ ಸೂರ್ಯಸ್ಯ ಯುಗಾಂತೇ ಪರಿವೇಷ್ಟ್ಯತಃ ॥೩೧॥

ಆಕಾಶದಲ್ಲಿ ಹೋಗುವ ಸುದರ್ಶನದ ರೂಪವು ಯುಗಾಂತಸಮಯದಲ್ಲಿ ಪರಿವೇಷವನ್ನು ಸುತ್ತಲೂ ಒಂದು ವರ್ತುಲಾಕಾರದ ಪರಿಧಿ ಹೊಂದಿದ ಇನ್ನೊಂದು ಸೂರ್ಯನಂತೆ ಪ್ರಜ್ವಲಿಸುತ್ತಿತ್ತು.

ತತ್ ಸಮಾಸಾದ್ಯ ನಗರಂ ಸೌಭಂ ವ್ಯಪಹತದ್ವಿಷಮ್ ।
ಮಧ್ಯೇನ ದಾರಯಾಮಾಸ ಮಹಾಮೇರುಮಿವೋಚ್ಛ್ರಿತಮ್ ॥೩೨॥

ದ್ವಿಧಾ ಕೃತಂ ತು ತತ್ ಸೌಭಂ ಸುದರ್ಶನಬಲಾಹತಮ್ ।
ಮಹೇಶ್ವರಶರೋದ್ಧೂತಮಪತತ್ ತ್ರಿಪುರಂ ಯಥಾ ॥೩೩॥

ಆ ಸುದರ್ಶನವು ಶತ್ರುಗಳು ನಾಶಹೊಂದಿದ್ದ ಆ ಸೌಭನಗರವನ್ನು ತಲುಪಿ ಎತ್ತರವಾದ ಮಹಾಮೇರುವನ್ನು ಮಧ್ಯದಲ್ಲಿ ಸೀಳಿದಂತೆ ಮಧ್ಯದಲ್ಲಿ ಸೀಳಿಹಾಕಿತು. ಸುದರ್ಶನದ ಸಾಮರ್ಥ್ಯದಿಂದ ಮಧ್ಯದಲ್ಲಿ ಎರಡು ಭಾಗವಾಗಿ ಸೀಳಲ್ಪಟ್ಟ ಆ ಸೌಭವು ಮಹೇಶ್ವರ ಬಾಣಗಳಿಂದ ಸೀಳಲ್ಪಟ್ಟ ತ್ರಿಪುರಗಳಂತೆ ಕೆಳಗೆ ಬಿದ್ದಿತು.

ತಸ್ಮಿನ್ ನಿಪತಿತೇ ಸೌಭೇ ಚಕ್ರಮಾಗಾತ್ ಕರಂ ಮಮ ।
ಪುನಶ್ಚೋದ್ಧೂಯ ವೇಗೇನ ಸಾಲ್ವಾಯೇತ್ಯಹಮಬ್ರುವಮ್ ॥೩೪॥

ಆ ಸೌಭವು ಕೆಳಗೆ ಬೀಳುತ್ತಿರಲು ಚಕ್ರವುಬಂದು ನನ್ನ ಕೈಯನ್ನು ಸೇರಿತು. ಆ ಚಕ್ರವನ್ನು ಪುನಃ ವೇಗವಾಗಿ ತಿರುಗಿಸಿ ಈ ಬಾರಿ ಸಾಲ್ವನಿಗೆ ಎಂದು ಹೇಳಿದೆನು.

ತತಃ ಸಾಲ್ವಂ ಗದಾಂ ಗುರ್ವೀಮಾವಿಧ್ಯಂತಂ ಮಹಾಹವೇ ।
ದ್ವಿಧಾ ಚಕಾರ ಸಹಸಾ ಪ್ರಜಜ್ವಾಲ ಚ ತೇಜಸಾ ॥೩೫॥

ಆಗ ದೊಡ್ಡಯುದ್ಧದಲ್ಲಿ ಭಾರವಾದ ಗದೆಯನ್ನು ತಿರುಗಿಸುತ್ತಿದ್ದ ಸಾಲ್ವನನ್ನು ಚಕ್ರವು ತಕ್ಷಣ ಎರಡು ಭಾಗವಾಗಿ ಸೀಳಿ ತನ್ನ ತೇಜಸ್ಸಿನಿಂದ ಜ್ವಲಿಸಿತು.

ತಸ್ಮಿನ್ ನಿಪತಿತೇ ಪಾಪೇ ದಾನವಾಸ್ತ್ರಚೇತಸಃ ।
ಹಾಹಾಭೂತಾ ದಿಶೋ ಜಗ್ಮುರರ್ದಿತಾ ಮಮ ಸಾಯಕೈಃ ॥೩೬॥

ಆ ಪಾಪಿಯು ಬೀಳುತ್ತಿರಲು ಭಯಗ್ರಸ್ತ ಚೇತನರಾದ ದಾನವರೆಲ್ಲರೂ ನನ್ನ ಬಾಣಗಳಿಂದ ಪೀಡಿತರಾಗಿ ಹಾಹಾಕಾರವನ್ನು ಮಾಡುತ್ತಾ ದಿಕ್ಕುದಿಕ್ಕುಗಳಿಗೆ ಓಡಿಹೋದರು.

ತತೋಽಹಂ ಸಮವಸ್ಥಾಪ್ಯ ರಥಂ ಸೌಭಸಮೀಪತಃ ।
ಶಂಖಂ ಪ್ರಧ್ಮಾಪ್ಯ ಹರ್ಷೇಣ ಸುಹೃದಃ ಪರ್ಯಹರ್ಷಯಮ್ ॥೩೭॥

ಅನಂತರ ನಾನು ನನ್ನ ರಥವನ್ನು ಬಿರಿದುಬಿದ್ದ ಸೌಭದ ಸಮೀಪದಲ್ಲಿ ನಿಲ್ಲಿಸಿ ಶಂಖವನ್ನು ಸಂತೋಷದಿಂದ ಬಲವಾಗಿ ಊದಿ ನನ್ನ ಹಿತೈಷಿಗಳೆಲ್ಲರನ್ನೂ ಸಂತೋಷಗೊಳಿಸಿದೆನು.

ತನ್ಮೇರುಶಿಖರಾಕಾರಂ ವಿಧ್ವಸ್ತಾಟ್ಟಾಲಗೋಪುರಮ್ ।
ದಹ್ಯಮಾನಮಭಿಪ್ರೇಕ್ಷ್ಯ ಸ್ತ್ರಿಯಸ್ತಾಃ ಸಂಪ್ರದುದ್ರುವುಃ ॥೩೮॥

ಮೇರುಶಿಖರದಂತೆ ಇದ್ದ ಆ ಸೌಭವು ಅಟ್ಟಾಲ (ಉಪ್ಪರಿಗೆ) ಗೋಪುರಗಳ ಜೊತೆಯಲ್ಲಿ ವಿಧ್ವಸ್ತವಾಗಿ ಉರಿಯುತ್ತಿರುವುದನ್ನು ನೋಡಿ ಆ ಸ್ತ್ರೀಯರೆಲ್ಲರೂ ಓಡಿಹೋದರು.

ಏವಂ ನಿಹತ್ಯ ಸಮರೇ ಸಾಲ್ವಂ ಸೌಭಂ ನಿಪಾತ್ಯ ಚ ।
ಆನರ್ತಾನ್ ಪುನರಾಗಮ್ಯ ಸುಹೃದಾಂ ಪ್ರೀತಿಮಾವಹಮ್ ॥೩೯॥

ಹೀಗೆ ಯುದ್ಧದಲ್ಲಿ ಸಾಲ್ವನನ್ನು ಮತ್ತು ಸೌಭವನ್ನು ಹೊಡೆದು ಉರುಳಿಸಿ ದ್ವಾರಕಾಪಟ್ಟಣಕ್ಕೆ ಪುನಃ ಬಂದು ನನ್ನ ಬಂಧುಗಳೆಲ್ಲರಿಗೂ ಸಂತೋಷವನ್ನು ಉಂಟುಮಾಡಿದೆ.

ಏತಸ್ಮಾತ್ ಕಾರಣಾದ್ ರಾಜನ್ ನಾಗಮಂ ಗಜಸಾಹ್ವಯಮ್।
ಯದ್ಯಾಗಾಂ ಪರವೀರಘ್ನ ನ ಹಿ ಜೀವೇತ್ ಸುಯೋಧನಃ ॥೪೦॥

ಎಲೈ ರಾಜನೇ! ಈ ಕಾರಣದಿಂದ ನಾನು ಹಸ್ತಿನಾವತಿಗೆ ಬರಲಿಲ್ಲ. ಎಲೈ ಶತ್ರುವೀರನಾಶಕನೇ! ನಾನು ಬಂದಿದ್ದರೆ ಸುಯೋಧನನು ಬದುಕಿ ಉಳಿಯುತ್ತಿರಲಿಲ್ಲ.

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುರ್ಧರ್ಮಜಂ ಪುರುಷೋತ್ತಮಃ ।
ಆಮಂತ್ರ್ಯ ಪ್ರಯಯೌ ಧೀಮಾನ್ ಪಾಂಡವಾನ್ ಮಧುಸೂದನಃ ॥೪೧॥

ಹೀಗೆ ಹೇಳಿ ಮಹಾಬಾಹುವೂ ಪುರುಷೋತ್ತಮನೂ ಆದ ಮೇಧಾವಿಯಾದ ಮಧುಸೂದನನು ಧರ್ಮರಾಜನ ಮತ್ತು ಪಾಂಡವರ ಅನುಮತಿಯನ್ನು ಪಡೆದು ಹೊರಟನು.

ಅಭಿವಾದ್ಯ ಮಹಾಬಾಹುರ್ಧರ್ಮರಾಜಂ ಯುಧಿಷ್ಠಿರಮ್ ।
ರಾಜ್ಞಾ ಮೂರ್ಧನ್ಯುಪಾಘ್ರಾತೋ ಭೀಮೇನ ಚ ಮಹಾಭುಜಃ ॥೪೨॥

ಪರಿಷ್ವಕ್ತಶ್ಚಾರ್ಜುನೇನ ಯಮಾಭ್ಯಾಮಭಿವಾದಿತಃ ।
ಸಮ್ಮಾನಿತಶ್ಚ ಧೌಮ್ಯೇನ ದ್ರೌಪದ್ಯಾ ಚಾಪಿ ಸಂಸ್ತುತಃ ॥೪೩॥

ಮಹಾಬಾಹುವಾದ ಕೃಷ್ಣನು ಧರ್ಮರಾಜನಿಗೆ ನಮಸ್ಕಾರವನ್ನು ಮಾಡಿ ಅವನಿಂದಲೂ ಹಾಗೆಯೇ ಭೀಮನಿಂದಲೂ ಮಹಾಭುಜನಾದ ಅವನು ಶಿರಸ್ಸಿನಲ್ಲಿ ಆಘ್ರಾಣಿಸಲ್ಪಟ್ಟನು. ಅರ್ಜುನನಿಂದ ಆಲಿಂಗಿಸಲ್ಪಟ್ಟು ನಕುಲಸಹದೇವರಿಂದ ನಮಸ್ಕರಿಸಲ್ಪಟ್ಟು ಧೌಮ್ಯರಿಂದ ಗೌರವಿಸಲ್ಪಟ್ಟನು ಮತ್ತು ದ್ರೌಪದಿಯಿಂದ ಸ್ತೋತ್ರಮಾಡಲ್ಪಟ್ಟನು.

ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕಾಂಚನಮ್ ।
ಆರುರೋಹ ರಥಂ ಕೃಷ್ಣಃ ಪಾಂಡವೈರಭಿಪೂಜಿತಃ ॥೪೪॥

ಕೃಷ್ಣನು ಸುಭದ್ರೆ ಮತ್ತು ಅಭಿಮನ್ಯುವನ್ನು ತನ್ನ ಸುವರ್ಣಮಯವಾದ ರಥದಲ್ಲಿ ಕೂಡಿಸಿ ಪಾಂಡವರಿಂದ ಪೂಜಿತನಾಗಿ ರಥವನ್ನು ಏರಿದನು.

ಸೈನ್ಯಸುಗ್ರೀವಯುಕ್ತೇನ ರಥೇನಾದಿತ್ಯವರ್ಚಸಾ ।
ಸ್ವಪುರಂ ಪ್ರಯಯೌ ಕೃಷ್ಣಃ ಸಮಾಶ್ವಾಸ್ಯ ಯುಧಿಷ್ಠಿರಮ್ ॥೪೫॥

ಸೈನ್ಯ(ಶೈಭ್ಯ) ಸುಗ್ರೀವ ಕುದುರೆಗಳನ್ನು ಹೂಡಿದ ಸೂರ್ಯಕಾಂತಿಯುಳ್ಳ ತನ್ನ ರಥದಲ್ಲಿ ಕುಳಿತು ಯುಧಿಷ್ಠಿರನಿಗೆ ಸಮಾಧಾನವನ್ನು ಮಾಡಿ ಕೃಷ್ಣನು ತನ್ನ ಪುರಕ್ಕೆ ತೆರಳಿದನು.

ತತಃ ಪ್ರಯಾತೇ ದಾಶಾರ್ಹೇ ಧೃಷ್ಟದ್ಯುಮ್ನೋऽಪಿ ಪಾರ್ಷತಃ ।
ದ್ರೌಪದೇಯಾನುಪಾದಾಯ ಪ್ರಯಯೌ ಸ್ವಪುರಂ ತದಾ ॥೪೬॥

ದಾಶಾರ್ಹನಾದ ಕೃಷ್ಣನು ಹಿಂದಿರುಗುತ್ತಿರಲು ಪಾರ್ಷತನಾದ ಧೃಷ್ಟದ್ಯುಮ್ನನೂ ಸಹ ದ್ರೌಪದಿಯ ಐದು ಮಕ್ಕಳನ್ನು ಕರೆದುಕೊಂಡು ತನ್ನ ನಗರಕ್ಕೆ ಹಿಂದಿರುಗಿದನು.

ಧೃಷ್ಟಕೇತುಃ ಸಮಾದಾಯ ಸ್ವಸಾರಂ ಚಾಥ ಚೇದಿರಾಟ್ ।
ಜಗಾಮ ಪಾಂಡವಾನ್ ದೃಷ್ಟ್ವಾ ರಮ್ಯಾಂ ಶುಕ್ತಿಮತೀಂ ಪುರೀಮ್ ॥

ಅನಂತರ ಚೇದಿರಾಜನಾದ ಧೃಷ್ಟಕೇತುವು ತನ್ನ ತಂಗಿಯನ್ನು ಕರೆದು ಕೊಂಡು ಪಾಂಡವರನ್ನು ನೋಡಿ ತನ್ನ ಸುಂದರವಾದ ಶುಕ್ತಿಮತೀಪಟ್ಟಣಕ್ಕೆ ತೆರಳಿದನು.

ಕೇಕಯಾಶ್ಚಾಭ್ಯನುಜ್ಞಾತಾಃ ಕೌಂತೇಯೇನಾಮಿತೌಜಸಃ ।
ಆಮಂತ್ರ್ಯ ಪಾಂಡವಾನ್ ಸರ್ವಾನ್ ಪ್ರಯಯುಸ್ತೇಽಪಿ ಭಾರತ ॥

ಎಲೈ ಭಾರತನೇ! ಅಮಿತಪರಾಕ್ರಮಿಗಳಾದ ಕೇಕಯದೇಶದ ಸಹೋದರರು ಧರ್ಮರಾಜನಿಂದ ಅನುಮತಿಯನ್ನು ಪಡೆದು ಎಲ್ಲಾ ಪಾಂಡವರ ಅನುಮತಿಯನ್ನು ಪ್ರಾರ್ಥಿಸಿ ತಮ್ಮ ನಗರಕ್ಕೆ ಹೋದರು.

ಬ್ರಾಹ್ಮಣಾಶ್ಚ ವಿಶಶ್ಚೈವ ತಥಾ ವಿಷಯವಾಸಿನಃ ।
ವಿಸೃಜ್ಯಮಾನಾಃ ಸುಭೃಶಂ ನ ತ್ಯಜಂತಿ ಸ್ಮ ಪಾಂಡವಾನ್ ॥೪೯॥

ಬ್ರಾಹ್ಮಣರು ವೈಶ್ಯರು ಮತ್ತು ಹಸ್ತಿನಾವತಿಯ ಕೆಲವು ನಿವಾಸಿಗಳು ಮತ್ತೆಮತ್ತೆ ಹೋಗಲು ಒತ್ತಾಯಮಾಡಿದರೂ ಪಾಂಡವರನ್ನು ಬಿಡಲಿಲ್ಲ.

ಸಮವಾಯಃ ಸ ರಾಜೇಂದ್ರ ಸುಮಹಾದ್ಭುತದರ್ಶನಃ ।
ಆಸೀನ್ಮಹಾತ್ಮನಾಂ ತೇಷಾಂ ಕಾಮ್ಯಕೇ ಭರತರ್ಷಭ ॥೫೦॥

ಎಲೈ ರಾಜೇಂದ್ರನೇ! ಎಲೈ ಭರತರ್ಷಭನೇ! ಕಾಮ್ಯಕವನದಲ್ಲಿ ಅಂತಹ ನೋಡಲು ಅದ್ಭುತವಾದ ಆ ಮಹಾತ್ಮರ ಸಮಾವೇಶವು ನಡೆಯಿತು.

ಯುಧಿಷ್ಠಿರಸ್ತು ವಿಪ್ರಾಂಸ್ತಾನನುಮಾನ್ಯ ಮಹಾಮನಾಃ ।
ಶಶಾಸ ಪುರುಷಾನ್ ಕಾಲೇ ರಥಾನ್ ಯೋಜಯತೇತಿ ಹ ॥೫೧॥

ಉದಾರಿಯಾದ ಯುಧಿಷ್ಠಿರನು ಆ ಬ್ರಾಹ್ಮಣರನ್ನು ಅನುಮೋದಿಸಿ ಯೋಗ್ಯವಾದ ಕಾಲದಲ್ಲಿ ರಥಗಳನ್ನು ಹೂಡಿ ಎಂದು ತನ್ನ ಕಿಂಕರರಿಗೆ ಅಪ್ಪಣೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಪಾಂಡಾವಾನಾಂ ಚ ಯಾ ಭಾರ್ಯಾಃ ಪುತ್ರಾ ಅಪಿ ಚ ಸರ್ವಶಃ ।
ಅನ್ವೇವ ಪಾಂಡವಾನ್ ಯಾತಾ ವನಮತ್ಯೈವ ಸಂಸ್ಥಿತಾಃ ॥೫೪॥

ಪಾಂಡವರ ಬೇರೆ ಪತ್ನಿಯರೂ ಎಲ್ಲ ಮಕ್ಕಳೂ ಅವರನ್ನು ಹಿಂಬಾಲಿಸಿ ಕಾಡಿಗೆ ಬಂದು ಜೊತೆಗೇ ಇದ್ದರು.

ಧೃಷ್ಟದ್ಯುಮ್ನಸ್ತತಃ ಕೃಷ್ಣಾಂ ಸಾಂತ್ವಯಿತ್ವೈವ ಕೇಶವಂ ।
ಪ್ರಣಮ್ಯ ಸಮನುಜ್ಞಾತೋ ಭಾಗಿನೇಯೈಃ ಪುರಂ ಯಯೌ ॥೫೫॥

ಧೃಷ್ಟದ್ಯುಮ್ನ ದ್ರೌಪದಿಯನ್ನು ಸಂತೈಸಿ ಕೃಷ್ಣನನ್ನು ನಮಿಸಿ ಅವನ ಅನುಜ್ಞೆ ಪಡೆದು ದ್ರೌಪದೀಪುತ್ರರೊಂದಿಗೆ ತನ್ನ ಪಟ್ಟಣಕ್ಕೆ ಹೊರಟುಹೋದ.

ಧೃಷ್ಟಕೇತುಶ್ಚ ಭಗಿನೀಂ ಕಾಶಿರಾಜಃ ಸುತಾಮಪಿ ।
ಪುರಂ ಯಯತುರಾದಾಯ ಕುಂತ್ಯೈವಾನ್ಯಾಃ ಸಹ ಸ್ಥಿತಾಃ ॥೫೬॥

ಧೃಷ್ಟಕೇತು ತನ್ನ ತಂಗಿಯನ್ನೂ ಕಾಶಿರಾಜ ತನ್ನ ಮಗಳನ್ನೂ ಕರೆದುಕೊಂಡು ತಮ್ಮ ಪಟ್ಟಣಗಳಿಗೆ ಹೋದರು. ಪಾಂಡವರ ಬೇರೆ ಪತ್ನಿಯರು ಕುಂತಿಯ ಜೊತೆಗೇ ಇದ್ದರು.

ಪಾರ್ವತೀ ನಕುಲಸ್ಯಾಸೀತ್ ಭಾರ್ಯಾ ಪೂರ್ವಂ ತಿಲೋತ್ತಮಾ ।
ಪೂರ್ವೋಕ್ತೇ ಚೈವ ಯಮಯೋರ್ಭಾರ್ಯೇ ಕುಂತ್ಯಾ ನಿವಾರಿತಾಃ ॥

ಹಿಂದೆ ತಿಲೋತ್ತಮೆ ಎಂಬ ಅಪ್ಸರೆಯಾಗಿದ್ದಳು ನಕುಲ ಪತ್ನಿ ಪಾರ್ವತಿ. ಅವಳನ್ನೂ ಹಿಂದೆ ಹೇಳಿದ ನಕುಲ ಸಹದೇವರ ಪತ್ನಿಯರಾದ ಶಲ್ಯ ಜರಾಸಂಧ ಪುತ್ರಿಯರನ್ನೂ ಕಾಡಿಗೆ ಹೋಗದಂತೆ ತಡೆದು ಕುಂತಿ ತನ್ನ ಬಳಿಯೆ ನಿಲ್ಲಿಸಿಕೊಂಡಿದ್ದಳು.

ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕೇಶವಃ ।
ಪಾಂಡವಾನಭ್ಯನುಜ್ಞಾಯ ಸಭಾರ್ಯಃ ಸ್ವಪುರಂ ಯಯೌ ॥೫೮॥

ಸುಭದ್ರೆಯನ್ನೂ ಅಭಿಮನ್ಯುವನ್ನೂ ಶ್ರೀಕೃಷ್ಣ ರಥದಲ್ಲಿ ಕುಳ್ಳಿರಿಸಿಕೊಂಡು ಪಾಂಡವರಿಂದ ಬೀಳ್ಕೊಂಡು ಸತ್ಯಭಾಮಾ ಸಮೇತನಾಗಿ ದ್ವಾರಕೆಗೆ ತೆರಳಿದ.

ಕಂಚಿತ್ಕಾಲಂ ದ್ರೌಪದೇಯಾ ಉಷ್ಯ ಪಾಂಚಾಲಕೇ ಪುರೇ ।
ಯಯುರ್ದ್ವಾರಾವತೀಮೇವ ತತ್ರೋಷುಃ ಕೃಷ್ಣಪಾಲಿತಾಃ ॥೫೯॥

ದ್ರೌಪದಿಯ ಮಕ್ಕಳು ಪಾಂಚಾಲನಗರದಲ್ಲಿ ಕೆಲವು ಕಾಲ ಇದ್ದು ದ್ವಾರಕೆಗೆ ಹೋದರು. ಅಲ್ಲಿ ಶ್ರೀಕೃಷ್ಣನ ರಕ್ಷಣೆಯಲ್ಲಿ ವಾಸಮಾಡಿದರು.

ತತಃಪರಂ ಧರ್ಮರಾಜೋ ನಿರ್ವಿಣ್ಣಃ ಸ್ವಕೃತೇನ ಹ ।
ಭ್ರಾಕೃಭಾರ್ಯಾಪದೇ ಕೃಷ್ಣಾಂ ಸ್ಥಾಪಯಾಮಾಸ ಸರ್ವದಾ ॥೬೦॥

ಅನಂತರ ಧರ್ಮರಾಜ ತನ್ನ ಕೃತ್ಯಕ್ಕೆ ತಾನೆ ಬೇಸತ್ತು ದ್ರೌಪದಿಯನ್ನು ಸದಾ ಸೋದರ ಪತ್ನೀ ಸ್ಥಾನದಲ್ಲಿಯೇ ಇರಿಸಿದ.

ಊಷುರ್ವನೇ ಚ ತೇ ಪಾರ್ಥಾ ಮುನಿಶೇಷಾನ್ನಭೋಜಿನಃ ।
ಭುಕ್ತವತ್ಸ್ವೇವಾನುಚೇಷು ಭುಂಕ್ತೇ ರಾಜಾ ಯುಧಿಷ್ಠಿರಃ ॥೬೧॥

ಪಾಂಡವರು ಮುನಿಗಳ ಭೋಜನಾನಂತರ ಅವರ ಶೇಷಾನ್ನ ಉಣ್ಣುತ್ತ ಕಾಡಿನಲ್ಲಿ ವಾಸಿಸಿದರು. ರಾಜಾ ಯುಧಿಷ್ಠಿರ ತಮ್ಮಂದಿರ ಭೋಜನಾ ನಂತರವೆ ಉಣ್ಣುತ್ತಿದ್ದ.

ಅಲಂಘ್ಯತ್ವಾತ್ತದಾಜ್ಞಾಯಾ ಅನುಜಾಃ ಪೂರ್ವಭೋಜಿನಃ ।
ತಸ್ಮಾನಂತರಮೇವೈಕಾ ಭುಂಕ್ತೇ ಸಾ ಪಾರ್ಷತಾತ್ಮಜಾ ॥೬೨॥

ಅಣ್ಣನ ಆಜ್ಞೆ ಅನುಲ್ಲಂಘನೀಯವಾದ್ದರಿಂದ ತಮ್ಮಂದಿರು ಮೊದಲಿಗೆ ಉಣ್ಣುತ್ತಿದ್ದರು. ಧರ್ಮರಾಜ ಉಂಡ ಬಳಿಕ ದ್ರೌಪದಿಯೊಬ್ಬಳೇ ಉಣ್ಣುತ್ತಿದ್ದಳು.

ಏವಂ ಸದಾ ವಿಷ್ಣುಪರಾಯಣಾನಾಂ
ತತ್ಪಾರ್ಪಣಾನ್ಯೈಕಭುಜಾಂ ಪ್ರಯಾತಃ ।
ಸಂವತ್ಸರಸ್ತತ್ರ ಜಗಾದ ಕೃಷ್ಣಾ
ಭೀಮಾಜ್ಞಯಾ ಧರ್ಮರಾಜಂ ಸುವೇತ್ರೀ ॥೬೩॥

ಈ ರೀತಿಯಾಗಿ ಸದಾ ವಿಷ್ಣುಭಕ್ತರಾದ ಪಾಂಡವರು ವಿಷ್ಣುವಿಗೆ ನಿವೇದಿತವಾದ ಅನ್ನವನ್ನು ಮಾತ್ರ ಉಣ್ಣುತ್ತ ಒಂದು ವರ್ಷ ಕಳೆದರು. ಬಳಿಕ ಒಳ್ಳೆಯ ನೀತಿಜ್ಞಳಾದ ದ್ರೌಪದಿ ಭೀಮನ ಪ್ರೇರಣೆಯಿಂದ ಧರ್ಮರಾಜನ ಬಳಿಯಲ್ಲಿ ಹೇಳತೊಡಗಿದಳು.

# ಇಪ್ಪತ್ತನೆಯ ಅಧ್ಯಾಯ

(ಪಾಂಡವರು ಪೌರರನ್ನು ಸಮಾಧಾನಪಡಿಸಿ ಹಿಂದೆ ಕಳುಹಿಸುವುದು.)

ವೈಶಂಪಾಯನಃ

ತಸ್ಮಿನ್ ದಶಾರ್ಹಾಧಿಪತೌ ಪ್ರಯಾತೇ
ಯುಧಿಷ್ಠಿರೋ ಭೀಮಸೇನಾರ್ಜುನೌ ಚ ।
ಯಮೌ ಚ ಕೃಷ್ಣಾ ಚ ಪುರೋಹಿತಶ್ಚ
ರಥಾನ್ ಮಹಾರ್ಹಾನ್ ಪರಮಾಶ್ವಯುಕ್ತಾನ್ ॥೧॥

ಆಸ್ಥಾಯ ವೀರಾಃ ಸಹಿತಾ ವನಾಯ
ಪ್ರತಸ್ಥಿರೇ ಭೂತಪತಿಪ್ರಕಾಶಾಃ ।
ಹಿರಣ್ಯನಿಷ್ಕಾನ್ ವಸನಾನಿ ಗಾಶ್ಚ
ಪ್ರದಾಯ ಶಿಕ್ಷಾಕ್ಷರಮಂತ್ರವಿದ್ಭ್ಯಃ ॥೨॥

ದಶಾರ್ಹಾಧಿಪತಿಯಾದ ಆ ಕೃಷ್ಣನು ಪ್ರಯಾಣಮಾಡುತ್ತಿರಲು ಯುಧಿಷ್ಠಿರ ಭೀಮಸೇನ ಅರ್ಜುನ ನಕುಲಸಹದೇವರು ದ್ರೌಪದಿ ಮತ್ತು ಪುರೋಹಿತರಾದ ಧೌಮ್ಯರು ಹಿರಣ್ಯನಿಷ್ಕಗಳನ್ನೂ ಬೆಲೆಬಾಳುವ ವಸ್ತ್ರಗಳನ್ನೂ ಗೋವುಗಳನ್ನೂ ವಿದ್ಯಾವಂತರಾದ ಮತ್ತು ಮಂತ್ರವೇತ್ತರಾದ ಬ್ರಾಹ್ಮಣರಿಗೆ ಕೊಟ್ಟು ಶ್ರೇಷ್ಠವಾದ ಅಶ್ವಗಳನ್ನು ಹೂಡಿದ ಬೆಲೆಬಾಳುವ ರಥಗಳನ್ನು ಏರಿ ರುದ್ರದೇವರಂತೆ ಕಂಗೊಳಿಸುತ್ತಾ ಎಲ್ಲರೂ ಒಟ್ಟಿಗೆ ವನಕ್ಕೆ ಹೊರಟರು.

ಪ್ರೇಷ್ಯಾಃ ಪುರಾ ವಿಂಶತಿರಾತ್ತಶಸ್ತ್ರಾ
ಧನೂಂಷಿ ಶಸ್ತ್ರಾಣಿ ಶರಾಂಶ್ಚ ದೀಪ್ತಾನ್ ।
ಮೌರ್ವೀಃ ಸುಯಂತ್ರಾಣಿ ಕಲಾಪಕಾಂಶ್ಚ
ಸರ್ವೇ ಸಮಾದಾಯ ಜಘನ್ಯಮೀಯುಃ ॥೩॥

ಮೊದಲೇ ಇಪ್ಪತ್ತು ಜನಸೇವಕರು ಧನುಸ್ಸುಗಳನ್ನೂ ಶತ್ರುಗಳನ್ನೂ ಹೊಳೆಯುವ ಬಾಣಗಳನ್ನೂ ಜ್ಯಾಬಂಧನಗಳನ್ನು ಉಳಿದ ಸಲಕರಣೆಗಳನ್ನೂ ತೆಗೆದುಕೊಂಡು ಸಮೀಪದಲ್ಲಿಯೇ ನಡೆದರು.

ತತಶ್ಚ ವಾಸಾಂಸಿ ಚ ರಾಜಪುತ್ರ್ಯಾ
ಧಾತ್ರ್ಯಶ್ಚ ದಾಸ್ಯಶ್ಚ ವಿಭೂಷಣಂ ಯತ್ ।
ತದಿಂದ್ರಸೇನಸ್ತ್ವರಿತಃ ಪ್ರಗೃಹ್ಯ
ಜಘನ್ಯಮೇವೋಪಯಯೌ ರಥೇನ ॥೪॥

ಅನಂತರ ರಾಜಪುತ್ರಿಯ ವಸ್ತ್ರಗಳನ್ನೂ ದಾದಿಯರನ್ನೂ ಮತ್ತು ದಾಸಿಯರನ್ನೂ ವಿಭೂಷಣಗಳನ್ನು ಇಂದ್ರಸೇನನು ತೆಗೆದುಕೊಂಡು ಸಮೀಪದಲ್ಲಿಯೇ ಇನ್ನೊಂದು ರಥದಲ್ಲಿ ಹೊರಟನು.

ತತಃ ಕುರುಶ್ರೇಷ್ಠಮುಪೇತ್ಯ ಪೌರಾಃ
ಪ್ರದಕ್ಷಿಣಂ ಚಕ್ರುರದೀನಸತ್ತ್ವಮ್ ।
ತಂ ಬ್ರಾಹ್ಮಣಾಶ್ಚಾಭ್ಯವದನ್ ಪ್ರಸನ್ನಾ
ಮುಖ್ಯಾಶ್ಚ ಸರ್ವೇ ಕುರುಜಾಂಗಲೇಷು ॥೫॥

ಆಗ ಪೌರರು ಕುರುಶ್ರೇಷ್ಠನಾದ, ಧೃತಿಗೆಡದ, ಧರ್ಮರಾಜನ ಸಮೀಪಕ್ಕೆ ಬಂದು ಅವನಿಗೆ ಪ್ರದಕ್ಷಿಣೆಯನ್ನು ಮಾಡಿದರು. ಕುರುಜಾಂಗಲದಲ್ಲಿ ಪ್ರಧಾನರಾದ ಬ್ರಾಹ್ಮಣರೆಲ್ಲರೂ ಪ್ರಸನ್ನರಾಗಿ ಅವನಿಗೆ ಆಶೀರ್ವಾದವನ್ನು ಮಾಡಿದರು.

ಸ ಚಾಪಿ ಸಾಂತ್ವಂ ಹ್ಯವದತ್ ಪ್ರಸನ್ನಃ
ಸಹೈವ ತೈರ್ಭ್ರಾತೃಭಿರ್ಧರ್ಮರಾಜಃ ।
ತಸ್ಥೌ ಚ ತತ್ರಾಧಿಪತಿರ್ಮಹಾತ್ಮಾ
ದೃಷ್ಟ್ವಾ ಜನೌಘಂ ಕುರುಜಾಂಗಲಾನಾಮ್ ॥೬॥

ಮಹಾತ್ಮನಾದ ಧರ್ಮರಾಜನೂ ಸಹ ತಮ್ಮಂದಿರ ಜೊತೆಯಲ್ಲಿ ಪ್ರಸನ್ನನಾಗಿ ಅವರಿಗೆ ಮಧುರವಾದ ಮಾತುಗಳನ್ನು ಆಡಿದನು. ಮಹಾತ್ಮನೂ ಅಧಿಪತಿಯೂ ಆದ ಅವನು ಕುರುಜಾಂಗಲದ ಜನಸ್ತೋಮವನ್ನು ನೋಡುತ್ತಾ ನಿಂತನು.

ಪಿತೇವ ಪುತ್ರೇಷು ಸ ತೇಷು ಭಾವಂ
ಚಕ್ರೇ ಕುರೂಣಾಮೃಷಭೋ ಮಹಾತ್ಮಾ ।
ತೇ ಚಾಪಿ ತಸ್ಮಿನ್ ಭರತಪ್ರಬರ್ಹೇ
ತದಾ ಬಭೂವುಃ ಪಿತರೀವ ಪುತ್ರಾಃ ॥೭॥

ಮಹಾತ್ಮನಾದ ಆ ಕುರುಶ್ರೇಷ್ಠನು ಆ ಪ್ರಜೆಗಳನ್ನು ತಂದೆಯು ಮಕ್ಕಳನ್ನು ನೋಡಿಕೊಳ್ಳುವಂತೆ ನೋಡಿಕೊಂಡಿದ್ದನು. ಅವರಾದರೂ ಸಹ ಆ ಭರತಶ್ರೇಷ್ಠನನ್ನು ಮಕ್ಕಳು ತಂದೆಯನ್ನು ನೋಡುವಂತೆ ನೋಡುತ್ತಿದ್ದರು.

ತತಃ ಸಮಾಸಾದ್ಯ ಮಹಾಜನೌಘಾಃ
ಕುರೂಪ್ರವೀರಂ ಪರಿವಾರ್ಯ ತಸ್ಥುಃ ।
ಹಾ ನಾಥ ಹಾ ಧರ್ಮ ಇತಿ ಬ್ರುವಾಣಾ
ದೀನಾಶ್ಚ ಸರ್ವೇಽಶ್ರುಮುಖಾ ಬಭೂವುಃ ॥೮೯॥

ಅನಂತರ ಆ ಮಹಾಜನಸಮುದಾಯವು ಕುರುಶ್ರೇಷ್ಠನಾದ ಧರ್ಮರಾಜನನ್ನು ಸುತ್ತುವರಿದು ನಿಂತಿತು. ಹಾ ನಾಥ ಹಾ ಧರ್ಮ ಎಂದು ಹೇಳುತ್ತಾ ಎಲ್ಲರೂ ದೈನ್ಯದಿಂದ ಅಶ್ರುಮುಖರಾದರು.

ವರಃ ಕುರೂಣಾಮಧಿಪಃ ಪ್ರಜಾನಾಂ
ಪಿತೇವ ಪುತ್ರಾನಪಹಾಯ ಚಾಸ್ಮಾನ್ ।
ಪೌರಾನಿಮಾನ್ ಜಾನಪದಾಂಶ್ಚ ಸರ್ವಾನ್
ಹಿತ್ವಾ ಪ್ರಯಾತಃ ಕ್ವನು ಧರ್ಮರಾಜಃ ॥೯೦॥

ಕುರುಪ್ರವೀರನೂ ಪ್ರಜೆಗಳ ಅಧಿಪತಿಯೂ ಆದ ತಂದೆಯಂತಿರುವ ನೀನು ಮಕ್ಕಳಾದ ನಮ್ಮನ್ನು ಆಗಲಿ ಈ ಎಲ್ಲ ಪೌರರನ್ನು ಮತ್ತು ಜಾನಪದರನ್ನು ಆಗಲಿ ಎಲ್ಲಿಗೆ ಹೋಗುತ್ತಿದ್ದೀಯೆ? (ಅಂತಹ ಧರ್ಮರಾಜನು ಎಲ್ಲಿಗೆ ಹೋಗುತ್ತಿದ್ದಾನೆ?)

ಧಿಗ್ ಧಾರ್ತರಾಷ್ಟ್ರಂ ಸುನೃಶಂಸಬುದ್ಧಿಂ
ಧಿಕ್ ಸೌಬಲಂ ಪಾಪಮತಿಂ ಚ ಕರ್ಣಮ್ ।
ಅನರ್ಥಮಿಚ್ಛಂತಿ ನರೇಂದ್ರ ಪಾಪಾ
ಯೇ ಧರ್ಮನಿತ್ಯಸ್ಯ ಸತಸ್ತವೋಗ್ರಾಃ ॥೯೧॥

ಕ್ರೂರಬುದ್ಧಿಯನ್ನು ಹೊಂದಿರುವ ದುರ್ಯೋಧನನಿಗೆ ಧಿಕ್ಕಾರವಿರಲಿ. ಶಕುನಿಗೂ ಪಾಪಬುದ್ಧಿಯುಳ್ಳ ಕರ್ಣನಿಗೂ ಧಿಕ್ಕಾರವಿರಲಿ. ನರೇಂದ್ರನೇ! ಆ ಉಗ್ರರಾದ ಪಾಪಿಗಳೆಲ್ಲರೂ ಧರ್ಮನಿಷ್ಠನಾದ ಸಜ್ಜನನಾದ ನಿನಗೆ ಅನರ್ಥವನ್ನು ಬಯಸುತ್ತಾರೆ.

ಸ್ವಯಂ ನಿವೇಶ್ಯಾಪ್ರತಿಮಂ ಮಹಾತ್ಮಾ
ಪುರಂ ಮಹದ್ ದೇವಪುರಪ್ರಕಾಶಮ್ ।
ಶತಕ್ರತುಪ್ರಸ್ಥಮಮೋಘಕರ್ಮಾ
ಹಿತ್ವಾ ಪ್ರಯಾತಃ ಕ್ವನು ಧರ್ಮರಾಜಃ ॥೧೧॥

ಮಹಾತ್ಮನೂ ಅಮೋಘಕರ್ಮನೂ ಆದ ಧರ್ಮರಾಜನು ಅಸದೃಶವಾದ ದೇವನಗರದಂತೆ ಕಾಣುವ ಮಹಾಪಟ್ಟಣವಾದ ಇಂದ್ರಪ್ರಸ್ಥವನ್ನು ನಿರ್ಮಾಣಮಾಡಿ ಅದನ್ನು ಬಿಟ್ಟು ಎಲ್ಲಿಗೆ ಹೋಗುತ್ತಿದ್ದಾನೆ?

ಚಕಾರ ಯಾಮಪ್ರತಿಮಾಂ ಮಹಾತ್ಮಾ
ಸಭಾಂ ಮಯೋ ದೇವಸಭಾಪ್ರಕಾಶಾಮ್ ।
ತಾಂ ದೇವಮಾಯಾಮಿವ ದೇವಕಲ್ಪೋ
ಹಿತ್ವಾ ಪ್ರಯಾತಃ ಕ್ವನು ಧರ್ಮರಾಜಃ ॥೧೨॥

ಮಹಾತ್ಮನಾದ ಮಯನು ದೇವಸಭೆಯಂತೆ ಕಂಗೊಳಿಸುವ ಯಾವ ಅಸದೃಶವಾದ ಸಭೆಯನ್ನು ನಿರ್ಮಿಸಿದನೋ ಅಂತಹ ದೇವಮಾಯೆಯಂತಿರುವ ಸಭೆಯನ್ನು ಬಿಟ್ಟು ದೇವಸದೃಶನಾದ ಧರ್ಮರಾಜನು ಎಲ್ಲಿಗೆ ಹೋಗುತ್ತಿದ್ದಾನೆ?

ತಾನ್ ಧರ್ಮಕಾಮಾರ್ಥವಿದುತ್ತಮೌಜಾ
ಬೀಭತ್ಸುರುಚ್ಚೈಃ ಸಹಿತಾನುವಾಚ ।
ಆದಾಸ್ಯತೇ ವಾಸಮಿಮಂ ನಿರುಷ್ಯ
ವನೇಷು ರಾಜಾ ದ್ವಿಷತಾಂ ಯಶಾಂಸಿ ॥೧೩॥

ಧರ್ಮಾರ್ಥಕಾಮಗಳನ್ನು ತಿಳಿದ ಉತ್ತಮಪರಾಕ್ರಮವುಳ್ಳ ಅರ್ಜುನನು ಅವರೆಲ್ಲರನ್ನೂ ಕುರಿತು ಮಾತನಾಡಿದನು. ರಾಜನಾದ ಧರ್ಮರಾಜನು ಈ ವನವಾಸವನ್ನು ಮುಗಿಸಿ ಬಂದು ಶತ್ರುಗಳ ಕೀರ್ತಿಯನ್ನೆಲ್ಲಾ ಅಪಹರಿಸುವನು.

ದ್ವಿಜಾತಿಮುಖ್ಯಾಃ ಸಹಿತಾಃ ಪೃಥಕ್ ಚ
ಭವದ್ಭಿರಾಸಾದ್ಯ ತಪಸ್ವಿಭಿಶ್ಚ ।
ಪ್ರಸಾದ್ಯ ಧರ್ಮಾರ್ಥವಿದಶ್ಚ ವಾಚ್ಯಾ
ಯಥಾರ್ಥಸಿದ್ಧಿಃ ಪರಮಾ ಭವೇನ್ನಃ ॥೧೪॥

ಎಲೈ ದ್ವಿಜಾತಿಮುಖ್ಯರೇ! ನೀವು ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ತಪಸ್ವಿಗಳ ಜೊತೆಯಲ್ಲಿ ನಗರವನ್ನು ತಲುಪಿ. ಅಲ್ಲಿರುವ ಧರ್ಮಾರ್ಥವೇತ್ತರಿಗೆ ನಮಗೆ ಶ್ರೇಷ್ಠವಾದ ಅರ್ಥಸಿದ್ಧಿಯುಂಟಾಗುವಂತೆ ಆಶೀರ್ವಾದಮಾಡಬೇಕೆಂದು ಹೇಳಿ.

ಇತ್ಯೇವಮುಕ್ತೇ ವಚನೇऽರ್ಜುನೇನ
ತೇ ಬ್ರಾಹ್ಮಣಾಃ ಸರ್ವವರ್ಣಾಶ್ಚ ರಾಜನ್ ।
ಮುದಾऽಭ್ಯನಂದನ್ ಸಹಿತಾಶ್ಚ ಚಕ್ರುಃ
ಪ್ರದಕ್ಷಿಣಂ ಧರ್ಮಭೃತಾಂ ವರಿಷ್ಠಮ್ ॥೧೫॥

ಎಲೈ ರಾಜನೇ! ಅರ್ಜುನನು ಹೀಗೆ ಮಾತನಾಡುತ್ತಿರಲು ಆ ಬ್ರಾಹ್ಮಣರು ಮತ್ತು ಸರ್ವವರ್ಣದ ಪ್ರಜೆಗಳೂ ಸಹ ಸಂತೋಷದಿಂದ ಆ ಮಾತುಗಳನ್ನು ಅಭಿನಂದಿಸಿ ಧರ್ಮವನ್ನು ಧರಿಸಿದವರಲ್ಲಿ ಶ್ರೇಷ್ಠನಾದ ಧರ್ಮರಾಜನಿಗೆ ಪ್ರದಕ್ಷಿಣೆಯನ್ನು ಮಾಡಿದರು.

ಆಮಂತ್ರ್ಯ ಪಾರ್ಥಂ ಚ ವೃಕೋದರಂ ಚ
ಧನಂಜಯಂ ಯಾಜ್ಞಸೇನೀಂ ಯಮೌ ಚ ।
ಪ್ರತಸ್ಥಿರೇ ರಾಷ್ಟ್ರಮಪೇತಹರ್ಷಾ
ಯುಧಿಷ್ಠಿರೇಣಾನುಮತಾ ಯಥಾ ಸ್ವಮ್ ॥೧೬॥

ಅವರು ಧರ್ಮನನ್ನೂ ಭೀಮಸೇನನ್ನೂ ಅರ್ಜುನನ್ನೂ ದ್ರೌಪದಿಯನ್ನೂ ನಕುಲಸಹದೇವರನ್ನೂ ಆಮಾಂತ್ರಿಸಿ (ಅವರಿಂದ ಅನುಮತಿಯನ್ನು ಪಡೆದು) ಇನ್ನೊಮ್ಮೆ ಯುಧಿಷ್ಠಿರನ ಅನುಮತಿಯನ್ನು ಪಡೆದು ಹರ್ಷರಹಿತರಾಗಿ ರಾಷ್ಟ್ರದಲ್ಲಿ ತಮ್ಮತಮ್ಮ ಮನೆಗಳಿಗೆ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ವಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★★

## ಇಪ್ಪತ್ತೊಂದನೆಯ ಅಧ್ಯಾಯ

(ಪಾಂಡವರ ದ್ವೈತವನ ಪ್ರವೇಶ.)

ವೈಶಂಪಾಯನಃ

ತತಸ್ತೇಷು ಪ್ರಯಾತೇಷು ಕೌಂತೇಯಃ ಸತ್ಯಸಂಗರಃ ।
ಅಭ್ಯಭಾಷತ ಧರ್ಮಾತ್ಮಾ ಭ್ರಾತೄನ್ ಸರ್ವಾನ್ ಯುಧಿಷ್ಠಿರಃ ॥೧॥

ಆ ಪೌರರೆಲ್ಲರೂ ಹೋದ ಮೇಲೆ ಆ ಸತ್ಯಪ್ರತಿಜ್ಞೆಯುಳ್ಳವನೂ ಧರ್ಮಾತ್ಮನೂ ಆದ ಕುಂತೀಪುತ್ರನಾದ ಯುಧಿಷ್ಠಿರನು ತನ್ನ ಎಲ್ಲಾ ತಮ್ಮಂದಿರನ್ನು ಕುರಿತು ಮಾತನಾಡಿದನು.

ದ್ವಾದಶೇಮಾನಿ ವರ್ಷಾಣಿ ವಸ್ತವ್ಯಂ ನಿರ್ಜನೇ ವನೇ ।
ಸಮೀಕ್ಷಧ್ವಂ ಮಹಾರಣ್ಯೇ ದೇಶಂ ಬಹುಮೃಗದ್ವಿಜಮ್ ॥೨॥

ನಾವು ಈ ಹನ್ನೆರಡುವರ್ಷಕಾಲ ನಿರ್ಜನವಾದ ಅರಣ್ಯದಲ್ಲಿ ವಾಸಿಸಬೇಕಾಗಿದೆ. ಮಹಾರಣ್ಯದಲ್ಲಿ ಅನೇಕ ಮೃಗಪಕ್ಷಿಗಳಿರುವ ಒಳ್ಳೆಯ ಪ್ರದೇಶವನ್ನು ಹುಡುಕಿ.

ಬಹುಪುಷ್ಪಫಲಂ ರಮ್ಯಂ ಶಿವಂ ಪುಣ್ಯಜನೋಚಿತಮ್ ।
ಯತ್ರೇಮಾ ದ್ವಾದಶ ಸಮಾಃ ಸುಖಂ ಪ್ರತಿವಸೇಮಹಿ ॥೩॥

ಬಹುಪುಷ್ಪಫಲಗಳಿಂದ ಕೂಡಿರುವ ರಮ್ಯವಾದ ಮಂಗಳವಾದ ಪುಣ್ಯಜನರಿಗೆ ಯೋಗ್ಯವಾದ ದೇಶವನ್ನು ಹುಡುಕಬೇಕು. ಅಲ್ಲಿ ನಾವು ಹನ್ನೆರಡು ವರ್ಷಗಳಕಾಲ ಸುಖವಾಗಿ ವಾಸಮಾಡೋಣ.

ವೈಶಂಪಾಯನಃ

ಏವಮುಕ್ತೇ ಪ್ರತ್ಯುವಾಚ ಧರ್ಮರಾಜಂ ಧನಂಜಯಃ ।
ಗುರುವನ್ಮಾನವಗುರುಂ ಮಾನಯಿತ್ವಾ ಮನಸ್ವಿನಮ್ ॥೪॥

ಧರ್ಮರಾಜನು ಹೀಗೆ ಹೇಳುತ್ತಿರಲು ಧನಂಜಯನು ಬೃಹಸ್ಪತಿಯಂತೆ ಇದ್ದ ಧೈರ್ಯಶಾಲಿಯಾದ ಆ ಮಾನವಗುರುವನ್ನು ಸಂಮಾನಿಸಿ ಮಾತನಾಡಿದನು.

ಭವಾನೇವ ಮಹರ್ಷೀಣಾಂ ವೃದ್ಧಾನಾಂ ಪರ್ಯುಪಾಸಿತಾ ।
ಅಜ್ಞಾತಂ ಮಾನುಷೇ ಲೋಕೇ ಭವತೋ ನಾಸ್ತಿ ಕಿಂಚನ ॥೫॥

ನೀನೇ ಮಹರ್ಷಿಗಳ ಮತ್ತು ವೃದ್ಧರ ಸೇವೆಯನ್ನು ಮಾಡಿರುವವನು. ಮನುಷ್ಯಲೋಕದಲ್ಲಿ ನಿನಗೆ ಅಜ್ಞಾತವಾದುದು ಯಾವುದೂ ಇಲ್ಲ.

ತ್ವಯಾ ಹ್ಯುಪಾಸಿತಾ ನಿತ್ಯಂ ಬ್ರಾಹ್ಮಣಾ ವೇದಪಾರಗಾಃ ।
ದ್ವೈಪಾಯನಪ್ರಭೃತಯೋ ನಾರದಶ್ಚ ಮಹಾತಪಾಃ ॥೬॥

ನೀನಾದರೋ ವೇದಪಾರಂಗತರಾದ ಬ್ರಾಹ್ಮಣರಾದ ದ್ವೈಪಾಯನಾದಿ ಋಷಿಗಳನ್ನೂ ನಾರದಾದಿ ಮಹಾತಪಸ್ವಿಗಳನ್ನೂ ಯಾವಾಗಲೂ ಉಪಾಸನೆ ಮಾಡಿದ್ದೀಯೆ.

ಯಃ ಸರ್ವಲೋಕದ್ವಾರಾಣಿ ನಿತ್ಯಂ ಸಂಚರತೇ ವಶೀ ।
ದೇವಲೋಕಾದ್ ಬ್ರಹ್ಮಲೋಕಂ ಗಂಧರ್ವಾಪ್ಸರಸಾಮಪಿ ॥೭॥

ಆ ಪ್ರಭುಗಳಾದ ನಾರದರಾದರೋ ಸರ್ವಲೋಕದ್ವಾರಗಳಿಗೂ ದೇವಲೋಕದಿಂದ ಬ್ರಹ್ಮಲೋಕಕ್ಕೂ ಮತ್ತು ಗಂಧರ್ವ ಅಪ್ಸರಲೋಕಕ್ಕೂ ನಿತ್ಯವೂ ಸಂಚರಿಸುತ್ತಾರೆ.

ಅನುಭಾವಾಂಶ್ಚ ಜಾನಾಸಿ ಬ್ರಾಹ್ಮಣಾನಾಂ ನ ಸಂಶಯಃ ।
ಪ್ರಭಾವಾಂಶ್ಚೈವ ವೇತ್ಥ ತ್ವಂ ಸರ್ವೇಷಾಮೇವ ಪಾಂಡವ ॥೮॥

ಎಲೈ ಪಾಂಡವನೇ! ನೀನು ನಿಸ್ಸಂಶಯವಾಗಿ ಆ ಬ್ರಾಹ್ಮಣರ ಮಹಿಮೆಯನ್ನು ಆ ಎಲ್ಲ ಸಾಮರ್ಥ್ಯವನ್ನು ತಿಳಿದಿದ್ದೀಯೆ.

ತ್ವಮೇವ ರಾಜನ್ ಜಾನಾಸಿ ಶ್ರೇಯಃಕಾರಣಮೇವ ಚ ।
ಯತ್ರೇಚ್ಛಸಿ ಮಹಾರಾಜ ನಿವಾಸಂ ತತ್ರ ಕುರ್ಮಹೇ ॥೯॥

ಎಲೈ ರಾಜನೇ! ನಮ್ಮ ಶ್ರೇಯಸ್ಸಿಗೆ ಅನುಕೂಲವಾದುದು ಯಾವುದು ಎಂದು ನೀನೇ ತಿಳಿದಿದ್ದೀಯೆ. ಮಹಾರಾಜನೇ! ನೀನು ಎಲ್ಲಿ ಬಯಸುತ್ತೀಯೋ ಅಲ್ಲಿ ವಾಸವನ್ನು ಮಾಡೋಣ.

ಇದಂ ದ್ವೈತವನಂ ನಾಮ ಸರಃ ಪುಣ್ಯಜನೋಚಿತಮ್ ।
ಬಹುಪುಷ್ಪಫಲಂ ರಮ್ಯಂ ನಾನಾದ್ವಿಜನಿಷೇವಿತಮ್ ॥೧೦॥

ಇದು ದ್ವೈತವನವೆಂದು ಪುಣ್ಯಜನರಿಗೆ ಯೋಗ್ಯವಾದ ಸರೋವರಗಳಿಂದಲೂ ಬಹುಪುಷ್ಪಫಲಗಳಿಂದಲೂ ನಾನಾ ವಿಧವಾದ ಪಕ್ಷಿಗಳಿಂದಲೂ ಕೂಡಿ ಮನೋಹರವಾಗಿದೆ.

ಅತ್ರೇಮಾ ದ್ವಾದಶ ಸಮಾ ವಿಹರೇಮೇತಿ ರೋಚಯೇ ।
ಯದಿ ತೇಽನುಮತಂ ರಾಜನ್ ಕಿಮನ್ಯನ್ಮನ್ಯತೇ ಭವಾನ್ ॥೧೧॥

ರಾಜನೇ! ನಿನಗೆ ಅನುಮತವಾದರೆ ಇಲ್ಲಿ ಈ ಹನ್ನೆರಡುವರ್ಷಗಳನ್ನು ಸಂತೋಷದಿಂದ ಕಳೆಯೋಣವೆಂದು ನನ್ನ ಇಷ್ಟ. ನಿನ್ನ ಅಭಿಪ್ರಾಯವೇನು?

ಯುಧಿಷ್ಠಿರಃ

ಮಮಾಪ್ಯೇತನ್ಮತಂ ಪಾರ್ಥ ತ್ವಯಾ ಯತ್ ಸಮುದಾಹೃತಮ್ ।
ಗಚ್ಛಾಮಃ ಪುಣ್ಯವಿಖ್ಯಾತಂ ಮಹದ್ ದ್ವೈತವನಂ ಸರಃ ॥೧೨॥

ಅರ್ಜುನನೇ! ನೀನು ಹೇಳಿದುದು ನನಗೂ ಸಮ್ಮತವಾದುದು. ನಾವು ಪವಿತ್ರವೂ ಪ್ರಸಿದ್ಧವೂ ಶ್ರೇಷ್ಠವೂ ಆದ ದ್ವೈತವನಸರೋವರಕ್ಕೆ ಹೋಗೋಣ.

ವೈಶಂಪಾಯನಃ

ತತಸ್ತೇ ಪ್ರಯಯುಃ ಸರ್ವೇ ಪಾಂಡವಾ ಧರ್ಮಚಾರಿಣಃ ।
ಬ್ರಾಹ್ಮಣೈರ್ಬಹುಭಿಃ ಸಾರ್ಧಂ ಪುಣ್ಯಂ ದ್ವೈತವನಂ ಸರಃ ॥೧೩॥

ಅನಂತರ ಧರ್ಮಚಾರಿಗಳಾದ ಆ ಪಾಂಡವರೆಲ್ಲರೂ ಅನೇಕ ಬ್ರಾಹ್ಮಣರ ಜೊತೆಯಲ್ಲಿ ಪವಿತ್ರವಾದ ದ್ವೈತವನದ ಸರೋವರಕ್ಕೆ ಹೊರಟರು.

ಬ್ರಾಹ್ಮಣಾಃ ಸಾಗ್ನಿಹೋತ್ರಾಶ್ಚ ತಥೈವ ಚ ನಿರಗ್ನಯಃ ।
ಸ್ವಾಧ್ಯಾಯಿನೋ ಭಿಕ್ಷವಶ್ಚ ಜಟಿನೋ ವನವಾಸಿನಃ ॥೧೪॥

ಬಹವೋ ಬ್ರಾಹ್ಮಣಾಸ್ತತ್ರ ಪರಿವವ್ರುರ್ಯುಧಿಷ್ಠಿರಮ್ ।
ತಪಸ್ವಿನಃ ಸತ್ಯಶೀಲಾಃ ಶತಶಃ ಸಂಶಿತವ್ರತಾಃ ॥೧೫॥

ಅಗ್ನಿಹೋತ್ರವನ್ನು ಹೊಂದಿದ ಮತ್ತು ಹೊಂದದ ಬ್ರಾಹ್ಮಣರು ಸ್ವಾಧ್ಯಾಯಸಂಪನ್ನರು ಬ್ರಹ್ಮಚಾರಿಗಳು ವಾನಪ್ರಸ್ಥರು ಎಲ್ಲರೂ ತಪಸ್ವಿಗಳು ಸತ್ಯಶೀಲರು ಪ್ರಶಸ್ತವಾದ ವ್ರತವನ್ನು ಧರಿಸಿದವರು. ಇಂತಹ ಅನೇಕ ಬ್ರಾಹ್ಮಣರು ನೂರರ ಸಂಖ್ಯೆಯಲ್ಲಿ ಯುಧಿಷ್ಠಿರನನ್ನು ಸುತ್ತುವರಿದು ಹೊರಟರು.

ತೇ ಯಾತ್ವಾ ಪಾಂಡವಾಸ್ತತ್ರ ಬ್ರಾಹ್ಮಣೈರ್ಬಹುಭಿಃ ಸಹ ।
ಪುಣ್ಯಂ ದ್ವೈತವನಂ ರಮ್ಯಂ ವಿವಿಶುರ್ಭರತರ್ಷಭಾಃ ॥೧೬॥

ಪಾಂಡುವಿನ ಪುತ್ರರಾದ ಆ ಭರತಶ್ರೇಷ್ಠರು ಅನೇಕ ಬ್ರಾಹ್ಮಣರ ಜೊತೆಯಲ್ಲಿ ಪ್ರಯಾಣಮಾಡಿ ಪವಿತ್ರವೂ ರಮ್ಯವೂ ಆದ ದ್ವೈತವನನ್ನು ತಲುಪಿದರು.

ತತ್ ಸಾಲತಾಳಾಮ್ರಮಧೂಕನೀಪ-
ಕದಂಬಸರ್ಜಾರ್ಜುನಕರ್ಣಿಕಾರ್ಯೈಃ ।
ತಪಾತ್ಯಯೇ ಪುಷ್ಪಫಲೈರುಪೇತಂ
ಮಹತ್ಪುಣ್ಯಂ ದ್ವೈತವನಂ ದದರ್ಶ ॥೧೭॥

ಧರ್ಮರಾಜನು ಸಾಲ ತಾಳ ಆಮ್ರ ಮಧೂಕ ನೀಪ ಕದಂಬ ಸರ್ಜ ಅರ್ಜುನ ಕರ್ಣಿಕಾರ ಮೊದಲಾದ ವೃಕ್ಷಗಳಿಂದ ಕೂಡಿದ ಗ್ರೀಷ್ಮಋತುವಿನ ಕೊನೆಯಲ್ಲಿ ಬಹಳ ಪುಷ್ಪಫಲಗಳಿಂದ ಉಪೇತವಾದ ಮಹಾಪುಣ್ಯಪ್ರದವಾದ ದ್ವೈತವನವನ್ನು ನೋಡಿದನು.

ಮಹಾದ್ರುಮಾಣಾಂ ಶಿಖರೇಷು ತಸ್ಥುಃ
ಮನೋರಮಾ ವಾಚ ಉದೀರಯಂತಃ ।
ಮಯೂರನತ್ಯೂಹಚಕೋರಸಂಘಾಃ
ತಸ್ಮಿನ್ ವನೇ ಕಾನನಕೋಕಿಲಾಶ್ಚ ॥೧೮॥

ದೊಡ್ಡವೃಕ್ಷಗಳ ತುದಿಯಲ್ಲಿ ಮನೋಹರವಾಗಿ ಗಾನಮಾಡುತ್ತಿದ್ದ ಮಯೂರ ಚಕೋರ ಬಾತುಕೋಳಿ ಸಮುದಾಯಗಳನ್ನೂ ಕಾನನಕೋಗಿಲೆಗಳನ್ನೂ ಆ ವನದಲ್ಲಿ ನೋಡಿದನು.

ಕರೇಣುಯೂಥೈಃ ಸಹ ಯೂಥಪಾನಾಂ
ಮದೋತ್ಕಟಾನಾಮಚಲಪ್ರಭಾಣಾಮ್ ।
ಮಹಾಂತಿ ಯೂಥಾನಿ ಮಹಾದ್ವಿಪಾನಾಂ
ತಸ್ಮಿನ್ ವನೇ ರಾಷ್ಟ್ರಪತಿರ್ದದರ್ಶ ॥೧೯॥

ರಾಷ್ಟ್ರಪತಿಯಾದ ಧರ್ಮರಾಜನು ಪರ್ವತವನ್ನು ಹೋಲುವ ಯೂಥಪತಿಗಳಾದ ಗಜಗಳು (ಗಂಡಾನೆಗಳು) ಮದೋತ್ಕಟವಾದ ಕರೇಣುಗಳ (ಚಿಕ್ಕ ಹೆಣ್ಣಾನೆಗಳ) ಜೊತೆಯಲ್ಲಿ ಹೋಗುವುದನ್ನೂ ಮಹಾಗಜಗಳ ದೊಡ್ಡದೊಡ್ಡ ಗುಂಪುಗಳನ್ನೂ ಆ ವನದಲ್ಲಿ ನೋಡಿದನು.

ಮನೋರಮಾಂ ಭೋಗವತೀಂ ಸಮೇತ್ಯ
ಧೃತಾತ್ಮನಾಂ ಚೀರಜಟಾಧರಾಣಾಮ್ ।
ತಸ್ಮಿನ್ ವನೇ ಧರ್ಮಭೃತಾಂ ನಿವಾಸೇ
ದದರ್ಶ ಸಿದ್ಧರ್ಷಿಗಣಾನನೇಕಾನ್ ॥೨೦॥

ಮನೋನಿಗ್ರಹವುಳ್ಳ ಚೀರಜಟಾಧಾರಿಗಳಿಗೆ ಮನೋಹರವಾದ ಅವರಿಗೆ ಯೋಗ್ಯವಾದ ಭೋಗ್ಯಗಳಿಂದ ಕೂಡಿದ ಆ ತಪೋಭೂಮಿಯನ್ನು ನೋಡಿ ಧರ್ಮರಾಜನು ಧರ್ಮಾಚಾರಿಗಳ ನಿವಾಸವಾದ ಆ ವನದಲ್ಲಿ ಅನೇಕ ಸಿದ್ಧರ ಮತ್ತು ಋಷಿಗಳ ಗಣಗಳನ್ನು ನೋಡಿದನು.

ತತಃ ಸ ಯಾನಾದವರುಹ್ಯ ರಾಜಾ
ಸಭ್ರಾತೃಕಃ ಸಜನಃ ಕಾನನಂ ತತ್ ।
ವಿವೇಶ ಧರ್ಮಾತ್ಮವಿದಾಂ ವರಿಷ್ಠಃ
ತ್ರಿವಿಷ್ಟಪಂ ಶಕ್ರ ಇವಾಮಿತೌಜಾಃ ॥೨೧॥

ಅನಂತರ ಧರ್ಮವೇತ್ತೃಗಳಲ್ಲಿ ಮತ್ತು ಆತ್ಮವೇತ್ತೃಗಳಲ್ಲಿ ಶ್ರೇಷ್ಠನಾದ ಆ ರಾಜನು ರಥದಿಂದ ಇಳಿದು ತಮ್ಮಂದಿರ ಮತ್ತು ಉಳಿದ ಜನಗಳ ಜೊತೆಯಲ್ಲಿ ಅಮಿತಪರಾಕ್ರಮಿಯಾದ ಇಂದ್ರನು ಸ್ವರ್ಗವನ್ನು ಪ್ರವೇಶಿಸುವಂತೆ ಆ ಕಾನನವನ್ನು ಪ್ರವೇಶಿಸಿದನು.

ತಂ ಸತ್ಯಸಂಧಂ ಸಹಿತಾ ನಿಪೇತುಃ
ದಿದೃಕ್ಷವಶ್ಚಾರಣಸಿದ್ಧಸಂಘಾಃ ।
ವನೌಕಸಶ್ಚಾಪಿ ನರೇಂದ್ರಸಿಂಹಂ
ಮನಸ್ವಿನಃ ಸಂಪರಿವಾರ್ಯ ತಸ್ಥುಃ ॥೨೨॥

ಆ ಸತ್ಯಸಂಧನಾದ ರಾಜನನ್ನು ನೋಡುವ ಇಚ್ಛೆಯಿಂದ ಚಾರಣಸಿದ್ಧರ ಸಂಘಗಳು ಒಟ್ಟಿಗೆ ಅಲ್ಲಿಗೆ ಬಂದವು. ವನವಾಸಿಗಳು ಸಹ ಆ ಧೈರ್ಯಶಾಲಿಯಾದ ರಾಜಸಿಂಹನನ್ನು ಸುತ್ತುವರಿದು ನಿಂತರು.

ಸ ತತ್ರ ಸರ್ವಾನಭಿವಾದ್ಯ ಸರ್ವೈಃ
ಪ್ರತ್ಯರ್ಚಿತೋ ರಾಜವದ್ ದೇವವಚ್ಚ ।
ವಿವೇಶ ಸರ್ವೈಃ ಸಹಿತೋ ದ್ವಿಜಾಗ್ರ್ಯೈಃ
ಕೃತಾಂಜಲಿರ್ಧರ್ಮಭೃತಾಂ ವರಿಷ್ಠಃ ॥೨೩॥

ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಅಲ್ಲಿ ಎಲ್ಲರಿಗೂ ನಮಸ್ಕರಿಸಿ ಎಲ್ಲರಿಂದಲೂ ರಾಜನಂತೆ ಮತ್ತು ದೇವತೆಯಂತೆ ಪೂಜಿಸಲ್ಪಟ್ಟವನಾಗಿ ಎಲ್ಲ ಬ್ರಾಹ್ಮಣಶ್ರೇಷ್ಠರ ಜೊತೆಯಲ್ಲಿ ಕೈಗಳನ್ನು ಮುಗಿದು ಆ ಕಾನನವನ್ನು ಪ್ರವೇಶಿಸಿದನು.

ಸ ಪುಣ್ಯಶೀಲಃ ಪಿತೃವನ್ಮಹಾತ್ಮಾ
ತಪಸ್ವಿಭಿರ್ಧರ್ಮಪರೈರುಪೇತ್ಯ ।
ಪ್ರತ್ಯರ್ಚಿತಃ ಪುಷ್ಪಧರಸ್ಯ ಮೂಲೇ
ಮಹಾದ್ರುಮಸ್ಯೋಪವಿವೇಶ ರಾಜಾ ॥೨೪॥

ಪುಣ್ಯಶೀಲನಾದ ಅವನು ತಂದೆಯಂತೆ ಧರ್ಮನಿಷ್ಠರಾದ ತಪಸ್ವಿಗಳ ಜೊತೆಯಲ್ಲಿ ಸೇರಿ ಅವರಿಂದ ಪೂಜಿಸಲ್ಪಟ್ಟು ಬಹಳ ಪುಷ್ಪಗಳಿದ್ದ ಒಂದು ಮಹಾವೃಕ್ಷದ ಬುಡದಲ್ಲಿ ಕುಳಿತುಕೊಂಡನು.

ಭೀಮಶ್ಚ ಕೃಷ್ಣಾ ಚ ಧನಂಜಯಶ್ಚ
ಯಮೌ ಚ ತೇ ಚಾನುಚರಾ ನರೇಂದ್ರ ।
ವಿಮುಚ್ಯ ವಾಹಾನವಗಾಹ್ಯ ಸರ್ವೇ
ತತ್ರೋಪತಸ್ಥುರ್ಭರತಪ್ರಬರ್ಹಾಃ ॥೨೫॥

ಎಲೈ ನರೇಂದ್ರನೇ! ಭೀಮ ದ್ರೌಪದಿ ಧನಂಜಯ ನಕುಲಸಹದೇವರು ಮತ್ತು ಅನುಚರರೆಲ್ಲರೂ ತಮ್ಮ ರಥಗಳಿಂದ ಅಶ್ವಗಳನ್ನು ಬಿಚ್ಚಿ ಸ್ನಾನವನ್ನು ಮಾಡಿ ಆ ಭರತಶ್ರೇಷ್ಠರೆಲ್ಲರೂ ಅವನ ಬಳಿ ಕುಳಿತುಕೊಂಡರು.

ಲತಾವಿತಾನಾವನತಃ ಸ ಪಾಂಡವೈಃ
ಮಹಾದ್ರುಮಃ ಪಂಚಭಿರುಗ್ರಧನ್ವಭಿಃ ।
ಬಭೌ ನಿವಾಸೋಪಗತೈರ್ಮಹಾತ್ಮಭಿಃ
ಮಹಾಗಿರಿರ್ವಾರಣಯೂಥಪೈರಿವ ॥೨೬॥

ಲತೆಯ ವಿಸ್ತಾರವಾದ ಭಾರಗಳಿಂದ ಬಾಗಿದ ಆ ಮಹಾವೃಕ್ಷವು ನಿವಾಸಕ್ಕೆ ಬಂದ ಉಗ್ರಧನುರ್ಧಾರಿಗಳಾದ ಪಾಂಡವರಿಂದ ಕೂಡಿದುದಾಗಿ ಗಜಪತಿಗಳಿಂದ ಕೂಡಿದ ಮಹಾಗಿರಿಯಂತೆ ಕಂಗೊಳಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕವಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

## ಇಪ್ಪತ್ತೆರಡನೆಯ ಅಧ್ಯಾಯ

(ಮಾರ್ಕಂಡೇಯರ ಆಗಮನ. ಧರ್ಮೋಪದೇಶವನ್ನು ಮಾಡಿ ನಿರ್ಗಮನ.)

### ವೈಶಂಪಾಯನಃ

ತತ್ ಕಾನನಂ ಪ್ರಾಪ್ಯ ನರೇಂದ್ರಪುತ್ರಾಃ
ಸುಖೋಚಿತಾ ವಾಸಮುಪೇತ್ಯ ಕೃಚ್ಛ್ರಮ್ ।
ವಿಜಹ್ರುರಿಂದ್ರಪ್ರತಿಮಪ್ರಕಾಶಾಃ
ಭಾಗೀರಥೀಸಾಲವನೇಷು ತೇಷು ॥೧॥

ಸುಖವಾಗಿ ಬೆಳೆಯಲು ಅರ್ಹರಾದ ಆ ರಾಜಪುತ್ರರು ಆ ಕಾನನವನ್ನು ಸೇರಿ ಕಷ್ಟಕರವಾದ ವಾಸವನ್ನು ಸ್ವೀಕರಿಸಿ ಇಂದ್ರನಿಗೆ ಸಮಾನವಾದ ಕಾಂತಿಯುಳ್ಳ ಅವರು ಭಾಗೀರಥೀತೀರದ ಆ ಸಾಲವನಗಳಲ್ಲಿ ವಿಹಾರಮಾಡಿದರು.

ಯತೀಂಶ್ಚ ಸರ್ವಾನ್ ಸ ಮುನೀಂಶ್ಚ ರಾಜಾ
ತಸ್ಮಿನ್ ವನೇ ಮೂಲಫಲೈರುದಗ್ರೈಃ ।
ದ್ವಿಜಾತಿಮುಖ್ಯಾನೃಷಭಃ ಕುರೂಣಾಂ
ಸಂತರ್ಪಯಾಮಾಸ ಮಹಾನುಭಾವಃ ॥೨॥

ಕುರುಶ್ರೇಷ್ಠನಾದ ಮಹಾನುಭಾವನಾದ ಧರ್ಮರಾಜನು ಆ ಕಾಡಿನಲ್ಲಿ ಯತಿಗಳನ್ನು ಋಷಿಗಳನ್ನು ಮತ್ತು ಬ್ರಾಹ್ಮಣಶ್ರೇಷ್ಠರನ್ನು ಶ್ರೇಷ್ಠವಾದ ಫಲಮೂಲಗಳಿಂದ ಸಂತೋಷಪಡಿಸಿದನು.

ಇಷ್ಟೀಶ್ಚ ಪಿತ್ರ್ಯಾಣಿ ತಥಾ ಕ್ರಿಯಾಶ್ಚ
ತಸ್ಮಿನ್ ವನೇ ವಸತಾಂ ಪಾಂಡವಾನಾಮ್ ।
ಪುರೋಹಿತಃ ಸರ್ವಸಮೃದ್ಧತೇಜಾಃ
ಚಕಾರ ಧೌಮ್ಯಃ ಪಿತೃವನ್ಮಹಾತ್ಮಾ ॥೩॥

ಪಾಂಡವರು ಆ ವನದಲ್ಲಿ ವಾಸಮಾಡುತ್ತಿರಲು ಪುರೋಹಿತರೂ ಅತಿಸಂವೃದ್ಧತೇಜಸ್ಸುಳ್ಳವರೂ ಮಹಾತ್ಮರೂ ಆದ ತಂದೆಯಂತಿದ್ದ ಧೌಮ್ಯರು ಅವರಿಗೆ ಆಯಾಕಾಲದಲ್ಲಿ ಮಾಡಬೇಕಾದ ಇಷ್ಟಿಗಳನ್ನೂ ಪಿತೃಕಾರ್ಯಗಳನ್ನೂ ಮತ್ತು ಉಳಿದ ಕ್ರಿಯೆಗಳನ್ನೂ ಮಾಡಿಸಿದರು.

ಅಪೇತ್ಯ ರಾಷ್ಟ್ರಾದ್ ವಸತಾಂ ತು ತೇಷಾಂ
ಋಷಿಃ ಪುರಾಣೋಽಭಿಸಸಾರ ರಾಜನ್ ।
ತಮಾಶ್ರಮಂ ತೀವ್ರಸಮೃದ್ಧತೇಜಾ
ಮಾರ್ಕಂಡೇಯಃ ಶ್ರೀಮತಾಂ ಪಾಂಡವಾನಾಮ್ ॥೪॥

ಎಲೈ ಜನಮೇಜಯರಾಜನೇ! ರಾಷ್ಟ್ರವನ್ನು ತೊರೆದು ಅವರು ಕಾಡಿನಲ್ಲಿ ವಾಸಿಸುತ್ತಿರಲು ತೀವ್ರವಾದ ಸಮೃದ್ಧವಾದ ತೇಜಸ್ಸುಳ್ಳ ಪುರಾಣಪ್ರಮಿತರಾದ ಮಾರ್ಕಂಡೇಯಋಷಿಗಳು ಆ ಗುಣವಂತರಾದ ಪಾಂಡವರ ಆಶ್ರಮಕ್ಕೆ ಬಂದರು.

ತಮಾಗತಂ ಜ್ವಲಿತಹುತಾಶನತ್ವಿಷಂ
ಮಹಾಮನಾಃ ಕುರುವೃಷಭೋ ಯುಧಿಷ್ಠಿರಃ ।

ಅಪೂಜಯತ್ ಸುರಋಷಿಮಾನವಾರ್ಚಿತಂ
ಸಹಾನುಗೈರನುಪಮಸತ್ವವೀರ್ಯವಾನ್ ॥೫॥

ದೇವತೆಗಳಿಂದಲೂ ಋಷಿಗಳಿಂದಲೂ ಮತ್ತು ಮಾನವರಿಂದಲೂ ಪೂಜಿತರಾದ ದೀಪ್ತವಾದ ಅಗ್ನಿಯಂತೆ ಕಾಂತಿಯನ್ನು ಹೊಂದಿದ ಆ ಋಷಿಗಳು ಆಶ್ರಮಕ್ಕೆ ಬಂದಾಗ ಅಸದೃಶವಾದ ಸದ್ಗುಣವನ್ನು ಮತ್ತು ಪರಾಕ್ರಮವನ್ನು ಹೊಂದಿದ್ದ ಕುರುಶ್ರೇಷ್ಠನಾದ ಉದಾರಿಯಾದ ಯುಧಿಷ್ಠಿರನು ತನ್ನ ತಮ್ಮಂದಿರ ಜೊತೆಯಲ್ಲಿ ಅವರನ್ನು ಪೂಜಿಸಿದನು.

ಸ ಸರ್ವವಿದ್ ದ್ರೌಪದೀಂ ವೀಕ್ಷ್ಯ ಕೃಷ್ಣಾಂ
ಯುಧಿಷ್ಠಿರಂ ಭೀಮಸೇನಾರ್ಜುನೌ ಚ ।
ಸಂಸ್ಮೃತ್ಯ ರಾಮಂ ಮನಸಾ ಮಹಾತ್ಮಾ
ತಪಸ್ವಿಮಧ್ಯೇಽಸ್ಮಯತಾಮಿತೌಜಾಃ ॥೬॥

ಸರ್ವಜ್ಞರಾದ ಮಹಾತ್ಮರಾದ ಅಮಿತಪರಾಕ್ರಮಿಗಳಾದ ಅವರು ದ್ರುಪದನ ಕುಮಾರಿಯಾದ ಕೃಷ್ಣೆಯನ್ನೂ ಯುಧಿಷ್ಠಿರ ಭೀಮಸೇನ ಮತ್ತು ಅರ್ಜುನರನ್ನೂ ನೋಡಿ ಮನಸ್ಸಿನಲ್ಲಿ ರಾಮನನ್ನು ಸ್ಮರಿಸಿ ತಪಸ್ವಿಗಳ ಮಧ್ಯದಲ್ಲಿ ಮುಗುಳ್ ನಗೆಯನ್ನು ನಕ್ಕರು.

ತಂ ಧರ್ಮರಾಜೋ ವಿಮನಾ ಇವಾಬ್ರವೀತ್
ಸರ್ವೇ ಹ್ರಿಯಾऽऽಯಾಂತಿ ತಪಸ್ವಿನೋ ಮಾಮ್ ।
ಭವಾನಿದಂ ಕಿಂ ಸ್ಮಯತೇ ಪ್ರಹೃಷ್ಟಃ
ತಪಸ್ವಿನಾಂ ಪಶ್ಯತಾಂ ಮಾಮುದೀಕ್ಷ್ಯ ॥೭॥

ಆಗ ಧರ್ಮರಾಜನು ಬೇಸರಗೊಂಡವನಂತೆ ಅವರನ್ನು ಕುರಿತು ಹೀಗೆ ಹೇಳಿದನು. ಇಲ್ಲಿಗೆ ಬರುವ ತಪಸ್ವಿಗಳು ಎಲ್ಲರೂ ನನ್ನನ್ನು ನೋಡಿ ಸಂಕೋಚದಿಂದ ಕೂಡಿದವರಾಗುತ್ತಾರೆ. ತಾವು ಮಾತ್ರ ತಪಸ್ವಿಗಳ ಎದುರಿನಲ್ಲಿ ಸಂತೋಷದಿಂದ ನಗುತ್ತಿದ್ದೀರಿ.

ಮಾರ್ಕಂಡೇಯಃ

ನ ತಾತ ಹೃಷ್ಯಾಮಿ ನ ಚ ಸ್ಮಯಾಮಿ
ನ ಚ ಪ್ರಹರ್ಷೋ ಭಜತೇ ಮಾಂ ನ ದರ್ಪಃ ।

ಸಹಸ್ರನೇತ್ರಪ್ರತಿಮೋ ಮಹಾತ್ಮಾ
ಐದೃಗ್ವಿಧಂ ವ್ಯಸನಂ ಚಾಭ್ಯುಪೇತಃ ।
ತವಾಪದಂ ತಾತ ಸಮೀಕ್ಷ್ಯ ರಾಮಂ
ಸತ್ಯವ್ರತಂ ದಾಶರಥಿಂ ಸ್ಮರಾಮಿ ॥೮॥

ಪ್ರೀತಿಪಾತ್ರನೇ! ನಾನು ಸಂತೋಷಗೊಂಡಿಲ್ಲ ಅಥವಾ ನಗುತ್ತಲೂ ಇಲ್ಲ. ನನಗೆ ಪ್ರಹರ್ಷವಾಗಲೀ ಅಥವಾ ದರ್ಪವಾಗಲೀ ಇಲ್ಲ. ಶಕ್ರನಿಗೆ ಸಮಾನವಾದ ಪರಾಮಕ್ರವುಳ್ಳ ಮಹಾತ್ಮನಾದ ನೀನು ಇಂತಹ ದುಃಖಕ್ಕೆ ಪಾತ್ರನಾಗಿದ್ದೀಯೆ. ಪ್ರೀತಿಪಾತ್ರನೇ! ಈ ನಿನ್ನ ಆಪತ್ತನ್ನು ನೋಡಿ ನಾನು ದಶರಥಪುತ್ರನಾದ ಸತ್ಯವ್ರತನಾದ ರಾಮನನ್ನು ಸ್ಮರಿಸಿದೆ.

ಸ ಚಾಪಿ ರಾಜಾ ಸಹ ಲಕ್ಷ್ಮಣೇನ
ವನೇ ನಿವಾಸಂ ಪಿತುರೇವ ಶಾಸನಾತ್ ।
ಧರ್ಮೇ ಚರನ್ ಪಾರ್ಥ ಪುರಾ ಮಯೈವ
ದೃಷ್ಟೋ ಗಿರೇಃ ಋಷ್ಯಮೂಕಸ್ಯ ಸಾನೌ ॥೯॥

ರಾಜನಾದ ಅವನೂ ಸಹ ತಂದೆಯ ಶಾಸನದಂತೆ ಲಕ್ಷ್ಮಣನ ಜೊತೆಯಲ್ಲಿ ಕಾಡಿನಲ್ಲಿ ವಾಸಮಾಡಿ ಧರ್ಮವನ್ನು ಆಚರಿಸಿ ಹಿಂದೆ ಋಷ್ಯಮೂಕಪರ್ವತದ ತಪ್ಪಲಿನಲ್ಲಿ ನನ್ನಿಂದ ನೋಡಲ್ಪಟ್ಟಿದ್ದನು.

ಸಹಸ್ರನೇತ್ರಪ್ರತಿಮೋ ಮಹಾತ್ಮಾ
ಯಮಸ್ಯ ಜೇತಾ ನಮುಚೇಶ್ಚ ಹಂತಾ ।
ಪಿತುರ್ನಿದೇಶಾದನಯತ್ ಸ್ವಧರ್ಮಂ
ವನೇ ವಾಸಂ ದಾಶರಥಿಶ್ಚಕಾರ ॥೧೦॥

ಯಮನಿಗೆ ನಾಯಕನಾದ ಮತ್ತು ನಮುಚಿಯ ಹಂತಕನಾದ ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳ ಮಹಾನುಭಾವನಾದ ಅವನು ತನ್ನ ತಂದೆಯ ಆಜ್ಞೆಯಂತೆ ಸ್ವಧರ್ಮವನ್ನು ಆಚರಿಸಿದನು. ದಶರಥರಾಮನು ಕಾಡಿನಲ್ಲಿ ವಾಸಮಾಡಿದನು.

ಸ ಚಾಪಿ ಶಕ್ರಪ್ರತಿಮಪ್ರಭಾವೋ
ಮಹಾನುಭಾವಃ ಸಮರೇಷ್ವಜೇಯಃ ।
ವಿಹಾಯ ಭೋಗಾನ್ ವಿಚರನ್ ವನೇಷು
ನೇಶೋ ಬಲಸ್ಯೇತಿ ಚರೇದಧರ್ಮಮ್ ॥೧೧॥

ಶಕ್ರನಿಗೆ ಸದೃಶನಾದ, ತೇಜಸ್ಸನ್ನು ಹೊಂದಿದ್ದ, ಮಹಾನುಭಾವನಾದ, ಯುದ್ಧದಲ್ಲಿ ಅಜೇಯನಾದ, ಅವನೂ ಸಹ ಭೋಗಗಳನ್ನು ತೊರೆದು ಕಾಡುಗಳಲ್ಲಿ ಸಂಚರಿಸಿದನು. ನಾನು ಸೇನೆಗೆ ಒಡಯನೆಂಬ ಕಾರಣದಿಂದ ಅಧರ್ಮವನ್ನು ಆಚರಿಸಿಬಾರದು.

ನೃಪಾಶ್ಚ ನಾಭಾಗಭಗೀರಥಾದಯೋ
ಮಹೀಮಿಮಾಂ ಸಾಗರಾಂತಾಂ ವಿಜಿತ್ಯ ।
ಸತ್ಯೇನ ತೇऽಪ್ಯಜಯಂಸ್ತಾತ ಲೋಕಾನ್
ನೇಶೋ ಬಲಸ್ಯೇತಿ ಚರೇದಧರ್ಮಮ್ ॥೧೨॥

ಎಲೈ ಪ್ರೀತಿಪಾತ್ರನೇ! ನಾಭಾಗ ಭಗೀರಥ ಮೊದಲಾದ ರಾಜರೂ ಸಹ ಸಾಗರಾಂತವಾದ ಈ ಭೂಮಿಯನ್ನು ಜಯಿಸಿ ಸತ್ಯದಿಂದ ಪರಲೋಕಗಳನ್ನು ಜಯಿಸಿದರು. ನಾನು ಸೈನ್ಯಕ್ಕೆ ಒಡೆಯನೆಂಬ ಕಾರಣದಿಂದ ಅಧರ್ಮವನ್ನು ಮಾಡಬಾರದು.

ಅಳರ್ಕಮಾಹುರ್ನರವರ್ಯಮುತ್ತಮಂ
ಸತ್ಯವ್ರತಂ ಕಾಶಿಕರೂಶರಾಜಮ್ ।
ವಿಹಾಯ ರಾಜ್ಯಾನಿ ವಸೂನಿ ಚೈವ
ನೇಶೋ ಬಲಸ್ಯೇತಿ ಚರೇದಧರ್ಮಮ್ ॥೧೩॥

ಕಾಶಿಕರೂಷ ದೇಶದ ರಾಜನಾದ ಅಳರ್ಕನು ಸತ್ಯವ್ರತನೂ ನೃಪತಿಶ್ರೇಷ್ಠನೂ ಉತ್ತಮನೂ ಆಗಿದ್ದನು ಎಂದು ಹೇಳುತ್ತಾರೆ. ಅವನು ರಾಜ್ಯವನ್ನು ಮತ್ತು ಭಾಗ್ಯವನ್ನು ತೊರೆದು ಜೀವಿಸಿದನು. ನಾನು ಸೈನ್ಯಕ್ಕೆ ಒಡೆಯನೆಂದು ಅಧರ್ಮವನ್ನು ಮಾಡಬಾರದು.

ಧಾತ್ರಾ ವಿಧಿರ್ಯೋ ವಿಹಿತಃ ಪುರಾಣಃ
ತಂ ಪೂಜಯಂತೋ ನರವರ್ಯ ಸಂತಃ ।
ಸಪ್ತರ್ಷಯಃ ಪಾರ್ಥ ದಿವಿ ಪ್ರಭಾಂತಿ
ನೇಶೋ ಬಲಸ್ಯೇತಿ ಚರೇದಧರ್ಮಮ್ ॥೧೪॥

ಎಲೈ ಪಾರ್ಥನೇ! ಬ್ರಹ್ಮದೇವರಿಂದ ಯಾವ ಪ್ರಾಚೀನವಾದ ಧರ್ಮವು ವಿಹಿತವಾಗಿದೆಯೋ ಅದನ್ನು ಸನ್ಮಾನಿಸುತ್ತಾ ಸಜ್ಜನರಾದ ಸಪ್ತರ್ಷಿಗಳು ಆಕಾಶದಲ್ಲಿ ಪ್ರಕಾಶಿಸುತ್ತಿದ್ದಾರೆ. ನಾನು ಸೈನ್ಯಕ್ಕೆ ಒಡೆಯನೆಂದು ಅಧರ್ಮವನ್ನು ಮಾಡಬಾರದು.

ಸತ್ಯೇನ ಧರ್ಮೇಣ ಯಥಾನುವೃತ್ತ್ಯಾ
ಯಥಾಶ್ರಿಯಾ ಸರ್ವಭೂತಾನ್ಯತೀತ್ಯ ।
ಯಶಶ್ಚ ತೇಜಶ್ಚ ತವಾಪಿ ದೀಪ್ತಂ
ವಿಭಾವಸೋರ್ಭಾಸ್ಕರಸ್ಯೇವ ಪಾರ್ಥ ॥೧೫॥

ಎಲೈ ಪಾರ್ಥನೇ! ಸತ್ಯದಿಂದ ಧರ್ಮದಿಂದ ಯಥೋಕ್ತವಾದ ವೃದ್ಧಸೇವೆಯಿಂದ ಮತ್ತು ಯಥೋಕ್ತವಾದ ವೈರಾಗ್ಯಾದಿಸಂಪತ್ತಿನಿಂದ ನೀನೂ ಸಹ ಸರ್ವಜೀವರನ್ನು ಮೀರಿ ಅಗ್ನಿಯಂತೆ ಸೂರ್ಯನಂತೆ ದೀಪ್ತವಾದ ಯಶಸ್ಸನ್ನು ಮತ್ತು ತೇಜಸ್ಸನ್ನು ಹೊಂದುವಿ.

ಯಥಾಪ್ರತಿಜ್ಞಾಂ ತು ಮಹಾನುಭಾವ
ಕೃಚ್ಛ್ರಂ ವನೇ ವಾಸಮಿಮಂ ನಿರುಷ್ಯ ।
ತತಃ ಶ್ರಿಯಂ ತೇಜಸಾ ತೇನ ದೀಪ್ತಾಮ್
ಆದಾಸ್ಯಸೇ ಪಾರ್ಥಿವ ಕೌರವೇಭ್ಯಃ ॥೧೬॥

ಮಹಾನುಭಾವನೇ! ರಾಜನೇ! ನೀನು ಪ್ರತಿಜ್ಞೆಮಾಡಿದಂತೆ ಈ ಕಷ್ಟವಾದ ವನವಾಸವನ್ನು ಪೂರೈಸಿ ಆ ಸಾಮರ್ಥ್ಯದಿಂದ ದೀಪ್ತವಾದ ಸಂಪತ್ತನ್ನು ಕೌರವರಿಂದ ಜಯಿಸುತ್ತೀಯೆ. (ಸ್ವೀಕರಿಸುತ್ತೀಯೆ)

ವೈಶಂಪಾಯನಃ

ತಮೇವಮುಕ್ತ್ವಾ ವಚನಂ ಮಹರ್ಷಿಃ
ತಪಸ್ವಿಮಧ್ಯೇ ಸಹಿತಂ ಸುಹೃದ್ಭಿಃ ।

ಸಮ್ಮಂತ್ರ್ಯ ಧೌಮ್ಯಂ ಸಹಿತಾಂಶ್ಚ ಪಾರ್ಥಾನ್
ತತಃ ಪ್ರತಸ್ಥೇ ದಿಶಮುತ್ತರಾಂ ಸಃ ॥೧೬॥

ಆ ಮಹರ್ಷಿಗಳು ತಪಸ್ವಿಗಳ ಮತ್ತು ಹಿತೈಷಿಗಳ ಮಧ್ಯದಲ್ಲಿದ್ದ ಧರ್ಮರಾಜನನ್ನು ಕುರಿತು ಈ ರೀತಿ ಮಾತನಾಡಿ ಧೌಮ್ಯರ ಅನುಮತಿಯನ್ನೂ ಎಲ್ಲಾ ಪಾಂಡವರ ಅನುಮತಿಯನ್ನೂ ಪಡೆದು ಉತ್ತರಾಭಿಮುಖವಾಗಿ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾವಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

## ಇಪ್ಪತ್ಮೂರನೆಯ ಅಧ್ಯಾಯ

(ದಾಲ್ಭ್ಯಪುತ್ರರಾದ ಬಕ ಋಷಿಗಳಿಂದ ಬ್ರಾಹ್ಮಣ ಮಾಹಾತ್ಮ್ಯ ಕಥನ ಮತ್ತು ಮಹರ್ಷಿಗಳ ಆಗಮನ.)

ವೈಶಂಪಾಯನಃ

ವಸತ್ಸ್ವಥ ದ್ವೈತವನೇ ಪಾಂಡವೇಷು ಮಹಾತ್ಮಸು ।
ಅನುಕೀರ್ಣಂ ಮಹಾರಣ್ಯಂ ಬ್ರಾಹ್ಮಣೈಃ ಸಮಪದ್ಯತ ॥೧॥

ಅನಂತರ ಮಹಾತ್ಮರಾದ ಪಾಂಡವರು ದ್ವೈತವನದಲ್ಲಿ ವಾಸಿಸುತ್ತಿರಲು ಆ ಮಹಾರಣ್ಯವು ಬ್ರಾಹ್ಮಣರಿಂದ ತುಂಬಿಹೋಯಿತು.

ಈರ್ಯಮಾಣೇನ ಸತತಂ ಬ್ರಹ್ಮಘೋಷೇಣ ಸರ್ವತಃ ।
ಬ್ರಹ್ಮಲೋಕಸಮಂ ಪುಣ್ಯಮಾಸೀದ್ ದ್ವೈತವನಂ ಸರಃ ॥೨॥

ಎಲ್ಲ ಕಡೆಯಲ್ಲಿಯೂ ಉಚ್ಚರಿಸಲ್ಪಡುವ ವೇದಘೋಷದಿಂದ ಆ ದ್ವೈತವನಸರೋವರವು ಬ್ರಹ್ಮಲೋಕದಂತೆ ಪವಿತ್ರವಾಯಿತು.

ಋಚಾಂ ಚ ಯಜುಷಾಂ ಸಾಮ್ನಾಮಥರ್ವಾಣಾಂ ಚ ಸರ್ವಶಃ ।
ಆಸೀದುಚ್ಚಾರ್ಯಮಾಣಾನಾಂ ನಿಃಸ್ವನೋ ಹೃದಯಂಗಮಃ ॥೩॥

ಸತತವಾಗಿ ಉಚ್ಚರಿಸಲ್ಪಡುವ ಋಗ್ವೇದ ಯಜುರ್ವೇದ ಸಾಮ ಮತ್ತು ಅಥರ್ವವೇದದ ಸ್ವರಗಳಿಂದ ಎಲ್ಲ ಕಡೆಗಳಿಂದ ಉಂಟಾದ ನಾದವು ಹೃದಯಂಗಮವಾಗಿದ್ದಿತು.

ಜ್ಯಾಘೋಷಃ ಪಾಂಡವೇಯಾನಾಂ ಬ್ರಹ್ಮಘೋಷಶ್ಚ ಧೀಮತಾಮ್ ।
ಸಂಸೃಷ್ಟಂ ಬ್ರಹ್ಮಣಾ ಕ್ಷತ್ರಂ ಭೂಯ ಏವ ವ್ಯವರ್ಧತ ॥೪॥

ಪಾಂಡುಪುತ್ರರ ಹೆದೆಯ ಬಿಲ್ಲಿನ ಧ್ವನಿ ಮೇಧಾವಿಗಳಾದ ಬ್ರಾಹ್ಮಣರ ವೇದಘೋಷ ಹೀಗೆ ಬ್ರಾಹ್ಮಣ ಜಾತಿಯ ಜೊತೆಯಲ್ಲಿ ಕ್ಷತ್ರಿಯ ಜಾತಿಯು ಸೇರಿ ಅಭಿವೃದ್ಧಿಯನ್ನು ಹೊಂದಿತು.

ಅಥಾಬ್ರವೀದ್ ಬಕೋಽಭ್ಯೇತ್ಯ ಧರ್ಮರಾಜಂ ಯುಧಿಷ್ಠಿರಮ್ ।
ಸಂಧ್ಯಾಂ ಕೌಂತೇಯಮಾಸೀನಮ್ ಋಷಿಭಿಃ ಪರಿವಾರಿತಮ್ ॥೫॥

ಅನಂತರ ಋಷಿಗಳಿಂದ ಸುತ್ತುವರಿಯಲ್ಪಟ್ಟ ಸಂಧ್ಯಾವಂದನೆಯನ್ನು ಮಾಡಲು ಕುಳಿತಿದ್ದ ಧರ್ಮರಾಜನಾದ ಯುಧಿಷ್ಠಿರನ ಸಮೀಪಕ್ಕೆ ಬಕಮುನಿಗಳು ಬಂದು ಮಾತನಾಡಿದರು.

ಪಶ್ಯ ದ್ವೈತವನೇ ಪಾರ್ಥ ಬ್ರಾಹ್ಮಣಾನಾಂ ತಪಸ್ವಿನಾಮ್ ।
ಹೋಮವೇಲಾಂ ಕುರುಶ್ರೇಷ್ಠ ಸಂಪ್ರಜ್ವಲಿತಪಾವಕಾಮ್ ॥೬॥

ಎಲೈ ಪಾರ್ಥನೇ! ಕುರುಶ್ರೇಷ್ಠನೇ! ದ್ವೈತವನದಲ್ಲಿ ತಪಸ್ವಿಗಳಾದ ಬ್ರಾಹ್ಮಣರು ಪ್ರಜ್ವಲಿಸುತ್ತಿರುವ ಅಗ್ನಿಯನ್ನುಳ್ಳ ಹೋಮವೇಳೆಯನ್ನು ನೋಡು.

ಚರಂತಿ ಧರ್ಮಂ ಪುಣ್ಯೇಽಸ್ಮಿನ್ ತ್ವಯಾ ಗುಪ್ತಾ ಮಹಾವ್ರತಾಃ ।
ಭೃಗವೋಽಂಗಿರಸಶ್ಚೈವ ವಸಿಷ್ಠಾಃ ಕಾಶ್ಯಪೈಃ ಸಹ ॥೭॥

ಅಗಸ್ತ್ಯಾಶ್ಚ ಮಹಾಭಾಗಾ ಆತ್ರೇಯಾಶ್ಚೋತ್ತಮವ್ರತಾಃ ।
ಸರ್ವತೋ ಜಗತಃ ಶ್ರೇಷ್ಠಾ ಬ್ರಾಹ್ಮಣಾಃ ಸಮ್ಮತಾಸ್ತ್ವಯಾ ॥೮॥

ನಿನ್ನಿಂದ ರಕ್ಷಿಸಲ್ಪಟ್ಟ ಮಹಾವ್ರತರಾದ ಭೃಗುಗಳು ಅಂಗಿರಸರು ವಸಿಷ್ಠರು ಕಾಶ್ಯಪರು ಅಗಸ್ತ್ಯರು ಆತ್ರೇಯರು ಈ ನಿನಗೆ ಸಮ್ಮತರಾದ ಜಗತ್ತಿನಲ್ಲಿ ಶ್ರೇಷ್ಠರಾದ

ಬ್ರಾಹ್ಮಣೋತ್ತಮರೆಲ್ಲರೂ ಪವಿತ್ರವಾದ ಈ ಆಶ್ರಮದಲ್ಲಿ ಧರ್ಮವನ್ನು ಆಚರಿಸುತ್ತಿದ್ದಾರೆ.

ಇದಂ ತು ವಚನಂ ಪಾರ್ಥ ಶೃಣ್ವೇಕಾಗ್ರಮನಾ ಮಮ ।
ಭ್ರಾತೃಭಿಃ ಸಹ ಕೌಂತೇಯ ಯತ್ ತ್ವಾಂ ವಕ್ಷ್ಯಾಮಿ ಕೌರವ ॥೯॥

ಎಲೈ ಪಾರ್ಥನೇ! ಕೌಂತೇಯನೇ! ನಾನು ಹೇಳುವ ಈ ಮಾತನ್ನು ತಮ್ಮಂದಿರ ಜೊತೆಯಲ್ಲಿ ಏಕಾಗ್ರಮನಸ್ಸಿನಿಂದ ಕೇಳು.

ಬ್ರಹ್ಮ ಕ್ಷತ್ರೇಣ ಸಂಸೃಷ್ಟಂ ಕ್ಷತ್ರಂ ಚ ಬ್ರಹ್ಮಣಾ ಸಹ ।
ಉದೀರ್ಣೇ ದಹತಃ ಶತ್ರೂನ್ ವನಾನೀವಾಗ್ನಿಮಾರುತೌ ॥೧೦॥

ಬ್ರಾಹ್ಮಣ್ಯವು ಕ್ಷತ್ರಿಯಜಾತಿಯಲ್ಲಿ ಸಂಬದ್ಧವಾಗಿ ಕ್ಷತ್ರಿಯ ಜಾತಿಯು ಬ್ರಾಹ್ಮಣ ಜಾತಿಯಲ್ಲಿ ಸಂಬದ್ಧವಾಗಿ ಅಭಿವೃದ್ಧಿಯನ್ನು ಹೊಂದಿದರೆ ಅಗ್ನಿಮಾರುತಗಳು ವನಗಳನ್ನು ದಹಿಸಿದಂತೆ ಶತ್ರುಗಳನ್ನು ಜಯಿಸುತ್ತಾರೆ.

ನಾಬ್ರಾಹ್ಮಣಸ್ತಾತ ಚಿರಂ ಬುಭೂಷೇದ್
ಇಚ್ಛನ್ನಿಮಂ ಲೋಕಮಮುಂ ಚ ಜೇತುಮ್ ।
ವಿನೀತಧರ್ಮಾರ್ಥಮಪೇತದೋಷಂ
ಲಬ್ಧ್ವಾ ದ್ವಿಜಂ ಹಂತಿ ನೃಪಃ ಸಪತ್ನಾನ್ ॥೧೧॥

ಪ್ರೀತಿಪಾತ್ರನೇ! ಬ್ರಾಹ್ಮಣನ ಸಹಾಯವಿಲ್ಲದ ರಾಜನು ಈ ಭೂಮಿಯನ್ನು ಜಯಿಸಿ ಬಹಳ ಕಾಲ ಆಳುತ್ತೇನೆ ಎಂದು ಬಯಸಬಾರದು. ಧರ್ಮಾರ್ಥಗಳಲ್ಲಿ ಸುಶಿಕ್ಷಿತನಾದ ದೋಷರಹಿತವಾದ ಬ್ರಾಹ್ಮಣನನ್ನು ಪಡೆದರೆ ರಾಜನು ಶತ್ರುಗಳನ್ನು ಸಂಹರಿಸುತ್ತಾನೆ.

ಚರನ್ ನಿಶ್ರೇಯಸಂ ಧರ್ಮಂ ಪ್ರಜಾಪಾಲನಕಾರಿತಮ್ ।
ನಾಭ್ಯಗಚ್ಛದ್ ಬಲಿರ್ಲೋಕೇ ತೀರ್ಥಮನ್ಯತ್ರ ವೈ ದ್ವಿಜಾತ್ ॥೧೨॥

ಪ್ರಜಾಪಾಲನದಿಂದ ಉಂಟಾದ ಮೋಕ್ಷಜನಕವಾದ ಧರ್ಮಗಳನ್ನು ಆಚರಿಸಿದ ವಿರೋಚನ ಪುತ್ರನಾದ ಬಲಿಯು ಲೋಕದಲ್ಲಿ ಬ್ರಾಹ್ಮಣರನ್ನು ಬಿಟ್ಟು ಬೇರೆ ಯಾರನ್ನೂ ಪವಿತ್ರೀಕರಿಸುವ ಸಾಮರ್ಥ್ಯವುಳ್ಳವರನ್ನಾಗಿ ಪಡೆಯಲಿಲ್ಲ.

ನಾನೂನಮಾಸೀದಸುರಸ್ಯ ರಾಜನ್
ವೈರೋಚನೇ ಶ್ರೀರಭಿಕಾಂಕ್ಷಿತಾ ಯಾ ।
ಲಬ್ಧ್ವಾ ಮಹೀಂ ಬ್ರಾಹ್ಮಣಸಂಪ್ರಯೋಗಾತ್
ತೇಷಾಂ ಚರನ್ ದುಃಖಿಮತೋ ವ್ಯನಶ್ಯತ್ ॥೧೩॥

ಎಲೈ ರಾಜನೇ! ಯಾವ ಸಂಪತ್ತು ಮೊದಲು ಅಪೇಕ್ಷಿಸಲ್ಪಟ್ಟಿತೋ ಆ ಸಂಪತ್ತು ವಿರೋಚನನ ಮಗನಾದ ಬಲಿಯಲ್ಲಿ ನ್ಯೂನವಾಗಿ ಏನೂ ಇರಲಿಲ್ಲ. ಬ್ರಾಹ್ಮಣರ ಸಹವಾಸದಿಂದಲೇ ಭೂಮಿಯನ್ನು ಪಡೆದು ಬಳಿಕ ಅವರಿಗೆ ದುಃಖವನ್ನು ಉಂಟುಮಾಡಿದ ಕಾರಣ ಬಲಿಗೆ ಆ ಸಂಪತ್ತು ನಾಶವಾಯಿತು.

ನಾಬ್ರಾಹ್ಮಣಂ ಭೂಮಿರಿಯಂ ಸಮೇತಿ
ವರ್ಮದ್ವಿತೀಯಂ ಭಜತೇ ಚಿರಾಯ ।
ಸಮುದ್ರನೇಮಿರ್ನಮತೇ ತು ತಸ್ಮೈ
ಯಂ ಬ್ರಾಹ್ಮಣಃ ಶಾಸ್ತಿ ನಯೈರ್ವಿನೀತಮ್ ॥೧೪॥

ಈ ಭೂಮಿಯು ಬ್ರಾಹ್ಮಣಸಹಾಯವಿಲ್ಲದ ಕ್ಷತ್ರಿಯನ ಜೊತೆಯಲ್ಲಿ ಬಹುಕಾಲ ಇರುವುದಿಲ್ಲ. ಸಮುದ್ರನೇಮಿ (ಪರಿಖೆ)ಯಾದ ಈ ಭೂಮಿಯು ಯಾವ ವಿಜಯಶೀಲನಾದ ರಾಜನನ್ನು ಬ್ರಾಹ್ಮಣನು ಶಾಸನಮಾಡುತ್ತಾನೆಯೋ ಅಂತಹ ರಾಜನಿಗೆ ನಮಸ್ಕರಿಸುತ್ತದೆ.

ಕುಂಜರಸ್ಯೇವ ಸಂಗ್ರಾಮೇ ಪರಿಗೃಹ್ಯಾಂಕುಶಗ್ರಹಮ್ ।
ಬ್ರಹ್ಮಣಾ ವಿಪ್ರಹೀನಸ್ಯ ಕ್ಷತ್ರಸ್ಯ ಕ್ಷೀಯತೇ ಬಲಮ್ ॥೧೫॥

ಗಜಯುದ್ಧದಲ್ಲಿ ಅಂಕುಶವನ್ನು ಹಿಡಿದ ಗಜಯೋಧನನ್ನು ಹಿಡಿದರೆ ಹೇಗೆ ಯುದ್ಧದಲ್ಲಿ ಆನೆಯ ಬಲವು ಕುಗ್ಗುತ್ತದೋ ಅದರಂತೆ ಬ್ರಾಹ್ಮಣನಿಂದ ಹೀನವಾದ ಕ್ಷತ್ರಿಯನ ಬಲವು ನಾಶಹೊಂದುತ್ತದೆ.

ಬ್ರಹ್ಮಣ್ಯನುಪಮಾ ದೃಷ್ಟಿಃ ಕ್ಷಾತ್ರಸ್ಯಾಪ್ರತಿಮಂ ಬಲಮ್ ।
ತೌ ಯದಾ ಚರತಃ ಸಾರ್ಧಮಥ ಲೋಕಃ ಪ್ರಸೀದತಿ ॥೧೬॥

ಬ್ರಾಹ್ಮಣನಲ್ಲಿ ಅಸದೃಶವಾದ ಜ್ಞಾನವಿದೆ ಕ್ಷತ್ರಿಯನಿಗೆ ಅಸದೃಶವಾದ ಬಲವಿದೆ. ಅವರೆಡು ಒಟ್ಟಿಗೆ ಸೇರಿದರೆ ಆಗ ಲೋಕಕ್ಕೆ ಪ್ರಸನ್ನತೆಯುಂಟಾಗುತ್ತದೆ.

ಭಗವಾನ್ ಸುಮಹಾನಗ್ನಿಃ ಕಕ್ಷಂ ದಹತಿ ಸಾನಿಲಃ ।
ತಥಾ ದಹತಿ ರಾಜನ್ಯೋ ಬ್ರಾಹ್ಮಣೇನ ಸಮಂ ರಿಪೂನ್ ॥೧೭॥

ಪೂಜ್ಯನಾದ ಅಗ್ನಿಯು ವಾಯುವಿನ ಜೊತೆಯಲ್ಲಿ ಸೇರಿದರೆ ಕಾಡನ್ನು ದಹಿಸುತ್ತಾನೆ. ಅದರಂತೆ ಕ್ಷತ್ರಿಯನು ಬ್ರಾಹ್ಮಣನ ಜೊತೆಯಲ್ಲಿ ಸೇರಿದರೆ ಶತ್ರುಗಳನ್ನು ಜಯಿಸುತ್ತಾನೆ.

ಬ್ರಾಹ್ಮಣೋ ಹ್ಯೇವ ಮೇಧಾವೀ ಬುದ್ಧಿಪರ್ಯೇಷಣಂ ಚರೇತ್ ।
ಅಲಬ್ಧಸ್ಯ ಚ ಲಾಭಾಯ ಲಬ್ಧಸ್ಯ ಚ ವಿವೃದ್ಧಯೇ ॥೧೮॥

ಮೇಧಾವಿಯಾದ ಬ್ರಾಹ್ಮಣನೇ ರಾಜನ ಅಲಭ್ಯವಾದುದುರ ಲಾಭಕ್ಕೆ ಮತ್ತು ಲಭ್ಯವಾದುದುರ ಅಭಿವೃದ್ಧಿಗೆ ತನ್ನ ಬುದ್ಧಿಯಿಂದ ವಿಚಾರಮಾಡಬೇಕು.

ಅಲಬ್ಧಲಾಭಾಯ ಚ ಲಬ್ಧವೃದ್ಧಯೇ
ಯಥಾರ್ಹತೀರ್ಥಪ್ರತಿಪಾದನಾಯ ।
ಯಶಸ್ವಿನಂ ವೇದವಿದಂ ವಿಪಶ್ಚಿತಂ
ಬಹುಶ್ರುತಂ ಬ್ರಾಹ್ಮಣಮೇವ ವಾಸಯ ॥೧೯॥

ಅಲಭ್ಯವಾದುದರ ಲಾಭಕ್ಕೆ ಲಭ್ಯವಾದುದುರ ಅಭಿವೃದ್ಧಿಗೆ ಮತ್ತು ಯಥಾಯೋಗ್ಯವಾಗಿ ಧರ್ಮಶಾಸ್ತ್ರವನ್ನು ಉಪದೇಶಮಾಡುವುದಕ್ಕಾಗಿ ಯಶಸ್ವಿಯಾದ ವೇದಜ್ಞನಾದ ಬಹುಶ್ರುತನಾದ ಜ್ಞಾನಿಯಾದ ಒಬ್ಬ ಬ್ರಾಹ್ಮಣನನ್ನು ನಿನ್ನ ಜೊತೆಯಲ್ಲಿ ಇರಿಸಿಕೋ.

ಬ್ರಾಹ್ಮಣೇಷೂತ್ತಮಾ ವೃತ್ತಿಸ್ತವ ನಿತ್ಯಂ ಯುಧಿಷ್ಠಿರ ।
ತೇನ ತೇ ಸರ್ವಲೋಕೇಷು ದೀಪ್ಯತೇ ಪ್ರಥಿತಂ ಯಶಃ ॥೨೦॥

ಎಲೈ ಯುಧಿಷ್ಠಿರನೇ! ನಿನಗೆ ಬ್ರಾಹ್ಮಣರಲ್ಲಿ ಯಾವಾಗಲೂ ಒಳ್ಳೆಯ ನಡೆವಳಿಕೆ ಇದೆ. ಆದ್ದರಿಂದ ನಿನ್ನ ವಿಸ್ತಾರವಾದ ಕೀರ್ತಿಯು ಎಲ್ಲಾ ಲೋಕಗಳಲ್ಲಿಯೂ ಬೆಳಗುತ್ತಿದೆ.

ವೈಶಂಪಾಯನಃ

ತತಸ್ತೇ ಬ್ರಾಹ್ಮಣಾಃ ಸರ್ವೇ ಬಕಂ ದಾಲ್ಭ್ಯಮಪೂಜಯನ್ ।
ಯುಧಿಷ್ಠಿರೇ ಸ್ತೂಯಮಾನೇ ಸರ್ವೇ ಸುಮನಸೋಽಭವನ್ ॥೨೧॥

ಅನಂತರ ಆ ಬ್ರಾಹ್ಮಣರೆಲ್ಲರೂ ದಾಲ್ಭ್ಯಪುತ್ರರಾದ ಬಕ ಋಷಿಗಳನ್ನು ಪೂಜಿಸಿದರು. ಅವರು ಯುಧಿಷ್ಠಿರನನ್ನು ಸ್ತೋತ್ರಮಾಡುತ್ತಿರಲು ಎಲ್ಲರಿಗೂ ಮನಸ್ಸಿನಲ್ಲಿ ಹರ್ಷವುಂಟಾಯಿತು.

ದ್ವೈಪಾಯನೋ ನಾರದಶ್ಚ ಜಾಮದಗ್ನ್ಯಃ ಪೃಥುಶ್ರವಾಃ ।
ಇಂದ್ರದ್ಯುಮ್ನೋದ್ದಾಲಕೀ ಚ ಕ್ರತುಮೇಧಾಃ ಸಹಸ್ರಪಾತ್ ॥೨೨॥

ಲವಣಾಶ್ವಶ್ಚ ಕಣ್ವಶ್ಚ ಕಾಶ್ಯಪಶ್ಚ ಮಹಾತಪಾಃ ।
ಹಾರೀತಃ ಸ್ಥೂಲಕರ್ಣಶ್ಚ ಅಗ್ನಿವೇಶ್ಯೋಽಥ ಕೌಶಿಕಃ ॥೨೩॥

ಜಿತವಾಕ್ಚ ಸುವಾಕ್ಚೈವ ಬೃಹದಶ್ವಋತಾವಸೂ ।
ಊರ್ಧ್ವರೇತಾ ದೇವಮಿತ್ರಃ ಸುಹೋತ್ರೋ ಹೋತ್ರವಾಹನಃ ॥೨೪॥

ಏತೇ ಚಾನ್ಯೇ ಚ ಬಹವೋ ಬ್ರಾಹ್ಮಣಾಃ ಸಂಶಿತವ್ರತಾಃ ।
ಅಜಾತಶತ್ರುಮರ್ಚಂತಿ ಪುರಂದರಮಿವರ್ಷಯಃ ॥೨೫॥

ವೇದವ್ಯಾಸರು ನಾರದರು ಜಾಮದಗ್ನ್ಯರು ಪೃಥುಶ್ರವ ಇಂದ್ರದ್ಯುಮ್ನ ಉದ್ದಾಲಕಿಗಳು ಕ್ರತುಮೇಧಾ ಸಹಸ್ರಪಾತ್ ಲವಣಾಶ್ವ ಕಣ್ವ ಮಹಾತಪಸ್ವಿಗಳಾದ ಕಾಶ್ಯಪರು ಹಾರೀತ ಸ್ಥೂಲಕರ್ಣ ಅಗ್ನಿವೇಶ್ಯ. ವಿಶ್ವಾಮಿತ್ರ ಜಿತವಾಕ್ ಸುವಾಕ್ ಬೃಹದಶ್ವ ಋತಾವಸು ಊರ್ಧ್ವರೇತ ದೇವಮಿತ್ರ ಸುಹೋತ್ರ ಹೋತ್ರವಾಹನ ಇವರೂ ಇನ್ನೂ ಪ್ರಶಸ್ತ ವ್ರತಧಾರಿಗಳಾದ ಅನೇಕ ಬ್ರಾಹ್ಮಣರೂ ಋಷಿಗಳು ದೇವೇಂದ್ರನನ್ನು ಅರ್ಚಿಸಿದಂತೆ ಅಜಾತಶತ್ರುವನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋಪಂಶೋಽಧ್ಯಾಯಃ ॥
॥ ಕೈರಾತಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

## ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಅತಿಮಾರ್ದವಯುಕ್ತತ್ವಾದ್ ಧರ್ಮರಾಜಶ್ಚತುರ್ದಶೇ ।
ಅಪಿ ವರ್ಷೇ ಗುರುಭಯಾದ್‌ರಾಜ್ಯಂ ನೇಚ್ಛೇದಿತಿ ಪ್ರಭುಃ ।
ಮಾರುತಿಃ ಪ್ರೇಷಯಾಮಾಸ ಕೃಷ್ಣಾಂ ಪ್ರಸ್ತಾವಹೇತವೇ ॥೬೪॥

ಧರ್ಮರಾಜ ಅತಿಯಾದ ಮೃದು ಸ್ವಭಾವದವನಾದ್ದರಿಂದ ಹದಿನಾಲ್ಕನೇ, ವರ್ಷದಲ್ಲಿಯೂ ಭೀಷ್ಮಾದಿಗಳು ಹಿರಿಯರು ಎನ್ನುವ ಭಯದಿಂದ ಅವರಲ್ಲಿ ವಿರೋಧಿಸಿ ರಾಜ್ಯವನ್ನು ಸಂಪಾದಿಸಲು ಒಪ್ಪದಿರಬಹುದು ಎಂದು ಭೀಮ ಆ ವಿಷಯ ಪ್ರಸ್ತಾವ ಮಾಡುವ ಉದ್ದೇಶದಿಂದ ದ್ರೌಪದಿಯನ್ನು ಧರ್ಮರಾಜನ ಬಳಿಗೆ ಕಳಿಸಿದ.

ಕ್ಷಮಾ ಸರ್ವತ್ರ ಧರ್ಮೋ ನ ಪಾಪಹೇತುಶ್ಚ ದುರ್ಜನೇ ।
ರಾಜ್ಞಾಂ ಸಾಮರ್ಥ್ಯಯುಕ್ತಾನಾಮಿತಿ ಸಂಸ್ಥಾಪ್ಯ ಶಾಸ್ತ್ರತಃ ॥೬೫॥

ಹತ್ವಾ ಚತುರ್ದಶೇ ವರ್ಷೇ ಧಾರ್ತರಾಷ್ಟ್ರಾನರಾಜ್ಯದಾನ್ ।
ಕರ್ತುಂ ರಾಜ್ಯಂ ಪುರೋ ಗಂತಾ ಭವಾನೀತ್ಯಗ್ರಜೇನ ಹ ॥೬೬॥

ಕಾರಯನ್ ಸತ್ಯಶಪಥಂ ವಿವಾದಸ್ಯ ಕ್ರಮೇಚ್ಛಯಾ ।
ಆದಿಶತ್‌ಪ್ರಥಮಂ ಕೃಷ್ಣಾಂ ಭೀಮಃ ಸಾ ನೃಪಮಬ್ರವೀತ್ ॥೬೭॥

ಕ್ಷಮೆ ಎಲ್ಲರ ವಿಷಯದಲ್ಲಿ ಧರ್ಮವಾಗುವುದಿಲ್ಲ. ಶಕ್ತಿ ಉಳ್ಳ ರಾಜರಿಗೆ ದುರ್ಜನರ ವಿಷಯದಲ್ಲಿ ಕ್ಷಮೆ ಪಾಪಕ್ಕೇ ಕಾರಣವಾಗುತ್ತದೆ ಎಂದು ಧರ್ಮರಾಜನಿಗೆ ಶಾಸ್ತ್ರಾಧಾರದಿಂದ ಮನದಟ್ಟು ಮಾಡಿಸಿ ಮುಂದೆ ಹದಿನಾಲ್ಕನೇ ವರ್ಷದಲ್ಲಿ ಕೌರವರು ರಾಜ್ಯವನ್ನು ಹಿಂದಿರುಗಿಸದಿದ್ದರೆ ಅವರನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಳ್ಳಲು ತಾನು ಮುಂದಾಗುವೆನೆಂದು ಧರ್ಮರಾಜನಿಂದ ಸತ್ಯ ಪ್ರತಿಜ್ಞೆ ಮಾಡಿಸುವುದಕ್ಕಾಗಿ ವಿವಾದೋಪಕ್ರಮದ ಉದ್ದೇಶದಿಂದ ಭೀಮ ಮೊದಲಿಗೆ ದ್ರೌಪದಿಯನ್ನು ಧರ್ಮರಾಜನ ಬಳಿಗೆ ಕಳಿಸಿದ. ದ್ರೌಪದಿ ಅವನ ಮುಂದೆ ನುಡಿದಳು.

ನೈವ ಕ್ಷಮಾ ಕುಜನತಾಸು ನೃಪಸ್ಯ ಧರ್ಮ
ಸ್ತಾಂತ್ವಂ ವೃಥೈವ ಧೃತವಾನಸಿ ಸರ್ವಕಾಲಂ ।

ಇತ್ಯುಕ್ತ ಆಹ ನೃಪತಿಃ ಪರಮಾ ಕ್ಷಮೈವ
ಸರ್ವತ್ರ ತದ್ವಿಧೃತಮೇವ ಜಗತ್‌ಸಮಸ್ತಂ ॥೬೮॥

'ದುರ್ಜನರಲ್ಲಿ ಕ್ಷಮೆ ತೋರುವುದು ರಾಜನಿಗೆ ಸರ್ವಥಾ ಧರ್ಮವಾಗುವುದಿಲ್ಲ. ನೀನು ಯಾವಾಗಲೂ ಅದರಲ್ಲಿ ವ್ಯರ್ಥವಾಗಿ ತಾಳ್ಮೆ ವಹಿಸುತ್ತಿರುವಿ'. ದ್ರೌಪದಿ ಹೀಗೆ ಹೇಳಿದಾಗ ಧರ್ಮರಾಜನೆಂದ, 'ಎಲ್ಲ ಬಗೆಯ ಜನರಲ್ಲಿಯೂ ಕ್ಷಮೆ ತೋರುವುದು ರಾಜನಿಗೆ ಪರಮಧರ್ಮ. ಸಮಸ್ತ ಪ್ರಪಂಚವೂ ಈ ಕ್ಷಮಾಧರ್ಮದ ಬಲದಿಂದಲೇ ನಿಂತಿದೆ'. 'ನಿನ್ನ ಈ ಸತ್ಯ ಧರ್ಮ ಕ್ಷಮೆ ಎಲ್ಲವೂ ನಿನಗೆ ದುಃಖವನ್ನೆ ತಂದಿದೆ. ಏಕೆಂದರೆ ಪಾಪಿಗಳಲ್ಲಿ ನೀನು ಕ್ಷಮೆ ತೋರುವಿ, ಸತ್ಯ ಧರ್ಮಗಳನ್ನು ಆಚರಿಸುವಿ' ಎನ್ನುತ್ತಾಳೆ ದ್ರೌಪದಿ.

ಕರ್ತಾ ಚ ಸರ್ವಜಗತಃ ಸುಖದುಃಖಯೋರ್ಹಿ
ನಾರಾಯಣಸ್ತದನು ದತ್ತಮಿಹಾಸ್ಯ ಸರ್ವಂ ।
ತಸ್ಮಾನ್ನ ಕೋಪವಿಷಯೋಽಸ್ತಿ ಕುತಶ್ಚ ಕಶ್ಚಿತ್
ತಸ್ಮಾತ್ ಕ್ಷಮೈವ ಸಕಲೇಷು ಪರೋಽಸ್ಯ ಧರ್ಮಃ ॥೬೯॥

ಸಮಸ್ತ ಪ್ರಪಂಚಕ್ಕೆ ಸುಖದುಃಖಗಳನ್ನು ಉಂಟುಮಾಡುವವನು ಶ್ರೀಹರಿ. ಅವನೇ ಜಗತ್ತಿಗೆ ಸುಖದುಃಖವೆಲ್ಲವನ್ನೂ ಯೋಗ್ಯತಾನುಗುಣವಾಗಿ ಕೊಡುತ್ತಾನೆ. ಅದರಿಂದ ನಮ್ಮ ಕೋಪಕ್ಕೆ ಯೋಗ್ಯನೆನಿಸುವ ವ್ಯಕ್ತಿ ಯಾರೂ ಎಲ್ಲಿಯೂ ಇಲ್ಲ. ಅದರಿಂದ ಎಲ್ಲರಲ್ಲಿಯೂ ಕ್ಷಮೆ ತೋರುವುದೇ ರಾಜನಿಗೆ ಪರಮಧರ್ಮ.

ಇತ್ಯುಕ್ತವಂತಂ ನೃಪಮಾಹ ಪಾರ್ಷತೀ
ಯದಿ ಕ್ಷಮಾ ಸರ್ವನರೇಷು ಧರ್ಮಃ ।
ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ
ಭವೇಜ್ಜಗತ್ ಕಾಪುರುಷೈರ್ವಿನಶ್ಯೇತ್ ॥೭೦॥

ಹೀಗೆ ಧರ್ಮರಾಜ ಹೇಳಿದಾಗ ದ್ರೌಪದಿ ಹೇಳಿದಳು, 'ಎಲ್ಲ ಜನರಲ್ಲಿಯೂ ಕ್ಷಮೆ ತೋರುವುದು ರಾಜನ ಧರ್ಮವೆನ್ನುವುದಾದರೆ ರಾಜನಿದ್ದೇನು ಪ್ರಯೋಜನ? ಲೋಕವ್ಯವಹಾರವೂ ನಡೆಯದು, ಜಗತ್ತೂ ದುರ್ಜನರಿಂದ ನಾಶಹೊಂದೀತು.

ಸತ್ಯಂ ಚ ವಿಷ್ಣುಃ ಸಕಲಪ್ರವರ್ತಕೋ
ರಮಾವಿರಿಂಚೇಶಪುರಃಸರಾಶ್ಚ।
ಕಾಷ್ಠಾದಿವತ್ ತದ್ವಶಗಾಃ ಸಮಸ್ತಾ
ಸ್ತಥಾಪಿ ನ ವ್ಯರ್ಥತಾ ಪೌರುಷಸ್ಯ ॥೭೧॥

ಶ್ರೀಹರಿಯೆ ಸಕಲಪ್ರವರ್ತಕನೆನ್ನುವುದು ನಿಜ. ರಮಾ ಬ್ರಹ್ಮರುದ್ರಾದಿಗಳೆಲ್ಲರೂ ಅವನ ಅಧೀನದಲ್ಲಿ ಮರದ ಕೈಗೊಂಬೆಗಳಂತೆ ಇರುವರೆನ್ನುವುದೂ ನಿಜವೆ. ಆದರೂ ಪುರುಷ ಪ್ರಯತ್ನ ವ್ಯರ್ಥವಾಗದು.

ತದಾಜ್ಞಯಾ ಪುರುಷಶ್ಚೇಷ್ಟಮಾನ-
ಶ್ಚೇಷ್ಟಾನುಸಾರೇಣ ಶುಭಾಶುಭಸ್ಯ ।
ಭೋಕ್ತಾ ನ ತಚ್ಚೇಷ್ಟಿತಮನ್ಯಥಾ ಭವೇತ್
ಕರ್ತಾ ತಸ್ಮಾತ್ ಪುರುಷೋಽಸ್ಯ ವಶ್ಯಃ ॥೭೨॥

ಜೀವನು ಹರಿಯ ಪ್ರೇರಣೆಯಿಂದ ಕರ್ಮ ಮಾಡುತ್ತಾನೆ. ಆ ಕರ್ಮಾನುಸಾರ ಸುಖದುಃಖಗಳನ್ನು ಉಣ್ಣುತ್ತಾನೆ. ಅವನ ಕರ್ಮವು ವ್ಯರ್ಥವಾಗುವುದಿಲ್ಲ. ಅದರಿಂದ ಜೀವನೂ ಅವನ ಕರ್ಮಗಳಿಗೆ ಹರಿಯ ಅಧೀನನಾಗಿದ್ದು ಕರ್ತನೆನಿಸುತ್ತಾನೆ ಎನ್ನಬೇಕು.

ವೃಥಾ ಯದಿ ಸ್ಯಾತ್ ಪೌರುಷಂ ಕಸ್ಯ ಹೇತೋಃ
ವಿಧಿರ್ನಿಷೇಧಸ್ಯ ಸಮಸ್ತ ವೇದಗಃ ।
ವಿಧೇರ್ನಿಷೇಧಸ್ಯ ಚ ನೈವ ಗೋಚರಃ
ಪುಮಾನ್ ಯದಿ ಸ್ಯಾದ್ ಭವತೋ ಹಿತೌ ಹರೇಃ ॥೭೩॥

ಜೀವನು ಮಾಡುವ ಕರ್ಮ ವ್ಯರ್ಥವಾಗುವುದಾದರೆ ಎಲ್ಲ ವೇದಗಳಲ್ಲಿ ವಿಧಿನಿಷೇಧಗಳು ಯಾರಿಗಾಗಿ ಹೊರಟಿವೆ? ಜೀವನು ವಿಧಿನಿಷೇಧಗಳಿಗೆ ಒಳಪಡುವುದಿಲ್ಲವಾದರೆ ಹಾಗೇ ಆ ವಿಧಿನಿಷೇಧಗಳೆನ್ನಬೇಕಾದೀತು.

ತೇನೈವ ಲೇಪಶ್ಚ ಭವೇದಮುಷ್ಯ
ಪುಣ್ಯೇನ ಪಾಪೇನ ಚ ನೈವ ಚಾಸೌ ।

ಲಿಪ್ಯೇತ ತಾಭ್ಯಾಂ ಪರಮಃ ಸ್ವತಂತ್ರಃ
ಕರ್ತಾ ತತಃ ಪುರುಷೋऽಪ್ಯಸ್ಯ ವಶ್ಯಃ ॥೭೪॥

ಆದರಿಂದ ಹರಿಗೆ ಪುಣ್ಯಪಾಪಗಳ ಲೇಪಗಳಿವೆ ಎಂದೂ ಹೇಳಬೇಕಾದೀತು. ಆದರೆ ಅವನು ಸರ್ವಥಾ ಲೇಪ ಉಳ್ಳವನಲ್ಲ. ಏಕೆಂದರೆ ಅವನು ಪರಮ ಸ್ವತಂತ್ರ. ಹೀಗಾಗಿ ಜೀವ ಅಸ್ವತಂತ್ರನಾದರೂ ಅವನು ಕರ್ತ ಎಂದೆನ್ನಲೇಬೇಕು.

★ ★ ★ ★

## ಇಪ್ಪತ್ತನಾಲ್ಕನೆಯ ಅಧ್ಯಾಯ

(ಭೀಮನ ಸನ್ನಿಧಿಯಲ್ಲಿ ದ್ರೌಪದಿಯಿಂದ ಧರ್ಮರಾಜನನ್ನು ಕುರಿತು ಚುಚ್ಚುಮಾತುಗಳು.)

**ವೈಶಂಪಾಯನಃ**

ತತೋ ವನಂಗತಾಃ ಪಾರ್ಥಾ ಸಾಯಾಹ್ನೇ ಸಹ ಕೃಷ್ಣಯಾ ।
ಉಪವಿಷ್ಟಾಃ ಕಥಾಶ್ಚಕ್ರುರ್ದುಃಖಶೋಕಪರಾಯಣಾಃ ॥೧॥

ಅನಂತರ ಕಾಡಿನಲ್ಲಿ ನೆಲೆಸಿದ ಪಾರ್ಥರು ಸಾಯಂಕಾಲದ ವೇಳೆಯಲ್ಲಿ ದ್ರೌಪದಿಯ ಜೊತೆಯಲ್ಲಿ ಕುಳಿತು ದುಃಖಶೋಕಪರಾಯಣರಾಗಿ ಮಾತುಗಳನ್ನು ಆಡಿದರು.

ಪ್ರಿಯಾ ಚ ದರ್ಶನೀಯಾ ಚ ಪಂಡಿತಾ ಚ ಪತಿವ್ರತಾ ।
ತತಃ ಕೃಷ್ಣಾ ಧರ್ಮರಾಜಮಿದಂ ವಚನಮಬ್ರವೀತ್ ॥೨॥

ಆಗ ಪ್ರಿಯೆಯೂ ಸುಂದರಿಯೂ ಪಂಡಿತಳೂ ಮತ್ತು ಪತಿವ್ರತೆಯೂ ಆದ ದ್ರೌಪದಿಯು ಧರ್ಮರಾಜನನ್ನು ಕುರಿತು ಹೀಗೆ ಮಾತನಾಡಿದಳು.

ನ ನೂನಂ ತಸ್ಯ ಪಾಪಸ್ಯ ದುಃಖಮಸ್ಮಾಸು ಕಿಂಚನ ।
ವಿದ್ಯತೇ ಧಾರ್ತರಾಷ್ಟ್ರಸ್ಯ ನೃಶಂಸಸ್ಯ ದುರಾತ್ಮನಃ ॥೩॥

ಧೃತರಾಷ್ಟ್ರಪುತ್ರನಾದ ದುರಾತ್ಮನಾದ ಪಾಪಿಯಾದ ಕ್ರೂರನಾದ ಆ ದುರ್ಯೋಧನನಿಗೆ ನಮ್ಮ ಮೇಲೆ ಸ್ವಲ್ಪವೂ ಕನಿಕರವಿಲ್ಲ.

ಯಸ್ತಾ ್ವಂ ರಾಜನ್ ಮಯಾ ಸಾರ್ಧಮಜಿನೈಃ ಪರಿವಾರಿತಮ್ ।
ಭ್ರಾತೃಭಿಶ್ಚ ತದಾ ಸರ್ವೈರ್ನಾಭ್ಯಭಾಷತ ಕಿಂಚನ ।
ವನಂ ಪ್ರಸ್ಥಾಪ್ಯ ದುರ್ಮೇಧಾ ನಾನುತಪ್ಯತಿ ದುರ್ಮತಿಃ ॥೪॥

ರಾಜನೇ! ಯಾವ ಅವನು ನಿನ್ನನ್ನು ಸಹ ಕೃಷ್ಣಾಜಿನಗಳನ್ನು ಉಡಿಸಿ ನನ್ನ ಮತ್ತು ತಮ್ಮಂದಿರ ಜೊತೆಯಲ್ಲಿದ್ದ ನಿನ್ನನ್ನು ಕುರಿತು ಒಂದು ಮಾತನ್ನೂ ಆಡಲಿಲ್ಲವೋ ಅಂತಹ ದುರ್ಬುದ್ಧಿಯುಳ್ಳ ದುರ್ಮೇಧನಾದ ಅವನು ನಮ್ಮನ್ನು ಕಾಡಿಗೆ ಕಳುಹಿಸಿ ಪಶ್ಚತ್ತಾಪ ಪಡುವುದಿಲ್ಲ.

ಆಯಸಂ ಹೃದಯಂ ನೂನಂ ತಸ್ಯಾಸೀತ್ ಕ್ರೂರಕರ್ಮಣಃ ।
ಯಸ್ತಾ ್ವಂ ಧರ್ಮಪರಂ ಶ್ರೇಷ್ಠಂ ರೂಕ್ಷಾಣ್ಯಶ್ರಾವಯತ್ ತದಾ ॥೫॥

ನಿಶ್ಚಯವಾಗಿ ಕ್ರೂರಕರ್ಮವನ್ನು ಮಾಡುವ ಅವನ ಹೃದಯವು ಕಬ್ಬಿಣದಿಂದ ಮಾಡಲ್ಪಟ್ಟಿದೆ. ಏಕೆಂದರೆ ಅವನು ಶ್ರೇಷ್ಠನೂ ಧರ್ಮಪರನೂ ಆದ ನಿನ್ನನ್ನು ಕುರಿತು ಆಗ ಅಂತಹ ಕ್ರೂರವಾದ ಮಾತುಗಳನ್ನು ಆಡಿದನು.

ಸುಖೋಚಿತಮದುಃಖಾರ್ಹಂ ದುರಾತ್ಮಾ ಸಸುಹೃದ್ಗಣಃ ।
ಈದೃಶಂ ದುಃಖಮಾನೀಯ ಮೋದತೇ ಪಾಪಪೂರುಷಃ ॥೬॥

ಸುಖೋಚಿತನಾದ, ದುಃಖಕ್ಕೆ ಅರ್ಹನಲ್ಲದ, ನಿನ್ನನ್ನು ಇಂತಹ ದುಃಖಕ್ಕೆ ಒಡ್ಡಿ ದುರಾತ್ಮನೂ ಪಾಪಪುರುಷನೂ ಆದ ಅವನು ತನ್ನ ಹಿತೈಷಿಗಳ ಗಣದ ಜೊತೆಯಲ್ಲಿ ಸಂತೋಷ ಪಡುತ್ತಿದ್ದಾನೆ.

ಚತುರ್ಣಾಮೇವ ಪಾಪಾನಾಂ ಶ್ರುತ್ವೈವಾನಾಶಿತಂ ತದಾ ।
ತ್ವಯಿ ಭಾರತ ನಿಷ್ಕ್ರಾಂತೇ ವನಾಯಾಜಿನವಾಸಸಿ ॥೭॥

ದುರ್ಯೋಧನಸ್ಯ ಕರ್ಣಸ್ಯ ಶಕುನೇಶ್ಚ ದುರಾತ್ಮನಃ ।
ದುರ್ಭ್ರಾತುಸ್ತಸ್ಯ ಚೋಗ್ರಸ್ಯ ತಥಾ ದುಃಶಾಸನಸ್ಯ ಚ ॥೮॥

ಎಲೈ ಭಾರತನೇ! ನೀನು ಅಜಿನಗಳನ್ನು ಧರಿಸಿ ವನವಾಸಕ್ಕಾಗಿ ಹೊರಗೆ ಬರುತ್ತಿರಲು ದುರ್ಯೋಧನ ಕರ್ಣ ದುರಾತ್ಮನಾದ ಶಕುನಿ ದುರ್ಯೋಧನನ ಕೆಟ್ಟ ತಮ್ಮನಾದ ಉಗ್ರನಾದ ದುಶ್ಶಾಸನ ಈ ನಾಲ್ಕು ಜನ ಪಾಪಿಗಳಿಗೆ ಮಾತ್ರ ಕ್ಷೇಮ ಉಂಟಾಯಿತು.

ಇತರೇಷಾಂ ತು ಸರ್ವೇಷಾಂ ಕುರೂಣಾಂ ಕುರುಸತ್ತಮ ।
ದುಃಖೇನಾಪಿ ಪರೀತಾನಾಂ ನೇತ್ರೇಭ್ಯಃ ಪ್ರಾಪತಜ್ಜಲಮ್ ॥೯॥

ಎಲೈ ಕುರುಶ್ರೇಷ್ಠನೆ! ದುಃಖದಿಂದ ಕೂಡಿದ ಉಳಿದ ಎಲ್ಲಾ ಕುರುಗಳಿಗೂ ಆಗ ಕಣ್ಣುಗಳಿಂದ ಕಣ್ಣೀರು ಉರುಳಿತು.

ಇದಂ ಚ ಶಯನಂ ದೃಷ್ಟ್ವಾ ಯಚ್ಚಾಸೀತ್ ತೇ ಪುರಾತನಮ್ ।
ಶೋಚಾಮಿ ತ್ವಾಂ ಮಹಾರಾಜ ದೃಷ್ಟ್ವಾ ಭೂತಳಶಾಯಿನಮ್ ॥೧೦॥

ಎಲೈ ಮಹಾರಾಜನೇ! ಈ ನಿನ್ನ ಹಾಸಿಗೆಯನ್ನು ನೋಡಿ ನಿನಗೆ ಹಿಂದೆ ಇದ್ದ ಆಸನವನ್ನು ಸ್ಮರಿಸಿ ಭೂತಳದಲ್ಲಿ ಮಲಗುವ ನಿನ್ನನ್ನು ನೋಡಿ ನಾನು ದುಃಖಪಡುತ್ತೇನೆ.

ದಾಂತಂ ಯಚ್ಚ ಸಭಾಮಧ್ಯ ಆಸನಂ ರತ್ನಭೂಷಿತಮ್ ।
ದೃಷ್ಟ್ವಾ ಕುಶಪ್ರಸ್ತರೇ ಮಾಂ ಶೋಕೋ ದಾರಯತೇ ಭೃಶಮ್ ॥೧೧॥

ಹಿಂದೆ ಸಭಾಮಧ್ಯದಲ್ಲಿ ದಂತಮಯವಾದ ರತ್ನ ಭೂಷಿತವಾದ ಆಸನದಲ್ಲಿ ಕುಳಿತಿದ್ದುದನ್ನು ಸ್ಮರಿಸಿ ಈಗ ದರ್ಭೆಯ ಚಾಪೆಯ ಮೇಲೆ ಕುಳಿತಿರುವ ನಿನ್ನನ್ನು ನೋಡಿ ಶೋಕವು ನನ್ನ ಹೃದಯವು ಬಿರಿಯುವಂತೆ ಮಾಡುತ್ತಿದೆ.

ಯದಪಶ್ಯಂ ಸಭಾಯಾಂ ತ್ವಾಂ ರಾಜಭಿಃ ಪರಿವಾರಿತಮ್ ।
ತಚ್ಚ ರಾಜನ್ನಪಶ್ಯಂತ್ಯಾಃ ಕಾ ಶಾಂತಿಃ ಹೃದಯಸ್ಯ ಮೇ ॥೧೨॥

ಎಲೈ ರಾಜನೇ! ಹಿಂದೆ ಸಭೆಯಲ್ಲಿ ರಾಜರಿಂದ ಸುತ್ತುವರಿಯಲ್ಪಟ್ಟ ನಿನ್ನನ್ನು ನೋಡಿ ಈಗ ಅದನ್ನು ಕಾಣದಿರುವ ನನ್ನ ಹೃದಯಕ್ಕೆ ಯಾವ ಶಾಂತಿಯು ದೊರೆಯುತ್ತದೆ?

ಯಾ ತ್ವಾಂ ಸ್ರಕ್‌ಚಂದನಾದಿಗ್ಧಮಪಶ್ಯಂ ಸೂರ್ಯವರ್ಚಸಮ್ ।
ಸಾ ತ್ವಾಂ ಪಂಕಮಲಾದಿಗ್ಧಂ ದೃಷ್ಟ್ವಾ ಮುಹ್ಯಾಮಿ ಭಾರತ ॥೧೩॥

ಭಾರತನೇ! ಹಿಂದೆ ಸೂರ್ಯಕಾಂತಿಯನ್ನು ಹೊಂದಿದ್ದ ನೀನು ಸ್ರಕ್‌ಚಂದನಾದಿಗಳಿಂದ ಲೇಪಿಸಲ್ಪಟ್ಟಿರುವುದನ್ನು ನೋಡಿ ಈಗ ಕೆಸರಿನಿಂದ ಲೇಪಿಸಲ್ಪಟ್ಟ ಮತ್ತು ಧೂಳಿನಿಂದ ಲೇಪಿಸಲ್ಪಟ್ಟ ನಿನ್ನನ್ನು ನೋಡಿ ನನಗೆ ಮೂರ್ಛೆಬಂದಂತೆ ಆಗುತ್ತಿದೆ.

ಯಾ ತ್ವಾಽಹಂ ಕೌಶಿಕೈರ್ವಸ್ತ್ರೈಃ ಶುಭೈರ್ಬಹುವಿಧೈಃ ಪುರಾ ।
ದೃಷ್ಟವತ್ಯಸ್ಮಿ ರಾಜೇಂದ್ರ ಸಾ ತ್ವಾಂ ಪಶ್ಯಾಮಿ ಚೀರಿಣಮ್ ॥೧೪॥

ಎಲೈ ರಾಜೇಂದ್ರನೇ! ಯಾವ ನಾನು ನೀನು ಬಹುವಿಧವಾದ ಶುಭ್ರವಾದ ರೇಷ್ಮೆಯ ವಸ್ತ್ರಗಳಿಂದ ಅಲಂಕೃತವಾದುದನ್ನು ಹಿಂದೆ ನೋಡಿದ್ದೆನೋ ಆ ನಾನು ಈಗ ನಾರುಮಡಿಯನ್ನು ಉಟ್ಟ ನಿನ್ನನ್ನು ನೋಡುತ್ತಿದ್ದೇನೆ.

ಯಚ್ಚ ತೇ ರುಗ್ಮಪಾತ್ರೀಭಿಃ ಬ್ರಾಹ್ಮಣೇಭ್ಯಃ ಸಹಸ್ರಶಃ ।
ಹ್ರಿಯತೇ ತೇ ಗೃಹಾದನ್ನಂ ಸಂಸ್ಕೃತಂ ಸಾರ್ವಕಾಮಿಕಮ್ ॥೧೫॥

ಯತೀನಾಂ ಸ್ನಾತಕಾನಾಂ ಚ ತಥೈವ ಗೃಹಮೇಧಿನಾಮ್ ।
ದೀಯತೇ ಭೋಜನಂ ರಾಜನ್ನತೀವ ಗುಣವತ್ ಪ್ರಭೋ ॥೧೬॥

ಸರ್ವಕಾಮೈಃ ಸುವಿಹಿತೈರ್ಯದಪೂಜಯಥಾ ದ್ವಿಜಾನ್ ।
ತಚ್ಚ ರಾಜನ್ನಪಶ್ಯಂತ್ಯಾಃ ಕಾ ಶಾಂತಿರ್ಹೃದಯಸ್ಯ ಮೇ ॥೧೭॥

ನಿನ್ನ ಮನೆಯಲ್ಲಿ ಸುವರ್ಣಮಯವಾದ ಪಾತ್ರೆಗಳನ್ನು ಹಿಡಿದ ಸ್ತ್ರೀಯರು ಸಹಸ್ರಸಂಖ್ಯೆಯಲ್ಲಿ ಎಲ್ಲರೂ ಬಯಸುವ ಸುಸಂಸ್ಕೃತವಾದ ಅನ್ನವನ್ನು ನಿನ್ನ ಮನೆಯಿಂದ ಬ್ರಾಹ್ಮಣರಿಗೂ ಯತಿಗಳಿಗೂ ಸ್ನಾತಕರಿಗೆ ಗೃಹಸ್ಥರಿಗೂ ತೆಗೆದುಕೊಂಡು ಹೋಗುತ್ತಿದ್ದರು. ಪ್ರಭುವೇ! ರಾಜನೇ! ಅದು ಅತ್ಯಂತ ಶ್ರೇಷ್ಠವಾದ ಭೋಜನವಾಗಿದ್ದಿತು. ನೀನು ಬ್ರಾಹ್ಮಣರನ್ನು ಅವರ ಅಭೀಷ್ಟವಾದ ಎಲ್ಲ ಕಾಮನೆಗಳನ್ನು ಪೂರೈಸಿ ಪೂಜಿಸುತ್ತಿದ್ದೆ. ಅದನ್ನು ಕಾಣದಿರುವ ನನ್ನ ಹೃದಯಕ್ಕೆ ಹೇಗೆ ಶಾಂತಿಯುಂಟಾಗುತ್ತದೆ?

ಯಾಂಸ್ತೇ ಭ್ರಾತೄ ನ್ ಮಹಾರಾಜ ಯುವಾನೋ ಮೃಷ್ಟಕುಂಡಲಾಃ ।
ಅಭೋಜಯಂತ ನಿಷ್ಠಾನ್ನೈಃ ಸೂದಾಃ ಪರಮಸಂಸ್ಕೃತೈಃ ॥೧೮॥

ಸರ್ವಾಂಸ್ತಾನದ್ಯ ಪಶ್ಯಂತ್ಯಾ ವನೇ ವನ್ಯೇನ ಜೀವತಃ ।
ಅದುಃಖಾರ್ಹಾನ್ ಮನುಷ್ಯೇಂದ್ರ ನೈವ ಶಾಮ್ಯತಿ ಮೇ ಮನಃ ॥೧೯॥

ಎಲೈ ಮಹಾರಾಜನೇ! ಯಾವ ನಿನ್ನ ಯುವಕರಾದ ಶ್ರೇಷ್ಠಕರ್ಣಕುಂಡಲಗಳನ್ನು ಧರಿಸಿದ್ದ ತಮ್ಮಂದಿರನ್ನು ಪಾಚಕರು ಪರಮಸಂಸ್ಕೃತವಾದ ಉತ್ಕೃಷ್ಟವಾದ ಅನ್ನಗಳಿಂದ

ಭೋಜನ ಮಾಡಿಸುತ್ತಿದ್ದರು. ದುಃಖಕ್ಕೆ ಅನರ್ಹರಾದ ಅವರೆಲ್ಲರೂ ಈ ದಿನ ವನದಲ್ಲಿ ದೊರೆಯುವ ಗೆಡ್ಡೆಗೆಣಸುಗಳಿಂದ ವನದಲ್ಲಿ ಜೀವಿಸುವುದನ್ನು ನೋಡಿ ನನ್ನ ಮನಸ್ಸಿಗೆ ಶಾಂತಿಯು ದೊರೆಯುವುದಿಲ್ಲ.

ಭೀಮಸೇನಮಿಮಂ ಚಾಪಿ ದುಃಖಿತಂ ವನವಾಸಿನಮ್ ।
ಧ್ಯಾಯಂತಂ ಕಿಂ ನು ಮನ್ಯುಸ್ತೇ ಪ್ರಾಪ್ತೇ ಕಾಲೇ ನ ವರ್ಧತೇ ॥೨೦॥

ದುಃಖಿತನೂ ವನವಾಸಿಯೂ ಆಗಿರುವ ಈ ಭೀಮಸೇನನು ಯಾವಾಗಲೂ ಚಿಂತಾಕ್ರಾಂತನಾಗಿರುವುದನ್ನು ನೋಡಿ ಯೋಗ್ಯವಾದ ಕಾಲದಲ್ಲಿ ನಿನಗೇಕೆ ಕೋಪವು ಉಂಟಾಗುವುದಿಲ್ಲ?

ಭೀಮಸೇನಂ ಹಿ ಕರ್ಮಾಣಿ ಸ್ವಯಂ ಕುರ್ವಾಣಮಚ್ಯುತಮ್ ।
ಸುಖಾರ್ಹಮಸುಖಂ ದೃಷ್ಟ್ವಾ ಕಸ್ಮಾದ್ ರಾಜನ್ನುಪೇಕ್ಷಸೇ ॥೨೧॥

ಸಂಸೃತೈರ್ವಿವಿಧೈರ್ಧಾನ್ಯೈ ರ್ವಸ್ತ್ರೈರುಚ್ಚಾವಚೈಸ್ತಥಾ ।
ತಂ ವೈ ವನಗತಂ ದೃಷ್ಟ್ವಾ ಕಸ್ಮಾನ್ನ್ಯುರ್ನ ವರ್ಧತೇ ॥೨೨॥

ಎಲೈ ರಾಜನೇ! ತನ್ನ ಕರ್ಮಗಳನ್ನು ತಾನೇ ಮಾಡಿಕೊಳ್ಳುತ್ತಿರುವ ಗುಣಗಳಿಂದ ಚ್ಯುತನಾಗದ ಸುಖಾರ್ಹನಾದ ಸುಖರಹಿತನಾದ ಭೀಮಸೇನನನ್ನು ನೋಡಿ ನೀನು ಏಕೆ ಉಪೇಕ್ಷೆ ಮಾಡುತ್ತಿದ್ದೀಯೆ? ಹಿಂದೆ ವಿವಿಧವಾದ ಸಂಸ್ಕೃತವಾದ ಧಾನ್ಯಗಳಿಂದಲೂ ಅನೇಕ ಬಗೆಯ ಶ್ರೇಷ್ಠವಾದ ವಸ್ತುಗಳಿಂದಲೂ ಸುಖವಾಗಿದ್ದ ಅವನು ಈಗ ಕಾಡಿನಲ್ಲಿ ಇರುವುದನ್ನು ನೋಡಿ ನಿನಗೆ ಏಕೆ ಕೋಪವು ಉಂಟಾಗುವುದಿಲ್ಲ?

ಕುರೂನಪೀಹ ಯಃಸರ್ವಾನ್ ಹಂತುಮುತ್ಸಹತೇ ಪ್ರಭುಃ ।
ತತ್ತತ್ತಿಜ್ಞಾಂ ಪ್ರತೀಕ್ಷಂಸ್ತು ಕ್ಷಮತೇಽದ್ಯ ವೃಕೋದರಃ ॥೨೩॥

ಆ ವೃಕೋದರನು ಎಲ್ಲ ಕುರುಗಳನ್ನೂ ಒಬ್ಬನೇ ಕೊಲ್ಲಲು ಸಮರ್ಥನಾಗಿದ್ದಾನೆ. ನಿನ್ನ ಪ್ರತಿಜ್ಞೆಯನ್ನು ನಿರೀಕ್ಷಿಸುತ್ತಾ ಈಗ ಶಾಂತಿಯಿಂದ ಇದ್ದಾನೆ.

ಯೋಽರ್ಜುನೇನಾರ್ಜುನಸ್ತುಲ್ಯೋ ದ್ವಿಬಾಹುರ್ಬಹುಬಾಹುನಾ।
ಶರಾತಿಸರ್ಗೇ ಶೀಘ್ರಾಸ್ತ್ರೇ ಕಾಲಾಂತಕಯಮೋಪಮಃ ॥೨೪॥

ಯಸ್ಯ ಶಸ್ತ್ರಪ್ರತಾಪೇನ ಪ್ರಣೀತಾಃ ಸರ್ವಪಾರ್ಥಿವಾಃ ।
ಯಜ್ಞೇ ತವ ಮಹಾರಾಜ ಬ್ರಾಹ್ಮಣಾನುಪತಸ್ಥಿರೇ ॥೨೫॥

ತಮಿಮಂ ಪುರುಷವ್ಯಾಘ್ರಂ ಪೂಜಿತಂ ದೇವದಾನವೈಃ ।
ಧ್ಯಾಯಂತಮರ್ಜುನಂ ದೃಷ್ಟ್ವಾ ಕಸ್ಮಾದ್ ರಾಜನ್ ನ ಕುಪ್ಯಸಿ ॥೨೬॥

ಎರಡು ಬಾಹುವುಳ್ಳ ಯಾವ ಅರ್ಜುನನು ಸಹಸ್ರಬಾಹುಗಳುಳ್ಳ ಯಾವ ಕಾರ್ತವೀರ್ಯಾರ್ಜುನನಿಗೆ ಸಮಾನನೋ, ಶರವನ್ನು ಪ್ರಯೋಗಮಾಡುವುದರಲ್ಲೂ ಶೀಘ್ರವಾಗಿ ಅಸ್ತ್ರಗಳನ್ನು ಪ್ರಯೋಗಮಾಡುವುದರಲ್ಲೂ ಯಾವನು ಕಾಲಾಂತಕ ಯಮನಂತೆ ಇದ್ದಾನೋ, ಯಾವನ ಶಸ್ತ್ರಪ್ರಭಾವದಿಂದ ಎಲ್ಲ ರಾಜರೂ ನಿನ್ನವಶವಾಗಿ ನಿನ್ನ ಯಜ್ಞದಲ್ಲಿ ಬ್ರಾಹ್ಮಣರ ಸೇವೆಯನ್ನು ಮಾಡಿದರೋ, ಎಲೈ ಮಹಾರಾಜನೇ! ಅಂತಹ ಪುರುಷವ್ಯಾಘ್ರನಾದ ದೇವದಾನವರಿಂದ ಪೂಜಿತನಾದ ಈ ಅರ್ಜುನನು ಚಿಂತಾಕ್ರಾಂತನಾಗಿರುವುದನ್ನು ನೋಡಿ ನಿನಗೆ ಏಕೆ ಕೋಪವುಂಟಾಗುವುದಿಲ್ಲ?

ದೃಷ್ಟ್ವಾ ವನಗತಾನ್ ಪಾರ್ಥಾನ್ ನದುಃಖಾರ್ಹಾನ್ ಸುಖೇಧಿತಾನ್ ।
ನ ಚ ತೇ ವರ್ಧತೇ ಮನ್ಯುಸ್ತೇನ ಮುಹ್ಯಾಮಿ ಭಾರತ ॥೨೭॥

ಯೋ ದೇವಾಂಶ್ಚ ಮನುಷ್ಯಾಂಶ್ಚ ಸರ್ಪಾಂಶ್ಚೈಕರಥೋಽಜಯತ್।
ತಂ ವೈ ವನಗತಂ ದೃಷ್ಟ್ವಾ ಕಸ್ಮಾನ್ಮನ್ಯುರ್ನ ವರ್ಧತೇ ॥೨೮॥

ಎಲೈ ಭಾರತನೇ! ಸುಖದಲ್ಲಿ ಬೆಳೆದ ದುಃಖಕ್ಕೆ ಅರ್ಹರಲ್ಲದ ಪಾಂಡವರೆಲ್ಲರೂ ಕಾಡಿನಲ್ಲಿ ಇರುವುದನ್ನು ನೋಡಿ ನಿನಗೆ ಕೋಪವುಂಟಾಗುತ್ತಿಲ್ಲ. ನಾನು ಅದರಿಂದ ಮೋಹಗೊಂಡಿದ್ದೇನೆ. ಯಾವ ಅರ್ಜುನನು ಏಕರಥನಾಗಿ ಹೋಗಿ ದೇವತೆಗಳನ್ನು ಮನುಷ್ಯರನ್ನು ಮತ್ತು ಸರ್ಪಗಳನ್ನು ಜಯಿಸಿದನೋ ಅಂತಹ ಅವನು ವನಗತನಾದುದನ್ನು ನೋಡಿ ನಿನಗೆ ಏಕೆ ಕೋಪವುಂಟಾಗುವುದಿಲ್ಲ?

ಯೋ ನಾಗೈರದ್ಭುತಾಕಾರೈರ್ಹಯೈರ್ನಾಗೈಶ್ಚ ಸಂವೃತಮ್ ।
ಪ್ರಸಹ್ಯ ವಿತ್ತಮಗೃಹ್ಣಾತ್ ಪಾರ್ಥಿವಾನಾಂ ಪರಂತಪಃ ॥೨೯॥

ಕ್ಷಿಪತ್ಯೇಕೇನ ವೇಗೇನ ಪಂಚ ಬಾಣಶತಾನಿ ಯಃ ।
ತಂ ವೈ ವನಗತಂ ದೃಷ್ಟ್ವಾ ಕಸ್ಮಾನ್ಮನ್ಯುರ್ನ ವರ್ಧತೇ ॥೩೦॥

ಯಾವ ಪರಂತಪನಾದ ಅರ್ಜುನನು ಅಶ್ವಗಳಿಂದಲೂ ಗಜಗಳಿಂದಲೂ ರಕ್ಷಿತವಾದ ರಾಜರ ಕೋಶಗಳನ್ನು ಪರಾಕ್ರಮದಿಂದ ವಶಪಡಿಸಿಕೊಂಡು ಅದ್ಭುತವಾದ ಗಜಗಳಿಂದ ಹೊರಿಸಿಕೊಂಡು ತಂದನೋ. ಒಂದೇ ವೇಗದಿಂದ ಏಕಕಾಲದಲ್ಲಿ ಐದುನೂರು ಬಾಣಗಳನ್ನು ಪ್ರಯೋಗಿಸುತ್ತಾನೋ. ಅಂತಹ ಅರ್ಜುನನು ಕಾಡಿನಲ್ಲಿ ಇರುವುದನ್ನು ನೋಡಿ ನಿನಗೇಕೆ ಕೋಪವುಂಟಾಗುವುದಿಲ್ಲ?

ಶ್ಯಾಮಂ ಬೃಹಂತಂ ತರುಣಂ ಧನ್ವಿನಾಮುತ್ತಮಂ ರಣೇ ।
ನಕುಲಂ ತೇ ವನೇ ದೃಷ್ಟ್ವಾ ಕಸ್ಮಾನ್ಮನ್ಯುರ್ನ ವರ್ಧತೇ ॥೩೧॥

ಶ್ಯಾಮವರ್ಣದವನೂ ದೊಡ್ಡ ಶರೀರವನ್ನು ಹೊಂದಿದವನೂ ತರುಣನೂ ಯುದ್ಧದಲ್ಲಿ ಧನ್ವಿಶ್ರೇಷ್ಠನೂ ಆದ ನಕುಲನನ್ನು ಕಾಡಿನಲ್ಲಿ ನೋಡಿ ನಿನಗೆ ಏಕೆ ಕೋಪವುಂಟಾಗುವುದಿಲ್ಲ?

ದರ್ಶನೀಯಂ ಚ ಶೂರಂ ಚ ಮಾದ್ರೀಪುತ್ರಂ ಯುಧಿಷ್ಠಿರ ।
ಸಹದೇವಂ ವನೇ ದೃಷ್ಟ್ವಾ ಕಸ್ಮಾನ್ಮನ್ಯುರ್ನ ವರ್ಧತೇ ॥೩೨॥

ಎಲೈ ಯುಧಿಷ್ಠಿರನೇ! ಸುಂದರನಾದ ಶೂರನಾದ ಮಾದ್ರೀಪುತ್ರನಾದ ಸಹದೇವನನ್ನು ಕಾಡಿನಲ್ಲಿನೋಡಿ ನಿನಗೇಕೆ ಕೋಪವುಂಟಾಗುವುದಿಲ್ಲ?

ನಕುಲಂ ಸಹದೇವಂ ಚ ದೃಷ್ಟ್ವಾ ತೇ ದುಃಖಿತಾವುಭೌ ।
ಅದುಃಖಾರ್ಹೌ ಮನುಷ್ಯೇಂದ್ರ ಕಸ್ಮಾನ್ಮನ್ಯುರ್ನ ವರ್ಧತೇ ॥೩೩॥

ಎಲೈ ಮನುಷ್ಯೇಂದ್ರನೇ! ದುಃಖಕ್ಕೆ ಅರ್ಹರಲ್ಲದ ದುಃಖಿತರಾದ ನಕುಲಸಹದೇವರಿಬ್ಬರನ್ನೂ ನೋಡಿ ನಿನಗೇಕೆ ಕೋಪವುಂಟಾಗುವುದಿಲ್ಲ?

ದ್ರುಪದಸ್ಯ ಕುಲೇ ಜಾತಾಂ ಸ್ನುಷಾಂ ಪಾಂಡೋರ್ಮಹಾತ್ಮನಃ ।
ತಾಂ ತೇ ವನಗತಾಂ ದೃಷ್ಟ್ವಾ ಕಸ್ಮಾನ್ಮನ್ಯುರ್ನ ವರ್ಧತೇ ॥೩೪॥

ದ್ರುಪದಕುಲದಲ್ಲಿ ಹುಟ್ಟಿದ ಮಹಾತ್ಮನಾದ ಪಾಂಡುವಿನ ಸೊಸೆಯಾದ ಆ ದ್ರೌಪದಿಯು ಕಾಡಿನಲ್ಲಿ ಇರುವುದನ್ನು ನೋಡಿ ನಿನಗೇಕೆ ಕೋಪವುಂಟಾಗುವುದಿಲ್ಲ.

ನೂನಂ ಚ ತವ ನೈವಾಸ್ತಿ ಮನ್ಯುರ್ಭರತಸತ್ತಮ ।
ಯತ್ತೇ ಭ್ರಾತೄಂಶ್ಚ ಮಾಂ ಚೈವ ದೃಷ್ಟ್ವಾ ನ ವ್ಯಥತೇ ಮನಃ ॥೩೫॥

ಎಲೈ ಭರತಶ್ರೇಷ್ಠನೇ! ನಿನ್ನ ತಮ್ಮಂದಿರನ್ನು ಮತ್ತು ನನ್ನನ್ನು ನೋಡಿ ನಿನ್ನ ಮನಸ್ಸಿಗೆ ವ್ಯಥೆಯೇ ಉಂಟಾಗುವುದಿಲ್ಲವಾದ್ದರಿಂದ ನಿನಗೆ ಕೋಪವೇ ಇಲ್ಲ!?

ನ ವಿಮನ್ಯುಮವಿಕ್ಷತ್ರಿಯೋಽಸ್ತಿ ಲೋಕೇ ನಿರ್ವಚನಂ ಸ್ಮೃತಮ್ ।
ತದದ್ಯ ತ್ವಯಿ ಪಶ್ಯಾಮಿ ಕ್ಷತ್ರಿಯೇ ವಿಪರೀತವತ್ ॥೩೬॥

ಕೋಪವಿಲ್ಲದ ಕ್ಷತ್ರಿಯನಿಲ್ಲವೆಂದು ಲೋಕದಲ್ಲಿ ಎಲ್ಲರೂ ಹೇಳುತ್ತಾರೆ. ಆ ಮಾತನ್ನು ಕ್ಷತ್ರಿಯನಾದ ನಿನ್ನಲ್ಲಿ ವಿಪರೀತವಾಗಿ ಕಾಣುತ್ತಿದ್ದೇನೆ.

ಯೋ ನ ದರ್ಶಯತೇ ತೇಜಃ ಕ್ಷತ್ರಿಯಃ ಕಾಲ ಆಗತೇ ।
ಸರ್ವಭೂತಾನಿ ತಂ ಪಾರ್ಥ ಸದಾ ಪರಿಭವಂತ್ಯುತ ॥೩೭॥

ಎಲೈ ಪಾರ್ಥನೇ! ಯಾವ ಕ್ಷತ್ರಿಯನು ಯೋಗ್ಯವಾದ ಕಾಲದಲ್ಲಿ ತನ್ನ ಪರಾಕ್ರಮವನ್ನು ತೋರಿಸುವುದಿಲ್ಲವೋ ಅವನನ್ನು ಎಲ್ಲರೂ ಪರಾಭವಗೊಳಿಸುತ್ತಾರೆ.

ನ ತ್ವಯಾ ತು ಕ್ಷಮಾ ಕಾರ್ಯಾ ಶತ್ರೂನ್ ಪ್ರತಿ ಕಥಂಚನ ।
ತೇಜಸೈವ ಹಿ ತೇ ಶಕ್ಯಾ ನಿಹಂತುಂ ನಾತ್ರ ಸಂಶಯಃ ॥೩೮॥

ನೀನು ಶತ್ರುಗಳ ಮೇಲೆ ದಯೆಯನ್ನು ತೋರಿಸುವ ಅಗತ್ಯವಿಲ್ಲ. ಅವರನ್ನು ಪರಾಕ್ರಮದಿಂದ ಮಾತ್ರ ಕೊಲ್ಲಲು ಸಾಧ್ಯ . ಈ ವಿಷಯದಲ್ಲಿ ಸಂಶಯವಿಲ್ಲ.

ತಥೈವ ಯಃ ಕ್ಷಮಾಕಾಲೇ ಕ್ಷತ್ರಿಯೋ ನೋಪಶಾಮ್ಯತಿ ।
ಅಪ್ರಿಯಃ ಸರ್ವಭೂತಾನಾಂ ಸೋಽಮುತ್ರೇಹ ಚ ನಶ್ಯತಿ ॥೩೯॥

ಅದರಂತೆಯೇ ಯಾವ ಕ್ಷತ್ರಿಯನು ಕ್ಷಮಿಸಬೇಕಾದ ಕಾಲದಲ್ಲಿ ಕೋಪಶಾಂತಿಯನ್ನು ಹೊಂದುವುದಿಲ್ಲವೋ ಅವನು ಸರ್ವರಿಗೂ ಅಪ್ರಿಯನಾಗಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ನಾಶವನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ವಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

# ಇಪ್ಪತ್ತೈದನೆಯ ಅಧ್ಯಾಯ

ಪ್ರಕೃತದಲ್ಲಿ ಕ್ಷಮೆಯನ್ನು ಬಿಟ್ಟು ಪರಾಕ್ರಮವನ್ನು ಆಶ್ರಯಿಸುವಂತೆ
ದ್ರೌಪದಿಯಿಂದ ಧರ್ಮರಾಜನಿಗೆ ಉಪದೇಶ. ಅದಕ್ಕಾಗಿ
ಬಲಿಪ್ರಹ್ಲಾದಸಂವಾದಕಥನ.)

## ದ್ರೌಪದೀ

ತ್ರಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಹ್ಲಾದಸ್ಯ ಚ ಸಂವಾದಂ ಬಲೇರ್ವೈರೋಚನಸ್ಯ ಚ ।

ವಿಷಯದಲ್ಲಿ ಹಿಂದೆ ಪ್ರಹ್ಲಾದನಿಗೂ ವಿರೋಚನನ ಮಗನಾದ ಬ
ಂವಾದರೂಪವಾದ ಇತಿಹಾಸವನ್ನು ಹೇಳುತ್ತಾರೆ.

ುರೇಂದ್ರಂ ಮಹಾತ್ಮಾನಂ ಧರ್ಮಣಾಮಾಗತಾಗಮಮ್ ।
ಃ ಪಪ್ರಚ್ಛ ದೈತ್ಯೇಂದ್ರಃ ಪ್ರಹ್ಲಾದಂ ಪಿತರಂ ಪಿತುಃ ।

ಹಾತ್ಮನೂ ಅಸುರೇಂದ್ರನೂ ಎಲ್ಲ ಧರ್ಮಶಾಸ್ತ್ರವನ್ನು ತಿಳಿದವನೂ
ನ ಪ್ರಹ್ಲಾದನನ್ನು ಕುರಿತು ದೈತ್ಯೇಂದ್ರನಾದ ಬಲಿಯು ಪ್ರಶ್ನೆಮಾಡಿದನು

ಾ ವಾ ತೈಜಸೀ ತಾತ ತೇಜೋ ವಾऽಸುರಸತ್ತಮ ।
ನ್ಮೇ ಸಂಶಯಸ್ತಾತ ಯಥಾ ತ್ವಂ ಬ್ರೂಹಿ ಪೃಚ್ಛತಃ ॥

ನೇ! ಅಸುರಶ್ರೇಷ್ಠನೇ! ಕ್ಷಮೆಯು ಹೆಚ್ಚು ಸಾಮರ್ಥ್ಯವುಳ್ಳದ್ದೋ? ಅ
, ಪರಾಕ್ರಮವು ಹೆಚ್ಚು ಸಾಮರ್ಥ್ಯವುಳ್ಳದ್ದೋ ಈ ವಿಷಯದಲ್ಲಿ ನ
ವಿದೆ. ನಿನ್ನನ್ನು ಕೇಳುತ್ತಿರುವ ನನಗೆ ಅದನ್ನು ಸರಿಯಾಗಿ ಹೇಳು.

ುೋ ಯದತ್ರ ಧರ್ಮಜ್ಞ ಬ್ರೂಹಿ ಮೇ ತದಸಂಶಯಮ್ ।
ಷ್ಯಾಮಿ ಹಿ ತತ್ ಸರ್ವಂ ಯಥಾವದನುಶಾಸನಮ್ ॥

, ಧರ್ಮಜ್ಞನೇ! ಇವೆರಡರಲ್ಲಿ ಯಾವುದು ಶ್ರೇಯಸ್ಕರವೆಂದು ನಿಸ್ಸಂಶಯ
ನಿನ ಆದೇಶವನು ನಾನು ಸರಿಯಾಗಿ ಪಾಲಿಸುವೆನು.

ತಸ್ಮೈ ಪ್ರೋವಾಚ ತತ್ ಸರ್ವಮೇವಂ ಪೃಷ್ಟಃ ಪಿತಾಮಹಃ ।
ಸರ್ವನಿಶ್ಚಯವಿತ್ ಪ್ರಾಜ್ಞಃ ಸಂಶಯಂ ಪರಿಪೃಚ್ಛತೇ ॥೫॥

ಹೀಗೆ ಕೇಳಲ್ಪಟ್ಟ ಪಿತಾಮಹನಾದ ಪ್ರಾಜ್ಞನಾದ ಪ್ರಹ್ಲಾದನು ಎಲ್ಲ ವಿಷಯಗಳನ್ನು ತಿಳಿದವನಾಗಿ ಪ್ರಶ್ನೆಯನ್ನು ಕೇಳಿದ ಬಲಿಗೆ ಸಂಶಯವನ್ನು ಪರಿಹರಿಸಿದನು.

ನ ಶ್ರೇಯಃ ಸತತಂ ತೇಜೋ ನ ನಿತ್ಯಂ ಶ್ರೇಯಸೀ ಕ್ಷಮಾ ।
ಇತಿ ತಾತ ವಿಜಾನೀಹಿ ದ್ವಯಮೇತದಸಂಶಯಮ್ ॥೬॥

ಪ್ರೀತಿಪಾತ್ರನೇ! ತೇಜಸ್ಸು ಮತ್ತು ಕ್ಷಮೆ ಇವೆರಡರ ವಿಷಯದಲ್ಲಿ ಸತತವಾದ ತೇಜಸ್ಸಾಗಲೀ ಅಥವಾ ಸತತವಾದ ಕ್ಷಮೆಯಾಗಲೀ ಒಳ್ಳೆಯದಲ್ಲ. ಇದನ್ನು ನಿಶ್ಚಯವಾಗಿ ತಿಳಿ.

ಯೋ ನಿತ್ಯಂ ಕ್ಷಮತೇ ತಾತ ಬಹೂನ್ ದೋಷಾನ್ ಸ ವಿಂದತಿ।
ಭೃತ್ಯಾಃ ಪರಿಭವಂತ್ಯೇನಮುದಾಸೀನಾಸ್ತಥೈವ ಚ ॥೭॥

ಪ್ರೀತಿಪಾತ್ರನೇ! ಯಾವನು ಯಾವಾಗಲೂ ಕ್ಷಮಿಸುತ್ತಾನೋ ಅವನು ಬಹಳ ದೋಷಗಳನ್ನು ಸಂಪಾದಿಸುತ್ತಾನೆ. ಅವನ ಭೃತ್ಯರು ಉದಾಸೀನರಾಗಿ ಅವನನ್ನು ಅವಮಾನಗೊಳಿಸುತ್ತಾರೆ.

ಸರ್ವಭೂತಾನಿ ಚಾಪ್ಯಸ್ಯ ನ ನಮಂತಿ ಕದಾಚನ ।
ತಸ್ಮಾನ್ನಿತ್ಯಂ ಕ್ಷಮಾ ತಾತ ಪಂಡಿತೈರಪವಾದಿತಾ ॥೮॥

ಎಲ್ಲಾ ಜನರೂ ಅವನಿಗೆ ಯಾವಾಗಲೂ ನಮಸ್ಕಾರಮಾಡುವುದಿಲ್ಲ. ಆದ್ದರಿಂದ ಪ್ರೀತಿಪಾತ್ರನೇ ನಿತ್ಯದಲ್ಲಿಯೂ ಕ್ಷಮಾಶೀಲನಾಗಿರುವುದನ್ನು ಪಂಡಿತರು ಒಪ್ಪುವುದಿಲ್ಲ.

ಅವಜ್ಞಾಯ ಚ ತಂ ಭೃತ್ಯಾ ಭಜಂತೇ ಬಹುದೋಷತಃ ।
ಅವಜ್ಞಾನಂ ಹಿ ಲೋಕೇಽಸ್ಮಿನ್ ಮರಣಾದಪಿ ಗರ್ಹಿತಮ್ ॥೯॥

ಅವನ ಭೃತ್ಯರು ಅವಮಾನವನ್ನು ಮಾಡಿ ಅನೇಕ ದೋಷಗಳನ್ನು ಹೊಂದಿ ಅವನನ್ನು ಸೇವಿಸುತ್ತಾರೆ. ಈ ಲೋಕದಲ್ಲಿ ಅವಮಾನವು ಮರಣಕ್ಕಿಂತಲೂ ನಿಂದಿತವಾದದ್ದು.

ಕ್ಷಮಿಣಂ ತಾದೃಶಂ ತಾತ ಬ್ರುವಂತಿ ಕಟುಕಾನ್ಯಪಿ ।
ಪ್ರೇಷ್ಯಾ ಪುತ್ರಾಶ್ಚ ಭೃತ್ಯಾಶ್ಚ ತಥೋದಾಸೀನವೃತ್ತಯಃ ॥೧೦॥

ಪ್ರೀತಿಪಾತ್ರನೇ ಅಂತಹ ಕ್ಷಮಾಶೀಲನನ್ನು ಕುರಿತು ಸೇವಕರೂ ಪುತ್ರರೂ ಭೃತ್ಯರೂ ಮತ್ತು ತಟಸ್ಥಪುರುಷರೂ ಸಹ ಚುಚ್ಚುಮಾತುಗಳನ್ನು ಆಡುತ್ತಾರೆ.

ಅಪ್ಯಸ್ಯ ದಾರಾನಿಚ್ಛಂತಿ ಪರಿಭೂಯ ಕ್ಷಮಾವತಃ ।
ದಾರಾಶ್ಚಾಸ್ಯ ಪ್ರವರ್ತಂತೇ ಯಥಾಕಾಮಮಚೇತಸಃ ॥೧೧॥

ಆ ಕ್ಷಮಾಶೀಲನನ್ನು ಅವಮಾನಗೊಳಿಸಿ ಅವನ ಪತ್ನಿಯರನ್ನು ಇಚ್ಚಿಸುತ್ತಾರೆ. ಅವನ ಪತ್ನಿಯರು ಕೂಡ ಬುದ್ಧಿಶೂನ್ಯರಾಗಿ ಮನಸ್ಸಿಗೆ ಬಂದಂತೆ ವರ್ತಿಸುತ್ತಾರೆ.

ತಥಾ ನಿತ್ಯಂ ಸಮುದಿತಾ ಯದಿ ವಾऽಲ್ಪಾಮಪೀಶ್ವರಾತ್ ।
ಹಾನಿಮಿಚ್ಛಂತಿ ದುಷ್ಯಂತಃ ಸ್ವಾಮಿನಂ ಚಾಪಕುರ್ವತೇ ।
ಏತೇ ಚಾನ್ಯೇ ಚ ಬಹವೋ ನಿತ್ಯಂ ದೋಷಾಃ ಕ್ಷಮಾವತಾಮ್ ॥೧೨॥

ಹಾಗೆ ನಿತ್ಯವೂ ಸಂತುಷ್ಟರಾಗಿದ್ದು ಸ್ವಾಮಿಯು ಅಲ್ಪವಾದ ಅಪರಾಧವನ್ನು ಮಾಡಿದರೂ ಅವನನ್ನು ದೂಷಿಸುತ್ತಾ ಅವನಿಗೆ ಹಾನಿಯನ್ನು ಬಯಸುತ್ತಾರೆ. ಸ್ವಾಮಿಗೆ ಅಪಕಾರವನ್ನು ಬಯಸುತ್ತಾರೆ. ನಿತ್ಯವೂ ಕ್ಷಮಾಶೀಲರಾದವರಿಗೆ ಇವೂ ಮತ್ತು ಇನ್ನೂ ಅನೇಕ ದೋಷಗಳೂ ಉಂಟಾಗುತ್ತವೆ.

ಅಸ್ಥಾನೇ ಹ್ಯಪಿ ಚ ಸ್ಥಾನೇ ಸತತಂ ಚಾನುಗಾಮಿನಾಮ್ ।
ಕ್ರುದ್ಧೋ ದಂಡಾನ್ ಪ್ರಣಯತಿ ವಿವಿಧಾಂಸ್ತೇಜಸಾ ವೃತಃ ।
ಪ್ರಾಪ್ನೋತಿ ದ್ವೇಷ್ಯತಾಂ ಲೋಕೇ ಭೃತ್ಯಾತ್ ಸ್ವಜನತಸ್ತಥಾ ॥೧೩॥

ಯೋಗ್ಯವಾದ ಸಂದರ್ಭದಲ್ಲಿ ಮತ್ತು ಅಯೋಗ್ಯವಾದ ಸಂದರ್ಭದಲ್ಲಿ ಯಾವಾಗಲೂ ಕೋಪಕ್ಕೆ ವಶನಾಗಿ ಪರಾಕ್ರಮದಿಂದ ಕೂಡಿದವನಾಗಿ ತನ್ನ ಅನುಗಾಮಿಗಳಿಗೆ ಶಿಕ್ಷೆಯನ್ನು ವಿಧಿಸುವ ಸ್ವಾಮಿಯು ಲೋಕದಲ್ಲಿ ಭೃತ್ಯರಿಂದಲೂ ಸ್ವಜನರಿಂದಲೂ ದ್ವೇಷಿಸಲ್ಪಡುತ್ತಾನೆ.

ಸೋಽವಮಾನಾರ್ಥಲೋಪೌ ಚ ವಾಚ್ಯತಾಮೇಷ್ಯತೀತಿ ಚ ।
ಸ ಲೋಕಗರ್ಹಿತಂ ಚೈವ ಶತ್ರೂಂಶ್ಚ ಲಭತೇ ನರಃ ॥೧೪॥

ಅವನು ಅವಮಾನವನ್ನೂ ಅರ್ಥಹಾನಿಯನ್ನೂ ಮತ್ತು ಈ ರೀತಿಯಲ್ಲಿ ನಿಂದೆಯನ್ನೂ ಹೊಂದುತ್ತಾನೆ. ಅಂತಹ ಮನುಷ್ಯನು ಲೋಕಗರ್ಹಿತನಾಗಿ ಶತ್ರುಗಳನ್ನು ಸಂಪಾದಿಸುತ್ತಾನೆ.

ಕ್ರೋಧಾದ್ದಂಡಾನ್ ಮನುಷ್ಯೇಷು ವಿವಿಧಾನ್ ಪುರುಷೋ ನಯನ್ ।
ಭ್ರಶ್ಯತೇ ಶೀಘ್ರಮೈಶ್ವರ್ಯಾತ್ ಪ್ರಾಣೇಭ್ಯಃ ಸ್ವಜನಾದಪಿ ॥೧೫॥

ಕ್ರೋಧದಿಂದ ಮನುಷ್ಯರ ಮೇಲೆ ಅನೇಕ ವಿಧವಾದ ದಂಡವನ್ನು ವಿಧಿಸುವ ಪುರುಷನು ಶೀಘ್ರವಾಗಿ ಐಶ್ವರ್ಯದಿಂದ ಭ್ರಷ್ಟನಾಗುತ್ತಾನೆ. ಪ್ರಾಣಗಳಿಂದಲೂ ಮತ್ತು ಸ್ವಜನರಿಂದಲೂ ಭ್ರಷ್ಟನಾಗುತ್ತಾನೆ.

ಯೋಽಪಕರ್ತ್ರಂಶ್ಚ ಕರ್ತ್ರಂಶ್ಚ ತೇಜಸೈವೋಪಗಚ್ಛತಿ ।
ತಸ್ಮಾದುದ್ವಿಜತೇ ಲೋಕಃ ಸರ್ಪಾದ್ ವೇಶ್ಮಗತಾದಿವ ।
ಯಸ್ಮಾದುದ್ವಿಜತೇ ಲೋಕಃ ಕಥಂ ತಸ್ಯ ರತಿರ್ಭವೇತ್ ॥೧೬॥

ಯಾವ ಪುರುಷನು ಅಪಕಾರಮಾಡುವವನನ್ನು ಮತ್ತು ಉಪಕಾರಮಾಡುವವನನ್ನು ತೇಜಸ್ಸಿನಿಂದಲೇ (ಕೋಪದಿಂದಲೇ) ಸಮೀಪಿಸುತ್ತಾನೆಯೋ ಅವನಿಗೆ ಲೋಕವು ಮನೆಯನ್ನು ಪ್ರವೇಶಿಸಿದ ಸರ್ಪಕ್ಕೆ ಹೆದರುವಂತೆ ಹೆದರುತ್ತದೆ. ಯಾವನಿಗೆ ಲೋಕವು ಹೆದರುತ್ತದೆಯೋ ಅವನಿಗೆ ಹೇಗೆ ಸುಖವು ಉಂಟಾದೀತು?

ಅಂತರಂ ಹ್ಯಸ್ಯ ದೃಷ್ಟ್ವೈವ ಲೋಕೇ ವಿಕುರುತೇ ಧ್ರುವಮ್ ।
ತಸ್ಮಾನ್ನಾತ್ಯುತ್ಸೃಜೇತ್ತೇಜೋ ನ ಚ ನಿತ್ಯಂ ಮೃದುರ್ಭವೇತ್ ॥೧೭॥

ಲೋಕವು ಒಂದು ಅವಕಾಶವನ್ನು ಕಾದುನೋಡಿ ಅವನಿಗೆ ಖಂಡಿತವಾಗಿ ಅಪಕಾರವನ್ನು ಮಾಡುತ್ತದೆ. ಆದ್ದರಿಂದ ಯಾವಾಗಲೂ ಕ್ರೋಧವನ್ನಾಗಲೀ ಅಥವಾ ಯಾವಾಗಲೂ ಮಾರ್ದವವನ್ನಾಗಲೀ ಹೊಂದಿರಬಾರದು.

ಕಾಲೇ ಮೃದುರ್ಯೋ ಭವತಿ ಕಾಲ ಏವ ಚ ದಾರುಣಃ ।
ಸ ತು ವೈ ಸುಖಮಾಪ್ನೋತಿ ಲೋಕೇಽಸ್ಮಿಂಶ್ಚ ಪರತ್ರ ಚ ॥೧೮॥

ಯಾವನು ಯೋಗ್ಯಕಾಲದಲ್ಲಿ ಮೃದುವಾಗುತ್ತಾನೆಯೋ ಮತ್ತು ಯೋಗ್ಯವಾದ ಕಾಲದಲ್ಲಿ ಭೀಷಣನಾಗುತ್ತಾನೆಯೋ ಅವನೇ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ಕ್ಷಮಾಕಾಲಾಂಸ್ತು ವಕ್ಷ್ಯಾಮಿ ಶೃಣು ಮೇ ವಿಸ್ತರೇಣ ವೈ ।
ಏತೇ ನಿತ್ಯಮಸಂತ್ಯಾಜ್ಯಾ ಯಥಾ ಪ್ರಾಹುರ್ಮನೀಷಿಣಃ ॥೧೯॥

ಕ್ಷಮೆಯ ಕಾಲಗಳನ್ನು ಹೇಳುತ್ತೇನೆ. ಅದನ್ನು ವಿಸ್ತಾರವಾಗಿ ನನ್ನಿಂದ ಕೇಳು. ಮೇಧಾವಿಗಳು ಹೇಳುವಂತೆ ಈ ಕಾಲಗಳನ್ನು (ಇಷ್ಟ ಪುರುಷರನ್ನು) ಎಂದೂ ಪರಿತ್ಯಾಗಮಾಡತಕ್ಕದ್ದಲ್ಲ.

ಪೂರ್ವೋಪಕಾರೀ ಯಸ್ತೇ ಸ್ಯಾದ್ ಅಪರಾಧೇ ಗರೀಯಸಿ ।
ಉಪಕಾರೇಣ ತತ್ತಸ್ಯ ಕ್ಷಂತವ್ಯಮಪರಾಧಿತಮ್ ।
ದ್ವಿತೀಯೇ ಸತಿ ವಧ್ಯಸ್ತು ಸ್ವಲ್ಪೇಽಪ್ಯಪಕೃತೇ ಭವೇತ್ ॥೨೦॥

ಯಾವನು ಹಿಂದೆ ಉಪಕಾರವನ್ನು ಮಾಡಿದ್ದಾನೆಯೋ ಅವನು ದೊಡ್ಡ ಅಪಕಾರವನ್ನು ಮಾಡಿದರೂ ಅವನು ಹಿಂದೆಮಾಡಿದ ಉಪಕಾರದ ನಿಮಿತ್ತದಿಂದ ಅವನ ಅಪರಾಧವನ್ನು ಕ್ಷಮಿಸಬೇಕು. ಅವನು ಎರಡನೆಯ ಬಾರಿಗೆ ಅಲ್ಪವಾದ ಅಪರಾಧವನ್ನು ಮಾಡಿದರೂ ವಧ್ಯನಾಗುತ್ತಾನೆ.

ಅಬುದ್ಧಿಮಾಶ್ರಿತಾನಾಂ ತು ಕ್ಷಂತವ್ಯಮಪರಾಧಿನಾಮ್ ।
ನ ಹಿ ಸರ್ವತ್ರ ಪಾಂಡಿತ್ಯಂ ಸುಲಭಂ ಪುರುಷೈರಿಹ ॥೨೧॥

ಯಾರಿಗೆ ಬುದ್ಧಿಯಿರುವುದಿಲ್ಲವೋ (ಬೆಳೆದಿರುವುದಿಲ್ಲವೊ) ಅಂತಹವರು ಮಾಡಿದ ಅಪಕಾರವನ್ನು ಕ್ಷಮಿಸಬೇಕು. ಲೋಕದಲ್ಲಿ ಪುರುಷರಿಗೆ ಎಲ್ಲ ವಿಷಯಗಳಲ್ಲಿ ಪಾಂಡಿತ್ಯವು ಸುಲಭವಲ್ಲ.

ಅಥ ಚೇದ್ ಬುದ್ಧಿಜಂ ಕೃತ್ವಾ ಬ್ರೂಯುಸ್ತೇ ತದಬುದ್ಧಿಜಮ್ ।
ಪಾಪೇಽಪ್ಯಲ್ಪೇಽಪಿ ತಾನ್ ಹನ್ಯಾದಪರಾಧೇ ತತೋಽನೃಜೂನ್ ॥೨೨॥

ಒಂದುಪಕ್ಷ ಬುದ್ಧಿಪೂರ್ವಕವಾಗಿ ಅಪರಾಧವನ್ನು ಮಾಡಿ ಅವರು ಅದನ್ನು ಅಬುದ್ಧಿಪೂರ್ವಕವಾಗಿ ಮಾಡಿದೆ ಎಂದು ಹೇಳಿದರೆ ಅವರು ಅಲ್ಪವಾದ ಅಪರಾಧವನ್ನು ಮಾಡಿದರೂ ಅಂತಹ ವಕ್ರಪುರುಷರನ್ನು ಕೊಲ್ಲಬೇಕು.

ಸರ್ವಸ್ಯೈಕೋಽಪರಾಧಸ್ತು ಕ್ಷಂತವ್ಯಮಪರಾಧಿನಃ ।
ದ್ವಿತೀಯೇ ಸತಿ ವಧ್ಯಸ್ತು ಸ್ವಲ್ಪೇಽಪ್ಯಪಕೃತೇ ಭವೇತ್ ॥೨೩॥

ಎಲ್ಲ ಅಪರಾಧಿಗಳಿಗೂ ಮೊದಲನೆಯ ಅಪರಾಧವನ್ನು ಕ್ಷಮಿಸಬೇಕು. ಎರಡನೆಯಬಾರಿಗೆ ಅಲ್ಪ ಅಪರಾಧವನ್ನು ಮಾಡಿದರೂ ಅವರು ವಧ್ಯರಾಗುತ್ತಾರೆ.

ಅಜಾನತಾ ಭವೇತ್ ಕಶ್ಚಿದಪರಾಧಃ ಕೃತೋ ಯದಿ ।
ಕ್ಷಂತವ್ಯಮೇವ ತದ್ಧ್ಯಾಹುಃ ಸುಪರೀಕ್ಷ್ಯ ಪರೀಕ್ಷಕಾಃ ॥೨೪॥

ತಿಳಿಯದೆ ಯಾವನಾದರೂ ಅಪರಾಧವನ್ನು ಮಾಡಿದರೆ ಅದನ್ನು ಪರೀಕ್ಷಕರಿಂದ ಚೆನ್ನಾಗಿ ಪರೀಕ್ಷಿಸಿ ಕ್ಷಮಿಸಲೇ ಬೇಕು ಎಂದು ಜ್ಞಾನಿಗಳು ಹೇಳುತ್ತಾರೆ.

ಮೃದುನಾ ಮಾರ್ದವಂ ಹಂತಿ ಮೃದುನಾ ಹಂತಿ ದಾರುಣಮ್ ।
ನಾಸಾಧ್ಯಂ ಮೃದುನಾ ಕಿಂಚಿತ್ ತಸ್ಮಾತ್ ತೀಕ್ಷ್ಣತರಂ ಮೃದು ॥೨೫॥

ಮಾರ್ದವವು ಮಾರ್ದವವನ್ನು ಕೊಲ್ಲುತ್ತದೆ. ಮಾರ್ದವವು ಕ್ರೌರ್ಯವನ್ನು ಕೊಲ್ಲುತ್ತದೆ. ಮಾರ್ದವಕ್ಕೆ ಅಸಾಧ್ಯವಾದುದು ಯಾವುದೂ ಇಲ್ಲ. ಆದ್ದರಿಂದ ಮಾರ್ದವವೇ ಹೆಚ್ಚು ಸಾಮರ್ಥ್ಯದಿಂದ ಕೂಡಿದುದು.

ದೇಶಕಾಲೌ ತು ಸಂಪ್ರೇಕ್ಷ್ಯ ಬಲಾಬಲಮಥಾತ್ಮನಃ ।
ಅನ್ವೀಕ್ಷ್ಯ ಕಾರಣಂ ಚೈವ ಕಾರ್ಯಂ ತೇಜಃ ಕ್ಷಮಾಪಿ ವಾ ॥೨೬॥

ದೇಶಕಾಲಗಳನ್ನು ಗಮನಿಸಿ ತನ್ನ ಬಲ ಮತ್ತು ದೌರ್ಬಲ್ಯಗಳನ್ನು ಗಮನಿಸಿ ಅಪರಾಧದ ಕಾರಣವನ್ನು ಗಮನಿಸಿ ಕೋಪವನ್ನಾಗಲೀ ಅಥವಾ ಕ್ಷಮೆಯನ್ನಾಗಲೀ ತೋರಿಸಬೇಕು.

ನಾದೇಶಕಾಲೇ ಕಿಂಚಿತ್ ಸ್ಯಾದ್ ದೇಶಕಾಲಃ ಪರೀಕ್ಷ್ಯತೇ ।
ತಥಾ ಲೋಕಭಯಾಚ್ಚಾಪಿ ಕ್ಷಂತವ್ಯಮಪರಾಧಿತಮ್ ॥೨೭॥

ದೇಶಕಾಲಗಳನ್ನು ಪರೀಕ್ಷಿಸಬೇಕು. ಅಯೋಗ್ಯವಾದ ದೇಶಕಾಲಗಳಲ್ಲಿ ಏನನ್ನೂ ಮಾಡಬಾರದು. ಅದರಂತೆ ಲೋಕ ಭಯದಿಂದಲಾದರೂ ಅಪರಾಧವನ್ನು ಕ್ಷಮಿಸಬೇಕು.

ಏತ ಏವಂವಿಧಾಃ ಕಾಲಾಃ ಕ್ಷಮಾಯಾಃ ಪರಿಕೀರ್ತಿತಾಃ ।
ಅತೋಽನ್ಯಥಾ ಚೇದ್ ವಿದ್ವದ್ಭಿಃ ತೇಜಸಃ ಕಾಲ ಉಚ್ಯತೇ ॥೨೮॥

ಇಂತಹ ಇಷ್ಟುಕಾಲಗಳು ಕ್ಷಮೆಯಕಾಲವೆಂದು ಹೇಳಲ್ಪಡುತ್ತವೆ. ಇದಕ್ಕಿಂತ ಭಿನ್ನವಾದರೆ ಮೇಧಾವಿಗಳು ಅದನ್ನು ಕೋಪದ ಕಾಲವೆಂದು ಹೇಳುತ್ತಾರೆ.

ದ್ರೌಪದೀ

ತದಹಂ ತೇಜಸಃ ಕಾಲಂ ತವ ಮನ್ಯೇ ನರಾಧಿಪ ।
ಧಾರ್ತರಾಷ್ಟ್ರೇಷು ಲುಬ್ಧೇಷು ಸತತಂ ಚಾಪಕಾರಿಷು ॥೨೯॥

ಎಲೈ ರಾಜನೇ! ಆದ್ದರಿಂದ ಸತತವಾಗಿ ಅಪಕಾರವನ್ನು ಮಾಡಿರುವ ಲೋಭಿಗಳಾದ ಧೃತರಾಷ್ಟ್ರಪುತ್ರರಲ್ಲಿ ಇದು ನಿನ್ನ ಕೋಪ ಮತ್ತು ಪರಾಕ್ರಮದ ಕಾಲವೆಂದು ಭಾವಿಸುತ್ತೇನೆ.

ನ ಹಿ ಕಶ್ಚಿತ್ ಕ್ಷಮಾಕಾಲೋ ವಿದ್ಯತೇಽದ್ಯ ಕುರೂನ್ ಪ್ರತಿ ।
ತೇಜಸಶ್ಚಾಗತೇ ಕಾಲೇ ತೇಜ ಉತ್ಸೃಷ್ಟುಮರ್ಹಸಿ ॥೩೦॥

ಕುರುಗಳ ವಿಷಯದಲ್ಲಿ ಈದಿನ ಯಾವ ಕ್ಷಮಾಕಾಲವೂ ಇರುವುದಿಲ್ಲ. ಕೋಪವನ್ನು ತೋರಿಸುವ ಕಾಲವು ಪ್ರಾಪ್ತವಾದಾಗ ನೀನು ಕೋಪವನ್ನೇ ತೋರಿಸಬೇಕು.

ಮೃದುರ್ಭವತ್ಯವಜ್ಞಾತಃ ತೀಕ್ಷ್ಣಾದುದ್ವಿಜತೇ ಜನಃ ।
ಕಾಲೇ ಪ್ರಾಪ್ತೇ ದ್ವಯಂ ಹ್ಯೇತದ್ ಯೋ ವೇತ್ತಿ ಸ ಮಹೀಪತಿಃ ॥೩೧॥

ಮೃದುವಾದ ಪುರುಷನು ಎಲ್ಲರಿಂದಲೂ ಅವಮಾನಗೊಳಿಸಲ್ಪಡುತ್ತಾನ. ಕ್ರೋಧಶೀಲನಾದ ಪುರುಷನಿಗೆ ಜನರು ಹೆದರುತ್ತಾರೆ. ಯಾವನು ಈ ಎರಡನ್ನು ತೋರಿಸುವ ಯೋಗ್ಯವಾದ ಕಾಲವನ್ನು ತಿಳಿಯುತ್ತಾನೆಯೋ ಅವನೇ ರಾಜನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚವಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

## ಇಪ್ಪತ್ತಾರನೆಯ ಅಧ್ಯಾಯ

(ಯುಧಿಷ್ಠಿರನಿಂದ ದ್ರೌಪದಿಗೆ ಕ್ಷಮೆಯ ಉಪದೇಶ.)

**ಯುಧಿಷ್ಠಿರಃ**

**ಕ್ರೋಧೋ ಹಂತಾ ಮನುಷ್ಯಾಣಾಂ ಕ್ರೋಧೋ ಭಾವಯಿತಾ ಪುನಃ ।**
**ಇತಿ ವಿದ್ಧಿ ಮಹಾಪ್ರಾಜ್ಞೇ ಕ್ರೋಧಮೂಲೌ ಭವಾಭವೌ ॥೧॥**

ಮಹಾಪ್ರಾಜ್ಞಳೇ! ಕ್ರೋಧವು ಮನುಷ್ಯರನ್ನು ಕೊಲ್ಲುತ್ತದೆ. ಮತ್ತು ಕ್ರೋಧವೇ ಪುನಃ ಹುಟ್ಟುವಂತೆ ಮಾಡುತ್ತದೆ. ಆದ್ದರಿಂದ ಕ್ರೋಧವೇ ಜನ್ಮಮರಣಗಳಿಗೆ ಕಾರಣವೆಂದು ತಿಳಿ.

**ಯೋ ಹಿ ಸಂಹರತೇ ಕ್ರೋಧಂ ಭಾವಸ್ತಸ್ಯ ಶುಭಾನನೇ ।**
**ಯೋ ನ ಸಂಹರತೇ ಕ್ರೋಧಂ ತಸ್ಯಾಭಾವೋ ಭವತ್ಯುತ ।**
**ಅಭಾವಕಾರಣಂ ತಸ್ಮಾತ್ ಕ್ರೋಧೋ ಭವತಿ ಶೋಭನೇ ॥೨॥**

ಶುಭಾನನೆಯೇ! ಯಾವನು ಕ್ರೋಧವನ್ನು ನಾಶಮಾಡಿಕೊಳ್ಳುತ್ತಾನೆಯೋ ಅವನಿಗೆ ಕ್ಷೇಮವುಂಟಾಗುತ್ತದೆ. ಯಾವನು ಕ್ರೋಧವನ್ನು ನಾಶಮಾಡಿಕೊಳ್ಳುವುದಿಲ್ಲವೋ ಅವನಿಗೆ ವಿನಾಶವು ಉಂಟಾಗುತ್ತದೆ. ಶೋಭನೆಯೇ, ಆದ್ದರಿಂದ ಕ್ರೋಧವು ವಿನಾಶಕ್ಕೆ ಕಾರಣವಾಗುತ್ತದೆ.

ಯಃ ಪುನಃ ಪುರುಷಃ ಕ್ರೋಧಂ ನಿತ್ಯಂ ವಿಸೃಜತೇ ಶುಭೇ ।
ತಸ್ಯಾಭಾವಾಯ ಭವತಿ ಕ್ರೋಧಃ ಪರಮದಾರುಣಃ ॥೩॥

ಶುಭಳಾದವಳೇ! ಯಾವ ಪುರುಷನು ನಿತ್ಯವೂ ಕ್ರೋಧವನ್ನೇ ಸೃಷ್ಟಿಸುತ್ತಾನೆಯೋ ಅವನಿಗೆ ಪರಮದಾರುಣವಾದ ಆಕ್ರೋಶವು ಅವನ ನಾಶವನ್ನು ಉಂಟುಮಾಡುತ್ತದೆ.

ಕ್ರೋಧಮೂಲೋ ವಿನಾಶೋ ಹಿ ಪ್ರಜಾನಾಮಿಹ ದೃಶ್ಯತೇ ।
ತತ್ ಕಥಂ ಮಾದೃಶಃ ಕ್ರೋಧಮುತ್ಸೃಜೇಲ್ಲೋಕನಾಶನಮ್ ॥೪॥

ಈ ಲೋಕದಲ್ಲಿ ಪ್ರಜೆಗಳ ವಿನಾಶಕ್ಕೆ ಕ್ರೋಧವೇ ಕಾರಣವೆಂದು ತಿಳಿಯುತ್ತದೆ. ಹೀಗಿರುವಾಗ ಲೋಕನಾಶಕವಾದ ಕ್ರೋಧವನ್ನು ನನ್ನಂತಹವನು ಹೇಗೆ ಪ್ರದರ್ಶಿಸಲು ಸಾಧ್ಯ?

ಕ್ರುದ್ಧಃ ಪಾಪಂ ನರಃ ಕುರ್ಯಾತ್ ಕ್ರುದ್ಧೋ ಹನ್ಯಾತ್ ಗುರೂನಪಿ ।
ಕ್ರುದ್ಧಃ ಪರುಷಯಾ ವಾಚಾ ಶ್ರೇಯಸೋಽಪ್ಯವಮನ್ಯತೇ ॥೫॥

ಕೋಪಗೊಂಡ ಮನುಷ್ಯನು ಪಾಪವನ್ನು ಮಾಡುತ್ತಾನೆ. ಗುರುಗಳನ್ನೂ ಕೊಲ್ಲುತ್ತಾನೆ. ಕ್ರೂರವಾದ ಮಾತುಗಳಿಂದ ತನಗಿಂತ ಶ್ರೇಷ್ಠರಾದವರನ್ನು ಅವಮಾನಮಾಡುತ್ತಾನೆ.

ವಾಚ್ಯಾವಾಚ್ಯೇ ಹಿ ಕುಪಿತೋ ನ ಪ್ರಜಾನಾತಿ ಕರ್ಹಿಚಿತ್ ।
ನಾಕಾರ್ಯಮಸ್ತಿ ಕ್ರುದ್ಧಸ್ಯ ನಾವಾಚ್ಯಂ ವಿದ್ಯತೇ ತಥಾ ॥೬॥

ಕೋಪಗೊಂಡವನು ಯಾವ ಮಾತನ್ನು ಆಡಬೇಕು ಯಾವ ಮಾತನ್ನು ಆಡಬಾರದು ಎಂದು ತಿಳಿಯುವುದಿಲ್ಲ. ಕೋಪಗೊಂಡವನು ಮಾಡಲಾರದ ಕಾರ್ಯವಿಲ್ಲ, ಹಾಗೆಯೇ ಅವನು ಆಡಲಾರದ ಮಾತೂ ಇಲ್ಲ.

ಹಿಂಸ್ಯಾತ್ ಕ್ರೋಧಾದವಧ್ಯಾಂಸ್ತು ವಧ್ಯಾನ್ ಸಂಪೂಜಯೇದಪಿ ।
ಆತ್ಮಾನಮಪಿ ವಾ ಕ್ರುದ್ಧಃ ಪ್ರೇಷಯೇದ್ ಯಮಸಾದನಮ್ ॥೭॥

ಕ್ರೋಧವಶನಾದ ಮನುಷ್ಯನು ಅವಧ್ಯರಾದವರನ್ನು ಕೊಲ್ಲುತ್ತಾನೆ. ವಧ್ಯರಾದವರನ್ನು ಸತ್ಕರಿಸುತ್ತಾನೆ. ಕೋಪಕ್ಕೆ ಒಳಗಾಗಿ ತನ್ನನ್ನೂ ಯಮಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ.

ಏತಾನ್ ದೋಷಾನ್ ಪ್ರಪಶ್ಯದ್ಭಿರ್ಜಿತಃ ಕ್ರೋಧೋ ಮನೀಷಿಭಿಃ ।
ಇಚ್ಛದ್ಭಿಃ ಪರಮಂ ಶ್ರೇಯ ಇಹ ವಾಽಮುತ್ರ ಚೋತ್ತಮಮ್ ॥೮॥

ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಉತ್ತಮ ಶ್ರೇಯಸ್ಸನ್ನು ಬಯಸುವ ಮೇಧಾವಿಗಳು ಈ ದೋಷಗಳನ್ನು ನೋಡಿ ಕ್ರೋಧವನ್ನು ಜಯಿಸಿದ್ದಾರೆ.

ತಂ ಕ್ರೋಧಂ ನಿರ್ಜಿತಂ ಧೀರೈಃ ಕಥಮಸ್ಮದ್ವಿಧಶ್ಚರೇತ್ ।
ಏತದ್ ದ್ರೌಪದಿ ಸಂಸ್ಮೃತ್ಯ ನ ಮೇ ಮನ್ಯುಃ ಪ್ರವರ್ಧತೇ ॥೯॥

ಧೀರರು ಜಯಿಸಿದ ಆ ಕ್ರೋಧವನ್ನು ನನ್ನಂತಹವನು ಹೇಗೆ ಆಚರಿಸಬೇಕು? ದ್ರೌಪದಿಯೇ, ಇದನ್ನು ಸ್ಮರಿಸುವ ನನಗೆ ಕೋಪವು ಉಂಟಾಗುವುದಿಲ್ಲ.

ಆತ್ಮಾನಂ ಚ ಪರಂ ಚೈವ ತ್ರಾಯತೇ ಮಹತೋ ಭಯಾತ್ ।
ಕ್ರುಧ್ಯಂತಮಪ್ರತಿಕ್ರುಧ್ಯನ್ ದ್ವಯೋರೇವ ಚಿಕಿತ್ಸಕಃ ॥೧೦॥

ಶಾಂತಿಯು ತನ್ನನ್ನು ಮತ್ತು ಪರರನ್ನು ದೊಡ್ಡ ಭಯದಿಂದ ಪಾರುಮಾಡುತ್ತದೆ. ಕೋಪಗೊಂಡವನಿಗೆ ಪ್ರತಿಯಾಗಿ ಕೋಪಗೊಳ್ಳದಿದ್ದರೆ ಅವನ ಶಾಂತಿಯು ಇಬ್ಬರಿಗೂ ಕ್ರೋಧರೂಪವಾದ ರೋಗಪರಿಹಾರಕವಾಗುತ್ತದೆ.

ಮೂಢೋ ಯದಿ ಕ್ಲಿಶ್ಯಮಾನಃ ಕ್ರುಧ್ಯತೇಽಶಕ್ತಿಮಾನ್ ನರಃ ।
ಬಲೀಯಸಾಂ ಮನುಷ್ಯಾಣಾಂ ತ್ಯಜತ್ಯಾತ್ಮಾನಮಂತತಃ ॥೧೧॥

ಮೂಢನೂ ಮತ್ತು ಅಶಕ್ತನೂ ಆದ ಪುರುಷನು ಕ್ಲೇಶಕ್ಕೆ ಒಳಗಾಗಿ ತನಗಿಂತ ಪ್ರಬಲರ ಮೇಲೆ ಕೋಪಮಾಡಿದರೆ ಅವನು ಕೊನೆಗೆ ತನ್ನನ್ನೇ ತನಗಿಂತ ಪ್ರಬಲರಾದ ಶತ್ರುಜನಗಳಿಗೆ ಒಪ್ಪಿಸಿಕೊಳ್ಳುತ್ತಾನೆ.

ತಸ್ಯಾತ್ಮಾನಂ ಪರಿತ್ಯಜ್ಯ ಲೋಕಾ ನಶ್ಯಂತ್ಯನಾತ್ಮನಃ ।
ತಸ್ಮಾದ್ ದ್ರೌಪದ್ಯಶಕ್ತಸ್ಯ ಮನ್ಯೋರ್ನಿಯಮನಂ ಸ್ಮೃತಮ್ ॥೧೨॥

ಹೀಗೆ ಮನೋಜಯರಹಿತನಾಗಿ ತನ್ನನ್ನೇ ತಾನು ಪರಿತ್ಯಾಗಮಾಡುವವನಿಗೆ ಉತ್ತಮಲೋಕಗಳು ನಾಶಹೊಂದುತ್ತವೆ. ಆದ್ದರಿಂದ ದ್ರೌಪದಿಯೇ, ಅಶಕ್ತನಾದವನು ಕೋಪವನ್ನು ನಿಯಂತ್ರಿಸಿಕೊಳ್ಳಬೇಕು ಎಂದು ಹೇಳಲಾಗುತ್ತದೆ.

ವಿದ್ವಾಂಸ್ತಥೈವ ಯಃ ಶಕ್ತಃ ಕ್ಲಿಶ್ಯಮಾನಃ ಪ್ರಕುಪ್ಯತಿ ।
ಸ ನಾಶಯಿತ್ವಾ ದ್ವೇಷ್ಟಾರಂ ಪರಲೋಕೇ ನ ನಂದತಿ ॥೧೩॥

ಹಾಗೆಯೇ ಜ್ಞಾನಿಯಾದವನು ಮತ್ತು ಶಕ್ತನಾದವನು ತನ್ನ ಕ್ಲೇಶವನ್ನು ಉಂಟುಮಾಡಿದವನ ಮೇಲೆ ಕೋಪಗೊಂಡರೆ ಅವನು ತನ್ನನ್ನು ದ್ವೇಷಿಸುವ ಆ ವ್ಯಕ್ತಿಯನ್ನು ನಾಶಮಾಡಿ ಪರಲೋಕದಲ್ಲಿ ಸುಖಪಡುವುದಿಲ್ಲ.

ತಸ್ಮಾದ್ ಬಲವತಾ ಚೈವ ದುರ್ಬಲೇನ ಚ ನಿತ್ಯದಾ ।
ಕ್ಷಂತವ್ಯಂ ಪುರುಷೇಣಾಹುರಾಪತ್ಸ್ವಪಿ ವಿಜಾನತಾ ॥೧೪॥

ಆದ್ದರಿಂದ ಬಲಿಷ್ಠನಾಗಲೀ ಅಥವಾ ದುರ್ಬಲನಾಗಲೀ ವಿವೇಕವುಳ್ಳ ಪುರುಷನು ಇನ್ನೊಬ್ಬರಿಂದ ಆಪತ್ತುವುಂಟಾದರೂ ಅವರನ್ನು ಯಾವಾಗಲೂ ಕ್ಷಮಿಸಬೇಕು ಎಂದು ಹೇಳುತ್ತಾರೆ.

ಮನ್ಯೋರ್ಹಿ ವಿಜಯಂ ಕೃಷ್ಣೇ ಪ್ರಶಂಸಂತೀಹ ಸಾಧವಃ ।
ಕ್ಷಮಾವತೋ ಜಯೋ ನಿತ್ಯಂ ಸಾಧೋರಿಹ ಸತಾಂ ಮತಮ್ ।
ಸತ್ಯಂ ಚಾನೃತತಃ ಶ್ರೇಯೋ ನೃಶಂಸಾಚ್ಚಾನೃಶಂಸತಾ ॥೧೫॥

ದ್ರೌಪದಿಯೇ! ಕೋಪವನ್ನು ಜಯಿಸುವುದನ್ನು ಸಜ್ಜನರು ಹೊಗಳುತ್ತಾರೆ. ಕ್ಷಮೆಯನ್ನು ಹೊಂದಿದ ಸಾಧುವಿಗೆ ಈ ಲೋಕದಲ್ಲಿ ಜಯವುಂಟಾಗುತ್ತದೆ ಎಂಬುದು ಸಜ್ಜನರ ಮತ. ಸತ್ಯವು ಅನೃತಕ್ಕಿಂತ ಶ್ರೇಷ್ಠವಾದುದು. ಮಾರ್ದವವು ಕ್ರೌರ್ಯಕ್ಕಿಂತ ಶ್ರೇಷ್ಠವಾದುದು.

ತಮೇವ ಬಹುದೋಷಂ ತು ಕ್ರೋಧಂ ಸದ್ಭಿರ್ವಿವರ್ಜಿತಮ್ ।
ಮಾದೃಶೋ ನ ಸೃಜೇತ್ ತಸ್ಮಾತ್ ಸುಯೋಧನಭಯಾದಪಿ ॥೧೬॥

ಅಂತಹ ಸಜ್ಜನರು ವರ್ಜಿಸಿದ ಈ ಬಹುದೋಷವುಳ್ಳ ಕ್ರೋಧವನ್ನು ಸುಯೋಧನನ ಭಯದಿಂದಲಾದರೂ ಕೂಡ ನನ್ನಂತಹವನು ಹೊಂದಬಾರದು.

ತೇಜಸ್ವೀತಿ ಯಮಾಹುರ್ಹಿ ಪಂಡಿತಾ ದೀರ್ಘದರ್ಶಿನಃ ।
ನ ಕ್ರೋಧೋಽಭ್ಯಂತರಸ್ತತ್ರ ಭವತೀತಿ ವಿನಿಶ್ಚಿತಮ್ ॥೧೭॥

ದೀರ್ಘದರ್ಶಿಗಳಾದ ಪಂಡಿತರು ಯಾವನನ್ನು ತೇಜಸ್ವಿ ಎಂದು ಹೇಳುತ್ತಾರೋ ಅವನ ಮನಸ್ಸಿನಲ್ಲಿ ಕ್ರೋಧವಿರುವುದಿಲ್ಲವೆಂಬುದು ನಿಶ್ಚಿತವಾದುದು.

ಯಸ್ತು ಕ್ರೋಧಂ ಸಮುತ್ಪನ್ನಂ ಪ್ರಜ್ಞಯಾ ಪರಿಬಾಧತೇ ।
ತೇಜಸ್ವಿನಂ ತಂ ವಿದುಷೋ ಮನ್ಯಂತೇ ತತ್ತ್ವದರ್ಶಿನಃ ॥೧೮॥

ಯಾವ ಮನುಷ್ಯನು ಉತ್ಪನ್ನವಾದ ಕ್ರೋಧವನ್ನು ತನ್ನ ಜ್ಞಾನದಿಂದ ನಾಶಪಡಿಸುತ್ತಾನೋ ಅವನನ್ನು ತತ್ತ್ವದರ್ಶಿಗಳಾದ ವಿದ್ವಾಂಸರು ತೇಜಸ್ವಿ ಎಂದು ತಿಳಿಯುತ್ತಾರೆ.

ಕ್ರುದ್ಧೋ ಹಿ ಕಾರ್ಯಂ ಸುಶ್ರೋಣಿ ನ ಯಥಾವತ್ ಪ್ರಪಶ್ಯತಿ ।
ನ ಕಾರ್ಯಂ ನ ಚ ಮರ್ಯಾದಾಂ ನರಃ ಕ್ರುದ್ಧೋऽನುಪಶ್ಯತಿ ॥೧೯॥

ಎಲೌ ಸುಶ್ರೋಣಿಯೇ! ಕ್ರುದ್ಧನಾದವನು ಮಾಡಬೇಕಾದ ಕಾರ್ಯವನ್ನು ಚೆನ್ನಾಗಿ ತಿಳಿಯುವುದಿಲ್ಲ. ಕ್ರುದ್ಧನಾದ ನರನು ಕಾರ್ಯವನ್ನಾಗಲೀ ಮರ್ಯಾದೆಯನ್ನಾಗಲೀ ಅನುಗುಣವಾಗಿ ನೋಡುವುದಿಲ್ಲ.

ಹಂತ್ಯವಧ್ಯಾನಪಿ ಕ್ರುದ್ಧೋ ಗುರೂನ್ ರೂಕ್ಷ್ಯಸ್ತುದತ್ಯಪಿ ।
ತಸ್ಮಾತ್ ತೇಜಸಿ ಕರ್ತವ್ಯೇ ಕ್ರೋಧೋ ದೂರಾತ್ ಪ್ರತಿಷ್ಠಿತಃ ॥೨೦॥

ಕ್ರುದ್ಧನಾದವನು ಅವಧ್ಯರನ್ನೂ ಕೊಲ್ಲುತ್ತಾನೆ. ಗುರುಗಳನ್ನು ಕ್ರೂರವಾದ ಮಾತುಗಳಿಂದ ಚುಚ್ಚುತ್ತಾನೆ. ಆದ್ದರಿಂದ ಶ್ರೇಯಸ್ಸನ್ನು ಸಂಪಾದನೆ ಮಾಡಬೇಕಾದರೆ ಕ್ರೋಧವನ್ನು ದೂರದಲ್ಲಿಟ್ಟರಬೇಕು.

ದಾಕ್ಷಿಣ್ಯಂ ಶೀಲಶೌರ್ಯೇ ಚ ಶೀಘ್ರತ್ವಮತಿತೇಜಸಃ ।
ಗುಣಾಃ ಕ್ರೋಧಾಭಿಭೂತೇನ ನ ಶಕ್ಯಾಃ ಪ್ರಾಪ್ತುಮಂಜಸಾ ।
ಕ್ರೋಧಂ ತ್ಯಕ್ತ್ವಾ ತು ಪುರುಷಃ ಸಮ್ಯಕ್ತೇಜೋऽಭಿಪದ್ಯತೇ ॥೨೨॥

ಕೋಪಿಷ್ಠನಾದ ಮನುಷ್ಯನು ಕ್ರೋಧಕ್ಕೆ ವಶನಾಗಿ ಮಾರ್ದವವನ್ನಾಗಲೀ ಶೀಲಶೌರ್ಯಗಳನ್ನಾಗಲೀ ಶೀಘ್ರತ್ವವನ್ನಾಗಲೀ ಚೆನ್ನಾಗಿ ಸಂಪಾದಿಸಲು ಸಾಧ್ಯವಿಲ್ಲ; ಕ್ರೋಧವನ್ನು ತ್ಯಜಿಸಿದ ಪುರುಷನು ಒಳ್ಳೆಯ ತೇಜಸ್ಸನ್ನು ಹೊಂದುತ್ತಾನೆ.

ಕಾಲಯುಕ್ತಂ ಮಹಾಪ್ರಾಜ್ಞೇ ಕ್ರುದ್ಧೈಸ್ತೇಜಃ ಸುದುರ್ಲಭಮ್ ।
ಕ್ರೋಧಸ್ತ್ವಪಂಡಿತೈಃ ಶಶ್ವತ್ ತೇಜ ಇತ್ಯಭಿಧೀಯತೇ ॥೨೩॥

ಮಹಾಪ್ರಾಜ್ಞೆಯೇ! ಕ್ರುದ್ಧರಾದವರು ಯೋಗ್ಯವಾದ ಕಾಲದಲ್ಲಿ ಹೊಂದಬೇಕಾದ ತೇಜಸ್ಸನ್ನು ಎಂದೂ ಹೊಂದುವುದಿಲ್ಲ. ಅಪಂಡಿತರಾದವರು ಯಾವಾಗಲೂ ಕ್ರೋಧವನ್ನೇ ತೇಜಸ್ಸೆಂದು ಕರೆಯುತ್ತಾರೆ.

ರಜಸ್ತತ್ ಲೋಕಾನಾಶಾಯ ವಿಹಿತಂ ಮಾನುಷಾನ್ ಪ್ರತಿ ।
ತಸ್ಮಾಚ್ಚಶ್ವತ್ ತ್ಯಜೇತ್ ಕ್ರೋಧಂ ಪುರುಷಃ ಸಮ್ಯಗಾಚರನ್ ॥೨೪॥

ಕ್ರೋಧವು ರಜೋಗುಣ. ಲೋಕನಾಶಕ್ಕೋಸ್ಕರ ಅದು ಮನುಷ್ಯರಲ್ಲಿ ಸೃಷ್ಟಿಸಲ್ಪಟ್ಟಿದೆ. ಆದ್ದರಿಂದ ಒಳ್ಳೆಯ ಆಚರಣೆಯುಳ್ಳ ಪುರುಷನು ಯಾವಾಗಲೂ ಕ್ರೋಧವನ್ನು ಪರಿತ್ಯಜಿಸಬೇಕು.

ಶ್ರೇಯಾನ್ ಸ್ವಧರ್ಮಾನುವಶೋ ನ ಕ್ರುದ್ಧ ಇತಿ ನಿಶ್ಚಿತಮ್ ।
ಯದಿ ಸರ್ವಮಬುದ್ಧಾನಾಮತಿಕ್ರಾಂತಮಮೇಧಸಾಮ್ ॥೨೫॥

ತನ್ನ ಧರ್ಮವನ್ನು ಅನುಸರಿಸುವವನು ಶ್ರೇಷ್ಠನಾದವನು. ಕ್ರುದ್ಧನಾದವನು ಶ್ರೇಷ್ಠನಲ್ಲ ಎಂದು ನಿಶ್ಚಿತವಾಗಿದೆ. ಮೂಢರಿಗೂ ಪ್ರಜ್ಞಾಹೀನರಿಗೂ ಧರ್ಮದ ಅತಿಕ್ರಮಣವಿದ್ದರೂ ಎಲೈ ಅನಿಂದಿತೆಯೇ! ನನ್ನಂತಹವನು ಹೇಗೆ ಅಂತಹ ಅತಿಕ್ರಮಣವನ್ನು ಮಾಡಲು ಸಾಧ್ಯ ?

ಅತಿಕ್ರಮೋ ಮದ್ವಿಧಸ್ಯ ಕಥಂ ಸ್ವಿತ್ ಸ್ಯಾದನಿಂದಿತೇ ।
ಯದಿ ನ ಸ್ಯುರ್ಮನುಷ್ಯೇಷು ಕ್ಷಮಿಣಃ ಪೃಥಿವೀಸಮಾಃ ।
ನ ಸ್ಯಾತ್ ಸಂಧಿರ್ಮನುಷ್ಯಾಣಾಂ ಕ್ರೋಧಮೂಲೋ ಹಿ ವಿಗ್ರಹಃ ॥

ಮನುಷ್ಯರಲ್ಲಿ ಪೃಥಿವಿಗೆ ಸಮಾನವಾದ ಕ್ಷಮೆಯನ್ನು ಹೊಂದಿದವರು ಇಲ್ಲದಿದ್ದರೆ ಮನುಷ್ಯರಲ್ಲಿ ಸಂಧಿಯೇ ಆಗುತ್ತಿರಲಿಲ್ಲ. ಎಲ್ಲ ಕಲಹಗಳೂ ಕ್ರೋಧಮೂಲವಾದವುಗಳು.

ಅಭಿಷಕ್ತೋ ಹ್ಯಭಿಷಜೇದ್ ಆಹನ್ಯಾದ್ಗುರುಣಾSSಹತಃ ।
ಏವಂ ವಿನಾಶೋ ಭೂತಾನಾಮಧರ್ಮಪ್ರಭವೋ ಭವೇತ್ ॥೨೭॥

ವನಿತಾದಿಗಳಲ್ಲಿ ಆಸಕ್ತನಾದವನು ಯಾವಾಗಲೂ ಅಲ್ಲಿಯೇ ಆಸಕ್ತನಾಗಿರುತ್ತಾನೆ. ಹಿರಿಯರಿಂದ ಹೊಡೆಯಲ್ಪಟ್ಟವನು ಅವರಿಗೆ ತಿರುಗಿಸಿ ಹೊಡೆಯುತ್ತಾನೆ. ಹೀಗೆ ಅಧರ್ಮದಿಂದ ಜೀವರಿಗೆ ವಿನಾಶವುಂಟಾಗುತ್ತದೆ.

ಆಕ್ರುಷ್ಟಃ ಪುರುಷಃ ಸರ್ವಾನ್ ಪ್ರತ್ಯಾಕ್ರೋಶೇದನಂತರಮ್ ।
ಪ್ರತಿಹನ್ಯಾದ್ಧತಶ್ಚೈವ ತಥಾ ಹಿಂಸ್ಯಾಚ್ಚ ಹಿಂಸಿತಃ ॥೨೮॥

ಇನ್ನೊಬ್ಬ ಪುರುಷನು ತನ್ನ ಮೇಲೆ ಆಕ್ರೋಶವನ್ನು ಮಾಡಿದರೆ ಅನಂತರ ಈ ಪುರುಷನು ಅವನ ಮೇಲೆ ಆಕ್ರೋಶವನ್ನು ಮಾಡುತ್ತಾನೆ. ಅವನು ಹೊಡೆದರೆ ಇವನೂ ಹೊಡೆಯುತ್ತಾನೆ. ಅವನು ಹಿಂಸೆಮಾಡಿದರೆ ಇವನೂ ಹಿಂಸೆಯನ್ನು ಮಾಡುತ್ತಾನೆ.

ಹನ್ಯುಶ್ಚ ಪಿತರಃ ಪುತ್ರಾನ್ ಪುತ್ರಾಶ್ಚಾಪಿ ತಥಾ ಪಿತೄನ್ ।
ಹನ್ಯುಶ್ಚ ಪತಯೋ ಭಾರ್ಯಾಃ ಪತೀನ್ ಭಾರ್ಯಾಸ್ತಥೈವ ಚ ॥೨೯॥

ತಂದೆಗಳು ಮಕ್ಕಳನ್ನು ಕೊಲ್ಲುತ್ತಾರೆ ಹಾಗೆಯೇ ಮಕ್ಕಳು ತಂದೆಯನ್ನು ಕೊಲ್ಲುತ್ತಾರೆ. ಹೆಂಡತಿಯರು ಪತಿಯನ್ನು ಕೊಲ್ಲುತ್ತಾರೆ ಪತಿಗಳು ಹೆಂಡತಿಯನ್ನು ಕೊಲ್ಲುತ್ತಾರೆ.

ಏವಂ ಸಂಕುಪಿತೇ ಲೋಕೇ ಶರ್ಮ ಕೃಷ್ಣೇ ನ ವಿದ್ಯತೇ ।
ಪ್ರಜಾನಾಂ ವೃದ್ಧಿಮೂಲಂ ಹಿ ಜನ್ಮಸಿದ್ಧಿಃ ಶುಭಾನನೇ ॥೩೦॥

ಎಲೌ ಕೃಷ್ಣೆಯೇ! ಹೀಗೆ ಕೋಪಗೊಂಡ ಲೋಕದಲ್ಲಿ ಎಲ್ಲಿಯೂ ಸುಖವಿರುವುದಿಲ್ಲ. ಶುಭಾನನೆಯೇ! ಕರ್ಮಭೂಮಿಯಲ್ಲಿ ಉತ್ತಮಜನ್ಮಪ್ರಾಪ್ತಿಯು ಪ್ರಜೆಗಳ ಅಭಿವೃದ್ಧಿಗೆ ಕಾರಣವಷ್ಟೇ ?

ತಾಃ ಕ್ಷೀಯೇರನ್ ಪ್ರಜಾಸ್ಸರ್ವಾಃ ಕ್ಷಿಪ್ರಂ ದ್ರೌಪದಿ ತಾದೃಶಾಃ ।
ತಸ್ಮಾನ್ಮನ್ಯುರ್ವಿನಾಶಾಯ ಪ್ರಜಾನಾಮಭವಾಯ ಚ ॥೩೧॥

ಆದರೆ ದ್ರೌಪದಿಯೇ! ಅಂತಹ ಸಿಟ್ಟಿಗೆ ಒಳಗಾದ ಪ್ರಜೆಗಳೆಲ್ಲರೂ ನಾಶವನ್ನೇ ಹೊಂದುತ್ತಾರೆ. ಆದ್ದರಿಂದ ಕೋಪವು ವಿನಾಶಕ್ಕೂ ಮತ್ತು ಉತ್ತಮ ಜನ್ಮದ ಪ್ರಾಪ್ತಿಯ ಅಭಾವಕ್ಕೂ ಕಾರಣವಾಗುತ್ತದೆ.

ತಸ್ಮಾತ್ ತು ಲೋಕೇ ದೃಶ್ಯಂತೇ ಕ್ಷಮಿಣಃ ಪೃಥಿವೀಸಮಾಃ ।
ತಸ್ಮಾಜ್ಜನ್ಮ ಚ ಭೂತಾನಾಂ ಭವಾಯ ಪ್ರತಿಪದ್ಯತೇ ॥೩೨॥

ಆ ಕಾರಣದಿಂದಲೇ ಲೋಕದಲ್ಲಿ ಪೃಥಿವಿಗೆ ಸಮಾನವಾದ ಕ್ಷಮೆಯುಳ್ಳ ಪುರುಷರು ಕಂಡುಬರುತ್ತಾರೆ. ಹಾಗೆಯೇ ಜೀವರು ಸತ್ಕುಲದಲ್ಲಿ ಜನ್ಮವನ್ನು ಹೊಂದಿ ವೈಭವಾದಿ ಸಂಪತ್ತನ್ನು ಪಡೆಯುತ್ತಾರೆ.

ಕ್ಷಂತವ್ಯಂ ಪುರುಷೇಣಾಹುಃ ಸರ್ವಾಸ್ವಾಪತ್ಸು ಶೋಭನೇ ।
ಕ್ಷಮಾಭಾವೋ ಹಿ ಭೂತಾನಾಂ ಜನ್ಮ ಚೈವ ಪ್ರಕೀರ್ತಿತಮ್ ॥೩೩॥

ಶೋಭನೆಯೆ, ಎಲ್ಲ ಆಪತ್ತುಗಳಲ್ಲಿಯೂ ಪುರುಷನು ಕ್ಷಮೆಯನ್ನೇ ಹೊಂದಬೇಕೆಂದು ಹೇಳುತ್ತಾರೆ. ಕ್ಷಮೆಯನ್ನು ಹೊಂದಿರುವುದೇ ಜೀವರಿಗೆ ಜನ್ಮ ಎಂದು ಹೇಳಲ್ಪಡುತ್ತದೆ.

ಆಕ್ರುಷ್ಟಸ್ತಾಡಿತಃ ಕ್ಷಿಪ್ತಃ ಸಹತೇ ಯೋ ಬಲೀಯಸಾ ।
ಯಶ್ಚ ನಿತ್ಯಂ ಜಿತಕ್ರೋಧೋ ವಿದ್ವಾನುತ್ತಮಪೂರುಷಃ ॥೩೪॥

ಪ್ರತಾಪವಾನಪಿ ನರಸ್ತಸ್ಯ ಲೋಕಾಃ ಸನಾತನಾಃ ।
ಕ್ರೋಧನಸ್ತ್ವಲ್ಪವಿಜ್ಞಾನಃ ಪ್ರೇತ್ಯ ಚೇಹ ಚ ನಶ್ಯತಿ ॥೩೫॥

ಪ್ರಬಲನಾದ ಪುರುಷನಿಂದ ಆಕ್ರೋಶಕ್ಕೆ ಒಳಗಾದರೆ ಹೊಡೆಯಲ್ಪಟ್ಟರೆ ಬೈಯಲ್ಪಟ್ಟರೆ ಯಾವ ಉತ್ತಮಪುರುಷನಾದ ವಿದ್ವಾಂಸನು ಯಾವಾಗಲೂ ಕ್ರೋಧವನ್ನು ಜಯಿಸಿ ಅದನ್ನು ಸಹಿಸುತ್ತಾನೆಯೋ ಪ್ರಬಲನಾದ ಮನುಷ್ಯನಿಂದ ಹೆಚ್ಚು ತಾಪವುಂಟಾದರೂ ಅದನ್ನು ಸಹಿಸುತ್ತಾನೆಯೋ ಅವನಿಗೆ ಸನಾತನವಾದ ಲೋಕಗಳು ಉಂಟಾಗುತ್ತವೆ. ಕ್ರೋಧಶೀಲನಾದ ಮನುಷ್ಯನು ಅಲ್ಪಜ್ಞಾನವುಳ್ಳವನು ಅವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ನಾಶವನ್ನು ಹೊಂದುತ್ತಾನೆ.

ಅತ್ರಾಪ್ಯುದಾಹರಂತೀಮಾ ಗಾಥಾ ನಿತ್ಯಂ ಕ್ಷಮಾವತಾಮ್ ।
ಗೀತಾಃ ಕ್ಷಮಾವತಾ ಕೃಷ್ಣೇ ಕಾಶ್ಯಪೇನ ಮಹಾತ್ಮನಾ ॥೩೬॥

ಕೃಷ್ಣೆಯೇ! ಈ ವಿಷಯದಲ್ಲಿ ಎಂದರೆ ಕ್ಷಮೆಯುಳ್ಳವರ ವಿಷಯದಲ್ಲಿ ಮಹಾತ್ಮರಾದ ಕ್ಷಮಾಶೀಲರಾದ ಕಶ್ಯಪರು ಹಾಡಿದ ಗೀತೆಗಳನ್ನು ಜ್ಞಾನಿಗಳು ಹೇಳುತ್ತಾರೆ.

ಕ್ಷಮಾ ಧರ್ಮಃ ಕ್ಷಮಾ ಯಜ್ಞಃ ಕ್ಷಮಾ ವೇದಾಃ ಕ್ಷಮಾ ಶ್ರುತಮ್ ।
ಯಸ್ತಮೇವಂ ವಿಜಾನಾತಿ ಸ ಸರ್ವಂ ಕ್ಷಂತುಮರ್ಹತಿ ॥೩೭॥

ಕ್ಷಮೆಯೇ ಧರ್ಮ. ಕ್ಷಮೆಯೇ ಯಜ್ಞ. ಕ್ಷಮೆಯೇ ವೇದಗಳು. ಕ್ಷಮೆಯೇ ವಿದ್ಯೆ. ಯಾವನು ಹೀಗೆ ತಿಳಿಯುತ್ತಾನೆಯೋ ಅವನು ಎಲ್ಲವನ್ನು ಕ್ಷಮಿಸುತ್ತಾನೆ.

ಕ್ಷಮಾ ಬ್ರಹ್ಮ ಕ್ಷಮಾ ಸತ್ಯಂ ಕ್ಷಮಾ ಭೂತಂ ಚ ಭಾವಿ ಚ ।
ಕ್ಷಮಾ ತಪಃ ಕ್ಷಮಾ ಶೌಚಂ ಕ್ಷಮಯಾ ಚೋದ್ಧೃತಂ ಜಗತ್ ॥೩೮॥

ಕ್ಷಮೆಯೇ ಬ್ರಹ್ಮ. ಕ್ಷಮೆಯೇ ಸತ್ಯ. ಕ್ಷಮೆಯೇ ಭೂತ ಮತ್ತು ಭವಿಷ್ಯತ್‌ಗಳು. ಕ್ಷಮೆಯೇ ತಪಸ್ಸು. ಕ್ಷಮೆಯೇ ಶೌಚ. ಕ್ಷಮೆಯಿಂದಲೇ ಜಗತ್ತು ಉದ್ಧಾರವನ್ನು ಹೊಂದುತ್ತದೆ.

ಅತಿ ಯಜ್ಞವಿದಾಂ ಲೋಕಾನ್ ಕ್ಷಮಿಣಃ ಪ್ರಾಪ್ನುವಂತಿ ವೈ ।
ಅತಿ ಬ್ರಹ್ಮವಿದಾಂ ಲೋಕಾನ್ ಅತಿ ಚಾಪಿ ತಪಸ್ವಿನಾಮ್ ॥೩೯॥

ಯಜ್ಞವನ್ನು ಮಾಡಿ ಸಂಪಾದಿಸಿದ ಲೋಕಗಳಿಗಿಂತಲೂ ಉತ್ತಮ ಲೋಕಗಳನ್ನು ಕ್ಷಮಾವಂತರು ಪಡೆಯುತ್ತಾರೆ. ಬ್ರಹ್ಮಜ್ಞಾನಿಗಳು ಸಂಪಾದಿಸುವ ಲೋಕಗಳಿಗಿಂತಲೂ ಮತ್ತು ತಪಸ್ವಿಗಳು ಸಂಪಾದಿಸುವ ಲೋಕಕ್ಕಿಂತಲೂ ಉತ್ತಮವಾದ ಲೋಕಗಳನ್ನು ಕ್ಷಮಾವಂತರು ಪಡೆಯುತ್ತಾರೆ.

ಕ್ಷಮಾ ತೇಜಸ್ವಿನಾಂ ತೇಜಃ ಕ್ಷಮಾ ಬ್ರಹ್ಮ ತಪಸ್ವಿನಾಮ್ ।
ಕ್ಷಮಾ ಸತ್ಯಂ ಸತ್ಯವತಾಂ ಕ್ಷಮಾ ದಾನಂ ಕ್ಷಮಾ ಯಶಃ ॥೪೦॥

ಕ್ಷಮೆಯೇ ತೇಜಸ್ವಿಗಳ ತೇಜಸ್ಸು. ಕ್ಷಮೆಯೇ ತಪಸ್ವಿಗಳ ಬ್ರಹ್ಮ. ಕ್ಷಮೆಯೇ ಸತ್ಯವುಳ್ಳವರ ಸತ್ಯ. ಕ್ಷಮೆಯೇ ದಾನ. ಕ್ಷಮೆಯೇ ಕೀರ್ತಿ.

ತಾಂ ಕ್ಷಮಾಮೀದೃಶೀಂ ಕೃಷ್ಣೇ ಕಥಮಸ್ಮದ್ವಿಧಸ್ತ್ಯಜೇತ್ ।
ಯತ್ರ ಬ್ರಹ್ಮ ಚ ಸತ್ಯಂ ಚ ಯಜ್ಞಾ ಲೋಕಾಃ ಪ್ರತಿಷ್ಠಿತಾಃ ।
ಅನ್ಯೇ ಚ ಯಜ್ವನಾಂ ಲೋಕಾಃ ಕ್ಷಮಿಣಾಮಪರೇ ತಥಾ ॥೪೧॥

ಎಲೌ ಕೃಷ್ಣೆಯೇ! ಯಾವ ಕ್ಷಮೆಯಲ್ಲಿ ಬ್ರಹ್ಮನೂ ಸತ್ಯವೂ ಯಜ್ಞಗಳೂ ಲೋಕಗಳೂ ಪ್ರತಿಷ್ಠಿತವಾಗಿವೆಯೋ ಅಂತಹ ಕ್ಷಮೆಯನ್ನು ನನ್ನಂತಹವನು ಹೇಗೆ ತ್ಯಜಿಸಲು ಸಾಧ್ಯ? ಯಾಗವನ್ನು ಮಾಡಿದವರಿಗೆ ದೊರೆಯುವ ಲೋಕಗಳೇ ಬೇರೆ. ಕ್ಷಮಾವಂತರಿಗೆ ದೊರೆಯುವ ಲೋಕಗಳೇ ಬೇರೆ.

ಕ್ಷಂತವ್ಯಮೇವ ಸತತಂ ಪುರುಷೇಣ ವಿಜಾನತಾ ।
ಯದಾ ಹಿ ಕ್ಷಮತೇ ಸರ್ವಂ ಬ್ರಹ್ಮ ಸಂಪದ್ಯತೇ ತದಾ ॥೪೨॥

ಜ್ಞಾನವುಳ್ಳ ಪುರುಷನು ಯಾವಾಗಲೂ ಕ್ಷಮೆಯನ್ನೇ ಹೊಂದಿರಬೇಕು. ಯಾವಾಗ ಎಲ್ಲವನ್ನು ಕ್ಷಮಿಸುತ್ತಾನೋ ಆಗ ಬ್ರಹ್ಮನನ್ನು ಹೊಂದುತ್ತಾನೆ.

ಕ್ಷಮಾವತಾಮಯಂ ಲೋಕಃ ಪರಶ್ಚೈವ ಕ್ಷಮಾವತಾಮ್ ।
ಇಹ ಸನ್ಮಾನಮೃಚ್ಛಂತಿ ಪರತ್ರ ಚ ಪರಾಂ ಗತಿಮ್ ॥೪೩॥

ಕ್ಷಮಾವಂತರಿಗೇ ಈ ಲೋಕ. ಕ್ಷಮಾವಂತರಿಗೇ ಪರಲೋಕ. ಕ್ಷಮಾವಂತರು ಈ ಲೋಕದಲ್ಲಿ ಸನ್ಮಾನವನ್ನು ಪಡೆಯುತ್ತಾರೆ. ಪರಲೋಕದಲ್ಲಿ ಶ್ರೇಷ್ಠವಾದ ಗತಿಯನ್ನು ಪಡೆಯುತ್ತಾರೆ.

ಯೇಷಾಂ ಮನ್ಯುರ್ಮನುಷ್ಯಾಣಾಂ ಕ್ಷಮಯಾऽಭಿಹತಃ ಸದಾ ।
ತೇಷಾಂ ಪರತರೋ ಲೋಕಸ್ತಸ್ಮಾತ್ ಕ್ಷಾಂತಿಃ ಪರಾ ಮತಾ ॥೪೪॥

ಯಾವ ಮನುಷ್ಯರಿಗೆ ಯಾವಾಗಲೂ ಕ್ಷಮೆಯು ಕೋಪವನ್ನು ನಾಶಮಾಡುತ್ತದೆಯೋ ಅವರಿಗೆ ಇನ್ನೂ ಶ್ರೇಷ್ಠತರವಾದ ಲೋಕಗಳು ದೊರೆಯುತ್ತವೆ. ಆದ್ದರಿಂದ ಕ್ಷಮೆಯೇ ಸರ್ವೋತ್ತಮವಾದುದು ಎಂದು ನನ್ನ ಅಭಿಪ್ರಾಯ.

ಇತಿ ಗೀತಾಃ ಕಾಶ್ಯಪೇನ ಗಾಥಾ ನಿತ್ಯಂ ಕ್ಷಮಾವತಾಮ್ ।
ಶ್ರುತ್ವಾ ಗಾಥಾಃ ಕ್ಷಮಾಯಾಸ್ತ್ವಂ ತುಷ್ಯ ದ್ರೌಪದಿ ಮಾ ಕ್ರುಧಃ ॥೪೫॥

ಹೀಗೆ ಕಾಶ್ಯಪರು ನಿತ್ಯವೂ ಕ್ಷಮಾವಂತರ ವಿಷಯದಲ್ಲಿ ಗಾದೆಗಳನ್ನು ಹಾಡಿದ್ದಾರೆ. ಆ ಕ್ಷಮೆಯ ವಿಷಯದ ಗಾನವನ್ನು ಕೇಳಿ ನೀನು ಸಂತುಷ್ಟಳಾಗು. ದ್ರೌಪದಿಯೇ, ಕ್ರೋಧವನ್ನು ಮಾಡಬೇಡ.

ಪಿತಾಮಹಃ ಶಾಂತನವಃ ಶಮಂ ಸಂಪೂಜಯಿಷ್ಯತಿ ।
ಕೃಷ್ಣಶ್ಚ ದೇವಕೀಪುತ್ರಃ ಶಮಂ ಸಂಪೂಜಯಿಷ್ಯತಿ ॥೪೬॥

ಪಿತಾಮಹರಾದ ಭೀಷ್ಮರು ಶಾಂತಿಯನ್ನು ಸಮ್ಮಾನಿಸುತ್ತಾರೆ. ದೇವಕೀಪುತ್ರನಾದ ಕೃಷ್ಣನೂ ಶಾಂತಿಯನ್ನು ಸಮ್ಮಾನಿಸುತ್ತಾನೆ.

ಆಚಾರ್ಯೋ ವಿದುರಶ್ಚೈವ ಸರ್ವೇ ವೃದ್ಧಾಸ್ತಥೈವ ಚ ।
ಕೃಪಶ್ಚ ಸಂಜಯಶ್ಚೈವ ಶಮಮೇವ ಪ್ರಶಂಸತಃ ॥೪೭॥

ಆಚಾರ್ಯದ್ರೋಣರೂ ವಿದುರನೂ ಎಲ್ಲಾ ಹಿರಿಯರೂ ಕೃಪರೂ ಮತ್ತು ಸಂಜಯನೂ ಶಾಂತಿಯನ್ನೇ ಪ್ರಶಂಸಿಸುತ್ತಾರೆ.

ಸೋಮದತ್ತೋ ಯುಯುತ್ಸುಶ್ಚ ದ್ರೋಣಪುತ್ರಸ್ತಥೈವ ಚ ।
ಪಿತಾಮಹಶ್ಚ ನೋ ವ್ಯಾಸಃ ಶಮಂ ವದತಿ ನಿತ್ಯಶಃ ॥೪೮॥

ಸೋಮದತ್ತನೂ ಯುಯುತ್ಸುವೂ ದ್ರೋಣಪುತ್ರರಾದ ಅಶ್ವತ್ಥಾಮರೂ ನಮ್ಮ ಪಿತಾಮಹರಾದ ವ್ಯಾಸರೂ ನಿತ್ಯವೂ ಶಾಂತಿಯನ್ನೇ ಉಪದೇಶಮಾಡುತ್ತಾರೆ.

ಏತೈರ್ಹಿ ರಾಜಾ ನಿಯತಂ ಚೋದ್ಯಮಾನಃ ಶಮಂ ಪ್ರತಿ ।
ಆದಾಸ್ಯಾಮೀತಿ ಮೇ ಬುದ್ಧಿರ್ನ ಚ ಲೋಭಾನ್ನಶಿಷ್ಯತಿ ॥೪೯॥

ಕಾಶ್ಯಪರು ಹಾಡಿದ ಈ ಹಾಡಿನಿಂದ ಪ್ರೇರಿತವಾದ ನಾನು ಶಾಂತಿಯನ್ನೇ ಹೊಂದುತ್ತೇನೆ ಕ್ರೋಧವನ್ನಲ್ಲ ಎಂದು ಬುದ್ಧಿಯು ಉಂಟಾಗಿರುತ್ತದೆ. ಈ ನನ್ನ ಬುದ್ಧಿಯಾದರೂ ರಾಜ್ಯಲೋಭದಿಂದ ನಾಶಹೊಂದುವುದಿಲ್ಲ.

ಕಾಲೋಽಯಂ ದಾರುಣಃ ಪ್ರಾಪ್ತೋ ಭರತಾನಾಮಭೂತಯೇ ।
ನಿಶ್ಚಿತಂ ಮೇ ಸದೈವೈತತ್ ಪುರಸ್ತಾದಪಿ ಭಾಮಿನಿ ॥೫೦॥

ಭರತರ ವಿನಾಶಕ್ಕಾಗಿ ಇಂತಹ ದಾರುಣವಾದ ಕಾಲವು ಪ್ರಾಪ್ತವಾಗಿದೆ. ಎಲೌ ಭಾಮಿನಿಯೇ, ನಾನು ಇದನ್ನು ಮೊದಲೇ ನಿಶ್ಚಿಯಿಸಿದ್ದೇನೆ.

ಕ್ಷಯಃ ಸರ್ವಸ್ಯ ಲೋಕಸ್ಯ ಪೃಥಿವ್ಯಾಮಿತಿ ಮೇ ಮತಿಃ ।
ತತ್ರ ಪಾರ್ಥೋ ಧನುಷ್ಪಾಣಿರ್ಭೀಮಃ ಕೃಷ್ಣಶ್ಚ ವೀರ್ಯವಾನ್ ।
ಭೀಷ್ಮೋ ದ್ರೋಣಶ್ಚ ಕರ್ಣಶ್ಚ ಕಿಂ ಶೇಷಂ ತತ್ರ ಪಶ್ಯಸಿ ॥೫೧॥

ಭೂಮಿಯಲ್ಲಿ ಎಲ್ಲಾ ಜನರ ನಾಶವು ಉಂಟಾಗುತ್ತದೆ ಎಂದು ನನ್ನ ಅಭಿಪ್ರಾಯ. ಅಲ್ಲಿ ಧನುಸ್ಸನ್ನು ಹಿಡಿದ ಪಾರ್ಥನಿದ್ದಾನೆ. ಭೀಮನಿದ್ದಾನೆ. ಮಹಾಸಾಮರ್ಥ್ಯೋಪೇತನಾದ ಕೃಷ್ಣನಿದ್ದಾನೆ. ಭೀಷ್ಮ ದ್ರೋಣ ಕರ್ಣರು ಇದ್ದಾರೆ. ಹೀಗಿರುವಾಗ ಏನು ಉಳಿಯುವುದೆಂದು ನೀನು ಭಾವಿಸುತ್ತೀಯೆ?

ಸುಯೋಧನೋ ನಾರ್ಹತೀತಿ ಕ್ಷಮಾ ಮಾಮೇವ ವಿಂದತಿ ।
ಅರ್ಹಸ್ತಸ್ಯಾಹಮಿತ್ಯೇವಂ ತಸ್ಮಾನ್ಮಾಂ ವಿಂದತೇ ಕ್ಷಮಾ ॥೫೨॥

ಸುಯೋಧನನು ತಮ್ಮನಾದುದರಿಂದ ರಾಜ್ಯಕ್ಕೆ ಅರ್ಹನಲ್ಲವೆಂಬಕಾರಣದಿಂದ ಅವನನ್ನು ಕ್ಷಮೆಯು ವರಿಸುವುದಿಲ್ಲ. ನಾನೇ ಆ ಕ್ಷಮೆಗೆ ಯೋಗ್ಯನೆಂದು ತಿಳಿದು ಕ್ಷಮೆಯು ನನ್ನನ್ನೇ ವರಿಸುತ್ತದೆ. (ಪ್ರಾಪ್ತವಾಗುತ್ತದೆ)

ಏತದಾತ್ಮವತಾಂ ವೃತ್ತಮೇಷ ಧರ್ಮಃ ಸನಾತನಃ ।
ಕ್ಷಮಾ ಚೈವಾನೃಶಂಸ್ಯಂ ಚ ತತ್ಕರ್ತಾ ಹ್ಯಹಮಂಜಸಾ ॥೫೩॥

ಕ್ಷಮಾ ಮತ್ತು ಮಾರ್ದವ ಇದು ಮನೋನಿಗ್ರಹವುಳ್ಳವರ ನಡೆವಳಿಕೆ. ಇದು ಸನಾತನವಾದ ಧರ್ಮ. ನಾನು ಇದನ್ನೇ ಚೆನ್ನಾಗಿ ಮಾಡುವವನಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಡ್‌ಪಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

## ಇಪ್ಪತ್ತೇಳನೆಯ ಅಧ್ಯಾಯ

(ಯುಧಿಷ್ಠಿರನನ್ನು ಕುರಿತು ಪೌರುಷಕ್ಕಿಂತಲೂ ವಿಧಿಯೇ ಪ್ರಬಲವೆಂದು ದ್ರೌಪದಿಯ ಸಮರ್ಥನೆ)

### ದ್ರೌಪದೀ

ನಮೋ ಧಾತ್ರೇ ವಿಧಾತ್ರೇ ಚ ಯೌ ಮೋಹಂ ಚಕ್ರತುಸ್ತವ ।
ಪಿತೃಪೈತಾಮಹೇ ರಾಜ್ಯೇ ವೋಢವ್ಯೇ ತೇಽನ್ಯಥಾ ಮತಿಃ ॥೧॥

ನಿನಗೆ ಮೋಹವನ್ನುಂಟುಮಾಡಿದ ಸೃಷ್ಟಿಕರ್ತನಾದ ಬ್ರಹ್ಮನಿಗೂ ಪಾಲನಕರ್ತನಾದ ವಿಷ್ಣುವಿಗೂ ನಮಸ್ಕಾರ. ಪಿತೃಪಿತಾಮಹರಿಂದ ಬಂದ ರಾಜ್ಯದಭಾರವನ್ನು ಹೊರುವ ಸಮಯದಲ್ಲಿ ನಿನ್ನ ಬುದ್ಧಿಯು ಬೇರೆರೀತಿಯಾಗಿದೆ.

ನೇಹ ಧರ್ಮಾನೃಶಂಸ್ಯಾಭ್ಯಾಂ ನ ಕ್ಷಾಂತ್ಯಾ ನಾರ್ಜವೇನ ಚ ।
ಪುರುಷಃ ಶ್ರಿಯಮಾಪ್ನೋತಿ ನಿರ್ಘೃಣತ್ವೇನ ಕರ್ಹಿಚಿತ್ ॥೨॥

ಪುರುಷನು ಇಲ್ಲಿ ಧರ್ಮಮಾರ್ದವಗಳಿಂದಲಾಗಲೀ ಕ್ಷಮೆಯಿಂದಲಾಗಲೀ ಆರ್ಜವದಿಂದಲಾಗಲೀ ಅಥವಾ ಕ್ರೌರ್ಯದಿಂದಲಾಗಲೀ ಯಾವ ಬಗೆಯಲ್ಲಿಯೂ ಸಂಪತ್ತನ್ನು ಪಡೆಯುವುದಿಲ್ಲ.

ತ್ವಾಂ ಚೇದ್ವ್ಯಸನಮಭ್ಯಾಗಾದಿದಂ ಭಾರತ ದುಃಸಹಮ್ ।
ಸ ತ್ವಂ ನಾರ್ಹಸಿ ನಾಪೀಮೇ ಭ್ರಾತರಸ್ತೇ ಮಹೌಜಸಃ ॥೩॥

ಎಲೈ ಭಾರತನೇ! ಯಾವ ವ್ಯಸನವು ದುಃಸಹವಾಗಿ ನಿನಗೆ ಬಂದಿದೆಯೋ ಆ ವ್ಯಸನಕ್ಕೆ ನೀನು ಅರ್ಹನಲ್ಲ. ಅಥವಾ ಪರಾಕ್ರಮಶಾಲಿಗಳಾದ ನಿನ್ನ ತಮ್ಮಂದಿರೂ ಅರ್ಹರಲ್ಲ.

ನ ಚ ತೇಽಧ್ಯಗಮನ್ ಜಾತು ತದಾನೀಂ ನಾದ್ಯ ಭಾರತ ।
ಧರ್ಮಾತ್ ಪ್ರಿಯತರಂ ಕಿಂಚಿತ್ ಪ್ರಿಯಾತ್ ತೇ ಜೀವಿತಾದಪಿ ॥೪॥

ಎಲೈ ಭಾರತನೇ! ಅವರು ಆಗಾಗಲೀ ಅಥವಾ ಈಗಾಗಲೀ ತಮ್ಮ ಜೀವಿತಕ್ಕಿಂತ ಪ್ರಿಯವಾದ ಧರ್ಮಕ್ಕಿಂತ ಹೆಚ್ಚು ಪ್ರಿಯವಾದ ಯಾವ ವಸ್ತುವನ್ನೂ ಕಾಣಲಿಲ್ಲ.

ಧರ್ಮಾರ್ಥಂ ಜೀವನಂ ಸರ್ವಂ ಧರ್ಮಾರ್ಥಂ ರಾಜ್ಯಮೇವ ತೇ ।
ಬ್ರಾಹ್ಮಣಾ ಗುರವಶ್ಚೈವ ಜಾನಂತ್ಯಪಿ ಚ ದೇವತಾಃ ॥೫॥

ನಿಮ್ಮ ಜೀವನ ಧರ್ಮಾರ್ಥವಾಗಿಯೇ ಇದೆ. ನಿಮ್ಮ ರಾಜ್ಯವು ಧರ್ಮಾರ್ಥವಾಗಿಯೇ ಇದೆ. ಇದನ್ನು ಬ್ರಾಹ್ಮಣರು ಗುರುಗಳು ಮತ್ತು ದೇವತೆಗಳು ತಿಳಿದಿದ್ದಾರೆ.

ಭೀಮಸೇನಾರ್ಜುನೌ ಚೇಮೌ ಮಾದ್ರೇಯೌ ಚ ಮಯಾ ಸಹ ।
ತ್ಯಜೇಸ್ತ್ವಮಿತಿ ಮೇ ಬುದ್ಧಿರ್ನತು ಧರ್ಮಂ ಪರಿತ್ಯಜೇಃ ॥೬॥

ನೀನು ಭೀಮಾರ್ಜುನರನ್ನೂ ನಕುಲಸಹದೇವರನ್ನೂ ಮತ್ತು ನನ್ನನ್ನೂ ಬೇಕಾದರೆ ಪರಿತ್ಯಾಗಮಾಡಬಹುದು. ಆದರೆ ಧರ್ಮವನ್ನು ಎಂದೂ ಪರಿತ್ಯಾಗಮಾಡಲಾರೆ ಎಂದು ನನ್ನ ಅಭಿಪ್ರಾಯ.

ರಾಜಾನಂ ಧರ್ಮಗೋಪ್ತಾರಂ ಧರ್ಮೋ ರಕ್ಷತಿ ರಕ್ಷಿತಃ ।
ಇತಿ ಮೇ ಶ್ರುತಮಾರ್ಯಾಣಾಂ ತ್ವಾಂ ತು ಮನ್ಯೇ ನ ರಕ್ಷತಿ ॥೭॥

ಧರ್ಮವನ್ನು ರಕ್ಷಿಸುವ ರಾಜನನ್ನು ರಕ್ಷಿಸಲ್ಪಟ್ಟ ಧರ್ಮವು ರಕ್ಷಿಸುತ್ತದೆಂದು ನಾನು ದೊಡ್ಡವರಿಂದ ಕೇಳಿದ್ದೇನೆ ಆದರೆ ನಿನ್ನನ್ನು ಮಾತ್ರ ಧರ್ಮವು ರಕ್ಷಿಸುವುದಿಲ್ಲ ಎಂದು ತಿಳಿದಿದ್ದೇನೆ.

ತ್ಯಕ್ತ್ವಾನ್ಯಾನ್ ಹಿ ನರವ್ಯಾಘ್ರ ನಿತ್ಯದಾ ಧರ್ಮ ಏವ ತೇ ।
ಬುದ್ಧಿಃ ಸತತಮನ್ವೇತಿ ಛಾಯೇವ ಪುರುಷಂ ನಿಜಾ ॥೮॥

ಎಲೈ ನರವ್ಯಾಘ್ರನೇ! ನಿನ್ನ ಬುದ್ಧಿಯು ತನ್ನ ಛಾಯೆಯು ಆ ಪುರುಷನನ್ನು ಹಿಂಬಾಲಿಸಿದಂತೆ ಉಳಿದ ಎಲ್ಲ ವಿಷಯಗಳನ್ನು ಬಿಟ್ಟು ಯಾವಾಗಲೂ ಧರ್ಮವನ್ನೇ ಹಿಂಬಾಲಿಸಿ ಹೋಗುತ್ತದೆ.

ನಾವಮಂಸ್ಥಾ ಹಿ ಸದೃಶಾನ್ ನಾವರಾನ್ ಶ್ರೇಯಸಃ ಕುತಃ ।
ಅವಾಪ್ಯ ಪೃಥಿವೀಂ ಕೃತ್ಸ್ನಾಂ ನ ತೇ ಶೃಂಗಮವರ್ಧತ ॥೯॥

ನಿನಗೆ ಸದೃಶರಾದವರನ್ನೂ ನಿನಗಿಂತ ಕಿರಿಯರನ್ನೂ ಮತ್ತು ನಿನಗಿಂತ ಶ್ರೇಷ್ಠರಾದವರನ್ನೂ ಅವಮಾನಮಾಡಬೇಡ. ಸಮಗ್ರವಾದ ಪೃಥ್ವಿಯನ್ನು ಗೆದ್ದರೂ ನಿನಗೆ ಯಾವ ಕೋಡೂ ಉಂಟಾಗಲಿಲ್ಲ. (ಆದ್ದರಿಂದ ಐಶ್ವರ್ಯವು ಬಂದರೂ ಧರ್ಮವನ್ನೇ ಆಚರಿಸು ಎಂದು ಅಭಿಪ್ರಾಯ.)

ಸ್ವಾಹಾಕಾರೈಃ ಸ್ವಧಾಭಿಶ್ಚ ಪೂಜಾಭಿರಪಿ ಚ ದ್ವಿಜಾನ್ ।
ದೇವತಾಶ್ಚ ಪಿತೄಂಶ್ಚೈವ ಸತತಂ ಪಾರ್ಥ ಸೇವಸೇ ॥೧೦॥

ಎಲೈ ಪಾರ್ಥನೇ! ನೀನು ಯಾವಾಗಲೂ ಬ್ರಾಹ್ಮಣರನ್ನು ಪೂಜಾದಿಗಳಿಂದಲೂ ದೇವತೆಗಳನ್ನು ಸ್ವಾಹಾಕಾರಗಳಿಂದಲೂ ಪಿತೃಗಳನ್ನು ಸ್ವಧಾಕಾರಗಳಿಂದಲೂ ಸೇವಿಸುತ್ತೀಯೆ.

ಬ್ರಾಹ್ಮಣಾಃ ಸರ್ವಕಾಮಾಂಸ್ತೇ ಸತತಂ ಭುಂಜತೇ ಗೃಹೇ ।
ಯತಯೋ ವಾನಪ್ರಸ್ಥಾಶ್ಚ ಗೃಹಸ್ಥಾಶ್ಚೈವ ಭಾರತ ॥೧೧॥

ಎಲೈ ಭಾರತನೇ! ನಿನ್ನ ಮನೆಯಲ್ಲಿ ಯತಿಗಳೂ ವಾನಪ್ರಸ್ಥರೂ ಮತ್ತು ಗೃಹಸ್ಥರೂ ಆದ ಬ್ರಾಹ್ಮಣರು ಸರ್ವಕಾಮಗಳನ್ನು ಸತತವಾಗಿ ಭುಂಜಿಸುತ್ತಾರೆ.

ಆರಣ್ಯಕೇಭ್ಯೋ ವನ್ಯಾನಿ ಭೋಜನಾನಿ ಪ್ರಯಚ್ಛಸಿ ।
ನಾದೇಯಂ ಬ್ರಾಹ್ಮಣೇಭ್ಯಸ್ತೇ ಗೃಹೇ ಕಿಂಚಿನ್ನ ವಿದ್ಯತೇ ॥೧೨॥

ಅರಣ್ಯವಾಸಿಗಳಾದ ಬ್ರಾಹ್ಮಣರಿಗೆ ನೀನು ವನದಲ್ಲಿ ಲಭ್ಯವಾಗುವ ಭೋಜನವನ್ನು ಕೊಡುತ್ತೀಯೆ. ನಿನ್ನ ಮನೆಯಲ್ಲಿ ಬ್ರಾಹ್ಮಣರಿಗೆ ಕೊಡಲಾಗದ ಯಾವ ವಸ್ತುವೂ ಇಲ್ಲ.

ಯದಿದಂ ವೈಶ್ವದೇವಾಂತೇ ಸಾಯಂಪ್ರಾತಃ ಪ್ರದೀಯತೇ ।
ತದ್ ದತ್ತ್ವಾ ಽತಿಥಿಭೃತ್ಯೇಭ್ಯೋ ರಾಜನ್ ಶೇಷೇಣ ಜೀವಸಿ ॥೧೩॥

ಸಾಯಂಕಾಲ ಮತ್ತು ಪ್ರಾತಃಕಾಲದಲ್ಲಿ ವೈಶ್ವದೇವದ ಅನಂತರ ಅತಿಥಿ ಭೃತ್ಯರಿಗೆ ಕೊಡಬೇಕಾದ ಅನ್ನವನ್ನು ಕೊಟ್ಟು; ಎಲೈರಾಜನೇ, ಶೇಷಾನ್ನದಿಂದ ನೀನು ಜೀವಿಸುತ್ತೀಯೆ.

ಇಷ್ಟಯಃ ಪಶುಬಂಧಾಶ್ಚ ಕಾಮ್ಯನೈಮಿತ್ತಿಕಾಶ್ಚ ಯೇ ।
ವರ್ತಂತೇ ಪಾಕಯಜ್ಞಾಶ್ಚ ಸದಾ ಯಜ್ಞಾಶ್ಚ ತೇಽನಘ ॥೧೪॥

ಎಲೈ ದೋಷರಹಿತನೇ! ನಿನ್ನ ಇಷ್ಟಿಗಳು ಪಶುಯಾಗಗಳು ಕಾಮ್ಯನೈಮಿತ್ತಿಕ ಕರ್ಮಗಳು ಪಾಕಯಜ್ಞಗಳು ಮತ್ತು ಉಳಿದ ಯಜ್ಞಗಳು ಸದಾ ನಡೆಯುತ್ತಿವೆ.

ಅಸ್ಮಿನ್ನಪಿ ಮಹಾರಣ್ಯೇ ವಿಜನೇ ದಸ್ಯುಸೇವಿತೇ ।
ರಾಷ್ಟ್ರಾದಪೇತ್ಯ ವಸತೋ ಧರ್ಮಸ್ತೇ ನಾವಸೀದತಿ ॥೧೫॥

ರಾಷ್ಟ್ರವನ್ನು ಕಳೆದುಕೊಂಡು ದಸ್ಯುಸೇವಿತವಾದ ಈ ನಿರ್ಜನವಾದ ಮಹಾರಣ್ಯದಲ್ಲಿ ವಾಸಮಾಡುತ್ತಿದ್ದರೂ ಕೂಡ ನಿನ್ನ ಧರ್ಮವು ನಾಶವನ್ನು ಹೊಂದಿಲ್ಲ.

ಅಶ್ವಮೇಧೋ ರಾಜಸೂಯಃ ಪುಂಡರೀಕೋಽಥ ಗೋಸವಃ ।
ಇಷ್ಟಾಸ್ತ್ವಯಾ ಮಹಾಯಜ್ಞಾ ಬಹವೋಽನ್ಯೇ ಸದಕ್ಷಿಣಾಃ ॥೧೬॥

ಅಶ್ವಮೇಧ ರಾಜಸೂಯ ಪುಂಡರೀಕ ಗೋಸವ ಇಂತಹ ಮಹಾಯಜ್ಞಗಳೂ ಇನ್ನೂ ಅನೇಕ ಮಹಾಯಜ್ಞಗಳೂ ದಕ್ಷಿಣಾಪೂರ್ವಕವಾಗಿ ನಿನ್ನಿಂದ ಮಾಡಲ್ಪಟ್ಟಿವೆ.

ರಾಜನ್ ಪರೀತಯಾ ಬುದ್ಧ್ಯಾ ವಿಷಮಾಕ್ಷಪರಾಜಯೇ ।
ಪಾರ್ಥ ಮಿತ್ರಾಣಿ ಗಾಶ್ಚೈವ ವಸೂನಿ ಚ ಪರಾಜಿತಃ ।
ರಾಜ್ಯಂ ಪಶೂನಾಯುಧಾನಿ ಭ್ರಾತೄನ್ ಮಾಂ ಚಾಪಿ ನಿರ್ಜಿತಃ ॥೧೭॥

ಎಲೈ ರಾಜನೇ! ವಿಪರೀತವಾದ ಬುದ್ಧಿಯನ್ನುಹೊಂದಿ ವಿಷಮವಾದ ಅಕ್ಷದ್ಯೂತದಲ್ಲಿ ಪರಾಜಯವನ್ನು ಹೊಂದಿ ನೀನು ಮಿತ್ರರನ್ನೂ ಗೋವುಗಳ ಸಂಪತ್ತನ್ನೂ ಕಳೆದುಕೊಂಡಿದ್ದೀಯೆ. ರಾಜ್ಯವನ್ನೂ ಪಶುಗಳನ್ನೂ ಆಯುಧಗಳನ್ನೂ ತಮ್ಮಂದಿರನ್ನು ಮತ್ತು ನನ್ನನ್ನೂ ಪಣಕ್ಕೊಡ್ಡಿ ಪರಾಜಿತನಾಗಿದ್ದೀಯೆ.

ಋಜೋರ್ಮೃದೋರ್ವದಾನ್ಯಸ್ಯ ಹ್ರೀಮತಃ ಸತ್ಯವಾದಿನಃ ।
ಕಥಮಕ್ಷವ್ಯಸನಜಾ ಬುದ್ಧಿರಾಪತಿತಾ ತವ ॥೧೮॥

ಋಜುಸ್ವಭಾವವುಳ್ಳ ಮೃದುವೂ ಪ್ರಿಯಭಾಷಿಯೂ ವಿನಯಶೀಲನೂ ಸತ್ಯವಾದಿಯೂ ಆದ ನಿನಗೆ ಈ ಅಕ್ಷದ್ಯೂತ ವ್ಯಸನದ ಬುದ್ಧಿಯು ಹೇಗೆ ಉಂಟಾಯಿತು?

ಅತೀವ ಮೋಹ ಆಯಾತಿ ಮನಶ್ಚ ಪರಿದೂಯತೇ ।
ನಿಶಾಮ್ಯ ವ್ಯಸನಂ ಪಾರ್ಥ ತವೇದಮತಿದುಃಸಹಮ್ ॥೧೯॥

ಎಲೈ ಪಾರ್ಥನೇ! ನಿನ್ನ ಅತಿದುಃಸಹವಾದ ಈ ವ್ಯಸನವನ್ನು ನೋಡಿ ನನ್ನ ಮನಸ್ಸು ದುಃಖಪಡುತ್ತಿದೆ. ನನಗೆ ಮೋಹ ಉಂಟಾಗುತ್ತಿದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಈಶ್ವರಸ್ಯ ವಶೇ ಲೋಕಃ ತಿಷ್ಠತೇ ನಾತ್ಮನೋ ಯಥಾ ॥೨೦॥

ಜಗತ್ತು ಈಶ್ವರನ ವಶದಲ್ಲಿದೆ ನಮ್ಮ ವಶದಲ್ಲಿ ಇಲ್ಲ ಎಂಬ ವಿಷಯದಲ್ಲಿ ಜ್ಞಾನಿಗಳು ಪುರಾತನವಾದ ಈ ಒಂದು ಇತಿಹಾಸವನ್ನು ಹೇಳುತ್ತಾರೆ.

ಧಾತೈವ ಖಲು ಭೂತಾನಾಂ ಸುಖದುಃಖೇ ಪ್ರಿಯಾಪ್ರಿಯೇ ।
ದದಾತಿ ಸರ್ವಮೀಶಾನಃ ಪುರಸ್ತಾಚ್ಛುಕ್ರಮುಚ್ಚರನ್ ॥೨೧॥

ಈಶಾನನಾದ ನಾರಾಯಣನು ಸೃಷ್ಟಿಗಿಂತ ಮೊದಲು ಶೋಕರಹಿತನಾಗಿ ಇದ್ದು ಅನಂತರ ಪ್ರಕಾಶವನ್ನು ಹೊಂದಿ ಸೂರ್ಯನಂತೆ ಎಲ್ಲ ಜೀವರಿಗೂ ಸುಖದುಃಖಗಳು ಪ್ರಿಯಾಪ್ರಿಯಗಳು ಈ ಎಲ್ಲವನ್ನೂ ಕೊಡುತ್ತಾನೆ.

ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರಸಮಾಹಿತಃ ।
ಇಂಗಯತ್ಯಂಗಮಂಗಾನಿ ತಥಾ ರಾಜನ್ನಿಮಾಃ ಪ್ರಜಾಃ ॥೨೨॥

ಹೇಗೆ ಅಲುಗಾಡದೆ ಸಮಾಧಾನದಿಂದ ಕುಳಿತ ಮನುಷ್ಯನು ಮರದಿಂದ ಮಾಡಿದ ಸ್ತ್ರೀಬೊಂಬೆಯನ್ನು ದಾರಗಳಿಂದ ಕುಣಿಸುತ್ತಾನೆಯೋ ಹಾಗೆ ಎಲೈ ರಾಜನೇ! ಈಶ್ವರನು ಎಲ್ಲಾ ಪ್ರಜೆಗಳನ್ನೂ ಕುಣಿಸುತ್ತಾನೆ.

ಆಕಾಶಾ ಇವ ಭೂತಾನಿ ವ್ಯಾಪ್ಯ ಸರ್ವಾಣಿ ಭಾರತ ।
ಈಶ್ವರೋ ವಿದಧಾತೀಹ ಕಲ್ಯಾಣಂ ಯಚ್ಚ ಪಾಪಕಮ್ ।
ಈಶ್ವರಸ್ಯ ವಶೇ ಲೋಕಾಸ್ತಿಷ್ಠಂತೇ ನಾತ್ಮನೋ ಯಥಾ ॥೨೩॥

ಶಕುನಿಸ್ತಂತುಬದ್ಧೋ ವಾ ನೀಯತೇऽಯಮನೀಶ್ವರಃ ।
ಈಶ್ವರಸ್ಯ ವಶೇ ತಿಷ್ಠನ್ನಾನ್ಯೇಷಾಮಾತ್ಮನಃ ಪ್ರಭುಃ ॥೨೪॥

ಎಲೈ ಭಾರತನೇ! ಆಕಾಶದಂತೆ ಎಲ್ಲ ಜೀವರಲ್ಲೂ ವ್ಯಾಪಿಸಿ ಈಶ್ವರನೇ ಜೀವರಿಗೆ ಕಲ್ಯಾಣವನ್ನಾಗಲೀ ಅಮಂಗಳವನ್ನಾಗಲೀ ವಿಧಾನಮಾಡುತ್ತಾನೆ. ಎಲ್ಲ ಲೋಕಗಳೂ ಈಶ್ವರನ ವಶವಾಗಿವೆ. ಅವರವರ ವಶದಲ್ಲಿ ಇಲ್ಲ. ಈ ಜೀವನು ಈಶ್ವರನ ವಶದಲ್ಲಿ ಇದ್ದು ಅಸ್ವತಂತ್ರನಾಗಿ ದಾರದಿಂದ ಕಟ್ಟಿದ ಪಕ್ಷಿಯಂತೆ ಎಳೆದೊಯ್ಯಲ್ಪಡುತ್ತಾನೆ.

ಮಣಿಃ ಸೂತ್ರ ಇವ ಪ್ರೋತೋ ನಸ್ಯೋತ ಇವ ಗೋವೃಷಃ ।
ಧಾತುರಾದೇಶಮನ್ವೇತಿ ತನ್ಮಯೋ ಹಿ ತದರ್ಪಿತಃ ॥೨೫॥

ಸೂತ್ರದಲ್ಲಿ ಪೋಣಿಸಿದ ಮಣಿಗಳಂತೆ ಮೂಗುದಾರವನ್ನು ಹಾಕಿದ ಎತ್ತಿನಂತೆ ಜೀವನು ನಾರಾಯಣನ ಆದೇಶವನ್ನು ಅನುಸರಿಸುತ್ತಾನೆ. ಜೀವನು ಈಶ್ವರನನ್ನೇ ಪ್ರಧಾನವಾಗಿ ಉಳ್ಳವನು ಮತ್ತು ಈಶ್ವರಾಧಾರನೂ ಆಗಿದ್ದಾನೆ.

ನಾತ್ಮಾಧೀನೋ ಮನುಷ್ಯೋಽಯಂ ಕಲ್ಯಂ ಭವತಿ ಕಶ್ಚನ ।
ಸ್ರೋತಸೋ ಮಧ್ಯಮಾಪನ್ನಃ ಕೂಲವೃಕ್ಷ ಇವ ಚ್ಯುತಃ ॥೨೬॥

ಪ್ರವಾಹದ ಮಧ್ಯದಲ್ಲಿ ಬಿದ್ದ ತೀರವೃಕ್ಷದಂತೆ ಮನುಷ್ಯನು ತನ್ನ ಪ್ರಯತ್ನದಿಂದ ಯಾವ ಕಲ್ಯಾಣವನ್ನೂ ಪಡೆಯುವುದಿಲ್ಲ.

ಅಜ್ಞೋ ಜಂತುರನೀಶೋಽಯಮಾತ್ಮನಃ ಸುಖದುಃಖಯೋಃ ।
ಈಶ್ವರಪ್ರೇರಿತೋ ಗಚ್ಛೇತ್ ಸ್ವರ್ಗಂ ನರಕಮೇವ ವಾ ॥೨೭॥

ಅಜ್ಞಾನಿಯಾದ ಈ ಜಂತುವು ತನ್ನ ಸುಖದುಃಖಗಳಿಗೆ ಎಂದೂ ಪ್ರಭುವಾಗಿರುವುದಿಲ್ಲ. ಈಶ್ವರಪ್ರೇರಿತನಾಗಿ ಸ್ವರ್ಗಕ್ಕಾಗಲೀ ಅಥವಾ ನರಕಕ್ಕಾಗಲೀ ಹೋಗುತ್ತಾನೆ.

ಯಥಾ ವಾಯೋಸ್ತೃಣಾಗ್ರಾಣಿ ವಶಂ ಯಾಂತಿ ಬಲೀಯಸಃ ।
ಧಾತುರೇವಂ ವಶಂ ಯಾಂತಿ ಸರ್ವಭೂತಾನಿ ಭಾರತ ॥೨೮॥

ಎಲೈ ಭಾರತನೇ! ಹುಲ್ಲಿನ ಚೂರುಗಳು ಪ್ರಬಲವಾದ ಗಾಳಿಗೆ ವಶವಾಗುವಂತೆ ಎಲ್ಲ ಜೀವರೂ ನಾರಾಯಣನ ವಶರಾಗುತ್ತಾರೆ.

ಆರ್ಯಕರ್ಮಣಿ ಯುಂಜಾನಃ ಪಾಪೇ ವಾ ಪುನರೀಶ್ವರಃ ।
ವ್ಯಾಪ್ಯ ಭೂತಾನಿ ಚರತೇ ನ ಚಾಯಮಿತಿ ಲಕ್ಷ್ಯತೇ ॥೨೯॥

ಈಶ್ವರನು ಜೀವರನ್ನು ವ್ಯಾಪಿಸಿ ಶ್ರೇಷ್ಠಕರ್ಮಗಳಲ್ಲಿ ಅಥವಾ ಪಾಪಕರ್ಮಗಳಲ್ಲಿ ತೊಡಗಿಸುತ್ತಾನೆ. ಆದರೆ ಯಾರಿಗೂ ತನ್ನನ್ನು ತೋರಿಸಿಕೊಳ್ಳುವುದಿಲ್ಲ.

ಹೇತುಮಾತ್ರಮಿದಂ ಧಾತುಃ ಶರೀರಂ ಕ್ಷೇತ್ರಸಂಜ್ಞಿತಮ್ ।
ಯೇನ ಕಾರಯತೇ ಕರ್ಮ ಶುಭಾಶುಭಫಲಂ ವಿಭುಃ ॥೩೦॥

ಸ್ವತಂತ್ರವಾಗಿ ಪ್ರೇರಿಸಿ ಕರ್ಮವನ್ನು ಮಾಡಿಸುವ ಈಶ್ವರನಿಗೆ ಕ್ಷೇತ್ರವೆಂದು ಕರೆಯಲ್ಪಡುವ ಈ ನಮ್ಮ ಶರೀರವು ನಿಮಿತ್ತಮಾತ್ರ. ವಿಭುವಾದ ನಾರಾಯಣನು ಅಂತಹ ಶರೀರಗಳಿಂದ ಕರ್ಮವನ್ನು ಮಾಡಿಸುತ್ತಾ ಶುಭಾಶುಭಫಲಗಳನ್ನು ಕೊಡುತ್ತಾನೆ.

ಪಶ್ಯ ಮಾಯಾಪ್ರಭಾವೋಽಯಮೀಶ್ವರೇಣ ಯಥಾ ಕೃತಃ ।
ಯೋ ಹಂತಿ ಭೂತೈರ್ಭೂತಾನಿ ಮೋಹಯಿತ್ವಾಽಽತ್ಮಮಾಯಯಾ ॥

ಈಶ್ವರನಿಂದ ಮಾಡಲ್ಪಟ್ಟ ಈ ಮಾಯಾಪ್ರಭಾವವನ್ನು ನೋಡು. ಅವನೇ ತನ್ನ ಮಾಯೆಯಿಂದ ಎಲ್ಲ ಜೀವರನ್ನೂ ಮೋಹಿಸಿ ಎಲ್ಲರನ್ನೂ ಸಂಹರಿಸುತ್ತಾನೆ.

ಅನ್ಯಥಾ ಪರಿದೃಷ್ಟಾನಿ ಮುನಿಭಿರ್ವೇದದರ್ಶಿಭಿಃ ।
ಅನ್ಯಥಾ ಪರಿವರ್ತಂತೇ ವೇಗಾ ಇವ ನಭಸ್ವತಃ ॥೩೨॥

ವೇದದ್ರಷ್ಟಾರರಾದ ಋಷಿಗಳು ಬೇರೆ ರೀತಿಯಲ್ಲಿ ಯೋಚಿಸಿದ ಒಂದು ಕಾರ್ಯವು ದಿಕ್ಕು ಬದಲಿಸುವ ವಾಯುವೇಗದಂತೆ ಬೇರೆ ರೀತಿಯೇ ಉಂಟಾಗುತ್ತದೆ.

ಅನ್ಯಥೈವ ಹ ವರ್ತಂತೇ ಪುರುಷಾಸ್ತಾನಿ ತಾನಿ ವೈ ।
ಅನ್ಯಥೈವ ಪ್ರಭುಸ್ತಾನಿ ಕರೋತಿ ವಿಕರೋತಿ ಚ ॥೩೩॥

ಪುರುಷರು ಅವರ ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು ಬೇರೆ ರೀತಿಯಾಗಿಯೇ ಇರುತ್ತವೆ. ಪ್ರಭುವಾದ ನಾರಾಯಣನು ಅವುಗಳನ್ನು ಬೇರೆ ರೀತಿಯಲ್ಲಿಯೇ ಮಾಡುತ್ತಾನೆ ಮತ್ತು ವಿಕಾರಗೊಳಿಸುತ್ತಾನೆ.

ಾ ಕಾಷ್ಠೇನ ವಾ ಕಾಷ್ಠಮಶ್ಮಾನಂ ವಾऽಶ್ಮನಾ ಪುನಃ ।
ಸಾ ಚಾಪ್ಯಯಶ್ಛಿಂದ್ಯಾನ್ನಿರ್ವಿಚೇಷ್ಟಮಚೇತನಮ್ ॥೩

ಽ ಸ ಭಗವಾನ್ ದೇವಃ ಸ್ವಯಂಭೂಃ ಪ್ರಪಿತಾಮಹಃ ।
ಃ ಭೂತೈರ್ಭೂತಾನಿ ಜನ್ಮ ಕೃತ್ವಾ ಯುಧಿಷ್ಠಿರ ॥೩

ಯುಧಿಷ್ಠಿರನೇ! ಚೇಷ್ಟಾರಹಿತವೂ ಅಚೇತನವೂ ಆದ ಕಾಷ್ಠವನ್ನು ಕಾಷ್ಠದಿ
ಲ್ಲಿನಿಂದ ಮತ್ತು ಕಬ್ಬಿಣವನ್ನು ಕಬ್ಬಿಣದಿಂದ ಛೇದಿಸಿದಂತೆ ಸ್ವತಂತ್ರನ
ನೂ ಜಗತ್ತಿಗೆ ಪ್ರಪಿತಾಮಹನೂ ಭಗವಂತನೂ ಆದ ನಾರಾಯಣದೇವ
ಗೆ ಜನ್ಮವನ್ನು ಕೊಟ್ಟು ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಯ
ನೆ.

ಯೋಜ್ಯ ವಿಯೋಜ್ಯೈವಂ ಕರ್ಮಕಾರಕರಃ ಪ್ರಭುಃ ।
ತೇ ಭಗವಾನ್ ಭೂತೈರ್ಬಾಲಃ ಕ್ರೀಡನಕೈರಿವ ॥೩೮

ರನ್ನು ಒಟ್ಟಿಗೆ ಸೇರಿಸಿ ಹೀಗೆ ವಿಯೋಗಗೊಳಿಸಿ ಅವರು ಕರ್ಮಗಳ
ಂತೆ ಮಾಡಿ ಪ್ರಭುವಾದ ಭಗವಂತನು ಮಕ್ಕಳು ಆಟಿಕೆಯ ಜೊತೆಯ
ಕೆ ಜೀವರ ಜೊತೆಯಲ್ಲಿ ಆಡುತ್ತಾನೆ.

ಾತೃಪಿತೃವದ್ ರಾಜನ್ ಧಾತಾ ಭೂತೇಷು ವರ್ತತೇ ।
ಷಾದಿವ ಪ್ರವೃತ್ತೋऽಯಂ ಯಥಾऽಯಮಿತರೋ ಜನಃ ॥೩೯

ಾಜನೇ! ಧಾತೃ ಆದ ನಾರಾಯಣನು ತಂದೆಯಂತೆ ಅಥವಾ ತಾಯಿಯ
ವರಲ್ಲೂ ವರ್ತಿಸುವುದಿಲ್ಲ. ಪಾಮರ ಜನರಂತೆ ಅವನು ರೋಷದಿಂ
ುತ್ತಾನೆ.

ರ್ಯಾನ್ ಶೀಲವತೋ ದೃಷ್ಟ್ವಾ ಹ್ರೀಮತೋ ವೃತ್ತಿಕರ್ಶಿತಾನ್ ।
ರ್ಯಾನ್ ಸುಖಿನಶ್ಚೈವ ಚಿಂತಯಾಮ್ಯತಿವಿಹ್ವಲಾ ॥೪೦

ರ್ಯರೂ ಶೀಲವುಳ್ಳವರೂ ವಿನಯಸಂಪನ್ನರೂ ಆದ ಪುರುಷರ
ೀಪಾಯವಿಲ್ಲದೆ ಬಳಲುವುದನ್ನೂ ಮತ್ತು ಅನಾರ್ಯರು ಸುಖಿಗಳಾ

ತವೇಮಾಮಾಪದಂ ದೃಷ್ಟ್ವಾ ಸಮೃದ್ಧಿಂ ಚ ಸುಯೋಧನೇ ।
ಧಾತಾರಂ ಗರ್ಹಯೇ ಪಾರ್ಥ ವಿಷಮಂ ಯೋऽನುಪಶ್ಯತಿ ॥೩೯॥

ಎಲೈ ಪಾರ್ಥನೇ! ನಿನ್ನ ಈ ಆಪತ್ತನ್ನೂ ದುರ್ಯೋಧನನ ಸಂಪತ್ತನ್ನೂ ನೋಡಿ ವಿಷಮವಾಗಿ ಎಲ್ಲವನ್ನೂ ನೋಡುವ ಆ ಈಶ್ವರನನ್ನೇ ನಿಂದಿಸುತ್ತೇನೆ.

ಆರ್ಯಶಾಸ್ತ್ರಾತಿಗೇ ಕ್ರೂರೇ ಲುಬ್ಧೇ ಧರ್ಮಾಪಲಾಪಿನಿ ।
ಧಾರ್ತರಾಷ್ಟ್ರೇ ಶ್ರಿಯಂ ದತ್ತ್ವಾ ಧಾತಾ ಕಿಂ ಫಲಮಶ್ನುತೇ ॥೪೦॥

ಆರ್ಯರ ನಡತೆಗೆ ಬಹಳ ದೂರನಾದ, ಕ್ರೂರನೂ ಲೋಭಿಯೂ ಧರ್ಮನಾಶಕನೂ, ಆದ ದುರ್ಯೋಧನನಿಗೆ ಸಂಪತ್ತನ್ನು ಕೊಟ್ಟು ಭಗವಂತನಿಗೆ ಯಾವ ಪ್ರಯೋಜನವು ಉಂಟಾಗುತ್ತದೆ? (ಎಷ್ಟು ಐಶ್ವರ್ಯವಿದ್ದರೂ ಅವನು ಭಗವದಾರಾಧನೆಯನ್ನು ಮಾಡುವುದಿಲ್ಲವಾದ್ದರಿಂದ ಅವನ ಐಶ್ವರ್ಯವು ನಿಷ್ಪಯೋಜನ ಎಂದು ಅಭಿಪ್ರಾಯ)

ಕರ್ಮ ಚೇತ್ ಕೃತಮನ್ವೇತಿ ಕರ್ತಾರಂ ನಾನ್ಯಮೃಚ್ಛತಿ ।
ಕರ್ಮಣಾ ತೇನ ಪಾಪೇನ ಲಿಪ್ಯತೇ ನೂನಮೀಶ್ವರಾತ್ ॥೪೧॥

ಒಂದು ಕರ್ಮವು ಆ ಜೀವನು ಹಿಂದೆಮಾಡಿದ ಕರ್ಮವನ್ನು ಅನುಸರಿಸುತ್ತದೆ ಎಂದಾದರೆ ಆ ಹಿಂದಿನ ಕರ್ಮಕ್ಕೂ ಈಶ್ವರನೇ ಸ್ವತಂತ್ರಕರ್ತೃವಾದವನು. ಜೀವನು ಅಸ್ವತಂತ್ರನಾದವನು. ಆದ್ದರಿಂದ ತನ್ನ ಸ್ವಾತಂತ್ರ್ಯದಿಂದ ಕರ್ಮವನ್ನು ಮಾಡಿಸಿದ ಈಶ್ವರನಿಗೆ ಆ ಕರ್ಮದ ಪಾಪದ ಫಲವು ದೊರೆಯಬೇಕು. (ಹೀಗೆ ಪೂರ್ವಪಕ್ಷವನ್ನು ಮಾಡಿ ಲಿಪ್ಯತೇ ನೂನಮೀಶ್ವರಾತ್ ಎಂಬ ಅಂಶದಿಂದ ಸಮಾಧಾನವನ್ನು ಹೇಳುತ್ತಾರೆ. ನು ಊನಂ ಈಶ್ವರಾತ್ ಎಂದು ಪದಚ್ಛೇದ. ಲಿಪ್ಯತೇ ಎಂಬುದನ್ನು ಅನುವೃತ್ತಿಮಾಡಿಕೊಳ್ಳಬೇಕು.) ಜೀವ ಸಮುದಾಯವು ಈಶ್ವರನಿಗಿಂತ ಊನವಾಗಿದೆ ಎಂದರೆ ಈಶ್ವರನಿಗಿರುವ ಸ್ವಾತಂತ್ರ್ಯಾದಿಗುಣಗಳು ಜೀವರಿಗೆ ಇಲ್ಲ. ಆದ್ದರಿಂದ ಸ್ವತಂತ್ರನಾದ ಈಶ್ವರನು ಸ್ವಾತಂತ್ರ್ಯ ಇರುವ ಕಾರಣದಿಂದಲೇ ತನಗೆ ಪಾಪಲೇಪವಾಗದಂತೆ ನೋಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಆದ್ದರಿಂದ ಅವನಿಗೆ ಪಾಪಲೇಪವಾಗುವುದಿಲ್ಲ. ಜೀವನು ಅಸ್ವತಂತ್ರನಾದರೂ ಕರ್ತೃತ್ವವನ್ನು

ಹೊಂದಿರುವುದರಿಂದ . ಲೋಕದಲ್ಲಿ ಪರಾಧೀನಪಾಪಕರ್ತೃವಿಗೂ ಶಿಕ್ಷೆಯು ಇರುವಂತೆ ಜೀವನಿಗೆ ಪಾಪಲೇಪವಿದೆ. ಮತ್ತು ಜೀವನಿಗೆ ಪಾಪಲೇಪವನ್ನು ಪರಿಹರಿಸಿಕೊಳ್ಳುವ ಸ್ವಾತಂತ್ರ್ಯ ಅಥವಾ ಸಾಮರ್ಥ್ಯವಿಲ್ಲದಿರುವುದರಿಂದ ಅವನು ಪಾಪದ ಫಲವನ್ನು ಅನುಭವಿಸುತ್ತಾನೆ.

**ಅಥ ಕರ್ಮಕೃತಂ ಪಾಪಂ ನ ಚೇತ್ ಕರ್ತಾರಮೃಚ್ಛತಿ ।**
**ಕಾರಣಂ ಬಲಮೇವೇಹ ಜಾನಂಶೋಚಾಮಿ ದುರ್ಬಲಾನ್ ॥೪೨॥**

ಮತ್ತು ಕರ್ಮದಿಂದ ಉಂಟಾದ ಪಾಪವು ಸ್ವತಂತ್ರಕರ್ತೃವಾದ ನಾರಾಯಣನನ್ನು ತಲುಪದಿದ್ದರೆ ಅದಕ್ಕೆ ಸ್ವಾತಂತ್ರ್ಯರೂಪವಾದ ಬಲವೇ ಕಾರಣ. ಆದ್ದರಿಂದ ನಿಮ್ಮ ಶತ್ರುಗಳು ನಿಮ್ಮಿಂದ ರಾಜ್ಯವನ್ನು ಅಪಹರಿಸಿದರೂ ನಿಮಗೆ ನಿವಾರಿಸಿಕೊಳ್ಳುವ ಸಾಮರ್ಥ್ಯವಿಲ್ಲದಿರುವುದರಿಂದ ನೀವು ದುರ್ಬಲರು. ಹೀಗೆ ತಿಳಿದು ದುರ್ಬಲರಾದ ನಿಮ್ಮನ್ನು ನೋಡಿ ನಾನು ಶೋಕಪಡುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತವಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★

## ಇಪ್ಪತ್ತೆಂಟನೆಯ ಅಧ್ಯಾಯ

(ದ್ರೌಪದಿಯನ್ನು ಕುರಿತು ಯುಧಿಷ್ಠಿರನಿಂದ ಧರ್ಮದ ಸಫಲತ್ವ ಪ್ರತಿಪಾದನೆ.)

**ಯುಧಿಷ್ಠಿರಃ**

**ಫಲ್ಗು ಚಿತ್ರಪದಂ ಶ್ಲಕ್ಷ್ಣಂ ಯಾಜ್ಞಸೇನಿ ತ್ವಯಾ ವಚಃ ।**
**ಉಕ್ತಂ ಯಚ್ಚುತಮಸ್ಮಾಭಿರ್ನಾಸ್ತಿಕ್ಯಂ ಸಂಪ್ರಭಾಷಸೇ ॥೧॥**

ಯಾಜ್ಞಸೇನಿಯೇ! ನಾನು ಕೇಳಿದ ನೀನು ಆಡಿದ ಮಾತುಗಳು ಮಧುರವಾಗಿ ಸುಂದರಪದಗಳಿಂದ ಕೂಡಿದ್ದರೂ ಅಲ್ಪವಾದುದು (ನಿರರ್ಥಕವಾದುದು) ನೀನು ನಾಸ್ತಿಕ್ಯವಾದವನ್ನು ಹೇಳುತ್ತಿದ್ದೀಯೆ.

ನಾಹಂ ಧರ್ಮಫಲಾಕಾಂಕ್ಷೀ ರಾಜಪುತ್ರಿ ಚರಾಮ್ಯುತ ।
ದದಾಮಿ ದೇಯಮಿತ್ಯೇವ ಯಜೇ ಯಷ್ಟವ್ಯಮಿತ್ಯುತ ॥೨॥

ರಾಜಪುತ್ರಿಯೇ! ನಾನು ಧರ್ಮದ ಫಲವನ್ನು ಬಯಸಿ ಧರ್ಮವನ್ನು ಆಚರಿಸುತ್ತಿಲ್ಲ. ದಾನಮಾಡಬೇಕೆಂದಷ್ಟೇ ದಾನಮಾಡುತ್ತೇನೆ. ಯಾಗಮಾಡಬೇಕೆಂದಷ್ಟೇ ಯಾಗವನ್ನು ಮಾಡುತ್ತೇನೆ.

ಅಸ್ತು ವಾಽತ್ರ ಫಲಂ ಮಾ ವಾ ಕರ್ತವ್ಯಂ ಪುರುಷೇಣ ಯತ್ ।
ಗೃಹೇ ನಿವಸತಾ ಕೃಷ್ಣೇ ಯಥಾಶಕ್ತಿ ಕರೋಮಿ ತತ್ ॥೩॥

ಫಲವಿರಲಿ ಇಲ್ಲದಿರಲಿ ಗೃಹಸ್ಥನಾದವನು ತನ್ನ ಕರ್ತವ್ಯವನ್ನು ಮಾಡಬೇಕು.ನಾನು ನನ್ನ ಶಕ್ತಿಯಿದ್ದಷ್ಟು ಕರ್ತವ್ಯವನ್ನು ಮಾಡುತ್ತೇನೆ.

ಧರ್ಮವಾಣಿಜ್ಯಕೋ ದೀನೋ ಜಘನ್ಯೋ ಧರ್ಮವಾದಿನಾಮ್ ।
ಧರ್ಮಂ ಚರಾಮಿ ಸುಶ್ರೋಣಿ ನ ಧರ್ಮಫಲಕಾರಣಾತ್ ॥೪॥

ಎಲೌ ಸುಶ್ರೋಣಿಯೇ! ಧರ್ಮದವ್ಯಾಪಾರವನ್ನು ಮಾಡುವವನಾಗಿ, ದೀನನಾಗಿ, ಧರ್ಮವಾದಿಗಳಲ್ಲಿನೀಚನಾಗಿ, ಧರ್ಮದ ಫಲವನ್ನು ಉದ್ದೇಶಿಸಿ ನಾನು ಧರ್ಮವನ್ನು ಆಚರಿಸುವುದಿಲ್ಲ.

ಆಗಮಾನನತಿಕ್ರಮ್ಯ ಸತಾಂ ವೃತ್ತಮವೇಕ್ಷ್ಯ ಚ ।
ಧರ್ಮ ಏವ ಮನಃ ಕೃಷ್ಣೇ ಸ್ವಭಾವಾಚ್ಚೈವ ಮೇ ಧೃತಮ್ ॥೫॥

ದ್ರೌಪದಿಯೇ ಶಾಸ್ತ್ರಗಳನ್ನು ಮೀರದೆ ಸಜ್ಜನರ ಶೀಲವನ್ನು ನೋಡಿ ನನಗೆ ಸ್ವಾಭಾವಿಕವಾಗಿಯೇ ಧರ್ಮದಲ್ಲಿಯೇ ಮನಸ್ಸುನಿಂತಿದೆ.

ನ ಧರ್ಮಫಲಮಾಪ್ನೋತಿ ಯೋ ಧರ್ಮಂ ದೋಗ್ಧುಮಿಚ್ಛತಿ ।
ಯಶ್ಚೈನಂ ಶಂಕತೇ ಕೃತ್ವಾ ನಾಸ್ತಿಕ್ಯಾತ್ ಪಾಪಚೇತನಃ ।
ನ ತಸ್ಯ ಜಾಯತೇ ಧರ್ಮೋ ನಿಷ್ಠಿಯಸ್ಯ ವರಾನನೇ ॥೬॥

ಎಲೌ ಸುಂದರಿಯೇ! ಯಾರು ಧರ್ಮವನ್ನು ಆಚರಿಸಿ ಅದರಿಂದ ಫಲವನ್ನು ಪಡೆಯಲು ಬಯಸುತ್ತಾರೆಯೋ ಅಥವಾ ಯಾವನು ಧರ್ಮವನ್ನು ಆಚರಿಸಿದರೂ

ಪಾಪಬುದ್ಧಿಯುಳ್ಳವನಾಗಿ ಇದಕ್ಕೆ ಫಲವಿದೆಯೋ ಇಲ್ಲವೋ ಎಂದು ಶಂಕೆಯನ್ನು ಮಾಡುತ್ತಾನೆಯೋ ಅಂತಹವನು ಮಾಡುವ ಕರ್ಮವು ವ್ಯರ್ಥವಾಗುವುದರಿಂದ ಧರ್ಮವೇ ಉತ್ಪತ್ತಿಯಾಗುವುದಿಲ್ಲ.

ಅತಿವಾದಾನ್ಮದಾಚ್ಚೈವ ಮಾ ಧರ್ಮಮತಿಶಂಕಥಾಃ ।
ಧರ್ಮಾತಿಶಂಕೀ ಪುರುಷಃ ತಿರ್ಯಗ್ಗತಿಮವಾಪ್ಸ್ಯತಿ ॥೭॥

ಧರ್ಮೇ ಯಸ್ಯಾತಿಶಂಕ್ಯಃ ಸ್ಯಾದ್ ದೋಷೋऽಸೌದುರ್ಬಲಾತ್ಮನಃ।
ವೇದಾಚ್ಛೂದ್ರ ಇವಾಪೇಯಾತ್ ಸ ಲೋಕಾದಜರಾಮರಾತ್ ॥೮॥

ಅತಿವಾದಗಳಿಂದಾಗಲೀ ಅಥವಾ ಮದದಿಂದಾಗಲೀ ಧರ್ಮವನ್ನು ಶಂಕಿಸಬೇಡ. ಧರ್ಮದಲ್ಲಿ ಸಂಶಯಪಡುವ ಪುರುಷನು ನೀಚಯೋನಿಗಳನ್ನು ಹೊಂದುವನು. ಧರ್ಮವನ್ನು ಯಾವನು ಶಂಕಿಸುತ್ತಾನೆಯೋ ಅದು ದುರ್ಬಲ ಮನಸ್ಸುಳ್ಳ ಅವನ ದೋಷ. ವೇದಗಳಿಂದ ಶೂದ್ರನು ಹೊರಗೆ ಉಳಿದಂತೆ ಅಂತಹ ಅತಿಶಂಕೆಯನ್ನು ಮಾಡುವವನ ಅಜರಾಮರವಾದ ಲೋಕಗಳಿಂದ ಹೊರಗೆ ಉಳಿಯುತ್ತಾನೆ.

ವೇದಾಧ್ಯಾಯೀ ಧರ್ಮರತಃ ಕುಲೇ ಜಾತೋ ಯಶಸ್ವಿನಿ ।
ಸ್ಥವಿರೇಷು ಸ ಯೋಕ್ತವ್ಯೋ ರಾಜಭಿರ್ಧರ್ಮಚಾರಿಭಿಃ ॥೯॥

ಎಲೌ ಯಶಸ್ವಿನಿಯೇ! ವೇದಾಧ್ಯಯನವನ್ನುಮಾಡಿ ಸತ್‌ಕುಲಪ್ರಸೂತನಾಗಿ ಧರ್ಮರತನಾಗಿರುವ ಪುರುಷನನ್ನು ಧರ್ಮಾನುಷ್ಠಾನ ತತ್ಪರರಾದ ರಾಜರು ದೊಡ್ಡವರ ಜೊತೆಯಲ್ಲಿ ಸಂಯೋಜಿಸಬೇಕು.

ಪಾಪೀಯಾನ್ ಸ ಹಿ ಶೂದ್ರೇಭ್ಯಃ ತಸ್ಕರೇಭ್ಯೋ ವಿಶೇಷತಃ ।
ಶಾಸ್ತ್ರಾತಿಗೋ ಮಂದಬುದ್ಧಿರ್ಯೋ ಧರ್ಮಮತಿಶಂಕತೇ ॥೧೦॥

ಯಾವ ಮಂದಬುದ್ಧಿಯುಳ್ಳವನು ಶಾಸ್ತ್ರಗಳನ್ನು ಮೀರಿ ಜೀವಿಸುತ್ತಾ ಧರ್ಮವನ್ನು ಶಂಕಿಸುತ್ತಾನೆಯೋ ಅವನು ಶೂದ್ರರಿಗಿಂತಲೂ ಮತ್ತು ಕಳ್ಳರಿಗಿಂತಲೂ ವಿಶೇಷವಾಗಿ ಪಾಪಿಷ್ಠನಾದವನು.

ಪ್ರತ್ಯಕ್ಷಂ ಹಿ ತ್ವಯಾ ದೃಷ್ಟ ಋಷಿರ್ಗಚ್ಛನ್‌ಮಹಾತಪಾಃ ।
ಮಾರ್ಕಂಡೇಯೋऽಪ್ರಮೇಯಾತ್ಮಾ ಧರ್ಮೇಣ ಚಿರಜೀವಿತಃ ॥೧೧॥

ಇಲ್ಲಿಗೆ ಬಂದು ಹೋದ ಮಹಾತಪಸ್ವಿಗಳಾದ ಅಪ್ರಮೇಯವಾದ ಅನುಭಾವವುಳ್ಳ ಮಾರ್ಕಂಡೇಯರು ಧರ್ಮದಿಂದಲೇ ಚಿರಜೀವಿಗಳಾಗಿದ್ದಾರೆ ಎಂದು ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ.

ವ್ಯಾಸೋ ವಸಿಷ್ಠೋ ಮೈತ್ರೇಯೋ ನಾರದೋ ರೋಮಶಃ ಶುಕಃ ।
ಅನ್ಯೇ ಚಾಪ್ಯೃಷಯಃ ಸರ್ವೇ ಧರ್ಮೇಣೈವ ಸುತೇಜಸಃ ॥೧೨॥

ವ್ಯಾಸರು ವಸಿಷ್ಠರು ಮೈತ್ರೇಯರು ನಾರದರು ರೋಮಶರು ಶುಕಾಚಾರ್ಯರು ಇನ್ನೂ ಎಲ್ಲಾ ಋಷಿಗಳೂ ಸಹ ಧರ್ಮದಿಂದಲೇ ಒಳ್ಳೆಯ ಸಾಮರ್ಥ್ಯವನ್ನು ಪಡೆದಿದ್ದಾರೆ.

ಪ್ರತ್ಯಕ್ಷಂ ಪಶ್ಯಸಿ ಹ್ಯೇತಾನ್ ದಿವ್ಯಯೋಗಸಮನ್ವಿತಾನ್ ।
ಶಾಪಾನುಗ್ರಹಣೇ ಶಕ್ತಾನ್ ದೇವೇಭ್ಯೋಽಪಿ ಗರೀಯಸಃ ॥೧೩॥

ದಿವ್ಯಯೋಗಸಂಪನ್ನರಾದ ಶಾಪಾನುಗ್ರಹ ಶಕ್ತಿಸಂಪನ್ನರಾದ ದೇವತೆಗಳಿಗಿಂತಲೂ ಶ್ರೇಷ್ಠರಾದ ಇಂತಹವರನ್ನು ನೀನು ಪ್ರತ್ಯಕ್ಷವಾಗಿ ನೋಡುತ್ತಿದ್ದೀಯೆ.

ಏತೇ ಹಿ ಧರ್ಮಮೇವಾದೌ ವರ್ಣಯಂತಿ ಸದಾ ಮಮ ।
ಕರ್ತವ್ಯಮಮರಪ್ರಖ್ಯಾಃ ಪ್ರತ್ಯಕ್ಷಾಗಮಬುದ್ಧಯಃ ॥೧೪॥

ಪ್ರತ್ಯಕ್ಷ ಮತ್ತು ಆಗಮಾನುಸಾರಿಯಾದ ಬುದ್ಧಿಯುಳ್ಳ ಇವರೆಲ್ಲರೂ ಮೊದಲು ಧರ್ಮವನ್ನೇ ಅನುಷ್ಠಾನಮಾಡಬೇಕೆಂದು ನನಗೆ ಯಾವಾಗಲೂ ಹೇಳುತ್ತಿದ್ದಾರೆ.

ಅತೋ ನಾರ್ಹಸಿ ಕಲ್ಯಾಣಿ ಧಾತಾರಂ ಧರ್ಮಮೇವ ಚ ।
ರಜೋಮೂಢೇನ ಮನಸಾ ಕ್ಷೇಪ್ತುಂ ಶಂಕಿತುಮೇವ ಚ ।
ಉನ್ಮತ್ತಾನ್ ಮನ್ಯತೇ ಬಾಲಃ ಸರ್ವಾನಾಗತನಿಶ್ಚಯಾನ್ ॥೧೫॥

ಎಲೌ ಕಲ್ಯಾಣಿಯೇ! ಆದ್ದರಿಂದ ನಾರಾಯಣನನ್ನಾಗಲೀ ಧರ್ಮವನ್ನಾಗಲೀ ದೋಷಯುಕ್ತವಾದ ಮನಸ್ಸಿನಿಂದ ನಿಂದಸಬೇಡ. ಅಥವಾ ಶಂಕಿಸಬೇಡ. ಬಾಲನಾದವನು ಎಲ್ಲವನ್ನೂ ತಿಳಿದ ದೊಡ್ಡವರನ್ನು ನೋಡಿ ಅವರನ್ನು ಹುಚ್ಚರೆಂದು ಭಾವಿಸುತ್ತಾನೆ.

ಸರ್ವಾತಿಶಂಕೀ ನಾನ್ಯಸ್ಮಿನ್ ಪ್ರಮಾಣಮಧಿಗಚ್ಛತಿ ।
ಆತ್ಮಪ್ರಮಾಣಶ್ಚೋನ್ನದ್ಧಃ ಶ್ರೇಯಸೋ ಹ್ಯವಮನ್ಯತೇ ॥೧೬॥

ಎಲ್ಲರನ್ನೂ ಶಂಕಿಸುವವನು ಇನ್ನೊಬ್ಬ ಪುರುಷನಲ್ಲಿ ವಿಶ್ವಾಸವನ್ನು ಹೊಂದುವುದಿಲ್ಲ. ತಾನೇ ತನಗೆ ಪ್ರಮಾಣಭೂತನಾಗಿ ದರ್ಪಿಷ್ಠನಾಗಿ ಶ್ರೇಷ್ಠರಾದವರನ್ನು ಅವಮಾನಮಾಡುತ್ತಾನೆ.

ಇಂದ್ರಿಯಪ್ರತಿಸಂಬದ್ಧಂ ಯದಿದಂ ಲೋಕಸಾಕ್ಷಿಕಮ್ ।
ಏತಾವನ್ಮನ್ಯತೇ ಬಾಲೋ ಮೋಹಮನ್ಯತ್ರ ಗಚ್ಛತಿ ॥೧೭॥

ಲೋಕಕ್ಕೆ ಪ್ರಮಾಣಭೂತರಾದ ಧರ್ಮಪ್ರದರ್ಶಕರಾದ ಋಷಿಗಳ ಕಥೆಯನ್ನು ಕೇಳಿ ಅವರನ್ನು ನಮ್ಮಂತೆ ಇಂದ್ರಿಯಲಂಪಟರು ಎಂದು ಭಾವಿಸಿ ಬಾಲಿಶನಾದ ತಾನೂ ಸಹ ವನಿತಾದಿಗಳಲ್ಲಿ ಆಸಕ್ತನಾಗುತ್ತಾನೆ.

ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ಯೋ ಧರ್ಮಮತಿಶಂಕತೇ ।
ಧ್ಯಾಯನ್ ಸ ಕೃಪಣಃ ಪಾಪೋ ನ ಲೋಕಾನ್ ಪ್ರತಿಪದ್ಯತೇ ॥೧೮॥

ಯಾವನು ಧರ್ಮವನ್ನು ಶಂಕಿಸುತ್ತಾನೆಯೋ ಅವನಿಗೆ ಪ್ರಾಯಶ್ಚಿತ್ತವಿಲ್ಲ. ಕೃಪಣನೂ ಪಾಪಿಯೂ ಆದ ಅವನು ಧರ್ಮದ ಫಲವನ್ನೇ ಚಿಂತಿಸುತ್ತಾ ಶ್ರೇಷ್ಠವಾದ ಲೋಕಗಳನ್ನು ಹೊಂದುವುದಿಲ್ಲ.

ಪ್ರಮಾಣಾನ್ಯತಿವೃತ್ತೋ ಹಿ ವೇದಶಾಸ್ತ್ರಾರ್ಥನಿಂದಕಃ ।
ಕಾಮಲೋಭಾನ್ವಿತೋ ಮೂಢೋ ನರಕಂ ಪ್ರತಿಪದ್ಯತೇ ॥೧೯॥

ಪ್ರಮಾಣಗಳನ್ನು ತಿರಸ್ಕರಿಸಿ ವೇದಶಾಸ್ತ್ರಾರ್ಥಗಳನ್ನು ನಿಂದಿಸಿ ಕಾಮಕ್ಕೂ ಲೋಭಕ್ಕೂ ವಶನಾದ ಮೂಢನು ನರಕವನ್ನು ಹೊಂದುತ್ತಾನೆ.

ಯಸ್ತು ನಿತ್ಯಂ ಕೃತಮತಿರ್ಧರ್ಮಮೇವಾಭಿಪದ್ಯತೇ ।
ಅಶಂಕಮಾನಃ ಕಲ್ಯಾಣಿ ಸೋऽಮುತ್ರಾನಂದಮಶ್ನುತೇ ॥೨೦॥

ಎಲೌ ಕಲ್ಯಾಣಿಯೇ! ಯಾವ ಸುಶಿಕ್ಷಿತಬುದ್ಧಿಯುಳ್ಳವನು ಧರ್ಮವನ್ನು ಶಂಕಿಸದೆ ನಿತ್ಯವೂ ಧರ್ಮವನ್ನೇ ಆಚರಿಸುತ್ತಾನೆಯೋ ಅವನು ಪರಲೋಕದಲ್ಲಿ ಆನಂದವನ್ನು ಪಡೆಯುತ್ತಾನೆ.

ಆರ್ಷಂ ಪ್ರಮಾಣಮುತ್ಸೃಜ್ಯ ಧರ್ಮಂ ನಪ್ರತಿಪಾಲಯನ್ ।
ಧರ್ಮಶಾಸ್ತ್ರಾತಿಗೋ ಮೂಢ ಆಜನ್ಮಸು ನ ನಂದತಿ ॥೨೧॥

ಋಷಿಗಳಿಗೂ ಪ್ರಮಾಣವಾದ ವೇದವನ್ನು ತಿರಸ್ಕರಿಸಿ ಧರ್ಮವನ್ನು ಆಚರಿಸದೆ ಧರ್ಮಶಾಸ್ತ್ರವನ್ನು ಮೀರುವ ಮೂಢನು ಜನ್ಮದಿಂದ ಆರಂಭಿಸಿ ಎಂದೂ ಒಳ್ಳೆಯದನ್ನು ಪಡೆಯುವುದಿಲ್ಲ.

ಯಸ್ಯ ನಾಕ್ಷಂ ಪ್ರಮಾಣಂ ಸ್ಯಾತ್ ಶಿಷ್ಟಾಚಾರಶ್ಚ ಭಾಮಿನಿ ।
ನೈವ ತಸ್ಯ ವಶೇ ಲೋಕೋ ನಾಯಮಸ್ತೀತಿ ನಿಶ್ಚಯಃ ॥೨೨॥

ಎಲೌ ಭಾಮಿನಿಯೇ! ಯಾವನಿಗೆ ಪ್ರತ್ಯಕ್ಷವಾಗಲೀ ಅಥವಾ ಶಿಷ್ಟಾಚಾರವಾಗಲೀ ಪ್ರಮಾಣವಾಗುವುದಿಲ್ಲವೋ ಅಂತಹವನಿಗೆ ಈ ಲೋಕವು ವಶವಾಗುವುದಿಲ್ಲ ಎಂಬುದು ನಿಶ್ಚಿತವಾದುದು.

ಶಿಷ್ಟೈರಾಚರಿತಂ ಧರ್ಮಂ ಕೃಷ್ಣೇ ಮಾ ಸ್ಮಾತಿಶಂಕಥಾಃ ।
ಪುರಾಣಮೃಷಿಭಿಃ ಪ್ರೋಕ್ತಂ ಸರ್ವಜ್ಞೈಃ ಸರ್ವದರ್ಶಿಭಿಃ ॥೨೩॥

ಎಲೌ ಕೃಷ್ಣೆಯೇ! ಸರ್ವಜ್ಞರೂ ಸರ್ವದರ್ಶಿಗಳೂ ಶಿಷ್ಟರೂ ಆದ ಋಷಿಗಳು ಉಪದೇಶಮಾಡಿ ಆಚರಿಸಿದ ಪುರಾತನ ಧರ್ಮವನ್ನು ಎಂದೂ ಶಂಕಿಸಬೇಡ.

ಧರ್ಮ ಏವ ಪ್ಲವೋ ನಾನ್ಯಃ ಸ್ವರ್ಗಂ ದ್ರೌಪದಿ ಗಚ್ಛತಾಮ್ ।
ಸ ವೈ ನೌಃ ಸಾಗರಸ್ಯೇವ ವಣಿಜಃ ಪಾರಮಿಚ್ಛತಃ ॥೨೪॥

ದ್ರೌಪದಿಯೇ! ಸಾಗರವನ್ನು ದಾಟಲು ಇಚ್ಚಿಸುವ ವ್ಯಾಪಾರಿಗೆ ಹಡಗು ಇದ್ದಂತೆ ಸ್ವರ್ಗಕ್ಕೆ ಹೋಗಲು ಬಯಸುವ ಸಜ್ಜನರಿಗೆ ಧರ್ಮವೇ ಹಡಗು. ಬೇರೆ ಉಪಾಯವಿಲ್ಲ.

ಅಚಲೋ ಯದಿ ಧರ್ಮಃ ಸ್ಯಾತ್ ಚರಿತೋऽಧರ್ಮಚಾರಿಭಿಃ ।
ಅಪ್ರತಿಷ್ಠೇ ತಮಸ್ಯೇತದ್ ಜಗನ್ಮಜ್ಜೇದನಿಂದಿತೇ ॥೨೫॥

ಎಲೌ ಅನಿಂದಿತೆಯೇ! ಅಧರ್ಮಾಚಾರಿಗಳಿಂದ ಭಕ್ಷಿಸಿ ನಾಶಮಾಡಲ್ಪಟ್ಟ ಧರ್ಮವು ಅಚಲವೇ ಆದ ಕಾರಣದಿಂದ (ನಾಶವು ಶಾಶ್ವತವಾದ ಕಾರಣದಿಂದ) ಧರ್ಮವನ್ನು ನಿಂದಿಸುವ ಈ ಜಗತ್ತು ನಿರಾಧಾರವಾದ ತಮಸ್ಸಿನಲ್ಲಿ ಮುಳುಗುತ್ತದೆ.

ನಿರ್ವಾಣಂ ನಾಧಿಗಚ್ಛೇಯುರ್ದೇವೇಯುಃ ಪಶುಜೀವಿತಾಃ ।
ವಿಘಾತೇನೈವ ಯುಜ್ಯೇಯುರ್ನ ಚಾರ್ಥಂ ಕಂಚಿದಾಪ್ನುಯುಃ ॥೨೬॥

ತಪಶ್ಚ ಬ್ರಹ್ಮಚರ್ಯಂ ಚ ಯಜ್ಞಃ ಸ್ವಾಧ್ಯಾಯ ಏವ ಚ ।
ದಾನಮಾರ್ಜವಮೇತಾನಿ ಯದಿ ಸ್ಯುರಫಲಾನಿ ವೈ ॥೨೭॥

ಒಂದುಪಕ್ಷ ತಪಸ್ಸು ಬ್ರಹ್ಮಚರ್ಯ ಯಜ್ಞ ಸ್ವಾಧ್ಯಾಯ ದಾನ ಆರ್ಜವ ಇವುಗಳು ನಿಷ್ಫಲವಾದರೆ ಯಾರಿಗೂ ಮೋಕ್ಷವು ದೊರೆಯಲಾರದು ಮನುಷ್ಯರೆಲ್ಲರೂ ಪಶುಗಳಂತೆ ಜೀವಿಸುವರು. ಒಬ್ಬರನ್ನೊಬ್ಬರು ನಾಶಮಾಡುವುದರಲ್ಲೇ ಆಸಕ್ತರಾದಾರು. ಯಾರೂ ಯಾವ ಅರ್ಥವನ್ನೂ ಸಂಪಾದಿಸಲಾರರು.

ನಾಚರಿಷ್ಯನ್ ಪರೇ ಧರ್ಮಂ ಪರೇ ಪರತರೇ ಚ ಯೇ ।
ವಿಪ್ರಲಂಭೋऽಯಮತ್ಯಂತಂ ಯದಿ ಸ್ಯುರಫಲಾಃ ಕ್ರಿಯಾಃ ॥೨೮॥

ಯಾರು ಉಳಿದ ಪುರುಷರಿಗೆ ಅನ್ನದಾನಾದಿಧರ್ಮಗಳನ್ನು, ಸ್ವರ್ಗಾದಿಗಳ ವಿಷಯಗಳಲ್ಲಿ ಯಜ್ಞಾದಿಧರ್ಮಗಳನ್ನು, ಪರತರನಾದ ನಾರಾಯಣನ ವಿಷಯದಲ್ಲಿ ಪೂಜಾಧರ್ಮವನ್ನು, ಆಚರಿಸದೆ ಕೇವಲ ತಾವು ಉಪದೇಶಮಾಡುತ್ತಾರೆಯೋ ಆವರ ಧರ್ಮವಚನವು ಮೋಸದಿಂದ ಕೂಡಿದುದು. ಅವರ ಎಲ್ಲಾ ಕ್ರಿಯೆಗಳೂ ನಿಷ್ಫಲವಾಗುತ್ತವೆ.

ಋಷಯಶ್ಚೈವ ದೇವಾಶ್ಚ ಗಂಧರ್ವಾಸುರರಾಕ್ಷಸಾಃ ।
ಈಶ್ವರಾಃ ಕಸ್ಯ ಹೇತೋಸ್ತೇ ಚರೇಯುರ್ಧರ್ಮಮಾದೃತಾಃ ॥೨೯॥

ಸರ್ವಸಮರ್ಥರಾದ ಋಷಿಗಳು ದೇವತೆಗಳು ಗಂಧರ್ವರು ಅಸುರರು ಮತ್ತು ರಾಕ್ಷಸರು ಯಾವ ಕಾರಣಕ್ಕಾಗಿ ಆದರದಿಂದ ಧರ್ಮವನ್ನು ಆಚರಿಸುತ್ತಾರೆ?

ಸಫಲಂ ತ್ವಿಹ ವಿಜ್ಞಾಯ ಧಾತಾರಂ ಶ್ರೇಯಸಿ ಸ್ಥಿತಮ್ ।
ಧರ್ಮಂ ತೇ ಹ್ಯಾಚರನ್ ಕೃಷ್ಣೇ ತದ್ಧಿ ಧರ್ಮಂ ಸನಾತನಮ್ ॥೩೦॥

ಎಲೌ ದ್ರೌಪದಿಯೇ! ಅವರು ಧರ್ಮವನ್ನು ಸಫಲವೆಂದು ತಿಳಿದು ನಾರಾಯಣನು ಶ್ರೇಯಸ್ಸನ್ನು ಮಾಡುವನೆಂದು ತಿಳಿದು ಧರ್ಮವನ್ನು ಆಚರಿಸಿದರು. ಎಲೌ ದ್ರೌಪದಿಯೇ ಅದೇ ಸನಾತನವಾದ ಧರ್ಮ.

ಸ ಚಾಯಂ ಸಫಲೋ ಧರ್ಮೋ ನ ಧರ್ಮೋಽಫಲಮಶ್ನುತೇ।
ದೃಶ್ಯಂತೇಽಪಿ ಹಿ ವಿದ್ಯಾನಾಂ ಫಲಾನಿ ತಪಸಾಂ ತಥಾ ॥೩೦॥

ಅಂತಹ ಈ ಧರ್ಮವು ಸಫಲವಾದುದು. ಧರ್ಮವು ಅಫಲವಾಗುವುದಿಲ್ಲ. ವಿದ್ಯೆ ಮತ್ತು ತಪಸ್ಸಿನ ಫಲಗಳು ಪ್ರತ್ಯಕ್ಷವಾಗಿ ಕಾಣುತ್ತವೆಯಷ್ಟೇ ?

ತ್ವಯ್ಯೇತದ್ಧ್ರಿ ವಿಜಾನೀಹಿ ಜನ್ಮ ಕೃಷ್ಣೇ ಯಥಾ ಶ್ರುತಮ್ ।
ವೇತ್ಥ ಚಾಪಿ ಯಥಾ ಜಾತೋ ಧೃಷ್ಟದ್ಯುಮ್ನಃ ಪ್ರತಾಪವಾನ್ ॥೩೨॥

ದ್ರೌಪದಿಯೇ, ನಾನು ಕೇಳಿರುವಂತೆ ನಿನ್ನ ಜನನವನ್ನೇ ವಿಚಾರಮಾಡು. ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನು ಹೇಗೆ ಜನಿಸಿದನೆಂದು ನೀನು ತಿಳಿದಿದ್ದೀಯೆ.

ಏತಾವದೇವ ಪರ್ಯಾಪ್ತಮುಪಮಾನಂ ಶುಚಿಸ್ಮಿತೇ ।
ಕರ್ಮಣಾಂ ಫಲಮಸ್ತೀತಿ ಧೀರೋಽಲ್ಪೇನಾಪಿ ತುಷ್ಯತಿ ॥೩೩॥

ಶುಚಿಸ್ಮಿತೆಯೇ! ಕರ್ಮಗಳಿಗೆ ಫಲವಿದೆ ಎಂಬ ವಿಷಯದಲ್ಲಿ ಈ ದೃಷ್ಟಾಂತವೇ ಸಾಕು. ಧೀರನಾದವನು ಅಲ್ಪದಿಂದಲೂ (ಅಲ್ಪ ದೃಷ್ಟಾಂತದಿಂದಲೂ) ಸಂತುಷ್ಟನಾಗುತ್ತಾನೆ.

ಬಹುನಾಽಪಿ ಹ್ಯವಿದ್ವಾಂಸೋ ನೈವ ತುಷ್ಯಂತ್ಯಬುದ್ಧಯಃ ।
ತೇಷಾಂ ನ ಧರ್ಮತಃ ಕಿಂಚಿತ್ ಪ್ರೇತ್ಯ ಕರ್ಮಾಸ್ತಿ ಶರ್ಮ ವಾ ॥೩೪॥

ಅವಿದ್ವಾಂಸರಾದವರು ಸದ್ಬುದ್ಧಿ ಇಲ್ಲದೆ ಬಹುಲಾಭವಾದರೂ ಸಂತುಷ್ಟರಾಗುವುದಿಲ್ಲ. ಅವರಿಗೆ ಧರ್ಮದಿಂದ ಮುಂದೆ ಮರಣಾನಂತರದಲ್ಲಿ ಉಂಟಾಗುವ ಯಾವುದೇ ಕಾರ್ಯವಾಗಲೀ ಅಥವಾ ಸುಖವಾಗಲೀ ಇಲ್ಲ.

ಕರ್ಮಣಾಮುತ ಪುಣ್ಯಾನಾಂ ಪಾಪಾನಾಂ ಚ ಫಲೋದಯಃ ।
ಪ್ರಭವಶ್ಚಾಪ್ಯಯಶ್ಚೈವ ದೇವಗುಹ್ಯಾನಿ ಭಾಮಿನಿ ॥೩೫॥

ಎಲೌ ಭಾಮಿನಿಯೇ! ಪುಣ್ಯ ಮತ್ತು ಪಾಪಕರ್ಮಗಳ ಫಲೋದಯ ಅವುಗಳ ಉತ್ಪತ್ತಿ ಮತ್ತು ನಾಶಗಳು ದೇವಗುಹ್ಯವಾದವು. (ಕೋಪವುಳ್ಳ ಸ್ತ್ರೀಗೆ ಭಾಮಿನಿ ಎಂದು ಹೆಸರು. ದ್ರೌಪದಿಯೂ ಈಗ ದುರ್ಯೋಧನನ ಮೇಲೆ ಕೋಪಹೊಂದಿರುವುದರಿಂದ ಧರ್ಮರಾಜನು ಅವಳನ್ನು ಪುನಃಪುನಃ ಭಾಮಿನಿ ಎಂದು ಸಂಬೋಧಿಸುತ್ತಾನೆ.)

ನೈತಾನಿ ವೇದ ಯಃ ಕಶ್ಚಿನ್ಮಾನವಃ ಶುಭದರ್ಶನೇ ।
ಅಪಿ ಕಲ್ಪಸಹಸ್ರೇಣ ನರಃ ಶ್ರೇಯೋಽಧಿಗಚ್ಛತಿ ।
ರಕ್ಷ್ಯಾಣ್ಯೇತಾನಿ ದೇವಾನಾಂ ಗೂಢಮಾಯಾ ಹಿ ದೇವತಾಃ ॥೩೬॥

ಶುಭದರ್ಶನೆಯೇ! ಇವುಗಳು ಯಾವ ಮಾನವನಿಗೂ ತಿಳಿಯುವುದಿಲ್ಲ. ಧರ್ಮಾಚರಣೆಯನ್ನು ಮಾಡುವ ಮನುಷ್ಯನು ಒಂದು ಸಹಸ್ರ ಕಲ್ಪದ ನಂತರವಾದರೂ ಶ್ರೇಯಸ್ಸನ್ನು ಹೊಂದುತ್ತಾನೆ. ಈ ದೇವಗುಹ್ಯವನ್ನು ರಕ್ಷಣೆಮಾಡಬೇಕು. ದೇವತೆಗಳಿಗೆ ತಮ್ಮ ಸಾಮರ್ಥ್ಯವನ್ನು ಗೂಹನ ಮಾಡುವುದರಲ್ಲೇ ಪ್ರೀತಿ.

ಕೃಶಾಂಗಾಃ ಸುವ್ರತಾಶ್ಚೈವ ತಪಸಾ ದಗ್ಧಕಿಲ್ಬಿಷಾಃ ।
ಪ್ರಸನ್ನೈರ್ಮಾನಸೈರ್ಯುಕ್ತಾಃ ಪಶ್ಯಂತ್ಯೇತಾನಿ ವೈ ಪ್ರಜಾಃ ॥೩೭॥

ಕೃಶಾಂಗರು, ಒಳ್ಳೆಯ ವ್ರತಧಾರಿಗಳು, ತಪಸ್ಸಿನಿಂದ ಪಾಪವನ್ನು ಕಳೆದುಕೊಂಡವರು, ಪ್ರಸನ್ನಮನಸ್ಸಿನಿಂದ ಯುಕ್ತರಾದವರು, ಇಂತಹ ಪುರುಷರನ್ನು ಪ್ರಜೆಗಳು ನೋಡುತ್ತಾರಷ್ಟೆ?

ನ ಫಲಾದರ್ಶನಾದ್ಧರ್ಮಃ ಶಂಕಿತವ್ಯೋ ನ ದೇವತಾಃ ।
ಯಷ್ಟವ್ಯಂ ಚಾಪ್ರಮತ್ತೇನ ದಾತವ್ಯಂ ಚಾನಸೂಯತಾ ॥೩೮॥

ಫಲವು ಕಾಣುವುದಿಲ್ಲ ಎಂಬ ಕಾರಣದಿಂದಾಗಿ ಧರ್ಮವನ್ನಾಗಲೀ ದೇವತೆಗಳನ್ನಾಗಲೀ ಶಂಕಿಸಬಾರದು. ಆಲಸ್ಯವನ್ನು ಮಾಡದೆ ಯಾಗವನ್ನು ಮಾಡಬೇಕು. ಮಾತ್ಸರ್ಯವಿಲ್ಲದೆ ದಾನವನ್ನು ಮಾಡಬೇಕು.

ಕರ್ಮಣಾಂ ಫಲಮಸ್ತೀತಿ ತಥೈತದ್ ಧರ್ಮಶಾಸನಮ್ ।
ಬ್ರಹ್ಮಾ ಪ್ರೋವಾಚ ಪುತ್ರಾಣಾಂ ಯದೃಷಿರ್ವೇದ ಕಾಶ್ಯಪಃ ॥೩೯॥

ತಸ್ಮಾತ್ತೇ ಸಂಶಯಃ ಕೃಷ್ಣೇ ನೀಹಾರ ಇವ ನಶ್ಯತು ।
ವಿಮೃಶ್ಯ ಧರ್ಮಮಸ್ತೀತಿ ನಾಸ್ತಿಕ್ಯಂ ಭಾವಮುತ್ಸೃಜ ॥೪೦॥

ಕರ್ಮಗಳಿಗೆ ಫಲವಿದೆ ಎಂಬುದು ಧರ್ಮಶಾಸನ. ಇದನ್ನು ಬ್ರಹ್ಮದೇವರು ತಮ್ಮ ಮಕ್ಕಳಿಗೆ ಹೇಳಿದರು. ಕಾಶ್ಯಪರು ಇದನ್ನು ತಿಳಿದಿದ್ದಾರೆ. ಆದ್ದರಿಂದ ಎಲೌ ಕೃಷ್ಣೆಯೇ!

ನಿನ್ನ ಸಂಶಯವು ಮಂಜಿನಂತೆ ಕರಗಿಹೋಗಲಿ. ಧರ್ಮವಿದೆ ಎಂದು ವಿಮರ್ಶೆಮಾಡಿ ತಿಳಿದು ನಾಸ್ತಿಕ್ಯಭಾವವನ್ನು ತೊರೆ.

ಈಶ್ವರಂ ಚಾಪಿ ಭೂತಾನಾಂ ಧಾತಾರಂ ಮಾ ವಿಚಿಕ್ಷಿಪ ।
ಶಿಕ್ಷಸ್ವೈನಂ ನಮಸ್ವೈನಂ ಮಾಭೂತ್ ತೇऽಬುದ್ಧಿರೀದೃಶೀ ॥೪೧॥

ಎಲ್ಲ ಜೀವರಿಗೆ ಒಡೆಯನಾದ ನಾರಾಯಣನನ್ನು ನಿಂದಿಸಬೇಡ. ಅವನನ್ನು ತಿಳಿ. ಅವನಿಗೆ ನಮಸ್ಕರಿಸು. ನಿನಗೆ ಇಂತಹ ದುರ್ಬುದ್ಧಿಯು ಬರುವುದು ಬೇಡ.

ಯಸ್ಯ ಪ್ರಸಾದಾತ್ತದ್ಭಕ್ತೋ ಮರ್ತ್ಯೋ ಗಚ್ಛತ್ಯಮರ್ತ್ಯತಾಮ್ ।
ಉತ್ತಮಾ ದೇವತಾಃ ಕೃಷ್ಣೇ ಮಾತಿವೋಚಃ ಕಥಂಚನ ॥೪೨॥

ಅವನ ಅನುಗ್ರಹದಿಂದ ಮರಣಶೀಲನಾದ ಅವನ ಭಕ್ತನು ಮುಕ್ತನಾಗುತ್ತಾನೆ. ಕೃಷ್ಣೆಯೇ, ಉತ್ತಮ ದೇವತೆಗಳನ್ನು ಯಾವ ರೀತಿಯಲ್ಲಯೂ ನಿಂದಿಸಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

## ಇಪ್ಪತ್ತೊಂಬತ್ತನೆಯ ಅಧ್ಯಾಯ

(ಯುಧಿಷ್ಠಿರನನ್ನು ಕುರಿತು ದ್ರೌಪದಿಯಿಂದ ಬೃಹಸ್ಪತಿಗಳು ಹೇಳಿದ ನೀತಿಯ ಕಥನ.)

### ದ್ರೌಪದೀ

ನಾವಮನ್ಯೇ ನ ಗರ್ಹೇ ಚ ಧರ್ಮಂ ಪಾರ್ಥ ಕದಾಚನ ।
ಈಶ್ವರಂ ಕುತ ಏವಾಹಮವಮಂಸ್ಯೇ ಪ್ರಜಾಪತಿಮ್ ॥೧॥

ಎಲೈ ಪಾರ್ಥನೇ! ನಾನು ನಿನ್ನನ್ನಾಗಲೀ ಅಥವಾ ಧರ್ಮವನ್ನಾಗಲೀ ಎಂದೂ ಅವಮಾನಮಾಡುತ್ತಿಲ್ಲ. ಪ್ರಜಾಪತಿಯಾದ ಈಶ್ವರನಿಗೆ ಏಕೆ ಅವಮಾನವನ್ನು ಮಾಡುತ್ತೇನೆ?

ಆರ್ತಾऽಹಂ ಪ್ರಲಪಾಮೀಹ ಇತಿ ಮಾಂ ವಿದ್ಧಿ ಭಾರತ ।
ಭೂಯಶ್ಚ ವಿಲಪಿಷ್ಯಾಮಿ ಸುಮನಾಸ್ತನ್ನಿಬೋಧ ಮೇ ॥೨॥

ಎಲೈ ಭಾರತನೇ! ನಾನು ಆರ್ತಳಾಗಿ ಪ್ರಲಾಪವನ್ನು ಮಾಡುತ್ತಿದ್ದೇನೆಂದು ನನ್ನನ್ನು ತಿಳಿ. ಶುದ್ಧವಾದ ಮನಸ್ಸನ್ನೇ ಹೊಂದಿ ಪುನಃ ವಿಲಾಪವನ್ನು ಮಾಡುವೆನು ಅದನ್ನು ನೀನು ಕೇಳು.

ಕರ್ಮ ಖಲ್ವಿಹ ಕರ್ತವ್ಯಂ ಜಾತೇನಾಮಿತ್ರಕರ್ಶನ ।
ಅಕರ್ಮಾಣೋ ಹಿ ಜೀವಂತಿ ಸ್ಥಾವರಾ ನೇತರೇ ಜನಾಃ ॥೩॥

ಶತ್ರುಕರ್ಶನನೇ! ಈ ಭೂಮಿಯಲ್ಲಿ ಹುಟ್ಟಿದವನು ಕರ್ಮವನ್ನು ಮಾಡಬೇಕು. ಕರ್ಮವನ್ನು ಮಾಡದೇ ಜೀವಿಸುವವು ಮರಗಿಡಗಳು ಮಾತ್ರ. ಮನುಷ್ಯಾದಿಗಳಲ್ಲ.

ಆಮಾತೃಸ್ತನ್ಯಪಾನಾಚ್ಚ ಯಾವಚ್ಚೈತ್ಯೋಪಸರ್ಪಣಾತ್ ।
ಜಂಗಮಾಃ ಕರ್ಮಣಾ ವೃತ್ತಿಮಾಪ್ನುವಂತಿ ಯುಧಿಷ್ಠಿರ ॥೪॥

ಎಲೈ ಯುಧಿಷ್ಠಿರನೇ! ತಾಯಿಯ ಸ್ತನ್ಯಪಾನದಿಂದ ಆರಂಭಿಸಿ ಚಿತೆಯನ್ನು ಏರುವವರೆಗೆ ಚಲಿಸುವ ಪ್ರಾಣಿಗಳೆಲ್ಲವೂ ಕರ್ಮದಿಂದಲೇ ಜೀವನವನ್ನು ಸಾಗಿಸುತ್ತವೆ. (ಮರಣದವರೆಗೆ ಎಂದು ಹೇಳದೆ ಚಿತೆಯವರೆಗೆ ಎಂದು ಹೇಳಿ ಶವದಾಹ ಜನಿತವಾದ ಪುಣ್ಯವು ಮೃತವ್ಯಕ್ತಿಗೆ ಸೇರುತ್ತದೆ ಎಂದು ಸೂಚಿಸುತ್ತಾರೆ– ವಾದಿರಾಜರು)

ಜಂಗಮೇಷು ವಿಶೇಷೇಣ ಮನುಷ್ಯಾ ಭರತರ್ಷಭ ।
ಇಚ್ಛಂತಿ ಕರ್ಮಣಾ ವೃತ್ತಿಮವಾಪ್ತುಂ ಪ್ರೇತ್ಯ ಚೇಹ ಚ ॥೫॥

ಎಲೈ ಭರತಶ್ರೇಷ್ಠನೇ! ಚಲಿಸುವ ಪ್ರಾಣಿಗಳಲ್ಲಿ ವಿಶೇಷವಾಗಿ ಮನುಷ್ಯರು ತಮ್ಮ ಕರ್ಮದಿಂದಲೇ ಇಲ್ಲಿಯೂ ಮತ್ತು ಪರಲೋಕದಲ್ಲಿಯೂ ಜೀವನವನ್ನು ಮಾಡಲು ಇಚ್ಚಿಸುತ್ತಾರೆ.

ಉತ್ಥಾನಮಭಿಜಾನಂತಿ ಸರ್ವಭೂತಾನಿ ಭಾರತ ।
ಪ್ರತ್ಯಕ್ಷಂ ಫಲಮಶ್ನಂತಿ ಕರ್ಮಣಾಂ ಲೋಕಸಾಕ್ಷಿಕಮ್ ॥೬॥

ಪಶ್ಯಂತಃ ಸ್ಥಂ ಸಮುತ್ಥಾನಮುಪಜೀವಂತಿ ಜಂತವಃ ।
ಅಪಿ ಧಾತಾ ವಿಧಾತಾ ಚ ಯಥಾಽಯಮುದಕೇ ಬಕಃ ॥೭॥

ಎಲೈ ಭಾರತನೇ! ಜ್ಞಾನಿಗಳು ಕರ್ಮಗಳ ಉತ್ಪತ್ತಿಗೆ ಆದಿಕಾರಣನಾದ ಲೋಕಸಾಕ್ಷಿಯಾದ ನಾರಾಯಣನನ್ನು ತಿಳಿಯುತ್ತಾರೆ. ಮತ್ತು ಪ್ರತ್ಯಕ್ಷವಾಗಿ ಫಲವನ್ನು ಅನುಭವಿಸುತ್ತಾರೆ. ಯಾವ ಧಾತೃವೆಸಿದ ನಾರಾಯಣನೂ ವಿಧಾತೃವೆನಿಸಿದ ಬ್ರಹ್ಮನೂ ಇದ್ದಾನೆಯೋ ಅವರಿಂದ ಈ ಕರ್ಮಗಳ ಉತ್ಥಾನವನ್ನು ಜಂತುಗಳು ತಿಳಿದು ಆ ಕರ್ಮಗಳನ್ನು ಉಪಜೀವಿಸುತ್ತಾರೆ. ಮೀನನ್ನು ಹಿಡಿಯುವ ಬಕವು ನೀರಿನಲ್ಲಿ ಉತ್ಥಿತವಾದ ಮೀನನ್ನು ಹಿಡಿದು ಉಪಜೀವಿಸುವಂತೆ ಉಪಜೀವಿಸುತ್ತಾರೆ. (ಮೀನಿನಂತೆ ಕರ್ಮ. ಮೀನನ್ನು ಮೆಲಕ್ಕೆತ್ತುವ ಜಲದಂತೆ ನಾರಾಯಣ ಮತ್ತು ಬ್ರಹ್ಮರು. ಮತ್ತು ಕಾಮ್ಯಕರ್ಮಗಳ ನಿಂದೆಯನ್ನು ಸೂಚಿಸುವುದಕ್ಕೋಸ್ಕರ ಬಕ ದೃಷ್ಟಾಂತ ಎಂದು ತಿಳಿಯಬೇಕು.)

ಸ್ವಕರ್ಮ ಕುರು ಮಾ ಗ್ಲಾಸೀಃ ಕರ್ಮಣಾ ಭವ ದಂಶಿತಃ ।
ಅಕರ್ಮಣಾ ವೈ ಭೂತಾನಾಂ ವೃದ್ಧಿಃ ಸ್ಯಾನ್ನಹಿ ಕಾಚನ ।
ತೇ ಚೈವ ಹಿ ಪ್ರಪದ್ಯೇರನ್ ನ ವಿಹನ್ಯುಃ ಕಥಂಚನ ।
ಕೃತ್ಯಂ ಹಿ ಯೋಽಭಿಜಾನಾತಿ ಸಹಸ್ರೇ ನಾಸ್ತಿ ಸೋಽಸ್ತಿ ವಾ ॥೮॥

ನಿನಗೆ ವಿಹಿತವಾದ ಕರ್ಮವನ್ನು ಮಾಡು ಆಲಸ್ಯವನ್ನು ಮಾಡಬೇಡ. ಯಾವಾಗಲೂ ಕರ್ಮವನ್ನು ಮಾಡುವುದರಲ್ಲಿ ಸನ್ನದ್ಧನಾಗಿರು. ಕರ್ಮವನ್ನು ಮಾಡದಿರುವುದರಿಂದ ಯಾರಿಗೂ ಯಾವ ವೃದ್ಧಿಯೂ ಉಂಟಾಗುವುದಿಲ್ಲ. ಯಾರು ಕರ್ಮವನ್ನು ಮಾಡುತ್ತಾರೆಯೋ ಅವರೇ ಫಲವನ್ನು ಪಡೆಯುತ್ತಾರೆ. ಅವರು ಕರ್ಮವನ್ನು ವಿಘಾತಮಾಡುವುದಿಲ್ಲ. ಮಾಡಬೇಕಾದ ಕರ್ತವ್ಯವನ್ನು ಯಾವನು ತಿಳಿಯುತ್ತಾನೆಯೋ ಅಂತಹವನು ಸಹಸ್ರದಲ್ಲಿ ಒಬ್ಬನಾದರೂ ದೊರೆಯುತ್ತಾನೋ ಅಥವಾ ಇಲ್ಲವೋ.

ತಸ್ಯ ಚಾಪಿ ಭವೇತ್ ಕಾರ್ಯಂ ವಿವೃದ್ಧೌ ರಕ್ಷಣೇ ತಥಾ ।
ಭಕ್ಷ್ಯಮಾಣೋ ಪ್ರವೃದ್ಧೋ ಹಿ ಕ್ಷೀಯತೇ ಹಿಮವಾನಪಿ ॥೯॥

ಅಂತಹವನಿಗೂ ಕರ್ಮನಾಶರೂಪವಾದ ಫಲವು ಆಗುತ್ತದೆ. ಆದ್ದರಿಂದ ಕರ್ಮಫಲವನ್ನು ರಕ್ಷಣೆಮಾಡಿ ಅಭಿವೃದ್ಧಿಯನ್ನು ಮಾಡುವ ಪ್ರಯತ್ನವನ್ನು ಮಾಡಬೇಕು. ದೊಡ್ಡದಾಗಿ ಬೆಳೆದ ಹಿಮಾಲಯವೂ ಸಹ ಯಾವಾಗಲೂ ತಿನ್ನಲ್ಪಡುತ್ತಿದ್ದರೆ ನಾಶವನ್ನು ಹೊಂದುತ್ತದೆ.

ಉತ್ಸೀದೇರನ್ ಪ್ರಜಾಃ ಸರ್ವಾ ನ ಕುರ್ಯುಃ ಕರ್ಮ ಚೇದಿಹ ।
ತಥಾ ಹ್ಯೇತಾ ನ ವರ್ದ್ಧೇರನ್ ಕರ್ಮ ಚೇದಫಲಂ ಭವೇತ್ ।
ಅನ್ಯಥಾ ಚಾಭಿಜಾನಂತಿ ಸಂತಿ ಲೋಕೇ ಹಿ ಡಾಂಭಿಕಾಃ ।
ಅಪಿ ಚಾಪ್ಯಫಲಂ ಕರ್ಮ ಪಶ್ಯಾಮಃ ಕುರ್ವತೋ ಜನಾನ್ ॥೧೦॥

ಈ ಲೋಕದಲ್ಲಿ ಕರ್ಮವನ್ನು ಮಾಡದಿದ್ದರೆ ಎಲ್ಲಾ ಪ್ರಜೆಗಳೂ ನಾಶವನ್ನು ಹೊಂದುವರು. ಮಾಡಿದ ಕರ್ಮಗಳು ನಿಷ್ಫಲವಾದರೆ ಈ ಯಾವ ಪ್ರಜೆಗಳೂ ಅಭಿವೃದ್ಧಿಯನ್ನು ಹೊಂದುತ್ತಿರಲಿಲ್ಲ. ಕೆಲವರು ಮಾಡಬೇಕಾದ ಕಾರ್ಯವನ್ನು ತಪ್ಪಾಗಿ ತಿಳಿಯುತ್ತಾರೆ. ಲೋಕದಲ್ಲಿ ಡಾಂಭಿಕರೂ ಇದ್ದಾರೆ. ಅಂತಹ ಜನರು ಮಾಡುವ ಕರ್ಮವು ನಿಷ್ಫಲವಾಗುವುದನ್ನು ನಾವು ನೋಡುತ್ತೇವೆ.

ಯಶ್ಚ ದಿಷ್ಟಫಲೋ ಲೋಕೇ ಯಶ್ಚಾಯಂ ಹತವಾದಕಃ ।
ಉಭಾವಪಶದಾವೇತೌ ಕರ್ಮಬುದ್ಧಿಃ ಪ್ರಶಸ್ಯತೇ ॥೧೧॥

ಯೋ ಹಿ ದಿಷ್ಟಮುಪಾಸೀತ ನಿರ್ವಿಚೇಷ್ಟಃ ಸ್ವಪನ್ ಸುಖಮ್ ।
ಅವಸೀದೇತ್ ಸುದುರ್ಬುದ್ಧಿರಾಮೋ ಘಟ ಇವಾಂಭಸಿ ॥೧೨॥

ಯಾವನು ಲೋಕದಲ್ಲಿ ದೈವದಿಂದಲೇ ಎಲ್ಲ ಫಲವೂ ಉಂಟಾಗುತ್ತದೆ ಎಂದು ಹೇಳುತ್ತಾನೋ, ಯಾವನು ತನ್ನ ಯೋಗ್ಯತೆಯಿಂದಲೇ ಎಲ್ಲಾ ಫಲವು ಉಂಟಾಗುತ್ತದೆಯೆಂದು ಹೇಳುತ್ತಾನೋ, ಪ್ರಯತ್ನವನ್ನು ಮಾಡದಿರುವ ಅವರಿಬ್ಬರೂ ನೀಚರಾದವರು. ರಾಜ್ಯಸಾಧಕವಾದ ಯುದ್ಧದಲ್ಲಿ ಮೋಕ್ಷಸಾಧಕವಾದ ಶ್ರವಣಾದಿಕರ್ಮಗಳಲ್ಲಿ ಪ್ರಯತ್ನಮಾಡುವುದರಲ್ಲಿ ಯಾವನ ಬುದ್ಧಿಯಿರುತ್ತದೋ ಅವನು ಪ್ರಶಂಸಿಸಲ್ಪಡುತ್ತಾನೆ. ಯಾವನು ದೈವವನ್ನೇ ನಂಬಿ ಏನೂ ಪ್ರಯತ್ನಮಾಡದೆ ಸುಖವಾಗಿ ಮಲಗಿ ನಿದ್ರಿಸುತ್ತಾನೋ ಅಂತಹ ದುರ್ಬುದ್ಧಿಯುಳ್ಳ ಪುರುಷನು ಹಸಿಯ ಮಡಕೆಯು ನೀರಿನಲ್ಲಿ ಕರಗಿಹೋಗುವಂತೆ ನಾಶವನ್ನು ಹೊಂದುತ್ತಾನೆ.

ತಥೈವ ಹತಬುದ್ಧಿರ್ಯಃ ಶಕ್ತಃ ಕರ್ಮಣ್ಯಕರ್ಮಕೃತ್ ।
ಆಸೀತ ನ ಚಿರಂ ಜೀವೇದನಾಥ ಇವ ದುರ್ಬಲಃ ॥೧೩॥

ಅದರಂತೆ ಯಾವನು ನನ್ನ ಯೋಗ್ಯತೆಯಿಂದಲೇ ಎಲ್ಲವೂ ಆಗುತ್ತದೆಯೆಂದು ತಿಳಿದು ಕರ್ಮವನ್ನು ಮಾಡುವ ಸಾಮರ್ಥ್ಯವಿದ್ದರೂ ಕರ್ಮವನ್ನು ಮಾಡದೆ ಸುಮ್ಮನಿರುತ್ತಾನೆಯೋ ಅವನು ದುರ್ಬಲನಾದ ಅನಾಥನಂತೆ ಬಹುಕಾಲ ಬದುಕುವುದಿಲ್ಲ.

ಅಕಸ್ಮಾದಪಿ ಯಃ ಕಶ್ಚಿದ್ ಅರ್ಥಂ ಪ್ರಾಪ್ನೋತಿ ಪೂರುಷಃ ।
ತಂ ಹತೇನೇತಿ ಮನ್ಯಂತೇ ಸ ಹಿ ಯತ್ನೋ ನ ಕಸ್ಯಚಿತ್ ॥೧೪॥

ಯಾವನಾದರೂ ಪುರುಷನು ಅಕಸ್ಮಾತ್ ಎಂದರೆ ವಾಣಿಜ್ಯಾದಿ ಉಪಾಯಗಳಿಲ್ಲದೆ ಅಥವಾ ಪೂಜೆಗಳಿಂದ ಪ್ರಸನ್ನವಾದ ದೈವವಿಲ್ಲದೆ ಬಹಳ ಧನವನ್ನು ಪಡೆಯುತ್ತಾನೋ ಅದನ್ನು ಅವನ ಯೋಗ್ಯತೆಯಿಂದ ಪಡೆದುದು ಎಂದು ಅಲ್ಪಜ್ಞರು ತಿಳಿಯುತ್ತಾರೆ. ಸರ್ವೋತ್ತತ್ತಿಗೆ ನಿಮಿತ್ತ ಕಾರಣವಾದ ಕರ್ಮರೂಪವಾದ ಅದೃಷ್ಟವನ್ನೂ ಮತ್ತು ದೈವವನ್ನೂ ಎಂದೂ ಪರಿಗಣಿಸದೆ ಇರಲು ಸಾಧ್ಯವಿಲ್ಲವಾದ್ದರಿಂದ ಆ ಹತವೆಂಬ ಯೋಗ್ಯತೆಯು ಯಾರ ಪ್ರಯತ್ನವೂ ಅಲ್ಲ ಪ್ರಸನ್ನವಾದ ದೈವವೂ ಅಲ್ಲ.

ಯಚ್ಚಾಪಿ ಕಶ್ಚಿತ್ ಪುರುಷೋ ದಿಷ್ಟ್ಯಾ ಚಾಲಭತೇ ಧನಮ್ ।
ದೈವೇನ ವಿಧಿನಾ ಪಾರ್ಥ ತದ್ದೈವಮಿತಿ ನಿಶ್ಚಿತಮ್ ॥೧೫॥

ಯಾವನಾದರೂ ಒಬ್ಬ ಪುರುಷನು ಏನೂ ಪ್ರಯತ್ನವನ್ನು ಮಾಡದೆ ವಾಣಿಜ್ಯಾದಿವ್ಯಾಪಾರವಿಲ್ಲದೆ ತನ್ನ ಪ್ರಯತ್ನವೂ ಇಲ್ಲದೆ (ವೇದವ್ಯಾಸರ ಅನುಗ್ರಹದಿಂದ ಕೀಟವು ರಾಜ್ಯವನ್ನು ಪಡೆದಂತೆ) ಸಂಪತ್ತನ್ನು ಪಡೆದರೆ ಅದನ್ನು ದೈವದಿಂದ ಪಡೆದುದೆಂದು ಅಲ್ಪಜ್ಞರು ತಿಳಿಯುತ್ತಾರೆ.

ಯತ್ತ್ವಯಂ ಕರ್ಮಣಾ ಕಿಂಚಿತ್ ಫಲಮಾಪ್ನೋತಿ ಪೂರುಷಃ ।
ಪ್ರತ್ಯಕ್ಷಂ ಚಕ್ಷುಷಾ ದೃಷ್ಟಂ ತತ್ ಪೌರುಷಮಿತಿ ಸ್ಮೃತಮ್ ॥೧೬॥

ಯಾರಾದರೂ ಒಬ್ಬ ಪುರುಷನು ಪ್ರತ್ಯಕ್ಷವಾಗಿ ಸ್ವಯೋಗ್ಯ ವಾಣಿಜ್ಯಾದಿ ವ್ಯಾಪಾರದಿಂದ ಧನವನ್ನು ಗಳಿಸಿದರೆ ಅದು ಪುರುಷ ಪ್ರಯತ್ನ ಲಭ್ಯವಾದುದರಿಂದ ಅದು ಪೌರುಷವೆಂದು ತಿಳಿಯುತ್ತಾರೆ.

ಸ್ವಭಾವತಃ ಪ್ರವೃತ್ತೋಽನ್ಯಃ ಪ್ರಾಪ್ನೋತ್ಯರ್ಥಾನಕಾರಣಾತ್ ।
ತತ್ಸ್ವಭಾವಾತ್ಮಕಂ ವಿದ್ಧಿ ಫಲಂ ಪುರುಷಸತ್ತಮ ॥೧೭॥

ಸ್ವಭಾವದಿಂದಲೇ ಪ್ರವೃತ್ತನಾದ ಒಬ್ಬ ಪುರುಷನು ಬೇರೆ ಕಾರಣವಿಲ್ಲದೆ ಅರ್ಥವನ್ನು ಪಡೆದರೆ ಎಲೈ ಪುರುಷಶ್ರೇಷ್ಠನೇ! ಆ ಫಲವನ್ನು ಸ್ವಭಾವಾತ್ಮಕವೆಂದು ತಿಳಿ. (ಸ್ವಭಾವವೆಂದರೂ ಹಠವೆಂದರೂ ಒಂದೇ ವಸ್ತು. ಹಿಂದೆ ಹಠವೆಂದು ಹೇಳಿದ ವಿಷಯವನ್ನು ಇಲ್ಲಿ ಸ್ವಭಾವವೆಂದು ಇನ್ನೊಮ್ಮೆ ಹೇಳುತ್ತಿದ್ದಾರೆ.)

ಏವಂ ಹಠಾಚ್ಚ ದೈವಾಚ್ಚ ಸ್ವಭಾವಾತ್ ಕರ್ಮಣಸ್ತಥಾ ।
ಯಾನಿ ಪ್ರಾಪ್ನೋತಿ ಪುರುಷಃ ತತ್ಫಲಂ ಪೂರ್ವಕರ್ಮಣಃ ॥೧೮॥

ಹೀಗೆ ಸ್ವಭಾವರೂಪವಾದ ಹಠದಿಂದಾಗಲೀ ದೈವದಿಂದಾಗಲೀ ಅಥವಾ ಪ್ರಯತ್ನದಿಂದಾಗಲೀ ಪುರುಷನು ಏನನ್ನು ಪಡೆಯುತ್ತಾನೋ ಅದು ಪೂರ್ವಕರ್ಮದ ಫಲವಾಗಿರುತ್ತದೆ. (ಪ್ರತಿಯೊಂದು ಫಲಪ್ರಾಪ್ತಿಗೂ ಯೋಗ್ಯತೆಯೂ ದೈವಪ್ರಸಾದವೂ ಮತ್ತು ಪ್ರಯತ್ನವೂ ಮೂರು ಅವಶ್ಯಕವಾಗಿವೆ. ಒಂದೊಂದರಿಂದಲೇ ಫಲವುಂಟಾಗುತ್ತದೆ ಎಂದು ತಾತ್ಕಾಲಿಕ ದರ್ಶಿಗಳಾದ ಅಲಜ್ಞರು ತಿಳಿಯುತ್ತಾರೆ. ಆದರೆ ಎಲ್ಲಾ ಕರ್ಮವೂ ಪೂರ್ವಕರ್ಮದ ಫಲ ಎಂದು ಹೇಳಿರುವುದರಿಂದ ಈ ಜನ್ಮದಲ್ಲಿ ಪ್ರಯತ್ನವು ಮಾತ್ರ ಕಂಡುಬಂದರೆ ಅದರ ಜೊತೆಯಲ್ಲಿ ಹಿಂದಿನ ಜನ್ಮದ ದೇವತಾರಾಧನೆಯನ್ನೂ ಯೋಗ್ಯತಾರೂಪವಾದ ಹಠವನ್ನೂ ತೆಗೆದುಕೊಳ್ಳಬೇಕು. ಅದರಂತೆ ದೈವವೇ ಕಾರಣವೆಂದು ತೋರುವ ಸ್ಥಳದಲ್ಲಿಯೂ ಹಿಂದಿನ ಜನ್ಮದ ಅವನ ಪ್ರಯತ್ನವನ್ನೂ ಮತ್ತು ಹಠವನ್ನೂ ತೆಗೆದುಕೊಳ್ಳಬೇಕು. ಮತ್ತು ಹಠದಿಂದಲೇ ಫಲವೂ ತೋರುವ ಸ್ಥಳದಲ್ಲಿಯೂ ಹಿಂದಿನ ಜನ್ಮದಲ್ಲಿ ಪ್ರಸನ್ನವಾದ ದೈವವನ್ನೂ ಮತ್ತು ಪ್ರಯತ್ನವನ್ನೂ ತೆಗೆದುಕೊಳ್ಳಬೇಕು. ಹೀಗಾಗಿ ಮಿಲಿತವಾದ ಈ ಮೂರು ಕಾರಣಗಳಿಂದ ಪ್ರಮೇಯಕ್ಕೆ ಎಲ್ಲಿಯೂ ವ್ಯಭಿಚಾರವಿಲ್ಲ. ಒಂದೊಂದೇ ಕಾರಣವೆಂದು ತಿಳಿದುಕೊಳ್ಳುವವರು ಅಲಜ್ಞರು. ಜ್ಞಾನಿಗಳು ಮಾತ್ರ ಇವು ಮೂರು ಮಿಲಿತವಾದಕಾರಣವೆಂದು ತಿಳಿಯುತ್ತಾರೆ. ಮುಂದಿನ ಶ್ಲೋಕಗಳಲ್ಲಿ ಇದನ್ನೇ ಎಂದರೆ ಇವು ಮೂರೇ ಕಾರಣ ನಾಲ್ಕನೆಯ ಕಾರಣವಿಲ್ಲವೆಂದು ಸ್ಪಷ್ಟಪಡಿಸುತ್ತಾರೆ.)

ಧಾತಾऽಪಿ ಹಿ ಸ್ವಕರ್ಮೈವ ತೈಸ್ತೈರ್ಹೇತುಭಿರೀಶ್ವರಃ ।
ವಿದಧಾತಿ ವಿಭಜ್ಯೇಹ ಫಲಂ ಪೂರ್ವಕೃತಂ ನೃಣಾಮ್ ॥೧೯॥

ಫಲಪ್ರದನಾದ ನಾರಾಯಣನೂ ಸಹ ಹಿಂದಿನಜನ್ಮದ ಕರ್ಮವನ್ನು ಅನುಸರಿಸಿ ಉಳಿದ ಕಾರಣಗಳನ್ನು ಗಮನಿಸಿ ಜೀವರ ಕರ್ಮಕ್ಕೆ ಅನುಗುಣವಾದ ಫಲಗಳನ್ನು ವಿಭಾಗಮಾಡಿ ಬೇರೆಬೇರೆ ಜೀವರಿಗೆ ಬೇರೆಬೇರೆ ರೀತಿಯಲ್ಲಿ ಕೊಡುತ್ತಾನೆ.

ಯದ್ಧಿ ಯಃ ಪುರುಷಃ ಕಶ್ಚಿತ್ ಕುರುತೇ ವೈ ಶುಭಾಶುಭಮ್ ।
ತದ್ ಧಾತ್ರಾ ವಿಹಿತಂ ವಿದ್ಧಿ ಪೂರ್ವಕರ್ಮಫಲೋದಯಮ್ ॥೨೦॥

ಯಾವುದೇ ಪುರುಷನು ಯಾವುದೇ ಶುಭವನ್ನಾಗಲೀ ಅಶುಭವನ್ನಾಗಲೀ ಮಾಡಿದರೂ ಅದು ಪೂರ್ವಕರ್ಮದ ಫಲರೂಪವಾಗಿ ಧಾತೃವಾದ ನಾರಾಯಣನಿಂದ ವಿಹಿತವಾದದ್ದು ಎಂದು ತಿಳಿ.

ಕಾರಣಂ ತಸ್ಯ ದೇಹೋऽಯಂ ಧಾತುಃ ಕರ್ಮಣಿ ಕರ್ಮಣಿ ।
ಸ ಯಥಾ ಪ್ರೇರಯತ್ಯೇನಂ ತಥಾऽಯಂ ಕುರುತೇऽವಶಃ ॥೨೧॥

ಆ ಧಾತೃವಿನ ಪ್ರೇರಣೆಯಿಂದ ಉಂಟಾಗುವ ಪ್ರತಿಯೊಂದು ಕರ್ಮದಲ್ಲಿಯೂ (ಕರ್ಮಕ್ಕೂ) ಜೀವನ ಈ ದೇಹವು ಕಾರಣವಾಗಿದೆ. ಅವನು ಹೇಗೆ ಪ್ರೇರಿಸುತ್ತಾನೋ ಅದರಂತೆ ಜೀವನು ಅವಶನಾಗಿ ನಡೆದು ಕೊಳ್ಳುತ್ತಾನೆ.

ತೇಷು ತೇಷು ಹಿ ಕೃತ್ಯೇಷು ವಿನಿಯೋಕ್ತಾ ಮಹೇಶ್ವರಃ ।
ಸರ್ವಭೂತಾನಿ ಕೌಂತೇಯ ಕಾರಯತ್ಯವಶಾನ್ಯಪಿ ॥೨೨॥

ಎಲೈ ಕೌಂತೇಯನೇ! ಜೀವರನ್ನು ಆಯಾಕಾರ್ಯಗಳಲ್ಲಿ ತೊಡಗಿಸುವವನು ಆ ಮಹೇಶ್ವರ. ಅವನು ಜೀವರು ಅವಶರಾಗಿ ಆ ಕಾರ್ಯಗಳನ್ನು ಮಾಡುವಂತೆ ಪ್ರೇರಿಸುತ್ತಾನೆ.

ಮನಸಾ ತದ್ ವಿನಿಶ್ಚಿತ್ಯ ಪಶ್ಚಾತ್ ಪ್ರಾಪ್ನೋತಿ ಕರ್ಮಣಾ ।
ಬುದ್ಧಿಪೂರ್ವಂ ಸ್ವಯಂ ಧೀರಃ ಪುರುಷಸ್ತತ್ರ ಕಾರಣಮ್ ॥೨೩॥

ಮನಸ್ಸಿನಿಂದ ಭವಿಷ್ಯತ್ ಫಲವನ್ನು ನಿಶ್ಚಯಿಸಿ ಅನಂತರ ಬುದ್ಧಿಪೂರ್ವಕವಾಗಿ ಧೀರನಾದವನು ಆ ಫಲವನ್ನು ತಾನು ಪಡೆಯುತ್ತಾನೆ. ಅಲ್ಲಿ ಪುರುಷ ಪ್ರಯತ್ನವು ಕಾರಣ.

ಸಂಖ್ಯಾತುಂ ನೈವ ಶಕ್ಯಾನಿ ಕರ್ಮಾಣಿ ಪುರುಷರ್ಷಭ ।
ಅಗಾರನಗರಾಣಾಂ ಹಿ ಸಿದ್ಧಿಃ ಪುರುಷಹೈತುಕೀ ॥೨೪॥

ಎಲೈ ಪುರುಷಶ್ರೇಷ್ಠನೇ! ಕರ್ಮಗಳನ್ನು ಎಣಿಸಲು ಸಾಧ್ಯವಿಲ್ಲ. ಗೃಹ ನಗರ ಮೊದಲಾದ ವಸ್ತುಗಳ ಸಿದ್ಧಿಯು ಬಡಗಿ ಕಮ್ಮಾರ ಮೊದಲಾದವರ ಪುರುಷಪ್ರಯತ್ನದಿಂದಲೇ ಉಂಟಾಗುತ್ತದೆ. (ಅದೃಷ್ಟರೂಪ ಕಾರಣವಾದರೂ ದೃಷ್ಟಕಾರಣವನ್ನು ಮೇಳನಮಾಡಿ ಕಾರ್ಯವನ್ನು ಉತ್ಪಾದನೆ ಮಾಡುವುದರಿಂದ ದೈವಪ್ರಸಾದ ಮತ್ತು ಯೋಗ್ಯತೆ ಎಂಬ ಅದೃಷ್ಟಕಾರಣಗಳಿದ್ದರೂ ದೃಷ್ಟವಾದ ಪ್ರಯತ್ನವಿಲ್ಲದೆ ಈ ಲೋಕದಲ್ಲಿ ಯಾವುದೂ ಸಾಧ್ಯವಾಗುವುದಿಲ್ಲ. ಹೀಗೆ ಹಠದಿಂದ ಅಥವಾ ದೈವದಿಂದ ರಾಜ್ಯಪ್ರಾಪ್ತಿಯಾದರೂ ನಿಧಿನಿಕ್ಷೇಪಗಳಿಂದ ಧನಲಾಭವಾಗುತ್ತದೆ. ಅನಂತರ ಧನನಿಮಿತ್ತವಾದ ಗಜ ತುರಗ ಸೇನಾಪ್ರಾಪ್ತಿ ಸೇನೆಯಿಂದ ಶತ್ರುಗಳ ಪರಾಜಯ ಆದರಿಂದ ರಾಜ್ಯಲಾಭ ಹೀಗೆ ಎಲ್ಲ ಕಡೆಗಳಲ್ಲಿಯೂ ಪುರುಷ ಪ್ರಯತ್ನವು ಅವಶ್ಯಕವಾಗಿದೆ. ಆದರೆ ಅಷ್ಟೇ ಸಾಲದು ಮೂರೂ ಸೇರಿ ಕಾರಣವಾಗುತ್ತದೆ ಎಂದು ಅಭಿಪ್ರಾಯ.)

ತಿಲೇ ತೈಲಂ ಗವಿ ಕ್ಷೀರಂ ಕಾಷ್ಠೇ ವಾ ಪಾವಕಂ ತಥಾ ।
ಧಿಯಾ ಧೀರೋ ವಿಜಾನೀಯಾದುಪಾಯಾಶ್ಚಾರ್ಥ ಸಿದ್ಧಯೇ ॥೨೫॥

ತಿಲದಲ್ಲಿ ತೈಲವನ್ನು ಪಡೆಯಲು ತೈಲಯಂತ್ರಾದಿ ಪುರುಷಪ್ರಯತ್ನ, ಗೋವಿನಿಂದ ಕ್ಷೀರವನ್ನು ಪಡೆಯಲು ದೋಹನಾದಿ ಪ್ರಯತ್ನ, ಕಾಷ್ಠದಿಂದ ಅಗ್ನಿಯನ್ನು ಪಡೆಯಲು ಮಥನಾದಿ ಪ್ರಯತ್ನ, ಅರ್ಥಸಿದ್ಧಿಗಾಗಿ ಧೀರನಾದವನು ಈ ಉಪಾಯಗಳನ್ನು ಮುಂಚೆಯೇ ತಿಳಿಯಬೇಕು.

ತತಃ ಪ್ರವೃಣುತೇ ಪಶ್ಚಾತ್ ಕಾರಣಂ ಚಾಸ್ಯ ಸಿದ್ಧಯೇ ।
ತಾಂ ಸಿದ್ಧಿಮುಪಜೀವಂತಿ ಕರ್ಮಣಾಮಿಹ ಜಂತವಃ ॥೨೬॥

ಅನಂತರ ಅವನು ಅರ್ಥಸಿದ್ಧಿಗಾಗಿ ಯೋಗ್ಯವಾದ ಕಾರಣಗಳನ್ನು ತೊಡಗಿಸುತ್ತಾನೆ. ಪ್ರಯತ್ನವನ್ನು ಮಾಡಿ ಆ ಫಲಸಿದ್ಧಿಯನ್ನು ಪಡೆದು ತನ್ನ ಕರ್ಮದಿಂದ ಎಂದರೆ ಪ್ರಯತ್ನದಿಂದ ಉಪಜೀವಿಸುತ್ತಾನೆ.

ಕುಶಲೇನ ಕೃತಂ ಕರ್ಮ ಕರ್ತ್ರಾ ಸಾಧು ವಿನಿಶ್ಚಿತಮ್ ।
ಇದಂ ಚಾಕುಶಲೇನೇತಿ ವಿಶೇಷಾದುಪಲಭ್ಯತೇ ॥೨೭॥

ನಿಪುಣನಾದವನು ಮಾಡಿದ ಕರ್ಮವು ಚೆನ್ನಾಗಿರುವುದು. ಅಕುಶಲನು ಮಾಡಿದ ಕಾರ್ಯವು ಚೆನ್ನಾಗಿಲ್ಲದಿರುವುದು ಪ್ರತ್ಯಕ್ಷದಿಂದಲೇ ತಿಳಿಯುತ್ತದೆ. (ಪುರುಷ ಪ್ರಯತ್ನಕ್ಕೆ ಕಾರಣತ್ವವೇ ಇಲ್ಲದಿದ್ದರೆ ಈ ವೈಲಕ್ಷಣ್ಯವು ಕೂಡುವುದಿಲ್ಲ.)

ಇಷ್ಟಾಪೂರ್ತಫಲಂ ನ ಸ್ಯಾನ್ನ ಶಿಷ್ಯೋ ನ ಗುರುರ್ಭವೇತ್ ।
ಪುರುಷಃ ಕರ್ಮಸಾಧ್ಯೇಷು ಸ್ಯಾಚ್ಚೇದಯಮಕಾರಣಮ್ ॥೨೮॥

ಈಗ ಪ್ರಯತ್ನವನ್ನು ಮಾಡುವ ಪುರುಷನು ಕರ್ಮಸಾಧ್ಯಫಲಗಳಿಗೆ ಕಾರಣವಲ್ಲದಿದ್ದರೆ ಇಷ್ಟಾಪೂರ್ತದಲ್ಲಿ ಯಾರೂ ಪ್ರಯತ್ನಮಾಡಲಾರರು. ಇಷ್ಟಾಪೂರ್ತಫಲವು ದೊರೆಯಲಾರದು. ಶಿಷ್ಯನನ್ನು ಸಂಪಾದಿಸಲು ಅಥವಾ ಅಧ್ಯಯನಮಾಡಲು ಯಾರೂ ಪ್ರಯತ್ನಪಡಲಾರರು. ಆದ್ದರಿಂದ ಶಿಷ್ಯನೂ ಸಿದ್ಧಿಸಲಾರ ಗುರುವೂ ಸಿದ್ಧಿಸಲಾರ. (ಇಷ್ಟ ಎಂದರೆ ಯಾಗಾದಿಗಳು ಪೂರ್ತವೆಂದರೆ ಕೆರೆಭಾವಿಗಳ ನಿರ್ಮಾಣಾದಿಗಳು).

ಕರ್ತೃತ್ವಾದೇವ ಪುರುಷಃ ಕರ್ಮಸಿದ್ಧ್ಯೌ ಪ್ರಶಸ್ಯತೇ ।
ಅಸಿದ್ಧೌ ನಿಂದ್ಯತೇ ಚಾಪಿ ಕರ್ಮನಾಶಃ ಕಥಂ ತ್ವಿಹ ॥೨೯॥

ಪುರುಷನಿಗೆ ಕರ್ತೃತ್ವವಿರುವುದರಿಂದಲೇ (ಪುರುಷ ಪ್ರಯತ್ನಕ್ಕೆ ಕಾರಣತ್ವವಿರುವುದರಿಂದಲೇ) ಕರ್ಮಸಿದ್ಧಿಯು ಉಂಟಾದಾಗ ಆ ಪುರುಷನು ಪ್ರಶಂಸಿಸಲ್ಪಡುತ್ತಾನೆ. ಕರ್ಮಸಿದ್ಧಿಯಾಗದಿದ್ದರೆ ಕರ್ಮಸಿದ್ಧಿಯಾಗದಿರುವುದಕ್ಕೆ ಏನು ಕಾರಣವೆಂದು ವಿಚಾರಮಾಡಿ ಅಂತಹ ಪ್ರಯತ್ನವನ್ನು ಮಾಡಿದ ಪುರುಷನು ನಿಂದಿಸಲ್ಪಡುತ್ತಾನೆ.

ತತಃ ಪ್ರವರ್ತತೇ ಪಶ್ಚಾತ್ ತ್ರಿಭಿಸ್ತಸ್ಯೇಹ ಕಾರಣೈಃ ।
ಕರ್ಮಣೈಕೇ ಹಠೇನೈಕೇ ದಿಷ್ಟೇನೈಕೇ ವದಂತ್ಯುತ ।
ಪುರುಷಪ್ರಯತ್ನಜಂ ಕಿಂಚಿದ್ ತ್ರೈಧಮೇತತ್ಪಶ್ಯತೇ ॥೩೦॥

ಆದ್ದರಿಂದ ಈ ಮೂರು ಕಾರಣಗಳಿಂದ ಇಲ್ಲಿ ಎಲ್ಲಾ ಕರ್ಮಗಳೂ ಪ್ರವೃತ್ತವಾಗುತ್ತವೆ. ಕೆಲವರು ಕೇವಲ ಪ್ರಯತ್ನದಿಂದಲೇ ಎಂದೂ ಕೆಲವರು ಕೇವಲ ಯೋಗ್ಯತೆಯಿಂದಲೇ ಎಂದೂ ಕೆಲವರು ಕೇವಲ ದೈವದಿಂದಲೇ ಎಂದೂ ಹೇಳುತ್ತಾರೆ. ಅವು ಮೂರೂ ಸರಿಯಾದುದಲ್ಲ. ಕೇವಲ ಪುರುಷಪ್ರಯತ್ನದಿಂದ ಯಾವುದೂ ಸಿದ್ಧಿಸುವುದಿಲ್ಲ. ಮೂರೂ ಸೇರಿ ಸಿದ್ಧಿಸುತ್ತದೆ ಎಂಬ ವಿಷಯವು ಪ್ರಶಂಸಿಸಲ್ಪಡುತ್ತದೆ.

ನ ಚೈವೈತಾವತಾ ಕಾರ್ಯಂ ಮನ್ಯಂತ ಇತಿ ಚಾಪರೇ ।
ಅಸ್ತಿ ಸರ್ವಮದೃಶ್ಯಂ ತತ್ ದೈವಾದ್‌ದೃಶ್ಯಂ ತಥಾ ಹಠಃ ॥೩೧॥

ಈ ಮೂರರಿಂದ ಕಾರ್ಯವಾಗುವುದಿಲ್ಲವೆಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಸ್ವಭಾವ ಪುರುಷ(ಜೀವ) ಪ್ರಯತ್ನ ಮತ್ತು ದೈವಗಳಲ್ಲಿ ಜೀವ ಮತ್ತು ಅವನ ಪ್ರಯತ್ನವು ದೃಶ್ಯವಾದರೂ ಉಳಿದೆರಡು ಅದೃಶ್ಯವಾದವುಗಳು ಆದ್ದರಿಂದ ನಿರೀಶ್ವರವಾದಿಗಳು ಅಂತಹ ಕಾರಣವನ್ನು ಒಪ್ಪದೆ ಅದೃಷ್ಟ ಮತ್ತು ಪುರುಷ ಪ್ರಯತ್ನ ಎರಡೇ ಕಾರಣಗಳು ಸಾಕು ಎಂದು ಹೇಳುತ್ತಾರೆ. ಆದರೆ ಅದು ಸರಿಯಲ್ಲ. ದೈವವು ಕಾಣುವುದಿಲ್ಲ ಎಂಬ ಕಾರಣದಿಂದ ಅದನ್ನು ಒಪ್ಪದಿದ್ದರೆ ದೈವದಂತೆ ಅದೃಷ್ಟವೂ ಕಾಣುವುದಿಲ್ಲವಾದ್ದರಿಂದ ಅದನ್ನೂ ಒಪ್ಪಬಾರದು. ಒಂದನ್ನು ಒಪ್ಪಿ ಒಂದನ್ನು ಬಿಡುವುದು ನ್ಯಾಯವಲ್ಲ. ಮತ್ತು ದೈವವಾಗಲೀ ಯೋಗ್ಯತೆಯಾಗಲೀ ಅದೃಶ್ಯವೆಂಬುದು ಸರಿಯಲ್ಲ. ಏಕೆಂದರೆ ದೈವವೂ ಅದೃಷ್ಟವೂ ಮತ್ತು ತ್ರಿವಿಧ ಪುರುಷ ಸ್ವಭಾವವೂ ದೃಷ್ಟವಾಗಿದೆ. ದೈವವು ಯೋಗಿಗಳಿಂದ ದೃಷ್ಟವಾಗಿದೆ. ತ್ರಿವಿಧ ಪುರುಷ ಸ್ವಭಾವವು ಎಲ್ಲರಿಂದಲೂ ದೃಷ್ಟವಾಗಿದೆ.

ದೃಶ್ಯತೇ ವೈ ಹಠಾಚ್ಚೈವ ದಿಷ್ಟಾಚ್ಚಾರ್ಥಸ್ಯ ಸಂಗತಿಃ ।
ಕಿಂಚಿದ್ದೈವಾದ್ಧಠಾತ್ಕಿಂಚಿತ್ ಕಿಂಚಿದೇವ ಸ್ವಕರ್ಮತಃ ॥೩೨॥

ಪುರುಷಃ ಫಲಮವಾಪ್ನೋತಿ ಚತುರ್ಥಂ ನಾತ್ರ ಕಾರಣಮ್ ।
ಕುಶಲಾಃ ಪ್ರತಿಜಾನಂತಿ ಯೇ ತತ್ತ್ವವಿದುಷೋ ಜನಾಃ ॥೩೩॥

ಹಠದಿಂದಲೂ ದೈವದಿಂದಲೂ ಅರ್ಥದ ಸಿದ್ಧಿಯಾಗುವುದು ಕಂಡು ಬರುತ್ತದೆ. ಹಠದಿಂದ ಸ್ವಲ್ಪಭಾಗವೂ ದೈವದಿಂದ ಸ್ವಲ್ಪಭಾಗವೂ ಮತ್ತು ಪುರುಷ ಪ್ರಯತ್ನದಿಂದ ಸ್ವಲ್ಪಭಾಗವೂ ಉಂಟಾಗುತ್ತದೆ. ಒಂದು ಕಾರ್ಯಸಿದ್ಧಿಗೆ ಈ ಮೂರು ಕಾರಣಗಳನ್ನು ಬಿಟ್ಟುನಾಲ್ಕನೆಯ ಕಾರಣವಿಲ್ಲ. ಕುಶಲರಾದ ತತ್ತಜ್ಞಾನಿಗಳು ಪ್ರತಿಕಾರ್ಯದಲ್ಲಿಯೂ ಈ ಮೂರಕ್ಕೂ ಕಾರಣತ್ವಗಳನ್ನು ತಿಳಿಯುತ್ತಾರೆ.

ತಥೈವ ಧಾತಾ ಭೂತಾನಾಮಿಷ್ಟಾನಿಷ್ಟಫಲಪ್ರದಃ ।
ಯದಿ ನ ಸ್ಯಾನ್ನ ಭೂತಾನಾಂ ಕೃಪಣೋ ನಾಮ ಕಶ್ಚನ ॥೩೪॥

ಹಾಗೆಯೇ ಜೀವರಿಗೆ ಇಷ್ಟಾನಿಷ್ಟ ಫಲಪ್ರದನಾದ ಒಬ್ಬ ದೇವರು ಇಲ್ಲದಿದ್ದರೆ ಮನುಷ್ಯರಲ್ಲಿ ಯಾವನೂ ದರಿದ್ರನಾಗಿರಬಾರದಾಗಿದ್ದಿತು. (ಹೀಗೆ ಪೂರ್ವಪಕ್ಷಮಾಡುವವರಿಗೆ ಜೀವನ ಯೋಗ್ಯತೆ ಮತ್ತು ಪ್ರಯತ್ನ ಎಲ್ಲರಿಗೂ ಸಮವಾಗಿರುವುದರಿಂದ ಒಬ್ಬನು ಶ್ರೀಮಂತ ಒಬ್ಬನು ದರಿದ್ರ ಎಂಬ ವಿಭಾಗಕ್ಕೆ ಕಾರಣವಿಲ್ಲವೆಂದು ಅಭಿಪ್ರಾಯ.)

ಯಂ ಯಮರ್ಥಮಭಿಪ್ರೇಪ್ಸುಃ ಕುರುತೇ ಕರ್ಮ ಪೂರುಷಃ ।
ತತ್ತಸ್ಯ ಫಲಮೇವ ಸ್ಯಾದ್ ಯದಿ ನ ಸ್ಯಾತ್ ಕಿಲಾಶುಭಮ್ ॥೩೫॥

ಯಾವಯಾವ ಫಲವನ್ನು ಪಡೆಯುವ ಉದ್ದೇಶದಿಂದ ಪುರುಷನು ಪ್ರಯತ್ನವನ್ನು ಮಾಡುತ್ತಾನೆಯೋ ಅದಕ್ಕೆ ಪ್ರತಿಬಂಧಕವಿಲ್ಲದಿದ್ದರೆ ಅವನು ಆ ಫಲಗಳನ್ನು ಪಡೆಯಲೇಬೇಕಾಗಿದ್ದಿತು.

ತ್ರಿದ್ವಾರಾಮರ್ಥಸಿದ್ಧಿಂ ವೈ ನಾನುಪಶ್ಯಂತಿ ಯೇ ನರಾಃ ।
ತಥೈವಾನರ್ಥಸಿದ್ಧಿಂ ಚ ಯಥಾ ಲೋಕಾಸ್ತಥೈವ ತೇ ॥೩೬॥

ಯಾರು ಇಂತಹ ಅರ್ಥಸಿದ್ಧಿಯು ಅಥವಾ ಅನರ್ಥಸಿದ್ಧಿಯು ಮೂರುಕಾರಣಗಳಿಂದ ಉಂಟಾಗುವುವು ಎಂದು ತಿಳಿಯುವುದಿಲ್ಲವೋ ಅವರು ಪಾಮರಜನರಂತೆ ಇರುತ್ತಾರೆ. ತತ್ತಜ್ಞರಲ್ಲ.

ಕರ್ತವ್ಯಂ ತ್ವೇವ ಕರ್ಮೇತಿ ಮನೋರೇಷ ವಿನಿಶ್ಚಯಃ ।
ಏಕಾಂತೇನ ಹ್ಯನೀಹೋಽಯಂ ಪರಾಭವತಿ ಪೂರುಷಃ ॥೩೭॥

ಕರ್ಮವನ್ನುಮಾಡಲೇ ಬೇಕು ಎಂದು ಮನುವಿನ ದೃಢವಾದ ನಿಶ್ಚಯ. ಏನೂ ಪ್ರಯತ್ನವನ್ನು ಮಾಡದಿರುವ ಪುರುಷನು ನಿಯಮೇನ ಪರಾಭವವನ್ನು ಹೊಂದುತ್ತಾನೆ.

ಕುರ್ವತೋ ಹಿ ಭವತ್ಯೇವ ಕರ್ಮ ಚಾಸ್ಯ ಪ್ರಶಸ್ಯತೇ ।
ಏಕಾಂತಫಲಸಿದ್ಧಿಂ ತು ನ ವಿಂದತ್ಯಲಸಃ ಕ್ವಚಿತ್ ॥೩೮॥

ಪ್ರಯತ್ನವನ್ನು ಮಾಡುವವನಿಗೆ ಫಲವು ದೊರೆತೇ ದೊರೆಯುತ್ತದೆ. ಅವನ ಆ ಕರ್ಮವು ಪ್ರಶಂಸಿಸಲ್ಪಡುತ್ತದೆ. ಆದರೆ ಯಾರು ಆಲಸ್ಯದಿಂದ ಪ್ರಯತ್ನಮಾಡುವುದಿಲ್ಲವೋ ಅವನಿಗೆ ನಿಶ್ಚಯವಾಗಿ ಎಂದೂ ಫಲಸಿದ್ಧಿಯಾಗುವುದಿಲ್ಲ.

ಅಸಂಭವೇ ತತ್ರ ಹೇತುಃ ಪ್ರಾಯಶ್ಚಿತ್ತಂ ತು ಲಕ್ಷ್ಯತೇ ।
ಕೃತೇ ಕರ್ಮಣಿ ರಾಜೇಂದ್ರ ತಥಾऽऽನೃಣ್ಯಮವಾಪ್ನುತೇ ॥೩೯॥

ಆಲಸ್ಯವುಳ್ಳ ಮನುಷ್ಯನಿಗೆ ಫಲವು ದೊರೆಯದಿರುವುದಕ್ಕೆ ಹೆಚ್ಚಾಗಿ ಅವನ ಮನಸ್ಸೇ ಕಾರಣವೆಂದು ತಿಳಿಯುತ್ತದೆ. ಎಲೈ ರಾಜೇಂದ್ರನೇ! ತನಗೆ ವಿಹಿತವಾದ ಕರ್ಮವನ್ನು ಮಾಡಿದರೆ ಆ ಪುರುಷನು ಋಣ ಮುಕ್ತನಾಗುತ್ತಾನೆ.

ಅಲಕ್ಷ್ಮೀರಾವಿಶತ್ಯೇನಂ ಶಯಾನಮಲಸಂ ನರಮ್ ।
ನಿಃಸಂಶಯಂ ಫಲಂ ಲಬ್ಧ್ವಾ ದಕ್ಷೋ ಭೂರಿಮುಪಾಶ್ನುತೇ ॥೪೦॥

ಯಾವ ಪುರುಷನು ಆಲಸ್ಯದಿಂದ ಮಲಗಿರುತ್ತಾನೆಯೋ ಅವನನ್ನು ಅಲಕ್ಷ್ಮಿಯು ಪ್ರವೇಶಿಸುತ್ತಾಳೆ. ದಕ್ಷನಾದವನು ಪ್ರಯತ್ನವನ್ನು ಮಾಡಿ ಫಲವನ್ನು ಪಡೆದು ಮಹಾ ವೈಭವವನ್ನು ಅನುಭವಿಸುತ್ತಾನೆ.

ಅನರ್ಥಂ ಸಂಶಯಾವಸ್ಥಂ ವೃಣ್ವತೇ ಮುಕ್ತಸಂಶಯಾಃ ।
ಧೀರಾ ನರಾಃ ಕರ್ಮರತಾ ನ ತು ನಿಃಸಂಶಯಂ ಕ್ವಚಿತ್ ॥೪೧॥

ಸಂಶಯಾವಸ್ಥೆಯಲ್ಲಿ ಇರುವವನನ್ನು ಸಂಶಯಾವಸ್ಥೆಯಲ್ಲಿ ಇರುವ ಉಳಿದವರು ತಮ್ಮ ವಶವನ್ನಾಗಿ ಮಾಡಿಕೊಳ್ಳುತ್ತಾರೆ. ಅವನಿಗೆ ಅನರ್ಥವು ಉಂಟಾಗುತ್ತದೆ. ಸಂಶಯರಹಿತನಾದ ಪುರುಷನು ಅಂತಹವರಿಗೆ ವಶನಾಗುವುದಿಲ್ಲ. ಅಂತಹ ಧೀರಪುರುಷರು ತಮ್ಮ ಕರ್ಮಗಳಲ್ಲಿ ತಾವು ನಿರತರಾಗಿರುತ್ತಾರೆ.

ವಿಕಾಂತೇನ ಹ್ಯನರ್ಥೋಽಯಂ ವರ್ತತೇಽಸ್ಮಾಸು ಸಾಂಪ್ರತಮ್ ।
ಸ ತು ನಿಃಸಂಶಯಂ ನ ಸ್ಯಾತ್ ತ್ವಯಿ ಕರ್ಮಣ್ಯವಸ್ಥಿತೇ ।
ಅಥವಾ ಸಿದ್ಧಿರೇವ ಸ್ಯಾನ್ಮಹಿಮಾನಂ ತದೈವ ತೇ ॥೪೨॥

ಸದ್ಯದಲ್ಲಿ ನಮಗೆ ಈ ವನವಾಸರೂಪವಾದ ಅನರ್ಥವು ನಿಶ್ಚಯವಾಗಿ ಉಂಟಾಗಿದೆ. ನೀನು ಪರಾಕ್ರಮವನ್ನು ವಹಿಸುವುದಾದರೆ ಈ ಅನರ್ಥವು ಖಂಡಿತವಾಗಿ ನಿವೃತ್ತವಾಗುತ್ತದೆ. (ರಾಜ್ಯಲಾಭಾದಿಕಾರ್ಯಸಿದ್ಧಿಯು ಆಗುತ್ತದೆ.)

ವೃಕೋದರಸ್ಯ ಬೀಭತ್ಸೋರ್ಭ್ರಾತ್ರೋಶ್ಚ ಯಮಯೋರಪಿ ।
ಅನ್ಯೇಷಾಂ ಕರ್ಮ ಸಫಲಮಸ್ಮಾಕಮಪಿ ವಾ ಪುನಃ ।
ವಿಪ್ರಕರ್ಷೇಣ ಬುಧ್ಯೇತ ಕೃತಕರ್ಮಾ ಯಥಾಬಲಮ್ ॥೪೩॥

ಪೃಥಿವೀಂ ಲಾಂಗಲೇನೈವ ಕೃಷ್ಟ್ವಾ ಬೀಜಂ ವಪತ್ಯುತ ।
ಆಸ್ತೇಽತ್ರ ಕರ್ಷಕಸ್ತೂಷ್ಣೀಂ ಪರ್ಜನ್ಯಸ್ತತ್ರ ಕಾರಣಮ್ ।
ವೃಷ್ಟಿಶ್ಚೈವಾನುಗೃಹ್ಣೀಯಾದನೇನಾಸ್ತತ್ರ ಕರ್ಷಕಃ ॥೪೪॥

ಅಥವಾ ರಾಜ್ಯರೂಪವಾದ ಲಾಭವೇ ಸಿದ್ಧಿಯಾಗುತ್ತದೆ. ನೀನು ಕಾರ್ಯಪ್ರವೃತ್ತನಾದರೆ ಪ್ರಯತ್ನವನ್ನುಮಾಡುವ ಕಾಲದಲ್ಲಿಯೇ ನಿನ್ನ ವೃಕೋದರನ ಅರ್ಜುನನ ಮತ್ತು ನಕುಲ ಸಹದೇವರ ಸಾಮರ್ಥ್ಯವು (ಮಹಿಮೆಯು) ನಿನಗೆ ತಿಳಿಯುತ್ತದೆ. ಅಥವಾ ಮಾಡಬೇಕಾದ ಪ್ರಯತ್ನವನ್ನು ನಿನ್ನ ಶಕ್ತಿಯಿದ್ದಷ್ಟು ಮಾಡಿದರೆ ಹದಿಮೂರುವರ್ಷದ ಅನಂತರವಾದರೂ ನಮ್ಮ ಕರ್ಮವು ಸಫಲವೋ ಅಥವಾ ದುರ್ಯೋಧನಾದಿಗಳ ಕರ್ಮವು ಸಫಲವೋ ಎಂದು ನಿನಗೆ ತಿಳಿಯುತ್ತದೆ. ಭೂಮಿಯನ್ನು ನೇಗಿಲಿನಿಂದ ಉತ್ತು ಕೃಷೀವಲನು ಬೀಜವನ್ನು ಬಿತ್ತುತ್ತಾನೆ. ಬೀಜವನ್ನು ಬಿತ್ತಿ ಸುಮ್ಮನೆ ಇರುತ್ತಾನೆ. ಫಲವನ್ನು ಪಡೆಯುವುದಕ್ಕೆ ಅಲ್ಲಿ ಪರ್ಜನ್ಯನು ಕಾರಣವೃಷ್ಟಿಯು ಅನುಗ್ರಹವನ್ನು ಮಾಡಿದರೆ ಅಲ್ಲಿ ಕರ್ಷಕನು ನಿರ್ದುಃಖನಾಗುತ್ತಾನೆ.

ಯದನ್ಯಃ ಪುರುಷಃ ಕುರ್ಯಾತ್ ಕೃತಂ ತತ್ ಸಕಲಂ ಮಯಾ ।
ತಚ್ಚೇದಂ ಫಲಮಸ್ಮಾಕಂ ನಾಪರಾಧೋಽಸ್ತಿ ನಃ ಕ್ವಚಿತ್ ।
ಇತಿ ಧೀರೋಽನ್ವವೇಕ್ಷ್ಯೈವ ನಾತ್ಮಾನಂ ತತ್ರ ಗರ್ಹಯೇತ್ ॥೪೬॥

ಇನ್ನೊಬ್ಬ ಪುರುಷನು ಏನು ಮಾಡುತ್ತಾನೋ ಅದೆಲ್ಲವನ್ನೂ ನಾನು ಮಾಡಿದ್ದೇನೆ. ಆದರೆ ನನಗೆ ದೊರೆತಿರುವ ಫಲ ಈ ರೀತಿಯದು. ಇದರಲ್ಲಿ ನನ್ನ ಯಾವ ಅಪರಾಧವೂ ಇಲ್ಲ ಎಂದು ಧೀರನಾದ ವಿವೇಕಿಯು ತಿಳಿದು ತನ್ನನ್ನು ತಾನು ನಿಂದಿಸಿಕೊಳ್ಳುವುದಿಲ್ಲ.

ಕುರ್ವತೋ ನಾರ್ಥಸಿದ್ಧಿರ್ಮೇ ಭವತೀತಿ ಹಿ ಭಾರತ ।
ನಿರ್ವೇದೋ ನಾತ್ರ ಕರ್ತವ್ಯೋ ದ್ವಾವೇತೌ ಹ್ಯಸ್ಯ ಕರ್ಮಣಃ ॥೪೭॥

ಎಲೈ ಭಾರತನೇ! ಪ್ರಯತ್ನವನ್ನು ಮಾಡುವ ವ್ಯಕ್ತಿಯು ನನಗೆ ಅರ್ಥಸಿದ್ಧಿಯು ಉಂಟಾಗುವುದಿಲ್ಲ ಎಂದು ವೈರಾಗ್ಯದಿಂದ ವಿಮುಖನಾಗಬಾರದು. ಏಕೆಂದರೆ ಪ್ರತಿಯೊಂದು ಕರ್ಮಕ್ಕೂ ಜೀವ ಮತ್ತು ಈಶ್ವರ ಇಬ್ಬರೂ ಕರ್ತೃಗಳು.

ಸಿದ್ಧಿರ್ವಾಽಪ್ಯಥವಾಽಸಿದ್ಧಿರಪ್ರವೃತ್ತಿರತೋಽನ್ಯಥಾ ।
ಬಹೂನಾಂ ಸಮವಾಯೇ ಹಿ ಭಾವನಾ ಕರ್ಮ ಸಿಧ್ಯತಿ ॥೪೮॥

ಅರ್ಥಸಿದ್ಧಿ ಅಥವಾ ಅಸಿದ್ಧಿ ಪ್ರವೃತ್ತಿ ಅಥವಾ ಅಪ್ರವೃತ್ತಿ (ಪ್ರಯತ್ನ ಅಪ್ರಯತ್ನ) ಈ ನಾಲ್ಕರ ಸಮುದಾಯದಲ್ಲಿ ಎಲ್ಲಿ ಪ್ರಯತ್ನವಿದೆಯೊ ಅಲ್ಲಿಯೇ ಕರ್ಮವು ಸಿದ್ಧಿಸುತ್ತದೆ.

ಗುಣಭಾವೇ ಫಲಂ ನ್ಯೂನಂ ಭವತ್ಯಫಲಮೇವ ವಾ ।
ಅನಾರಂಭೇ ತು ನ ಫಲಂ ನ ಗುಣೋ ದೃಶ್ಯತೇ ಕ್ವಚಿತ್ ॥೪೯॥

ಜೀವನ ಪ್ರಯತ್ನವು ಉತ್ತಮವಾಗಿದ್ದರೆ ಹರಿಯ ಅನುಗ್ರಹದಿಂದ ಪೂರ್ಣಫಲವೇ ಉಂಟಾಗುತ್ತದೆ. ಮಧ್ಯಮವಾಗಿದ್ದರೆ ನ್ಯೂನಫಲವು ಉಂಟಾಗುತ್ತದೆ. ಅಧಮವಾಗಿದ್ದರೆ ಫಲವುಂಟಾಗುವುದಿಲ್ಲ. ಆದರೆ ಪ್ರಯತ್ನವನ್ನೇ ಮಾಡದಿದ್ದರೆ ಯಾವ ಫಲವೂ ದೊರೆಯುವುದಿಲ್ಲ. ಪ್ರಯತ್ನದ ಚಮತ್ಕಾರವು ಕಣ್ಣಿಗೆ ಕಾಣಿಸುವುದಿಲ್ಲ.

ದೇಶಕಾಲಾನುಪಾಯಾಂಶ್ಚ ಮಾಂಗಲ್ಯಸ್ಪಷ್ಟಸಿದ್ಧಯೇ ।
ಯುನಕ್ತಿ ಮೇಧಯಾ ಧೀರೋ ಯಥಾಯೋಗಂ ಯಥಾಬಲಮ್ ॥

ಧೀರನಾದವನು ತನ್ನ ಬುದ್ಧಿಶಕ್ತಿಯಿಂದ ತನ್ನ ಯೋಗ್ಯತೆಯಿದ್ದಷ್ಟು ಮತ್ತು ಬಲವಿದ್ದಷ್ಟು ದೇಶ ಕಾಲ ಉಪಾಯ ಇವುಗಳನ್ನು ಮಾಂಗಲ್ಯ ಸ್ಪಷ್ಟಸಿದ್ಧಿಗಾಗಿ ಒಂದುಗೂಡಿಸುತ್ತಾನೆ.

ಅಪ್ಯುಪಾಯೇನ ತತ್ಕಾರ್ಯಮುಪದೇಷ್ಟಾ ಪರಾಕ್ರಮಃ ।
ಭೂಯಿಷ್ಠಂ ಕರ್ಮ ಯೋಗೇಷು ದಿಷ್ಟಮೇವ ಪರಾಕ್ರಮಃ ॥೫೧॥

ಶತ್ರುಪರಾಭವರೂಪವಾದ ಕಾರ್ಯವನ್ನು ಉಪಾಯದಿಂದ ಮಾಡಬೇಕು. ಅಂತಹ ಉಪಾಯವನ್ನು ಉಪದೇಶಮಾಡುವವರು ಕೃಷ್ಣನಂತೆ ಯಾರಾದರೂ ದೊರೆಯುತ್ತಾರೆ. ಎಲ್ಲಾ ಉಪಾಯಗಳಲ್ಲಿ ಸದ್ಯಕ್ಕೆ ಪರಾಕ್ರಮವೇ ಶ್ರೇಷ್ಠವಾದ ಉಪಾಯ. (ನಿಮ್ಮೆಲ್ಲರ ಪರಾಕ್ರಮಗಳು ಶ್ರೇಷ್ಠವಾದ ಉಪಾಯ.)

ಯತ್ರ ಧೀರೋಽನ್ವವೇಕ್ಷೇತ ಶ್ರೇಯಾಂಸಂ ಬಹುಭಿರ್ಗುಣೈಃ ।
ಸಾಮ್ನೈವಾರ್ಥಂ ತತೋ ಲಿಪ್ಸೇತ್ ಕರ್ಮ ನಾಸ್ಮೈ ಪ್ರಯೋಜಯೇತ್॥

ಎಲ್ಲಿ ಧೀರನಾದವನು ಸಾಮವೇ ಅನೇಕಗುಣಗಳಿಗಿಂತ ಶ್ರೇಷ್ಠವಾದುದೆಂದು ಸೂಚಿಸುತ್ತಾನೆಯೋ ಅಲ್ಲಿ ಸಾಮೋಪಾಯದಿಂದಲೇ ಅರ್ಥವನ್ನು ಸಾಧಿಸಬೇಕು. ಅಲ್ಲಿ ದಂಡರೂಪವಾದ ಪ್ರಯತ್ನವನ್ನು ಪ್ರಯೋಗಿಸಬಾರದು.

ವ್ಯಸನಂ ನಾಭಿಕಾಂಕ್ಷೇತ ನಿಧನಂ ವಾ ಯುಧಿಷ್ಠಿರ ।
ಅಪಿ ಸಿಂಧೋರ್ಗಿರೇರ್ವಾಽಪಿ ಕಿಂ ಪುನರ್ಮಾದೃಧರ್ಮಿಣಃ ॥೫೩॥

ಎಲೈ ಯುಧಿಷ್ಠಿರನೇ! ಅಗಾಧವಾದ ಸಮುದ್ರಕ್ಕೂ ಉನ್ನತವಾದ ಪರ್ವತಕ್ಕೂ ದುಃಖವನ್ನಾಗಲೀ ನಾಶವನ್ನಾಗಲೀ ಅಪೇಕ್ಷಿಸಬಾರದು. ಆದರೆ ನಮಗೆ ಮತ್ತು ಇಂತಹ ನಾಶವನ್ನು ತಂದುಕೊಟ್ಟ ಧರ್ಮವನ್ನು ಉಲ್ಲಂಘಿಸಿದ ಮರಣಶೀಲನಾದ ದುರ್ಯೋಧನನಿಗೆ ಮತ್ತು ನಿಧನಗಳನ್ನು ಮಾಡಲೇಬೇಕು.(ಇದರಲ್ಲಿ ಯೋಚನೆಮಾಡುವ ಅಗತ್ಯವಿಲ್ಲ.)

ಉತ್ಥಾನಯುಕ್ತಃ ಸತತಂ ಪರೇಷಾಮಂತರೇಕ್ಷಣೇ ।
ಆನೃಣ್ಯಮಾಪ್ನೋತಿ ನರಃ ಪರಸ್ಯಾತ್ಮನ ಏವ ಚ ॥೫೪॥

ಯಾವಾಗಲೂ ಪ್ರಯತ್ನಯುಕ್ತನಾಗಿ ಶತ್ರುಗಳ ರಂಧ್ರಾನ್ವೇಷಣೆಯನ್ನು ಮಾಡುವ ಪುರುಷನು ಪರಮಾತ್ಮನಿಂದಲೂ ಮತ್ತು ತನ್ನಿಂದಲೂ ಆನೃಣ್ಯವನ್ನು ಪಡೆಯುತ್ತಾನೆ. (ತನ್ನ ಕರ್ತವ್ಯವನ್ನು ಮಾಡಿ ಋಣಮುಕ್ತನಾಗುತ್ತಾನೆ).

ನ ತ್ವೇವಾತ್ಮಾವಮಂತವ್ಯಃ ಪುರುಷೇಣ ಕದಾಚನ ।
ನ ಹ್ಯಾತ್ಮಪರಿಭೂತಸ್ಯ ಭೂತಿರ್ಭವತಿ ಭಾರತ ॥೫೫॥

ಎಲೈ ಭಾರತನೇ! ಪುರುಷನು ತನ್ನನ್ನು ತಾನೇ ನಿಂದಿಸಿಕೊಳ್ಳಬಾರದು. ತನ್ನಿಂದ ತಾನೇ ಪರಿಭವವನ್ನು ಹೊಂದುವ ಪುರುಷನಿಗೆ ಎಂದೂ ಸಂಪತ್ತಾಗಲೀ ಮಂಗಳವಾಗಲೀ ಉಂಟಾಗುವುದಿಲ್ಲ.

ಏವಂ ಸುಸಂಸ್ಥಿತಾ ಬುದ್ಧಿರಿಯಂ ಲೋಕಸ್ಯ ಪಾಂಡವ ।
ಚಿತ್ರಾ ಸಿದ್ಧಿಗತಿಃ ಪ್ರೋಕ್ತಾ ಕಾಲಾವಸ್ಥಾವಿಭಾಗಶಃ ॥೫೬॥

ಎಲೈ ಪಾಂಡವನೇ! ಇದು ಜ್ಞಾನಿಲೋಕದ ಸುಸ್ಥಿರವಾದ ಬುದ್ಧಿ. ಕರ್ಮಸಿದ್ಧಿಯ ಪ್ರಕಾರಗಳು ಕಾಲ ಮತ್ತು ಅವಸ್ಥೆಗಳ ವಿಭಾಗವನ್ನು ಅನುಸರಿಸಿ ವಿಚಿತ್ರವಾಗಿರುತ್ತವೆ ಎಂದು ಹೇಳಲ್ಪಡುತ್ತದೆ.

ಬ್ರಾಹ್ಮಣಂ ಮೇ ಪಿತಾ ಪೂರ್ವಂ ವಾಸಯಾಮಾಸ ಪಂಡಿತಮ್ ।
ಸರ್ವಂ ಚಾರ್ಥಮಿಮಂ ಪ್ರಾಹ ಪಿತ್ರೇ ಮೇ ಭರತರ್ಷಭ ॥೫೭॥

ಎಲೈ ಭರತರ್ಷಭನೇ! ಹಿಂದೆ ನನ್ನ ತಂದೆಯು ನಮ್ಮ ಮನೆಯಲ್ಲಿ ಒಬ್ಬ ಬ್ರಾಹ್ಮಣನನ್ನು ವಾಸಮಾಡಲು ಇರಿಸಿಕೊಂಡಿದ್ದನು. ಆ ಬ್ರಾಹ್ಮಣನು ಈ ಎಲ್ಲಾ ವಿಷಯವನ್ನೂ ನನ್ನ ತಂದೆಗೆ ಹೇಳಿದನು.

ನೀತಿಂ ಬೃಹಸ್ಪತಿಪ್ರೋಕ್ತಾಂ ಭಾತ್ಯಾನ್ ಮೇಽಗ್ರಾಹಯತ್ ಪುರಾ।
ತೇಷಾಂ ಸಂಕಥಮಶ್ರೌಷಮಹಮೇತಾಂ ತದಾ ಗೃಹೇ ॥೫೮॥

ಬೃಹಸ್ಪತಿಯಿಂದ ಹೇಳಲ್ಪಟ್ಟ ಈ ನೀತಿಯನ್ನು ಅವನು ನನ್ನ ಸಹೋದರರಿಗೆ ಉಪದೇಶಿಸಿದನು. ಅವರು ಹೀಗೆ ಮಾತನಾಡುತ್ತಿರುವಾಗ ನಾನು ಮನೆಯಲ್ಲಿ ಆ ಮಾತುಗಳನ್ನು ದೂರದಿಂದ ಕೇಳಿದೆ.

ಸ ಮಾಂ ರಾಜನ್ ಕರ್ಮವತೀಮಾಗತಾಮಾಹ ಸಾಂತ್ವಯನ್ ।
ಶುಶ್ರೂಷಮಾಣಾಂ ಹ್ಯಾಸೀನಾಂ ಪಿತುರಂಕೇ ಯುಧಿಷ್ಠಿರ ॥೫೯॥

ಎಲೈ ರಾಜನೇ! ಕೆಲಸಮಾಡುತ್ತಿದ್ದ ನಾನು ಆ ಬ್ರಾಹ್ಮಣನು ಸಮೀಪಕ್ಕೆ ಬಂದಾಗ ಅವನು ನನ್ನನ್ನು ಸಮಾಧಾನಪಡಿಸುತ್ತಾ ನನ್ನ ತಂದೆಯ ತೊಡೆಯಮೇಲೆ ಕುಳಿತು ಅವನ ಮಾತುಗಳನ್ನು ಕೇಳುತ್ತಿದ್ದ ನನಗೆ ಎಲ್ಲವನ್ನೂ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತತಾತ್ಪರ್ಯನಿರ್ಣಯ- ೨೨ನೇ ಅಧ್ಯಾಯ

ಇತೀರಿತೋ ಧರ್ಮಜಃ ಕೃಷ್ಣಯೈವ
ನಿರುತ್ತರತ್ವಂ ಗಮಿತಸ್ತ್ವಭರ್ತ್ಸಯತ್ ।
ಕುತರ್ಕಮಾಶ್ರಿತ್ಯ ಹರೇರಪಿ ತ್ವಂ
ಅಸ್ವಾತಂತ್ರ್ಯಂಸಾಧಯಸೀತಿ ಚೋಕ್ತ್ವಾ ॥೭೫॥

ದ್ರೌಪದಿ ಹೀಗೆ ಹೇಳಿದಾಗ ಧರ್ಮರಾಜ ನಿರುತ್ತರನಾದ. ನೀನು ಕುತರ್ಕ ಬಲದಿಂದ ಹರಿಗೂ ಅಸ್ವಾತಂತ್ರ್ಯವನ್ನು ಸಾಧಿಸುತ್ತಿರುವಿ ಎಂದು ಹೇಳುತ್ತ ದ್ರೌಪದಿಯನ್ನು ಬೈದುಬಿಟ್ಟ.

ಫಲೇನ ತೇನ ಪ್ರತಿಭರ್ತ್ಸಿತಾ ಸಾ
ಕ್ಷಮಾಪಯಾಮಾಸ ನೃಪಂ ಯತಃ ಸ್ತ್ರೀ ।

ವಾಚಾಲತಾ ನಾತಿತರಾಂ ಹಿ ಶೋಭತೇ
ಸ್ತ್ರೀಣಾಂ ತತಃ ಪ್ರಾಹ ವೃಕೋದರಸ್ತಂ ॥೭೬॥

ಧರ್ಮರಾಜ ಹೀಗೆ ಛಲದಿಂದ ದ್ರೌಪದಿಯನ್ನು ಬೈದಾಗ ಅವಳು ಸತಿಯಾದ್ದರಿಂದ ಪತಿಯ ಮುಂದೆ ಸತಿ ಇಂಥ ವಿಷಯದಲ್ಲಿ ಹೆಚ್ಚು ಮಾತನಾಡುವುದು ಶೋಭಿಸುವುದಿಲ್ಲವಾದ್ದರಿಂದ ಕ್ಷಮೆ ಬೇಡಿ ಸುಮ್ಮನಾದಳು. ಆಗ ಭೀಮ ಮಾತನಾಡಲು ತೊಡಗಿದ.

ರಾಜನ್ವಿಷ್ಣುಃ ಸರ್ವಕರ್ತಾ ನ ಚಾನ್ಯಃ
ತತ್ತಂತ್ರಮೇವಾನ್ಯದಸೌ ಸ್ವತಂತ್ರಃ ।
ತಥಾಪಿ ಪುಂಸಾ ವಿಹಿತಂ ಸ್ವಕರ್ಮ
ಕಾರ್ಯಂ ತ್ಯಾಜ್ಯಂ ಚಾನ್ಯದತ್ಯಂತಯತ್ನಾತ್ ॥೭೭॥

ರಾಜನೇ, ವಿಷ್ಣುವೆ ಸರ್ವಕರ್ತ. ಬೇರೆ ಯಾರೂ ಅಲ್ಲ. ಅವನಿಗಿಂತ ಬೇರೆ ಎಲ್ಲವೂ ಅವನ ಅಧೀನ. ಅವನು ಸ್ವತಂತ್ರ. ಆದರೂ ಜೀವ ವಿಹಿತ ಸ್ವಕರ್ಮವನ್ನು ಅತ್ಯಂತ ಪ್ರಯತ್ನದಿಂದ ಮಾಡಲೇಬೇಕು. ನಿಷಿದ್ಧಕರ್ಮವನ್ನು ಹಾಗೇ ತ್ಯಜಿಸಲೂಬೇಕು.

ಪ್ರತ್ಯಕ್ಷಮೇತತ್ ಪುರುಷಸ್ಯ ಕರ್ಮ
ತೇನಾನುಮೇಯಾ ಪ್ರೇರಣಾ ಕೇಶವಸ್ಯ ।
ಸ್ವಕರ್ಮ ಕೃತ್ವಾ ವಿಹಿತಂ ಹಿ ವಿಷ್ಣುನಾ
ತತ್ಪ್ರೇರಣೇತ್ಯೇವ ಬುಧೋಽನುಮನ್ಯತೇ ॥೭೮॥

ಜೀವನು ಕರ್ಮ ಮಾಡುವುದು ಪ್ರತ್ಯಕ್ಷವೇ ಇದೆ. ಅದರಿಂದ ವಿಷ್ಣುಪ್ರೇರಣೆಯನ್ನು ಅನುಮಾನದಿಂದ ಊಹಿಸಿ ತಿಳಿಯಬಹುದು. ಜ್ಞಾನಿಯು ವಿಷ್ಣು ವಿಧಿಸಿದ ಸ್ವಕರ್ಮವನ್ನು ತಾನು ಮಾಡಿ ಅವನ ಪ್ರೇರಣೆಯೆಂದು ಭಾವಿಸುತ್ತಾನೆ.

ತೇನೈತಿ ಸಮ್ಯಗ್ಗತಿಮಸ್ಯ ವಿಷ್ಣೋ
ರ್ಜನೋಽಶುಭೋ ದೈವಮಿತ್ಯೇವ ಮತ್ವಾ ।
ಹಿತ್ವಾಸ್ವಕಂ ಕರ್ಮ ಗತಿಂ ಚ ತಾಮಸೀಂ
ಪ್ರಯಾತಿ ತಸ್ಮಾತ್ ಕಾರ್ಯಮೇವ ಸ್ವಕರ್ಮ ॥೭೯॥

ಜ್ಞಾನಿ ಹರಿಪ್ರೇರಣೆ ಎಂದುಕೊಂಡು ಕರ್ಮ ಮಾಡುವುದರಿಂದ ಹರಿಯ ಅನುಗ್ರಹದಿಂದ ವಿಷ್ಣುಲೋಕವನ್ನು ಪಡೆಯುತ್ತಾನೆ. ಅವಿವೇಕಿ ದೈವವೇ ಎಲ್ಲವನ್ನೂ ಮಾಡುತ್ತದೆ ಎನ್ನುತ್ತ ವಿಹಿತವಾದ ಸ್ವಕರ್ಮವನ್ನು ತ್ಯಾಗಮಾಡಿ ತಾಮಸಗತಿಯನ್ನು ಹೊಂದುತ್ತಾನೆ. ಅದರಿಂದ ಪ್ರತಿಯೊಬ್ಬನೂ ಸ್ವಕರ್ಮ ಮಾಡಲೇಬೇಕು.

ಜ್ಞಾತವ್ಯಂ ಚೈವಾಸ್ಯ ವಿಷ್ಣೋರ್ವಶತ್ವಂ
ಕರ್ತವ್ಯಂ ಚೈವಾತ್ಮನಃ ಕಾರ್ಯಕರ್ಮ ।
ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ
ತಥಾಗಮಾದನುಮಾನಾಚ್ಚ ಸರ್ವಂ ॥೮೦॥

ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ
ಜಾನನ್ ವಿದ್ವಾನ್ ಕುರುತೇ ಕಾರ್ಯಕರ್ಮ ।
ತತ್ಪ್ರೇರಕಂ ವಿಷ್ಣುಮೇವಾಭಿಜಾನನ್
ಭವೇತ್ ಪ್ರಮಾಣತ್ರಿತಯಾನುಗಾಮಿ? ॥೮೧॥

ಕರ್ಮಕರ್ತನಾದ ಜೀವ ಹರಿಯ ಅಧೀನನೆಂಬುದನ್ನು ತಿಳಿಯಲೇಬೇಕು. ತನ್ನ ಯೋಗ್ಯಕರ್ಮವನ್ನು ಆಚರಿಸಲೂಬೇಕು. ಜೀವನದಲ್ಲಿರುವ ಈ ಕರ್ತೃತ್ವ ಪ್ರತ್ಯಕ್ಷ ಸಿದ್ಧ. ಹಾಗೇ ಅನುಮಾನಾಗಮನಗಳಿಂದಲೂ ಸಿದ್ಧವಾಗಿದೆ. ಎಲ್ಲವೂ ವಿಷ್ಣುವಿನ ಅಧೀನವೆಂಬುದೂ ಪ್ರತ್ಯಕ್ಷಾನುಮಾನಾಗಮಗಳಿಂದ ಸಿದ್ಧವಾಗಿದೆ. ಅದರಿಂದ ಜೀವಕರ್ತೃತ್ವಮತ್ತು ಹರಿಯಧೀನತ್ವ ಇವೆರಡನ್ನೂ ತಿಳಿದ ಜ್ಞಾನಿ ತನಗೆ ಯೋಗ್ಯವಾದ ಕರ್ಮ ಮಾಡುತ್ತಾನೆ. ಹೀಗೆಯಾರು ಜೀವಕರ್ತೃತ್ವಕ್ಕೆ ವಿಷ್ಣುಪ್ರೇರಕ ಎಂದು ತಿಳಿಯುವನೋ ಅವನು ಮೂರೂ ಪ್ರಮಾಣಗಳನ್ನು ಅನುಸರಿಸಿದಂತಾಗುವುದು.

ಪೂರ್ಣಂ ಪ್ರಮಾಣ ತತ್ರ್ರಯಂ ಚಾವಿರೋಧೇ-
ನೈಕತ್ರಸ್ಥಂ ತತ್ರ್ರಯಂ ಚಾವಿರೋಧಿ ।
ಪೃಥಜ್‌ಮಧ್ಯಂ ಚಾಪ್ರಮಾಣಂ ವಿರೋಧಿ
ಸ್ಯಾತ್ ತತ್ ತಸ್ಮಾತ್ ತ್ರಯಮೇಕತ್ರ ಕಾರ್ಯಂ ॥೮೨॥

ಪ್ರತ್ಯಕ್ಷ ಅನುಮಾನ ಆಗಮ ಇವು ಮೂರೂ ಒಂದೇ ವಿಷಯದಲ್ಲಿ ಪರಸ್ಪರ ಅವಿರೋಧಿಯಾಗಿ ಕೂಡಿಬಂದರೆ ಅದು ಪೂರ್ಣಪ್ರಮಾಣವೆನಿಸುತ್ತದೆ. ಮೂರು

ಪ್ರಮಾಣಗಳು ಬೇರೆ ಬೇರೆ ವಿಷಯಗಳನ್ನು ಹೊಂದಿ ಪರಸ್ಪರ ವಿರೋಧ ಪರಿಹರಿಸಿಕೊಂಡರೆ ಮಧ್ಯಮ ಪ್ರಮಾಣವಾಗುವುದು. ಪರಸ್ಪರ ವಿರೋಧಿಯೇ ಆಗಿದ್ದರೆ ಅಪ್ರಮಾಣವೇ ಆಗುವುದು. ಆದರಿಂದ ಮೂರನ್ನೂ ಒಂದೇ ವಿಷಯದಲ್ಲಿ ಅವಿರೋಧವಾಗಿ ಕೂಡಿಸಬೇಕು.

ಅಜ್ಞಃ ಪ್ರತ್ಯಕ್ಷಂ ತ್ವಪಹಾಯೈವ ವೈವಂ
ಮತ್ವಾ ಕರ್ತೃ ಸ್ವಾತ್ಮಕರ್ಮ ಪ್ರಜಹ್ಯಾತ್ ।
ವಿದ್ವಾನ್‌ಜೀವಂ ವಿಷ್ಣುವಶೇ ವಿದಿತ್ವಾ
ಕರೋತಿ ಕರ್ತವ್ಯಮಜಸ್ರಮೇವ ॥೮೩॥

ಅಜ್ಞಾನಿ ಪ್ರತ್ಯಕ್ಷಸಿದ್ಧವಾದ ಜೀವಕರ್ತೃತ್ವವನ್ನು ಬಿಟ್ಟು ದೈವವೇ ಕರ್ತೃ ಎಂದು ತಿಳಿದು ಸ್ವಕರ್ಮ ಭ್ರಷ್ಟನಾಗುತ್ತಾನೆ. ಜ್ಞಾನಿ ಜೀವನನ್ನು ವಿಷ್ಣ್ವಧೀನನೆಂದು ತಿಳಿದು ಕರ್ತವ್ಯ ಕರ್ಮವನ್ನು ನಿರಂತರ ಮಾಡುತ್ತಾನೆ.

ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ
ಯಾನಾದಿಸಿದ್ಧಾ ಸರ್ವಜೀವೇಷು ನಿತ್ಯಾ ।
ಸಾ ಕಾರಣಂ ಪ್ರಥಮಂ ತು ದ್ವಿತೀಯ-
ಮನಾದಿಕರ್ಮೈವ ತಥಾ ತೃತೀಯಂ ॥೮೪॥

ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್
ತ್ರಯಂ ವಿಷ್ಣೋರ್ವಶಗಂ ಸರ್ವದೈವ ।
ಸ ಕಸ್ಯಚಿನ್ನ ವಶೇ ವಾಸುದೇವಃ
ಷರಾತ್‌ಪರಃ ಪರಮೋಽಸೌ ಸ್ವತಂತ್ರಃ ॥೮೫॥

ಸರ್ವಜೀವರಲ್ಲಿಯೂ ಅನಾದಿಸಿದ್ಧವಾದ ನಿತ್ಯವಾದ ಯೋಗ್ಯತೆಯ ಕರ್ಮಕ್ಕೆ ಮೊದಲನೇ ಕಾರಣ. ಈ ಯೋಗ್ಯತೆಗೇ ಸ್ವಭಾವವೆಂದೂ ಹೆಸರು. ಹಠ ಎಂದೂ ಹೆಸರು. ಅನಾದಿ ಕರ್ಮ ಎರಡನೇ ಕಾರಣ. ಜೀವಪ್ರಯತ್ನ ಮೂರನೇ ಕಾರಣ. ಇದಕ್ಕೇ ಪೌರುಷ ಎಂದೂ ಹೆಸರು. ಇವು ಮೂರೂ ಸದಾ ಹರಿಯ ಅಧೀನ ಹೊರತು, ಹರಿ ಯಾರಿಗೂ ಅಧೀನನಲ್ಲ. ಏಕೆಂದರೆ ಅವನು ಸರ್ವೋತ್ತಮ ಪರಮಸ್ವತಂತ್ರ.

ಹಠಶ್ಚಾಸೌ ತಾರತಮ್ಯಸ್ಥಿತೋ ಹಿ
ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್ ।
ಹಠಾಚ್ಚ ಕರ್ಮಾಣಿ ಭವಂತಿ ಕರ್ಮಜೋ
ಯತ್ನೋ ಯತೋ ಹಠಕರ್ಮಪ್ರಯೋಕ್ತಾ ॥೮೬॥

ಜೀವಯೋಗ್ಯತೆ ಬ್ರಹ್ಮನಿಂದ ತೊಡಗಿ ಕಲಿಪರ್ಯಂತವೂ ತಾರತಮ್ಯದಿಂದ ಇರುತ್ತದೆ. ಆ ಯೋಗ್ಯತೆಯ ತಾರತಮ್ಯದಿಂದ ಪೂರ್ವಕರ್ಮಗಳು ತಾರತಮ್ಯದಿಂದ ಉಂಟಾಗುತ್ತವೆ. ಪೂರ್ವಕರ್ಮಗಳಿಂದ ಈಗಿನ ಪ್ರಯತ್ನಗಳು ತಾರತಮ್ಯದಿಂದ ಉಂಟಾಗುತ್ತದೆ. ಪುರುಷಪ್ರಯತ್ನ ಯೋಗ್ಯತೆಗೂ ಪೂರ್ವಕರ್ಮಕ್ಕೂ ಪ್ರಯೋಜಕವಾಗಿದೆ.

ವಿನಾ ಯತ್ನಂ ನ ಹಠೋ ನಾಪಿ ಕರ್ಮ
ಫಲಪ್ರದೋ ವಾಸುದೇವೋಽಖಿಲಸ್ಯ ।
ಸ್ವಾತಂತ್ರ್ಯಶಕ್ತೇರ್ವಿನಿಯಾಮಕೋ ಹಿ
ತಥಾಪ್ಯೇತಾನ್ ಸೋಽಪ್ಯಪೇಕ್ಷ್ಯೈವ ಯುಂಜೇತ್ ॥೮೭॥

ಪ್ರಯತ್ನವಿಲ್ಲದೆ ಯೋಗ್ಯತೆಯೂ ಫಲಕೊಡುವುದಿಲ್ಲ. ಪೂರ್ವಕರ್ಮವೂ ಫಲಕೊಡುವುದಿಲ್ಲ. ಈ ಮೂರಕ್ಕೂ ಅನುಗುಣವಾಗಿ ಫಲಕೊಡುವವನು ಶ್ರೀಹರಿ. ಸ್ವಾತಂತ್ರ್ಯ ಶಕ್ತಿ ಇರುವುದರಿಂದ ಅವನೇ ಈ ಮೂರಕ್ಕೂ ನಿಯಾಮಕ. ಆದರೂ ಅವುಗಳನ್ನು ಅನುಸರಿಸಿಯೇ ಫಲ ಕೊಡುತ್ತಾನೆ.

ಏತಾನಪೇಕ್ಷ್ಯೈವ ಫಲಂ ದದಾನೀ-
ತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ ।
ನಾಸ್ಯಾಪಗಚ್ಛೇತ್ಸ ಹಿ ಸರ್ವಶಕ್ತಿ
ರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್ ॥೮೮॥

ಯೋಗ್ಯತಾ ಕರ್ಮಪ್ರಯತ್ನಗಳನ್ನು ಅನುಸರಿಸಿಯೇ ಫಲ ನೀಡುವೆನೆಂದು ಹರಿಯ ಸಂಕಲ್ಪ. ಅದರಿಂದ ಅವನಲ್ಲಿ ಸ್ವಾತಂತ್ರ್ಯಕ್ಕೆ ಕುಂದಿಲ್ಲ. ಅವನು ಸರ್ವಶಕ್ತ. ಸಕಲ ಕಾರ್ಯದಲ್ಲಿಯೂ ಅತ್ಯಂತ ಸಮರ್ಥನಾದ್ದರಿಂದ ಯಾವ ವಿಷಯದಲ್ಲಿಯೂ ಅಶಕ್ತಿ ಇಲ್ಲ.

ತಸ್ಮಾತ್ ಕಾರ್ಯಂ ತೇನ ಕ್ಲೃಪ್ತಂ ಸ್ವಕರ್ಮ
ತತ್ಪೂಜಾರ್ಥಂ ತೇನ ತತ್ಪ್ರಾಪ್ತಿರೇವ ।
ಅತೋಽನ್ಯಥಾ ನಿರಯಃ ಸರ್ವಥಾ ಸ್ಯಾತ್
ಸ್ವಕರ್ಮ ವಿಪ್ರಸ್ಯ ಜಪೋಪದೇಶೌ ॥೪೯॥

ವಿಷ್ಣೋರ್ಮುಖಾದ್ವಿಪ್ರಜಾತಿಃ ಪ್ರವೃತ್ತಾ
ಮುಖೋತ್ಥಿತಂ ಕರ್ಮ ತೇನಾಸ್ಯ ಸೋಽದಾತ್ ॥೫೦॥

ಜೀವನಿಗೆ ಕರ್ತೃತ್ವವಿರುವುದರಿಂದ ಅವನು ಹರಿ ವಿಧಿಸುವ ಸ್ವಯೋಗ್ಯ ಕರ್ಮವನ್ನು ಹರಿಪೂಜೆಗಾಗಿ ಮಾಡಬೇಕು. ಅದರಿಂದಲೇ ಮೋಕ್ಷಸಾಧ್ಯ. ಹಾಗೆ ಕರ್ಮ ಮಾಡದಿದ್ದರೆ ಸರ್ವಥಾ ನರಕವೇ ಸಿಗುವುದು. ಬ್ರಾಹ್ಮಣನಿಗೆ ಸ್ವಯೋಗ್ಯ ಕರ್ಮ ಜಪ ಮತ್ತು ಉಪದೇಶ. ಏಕೆಂದರೆ ಬ್ರಾಹ್ಮಣ ಜಾತಿ ವಿಷ್ಣುವಿನ ಮುಖದಿಂದ ಉದ್ಭವಿಸಿತು. ಅದರಿಂದ ಅವನಿಗೆ ಮುಖದಿಂದಾಗುವ ಕರ್ಮವನ್ನೇ ವಿಧಿಸಿದ್ದಾನೆ ಹರಿ.

ಬಾಹ್ವೋರ್ಜಾತಃ ಕ್ಷತ್ರಿಯಸ್ತೇನ ಬಾಹ್ವೋಃ
ಕರ್ಮಾಸ್ಯ ಪಾಪಪ್ರತಿವಾರಣಂ ಹಿ ।
ಪ್ರವರ್ತನಂ ಸಾಧುಧರ್ಮಸ್ಯ ಚೈವ
ಮುಖಸ್ಯ ಬಾಹ್ವೋಶ್ಚಾತಿಸಾಮೀಪ್ಯತೋಽಸ್ಯ ॥೪೮॥

ಜಪೋಪದೇಶೌ ಕ್ಷತ್ರಿಯಸ್ಯಾಪಿ ವಿಷ್ಣು-
ಕ್ಷಕ್ಕೇ ಧರ್ಮೌ ಯಜ್ಞಕರ್ಮಾಪಿ ವಿಪ್ರೇ ।
ವೈಶ್ಯೇ ಯಸ್ಮಾದೂರುಜಸ್ತೇನ ತಸ್ಯ
ಪ್ರಜಾವೃದ್ಧಿಸ್ತದ್ಯಜ್ಞಕರ್ಮೈವ ಧರ್ಮಃ ॥೪೭॥

ತತ್ಸಾದೃಶ್ಯಾತ್ ಸ್ಥಾವರಾಣಾಂ ಚ ವೃದ್ಧಿಃ
ಕರೋರುವೋಃ ಸನ್ನಿಕೃಷ್ಟತ್ವ ಹೇತೋಃ ।
ವಾರ್ತಾತ್ಮಕಂ ಕರ್ಮ ಧರ್ಮಂ ಚಕಾರ
ವಿಷ್ಣುಸ್ತಸ್ಯೈವಾಂಘ್ರಿಜಃ ಶೂದ್ರ ಉಕ್ತಃ ॥೪೩॥

ಗತಿ ಪ್ರಧಾನಂ ಕರ್ಮ ಶುಶ್ರೂಷಣಾಖ್ಯಂ
ಸಾದೃಶ್ಯತೋ ಹಸ್ತಪದೋಸ್ತಥೈವ ।
ಹಸ್ತೋದ್ಭವಂ ಕರ್ಮ ತಸ್ಯಾಪಿ ಧರ್ಮಃ
ಸಂತಾನವೃದ್ಧಿಶ್ಚ ಸಮೀಪಗತ್ವಾತ್ ॥೯೪॥

ವಿಷ್ಣುವಿನ ಬಾಹುಗಳಿಂದ ಕ್ಷತ್ರಿಯ ಹುಟ್ಟಿದ. ಅದರಿಂದ ಅವನಿಗೆ ಸ್ವಕರ್ಮ, ದುಷ್ಟನಿಗ್ರಹ ಜೊತೆಗೆ ವೈಷ್ಣವ ಧರ್ಮಪ್ರಚಾರವೂ ಅವನಿಗೆ ಕರ್ತವ್ಯವಾಗಿರುತ್ತದೆ. ಏಕೆಂದರೆ ಮುಖ ಮತ್ತು ಬಾಹುಗಳಿಗೆ ಅತ್ಯಂತ ಸಾಮೀಪ್ಯವಿರುವುದರಿಂದ ಜಪ ಉಪದೇಶಗಳನ್ನು ಕ್ಷತ್ರಿಯನಿಗೂ ಉಪದೇಶಿಸಿದ್ದಾನೆ, ಮತ್ತು ಯಜ್ಞಕರ್ಮವನ್ನು ಬ್ರಾಹ್ಮಣನಿಗೂ ಉಪದೇಶಿಸಿದ್ದಾನೆ. ವೈಶ್ಯ ತೊಡೆಗಳಿಂದ ಹುಟ್ಟಿದ ಪ್ರಯುಕ್ತ ತೊಡೆಗಳಿಂದಾಗುವ ಸಂತಾನವೃದ್ಧಿ ಅವನಿಗೆ ಧರ್ಮ. ಸಂತಾನವೃದ್ಧಿ ಗೋರಕ್ಷಣೆಗಳಿಗೆ ಸದೃಶವಾದ ಸ್ಥಾವರವೃದ್ಧಿ ಅಂದರೆ ಕೃಷಿ ಬೇಸಾಯ ವೃತ್ತಿಯೂ ಅವನಿಗೆ ಧರ್ಮ. ಕೈಗಳಿಗೂ ತೊಡೆಗಳಿಗೂ ಸಾಮೀಪ್ಯವಿರುವುದರಿಂದ ವೈಶ್ಯನಿಗೆ ವಾಣಿಜ್ಯ ಕೃಷಿ ಗೋರಕ್ಷಣ ಬಡ್ಡಿ ವ್ಯವಹಾರ ರೂಪವಾದ ಕರ್ಮವನ್ನೂ ಹರಿ ವಿಧಿಸಿದ್ದಾನೆ. ಅವನ ಕಾಲುಗಳಿಂದ ಶೂದ್ರ ಜನಿಸಿದನೆಂದು ಉಕ್ತವಾಗಿರುವುದರಿಂದ ಓಡಾಡುವುದೇ ಹೆಚ್ಚಾಗಿರುವ ಶುಶ್ರೂಷಣವೆಂಬ ಕರ್ಮ ಅವನಿಗೆ ಧರ್ಮ. ಕೈಗಳಿಗೂ ಕಾಲುಗಳಿಗೂ ಸಾದೃಶ್ಯವಿರುವುದರಂದ ಕೈಗಳಿಂದಾಗುವ ಯುದ್ಧವೂ ಕೃಷಿ ವಾಣಿಜ್ಯಾದಿಗಳೂ ಶೂದ್ರನಿಗೆ ವಿಹಿತವೇ. ಕಾಲು ತೊಡೆಗಳಿಗೆ ಸಾಮೀಪ್ಯವಿರುವುದರಿಂದ ಸಂತಾನವೃದ್ಧಿಯೂ ಶೂದ್ರನಿಗೆ ವಿಹಿತವೆ.

ಭುಜಾವುರೋ ಹೃದಯಂ ಯದ್‌ಬಲಸ್ಯ
ಜ್ಞಾನಸ್ಯ ಚ ಸ್ಥಾನಮತೋ ನೃಪಾಣಾಂ ।
ಬಲಂ ಜ್ಞಾನಂ ಚೋಭಯಂ ಧರ್ಮ ಉಕ್ತಃ
ಪಾಣೌ ಕೃತೀನಾಂ ಕೌಶಲಂ ಕೇವಲಂ ಹಿ ।
ತಸ್ಮಾತ್ ಪಾಣ್ಯೋರೂರುಪದೋರುಪಸ್ಥಿತೇಃ
ವಿಟ್ ಶೂದ್ರಕೌ ಕರ್ಮಣಾಂ ಕೌಶಲೇತೌ ॥೯೫॥

ಬಾಹುಗಳು ಮತ್ತು ಎದೆ ಇವು ಬಲದ ಸ್ಥಾನಗಳು. ಹೃದಯ ಜ್ಞಾನಕ್ಕೆ ಸ್ಥಾನ. ಅದರಿಂದ ರಾಜರಿಗೆ ಬಲಕಾರ್ಯಜ್ಞಾನಕಾರ್ಯಗಳೆರಡೂ ಧರ್ಮವೆಂದು ವಿಹಿತವಾಗಿವೆ. ಕೈಯು ಕೇವಲ ಕರ್ಮ ನಿಪುಣತಗೆ ಸ್ಥಾನ. ಬಾಹುವಿನಂತೆ ಬಲದ ಸ್ಥಾನವಲ್ಲ. ಅದರಿಂದ ಕೈಗಳಿಗೂ ತೊಡೆ ಕಾಲುಗಳಿಗೂ ಸಾಮೀಪ್ಯವಿರುವುದರಿಂದ ವೈಶ್ಯ ಶೂದ್ರರು ಕರ್ಮಕೌಶಲಯುಕ್ತರಾಗಿರಬೇಕು.

ಪ್ರಾಧಾನ್ಯತೋ ಧರ್ಮವಿಶೇಷ ಏಷ
ಸಾಮಾನ್ಯತಃ ಸರ್ವ ಏವಾಖಿಲಾನಾಂ ।
ವಯಂ ಹಿ ದೇವಾಸ್ತೇನ ಸರ್ವಂ ಹಿ ಕರ್ಮ
ಪ್ರಾಯೇಣ ನೋ ಧರ್ಮತಾಮೇತಿ ಶಶ್ವತ್ ॥೯೬॥

ಇದು ಪ್ರಾಧಾನ್ಯದೃಷ್ಟಿಯಿಂದ ಹೇಳಿದ ವಿಶೇಷ ಧರ್ಮ ವ್ಯವಸ್ಥೆ. ಸಾಮಾನ್ಯವಾಗಿ ಅಮುಖ್ಯ ದೃಷ್ಟಿಯಿಂದ ಹೇಳುವುದಾದರೆ ಎಲ್ಲರಿಗೂ ಎಲ್ಲ ಧರ್ಮವೂ ಅನುಮತವಾಗಿದೆ. ಏಕೆಂದರೆ ನಾವು ದೇವತೆಗಳಾಗಿರುವುದರಿಂದ ಪ್ರಾಯಃ ಎಲ್ಲ ಕರ್ಮವೂ ನಮಗೆ ಯಾವಾಗಲೂ ಧರ್ಮವೆಂದೇ ಎನಿಸುತ್ತದೆ.

ಏತೈರ್ಧರ್ಮೈರ್ವಿಷ್ಣುನಾ ಪೂರ್ವಕ್ಲೃಪ್ತೈಃ
ಸರ್ವೈರ್ವರ್ಣೈರ್ವಿಷ್ಣುರೇವಾಭಿಪೂಜ್ಯಃ ।
ತದ್ಭಕ್ತಿರೇವಾಖಿಲಾನಾಂ ಚ ಧರ್ಮೋ
ಯಥಾಯೋಗ್ಯಂ ಜ್ಞಾನಮಸ್ಯಾಪಿ ಪೂಜಾ ॥೯೭॥

ಶ್ರೀಹರಿ ಆದಿ ಸೃಷ್ಟಿಯಲ್ಲಿಯೇ ಕೃಪ್ತಗೊಳಿಸಿರುವ ಈ ಧರ್ಮಗಳಿಂದ ಎಲ್ಲ ವರ್ಣದವರೂ ಅವನನ್ನು ಆರಾಧಿಸಬೇಕು. ಅವನಲ್ಲಿ ಯಥಾಯೋಗ್ಯ ಭಕ್ತಿ ಮಾಡಿ ಜ್ಞಾನಸಂಪಾದಿಸುವುದೇ ಎಲ್ಲ ವರ್ಣದವರಿಗೂ ಧರ್ಮ. ಅದೇ ಆರಾಧನೆ.

ಪಿತಾ ಗುರುಃ ಪರಮಂ ದೈವತಂ ಚ
ವಿಷ್ಣುಃ ಸರ್ವೇಷಾಂ ತೇನ ಪೂಜ್ಯಃ ಸ ಏವ ।
ತದ್ಭಕ್ತತ್ವಾದ್ದೇವತಾಶ್ಚಾಭಿಪೂಜ್ಯಾ
ವಿಶೇಷತಸ್ತೇಷು ಯೇಽತ್ಯಂತಭಕ್ತಾಃ ॥೯೮॥

ಹರಿಯೇ ಎಲ್ಲರಿಗೂ ತಂದೆ ಗುರು ಪರದೇವತೆಯೂ ಕೂಡ. ಅದರಿಂದ ಅವನೇ ಪೂಜ್ಯ. ಅವನ ಭಕ್ತರಾದ್ದರಿಂದ ದೇವತೆಗಳೂ ಪೂಜ್ಯರಾಗುತ್ತಾರೆ. ಅವರಲ್ಲಿಯೂ ಅತ್ಯಂತ ಭಕ್ತರು ವಿಶೇಷವಾಗಿ ಪೂಜ್ಯರು.

ಸಂಪೂಜಿತೋ ವಾಸುದೇವಃ ಸ ಮುಕ್ತಿಂ
ದದ್ಯಾದೇವಾಪೂಜಿತೋ ದುಃಖಮೇವ ।
ಸ್ವತಂತ್ರತ್ವಾತ್ಸುಖಿದುಃಖಪ್ರದೋಽಸೌ
ನಾನ್ಯಃ ಸ್ವತಂತ್ರಸ್ತದ್ವಶಾ ಯತ್ಸಮಸ್ತಾಃ ॥೯೯॥

ಚೆನ್ನಾಗಿ ಆರಾಧಿಸಿದರೆ ಹರಿ ಮೋಕ್ಷಸುಖವನ್ನು ನಿಶ್ಚಯವಾಗಿ ಕೊಡುತ್ತಾನೆ. ಆರಾಧಿಸದಿದ್ದರೆ ದುಃಖವನ್ನೇ ಕೊಡುತ್ತಾನೆ. ಸ್ವತಂತ್ರನಾದ್ದರಿಂದ ಅವನೇ ಸುಖದುಃಖಗಳನ್ನು ನೀಡುವವನು ಬೇರೆ ಯಾರೂ ಸ್ವತಂತ್ರನಿಲ್ಲ. ಎಲ್ಲರೂ ಅವನ ಅಧೀನರೆ.

ಸ್ವತಂತ್ರತ್ವಾತ್ಸುಖಿಸಜ್ಞಾನಶಕ್ತಿ
ಪೂರ್ವೈರ್ಗುಣೈಃ ಪೂರ್ಣ ಏಷೋಽಖಿಲೈಶ್ಚ ।
ಸ್ವತಂತ್ರತ್ವಾತ್ಸರ್ವದೋಷೋಜ್ಝಿತಶ್ಚ
ನಿಸ್ಸೀಮಶಕ್ತಿರ್ಹಿ ಯತಃ ಸ್ವತಂತ್ರಃ ॥೧೦೦॥

ಹರಿ ಸ್ವತಂತ್ರನಾದ್ದರಿಂದ ಆನಂದ ನಿರ್ಮಲಜ್ಞಾನ, ಬಲ ಮುಂತಾದ ಎಲ್ಲ ಗುಣಗಳಿಂದ ಪೂರ್ಣನಾಗಿದ್ದಾನೆ. ಸ್ವತಂತ್ರನಾದ್ದರಿಂದಲೆ ಸಕಲ ದೋಷರಹಿತನಾಗಿದ್ದಾನೆ. ಏಕೆಂದರೆ ಅಪರಿಮಿತ ಶಕ್ತಿ ಉಳ್ಳವನು ಸ್ವತಂತ್ರನೇ ಆಗಿರುತ್ತಾನೆ.

ದೋಷಾಸ್ಪೃಷ್ಟೋಗುಣಪೂರ್ತಾ ಚ ಶಕ್ತಿ-
ರ್ನಿಸ್ಸೀಮತ್ವಾದ್ವಿದ್ಯತೇ ತಸ್ಯ ಯಸ್ಮಾತ್ ।
ಏವಂ ಗುಣೈರಖಿಲೈಶ್ಚಾಪಿ ಪೂರ್ಣೋ
ನಾರಾಯಣಃ ಪೂಜ್ಯತಮಃ ಸದ್ಧರ್ಮೈಃ ॥೧೦೧॥

ಅಸ್ಮಾಕಂ ಯತ್ತೇನ ನಾತಿಕ್ಷಮೈವ
ಧರ್ಮೋ ದುಷ್ಟಾನಾಂ ವಾರಣಂ ಹ್ಯೇವ ಕಾರ್ಯಂ ।
ಹನ್ಯಾದ್‌ದುಷ್ಟಾನ್‌ಯಃ ಕ್ಷತ್ರಿಯಃ ಕ್ಷತ್ರಿಯಾಂಶ್ಚ
ವಿಶೇಷತೋ ಯುದ್ಧಗತಾನ್ ಸ್ಮರನ್ ಹರಿಂ ॥೧೦೨॥

ಸ್ವಬಾಹುವೀರ್ಯೇಣ ಚ ತಸ್ಯ ಬಾಹೂ
ಚೈತನ್ಯಮಾತ್ರೌ ಭವತಃ ಸದೇಹೌ ।
ಪಾಪಾಧಿಕಾಂಶ್ಚೈವ ಬಲಾಧಿಕಾಂಶ್ಚ
ಹತ್ವಾ ಮುಕ್ತಾವಧಿಕಾನಂದವೃದ್ಧಿಃ ॥೧೦೩॥

ದೋಷರಹಿತನಾಗಿರುವುದಕ್ಕೂ ಗುಣಪೂರ್ಣನಾಗಿರುವುದಕ್ಕೂ ಶ್ರೀಹರಿಗೆ ಸಾಮರ್ಥ್ಯವಿದೆ. ಏಕೆಂದರೆ ಅವನ ಶಕ್ತಿ ಅಪರಿಮಿತ. ಆದರಿಂದ ಅವನು ಸಕಲ ಗುಣಗಳಿಂದಲೂ ಪೂರ್ಣ, ಸರ್ವದೋಷಗಳಿಂದಲೂ ರಹಿತನಾಗಿದ್ದು ನಮಗೆ ಸ್ವಧರ್ಮದಿಂದ ಅತ್ಯಂತ ಪೂಜ್ಯನೆನಿಸಿದ್ದಾನೆ. ಆದರಿಂದ ನಾವು ದುಷ್ಟರಾದ ಕೌರವರಲ್ಲಿ ಹೆಚ್ಚುಕ್ಷಮೆ ತೋರುವುದು ಧರ್ಮವಾಗುವುದಿಲ್ಲ. ನಿಗ್ರಹವನ್ನೆ ಮಾಡಬೇಕು. ದುಷ್ಟರನ್ನು ನಿಗ್ರಹಿಸುವವನೇ ಕ್ಷತ್ರಿಯ. ವಿಶೇಷವಾಗಿ ರಣರಂಗದಲ್ಲಿ ಇದಿರಾಗುವ ದುಷ್ಟ ಕ್ಷತ್ರಿಯರನ್ನು ಸರಿಸ್ಮರಣಪೂರ್ವಕ ತನ್ನ ತೋಳ್ಬಲದಿಂದ ಯಾರು ಸಂಹರಿಸುವನೋ ಅವನ ಬಾಹುಗಳೂ ದೇಹವೂ ಚಿನ್ಮಯವಾಗುತ್ತವೆ. ಶತ್ರುವಿನಲ್ಲಿ ಪಾಪವೂ ಬಲವೂ ಹೆಚ್ಚಿದಷ್ಟು ಅವನ ನಿಗ್ರಹದಿಂದ ಮೋಕ್ಷದಲ್ಲಿ ಅಧಿಕ ಆನಂದ ವೃದ್ಧಿಯಾಗುವುದು.

ಪ್ರೀತಿಶ್ಚ ವಿಷ್ಣೋಃ ಪರಮೈವ ತತ್ರ
ತಸ್ಮಾದ್ಧಂತವ್ಯಾಃ ಪಾಪಿನಃ ಸರ್ವಥೈವ ।
ಯೇ ತಕ್ಷದ್ಧೂರ್ತಾ ಗ್ರಹಣಂ ಗತಾ ವಾ
ಪಾಪಾಸ್ತೇऽನ್ಯೈರ್ಘಾತನೀಯಾಃ ಸ್ವಧೋಭ್ಯಾಂ ।
ರಾಜಾನಂ ವಾ ರಾಜಪುತ್ರಂ ತಥೈವ
ರಾಜಾನುಜಂ ವಾಭಿಯಾತಂ ನಿಹನ್ಯಾತ್ ॥೧೦೪॥

ಮಹಾಪಾಪಿಗಳಾದ ಬಲಿಷ್ಠರಾದ ಶತ್ರುಗಳ ನಿಗ್ರಹದಲ್ಲಿ ಹರಿಗೆ ಬಹಳ ಪ್ರೀತಿ. ಆದರಿಂದ ಪಾಪಿಗಳನ್ನು ಸರ್ವಥಾ ಸ್ವತಃ ನಿಗ್ರಹಿಸಬೇಕು. ಕಪಟದ ಜೂಜಾಡುವ

ಶಕುನಿಯಂಥವರನ್ನು ಅಥವಾ ಯುದ್ಧದಲ್ಲಿ ಸೆರೆ ಸಿಗುವ ಪಾಪಿಗಳನ್ನು ಬೇರೆಯವರ ಕೈಯಿಂದ ಕೊಲ್ಲಿಸಬೇಕು. ರಣರಂಗದಲ್ಲಿ ಇದಿರಾಗಿ ಬರುವ ದುರ್ಯೋಧನನಂಥ ರಾಜನನ್ನಾಗಲಿ, ರಾಜಕುಮಾರರನ್ನಾಗಲಿ ದುಃಶಾಸನನಂಥ ರಾಜಸೋದರರನ್ನಾಗಲಿ ತನ್ನ ಕೈಗಳಿಂದಲೆ ಸಂಹರಿಸಬೇಕು.

ರಾಜ್ಞಃ ಪುತ್ರೋಽಕೃತೋದ್ವಾಹಕೋಯಃ
ಸ ಘಾತನೀಯೋ ನ ಸ್ವಯಂ ವಧ್ಯ ಏವ ।
ಕ್ರೂರಂ ಚಾನ್ಯದ್ಧರ್ಮಯುಕ್ತಂಪರೈಸ್ತತ್
ಪ್ರಸಾಧನೀಯಂ ಕ್ಷತ್ರಿಯೈರ್ನ ಸ್ವಕಾರ್ಯಂ ॥೧೦೫॥

ರಾಜಕುಮಾರ ಭೀಷ್ಮನಂತೆ ಅವಿವಾಹಿತನಾಗಿದ್ದಲ್ಲಿ ಬೇರೆಯವರ ಕೈಯಿಂದ ಕೊಲ್ಲಿಸಬೇಕು. ಸ್ವತಃ ಕೊಲ್ಲಕೂಡದು. ಹಾಗೆಯೆ ಧರ್ಮಸಮ್ಮತವಾದ ಬೇರೆ ಯಾವುದೇ ಕ್ರೂರಕರ್ಮವನ್ನು ಕ್ಷತ್ರಿಯರು ಬೇರೆಯವರಿಂದಲೆ ಮಾಡಿಸಬೇಕು, ಹೊರತು ಸ್ವತಃ ಮಾಡಬಾರದು.

ಏವಂ ಧರ್ಮೋ ವಿಹಿತೋ ವೇದ ಏವ
ವಾಕ್ಯಂ ವಿಷ್ಣೋಃ ಪಂಚರಾತ್ರೇಷು ತಾದೃಕ್ ।
ಅಕ್ಷದ್ಯೂತಂ ನಿಕೃತಿಃ ಪಾಪಮೇವ
ಕೃತಂ ತ್ವಯಾ ಗರ್ಹಿತಂ ಸೌಬಲೇನ ॥೧೦೬॥

ಹೀಗೆ ಧರ್ಮ ವೇದದಲ್ಲಿಯೇ ವಿಹಿತವಾಗಿದೆ. ಪಂಚರಾತ್ರಗಳಲ್ಲಿ ವಿಷ್ಣುವಚನವೂ ಹಾಗೇ ಇದೆ. ಜೂಜು ಮೋಸದಿಂದ ಕೂಡಿದ್ದು ಪಾಪಕರವಾಗಿದೆ. ನಿಂದ್ಯವಾಗಿದೆ. ಅಂಥ ಜೂಜನ್ನು ನೀನು ಶಕುನಿಯೊಡನೆ ಆಡಿರುವೆ.

ನ ಕುತ್ರಚಿದ್ ವಿಧಿರಸ್ತಿ ತೇನ
ನ ತದ್‌ದತ್ತಂ ದ್ಯೂತಹೃತಂ ವದಂತಿ ।
ಛೇತೇನ ದತ್ತಂ ದ್ಯೂತದತ್ತಂ ತಥೈವ
ದತ್ತಂ ಕಾಮಿನ್ಯೈ ಪುನರಾಹಾರ್ಯಮೇವ ॥೧೦೭॥

ಜೂಜಾಡಲು ಶಾಸ್ತ್ರದಲ್ಲಿ ಎಲ್ಲಿಯೂ ವಿಧಿಯಿಲ್ಲ. ಆದರಿಂದ ಜೂಜಿನಲ್ಲಿ ಅವರು ಅಪಹರಿಸಿದ ಸೊತ್ತನ್ನು ದತ್ತ ಎನ್ನುವುದಿಲ್ಲ. ಭಯದಿಂದ ಕೊಟ್ಟದ್ದು ಜೂಜಿನಲ್ಲಿ ಕೊಟ್ಟದ್ದು ವೇಶ್ಯೆಗೆ ಕೊಟ್ಟದ್ದು ಇವೆಲ್ಲವೂ ಬಂಧುಗಳು ಹಿಂದೆ ತೆಗೆದುಕೊಳ್ಳಲು ಯೋಗ್ಯವಾಗಿರುತ್ತವೆ.

ಏವಂ ಧರ್ಮಃ ಶಾಶ್ವತೋ ವೈದಿಕೋ ಹಿ
ದ್ಯೂತೇ ಸ್ತ್ರಿಯಾಂ ನಾಲ್ಪಮಾಹಾರ್ಯಮಾಹುಃ ।
ಯದ್ಯೇಷಾಂ ವೈ ಭೋಗ್ಯಮಲ್ಪಂ ತದೀಯಂ
ಭೋಗೇನ ತದ್ಬಂಧುಭಿಸ್ತಚ್ಚ ಹಾರ್ಯಂ ॥೧೦೮॥

ನಿವಾರಣೇ ಪುರುಷಸ್ಯ ತ್ವಶಕ್ತೌ
ತದ್‌ರಾಜ್ಯಂ ನಃ ಪುನರಾಹಾರ್ಯಮೇವ ।
ತ್ವಂ ಧರ್ಮನಿಷ್ಠಶ್ಚಾಗ್ರಜಶ್ಚೇತಿ ರಾಜನ್
ಋತೇಽನುಜ್ಞಾಂ ನ ಮಯಾ ತತ್‌ಕೃತಂ ಚ ॥೧೦೯॥

ಹೀಗೆ ವೇದೋಕ್ತ ಸನಾತನ ಧರ್ಮವಿದೆ. ಜೂಜಿನಲ್ಲಾಗಲಿ ವೇಶ್ಯಾಸ್ತ್ರಿಯ ಕೈಯಲ್ಲಾಗಲಿ ಕೊಟ್ಟದ್ದು ಅಲ್ಪವಾಗಿದ್ದರೆ ಹಿಂದೆ ತೆಗೆದುಕೊಳ್ಳಲು ಯೋಗ್ಯವಲ್ಲ. ಕೊಟ್ಟ ಆಸ್ತಿಗೆ ಆ ವ್ಯಕ್ತಿಯ ಬಂಧುಗಳು ವಾರಸುದಾರರಾಗಿದ್ದು ಅವರು ಅವನನ್ನು ಅಶಕ್ತಿಯಿಂದ ತಡೆಯದೆ ಬಿಟ್ಟಿದ್ದರೆ ಆ ಆಸ್ತಿ ಅಲ್ಪವಾಗಿದ್ದರೂ ಹಕ್ಕು ಇರುವುದರಿಂದ ಹಿಂದೆ ಪಡೆಯಬಹುದು. ಅಲ್ಪವಾದ ಭೋಗಕ್ಕೆ ಪ್ರತಿಯಾಗಿ ಬಹುಧನವನ್ನು ವೇಶ್ಯೆಯಾಗಲಿ ಜೂಜುಕೋರನಾಗಲಿ ವಂಚನೆಯಿಂದ ಬಾಲಕನ ಕೈಯಿಂದ ಪಡೆದಿದ್ದರೆ ಅದನ್ನೂ ಹಿಂದೆ ಪಡೆಯಬಹುದು. ಆದರಿಂದ ರಾಜನೇ! ನಮ್ಮ ರಾಜ್ಯವನ್ನು ಈಗಲೂ ನಾವು ಹಿಂತಿರುಗಿ ಪಡೆಯಬಹುದು. ನೀನು ಧರ್ಮನಿಷ್ಠ ಹಿರಿಯನೆಂದು ನಿನ್ನಾಜ್ಞೆ. ಇಲ್ಲದೆ ನಾನು ಆ ಕಾರ್ಯವನ್ನು ಮಾಡಲಿಲ್ಲ.

ದಾತಾಸ್ಯನುಜ್ಞಾಂ ಯದಿ ತಾನ್‌ನಿಹತ್ಯ
ತ್ವಯ್ಯೇವ ರಾಜ್ಯಂ ಸ್ಥಾಪಯಾಮ್ಯದ್ಯ ಸಮ್ಯಕ್ ।
ಸತ್ಯಂ ಪಾಪೇಷ್ವಪಿ ಕರ್ತುಂ ಯದೀಚ್ಛಾ
ತಥಾಪಿ ಮಾಸಾ ದ್ವಾದಶ ನಃ ಪ್ರಯಾತಾಃ ॥೧೧೦॥

ಈಗಲೂ ನೀನು ಅನುಮತಿ ಇತ್ತರೆ ಆ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಚೆನ್ನಾಗಿ ನಿನ್ನ ವಶದಲ್ಲಿ ತಂದಿರಿಸುತ್ತೇನೆ. ಪಾಪಿಗಳಲ್ಲಿಯೂ ನೀನು ಕೊಟ್ಟ ಮಾತನ್ನು ಉಳಿಸಲು ಬಯಸುವಿಯಾದರೆ ಅದಕ್ಕೂ ಮಾರ್ಗವಿದೆ. ನಮಗೆ ಈಗಾಗಲೆ ವನವಾಸದಲ್ಲಿ ಹನ್ನೆರಡು ತಿಂಗಳು ಕಳೆದಿವೆ.

ವೇದಪ್ರಾಮಾಣ್ಯಾದ್ ವತ್ಸರಾಸ್ತೇ ಹಿ ಮಾಸೈಃ
ಸಹಸ್ರಾಬ್ದಂ ಸತ್ರಮುಕ್ತಂ ನರಾಣಾಂ ।
ಅಜ್ಞಾತಮೇಕಂ ಮಾಸಮುಷ್ಯಾಥ ಶತ್ರೂನ್
ನಿಹತ್ಯ ರಾಜ್ಯಂ ಪ್ರತಿಪಾದಯಾಮಃ ॥೧೧೧॥

ಸಾವಿರ ವರ್ಷಗಳ ಸತ್ರಯಾಗವನ್ನು ಮನುಷ್ಯರಿಗೆ ಸಾವಿರ ತಿಂಗಳಲ್ಲಿ ಮಾಡಲು ವೇದದಲ್ಲಿ ಹೇಳಿರುವುದರಿಂದ ಆ ವೇದ ಪ್ರಾಮಾಣ್ಯದ ಆಧಾರದಿಂದ ನಾವು ಕಳೆದ ಹನ್ನೆರಡು ತಿಂಗಳು ಹನ್ನೆರಡು ವರ್ಷಗಳೇ ಆದುವು. ಇನ್ನು ಒಂದು ತಿಂಗಳು ಅಜ್ಞಾತವಾಸ ಮಾಡಿ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ತಂದುಕೊಡುತ್ತೇವೆ.

ಮಾ ಮಿತ್ರಾಣಾಂ ತಾಪಕಸ್ತ್ವಂ ಭವೇಥಾ
ಸ್ತಥಾಮಿತ್ರಾಣಾಂ ನಂದಕಶ್ಚೈವ ರಾಜನ್ ।
ಜ್ವಲಸ್ವಾರೀಣಾಂ ಮೂರ್ಧ್ನಿ ಮಿತ್ರಾಣಿ ನಿತ್ಯ-
ಮಾಹ್ಲಾದಯನ್ ವಾಸುದೇವಂ ಭಜಸ್ವ ॥೧೧೨॥

ರಾಜನೆ, ಮಿತ್ರ ರಾಜರಿಗೆ ದುಃಖದಾಯಕನಾಗಬೇಡ, ಶತ್ರುರಾಜರಿಗೆ ಸುಖದಾಯಕನಾಗಬೇಡ. ಶತ್ರುಗಳ ತಲೆಯಲ್ಲಿ ಬೆಂಕಿಯಂತೆ ಪ್ರಜ್ವಲಿಸು, ಮಿತ್ರರನ್ನು ಸುಖಪಡಿಸುತ್ತ ಶ್ರೀಹರಿಯನ್ನು ಆರಾಧಿಸು.

ಸ್ವತಂತ್ರತ್ವಂ ವಾಸುದೇವಸ್ಯ ಸಮ್ಯಕ್
ಪ್ರತ್ಯಕ್ಷತ್ವೋ ದೃಶ್ಯತೇ ಹ್ಯದ್ಯ ರಾಜನ್ ।
ಯಸ್ಮಾತ್ಕೃಷ್ಣೋ ವ್ಯಜಯಚ್ಛಂಕರಾದೀನ್
ಜರಾಸುತಾದೀನ್ ಕಾದಿವರೈರಜೇಯಾನ್ ॥೧೧೩॥

ರಾಜನೇ, ಶ್ರೀಹರಿ ಸ್ವತಂತ್ರನೆಂಬುದು ನಮಗೆ ಈಗಲೇ ಚೆನ್ನಾಗಿ ಪ್ರತ್ಯಕ್ಷ ಕಾಣುತ್ತದೆ. ಏಕೆಂದರೆ ರುದ್ರಾದಿಗಳನ್ನೂ ಬ್ರಹ್ಮಾದಿಗಳ ಪರಬಲದಿಂದ ಅಜೇಯರಾದ ಜರಾಸಂಧಾದಿಗಳನ್ನೂ ಶ್ರೀಕೃಷ್ಣನಿಗೆದ್ದಿದ್ದಾನೆ.

ಬ್ರಹ್ಮಾದೀನಾಂ ಪ್ರಕೃತೇಸ್ತದ್ವಶತ್ವಂ
ದೃಷ್ಟಂ ಹಿ ನೋ ಬಹುಶೋ ವ್ಯಾಸದೇಹೇ ।
ಪಾರಾಶರ್ಯೋ ದಿವ್ಯದೃಷ್ಟಿಂ ಪ್ರದಾಯ
ಸ್ವಾತಂತ್ರ್ಯಂ ನೋಽದರ್ಶಯತ್ ಸರ್ವಲೋಕೇ ॥೧೧೪॥

ಬ್ರಹ್ಮಾದಿಗಳು ಮಹಾಲಕ್ಷ್ಮಿಯ ಅಧೀನರು. ಮಹಾಲಕ್ಷ್ಮಿ ಶ್ರೀಹರಿಗೆ ಅಧೀನಳು ಎಂಬುದು ಅನೇಕ ಬಾರಿ ವೇದವ್ಯಾಸರೂಪಿ ಹರಿಯಲ್ಲಿ ಕಂಡಿದೆ. ವೇದವ್ಯಾಸರು ನಮಗೆ ಅನೇಕ ಬಾರಿ ದಿವ್ಯದೃಷ್ಟಿ ಕೊಟ್ಟು ಸಕಲ ಲೋಕದ ವಿಷಯದಲ್ಲಿ ತನಗಿರುವ ಸ್ವಾತಂತ್ರ್ಯವನ್ನು ಪ್ರತ್ಯಕ್ಷ ತೋರಿಸಿದ್ದಾರೆ.

ತಸ್ಮಾದ್ರಾಜನ್ನಭಿನಿರ್ಯಾಹಿ ಶತ್ರೂನ್
ಹಂತುಂ ಸರ್ವಾನ್ಭೋಕ್ತುಮೇವಾಧಿರಾಜ್ಯಂ ।
ಏವಂ ಚ ತೇ ಕೀರ್ತಿರ್ಧರ್ಮೋ ಮಹಾಂತೌ
ಪ್ರಾಪ್ತೌ ರಾಜನ್ ವಾಸುದೇವಪ್ರಸಾದಾತ್ ॥೧೧೫॥

ಅದರಿಂದ ರಾಜನೇ, ಎಲ್ಲ ಶತ್ರುಗಳನ್ನು ಸಂಹರಿಸುವುದಕ್ಕೆ, ಎಲ್ಲ ರಾಜ್ಯವನ್ನು ಭೋಗಿಸುವುದಕ್ಕೆ ಹೊರಡು. ರಾಜನೆ, ನಾನು ಹೇಳುವಂತೆ ಮಾಡಿದರೆ ನಿನಗೆ ಹರಿಯ ಅನುಗ್ರಹದಿಂದ ಮಹತ್ತಾದ ಕೀರ್ತಿ ಪುಣ್ಯಗಳು ಲಭಿಸುವುವು.

★ ★ ★ ★

# ಮೂವತ್ತನೆಯ ಅಧ್ಯಾಯ

(ಭೀಮಸೇನನ ವಚನ. ತಕ್ಷಣ ಯುದ್ಧಕ್ಕೆ ಹೊರಡುವಂತೆ ಒತ್ತಾಯ)

ವೈಶಂಪಾಯನಃ

ಯಾಜ್ಞಸೇನ್ಯಾ ವಚಃ ಶ್ರುತ್ವಾ ಭೀಮಸೇನೋಽತ್ಯಮರ್ಷಣಃ ।
ನಿಃಶ್ವಸನ್ನುಪಸಂಗಮ್ಯ ಕ್ರುದ್ಧೋ ರಾಜಾನಮಬ್ರವೀತ್ ॥೧॥

ಯಾಜ್ಞಸೇನಿಯ ಮಾತುಗಳನ್ನು ಕೇಳಿ ಭೀಮಸೇನನು ಬಹಳ ಕೋಪದಿಂದ ನಿಟ್ಟುಸಿರನ್ನು ಬಿಡುತ್ತಾ ಕೋಪದಿಂದಲೇ ರಾಜನ ಬಳಿಗೆ ಬಂದು ಮಾತನಾಡಿದನು.

ಭೀಮಃ

ರಾಜ್ಯಸತ್ಪದವೀಂ ಧರ್ಮ್ಯಾಂ ವ್ರಜ ಸತ್ಪುರುಷೋಚಿತಾಮ್ ।
ಧರ್ಮಕಾಮಾರ್ಥಹೀನಾನಾಂ ಕಿಂ ನೋ ವಸ್ತುಂ ತಪೋವನೇ ॥೨॥

ಧರ್ಮಸಮ್ಮತವಾದ ಸತ್ಪುರುಷರಿಗೆ ಉಚಿತವಾದ ರಾಜ್ಯದ ಶ್ರೇಷ್ಠಪದವಿಯನ್ನು ಹೊಂದು. ಧರ್ಮಾರ್ಥಕಾಮಗಳನ್ನು ತೊರೆದು ಕಾಡಿನಲ್ಲಿ ವಾಸಿಸುವುದರಿಂದ ನಮಗೆ ಏನು ಪ್ರಯೋಜನ?

ನೈವ ಧರ್ಮೇಣ ತದ್ರಾಜ್ಯಂ ನಾರ್ಜವೇನ ನ ಚೌಜಸಾ ।
ಅಕ್ಷಕೂಟಮಧಿಷ್ಠಾಯ ಹೃತಂ ದುರ್ಯೋಧನೇನ ವೈ ॥೩॥

ಗೋಮಾಯುನೇವ ಸಿಂಹಾನಾಂ ದುರ್ಬಲೇನ ಬಲೀಯಸಾಮ್ ।
ಆಮಿಷಂ ವಿಫಸಾಶೇನ ತದ್ವದ್ರಾಜ್ಯಂ ಹಿ ನೋ ಹೃತಮ್ ॥೪॥

ದುರ್ಯೋಧನನು ನಮ್ಮ ರಾಜ್ಯವನ್ನು ಧರ್ಮದಿಂದಾಗಲೀ ನೇರವಾದ ಮಾರ್ಗದಿಂದಲಾಗಲೀ ಅಥವಾ ಪರಾಕ್ರಮದಿಂದಾಗಲೀ ಜಯಿಸಲಿಲ್ಲ. ಮೋಸದ ಅಕ್ಷದ್ಯೂತವನ್ನು ಮಾಡಿ ಅಪಹರಿಸಿದನು. ನರಿಯು ಸಿಂಹದ ಆಹಾರವನ್ನು ಕಸಿದುಕೊಂಡಂತೆ, ದುರ್ಬಲನಾದವನು ಬಲಿಷ್ಠನಾದವನ ಆಹಾರವನ್ನು ತೆಗೆದುಕೊಂಡಂತೆ, ನಾಯಿಯು ಯಜ್ಞಯೋಗ್ಯವಾದ ಹವಿಸ್ಸನ್ನು ಅಪಹರಣಮಾಡಿದಂತೆ, ನಮ್ಮ ರಾಜ್ಯವು ಅಪಹರಿಸಲ್ಪಟ್ಟಿತು.

ಧರ್ಮಲೇಶಪ್ರತಿಚ್ಛನ್ನಃ ಪ್ರಭವಂ ಧರ್ಮಕಾಮಯೋಃ ।
ಅರ್ಥಮುತ್ಸೃಜ್ಯ ಕಿಂ ರಾಜನ್ ದುಃಖೇನ ಪರಿತಪ್ಯಸೇ ॥೫॥

ರಾಜನೇ! ಧರ್ಮಲೇಶವನ್ನು ಆಶ್ರಯಿಸಿ ಮಹಾಧರ್ಮಗಳನ್ನು ತಿರಸ್ಕರಿಸಿ ಧರ್ಮಕಾಮಗಳಿಗೆ ಕಾರಣವಾದ ಅರ್ಥವನ್ನು ಪರಿತ್ಯಾಗಮಾಡಿ ಏಕೆ ದುಃಖದಿಂದ ಪರಿತಾಪವನ್ನು ಪಡುತ್ತಿದ್ದೀಯೆ?

ಭವತೋಽನವಧಾನೇನ ರಾಜ್ಯಂ ನಃ ಪಶ್ಯತಾಂ ಹೃತಮ್ ।
ಅಹಾರ್ಯಮಪಿ ಶಕ್ರೇಣ ಗುಪ್ತಂ ಗಾಂಡೀವಧನ್ವನಾ ॥೬॥

ನಿನ್ನ ಪ್ರಮಾದದಿಂದ ನಮ್ಮ ಕಣ್ಣೆದುರಿಗೇ ಇಂದ್ರನಿಂದಲೂ ಜಯಿಸಲಾಗದ ಅರ್ಜುನನಿಂದ ಗುಪ್ತವಾದ ನಮ್ಮ ರಾಜ್ಯವು ಅಪಹರಿಸಲ್ಪಟ್ಟಿತು.

ಕುಣೇನಾಮಿವ ಬಿಲ್ವಾನಿ ಪಂಗೂನಾಮಿವ ಧೇನವಃ ।
ಹೃತಮೈಶ್ವರ್ಯಮಸ್ಮಾಕಂ ಜೀವತಾಂ ಭವತಃ ಕೃತೇ ॥೭॥

ಸೊಟ್ಟಕೈ ಮನುಷ್ಯನಿಂದ ಬಿಲ್ವ(ನಾನ್ಯ)ಗಳನ್ನು ಕಸಿದುಕೊಂಡಂತೆ, ಕುಂಟರ ಧೇನುಗಳನ್ನು ಕಸಿದುಕೊಂಡಂತೆ, ನಾವು ಬದುಕಿರುವಾಗಲೇ ನಿನ್ನ ತಮ್ಮಂದಿರಾದಿಯಾಗಿ ನಮ್ಮ ಐಶ್ವರ್ಯವು ಅಪಹೃತವಾಯಿತು.

ಭವತಃ ಪ್ರಿಯಮಿತ್ಯೇವಂ ಮಹದ್ವ್ಯಸನಮೀದೃಶಮ್ ।
ಧರ್ಮಕಾಮಪ್ರತೀತಸ್ಯ ಪ್ರತಿಪನ್ನಾಃ ಸ್ಮ ಭಾರತ ॥೮॥

ಎಲೈ ಭಾರತನೇ! ಯಾವಾಗಲೂ ಧರ್ಮಕಾಮವುಳ್ಳವನೆಂದು ಪ್ರಸಿದ್ಧವಾದ ನಿನಗೆ ಪ್ರಿಯವೆಂಬ ಕಾರಣದಿಂದ ಇಂತಹ ದೊಡ್ಡ ವ್ಯಸನರೂಪವಾದ ವನವಾಸವನ್ನು ಹೊಂದಿದ್ದೇವೆ.

ಕರ್ಶಯಾಮಃ ಸ್ವಮಿತ್ಯಾಣಿ ನಂದಯಾಮಶ್ಚ ಶಾತ್ರವಾನ್ ।
ಆತ್ಮಾನಂ ಭವತಃ ಶಾಸ್ತ್ರೇ ನಿಯಮ್ಯ ಭರತರ್ಷಭ ॥೯॥

ಎಲೈ ಭರತರ್ಷಭನೇ! ನಮ್ಮನ್ನು ನಿನ್ನ ಶಾಸನಕ್ಕೆ ಒಳಪಡಿಸಿ ನಮ್ಮ ಹಿತೈಷಿಗಳನ್ನು ದುಃಖಪಡಿಸುತ್ತಿದ್ದೇವೆ. ಮತ್ತು ಶತ್ರುಗಳನ್ನು ಸಂತೋಷಪಡಿಸುತ್ತಿದ್ದೇವೆ.

ತದ್ ವಯಂ ಹಿ ತದೈವೈತಾನ್ ಧಾರ್ತರಾಷ್ಟ್ರಾನ್ ನಿಹನ್ಮಹಿ ।
ಭವತಃ ಶಾಸ್ತ್ರಮಾಸ್ಥಾಯ ತನ್ನಸ್ತಪತಿ ದುಷ್ಕೃತಮ್ ॥೧೦॥

ನಾವು ಆಗಲೇ ಈ ದುರ್ಯೋಧನಾದಿಗಳನ್ನು ಕೊಂದುಬಿಡುತ್ತಿದ್ದೆವು ನಿನ್ನ ಶಾಸನವನ್ನು ಅವಲಂಬಿಸಿ ಅವರನ್ನು ಕೊಲ್ಲದಿದ್ದ ಪಾಪವು ಈ ದಿನ ನಮ್ಮನ್ನು ಪೀಡಿಸುತ್ತಿದೆ.

ಅಥೈನಾಮನ್ವವೇಕ್ಷಸ್ವ ಮೃಗಚರ್ಯಾಮಿವಾತ್ಮನಃ ।
ಅಧೀರಾಚರಿತಂ ರಾಜನ್ನಬಲಸ್ತ್ವೈರ್ನಿಷೇವಿತಾಮ್ ॥೧೧॥

ಎಲೈ ರಾಜನೇ! ಹೇಡಿಗಳಿಂದ ಆಚರಿಸಲ್ಪಡುವ, ದುರ್ಬಲರಿಂದ ಸ್ವೀಕೃತವಾದ, ನಿನ್ನ ವನಸಂಚಾರ ರೂಪವಾದ, ಈ ಮೃಗಚರ್ಯೆಯನ್ನು ಗಮನಿಸು.

ಯಾಂ ನ ಕೃಷ್ಣೋ ನ ಬೀಭತ್ಸುರ್ನಾಭಿಮನ್ಯುರ್ನ ಸೃಂಜಯಾಃ ।
ನ ಚಾಹಮಭಿನಂದಾಮಿ ನ ಚ ಮಾದ್ರೀಸುತಾವುಭೌ ॥೧೨॥

ಈ ನಿನ್ನ ಮೃಗಚರ್ಯೆಯನ್ನು ಕೃಷ್ಣನಾಗಲೀ ಅರ್ಜುನನಾಗಲೀ ಅಭಿಮನ್ಯುವಾಗಲೀ ಸೃಂಜಯರಾಗಲೀ ನಾನಾಗಲೀ ಅಥವಾ ಮಾದ್ರೀಸುತರಿಬ್ಬರಾಗಲೀ ಅಭಿನಂದಿಸುವುದಿಲ್ಲ.

ಭವಾನ್ ಧರ್ಮೋ ಧರ್ಮ ಇತಿ ಸತತಂ ಧರ್ಮಕರ್ಶಿತಃ ।
ಕಚ್ಚಿದ್ರಾಜನ್ನ ನಿರ್ವೇದಾದಾಪನ್ನಃ ಕ್ಲೀಬಜೀವಿಕಾಮ್ ॥೧೩॥

ರಾಜನೇ ನೀನು ಯಾವಾಗಲೂ ಧರ್ಮವೆನ್ನುತ್ತಾ ಧರ್ಮಪೀಡಿತನಾಗಿದ್ದೀಯೆ. ರಾಜನೇ ನೀನೇನಾದರೂ ರಾಜ್ಯದ ಮೇಲಿನ ವೈರಾಗ್ಯದಿಂದ ಇಂತಹ ನಪುಂಸಕಜೀವನವನ್ನು ನಡೆಸುತ್ತಿದ್ದೀಯಾ?

ದುರ್ಮನುಷ್ಯೋ ಹಿ ನಿರ್ವೇದಮಫಲಂ ಸರ್ವಘಾತಿನಮ್ ।
ಪ್ರತಿಪನ್ನೋ ವಿಷೀದೇತ ಪಂಕೇ ಗೌರಿವ ದುರ್ಬಲಾ ।
ಅಶಕ್ತಾಃ ಶ್ರಿಯಮಾಹರ್ತುಮಾತ್ಮನಃ ಕುರ್ವತೇ ಪ್ರಿಯಮ್ ॥೧೪॥

ದುಷ್ಟಮನುಷ್ಯನು ಮಾತ್ರ ಸರ್ವನಾಶಕವಾದ ನಿಷ್ಫಲವಾದ ವೈರಾಗ್ಯವನ್ನು ಹೊಂದಿ ದುರ್ಬಲವಾದ ಗೋವು ಕೆಸರಿನಲ್ಲಿ ಮುಳುಗಿದಂತೆ ನಾಶಹೊಂದುತ್ತಾನೆ. ತಮಗೆ ಸಂಪತ್ತನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲದವರು ಇನ್ನೊಬ್ಬರಿಗೆ ಪ್ರಿಯವನ್ನು ಮಾಡುತ್ತಾರೆ.

ಸ ಭವಾನ್ ದೃಷ್ಟಿಮಾನ್ ಶಕ್ತಃ ಪಶ್ಯನ್ನಾತ್ಮನಿ ಪೌರುಷಮ್ ।
ಆನೃಶಂಸ್ಯಪರೋ ರಾಜನ್ ನಾತ್ಮಾರ್ಥಮವಬುಧ್ಯಸೇ ॥೧೫॥

ಅಂತಹ ಜ್ಞಾನವುಳ್ಳ ನೀನು ನಿನ್ನಲ್ಲಿ ಪೌರುಷವನ್ನು ಗಮನಿಸಿ ಶಕ್ತಿಯುತನಾಗಿದ್ದರೂ ಕೂಡ ಮಾರ್ದವಯುಕ್ತನಾಗಿ ನಿನ್ನ ಪ್ರಯೋಜನವನ್ನೇ ನೀನು ಗಮನಿಸುತ್ತಿಲ್ಲ.

ಅಸ್ಮಾನಮೀ ಧಾರ್ತರಾಷ್ಟ್ರಾಃ ಕ್ಷಮಮಾಣಾನಹಿಂಸತಃ ।
ಅಶಕ್ತಾನೇವ ಮನ್ಯಂತೇ ತದ್ ದುಃಖಂ ನಾಹವೇ ವಧಃ ॥೧೬॥

ಹಿಂಸೆಮಾಡದೆ ಸಹನೆಯಿಂದ ಇರುವ ನಮ್ಮನ್ನು ಈ ಧೃತರಾಷ್ಟ್ರಪುತ್ರರು ಅಶಕ್ತರೆಂದು ಭಾವಿಸುತ್ತಾರೆ. ಯುದ್ಧವಿಲ್ಲದೆ ಉಂಟಾಗಿರುವ ಈ ವಧೆಯು ದುಃಖಕರವಾದುದು. ಯುದ್ಧದಲ್ಲಿ ವಧೆಯು ದುಃಖವಲ್ಲ.

ತತ್ರ ಚೇದ್ ಯುಧ್ಯಮಾನಾನಾಮಜಿಹ್ಮಮನಿವರ್ತಿನಾಮ್ ।
ಸರ್ವತೋ ಹಿ ವಧಃ ಶ್ರೇಯಾನ್ ಪ್ರೇತ್ಯ ಲೋಕಾನ್ ಲಭೇಮಹಿ ॥

ಯುದ್ಧದಲ್ಲಿ ಯುದ್ಧಭೂಮಿಯಿಂದ ಹಿಮ್ಮೆಟ್ಟದೆ ಮೋಸವಿಲ್ಲದೆ ಯುದ್ಧಮಾಡುವ ನಮಗೆ ಎಲ್ಲ ರೀತಿಯಲ್ಲಿಯೂ ವಧೆಯುಂಟಾದರೆ ಅದು ಶ್ರೇಯಸ್ಕರವಾದುದು. ಮರಣವನ್ನು ಹೊಂದಿ ಉತ್ತಮ ಲೋಕವನ್ನು ಪಡೆಯುತ್ತೇವೆ.

ಅಥವಾ ವಯಮೇವೈತಾನ್ ನಿಹತ್ಯ ಭರತರ್ಷಭ ।
ಆದದೀಮಹಿ ಗಾಂ ಸರ್ವಾಂ ತಥಾಪಿ ಶ್ರೇಯ ಏವ ನಃ ॥೧೮॥

ಅಥವಾ ಭರತಶ್ರೇಷ್ಠನೇ ಯುದ್ಧದಲ್ಲಿ ನಾವೇ ಅವರೆಲ್ಲರನ್ನೂ ಕೊಂದು ಸಮಗ್ರವಾದ ಭೂಮಿಯನ್ನು ಪಡೆದುಕೊಳ್ಳಬಹುದು. ಆಗಲೂ ಅದು ನಮಗೆ ಶ್ರೇಯಸ್ಕರವಾದುದೇ.

ಸರ್ವಥಾ ಕಾರ್ಯಮೇತನ್ನಃ ಸ್ವಧರ್ಮಮನುತಿಷ್ಠತಾಮ್ ।
ಕಾಂಕ್ಷತಾಂ ವಿಪುಲಾಂ ಕೀರ್ತಿಂ ವೈರಂ ಪ್ರತಿಚಿಕೀರ್ಷತಾಮ್ ॥೧೯॥

ದುರ್ಯೋಧನಾದಿಗಳು ಮಾಡಿದ ಅಪಕಾರಕ್ಕೆ ಪ್ರತೀಕಾರವನ್ನುಮಾಡಲು ಇಚ್ಚಿಸುವ, ನಮ್ಮ ಧರ್ಮವನ್ನು ನಾವು ಅನುಷ್ಠಾನಮಾಡುತ್ತಿರುವ, ವಿಪುಲವಾದ ಕೀರ್ತಿಯನ್ನು ಬಯಸುವ, ನಮಗೆ ದುರ್ಯೋಧನಾದಿಗಳ ಜೊತೆಯಲ್ಲಿ ವೈರವು (ವೈರನಿಮಿತ್ತವಾದ) ಯುದ್ಧವು ಅವಶ್ಯವಾಗಿ ಮಾಡಲ್ಪಡಬೇಕಾದುದು.

ಆತ್ಮಾರ್ಥಂ ಯುಧ್ಯಮಾನಾನಾಂ ವಿದಿತೇ ಕೃತ್ಯಲಕ್ಷಣೇ ।
ಅನ್ಯೈರಪಿ ಹೃತೇ ರಾಜ್ಯೇ ಪ್ರಶಂಸೈವ ನ ಗರ್ಹಣಾ ॥೨೦॥

ಯುದ್ಧವು ಕರ್ತವ್ಯವೆಂದು ತಿಳಿದಿರುವಾಗ ನಮ್ಮ ಸಲುವಾಗಿ ನಾವು ಯುದ್ಧವನ್ನು ಮಾಡುತ್ತಾ ಪರರು ನಮ್ಮ ರಾಜ್ಯವನ್ನು ಅಪಹರಿಸಿದರೆ ಅದು ನಮ್ಮ ಪ್ರಶಂಸೆಯೇ ಹೊರತು ನಿಂದೆಯಲ್ಲ.

ಕರ್ಶಿತಾರ್ಥೋ ಹಿ ಯೋ ಧರ್ಮೋ ವಿಪ್ರಾಣಾಮಾತ್ಮನಸ್ತಥಾ ।
ವ್ಯಸನಂ ನಾಮ ತದ್ರಾಜನ್ ನ ಸ ಧರ್ಮಃ ಕುವರ್ತ್ಮ ತತ್ ॥೨೧॥

ರಾಜನೇ ಯಾವ ಧರ್ಮವು ಬ್ರಾಹ್ಮಣರಿಗೂ ಮತ್ತು ನಮಗೂ ಕ್ಲೇಶವನ್ನು ಉಂಟುಮಾಡುತ್ತದೆಯೋ ಅದು ಧರ್ಮವಲ್ಲ. ಅದೊಂದು ವ್ಯಸನ (ಚಟ). ಅದು ಕೆಟ್ಟದಾರಿ.

ಸರ್ವಥಾ ಧರ್ಮನಿತ್ಯಂ ತು ಪುರುಷಂ ಧನದುರ್ಬಲಮ್ ।
ಜಹತಃ ಪಾರ್ಥ ಧರ್ಮಾರ್ಥೌ ಪ್ರೇತಂ ದುಃಖಿಸುಖೇ ಯಥಾ ॥೨೨॥

ಎಲೈ ಪಾರ್ಥನೇ ಧನಹೀನನಾಗಿ ಎಲ್ಲರೀತಿಯಿಂದಲೂ ನಿತ್ಯವೂ ಧರ್ಮವನ್ನು ಆಚರಿಸುವ ಪುರುಷನನ್ನು ಮೃತನಾದವನು ಸುಖದುಃಖಗಳನ್ನು ಪರಿತ್ಯಜಿಸುವಂತೆ ಧರ್ಮಾರ್ಥಗಳೆರಡೂ ಪರಿತ್ಯಜಿಸುತ್ತವೆ.

ಯಸ್ಯ ಧರ್ಮೋ ಹಿ ಧರ್ಮಾರ್ಥಕ್ಲೇಶಭಾಜ್ ನ ಸ ಪಂಡಿತಃ ।
ನ ಸ ಧರ್ಮಸ್ಯ ವೇದಾರ್ಥಂ ಸೂರ್ಯಸ್ಯಾಂಧಃ ಪ್ರಭಾಮಿವ ॥೨೩॥

ಯಾವನ ಧರ್ಮವು ಬಹಳವಾದ ಧರ್ಮ ಮತ್ತು ಅರ್ಥಗಳಿಗೆ ಕ್ಲೇಶವನ್ನುಂಟುಮಾಡುತ್ತದೆಯೋ ಅವನು ಪಂಡಿತನಲ್ಲ. ಕುರುಡನು ಸೂರ್ಯಪ್ರಭೆಯನ್ನು ತಿಳಿಯದಿರುವಂತೆ ಅವನು ಧರ್ಮಶಾಸ್ತ್ರದ ಅರ್ಥವನ್ನು ತಿಳಿದಿರುವುದಿಲ್ಲ.

ಯಸ್ಯ ಚಾರ್ಥಾರ್ಥ ಏವಾರ್ಥಃ ಸ ಚ ನಾರ್ಥಸ್ಯ ಕೋವಿದಃ ।
ರಕ್ಷತೇ ಭೃತಕಃ ಪುಣ್ಯಂ ಯಥಾ ಸ್ಯಾತ್ ತಾದೃಗೇವ ಸಃ ॥೨೪॥

ಯಾವನ ಧನವು ಧನದ ಸಂಪಾದನೆಯ ಸಲುವಾಗಿಯೇ ಇದೆಯೋ ಅವನೂ ಧನದ ತತ್ವವನ್ನು ತಿಳಿದವನಲ್ಲ. ಪುಣ್ಯವನ್ನು ಮಾರಿ ಭೋಜನವನ್ನು ಮಾಡುವವನು ಹೇಗೆ ಭೋಜನಕ್ಕಾಗಿ ಪುಣ್ಯವನ್ನು ರಕ್ಷಿಸುತ್ತಾನೆಯೋ ಆ ಅರ್ಥಾರ್ಥಿಯು ಅಂತಹವನೇ ಆಗುತ್ತಾನೆ.

ಅತಿವೇಲಂ ತು ಯೋಽರ್ಥಾರ್ಥೀ ನೇತರಾವನುತಿಷ್ಠತಿ ।
ಸ ವಧ್ಯಃ ಸರ್ವಭೂತಾನಾಂ ಬ್ರಹ್ಮಹೇವ ಜುಗುಪ್ಸಿತಃ ॥೨೫॥

ಯಾವನು ಬಹಳವಾದ ಅರ್ಥದ ಆಸೆಯಿಂದ ಧರ್ಮಕಾಮಗಳನ್ನು ಅನುಷ್ಠಾನಮಾಡುವುದಿಲ್ಲವೋ ಅವನು ಬ್ರಹ್ಮಹತ್ಯೆಯನ್ನು ಮಾಡಿದವನಂತೆ ಜುಗುಪ್ಸಿತನಾದವನು ಮತ್ತು ಎಲ್ಲರಿಂದಲೂ ಕೊಲ್ಲಲ್ಪಡಬೇಕಾದವನು.

ಸತತಂ ಯಶ್ಚ ಕಾಮಾರ್ಥೀ ನೇತರಾವನುತಿಷ್ಠತಿ ।
ಮಿತ್ರಾಣಿ ತಸ್ಯ ನಶ್ಯಂತಿ ಧರ್ಮಾರ್ಥಾಭ್ಯಾಂ ಚ ಹೀಯತೇ ॥೨೬॥

ಯಾವನು ಸತತವಾಗಿ ಕಾಮವನ್ನೇ ಬಯಸಿ ಧರ್ಮಾರ್ಥಗಳನ್ನು ಅನುಷ್ಠಾನ ಮಾಡುವುದಿಲ್ಲವೋ ಅವನಿಗೆ ಮಿತ್ರರು ನಾಶವನ್ನು ಹೊಂದುತ್ತಾರೆ. ಧರ್ಮಾರ್ಥಗಳೂ ನಾಶವನ್ನು ಹೊಂದುತ್ತವೆ.

ತಸ್ಯ ಧರ್ಮಾರ್ಥಹೀನಸ್ಯ ಕಾಮಾಂತೇ ನಿಧನಂ ಧ್ರುವಮ್ ।
ಕ್ರೀಡತೋ ರಮಮಾಣಸ್ಯ ಮೀನಸ್ಯೇವಾಂಭಸಃ ಕ್ಷಯೇ ।
ತಸ್ಮಾದ್ ಧರ್ಮಾರ್ಥಯೋರ್ನಿತ್ಯಂ ನ ಪ್ರಮಾದ್ಯಂತಿ ಪಂಡಿತಾಃ ॥

ನೀರಿನಲ್ಲಿ ಸಂಚರಿಸಿ ಸಂತೋಷಪಡುತ್ತಿರುವ ಮೀನು ನೀರು ಒಣಗಿದಾಗ ನಾಶವಾಗುವಂತೆ ಧರ್ಮಾರ್ಥಹೀನನಾದ ಮನುಷ್ಯನು ಕಾಮದ ಕೊನೆಯಲ್ಲಿ ನಾಶವನ್ನು ಖಂಡಿತವಾಗಿ ಹೊಂದುತ್ತಾನೆ. ಆದ್ದರಿಂದ ಪಂಡಿತರಾದವರು ಧರ್ಮಾರ್ಥವಿಷಯಗಳಲ್ಲಿ ಎಚ್ಚರಿಕೆಯಿಂದ ಇರುತ್ತಾರೆ. ಎಂದೂ ಪ್ರಮಾದವನ್ನು ಮಾಡುವುದಿಲ್ಲ.

ಪ್ರಕೃತಿಸ್ಥೋ ಹಿ ಕಾಮಸ್ಯ ಪಾವಕಸ್ಯಾರಣಿರ್ಯಥಾ ॥೨೮॥

ಅಗ್ನಿಗೆ ಕಾಷ್ಠವು(ಅರಣಿಯು) ಮೂಲವಾಗಿರುವಂತೆ ಕಾಮಕ್ಕೆ ಪುರುಷನು ಮೂಲಕಾರಣನಾಗಿದ್ದಾನೆ.

ಸರ್ವಥಾ ಧರ್ಮಮೂಲೋಽರ್ಥೋ ಧರ್ಮಶ್ಚಾರ್ಥಪರಿಗ್ರಹಃ।
ಇತರೇತರಯೋನೀ ತೌ ವಿದ್ಧಿ ಮೇಘೋದಧೀ ಯಥಾ ॥೨೯॥

ಎಲ್ಲ ರೀತಿಯಿಂದಲೂ ಅರ್ಥವು ಧರ್ಮವನ್ನೇ ಮೂಲವಾಗಿ ಹೊಂದಿದೆ. ಧರ್ಮವಾದರೂ ಕೂಡ ಅರ್ಥದಿಂದ ಸಂಪಾದಿಸಲು ಸಾಧ್ಯವಾದುದು. ಪರಸ್ಪರ ಸಂಕ್ರಾಂತವಾದ ಧರ್ಮಾರ್ಥಗಳು ಮೇಘಗಳು ಮತ್ತು ಸಮುದ್ರವಿದ್ದಂತೆ ಎಂದು ತಿಳಿ.

ದ್ರವ್ಯಾರ್ಥಸ್ಪರ್ಶಸಂಯೋಗೇ ಯಾ ಪ್ರೀತಿರುಪಜಾಯತೇ ।
ಸ ಕಾಮಾಶ್ಚಿತ್ತಸಂಕಲ್ಪಃ ಶರೀರಂ ನಾಸ್ಯ ದೃಶ್ಯತೇ ॥೩೦॥

ಪರಿಮಳಾದಿದ್ರವ್ಯಗಳು ಧನ ಮತ್ತು ವಸ್ತ್ರವನಿತಾದಿ ವಿಷಯಗಳು ಇವುಗಳ ಸಂಬಂಧವಾದರೆ ಯಾವ ಮನಃಪ್ರಸಾದವು ಉಂಟಾಗುತ್ತದೆಯೋ ಅದು ಚಿತ್ತದಲ್ಲಿ ಅಪೇಕ್ಷಿತವಾದ ಕಾಮವೆನಿಸುತ್ತದೆ. ಅದು ಪುರುಷಾರ್ಥ. ಅಂತಹ ಕಾಮಕ್ಕೆ ಒಂದು ಶರೀರವು ಕಾಣುವುದಿಲ್ಲ.

ಅರ್ಥಾರ್ಥೀ ಪುರುಷೋ ರಾಜನ್ ಬೃಹಂತಂ ಧರ್ಮಮಿಚ್ಛತಿ ।
ಕಾಮಾರ್ಥೀ ಪುರುಷೋ ಲೋಕೇ ನ ಕಾಮಾದನ್ಯಮೃಚ್ಛತಿ ॥೩೧॥

ರಾಜನೇ ಅರ್ಥವನ್ನು ಬಯಸುವ ಪುರುಷನು ದೊಡ್ಡದಾದ ಧರ್ಮವನ್ನು ಮಾಡಲು ಬಯಸುತ್ತಾನೆ. ಕಾಮವನ್ನು ಬಯಸುವ ಪುರುಷನು ಲೋಕದಲ್ಲಿ ಕಾಮದಿಂದ ಬೇರೆ ಏನನ್ನೂ ಸಂಪಾದಿಸುವುದಿಲ್ಲ.

ನ ಹಿ ಕಾಮೇನ ಕಾಮೋऽನ್ಯಃ ಸಿಧ್ಯತೇ ಫಲಮೇವ ತತ್ ।
ಉಪಯೋಗಾತ್ ಫಲಸ್ಯೇವ ಕಾಷ್ಠಾದ್ ಭಸ್ಮೇವ ಪಂಡಿತಃ ॥೩೨॥

ಒಂದು ಕಾಮದಿಂದ ಇನ್ನೊಂದು ಕಾಮವು ಸಿದ್ಧಿಸುವುದಿಲ್ಲ. ಕಾಮವು ಕೊನೆಯ ಫಲವೇ ಆಗಿದೆ. ಫಲವನ್ನು ಭಕ್ಷಣೆ ಮಾಡಿದರೆ ಇನ್ನೊಂದು ಫಲವು ಹೇಗೆ ಉಂಟಾಗುವುದಿಲ್ಲವೋ, ಕಾಷ್ಠವನ್ನು ಭಸ್ಮಮಾಡಿದ ಮೇಲೆ ಹೇಗೆ ಅದರಿಂದ ಇನ್ನೊಂದು ಕಾಷ್ಠವುಂಟಾಗುವುದಿಲ್ಲವೋ ಹಾಗೆ ಕಾಮದಿಂದ ಇನ್ನೊಂದು ಫಲವು ಉಂಟಾಗುವುದಿಲ್ಲ ಎಂದು ಪಂಡಿತನು ತಿಳಿಯುತ್ತಾನೆ.

ಇಮಾನ್ ಶಕುನಕಾನ್ ರಾಜನ್ ಹಂತಿ ವೈತಂಸಿಕೋ ಯಥಾ ।
ಏತದ್ರೂಪಮಧರ್ಮಸ್ಯ ಭೂತೇಷು ಚ ವಿಹಿಂಸತಾಮ್ ॥೩೩॥

ರಾಜನೇ ಈ ಮಾಂಸಜೀವಿಯಾದ ಪುರುಷನನ್ನು ನೋಡು. ಅವನು ಈ ಪಕ್ಷಿಗಳನ್ನು ಕೊಲ್ಲುತ್ತಾನೆ. ಅದರ ಮಾಂಸವನ್ನು ಭಕ್ಷಣೆಮಾಡಿದ ಮೇಲೆ ಅಥವಾ ಮಾರಿದ ಮೇಲೆ ಅದರಿಂದ ಇನ್ನೊಂದು ಮಾಂಸವು ಉಂಟಾಗುವುದಿಲ್ಲ. ಪ್ರಾಣಿಗಳನ್ನು ಹಿಂಸೆಮಾಡಿ ಅಧರ್ಮವನ್ನು ಆಚರಿಸುವವರಿಗೂ ಇದೇ ದೃಷ್ಟಾಂತ. ಸ್ವಸ್ತ್ರೀಗಮನದಂತೆ ಪರಸ್ತ್ರೀಗಮನವು ತಾತ್ಕಾಲಿಕ ಸುಖವನ್ನೇ ಕೊಡುತ್ತದೆ. ಅದರಿಂದ ಇನ್ನೊಂದು ಸುಖವು ಉಂಟಾಗುವುದಿಲ್ಲ.

ಕಾಮಾಲ್ಲೋಭಾಚ್ಚ ಧರ್ಮಸ್ಯ ಪ್ರವೃತ್ತಿಂ ಯೋ ನ ಗಚ್ಛಂತಿ ।
ಸ ವಧ್ಯಃ ಸರ್ವಭೂತಾನಾಂ ಪ್ರೇತ್ಯ ಚೇಹ ಚ ದುರ್ಗತಿಃ ॥೩೪॥

ಕಾಮಕ್ಕೂ ಮತ್ತು ಲೋಭಕ್ಕೂ ವಶನಾಗಿ ಯಾವನು ಧರ್ಮಾಚರಣೆಯನ್ನು ಮಾಡುವುದಿಲ್ಲವೋ ಅವನು ಎಲ್ಲರಿಂದಲೂ ವಧ್ಯನಾಗುತ್ತಾನೆ. ಅವನು ಇಲ್ಲಿಯೂ ಮತ್ತು ಪರಲೋಕದಲ್ಲಿಯೂ ದುರ್ಗತಿಯನ್ನು ಹೊಂದುತ್ತಾನೆ.

ವ್ಯಕ್ತಂ ತೇ ವಿದಿತೋ ರಾಜನ್ನರ್ಥೋ ದ್ರವ್ಯಪರಿಗ್ರಹಃ ।
ಪ್ರಕೃತಿಂ ಚಾಪಿ ವೇತ್ಥಾಸ್ಯ ವಿಕೃತಿಂ ಚಾಪಿ ಭೂಯಸೀಮ್ ॥೩೫॥

ರಾಜನೇ ಅರ್ಥವು ಗಜತುರಗಾದಿವಸ್ತುಗಳನ್ನು ಪರಿಗ್ರಹಿಸುವುದಕ್ಕೆ ಕಾರಣವೆಂದು ನೀನು ಸ್ಪಷ್ಟವಾಗಿ ತಿಳಿದಿದ್ದೀಯೆ. ಅರ್ಥಕ್ಕೆ ಮೂಲಕಾರಣವಾದುದು ಸ್ವಪಿತ್ರಾರ್ಜಿತವಾದ ಭೂಮಿ ಎಂಬುದನ್ನೂ ತಿಳಿದಿದ್ದೀಯೆ. ಅದರಿಂದ ಪುನಃ ಉಂಟಾಗುವ ಅರ್ಥದ ಅಭಿವೃದ್ಧಿಯನ್ನು ತಿಳಿದಿದ್ದೀಯೆ.

ತಸ್ಯ ನಾಶಂ ವಿನಾಶಂ ವಾ ಜರಯಾ ಮರಣೇನ ವಾ ।
ಅನರ್ಥಮಿತಿ ಮನ್ಯಂತೇ ಸೋಽಯಮಸ್ಮಾಸು ವರ್ತತೇ ॥೩೬॥

ಮುಪ್ಪಿನಿಂದ ಅಥವಾ ಮರಣದಿಂದ ಅದರ ವಿನಾಶವನ್ನಾಗಲೀ ಅಥವಾ ಅದರಲ್ಲಿ ವೈರಾಗ್ಯವನ್ನಾಗಲೀ ಜನರು ಅನರ್ಥವೆಂದು ಪರಿಗಣಿಸುತ್ತಾರೆ ಅಂತಹ ಅನರ್ಥವು ಈಗ ನಮ್ಮಲ್ಲಿದೆ.

ಇಂದ್ರಿಯಾಣಾಂ ಚ ಪಂಚಾನಾಂ ಮನಸೋ ಹೃದಯಸ್ಯ ಚ ।
ವಿಷಯೇ ವರ್ತಮಾನಾನಾಂ ಯಾ ಪ್ರೀತಿರುಪಜಾಯತೇ ।
ಸ ಕಾಮ ಇತಿ ಮೇ ಬುದ್ಧಿಃ ಕರ್ಮಣಾಂ ಫಲಮುತ್ತಮಮ್ ॥೩೭॥

ಐದು ಇಂದ್ರಿಯಗಳಿಗೆ ಮತ್ತು ಮನಸ್ಸು ಬುದ್ಧಿಗಳಿಗೆ ಹಿತವಾದ ವಿಷಯವನ್ನು ಸೇವಿಸುವವರಿಗೆ ಯಾವ ಸಂತೋಷವು ಉಂಟಾಗುತ್ತದೆಯೋ ಅದನ್ನು ಕಾಮವೆಂದು ಕರೆಯುತ್ತಾರೆ ಎಂದು ನನ್ನ ನಿಶ್ಚಯ. ಅದು ಮಾಡಿದ ಕರ್ಮಗಳಿಗೆ ಶ್ರೇಷ್ಠವಾದ ಫಲ.

ಏವಮೇವ ಪೃಥಗ್ ದೃಷ್ಟ್ವಾ ಧರ್ಮಾರ್ಥೌ ಕಾಮಮೇವ ಚ ।
ನ ಧರ್ಮಪರ ಏವ ಸ್ಯಾನ್ನ ಚಾರ್ಥಪರಮೋ ನರಃ ।
ನ ಕಾಮಪರಮೋ ವಾ ಸ್ಯಾತ್ ಸರ್ವಾನ್ ಸೇವೇತ ಸರ್ವದಾ ॥೩೮॥

ಹೀಗೆ ಧರ್ಮಾರ್ಥಕಾಮಗಳನ್ನು ಪ್ರತ್ಯೇಕವಾಗಿ ವಿಮರ್ಶೆಮಾಡಿ ಮನುಷ್ಯನು ಕೇವಲ ಧರ್ಮಪರನಾಗಿರಬಾರದು. ಕೇವಲ ಅರ್ಥಪರಗಿರಬಾರದು ಅಥವಾ ಕೇವಲ ಕಾಮಪರನಾಗಿರಬಾರದು. ಎಲ್ಲವನ್ನೂ ಯಾವಾಗಲೂ ಸೇವಿಸಬೇಕು.

ಧರ್ಮಂ ಪೂರ್ವಂ ಧನಂ ಮಧ್ಯೇ ಜಘನ್ಯೇ ಕಾಮಮಾಚರೇತ್ ।
ಅಹನ್ಯನುಚರೇದೇವಂ ಏಷ ಶಾಸ್ತ್ರಕೃತೋ ವಿಧಿಃ ॥೩೯॥

ಒಂದು ದಿವಸದಲ್ಲಿ ಮೊದಲು (ಅರುಣೋದಯದಿಂದ ಮಧ್ಯಾನ್ಹದವರೆಗೆ) ಧರ್ಮವನ್ನು ಆಚರಿಸಬೇಕು. ಮಧ್ಯಕಾಲದಲ್ಲಿ ಮಧ್ಯಾಹ್ನದಿಂದ ರಾತ್ರಿಒಂದು ಯಾಮದವರೆಗೆ ಅರ್ಥವನ್ನು ಸಂಪಾದಿಸಬೇಕು. ಕೊನೆಯಕಾಲದಲ್ಲಿ ಅದರ ನಂತರ ಕಾಮವನ್ನು ಅನುಭವಿಸಬೇಕು. ಇದು ಶಾಸ್ತ್ರಕಾರರ ಮಾತು.

ಕಾಮಂ ಪೂರ್ವೇ ಧನಂ ಮಧ್ಯೇ ಜಘನ್ಯೇ ಧರ್ಮಮಾಚರೇತ್।
ವಯಸ್ಯನುಚರೇದೇವಮೇಷ ಶಾಸ್ತ್ರಕೃತೋ ವಿಧಿಃ ॥೪೦॥

ತನ್ನ ಆಯುಸ್ಸಿನಲ್ಲಿ ಮಾತ್ರ ಪೂರ್ವವಯಸ್ಸಿನಲ್ಲಿ ಕಾಮವನ್ನು ಅನುಭವಿಸಬೇಕು. ಮಧ್ಯವಯಸ್ಸಿನಲ್ಲಿ ಧನಾರ್ಜನೆಯನ್ನು ಮಾಡಬೇಕು. ಕೊನೆಯವಯಸ್ಸಿನಲ್ಲಿ ಧರ್ಮಾಚರಣೆಯನ್ನು ಮಾಡಬೇಕು. ಇದೂ ಸಹ ಶಾಸ್ತ್ರಕಾರರ ಅನುಶಾಸನ.

ಧರ್ಮಂ ಚಾರ್ಥಂ ಚ ಕಾಮಂ ಚ ಯಥಾವದ್ ವದತಾಂ ವರ ।
ವಿಭಜ್ಯ ಕಾಲೇ ಕಾಲಜ್ಞಃ ಸರ್ವಾನ್ ಸೇವೇತ ಪಂಡಿತಃ ॥೪೧॥

ಮಾತನಾಡುವವರಲ್ಲಿ ಶ್ರೇಷ್ಠನಾದವನೇ, ಧರ್ಮಅರ್ಥಕಾಮಗಳನ್ನು ಸರಿಯಾಗಿ ವಿಂಗಡಿಸಿ ಅವುಗಳ ಕಾಲವನ್ನು ತಿಳಿದು ಆಯಾಕಾಲದಲ್ಲಿ ಅವುಗಳೆಲ್ಲವನ್ನು ಪಂಡಿತನಾದವನು ಸೇವಿಸಬೇಕು.

ಮೋಕ್ಷೋ ವಾ ಪರಮಂ ಶ್ರೇಯ ಏಷ ರಾಜನ್ ಸುಖಾರ್ಥಿನಾಮ್ ।
ಪ್ರಾಪ್ತಂ ವಾ ಬುದ್ಧಿಮಾಸ್ಥಾಯ ಸೋಪಾಯಂ ಕುರುನಂದನ ॥೪೨॥

ತದಾಶು ಕ್ರಿಯತಾಂ ರಾಜನ್ ಪ್ರಾಪ್ತಿಂ ಚಾಪ್ಯಧಿಗಮ್ಯತಾಮ್ ।
ಜೀವಿತಂ ಹ್ಯಾತುರಸ್ಯೈವ ದುಃಖಮಂತರವರ್ತಿನಃ ॥೪೩॥

ರಾಜನೇ ಸುಖವನ್ನು ಬಯಸುವವರಿಗೆ ಮೋಕ್ಷವೇ ಫಲರೂಪವಾದ ಪರಮಶ್ರೇಯಸ್ಸು. ಎಲೈ ಕುರುನಂದನನೇ ಆಯಾಕಾಲದಲ್ಲಿ ಪ್ರಾಪ್ತವಾದ ಧರ್ಮಾದಿಗಳನ್ನು ಬುದ್ಧಿಪೂರ್ವಕವಾಗಿ ಶೀಘ್ರವಾಗಿ ಅನುಷ್ಠಾನಮಾಡು. ರಾಜನೇ

ಅದರ ಫಲವನ್ನು ಪಡೆಯುವವನಾಗು. ಧರ್ಮಾರ್ಥಗಳನ್ನು ಬಿಟ್ಟು ಜೀವಿಸುವ ಜೀವನವು ರೋಗಗ್ರಸ್ತನಾದವನ ಜೀವನದಂತೆ ನಿರರ್ಥಕವಾದುದು.

ವಿದಿತಶ್ಚೈವ ತೇ ಧರ್ಮಾಃ ಸತತಂ ಚರಿತಾಶ್ಚ ತೇ ।
ಜಾನಂತಸ್ತು ಪ್ರಶಂಸಂತಿ ಸುಹೃದಃ ಕರ್ಮಚೋದನಾಮ್ ॥೪೪॥

ನಿನಗೆ ಆ ಧರ್ಮಗಳು ತಿಳಿದಿವೆ ಮತ್ತು ಸತತವಾಗಿ ಅವುಗಳನ್ನು ಆಚರಿಸಿದ್ದೀಯೆ. ವಿವೇಕವುಳ್ಳ ನಮ್ಮ ಹಿತೈಷಿಗಳು ನಾವು ಯುದ್ಧರೂಪವಾದ ಕರ್ತವ್ಯದಲ್ಲಿ ತೊಡಗುವುದನ್ನೇ ಪ್ರಶಂಸಿಸುತ್ತಾರೆ.

ದಾನಂ ಯಜ್ಞಾಃ ಸತಾಂ ಪೂಜಾ ವೇದಧಾರಣಮಾರ್ಜವಮ್ ।
ಏಷ ಧರ್ಮಃ ಪರೋ ರಾಜನ್ ಸಫಲಃ ಪ್ರೇತ್ಯ ಚೇಹ ಚ ॥೪೫॥

ರಾಜನೇ, ದಾನ ಯಜ್ಞ ಸಜ್ಜನರಪೂಜೆ ವೇದಧಾರಣ ಆರ್ಜವ ಇವು ಶ್ರೇಷ್ಠವಾದ ಧರ್ಮ. ಇಲ್ಲಿಯೂ ಪರಲೋಕದಲ್ಲಿಯೂ ಇದರಿಂದ ಶ್ರೇಷ್ಠವಾದ ಫಲವಿದೆ.

ಏಷ ನಾರ್ಥವಿಹೀನೇನ ಶಕ್ಯೋ ರಾಜನ್ ನಿಷೇವಿತುಮ್ ।
ಅಖಿಲಾಃ ಪುರುಷವ್ಯಾಘ್ರ ಗುಣಾಃ ಸೀದಂತಿ ನಿರ್ಧನೇ ॥೪೬॥

ರಾಜನೇ, ಅರ್ಥಹೀನನಾದ ಮನುಷ್ಯನಿಂದ ಈ ಧರ್ಮಗಳನ್ನು ಸೇವಿಸುವುದು ಸಾಧ್ಯವಿಲ್ಲ. ಪುರುಷವ್ಯಾಘ್ರನೇ, ಅಧನನಾದ ಪುರುಷನಿಗೆ ಎಲ್ಲ ಗುಣಗಳೂ ನಾಶವನ್ನು ಹೊಂದುತ್ತವೆ.

ಧರ್ಮಮೂಲಂ ಜಗದ್ ರಾಜನ್ ನಾನ್ಯದ್ ಧರ್ಮಾದ್ ವಿಶಿಷ್ಯತೇ ।
ಧರ್ಮಾಶ್ಚಾರ್ಥೇನ ಮಹತಾ ಶಕ್ಯೋ ರಾಜನ್ನಿಷೇವಿತುಮ್ ॥೪೭॥

ರಾಜನೇ, ಜಗತ್ತು ಧರ್ಮಮೂಲವಾಗಿದೆ. ಧರ್ಮಕ್ಕಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ. ಪ್ರಭೂತವಾದ ಅರ್ಥದಿಂದ ಧರ್ಮವನ್ನು ಸಂಪಾದಿಸಲು ಸಾಧ್ಯ.

ನ ಚಾರ್ಥೋ ಭೈಕ್ಷ್ಯಚರ್ಯೇಣ ನಾಪಿ ಕ್ಲೈಬ್ಯೇನ ಕರ್ಹಿಚಿತ್ ।
ವೇತ್ತುಂ ಶಕ್ಯಸ್ತದಾ ರಾಜನ್ ಕೇವಲಂ ಧರ್ಮಬುದ್ಧಿನಾ ॥೪೮॥

ಎಲ್ಲೆ ರಾಜನೇ, ಅಂತಹ ಅರ್ಥವನ್ನು ಭೈಕ್ಷ್ಯಚರ್ಯೆಯಿಂದಲಾಗಲೀ ಅಥವಾ ನಪುಂಸಕನಂತೆ ಸುಮ್ಮನಿರುವುದರಿಂದಲಾಗಲೀ ಕೇವಲ ಧರ್ಮಬುದ್ಧಿಯುಳ್ಳ ಮನುಷ್ಯನಿಂದ ಎಂದೂ ಸಂಪಾದಿಸಲು ಸಾಧ್ಯವಿಲ್ಲ.

ಪ್ರತಿಷಿದ್ಧಾ ಹಿ ತೇ ಯಾಂಚಾ ಯಯಾ ಸಿಧ್ಯಂತಿ ವೈ ದ್ವಿಜಾಃ ।
ತೇಜಸೈವಾರ್ಥಲಿಪ್ಸಾಯಾಂ ಯತಸ್ವ ಪುರುಷರ್ಷಭ ॥೪೯॥

ಪುರುಷರ್ಷಭನೇ, ಬ್ರಾಹ್ಮಣರಿಗೆ ಸಿದ್ಧಿಯನ್ನು ಉಂಟುಮಾಡುವ ಯಾಚನೆಯು ಕ್ಷತ್ರಿಯನಾದ ನಿನಗೆ ನಿಷಿದ್ಧವಾಗಿದೆ. ಆದ್ದರಿಂದ ಪರಾಕ್ರಮದಿಂದಲೇ ಅರ್ಥವನ್ನು ಸಂಪಾದಿಸಲು ಪ್ರಯತ್ನಮಾಡು.

ಭೈಕ್ಷ್ಯಚರ್ಯಾ ನ ವಿಹಿತಾ ನ ಚ ವಿಟ್‌ಶೂದ್ರಜೀವಿಕಾ ।
ಕ್ಷತ್ರಿಯಸ್ಯ ವಿಶೇಷೇಣ ಧರ್ಮಸ್ತು ಬಲಮೌರಸಮ್ ॥೫೦॥

ನಿನಗೆ ಭೈಕ್ಷ್ಯಚರ್ಯೆಯು ವಿಹಿತವಲ್ಲ. ವೈಶ್ಯಶೂದ್ರರಂತೆ ಜೀವಿಸುವುದೂ ವಿಹಿತವಲ್ಲ. ಕ್ಷತ್ರಿಯನಿಗೆ ವಿಶೇಷವಾದ ಧರ್ಮವೆಂದರೆ ಔರಸ ಬಲ (ಔರಸ ಬಲದಿಂದ ಉಂಟಾದ ಪರಾಕ್ರಮ)

ಸ್ವಧರ್ಮಂ ಪ್ರತಿಪದ್ಯಸ್ವ ಜಹಿ ಶತ್ರೂನ್ ಸಮಾಗತಾನ್ ।
ಧಾರ್ತರಾಷ್ಟ್ರವನಂ ಪಾರ್ಥ ಮಯಾ ಪಾರ್ಥೇನ ನಾಶಯ ॥೫೧॥

ಪಾರ್ಥನೇ, ನಿನ್ನ ಧರ್ಮವನ್ನು ನೀನು ಅನುಷ್ಠಾನಮಾಡು. ಸಮಾಗತರಾದ ಶತ್ರುಗಳನ್ನು ಸಂಹಾರಮಾಡು. ನನ್ನ ಮತ್ತು ಅರ್ಜುನರ ಸಹಾಯದಿಂದ ಧಾರ್ತರಾಷ್ಟ್ರವನವನ್ನು ನಾಶಮಾಡು.

ಉದಾರಮೇವ ವಿದ್ವಾಂಸೋ ಧರ್ಮಂ ಪ್ರಾಹುರ್ಮನೀಷಿಣಃ ।
ಉದಾರಂ ಪ್ರತಿಪದ್ಯಸ್ವ ನಾವರೇ ಸ್ಥಾತುಮರ್ಹಸಿ ॥೫೨॥

ಮೇಧಾವಿಗಳಾದ ವಿದ್ವಾಂಸರು ಉತ್ಕೃಷ್ಟವಾದುದನ್ನೇ ಧರ್ಮವೆಂದು ಹೇಳುತ್ತಾರೆ. ಉತ್ಕೃಷ್ಟವಾದ ವರ್ತನೆಯನ್ನು ಹೊಂದು. ಅವಿಹಿತವರ್ತನೆಯಲ್ಲಿ ತೊಡಗಬೇಡ.

ಪ್ರತಿಪದ್ಯಸ್ವ ರಾಜೇಂದ್ರ ಸ್ವಾರ್ಥಧರ್ಮಾನ್ ಸನಾತನಾನ್ ।
ಕ್ರೂರಕರ್ಮಾಭಿಜಾತೋಽಸಿ ಯಸ್ಮಾದುದ್ವಿಜತೇ ಜನಃ ॥೫೩॥

ಎಲೈ ರಾಜೇಂದ್ರನೇ, ಸ್ವಾರ್ಥಸಾಧಕವಾದ ಸನಾತನಧರ್ಮಗಳನ್ನು ಅನುಷ್ಠಾನಮಾಡು. ದುಷ್ಟನಿಗ್ರಹರೂಪವಾದ ಕ್ರೂರಕರ್ಮವುಳ್ಳ ರಾಜಕುಲದಲ್ಲಿ ಜನಿಸಿದ್ದೀಯೆ. ಆಂತಹವನಿಗೆ ಜನರು ಹೆದರುತ್ತಾರೆ.

ಪ್ರಜಾಪಾಲನಸಂಭೂತಂ ಫಲಂ ರಾಜ್ಞಾಂ ನ ಗರ್ಹಿತಮ್ ।
ಏಷ ತೇ ವಿಹಿತೋ ರಾಜನ್ ಧಾತ್ರಾ ಧರ್ಮಃ ಸನಾತನಃ ॥೫೪॥

ರಾಜರಿಗೆ ಪ್ರಜಾಪಾಲನದಿಂದ ಉಂಟಾದ ಫಲವು ನಿಂದಿತವಲ್ಲ, ರಾಜನೇ, ಇದು ನಾರಾಯಣನು ನಿನಗೆ ವಿಧಿಸಿದ ಸನಾತನವಾದ ಧರ್ಮ.

ತಸ್ಮಾದ್ ವಿಚಲಿತಃ ಪಾರ್ಥ ಲೋಕೇ ಹಾಸ್ಯಂ ಗಮಿಷ್ಯತಿ ।
ಸ್ವಧರ್ಮಾದ್ಧಿ ಮನುಷ್ಯಾಣಾಂ ಚಲನಂ ನ ಪ್ರಶಸ್ಯತೇ ॥೫೫॥

ಎಲೈ ಪಾರ್ಥನೇ, ಅದರಿಂದ ವಿಚಲಿತವಾದರೆ ಲೋಕದಲ್ಲಿ ನೀನು ಹಾಸ್ಯಕ್ಕೆ ಗುರಿಯಾಗುವಿ. ಮನುಷ್ಯರಿಗೆ ಸ್ವವಿಹಿತವಾದ ಧರ್ಮದಿಂದ ಚಲನೆಯು ಪ್ರಶಂಸಿಸಲ್ಪಡುವುದಿಲ್ಲ.

ಸ ಕ್ಷಾತ್ರಂ ಹೃದಯಂ ಕೃತ್ವಾ ತ್ಯಜೇದಂ ಶಿಥಿಲಂ ಮನಃ ।
ವೀರ್ಯಮಾಸ್ಥಾಯ ಕೌಂತೇಯ ಧುರಮುದ್ವಹ ಧುರ್ಯವತ್ ॥೫೬॥

ಎಲೈ ಕೌಂತೇಯನೇ, ಅಂತಹ ನೀನು ಕ್ಷತ್ರಿಯ ಹೃದಯವನ್ನು ತಾಳಿ ಈ ದುರ್ಬಲವಾದ ಮನಸ್ಸನ್ನು ತ್ಯಜಿಸು. ಪರಾಕ್ರಮವನ್ನು ತಾಳಿ ಎತ್ತಿನಂತೆ ರಾಜ್ಯದ ಭಾರವನ್ನು ಹೊರು.

ನ ಹಿ ಕೇವಲಧರ್ಮೇಣ ಪೃಥಿವೀಂ ಶಾಸ್ತಿ ಕಶ್ಚನ ।
ಪಾರ್ಥಿವೋ ಹ್ಯಜಯದ್ ರಾಜನ್ನ ಭೂತಿಂ ನ ಪುನಃ ಶ್ರಿಯಮ್ ॥೫೭॥

ಕೇವಲ ಧರ್ಮದಿಂದ ಯಾವನೂ ಭೂಮಿಯನ್ನು ಆಳುವುದಿಲ್ಲ. ಯಾವ ರಾಜನು ಕೇವಲ ಧರ್ಮದಿಂದ ಅಮಂಗಳವನ್ನು ಜಯಿಸಿದನೋ ಆದರೆ ಸಂಪತ್ತನ್ನು ಜಯಿಸಲ್ಲಿಲವೋ ಅವನು ಭೂಮಿಯನ್ನು ಆಳುವುದಿಲ್ಲ.

ಜಿಹ್ಮಂ ದತ್ತ್ವಾ ಬಹೂನಾಂ ಹಿ ಕ್ಷುದ್ರಾಣಾಂ ಲುಬ್ಧಚೇತಸಾಮ್ ।
ನಿಕೃತ್ಯಾ ಲಭತೇ ರಾಜ್ಯಮಾಹಾರಮಿವ ಶಲ್ಯಕಃ ॥೫೮॥

ಅನೇಕ ಲೋಭಿಗಳಾದ ನೀಚರಿಗೆ ಮೋಸವನ್ನು ಮಾಡಿ ಮುಳ್ಳುಹಂದಿಯು ಆಹಾರವನ್ನು ಪಡೆದಂತೆ ರಾಜನು ರಾಜ್ಯವನ್ನು ಪಡೆಯುತ್ತಾನೆ.

ಭ್ರಾತರಃ ಪೂರ್ವಜಾತಾಶ್ಚ ಸುಸಮೃದ್ಧಾಶ್ಚ ಸರ್ವಶಃ ।
ನಿಕೃತ್ಯಾ ನಿರ್ಜಿತಾ ದೇವೈರಸುರಾಃ ಪಾಂಡುನಂದನ ॥೫೯॥

ಏವಂ ಬಲವತಃ ಸರ್ವಮಿತಿ ಬುದ್ಧ್ಯಾ ವಿಶಾಂಪತೇ ।
ಜಹಿ ಶತ್ರೂನ್ ಮಹಾಬಾಹೋ ಪರಾಂ ನಿಕೃತಿಮಾಸ್ಥಿತಾನ್ ॥೬೦॥

ಎಲೈ ಪಾಂಡವನಂದನನೇ, ಸಹೋದರರೂ ತಮಗಿಂತಲೂ ಮೊದಲೇ ಜನಿಸಿದವರೂ ಎಲ್ಲರೀತಿಯಲ್ಲೂ ಸಮೃದ್ಧರಾದವರೂ ಆದ ಅಸುರರು ದೇವತೆಗಳಿಂದ ಮೋಸದಿಂದಲೇ ಜಯಿಸಲ್ಪಟ್ಟರು. ಎಲೈ ರಾಜನೇ, ಹೀಗೆ ಬಲಿಷ್ಠರಾದವರಿಗೆ ಅತಿಶಯಿತವಾದ ಬುದ್ಧಿಯಿಂದ ಎಲ್ಲ ಕಾರ್ಯವೂ ಸಿದ್ಧಿಸುತ್ತದೆ. ಎಲೈ ಮಹಾಬಾಹುವೇ, ಬಹಳ ಮೋಸವನ್ನು ಅವಲಂಬಿಸಿರುವ ಶತ್ರುಗಳನ್ನು ಸಂಹರಿಸು.

ನ ಹ್ಯರ್ಜುನಸಮಃ ಕಶ್ಚಿದ್ ಯುಧಿ ಯೋದ್ಧಾ ಧನುರ್ಧರಃ ।
ಭವಿತಾ ನ ಪುಮಾನ್ ಕಶ್ಚಿನ್ಮತ್ಸಮೋಽನ್ಯೋ ಗದಾಧರಃ ॥೬೧॥

ಸತ್ತ್ವೇನ ಕುರುತೇ ಯುದ್ಧಂ ರಾಜನ್ ಸುಬಲವಾನಪಿ ।
ನ ಪ್ರಮಾಣೇನ ನೋತ್ಸಾಹಾತ್ ಸತ್ತ್ವಸ್ಥೋ ಭವ ಪಾರ್ಥಿವ ॥೬೨॥

ರಾಜನೇ, ಬಹಳ ಬಲವುಳ್ಳರಾಜನು ಸತ್ವದಿಂದ ಪರಾಕ್ರಮದಿಂದಲೇ ಯುದ್ಧವನ್ನು ಮಾಡುತ್ತಾನೆ. ಧರ್ಮಶಾಸ್ತ್ರದಲ್ಲಿ ಉತ್ಸಾಹದಿಂದಲೇ ಆಗಲಿ ಅಥವಾ ಗಜತುರಗಾದಿಸೈನ್ಯದ ಉತ್ಸಾಹದಿಂದಲಾಗಲೀ ಯುದ್ಧವನ್ನು ಮಾಡುವುದಿಲ್ಲ. ಎಲೈ ರಾಜನೇ ಆದ್ದರಿಂದ ನೀನು ವಿಕ್ರಮಶಾಲಿಯಾಗು.

ಸತ್ತ್ವಂ ಹಿ ಮೂಲಮರ್ಥಸ್ಯ ವಿತಥಂ ಯದತೋಽನ್ಯಥಾ ।
ನ ತು ಪ್ರಸಕ್ತಂ ಭವತಿ ವೃಕ್ಷಚ್ಛಾಯೇವ ಹೈಮನೀ ॥೬೩॥

ಪರಾಕ್ರಮವು ಅರ್ಥಕ್ಕೆ ಮೂಲವಷ್ಟೆ? ಪರಾಕ್ರಮವಿಲ್ಲದಿದ್ದರೆ ಅರ್ಥವು ವ್ಯರ್ಥವಾಗುತ್ತದೆ. ಛಳಿಗಾಲದ ವೃಕ್ಷಚ್ಛಾಯೆಯಂತೆ ಅದು ದೀರ್ಘವಾಗಿ ಬೆಳೆಯುವುದಿಲ್ಲ.

ಅರ್ಥತ್ಯಾಗೋಽಪಿ ಕಾರ್ಯಃ ಸ್ಯಾದ್ ಅರ್ಥಂ ಶ್ರೇಯಾಂಸಮಿಚ್ಛತಾ ।
ಬೀಜೌಪಮ್ಯೇನ ಕೌಂತೇಯ ಮಾ ತೇ ಭೂದತ್ರ ಸಂಶಯಃ ॥೬೩॥

ಎಲೈ ಕೌಂತೇಯನೇ, ಸ್ವಲ್ಪಬೀಜವನ್ನು ಭೂಮಿಗೆ ಹಾಕಿ ಹೆಚ್ಚು ಬೀಜವನ್ನು ಪಡೆದಂತೆ ಬಹಳ ಅರ್ಥವನ್ನು ಗಳಿಸಲು ಬಯಸುವವನು ಅಲ್ಪವಾದ ಅರ್ಥದ ತ್ಯಾಗವನ್ನೂ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ನಿನಗೆ ಸಂಶಯವು ಬೇಡ.

ಅರ್ಥೇನ ತು ಸಮೋಽನರ್ಥೋ ಯತ್ರ ಲಬ್ಧೋ ಧನೋದಯಃ ।
ನ ತತ್ರ ವಿಪಣಂ ಕಾರ್ಯಂ ಕರಕಂಡೂಯನಂ ಹಿ ತತ್ ॥೬೪॥

ಅರ್ಥದಿಂದ ಉಂಟಾಗುವ ಧನಲಾಭಕ್ಕೂ ಮತ್ತು ಅದರಿಂದ ಉಂಟಾಗುವ ಅನರ್ಥಕ್ಕೂ ಸಾಮ್ಯವೇ ಇದ್ದರೆ (ಅಥವಾ ಅನರ್ಥಕ್ಕೆ ಅಧಿಕ್ಯವಿದ್ದರೆ) ಅಲ್ಲಿ ವ್ಯವಹಾರವನ್ನು ಮಾಡಬಾರದು. ಅದು ಕೈಯಿಂದ ಕೆರೆದುಕೊಂಡಂತೆ.

ಏವಮೇವ ಮನುಷ್ಯೇಂದ್ರ ಧರ್ಮಂ ತ್ಯಕ್ತ್ವಾ ತ್ವಲ್ಪಕಂ ನರಃ ।
ಬೃಹಂತಂ ಧರ್ಮಮಾಪ್ನೋತಿ ಬುಧಾನಾಮೇಷ ನಿಶ್ಚಯಃ ॥೬೫॥

ಎಲೈ ರಾಜನೇ, ಬೀಜವನ್ನು ಬಿತ್ತಿದಂತೆ ಮನುಷ್ಯನು ಅಲ್ಪವಾದ ಧರ್ಮವನ್ನು ತ್ಯಜಿಸಿ ಬಹಳ ಧರ್ಮವನ್ನು ಸಂಪಾದನೆಮಾಡುತ್ತಾನೆ. ಇದು ಜ್ಞಾನಿಗಳ ನಿಶ್ಚಯ.

ಅಮಿತ್ರಂ ಮಿತ್ರಸಂಪನ್ನಂ ಮಿತ್ರೈರ್ಭಿಂದಂತಿ ಪಂಡಿತಾಃ ।
ಭಿನ್ನೈರ್ಮಿತ್ರೈಃ ಪರಿತ್ಯಕ್ತಂ ದುರ್ಬಲಂ ಕುರುತೇ ವಶೇ ॥೬೬॥

ಮಿತ್ರರಿಂದ ಕೂಡಿದ ಶತ್ರುವಿಗೆ ಪಂಡಿತರು ಮಿತ್ರಬೇಧವನ್ನು ಮಾಡುತ್ತಾರೆ. ವಿರೋಧಿಗಳಾದ ಮಿತ್ರರು ಅವನನ್ನು ಪರಿತ್ಯಾಗಮಾಡಿದ ಮೇಲೆ ದುರ್ಬಲನಾದ ಆ ಶತ್ರುವನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳುತ್ತಾರೆ.

ಸತ್ತ್ವೇ ನ ಕುರುತೇ ಯುದ್ಧಂ ರಾಜನ್ ಸುಬಲವಾನಪಿ ।
ನೋದ್ಯಮೇನ ನ ಮಾತ್ರಾಭಿಃ ಸರ್ವಾಃ ಸ್ವೀಕುರುತೇ ಪ್ರಜಾಃ ॥೬೭॥

ರಾಜನೇ, ಯಾವನು ಬಲವಿದ್ದರೂ ಮತ್ತು ಪರಾಕ್ರಮವಿದ್ದರೂ ಯುದ್ಧವನ್ನು ಮಾಡುವುದಿಲ್ಲವೋ ಅವನ ಉದ್ಯಮದಿಂದ ಅಥವಾ ಅವನು ಕೊಟ್ಟ ಎಲ್ಲ ದಾನದ ಕಾರಣದಿಂದ ಎಲ್ಲಾ ಪ್ರಜೆಗಳು ಅವನನ್ನು ಸ್ವೀಕರಿಸುವುದಿಲ್ಲ.

ಸರ್ವಥಾ ಸಹಿತೈರೇವ ದುರ್ಬಲೈರ್ಬಲವಾನಪಿ ।
ಅಮಿತ್ರಃ ಶಕ್ಯತೇ ಹಂತುಂ ಮಧುಹಾ ಭ್ರಮರೈರಿವ ॥೬೮॥

ಜೇನುಕೀಳುವವನನ್ನು ಜೇನುಹುಳುಗಳು ಕೊಂದಂತೆ ದುರ್ಬಲರಾದವರೂ ಸಹ ಅನೇಕರು ಜೊತೆಗೂಡಿದರೆ ಬಲಿಷ್ಠನಾದ ಶತ್ರುವನ್ನು ಕೊಲ್ಲಲು ಸಾಧ್ಯವಾಗುತ್ತದೆ.

ಯಥಾ ರಾಜನ್ ಪ್ರಜಾಃ ಸರ್ವಾಃ ಸೂರ್ಯಃ ಪಾತಿ ಗಭಸ್ತಿಭಿಃ।
ಹಂತಿ ಚೈವ ತಥೈವ ತ್ವಂ ಸವಿತುಃ ಸದೃಶೋ ಭವ ॥೬೯॥

ಹೇಗೆ ಸೂರ್ಯನು ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ತನ್ನ ಮೃದುಕಿರಣಗಳಿಂದ ಎಲ್ಲಾ ಪ್ರಜೆಗಳನ್ನು ಪಾಲಿಸುತ್ತಾನೆಯೋ ಮಧ್ಯಾಹ್ನದಲ್ಲಿ ತನ್ನ ಉಷ್ಣಕಿರಣಗಳಿಂದ ಎಲ್ಲರನ್ನು ಕೊಲ್ಲುತ್ತಾನೆಯೋ ಅದರಂತೆ ನೀನು ಸೂರ್ಯನಿಗೆ ಸದೃಶನಾಗು.

ಏತದ್ಧ್ಯಪಿ ತಪೋ ರಾಜನ್ ಪುರಾಣಮಿತಿ ನಃ ಶ್ರುತಮ್ ।
ವಿಧಿನಾ ಪಾಲನಂ ಭೂಮೇರ್ಯತ್ಕೃತಂ ನಃ ಪಿತಾಮಹೈಃ ॥೭೦॥

ಎಲೈ ರಾಜನೇ, ನಮ್ಮ ಪಿತಾಮಹರು ಮಾಡಿದ ಶಾಸ್ತ್ರರೀತಿಯಿಂದ ಭೂಮಿಯ ಪಾಲನೆಯು ಏನಿದೆಯೋ ಅದೂ ಕೂಡ ಪರಂಪರಾಗತ ತಪಸ್ಸೆಂದು ನಾನು ಕೇಳಿದ್ದೇನೆ.

ಅಪೇಯಾತ್ ಕಿಲ ಭಾಃ ಸೂರ್ಯಾಲ್ಲಕ್ಷ್ಮ ಚಂದ್ರಮಸ ಸ್ತಥಾ ।
ಇತಿ ಲೋಕೋ ವ್ಯವಸಿತೋ ದೃಷ್ಟ್ವೇಮಾಂ ಭವತೋ ವ್ಯಥಾಮ್॥೭೧॥

ನಿನ್ನ ಈ ವ್ಯಸನವನ್ನು ನೋಡಿ ಜನರು ಸೂರ್ಯನಿಂದ ಪ್ರಕಾಶವೂ ಚಂದ್ರನಿಂದ ಚಿಹ್ನೆಯೂ ಹೊರಟು ಹೋಗುವುದೆಂದು ನಿಶ್ಚಯಿಸಿದ್ದಾರೆ.

ಭವತಶ್ಚ ಪ್ರಶಂಸಾಭಿರ್ನಿಂದಾಭಿರಿತರಸ್ಯ ಚ ।
ಕಥಯಂತ್ಯಃ ಪರಿಷದಃ ಪೃಥಗ್ ರಾಜನ್ ಸಮಾಗತಾಃ ॥೭೨॥

ರಾಜನೇ, ಅನೇಕ ಜನರ ಸಮೂಹಗಳು ನಿನ್ನ ಪ್ರಶಂಸಾವಚನಗಳನ್ನೂ ಶತ್ರುಗಳ ನಿಂದಾವಚನಗಳನ್ನೂ ಹೇಳುತ್ತಾ ಇಲ್ಲಿ ಸಮಾಗತರಾಗಿದ್ದಾರೆ.

ಇದಮಭ್ಯಧಿಕಂ ರಾಜನ್ ಬ್ರಾಹ್ಮಣಾಃ ಗುರುವಶ್ಚ ತೇ ।
ಸಮೇತಾಃ ಕಥಯಂತೀಹ ಮುದಿತಾಃ ಸತ್ಯಸಂಧತಾಮ್ ॥೭೩॥

ರಾಜನೇ, ಬ್ರಾಹ್ಮಣರು ಮತ್ತು ಗುರುಗಳು ಎಲ್ಲರೂ ಸೇರಿ ಸಂತೋಷದಿಂದ ನೀನು ಸತ್ಯಸಂಧನೆಂದು ಹೇಳುತ್ತಿರುವುದು ಒಂದು ದೊಡ್ಡವಿಷಯ.

ಯನ್ನ ಮೋಹಾನ್ನ ಕಾರ್ಪಣ್ಯಾನ್ನ ಲೋಭಾನ್ನ ಭಯಾದಪಿ ।
ಅನೃತಂ ಕಿಂಚಿದುಕ್ತಂ ತೇ ನ ಕಾಮಾನ್ನಾರ್ಥಕಾರಣಾತ್ ॥೭೪॥

ನೀನು ಮೋಹದಿಂದಲಾಗಲೀ ಕಾರ್ಪಣ್ಯದಿಂದಲಾಗಲೀ ಲೋಭದಿಂದಲಾಗಲೀ ಭಯದಿಂದಲಾಗಲೀ ಕಾಮದಿಂದಲಾಗಲೀ ಅರ್ಥದ ಕಾರಣದಿಂದಲಾಗಲೀ ಸ್ವಲ್ಪಸುಳ್ಳನ್ನೂ ಮಾತನಾಡಿಲ್ಲ.

ಯದೇನಃ ಕುರುತೇ ಕಿಂಚಿದ್ ರಾಜಾ ಭೂಮಿಮವಾಪ್ನುವನ್ ।
ಸರ್ವಂ ನುದತಿ ತತ್ ಪಶ್ಚಾತ್ ಯಜ್ಞೈರ್ವಿಪುಲದಕ್ಷಿಣೈಃ ॥೭೫॥

ರಾಜನು ಭೂಮಿಯನ್ನು ಸಂಪಾದಿಸುವಾಗ ಯಾವ ಅಲ್ಪಪಾಪವನ್ನು ಮಾಡುತ್ತಾನೋ ಅವೆಲ್ಲವನ್ನೂ ಅನಂತರ ಬಹಳ ದಕ್ಷಿಣೆಯನ್ನು ಕೊಟ್ಟು ಯಜ್ಞಗಳನ್ನು ಮಾಡಿ ಪರಿಹರಿಸಿಕೊಳ್ಳುತ್ತಾನೆ.

ಬ್ರಾಹ್ಮಣೇಭ್ಯೋ ದದ್ ಗ್ರಾಮಾನ್ ಗಾಶ್ಚ ರಾಜನ್ ಸಹಸ್ರಶಃ।
ಮುಚ್ಯತೇ ವೀರ ಪಾಪೇಭ್ಯಸ್ತಮೋಭಿರಿವ ಚಂದ್ರಮಾಃ ॥೭೬॥

ಎಲೈ ರಾಜನೇ, ಬ್ರಾಹ್ಮಣರಿಗೆ ಗ್ರಾಮಗಳನ್ನು ಮತ್ತು ಸಹಸ್ರಸಂಖ್ಯೆಯಲ್ಲಿ ಗೋವುಗಳನ್ನು ಕೊಟ್ಟು ಚಂದ್ರನು ಕತ್ತಲೆಯಿಂದ ಬಿಡುಗಡೆಯಾದಂತೆ ರಾಜನು ಪಾಪದಿಂದ ಬಿಡುಗಡೆಯಾಗುತ್ತಾನೆ.

ಪೌರಜಾನಪದಾಃ ಸರ್ವೇ ಪ್ರಾಯಶಃ ಕುರುನಂದನ ।
ಸವೃದ್ಧಬಾಲಾಃ ಸಹಿತಾಃ ಶಂಸಂತಿ ತ್ವಾಂ ಯುಧಿಷ್ಠಿರ ॥೭೭॥

ಎಲೈ ಕುರುನಂದನನಾದ ಯುಧಿಷ್ಠಿರನೇ, ಪೌರಜಾನಪದರೂ ವೃದ್ಧರೂ ಬಾಲಕರೂ ಎಲ್ಲರೂ ಸೇರಿ ನಿನ್ನನ್ನು ಹೊಗಳುತ್ತಾರೆ.

ಶ್ವದೃತೌ ಕ್ಷೀರಮಾಸಕ್ತಂ ಬ್ರಹ್ಮ ವಾ ವೃಷಲೇ ಯಥಾ ।
ಸತ್ಯಂ ಸ್ತೇನೇ ಬಲಂ ನಾರ್ಯಾಂ ರಾಜ್ಯಂ ದುರ್ಯೋಧನೇ ತಥಾ ॥

ನಾಯಿಯ ಚರ್ಮದಲ್ಲಿ ಹಾಲು ಇದ್ದಂತೆ, ಶೂದ್ರನಲ್ಲಿ ವೇದವಿದ್ದಂತೆ, ಕಳ್ಳನಲ್ಲಿ ಸತ್ಯವಿದ್ದಂತೆ, ನಾರಿಯಲ್ಲಿ ಬಲವಿದ್ದಂತೆ, ದುರ್ಯೋಧನನಲ್ಲಿ ರಾಜ್ಯವಿದೆ.

ಇತಿ ನಿರ್ವಚನಂ ಲೋಕೇ ಚಿರಂ ಚರತಿ ಭಾರತ ।
ಅಪಿ ಚೈನಾಃ ಸ್ತ್ರಿಯೋ ಬಾಲಾಃ ಸ್ವಾಧ್ಯಾಯಮಿವ ಕುರ್ವತೇ ॥೭೯॥

ಎಲೈ ಭಾರತನೇ, ಈ ಮಾತುಗಳನ್ನು ಸ್ತ್ರೀಯರು ಮತ್ತು ಬಾಲರು ವೇದಮಂತ್ರವನ್ನು ಜಪಮಾಡಿದಂತೆ ಮತ್ತೆಮತ್ತೆ ಹೇಳುತ್ತಿದ್ದಾರೆ.

ಸ ಭವಾನ್ ರಥಮಾಸ್ಥಾಯ ಪ್ರತಿಜ್ಞಾಯ ತಥೇತಿ ನಃ ।
ತ್ವರಮಾಣೋऽಭಿನಿರ್ಯಾತು ಚಿರಮರ್ಥೋಪಘಾತಕಮ್ ॥೮೦॥

ಅಂತಹ ನೀನು ಹಾಗೆಯೇ ಮಾಡುತ್ತೇನೆ ಎಂದು ನಮಗೆ ಪ್ರತಿಜ್ಞೆಯನ್ನು ಮಾಡಿ ರಥವನ್ನು ಏರಿ ಬಹಳಕಾಲ ನಮ್ಮ ಅರ್ಥವನ್ನು ನಾಶಮಾಡಿದ ಶತ್ರುವಿನ ಮೇಲೆ ಶೀಘ್ರವಾಗಿ ಎರಗು.

ವಾಚಯಿತ್ವಾ ದ್ವಿಜಶ್ರೇಷ್ಠಾನದ್ಯೈವ ಗಜಸಾಹ್ವಯಮ್ ।
ಅಸ್ತ್ರವದ್ಭಿಃ ಪರಿವೃತೋ ಭ್ರಾತೃಭಿರ್ದೃಢಧನ್ವಿಭಿಃ ॥೮೧॥

ಬ್ರಾಹ್ಮಣಶ್ರೇಷ್ಠರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಅಸ್ತ್ರವನ್ನು ತಿಳಿದ ದೃಢವಾದ ಧನುಸ್ಸುಳ್ಳ ತಮ್ಮಂದಿರಿಂದ ಸುತ್ತುವರಿಯಲ್ಪಟ್ಟು ಈ ದಿನವೇ ಹಸ್ತಿನಪುರಕ್ಕೆ ಹೋಗು.

ಆಶೀವಿಷಸಮೈರ್ವೀರೈರ್ಮರುದ್ಭಿರಿವ ವೃತ್ರಹಾ ।
ಅಮಿತ್ರಾಂಸ್ತೇಜಸಾ ಮೃದ್ನನ್ನಸುರೇಭ್ಯ ಇವಾರಿಹಾ ।
ಶ್ರಿಯಮಾದತ್ಸ್ವ ಕೌಂತೇಯ ಧಾರ್ತರಾಷ್ಟ್ರೀಂ ಮಹಾಬಲ ॥೮೨॥

ಎಲೈ ಮಹಾಬಲನಾದ ಕೌಂತೇಯನೇ, ಇಂದ್ರನು ಮರುತ್ತುಗಳ ಜೊತೆಯಲ್ಲಿ ಹೋದಂತೆ ದೃಷ್ಟಿವಿಷಸರ್ಪಗಳಿಗೆ ಸಮರಾದ ವೀರರಾದ ತಮ್ಮಂದಿರ ಜೊತೆಯಲ್ಲಿ ಹೊರಟು ಚಕ್ರಧರನಾದ ನಾರಾಯಣನು ಅಸುರರನ್ನು ಮರ್ದಿಸಿದಂತೆ ನಿನ್ನ ತೇಜಸ್ಸಿನಿಂದ ಶತ್ರುಗಳನ್ನು ಮರ್ದಿಸಿ ವಿಷ್ಣುವು ಅಸುರರಿಂದ ಸಂಪತ್ತನ್ನು ತೆಗೆದುಕೊಂಡಂತೆ ದುರ್ಯೋಧನನ ಸಂಪತ್ತನ್ನು ವಶಮಾಡಿಕೋ.

ನ ಹಿ ಗಾಂಡೀವಮುಕ್ತಾನಾಂ ಶರಾಣಾಂ ಗೃಧ್ರವಾಸಸಾಮ್ ।
ಸ್ಪರ್ಶಮಾಶೀವಿಷಾಭಾನಾಂ ಮರ್ತ್ಯಃ ಕಶ್ಚನ ಸಂಸಹೇತ್ ॥೮೩॥

ಆಶೀವಿಷದಂತಿರುವ ಗೃಧ್ರಪಕ್ಷಗಳನ್ನು ಹೊಂದಿರುವ ಗಾಂಡಿವಮುಕ್ತವಾದ ಬಾಣಗಳನ್ನು ಯಾವ ಮನುಷ್ಯನೂ ಸಹಿಸಲಾರ.

ನ ಸ ವೀರೋ ನ ಮಾತಂಗೋ ನ ಸದಶ್ವೋಽಸ್ತಿ ಕಶ್ಚನ ।
ಯಃ ಸಹೇತ ಗದಾವೇಗಂ ಮಮ ಕ್ರುದ್ಧಸ್ಯ ಸಂಯುಗೇ ॥೮೪॥

ಯುದ್ಧದಲ್ಲಿ ಕೋಪಗೊಂಡ ನನ್ನ ಗದೆಯ ವೇಗವನ್ನು ಸಹಿಸುವ ವೀರನಾಗಲೀ ಗಜವಾಗಲೀ ಶ್ರೇಷ್ಠವಾದ ಅಶ್ವಗಳಾಗಲೀ ಯಾವುವೂ ಇಲ್ಲ.

ಸೃಂಜಯೈಃ ಸಹ ಕೌಂತೇಯೈರ್ವೃಷ್ಣೀನಾಮೃಷಭೇಣ ಚ ।
ಕಥಂಸ್ವಿದ್ ಯುಧಿ ಕೌಂತೇಯ ರಾಜ್ಯಂ ನ ಪ್ರಾಪ್ನುಯಾಮಹೇ ॥೮೫॥

ಕೌಂತೇಯನೇ, ಸೃಂಜಯದಿಂದ ಕೌಂತೇಯರಿಂದ ವೃಷ್ಣಿನಾಯಕನಾದ ಕೃಷ್ಣನಿಂದ ಕೂಡಿಕೊಂಡು ಹೋದರೆ ಯುದ್ಧದಲ್ಲಿ ನಾವು ಹೇಗೆ ರಾಜ್ಯವನ್ನು ಪಡೆಯದೆ ಇರುವೆವು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತತಾತ್ಪರ್ಯನಿರ್ಣಯ - ೨೨ನೇ ಅಧ್ಯಾಯ

ಏವಮುಕ್ತೋಽಬ್ರವೀದ್ ಭೀಮಂ ಧರ್ಮಪುತ್ರೋ ಯುಧಿಷ್ಠಿರಃ ।
ತ್ರಯೋದಶಾಬ್ದಸ್ಯಾಂತೇಽಹಂ ಕುರ್ಯಾಮೇವ ತ್ವದೀರಿತಂ ॥೧೧೬॥

ಭೀಮ ಹೀಗೆ ಹೇಳಿದಾಗ ಧರ್ಮಪುತ್ರ ಯುಧಿಷ್ಠಿರ ಭೀಮನಿಗೆ ಹೇಳಿದ. 'ನೀನು ಹೇಳಿದ್ದನ್ನು ನಾನು ಹದಿಮೂರು ವರ್ಷಗಳ ಕೊನೆಯಲ್ಲಿ ಮಾಡುವೆನು'.

ಸತ್ಯಮೇತನ್ನ ಸಂದೇಹಃ ಸತ್ಯೇನಾತ್ಮಾನಮಾಲಭೇ ।
ಲೋಕಾಪವಾದಭೀರುಂ ಮಾ ನಾತೋಽನ್ಯದ್ ವಕ್ತುಮರ್ಹಸಿ ॥೧೧೭॥

'ಇದು ಸತ್ಯ , ಸಂಶಯವಿಲ್ಲ. ನನ್ನಾಣೆ ಇದೆ. ಲೋಕಾಪವಾದಕ್ಕೆ ಅಂಜುತ್ತಿರುವ ನನ್ನ ಮುಂದೆ ಇನ್ನು ಬೇರೆ ಏನೂ ಹೇಳಬೇಡ'.

ತುದಸೇ ಚಾತಿವಾಚಾ ಮಾಂ ಯದ್ಯೇವಂ ಭೀಮ ಮಾಂ ವದೇಃ ।
ತದೈವ ಮೇಽತ್ಯಯಃ ಕಾರ್ಯೋ ಹಂತವ್ಯಾಶ್ಚೈವ ಶತ್ರವಃ ।
ನೈವಾದೃಶೈರಿದಾನೀಂ ತು ವಾಕ್ಯೈರ್ಬಾಧಿತುಮರ್ಹಸಿ ॥೧೧೮॥

ನಾನು ಹೀಗೆ ಆಣೆ ಇಟ್ಟು ಹೇಳಿದಾಗಲೂ ನೀನು ಹೀಗೆ ಹೇಳುತ್ತಿದ್ದರೆ ಕ್ರೂರವಾದ ಮಾತಿನಿಂದ ನನಗೆ ನೋವು ಉಂಟು ಮಾಡುವಿ. ನೀನು ಅಂದೇ ನನ್ನನ್ನು ತಿರಸ್ಕರಿಸಿ ಶತ್ರುಗಳನ್ನು ಕೊಲ್ಲಬೇಕಾಗಿತ್ತು. ಈಗ ನೀನು ಇಂಥ ಮಾತುಗಳಿಂದ ನನ್ನನ್ನು ನೋಯಿಸುವುದು ಯುಕ್ತವಲ್ಲ.

ಭೀಷ್ಮದ್ರೋಣಾದಯೋಽಸಜ್ಜಾನಿವಾರ್ಯಾಶ್ಚ ಕಥಂ ಯುಧಿ ।
ಪೂಜ್ಯಾಸ್ತೇ ಬಾಹುಯುದ್ಧೇನ ನ ನಿವಾರ್ಯಾಃ ಕಥಂಚನ ॥೧೧೯॥

ಭೀಷ್ಮದ್ರೋಣ ಮುಂತಾದವರು ಅಸಜ್ಜರು. ಅವರನ್ನು ಯುದ್ಧದಲ್ಲಿ ಇದಿರಿಸುವುದು ಹೇಗೆ ಸಾಧ್ಯ ? ಅವರು ಪೂಜ್ಯರು. ಬಾಹುಯುದ್ಧದಿಂದ ಯಾವ ರೀತಿಯಿಂದಲೂ ಅವರನ್ನು ಇದಿರಿಸಲಾಗದು.

ಅಸ್ತ್ರೈ ಚಾನನ್ನಪಿ ಹಿ ಪ್ರಯೋಜಯಸಿ ನ ಕ್ವಚಿತ್ ।
ತಸ್ಮಾತ್ ತದೈವ ಗಂತವ್ಯಂ ವಿಜ್ಞಾತಾಸ್ತೇ ಧನಂಜಯೇ ॥೧೨೦॥

ನೀನು ಅಸ್ತ್ರಗಳನ್ನು ತಿಳಿದವನಾದರೂ ಅವುಗಳನ್ನು ಎಲ್ಲಿಯೂ ಪ್ರಯೋಗಿಸುವುದಿಲ್ಲ. ಅದರಿಂದ ಅರ್ಜುನ ಅಸ್ತ್ರಗಳನ್ನು ತಿಳಿದಾಗಲೆ, ಹದಿಮೂರು ವರ್ಷ ದಾಟಿದಾಗಲೆ ನಾವು ಯುದ್ಧಕ್ಕೆ ಹೋಗಬೇಕು.

ಇತ್ಯುಕ್ತೋ ಭೀಮಸೇನಸ್ತು ಸ್ನೇಹಭಂಗಯಾತ್ ತತಃ ।
ನೋವಾಚ ಕಿಂಚಿದ್ವಚನಂ ಸ್ವಾಭಿಪ್ರೇತಮವಾಪ್ಯ ಚ ॥೧೨೧॥

ಹೀಗೆ ಧರ್ಮರಾಜ ಹೇಳಿದಾಗ ಭೀಮ ತಾನು ಇನ್ನೂ ಹೆಚ್ಚು ಮಾತನಾಡಿದರೆ ಸೋದರ ಸ್ನೇಹಕ್ಕೆ ಕುಂದು ಬಂದೀತೆಂಬ ಭಯದಿಂದ ಮತ್ತು ತನ್ನ ಉದ್ದೇಶ ಈಗಾಗಲೆ ನೆರವೇರಿದೆ ಎನ್ನುವ ತೃಪ್ತಿಯಿಂದ ಏನೂ ಹೇಳಲಿಲ್ಲ.

ಅಭಿಪ್ರಾಯೋ ಹಿ ಭೀಮಸ್ಯ ನಿಶ್ಚಯೇನ ತ್ರಯೋದಶೇ ।
ಯುಧಿಷ್ಠಿರಸ್ಯ ರಾಜ್ಯಾರ್ಥಂ ಗಮನಾರ್ಥೇ ಪ್ರತಿಶ್ರವಃ ॥೧೨೨॥

ಧರ್ಮರಾಜ ಹದಿಮೂರು ವರ್ಷದ ನಂತರವಾದರೂ ರಾಜ್ಯಕ್ಕಾಗಿ ಯುದ್ಧಮಾಡುವ ಬಗ್ಗೆ ಪ್ರತಿಜ್ಞೆ ಮಾಡಬೇಕೆಂಬುದೇ ಭೀಮನ ಉದ್ದೇಶವಾಗಿತ್ತು.

ಅನ್ಯಥಾತಿಮೃದುತ್ವಾತ್ಸ ನ ಗಚ್ಛೇದ್ಭಿನ್ನಧೀಃ ಹರೈಃ ।
ಕೃತಕೃತ್ಯೇ ತದಾ ಭೀಮೇ ಸ್ಥಿತೇ ಧರ್ಮಾತ್ಮಜೋ ಹಿ ಸಃ ॥೧೨೩॥

ಭೀಷ್ಮದ್ರೋಣಾದಿವಿಜಯಃ ಕಥಂ ಸ್ಯಾದಿತಿ ಚಿಂತಯನ್ ।
ನಿವಾರಣಂ ಗುರೂಣಾಂ ಹಿ ಭೀಮ ಇಚ್ಛತಿ ನ ಕ್ವಚಿತ್ ॥೧೨೪॥

ತಸ್ಮಾತ್ತೇ ಹ್ಯರ್ಜುನೇನೈವ ನಿವಾರ್ಯಾ ಇತ್ಯಚಿಂತಯತ್ ।
ಆಪದ್ಯೇವ ಹಿ ಭೀಮಸ್ತಾನ್ನಿವಾರಯತಿ ನಾನ್ಯಥಾ ॥೧೨೫॥

ಇಲ್ಲದಿದ್ದರೆ ಮೃದುಸ್ವಭಾವದಿಂದಾಗಿ ಧರ್ಮರಾಜ ಶತ್ರುಗಳ ಮಾತುಗಳಿಂದ ಬುದ್ಧಿಪರಿವರ್ತನ ಹೊಂದಿ ಯುದ್ಧಪ್ರವೃತ್ತಿಯನ್ನು ಕೈಬಿಡಬಹುದು ಎಂದು ಭೀಮನಿಗೆ ಚಿಂತೆಯಾಗಿತ್ತು. ಈ ರೀತಿ ಭೀಮ ಕೃತಕೃತ್ಯನಾಗಿ ಕುಳಿತಾಗ ಧರ್ಮರಾಜ ಭೀಷ್ಮ ದ್ರೋಣಾದಿಗಳನ್ನು ಗೆಲ್ಲುವುದು ಹೇಗೆ ಎಂದು ಚಿಂತಿಸಿದ. ಗುರುಹಿರಿಯರನ್ನು ಇದಿರಿಸುವುದನ್ನು ಭೀಮ ಎಲ್ಲೂ ಇಷ್ಟಪಡುವುದಿಲ್ಲ. ಅದರಿಂದ ಅರ್ಜುನನೇ

ಇದಿರಿಸಬೇಕಾಗುತ್ತದೆ ಎಂದು ಚಿಂತಿಸಿದ. ಆಪತ್ಕಾಲದಲ್ಲಿ ಮಾತ್ರ ಭೀಮ ಗುರುಹಿರಿಯರನ್ನು ಇದಿರಿಸುತ್ತಾನೆ ಹೊರತು ಬೇರೆ ಸಮಯದಲ್ಲಿ ಅಲ್ಲ.

★ ★ ★ ★

## ಮೂವತ್ತೊಂದನೆಯ ಅಧ್ಯಾಯ

(ಯುಧಿಷ್ಠಿರನ ಪ್ರತ್ಯುತ್ತರ. ಹದಿಮೂರುವರ್ಷದ ನಂತರ ಪರಾಕ್ರಮವನ್ನು ತೋರಿಸುವ ಪ್ರತಿಜ್ಞೆ.)

### ಯುಧಿಷ್ಠಿರಃ

ಅಸಂಶಯಂ ಭಾರತ ಸತ್ಯಮೇತದ್
ಯನ್ಮಾಂ ತುದನ್ ವಾಕ್ಯಶಲ್ಯೈಃ ಕ್ಷಿಣೋಷಿ ।
ನ ತ್ವಾ ವಿಗರ್ಹೇ ಪ್ರತಿಕೂಲಮೇತ-
ನ್ಮಮಾನಯಾದ್ಧಿ ವ್ಯಸನಂ ವ ಆಗಾತ್ ॥೧॥

ಅಹಂ ಹ್ಯಕ್ಷಾನಾನ್ವಪದ್ಯೇ ಜಿಹೀರ್ಷನ್
ರಾಜ್ಯಂ ಸರಾಷ್ಟ್ರಂ ಧೃತರಾಷ್ಟ್ರಸ್ಯ ಪುತ್ರಾನ್ ।
ತನ್ಮಾಂ ಶಠಃ ಕಿತವಃ ಪ್ರತ್ಯದೇವೀತ್
ಸುಯೋಧನಾರ್ಥಂ ಸುಬಲಸ್ಯ ಪುತ್ರಃ ॥೨॥

ಎಲೈ ಭಾರತನೇ ನೀನು ವಾಗ್ಬಾಣಗಳಿಂದ ನನ್ನನ್ನು ಚುಚ್ಚಿ ಹಿಂಸಿಸುತ್ತಿರುವುದು ಯುಕ್ತವಾಗಿದೆ. ನಾನು ನಿನ್ನನ್ನು ನಿಂದಿಸುವುದಿಲ್ಲ. ನಿಮಗೆ ದುಃಖವು ನನ್ನ ಅಪರಾಧದಿಂದ ಉಂಟಾಯಿತಷ್ಟೆ? ನಾನು ಧೃತರಾಷ್ಟ್ರಪುತ್ರನಿಂದ ರಾಜ್ಯವನ್ನೂ ರಾಜಧಾನಿಯನ್ನೂ ಅಪಹರಿಸಲು ದಾಳಗಳನ್ನು ಹಿಡಿದೆ. ಆದರೆ ನನಗೆ ಎದುರಾಗಿ ಮೋಸಗಾರನೂ ದ್ವೇಷಿಯೂ ಆದ ಸುಬಲ ಪುತ್ರನಾದ ಶಕುನಿಯು ದುರ್ಯೋಧನನ ಸಲುವಾಗಿ ಆಡಿದನು.

ಮಹಾಮಾಯಃ ಶಕುನಿಃ ಪಾರ್ವತೀಯಃ
ಸದಾ ಸ ರಾಜಾ ಪ್ರವಪನ್ನಕ್ಷಪೂಗಾನ್ ।
ಅಮಾಯಿನಂ ಮಾಯಯಾ ಪ್ರತ್ಯದೇವೀತ್
ತತೋಽಪಶ್ಯಂ ವೃಜಿನಂ ಭೀಮಸೇನ ॥೩॥

ಕ್ಷರಂಸ್ತು ದೃಷ್ಟ್ವಾ ಶಕುನೇರ್ಯಥಾವತ್
ಕಾಮಾನುಲೋಮಾನಯುಜೋ ಯುಜಶ್ಚ ।
ಶಕ್ಯೋ ನಿಯಂತುಂ ನ ಭವಿಷ್ಯದಾತ್ಮಾ
ಮನ್ಯುಸ್ತು ಧೈರ್ಯಂ ಪುರುಷಸ್ಯ ಹಂತಿ ॥೪॥

ಆ ಪರ್ವತರಾಜನಾದ ಶಕುನಿಯು ಬಹಳ ಮೋಸಗಾರ. ಅವನು ದಾಳಗಳನ್ನು ಉರುಳಿಸಿ ಮೋಸವನ್ನು ಮಾಡಿ ನಿಷ್ಕಪಟನಾದ ನನ್ನನ್ನು ಸೋಲಿಸಿದನು. ಭೀಮಸೇನನೇ ಆಗ ಈ ಅನರ್ಥವು ಉಂಟಾಯಿತು. ದಾಳಗಳು ಶಕುನಿಯ ಇಚ್ಛೆಗೆ ಅನುಗುಣವಾಗಿ ಸಮ ಮತ್ತು ಬೆಸ ಗರಗಳನ್ನು ಕೊಡುತ್ತಿರುವುದನ್ನು ನೋಡಿ ನನ್ನ ಸಂತೋಷವು ನಾಶವಾಯಿತು. ಆಗ ನನ್ನನ್ನು ನಾನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೋಪವು ಪುರುಷನ ಧೈರ್ಯವನ್ನು ನಾಶಪಡಿಸುತ್ತದೆ.

ಯಂತುಂ ನಾತ್ಮಾ ಶಕ್ಯತೇ ಪೌರುಷೇಣ
ಮಾನೇನ ವೀರ್ಯೇಣ ಚ ತಾತ ನದ್ಧಃ ।
ನ ತೇ ವಾಚಂ ಭೀಮಸೇನಾಭ್ಯಸೂಯೇ
ಮನ್ಯೇ ತಥಾ ತದ್ ಭವಿತವ್ಯಮಾಸೀತ್ ॥೫॥

ಪ್ರೀತಿಪಾತ್ರನೇ, ಕೋಪಯುಕ್ತವಾದ ಮನಸ್ಸನ್ನು ಪ್ರಯತ್ನದಿಂದಲಾಗಲೀ ಗರ್ವದಿಂದಲಾಗಲೀ ಪರಾಕ್ರಮದಿಂದಲಾಗಲೀ ನಿಯಂತ್ರಿಸಲು ಸಾಧ್ಯವಿಲ್ಲ. ಭೀಮಸೇನನೇ, ನಿನ್ನ ಮಾತುಗಳನ್ನು ನಾನು ಆಕ್ಷೇಪಿಸುವುದಿಲ್ಲ. ಇದು ಹೀಗೆ ಆಗಬೇಕಾದುದೆಂದು ವಿಧಿಯ ಸಂಕಲ್ಪವೆಂದು ಭಾವಿಸುತ್ತೇನೆ.

ಸ ನೋ ರಾಜಾ ಧೃತರಾಷ್ಟ್ರಸ್ಯ ಪುತ್ರೋ
ನ್ಯಪಾತಯದ್ ವ್ಯಸನೇ ರಾಜ್ಯಮಿಚ್ಛನ್ ।
ದಾಸ್ಯಂ ಚ ನೋಽಗಮಯದ್ ಭೀಮಸೇನ
ಯತ್ರಾಭವಚ್ಚರಣಂ ದ್ರೌಪದೀ ನಃ ॥೬॥

ಧೃತರಾಷ್ಟ್ರಪುತ್ರನಾದ ಆ ದುರ್ಯೋಧನ ರಾಜನು ನಮ್ಮ ರಾಜ್ಯವನ್ನು ಬಯಸಿ ನಮ್ಮನ್ನು ದುಃಖದಲ್ಲಿ ಕೆಡವಿದನು. ಭೀಮಸೇನನೇ, ನಮಗೆ ದಾಸ್ಯವನ್ನು

ಉಂಟುಮಾಡಿದನು. ಆಗ ನಮಗೆಲ್ಲಾ ದ್ರೌಪದಿಯೇ ದುಃಖದಿಂದ ದಾಟಿಸುವವಳಾದಳು.

ತ್ವಂ ಚಾಪಿ ತದ್ ವೇತ್ಥ ಧನಂಜಯಶ್ಚ
ಪುನರ್ದ್ಯೂತಾಯಾಗತಾನಾಂ ಸಭಾಂ ನಃ ।
ಯನ್ಮಾಽಬ್ರವೀದ್ ಧೃತರಾಷ್ಟ್ರಸ್ಯ ಪುತ್ರ
ಏವಂ ಗ್ಲಹಾರ್ಥಂ ಭಾರತಾನಾಂ ಸಮಕ್ಷಮ್ ॥೭॥

ನಾವು ಪುನಃ ದ್ಯೂತಕ್ಕೆ ಸಭೆಗೆ ಆಗಮಿಸಿದಾಗ ಧೃತರಾಷ್ಟ್ರಪುತ್ರನು ಎಲ್ಲ ಭರತವಂಶದವರ ಎದುರಿನಲ್ಲಿ ಪಣಕ್ಕಾಗಿ ಏನನ್ನು ಹೇಳಿದನೆಂದು ನೀನೂ ಮತ್ತು ಅರ್ಜುನನೂ ತಿಳಿದಿದ್ದೀರಿ.

ವನೇ ಸಮಾ ದ್ವಾದಶ ರಾಜಪುತ್ರ
ಯಥಾಕಾಮಂ ವಿದಿತಮಜಾತಶತ್ರೋ ।
ಅಥಾಪರಂ ಚಾವಿದಿತಶ್ಚರೇಥಾಃ
ಸಹೈತಯಾ ಭ್ರಾತೃಭಿಶ್ಚನ್ನರೂಪಃ ॥೮॥

ಎಲೈ ರಾಜಪುತ್ರನಾದ ಅಜಾತಶತ್ರುವೇ, ನಿಮ್ಮ ಮನಸ್ಸಿಗೆ ಬಂದಂತೆ ಎಲ್ಲರಿಗೂ ಕಾಣುವಂತೆ ಹನ್ನೆರಡು ವರ್ಷ ವನವಾಸವನ್ನು ಮಾಡಬೇಕು. ಅನಂತರ ಯಾರಿಗೂ ತಿಳಿಯದಂತೆ ದ್ರೌಪದಿ ಮತ್ತು ತಮ್ಮಂದಿರ ಜೊತೆಯಲ್ಲಿ ಅಜ್ಞಾತವಾಸವನ್ನು ಮಾಡಬೇಕು.

ತಂ ಚೈವ ತ್ವಾಂ ತಾತ ತಥಾ ಚರಂತಮ್
ಆಬುಧ್ಯಂತೇ ಭಾರತಾನಾಂ ಚರಾ ವೈ ।
ಅನ್ಯಾಂಶ್ಚರೇಥಾಸ್ತಾವತೋಽಬ್ದಾಂಸ್ತತಸ್ತ್ವಂ
ನಿಶ್ಚಿತ್ಯ ತತ್ ಪ್ರತಿಜಾನೀಹಿ ಪಾರ್ಥ ॥೯॥

ಪ್ರೀತಿಪಾತ್ರನೇ, ನೀನು ಹಾಗೆ ಅಜ್ಞಾತವಾಸವನ್ನು ಮಾಡುತ್ತಿರುವಾಗ ಭಾರತರಾದ ನಮ್ಮ ಗೂಢಚಾರರು ಯಾರಾದರೂ ನಿನ್ನನ್ನು ತಿಳಿದರೆ ಮತ್ತೆ ಹನ್ನೆರಡುವರ್ಷ

ವನವಾಸವನ್ನೂ ಒಂದು ವರ್ಷಅಜ್ಞಾತವಾಸವನ್ನೂ ಮಾಡಬೇಕು. ಪಾರ್ಥನೇ ಇದನ್ನು ಮೊದಲು ನಿಶ್ಚಯಿಸಿ ಪ್ರತಿಜ್ಞೆಯನ್ನು ಮಾಡು.

ಚರೈಶ್ಚ ನೋऽನಾವಿದಿತಃ ಕಾಲಮೇತಂ
ಯುಕ್ತೋ ರಾಜನ್ ಮೋಹಯಿತ್ವಾ ಮದೀಯಾನ್ ।
ಬ್ರವೀಮಿ ಸತ್ಯಂ ಕುರುಸಂಸದೀಹ
ತವೈವ ತಾ ಭಾರತ ಪಂಚ ನದ್ಯಃ ॥೧೦॥

ಎಲೈ ರಾಜನೇ ನನ್ನ ಸೇವಕರನ್ನು ಮೋಹಿಸಿ ಒಂದು ವರ್ಷಕಾಲ ನೀನು ಅವರಿಗೆ ತಿಳಿಯದಂತೆ ಅಜ್ಞಾತವಾಸವನ್ನು ಮಾಡಿದರೆ ಪರಶುರಾಮನು ಮಾಡಿದ ಸಮಂತಪಂಚಕ ಇರುವ ದೇಶವೆಲ್ಲವೂ ನಿನ್ನದೇ ಆಗುತ್ತದೆ. ಎಲೈ ಭಾರತನೇ, ಕೌರವರ ಸಭೆಯಲ್ಲಿ ನಾನು ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ವಯಂ ಚೈವ ಕೌರವಾಃ ಸರ್ವ ಏವ
ತ್ವಯಾ ಜಿತಾಃ ಕಾಲಮಪಾಸ್ಯ ಭೋಗಾನ್ ।
ಚರೇಮ ಇತ್ಯಾಹ ಪುರಾ ಸ ರಾಜಾ
ಮಧ್ಯೇ ಕುರೂಣಾಂ ಸ ಮಯೋಕ್ತಸ್ತಥೇತಿ ॥೧೧॥

ಅಥವಾ ನಿನ್ನಿಂದಲೇ ನಾವು ಸೋತರೆ ಕೌರವರಾದ ನಾವೆಲ್ಲರೂ ನಮ್ಮ ಭೋಗಗಳನ್ನು ತೊರೆದು ಅಷ್ಟುಕಾಲ ವನವಾಸವನ್ನೂ ಮತ್ತು ಅಜ್ಞಾತವಾಸವನ್ನೂ ಮಾಡುವೆವು ಎಂದು ಆ ರಾಜನು ಕುರುಗಳ ಮಧ್ಯದಲ್ಲಿ ಹೇಳಿದನು. ನಾನು ಹಾಗೆಯೇ ಆಗಲಿ ಎಂದು ಹೇಳಿದೆ.

ತತೋ ದ್ಯೂತಮಭವನ್ನೋ ಜಘನ್ಯಂ
ಯಸ್ಮಿನ್ ಜಿತಾಃ ಪ್ರವ್ರಜಿತಾಃ ಸ್ಮ ಸರ್ವೇ ।
ಇತ್ಥಂ ತು ದೇಶಾನನುಸಂಚರಾಮೋ
ವನಾನಿ ದುರ್ಗಾಣಿ ಚ ಘೋರರೂಪಾಃ ॥೧೨॥

ಅನಂತರ ಆ ನೀಚದ್ಯೂತವು ನಮಗೆ ಸಂಭವಿಸಿತು. ಅದರಲ್ಲಿ ಸೋತು ನಾವೆಲ್ಲರೂ ರಾಜ್ಯವನ್ನು ಬಿಟ್ಟು ಬಂದಿದ್ದೇವೆ. ಹೀಗೆ ನಾವು ಘೋರರೂಪರಾಗಿ ಬೇರೆ ದೇಶಗಳನ್ನೂ ದುರ್ಗಮವಾದ ಕಾಡುಗಳನ್ನೂ ಸಂಚರಿಸುತ್ತಿದ್ದೇವೆ.

ಸುಯೋಧನಶ್ಚಾಪಿ ನ ಶಾಂತಿಮೃಚ್ಛನ್
ಭೂಯಶ್ಚ ಮನ್ಯೋರ್ವಶಮನ್ವಗಚ್ಛತ್ ।
ಉದ್ಯೋಜಯಾಮಾಸ ಕುರೂಂಶ್ಚ ಸರ್ವಾನ್
ಯೇ ಚಾಸ್ಯ ಕೇಚಿದ್ ವಶಮನ್ವಗಚ್ಛನ್ ॥೧೩॥

ಸುಯೋಧನನು ಶಾಂತಿಯನ್ನು ಪಡೆಯದೆ ಪುನಃ ಕೋಪವಶನಾಗಿ ತನ್ನ ವಶದಲ್ಲಿದ್ದ ಎಲ್ಲಾ ಕುರುಗಳನ್ನೂ ನಮ್ಮ ವಿರುದ್ಧವಾಗಿ ಎತ್ತಿಕಟ್ಟಿದನು.

ತಂ ಸಂಧಿಮಾಸ್ಥಾಯ ಸತಾಂ ಸಕಾಶೇ
ಕೋ ನಾಮ ಜಹ್ಯಾದಿಹ ರಾಜ್ಯಹೇತೋಃ ।
ಆರ್ಯಸ್ಯ ಮನ್ಯೇ ಮರಣಾದ್ ಗರೀಯೋ
ಯಃ ಸಂಧಿಮುತ್ಥಮ್ಯ ಮಹೀಂ ಪ್ರಶಾಸೇ ॥೧೪॥

ಸಜ್ಜನರ ಎದುರಿನಲ್ಲಿ ಅಂತಹ ಪ್ರತಿಜ್ಞೆಯನ್ನು ಮಾಡಿ ಈಗ ರಾಜ್ಯದ ಸಲುವಾಗಿ ಯಾವ ಸತ್ಪುರುಷನು ಅದನ್ನು ಬಿಡಲು ಸಾಧ್ಯ ? ನಾನು ಸಂಧಿಯನ್ನು ಮುರಿದು ಭೂಮಿಯನ್ನು ಆಳಿದರೆ ಅದು ಒಳ್ಳೆಯ ನಡತೆಯುಳ್ಳ ನನಗ ಮರಣಕ್ಕಿಂತ ಹೆಚ್ಚಿನ ದುಃಖವೆಂದು ಭಾವಿಸುತ್ತೇನೆ.

ತದೈವ ಚೇದ್ ವೀರ ತಥಾಽಕರಿಷ್ಯೇ
ಯದಾ ದ್ಯೂತೇ ಪರಿಘಂ ಪರ್ಯಮೃಕ್ಷಃ ।
ಬಾಹೂ ದಿಧಕ್ಷನ್ ವಾರಿತಃ ಫಲ್ಗುನೇನ
ಕೋ ದುಷ್ಕೃತಂ ಭೀಮ ತದಾಽಕರಿಷ್ಯತ್ ॥೧೫॥

ಎಲೈ ವೀರನೇ, ಯಾವ ದ್ಯೂತಸಮಯದಲ್ಲಿ ನಿನ್ನ ಬಾಹುಗಳನ್ನು ಸುಡುತ್ತೇನೆ ಎಂದು ಹೇಳಿ ಪರಿಘವನ್ನು ನೀನು ಹಿಡಿದಾಗ ಅರ್ಜುನನಿಂದ ತಡೆಯಲ್ಪಟ್ಟೆಯೋ ಆಗಲೇ ಹಾಗೆಯೇ ಮಾಡಿದ್ದರೆ ಎಲೈ ಭೀಮನೇ ಯಾರು ಅಕ್ಷದ್ಯೂತವನ್ನು ಆಡುತ್ತಿದ್ದರು?

ಪ್ರಾಗೇವ ಚೈವಂ ಸಮಯಕ್ರಿಯಾಯಾಃ
ಕಿಂ ನಾಬ್ರವೀಃ ಪೌರುಷಂ ಮಾ ವಿಜಾನನ್ ।

ಪ್ರಾಪ್ತಂ ತು ಕಾಲಂ ತ್ವತಿಪಾತ್ಯ ಪಶ್ಚಾತ್
ಕಿಂ ವಾ ತ್ವಿದಾನೀಮತಿವೇಲಮಾತ್ಥ ॥೧೬॥

ನನ್ನ ಸ್ವಭಾವವನ್ನು ತಿಳಿದ ನೀನು ಅಕ್ಷದ್ಯೂತಕ್ಕೆ ಸಮಯಬಂಧವನ್ನು (ಶರತ್ತುಗಳನ್ನು) ಮಾಡಿದಾಗಲೇ ಏಕೆ ಈ ಪರಾಕ್ರಮದ ಮಾತುಗಳನ್ನು ಆಡಲಿಲ್ಲ? ಮಾತನಾಡಬೇಕಾಗಿದ್ದ ಯೋಗ್ಯವಾದ ಆ ಕಾಲವನ್ನು ಮೀರಿ ಈಗ ನೀನು ಏಕೆ ಬಹಳವಾಗಿ ಮಾತನಾಡುತ್ತಿದ್ದೀಯೆ?

ಭೂಯೋಽಪಿ ದುಃಖಂ ಮಮ ಭೀಮಸೇನ
ದೂಯೇ ವಿಷಸ್ಯೇವ ರಸಂ ವಿದಿತ್ವಾ ।
ಯದ್ ಯಾಜ್ಞಸೇನೀಂ ಪರಿಕೃಷ್ಯಮಾಣಾಂ
ಸಂದೃಶ್ಯ ತಾಂ ಕ್ಷಾಂತಮಿತಿ ಸ್ಮ ಭೀಮ ॥೧೭॥

ಭೀಮಸೇನನೇ, ಯಾಜ್ಞಸೇನಿಯಾದ ದ್ರೌಪದಿಯು ಸಭೆಯಲ್ಲಿ ಎಳೆದಾಡಲ್ಪಟ್ಟದ್ದನ್ನು ನೋಡಿ ಅದು ನಮ್ಮಿಂದ ಸಹಿಸಲ್ಪಟ್ಟಿತು ಎಂಬುದು ನನ್ನ ಹೆಚ್ಚಿನದುಃಖಕ್ಕೆ ಕಾರಣವಾಗಿದೆ. ಭೀಮನೇ ವಿಷದ ರಸವನ್ನು ಕುಡಿದಂತೆ ದುಃಖಪಡುತ್ತಿದ್ದೇನೆ.

ನ ತ್ವದ್ಯ ಶಕ್ಯಂ ಭರತಪ್ರವೀರ
ಕೃತ್ವಾ ಯದುಕ್ತಂ ಕುರುವೀರಮಧ್ಯೇ ।
ಕಾಲಂ ಪ್ರತೀಕ್ಷಸ್ವ ಸುಖೋದಯಸ್ಯ
ಪಂಕ್ತಿಂ ಫಲಾನಾಮಿವ ಬೀಜವಾಪಃ ॥೧೮॥

ತಥಾಪಿ ಪೂರ್ವಂ ನಿಕೃತೋ ಹಿ ಕುದ್ಯೈಃ
ವೈರಂ ಸಪುಷ್ಪಂ ಸಫಲಂ ವಿದಿತ್ವಾ ।
ಮಹಾಗುಣಂ ಹರತಿ ಹಿ ಪೌರುಷೇಣ
ತದಾ ವೀರೋ ಜೀವತಿ ಜೀವಲೋಕೇ ॥೧೯॥

ಎಲೈ ಭರತಪ್ರವೀರನೇ, ಕುರುವೀರರ ಮಧ್ಯದಲ್ಲಿ ಹಾಗೆ ಪ್ರತಿಜ್ಞೆಯನ್ನು ಮಾಡಿ ಈಗ ಅದನ್ನು ಪರಿತ್ಯಜಿಸಲು ಸಾಧ್ಯವಿಲ್ಲ. ಕರ್ಷಕನು ಬೀಜವನ್ನು ಬಿತ್ತಿ ಫಲದ ಗೊಂಚಲುಗಳಿಗೆ ಕಾದಂತೆ ಸುಖೋದಯದ ಕಾಲವನ್ನು ನಿರೀಕ್ಷಿಸುವೆನು. ಆದರೂ

ನೀಚರಿಂದ ಹಿಂದೆ ಮೋಸಗೊಳಿಸಲ್ಪಟ್ಟ ಯಾವ ವೀರನು ವಾಗ್‌ವಿವಾದರೂಪವಾದ ಪುಷ್ಪಗಳನ್ನು ಹೊಂದಿದ ಪ್ರಾಣವಿಯೋಜನ ರೂಪವಾದ ಮರಣಫಲವನ್ನು ಹೊಂದಿದ ವೈರವನ್ನು ತಿಳಿದು ಪೌರುಷವಿದ್ದರೂ ಕ್ಷಮಾರೂಪವಾದ ಮಹಾಗುಣವನ್ನು ಹೊಂದುತ್ತಾನೆಯೋ ಆ ವೀರನು ಮನುಷ್ಯ ಲೋಕದಲ್ಲಿ ಬದುಕುತ್ತಾನೆ.

ಶ್ರಿಯಂ ಸ ಲೋಕೇ ಲಭತೇ ಸಮಗ್ರಾಂ
ಮನ್ಯೇ ಚಾಸ್ಮೈ ಶತ್ರವಃ ಸನ್ನಮಂತೇ ।
ಮಿತ್ರಾಣಿ ಚೈನಮತಿರಾಗಾದ್ ಭಜಂತೇ
ದೇವಾ ಇವೇಂದ್ರಮುಪಜೀವಂತಿ ಚೈನಮ್ ॥೨೦॥

ಅವನು ಸಮಗ್ರವಾದ ಸಂಪತ್ತನ್ನು ಪಡೆಯುತ್ತಾನೆ. ಶತ್ರುಗಳು ಅವನಿಗೆ ತಲೆಬಾಗುತ್ತಾರೆ. ಮಿತ್ರರು ಬಹಳ ಸ್ನೇಹದಿಂದ ಭಜಿಸಿ ದೇವತೆಗಳು ಇಂದ್ರನನ್ನು ಉಪಜೀವಿಸುವಂತೆ ಉಪಜೀವಿಸುತ್ತಾರೆ.

ಮಮ ಪ್ರತಿಜ್ಞಾಂ ಚ ನಿಬೋಧ ಸತ್ಯಾಂ
ಮುನೇರ್ಧರ್ಮಾದಮೃತಾಜ್ಜೀವಿತಾಚ್ಚ ।
ರಾಜ್ಯಂ ಚ ಪುತ್ರಾಶ್ಚ ಯಶೋ ಧನಂ ಚ
ಸರ್ವಂ ನ ಸತ್ಯಸ್ಯ ಕಲಾಮುಪೈತಿ ॥೨೧॥

ನನ್ನ ಪ್ರತಿಜ್ಞೆಯು ಋಷಿಗಳ ಪ್ರತಿಜ್ಞೆಗಿಂತಲೂ ಮೋಕ್ಷಕ್ಕಿಂತಲೂ ಜೀವನಕ್ಕಿಂತಲೂ ಹೆಚ್ಚು ಸತ್ಯವೆಂದು ತಿಳಿ (ಮುನಿಧರ್ಮವಾದುದುರಿಂದ ಮೋಕ್ಷಪ್ರದವಾದುದರಿಂದ ಮತ್ತು ಜೀವನ ಸಾಫಲ್ಯಪ್ರದವಾದುದರಿಂದ ನನ್ನು ಪ್ರತಿಜ್ಞೆಯು ಸತ್ಯವೆಂದು ತಿಳಿ.) ರಾಜ್ಯವಾಗಲೀ ಪುತ್ರರಾಗಲೀ ಕೀರ್ತಿಯಾಗಲೀ ಧನವಾಗಲೀ ಎಲ್ಲವೂ ಸತ್ಯದ ಒಂದು ಅಂಶಕ್ಕೂ ಸಮವಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕತ್ರಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಏಕಪಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★

# ಮೂವತ್ತೆರಡನೆಯ ಅಧ್ಯಾಯ

(ಭೀಮನಿಂದ ಯುಧಿಷ್ಠಿರನನ್ನು ಕುರಿತು ಯುಕ್ತಿಪೂರ್ವಕವಾಗಿ ವನವಾಸಮುಗಿಯುವುದಕ್ಕಿಂತ ಮೊದಲೇ ದುರ್ಯೋಧನನನ್ನು ನಿಗ್ರಹಿಸಲು ಒತ್ತಾಯ)

ಭೀಮಸೇನಃ

ಸಂಧಿಂ ಕೃತ್ವೈವ ಕಾಲೇನ ಹ್ಯಂತಕೇನ ಪತತ್ರಿಣಾ ।
ಅನಂತೇನಾಪ್ರಮೇಯೇಣ ಸ್ರೋತಸಾ ಸರ್ವಹಾರಿಣಾ ॥೧॥

ಪ್ರತ್ಯಕ್ಷಂ ಮನ್ಯಸೇ ಕಾಲಂ ಮರ್ತ್ಯಃ ಸನ್ ಕಾಲಬಂಧನಃ ।
ಫೇನಧರ್ಮಾ ಮಹಾರಾಜ ಫಲಧರ್ಮಾ ತಥೈವ ಚ ॥೨॥

ಎಲೈ ಮಹಾರಾಜನೇ ಮರಣಶೀಲನಾಗಿ ಕಾಲಕ್ಕೆ ಅಧೀನನಾಗಿರುವ ನೀನು ಪಕ್ಷಿಯಂತೆ ಹಾರುವ ನದಿಯ ವೇಗದಂತೆ ಹರಿಯುವ, ಪ್ರತ್ಯಕ್ಷವಾಗಿ ಸರ್ವಪ್ರಾಣಗಳನ್ನು ಅಪಹರಿಸುವ, ಕಾಲನಾಮಕ ಮೃತ್ಯುವಿಗೆ ಅಧೀನವಾಗಿದ್ದು ಬಹುಕಾಲ ಬದುಕುತ್ತೇನೆ ಎಂದು ಭಾವಿಸಿದ್ದೀಯೆ. ನೀರಿನ ನೊರೆಯಂತೆ, ನಾಶವಾಗುವ ಹಣ್ಣಿನಂತೆ, ಇರುವ ನೀನು ಹೀಗೆ ಭಾವಿಸುತ್ತೀಯೆ.

ನಿಮೇಷಾದಪಿ ಕೌಂತೇಯ ಯಸ್ಯಾಯುರಪಚೀಯತೇ ।
ಸೂಚ್ಯಾ ವಾಂಜನಚೂರ್ಣಾನಿ ಕಿಮಿತಿ ಪ್ರತಿಪಾಲಯೇತ್ ॥೩॥

ಎಲೈ ಕೌಂತೇಯನೇ ಸೂಜಿಯಿಂದ ಅಂಜನ ಚೂರ್ಣವನ್ನು ತೆಗೆದಂತೆ ನಿಮಿಷ ನಿಮಿಷವೂ ಆಯುಸ್ಸು ನಾಶವನ್ನು ಹೊಂದುತ್ತಿರುವಾಗ ಯಾವನು ಕಾಲವನ್ನು ನಿರೀಕ್ಷಿಸುತ್ತಾನೆ?

ಯೋ ನೂನಮಮಿತಾಯುಃ ಸ್ಯಾದಥವಾऽऽಯುಃಪ್ರಮಾಣವಿತ್ ।
ಸ ಕಾಲಂ ವೈ ಪ್ರತೀಕ್ಷೇತ ಸರ್ವಪ್ರತ್ಯಕ್ಷದರ್ಶಿವಾನ್ ॥೪॥

ಯಾವನಿಗೆ ಅಪರಿಮಿತವಾದ ಆಯುಸ್ಸಿದೆಯೋ ಅಥವಾ ಯಾವನು ತನ್ನ ಆಯುಸ್ಸಿನಪ್ರಮಾಣವನ್ನು ತಿಳಿದಿದ್ದಾನೋ ಅಂತಹ ಸರ್ವಪ್ರತ್ಯಕ್ಷದರ್ಶಿಯಾದ ಪುರುಷನು ಮಾತ್ರ ಕಾಲವನ್ನು ಪ್ರತೀಕ್ಷೆಮಾಡಬಹುದು.

ಪ್ರತೀಕ್ಷಮಾಣಾನ್ ಕಾಲೋ ನಃ ಸಮಾ ರಾಜಂಸ್ತ್ರಯೋದಶ ।
ಆಯುಷೋಽಪಚಯಂ ಕೃತ್ವಾ ಮರಣಾಯೋಪನೇಷ್ಯತಿ ॥೫॥

ಎಲೈ ರಾಜನೇ, ಹದಿಮೂರು ವರ್ಷಕಾಲವನ್ನು ಪ್ರತೀಕ್ಷೆಮಾಡುತ್ತಿರುವ ನಮ್ಮ ಆಯುಸ್ಸನ್ನು ಮೃತ್ಯುವು ವಿನಾಶವನ್ನು ಮಾಡಿ ನಮ್ಮನ್ನು ಮರಣದ ಕಡೆ ಕೊಂಡುಹೋಗುವುದು.

ಶರೀರಿಣಾಂ ಹಿ ಮರಣಂ ಶರೀರೇ ನಿತ್ಯಮಾಶ್ರಿತಮ್ ।
ಪ್ರಾಗೇವ ಮರಣಾತ್ ತಸ್ಮಾದ್ ರಾಜ್ಯಾಯೈವ ಘಟಾಮಹೇ ॥೬॥

ಯೋ ನ ಯಾತಿ ಪ್ರಸಂಖ್ಯಾನಮಸ್ಪಷ್ಟೋಽಭೂತಿವರ್ಧನಃ ।
ಅಯಾತಯಿತ್ವಾ ವೈರಾಣಿ ಸೋಽವಸೀದತಿ ಗೌರಿವ ॥೭॥

ಎಲ್ಲದೇಹಿಗಳಿಗೂ ದೇಹದಲ್ಲಿಯೇ ಮರಣವಿರುತ್ತದೆ. ಆದ್ದರಿಂದ ಮರಣಕ್ಕಿಂತ ಮೊದಲೇ ರಾಜ್ಯವನ್ನು ಪಡೆಯಲು ಪ್ರಯತ್ನಿಸೋಣ. ಯಾವನು ವೈರಗಳನ್ನು ಹಿಂದಿರುಗಿಸದೆ ರಾಜ್ಯೈಶ್ವರ್ಯವನ್ನು ಸಂಪಾದಿಸದೆ ಅಪ್ರಸಿದ್ಧನಾಗಿ ಶ್ರೇಷ್ಠರಲ್ಲಿ ಪರಿಗಣನೆಯನ್ನು ಹೊಂದುವುದಿಲ್ಲವೋ ಅವನು (ಕೆಸರಿನಲ್ಲಿ ಮುಳುಗುವ) ಗೋವಿನಂತೆ ನಾಶವನ್ನು ಹೊಂದುತ್ತಾನೆ.

ಯೋ ನ ಯಾತಯತೇ ವೈರಮಲ್ಪಸತ್ತ್ವೋದ್ಯತಃ ಪುಮಾನ್ ।
ಅಫಲಂ ತಸ್ಯ ಜನ್ಮಾಹಂ ಮನ್ಯೇ ದುರ್ಜಾತಿಜಾಯಿನಃ ॥೮॥

ಯಾವ ಮನುಷ್ಯನು ಅಲ್ಪಸತ್ವವುಳ್ಳವನಾಗಿ ಪ್ರಯತ್ನಪೂರ್ವಕವಾಗಿ ವೈರಕ್ಕೆ ಪ್ರತೀಕಾರವನ್ನು ಮಾಡುವುದಿಲ್ಲವೋ, ಕೆಟ್ಟ ಜಾತಿಯಲ್ಲಿ ಹುಟ್ಟಿದ ಅವನ ಜನ್ಮವು ನಿಷ್ಫಲವೆಂದು ಭಾವಿಸುತ್ತೇನೆ.

ಹೈರಣ್ಯೋ ಭವತೋ ಬಾಹುಃ ಶ್ರುತಿರ್ಭವತಿ ಭಾರತ ।
ಹತ್ವಾ ದ್ವಿಷಂತಂ ಸಂಗ್ರಾಮೇ ಭುಂಕ್ಷ್ವ ಬಾಹ್ವರ್ಜಿತಂ ವಸು ॥೯॥

ಎಲೈ ಭಾರತನೇ ನಿನ್ನ ಬಾಹುಗಳು ಹಿರಣ್ಯದಾನವನ್ನು ಮಾಡುತ್ತವೆ (ಹಿರಣ್ಮಯವಾಗುತ್ತವೆ). ನಿನಗೆ ಕೀರ್ತಿಯುಂಟಾಗುತ್ತದೆ. ಯುದ್ಧದಲ್ಲಿ ಶತ್ರುವನ್ನು ಕೊಂದು ನಿನ್ನ ಬಾಹುಬಲದಿಂದ ಸಂಪಾದಿಸಿದ ಐಶ್ವರ್ಯವನ್ನು ಭೋಗಿಸು.

ಹತ್ವಾ ಚೇತ್ ಪುರುಷೋ ರಾಜನ್ ನಿಕರ್ತಾರಮರಿಂದಮ ।
ಅಹ್ನಾಯ ನರಕಂ ಗಚ್ಛೇತ್ ಸ್ವರ್ಗೇಣ ವಸುಸಮ್ಮಿತಃ ॥೧೦॥

ಎಲೈ ರಾಜನೇ, ಎಲೈ ಅರಿಂದಮನೇ, ಯಾವ ಪುರುಷನು ತನಗೆ ಮೋಸಮಾಡಿದವನನ್ನು ಕೊಲ್ಲುತ್ತಾನೆಯೋ ಅವನು ತಾನು ಸಂಪಾದಿಸಿದ ಸ್ವರ್ಗದಲ್ಲಿ ವಸುಗಳಿಗೆ ಸಮಾನವಾದ ಭೋಗವನ್ನು ಅನುಭವಿಸುತ್ತಾನೆ. ಇಲ್ಲದಿದ್ದರೆ ಶೀಘ್ರವಾಗಿ ನರಕಕ್ಕೆ ಹೋಗುತ್ತಾನೆ.

ಅಮರ್ಷಜೋ ಹಿ ಸಂತಾಪಃ ಪಾವಕಾದ್ ದೀಪ್ತಿಮತ್ತರಃ ।
ಯೇನಾಹಮಭಿಸಂತಪ್ತೋ ನ ನಕ್ತಂ ನ ದಿವಾ ಶಯೇ ॥೧೧॥

ಸಿಟ್ಟಿನಿಂದ ಉಂಟಾಗುವ ತಾಪವು ಅಗ್ನಿಯಿಂದ ಉಂಟಾಗುವ ತಾಪಕ್ಕಿಂತಲೂ ತೀಕ್ಷ್ಣತರವಾದುದು. ನಾನು ಅದರಿಂದ ಸಂತಪ್ತನಾಗಿ ಹಗಲಾಗಲೀ ರಾತ್ರಿಯಾಗಲೀ ನಿದ್ರೆಮಾಡುತ್ತಿಲ್ಲ.

ಅಯಂ ಚ ಪಾರ್ಥೋ ಬೀಭತ್ಸುರ್ವರಿಷ್ಠೋ ಜ್ಯಾವಿಕರ್ಷಣೇ ।
ಆಸ್ತೇ ಪರಮಸಂತಪ್ತೋ ನುನ್ನಃ ಸಿಂಹ ಇವಾಶಯೇ ॥೧೨॥

ಈ ಪಾರ್ಥನಾದ ಅರ್ಜುನನು ಧನುರ್ವಿದ್ಯೆಯಲ್ಲಿ ಶ್ರೇಷ್ಠನಾದವನು. ಬಾಣಗಳ ಏಟಿನಿಂದ ಸಿಂಹವು ತನ್ನ ಗುಹೆಯಲ್ಲಿರುವಂತೆ ಅವನು ಪರಮಸಂತಪ್ತನಾಗಿದ್ದಾನೆ.

ಯೋಽಯಮೇಕೋ ನುದೇತ್ ಸರ್ವಾಂಲ್ಲೋಕೇ ರಾಜನ್ ಧನುರ್ಭೃತಃ ।
ಸೋಽಯಮಾತ್ಮಜಮೂಷ್ಮಾಣಂ ಮಹಾಹಸ್ತೀವ ಯಚ್ಛತಿ ॥೧೩॥

ರಾಜನೇ, ಯಾವನು ಲೋಕದಲ್ಲಿ ಎಲ್ಲಾ ಧನುರ್ಧರರನ್ನೂ ಒಬ್ಬನೇ ನಿವಾರಿಸಬಲ್ಲನೋ ಅವನು ಕೋಪದಿಂದ ಉಂಟಾದ ನಿಟ್ಟುಸಿರನ್ನು ಮಹಾಗಜದಂತೆ ತಡೆದುಕೊಳ್ಳುತ್ತಿದ್ದಾನೆ.

ನಕುಲಃ ಸಹದೇವಶ್ಚ ವೃದ್ಧಾ ಮಾತಾ ಚ ವೀರಸೂಃ ।
ತವೈವ ಪ್ರಿಯಮಿಚ್ಛಂತ ಆಸತೇ ಜಡಮೂಕವತ್ ॥೧೪॥

ನಕುಲಸಹದೇವರೂ ಮತ್ತು ವೀರಪುತ್ರರನ್ನು ಪಡೆದ ವೃದ್ಧಳಾದ ತಾಯಿಯಾದ ಕುಂತಿಯೂ ನಿನ್ನ ಪ್ರಿಯವನ್ನೇ ಬಯಸುತ್ತಾ ಜಡಮೂಕರಂತೆ ಇದ್ದಾರೆ.

ಸರ್ವೇ ತೇ ಪ್ರಿಯಮಿಚ್ಛಂತಿ ಬಾಂಧವಾಃ ಸಹ ಸೃಂಜಯೈಃ ।
ಇಮಮೇಕಾ ಚ ಸಂತಪ್ತಾ ಮಾತಾ ಚ ಪ್ರತಿವಿಂಧ್ಯತಃ ॥೧೫॥

ನಿನ್ನ ಎಲ್ಲ ಬಾಂಧವರೂ ಮತ್ತು ಸೃಂಜಯರೂ ನಿನ್ನ ಪ್ರಿಯವನ್ನು ಬಯಸುತ್ತಾರೆ. ಪ್ರತಿವಿಂಧ್ಯನ ತಾಯಿಯಾದ ಈ ದ್ರೌಪದಿಯು ಸಂತಪ್ತಳಾಗಿದ್ದಾಳೆ.

ಪ್ರಿಯಮೇವ ತು ಸರ್ವೇಷಾಂ ಯದ್ ಬ್ರವೀಮ್ಯುತ ಕಿಂಚನ ।
ಸರ್ವೇ ಹಿ ವ್ಯಸನಂ ಪ್ರಾಪ್ತಾಃ ಸರ್ವೇ ಯುದ್ಧಾಭಿನಂದಿನಃ ॥೧೬॥

ನಾನು ಏನು ಹೇಳುತ್ತಿದ್ದೇನೆಯೋ ಅದು ಎಲ್ಲರಿಗೂ ಪ್ರಿಯವಾದುದು. ಎಲ್ಲರೂ ವ್ಯಸನದಲ್ಲಿ ಸಿಲುಕಿದ್ದಾರಷ್ಟೆ? ಎಲ್ಲರೂ ಯುದ್ಧವನ್ನು ಬಯಸುತ್ತಾರೆ.

ನಾತಃ ಪಾಪೀಯಸೀ ಕಾಚಿದ್ ಆಪತ್ ಪಾರ್ಥ ಭವಿಷ್ಯತಿ ।
ಯನ್ನೋ ನೀಚೈರಲ್ಪಬಲೈ ರಾಜ್ಯಮಾಚ್ಛಿದ್ಯ ಭುಜ್ಯತೇ ॥೧೭॥

ಎಲೈ ಪಾರ್ಥನೇ, ದುರ್ಬಲರಾದ ನೀಚರು ನಮ್ಮ ರಾಜ್ಯವನ್ನು ಕಸಿದುಕೊಂಡು ಭೋಗಿಸುತ್ತಿದ್ದಾರೆ. ಇದಕ್ಕಿಂತ ಘೋರವಾದ ವಿಪತ್ತು ಇನ್ನೊಂದಿಲ್ಲ.

ಶೀಲದೋಷಾದ್ ಘೃಣಾವಿಷ್ಟ ಆನೃಶಂಸ್ಯಾತ್ ಪರಂತಪ ।
ಕ್ಲೇಶಾಂಸ್ತಿತಿಕ್ಷಸೇ ರಾಜನ್ ಯಾಂ ನ ಕಶ್ಚಿತ್ ಪ್ರಶಂಸತಿ ॥೧೮॥

ಮಾರ್ದವರೂಪಸ್ವಭಾವದಿಂದ ಅಕ್ರೌರ್ಯವುಳ್ಳವನಾಗಿ ಕೃಪಾವಿಷ್ಟನಾಗಿ ಕ್ಲೇಶಗಳನ್ನು ಸಹಿಸುತ್ತಿದ್ದೀಯೆ. ಪರಂತಪನಾದ ರಾಜನೇ, ಇದನ್ನು ಯಾರೂ ಪ್ರಶಂಸಿಸುವುದಿಲ್ಲ.

ಘೃಣೇ ಬ್ರಾಹ್ಮಣರೂಪೋಽಸಿ ಕಥಂ ಕ್ಷತ್ರೇ ವ್ಯಜಾಯಥಾಃ ।
ಅಸ್ಯಾಂ ಹಿ ಯೋನೌ ಜಾಯಂತೇ ಪ್ರಾಯಶಃ ಕ್ರೂರಬುದ್ಧಯಃ ।
ಅಶ್ರೌಷೀಸ್ತ್ವಂ ರಾಜಧರ್ಮಾನ್ ಯಥೈವ ಮನುರಬ್ರವೀತ್ ॥೧೯॥

ನೀನು ದಯಾಪೂರ್ಣನಾದ ಬ್ರಾಹ್ಮಣನಂತಿದ್ದೀಯೆ. ಕ್ಷತ್ರಿಯ ಕುಲದಲ್ಲಿ ಹೇಗೆ ಜನಿಸಿದ್ದೀಯೆ? ಈ ಯೋನಿಯಲ್ಲಿ ಪ್ರಾಯಶಃ ಕ್ರೂರಬುದ್ಧಿಯುಳ್ಳವರೇ ಜನಿಸುತ್ತಾರೆ. ನೀನು ರಾಜಧರ್ಮಗಳು ಶಾಂತವಲ್ಲವೆಂದು ಮನುವು ಹೇಳಿರುವುದನ್ನು ಕೇಳಿದ್ದೀಯೆ.

ಕ್ರೂರಾನ್ ನಿಕೃತಿಸಂಯುಕ್ತಾನಭಿತೋ ನಾಶಮಾತ್ಮಕಾನ್ ।
ಧಾರ್ತರಾಷ್ಟ್ರಾನ್ ಮಹಾರಾಜ ಕ್ಷಮಸೇ ಕಿಂ ದುರಾತ್ಮನಃ ॥೨೦॥

ಎಲೈ ಮಹಾರಾಜನೇ, ಕ್ರೂರರೂ ಸರ್ವಥಾ ಮೋಸಗಾರರೂ ದುಷ್ಟರೂ ಆದ ಧೃತರಾಷ್ಟ್ರಪುತ್ರರನ್ನು ಏಕೆ ಕ್ಷಮಿಸುತ್ತಿದ್ದೀಯೆ?

ಕರ್ತವ್ಯೇ ಪುರುಷವ್ಯಾಘ್ರ ಕಿಮಾಸ್ಸೇ ಪೀಠಸರ್ಪವತ್ ।
ಬುದ್ಧ್ಯಾ ವೀರ್ಯೇಣ ಸಂಯುಕ್ತಃ ಶ್ರುತ್ವೇದಂ ನಾಭಿನಂದಸೇ ॥೨೧॥

ಪುರುಷವ್ಯಾಘ್ರನೇ ಕಾರ್ಯೋನ್ಮುಖವಾಗಬೇಕಾದಾಗ ಏಕೆ ಕಲ್ಲಿನ ಸರ್ಪದಂತೆ ಸುಮ್ಮನಿದ್ದೀಯೆ? ಬುದ್ಧಿಯಿಂದಲೂ ಪರಾಕ್ರಮದಿಂದಲೂ ಕೂಡಿದವನಾದರೂ ಈ ನನ್ನ ಮಾತುಗಳನ್ನು ಕೇಳಿ ನೀನು ಅಭಿನಂದಿಸುತ್ತಿಲ್ಲ.

ತೃಣಾನಾಂ ಮುಷ್ಟಿನೈಕೇನ ಹಿಮವಂತಂ ತು ಪರ್ವತಮ್ ।
ಛನ್ನಮಿಚ್ಛಸಿ ಕೌಂತೇಯ ಯೋಽಸ್ಮಾನ್ ಸಂಯಂತುಮಿಚ್ಛಸಿ ॥೨೨॥

ಎಲೈ ಕೌಂತೇಯನೇ, ನಮ್ಮನ್ನು ನಿಯಂತ್ರಿಸಲು ಬಯಸುವ ನೀನು ಒಂದು ಹಿಡಿ ಹುಲ್ಲಿನಿಂದ ಹಿಮಾಲಯಪರ್ವತವನ್ನು ಮುಚ್ಚಲು ಬಯಸುತ್ತಿದ್ದೀಯೆ.

ಅಜ್ಞಾತಚರ್ಯಾ ಗೂಢೇನ ಪೃಥಿವ್ಯಾಂ ವಿಶ್ರುತೇನ ಚ ।
ದಿವೀವ ಪಾರ್ಥ ಸೂರ್ಯೇಣ ನ ಶಕ್ಯಾ ಚರಿತುಂ ತ್ವಯಾ ॥೨೩॥

ಎಲೈ ಪಾರ್ಥನೇ, ಆಕಾಶದಲ್ಲಿರುವ ಸೂರ್ಯನಂತೆ ಭೂಮಿಯಲ್ಲಿ ಪ್ರಖ್ಯಾತನಾದ ನೀನು ಗೂಢವಾದ ಅಜ್ಞಾತವಾಸವನ್ನು ಆಚರಿಸಲು ಸಾಧ್ಯವಿಲ್ಲ.

ಬೃಹತ್ಸಾಲ ಇವಾವಾಪೇ ಶಾಖಾಪುಷ್ಪಫಲಾಶವಾನ್ ।
ಹಸ್ತೀ ಶ್ವೇತ ಇವಾಜ್ಞಾತಃ ಕಥಂ ಜಿಷ್ಣುಶ್ಚರಿಷ್ಯತಿ ॥೨೪॥

ತನ್ನ ಸ್ಥಾನದಲ್ಲಿ ನಿಂತಿರುವ ಅನೇಕ ಶಾಖಾಪುಷ್ಪಗಳುಳ್ಳ ದೊಡ್ಡ ಸಾಲವೃಕ್ಷದಂತೆ ಮತ್ತು ಬಿಳಿಯಾನೆಯಂತೆ ಇರುವ ಅರ್ಜುನನು ಹೇಗೆ ಅಜ್ಞಾತವಾಸವನ್ನು ಮಾಡುವನು?

ಇಮೌ ಹಿ ಸಿಂಹಸಂಕಾಶೌ ಭ್ರಾತರೌ ಸಹಿತೌ ಶಿಶೂ ।
ನಕುಲಃ ಸಹದೇವಶ್ಚ ಕಥಂ ಪಾರ್ಥ ಚರಿಷ್ಯತಃ ॥೨೫॥

ಎಲೈ ಪಾರ್ಥನೇ, ಸಿಂಹಸದೃಶರಾದ ಸಹೋದರರಾದ ಚಿಕ್ಕವಯಸ್ಸಿನವರಾದ ಯಾವಾಗಲೂ ಜೊತೆಯಲ್ಲೇ ಇರುವ ಈ ನಕುಲಸಹದೇವರು ಹೇಗೆ ಅಜ್ಞಾತವಾಸವನ್ನು ಮಾಡುತ್ತಾರೆ?

ಪುಣ್ಯಕೀರ್ತೇ ರಾಜಪುತ್ರೀ ದ್ರೌಪದೀ ವೀರಸೂರಿಯಮ್ ।
ವಿಶ್ರುತಾ ಕಥಮಜ್ಞಾತಾ ಕೃಷ್ಣಾ ಪಾರ್ಥ ಚರಿಷ್ಯತಿ ॥೨೬॥

ಎಲೈ ಪಾರ್ಥನೇ, ವೀರಪುತ್ರರನ್ನು ಪಡೆದು ಪವಿತ್ರಕೀರ್ತಿಯುಳ್ಳ ರಾಜಪುತ್ರಿಯಾದ ಪ್ರಖ್ಯಾತಳಾದ ಈ ದ್ರೌಪದಿಯಾದರೂ ಹೇಗೆ ಅಜ್ಞಾತವಾಸವನ್ನು ಮಾಡುವಳು?

ಮಾಂ ಚಾಪಿ ರಾಜನ್ ಜಾನಂತಿ ಹ್ಯಾಕುಮಾರಮಿಮಾಃ ಪ್ರಜಾಃ ।
ಅಜ್ಞಾತಚರ್ಯಾಂ ಪಶ್ಯಾಮಿ ಮೇರೋರಿವ ನಿಗೂಹನಮ್ ॥೨೭॥

ಎಲೈ ರಾಜನೇ ಈ ಎಲ್ಲ ಪ್ರಜೆಗಳು ಬಾಲ್ಯದಿಂದಲೂ ನನ್ನನ್ನು ತಿಳಿದಿದ್ದಾರೆ. ಆದ್ದರಿಂದ ಅಜ್ಞಾತಚರ್ಯೆಯು ಮೇರುಪರ್ವತವನ್ನು ಮುಚ್ಚಿದಂತೆ ಎಂದು ನಾನು ತಿಳಿಯುತ್ತೇನೆ.

ತಥೈವ ಬಹವೋಽಸ್ಮಾಭೀ ರಾಷ್ಟ್ರೇಭ್ಯೋ ವಿಪ್ರವಾಸಿತಾಃ ।
ರಾಜಾನೋ ರಾಜಪುತ್ರಾಶ್ಚ ಧಾರ್ತರಾಷ್ಟ್ರಮನುವ್ರತಾಃ ॥೨೮॥

ಅದರಂತೆ ನಾವು ದಿಗ್ವಿಜಯವನ್ನು ಮಾಡಿದಾಗ ಅನೇಕರಾಷ್ಟ್ರಗಳಿಂದ ಅನೇಕರಾಜರೂ ಮತ್ತು ರಾಜಪುತ್ರರೂ ನಿಷ್ಕಾಸಿತರಾಗಿದ್ದರೆ. ಅವರೆಲ್ಲರೂ ದುರ್ಯೋಧನನನ್ನು ಅನುಸರಿಸುತ್ತಿದ್ದಾರೆ.

ನ ಹಿ ತೇಽಪ್ಯುಪಶಾಮ್ಯಂತಿ ನಿಕೃತಿಂ ತಾಂ ನಿರಾಕೃತಾಃ ।
ಅವಶ್ಯಂ ತೈರ್ನಿಕರ್ತವ್ಯಮಸ್ಮಾಕಂ ತತ್ಪ್ರಿಯೈಷಿಭಿಃ ॥೨೯॥

ಅವರ ನಮ್ಮಿಂದ ಸೋಲಿಸಲ್ಪಟ್ಟು ಅವಮಾನವನ್ನು ಹೊಂದಿದ ಅವರು ಶಾಂತಿಯನ್ನು ಹೊಂದುತ್ತಿಲ್ಲ. ದುರ್ಯೋಧನನಿಗೆ ಪ್ರಿಯವನ್ನು ಮಾಡಲು ಇಚ್ಛಿಸುವ ಅವರು ಅವಶ್ಯವಾಗಿ ನಮಗೆ ಪ್ರತೀಕಾರವನ್ನು ಮಾಡುತ್ತಾರೆ.

ತೇಽಪ್ಯಸ್ಮಾಸು ಪ್ರಯುಂಜೀರನ್ ಪ್ರಚ್ಛನ್ನಾನ್ ಸುಬಹೂನ್ ಜನಾನ್ ।
ಆಚಕ್ಷೀರಂಶ್ಚ ನೋ ಜ್ಞಾತ್ವಾ ತತಃ ಸ್ಯಾತ್ ಸುಮಹದ್ಭಯಮ್ ॥೩೦॥

ಅವರೂ ಸಹ ನಮ್ಮಮೇಲೆ ಪ್ರಚ್ಛನ್ನರಾದ ಅನೇಕ ಚಾರರನ್ನು ನೇಮಿಸುತ್ತಾರೆ. ಆ ಚಾರರು ನಮ್ಮನ್ನು ಗುರುತುಹಿಡಿದು ಅವರಿಗೆ ಹೇಳುತ್ತಾರೆ. ಆಗ ನಮಗೆ ದೊಡ್ಡ ಭಯವು ಉಂಟಾಗುತ್ತದೆ.

ಅಸ್ಮಾಭಿರುಷಿತಾಃ ಸಮ್ಯಗ್ ವನೇ ಮಾಸಾಸ್ತ್ರಯೋದಶ ।
ಪರಿಮಾಣೇನ ತಾನ್ ಪಶ್ಯ ತಾವತಃ ಪರಿವತ್ಸರಾನ್ ॥೩೧॥

ನಾವು ಕಾಡಿನಲ್ಲಿ ಸರಿಯಾಗಿ ಹದಿಮೂರು ತಿಂಗಳುಗಳನ್ನು ಕಳೆದಿದ್ದೇವೆ. ಮಾಸಗಳನ್ನು ಸಂವತ್ಸರಗಳನ್ನಾಗಿ ಪರಿವರ್ತಿಸಿ ಹದಿಮೂರು ಮಾಸಗಳನ್ನೇ ಹದಿಮೂರು ವರ್ಷಗಳೆಂದು ಭಾವಿಸು.

ಅಸ್ತು ಮಾಸಃ ಪ್ರತಿನಿಧಿರ್ಯಥಾ ಪ್ರಾಹುರ್ಮನೀಷಿಣಃ ।
ಪೂತೀಕಾಮಿವ ಸೋಮಸ್ಯ ತಥೈವ ಕ್ರಿಯತಾಮಿತಿ ॥೩೨॥

ಮಾಸಗಳು ಸಂವತ್ಸರಗಳಿಗೆ ಪ್ರತಿನಿಧಿಗಳೆಂದು ಜ್ಞಾನಿಗಳು ಹೇಳುತ್ತಾರೆ. ಪೂತೀಕಾಲತೆಯು (ಅಮೃತಬಳ್ಳಿಯು) ಸೋಮಲತೆಗೆ ಪ್ರತಿನಿಧಿಯಾದಂತೆ ಜ್ಞಾನಿಗಳು ಹೇಳುವಂತೆ ಹಾಗೆಯೇ ಆಗಲಿ. ನೀನು ಹಾಗೆಯೇ ಮಾಡು.

ಅಥವಾಽನಡುಹೋ ರಾಜನ್ ಸಾಧವೇ ಸಾಧುವಾಹಿನಃ ।
ಸೌಹಿತ್ಯದಾನಾದೇತಸ್ಮಾದೇನಸಃ ಪ್ರತಿಮುಚ್ಯಸೇ ॥೩೩॥

ರಾಜನೇ, ಅಥವಾ ಸಾಧುಜನರಿಗೆ ಸಾಧುವಾದ ಎತ್ತುಗಳನ್ನು ಪರಿಕರಸಹಿತವಾಗಿ ದಾನಮಾಡುವುದರಿಂದಲೂ ಈ ಪ್ರತಿಜ್ಞಾಭಂಗದಿಂದ ಉಂಟಾದ ಪಾಪದಿಂದ ನಿರ್ಮುಕ್ತನಾಗುತ್ತೀಯೆ.

ತಸ್ಮಾದ್ ರಿಪುವಧೇ ರಾಜನ್ ಕ್ರಿಯತಾಂ ನಿಶ್ಚಯಸ್ತ್ವಯಾ ।
ಕ್ಷತ್ರಿಯಸ್ಯ ತು ಸರ್ವಸ್ಯ ನಾನ್ಯೋ ಧರ್ಮೋऽಸ್ತಿ ಸಂಯುಗಾತ್ ॥೩೪॥

ರಾಜನೇ, ಆದ್ದರಿಂದ ಶತ್ರುವಧೆಯನ್ನು ಮಾಡಲು ಈ ದಿನ ನೀನು ನಿರ್ಧರಿಸು. ಯಾವ ಕ್ಷತ್ರಿಯನಿಗೂ ಯುದ್ಧಕ್ಕಿಂತ ದೊಡ್ಡದಾದ ಧರ್ಮವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತತಾತ್ಪರ್ಯನಿರ್ಣಯ - ೨೨ನೇ ಅಧ್ಯಾಯ

ಏವಂ ಚಿಂತಾಸಮಾವಿಷ್ಟಂ ವಿಜ್ಞಾಯೈವ ಯುಧಿಷ್ಠಿರಂ ।
ಸರ್ವಜ್ಞಃ ಸರ್ವಶಕ್ತಿಶ್ಚ ಕೃಷ್ಣದ್ವೈಪಾಯನೋऽಗಮತ್ ।
ನೃಪತಿಂ ಬೋಧಯಾಮಾಸ ಚಿಂತಾವ್ಯಾಕುಲಮಾನಸಂ ॥೧೨೬॥

ಹೀಗೆ ಚಿಂತಾಮಗ್ನನಾಗಿದ್ದಾನೆ ಧರ್ಮರಾಜ ಎಂದು ತಿಳಿದೇ ಸರ್ವಜ್ಞರಾದ ಸರ್ವಶಕ್ತರಾದ ವೇದವ್ಯಾಸರು ಅವನ ಬಳಿಗೆ ಹೋದರು. ಚಿಂತೆಯಿಂದ ವ್ಯಾಕುಲಚಿತ್ತನಾದ ರಾಜನಿಗೆ ಬೋಧಿಸಿದರು.

ಇಮಂ ಮಂತ್ರಂ ವದಿಷ್ಯಾಮಿ ಯೇನ ಜೇಷ್ಯತಿ ಫಲ್ಗುನಃ ।
ಭೀಷ್ಮದ್ರೋಣಾದಿಕಾನ್ ಸರ್ವಾಂಸ್ತಂ ತ್ವಂ ವದ ಧನಂಜಯೇ ॥೧೨೭॥

ನಿನಗೆ ಒಂದು ಮಂತ್ರವನ್ನು ಉಪದೇಶಿಸುತ್ತೇನೆ. ಅದನ್ನು ನೀನು ಅರ್ಜುನನಿಗೆ ಉಪದೇಶಿಸು. ಅದರಿಂದ ಅರ್ಜುನ ಭೀಷ್ಮದ್ರೋಣಾದಿಗಳೆಲ್ಲರನ್ನೂ ಪರಾಭವಗೊಳಿಸುತ್ತಾನೆ.

ಇತ್ಯುಕ್ತ್ವೈವಾವದನ್ಮಂತ್ರಂ ಸರ್ವದೈವತದೃಷ್ಟಿದಂ ।
ನ ಸ್ವಯಂ ಹ್ಯವದತ್ ಪಾರ್ಥೇ ಫಲಾಧಿಕ್ಯಂ ಯತೋ ಭವೇತ್ ॥

ಹೀಗೆ ಹೇಳಿ ವೇದವ್ಯಾಸರು ಎಲ್ಲ ದೇವತೆಗಳ ಪ್ರತ್ಯಕ್ಷವನ್ನು ನೀಡಬಲ್ಲ ಮಂತ್ರವನ್ನು ಧರ್ಮರಾಜನಿಗೆ ಉಪದೇಶಿಸಿದರು. ತಾನೇ ಅರ್ಜುನನಿಗೆ ಉಪದೇಶಿಸಲಿಲ್ಲ. ತಾನೇ ಉಪದೇಶಿಸಿದ್ದರೆ ಅದರ ಫಲ ಜಾಸ್ತಿಯಾಗುತ್ತಿತ್ತು.

ಭೀಷ್ಮದ್ರೋಣಾದಿವಿಜಯ ಏತಾವದ್‌ವೀರ್ಯಮೇವ ಹಿ ।
ಅಲಂ ನಾತೋऽಧಿಕಂ ಕಾರ್ಯಮೇತಾವದ್‌ಯೋಗ್ಯಮಸ್ಯ ಚ ।
ಫಲ್ಗುನಸ್ಯೇತಿ ಭಗವಾನ್ ನ ಸ್ವಯಂ ಹ್ಯವದನ್ಮನುಂ ॥೧೨೯॥

ಭೀಷ್ಮದ್ರೋಣಾದಿಗಳನ್ನು ಗೆಲ್ಲುವುದಕ್ಕೆ ಇಷ್ಟು ಶಕ್ತಿ ಇದ್ದರೆ ಸಾಕು. ಇದಕ್ಕಿಂತ ಹೆಚ್ಚು ಏನು ಮಾಡಬೇಕಾಗುವುದಿಲ್ಲ. ಇಷ್ಟು ಮಾಡುವುದು ಮಾತ್ರ ಅರ್ಜುನನಿಗೆ ಯೋಗ್ಯ ಎಂದು ಭಗವಾನ್ ವ್ಯಾಸರು ತಾನು ಸ್ವತಃ ಅವನಿಗೆ ಮಂತ್ರವನ್ನು ಉಪದೇಶಿಸಲಿಲ್ಲ.

★ ★ ★ ★

## ಮೂವತ್ಮೂರನೆಯ ಅಧ್ಯಾಯ

(ವೇದವ್ಯಾಸರ ಆಗಮನ. ಯುಧಿಷ್ಠಿರನಿಗೆ ಮಂತ್ರೋಪದೇಶ. ಪಾಂಡವರಿಂದ ದ್ವೈತವನದಿಂದ ಕಾಮ್ಯಕವನಕ್ಕೆ ಗಮನ.)

### ವೈಶಂಪಾಯನಃ

ಭೀಮಸೇನವಚಃ ಶ್ರುತ್ವಾ ಕುಂತೀಪುತ್ರೋ ಯುಧಿಷ್ಠಿರಃ ।
ನಿಃಶ್ವಸ್ಯ ಪುರುಷವ್ಯಾಘ್ರಃ ಸಂಪ್ರದಧ್ಯೌ ಪರಂತಪಃ ॥೧॥

ಭೀಮಸೇನನ ಮಾತುಗಳನ್ನು ಕೇಳಿ ಕುಂತೀಪುತ್ರನಾದ ಪುರುಷವ್ಯಾಘ್ರನಾದ ಶತ್ರುತಾಪನನಾದ ಯುಧಿಷ್ಠಿರನು ನಿಟ್ಟುಸಿರನ್ನು ಬಿಟ್ಟು ಚಿಂತಿಸಿದನು.

ಶ್ರುತಾ ಮೇ ರಾಜಧರ್ಮಾಶ್ಚ ವರ್ಣಾನಾಂ ಚ ಪೃಥಕ್‌ಪೃಥಕ್ ।
ಆಯತ್ಯಾಂ ಚ ತದಾತ್ವೇ ಚ ಯಃ ಪಶ್ಯತಿ ಸ ಪಶ್ಯತಿ ॥೨॥

ನಾನು ರಾಜಧರ್ಮಗಳನ್ನೂ ಉಳಿದ ವರ್ಣಗಳ ಧರ್ಮಗಳನ್ನೂ ಪ್ರತ್ಯೇಕವಾಗಿ ಕೇಳಿದ್ದೇನೆ. ಸಂಪತ್ತಿನ ನಾಶದಲ್ಲಿಯೂ ಮತ್ತು ಸಂಪತ್ತು ಇರುವಾಗಲೂ ಯಾರು ರಾಜಧರ್ಮವನ್ನು ಸರಿಯಾಗಿ ತಿಳಿಯುತ್ತಾನೆಯೋ ಅವನೇ ನಿಜವಾಗಿ ತಿಳಿದವನು.

ಧರ್ಮಸ್ಯ ಜಾನಮಾನೋऽಹಂ ಗತಿಮಗ್ರ್ಯಾಂ ಸುದುರ್ವಿದಾಮ್ ।
ಕಥಂ ಬಲಾತ್ಕರಿಷ್ಯಾಮಿ ಮೇರೋರಿವ ವಿವರ್ತನಮ್ ॥೩॥

ಧರ್ಮದ ಗತಿಯು ಶ್ರೇಷ್ಠವಾದುದು ಮತ್ತು ದುರ್ಗಮವಾದುದು ಎಂದು ತಿಳಿದ ನಾನು ಮೇರು ಪರ್ವತವನ್ನು ಕೈಯಿಂದ ಉರುಳಿಸಿದಂತೆ ಹೇಗೆ ಬಲಾತ್ಕಾರವನ್ನು ಮಾಡಲಿ?

ಸ ಮುಹೂರ್ತಮಿವ ಧ್ಯಾತ್ವಾ ವಿನಿಶ್ಚಿತ್ಯೇತಿಕೃತ್ಯತಾಮ್ ।
ಭೀಮಸೇನಮಿದಂ ವಾಕ್ಯಮಪದಾಂತರಮಬ್ರವೀತ್ ॥೪॥

ಅವನು ಒಂದು ಮುಹೂರ್ತಕಾಲ ಯೋಚಿಸಿ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿ ಭೀಮಸೇನನನ್ನು ಕುರಿತು ಭೀಮಸೇನನು ಉತ್ತರವನ್ನು ಕೊಡಲು ಸಾಧ್ಯವಿಲ್ಲದಂತೆ ಮಾತನಾಡಿದನು.

ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ ।
ಇದಮನ್ಯತ್ ಸಮಾದತ್ಸ್ವ ವಾಕ್ಯಂ ಮೇ ವಾಕ್ಯಕೋವಿದ ॥೫॥

ಮಹಾಬಾಹುವೇ! ಭಾರತನೇ! ವಾಕ್ಯವಿಶಾರದನೇ! ಎಲ್ಲವೂ ನೀನು ಹೇಳಿದಂತೆಯೇ ಸರಿ. ನಾನು ಹೇಳುವ ಈ ಇನ್ನೊಂದು ವಾಕ್ಯವನ್ನು ಸ್ವೀಕರಿಸು.

ದುರ್ಗಮಾಃ ಕಾರ್ಯಗತಯೋ ದುರ್ವಿಜ್ಞೇಯಾಸ್ತ್ವರಾನ್ವಿತೈಃ ।
ನಾರಬ್ಧವ್ಯಾನಿ ಕಾರ್ಯಾಣಿ ನಿವರ್ತೇಥಾ ಹಿ ಭಾರತ ॥೬॥

ಭಾರತನೇ! ಕಾರ್ಯಗತಿಗಳು ದುರ್ಗಮವಾದವು. ತ್ವರೆಯಿಂದ ಕೂಡಿದವರು ಅದನ್ನು ತಿಳಿಯಲಾರರು. ತ್ವರೆಯಿಂದ ಕೂಡಿದವರು ಕಾರ್ಯವನ್ನು ಆರಂಭಿಸಲೂ ಬಾರದು. ಅದರಿಂದ ನಿವೃತ್ತರಾಗಬೇಕು.

ಮಹಾಪಾಪಾನಿ ಕಾರ್ಯಾಣಿ ಯಾನಿ ಕೇವಲಸಾಹಸಾತ್ ।
ಆರಭ್ಯಂತೇ ಭೀಮಸೇನ ವ್ಯಥಂತೇ ತಾನಿ ಭಾರತ ॥೭॥

ಕೇವಲ ಸಾಹಸದಿಂದ ಮಹಾಪಾಪಕಾರ್ಯವನ್ನು ಆರಂಭಿಸಿದರೆ ಎಲೈ ಭೀಮಸೇನನೇ ಅವು ವ್ಯಥೆಯನ್ನು ಉಂಟುಮಾಡುತ್ತವೆ.

ಸುಮಂತ್ರಿತೇ ಸುವಿಕ್ರಾಂತೇ ಸುಕೃತೇ ಸುವಿಚಾರಿತೇ ।
ಸಿದ್ಧ್ಯಂತ್ಯರ್ಥಾ ಮಹಾಬಾಹೋ ದೈವಂ ಚಾತ್ರ ಪ್ರದಕ್ಷಿಣಮ್ ॥೮॥

ಮಹಾಬಾಹುವೇ! ಒಳ್ಳೆಯ ಮಂತ್ರಾಲೋಚನೆಯನ್ನು ನಡೆಸಿ ಚೆನ್ನಾಗಿ ವಿಚಾರಮಾಡಿ ಪರಾಕ್ರಮದಿಂದ ಚೆನ್ನಾಗಿ ಮಾಡಿದ ಕಾರ್ಯಗಳು ಫಲವನ್ನು ಕೊಡುತ್ತವೆ. ದೈವವೂ ಅಲ್ಲಿ ಅನುಕೂಲವಾಗಿರುತ್ತದೆ.

ತ್ವಂ ತು ಕೇವಲಚಾಪಲ್ಯಾದ್ ಬಲದರ್ಪೋಚ್ಛ್ರಿತಃ ಸ್ವಯಮ್ ।
ಆರಬ್ಧವ್ಯಮಿದಂ ಕಾರ್ಯಂ ಮನ್ಯಸೇ ಶೃಣು ತತ್ರ ಮೇ ॥೯॥

ನೀನಾದರೂ ಸ್ವತಃ ಬಲದರ್ಪಗಳಿಂದ ಕೂಡಿದವನಾಗಿ ಕೇವಲ ಚಾಪಲ್ಯದಿಂದ ಈ ಕಾರ್ಯವನ್ನು ಮಾಡಬೇಕೆಂದು ಬಯಸುತ್ತಿದ್ದೀಯೆ. ಈ ವಿಷಯದಲ್ಲಿ ನನ್ನ ಮಾತನ್ನು ಕೇಳು.

ಭೂರಿಶ್ರವಾಃ ಶಲಶ್ಚೈವ ಜಲಸಂಧಶ್ಚ ವೀರ್ಯವಾನ್ ।
ಭೀಷ್ಮೋ ದ್ರೋಣಶ್ಚ ಕರ್ಣಶ್ಚ ದ್ರೋಣಪುತ್ರಶ್ಚ ವೀರ್ಯವಾನ್ ॥೧೦॥

ಧಾರ್ತರಾಷ್ಟ್ರಾ ದುರಾಧರ್ಷಾ ದುರ್ಯೋಧನಪುರೋಗಮಾಃ ।
ಸರ್ವ ಏವ ಕೃತಾಸ್ತ್ರಾಶ್ಚ ಸತತಂ ಚಾತತಾಯಿನಃ ॥೧೧॥

ಭೂರಿಶ್ರವ ಶಲ ಪರಾಕ್ರಮಶಾಲಿಯಾದ ಜಲಸಂಧ ಭೀಷ್ಮ ದ್ರೋಣ ಕರ್ಣ ಪರಾಕ್ರಮಿಯಾದ ಅಶ್ವತ್ಥಾಮ ಧೃತರಾಷ್ಟ್ರ ಪುತ್ರರಾದ ದುರ್ಯೋಧನ ಮೊದಲಾದವರು ಎಲ್ಲರೂ ಸೋಲಿಸಲು ಅಸಾಧ್ಯರಾದವರು. ಎಲ್ಲರೂ ಅಸ್ತ್ರವಿದ್ಯೆಯನ್ನು ಬಲ್ಲವರು ಮತ್ತು ಶಸ್ತ್ರವಿದ್ಯೆಯನ್ನು ಬಲ್ಲವರು.

ರಾಜಾನಃ ಪಾರ್ಥಿವಾಶ್ಚೈವ ಯೇಽಸ್ಮಾಭಿರುಪತಾಪಿತಾಃ ।
ಸಂಶ್ರಿತಾಃ ಕೌರವಂ ಪಕ್ಷಂ ಜಾತಸ್ನೇಹಾಶ್ಚ ಸಾಂಪ್ರತಮ್ ॥೧೨॥

ಯಾವ ರಾಜರು ನಮ್ಮಿಂದ ಪೀಡಿತರಾಗಿ ಕೌರವಪಕ್ಷವನ್ನು ಸೇರಿದ್ದಾರೆಯೋ ಅವರು ಸದ್ಯದಲ್ಲಿ ದುರ್ಯೋಧನನಲ್ಲಿ ಸ್ನೇಹವನ್ನು ಹೊಂದಿದ್ದಾರೆ.

ದುರ್ಯೋಧನಹಿತೇ ಯುಕ್ತಾ ನಚ ತೇಽಸ್ಮಾಸು ಭಾರತ ।
ಪೂರ್ಣಕೋಶಾ ಬಲೋಪೇತಾಃ ಪ್ರಯತಿಷ್ಯಂತಿ ರಕ್ಷಣೇ ॥೧೩॥

ಎಲೈ ಭಾರತನೇ! ಅವರು ದುರ್ಯೋಧನನ ಹಿತದಲ್ಲಿ ಆಸಕ್ತರಾಗಿದ್ದಾರೆ. ನಮ್ಮ ಹಿತದಲ್ಲಿ ಆಸಕ್ತರಾಗಿಲ್ಲ. ಅವರು ಪೂರ್ಣವಾದ ಕೋಶವುಳ್ಳವರಾಗಿ ಸೈನ್ಯದಿಂದ ಕೂಡಿದವರಾಗಿ ದುರ್ಯೋಧನನನ್ನು ರಕ್ಷಣೆಮಾಡಲು ಪ್ರಯತ್ನಿಸುವರು.

ಸರ್ವೇ ಕೌರವಸೈನ್ಯಸ್ಯ ಸಪುತ್ರಾಮಾತ್ಯಸೈನಿಕಾಃ ।
ಸಂವಿಭಕ್ತಾ ಮಹೀಪಾಲಾಃ ಸರ್ವಭೋಗೈಶ್ಚ ಕೌರವೈಃ ॥೧೪॥

ಕೌರವಸೈನ್ಯದ ಎಲ್ಲಾ ಮಹೀಪಾಲರಿಗೂ ಅವರ ಪುತ್ರರಿಗೂ ಅಮಾತ್ಯರಿಗೂ ಮತ್ತು ಸೈನಿಕರಿಗೂ ಕೌರವರು ಎಲ್ಲಾ ಭೋಗಗಳನ್ನೂ ಸರಿಯಾಗಿ ಹಂಚಿದ್ದಾರೆ.

ದುರ್ಯೋಧನೇನ ತೇ ವೀರಾ ಮಾನಿತಾಶ್ಚ ವಿಶೇಷತಃ ।
ಪ್ರಾಣಾಂಸ್ಯಕ್ಷ್ಯಂತಿ ಸಂಗ್ರಾಮ ಇತಿ ಮೇ ನಿಶ್ಚಿತಾ ಮತಿಃ ॥೧೫॥

ದುರ್ಯೋಧನನಿಂದ ವಿಶೇಷವಾಗಿ ಸನ್ಮಾನಿಸಲ್ಪಟ್ಟ ಆ ವೀರರು ಯುದ್ಧದಲ್ಲಿ ದುರ್ಯೋಧನನ ಸಲುವಾಗಿ ಪ್ರಾಣಗಳನ್ನು ಬಿಡುವರು ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ಸಮಾ ಯದ್ಯಪಿ ಭೀಷ್ಮಸ್ಯ ವೃತ್ತಿರಸ್ಮಾಸು ತೇಷ್ವಪಿ ।
ದ್ರೋಣಸ್ಯ ಚ ಮಹಾಬಾಹೋ ಕೃಪಸ್ಯ ಚ ಮಹಾತ್ಮನಃ ॥೧೬॥

ಮಹಾಬಾಹುವೇ! ದ್ರೋಣರ ಭೀಷ್ಮರ ಮತ್ತು ಮಹಾತ್ಮರಾದ ಕೃಪರ ವರ್ತನೆಯು ಯದ್ಯಪಿ ನಮ್ಮ ವಿಷಯದಲ್ಲಿಯೂ ಕೌರವರ ವಿಷಯದಲ್ಲೂ ಸಮಾನವಾಗಿದೆ.

ಅವಶ್ಯಂ ರಾಜಪಿಂಡಸ್ಯೈರ್ನಿರ್ವೇಶ್ಯ ಇತಿ ಮೇ ಮತಿಃ ।
ತಸ್ಮಾತ್ ತ್ಯಕ್ಷ್ಯಂತಿ ಸಂಗ್ರಾಮೇ ಪ್ರಾಣಾನಪಿ ಸುದುಸ್ತ್ಯಜಾನ್ ॥೧೭॥

ಆದರೆ ಅವರು ಅವಶ್ಯವಾಗಿ ರಾಜಾನ್ನದ ಋಣವನ್ನು ತೀರಿಸಬೇಕಾಗಿದೆಯೆಂದು ನನ್ನ ಅಭಿಪ್ರಾಯ. ಆದ್ದರಿಂದ ಅವರು ಯುದ್ಧದಲ್ಲಿ ದುಸ್ತ್ಯಜವಾದ ಪ್ರಾಣವನ್ನು ತ್ಯಜಿಸುವರು.

ಸರ್ವೇ ದಿವ್ಯಾಸ್ತ್ರವಿದುಷಃ ಸರ್ವೇ ಧರ್ಮಪರಾಯಣಾಃ ।
ಅಜೇಯಾಶ್ಚೇತಿ ಮೇ ಬುದ್ಧಿರಪಿ ದೇವೈಃ ಸವಾಸವೈಃ ॥೧೮॥

ಅವರೆಲ್ಲರೂ ದಿವ್ಯಾಸ್ತ್ರವೇತ್ತರು ಧರ್ಮಪರಾಯಣರು. ಇಂದ್ರನಿಂದ ಸಹಿತವಾದ ದೇವತೆಗಳಿಂದಲೂ ಅವರು ಅಜೇಯರೆಂದು ನನ್ನ ಬುದ್ಧಿ.

ಅಮರ್ಷೀ ನಿತ್ಯಸಂರಬ್ಧಃ ತತ್ರ ಕರ್ಣೋ ಮಹಾರಥಃ ।
ಸರ್ವಾಸ್ತ್ರವಿದನಾಧೃಷ್ಯೋಽಭೇದ್ಯಕವಚಾವೃತಃ ॥೧೯॥

ಅವರಲ್ಲಿ ಮಹಾರಥನಾದ ಕರ್ಣನು ಅಭೇದ್ಯವಾದ ಕವಚದಿಂದ ಕೂಡಿದ್ದಾನೆ. ಅವನು ಯಾರಿಗೂ ಸೋಲದವನು. ಸರ್ವಾಸ್ತ್ರವೇತ್ತಾ ಮತ್ತು ನಿತ್ಯವೂ ನಮ್ಮ ಮೇಲೆ ಬಹಳ ಕೋಪವನ್ನು ಹೊಂದಿದವಾಗಿದ್ದಾನೆ.

ಅನಿರ್ಜಿತ್ಯ ರಣೇ ಸರ್ವಾನ್ ಏತಾನ್ ಪುರುಷಸತ್ತಮಾನ್ ।
ಅಶಕ್ಯೋ ಹ್ಯಸಹಾಯೇನ ಹಂತುಂ ದುರ್ಯೋಧನಸ್ತ್ವಯಾ ॥೨೦॥

ಯುದ್ಧದಲ್ಲಿ ಈ ಪುರುಷಶ್ರೇಷ್ಠರನ್ನೆಲ್ಲಾ ಸೋಲಿಸದೆ ನೀನು ಅಸಹಾಯಕನಾಗಿ ದುರ್ಯೋಧನನನ್ನು ಕೊಲ್ಲುವುದು ಸಾಧ್ಯವಿಲ್ಲ.

ನ ನಿದ್ರಾಮಧಿಗಚ್ಛಾಮಿ ಚಿಂತಯಾನೋ ವೃಕೋದರ ।
ಅತಿ ಸರ್ವಾನ್ ಧನುರ್ಗ್ರಾಹಾನ್ ಸೂತಪುತ್ರಸ್ಯ ಲಾಘವಮ್ ॥೨೧॥

ವೃಕೋದರನೇ! ಎಲ್ಲ ಧನುರ್ಧಾರಿಗಳಿಗಿಂತಲೂ ಅತಿಶಯಿತವಾದ ಶೀಘ್ರತೆಯನ್ನು ಸೂತಪುತ್ರನಾದ ಕರ್ಣನನ್ನು ಚಿಂತಿಸುತ್ತಾ ನನಗೆ ನಿದ್ರೆಯೇ ಬರುತ್ತಿಲ್ಲ.

ವೈಶಂಪಾಯನಃ

ಏತದ್ ವಚನಮಾಜ್ಞಾಯ ಭೀಮಸೇನೋಽತ್ಯಮರ್ಷಣಃ
ಬಭೂವ ಶಾಂತಿಸಂಯುಕ್ತೋ ಗುರೋರ್ವಚನವಾರಿತಃ ॥೨೨॥

ಈ ಮಾತುಗಳನ್ನು ಕೇಳಿ ಅತ್ಯಂತಕೋಪಗೊಂಡಿದ್ದ ಭೀಮಸೇನನು ಹಿರಿಯನಾದ ಧರ್ಮರಾಜನ ವಚನದಿಂದ ತಡೆಯಲ್ಪಟ್ಟವನಾಗಿ ಶಾಂತಿಯುಕ್ತನಾದನು.

ತಯೋಃ ಸಂವದತೋರೇವಂ ತದಾ ರಾಜನ್ಯಯೋರ್ದ್ವಯೋಃ ।
ಆಜಗಾಮ ಮಹಾಯೋಗೀ ವ್ಯಾಸಃ ಸತ್ಯವತೀಸುತಃ ॥೨೩॥

ಅವರಿಬ್ಬರು ರಾಜರೂ ಹಿಗೆ ಮಾತನಾಡುತ್ತಿರಲು ಆ ವೇಳೆಗೆ ಸರಿಯಾಗಿ ಮಹಾಯೋಗಿಗಳಾದ ಸತ್ಯವತೀಕುಮಾರರಾದ ವೇದವ್ಯಾಸರು ಅಲ್ಲಿಗೆ ಬಂದರು.

ಸೋಽಭಿಗಮ್ಯ ಯಥಾನ್ಯಾಯಂ ಪಾಂಡವೈರಭಿಪೂಜಿತಃ ।
ಯುಧಿಷ್ಠಿರಮಿದಂ ವಾಕ್ಯಮುವಾಚ ವದತಾಂ ವರಃ ॥೨೪॥

ವಾಗ್ಮಿಗಳಲ್ಲಿ ಶ್ರೇಷ್ಠರಾದ ಅವರು ಪಾಂಡವರ ಎದುರಿಗೆ ಬಂದು ಯಥಾಯೋಗ್ಯವಾಗಿ ಪೂಜಿಸಲ್ಪಟ್ಟು ಯುಧಿಷ್ಠಿರನನ್ನುಕುರಿತು ಹೀಗೆ ಮಾತನಾಡಿದರು.

ವ್ಯಾಸಃ

ಯುಧಿಷ್ಠಿರಮಹಾಬಾಹೋ ವೇದ್ಮಿ ತೇ ಹೃದಿ ಮಾನಸಮ್ ।
ಮನೀಷಯಾ ತತಃ ಕ್ಷಿಪ್ರಮಾಗತೋಽಸ್ಮಿ ನರರ್ಷಭ ॥೨೫॥

ಮಹಾಬಾಹುವಾದ ಯುಧಿಷ್ಠಿರನೇ! ನಿನ್ನ ಮನಸ್ಸಿನ ಅಭಿಪ್ರಾಯವನ್ನು ನಾನು ತಿಳಿದಿದ್ದೇನೆ. ನರರ್ಷಭನೇ! ಆದ್ದರಿಂದಲೇ ನನ್ನ ಮನಸ್ಸಿನ ಇಚ್ಛೆಯಿಂದಲೇ ನಾನು ಇಲ್ಲಿಗೆ ಬಂದಿದ್ದೇನೆ.

ಭೀಷ್ಮಾದ್ದ್ರೋಣಾತ್ ಕೃಪಾತ್ ಕರ್ಣಾದ್ ದ್ರೋಣಪುತ್ರಾತ್ ತಥೈವ ಚ ।
ದುರ್ಯೋಧನಾನ್ನೃಪಸುತಾತ್ ತಥಾ ದುಶ್ಶಾಸನಾದಪಿ ॥೨೬॥

ಯತ್ತೇ ಭಯಮಮಿತ್ರಘ್ನ ಹೃದಿ ಸಂಪರಿವರ್ತತೇ ।
ತತ್ತೇ ಪ್ರಶಮಯಿಷ್ಯಾಮಿ ವಿಧಿದೃಷ್ಟೇನ ಹೇತುನಾ ॥೨೭॥

ಎಲೈ ಶತ್ರುನಾಶಕನೇ! ಭೀಷ್ಮರಿಂದ ದ್ರೋಣರಿಂದ ಕೃಪರಿಂದ ಕರ್ಣನಿಂದ ಅಶ್ವತ್ಥಾಮರಿಂದ ಹಾಗೆಯೇ ದುರ್ಯೋಧನನಿಂದ ನಿನ್ನ ಮನಸ್ಸಿನಲ್ಲಿ ಯಾವ ಭಯವಿದೆಯೋ ಅದನ್ನು ಶಾಸ್ತ್ರದೃಷ್ಟವಾದ ಕಾರಣದಿಂದ ನಾಶಗೊಳಿಸುವೆನು.

ತಚ್ಛ್ರುತ್ವಾ ಧೃತಿಮಾಸ್ಥಾಯ ಕರ್ಮಣಾ ಪ್ರತಿಪಾದಯ ।
ಪ್ರತಿಪಾದ್ಯ ತು ರಾಜೇಂದ್ರ ತತಃ ಕ್ಷಿಪ್ರಂ ಜ್ವರಂ ಜಹಿ ॥೨೮॥

ಅದನ್ನು ಕೇಳಿ ಧೈರ್ಯವನ್ನು ಅವಲಂಬಿಸಿ ಅದರಂತೆ ಕರ್ಮವನ್ನು ಅನುಷ್ಠಾನಮಾಡು. ಎಲೈ ರಾಜೇಂದ್ರನೇ! ಹಾಗೆ ಅನುಷ್ಠಾನ ಮಾಡಿ ನಿನ್ನ ಮನೋಜ್ವರವನ್ನು ಶೀಘ್ರವಾಗಿ ನಾಶ ಮಾಡು.

ವೈಶಂಪಾಯನಃ

ತತ ಏಕಾಂತಮಾನೀಯ ಪಾರಾಶರ್ಯೋ ಯುಧಿಷ್ಠಿರಮ್ ।
ಅಬ್ರವೀದುಪಪನ್ನಾರ್ಥಮಿದಂ ವಾಕ್ಯವಿಶಾರದಃ ॥೨೯॥

ಆಗ ಪರಾಶರರ ಮಕ್ಕಳಾದ ವಾಕ್ಯವಿಶಾರದರಾದ ವೇದವ್ಯಾಸರು ಯುಧಿಷ್ಠಿರನನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿ ಆ ಕಾಲಕ್ಕೆ ಉಚಿತವಾದ ಈ ಮಾತನ್ನು ಆಡಿದರು.

ಶ್ರೇಯಸಸ್ತೇऽಪರಃ ಕಾಲಃ ಪ್ರಾಪ್ತೋ ಭರತಸತ್ತಮ ।
ಯೇನಾಭಿಭವಿತಾ ಶತ್ರೂನ್ ರಣೇ ಪಾರ್ಥೋ ಧನಂಜಯಃ ॥೩೦॥

ಎಲೈ ಭರತಸತ್ತಮನೇ! ನಿನಗೆ ಮುಂದಿನ ಶ್ರೇಯಸ್ಸಿನ ಕಾಲವು ಪ್ರಾಪ್ತವಾಗಿದೆ. ಅದರಿಂದ ಪಾರ್ಥನಾದ ಧನಂಜಯನು ಯುದ್ಧದಲ್ಲಿ ಶತ್ರುಗಳನ್ನು ಸೋಲಿಸುವನು.

ಗೃಹಾಣೇಮಾಂ ಮಯಾ ಪ್ರೋಕ್ತಾಂ ಸಿದ್ಧಿಂ ಮೂರ್ತಿಮತೀಮಿವ।
ವಿದ್ಯಾಂ ಪ್ರತಿಸ್ಮೃತಿಂ ನಾಮ ಪ್ರಪನ್ನಾಯ ಬ್ರವೀಮಿ ತೇ ।
ಯಾಮವಾಪ್ಯ ಮಹಾಬಾಹುರರ್ಜುನಃ ಸಾಧಯಿಷ್ಯತಿ ॥೩೧॥

ನಾನು ಕೊಡುವ ಸಿದ್ಧಿಪೂರ್ವಕವಾದ ಶರೀರವನ್ನು ಧರಿಸಿದಂತಿರುವ ಈ ಪ್ರತಿಸ್ಮೃತಿ ಎಂಬ ವಿದ್ಯೆಯನ್ನು ಸ್ವೀಕರಿಸು. ಶರಣಾಗತನಾದ ನಿನಗೆ ಅದನ್ನು ಹೇಳುತ್ತಿದ್ದೇನೆ. ಆ ವಿದ್ಯೆಯನ್ನು ಪಡೆದು ಅರ್ಜುನನು ಎಲ್ಲವನ್ನೂ ಸಾಧಿಸುವನು.

ಅಸ್ತ್ರಹೇತೋರ್ಮಹೇಂದ್ರಂ ಚ ರುದ್ರಂ ಚೈವಾಭಿಗಚ್ಛತು ।
ವರುಣಂ ಚ ಕುಬೇರಂ ಚ ಧರ್ಮರಾಜಂ ಚ ಪಾಂಡವಃ ।
ಶಕ್ತೋ ಹ್ಯೇಷ ಸುರಾನ್ ದ್ರಷ್ಟುಂ ತಪಸಾ ವಿಕ್ರಮೇಣ ಚ ॥೩೨॥

ಅಸ್ತ್ರವನ್ನು ಸಂಪಾದಿಸುವುದಕ್ಕಾಗಿ ಪಾಂಡುಪುತ್ರನಾದ ಅರ್ಜುನನು ರುದ್ರನನ್ನು ವರುಣನನ್ನು ಕುಬೇರನನ್ನು ಮತ್ತು ಯಮನನ್ನು ಉಪಸತ್ತಿಮಾಡಲಿ. ಈ ಅರ್ಜುನನು ತನ್ನ ತಪಸ್ಸು ಮತ್ತು ಪರಾಕ್ರಮಗಳಿಂದ ದೇವತೆಗಳನ್ನು ನೋಡಲು ಸಮರ್ಥನಾದವನು.

ಋಷಿರೇಷ ಮಹಾತೇಜಾ ನಾರಾಯಣಸಹಾಯವಾನ್ ।
ಪುರಾಣಃ ಶಾಶ್ವತೋ ಭೂತಃ ವಿಷ್ಣೋರಂಶಃ ಸನಾತನಃ ॥೩೩॥

ಇವನು ಮಹಾತೇಜಸ್ವಿಯಾದ ನಾರಾಯಣಸಹಾಯವುಳ್ಳ ಪ್ರಾಚೀನನೂ ಮತ್ತು ಶಾಶ್ವತನೂ ಆದ ಋಷಿ. ಇವನು ಸನಾತನನಾದ ವಿಷ್ಣುವಿನ ಅಂಶದಿಂದ ಕೂಡಿದವನಾಗಿದ್ದಾನೆ.

ಅಸ್ತ್ರಾಣೇಂದ್ರಾಚ್ಚ ರುದ್ರಾಚ್ಚ ಲೋಕಪಾಲೇಭ್ಯ ಏವ ಚ ।
ಸಮಾದಾಯ ಮಹಾಬಾಹುರ್ಮಹತ್ ಕರ್ಮ ಕರಿಷ್ಯತಿ ॥೩೪॥

ಮಹಾಬಾಹುವಾದ ಅರ್ಜುನನು ಇಂದ್ರನಿಂದಲೂ ರುದ್ರನಿಂದಲೂ ಲೋಕಪಾಲಕರಿಂದಲೂ ಅಸ್ತ್ರಗಳನ್ನು ಸ್ವೀಕರಿಸಿ ದೊಡ್ಡಕಾರ್ಯವನ್ನು ಎಸಗುವನು.

ವನಾದಸ್ಮಾಚ್ಚ ಕೌಂತೇಯ ವನಮನ್ಯದ್ ವಿಚಿಂತ್ಯತಾಮ್ ।
ನಿವಾಸಾರ್ಥಂ ತು ಯದ್ಯುಕ್ತಂ ಭವೇತ ಪೃಥಿವೀಪತೇ ।
ಏಕತ್ರ ಚಿರವಾಸೋ ಹಿ ನ ಪ್ರೀತಿಜನನೋ ಭವೇತ್ ॥೩೫॥

ಎಲೈ ಕೌಂತೇಯನೇ! ಪೃಥಿವೀಪತಿಯೇ! ಈ ವನವನ್ನು ಬಿಟ್ಟು ನಿವಾಸಾರ್ಥವಾಗಿ ಇನ್ನೊಂದು ಯೋಗ್ಯವಾದ ವನಕ್ಕೆ ಹೋಗುವ ವಿಷಯವನ್ನು ಚಿಂತಿಸು. ಒಂದೇ ಕಡೆಯಲ್ಲಿ ಬಹಳ ಕಾಲವಿದ್ದರೆ ಮನಸ್ಸಿಗೆ ಸಂತೋಷವಾಗುವುದಿಲ್ಲ.

ತಾಪಸಾನಾಂ ಚ ಶಾಂತಾನಾಂ ಭವೇದುದ್ವೇಗಕಾರಕಃ ।
ಮೃಗಾಣಾಮುಪರೋಧಶ್ಚ ವೀರುದೌಷಧಸಂಕ್ಷಯಃ ।
ಬಿಭರ್ಷಿ ಚ ಬಹೂನ್ ವಿಪ್ರಾನ್ ವೇದವೇದಾಂಗಪಾರಗಾನ್ ॥೩೬॥

ನೀನು ವೇದವೇದಾಂಗಪಾರಂಗತರಾದ ಅನೇಕ ಬ್ರಾಹ್ಮಣರನ್ನು ಪೋಷಿಸುತ್ತಿದ್ದೀಯೆ. ಒಂದೇ ಕಡೆಯಲ್ಲಿ ಬಹಳ ಕಾಲವಿರುವುದರಿಂದ ಶಾಂತರಾದ ತಪಸ್ವಿಗಳಿಗೆ ಉದ್ವೇಗ ಉಂಟಾಗುತ್ತದೆ. ಮೃಗಗಳಿಗೆ ಉಪದ್ರವವೂ ಮತ್ತು ಲತೆ ಔಷಧಿಗಳ ವಿನಾಶವೂ ಉಂಟಾಗುತ್ತದೆ.

ಏವಮುಕ್ತ್ವಾ ಪ್ರಪನ್ನಾಯ ಶುಚಯೇ ಭಗವಾನ್ ಪ್ರಭುಃ ।
ಪ್ರಾಹ ಶಸ್ತ್ರಾಸ್ತ್ರತತ್ತ್ವಜ್ಞೋ ಯೋಗೀ ವಿದ್ಯಾಮನುತ್ತಮಾಮ್ ॥೩೭॥

ಹೀಗೆ ಹೇಳಿ ಪ್ರಭುಗಳಾದ ಯೋಗಿಗಳಾದ ಶಸ್ತ್ರಾರ್ಥಗಳನ್ನು ತಿಳಿದ ಭಗವಾನ್ ವ್ಯಾಸರು ಶರಣಾಗತನಾದ ಶುಚಿರ್ಭೂತನಾದ ಧರ್ಮರಾಜನಿಗೆ ಶ್ರೇಷ್ಠವಾದ ವಿದ್ಯೆಯನ್ನು ಉಪದೇಶಮಾಡಿದರು.

ಧರ್ಮರಾಜಸ್ಯ ಧೀಮಾನ್ ಸ ವ್ಯಾಸಃ ಸತ್ಯವತೀಸುತಃ ।
ಅನುಜ್ಞಾಯ ಚ ಕೌಂತೇಯಂ ತತ್ರೈವಾಂತರಧೀಯತ ॥೩೮॥

ಸತ್ಯವತೀ ಸುತರಾದ ವ್ಯಾಸರು ಮೇಧಾವಿಯಾದ ಧರ್ಮರಾಜನಿಗೆ ವಿದ್ಯೆಯನ್ನು ಉಪದೇಶಮಾಡಿ ಧರ್ಮರಾಜನ ಅನುಮತಿಯನ್ನು ಪಡೆದು ಅಲ್ಲಿಯೇ ಅದೃಶ್ಯರಾದರು.

ಯುಧಿಷ್ಠಿರಸ್ತು ಧರ್ಮಾತ್ಮಾ ತದ್ ಬ್ರಹ್ಮ ಮನಸಾ ಯತಃ ।
ಧಾರಯಾಮಾಸ ಮೇಧಾವೀ ಕಾಲೇ ಕಾಲೇ ಸಮಭ್ಯಸನ್ ॥೩೯॥

ಧರ್ಮಾತ್ಮನಾದ ಯುಧಿಷ್ಠಿರನಾದರೂ ಆ ವೇದವಿದ್ಯೆಯನ್ನು ನಿಯಮಪೂರ್ವಕವಾಗಿ ಮನಸ್ಸಿನಲ್ಲಿ ಧರಿಸಿ ಮೇಧಾವಿಯಾದ ಅವನು ಕಾಲಕಾಲಗಳಲ್ಲಿ ಅದನ್ನು ಅಭ್ಯಾಸಮಾಡಿದನು.

ಸ ವ್ಯಾಸವಾಕ್ಯಮುದಿತೋ ವನಾದ್ ದ್ವೈತವನಾತ್ ತತಃ ।
ಯಯೌ ಸರಸ್ವತೀಕೂಲೇ ಕಾಮ್ಯಕಂ ಕಾನನಂ ಮಹತ್ ॥೪೦॥

ವ್ಯಾಸರ ಮಾತುಗಳಿಂದ ಸಂತೋಷಗೊಂಡ ಅವನು ಅನಂತರ ದ್ವೈತವನವನ್ನು ಬಿಟ್ಟು ಸರಸ್ವತೀತೀರದಲ್ಲಿ ಇದ್ದ ಕಾಮ್ಯಕವೆಂಬ ವನಕ್ಕೆ ಹೋದನು.

ತಮನ್ವಯುರ್ಮಹಾರಾಜ ಶಿಕ್ಷಾಕ್ಷರವಿದಸ್ತಥಾ ।
ಬ್ರಾಹ್ಮಣಾಸ್ತಪಸಾ ಯುಕ್ತಾ ದೇವೇಂದ್ರಮೃಷಯೋ ಯಥಾ ॥೪೧॥

ಎಲೈ ಮಹಾರಾಜನೇ! ವೇದವಿದ್ಯೆ ಮತ್ತು ಶಿಕ್ಷಾಶಾಸ್ತ್ರಗಳಲ್ಲಿ ಪರಿಣತರಾದ ತಾಪಸಬ್ರಾಹ್ಮಣರು ದೇವೇಂದ್ರನನ್ನು ಋಷಿಗಳು ಹಿಂಬಾಲಿಸಿದಂತೆ ಅವನನ್ನು ಹಿಂಬಾಲಿಸಿದರು.

ತತಃ ಕಾಮ್ಯಕಮಾಸಾದ್ಯ ಸರ್ವೇ ತೇ ಭರತರ್ಷಭಾಃ ।
ನ್ಯವಸಂತ ಮಹಾತ್ಮಾನಃ ಸಾಮಾತ್ಯಾಃ ಸಪದಾನುಗಾಃ ॥೪೨॥

ಅನಂತರ ಆ ಮಹಾತ್ಮರಾದ ಭರತರ್ಷಭರೆಲ್ಲರೂ ಕಾಮ್ಯಕವನವನ್ನು ಸೇರಿ ತಮ್ಮ ಅಮಾತ್ಯ ಮತ್ತು ಪದಾತಿಗಳೊಂದಿಗೆ ಅಲ್ಲಿ ವಾಸಮಾಡಿದರು.

ತತ್ರ ತೇ ನ್ಯವಸನ್ರಾಜನ್ ಕಂಚಿತ್ ಕಾಲಂ ಮನಸ್ವಿನಃ ।
ಧನುರ್ವೇದಪರಾ ಧೀರಾಃ ಶೃಣ್ವಾನಾ ವೇದಮುತ್ತಮಮ್ ॥೪೩॥

ಎಲೈ ರಾಜನೇ! ಅಲ್ಲಿ ಧೀರರಾದ ಅವರು ಧನುರ್ವಿದ್ಯೆಯನ್ನು ಅಭ್ಯಾಸಮಾಡುತ್ತಾ ಶ್ರೇಷ್ಠವಾದ ವೇದವನ್ನು ಶ್ರವಣಮಾಡುತ್ತಾ ಧೈರ್ಯಶೀಲರಾಗಿ ಸ್ವಲ್ಪಸಮಯದವರೆಗೆ ವಾಸಮಾಡಿದರು.

ಚರಂತೋ ಮೃಗಯಾಂ ನಿತ್ಯಂ ಶುದ್ಧೈರ್ಬಾಣೈರ್ಮೃಗಾರ್ಥಿನಃ ।
ಪಿತೃದೈವತವಿಪ್ರೇಭ್ಯೋ ನಿರ್ವಪಂತೋ ಯಥಾವಿಧಿ ॥೪೪॥

ನಿತ್ಯವೂ ಮೃಗಾರ್ಥಿಗಳಾಗಿ ಶುದ್ಧಬಾಣಗಳಿಂದ ಬೇಟೆಯನ್ನು ಆಡುತ್ತಾ ಶಾಸ್ತ್ರೋಕ್ತರೀತಿಯಲ್ಲಿ ಪಿತೃಗಳಿಗೆ ದೇವತೆಗಳಿಗೆ ಮತ್ತು ವಿಪ್ರರಿಗೆ ಅದನ್ನು ಸಂವಿಭಾಗಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತತಾತ್ಪರ್ಯನಿರ್ಣಯ - ೨೨ನೇ ಅಧ್ಯಾಯ

ಗತೇ ವ್ಯಾಸೇ ಭಗವತಿ ಸರ್ವಜ್ಞೇ ಸರ್ವಕರ್ತರಿ ।
ಧರ್ಮರಾಜೋಽವದನ್ಮಂತ್ರಂ ಫಲ್ಗುನಾಯ ರಹಸ್ಯಮುಂ ॥೧೩೦॥

ಸರ್ವಜ್ಞ ಸರ್ವಕರ್ತರಾದ ಭಗವಾನ್ ವೇದವ್ಯಾಸರು ಹೊರಟು ಹೋದ ಬಳಿಕ ಧರ್ಮರಾಜ ಏಕಾಂತದಲ್ಲಿ ಅರ್ಜುನನಿಗೆ ಆ ಮಂತ್ರವನ್ನು ಉಪದೇಶಿಸಿದ.

ತಮಾಪ್ಯ ಫಲ್ಗುನೋ ಮಂತ್ರಂ ಯಯೌ ಜ್ಯೇಷ್ಠೌ ಪ್ರಣಮ್ಯ ॥೧೩೧॥

ಯಮಜೌ ಚ ಸಮಾಶ್ಲಿಷ್ಯ ಗಿರಿಮೇವೇಂದ್ರಕೀಲಕಂ ॥೧೩೨॥

ತಪಶ್ಚಚಾರ ತತ್ರಸ್ಥಃ ಶಂಕರಸ್ಥಂ ಹರಿಂ ಸ್ಮರನ್ ।
ಷಣ್ಮಾಸೇಽತಿಗತೇಽಪಶ್ಯನ್ಮೂಕಂ ನಾಮಾಸುರಂ ಗಿರೌ ॥೧೩೩॥

ಅರ್ಜುನ ಮಂತ್ರೋಪದೇಶ ಪಡೆದು ಅಣ್ಣಮ್ಮಿರನ್ನು ನಮಿಸಿ ನಕುಲ ಸಹದೇವರನ್ನೂ ಆಲಿಂಗಿಸಿ ಇಂದ್ರಕೀಲಕಪರ್ವತಕ್ಕೆ ಹೋದ. ಅಲ್ಲಿದ್ದು ಶಿವಾಂತರ್ಗತನಾದ ಹರಿಯನ್ನು ಸ್ಮರಿಸುತ್ತ ತಪಸ್ಸು ಮಾಡಿದ. ಆರು ತಿಂಗಳು ಕಳೆದಾಗ ಮೂಕನೆಂಬ ಅಸುರನನ್ನು ಬೆಟ್ಟದಲ್ಲಿ ಕಂಡ.

ವರಾಹರೂಪಮಾಯಾತಂ ವಧಾರ್ಥಂ ಫಲ್ಗುನಸ್ಯ ಚ ।
ತಂ ಜ್ಞಾತ್ವಾ ಫಲ್ಗುನೋ ವೀರಃ ಸಜ್ಯಂ ಕೃತ್ವಾ ಚ ಗಾಂಡಿವಂ ॥೧೩೪॥

ಚಿಕ್ಷೇಪ ವಜ್ರಸಮಿತಾಂಸ್ತತ್ಕಾಯೇ ಸಾಯಕಾನ್‌ಬಹೂನ್ ॥೧೩೫॥

ಹಂದಿಯ ರೂಪತಾಳಿ ಅರ್ಜುನನನ್ನು ಕೊಲ್ಲಲು ಬರುತ್ತಿದ್ದ ಮೂಕಾಸುರನನ್ನು ವೀರ ಅರ್ಜುನ ನೋಡಿ ಗಾಂಡೀವವನ್ನು ಹೆದೆಯೇರಿಸಿ ವಜ್ರಸಮಾನವಾದ ಅನೇಕ ಬಾಣಗಳನ್ನು ಅವನ ಮೈಮೇಲೆ ಎಸೆದ.

ಕಿರಾತರೂಪಸ್ತಮನು ಸಭಾರ್ಯಶ್ಚ ತ್ರಿಯಂಬಕಃ ।
ಸ ಮಮಾರ ಹತಸ್ತಾಭ್ಯಾಂ ದಾನವಃ ಪಾಪಚೇತನಃ ॥೧೩೬॥

ಶಿವನೂ ಪಾರ್ವತೀಸಮೇತ ಕಿರಾತರೂಪನಾಗಿ ಬಂದು ಆ ಅಸುರನನ್ನು ಬೆನ್ನಟ್ಟಿದ. ಪಾಪಿ ಚೇತನನಾದ ಆ ದಾನವ ಇಬ್ಬರಿಂದಲೂ ಹೊಡೆಸಿಕೊಂಡು ಪ್ರಾಣಬಿಟ್ಟ.

ತೇನೋಕ್ತೋಽಸೌ ಮಯೈವಾಯಂ ವರಾಹೋಽನುಗತೋಽದ್ಯ ಹಿ ।
ತಮವಿಧ್ಯೋ ಯತಸ್ತ್ವಂ ಹಿ ತದ್ ಯುಧ್ಯಸ್ವ ಮಯಾ ಸಹ ॥೧೩೭॥

ಶಿವ ಅರ್ಜುನನಿಗೆ ಹೇಳಿದ, 'ನಾನು ಬೆನ್ನಟ್ಟಿದ್ದ ಹಂದಿಯನ್ನು ನೀನು ಹೊಡೆದಿರುವುದರಿಂದ ನನ್ನೊಂದಿಗೆ ಯುದ್ಧಮಾಡು' ಎಂದು.

ಇತ್ಯುಕ್ತಃ ಫಲ್ಗುನಃ ಪ್ರಾಹ ತಿಷ್ಠತಿಷ್ಠ ನ ಮೋಕ್ಷ್ಯಸೇ ।
ಇತ್ಯುಕ್ತ್ವಾ ತಾವುಭೌ ಯುದ್ಧಂ ಚಕ್ರತುಃ ಪುರುಷರ್ಷಭೌ ॥೧೩೮॥

ಶಿವ ಹೀಗೆ ಹೇಳಿದಾಗ ಅರ್ಜುನನೆಂದ 'ನಿಲ್ಲುನಿಲ್ಲುನಾನು ನಿನ್ನನ್ನು ಬಿಡುವುದಿಲ್ಲ. ಹೀಗೆ ಮಹಾಪುರುಷರಾದ ಅವರಿಬ್ಬರೂ ಹೇಳುತ್ತ ಯುದ್ಧ ಮಾಡಿದರು.

ತತ್ರಾಖಿಲಾನಿ ಶಸ್ತ್ರಾಣಿ ಫಲ್ಗುನಸ್ಯಾಗ್ರಸಚ್ಛಿವಃ ।
ತತೋಽರ್ಜುನಸ್ತು ಗಾಂಡೀವಂ ಸಮಾದಾಯಾಭ್ಯತಾಡಯತ್ ॥೧೩೯॥

ಆಗ ಅರ್ಜುನನ ಎಲ್ಲ ಬಾಣಗಳನ್ನೂ ಶಿವ ನುಂಗಿದ. ಬಳಿಕ ಅರ್ಜುನ ಗಾಂಡೀವವನ್ನೆತ್ತಿ ಹೊಡೆದ.

ತದಪ್ಯಗ್ರಸದೇವಾಸೌ ಪ್ರಹಸನ್‌ಗಿರಿತಸ್ತದಾ ।
ಬಾಹುಯುದ್ಧಂ ತತಸ್ತಾ ಸ್ತೀತ್‌ತಯೋಃ ಪುರುಷಸಿಂಹಯೋಃ ॥೧೪೦॥

ಆಗ ಶಿವ ನಗುತ್ತ ಗಾಂಡೀವವನ್ನೂ ನುಂಗಿಬಿಟ್ಟ. ಬಳಿಕ ಆ ಪುರುಷ ಸಿಂಹರೊಳಗೆ ಬಾಹುಯುದ್ಧ ನಡೆಯಿತು.

ಪಿಂಡೀಕೃತ್ಯ ತತೋ ರುದ್ರಶ್ಚಿಕ್ಷೇಪ ಚ ಧನಂಜಯಂ ।
ಮೂರ್ಚ್ಛಾಮವಾಪ ಮಹತೀಂ ಫಲ್ಗುನೋ ರುದ್ರಪೀಡಿತಃ ॥೧೪೧॥

ಶಿವ ಅರ್ಜುನನನ್ನು ಮುದ್ದೆ ಮಾಡಿ ಎಸೆದ. ಶಿವನಿಂದ ಹೀಗೆ ಪೀಡಿತನಾದ ಅರ್ಜುನ ಗಾಢವಾದ ಮೂರ್ಛೆಯನ್ನು ಹೊಂದಿದ.

ಪೂರ್ವಂ ಸಂಪ್ರಾರ್ಥಯಾಮಾಸ ಶಂಕರೋ ಗರುಡಧ್ವಜಂ ।
ಅವರಾಣಾಂ ವರಂ ಮತ್ತೋ ಯೇಷಾಂ ತ್ವಂ ಸಂಪ್ರಯಚ್ಛಸಿ ॥೧೪೨॥

ಅಜೇಯತ್ವಂ ಪ್ರಸಾದಾತ್ತೇ ವಿಜೇಯಾಃ ಸ್ಯುರ್ಮಯಾಪಿ ತೇ ।
ಇತ್ಯುಕ್ತಃ ಪ್ರದದೌ ವಿಷ್ಣುರುಮಾಧೀಶಾಯ ತಂ ವರಃ ।
ತೇನಾಜಯಚ್ಛ್ವೇತವಾಹಂ ಗಿರಿಶೋ ರಣಮಧ್ಯಗಂ ॥೧೪೩॥

ಹಿಂದೆ ಶಿವ ಹರಿಯನ್ನು ಬೇಡಿದ್ದ 'ನನಗಿಂತ ಕೆಳಗಿನವರಿಗೆ ಯಾರಿಗೆ ನೀನು ಅಜೇಯತ್ವ ವರವನ್ನು ಕೊಡುವಿಯೋ ಅವರು ನಿನ್ನ ಅನುಗ್ರಹದಿಂದ ನನಗೆ ಸೋಲುವಂತಾಗಬೇಕು' ಎಂದು. ಶಿವ ಹೀಗೆ ಹೇಳಿದಾಗ ವಿಷ್ಣು ಆಗಲಿ ಎಂದು ಶಿವನಿಗೆ ಆ ವರ ನೀಡಿದ್ದ. ಅದರಿಂದ ಶಿವ ಅರ್ಜುನನನ್ನು ರಣರಂಗ ಮಧ್ಯದಲ್ಲಿ ಪರಾಭವಗೊಳಿಸಿದ.

ಕೇವಲಾನ್ ವೈಷ್ಣವಾನ್ ಮಂತ್ರಾನ್ ವ್ಯಾಸಃ ಪಾರ್ಥಾಯ ನೋ ದದೌ।
ಏತಾವತಾಲಂ ಭೀಷ್ಮಾದೇರ್ಜಯಾರ್ಥಮಿತಿ ಚಿದ್ಘನಃ ॥೧೪೪॥

ಚಿನ್ಮಯನಾದ ವೇದವ್ಯಾಸರು ಕೇವಲ ವೈಷ್ಣವ ಮಂತ್ರಗಳನ್ನು ಅರ್ಜುನನಿಗೆ ಕೊಡಲಿಲ್ಲ. ಭೀಷ್ಮಾದಿಗಳನ್ನು ಗೆಲ್ಲಲು ಇಷ್ಟು ಸಾಕು ಎಂದು.

ಕೇವಲೈರ್ವೈಷ್ಣವೈರ್ಮಂತ್ರೈಸ್ತದತ್ತೈರ್ವಿಜಯಾವಹೈಃ ।
ಅತಿವೃದ್ಧಸ್ಯ ಪಾರ್ಥಸ್ಯ ದರ್ಪಃ ಸ್ಯಾದಿತಿ ಚಿಂತಯನ್ ॥೧೪೫॥

ವಿಜಯದಾಯಕವಾದ ಕೇವಲ ವೈಷ್ಣವ ಮಂತ್ರವನ್ನು ಕೊಟ್ಟರೆ ಅರ್ಜುನ ಅತಿ ಬಲಿಷ್ಠನಾಗುತ್ತಾನೆ. ಅದರಿಂದ ಅವನಿಗೆ ಅಹಂಕಾರ ಬಂದೀತೆಂದು ವೇದವ್ಯಾಸರು ಆಲೋಚಿಸಿದ್ದರು.

ಪಾರ್ಥಃ ಸಂಜ್ಞಾಮವಾಪ್ಯಾಥ ಜಯಾರ್ಥ್ಯಾರಾಧಯಚ್ಛಿವಂ ।
ವ್ಯಾಸೋದಿತೇನ ಮಂತ್ರೇಣ ತಾನಿ ಪುಷ್ಪಾಣಿ ತಚ್ಛಿರಃ ॥೧೪೬॥

ಆರುಹನ್ಸ ತು ತಂ ಜ್ಞಾತ್ವಾ ರುದ್ರ ಇತ್ಯೇವ ಫಲ್ಗುನಃ ।
ನಮಶ್ಚಕ್ರೇ ತತಃ ಪ್ರಾದಾದಸ್ತ್ರಂ ಪಾಶುಪತಂ ಶಿವಃ ॥೧೪೭॥

ಅರ್ಜುನ ಮೂರ್ಛೆ ತಿಳಿದೆದ್ದು ಯುದ್ಧದಲ್ಲಿ ಜಯವಾಗಬೇಕೆಂದು ಬಯಸಿ ವ್ಯಾಸರು ಕೊಟ್ಟ ಮಂತ್ರದಿಂದಲೆ ಶಿವನನ್ನು ಆರಾಧಿಸಿದ. ಆಗ ಅವನು ಲಿಂಗದ

ಮೇಲೇರಿಸಿದ ಹೂಗಳು ಕಿರಾತನ ತಲೆಯನ್ನೇರಿದುವು. ಅದನ್ನು ನೋಡಿ ಕಿರಾತನನ್ನು ಶಿವನೇ ಎಂದು ತಿಳಿದು ಅರ್ಜುನ ನಮಸ್ಕರಿಸಿದ. ಆಗ ಶಿವ ಪಾಶುಪತಾಸ್ತ್ರವನ್ನು ಅರ್ಜುನನಿಗೆ ನೀಡಿದ.

ಅಸ್ತ್ರಂ ತದ್ವೈಷ್ಣುದೈವತ್ಯಂ ಸಾಧಿತಂ ಶಂಕರೇಣ ಯತ್ ।
ತಸ್ಮಾತ್ಪಾಶುಪತಂ ನಾಮ ಸ್ವಾನ್ಯಸ್ತ್ರಾಣ್ಯಪರೇ ಸುರಾಃ ।
ದದುಸ್ತದೈವ ಪಾರ್ಥಾಯ ಸರ್ವೇ ಪ್ರತ್ಯಕ್ಷಗೋಚರಾಃ ॥೧೪೮॥

ಆ ಪಾಶುಪತಾಸ್ತ್ರ ವಿಷ್ಣುದೇವತಾಕವೆ. ಶಿವನಿಂದ ಪಶುಪತಿಯಿಂದ ಸಾಧಿತವಾದುದರಿಂದ ಪಾಶುಪತ ಎಂದು ಹೆಸರು. ಬಳಿಕ ಎಲ್ಲ ಬೇರೆ ದೇವತೆಗಳೂ ಆಗಲೇ ಪ್ರತ್ಯಕ್ಷರಾಗಿ ತಮ್ಮ ಅಸ್ತ್ರಗಳನ್ನು ಅರ್ಜುನನಿಗೆ ನೀಡಿದರು.

★ ★ ★ ★

## ಮೂವತ್ತನಾಲ್ಕನೆಯ ಅಧ್ಯಾಯ

(ಬಂಧುಗಳನ್ನು ವಂದಿಸಿ ಅರ್ಜುನನ ಇಂದ್ರಕೀಲಪರ್ವತ ಗಮನ ಮತ್ತು ಇಂದ್ರನ ಜೊತೆಯಲ್ಲಿ ಸಂವಾದ)

ವೈಶಂಪಾಯನಃ

ಕಸ್ಯಚಿತ್ತ್ವಥ ಕಾಲಸ್ಯ ಧರ್ಮರಾಜೋ ಯುಧಿಷ್ಠಿರಃ ।
ಸಂಸ್ಮೃತ್ಯ ಮುನಿಸಂದೇಶಮಿದಂ ವಚನಮಬ್ರವೀತ್ ॥೧॥

ವಿವಿಕ್ತೇ ವಿದಿತಪ್ರಜ್ಞಮರ್ಜುನಂ ಪುರುಷರ್ಷಭಮ್ ।
ಸಾಂತ್ವಪೂರ್ಣಂ ಸ್ಮಿತಂ ಕೃತ್ವಾ ಪಾಣಿನಾ ಪರಿಸಂಸ್ಪೃಶನ್ ॥೨॥

ಸ್ವಲ್ಪಕಾಲವು ಕಳೆದಮೇಲೆ ಧರ್ಮರಾಜನಾದ ಯುಧಿಷ್ಠಿರನು ವೇದವ್ಯಾಸರ ಸಂದೇಶವನ್ನು ಸ್ಮರಿಸಿ ಏಕಾಂತಪ್ರದೇಶದಲ್ಲಿ ಪ್ರಾಜ್ಞನಾದ ಪುರುಷರ್ಷಭನಾದ ಅರ್ಜುನನನ್ನು ಕರೆದು ಮುಗುಳುನಗುತ್ತಾ ಅವನ ಕೈಯನ್ನು ಹಿಡಿದು ಸಮಾಧಾನಪೂರ್ವಕವಾಗಿ ಈ ಮಾತುಗಳನ್ನು ಆಡಿದನು.

ಸ ಮುಹೂರ್ತಮಿವ ಧ್ಯಾತ್ವಾ ವನವಾಸಮರಿಂದಮಃ ।
ಧನಂಜಯಂ ಧರ್ಮರಾಜೋ ರಹಸೀದಮುವಾಚ ಹ ॥೩॥

ಅರಿಂದಮನಾದ ಧರ್ಮರಾಜನು ಒಂದು ಮುಹೂರ್ತಕಾಲ ಚಿಂತಿಸಿ ಏಕಾಂತದಲ್ಲಿ ಅರ್ಜುನನನ್ನು ಕುರಿತು. ಹೀಗೆ ಮಾತನಾಡಿದನು.

ಭೀಷ್ಮೇ ದ್ರೋಣೇ ಕೃಪೇ ಕರ್ಣೇ ದ್ರೋಣಪುತ್ರೇ ಚ ಭಾರತ ।
ಧನುರ್ವೇದಶ್ಚತುಷ್ಪಾದ ಏತೇಷ್ವದ್ಯ ಪ್ರತಿಷ್ಠಿತಃ ॥೪॥

ಎಲೈ ಭಾರತನೇ! ನಾಲ್ಕುಪಾದಗಳುಳ್ಳ ಧನುರ್ವೇದವು ಈದಿನ ಭೀಷ್ಮರಲ್ಲಿ ದ್ರೋಣರಲ್ಲಿ ಕೃಪರಲ್ಲಿ ಅಶ್ವತ್ಥಾಮರಲ್ಲಿ ಮತ್ತು ಕರ್ಣನಲ್ಲಿ ಪ್ರತಿಷ್ಠಿತವಾಗಿದೆ.

ಬ್ರಾಹ್ಮಂ ದೈವಂ ಚಾಸುರಂ ಚ ಸಪ್ರಯೋಗಚಿಕಿತ್ಸಿತಮ್ ।
ಸರ್ವಾಸ್ತ್ರಾಣಾಂ ಪ್ರಯೋಗಂ ಚ ತೇ ವಿಜಾನಂತಿ ಕೃತ್ಸ್ನಶಃ ॥೫॥

ಅವರು ಬ್ರಾಹ್ಮಣಸಂಬಂಧಿಯಾದ ದೈವಸಂಬಂಧಿಯಾದ ಅಸುರಸಂಬಂಧಿಯಾದ ಎಲ್ಲಾ ವಿದ್ಯೆಗಳನ್ನೂ ಮತ್ತು ಆ ವಿದ್ಯೆಗಳ ನಿವಾರಣೋಪಾಯವನ್ನೂ ಮತ್ತು ಎಲ್ಲಾ ಅಸ್ತ್ರಗಳ ಪ್ರಯೋಗವನ್ನೂ ಸಮಗ್ರವಾಗಿ ತಿಳಿದಿದ್ದಾರೆ.

ತೇ ಸರ್ವೇ ಧೃತರಾಷ್ಟ್ರಸ್ಯ ಪುತ್ರೇಣ ಪರಿಸಾಂತ್ವಿತಾಃ ।
ಸಂವಿಭಕ್ತಾಶ್ಚ ತುಷ್ಟಾಶ್ಚ ಗುರುವಚ್ಚೈಷು ವರ್ತತೇ ॥೬॥

ಅವರೆಲ್ಲರೂ ಧೃತರಾಷ್ಟ್ರಪುತ್ರರಿಂದ ಸಮ್ಮಾನಿಸಲ್ಪಟ್ಟಿದ್ದಾರೆ. ಆವನಿಂದ ಬೇಕಾದಷ್ಟು ಧನವನ್ನು ಹೊಂದಿ ಸಂತುಷ್ಟರಾಗಿದ್ದಾರೆ. ದುರ್ಯೋಧನನು ಅವರಲ್ಲಿ ಗುರುಗಳಂತೆ ನಡೆದುಕೊಳ್ಳುತ್ತಾನೆ.

ಸರ್ವಯೋಧೇಷು ಚೈವಾಸ್ಯ ಸಮಾ ವೃತ್ತಿರನುತ್ತಮಾ ।
ಶಕ್ತಿಂ ನ ಹಾಪಯಿಷ್ಯಂತಿ ತೇ ಕಾಲೇ ಪ್ರತಿಪೂಜಿತಾಃ ॥೭॥

ದುರ್ಯೋಧನನು ಎಲ್ಲಾ ಯೋಧರಲ್ಲಿಯೂ ಯಾವಾಗಲೂ ಶ್ರೇಷ್ಠವಾದ ಸಮಾನವಾದ ವರ್ತನೆಯನ್ನು ಹೊಂದಿದ್ದಾನೆ. ಹೀಗೆ ಸಮ್ಮಾನಿಸಲ್ಪಟ್ಟ ಅವರು ಯೋಗ್ಯವಾದ ಕಾಲದಲ್ಲಿ ತಮ್ಮ ಶಕ್ತಿಯನ್ನು ಕಳೆದು ಕೊಳ್ಳುವುದಿಲ್ಲ.

ಅದ್ಯ ಚೇಯಂ ಮಹೀ ಕೃತ್ಸ್ನಾ ದುರ್ಯೋಧನವಶಾನುಗಾ ।
ತ್ವಯಿ ವ್ಯಪಾಶ್ರಯೋಽಸ್ಮಾಕಂ ತ್ವಯಿ ಭಾರಃ ಸಮಾಹಿತಃ ॥೮॥

ಈ ದಿನ ಸಮಗ್ರವಾದ ಭೂಮಿಯು ದುರ್ಯೋಧನನ ವಶವಾಗಿದೆ. ನಮಗೆ ನಿನ್ನನ್ನು ಬಿಟ್ಟು ಬೇರೆ ಆಶ್ರಯವಿಲ್ಲ. ನಮ್ಮ ಜವಾಬ್ದಾರಿಯೆಲ್ಲಾ ನಿನ್ನ ಭುಜದ ಮೇಲಿದೆ.

ತತ್ರ ಕೃತ್ಯಂ ಪ್ರಪಶ್ಯಾಮಿ ಪ್ರಾಪ್ತಕಾಲಮರಿಂದಮ ।
ಕೃಷ್ಣದ್ವೈಪಾಯನಾತ್ ತಾತ ಗೃಹೀತೋಪನಿಷನ್ಮಯಾ ॥೯॥

ಅರಿಂದಮನೇ! ಆದಕ್ಕೆ ಯೋಗ್ಯವಾದ ಈ ಕಾಲದಲ್ಲಿ ಮಾಡಬೇಕಾದ ಕರ್ತವ್ಯವನ್ನು ನಾನು ಕಾಣುತ್ತಿದ್ದೇನೆ. ಪ್ರೀತಿಪಾತ್ರನೇ! ನಾನು ಕೃಷ್ಣದ್ವೈಪಾಯನರಿಂದ ಮಂತ್ರವನ್ನು ಸ್ವೀಕರಿಸಿದ್ದೇನೆ.

ತಯಾ ಪ್ರಯುಕ್ತಯಾ ಸಮ್ಯಕ್ ಜಗತ್ ಸರ್ವಂ ಪ್ರಕಾಶತೇ ।
ತೇನ ತ್ವಂ ಬ್ರಹ್ಮಣಾ ತಾತ ಸಂಯುಕ್ತಃ ಸುಸಮಾಹಿತಃ ॥೧೦॥

ದೇವತಾನಾಂ ಯಥಾಕಾಲಂ ಪ್ರಸಾದಂ ಪ್ರತಿಪಾಲಯನ್ ।
ತಪಸಾ ಯೋಜಯಾತ್ಮಾನಮುಗ್ರೇಣ ಭರತರ್ಷಭ ॥೧೧॥

ಅದನ್ನು ಚೆನ್ನಾಗಿ ಪ್ರಯೋಗಮಾಡಿದರೆ ಜಗತ್ತೆಲ್ಲವೂ ತಿಳಿಯುತ್ತದೆ. ಎಲೈ ಪ್ರೀತಿಪಾತ್ರನೇ! ಭರತರ್ಷಭನೇ! ಆ ಮಂತ್ರವನ್ನು ಸ್ವೀಕರಿಸಿ ಯೋಗ್ಯವಾದ ಕಾಲದಲ್ಲಿ ಉಂಟಾಗುವ ದೇವತೆಗಳ ಅನುಗ್ರಹವನ್ನು ನಿರೀಕ್ಷಿಸುತ್ತಾ ಸಮಧಾನಗೊಂಡ ಮನಸ್ಸಿನಿಂದ ಉಗ್ರವಾದ ತಪಸ್ಸನ್ನು ಆಚರಿಸು.

ಧನುಷ್ಮಾನ್ ಕವಚೀ ಖಡ್ಗೀ ಮುನಿಃ ಸಾರಸಮನ್ವಿತಃ ।
ನ ಕಸ್ಯಚಿದ್ ದದನ್ ಮಾರ್ಗಂ ಗಚ್ಛ ತಾತೋತ್ತರಾಂ ದಿಶಮ್ ॥೧೨॥

ಧನುಸ್ಸನ್ನು ಹಿಡಿದು ಕವಚವನ್ನು ಧರಿಸಿ ಕೈಯಲ್ಲಿ ಖಡ್ಗವನ್ನು ಹಿಡಿದು ಮೌನವಾಗಿ ಬಲವನ್ನು ಹೊಂದಿದವನಾಗಿ ಯಾರಿಗೂ ದಾರಿಯನ್ನು ಬಿಡದೆ ಉತ್ತರದಿಕ್ಕಿಗೆ ಪ್ರಯಾಣಮಾಡು.

ಇಂದ್ರೋ ಹ್ಯಸ್ತ್ರಾಣಿ ದಿವ್ಯಾನಿ ಸಮಸ್ತಾನಿ ಧನಂಜಯ ।
ವೃತ್ರಾದ್ ಭೀತೈಃ ಪುರಾ ದೇವೈರ್ಬಲಮಿಂದ್ರೇ ಸಮರ್ಪಿತಮ್ ॥೧೩॥

ಧನಂಜಯನೇ! ಇಂದ್ರನಲ್ಲಿ ಎಲ್ಲಾ ದಿವ್ಯಾಸ್ತ್ರಗಳೂ ಇವೆ. ಮತ್ತು ಹಿಂದೆ ವೃತ್ರನಿಗೆ ಹೆದರಿದ ದೇವತೆಗಳು ತಮ್ಮ ಬಲವನ್ನು (ಮತ್ತು ಅಸ್ತ್ರವನ್ನು) ಇಂದ್ರನಿಗೆ ಕೊಟ್ಟಿದ್ದಾರೆ.

ತಾನ್ಯೇಕಸ್ಥಾನಿ ಸರ್ವಾಣಿ ತತಸ್ತ್ವಂ ಪ್ರತಿಪತ್ಸ್ಯಸೇ ।
ಅನೇನ ಬ್ರಹ್ಮಣಾ ತಾತ ಸರ್ವಂ ಸಂಪ್ರತಿಪದ್ಯತೇ ॥೧೪॥

ಪ್ರೀತಿಪಾತ್ರನೇ! ನೀನು ಆ ಎಲ್ಲಾ ಅಸ್ತ್ರಗಳನ್ನೂ ಒಂದೇ ಕಡೆಯಲ್ಲಿ ಇಂದ್ರನಿಂದ ಪಡೆಯುತ್ತೀಯೆ. ಈ ಮಂತ್ರದಿಂದ ಎಲ್ಲವೂ ಕೈಗೂಡುತ್ತದೆ.

ಶಕ್ರಮೇವ ಪ್ರಪದ್ಯಸ್ವ ಸ ತೇಽಸ್ತ್ರಾಣಿ ಪ್ರದಾಸ್ಯತಿ ।
ದೀಕ್ಷಿತೋಽದ್ಯೈವ ಗಚ್ಛ ತ್ವಂ ದ್ರಷ್ಟುಂ ದೇವಂ ಪುರಂದರಮ್ ॥೧೫॥

ಇಂದ್ರನಿಗೆ ಶರಣಾಗು. ಅವನು ನಿನಗೆ ಅಸ್ತ್ರಗಳನ್ನು ಕೊಡುವನು. ಇಂದೇ ದೀಕ್ಷಿತನಾಗಿ ಆ ಇಂದ್ರದೇವನನ್ನು ನೋಡಲು ಹೊರಡು.

ಏವಮುಕ್ತ್ವಾ ಧರ್ಮರಾಜಃ ತಮಧ್ಯಾಪಯತ ಪ್ರಭುಃ ।
ದೀಕ್ಷಿತಂ ವಿಧಿನಾ ತೇನ ಯತವಾಕ್ಕಾಯಮಾನಸಮ್ ॥೧೬॥

ಹೀಗೆ ಹೇಳಿ ಪ್ರಭುವಾದ ಧರ್ಮರಾಜನು ಮನೋವಾಕ್‌ಕಾಯ- ನಿಯಮವನ್ನು ಹೊಂದಿದ್ದ ದೀಕ್ಷಿತನಾದ ಅರ್ಜುನನಿಗೆ ಶಾಸ್ತ್ರವಿಧಿಯಂತೆ ಮಂತ್ರೋಪದೇಶವನ್ನು ಮಾಡಿದನು.

ಅನುಜಜ್ಞೇ ತತೋ ವೀರೋ ಭ್ರಾತಾ ಭ್ರಾತರಮಗ್ರಜಃ ।
ನಿದೇಶಾದ್ ಧರ್ಮರಾಜಸ್ಯ ದ್ರಷ್ಟುಕಾಮಂ ಪುರಂದರಮ್ ॥೧೭॥

ತನ್ನ ಅಪೇಕ್ಷೆಯಂತೆ ಇಂದ್ರನನ್ನು ನೋಡಲು ಹೊರಟ ತಮ್ಮನಾದ ಅರ್ಜುನನಿಗೆ ವೀರನಾದ ಧರ್ಮರಾಜನು ಅನುಮತಿಯನ್ನು ನೀಡಿದನು.

ಧನುರ್ಗಾಂಡೀವಮಾದಾಯ ತಥಾಽಕ್ಷಯ್ಯೌ ಮಹೇಷುಧೀ ।
ಕವಚೀ ಸತಲತ್ರಾಣಃ ಖಡ್ಗಗೋಧಾಂಗುಲಿತ್ರವಾನ್ ॥೧೮॥

ಹುತ್ವಾಗ್ನಿಂ ಬ್ರಾಹ್ಮಣಾನ್ ನಿಷ್ಕೈಃ ಸ್ಪೃಷ್ಟಿ ವಾಚ್ಯ ಮಹಾಭುಜಃ ।
ಪ್ರಾತಿಷ್ಠತ ಮಹಾಬಾಹುಃ ಪ್ರಗೃಹೀತಶರಾಸನಃ ।
ವಧಾಯ ಧಾರ್ತರಾಷ್ಟ್ರಾಣಾಂ ನಿಃಶಸ್ಯೋರ್ದ್ವಮುದೀಕ್ಷ್ಯ ಚ ॥೧೯॥

ಮಹಾಬಾಹುವಾದ ಅರ್ಜುನನು ಗಾಂಡೀವಧನುಸ್ಸನ್ನೂ ಹಾಗೆಯೇ ಅಕ್ಷಯ ಬತ್ತಳಿಕೆಗಳನ್ನೂ ತೆಗೆದುಕೊಂಡು ಕವಚವನ್ನೂ ಹಸ್ತರಕ್ಷಣೆಗಳನ್ನೂ ಧರಿಸಿ ಖಡ್ಗವನ್ನೂ ಗೋಧದ ಚರ್ಮದಿಂದ ಮಾಡಿದ ಅಂಗುಲಿತ್ರಾಣಗಳನ್ನೂ ಧರಿಸಿ ಅಗ್ನಿಯಲ್ಲಿ ಹೋಮವನ್ನು ಮಾಡಿ ಬ್ರಾಹ್ಮಣರಿಗೆ ಹಿರಣ್ಯದಾನವನ್ನು ಕೊಟ್ಟು ಅವರಿಂದ ಮಂಗಳ ಆಶೀರ್ವಾದವನ್ನು ಪಡೆದು ಮಹಾಭುಜನಾದ ಅವನು ಬಿಲ್ಲನ್ನು ಹಿಡಿದು ನಿಟ್ಟುಸಿರನ್ನು ಬಿಟ್ಟು ಮೇಲ್‌ಮುಖವಾಗಿ ನೋಡಿ ದುರ್ಯೋಧನಾದಿಗಳ ವಧೆಯನ್ನು ಉದ್ದೇಶಿಸಿ ಹೊರಟನು.

ತಂ ದೃಷ್ಟ್ವಾ ತತ್ರ ಕೌಂತೇಯಂ ಪ್ರಗೃಹೀತಶರಾಸನಮ್ ।
ಅಬ್ರುವನ್ ಬ್ರಾಹ್ಮಣಾಃ ಸಿದ್ಧಾ ಭೂತಾನ್ಯಂತರ್ಹಿತಾನಿ ಚ ।
ಸಿದ್ಧಚಾರಣಸಂಘಾಶ್ಚ ಗಂಧರ್ವಾಶ್ಚ ತಮಬ್ರುವನ್ ॥೨೦॥

ಕುಂತೀಪುತ್ರನಾದ ಅರ್ಜುನನು ಕೈಯಲ್ಲಿ ಧನುಸ್ಸನ್ನು ಹಿಡಿದಿದ್ದನ್ನು ನೋಡಿ ಬ್ರಾಹ್ಮಣರೂ ಸಿದ್ಧರೂ ಅದೃಷ್ಟವಾದ ಭೂತಗಳೂ ಸಿದ್ಧಚಾರಣಸಂಘಗಳೂ ಮತ್ತು ಗಂಧರ್ವರೂ ಅವನನ್ನು ಕುರಿತು ಹೇಳಿದರು.

ಸ್ಪೃಷ್ಟಿ ವ್ರತಮುಪಾದತ್ಸ್ವ ಸಂಕಲ್ಪಸ್ತವ ಸಿದ್ಧ್ಯತಾಮ್ ।
ಮನೋರಥಾಶ್ಚ ತೇ ಸರ್ವೇ ಸಮೃದ್ಧ್ಯಂತಾಂ ಮಹಾರಥ ॥೨೧॥

ಮಹಾರಥನೇ! ನಿನಗೆ ಮಂಗಳವಾಗಲಿ. ವ್ರತವನ್ನು ಅನುಷ್ಠಾನಮಾಡು. ನಿನ್ನ ಸಂಕಲ್ಪವೂ ಮತ್ತು ಎಲ್ಲಾ ಮನೋರಥಗಳೂ ಸಿದ್ಧಿಸಲಿ.

ಏವಮುಕ್ತೋಽಭಿವಾದ್ಯೈತಾನ್ ಕೃತಾಂಜಲಿಪುಟಸ್ತಥಾ ।
ತಪೋಯೋಗಮನಾಃ ಪಾರ್ಥಃ ಪುರೋಹಿತಮವಂದತ ॥೨೨॥

ಹೀಗೆ ಹೇಳಲ್ಪಟ್ಟ ಅರ್ಜುನನು ಕೈಗಳನ್ನು ಮುಗಿದು ಅವರಿಗೆ ನಮಸ್ಕರಿಸಿ ತಪೋಯೋಗಗಳಲ್ಲಿ ಮನಸ್ಸುಳ್ಳವನಾಗಿ ಪುರೋಹಿತರಾದ ಧೌಮ್ಯರಿಗೆ ನಮಸ್ಕಾರವನ್ನು ಮಾಡಿದನು.

ತತಃ ಪ್ರೀತಮನಾ ಜಿಷ್ಣುಃ ತಾವುಭಾವಭ್ಯವಂದತ ।
ಸಹೋದರಾವತಿರಥೌ ಯುಧಿಷ್ಠಿರವೃಕೋದರೌ ॥೨೩॥

ಅನಂತರ ಸಂತೋಷಗೊಂಡ ಅರ್ಜುನನು ಸಹೋದರರೂ ಅತಿರಥರೂ ಆದ ಯುಧಿಷ್ಠಿರ ಮತ್ತು ಭೀಮಸೇನ ಇವರಿಬ್ಬರಿಗೂ ನಮಸ್ಕಾರವನ್ನು ಮಾಡಿದನು.

ಸಂಕ್ಲಾಂತಮನಸೌ ತೂರ್ಣಮುಪಗಮ್ಯ ಮಹಾರಥೌ ।
ಯಮೌ ಗಾಂಡೀವಧನ್ವಾನಮಭ್ಯವಾದಯತಾಮುಭೌ ।
ಅಭಿವಾದ್ಯ ತು ತೌ ವೀರಾವೂಚತುಃ ಪಾಕಶಾಸನಿಮ್ ॥೨೪॥

ಮನೋವಿಷಾದದಿಂದ ಕೂಡಿದ್ದ ಮಹಾರಥರಾದ ನಕುಲಸಹದೇವರು ಗಾಂಡೀವಧನುಸ್ಸನ್ನು ಹಿಡಿದಿದ್ದ ಅರ್ಜುನನ ಬಳಿಗೆ ಶೀಘ್ರವಾಗಿ ಬಂದು ನಮಸ್ಕಾರವನ್ನು ಮಾಡಿ ಅರ್ಜುನನನ್ನು ಕುರಿತು ಮಾತನಾಡಿದರು.

ಅವಾಪ್ತವ್ಯಾನಿ ಸರ್ವಾಣಿ ದಿವ್ಯಾನ್ಯಸ್ತ್ರಾಣಿ ವಾಸವಾತ್ ।
ಅಸ್ತ್ರಾಣ್ಯಾಪ್ನುಹಿ ಕೌಂತೇಯ ಮನಸಾ ಯದ್ಯದಿಚ್ಛಸಿ ॥೨೫॥

ಕೌಂತೇಯನೇ! ಪಡೆಯಬೇಕಾದ ದಿವ್ಯಾಸ್ತ್ರಗಳು ಯಾವುವು ಇವೆಯೋ ಇಂದ್ರನಿಂದ ಆ ಎಲ್ಲಾ ಅಸ್ತ್ರಗಳನ್ನೂ ಪಡೆಯುವವನಾಗು.

ಗಿರಂ ಸತ್ಯಾಮಶಿಥಿಲಾಂ ನಿರ್ದೋಷಾಂ ಸಮ್ಮತಾಂ ಸತಾಂ ।
ತ್ವಮೇಕಃ ಪಾಂಡವೇಷ್ವದ್ಯ ಸಂಪ್ರಾಪ್ತೋಽಸಿ ಧನಂಜಯ ॥೨೬॥

ಎಲೈ ಧನಂಜಯನೇ! ಈ ದಿನ ಪಾಂಡವರಲ್ಲಿ ನೀನೊಬ್ಬನೇ ಸತ್ಯವಾದ ದೃಢವಾದ ನಿರ್ದೋಷವಾದ ಸಜ್ಜನ ಸಮ್ಮತವಾದ ಮಂತ್ರವನ್ನು ಪಡೆದಿರುತ್ತೀಯೆ.

ನ ಚಾಧರ್ಮವಿದಂ ದೇವಾ ನಾಸಿದ್ಧಂ ನಾತಪಸ್ವಿನಮ್ ।
ದ್ರಷ್ಟುಮಿಚ್ಛಂತಿ ಕೌಂತೇಯ ಚಲಚ್ಚಿತ್ತಂ ಶಠಂ ನ ಚ ॥೨೭॥

ಎಲೈ ಕೌಂತೇಯನೇ! ದೇವತೆಗಳು ಅಧರ್ಮಿಷ್ಠನನ್ನಾಗಲೀ ಮಂತ್ರಸಿದ್ಧಿ ಇಲ್ಲದವನನ್ನಾಗಲೀ ತಪಸ್ಸಿಲ್ಲದವನನ್ನಾಗಲೀ ಚಂಚಲಚಿತ್ತನನ್ನಾಗಲೀ ಅಥವಾ ನಿಗೂಢ ದ್ವೇಷಿಯನ್ನಾಗಲೀ ನೋಡಲು ಇಚ್ಚಿಸುವುದಿಲ್ಲ.

ರೋರೂಯಮಾಣಃ ಕಟುಕಮೀರ್ಷ್ಯಕಃ ಕಟುಕಾಕ್ಷರಃ ।
ಶಠಃ ಶ್ಲಾಘಕರಃ ಕ್ಷೇಪ್ತಾ ಹಂತಾ ಚ ವಿಚಿಕಿತ್ಸಿತಾ ॥೨೮॥

ವಿಶ್ರಸ್ತಹಂತಾ ಮಾಯಾವೀ ಕ್ರೋಧನೋಽನೃತಭಾಷಿತಾ ।
ಅತ್ಯಾಶೀ ನಾಸ್ತಿಕೋಽದಾತಾ ಮಿತ್ರಧ್ರುಕ್ ಸರ್ವಕರ್ಕಶಃ ॥೨೯॥

ಆಕ್ರೋಷ್ಟಾ ಚಾತಿಮಾನೀ ಚ ರೌದ್ರೋ ಲುಬ್ಧೋಽಥ ಲೋಲುಪಃ ।
ಸ್ತೇನಶ್ಚ ಮದ್ಯಪಶ್ಚೈವ ಭ್ರೂಣಹಾ ಗುರುತಲ್ಪಗಃ ॥೩೦॥

ಸಂಭಾವಿತಾತ್ಮಾ ಚಾತ್ಯರ್ಥಂ ನೃಶಂಸಃ ಪುರುಷಶ್ಚ ಯಃ ।
ನೈತೇ ಲೋಕಾನಾಪ್ನುವಂತಿ ನಿರ್ಲೋಕಾಸ್ತೇ ಧನಂಜಯ ॥೩೧॥

ತೀಕ್ಷ್ಣವಾಗಿ ಕಿರುಚುವವನು ಅಸೂಯೆಯನ್ನು ಪಡುವವನು ಚುಚ್ಚಿ ಮಾತನಾಡುವವನು ನಿಗೂಢ ದ್ವೇಷಿಯಾದವನು ತನ್ನನ್ನು ತಾನು ಹೊಗಳಿಕೊಳ್ಳುವವನು ಇನ್ನೊಬ್ಬರನ್ನು ನಿಂದಿಸುವವನು ಮತ್ತು ಕೊಲ್ಲುವವನು ಯಾವಾಗಲೂ ಸಂಶಯಪಡುವವನು ವಿಶ್ವಾಸಘಾತಕನಾದವನು ಮಾಯಾವಿಯಾದವನು ಕ್ರೋಧಸ್ವಭಾವದವನು ಸುಳ್ಳನ್ನು ಮಾತನಾಡುವವನು ಬಹಳವಾಗಿ ಊಟಮಾಡುವವನು ನಾಸ್ತಿಕನಾದವನು ದಾನವನ್ನು ಕೊಡದಿರುವನು ಮಿತ್ರದ್ರೋಹವನ್ನು ಮಾಡುವವನು ಯಾವಾಗಲೂ ಬಹಳ ಆತ್ಮಾಭಿಮಾನ ಇರುವವನು ಉಗ್ರನಾದವನು ಲೋಭಿಯಾದವನು ಇಂದ್ರಿಯಲೋಲುಪನಾದವನು ಕಳ್ಳನಾದವನು ಮದ್ಯಪಾನವನ್ನು ಮಾಡುವವನು ಭ್ರೂಣಹತ್ಯೆಯನ್ನು ಮಾಡಿದವನು ಗುರುತಲ್ಪಗಾಮಿಯಾದವನು ತನ್ನನ್ನು ತಾನೆ ಶ್ರೇಷ್ಠನೆಂದು ತಿಳಿದುಕೊಳ್ಳುವವನು ಮತ್ತು ಬಹಳ ಕ್ರೂರಿಯಾದವನು, ಎಲೈ ಧನಂಜಯನೇ, ಇವರಾರೂ ಒಳ್ಳೆಯ ಲೋಕವನ್ನು ಪಡೆಯುವುದಿಲ್ಲ. ಧನಂಜಯನೇ ಅವರು ಲೋಕಶೂನ್ಯರಾದವರು.

ಆನೃಶಂಸ್ಯಮನುಕ್ರೋಶಃ ಸತ್ಯಂ ಕರುಣವೇದಿತಾ ।
ದಮಃ ಸ್ಥಿತಿರ್ಧೃತಿರ್ಧರ್ಮಃ ಕ್ಷಮಾ ರೂಪಮನುತ್ತಮಮ್ ॥೩೨॥

ದಯಾ ಶಮಸ್ತಿತಿಕ್ಷಾ ಚ ಗುರುಪೂಜಾ ಕೃತಜ್ಞತಾ ।
ಮೈತ್ರತಾ ದ್ವಿಜಭಕ್ತಿಶ್ಚ ವಸಂತಿ ತ್ವಯಿ ಫಲ್ಗುನ ॥೩೩॥

ಎಲೈ ಅರ್ಜುನನೇ! ಮಾರ್ದವ ದಯೆ ಸತ್ಯ ಕರುಣೆ ಇಂದ್ರಿಯನಿಗ್ರಹ ವೈಷ್ಣವಸಿದ್ಧಾಂತದಲ್ಲಿ ಸ್ಥಿತಿ ಧೈರ್ಯ ಧರ್ಮ ಕ್ಷಮೆ ಶ್ರೇಷ್ಠವಾದ ರೂಪ ಶಮ (ಭಗವದ್ ಭಕ್ತಿ) ದ್ವಂದಸಹಿಷ್ಣುತೆ ಗುರುಪೂಜೆ ಕೃತಜ್ಞತೆ ಸ್ನೇಹ ಬ್ರಾಹ್ಮಣರಲ್ಲಿ ಭಕ್ತಿ ಎಲ್ಲವೂ ನಿನ್ನಲ್ಲಿ ಇವೆ.

ವ್ಯಪೇಕ್ಷಾ ಸರ್ವಭೂತೇಷು ಕೃಪಾ ದಾನಂ ಮತಿಃ ಸ್ಮೃತಿಃ ।
ತಸ್ಮಾತ್ ಕೌರವ್ಯ ಶಕ್ರೇಣ ಸಮೇಷ್ಯಸಿ ಧನಂಜಯ ॥೩೪॥

ತಾದೃಶೇನ ಹಿ ದೇವಾನಾಂ ಶ್ಲಾಘನೀಯಃ ಸಮಾಗಮಃ ॥೩೫॥

ಎಲ್ಲಪ್ರಾಣಿಗಳಿಗೂ ಉಪಕಾರಮಾಡುವ ಇಚ್ಛೆ ಕೃಪೆ ದಾನ ಒಳ್ಳೆಯ ಬುದ್ಧಿ ಸ್ಮರಣೆ ಎಲ್ಲವೂ ನಿನ್ನಲ್ಲಿ ಇವೆ. ಧನಂಜಯನೇ! ಆದ್ದರಿಂದ ನೀನು ಇಂದ್ರನ ಜೊತೆಯಲ್ಲಿ ಸಮಾಗಮವನ್ನು ಹೊಂದುವಿ. ನಿನ್ನಂತಹವನ ಜೊತೆಯಲ್ಲಿ ಸಮಾಗಮವು ದೇವತೆಗಳಿಗೂ ಶ್ಲಾಘ್ಯವಾದುದು.

ಸುಹೃದಾಂ ಸೋದರಾಣಾಂ ಚ ಸರ್ವೇಷಾಂ ಭರತರ್ಷಭ ।
ತ್ವಂ ಗತಿಃ ಪರಮಾ ತಾತ ವೃತ್ರಹಾ ಮರುತಾಮಿವ ॥೩೬॥

ಎಲೈ ಭರತರ್ಷಭನೇ! ಪ್ರೀತಿಪಾತ್ರನೇ! ಮರುತ್ತುಗಳಿಗೆ ಇಂದ್ರನು ಆಶ್ರಯನಾದಂತೆ ಎಲ್ಲಾ ಸೋದರರಿಗೂ ಮತ್ತು ಹಿತೈಷಿಗಳಿಗೂ ನೀನೇ ಪರಮಾಶ್ರಯನಾಗಿದ್ದೀಯೆ.

ತಸ್ಮಿಂಸ್ತ್ರಯೋದಶೇ ವರ್ಷೇ ಭ್ರಾತರಃ ಸುಹೃದಶ್ಚ ತೇ ।
ಸರ್ವೇ ಹಿ ಸಂಶ್ರಯಿಷ್ಯಂತಿ ಬಾಹುವೀರ್ಯಂ ಮಹಾಬಲ ॥೩೭॥

ಎಲೈ ಮಹಾಬಲನೇ! ಆ ಹದಿಮೂರನೆಯ ವರ್ಷದಲ್ಲಿ ನಿನ್ನ ಎಲ್ಲಾ ಸಹೋದರರೂ ಮತ್ತು ಹಿತೈಷಿಗಳಾದ ಬಾಂಧವರೂ ನಿನ್ನ ಬಾಹುಬಲವನ್ನು ಆಶ್ರಯಿಸುವರು.

ಸ ಪಾರ್ಥ ಪಿತರಂ ಗಚ್ಛ ಸಹಸ್ರಾಕ್ಷಮರಿಂದಮಮ್ ।
ಮುಷ್ಟಿಗ್ರಹಣಮಾದತ್ಸ್ವ ಸರ್ವಾಣ್ಯಸ್ತ್ರಾಣಿ ವಾಸವಾತ್ ॥೩೮॥

ಎಲೈ ಪಾರ್ಥನೇ! ಅಂತಹ ನೀನು ತಂದೆಯಾದ ಇಂದ್ರನನ್ನು ಹೋಗಿ ನೋಡು. ಎಲ್ಲಾ ಅಸ್ತ್ರಗಳನ್ನು ಇಂದ್ರನಿಂದ ಒಂದೇ ಹಿಡಿಯಲ್ಲಿ ಸ್ವೀಕರಿಸು.

ಶತಶೃಂಗೇ ಮಹಾಬಾಹೋ ಮಘವಾನಿದಮಬ್ರವೀತ್ ।
ಶೃಣ್ವತಾಂ ಸರ್ವಭೂತಾನಾಂ ತ್ವಾಮುಪಾಘ್ರಾಯ ಮೂರ್ಧನಿ ॥೩೯॥

ಎಲೈ ಮಹಾಬಾಹುವೇ ಶತಶೃಂಗಪರ್ವತದಲ್ಲಿ ನಿನ್ನ ಶಿರಸ್ಸನ್ನು ಆಘ್ರಾಣಿಸಿ ಎಲ್ಲರೂ ಕೇಳುವಂತೆ ಇಂದ್ರನು ಈ ಮಾತನಾಡಿದನು.

ವಿದಿತಃ ಸರ್ವಭೂತಾನಾಂ ದಿವಂ ತಾತ ಗಮಿಷ್ಯಸಿ ।
ಪ್ರಾಪ್ಯ ಪುಣ್ಯಕೃತಾಂ ಲೋಕಾನ್ ರಂಸ್ಯಸೇ ಜಯತಾಂ ವರ ॥೪೦॥

ಎಲೈ ಜಯಶೀಲರಲ್ಲಿ ಶ್ರೇಷ್ಠನಾದವನೇ, ನೀನು ಸ್ವರ್ಗಲೋಕಕ್ಕೆ ಹೋಗುವಿ ಎಂದು ಎಲ್ಲರೂ ತಿಳಿದಿದ್ದಾರೆ. ಪುಣ್ಯವನ್ನು ಮಾಡಿದವರು ಹೋಗುವ ಲೋಕಕ್ಕೆ ಹೋಗಿ ಅಲ್ಲಿ ನೀನು ಸುಖಪಡುತ್ತೀಯೆ.

ಮಾನಿತಸ್ತ್ರಿದಶೈಃ ಪಾರ್ಥ ವಿಹೃತ್ಯ ಸುಸುಖಂ ದಿವಿ ।
ಅವಾಪ್ಯ ಪರಮಾಸ್ತ್ರಾಣಿ ಪೃಥಿವೀಂ ಪುನರೇಷ್ಯಸಿ ॥೪೧॥

ಪಾರ್ಥನೇ ದೇವತೆಗಳಿಂದ ಸಮ್ಮಾನಿಸಲ್ಪಟ್ಟು ಸ್ವರ್ಗದಲ್ಲಿ ಸುಖವಾಗಿ ವಿಹರಿಸಿ ಎಲ್ಲಾ ಶ್ರೇಷ್ಠವಾದ ಅಸ್ತ್ರಗಳನ್ನು ಸಂಪಾದಿಸಿ ಪುನಃ ಭೂಮಿಗೆ ಬರುವಿ.

ಗುಣಾಂಸ್ತೇ ವಾಸವಸ್ತಾತ ಖಾಂಡವೇ ದಹ್ಯತಿ ತ್ವಯಾ ।
ಶೃಣ್ವತಾಂ ಸರ್ವಭೂತಾನಾಂ ಪುನಃ ಪುನರಭಾಷತ ॥೪೨॥

ಎಲೈ ಪ್ರೀತಿಪಾತ್ರನೇ ಖಾಂಡವವನವು ಉರಿಯುತ್ತಿರುವಾಗ ಇಂದ್ರನು ಎಲ್ಲಾ ಭೂತಗಳೂ ಕೇಳುವಂತೆ ನಿನ್ನ ಗುಣಗಳನ್ನು ಪುನಃಪುನಃ ಹೇಳಿದನು.

ತಾಂ ಪ್ರತಿಜ್ಞಾಂ ನರಶ್ರೇಷ್ಠ ಕರ್ತುಮರ್ಹಸಿ ವಾಸವೀಮ್ ।
ಕಂಚಿದ್ದೇಶಮಿತಃ ಪ್ರಾಪ್ಯ ತಪೋಯೋಗಮನಾ ಭವ ॥೪೩॥

ಎಲೈ ನರಶ್ರೇಷ್ಠನೇ ಇಂದ್ರನು ಮಾಡಿದ ಆ ಪ್ರತಿಜ್ಞೆಯನ್ನು ನೀನು ಸತ್ಯವನ್ನಾಗಿ ಮಾಡಬೇಕು. ಇಲ್ಲಿಂದ ಸ್ವಲ್ಪದೂರ ಪ್ರಯಾಣಮಾಡಿ ತಪೋಯೋಗನಿರತನಾಗು.

ಕರ್ತುಮರ್ಹಸಿ ಕೌರವ್ಯ ಮಘವದ್ವಚನಂ ಹಿತಮ್ ।
ದೀಕ್ಷಿತೋಽದ್ಯೈವ ಗಚ್ಛಸ್ವ ದ್ರಷ್ಟಾಸಿ ತ್ವಂ ಪುರಂದರಮ್ ॥೪೪॥

ಎಲೈ ಕೌರವ್ಯನೇ ಹಿತವಾದ ಇಂದ್ರನ ವಚನವನ್ನು ನೀನು ಈಗಲೇ ನೆರವೇರಿಸಬೇಕು. ನೀನು ಈ ದಿನವೇ ದೀಕ್ಷಿತನಾಗಿ ಹೊರಡು. ಇಂದ್ರನನ್ನು ನೀನು ನೋಡುವಿ.

ವೈಶಂಪಾಯನಃ

ತೌ ಪರಿಷ್ವಜ್ಯ ಬೀಭತ್ಸುಃ ಕೃಷ್ಣಾಮಾಮಂತ್ರ್ಯ ಚಾಭಿಭೋ ।
ಅಭ್ಯವಾದಯತ ಪ್ರೀತಃ ತಪಸ್ವಿಪ್ರವರಾನಪಿ ।
ಮನಾಂಸ್ಯಾದಾಯ ಸರ್ವೇಷಾಂ ಪ್ರಯಾತಃ ಪುರುಷರ್ಷಭಃ ॥೪೫॥

ಎಲೈ ರಾಜನೇ, ಅರ್ಜುನನು ನಕುಲಸಹದೇವರನ್ನು ಆಲಿಂಗಿಸಿ ದ್ರೌಪದಿಯ ಅನುಮತಿಯನ್ನು ಪಡೆದು, ಶ್ರೇಷ್ಠರಾದ ತಪಸ್ವಿಗಳಿಗೆ ಪ್ರಣಾಮವನ್ನು ಮಾಡಿದನು. ಪುರುಷರ್ಷಭನಾದ ಅವನು ಎಲ್ಲರ ಮನಸ್ಸನ್ನೂ ಅಪಹರಿಸಿ ಅಲ್ಲಿಂದ ಪ್ರಯಾಣಮಾಡಿದನು.

ತಂ ಸಿಂಹಮಿವ ಗಚ್ಛಂತಂ ಸಿಂಹಸ್ಕಂಧೋರಸಂ ತದಾ ।
ಪ್ರಾಂಜಲಿಃ ಪಾಂಡವಂ ಕೃಷ್ಣಾ ದೇವಾನಾಂ ಕುರ್ವತೀ ನಮಃ ॥೪೬॥

ವಾಗ್ಭಿಃ ಪರಮಶಕ್ತಾಭಿರ್ಮಂಗಲಾಭಿರಭಾಷತ ।
ನಮೋ ಧಾತ್ರೇ ವಿಧಾತ್ರೇ ಚ ಸ್ವಸ್ತಿ ಗಚ್ಛ ವನಾದ್ವನಮ್ ॥೪೭॥

ಸಿಂಹಸ್ಕಂಧನಾಗಿ ಸಿಂಹದ ಗತಿಯಲ್ಲಿ ಹೊರಟ ಅವನನ್ನು ನೋಡಿ ದ್ರೌಪದಿಯು ಕೈಗಳನ್ನು ಮುಗಿದು ದೇವತೆಗಳಿಗೆ ನಮಸ್ಕಾರವನ್ನು ಮಾಡುತ್ತಾ ಪರಮಮಂಗಳವಾದ ಸಮರ್ಥವಾದ ವಚನಗಳಿಂದ ಮಾತನಾಡಿದಳು. ನಾರಾಯಣನಿಗೂ ಬ್ರಹ್ಮರಿಗೂ ನಮಸ್ಕಾರ. ಕಾಡಿನಿಂದ ಕಾಡಿಗೆ ಕ್ಷೇಮದಿಂದ ಹೋಗು.

ಧರ್ಮಸ್ತ್ವಾಂ ಜುಷತಾಂ ಪಾರ್ಥ ಭಾಸ್ಕರಶ್ಚ ವಿಭಾವಸುಃ ।
ಬ್ರಹ್ಮಾ ತ್ವಾಂ ಬ್ರಾಹ್ಮಣಾಶ್ಚೈವ ಪಾಲಯಂತು ಧನಂಜಯ ॥೪೮॥

ಎಲೈ ಪಾರ್ಥನೇ! ಧರ್ಮವು ನಿನ್ನನ್ನು ಸೇವಿಸಲಿ. ಪ್ರಕಾಶಕರನಾದ ಸೂರ್ಯನು ನಿನ್ನನ್ನು ಸೇವಿಸಲಿ. ಧನಂಜಯನೇ! ಬ್ರಹ್ಮನು ಮತ್ತು ಬ್ರಾಹ್ಮಣರು ನಿನ್ನನ್ನು ರಕ್ಷಿಸಲಿ.

ಜ್ಯೇಷ್ಠಾಪಚಾಯೀ ಜ್ಯೇಷ್ಠಸ್ಯ ಭ್ರಾತುರ್ವಚನಮಾಸ್ಥಿತಃ ।
ಪ್ರಪದ್ಯೇಥಾ ವಸೂನ್ ರುದ್ರಾನಾದಿತ್ಯಾನ್ ಸಮರುದ್ಗಣಾನ್ ।
ವಿಶ್ವೇದೇವಾಂಸ್ತಥಾ ಸಾಧ್ಯಾನ್ ಶಾಂತ್ಯರ್ಥಂ ಭರತರ್ಷಭ ॥೪೯॥

ಎಲೈ ಭರತರ್ಷಭನೇ ಜ್ಯೇಷ್ಠರನ್ನು ಪೂಜಿಸುವ ನೀನು ಜ್ಯೇಷ್ಠ ಭ್ರಾತೃವಿನ ವಚನವನ್ನು ಅನುಸರಿಸಿ ವಸುಗಳನ್ನೂ ರುದ್ರರನ್ನೂ ಆದಿತ್ಯರನ್ನೂ ಮರುದ್ಗಣಸಂಯುತರಾದ ವಿಶ್ವೇದೇವತೆಗಳನ್ನೂ ಹಾಗೆಯೇ ಸಾಧ್ಯರನ್ನೂ ಶಾಂತ್ಯರ್ಥವಾಗಿ ಶರಣು ಹೊಂದುವವನಾಗು.

ಸ್ಪಷ್ಟಿ ತೇಽಸ್ತ್ವಂತರಿಕ್ಷೇಭ್ಯೋ ದಿವ್ಯೇಭ್ಯೋ ಭರತರ್ಷಭ ।
ಪಾರ್ಥಿವೇಭ್ಯಶ್ಚ ಸರ್ವೇಭ್ಯೋ ಯೇ ಕೇಚಿತ್ ಪರಿಪಂಥಿನಃ ॥೫೦॥

ಎಲೈ ಭರತರ್ಷಭನೇ ನಿನಗೆ ದಿವ್ಯವಾದ ಅಂತರಿಕ್ಷಗಳಿಂದ ಕ್ಷೇಮವುಂಟಾಗಲಿ. ವಿರುದ್ಧವಾದ ರಾಜರುಗಳೂ ಇದ್ದಾರೆ. ಅವರಿಂದಲೂ ಕ್ಷೇಮ ಉಂಟಾಗಲಿ.

ಅವರೋಧಾದ್ ವನೇ ವಾಸಾತ್ ಸರ್ವಸ್ವಹರಣಾದಪಿ ।
ಇದಂ ದುಃಖತರಂ ಮನ್ಯೇ ಪುತ್ರೇಭ್ಯಶ್ಚ ವಿವಾಸನಾತ್ ॥೫೧॥

ಸಭೆಯಲ್ಲಿ ಸಂದುದಕ್ಕಿಂತಲೂ ವನವಾಸಕ್ಕಿಂತಲೂ ಸರ್ವಸ್ವ ಅಪಹಾರಕ್ಕಿಂತಲೂ ನಿನ್ನನ್ನು ಅಗಲುವುದು ಹಾಗೆಯೇ ಮಕ್ಕಳನ್ನು ಅಗಲುವುದು ನನಗೆ ಹೆಚ್ಚು ದುಃಖಕರವೆಂದು ಭಾವಿಸುತ್ತೇನೆ.

ಮಾ ಸ್ಮಾಹಂ ಕ್ಷತ್ರಿಯಕುಲೇ ಜಾತುಚಿತ್ಪುನರಾಭವಮ್ ।
ಬ್ರಾಹ್ಮಣೇಭ್ಯೋ ನಮಸ್ಯಾಮಿ ಯೇಷಾಂ ನಾಯುಧಜೀವಿಕಾ ॥೫೨॥

ನಾನು ಇನ್ನೊಮ್ಮೆ ಕ್ಷತ್ರಿಯಕುಲದಲ್ಲಿ ಹುಟ್ಟುವುದು ಬೇಡ. ಯಾರು ಆಯುಧವನ್ನು ಹಿಡಿದು ಜೀವಿಸುವುದಿಲ್ಲವೋ ಅಂತಹ ಬ್ರಾಹ್ಮಣರಿಗೆ ನಮಸ್ಕಾರಮಾಡುತ್ತೇನೆ.

ಧ್ವಂಸಿತಾಃ ಸ್ವಗೃಹೇಭ್ಯಶ್ಚ ರಾಷ್ಟ್ರಾಚ್ಚ ಭರತರ್ಷಭ ।
ವನೇ ಪ್ರತಿಷ್ಠಿತೋ ಭೂತ್ವಾ ಸೌಹಾರ್ದಾದವತಿಷ್ಠತೇ ॥೫೩॥

ಭರತರ್ಷಭನೇ ನಾವೆಲ್ಲರೂ ನಾಶವನ್ನು ಹೊಂದಿದ್ದೇವೆ. ನಮ್ಮ ಮನೆಗಳಿಂದಲೂ ನಮ್ಮ ರಾಜ್ಯದಿಂದಲೂ ಚ್ಯುತರಾಗಿ ಕಾಡಿನಲ್ಲಿ ಇದ್ದೇವೆ. ದುರ್ಯೋಧನನು ರಾಜ್ಯದಲ್ಲಿ ಪ್ರತಿಷ್ಠಿತನಾಗಿ ಸಂತೋಷದಿಂದ ಇದ್ದಾನೆ.

ಜೇತಾ ಸ ಸರ್ವಶತ್ರೂಣಾಂ ಯಃ ಪಾವಕಮತರ್ಪಯತ್ ।
ಜನಸ್ತ್ವಾಂ ಪಶ್ಯತೀದಾನೀಂ ಗಚ್ಛಂತಂ ಭರತರ್ಷಭ ॥೫೪॥

ಎಲೈ ಭರರ್ಷಭನೇ ಸರ್ವಶತ್ರುಗಳನ್ನು ಗೆದ್ದಂತಹ ಅಗ್ನಿಯನ್ನು ಸಂತೋಷದಪಡಿಸಿದಂತಹ ನೀನು ಈಗ ನಮ್ಮನ್ನು ಬಿಟ್ಟು ಹೋಗುವುದನ್ನು ಜನರು ನೋಡುತ್ತಿದ್ದಾರೆ.

ಅಸ್ಮಿನ್ನೂನಂ ಮಹಾರಣ್ಯೇ ಭ್ರಾತರಃ ಸುಹೃದಶ್ಚ ತೇ ।
ತ್ವತ್ಕಥಾಃ ಕಥಯಿಷ್ಯಂತಿ ಚಾರಣಾ ಋಷಯಸ್ತಥಾ ॥೫೫॥

ಈ ಮಹಾಕಾಡಿನಲ್ಲಿ ನಿನ್ನ ಸಹೋದರರೂ ಹಿತೈಷಿಗಳೂ ಚಾರಣರೂ ಮತ್ತು ಋಷಿಗಳೂ ಸಹ ಖಂಡಿತವಾಗಿ ನಿನ್ನ ಕಥೆಗಳನ್ನು ಹೇಳುವರು.

ಯತ್ತತ್ ಕುಂತೀ ಮಹಾಬಾಹೋ ಜಾತಸ್ಯೈಚ್ಛದ್ ಧನಂಜಯ ।
ತತ್ತೇ ಸರ್ವಂ ತಥೈವಾಸ್ತು ಯಥಾ ಚ ಮನಸೇಚ್ಛಸಿ ॥೫೬॥

ವಸುದೇವಸ್ತ್ವಾ ದೇವೀ ತ್ವಾಮಾರ್ಯಾ ಪುನರಾಗಮತ್ ।
ಪಶ್ಯತು ತ್ವಾ ಪೃಥಾ ಪಾರ್ಥ ಸಹಸ್ರಾಕ್ಷಮಿವಾದಿತಿಃ ॥೫೭॥

ಧನಂಜಯನೇ! ನೀನು ಜನಿಸಿದಾಗ ಕುಂತಿಯು ನಿನಗೆ ಯಾವಯಾವ ಭಾಗ್ಯಗಳನ್ನು ಆಶಿಸಿದಳೋ ಅವೆಲ್ಲವೂ ಹಾಗೆಯೇ ಆಗಲಿ. ನೀನು ಮನಸ್ಸಿನಲ್ಲಿ ಇಚ್ಛಿಸುವುದೆಲ್ಲಾ ಕೈಗೂಡಲಿ. ವಸುದೇವಸಹೋದರಿಯಾದ ಅತ್ತೆಯಾದ ಕುಂತೀದೇವಿಯು ಅದಿತಿಯು ಇಂದ್ರನನ್ನು ನೋಡಿದಂತೆ ತಪಸ್ಸನ್ನು ಮಗಿಸಿ ಹಿಂದಿರುಗಿ ಬಂದ ನಿನ್ನನ್ನು ನೋಡಲಿ.

ನೂನಂ ತೇ ಭ್ರಾತರಃ ಸರ್ವೇ ತ್ವತ್ಕಥಾಭಿಃ ಪ್ರಜಾಗರೇ ।
ರಂಸ್ಯಂತೇ ತವ ಕರ್ಮಾಣಿ ಕೀರ್ತಯಂತಃ ಪುನಃ ಪುನಃ ॥೫೮॥

ಖಂಡಿತವಾಗಿ ನಿನ್ನ ಸಹೋದರರು ಜಾಗರಣೆಯನ್ನು ಮಾಡಿ ನಿನ್ನ ಕಥೆಗಳನ್ನೂ ನಿನ್ನ ಕರ್ಮಗಳನ್ನೂ ಪುನಃಪುನಃ ಹೇಳುತ್ತಾ ಸಂತೋಷಪಡುವರು.

ನೈವಂ ನಃ ಪಾರ್ಥ ಭೋಗೇಷು ನ ಧನೇ ನೋತ ಜೀವಿತೇ ।
ತುಷ್ಯಾ ಬುದ್ಧಿರ್ಭವಿತ್ರೀ ವಾ ತ್ವಯಿ ದೀರ್ಘಪ್ರವಾಸಿನಿ ॥೫೯॥

ಎಲೈ ಪಾರ್ಥನೇ ನೀನು ದೀರ್ಘಪ್ರವಾಸಕ್ಕೆ ಹೋಗಿರಲು ನಮಗೆ ಭೋಗದಲ್ಲಾಗಲೀ ಧನದಲ್ಲಾಗಲೀ ಅಥವಾ ಜೀವನದಲ್ಲಾಗಲೀ ಸಂತೋಷದ ಬುದ್ಧಿಯೂ ಉಂಟಾಗುವುದಿಲ್ಲ.

ಆಶಾ ಸಂಜಾಯತೇ ವೀರ ತ್ವಯ್ಯರಣ್ಯಂ ಪ್ರಪದ್ಯತಿ ।
ತ್ವಯಿ ನಃ ಪಾರ್ಥ ಸರ್ವೇಷಾಂ ಸುಖದುಃಖೇ ಪ್ರತಿಷ್ಠಿತೇ ।
ಜೀವಿತಂ ಮರಣಂ ಚೈವ ಸ್ವರ್ಗೋಽಥ ನರಕಸ್ತಥಾ ॥೬೦॥

ಎಲೈ ವೀರನೇ! ನೀನು ಅರಣ್ಯಕ್ಕೆ ಹೋಗುತ್ತಿರಲು ನಿನ್ನನ್ನು ನೋಡುವ ಆಸೆಯು ಉಂಟಾಗುತ್ತದೆ. ಎಲೈ ಪಾರ್ಥನೇ, ನಮ್ಮ ಸುಖದುಃಖಗಳು ಜೀವನ ಅಥವಾ ಮರಣ ಸ್ವರ್ಗ ಅಥವಾ ನರಕ ಇವೆಲ್ಲವೂ ನಿನ್ನನ್ನು ಅವಲಂಬಿಸಿವೆ.

ಆಪೃಷ್ಟೋ ನೋಽಸಿ ಕೌಂತೇಯ ಸ್ವಸ್ತಿ ಪ್ರಾಪ್ನುಹಿ ಪಾಂಡವ ।
ಕೃತಾಸ್ತ್ರಂ ಸ್ವಸ್ತಿಮಂತಂ ತ್ವಾಂ ದ್ರಕ್ಷ್ಯಾಮಿ ಪುನರಾಗತಮ್ ॥೬೧॥

ಎಲೈ ಕೌಂತೇಯನೇ, ನಾವು ಅನುಮತಿಯನ್ನು ನೀಡಿದ್ದೇವೆ. ಪಾಂಡವನೇ ಕ್ಷೇಮದಿಂದ ಪ್ರಯಾಣಮಾಡು. ಅಸ್ತ್ರವನ್ನು ಸಂಪಾದಿಸಿ ಕ್ಷೇಮದಿಂದ ಹಿಂದಿರುಗಿದ ನಿನ್ನನ್ನು ನಾನು ಪುನಃ ನೋಡುವೆನು. (ಎಂದು ದ್ರೌಪದಿಯು ಹೇಳಿದಳು)

ಪ್ರದಕ್ಷಿಣಂ ತತಃ ಕೃತ್ವಾ ಭ್ರಾತೄನ್ ಧೌಮ್ಯಂ ಚ ಪಾಂಡವಃ ।
ಕೃಷ್ಣಾಕಟಾಕ್ಷಪಾಥೇಯಂ ಹೃದಿ ಕೃತ್ವಾ ತತೋಽರ್ಜುನಃ ।
ಪ್ರಾತಿಷ್ಠತ ಮಹಾಬಾಹುಃ ಸುಮನಾಃ ಪ್ರೀತಿಮಾಂಸ್ತದಾ ॥೬೨॥

ಮಹಾಬಾಹುವಾದ ಅರ್ಜುನನು ತನ್ನ ಅಣ್ಣಂದಿರಿಗೂ ಮತ್ತು ಧೌಮ್ಯರಿಗೂ ಪ್ರದಕ್ಷಿಣೆಯನ್ನು ಮಾಡಿ ದ್ರೌಪದಿಯ ಕಟಾಕ್ಷವನ್ನು ಪಾಥೇಯವೆಂದು ಹೃದಯದಲ್ಲಿ ಧರಿಸಿ ಮಹಾಬಾಹುವಾದ ಅವನು ಒಳ್ಳೆಯ ಮನಸ್ಸಿನಿಂದ ಸಂತೋಷಯುಕ್ತನಾಗಿ ಮುಂದೆ ನಡೆದನು.

ಶನೈರಿವ ದಿಶಂ ವೀರ ಉದೀಚೀಂ ಭರತರ್ಷಭ ।
ಸಂಹರಂಸ್ತರಸಾ ವೃಕ್ಷಾನ್ ಲತಾ ವಲ್ಲೀಶ್ಚ ಭಾರತ ।
ಅಸಜ್ಜಮಾನೋ ವೃಕ್ಷೇಷು ಜಗಾಮ ಸುಮಹಾಬಲಃ ॥೬೩॥

ಎಲೈ ಭರತರ್ಷಭನೇ, ವೀರನಾದ ಅರ್ಜುನನು ಮೊದಲು ನಿಧಾನವಾಗಿ ತೋರುವಂತೆ ಉತ್ತರದಿಕ್ಕಿಗೆ ಹೊರಟು ತನ್ನ ವೇಗದಿಂದ ವೃಕ್ಷಗಳನ್ನೂ ಲತೆಗಳನ್ನೂ ಮತ್ತು ಬಳ್ಳಿಗಳನ್ನೂ ಬೀಳಿಸುತ್ತಾ, ಮಹಾಬಲಶಾಲಿಯಾಗಿ ಯಾವ ವೃಕ್ಷಗಳಲ್ಲಿಯೂ ಸಿಕ್ಕಿಹಾಕಿಕೊಳ್ಳದೆ ಮುಂದೆ ಸಾಗಿದನು.

ತಸ್ಯ ಮಾರ್ಗಾದಪಾಕ್ರಾಮನ್ ಸರ್ವಭೂತಾನಿ ಗಚ್ಛತಃ ।
ಯುಕ್ತಸ್ಯೈಂದ್ರೇಣ ಯೋಗೇನ ಪರಾಕ್ರಾಂತಸ್ಯ ಶುಷ್ಮಿಣಃ ॥೬೪॥

ಇಂದ್ರಸಂಬಂಧಿಯಾದ ಯೋಗವನ್ನು (ಮಂತ್ರವನ್ನು) ಧರಿಸಿ ಪರಾಕ್ರಮದಿಂದ ಮುಂದೆ ಸಾಗುತ್ತಿರುವ ವೀರ್ಯವಂತನಾದ ಅವನ ಮಾರ್ಗದಿಂದ ಎಲ್ಲ ಪ್ರಾಣಿಗಳೂ ದೂರ ಸರಿದವು.

ಸೋಽಗಚ್ಛತ್ ಪರ್ವತಂ ಪುಣ್ಯಮೇಕಾಹ್ನಾ ಸುಮಹಾಮನಾಃ ।
ಮನೋಜವಗತಿರ್ಭೂತ್ವಾ ಯೋಗಯುಕ್ತೋ ಯಥಾಽನಿಲಃ ॥೬೫॥

ಮಹಾಮನಸ್ವಿಯಾದ ಅವನು ಯೋಗಯುಕ್ತನಾಗಿ ವಾಯುವಿನಂತೆ ಮನೋವೇಗವುಳ್ಳ ಗಮನವನ್ನು ಹೊಂದಿ ಒಂದೇ ದಿನದಲ್ಲಿ ಹಿಮಾಲಯ ಪರ್ವತವನ್ನು ತಲುಪಿದನು.

ಹಿಮವಂತಮತಿಕ್ರಮ್ಯ ಗಂಧಮಾದನಮೇವ ಚ ।
ಅತ್ಯಕ್ರಾಮತ್ ಸುದುರ್ಗಾಣಿ ದಿವಾರಾತ್ರಮನಿಂದಿತಃ ॥೬೬॥

ಇಂದ್ರಕೀಲಂ ಸಮಾಸಾದ್ಯ ತತೋಽತಿಷ್ಠದ್ ಧನಂಜಯಃ ।
ಅಂತರಿಕ್ಷೇ ಸ ಶುಶ್ರಾವ ತಿಷ್ಠೇತಿ ಚ ವಚಸ್ತದಾ ॥೬೭॥

ಹಿಮಾಲಯಪರ್ವತವನ್ನು ದಾಟಿ ಅಲ್ಲಿಯೇ ಒಂದು ಶಿಖರವಾದ ಗಂಧಮಾಧನವನ್ನು ದಾಟಿ ಅನಿಂದಿತನಾದ ಅವನು ಹಗಲು ರಾತ್ರಿಗಳಲ್ಲಿ ನಡೆದು ಅನೇಕ ದುರ್ಗಗಳನ್ನು ದಾಟಿದನು. ಧನಂಜಯನು ಇಂದ್ರಕೀಲಪರ್ವತವನ್ನು ತಲುಪಿ ಅಲ್ಲಿ ನೆಲೆಸಿದನು. ಆಗ ಅವನು ಇಲ್ಲಿಯೇ ನಿಲ್ಲು ಎಂಬ ಅಂತರಿಕ್ಷವಾಣಿಯನ್ನು ಕೇಳಿದನು.

ಗತ್ವಾ ಹಿ ಷಡಹೋರಾತ್ರಾನ್ ಸಪ್ತಮೇಽಹನಿ ಪಾಂಡವಃ ।
ಇಂದ್ರಕೀಲಸ್ಯ ತು ಪ್ರಸ್ಥೇ ತತೋ ಯೋಗಪರೋಽಭವತ್ ॥೬೮॥

ಹೀಗೆ ಪಾಂಡವನು ಆರು ದಿನಗಳ ಕಾಲ ಹಗಲೂ ಮತ್ತು ರಾತ್ರಿಯೂ ನಡೆದು ಏಳನೆಯ ದಿವಸ ಇಂದ್ರಕೀಲಪರ್ವತದ ತಪ್ಪಲನ್ನು ತಲುಪಿ ಅಲ್ಲಿ ಯೋಗಪರನಾದನು.

ಊರ್ಧ್ವಬಾಹುರ್ನ ಚಾಂಗಾನಿ ಪ್ರಾಸ್ಪಂದಯತ ಕಿಂಚನ ।
ಸಮಾಹಿತಾತ್ಮಾ ನಿಯತಃ ಸಹಸ್ರಾಕ್ಷಸುತೋಽಚ್ಯುತಃ ॥೬೯॥

ಅಲ್ಲಿ ಅವನು ಊರ್ಧ್ವಬಾಹುವಾಗಿ ತನ್ನ ಶರೀರವನ್ನು ಅಲ್ಲಾಡಿಸದೆ ಮನಃಸಮಾಧಿಯಿಂದಲೂ ನಿಯಮದಿಂದಲೂ ಕೂಡಿದವನಾಗಿ ತನ್ನ ಗುಣಗಳಿಂದ ಚ್ಯುತನಾಗದ ಇಂದ್ರಪುತ್ರನಾದ ಅವನು ತಪಸ್ಸನ್ನು ಮಾಡಿದನು.

ತತೋಽಪಶ್ಯತ್ ಸವ್ಯಸಾಚೀ ವೃಕ್ಷಮೂಲೇ ತಪಸ್ವಿನಮ್ ।
ಬ್ರಾಹ್ಮ್ಯಾ ಶ್ರಿಯಾ ದೀಪ್ಯಮಾನಂ ಪಿಂಗಲಂ ಜಟಿಲಂ ಕೃಶಮ್ ।
ಸೋಽಬ್ರವೀದರ್ಜುನಂ ತತ್ರ ಸ್ಥಿತಂ ದೃಷ್ಟ್ವಾ ಮಹಾತಪಾಃ ॥೭೦॥

ಅನಂತರ ಅರ್ಜುನನು ಅಲ್ಲಿ ಒಂದು ವೃಕ್ಷಮೂಲದಲ್ಲಿ ಕುಳಿತಿದ್ದ ಬ್ರಹ್ಮಕಾಂತಿಯಿಂದ ಬೆಳಗುತ್ತಿದ್ದ ಪಿಂಗಲನೂ ಜಟಿಲನೂ ಮತ್ತು ಕೃಶನೂ ಆದ

ತಪಸ್ವಿಯನ್ನು ನೋಡಿದನು. ಆ ಮಹಾತಪಸ್ವಿಯು ಅಲ್ಲಿನಿಂತ ಅರ್ಜುನನನ್ನು ನೋಡಿ ಹೀಗೆ ಹೇಳಿದನು.

ಕಸ್ತ್ವಂ ತಾತೇಹ ಸಂಪ್ರಾಪ್ತೋ ಧನುಷ್ಮಾನ್ ಕವಚೀ ಶರೀ ।
ಬದ್ಧಾಸಿ ಸತನುತ್ರಾಣಃ ಕ್ಷತ್ರಧರ್ಮಮನುವ್ರತಃ ॥೭೧॥

ಎಲೈ ಪ್ರೀತಿಪಾತ್ರನೇ! ಧನುಸ್ಸನ್ನು ಧರಿಸಿ ಕವಚವನ್ನು ಧರಿಸಿ ಶರಗಳನ್ನು ಹಿಡಿದು ಖಡ್ಗವನ್ನು ಕಟ್ಟಿಕೊಂಡು ರಕ್ಷಣೆಯ ಕವಚಗಳನ್ನು ತೊಟ್ಟುಕೊಂಡು ಇಲ್ಲಿಗೆ ಬಂದು ಕ್ಷತ್ರಿಯ ಧರ್ಮವನ್ನು ಪಾಲಿಸುತ್ತಿರುವ ನೀನು ಯಾರು?

ನೇಹ ಶಸ್ತ್ರೇಣ ಕರ್ತವ್ಯಂ ಶಾಂತಾನಾಮಯಮಾಲಯಃ ।
ವಿನೀತಕ್ರೋಧಹರ್ಷಾಣಾಂ ಬ್ರಾಹ್ಮಣಾನಾಂ ತಪಸ್ವಿನಾಮ್ ॥೭೨॥

ಇದು ಶಾಂತರಾದ ಋಷಿಗಳ ಆವಾಸಸ್ಥಾನ. ಇಲ್ಲಿ ಶಸ್ತ್ರದಿಂದ ಮಾಡಬೇಕಾದ ಕಾರ್ಯವು ಯಾವುದೂ ಇಲ್ಲ. ಇದು ಕ್ರೋಧಹರ್ಷಗಳನ್ನು ನಿಯಂತ್ರಿಸಿದ ಬ್ರಾಹ್ಮಣತಪಸ್ವಿಗಳ ಆವಾಸಸ್ಥಾನ.

ನೇಹಾಸ್ತಿ ಧನುಷಾ ಕಾರ್ಯಂ ನ ಸಂಗ್ರಾಮೋऽತ್ರ ಕರ್ಹಿಚಿತ್ ।
ನಿಕ್ಷಿಪ್ಯೈತದ್ ಧನುಸ್ತಾತ ಪ್ರಾಪ್ತೋऽಸಿ ಪರಮಾಂ ಗತಿಮ್ ॥೭೩॥

ಇಲ್ಲಿ ಬಿಲ್ಲಿನಿಂದ ಯಾವ ಉಪಯೋಗವೂ ಇಲ್ಲ. ಇಲ್ಲಿ ಯಾವ ಯುದ್ಧವೂ ನಡೆಯುವುದಿಲ್ಲ. ಪ್ರೀತಿಪಾತ್ರನೇ ಧನುಸ್ಸನ್ನು ಇಲ್ಲಿಯೇ ಇಡು. ನೀನು ಶ್ರೇಷ್ಠವಾದ ಗತಿಯನ್ನು ಹೊಂದಿದ್ದೀಯೆ.

ಇತ್ಯನಂತೌಜಸಂ ವೀರಂ ಯಥಾ ಚಾನ್ಯಂ ಪೃಥಗ್ಜನಮ್ ।
ತಥಾ ವಾಚಮಥಾಭೀಕ್ಷ್ಣಂ ಬ್ರಾಹ್ಮಣೋऽರ್ಜುನಮಬ್ರವೀತ್ ॥೭೪॥

ಹೀಗೆ ಅಮಿತಪರಾಕ್ರಮಿಯೂ ವೀರನೂ ಆದ ಅರ್ಜುನನನ್ನು ಕುರಿತು ಆ ಬ್ರಾಹ್ಮಣನು ಸಾಧಾರಣಮನುಷ್ಯನನ್ನು ಕುರಿತು ಆಡಿದಂತೆ ಈ ಮಾತುಗಳನ್ನು ಪುನಃಪುನಃ ಆಡಿದನು.

ನ ಚೈನಂ ಚಾಲಯಾಮಾಸ ಧೈರ್ಯಾತ್ ಸುದೃಢನಿಶ್ಚಯಮ್ ।
ತಮುವಾಚ ತತಃ ಪ್ರೀತಃ ಸ ದ್ವಿಜಃ ಪ್ರಹಸನ್ನಿವ ।
ವರಂ ವೃಣೀಷ್ವ ಭದ್ರಂ ತೇ ಶಕ್ರೋಽಹಮರಿಸೂದನ ॥೭೫॥

ಆದರೂ ದೃಢವಾದ ನಿಶ್ಚಯವುಳ್ಳ ಅರ್ಜುನನು ಧೈರ್ಯದಿಂದ ಚಲಿಸುವಂತೆ ಮಾಡಲು ಸಾಧ್ಯವಾಗಲಿಲ್ಲ. ಆಗ ಆ ಬ್ರಾಹ್ಮಣನು ನಗುತ್ತಾ ಸಂತೋಷಗೊಂಡು ಅರ್ಜುನನನ್ನು ಕುರಿತು ಎಲೈ ಶತ್ರುಸೂದನನೇ ನಿನಗೆ ಮಂಗಳವಾಗಲಿ. ನಾನು ಇಂದ್ರ. ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

ಏವಮುಕ್ತಃ ಪ್ರತ್ಯುವಾಚ ಸಹಸ್ರಾಕ್ಷಂ ಧನಂಜಯಃ ।
ಪ್ರಾಂಜಲಿಃ ಪ್ರಣತೋ ಭೂತ್ವಾ ಶೂರಃ ಕುರುಕುಲೋದ್ವಹಃ ॥೭೬॥

ಹೀಗೆ ಹೇಳಲ್ಪಟ್ಟ ಕುರುಕುಲೋದ್ಭವನೂ ಶೂರನೂ ಆದ ಅರ್ಜುನನು ಇಂದ್ರನಿಗೆ ಕೈಗಳನ್ನು ಮುಗಿದು ನಮಸ್ಕರಿಸಿ ಉತ್ತರವಾಗಿ ಮಾತನಾಡಿದನು.

ಈಪ್ಸಿತೋ ಹ್ಯೇಷ ವೈ ಕಾಮೋ ವರಂ ಚೈವ ಪ್ರಯಚ್ಛ ಮೇ ।
ತ್ವತ್ತೋಽದ್ಯ ಭಗವನ್ಸರ್ವಂ ಕೃತ್ಸ್ನಮಿಚ್ಛಾಮಿ ವೇದಿತುಮ್ ।
ಪ್ರತ್ಯುವಾಚ ಮಹೇಂದ್ರಸ್ತಂ ಪ್ರೀತಾತ್ಮಾ ಪ್ರಹಸನ್ನಿವ ॥೭೭॥

ಇದು ನನಗೆ ಅಭೀಪ್ಸಿತವಾದ ಕಾಮ. ನನಗೆ ವರವನ್ನು ಕೊಡು. ಪೂಜ್ಯನೇ ನಿನ್ನಿಂದ ಎಲ್ಲಾ ಅಸ್ತ್ರಗಳನ್ನೂ ಸಂಪಾದಿಸಲು ನಾನು ಈ ದಿನ ಬಯಸುತ್ತೇನೆ. ಆಗ ಮಹೇಂದ್ರನು ಸಂತೋಷಗೊಂಡು ನಗುತ್ತಾ ಪುನಃ ಅರ್ಜುನನನ್ನು ಕುರಿತು ಮಾತನಾಡಿದನು.

ಇಹ ಪ್ರಾಪ್ತಸ್ಯ ಕಿಂ ಕಾರ್ಯಮಸ್ತ್ರೈಸ್ತವ ಧನಂಜಯ ।
ಕಾಮಾನ್ ವೃಣೀಶ್ವ ಲೋಕಾಂಶ್ಚ ಪ್ರಾಪ್ತೋಽಸಿ ಪರಮಾಂ ಗತಿಮ್ ॥

ಧನಂಜಯನೇ! ಇಲ್ಲಿಗೆ ಬಂದವನಿಗೆ ಅಸ್ತ್ರಗಳಿಂದ ಏನು ಪ್ರಯೋಜನ? ನಿನಗೆ ಬೇಕಾದ ಕಾಮಗಳನ್ನು ಮತ್ತು ಲೋಕಗಳನ್ನು ಕೇಳು. ಶ್ರೇಷ್ಠವಾದ ಗತಿಯನ್ನು ಹೊಂದಿದವನಾಗಿದ್ದೀಯೆ.

ಏವಮುಕ್ತಃ ಪ್ರತ್ಯುವಾಚ ಸಹಸ್ರಾಕ್ಷಂ ಧನಂಜಯಃ ।
ನ ಲೋಕಾನ್ ನ ಪುನಃ ಕಾಮಾನ್ ನ ದೇವತ್ವಂ ಕುತಃ ಸುಖಮ್ ।
ನ ಚ ಸರ್ವಾಮರೈಶ್ವರ್ಯಂ ಕಾಮಯೇ ತ್ರಿದಶಾಧಿಪ ॥೭೯॥

ಹೀಗೆ ಹೇಳಲ್ಪಟ್ಟ ಅರ್ಜುನನು ಇಂದ್ರನನ್ನು ಕುರಿತು ಎಲೈ ದೇವಾಧಿಪತಿಯೇ ನನಗೆ ಲೋಕಗಳು ಬೇಡ. ಕಾಮಗಳೂ ಬೇಡ. ದೇವ ಪದವಿಯೂ ಬೇಡ. ಸುಖವು ಏಕೆಬೇಕು? ನಾನು ಎಲ್ಲಾ ದೇವತೆಗಳ ಐಶ್ವರ್ಯವನ್ನೂ ಬಯಸುವುದಿಲ್ಲ.

ಭ್ರಾತೄಂಸ್ತಾನ್ ವಿಪಿನೇ ತ್ಯಕ್ತ್ವಾ ವೈರಮಪ್ರತಿಯಾತ್ಯ ಚ ।
ಅಕೀರ್ತಿಂ ಸರ್ವಲೋಕೇಷು ಗಚ್ಛೇಯಂ ಶಾಶ್ವತೀಃ ಸಮಾಃ ॥೮೦॥

ಆ ನನ್ನ ಸಹೋದರರನ್ನು ಕಾಡಿನಲ್ಲಿ ಬಿಟ್ಟು ದುರ್ಯೋಧನನ ವೈರಕ್ಕೆ ಪ್ರತೀಕಾರವನ್ನು ಮಾಡದೆ ಸರ್ವಲೋಕಗಳಲ್ಲಿ ಶಾಶ್ವತವಾದ ಕಾಲದಲ್ಲಿ ಅಪಕೀರ್ತಿಯನ್ನು ಹೊಂದಿಯೇನು (ಎಂದು ಹೇಳಿದನು.)

ಏವಮುಕ್ತಃ ಪ್ರತ್ಯುವಾಚ ವೃತ್ರಹಾ ಪಾಂಡುನಂದನಮ್ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಸರ್ವಲೋಕನಮಸ್ಕೃತಃ ॥೮೧॥

ಹೀಗೆ ಹೇಳಲ್ಪಟ್ಟ ಸರ್ವಲೋಕನಮಸ್ಕೃತನಾದ ಇಂದ್ರನು ಪಾಂಡುನಂದನನಾದ ಅರ್ಜುನನನ್ನು ಮಧುರವಾದ ಮಾತುಗಳಿಂದ ಸಮಾಧಾನಪಡಿಸುತ್ತಾ ಮಾತನಾಡಿದನು.

ಯದಾ ದ್ರಕ್ಷ್ಯಸಿ ಭೂತೇಶಂ ತ್ರ್ಯಕ್ಷಂ ಶೂಲಧರಂ ಶಿವಮ್ ।
ತದಾ ದಾತಾಸ್ಮಿ ತೇ ತಾತ ದಿವ್ಯಾನ್ಯಸ್ತ್ರಾಣಿ ಸರ್ವಶಃ ॥೮೨॥

ಎಲೈ ಪ್ರೀತಿಪಾತ್ರನೇ ನೀನು ಯಾವಾಗ ಭೂತಪತಿಯೂ ತ್ರಿನೇತ್ರನೂ ತ್ರಿಶೂಲಧಾರಿಯೂ ಆದ ಶಿವನನ್ನು ನೋಡುವಿಯೋ ಆಗ ನಿನಗೆ ಎಲ್ಲಾ ದಿವ್ಯಾಸ್ತ್ರಗಳನ್ನೂ ಕೊಡುವೆನು.

ಕ್ರಿಯತಾಂ ದರ್ಶನೇ ಯತ್ನೋ ದೇವಸ್ಯ ಪರಮೇಷ್ಠಿನಃ ।
ದರ್ಶನಾತ್ ತಸ್ಯ ಕೌಂತೇಯ ಸಂಸಿದ್ಧಃ ಸ್ವರ್ಗಮೇಷ್ಯಸಿ ॥೮೩॥

ಆ ಪರಮ ದೇವತೆಯ ದರ್ಶನಕ್ಕಾಗಿ ಪ್ರಯತ್ನಪಡು. ಕೌಂತೇಯನೇ ಆ ದೇವನ ದರ್ಶನದಿಂದ ನೀನು ಸಿದ್ಧಿಯನ್ನು ಪಡೆದು ಸ್ವರ್ಗಕ್ಕೆ ಆಗಮಿಸುವಿ.

ಇತ್ಯುಕ್ತ್ವಾ ಫಲ್ಗುನಂ ಶಕ್ರೋ ಜಗಾಮಾದರ್ಶನಂ ತತಃ ।
ಅರ್ಜುನೋಽಪ್ಯಥ ತತ್ರೈವ ತಸ್ಥೌ ಯೋಗಬಲಾನ್ವಿತಃ ॥೮೪॥

ಅರ್ಜುನನನ್ನು ಕುರಿತು ಹೀಗೆ ಹೇಳಿ ಇಂದ್ರನು ಅಲ್ಲಿಯೇ ಅದೃಶ್ಯನಾದನು. ಅನಂತರ ಅರ್ಜುನನೂ ಕೂಡ ಅಲ್ಲಿಯೇ ಯೋಗಬಲದಿಂದ ಕೂಡಿದವನಾಗಿ ತಪಸ್ಸನ್ನು ಮುಂದುವರಿಸುತ್ತಾ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತಾ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮೂವತ್ತೈದನೆಯ ಅಧ್ಯಾಯ

(ಅರ್ಜುನನ ತಪಸ್ಸು. ಋಷಿಗಳ ಪ್ರಾರ್ಥನೆ.
ಮತ್ತು ಮಹೇಶ್ವರನಿಂದ ಸಮಾಶ್ವಾಸನೆ.)

### ಜನಮೇಜಯಃ

ಭಗವನ್ ಶ್ರೋತುಮಿಚ್ಛಾಮಿ ಪಾರ್ಥಸ್ಯಾಕ್ಲಿಷ್ಟಕರ್ಮಣಃ ।
ವಿಸ್ತರೇಣ ಕಥಾಮೇತಾಂ ಯಥಾಽಸ್ತ್ರಾಣ್ಯುಪಲಬ್ಧವಾನ್ ॥೧॥

ಪೂಜ್ಯರೇ ಅಕ್ಲಿಷ್ಟಕಾರಿಯಾದ ಪಾರ್ಥನು ಅಸ್ತ್ರಗಳನ್ನು ಪಡೆದ ಈ ಕಥೆಯನ್ನು ವಿಸ್ತಾರವಾಗಿ ಕೇಳಲು ನಾನು ಬಯಸುತ್ತೇನೆ.

ಕಥಂ ಸ ಪುರುಷವ್ಯಾಘ್ರೋ ದೀರ್ಘಬಾಹುಃ ಸುಲೋಚನಃ ।
ವನಂ ಪ್ರವಿಷ್ಟಸ್ತೇಜಸ್ವೀ ನಿರ್ಮನುಷ್ಯಮಭೀತವತ್ ॥೨॥

ದೀರ್ಘಬಾಹುವೂ ಸುಲೋಚನನೂ ತೇಜಸ್ವಿಯೂ ಪುರುಷವ್ಯಾಘ್ರನೂ ಆದ ಅವನು ನಿರ್ಜನವಾದ ಅರಣ್ಯವನ್ನು ಹೇಗೆ ಪ್ರವೇಶಿಸಿದನು?

ಕಿಂ ವಾಽನೇನ ಕೃತಂ ತತ್ರ ವಸತಾ ಬ್ರಹ್ಮವಿತ್ತಮ ।
ಕಥಂ ಚ ಭಗವಾನ್ ರುದ್ರೋ ದೇವರಾಜಶ್ಚ ತೋಷಿತಃ ॥೩॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರೇ, ಅಲ್ಲಿ ವಾಸಮಾಡಿ ಅವನು ಏನು ಮಾಡಿದನು? ಪೂಜ್ಯನಾದ ಭಗವಂತನಾದ ರುದ್ರನು ಮತ್ತು ಇಂದ್ರನು ಅವನಿಂದ ಹೇಗೆ ಪ್ರಸನ್ನಗೊಳಿಸಲ್ಪಟ್ಟರು?

ಏತದಿಚ್ಛಾಮ್ಯಹಂ ಶ್ರೋತುಂ ತ್ವತ್ಪ್ರಸಾದಾದ್ ದ್ವಿಜೋತ್ತಮ ।
ತ್ವಂ ಹಿ ಸರ್ವಜ್ಞ ದಿವ್ಯಂ ಚ ಮಾನುಷಂ ಚೈವ ವೇತ್ಥ ಹ ॥೪॥

ಎಲೈ ಸರ್ವೋತ್ತಮರಾದ ದ್ವಿಜೋತ್ತಮರೇ, ನಿಮ್ಮ ಅನುಗ್ರಹದಿಂದ ನಾನು ಇದನ್ನು ಕೇಳಲು ಬಯಸುತ್ತೇನೆ. ನೀವು ದೇವಲೋಕದ ಕಥೆಗಳನ್ನು ಮತ್ತು ಮನುಷ್ಯಲೋಕದ ಕಥೆಗಳನ್ನು ತಿಳಿದಿದ್ದೀರಿ.

ಅತ್ಯದ್ಭುತಂ ಮಹಾಪ್ರಾಜ್ಞ ರೋಮಹರ್ಷಣಮರ್ಜುನಃ ।
ಭವೇನ ಸಹ ಸಂಗ್ರಾಮಂ ಚಕಾರಾಪ್ರತಿಮಂ ಕಿಲ ।
ಪುರಾ ಪ್ರಹರತಾಂ ಶ್ರೇಷ್ಠಃ ಸಂಗ್ರಾಮೇಷ್ವಪರಾಜಿತಃ ॥೫॥

ಯಚ್ಛ್ರುತ್ವಾ ನರಸಿಂಹಾನಾಂ ದೈನ್ಯಹರ್ಷಾತಿವಿಸ್ಮಯಾತ್ ।
ಶೂರಾಣಾಮಪಿ ಪಾರ್ಥಾನಾಂ ಹೃದಯಾನಿ ಚಕಂಪಿರೇ ॥೬॥

ಮಹಾಪ್ರಾಜ್ಞರೇ, ಹಿಂದೆ ಯೋಧರಲ್ಲಿ ಶ್ರೇಷ್ಠನೂ ಯುದ್ಧಗಳಲ್ಲಿ ಅಪರಾಜಿತನೂ ಆದ ಅರ್ಜುನನು ಮಹೇಶ್ವರನ ಜೊತೆಯಲ್ಲಿ ಅಸದೃಶವಾದ ಯುದ್ಧವನ್ನು ಮಾಡಿದನಷ್ಟೇ. ಅದನ್ನು ಕೇಳಿ ನರಶ್ರೇಷ್ಠರಾದ ಪಾರ್ಥಿವ ರಾಜರುಗಳಿಗೆ ಬಹಳ ವಿಸ್ಮಯವೂ ಹರ್ಷವೂ ಮತ್ತು ಶೂರರಾದವರಿಗೆ ನಮಗೆ ಇಂತಹ ಶೌರ್ಯವಿಲ್ಲವೆಂದು ದೈನ್ಯವೂ ಉಂಟಾಗಿ ಅವರ ಹೃದಯಗಳು ನಡುಗಿದವಷ್ಟೇ?

ಯದ್ಯಚ್ಚ ಕೃತವಾನನ್ಯತ್ ಪಾರ್ಥಸ್ತದಖಿಲಂ ವದ ॥೭॥

ನ ಹ್ಯಸ್ಯ ನಿಂದಿತಂ ಜಿಷ್ಣೋಃ ಸುಸೂಕ್ಷ್ಮಮಪಿ ಲಕ್ಷಯೇ ।
ಚರಿತಂ ತಸ್ಯ ಶೂರಸ್ಯ ತನ್ಮೇ ಸರ್ವಂ ಪ್ರಕೀರ್ತಯ ॥೮॥

ಅರ್ಜುನನು ಏನನ್ನು ಮಾಡಿದನೋ ಅದೆಲ್ಲವನ್ನೂ ನನಗೆ ಹೇಳಿ. ಅರ್ಜುನನ ಚರಿತ್ರೆಯಲ್ಲಿ ನಿಂದ್ಯವಾದ ಯಾವ ಸಣ್ಣ ಅಂಶವೂ ಇಲ್ಲ. ಆ ಶೂರನ ಎಲ್ಲಾ ಕಥೆಯನ್ನೂ ನನಗೆ ಹೇಳಿ.

ವೈಶಂಪಾಯನಃ

ಕಥಯಿಷ್ಯಾಮಿ ತೇ ಪಾರ್ಥಕಥಾಮೇತಾಂ ಮಹಾತ್ಮನಃ ।
ದಿವ್ಯಾಂ ಕೌರವಶಾರ್ದೂಲ ಮಹತೀಮದ್ಭುತೋಪಮಾಮ್ ॥೯॥

ಕೌರವಶಾರ್ದೂಲನೇ! ಶ್ರೇಷ್ಠವಾದ ಅದ್ಭುತಸದೃಶವಾದ ಮಹಾತ್ಮನಾದ ಅರ್ಜುನನ ಈ ದಿವ್ಯಕಥೆಯನ್ನು ಹೇಳುವೆನು.

ಗಾತ್ರಸಂಸ್ಪರ್ಶಸಂಬದ್ಧಾಂ ತ್ರ್ಯಂಬಕೇಣ ಮಹಾಹವೇ ।
ಪಾರ್ಥಸ್ಯ ದೇವದೇವೇನ ಶೃಣು ಸಮ್ಯಕ್ ಸಮಾಗಮಮ್ ॥೧೦॥

ದೊಡ್ಡಯುದ್ಧದಲ್ಲಿ ದೇವದೇವನಾದ ತ್ರ್ಯಂಬಕನ ಜೊತೆಯಲ್ಲಿ ಶರೀರಸ್ಪರ್ಶಮಾಡಿ ನಡೆದ ಪಾರ್ಥನ ಸಮಾಗಮವನ್ನು ಚೆನ್ನಾಗಿ ಕೇಳು.

ಯುಧಿಷ್ಠಿರನಿಯೋಗಾತ್ ಸ ಜಗಾಮಾಮಿತವಿಕ್ರಮಃ ।
ಶಕ್ರಂ ಸುರೇಶ್ವರಂ ದ್ರಷ್ಟುಂ ದೇವದೇವಂ ಚ ಶಂಕರಮ್ ॥೧೧॥

ಅಮಿತವಿಕ್ರಮನಾದ ಅರ್ಜುನನು ಯುಧಿಷ್ಠಿರನ ಆದೇಶದಂತೆ ದೇವರಾಜನಾದ ಇಂದ್ರನನ್ನು ಮತ್ತು ದೇವದೇವನಾದ ಶಂಕರನನ್ನು ನೋಡಲು ಹೋದನು.

ದಿವ್ಯಂ ತದ್ಧನುರಾದಾಯ ಖಡ್ಗಂ ಚ ಪುರುಷರ್ಷಭಃ ।
ಮಹಾಬಲೋ ಮಹಾಬಾಹುರರ್ಜುನಃ ಕಾರ್ಯಸಿದ್ಧಯೇ ॥೧೨॥

ಪುರುಷರ್ಷಭನೂ ಮಹಾಬಲನೂ ಮಹಾಬಾಹುವೂ ಆದ ಅರ್ಜುನನು ದಿವ್ಯವಾದ ಗಾಂಡೀವಧನುಸ್ಸನ್ನು ಮತ್ತು ಖಡ್ಗವನ್ನು ತೆಗೆದುಕೊಂಡು ಕಾರ್ಯಸಿದ್ಧಿಗಾಗಿ ಹೊರಟನು.

ದಿಶಂ ಹ್ಯುದೀಚೀಂ ಕೌರವ್ಯೋ ಹಿಮವಚ್ಛಿಖಿರಂ ಪ್ರತಿ ।
ಐಂದ್ರಿಃ ಸ್ಥಿರಮನಾ ರಾಜನ್ ಸರ್ವಲೋಕಮಹಾರಥಃ ॥೧೩॥

ತ್ವರಯಾ ಪರಯಾ ಯುಕ್ತಸ್ತಪಸೇ ಧೃತನಿಶ್ಚಯಃ ।
ವನಂ ಕಂಟಕಿನಂ ಘೋರಮೇಕ ಏವಾನ್ವಪದ್ಯತ ॥೧೪॥

ನಾನಾಪುಷ್ಪಫಲೋಪೇತಂ ನಾನಾಪಕ್ಷಿನಿನಾದಿತಮ್ ।
ನಾನಾಮೃಗಗಣಾಕೀರ್ಣಂ ಸಿದ್ಧಚಾರಣಸೇವಿತಮ್ ॥೧೫॥

ಕುರುಕುಲದಲ್ಲಿ ಜನಿಸಿದ ಸರ್ವಲೋಕಮಹಾರಥನೂ ಸ್ಥಿರಮನಸ್ಸುಳ್ಳವನೂ ಇಂದ್ರಪುತ್ರನೂ ಕೌರವ್ಯನೂ ಆದ ಅರ್ಜುನನು ತಪಸ್ಸನ್ನು ಮಾಡುವುದಾಗಿ ನಿಶ್ಚಯಿಸಿ ಉತ್ತರದಿಕ್ಕಿಗೆ ಹಿಮಾಲಯದ ಶಿಖರವನ್ನು ಕುರಿತು ಜಾಗ್ರತೆಯಾಗಿ ಪ್ರಯಾಣಮಾಡಿ ಮುಳ್ಳುಗಳುಳ್ಳ ಮರಗಳಿಂದ ಕೂಡಿದ್ದ ಒಂದು ಘೋರವಾದ ಆರಣ್ಯವನ್ನು ಏಕಾಕಿಯಾಗಿ ಹೊಕ್ಕನು. ಆ ಅರಣ್ಯವು ನಾನಾ ಪುಷ್ಪಫಲಗಳಿಂದಲೂ ನಾನಾ ಪಕ್ಷಿಗಳ ನಿನಾದದಿಂದಲೂ ನಾನಾ ಮೃಗಗಳ ಗಣಗಳಿಂದಲೂ ಕೂಡಿ ಸಿದ್ಧಚಾರಣರಿಂದ ಸೇವಿತವಾಗಿದ್ದಿತು.

ತತಃ ಪ್ರಯಾತೇ ಬೀಭತ್ಸೌ ವನಂ ಮಾನುಷವರ್ಜಿತಮ್ ।
ಶಂಖಾನಾಂ ಪಟಹಾನಾಂ ಚ ಶಬ್ದಃ ಸಮಭವದ್ ದಿವಿ ॥೧೬॥

ಅನಂತರ ಅರ್ಜುನನು ಮನುಷ್ಯರಹಿತರಾದ ಆ ಅರಣ್ಯವನ್ನು ಪ್ರವೇಶಿಸುತ್ತಿರಲು ಆಕಾಶದಲ್ಲಿ ಶಂಖಗಳ ಮತ್ತು ಭೇರಿಗಳ ಶಬ್ದವು ಉಂಟಾಯಿತು.

ಪುಷ್ಪವರ್ಷಂ ಚ ಸುಮಹನ್ನಿಪಪಾತ ಮಹೀತಳೇ ।
ಮೇಘಜಾಲಂ ಚ ವಿತತಂ ಛಾದಯಾಮಾಸ ಸರ್ವತಃ ॥೧೭॥

ಭೂಮಿಯ ಮೇಲೆ ದೊಡ್ಡ ಪುಷ್ಪವೃಷ್ಟಿಯು ಉಂಟಾಯಿತು. ಮೇಘಸಮೂಹವು ಎಲ್ಲೆಡೆಯಲ್ಲಿ ಹರಡಿ ಅರ್ಜುನನಿಗೆ ನೆರಳನ್ನು ಕೊಟ್ಟಿತು.

ಸೋಽತೀತ್ಯ ವನದುರ್ಗಾಣಿ ಸನ್ನಿಕರ್ಷೇ ಮಹಾಗಿರೇಃ ।
ಶುಶುಭೇ ಹಿಮವತ್ಪೃಷ್ಠೇ ವಸಮಾನೋಽರ್ಜುನಸ್ತದಾ ॥೧೮॥

ಅರ್ಜುನನು ಅನೇಕ ವನದುರ್ಗಗಳನ್ನು ದಾಟಿ ಮಹಾಪರ್ವತವಾದ ಹಿಮಾಲಯದ ಸಮೀಪದ ತಪ್ಪಲಿನಲ್ಲಿ ವಾಸಮಾಡುತ್ತಾ ಶೋಭಿಸಿದನು.

ತತ್ರ ಪುಣ್ಯದ್ರುಮಾನ್ಪುಷ್ಪಾನ್ ವಿಹಗೈರ್ವಲ್ಗುನಾದಿತಾನ್ ।
ದೀರ್ಘಂ ಚ ವಿಪುಲಾವರ್ತಾಂ ನೀಲವೈಡೂರ್ಯಸನ್ನಿಭಾಮ್ ॥೧೯॥

ಹಂಸಕಾರಂಡವೋದ್ಗೀತಾಂ ಸಾರಸಾಭಿರುತಾಂ ತಥಾ ।
ಪುಂಸ್ಕೋಕಿಲರುತಾಂ ಚೈವ ಕ್ರೌಂಚಬರ್ಹಿಣನಾದಿತಾಮ್ ॥೨೦॥

ಮನೋಹರವನೋಪೇತಾಂ ತಸ್ಮಿನ್ನತಿರಥೋಽರ್ಜುನಃ ।
ಪುಣ್ಯಶೀಲಾಮಲಜಲಾಂ ಪಶ್ಯನ್ ಪ್ರೀತಮನಾಽಭವತ್ ॥೨೧॥

ಅಲ್ಲಿ ಅರ್ಜುನನು ಪಕ್ಷಿಗಳಿಂದ ಸುಂದರವಾಗಿ ನಿನಾದಿತವಾದ ಪುಣ್ಯ ವೃಕ್ಷಗಳನ್ನೂ ಪುಷ್ಪಗಳನ್ನೂ ನೋಡಿ, ದೊಡ್ಡ ಸುಳಿಗಳನ್ನುಳ್ಳ ನೀಲ ವೈಡೂರ್ಯದಂತೆ ಕಂಗೊಳಿಸುವ ಹಂಸಕಾರಂಡವ ಸಾರಸ ಮೊದಲಾದ ಜಲಪಕ್ಷಿಗಳ ಕ್ರೌಂಚಗಳ ಮತ್ತು ಮಯೂರಗಳ ನಾದಗಳಿಂದಲೂ ಕೂಡಿ, ಮನೋಹರವಾದ ಕಾಡಿನ ಮಧ್ಯದಲ್ಲಿದ್ದ ಪವಿತ್ರವಾದ ಸ್ವಚ್ಛವಾದ ಜಲವನ್ನು ಹೊಂದಿದ್ದ ಸರೋವರವನ್ನು ನೋಡಿ ಅತಿರಥನಾದ ಅವನು ಸಂತೋಷಗೊಂಡನು.

ರಮಣೀಯೇ ವನೋದ್ದೇಶೇ ರಮಮಾಣೋಽರ್ಜುನಸ್ತದಾ ।
ತಪಸ್ಯುಗ್ರೇ ವರ್ತಮಾನ ಉಗ್ರತೇಜಾ ಮಹಾಮನಾಃ ॥೨೨॥

ದರ್ಭಚೀರಂ ನಿವಸ್ಯಾಥ ದಂಡಾಜಿನವಿಭೂಷಿತಃ ।
ಪೂರ್ಣೇ ಪೂರ್ಣೇ ತ್ರಿರಾತ್ರೇ ತು ಮಾಸಮೇಕಂ ಫಲಾಶನಃ ।
ದ್ವಿಗುಣೇನ ಚ ಕಾಲೇನ ದ್ವಿತೀಯಂ ಮಾಸಮತ್ಯಗಾತ್ ॥೨೩॥

ರಮಣೀಯವಾದ ವನಪ್ರದೇಶದಲ್ಲಿ ಸಂತೋಷಪಡುತ್ತಾ ಉಗ್ರವಾದ ತಪಸ್ಸಿನಲ್ಲಿ ನಿರತನಾದ ಮಹಾತೇಜಸ್ವಿಯಾದ ಧೈರ್ಯಶಾಲಿಯಾದ ಅರ್ಜುನನು ಆಗ ದರ್ಭೆಯಮಡಿಯನ್ನು ಉಟ್ಟು ದಂಡ ಮತ್ತು ಅಜಿನಗಳಿಂದ ವಿಭೂಷಿತನಾಗಿ ಮೊದಲನೆಯ ತಿಂಗಳಿನಲ್ಲಿ ಮೂರುಮೂರು ರಾತ್ರಿಗಳಿಗೆ ಒಮ್ಮೆ ಫಲವನ್ನು ಸ್ವೀಕರಿಸಿ ತಪಸ್ಸನ್ನುಮಾಡಿದನು. ಆರು ದಿನಗಳಿಗೆ ಒಮ್ಮೆ ಸ್ವೀಕರಿಸಿ ತಪಸ್ಸನ್ನು ಮಾಡಿ ಎರಡನೆಯ ತಿಂಗಳನ್ನು ಕಳೆದನು.

ತೃತೀಯಮಾಸಸಮಯೇ ಪಕ್ಷೇಣಾಹಾರಮಾಚರತ್ ।
ಜೀರ್ಣಂ ಚ ಪತಿತಂ ಭೂಮೌ ಪರ್ಣಂ ಸಮುಪಯುಕ್ತವಾನ್ ॥೨೪॥

ಚತುರ್ಥೇ ತ್ವಥ ಸಂಪ್ರಾಪ್ತೇ ಮಾಸಿ ಪೂರ್ಣೇ ತತಃ ಪರಮ್ ।
ವಾಯುಭಕ್ಷೋ ಮಹಾಬಾಹುರಭವತ್ ಪಾಂಡುನಂದನಃ ॥೨೫॥

ಊರ್ಧ್ವಬಾಹುರ್ನಿರಾಲಂಬಃ ಪಾದಾಂಗುಷ್ಠಾಗ್ರವಿಷ್ಠಿತಃ ॥೨೬॥

ಮೂರನೆಯ ತಿಂಗಳಿನಲ್ಲಿ ಹದಿನೈದು ದಿನಕ್ಕೊಮ್ಮೆ ಆಹಾರವನ್ನು ಸೇವಿಸುತ್ತಾ ಹಣ್ಣಾಗಿ ಭೂಮಿಗೆ ಬಿದ್ದ ಎಲೆಗಳನ್ನು ಭುಂಜಿಸಿದನು. ನಾಲ್ಕನೆಯ ಮಾಸವು ಪ್ರಾಪ್ತವಾದಾಗ ಪಾಂಡುನಂದನನೂ ಮಹಾಬಾಹುವೂ ಆದ ಅವನು ಒಂದು ತಿಂಗಳು ಪೂರ್ತಿ ಊರ್ಧ್ವಬಾಹುವಾಗಿ ಪಾದಾಂಗುಷ್ಠದ ಮೇಲೆ ನಿಂತು ಬೇರೆಯ ಆಶ್ರಯವನ್ನು ಪಡೆಯದೆ ಕೇವಲ ವಾಯು ಭಕ್ಷನಾದನು.

ಸದೋಪಸ್ಪರ್ಶನಾಚ್ಚಾಸ್ಯ ಬಭೂವುರಮಿತೌಜಸಃ ।
ವಿದ್ಯುದಂಭೋರುಹನಿಭಾ ಜಟಾಸ್ತಸ್ಯ ಮಹಾತ್ಮನಃ ॥೨೭॥

ಅಮಿತತೇಜಸ್ವಿಯಾದ ಅವನು ಯಾವಾಗಲೂ ಸ್ನಾನಮಾಡುವುದರಿಂದ ಮಹಾತ್ಮನಾದ ಅವನ ಜಟೆಗಳು ಮಿಂಚಿನಿಂದ ಮಾಡಿದ ಕಮಲಗಳಂತೆ ಶೋಭಿಸಿದವು.

ತತೋ ಮಹರ್ಷಯಃ ಸರ್ವೇ ಜಗ್ಮುರ್ದೇವಂ ಪಿನಾಕಿನಮ್ ।
ಶಿತಿಕಂಠಂ ಮಹಾದೇವಂ ಪ್ರಣಿಪತ್ಯ ಪ್ರಸಾದಯನ್ ।
ಸರ್ವಂ ನಿವೇದಯಾಮಾಸುಃ ಕರ್ಮ ತತ್ ಫಲ್ಗುನಸ್ಯ ಚ ॥೨೮॥

ಆಗ ಮಹರ್ಷಿಗಳೆಲ್ಲರೂ ಪಿನಾಕಧಾರಿಯೂ ನೀಲಕಂಠನೂ ಆದ ಮಹಾದೇವನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಪ್ರಸನ್ನೀಕರಿಸಿಕೊಂಡು ಅರ್ಜುನನ ಎಲ್ಲಾ ತಪಸ್ಸಿನ ವಿಷಯಗಳನ್ನೂ ನಿವೇದಿಸಿದರು.

ಏಷಃ ಪಾರ್ಥೋ ಮಹಾತೇಜಾ ಹಿಮವತ್ಪೃಷ್ಠಮಾಶ್ರಿತಃ ।
ಉಗ್ರೇ ತಪಸಿ ದುಷ್ಪಾರೇ ಸ್ಥಿತೋ ಧೂಮಾಪಯನ್ ದಿಶಃ ॥೨೯॥

ಮಹಾತೇಜಸ್ವಿಯಾದ ಈ ಅರ್ಜುನನು ಹಿಮಾಲಯದ ತಪ್ಪಲನ್ನು ಆಶ್ರಯಿಸಿ ಉಗ್ರವಾದ ಮುಗಿಯದ ತಪಸ್ಸಿನಲ್ಲಿ ನಿರತನಾಗಿ ಎಲ್ಲ ದಿಕ್ಕುಗಳಲ್ಲಿ ತನ್ನ ತಪಃಪ್ರಭಾವದಿಂದ ಧೂಮವನ್ನು ಎಬ್ಬಿಸುತ್ತಿದ್ದಾನೆ.

ತಸ್ಯ ದೇವೇಶ ನ ವಯಂ ವಿದ್ಮಃ ಸರ್ವೇ ಚಿಕೀರ್ಷಿತಮ್ ।
ಸಂತಾಪಯತಿ ನಃ ಸರ್ವಾನಸೌ ಸಾಧು ನಿವಾರ್ಯತಾಮ್ ॥೩೦॥

ದೇವೇಶನೇ, ಅವನ ಉದ್ದೇಶವು ನಮಗೆ ತಿಳಿದಿಲ್ಲ. ಅವನು ನಮ್ಮೆಲ್ಲರಿಗೆ ಸಂತಾಪವನ್ನು ಉಂಟುಮಾಡುವನೆಂದು ತೋರುತ್ತದೆ. ಅವನನ್ನು ತಪಸ್ಸಿನಿಂದ ಹಿಂದಿರುಗಿಸು.

ಶ್ರೀಮಹೇಶ್ವರಃ

ಶೀಘ್ರಂ ಗಚ್ಛತ ಸಂಹೃಷ್ಟಾ ಯಥಾಗತಮತಂದ್ರಿತಾಃ ।
ಅಹಮಸ್ಯ ವಿಜಾನಾಮಿ ಸಂಕಲ್ಪಂ ಮನಸಿ ಸ್ಥಿತಮ್ ॥೩೧॥

ನಾಸ್ಯ ಸ್ವರ್ಗಸ್ಪೃಹಾ ಕಾಚಿನ್ನೈಶ್ವರ್ಯಸ್ಯ ತಥಾऽऽಯುಷಃ ।
ಯತ್ ತಸ್ಯ ಕಾಂಕ್ಷಿತಂ ಸರ್ವಂ ತದಸ್ಯ ಕರವಾಣ್ಯಹಂ ॥೩೨॥

ನೀವೆಲ್ಲರೂ ಸಂತುಷ್ಟರಾಗಿ ಆಲಸ್ಯಮಾಡದೆ ಬಂದದಾರಿಯಲ್ಲಿಯೇ ಶೀಘ್ರವಾಗಿ ಹಿಂದಿರುಗಿ. ನಾನು ಅವನ ಮನಸ್ಸಿನಲ್ಲಿರುವ ಸಂಕಲ್ಪವನ್ನು ತಿಳಿದಿದ್ದೇನೆ. ಅವನಿಗೆ ಸ್ವರ್ಗದ ಆಸೆಯಾಗಲೀ ಐಶ್ವರ್ಯದ ಆಸೆಯಾಗಲೀ ಆಯುಷ್ಯದ ಆಸೆಯಾಗಲೀ ಇಲ್ಲ. ಅವನಿಗೆ ಏನು ಅಪೇಕ್ಷಿತವಾಗಿದೆಯೋ ಅದೆಲ್ಲವನ್ನೂ ನಾನು ನೆರವೇರಿಸುತ್ತೇನೆ.

ವೈಶಂಪಾಯನಃ

ತಚ್ಛ್ರುತ್ವಾ ಭಗವದ್ವಾಕ್ಯಮೃಷಯಃ ಸತ್ಯವಾದಿನಃ ।
ಪ್ರಹೃಷ್ಟಮನಸೋ ಜಗ್ಮುರ್ಯಥಾಸ್ವಂ ಪುನರಾಶ್ರಮಾನ್ ॥೩೩॥

ಆ ಭಗವದ್ವಾಕ್ಯವನ್ನು ಕೇಳಿ ಸತ್ಯವಾದಿಗಳಾದ ಋಷಿಗಳು ಸಂತುಷ್ಟಚಿತ್ತರಾಗಿ ತಾವು ಬಂದ ದಾರಿಯಲ್ಲಿಯೇ ತಮ್ಮತಮ್ಮ ಆಶ್ರಮಗಳಿಗೆ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚತ್ರಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮೂವತ್ತಾರನೆಯ ಅಧ್ಯಾಯ

(ಕಿರಾತಾರ್ಜುನಯುದ್ಧ. ಅರ್ಜುನನ ಪರಾಜಯ. ಮಹೇಶ್ವರನ ಅನುಗ್ರಹ. ಪಾಶುಪತಾಸ್ತ್ರ ದಾನ.)

ವೈಶಂಪಾಯನಃ

ಗತೇಷು ತೇಷು ಸರ್ವೇಷು ಬ್ರಾಹ್ಮಣೇಷು ತಪಸ್ವಿಷು ।
ಪಿನಾಕಪಾಣಿರ್ಭಗವಾನ್ ಸರ್ವಪಾಪಹರೋ ಹರಃ ॥೧॥

ಕೈರಾತಂ ವೇಷಮಾಸ್ಥಾಯ ಕಾಂಚನದ್ರುಮಸನ್ನಿಭಃ ।
ವಿಭ್ರಾಜಮಾನೋ ಧನುಷಾ ಗಿರಿರ್ಮೇರುರಿವಾಪರಃ ॥೨॥

ಶ್ರೀಮದ್ಗನುರುಪಾದಾಯ ಶರಾಂಶ್ಚಾಶೀವಿಷೋಪಮಾನ್ ।
ನಿಷ್ಪಪಾತ ಮಹಾರ್ಚಿಷ್ಮಾನ್ ದಹನಃ ಕಕ್ಷವಾನಿವ ॥೩॥

ತಪಸ್ವಿಗಳಾದ ಆ ಬ್ರಾಹ್ಮಣರೆಲ್ಲರೂ ಹೊರಟುಹೋಗುತ್ತಿರಲು ಸರ್ವಪಾಪಹರನಾದ ಪಿನಾಕಪಾಣಿಯಾದ ಪೂಜ್ಯನಾದ ಹರನು ಕಿರಾತರೂಪವನ್ನು ಧರಿಸಿ ಕಾಂಚನಮಯವಾದ ವೃಕ್ಷದಂತೆ ಶೋಭಿಸುತ್ತಾ ಧನುಸ್ಸನ್ನು ಮತ್ತು

ಸರ್ಪಸದೃಶವಾದ ಬಾಣಗಳನ್ನು ತೆಗೆದುಕೊಂಡು ತನ್ನ ಧನುಸ್ಸಿನ ಜೊತೆಯಲ್ಲಿ ಇನ್ನೊಂದು ಮೇರುಪರ್ವತದಂತೆ ಶೋಭಿಸುತ್ತಾ ಮಹಾಕಾಂತಿಯುಕ್ತನಾಗಿ ಕಾಡನ್ನು ದಹಿಸುವ ಅಗ್ನಿಯಂತೆ ಹೊರಟನು.

ದೇವ್ಯಾ ಸಹೋಮಯಾ ಶ್ರೀಮಾನ್ ಸಮಾನವ್ರತವೇಷಯಾ ।
ನಾನಾವೇಷಧರೈರ್ಹೃಷ್ಟೈರ್ಭೂತೈರನುಗತಸ್ತಥಾ ॥೪॥

ಕಿರಾತವೇಷಸಂಛನ್ನೈಃ ಸ್ತ್ರೀಭಿಶ್ಚಾಪಿ ಸಹಸ್ರಶಃ ।
ಅಶೋಭತ ತದಾ ರಾಜನ್ ಸ ದೇವೋಽತೀವ ಭಾರತ ॥೫॥

ಎಲೈ ಭಾರತನೇ! ಕಾಂತಿಯುಕ್ತನಾದ ಆ ದೇವನು ಸಮಾನವ್ರತವನ್ನು ಸಮಾನವೇಷವನ್ನು ಧರಿಸಿದ ಪಾರ್ವತಿಯ ಜೊತೆಯಲ್ಲಿ, ಮತ್ತು ನಾನಾವೇಷವನ್ನು ಧರಿಸಿ ಸಂತುಷ್ಟರಾದ ಭೂತಗಳಿಂದಲೂ ಕಿರಾತವೇಷವನ್ನು ಧರಿಸಿದ ಸಹಸ್ರಾರು ಸ್ತ್ರೀಯರಿಂದಲೂ ಅನುಗತನಾಗಿ, ಬಹಳವಾಗಿ ಕಂಗೊಳಿಸಿದನು.

ಕ್ಷಣೇನ ತದ್ವನಂ ಸರ್ವಂ ನಿಃಶಬ್ದಮಭವತ್ ತದಾ ।
ನಾದಃ ಪ್ರಸ್ರವಣಾನಾಂ ಚ ಪಕ್ಷಿಣಾಮಪ್ಯುಪಾರಮತ್ ॥೬॥

ಒಂದು ಕ್ಷಣದಲ್ಲಿ ಆ ವನವೆಲ್ಲವೂ ನಿಶ್ಶಬ್ದವಾಯಿತು. ಆಗ ಹರಿಯುವ ನೀರಿನ ಶಬ್ದಗಳು ಮತ್ತು ಪಕ್ಷಿಗಳ ನಾದಗಳು ಶಾಂತವಾದವು.

ಸ ಸನ್ನಿಕರ್ಷಮಾಗಮ್ಯ ಪಾರ್ಥಸ್ಯಾಕ್ಲಿಷ್ಟಕರ್ಮಣಃ ।
ಮೂಕಂ ನಾಮ ದಿತೇಃ ಪುತ್ರಂ ದದರ್ಶಾದ್ಭುತವಿಕ್ರಮಮ್ ॥೭॥

ವಾರಾಹಂ ರೂಪಮಾಸ್ಥಾಯ ತರ್ಜಯಂತಮಿವಾರ್ಜುನಮ್ ।
ಹಂತುಂ ಪರಮದುಷ್ಟಾತ್ಮಾ ತಮುವಾಚಾಥ ಫಲ್ಗುನಃ ॥೮॥

ಅವನು ಅಕ್ಲಿಷ್ಟಕಾರಿಯಾದ ಅರ್ಜುನನ ಬಳಿಗೆ ಬಂದು ವರಾಹರೂಪವನ್ನು ಧರಿಸಿ ಅರ್ಜುನನನ್ನು ಹೆದರಿಸಿ ಅರ್ಜುನನನ್ನು ಸಂಹರಿಸಲು ಬಯಸಿದ ಪರಮ ದುಷ್ಟನಾದ ಮಹಾಪರಾಕ್ರಮಶಾಲಿಯಾದ ಮೂಕ ಎಂಬ ದೈತ್ಯನನ್ನು ನೋಡಿದನು. ಆಗ ಅರ್ಜುನನು ದೈತ್ಯನನ್ನು ಕುರಿತು ಮಾತನಾಡಿದನು.

ಗಾಂಡೀವಂ ಧನುರಾದಾಯ ಶರಾಂಶ್ಚಾಶೀವಿಷೋಪಮಾನ್ ।
ಸಜ್ಯಂ ಧನುರ್ವರಂ ಕೃತ್ವಾ ಜ್ಯಾಘೋಷೇಣ ವ್ಯನಾದಯನ್ ॥೯॥

ಯನ್ಮಾಂ ಪ್ರಾರ್ಥಯಸೇ ಹಂತುಮನಾಗಸಮಿಹಾಗತಃ ।
ತಸ್ಮಾತ್ತ್ವಾಂ ಪೂರ್ವಮೇವಾದ್ಯ ನೇಷ್ಯಾಮಿ ಯಮಸಾದನಮ್ ॥೧೦॥

ಅರ್ಜುನನು ಗಾಂಡೀವಧನುಸ್ಸನ್ನೂ ಸರ್ಪಗಳಂತೆ ಇದ್ದ ಬಾಣಗಳನ್ನೂ ತೆಗೆದುಕೊಂಡು ಹೆದೆ ಏರಿಸಿ ಜಯಘೋಷವನ್ನು ಮಾಡುತ್ತಾ ಆ ಮೂಕನನ್ನುಕುರಿತು ನಿರಪರಾಧಿಯಾದ ನನ್ನನ್ನು ಇಲ್ಲಿಗೆ ಬಂದು ನೀನು ಕೊಲ್ಲಲು ಬಯಸುವುದರಿಂದ ನಾನು ಮೊದಲೇ ನಿನ್ನನ್ನು ಯಮಲೋಕಕ್ಕೆ ಕಳುಹಿಸುವೆನು ಎಂದು ಹೇಳಿದನು.

ವೈಶಂಪಾಯನಃ

ದೃಷ್ಟ್ವಾ ತಂ ಪ್ರಹರಿಷ್ಯಂತಂ ಫಲ್ಗುನಂ ದೃಢಧನ್ವಿನಮ್ ।
ಕಿರಾತರೂಪೀ ಸಹಸಾ ವಾರಯಾಮಾಸ ಶಂಕರಃ ॥೧೧॥

ದೃಢಧನುಸ್ಸನ್ನು ಹೊಂದಿದ ಅರ್ಜುನನು ಆ ವರಾಹವನ್ನು ಹೊಡೆಯಲು ಉದ್ಯುಕ್ತನಾಗಿರುವುದನ್ನು ನೋಡಿ ಕಿರಾತರೂಪಿಯಾದ ಶಂಕರನು ತಕ್ಷಣ ಅರ್ಜುನನನ್ನು ತಡೆದನು.

ಮಯೈಷ ಪ್ರಾರ್ಥಿತಃ ಪೂರ್ವಂ ನೀಲಮೇಘಸಮಪ್ರಭಃ ।
ಅನಾದೃತ್ಯೈವ ತದ್ವಾಕ್ಯಂ ಪ್ರಜಹಾರೈವ ಫಲ್ಗುನಃ ॥೧೨॥

ಈ ಕಪ್ಪುಮೋಡದ ಸಮಾನಕಾಂತಿಯುಳ್ಳ ವರಾಹವು ನನ್ನಿಂದಲೇ ಮೊದಲು ಪ್ರಾರ್ಥಿತವಾಗಿದ್ದಿತು ಎಂಬ ಶಂಕರನ ಮಾತುಗಳನ್ನು ಪರಿಗಣಿಸದೆಯೇ ಅರ್ಜುನನು ಬಾಣಪ್ರಯೋಗವನ್ನು ಮಾಡಿಯೇ ಬಿಟ್ಟನು.

ಕಿರಾತಶ್ಚ ಸಮಂ ತಸ್ಮಿನ್ನೇಕಲಕ್ಷ್ಯೇ ಮಹಾದ್ಯುತಿಃ ।
ಪ್ರಮುಮೋಚಾಶನಿಪ್ರಖ್ಯಂ ಶರಮಗ್ನಿಶಿಖೋಪಮಮ್ ॥೧೩॥

ಮಹಾಕೀರ್ತಿಯುಳ್ಳ ಕಿರಾತನೂ ಸಹ ಅದೇ ಕ್ಷಣದಲ್ಲಿ ಅದೇ ಲಕ್ಷ್ಯದ ಮೇಲೆ ಸಿಡಿಲಿನಂತೆ ಮತ್ತು ಅಗ್ನಿಶಿಖೆಯಂತೆ ಇರುವ ಬಾಣವನ್ನು ಪ್ರಯೋಗಿಸಿದನು.

ತೌ ಮುಕ್ತೌ ಸಾಯಕೌ ತಾಭ್ಯಾಂ ಸಮಂ ತತ್ರ ನಿಪೇತತುಃ ।
ಮೂಕಸ್ಯ ಗಾತ್ರೇ ವಿಸ್ತೀರ್ಣೇ ಶೈಲಪೃಷ್ಠನಿಭೇ ತದಾ ॥೧೪॥

ಅವರಿಬ್ಬರಿಂದ ಮುಕ್ತವಾದ ಆ ಬಾಣಗಳು ಪರ್ವತದ ಬಂಡೆಯಂತೆ ವಿಸ್ತಾರವಾಗಿದ್ದ ಆ ಮೂಕನ ಶರೀರದಲ್ಲಿ ಬಿದ್ದವು.

ಯಥಾऽಶನೇರ್ವಿನಿಷ್ಪೇಷೋ ವಜ್ರಸ್ಯೇವ ಚ ಪರ್ವತೇ ।
ತಥಾ ತಯೋಃ ಸನ್ನಿಪಾತಃ ಶರಯೋರಭವತ್ ತದಾ ॥೧೫॥

ಎರಡು ಸಿಡಿಲುಗಳ ಸಂಘರ್ಷವಿದ್ದಂತೆ ಅಥವಾ ಪರ್ವತದಲ್ಲಿ ವಜ್ರಪಾತವಾದಂತೆ ಆಗ ಅವೆರಡು ಬಾಣಗಳಿಗೆ ಸಂಯೋಗ ಉಂಟಾಯಿತು.

ಸ ವಿದ್ಧೋ ಬಹುಭಿರ್ಬಾಣೈರ್ದೀಪ್ತಾಸ್ಯೈಃ ಪನ್ನಗೈರಿವ ।
ಮಮಾರ ರಾಕ್ಷಸಂ ರೂಪಂ ಭೂಯಃ ಕೃತ್ವಾऽತಿದಾರುಣಮ್ ॥೧೬॥

ಸರ್ಪಗಳಿಂತಿರುವ ದೀಪ್ತವಾದ ತುದಿಗಳುಳ್ಳ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಮೂಕನು ವರಾಹರೂಪವನ್ನು ಬಿಟ್ಟು ಘೋರವಾದ ರಾಕ್ಷಸರೂಪವನ್ನು ಧರಿಸಿ ಮೃತನಾದನು.

ದದರ್ಶಾಥ ತತೋ ಜಿಷ್ಣುಃ ಪುರುಷಂ ಕಾಂಚನಪ್ರಭಮ್ ।
ಕಿರಾತವೇಷಪ್ರಚ್ಛನ್ನಂ ಸ್ತ್ರೀಸಹಾಯಮಮಿತ್ರಹಾ ।
ತಮಬ್ರವೀತ್ ಪ್ರೀತಮನಾಃ ಕೌಂತೇಯಃ ಪ್ರಹಸನ್ನಿವ ॥೧೭॥

ಆಗ ಜಯಶೀಲನಾದ ಅರ್ಜುನನು ಕಿರಾತವೇಷವನ್ನು ಧರಿಸಿದ ಪತ್ನೀಸಹಿತನಾದ ಕಾಂಚನಪ್ರಭೆಯನ್ನು ಹೊಂದಿದ್ದ ಪುರುಷನನ್ನು ನೋಡಿದನು. ಕೌಂತೇಯನು ಅವನನ್ನು ನೋಡಿ ಸಂತೋಷಗೊಂಡು ನಗುವವನಂತೆ ಅವನ ಜೊತೆ ಮಾತನಾಡಿದನು.

ಕೋ ಭವಾನಟತೇ ಶೂನ್ಯೇ ವನೇ ಸ್ತ್ರೀಗಣಸಂವೃತಃ ।
ನ ತ್ವಮಸ್ಮಿನ್ ವನೇ ಘೋರೇ ಬಿಭೇಷಿ ಕನಕಪ್ರಭ ॥೧೮॥

ಸ್ತ್ರೀಸಮೂಹಸಹಿತನಾಗಿ ಈ ನಿರ್ಜನವಾದ ಅರಣ್ಯದಲ್ಲಿ ಸಂಚರಿಸುತ್ತಿರುವ ನೀನು ಯಾರು? ಎಲೈ ಕನಕ ಪ್ರಭನೇ, ಈ ಘೋರವಾದ ಅರಣ್ಯದಲ್ಲಿ ನೀನು ಭಯಪಡುತ್ತಿಲ್ಲ?

ಕಿಮರ್ಥಂ ಚ ತ್ವಯಾ ವಿದ್ಧೋ ಮೃಗೋಽಯಂ ಮತ್ಪರಿಗ್ರಹಃ ।
ಮಯಾಽಭಿಪನ್ನಃ ಪೂರ್ವಂ ಹಿ ರಾಕ್ಷಸೋಽಯಮಿಹಾಗತಃ ।
ಕಾಮಾತ್ ಪರಿಭವಾಚ್ಚಾಪಿ ನ ಮೇ ಜೀವನ್ ವಿಮೋಕ್ಷ್ಯಸೇ ॥೧೯॥

ನನ್ನಿಂದ ಸ್ವೀಕೃತವಾದ ಈ ಮೃಗವನ್ನು ನೀನು ಏಕೆ ಹೊಡೆದೆ? ಇಲ್ಲಿಗೆ ಬಂದಿದ್ದ ಈ ರಾಕ್ಷಸನು ಮೊದಲು ನನ್ನ ದೃಷ್ಟಿಗೆ ಬಿದ್ದವನು. ನನ್ನನ್ನು ಅವಮಾನಗೊಳಿಸಿ ನೀನು ನಿನ್ನ ಇಚ್ಛೆಯಂತೆ ಜೀವಸಹಿತವಾಗಿ ಇಲ್ಲಿಂದ ಹೋಗಲಾರೆ.

ನ ಹ್ಯೇಷ ಮೃಗಯಾ ಧರ್ಮೋ ಯಸ್ತ್ವಯಾಽದ್ಯ ಕೃತೋ ಮಯಿ ।
ತೇನ ತ್ವಾಂ ಭ್ರಂಶಯಿಷ್ಯಾಮಿ ಜೀವಿತಾತ್ ಪರ್ವತಾಶ್ರಯಮ್ ॥೨೦॥

ನೀನು ನನ್ನ ಜೊತೆಯಲ್ಲಿ ಈ ದಿನ ನಡೆದುಕೊಂಡ ರೀತಿಯು ಬೇಟೆಯ ಧರ್ಮವಲ್ಲ. ಆದ್ದರಿಂದ ಪರ್ವತವಾಸಿಯಾದ ನಿನ್ನನ್ನು ನಾನು ಈದಿನ ಸಂಹರಿಸುವೆನು.

ಇತ್ಯುಕ್ತಃ ಪಾಂಡವೇಯೇನ ಕಿರಾತಃ ಪ್ರಹಸನ್ನಿವ ।
ಉವಾಚ ಶ್ಲಕ್ಷ್ಣಯಾ ವಾಚಾ ಪಾಂಡವಂ ಸವ್ಯಸಾಚಿನಮ್ ॥೨೧॥

ಪಾಂಡುಪುತ್ರನಾದ ಅರ್ಜುನನಿಂದ ಹೀಗೆ ಹೇಳಲ್ಪಟ್ಟ ಕಿರಾತನು ಸವ್ಯಸಾಚಿಯಾದ ಪಾಂಡವನನ್ನು ಕುರಿತು ಮಧುರವಾದ ಮಾತುಗಳನ್ನು ಆಡಿದನು.

ಮಮೈವಾಯಂ ಲಕ್ಷಭೂತಃ ಪೂರ್ವಮೇವ ಪರಿಗ್ರಹಃ ।
ಮಮೈವ ಚ ಪ್ರಹಾರೇಣ ಜೀವಿತಾದವರೋಪಿತಃ ॥೨೨॥

ಇದನ್ನು ನಾನೇ ಮೊದಲು ನೋಡಿದ್ದು. ಆದ್ದರಿಂದ ನನಗೇ ಲಕ್ಷ್ಯವಾದ ವಸ್ತು. ಅಲ್ಲದೆ ನನ್ನ ಪ್ರಹಾರದಿಂದಲೇ ಅದು ಮೃತವಾಗಿದೆ.

ದೋಷಾನ್ ಸ್ವಾನ್ ನಾರ್ಹಸೇಽನ್ಯಸ್ಮೈ ವಕ್ತುಂ ಸ್ವಬಲದರ್ಪಿತಃ ।
ಅಭಿಪಕ್ತೋಽಸ್ಮಿ ಮಂದಾತ್ಮನ್ ನ ಮೇ ಜೀವನ್ ವಿಮೋಕ್ಷ್ಯಸೇ ॥೨೩॥

ನಿನ್ನ ದೋಷಗಳನ್ನು ನಿನ್ನ ಬಲದಿಂದ ದರ್ಪಿತನಾಗಿ ಇನ್ನೊಬ್ಬರಿಗೆ ಹೇಳಬೇಡ. ಮಂದಾತ್ಮನೇ ನಾನು ನಿನ್ನನ್ನು ಎದುರಿಸಲು ಸಿದ್ಧನಾಗಿದ್ದೇನೆ. ಜೀವಸಹಿತವಾಗಿ ನೀನು ಇಲ್ಲಿಂದ ಹೋಗುವುದಿಲ್ಲ.

ಸ್ಥಿರೋ ಭವಸ್ವ ಮೋಕ್ಷ್ಯಾಮಿ ಸಾಯಕಾನಶನೀನಿವ ।
ಘಟಸ್ವ ಪರಯಾ ಶಕ್ತ್ಯಾ ಮುಂಚ ತ್ವಮಪಿ ಸಾಯಕಾನ್ ॥೨೪॥

ಸ್ಥಿರವಾಗಿ ನಿಲ್ಲು. ಸಿಡಿಲುಗಳಂತಿರುವ ಬಾಣಗಳನ್ನು ಪ್ರಯೋಗಿಸುತ್ತೇನೆ. ನಿನ್ನ ಪರಮಶಕ್ತಿಯಿಂದ ನೀನು ನನ್ನನ್ನು ಎದುರಿಸಿ ಬಾಣಗಳನ್ನು ಪ್ರಯೋಗಿಸು.

ವೈಶಂಪಾಯನಃ

ತತಸ್ತೌ ತತ್ರ ಸಂರಬ್ಧೌ ಗರ್ಜಮಾನೌ ಮುಹುರ್ಮುಹುಃ ।
ಶರೈರಾಶೀವಿಷಾಕಾರೈಃ ತತಕ್ಷಾತೇ ಪರಸ್ಪರಮ್ ॥೨೫॥

ಅನಂತರ ಅವರಿಬ್ಬರೂ ಸಂಕ್ರುದ್ಧರಾಗಿ ಮತ್ತೆ ಮತ್ತೆ ಗರ್ಜಿಸುತ್ತಾ ಸರ್ಪಾಕಾರವುಳ್ಳ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ತತೋಽರ್ಜುನಃ ಶರವ್ರಾತಾನ್ ಕಿರಾತೇ ಸಮವಾಸೃಜತ್ ।
ತತ್ಪ್ರಸನ್ನೇನ ಮನಸಾ ಪ್ರತಿಜಗ್ರಾಹ ಶಂಕರಃ ॥೨೬॥

ಆಗ ಅರ್ಜುನನು ಕಿರಾತನ ಮೇಲೆ ಬಾಣಗಳ ಸಮೂಹವನ್ನು ಸೃಷ್ಟಿಮಾಡಿದನು. ಆ ಬಾಣವರ್ಷವನ್ನು ಶಂಕರನು ಪ್ರಸನ್ನವಾದ ಮನಸ್ಸಿನಿಂದಲೇ ಸ್ವೀಕರಿಸಿದನು.

ಮುಹೂರ್ತಂ ಶರವರ್ಷಂ ತು ಪ್ರತಿಗೃಹ್ಯ ಪಿನಾಕಧೃಕ್ ।
ಅಕ್ಷತೇನ ಶರೀರೇಣ ತಸ್ಥೌ ಗಿರಿರಿವಾಚಲಃ ॥೨೭॥

ಪಿನಾಕಪಾಣಿಯಾದ ಶಿವನು ಆ ಶರವರ್ಷವನ್ನು ಒಂದು ಮುಹೂರ್ತದಕಾಲ ಸ್ವೀಕರಿಸಿ ಶರೀರದಲ್ಲಿ ಏನೂ ಗಾಯಗೊಳ್ಳದೆ ಅಲುಗಾಡದ ಪರ್ವತದಂತೆ ನಿಂತನು.

ಸ ದೃಷ್ಟ್ವಾ ಬಾಣವರ್ಷಂ ತು ಮೋಘೀಭೂತಂ ಧನಂಜಯಃ ।
ಪರಮಂ ವಿಸ್ಮಯಂ ಚಕ್ರೇ ಸಾಧು ಸಾಧ್ವಿತಿ ಚಾಬ್ರವೀತ್ ॥೨೮॥

ಅರ್ಜುನನು ತನ್ನ ಬಾಣವರ್ಷವು ಅವನಲ್ಲಿ ವ್ಯರ್ಥವಾದುದನ್ನು ನೋಡಿ ಬಹಳ ಆಶ್ಚರ್ಯಚಕಿತನಾಗಿ ಸಾಧುಸಾಧು ಎಂದು ಅವನನ್ನು ಪ್ರಶಂಸಿಸಿದನು.

ಅರ್ಜುನಃ

ಅಹೋಽಯಂ ಸುಕುಮಾರಾಂಗೋ ಹಿಮವಚ್ಛಿಖಿರಾಶ್ರಯಃ ।
ಗಾಂಡೀವಮುಕ್ತಾನ್ ನಾರಾಚಾನ್ ಪ್ರತಿಗೃಹ್ಣಾತ್ಯವಿಹ್ವಲಃ ॥೨೯॥

ಅಹೋ ಇದು ಆಶ್ಚರ್ಯ. ಹಿಮಾಲಯ ಪರ್ವತ ಶಿಖರವನ್ನು ಆಶ್ರಯಿಸಿದ ಈ ಕೋಮಲಾಂಗನು ಗಾಂಡೀವದಿಂದ ಹೊರಟ ನನ್ನ ಬಾಣಗಳನ್ನು ಯಾವ ವ್ಯಥೆಯೂ ಇಲ್ಲದೆ ತನ್ನ ಶರೀರದ ಮೇಲೆ ತೆಗೆದು ಕೊಳ್ಳುತ್ತಿದ್ದಾನೆ.

ಕೋಽಯಂ ದೇವೋ ಭವೇತ್ ಸಾಕ್ಷಾದ್ ರುದ್ರೋ ಯಕ್ಷೋಽಥ ರಾಕ್ಷಸಃ ।
ವಿದ್ಯತೇ ಹಿ ಗಿರಿಶ್ರೇಷ್ಠೇ ತ್ರಿದಶಾನಾಂ ಸಮಾಗಮಃ ॥೩೦॥

ಇವನು ಯಾವುದಾದರೂ ದೇವತೆಯೆ? ಅಥವಾ ಸಾಕ್ಷಾತ್ ರುದ್ರನೇ ಅಥವಾ ಯಕ್ಷನೇ ಅಥವಾ ರಾಕ್ಷಸನೇ? ಶ್ರೇಷ್ಠವಾದ ಈ ಪರ್ವತದಲ್ಲಿ ದೇವತೆಗಳ ಸಮಾಗಮವು ಇರುತ್ತದೆಯಷ್ಟೇ?

ನ ಹಿ ಮದ್ಬಾಣಜಾಲಾನಾಮುತ್ಸೃಷ್ಟಾನಾಂ ಸಹಸ್ರಶಃ ।
ಶಕ್ತೋಽನ್ಯಃ ಸಹಿತುಂ ವೇಗಮೃತೇ ದೇವಂ ಪಿನಾಕಿನಮ್ ॥೩೧॥

ಸಹಸ್ರ ಸಂಖ್ಯೆಯಲ್ಲಿ ಪ್ರಯೋಗಿಸಿದ ನನ್ನ ಬಾಣಸಮೂಹಗಳನ್ನು ದೇವನಾದ ಪಿನಾಕಪಾಣಿಯೊಬ್ಬನನ್ನು ಬಿಟ್ಟು ಉಳಿದ ಯಾವನೂ ಸಹಿಸಲಾರ.

ದೇವೋ ವಾ ಯದಿ ವಾ ರಕ್ಷೋ ರುದ್ರೋನ್ಯೋ ವಾ ವ್ಯವಸ್ಥಿತಃ।
ಅಹಮೇನಂ ಶರೈಸ್ತೀಕ್ಷ್ಣೈರ್ನಯಾಮಿ ಯಮಸಾದನಮ್ ॥೩೨॥

ಎದುರಿಗೆ ನಿಂತವನು ದೇವತೆಯಾಗಲಿ ರಾಕ್ಷಸನಾಗಲಿ ರುದ್ರನೇ ಆಗಲಿ ಅಥವಾ ಬೇರೆ ಯಾರೇ ಆಗಲಿ. ನಾನು ಅವನನ್ನು ನನ್ನ ತೀಕ್ಷ್ಣವಾದ ಬಾಣಗಳಿಂದ ಯಮಲೋಕಕ್ಕೆ ಕಳುಹಿಸುತ್ತೇನೆ.

ವೈಶಂಪಾಯನಃ

ತತೋ ಹೃಷ್ಟಮನಾ ಜಿಷ್ಣುರ್ನಾರಾಚಾನ್ ಮರ್ಮಭೇದಿನಃ ।
ವ್ಯಸೃಜಚ್ಛತಧಾ ರಾಜನ್ ಮಯೂಖಾನಿವ ಭಾಸ್ಕರಃ ॥೩೩॥

ಎಲೈ ರಾಜನೇ ಅನಂತರ ಅರ್ಜುನನು ಮನಸ್ಸಿನಲ್ಲಿ ಸಂತೋಷಗೊಂಡವನಾಗಿ ಸೂರ್ಯನು ಕಿರಣಗಳನ್ನು ಸೃಷ್ಟಿಸಿದಂತೆ ಮರ್ಮಭೇದಿಯಾದ ಬಾಣಗಳನ್ನು ನೂರಾರು ಸಂಖ್ಯೆಯಲ್ಲಿ ಸೃಷ್ಟಿಸಿದನು.

ತಾನ್ ಪ್ರಸನ್ನೇನ ಮನಸಾ ಭಗವಾನ್‌ಲ್ಲೋಕಭಾವನಃ ।
ಶೂಲಪಾಣಿಃ ಪ್ರತ್ಯಗೃಹ್ಣಾತ್ ಶಿಲಾವರ್ಷಮಿವಾಚಲಃ ॥೩೪॥

ಲೋಕಪಾವನನಾದ ಶೂಲಪಾಣಿಯಾದ ಭಗವಂತನಾದ ಶಂಕರನು ಪ್ರಸನ್ನವಾದ ಮನಸ್ಸಿನಿಂದಲೇ ಪರ್ವತವು ಶಿಲಾವರ್ಷವನ್ನು ಸ್ವೀಕರಿಸಿದಂತೆ ಆ ಬಾಣಗಳನ್ನು ಸ್ವೀಕರಿಸಿದನು.

ಕ್ಷಣೇನ ಕ್ಷೀಣಬಾಣಸ್ತು ಸಂವೃತ್ತಃ ಫಲ್ಗುನಸ್ತದಾ ।
ಶರಾಸಂ ಚ ಸ ಜಗ್ರಾಹ ತಂ ದೃಷ್ಟ್ವಾ ಶರಸಂಕ್ಷಯಮ್ ।
ಚಿಂತಯಾಮಾಸ ಜಿಷ್ಣುಸ್ತು ಭಗವಂತಂ ಹುತಾಶನಮ್ ॥೩೫॥

ಒಂದು ಕ್ಷಣದಲ್ಲಿ ಅರ್ಜುನನ ಬಾಣಗಳು ಬರಿದಾದವು. ಆ ಬಾಣಕ್ಷಯವನ್ನು ನೋಡಿ ಅವನು ಕೈಯಲ್ಲಿ ಧನುಸ್ಸನ್ನು ಹಿಡಿದು ಭಗವಂತನಾದ ಅಗ್ನಿಯನ್ನು ಚಿಂತಿಸಿದನು.

ಅರ್ಜುನಃ

ಪುರಸ್ತಾದಕ್ಷಯೌ ದತ್ತೌ ತೂರ್ಣೌ ಮೇ ಯೇನ ಖಾಂಡವೇ ।
ಕಿಂ ನು ಮೋಕ್ಷ್ಯಾಮಿ ಧನುಷಾ ಯನ್ಮೇ ಬಾಣಾಃ ಕ್ಷಯಂ ಗತಾಃ ।
ಅಯಂ ಚ ಪುರುಷಃ ಕೋಽಪಿ ಬಾಣಾನ್ ಗ್ರಸತಿ ಸರ್ವಶಃ ॥೩೬॥

ಹಿಂದೆ ಖಾಂಡವದಹನಕಾಲದಲ್ಲಿ ಅಕ್ಷಯ ಬತ್ತಳಿಕೆಗಳು ಅಗ್ನಿಯಿಂದ ನನಗೆ ಕೊಡಲ್ಪಟ್ಟಿದ್ದವು. ನನ್ನ ಬಾಣಗಳೆಲ್ಲವೂ ಬರಿದಾದಮೇಲೆ ಈಗ ಧನುಸ್ಸಿನಿಂದ ನಾನು ಏನನ್ನು ಪ್ರಯೋಗಿಸಲಿ? ಈ ವಿಲಕ್ಷಣ ಪುರುಷನಾದರೂ ನನ್ನ ಎಲ್ಲಾ ಬಾಣಗಳನ್ನೂ ನುಂಗುತ್ತಿದ್ದಾನೆ.

ಅಹಮೇನಂ ಧನುಷ್ಕೋಟ್ಯಾ ಶೂಲಾಗ್ರೇಣೇವ ಕುಂಜರಮ್ ।
ನಯಾಮಿ ದಂಡಧಾರಸ್ಯ ಯಮಸ್ಯ ಸದನಂ ಪ್ರತಿ ॥೩೭॥

ಅಂಕುಶದತುದಿಯಿಂದ ಆನೆಯನ್ನು ಹಿಂಸಿಸಿದಂತೆ ನಾನು ನನ್ನ ಧನುಸ್ಸಿನ ತುದಿಯಿಂದ ಇವನನ್ನು ಸಂಹರಿಸಿ ದಂಡಧಾರಿಯಾದ ಯಮನ ಲೋಕಕ್ಕೆ ಕಳುಹಿಸುತ್ತೇನೆ.

ವೈಶಂಪಾಯನಃ

ಸಂಪ್ರಾಯುದ್ಧ್ಯತ್ ತಮಾಸಾದ್ಯ ಕ್ಷಾತ್ರಂ ಧರ್ಮಮನುವ್ರತಃ ।
ಸಂಪ್ರಯುದ್ಧ್ಯನ್ ಧನುಷ್ಕೋಟ್ಯಾ ಕೌಂತೇಯಃ ಪರವೀರಹಾ ॥೩೮॥

ಪರವೀರಘಾತಕನಾದ ಕೌಂತೇಯನು ಶಾಸ್ತ್ರಧರ್ಮವನ್ನು ಪಾಲಿಸುವವನಾಗಿ ಕಿರಾತನನ್ನು ಸಮೀಪಿಸಿ ಧನುಷ್‌ಕೋಟಿಯಿಂದಲೇ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಅತುಲಂ ದೇವಮೀಶಾನಂ ಲಲಾಟೇ ಸಮತಾಡಯತ್ ।
ತದಪ್ಯಸ್ಯ ಧನುರ್ದಿವ್ಯಂ ಜಗ್ರಾಹ ಗಿರಿಗೋಚರಃ ॥೩೯॥

ಅಸದೃಶನಾದ ದೇವನಾದ ಮಹೇಶ್ವರನಿಗೆ ಹಣೆಯಲ್ಲಿ ಹೊಡೆದನು ಆ ಗಿರಿವಾಸಿಯಾದ ಶಂಕರನು ಆ ಧನುಸ್ಸನ್ನು ಕೈಯಲ್ಲಿ ಹಿಡಿದುಕೊಂಡನು.

ತತೋಽರ್ಜುನೋ ಗೃಸ್ತಧನುಃ ಖಡ್ಗಪಾಣಿರತಿಷ್ಠತ ।
ಯುದ್ಧಸ್ಯಾಂತಮಭೀಪ್ಸನ್ ವೈ ವೇಗೇನಾಭಿಜಗಾಮ ತಮ್ ॥೪೦॥

ಆಗ ಅರ್ಜುನನು ಯುದ್ಧವನ್ನು ಮುಗಿಸಲು ಬಯಸಿ ಧನುಸ್ಸನ್ನು ಕಳೆದುಕೊಂಡು ಕೈಯಲ್ಲಿ ಖಡ್ಗವನ್ನು ಹಿಡಿದು ವೇಗವಾಗಿ ಆ ಕಿರಾತನ ಕಡೆಗೆ ಹೋದನು.

ತಸ್ಯ ಮೂರ್ಧ್ನಿ ಶಿತಂ ಖಡ್ಗಮಸಕ್ತಂ ಪರ್ವತೇಷ್ವಪಿ ।
ಮುಮೋಚ ಭುಜವೀರ್ಯೇಣ ವಿಕ್ರಮ್ಯ ಕುರುನಂದನಃ ।
ತಸ್ಯ ಮೂರ್ಧಾನಮಾಸಾದ್ಯ ಪಫಾಲಾಸಿವರೋಽಥ ಸಃ ॥೪೧॥

ಅವನ ತಲೆಯ ಮೇಲೆ ಪರ್ವತಗಳಲ್ಲಿಯೂ ನಾಟದಿದ್ದ ತನ್ನ ಹರಿತವಾದ ಖಡ್ಗವನ್ನು ಅರ್ಜುನನು ಪರಾಕ್ರಮದಿಂದ ತನ್ನ ಭುಜವೀರ್ಯವನ್ನೆಲ್ಲಾ ಉಪಯೋಗಿಸಿ ಪ್ರಯೋಗಿಸಿದನು. ಆ ಶ್ರೇಷ್ಠವಾದ ಖಡ್ಗವು ಕಿರಾತನ ಹಣೆಯನ್ನು ತಲುಪಿ ಚೂರುಚೂರಾಯಿತು.

ತತೋ ವೃಕ್ಷೈಃ ಶಿಲಾಭಿಶ್ಚ ಯೋಧಯಾಮಾಸ ಫಲ್ಗುನಃ ।
ಯಥಾ ವೃಕ್ಷಾನ್ಮಹಾಕಾಯಃ ಪ್ರತ್ಯಗೃಹ್ಣಾದಥೋ ಶಿಲಾಃ ॥೪೨॥

ಕಿರಾತರೂಪೀ ಭಗವಾಂಸ್ತತಃ ಪಾರ್ಥೋ ಮಹಾಬಲಃ ।
ಮುಷ್ಟಿಭಿರ್ವಜ್ರಸಂಸ್ಪರ್ಶೈರ್ಧೂಮಮುತ್ಪಾದಯನ್ ಮುಖೇ ।
ಪ್ರಜಹಾರ ದುರಾಧರ್ಷೇ ಕಿರಾತಸಮರೂಪಿಣೆ ॥೪೩॥

ಅನಂತರ ಅರ್ಜುನನು ಬಂಡೆಗಳಿಂದ ಕಿರಾತನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಅರ್ಜುನನು ಶಿಲೆಗಳನ್ನು ಎಸೆದಂತೆ ಕಿರಾತರೂಪಿಯೂ ಮಹಾಶರೀರವುಳ್ಳವನೂ ಆದ ಭಗವಂತನು ಆ ಶಿಲೆಗಳನ್ನು ಹಿಡಿದು ಕೊಂಡನು ಆಗ ಮಹಾಬಲನಾದ ಅರ್ಜುನನು ಮುಖದಲ್ಲಿ ಹೊಗೆಯನ್ನು ಸೃಷ್ಟಿಸುತ್ತಾ ತನ್ನ ವಜ್ರಸದೃಶವಾದ ಮುಷ್ಟಿಗಳಿಂದ ದುರಾಧರ್ಷನಾದ ಕಿರಾತವೇಷವನ್ನು ಧರಿಸಿದ ಶಂಕರನಿಗೆ ಪ್ರಹಾರವನ್ನು ಮಾಡಿದನು.

ತತಃ ಶಕ್ರಾಶನಿಸಮೈರ್ಮುಷ್ಟಿಭಿರ್ಭೃಶದಾರುಣೈಃ ।
ಕಿರಾತರೂಪೀ ಭಗವಾನರ್ದಯಾಮಾಸ ಫಲ್ಗುನಮ್ ॥೪೪॥

ತತಶ್ಚಟಚಟಾಶಬ್ದಃ ಸುಘೋರಃ ಸಮಜಾಯತ ।
ಪಾಂಡವಸ್ಯ ಚ ಮುಷ್ಟೀನಾಂ ಕಿರಾತಸ್ಯ ಚ ಯುಧ್ಯತಃ ॥೪೫॥

ಆಗ ಇಂದ್ರನ ವಜ್ರಾಯುಧಕ್ಕೆ ಸಮವಾದ ಅತ್ಯಂತ ಕ್ರೂರವಾದ ತನ್ನ ಮುಷ್ಟಿಗಳಿಂದ ಕಿರಾತರೂಪಿಯಾದ ಭಗವಂತನು ಅರ್ಜುನನನ್ನು ಪೀಡಿಸಿದನು. ಆಗ ಪಾಂಡವನೂ ಮತ್ತು ಕಿರಾತನೂ ಮುಷ್ಟಿಗಳಿಂದ ಯುದ್ಧಮಾಡುತ್ತಿರಲು ಅತ್ಯಂತ ಘೋರವಾದ ಚಟಚಟ ಎಂಬ ಶಬ್ದವು ಉಂಟಾಯಿತು.

ಸುಮುಹೂರ್ತಂ ತಯೋರ್ಯುದ್ಧಮಾಸೀಲ್ಲೋಕಪ್ರಹರ್ಷಣಮ್ ।
ಭುಜಪ್ರಹಾರಸಂಯುಕ್ತಂ ವೃತ್ರವಾಸವಯೋರಿವ ॥೪೬॥

ಲೋಕಕ್ಕೆ ರೋಮಾಂಚಕಾರಿಯಾದ ಭುಜಪ್ರಹಾರಯುಕ್ತವಾದ ಅವರಿಬ್ಬರ ಯುದ್ಧವು ಇಂದ್ರ ಮತ್ತು ವೃತ್ರರ ಯುದ್ಧದಂತೆ ಒಂದು ಮುಹೂರ್ತ ನಡೆಯಿತು.

ಜಹಾರಾಥ ತತೋ ಜಿಷ್ಣುಃ ಕಿರಾತಮುರಸಾ ಬಲೀ ।
ಪಾಂಡವಂ ಚ ವಿಚೇಷ್ಟಂತಂ ಕಿರಾತೋಽಪ್ಯಹನದ್ಬಲಾತ್ ॥೪೭॥

ತಯೋರ್ಭುಜವಿನಿಷ್ಪೇಷಾತ್ ಸಂಘರ್ಷೇಣೋರಸೋಸ್ತದಾ ।
ಸಮಜಾಯತ ಗಾತ್ರೇಷು ಪಾವಕೋಽಂಗಾರಧೂಮವಾನ್ ॥೪೮॥

ಅನಂತರ ಬಲಿಷ್ಠನಾದ ಅರ್ಜುನನು ಕಿರಾತನನ್ನು ತನ್ನ ವಕ್ಷಃಸ್ಥಳದಿಂದ ಹೊಡೆದನು. ಹೀಗೆ ಪ್ರಯತ್ನಪಡುತ್ತಿದ್ದ ಅರ್ಜುನನಿಗೆ ಕಿರಾತನು ಬಲವಾಗಿ ಹೊಡೆದನು. ಹೀಗೆ ಅವರಿಬ್ಬರೂ ಭುಜಗಳಿಂದ ಹೊಡೆದಾಡುವಾಗ ಅವರ ವಕ್ಷಃಸ್ಥಳದ ಸಂಘರ್ಷದಿಂದ ಕಿಡಿಗಳು ಮತ್ತು ಧೂಮಗಳುಳ್ಳ ಅಗ್ನಿಯು ಅವರ ಶರೀರದಲ್ಲಿ ಉಂಟಾಯಿತು.

ತತ ಏನಂ ಮಹಾದೇವಃ ಪೀಡ್ಯ ಗಾತ್ರೈಃ ಸುಪೀಡಿತಃ ।
ತೇಜಸಾಽತ್ಯಾಕ್ರಮದ್ ರೋಷಾಚ್ಚೇತಸ್ತಸ್ಯ ವಿಮೋಹಯನ್ ॥೪೯॥

ಅನಂತರ ಅರ್ಜುನನ ಶರೀರದಿಂದ ಪೀಡಿಸಲ್ಪಟ್ಟ ಮಹಾದೇವನು ಅರ್ಜುನನ ಚಿತ್ತವನ್ನು ಮೋಹಿಸುತ್ತಾ ಕೋಪದಿಂದ ಪರಾಕ್ರಮದಲ್ಲಿ ಅರ್ಜುನನನ್ನು ಮೀರಿಸಿದನು.

ತತೋ ನಿಷ್ಪೀಡಿತೈರ್ಗಾತ್ರೈಃ ಪಿಂಡೀಕೃತ ಇವಾಬಭೌ ।
ಫಲ್ಗುನೋ ಗಾತ್ರಸಂರುದ್ಧೋ ದೇವದೇವೇನ ಭಾರತ ॥೫೦॥

ಎಲೈ ಭಾರತನೇ ಆಗ ದೇವದೇವನ ದೇಹದಿಂದ ಹಿಡಿಯಲ್ಪಟ್ಟ ಅರ್ಜುನನ ಶರೀರವು ಒಂದು ಮುದ್ದೆಯಂತೆ ತೋರಿತು.

ನಿರುಚ್ಛ್ವಾಸೋಽಭವಚ್ಚೈಷ ಸನ್ನಿರುದ್ಧೋ ಮಹಾಮನಾಃ ।
ತತಃ ಪಪಾತ ಸಮ್ಮೂಢಃ ತತಃ ಪ್ರೀತೋಽಭವದ್ಧರಃ ॥೫೧॥

ಧೈರ್ಯಶಾಲಿಯಾದ ಅರ್ಜುನನು ನಿರುಚ್ಛ್ವಾಸನಾಗಿ ಕಿರಾತನಿಂದ ಹಿಡಿಯಲ್ಪಟ್ಟು ಸಮ್ಮೂಢನಾಗಿ ಭೂಮಿಯ ಮೇಲೆ ಬಿದ್ದನು. ಆಗ ಶಂಕರನು ಸಂತುಷ್ಟನಾದನು.

ಸುಮುಹೂರ್ತಂ ತತೋ ಭೂತ್ವಾ ಸಚೇತಾಃ ಪುನರುತ್ಥಿತಃ ।
ರುಧಿರೇಣಾಪ್ಲುತಾಂಗಸ್ತು ಪಾಂಡವೋ ಭೃಶದುಃಖಿತಃ ॥೫೨॥

ಶರಣ್ಯಂ ಶರಣಂ ಗತ್ವಾ ಭಗವಂತಂ ಪಿನಾಕಿನಮ್ ।
ಮೃನ್ಮಯಂ ಸ್ಥಂಡಿಲೇ ಕೃತ್ವಾ ಭಾವಪುಷ್ಪೈರ್ಭವಂ ತದಾ ॥೫೩॥

ಪೂಜಯಾಮಾಸ ಪುಷ್ಪೈಶ್ಚ ಸರ್ವಲೋಕೇಶ್ವರಂ ಪ್ರಭುಮ್ ।
ಶರಣ್ಯಂ ಶರಣಂ ಗತ್ವಾ ಮನಸಾ ಪಾಂಡುನಂದನಃ ॥೫೪॥

ಒಂದು ಮುಹೂರ್ತಕಾಲ ಹಾಗೆಯೇ ಇದ್ದು ಪುನಃ ಪ್ರಜ್ಞೆಯನ್ನು ಪಡೆದು ಮೇಲೆಕ್ಕೆದ್ದು ಅರ್ಜುನನು ತನ್ನ ದೇಹವೆಲ್ಲ ರಕ್ತಸಿಕ್ತವಾಗಿ ಬಹಳ ದುಃಖದಿಂದ ಕೂಡಿದವನಾಗಿ ಶರಣ್ಯನಾದ ಭಗವಂತನಾದ ಪಿನಾಕಪಾಣಿಗೆ ಶರಣಾಗತನಾದನು. ಸ್ಥಂಡಿಲದಲ್ಲಿ ಮಣ್ಣಿನಿಂದ ಒಂದು ಶಿವನ ಲಿಂಗವನ್ನು ಮಾಡಿ ಪುಷ್ಪಗಳಿಂದ ಮತ್ತು ಭಾವಪುಷ್ಪಗಳಿಂದ ಸರ್ವಲೋಕೇಶ್ವರನಾದ ಆ ಪ್ರಭುವನ್ನು ಪೂಜಿಸಿದನು. ಶರಣ್ಯನಾದ ಶಿವನಿಗೆ ಮನಸಾ ಶರಣಾಗತನಾಗಿ ಪೂಜಿಸಿದನು.

ಯೈಃ ಪೂಜಿತಸ್ತದಾ ಪಾರ್ಥಸ್ತಾನ್ ದೃಷ್ಟ್ವಾ ತಸ್ಯ ಮೂರ್ದ್ಧನಿ ।
ಹರ್ಷೇಣ ವಿಸ್ಮಯಾವಿಷ್ಟೋ ಜ್ಞಾತ್ವಾ ದೇವಂ ಮಹೇಶ್ವರಮ್ ॥೫೫॥

ಪಪಾತ ಪಾದಯೋಸ್ತಸ್ಯ ತತಃ ಪ್ರೀತೋಽಭವದ್ ಭವಃ ॥೫೬॥

ಯಾವ ಪುಷ್ಪಗಳಿಂದ ತಾನು ಮೂರ್ತಿಯನ್ನು ಪೂಜಿಸಿದನೋ ಆ ಪುಷ್ಪಗಳು ಕಿರಾತನ ತಲೆಯ ಮೇಲೆ ಇರುವುದನ್ನು ನೋಡಿ ಸಂತೋಷದಿಂದ ಮತ್ತು ವಿಸ್ಮಯದಿಂದ ಅರ್ಜುನನು ಅವನು ದೇವನಾದ ಮಹೇಶ್ವರನೆಂದು ತಿಳಿದು ಅವನ ಪಾದಗಳಿಗೆ ನಮಸ್ಕರಿಸಿದನು. ಆಗ ರುದ್ರನು ಪ್ರಸನ್ನನಾದನು.

ರುದ್ರಃ

ಭೋ ಭೋ ಫಲ್ಗುನ ತುಷ್ಟೋಽಸ್ಮಿ ಕರ್ಮಣಾಽಪ್ರತಿಮೇನ ತೇ ।
ಶೌರ್ಯೇಣಾನೇನ ಧೃತ್ಯಾ ಚ ಕ್ಷತ್ರಿಯೋ ನಾಸ್ತಿ ತೇ ಸಮಃ ॥೫೭॥

ಎಲೈ ಅರ್ಜುನನೇ, ಈ ನಿನ್ನ ಅಸದೃಶವಾದ ಕರ್ಮದಿಂದ ಮತ್ತು ನಿನ್ನ ಶೌರ್ಯದಿಂದ ಮತ್ತು ಧೈರ್ಯದಿಂದ ನಾನು ಸಂತುಷ್ಟನಾಗಿದ್ದೇನೆ. ನಿನಗೆ ಸಮಾನನಾದ ಕ್ಷತ್ರಿಯನು ಇನ್ನೊಬ್ಬನಿಲ್ಲ.

ಸಮಂ ತೇಜಶ್ಚ ವೀರ್ಯಂ ಚ ತವಾದ್ಯ ಮಮ ಚಾನಘ ।
ಪ್ರೀತಸ್ತೇಽಹಂ ಮಹಾಬಾಹೋ ಪಶ್ಯ ಮಾಂ ಪುರುಷರ್ಷಭ ॥೫೮॥

ಅನಘನೇ, ನಿನ್ನ ಪರಾಕ್ರಮ ಮತ್ತು ತೇಜಸ್ಸು ಈ ದಿನ ನನ್ನ ಪರಾಕ್ರಮ ಮತ್ತು ತೇಜಸ್ಸುಗಳಿಗೆ ಸಮವಾಗಿದೆ. ನಾನು ನಿನಗೆ ಪ್ರಸನ್ನನಾಗಿದ್ದೇನೆ. ಮಹಾಬಾಹುವೇ ಪುರುಷರ್ಷಭನೇ ನನ್ನನ್ನು ನೋಡು.

ದದಾಮಿ ತೇ ವಿಶಾಲಾಕ್ಷ ಚಕ್ಷುಃ ಪೂರ್ವಂ ಮುನಿರ್ಭವಾನ್ ।
ವಿಜೇಷ್ಯಸಿ ರಣೇ ಶತ್ರೂನಪಿ ದೇವಾನ್ ದಿವೌಕಸಃ ॥೫೯॥

ಎಲೈ ವಿಶಾಲಾಕ್ಷನೇ, ನಿನಗೆ ದಿವ್ಯವಾದ ದೃಷ್ಟಿಯನ್ನು ಕೊಡುತ್ತೇನೆ. ಹಿಂದೆ ನೀನು ಋಷಿಯಾಗಿದ್ದೆ. ನೀನು ಯುದ್ಧದಲ್ಲಿ ಶತ್ರುಗಳನ್ನು ಮತ್ತು ಸ್ವರ್ಗವಾಸಿಗಳಾದ ದೇವತೆಗಳನ್ನು ಜಯಿಸುವಿ.

ವೈಶಂಪಾಯನಃ

ತತೋ ದೇವಂ ಮಹಾದೇವಂ ಗಿರಿಶಂ ಶೂಲಪಾಣಿನಮ್ ।
ದದರ್ಶ ಫಲ್ಗುನಸ್ತತ್ರ ಸಹ ದೇವ್ಯಾ ಮಹಾದ್ಯುತಿಮ್ ॥೬೦॥

ಸ ಜಾನುಭ್ಯಾಂ ಮಹೀಂ ಗತ್ವಾ ಶಿರಸಾ ಪ್ರಣಿಪತ್ಯ ಚ ।
ಪ್ರಸಾದಯಾಮಾಸ ಹರಂ ಪಾರ್ಥಃ ಪರಪುರಂಜಯಃ ॥೬೧॥

ಆಗ ಪರಪುರಂಜಯನಾದ ಅರ್ಜುನನು ಶೂಲಪಾಣಿಯೂ ಗಿರೀಶನೂ ಮಹಾದೇವನೂ ಮಹಾದ್ಯುತಿಯೂ ಆದ ಮಹೇಶ್ವರನನ್ನು ಪಾರ್ವತಿಯ ಜೊತೆಯಲ್ಲಿ ಅಲ್ಲಿ ನೋಡಿದನು. ಮಂಡಿಗಳ ಮೇಲೆ ಭೂಮಿಯಲ್ಲಿ ಬಿದ್ದು ಶಿರಸಾ ಪ್ರಣಾಮವನ್ನು ಮಾಡಿ ಮಹೇಶ್ವರನನ್ನು ಪ್ರಸನ್ನ ಗೊಳಿಸಿದನು.

ಅರ್ಜುನಃ

ಕಪರ್ದಿನ್ ಸರ್ವಭೂತೇಶ ಭಗನೇತ್ರನಿಪಾತನ ।
ಕಾರಣಾನಾಮಪಿ ಪರಂ ಜಾನೇ ತ್ವಾಂ ತ್ರ್ಯಂಬಕಂ ಪರಮ್ ॥೬೨॥

ಎಲೈ ಕಪರ್ದಿಯೇ ಸರ್ವಭೂತೇಶ್ವರನೇ ಭಗನೇತ್ರನಾಶಕನೇ ತ್ರ್ಯಂಬಕನಾದ ನೀನು (ಜಗತ್ತಿನ) ಕಾರಣಗಳಿಗಿಂತಲೂ ಶ್ರೇಷ್ಠನಾದವನೆಂದು ನಾನು ತಿಳಿದಿದ್ದೇನೆ.

ದೇವಾನಾಂ ಚ ಗತಿಂ ದೇವ ತ್ವತ್ಪ್ರಸೂತಮಿದಂ ಜಗತ್ ।
ಅಜೇಯಸ್ತ್ವಂ ತ್ರಿಭಿರ್ಲೋಕೈಃ ಸದೇವಾಸುರಮಾನುಷೈಃ ॥೬೩॥

ದೇವನೇ! ನೀನು ದೇವತೆಗಳಿಂದ ಗಮ್ಯನಾದವನು. ಈ ಜಗತ್ತು ನಿನ್ನಿಂದ ಜನಿಸಿದೆ. ದೇವಾಸುರಮನುಷ್ಯರನ್ನು ಒಳಗೊಂಡ ಮೂರುಲೋಕಗಳಿಂದಲೂ ನೀನು ಅಜೇಯನಾದವನು.

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ದಕ್ಷಯಜ್ಞವಿನಾಶಾಯ ಹರಿರುದ್ರಾಯ ವೈ ನಮಃ ॥೬೪॥

ಲಲಾಟಾಕ್ಷಾಯ ರುದ್ರಾಯ ಮೀಹುಷೇ ಶೂಲಪಾಣಯೇ ।
ಪಿನಾಕಗೋಪ್ತ್ರೇ ಸೂರ್ಯಾಯ ಮಾರ್ಜನೀಯಾಯ ವೇಧಸೇ ॥೬೫॥

ವಿಷ್ಣುರೂಪನಾದ ಶಿವನಿಗೂ ಶಿವರೂಪನಾದ ವಿಷ್ಣುವಿಗೂ ದಕ್ಷಯಜ್ಞವಿನಾಶಕನಾದ ಹರಿರುದ್ರನಾದ ನಿನಗೂ ನಮಸ್ಕಾರ. ಫಾಲಾಕ್ಷನೂ ರುದ್ರನೂ ಭಕ್ತಾಭೀಷ್ಟದಾನದೀಕ್ಷಿತನೂ ಶೂಲಪಾಣಿಯೂ ಪಿನಾಕಧಾರಿಯೂ ಜ್ಞಾನಿಗಮ್ಯನೂ ಮಾಂಗಲ್ಯಪ್ರದನೂ ಸೃಷ್ಟಿಕರ್ತನೂ ಆದ ನಿನಗೆ ನಮಸ್ಕಾರ.

ಪ್ರಸಾದಯೇ ತ್ವಾಂ ಭಗವನ್ ಸರ್ವಭೂತನಮಸ್ಕೃತಮ್ ।
ಗಣೇಶಂ ಜಗತಃ ಶಂಭುಂ ಲೋಕಕಾರಣಕಾರಣಮ್ ॥೬೬॥

ಎಲೈ ಭಗವಂತನೇ ಸರ್ವಭೂತನಮಸ್ಕೃತನಾದ ಲೋಕಕಾರಣಗಳಿಗೆ ಕಾರಣನಾದ ಜಗತ್ತಿಗೆ ಶುಭಪ್ರದನಾದ ಭೂತಗಣಗಳಿಗೆ ಒಡೆಯನಾದ ನೀನು ಪ್ರಸನ್ನನಾಗು ಎಂದು ಬೇಡಿ ಕೊಳ್ಳುತ್ತಿದ್ದೇನೆ.

ಪ್ರಧಾನಪುರುಷಾದಿಭ್ಯಃ ಪರಂ ಸೂಕ್ಷ್ಮತರಂ ಹರಿಮ್ ।
ವ್ಯತಿಕ್ರಮಂ ಮೇ ಭಗವನ್ ಕ್ಷಂತುಮರ್ಹಸಿ ಶಂಕರ ॥೬೭॥

ಪ್ರಧಾನ ಪುರುಷರಗಿಂತಲೂ (ಲಕ್ಷ್ಮೀ ಬ್ರಹ್ಮರಿಗಿಂತಲೂ) ಅವ್ಯಕ್ತನೂ ಶ್ರೇಷ್ಠನೂ ಆದ ಹರಿಯೆಂದು ತಿಳಿದಿದ್ದೇನೆ. ಎಲೈ ಶಂಕರನೇ ನನ್ನ ಈ ಅಪಚಾರವನ್ನು ನೀನು ಕ್ಷಮಿಸಬೇಕು.

(ಇಲ್ಲಿ ಈ ಸ್ತೋತ್ರವನ್ನು ಶಿವನಲ್ಲಿ ಯೋಗ್ಯವಿದ್ದಷ್ಟು ಶಿವನ ಪರವಾಗಿಯೂ ಉಳಿದುದನ್ನು ಶಿವನ ಅಂತರ್ಯಾಮಿಯಾದ ಹರಿಯ ಪರವಾಗಿಯೂ ಅರ್ಥವನ್ನು ಮಾಡಬೇಕು.)

ಭಗವದ್ದರ್ಶನಾಕಾಂಕ್ಷೀ ಪ್ರಾಪ್ತೋಽಸ್ಮೀಮಂ ಮಹಾಗಿರಿಮ್ ।
ದಯಿತಂ ತವ ದೇವೇಶ ತಾಪಸಾಲಯಮುತ್ತಮಮ್ ॥೬೮॥

ಪ್ರಸಾದಯೇ ತ್ವಾಂ ಭಗವನ್ ಸರ್ವಭೂತವಿಭುಂ ಗುರುಮ್ ।
ನ ಮೇ ಸ್ಯಾದಪರಾಧೋಽಯಂ ಮಹಾದೇವಾತಿಸಾಹಸಾತ್ ॥೬೯॥

ದೇವೇಶನೇ ನಿನ್ನ ದರ್ಶನಾಕಾಂಕ್ಷಿಯಾಗಿ ತಾಪಸರ ನಿವಾಸವಾದ , ನಿನಗೆ ಪ್ರಿಯವಾದ, ಈ ಶ್ರೇಷ್ಠವಾದ ಮಹಾಪರ್ವತಕ್ಕೆ ಬಂದಿದ್ದೇನೆ. ಎಲೈ ಮಹಾದೇವನೇ! ನನ್ನ ಈ ಅತಿಸಾಹಸವನ್ನು ಅಪರಾಧವೆಂದು ಎಣಿಸಬೇಡವೆಂದು ಸರ್ವಭೂತಗಳಲ್ಲಿ ವ್ಯಾಪ್ತನಾಗಿ ಗುರುವಾಗಿರುವ ನಿನ್ನನ್ನು ಬೇಡಿಕೊಳ್ಳುತ್ತೇನೆ.

ಕೃತೋ ಮಯಾ ಯದಜ್ಞಾನಾದ್ ವಿಮರ್ದೋ ಯಸ್ತ್ವಯಾ ಸಹ ।
ಶರಣಂ ಮೇ ಪ್ರಪನ್ನಾಯ ತತ್ ಕ್ಷಮಸ್ವಾದ್ಯ ಶಂಕರ ॥೭೦॥

ಎಲೈ ಶಂಕರನೇ, ಅಜ್ಞಾನದಿಂದ ನಿನ್ನ ಜೊತೆಯಲ್ಲಿ ಮಾಡಿದ ಸಂಘರ್ಷವನ್ನು ಶರಣಾಗತನಾದ ನನಗೆ ನೀನು ಈ ದಿನ ಕ್ಷಮಿಸು.

ವೈಶಂಪಾಯನಃ

ತಮುವಾಚ ಮಹಾತೇಜಾಃ ಪ್ರಹಸ್ಯ ವೃಷಭಧ್ವಜಃ ।
ಪ್ರಗೃಹ್ಯ ರುಚಿರಂ ಬಾಹುಂ ಕ್ಷಾಂತಮಿತ್ಯೇವ ಫಲ್ಗುನಮ್ ॥೭೧॥

ಮಹಾತೇಜಸ್ವಿಯಾದ ವೃಷಭಧ್ವಜನು ನಕ್ಕು ಸುಂದರವಾದ ಅರ್ಜುನನ ಬಾಹುವನ್ನು ಹಿಡಿದು ಅರ್ಜುನನನ್ನು ಕುರಿತು ನಾನು ಕ್ಷಮಿಸಿದ್ದೇನೆ ಎಂದು ಹೇಳಿದನು.

ಪರಿಷ್ವಜ್ಯ ಚ ಬಾಹುಭ್ಯಾಂ ಪ್ರೀತಾತ್ಮಾ ಭಗವಾನ್ ಹರಃ ।
ಪುನಃ ಪಾರ್ಥಂ ಸಾಂತ್ವಪೂರ್ವಮುವಾಚ ವೃಷಭಧ್ವಜಃ ॥೭೨॥

ಸಂತೋಷಗೊಂಡ ಭಗವಂತನಾದ ವೃಷಭದ್ವಜನಾದ ಹರನು ತನ್ನ ಬಾಹುಗಳಿಂದ ಅರ್ಜುನನನ್ನು ಆಲಿಂಗಿಸಿ ಪುನಃ ಸಮಾಧಾನ ಪೂರ್ವಕವಾಗಿ ಮಾತನಾಡಿದನು.

ಗಂಗಾಂಕಿತಜಟಃ ಶರ್ವಃ ಪಾರ್ಥಸ್ಯಾಮಿತತೇಜಸಃ ।
ಪ್ರಗೃಹ್ಯ ರುಚಿರಂ ಬಾಹುಂ ವೃತ್ತಂ ತಾಮ್ರತಳಾಂಗುಲಿಮ್ ॥೭೩॥

ಗಂಗೆಯನ್ನು ಧರಿಸಿದ ಜಟೆಯುಳ್ಳ ರುದ್ರನು ಅಮಿತಪರಾಕ್ರಮಿಯಾದ ಅರ್ಜುನನ ಸುಂದರವಾದ ಮತ್ತು ಪುಷ್ಟವಾದ ಬಾಹುವನ್ನು ಹಿಡಿದು ಮಾತನಾಡಿದನು.

ನರಸ್ತ್ವಂ ಪೂರ್ವದೇಹೇ ವೈ ನಾರಾಯಣಸಹಾಯವಾನ್ ।
ಬದರ್ಯಾಂ ತಪ್ತವಾನುಗ್ರಂ ತಪೋ ವರ್ಷಾಯುತಾನ್ ಬಹೂನ್ ॥

ನೀನು ಹಿಂದಿನ ಜನ್ಮದಲ್ಲಿ ನಾರಾಯಣನ ಅನುಗ್ರಹವನ್ನು ಪಡೆದ ನರನಾಗಿದ್ದೆ. ಅನೇಕ ಸಹಸ್ರವರ್ಷಗಳ ಕಾಲ ಬದರಿಯಲ್ಲಿ ಉಗ್ರವಾದ ತಪಸ್ಸನ್ನು ಆಚರಿಸಿದೆ.

ತ್ವಯಿ ವಾ ಪರಮಂ ತೇಜೋ ವಿಷ್ಣೌ ವಾ ಪುರುಷೋತ್ತಮೇ ।
ಯುವಾಭ್ಯಾಂ ಪುರುಷಾಗ್ರ್ಯಾಭ್ಯಾಂ ತೇಜಸಾ ಧಾರ್ಯತೇ ಜಗತ್ ॥

ಪುರುಷೋತ್ತಮನಾದ ವಿಷ್ಣುವಿನಲ್ಲಿ ಮತ್ತು ನಿನ್ನಲ್ಲಿ ಶ್ರೇಷ್ಠವಾದ ತೇಜಸ್ಸಿದೆ. ಪುರುಷಶ್ರೇಷ್ಠರಾದ ನಿಮ್ಮಿಬ್ಬರಿಂದ ಈ ಜಗತ್ತು ಧರಿಸಲ್ಪಟ್ಟಿದೆ.

ಶಕ್ರಾಭಿಷೇಕೇ ಸುಮಹದ್ ಧನುರ್ಜಲದನಿಸ್ವನಮ್ ।
ಪ್ರಗೃಹ್ಯ ದಾನವಾಃ ಶಸ್ತಾಃ ತ್ವಯಾ ಕೃಷ್ಣೇನ ಚ ಪ್ರಭೋ ॥೭೬॥

ಎಲೈ ಪ್ರಭುವೇ, ಖಾಂಡವದಹನಕಾಲದಲ್ಲಿ ಇಂದ್ರನು ಮೇಘಜಲಗಳಿಂದ ಅಭಿಷೇಕಮಾಡುವಾಗ ಮೇಘ ಗಂಭೀರವಾದ ಧನುಸ್ಸನ್ನು ಹಿಡಿದುಕೊಂಡು ನೀನೂ ಮತ್ತು ಕೃಷ್ಣನೂ ದಾನವರನ್ನು ನಾಶಮಾಡಿದಿರಿ.

ಏತತ್ತದೇವ ಗಾಂಡೀವಂ ತವ ಪಾರ್ಥ ಕರೋಚಿತಮ್ ।
ಮಾಯಾಮಾಸ್ಥಾಯ ಯದ್ ಗ್ರಸ್ತಂ ಮಯಾ ಪುರುಷಸತ್ತಮ ॥೭೭॥

ಪಾರ್ಥನೇ! ಇದು ನಿನ್ನ ಕೈಗೇ ಯೋಗ್ಯವಾದ ಅದೇ ಗಾಂಡೀವ ಧನುಸ್ಸು. ಪುರುಷಶ್ರೇಷ್ಠನೇ! ನಾನು ನನ್ನ ಸಾಮರ್ಥ್ಯವಿಶೇಷದಿಂದ ಆ ಧನುಸ್ಸನ್ನು ಹಿಡಿದೆ. (ನುಂಗಿದೆ)

ತೂಣೌ ಚಾಪ್ಯಕ್ಷಯೌ ಭೂಯಃ ತವ ಪಾರ್ಥ ಕರೋಚಿತೌ ।
ಭವಿಷ್ಯತಿ ಶರೀರಂ ಚ ನೀರುಜಂ ಕುರುನಂದನ ॥೭೮॥

ಪಾರ್ಥನೇ, ಅಕ್ಷಯಬತ್ತಳಿಕೆಗಳು ನಿನ್ನ ಕೈಗಳಿಗೇ ಯೋಗ್ಯವಾದವು. ಅವು ನಿನಗೆ ಬರುತ್ತವೆ. ಕುರುನಂದನನೇ ನಿನ್ನ ಶರೀರವು ರೋಗರಹಿತವಾಗುವುದು.

ಪ್ರೀತಿಮಾನಸ್ಮಿ ವೈ ಪಾರ್ಥ ತವ ಸತ್ಯಪರಾಕ್ರಮ ।
ಗೃಹಾಣ ವರಮಸ್ಮತ್ತಃ ಕಾಂಕ್ಷಿತಂ ಪುರುಷರ್ಷಭ ॥೭೯॥

ಸತ್ಯಪರಾಕ್ರಮನಾದ ಪಾರ್ಥನೇ, ನಿನಗೆ ಸಂತುಷ್ಟನಾಗಿದ್ದೇನೆ. ಪುರುಷಶ್ರೇಷ್ಠನೇ, ನಿನಗೆ ಇಷ್ಟವಾದ ವರವನ್ನು ನನ್ನಿಂದ ತೆಗೆದುಕೋ.

ನ ತ್ವಯಾ ಸದೃಶಃ ಕಶ್ಚಿತ್ ಪುಮಾನ್ ಮರ್ತ್ಯೇಷು ಭಾರತ ।
ದಿವಿ ವಾ ವಿದ್ಯತೇ ಕ್ಷತ್ರಂ ತತ್ತ್ವದ್ಧಾನಮರಿಂದಮ ॥೮೦॥

ಎಲೈ ಭಾರತನೇ! ಮನುಷ್ಯರಲ್ಲಿ ನಿನಗೆ ಸದೃಶನಾದವನು ಇನ್ನೊಬ್ಬನಿಲ್ಲ. ಅರಿಂದಮನೇ ಅಥವಾ ಸ್ವರ್ಗಲೋಕದಲ್ಲಿ ನಿನಗಿಂತ ಉತ್ತಮನಾದ ಇನ್ನೊಬ್ಬ ಕ್ಷತ್ರಿಯನಿಲ್ಲ.

ಅರ್ಜುನಃ

ಭವಾನ್ ದದಾಸಿ ಚೇನ್ಮಹ್ಯಂ ಕಾಮಂ ಪ್ರೀತ್ಯಾ ವೃಷಭಧ್ವಜ ।
ಕಾಮಯೇ ದಿವ್ಯಮಸ್ತ್ರಂ ತದ್ ಘೋರಂ ಪಾಶುಪತಂ ಮಹತ್ ॥೮೧॥

ಯತ್ ತದ್ ಬ್ರಹ್ಮಶಿರೋ ನಾಮ ರೌದ್ರಂ ಭೀಮಪರಾಕ್ರಮಮ್ ।
ಯುಗಾಂತೇ ದಾರುಣೇ ಪ್ರಾಪ್ತೇ ಕೃತ್ಸ್ನಂ ಸಂಹರತೇ ಜಗತ್ ॥೮೨॥

ಜಯೇಯಂ ಯೇನ ಸಂಗ್ರಾಮೇ ದಾನವಾನ್ ರಾಕ್ಷಸಾಂಸ್ತಥಾ ।
ರಾಜ್ಞಶ್ಚೈವ ಪಿಶಾಚಾಂಶ್ಚ ಗಂಧರ್ವಾನಥ ಪನ್ನಗಾನ್ ॥೮೩॥

ಯಸ್ಮಿನ್ ಶೂಲಸಹಸ್ರಾಣಿ ಗದಾಶ್ಚೋಗ್ರಪ್ರದರ್ಶನಾಃ ।
ಶರಾಶ್ಚಾಶೀವಿಷಾಕಾರಾಃ ಸಂಭವಂತ್ಯನುಮಂತ್ರಿತಾಃ ॥೮೪॥

ಯುಧ್ಯೇಯಂ ಯೇನ ಭೀಷ್ಮೇಣ ದ್ರೋಣೇನ ಚ ಕೃಪೇಣ ಚ ।
ಸೂತಪುತ್ರೇಣ ಚ ರಣೇ ನಿತ್ಯಂ ಕಟುಕಭಾಷಿಣಾ ॥೮೫॥

ವೃಷಭಧ್ವಜನೇ, ನೀನು ನನಗೆ ಸಂತೋಷದಿಂದ ವರವನ್ನು ಕೊಡುವುದಾದರೆ ದಿವ್ಯವಾದ ಘೋರವಾದ ಆ ಪಾಶುಪತಮಹಾಸ್ತ್ರವನ್ನು ಬಯಸುತ್ತೇನೆ. ಯಾವ ಬ್ರಹ್ಮಶಿರೋನಾಮಕವಾದ ಭಯಂಕರಪರಾಕ್ರಮವುಳ್ಳ ಕಠೋರವಾದ ಅಸ್ತ್ರವು ದಾರುಣವಾದ ಪ್ರಳಯಕಾಲವು ಸನ್ನಿಹಿತವಾದಾಗ ಎಲ್ಲ ಜಗತ್ತನ್ನು ಸಂಹರಿಸುತ್ತದೋ ಯಾವುದನ್ನು ಆವಲಂಬಿಸಿ ಯುದ್ಧದಲ್ಲಿ ದಾನವರನ್ನೂ ರಾಕ್ಷಸರನ್ನೂ ಪಿಶಾಚಿಗಳನ್ನೂ ಗಂಧರ್ವರನ್ನೂ ಮತ್ತು ಸರ್ಪಗಳನ್ನೂ ಗೆಲ್ಲುವೆನೋ ಯಾವ ಅಸ್ತ್ರದಲ್ಲಿ ಅಭಿಮಂತ್ರಣವನ್ನು ಮಾಡಿದರೆ ಸಹಸ್ರಾರು ಶೂಲಗಳು ಉಗ್ರವಾಗಿ ತೋರುವ ಅನೇಕ ಗದೆಗಳು ಸರ್ಪಾಕಾರವಾದ ಶರಗಳು ಹೊರಹೊಮ್ಮುತ್ತವೆಯೋ ಯಾವ ಅಸ್ತ್ರದಿಂದ ಭೀಷ್ಮರ ದ್ರೋಣರ ಕೃಪಾಚಾರ್ಯರ ಜೊತೆಯಲ್ಲಿ ಯುದ್ಧಮಾಡುವೆನೊ (ಅಂತಹ ಪಾಶುಪತಾಸ್ತ್ರವನ್ನು) ಬೇಡುತ್ತೇನೆ.

ಏಷ ಮೇ ಪ್ರಥಮಃ ಕಾಮೋ ಭಗವನ್ ಭಗನೇತ್ರಹನ್ ।
ತತ್ತ್ವಪ್ರಸಾದಾದ್ವಿನಿರ್ವರ್ತ್ತೇ ಸಮರ್ಥಃ ಸ್ಯಾಮಹಂ ಯಥಾ ॥೮೬॥

ಭಗನೇತ್ರಹಾರಿಯಾದ ಭಗವಂತನೇ ಇದು ನನ್ನ ಶ್ರೇಷ್ಠವಾದ ಕಾಮ. ನಿನ್ನ ಅನುಗ್ರಹದಿಂದ ನಾನು ಅದನ್ನು ಸ್ವೀಕರಿಸಿ ಸಮರ್ಥನಾಗಿದ್ದು ಸಂತೋಷದಿಂದ ಇರುತ್ತೇನೆ.

ರುದ್ರಃ

ದದಾಮಿ ತೇಽಸ್ತ್ರಂ ದಯಿತಮಹಂ ಪಾಶುಪತಂ ಮಹತ್ ।
ಸಮರ್ಥೋ ಧಾರಣೇ ಮೋಕ್ಷೇ ಸಂಹಾರೇ ಚಾಸಿ ಪಾಂಡವ ॥೮೭॥

ನ ತದ್ವೇದ ಮಹೇಂದ್ರೋಽಪಿ ನ ಯಮೋ ನ ಚ ಯಕ್ಷರಾಟ್ ।
ವರುಣೋಽಪ್ಯಥವಾ ವಾಯುಃ ಕುತೋ ವೇತ್ಸ್ಯಂತಿ ಮಾನವಾಃ ॥

ಪಾಂಡವನೇ ನಿನಗೆ ಪ್ರಿಯವಾದ ಪಾಶುಪತವೆಂಬ ಮಹಾಸ್ತ್ರವನ್ನು ಕೊಡುತ್ತೇನೆ. ನೀನು ಅದನ್ನು ಧರಿಸುವುದಕ್ಕೂ ಪ್ರಯೋಗವಮಾಡುವುದಕ್ಕೂ ಮತ್ತು ಉಪಸಂಹಾರಮಾಡುವುದಕ್ಕೂ ಸಮರ್ಥನಾಗಿದ್ದೀಯೆ. ಆ ಪಾಶುಪತಾಸ್ತ್ರವನ್ನು ಮಹೇಂದ್ರನಾಗಲೀ ಯಮನಾಗಲೀ ಕುಬೇರನಾಗಲೀ ವರುಣನಾಗಲೀ ಅಥವಾ ವಾಯುವಾಗಲೀ ಪಡೆದಿಲ್ಲ. ಇನ್ನು ಮನುಷ್ಯರು ಎಲ್ಲಿಂದ ಪಡೆಯುತ್ತಾರೆ?

ನ ತ್ವಯಾ ಸಹಸಾ ತಾತ ಮೋಕ್ತವ್ಯಂ ಪುರುಷೇ ಕ್ವಚಿತ್ ।
ಜಗದ್ವಿನಿರ್ದಹೇತ್ ಸರ್ವಮಲ್ಪತೇಜಸಿ ಪಾತಿತಮ್ ॥೮೯॥

ಎಲೈ ಪ್ರೀತಿಪಾತ್ರನೇ! ನೀನು ಆ ಅಸ್ತ್ರವನ್ನು ಆಲೋಚಿಸದೆ ಸಾಮಾನ್ಯಪುರುಷನಲ್ಲಿ ಪ್ರಯೋಗಿಸಬಾರದು. ಅಲ್ಪಪರಾಕ್ರಮವುಳ್ಳ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ ಆ ಅಸ್ತ್ರವು ಜಗತ್ತನ್ನೇ ನಾಶಮಾಡೀತು.

ಅವಧ್ಯೋ ನಾಮ ನಾಸ್ಯಸ್ಯ ತ್ರೈಲೋಕ್ಯೇ ಸಚರಾಚರೇ ।
ಮನಸಾ ಚಕ್ಷುಷಾ ವಾಚಾ ಧನುಷಾ ಚ ನಿಪಾತ್ಯತೇ ॥೯೦॥

ಚರಾಚರ ಪ್ರಾಣಿಗಳನ್ನು ಒಳಗೊಂಡ ಮೂರುಲೋಕಗಳಲ್ಲಿ ಈ ಅಸ್ತ್ರಕ್ಕೆ ಅವಧ್ಯನಾದವನು ಯಾವನೂ ಇಲ್ಲ. ಮನಸ್ಸಿನಲ್ಲಿ ಮಂತ್ರವನ್ನು ಸ್ಮರಿಸಿ ಇವನು ನಷ್ಟನಾಗಲಿ ಎಂದು ಇಚ್ಛಿಸಿದರೂ ಮಂತ್ರವನ್ನು ಜಪಿಸಿ ಕಣ್ಣಿನಿಂದ ನೋಡಿದರೂ ಅಥವಾ ನಷ್ಟನಾಗು ಎಂದು ಮಾತಿನಿಂದ ಹೇಳಿದರೂ ಅಥವಾ ಧನುಸ್ಸಿನಿಂದ ಪ್ರಯೋಗಿಸಿದರೂ ಆ ವ್ಯಕ್ತಿಯು ನಾಶವನ್ನು ಹೊಂದುತ್ತಾನೆ.

ವೈಶಂಪಾಯನಃ

ತಚ್ಛ್ರುತ್ವಾ ಸಹಸಾ ಪಾರ್ಥಃ ಶುಚಿರ್ಭೂತ್ವಾ ಸಮಾಹಿತಃ ।
ಉಪಸಂಗೃಹ್ಯ ವಿಶ್ವೇಶಮಧೀಷ್ವೇತಿ ಚ ಸೋಽಬ್ರವೀತ್ ॥೯೧॥

ತತಸ್ತ್ವಧ್ಯಾಪಯಾಮಾಸ ಸರಹಸ್ಯನಿವರ್ತನಮ್ ।
ತದಸ್ತ್ರಂ ಪಾಂಡವಶ್ರೇಷ್ಠಂ ಮೂರ್ತಿಮಂತಮಿವಾಂತಕಮ್ ॥೯೨॥

ಅದನ್ನು ಕೇಳಿದ ಅರ್ಜುನನು ಶುಚಿಯಾಗಿ ಮನಃಸಮಾಧಾನವನ್ನು ಹೊಂದಿದವನಾಗಿ ವಿಶ್ವೇಶ್ವರ ನನ್ನು ಸಮೀಪಿಸಿ ಉಪದೇಶವನ್ನು ಕೊಡು ಎಂದು

ಕೀಳಿದನು. ಶಂಕರನು ರಹಸ್ಯ ಮತ್ತು ಉಪಸಂಹಾರ ಸಹಿತವಾಗಿ ಪಾಶುಪತಾಸ್ತ್ರವನ್ನು ಪಾಂಡವಶ್ರೇಷ್ಠನಿಗೆ ಉಪದೇಶವನ್ನು ಮಾಡಿದನು.

ಉಪತಸ್ಥೇ ಮಹಾತ್ಮಾನಂ ತಥಾ ತ್ರ್ಯಕ್ಷಮುಮಾಪತಿಮ್ ।
ಪ್ರತಿಜಗ್ರಾಹ ತತ್ಪಾರ್ಥಃ ಪ್ರೀತಿಮಾನರಿಮರ್ದನಃ ॥೯೩॥

ತತಶ್ಚಚಾಲ ಪೃಥಿವೀ ಸಪರ್ವತವನದ್ರುಮಾ ।
ಸಸಾಗರವನೋದ್ದೇಶಾ ಸಗ್ರಾಮನಗರಾಕರಾ ॥೯೪॥

ಶರೀರವನ್ನು ಧರಿಸಿದ ಯಮನಂತೆ ಇದ್ದ ಆ ಅಸ್ತ್ರವು ಮಹಾತ್ಮನಾದ ಅರ್ಜುನನನ್ನು ಸಮೀಪಿಸಿತು. ಹಾಗೆಯೇ ತ್ರಿನೇತ್ರನಾದ ಪಾರ್ವತೀಪತಿಯ ಬಳಿಯಲ್ಲಿಯೂ ಇದ್ದಿತು. ಶತ್ರುಮರ್ದನನಾದ ಅರ್ಜುನನು ಸಂತೋಷದಿಂದ ಆ ಅಸ್ತ್ರವನ್ನು ಸ್ವೀಕರಿಸಿದನು. ಆಗ ಪರ್ವತ ವನ ವೃಕ್ಷಗಳಿಂದಲೂ ಸಾಗರ ಮತ್ತು ತೀರದ ವನಪ್ರದೇಶಗಳಿಂದಲೂ ಗ್ರಾಮನಗರಗಳಿಂದಲೂ ಕೂಡಿದ ಭೂಮಿಯು ನಡುಗಿತು.

ಶಂಖದುಂದುಭಿಘೋಷಾಶ್ಚ ಭೇರೀಣಾಂ ಚ ಸಹಸ್ರಶಃ ।
ತಸ್ಮಿನ್ ಮುಹೂರ್ತೇ ಸಂಪ್ರಾಪ್ತೇ ನಿರ್ಘಾತಶ್ಚ ಮಹಾನಭೂತ್ ॥

ಆ ಮುಹೂರ್ತದಲ್ಲಿ ಶಂಖದುಂದುಭಿಘೋಷಗಳೂ ಸಹಸ್ರಾರು ಭೇರಿಗಳ ಶಬ್ದಗಳೂ ಉಂಟಾದವು. ದೊಡ್ಡ ಸಿಡಿಲುಗಳು ಉಂಟಾದವು.

ಅಥಾಸ್ತ್ರಂ ಜಾಜ್ವಲದ್ಘೋರಂ ಪಾಂಡವಸ್ಯಾಮಿತೌಜಸಃ ।
ಮೂರ್ತಿಮದ್ ವಿಷ್ಠಿತಂ ಪಾರ್ಶ್ವೇ ದದೃಶುರ್ದೇವದಾನವಾಃ ॥೯೬॥

ಆಗ ಪ್ರಕಾಶಮಾನವಾದ ಆ ಘೋರವಾದ ಅಸ್ತ್ರವು ಶರೀರವನ್ನು ಧರಿಸಿ ಅಮಿತಪರಾಕ್ರಮಿಯಾದ ಅರ್ಜುನನ ಪಾರ್ಶ್ವದಲ್ಲಿ ನಿಂತುದನ್ನು ದೇವತೆಗಳು ಮತ್ತು ದಾನವರು ನೋಡಿದರು.

ಸ್ಪೃಷ್ಟಸ್ಯ ಚ ತ್ರ್ಯಂಬಕೇಣ ಫಲ್ಗುನಸ್ಯಾಮಿತೌಜಸಃ ।
ಯತ್ ಕಿಂಚಿದಶುಭಂ ದೇಹೇ ತತ್ ಸರ್ವಂ ನಾಶಮೇಯಿವಾನ್ ॥

ಶಂಕರನ ಸ್ಪರ್ಶಕ್ಕೆ ಪಾತ್ರನಾದ ಅಮಿತಪರಾಕ್ರಮಿಯಾದ ಅರ್ಜುನನ ದೇಹದಲ್ಲಿ ಯಾವ ಸ್ವಲ್ಪ ಅಶುಭವಿದ್ದಿತೋ ಅವೆಲ್ಲವೂ ನಾಶವನ್ನು ಹೊಂದಿತು.

ಸ್ವರ್ಗಂ ಗಚ್ಛೇತ್ಯನುಜ್ಞಾತಃ ತ್ರ್ಯಂಬಕೇಣ ಮಹಾತ್ಮನಾ ।
ಪ್ರಣಮ್ಯ ಶಿರಸಾ ರಾಜನ್ ಪ್ರಾಂಜಲಿರ್ಹರಮೈಕ್ಷತ ॥೯೮॥

ರಾಜನೇ! ಸ್ವರ್ಗಕ್ಕೆ ಹೋಗು ಎಂದು ಮಹಾತ್ಮನಾದ ತ್ರ್ಯಂಬಕನಿಂದ ಅನುಜ್ಞಾತನಾದ ಅರ್ಜುನನು ಶಿರಸಾ ನಮಸ್ಕಾರವನ್ನು ಮಾಡಿ ಕೈಗಳನ್ನು ಜೋಡಿಸಿ ಶಂಕರನನ್ನು ನೋಡಿದನು.

ತತಃ ಪ್ರಭುಸ್ತ್ರಿದಿವನಿವಾಸಿನಂ ವಶೀ
ಮಹಾಮತಿರ್ಗಿರಿಶ ಉಮಾಪತಿಃ ಶಿವಃ ।
ಧನುರ್ಮಹದ್ ದಿತಿಜಪಿಶಾಚಸೂದನಂ
ದದೌ ಭವಃ ಪುರುಷವರಾಯ ಗಾಂಡಿವಮ್ ॥೯೯॥

ಅನಂತರ ಸ್ವರ್ಗವಾಸಿಗಳಾದ ದೇವತೆಗಳಿಗೆ ಪ್ರಭುವಾದ, ಜಗತ್ತನ್ನು ತನ್ನ ವಶದಲ್ಲಿ ಇಟ್ಟುಕೊಂಡ, ಮಹಾಮತಿಯಾದ, ಉಮಾಪತಿಯಾದ, ಗಿರೀಶನೆಂದು ಕರೆಯಲ್ಪಡುವ ಶಿವನು ದೈತ್ಯರನ್ನೂ ಪಿಶಾಚಿಗಳನ್ನೂ ಸಂಹರಿಸುವ ಆ ದೊಡ್ಡ ಗಾಂಡೀವಧನುಸ್ಸನ್ನು ಪುರುಷಶ್ರೇಷ್ಠನಾದ ಅರ್ಜುನನಿಗೆ ಕೊಟ್ಟನು.

ತತಃ ಶುಭಂ ಗಿರಿವರಮೀಶ್ವರಸ್ತದಾ
ಸಹೋಮಯಾ ಸಿತತಟಸಾನುಕಂದರಮ್ ।
ವಿಹಾಯ ತಂ ಪತಗಮಹರ್ಷಿಸೇವಿತಂ
ಜಗಾಮ ಖಂ ಪುರುಷವರಸ್ಯ ಪಶ್ಯತಃ ॥೧೦೦॥

ಅನಂತರ ಈಶ್ವರನು ಶ್ವೇತವರ್ಣದ ಶಿಖರ ಮತ್ತು ಕಂದರಗಳನ್ನು ಹೊಂದಿದ್ದ, ಪಕ್ಷಿಗಳಿಂದ ಮತ್ತು ಮಹರ್ಷಿಗಳಿಂದ ಕೂಡಿದ್ದ, ಆ ಶ್ರೇಷ್ಠವಾದ ಪರ್ವತವನ್ನು ಬಿಟ್ಟು ಪುರುಷಶ್ರೇಷ್ಠನಾದ ಅರ್ಜುನನು ನೋಡುತ್ತಿರುವಂತೆಯೇ ಪಾರ್ವತಿಯ ಜೊತೆಯಲ್ಲಿ ಅಂತರಿಕ್ಷದಲ್ಲಿ ಪ್ರಯಾಣಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ತ್ರಿಂಶೋऽಧ್ಯಾಯಃ ॥
॥ ಕೈರಾತಪರ್ವಣಿ ಷಡ್‌ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮಹಾಭಾರತತಾತ್ಪರ್ಯನಿರ್ಣಯ - ೨೨ನೇ ಅಧ್ಯಾಯ

ಇಂದ್ರೋಽರ್ಜುನಂ ಸಮಾಗಮ್ಯ ಪ್ರಾಹ ಪ್ರೀತೋಽಸ್ಮಿತೇಽನಘ ॥

ರುದ್ರದೇಹಸ್ಥಿತಂ ಬ್ರಹ್ಮ ವಿಷ್ಣ್ವಾಖ್ಯಂ ತೋಷಿತಂ ತ್ವಯಾ ।
ತೇನ ಲೋಕಂ ಮಮಾಗಚ್ಛ ಪ್ರೇಷಯಾಮಿ ರಥಂ ತವ ॥೧೫೦॥

ಇಂದ್ರ ಅರ್ಜುನನ ಬಳಿಗೆ ಬಂದು ಹೇಳಿದ 'ಪಾಪರಹಿತನಾದ ಅರ್ಜುನನೆ, ನಿನ್ನ ಬಗ್ಗೆ ನಾನು ಸಂತುಷ್ಟನಾಗಿದ್ದೇನೆ. ರುದ್ರದೇಹದಲ್ಲಿರುವ ವಿಷ್ಣುರೂಪಿ ಪರಬ್ರಹ್ಮನನ್ನು ನೀನು ಸಂತೋಷಪಡಿಸಿರುವಿ. ಅದರಿಂದ ನೀನು ನನ್ನ ಲೋಕಕ್ಕೆ ಬಾ. ನಿನಗೆ ರಥವನ್ನು ಕಳಿಸುತ್ತೇನೆ.

ಇತ್ಯುಕ್ತ್ವಾ ಪ್ರಯಯಾವಿಂದ್ರಸ್ತದ್ರಥೇನೈವ ಮಾತಲಿಃ ।
ಆಯಾತ್‌ಪಾರ್ಥಸ್ತಮಾರುಹ್ಯ ಯಯೌ ತಾತನಿಕೇತನಂ ॥೧೫೧॥

ಹೀಗೆ ಹೇಳಿ ಇಂದ್ರ ಹೊರಟು ಹೋದ. ಬಳಿಕ ಅದೇ ರಥದಿಂದ ಮಾತಲಿ ಹಿಂತಿರುಗಿ ಬಂದ. ಅರ್ಜುನ ಆ ರಥವನ್ನೇರಿ ಸ್ವರ್ಗಕ್ಕೆ ತೆರಳಿದ.

ಪೂಜಿತೋ ದೈವತೈಃ ಸರ್ವೈರಿಂದ್ರೇಣಾಭಿನಿವೇಶಿತಃ ।
ತೇನ ಸಾರ್ಧಮುಪಾಸೀದತ್‌ತಸ್ಮಿನ್ನೈಂದ್ರೇ ವರಾಸನೇ ॥೧೫೨॥

ಅರ್ಜುನ ಎಲ್ಲ ದೇವತೆಗಳಿಂದಲೂ ಸತ್ಕೃತನಾಗಿ ಇಂದ್ರನಿಂದ ತನ್ನಾಸನದಲ್ಲಿ ಕುಳ್ಳಿರಿಸಲ್ಪಟ್ಟ. ಅರ್ಜುನ ಇಂದ್ರನೊಂದಿಗೆ ಉತ್ಕೃಷ್ಟವಾದ ಆ ಆಸನದಲ್ಲಿ ಕುಳಿತ.

ಪ್ರೀತ್ಯಾ ಸಮಾಶ್ಲಿಷ್ಯ ಕುರುಪ್ರವೀರಂ
ಶಕ್ರೋದ್ವಿತೀಯಾಂ ತನುಮಾತ್ಮನಃ ಸಃ ।
ಈಕ್ಷನ್‌ಮುಖಂ ತಸ್ಯ ಮುಮೋದ ಸೋಽಪಿ
ಹ್ಯುವಾಸ ತಸ್ಮಿನ್‌ವತ್ಸರಾನ್‌ಪಂಚ ಲೋಕೇ ॥೧೫೩॥

ಇಂದ್ರ ತನ್ನ ಎರಡನೆ ರೂಪವಾದ ಅರ್ಜುನನನ್ನು ಪ್ರೀತಿಯಿಂದಾಲಿಂಗಿಸಿ ಅವನ ಮುಖ ನೋಡುತ್ತ ಆನಂದಿಸಿದ. ಅರ್ಜುನ ಆ ಸ್ವರ್ಗಲೋಕದಲ್ಲಿ ಐದು ವರ್ಷಕಾಲ ವಾಸಮಾಡಿದ.

ಅಸ್ತ್ರಾಣಿ ತಸ್ಯಾದದಿಶಚ್ಚ ವಾಸವೋ
ಮಹಾಂತಿ ದಿವ್ಯಾನಿ ತದೋರ್ವಶೀ ತಂ ।
ಸಂಪ್ರಾಪ್ಯ ಭಾವೇನ ತು ಮಾನುಷೇಣ
ಮಾತಾ ಕುಲಸ್ಯೇತಿ ನಿವಾರಿತಾಭೂತ್ ॥೧೫೪॥

ದೇವೇಂದ್ರ ಅರ್ಜುನನಿಗೆ ಮಹಾದಿವ್ಯಾಸ್ತ್ರಗಳನ್ನು ಉಪದೇಶಿಸಿದ. ಊರ್ವಶಿ ಅರ್ಜುನನ ಬಳಿಗೆ ಬಂದು ಸಂಗವನ್ನು ಬೇಡಿದಳು. ಅರ್ಜುನ ತಾನು ಮನುಷ್ಯನೆಂಬ ಭಾವನೆಯಿಂದ ಊರ್ವಶಿ ತನ್ನ ಕುಲದ ಮಾತೆ ಎಂದುಕೊಂಡು ಅವಳ ಸಂಗವನ್ನು ನಿರಾಕರಿಸಿದ.

ಷಂಢೋ ಭವೇತ್ಯೇವ ತಯಾಭಿಶಪ್ತೇ
ಪಾರ್ಥೇ ಶಕ್ರೋಽನುಗ್ರಹಂ ತಸ್ಯ ಚಾದಾತ್ ।
ಸಂವತ್ಸರಂ ಷಂಢರೂಪೀ ಚರಸ್ವ
ನ ಷಂಢತಾ ತೇ ಭವತೀತಿ ಧೃಷ್ಣುಃ ॥೧೫೫॥

ನೀನು ನಪುಂಸಕನಾಗೆಂದು ಊರ್ವಶಿ ಅರ್ಜುನನನ್ನು ಶಪಿಸಿದಾಗ ದೇವೇಂದ್ರ ಅವನಿಗೆ ಶಾಪ ಪರಿಹಾರವನ್ನು ಅನುಗ್ರಹಿಸಿದ. 'ನಪುಂಸಕ ವೇಷದಲ್ಲಿ ಒಂದು ವರ್ಷ ಕಾಲ ಮಾತ್ರ ಸಂಚರಿಸು, ನಪುಂಸಕತ್ವ ನಿನಗೆ ಬಾರದು' ಎಂದು.

ತತೋಽವಸತ್ ಪಾಂಡವೇಯೋ ಗಾಂಧರ್ವಂ ವೇದಮಭ್ಯಸನ್ ।
ಗಂಧರ್ವಾಚ್ಚಿತ್ರಸೇನಾತ್ತು ತಥಾಸ್ತ್ರಾಣಿ ಸುರೇಶ್ವರಾತ್ ॥೧೫೬॥

ಬಳಿಕ ಅರ್ಜುನ ಚಿತ್ರಸೇನ ಗಂಧರ್ವನಿಂದ ಗಾಂಧರ್ವ ವೇದವನ್ನೂ ಇಂದ್ರನಿಂದ ಅಸ್ತ್ರಗಳನ್ನೂ ಅಭ್ಯಾಸಮಾಡುತ್ತ ಸ್ವರ್ಗದಲ್ಲಿ ವಾಸಮಾಡಿದ.

★ ★ ★ ★

## ಮೂವತ್ತೇಳನೆಯ ಅಧ್ಯಾಯ

(ಯಮ ವರುಣ ಕುಬೇರ ಇವರಿಂದ ಅರ್ಜುನನಿಗೆ ಅಸ್ತ್ರದಾನ. ಇಂದ್ರನಿಂದ ಸ್ವರ್ಗಕ್ಕೆ ಬರುವಂತೆ ಅರ್ಜುನನಿಗೆ ಪ್ರೇರಣೆ.)

**ವೈಶಂಪಾಯನಃ**

ತಸ್ಯ ಸಂಪಶ್ಯತಸ್ತ್ವೇವ ಪಿನಾಕೀ ವೃಷಭಧ್ವಜಃ ।
ಜಗಾಮಾದರ್ಶನಂ ಭಾನುರ್ಲೋಕಸ್ಯೇವಾಸ್ತಮೇಯಿವಾನ್ ॥೧॥

ಅರ್ಜುನನು ನೋಡುತ್ತಿರುವಂತೆಯೇ ಅಸ್ತಂಗತನಾದ ಸೂರ್ಯನಂತೆ ವೃಷಭಧ್ವಜನಾದ ಪಿನಾಕಿಯು ಅದೃಶ್ಯನಾದನು.

ತತೋಽರ್ಜುನಃ ಪರಂ ಚಕ್ರೇ ವಿಸ್ಮಯಂ ಪರವೀರಹಾ ।
ಮಯಾ ಸಾಕ್ಷಾನ್ಮಹಾದೇವೋ ದೃಷ್ಟ ಇತ್ಯಸಕೃತ್ ಪ್ರಭುಃ ॥೨॥

ಆಗ ಶತ್ರುವೀರರನ್ನು ಸಂಹರಿಸುವ ಪ್ರಭುವಾದ ಅರ್ಜುನನು ತಾನು ಸಾಕ್ಷಾತ್ ಮಹಾದೇವನನ್ನು ನೋಡಿದೆ ಎಂದು ತಿಳಿದು ಮತ್ತೆಮತ್ತೆ ವಿಸ್ಮಯವನ್ನು ಹೊಂದಿದನು.

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯನ್ಮಯಾ ತ್ರ್ಯಂಬಕೋ ಹರಃ ।
ಪಿನಾಕೀ ವರದೋ ರೂಪೀ ದೃಷ್ಟಃ ಸ್ಪೃಷ್ಟಶ್ಚ ಪಾಣಿನಾ ॥೩॥

ತ್ರಿನೇತ್ರನಾದ ವರದನಾದ ಪಿನಾಕಿಯಾದ ಶಿವನನ್ನು ನಾನು ಮೂರ್ತಿಮತ್ತಾಗಿ ನೋಡಿದ್ದೇನೆ. ಅವನ ಹಸ್ತಸ್ಪರ್ಶವನ್ನು ಪಡೆದಿದ್ದೇನೆ. ಆದ್ದರಿಂದ ನಾನು ಧನ್ಯನಾಗಿದ್ದೇನೆ ಮತ್ತು ಶಿವನ ಅನುಗ್ರಹವನ್ನು ಪಡೆದಿದ್ದೇನೆ.

ಕೃತಾರ್ಥಂ ಚಾವಗಚ್ಛಾಮಿ ಪುನರಾತ್ಮಾನಮಾತ್ಮನಾ ।
ಶತ್ರೂಂಶ್ಚ ವಿಜಿತಾನ್ ಸರ್ವಾನ್ ನಿರ್ವೃತ್ತಂ ಚ ಪ್ರಯೋಜನಮ್ ॥

ನಾನು ನನ್ನನ್ನು ಕೃತಾರ್ಥನೆಂದು ಭಾವಿಸುತ್ತೇನೆ. ಎಲ್ಲ ಶತ್ರುಗಳನ್ನೂ ಸೋಲಿಸುತ್ತೇನೆಂದು ಭಾವಿಸುತ್ತೇನೆ. ನನ್ನ ತಪಸ್ಸಿಗೆ ಫಲವು ದೊರಕಿದೆ.

ತತೋ ವೈಡೂರ್ಯವರ್ಣಾಭೋ ದ್ಯೋತಯನ್ ಸರ್ವತೋದಿಶಮ್ ।
ಯಾದೋಗಣವೃತಃ ಶ್ರೀಮಾನಾಜಗಾಮ ಜಲೇಶ್ವರಃ ॥೫॥

ಅನಂತರ ವೈಡೂರ್ಯವರ್ಣದಿಂದ ಕೂಡಿದ ಜಲೇಶ್ವರನಾದ ಕಾಂತಿಯುಕ್ತನಾದ ವರುಣನು ಎಲ್ಲಾ ದಿಕ್ಕುಗಳನ್ನೂ ಬೆಳಗುತ್ತಾ ಜಲಚರಪ್ರಾಣಿಗಳ ಜೊತೆಯಲ್ಲಿ(ಅಲ್ಲಿಗೆ) ಆಗಮಿಸಿದನು.

ನಾಗೈರ್ನದೈರ್ನದೀಭಿಶ್ಚ ದೈತ್ಯೈಃ ಸಾಧ್ಯೈರ್ಮರುದ್ಗಣೈಃ ।
ವರುಣೋ ಯಾದಸಾಂ ಭರ್ತಾ ವಶೀ ತಂ ದೇಶಮಭ್ಯಗಾತ್ ॥೬॥

ಸರ್ಪಗಳು ನದಗಳು ನದಿಗಳು ದೈತ್ಯರು ಸಾಧ್ಯರು ಮತ್ತು ಮರುದ್ಗಣಗಳ ಜೊತೆಯಲ್ಲಿ ಜಲಚರಪ್ರಾಣಿಗಳ ಒಡೆಯನಾದ ಮತ್ತು ಆತ್ಮವಶನಾದ ವರುಣನು ಆ ಪ್ರದೇಶಕ್ಕೆ ಬಂದನು.

ಅಥ ಜಾಂಬೂನದವಪುರ್ವಿಮಾನೇನ ಮಹಾರ್ಚಿಷಾ ।
ಕುಬೇರಃ ಸಮನುಪ್ರಾಪ್ತೋ ಯಕ್ಷೈರನುಗತಃ ಪ್ರಭುಃ ॥೭॥

ಅನಂತರ ಸುವರ್ಣಮಯವಾದ ಕಾಂತಿಯುಳ್ಳ ದೇಹದಿಂದ ಕೂಡಿದ ಪ್ರಭುವಾದ ಕುಬೇರನು ಮಹಾಪ್ರಕಾಶವುಳ್ಳ ವಿಮಾನದಿಂದ ಯಕ್ಷರಿಂದ ಅನುಗತನಾಗಿ ಬಂದನು.

ವಿದ್ಯೋತಯನ್ನಿವಾಕಾಶಮ್ ಅದ್ಭುತೋಪಮದರ್ಶನಃ ।
ಧನಾನಾಮೀಶ್ವರಃ ಶ್ರೀಮಾನ್ ಅರ್ಜುನಂ ದ್ರಷ್ಟುಮಾಗಮತ್ ॥೮॥

ಅದ್ಭುತ ದರ್ಶನನಾದ ಧನಪತಿಯಾದ ಕಾಂತಿಯುಕ್ತನಾದ ಕುಬೇರನು ಆಕಾಶವನ್ನು ಬೆಳಗುತ್ತಾ ಅರ್ಜುನನನ್ನು ನೋಡಲು ಆಗಮಿಸಿದನು.

ತಥಾ ಲೋಕಾಂತಕಃ ಶ್ರೀಮಾನ್ ಯಮಃ ಸಾಕ್ಷಾತ್ ಪ್ರತಾಪವಾನ್ ।
ಮರ್ತ್ಯಮೂರ್ತಿಧರೈಃ ಸಾರ್ಧಂ ಪಿತೃಭಿರ್ಲೋಕಭಾವನೈಃ ॥೯॥

ದಂಡಪಾಣಿರಚಿಂತ್ಯಾತ್ಮಾ ಸರ್ವಭೂತವಿನಾಶಕೃತ್ ।
ವೈವಸ್ವತೋ ಧರ್ಮರಾಜೋ ವಿಮಾನೇನಾವಭಾಸಯನ್ ॥೧೦॥

ತ್ರೀನ್‌ಲೋಕಾನ್ ಗುಹ್ಯಕಾಂಶ್ಚೈವ ಗಂಧರ್ವಾಂಶ್ಚ ಸಪನ್ನಗಾನ್ ।
ದ್ವಿತೀಯ ಇವ ಮಾರ್ತಾಂಡೋ ಯುಗಾಂತೇ ಸಮುಪಸ್ಥಿತೇ ॥೧೧॥

ಹಾಗೆಯೇ ಲೋಕನಾಶಕನಾದ ಮಹಾಪ್ರತಾಪಶಾಲಿಯಾದ ಸರ್ವಪ್ರಾಣಿಗಳ ಮರಣವನ್ನುಂಟುಮಾಡುವ ಅಚಿಂತ್ಯ ಪ್ರಭಾವವುಳ್ಳ ಸೂರ್ಯಪುತ್ರನಾದ ದಂಡಪಾಣಿಯಾದ ಕಾಂತಿಯುಕ್ತನಾದ ಯಮಧರ್ಮರಾಜನು ತನ್ನ ವಿಮಾನದ ಕಾಂತಿಯಿಂದ ಮೂರು ಲೋಕಗಳನ್ನೂ ಗುಹ್ಯಕರನ್ನೂ ಗಂಧರ್ವರನ್ನೂ ಮತ್ತು ಸರ್ಪಗಳನ್ನೂ ಪ್ರಕಾಶಿಸುತ್ತಾ ಯುಗಾಂತವು ಸಮೀಪಿಸಿದಾಗ ಇರುವ ಎರಡನೆಯ ಸೂರ್ಯನಂತೆ ಅಲ್ಲಿಗೆ ಬಂದನು.

ಭಾನುಮಂತಿ ವಿಚಿತ್ರಾಣಿ ಶಿಖಿರಾಣಿ ಮಹಾಗಿರೇಃ ।
ಸಮಾಸ್ಥಾಯಾರ್ಜುನಂ ತತ್ರ ದದೃಶುಸ್ತಪಸಾನ್ವಿತಮ್ ॥೧೨॥

ಸೂರ್ಯನ ಪ್ರಕಾಶವನ್ನು ಹೊಂದಿದ ಆ ಮಹಾಪರ್ವತದ ವಿಚಿತ್ರ ಶಿಖರಗಳಲ್ಲಿ ಅವರು ನಿಂತು ತಪೋಯುಕ್ತನಾದ ಅರ್ಜುನನನ್ನು ಅಲ್ಲಿನೋಡಿದರು.

ತತೋ ಮುಹೂರ್ತಾದ್ ಭಗವಾನ್ಐರಾವತಶಿರೋಗತಃ ।
ಆಜಗಾಮ ಸಹೇಂದ್ರಾಣ್ಯಾ ಶಕ್ರಃ ಸುರಗಣೈರ್ವೃತಃ ॥೧೩॥

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಶುಶುಭೇ ನಾಗರಾಜಸ್ಥಃ ಸಿತಮಭ್ರಮಿವಾಸ್ಥಿತಃ ॥೧೪॥

ಅನಂತರ ಒಂದು ಮುಹೂರ್ತವು ಕಳೆದ ಮೇಲೆ ಐರಾವತದ ಶಿರಸ್ಸಿನಲ್ಲಿ ಕುಳಿತವನಾಗಿ ಇಂದ್ರನು ಶಚೀ ಮತ್ತು ಸುರಗಣಗಳಿಂದ ಕೂಡಿಕೊಂಡು ಅಲ್ಲಿಗೆ ಬಂದನು. ತನ್ನ ತಲೆಯ ಮೇಲೆ ಹಿಡಿದ ಶ್ವೇತಛತ್ರದಿಂದಲೂ ಶ್ವೇತ ಗಜದ ಮೇಲೆ ಕುಳಿತಿದ್ದರಿಂದಲೂ ಬಿಳಿಯ ಮೋಡದ ಮೇಲೆ ಕುಳಿತವನಂತೆ ಅವನು ಶೋಭಿಸಿದನು.

ಸಂಸ್ತೂಯಮಾನೋ ಗಂಧರ್ವೈಃ ಋಷಿಭಿಶ್ಚ ತಪೋಧನೈಃ ।
ಶೃಂಗಂ ಗಿರೇಃ ಸಮಾಸಾದ್ಯ ತಸ್ಥೌ ಸೂರ್ಯ ಇವೋದಿತಃ ॥೧೫॥

ಗಂಧರ್ವರಿಂದಲೂ ತಪೋಧನರಾದ ಋಷಿಗಳಿಂದಲೂ ಸ್ತೋತ್ರಮಾಡಲ್ಪಟ್ಟವನಾಗಿ ಪರ್ವತಶಿಖರವನ್ನು ತಲುಪಿ ಉದಯಿಸಿದ ಸೂರ್ಯನಂತೆ ಅಲ್ಲಿನಿಂತನು.

ಅಥ ಮೇಘಸ್ವನಃ ಶ್ರೀಮಾನ್ ವ್ಯಾಜಹಾರ ಶುಭಾಂ ಗಿರಮ್ ।
ಯಮಃ ಪರಮಧರ್ಮಜ್ಞೋ ದಕ್ಷಿಣಾಂ ದಿಶಮಾಶ್ರಿತಃ ॥೧೬॥

ನಂತರ ಪರಮಧರ್ಮಜ್ಞನಾದ ಕಾಂತಿಯುಕ್ತನಾದ ಮೇಘ ಗಂಭೀರವಾಣಿಯನ್ನು ಹೊಂದಿದ್ದ ಯಮನು ದಕ್ಷಿಣದಿಕ್ಕನ್ನು ಆಶ್ರಯಿಸಿದವನಾಗಿ ಶುಭವಾದ ಮಾತುಗಳನ್ನು ಆಡಿದನು.

ಅರ್ಜುನಾರ್ಜುನ ಪಶ್ಯಾಸ್ಮಾನ್ ಲೋಕಪಾಲಾನ್ ಸಮಾಗತಾನ್ ।
ದೃಷ್ಟಿಂ ತೇ ವಿತರಾಮೋಽದ್ಯ ಭವಾನರ್ಹತಿ ದರ್ಶನಮ್ ॥೧೭॥

ಎಲೈ ಅರ್ಜುನನೇ ಇಲ್ಲಿಗೆ ಬಂದ ಲೋಕಪಾಲರಾದ ನಮ್ಮನ್ನು ನೋಡು. ನಿನಗೆ ನಾವು ಈ ದಿನ ದಿವ್ಯದೃಷ್ಟಿಯನ್ನು ಕೊಡುತ್ತೇವೆ. ನೀನು ಅಂತಹ ದರ್ಶನಕ್ಕೆ ಯೋಗ್ಯನಾಗಿದ್ದೀಯೆ.

ಪೂರ್ವರ್ಷಿರಮಿತಾತ್ಮಾ ತ್ವಂ ನರೋ ನಾಮ ಮಹಾಬಲಃ ।
ನಿಯೋಗಾದ್ ಬ್ರಹ್ಮಣಸ್ತಾತ ಮರ್ತ್ಯತಾಂ ಸಮುಪಾಗತಃ ॥೧೮॥

ನೀನು ಹಿಂದೆ ಅಮಿತವಾದ ಸಾಮರ್ಥ್ಯವುಳ್ಳ ಮಹಾಬಲವುಳ್ಳ ನರನೆಂಬ ಋಷಿಯಾಗಿದ್ದಿ. ಪ್ರೀತಿಪಾತ್ರನೇ, ಬ್ರಹ್ಮದೇವರ ಅಪ್ಪಣೆಯಂತೆ ಮನುಷ್ಯನಾಗಿ ಜನಿಸಿದ್ದೀಯೆ.

ತ್ವಂ ವಾಸವ ಸಮುದ್ಭೂತೋ ಮಹಾವೀರ್ಯಪರಾಕ್ರಮಃ ।
ಕ್ಷಾತ್ರಂ ಚಾಗ್ನಿಸಮಸ್ಪರ್ಶಂ ಭಾರದ್ವಾಜೇನ ರಕ್ಷಿತಮ್ ॥೧೯॥

ನೀನು ಇಂದ್ರನಿಂದ ಜನಿಸಿ ಮಹಾವೀರ್ಯಪರಾಕ್ರಮ- ವುಳ್ಳವನಾಗಿದ್ದೀಯೆ. ದ್ರೋಣರಿಂದ ರಕ್ಷಿತನಾಗಿದ್ದೀಯೆ. ಅಗ್ನಿ ಸಮಾನವಾದ ಸ್ಪರ್ಶವುಳ್ಳ ಕ್ಷಾತ್ರತೇಜಸ್ಸು ನಿನ್ನಲ್ಲಿ ತುಂಬಿದೆ.

ದಾನವಾಶ್ಚ ಮಹಾವೀರ್ಯಾ ಯೇ ಮನುಷ್ಯತ್ವಮಾಗತಾಃ ।
ನಿವಾತಕವಚಾಶ್ಚೈವ ಸಂಸಾಧ್ಯಾಃ ಕುರುನಂದನ ॥೨೦॥

ಎಲೈ ಕುರುನಂದನನೇ ಭೂಮಿಯಲ್ಲಿ ಮನುಷ್ಯರಾಗಿ ಅವತರಿಸಿ ಮಹಾಪರಾಕ್ರಮಶಾಲಿಗಳಾದ ದಾನವರು ಮತ್ತು ನಿವಾತಕವಚರು ನಿನ್ನಿಂದ ಸಂಹರಿಸಲ್ಪಡಬೇಕು.

ಪಿತುರ್ಮಮಾಂಶೋ ದೇವಸ್ಯ ಸರ್ವಲೋಕಪ್ರತಾಪಿನಃ ।
ಕರ್ಣಃ ಸ ಸುಮಹಾವೀರ್ಯಃ ತ್ವಯಾ ವಧ್ಯೋ ಧನಂಜಯ ॥೨೧॥

ಧನಂಜಯನೇ! ಎಲ್ಲಾ ಲೋಕಗಳನ್ನೂ ಬೆಳಗುವ ಮತ್ತು ಪ್ರತಾಪಶಾಲಿಯಾದ ನನ್ನ ತಂದೆಯಾದ ಸೂರ್ಯದೇವನ ಅಂಶವಾದ ಮಹಾಪರಾಕ್ರಮಶಾಲಿಯಾದ ಆ ಕರ್ಣನು ನಿನ್ನಿಂದ ಸಂಹರಿಸಲ್ಪಡಬೇಕು.

ಅಂಶಾಶ್ಚ ಭುವಿಸಂಪ್ರಾಪ್ತಾ ದೇವಗಂಧರ್ವರಕ್ಷಸಾಮ್ ।
ತ್ವಯಾ ನಿಪಾತಿತಾ ಯುದ್ಧೇ ಸ್ವಕರ್ಮಫಲನಿರ್ಜಿತಾಮ್ ।
ಗತಿಂ ಪ್ರಾಪ್ಸ್ಯಂತಿ ಕೌಂತೇಯ ಯಥಾಸ್ವಮರಿಕರ್ಶನ ॥೨೨॥

ಎಲೈ ಕೌಂತೇಯನೇ, ಶತ್ರುಕರ್ಶನನೇ, ಭೂಮಿಗೆ ಬಂದ ದೇವತೆಗಳ ಗಂಧರ್ವರ ಮತ್ತು ರಾಕ್ಷಸರ ಅಂಶಗಳು ಯುದ್ಧದಲ್ಲಿ ನಿನ್ನಿಂದ ಉರುಳಿಸಲ್ಪಟ್ಟು ತಮ್ಮ ತಮ್ಮ ಕರ್ಮ ಫಲದಿಂದ ನಿರ್ಜಿತವಾದ ಗತಿಯನ್ನು ಹೊಂದುವರು.

ಅಕ್ಷಯಾ ತವ ಕೀರ್ತಿಶ್ಚ ಲೋಕೇ ಸ್ಥಾಸ್ಯತಿ ಫಲ್ಗುನ ।
ತ್ವಯಾ ಸಾಕ್ಷಾನ್ಮಹಾದೇವಃ ತೋಷಿತೋ ಹಿ ಮಹಾಮೃಧೇ ।
ಲಪ್ಸ್ಯೇ ವಸುಮತೀ ಚಾಪಿ ಕರ್ತವ್ಯಾ ವಿಷ್ಣುನಾ ಸಹ ॥೨೩॥

ಎಲೈ ಫಲ್ಗುನನೇ, ಲೋಕದಲ್ಲಿ ನಿನ್ನ ಅಕ್ಷಯವಾದ ಕೀರ್ತಿಯು ಉಳಿಯುವುದು. ನೀನು ದೊಡ್ಡ ಯುದ್ಧದಲ್ಲಿ ಸಾಕ್ಷಾತ್ ಮಹಾದೇವನನ್ನು ಸಂತೋಷಪಡಿಸಿದ್ದೀಯಷ್ಟೇ. ವಿಷ್ಣುವಿನ ಜೊತೆಯಲ್ಲಿ ಭೂಭಾರವನ್ನು ಇಳಿಸಬೇಕು.

ಗೃಹಾಣಾಸ್ತ್ರಂ ಮಹಾಬಾಹೋ ದಂಡಮಪ್ರತಿಮಂ ಮಹತ್ ।
ಅನೇನಾಸ್ತ್ರೇಣ ಸುಮಹತ್ ತ್ವಂ ಹಿ ಕರ್ಮ ಕರಿಷ್ಯಸಿ ॥೨೪॥

ಮಹಾಬಾಹುವೇ, ಅಸದೃಶವಾದ ಮಹತ್ತಾದ ಈ ನನ್ನ ದಂಡಾಸ್ತ್ರವನ್ನು ಸ್ವೀಕರಿಸು. ಈ ಅಸ್ತ್ರದಿಂದ ನೀನು ಬಹಳ ದೊಡ್ಡ ಕಾರ್ಯವನ್ನು ಸಾಧಿಸುವಿ.

ಪ್ರತಿಜಗ್ರಾಹ ತತ್ ಪಾರ್ಥೋ ವಿಧಿವತ್ ಕುರುನಂದನಃ ।
ಸಮಂತ್ರಂ ಸೋಪಚಾರಂ ಚ ಸಮೋಕ್ಷಂ ಸನಿವರ್ತನಮ್ ॥೨೫॥

ಕುರುನಂದನನಾದ ಅರ್ಜುನನು ಮಂತ್ರ ಉಪಚಾರ ಪ್ರಯೋಗ ಮತ್ತು ಉಪಸಂಹಾರಗಳಿಂದ ಸಹಿತವಾದ ಆ ಅಸ್ತ್ರವನ್ನು ವಿಧಿವತ್ತಾಗಿ ಸ್ವೀಕರಿಸಿದನು.

ತತೋ ಜಲಧರಶ್ಯಾಮೋ ವರುಣೋ ಯಾದಸಾಂ ಪತಿಃ ।
ಪಶ್ಚಿಮಾಂ ದಿಶಮಾಸ್ಥಾಯ ಗಿರಮುಚ್ಚಾರಯನ್ ಪ್ರಭುಃ ॥೨೬॥

ಅನಂತರ ಯಾದೋಗಣಪತಿಯಾದ ಜಲಧರಶ್ಯಾಮನಾದ ಪ್ರಭುವಾದ ವರುಣನು ಪಶ್ಚಿಮ ದಿಕ್ಕಿನಲ್ಲಿನಿಂತು ಮಾತನಾಡಿದನು.

ಪಾರ್ಥ ಕ್ಷತ್ರಿಯಮುಖ್ಯಸ್ತ್ವಂ ಕ್ಷತ್ರಧರ್ಮೇ ವ್ಯವಸ್ಥಿತಃ ।
ಪಶ್ಯ ಮಾಂ ಪೃಥುತಾಮ್ರಾಕ್ಷ ವರುಣೋಽಸ್ಮಿ ಜಲೇಶ್ವರಃ ॥೨೭॥

ಪಾರ್ಥನೇ, ನೀನು ಕ್ಷತ್ರಿಯರಲ್ಲಿ ಪ್ರಧಾನನಾದವನು. ಕ್ಷತ್ರಿಯಧರ್ಮದಲ್ಲಿ ನಿಷ್ಠನಾದವನು. ವಿಶಾಲರಕ್ತನೇತ್ರನೇ ನನ್ನನ್ನು ನೋಡು. ನಾನು ಜಲೇಶ್ವರನಾದ ವರುಣ.

ಮಯಾ ಸಮುದ್ಯತಾನ್ ಪಾಶಾನ್ ವಾರುಣಾನನಿವಾರಣಾನ್ ।
ಪ್ರತಿಗೃಹ್ಣೀಷ್ವ ಕೌಂತೇಯ ಸರಹಸ್ಯನಿವರ್ತನಾನ್ ॥೨೮॥

ಕೌಂತೇಯನೇ ನಾನು ಕೊಡುತ್ತಿರುವ ನಿವಾರಿಸಲು ಅಸಾಧ್ಯವಾದ ವಾರುಣಪಾಶಗಳನ್ನು ಮಂತ್ರ ಮತ್ತು ಉಪಸಂಹಾರಗಳೊಂದಿಗೆ ಸ್ವೀಕರಿಸು.

ಏಭಿಸ್ತದಾ ಮಯಾ ವೀರ ಸಂಗ್ರಾಮೇ ತಾರಕಾಮಯೇ ।
ದೈತೇಯಾನಾಂ ಸಹಸ್ರಾಣಿ ಸಂಯತಾನಿ ಮಹಾತ್ಮನಾಮ್ ॥೨೯॥

ವೀರನೇ ಈ ಪಾಶಗಳಿಂದ ಕಣ್ಣಿಗೆ ಹಿಂಸೆಯುಂಟಾಗುವಂತೆ ನಡೆದ ಯುದ್ಧದಲ್ಲಿ ನಾನು ಮಹಾಪ್ರಯತ್ನಶೀಲರಾದ ಸಾವಿರಾರು ದೈತ್ಯರನ್ನು ಬಂಧಿಸಿದ್ದೇನೆ.

ತಸ್ಮಾದಿಮಾನ್ ಮಹಾಸತ್ತ್ವ ಮತ್ಪ್ರಸಾದಸಮುತ್ಥಿತಾನ್ ।
ಗೃಹಾಣ ನ ಹಿ ತೇ ಮುಚ್ಯೇದಂತಕೋಽಪ್ಯಾತತಾಯಿನಃ ॥೩೦॥

ಮಹಾಸತ್ವನೇ, ನನ್ನ ಅನುಗ್ರಹದಿಂದ ಕೊಡಮಾಡಲ್ಪಟ್ಟ ಈ ಪಾಶಗಳನ್ನು ಸ್ವೀಕರಿಸು. ಶಸ್ತ್ರಧಾರಿಯಾದ ನಿನ್ನಿಂದ ಯಮನೂ ಕೂಡ ಬಿಡಿಸಿಕೊಂಡು ಹೋಗಲು ಸಾಧ್ಯವಿಲ್ಲ.

ಅನೇನ ತ್ವಂ ಯದಾಽಸ್ತ್ರೇಣ ಸಂಗ್ರಾಮೇ ವಿಚರಿಷ್ಯಸಿ ।
ತದಾ ನಿಃಕ್ಷತ್ರಿಯಾ ಭೂಮಿರ್ಭವಿಷ್ಯತಿ ನ ಸಂಶಯಃ ॥೩೧॥

ನೀನು ಈ ಅಸ್ತ್ರವನ್ನು ಹಿಡಿದು ಯಾವಾಗ ಯುದ್ಧ ಭೂಮಿಯಲ್ಲಿ ಸಂಚರಿಸುವಿಯೋ ಆಗ ಭೂಮಿಯು ನಿಃಕ್ಷತ್ರಿಯವಾಗುವುದು. ಇದರಲ್ಲಿ ಸಂಶಯವಿಲ್ಲ.

ತತಸ್ತಾನ್ ವಾರುಣಾನ್ ದಿವ್ಯಾನ್ ಅಸ್ತ್ರಾನಸ್ತ್ರವಿದಾಂ ವರಃ ।
ಪ್ರತಿಜಗ್ರಾಹ ವಿಧಿವದ್ ವರುಣಾದ್ ವಾಸವಿಸ್ತದಾ ॥೩೨॥

ಅನಂತರ ಆಗ ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದ ಅರ್ಜುನನು ದಿವ್ಯವಾದ ವಾರುಣಾಸ್ತ್ರವನ್ನು ವರುಣನಿಂದ ವಿಧಿವತ್ತಾಗಿ ಸ್ವೀಕರಿಸಿದನು.

ತತಃ ಕೈಲಾಸನಿಲಯೋ ಧನಾಧ್ಯಕ್ಷೋಽಭ್ಯಭಾಷತ ।
ದತ್ತೇಷ್ವಸ್ತ್ರೇಷು ದಿವ್ಯೇಷು ವರುಣೇನ ಯಮೇನ ಚ ॥೩೩॥

ವರುಣನು ಮತ್ತು ಯಮನು ದಿವ್ಯವಾದ ಅಸ್ತ್ರಗಳನ್ನು ಕೊಟ್ಟಮೇಲೆ ಕೈಲಾಸವಾಸಿಯಾದ ಕುಬೇರನು ಮಾತನಾಡಿದನು.

ಸವ್ಯಸಾಚಿನ್ ಮಹಾಬಾಹೋ ಪೂರ್ವದೇವ ಸನಾತನ ।
ಸಹಾಸ್ಮಾಭಿರ್ಭವಾನ್ ಜಾತಃ ಪುರಾಕಲ್ಪೇಷು ನಿತ್ಯಶಃ ॥೩೪॥

ಸವ್ಯಸಾಚಿಯಾದ ಮಹಾಬಾಹುವೇ, ಪೂರ್ವದೇವನೇ, ಸನಾತನನೇ, ನೀನು ಹಿಂದಿನ ಕಲ್ಪಗಳಲ್ಲಿ ಯಾವಾಗಲೂ ನಮ್ಮ ಜೊತೆಯಲ್ಲಿಯೇ ಜನಿಸಿದ್ದೀಯೆ.

ಮತ್ತೋಽಪಿ ತ್ವಂ ಗೃಹಾಣಾಸ್ತ್ರಮಂತರ್ಧಾನಂ ಪ್ರಿಯಂ ಮಮ ।
ಓಜಸ್ತೇಜೋದ್ಯುತಿಕರಂ ಪ್ರಸ್ವಾಪನಮಮಿತ್ರಹನ್ ॥೩೫॥

ನನ್ನಿಂದಲೂ ಕೂಡ ನನಗೆ ಪ್ರಿಯವಾದ ಅಂತರ್ಧಾನವೆಂಬ ಅಸ್ತ್ರವನ್ನು ಸ್ವೀಕರಿಸು. ಆ ಅಸ್ತ್ರವು ನಿನ್ನ ಸಾಮರ್ಥ್ಯವನ್ನೂ ಪರಾಕ್ರಮವನ್ನೂ ಮತ್ತು ಕಾಂತಿಯನ್ನೂ ಹೆಚ್ಚಿಸುವುದು ಮತ್ತು ಶತ್ರುಗಳಿಗೆ ಗಾಢವಾದ ನಿದ್ರೆಯನ್ನು ಉಂಟುಮಾಡುವುದು.

ತತೋಽರ್ಜುನೋ ಮಹಾಬಾಹುರ್ವಿಧಿವತ್ ಕುರುನಂದನಃ ।
ಕೌಬೇರಮಪಿ ಜಗ್ರಾಹ ದಿವ್ಯಮಸ್ತ್ರಂ ಮಹಾಬಲಃ ॥೩೬॥

ಆಗ ಮಹಾಬಾಹುವೂ ಮಹಾಬಲನೂ ಆದ ಕುರುನಂದನನಾದ ಅರ್ಜುನನು ದಿವ್ಯವಾದ ಅಂತರ್ಧಾನ ಅಸ್ತ್ರವನ್ನು ಕುಬೇರನಿಂದ ಸ್ವೀಕರಿಸಿದನು.

ತತೋಽಬ್ರವೀದ್ ದೇವರಾಜಃ ಪಾರ್ಥಮಕ್ಲಿಷ್ಟಕಾರಿಣಮ್ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಮೇಘದುಂದುಭಿನಿಃಸ್ವನಃ ॥೩೭॥

ಅನಂತರ ದೇವರಾಜನಾದ ಇಂದ್ರನು ಅಕ್ಲಿಷ್ಟಕಾರಿಯಾದ ಅರ್ಜುನನನ್ನು ಸಮಾಧಾನಪಡಿಸುತ್ತಾ ಮೇಘ ದುಂದುಭಿಗಳಂತೆ ಗಂಭೀರವಾದ ನಾದವುಳ್ಳವನಾಗಿ ಮಧುರವಾದ ಮಾತುಗಳನ್ನು ಆಡಿದನು.

ಕುಂತೀಪುತ್ರ ಮಹಾಬಾಹೋ ತ್ವಮೀಶಾನಃ ಪುರಾತನಃ ।
ಪರಾಂ ಸಿದ್ಧಿಮನುಪ್ರಾಪ್ತಃ ಸಾಕ್ಷಾದ್ ದೇವಗತಿಂ ಗತಃ ॥೩೮॥

ಮಹಾಬಾಹುವಾದ ಕುಂತೀಪುತ್ರನೇ! ನೀನು ಹಿಂದೆ ಒಡೆಯನಾಗಿ ಶ್ರೇಷ್ಠಸಿದ್ಧಿಯನ್ನುಪಡೆದು ಸಾಕ್ಷಾತ್ ದೇವಗತಿಯನ್ನು ಹೊಂದಿದವನಾಗಿದ್ದೆ.

ದೇವಕಾರ್ಯಂ ಹಿ ಸುಮಹತ್ ತ್ವಯಾ ಕಾರ್ಯಮರಿಂದಮ ।
ಆರೋಢವ್ಯಸ್ತ್ವಯಾ ಸ್ವರ್ಗಃ ಸಜ್ಜೋಭವ ಮಹಾದ್ಯುತೇ ॥೩೯॥

ಅರಿಂದಮನೇ, ನೀನು ದೊಡ್ಡ ದೇವಕಾರ್ಯವನ್ನು ಮಾಡಬೇಕಾಗಿದೆ. ಮಹಾದ್ಯುತಿಯೇ, ನೀನು ಸ್ವರ್ಗವನ್ನು ಏರಬೇಕಾಗಿದೆ. ಸಿದ್ಧನಾಗು.

ರಥೋ ಮಾತಲಿಸಂಯುಕ್ತ ಆಗಂತಾ ತ್ವತ್ಕೃತೇ ಮಮ ।
ತತ್ರ ತೇಽಹಂ ಪ್ರದಾಸ್ಯಾಮಿ ಸರ್ವಾಣ್ಯಸ್ತ್ರಾಣಿ ಕೌರವ ॥೪೦॥

ನನ್ನ ಸಾರಥಿಯಾದ ಮಾತಲಿಯು ಹೂಡಿದ ರಥವು ನಿನ್ನ ಸಲುವಾಗಿ ಬರಲಿದೆ. ಎಲೈ ಕೌರವನೇ, ನಾನು ನಿನಗೆ ಸ್ವರ್ಗದಲ್ಲಿಯೇ ಎಲ್ಲಾ ಅಸ್ತ್ರಗಳನ್ನೂ ಕೊಡುವೆನು.

ವೈಶಂಪಾಯನಃ

ತಾನ್ ದೃಷ್ಟ್ವಾ ಲೋಕಪಾಲಾಂಸ್ತು ಸಮೇತಾನ್ ಗಿರಿಮೂರ್ಧನಿ ।
ಜಗಾಮ ವಿಸ್ಮಯಂ ಧೀಮಾನ್ ಕುಂತೀಪುತ್ರೋ ಧನಂಜಯಃ ॥೪೧॥

ಕುಂತಿಪುತ್ರನೂ ಮೇಧಾವಿಯೂ ಆದ ಧನಂಜಯನು ಪರ್ವತಶಿಖರದಲ್ಲಿ ಸಮೇತರಾಗಿದ್ದ ಲೋಕಪಾಲಕರನ್ನು ನೋಡಿ ವಿಸ್ಮಯವಶನಾದನು.

ತತೋಽರ್ಜುನೋ ಮಹಾತೇಜಾ ಲೋಕಪಾಲಾನ್ ಸಮಾಗತಾನ್ ।
ಪೂಜಯಾಮಾಸ ವಿಧಿವದ್ ವಾಗ್ಭಿರದ್ಭಿಃ ಫಲೈರಪಿ ॥೪೨॥

ಅನಂತರ ಮಹಾತೇಜಸ್ವಿಯಾದ ಅರ್ಜುನನು ಸಮಾಗತರಾದ ಲೋಕಪಾಲಕರಿಗೆ ಸ್ತೋತ್ರಗಳಿಂದಲೂ ಜಲದಿಂದಲೂ ಮತ್ತು ಫಲದಿಂದಲೂ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದನು.

ತತಃ ಪ್ರತಿಯಯುರ್ದೇವಾಃ ಪ್ರತಿಪೂಜ್ಯ ಧನಂಜಯಮ್ ।
ಯಥಾಗತೇನ ವಿಬುಧಾಃ ಸರ್ವೇ ಕಾಮಮನೋಜವಾಃ ॥೪೩॥

ಅನಂತರ ದೇವತೆಗಳೆಲ್ಲರೂ ಅರ್ಜುನನನ್ನು ಸತ್ಕರಿಸಿ ತಾವು ಬಂದ ಮಾರ್ಗವನ್ನೇ ಹಿಡಿದು ಮನಸ್ಸಿಗೆ ಇಷ್ಟವಾದ ವೇಗವುಳ್ಳವರಾಗಿ ಹಿಂದಿರುಗಿದರು.

ತತೋಽರ್ಜುನೋ ಮುದಂ ಲೇಭೇ ಲಬ್ಧ್ವಾಸ್ತ್ರಂ ಪುರುಷರ್ಷಭಃ ।
ಕೃತಾರ್ಥಮಿತಿ ಚಾತ್ಮಾನಂ ಸ ಮೇನೇ ಪೂರ್ಣಮಾನಸಮ್ ॥೪೪॥

ಆಗ ಪುರುಷರ್ಷಭನಾದ ಅರ್ಜುನನು ಅಸ್ತ್ರಗಳನ್ನು ಪಡೆದು ಸಂತೋಷಗೊಂಡನು. ಅವನು ತನ್ನ ಮನೋರಥವು ಪೂರ್ಣವಾದ ಕಾರಣದಿಂದ ತಾನು ಕೃತಾರ್ಥನೆಂದು ಭಾವಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥
॥ ಕೈರಾತಪರ್ವಣಿ ಸಪ್ತವಿಂಶೋಽಧ್ಯಾಯಃ ॥

**॥ ಕೈರಾತಪರ್ವ ಸಮಾಪ್ತಮ್ ॥**

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಕೈರಾತಪರ್ವವು ಮುಗಿಯಿತು.

# ೪. ಇಂದ್ರಲೋಕಾಭಿಗಮನಪರ್ವ

## ಮೂವತ್ತೆಂಟನೆಯ ಅಧ್ಯಾಯ

(ಅರ್ಜುನನಿಂದ ಮಾತಲಿಯ ರಥದಲ್ಲಿ ಸ್ವರ್ಗಗಮನ.)

**ವೈಶಂಪಾಯನಃ**

**ಗತೇಷು ಲೋಕಪಾಲೇಷು ಪಾರ್ಥಃ ಶತ್ರುನಿಬರ್ಹಣಃ ।**
**ಚಿಂತಯಾಮಾಸ ರಾಜೇಂದ್ರ ದೇವರಾಜರಥಾಗಮಮ್ ॥೧॥**

ಎಲೈ ರಾಜೇಂದ್ರನಾದ ಜನಮೇಜಯನೇ, ಲೋಕಪಾಲಕರು ಹೊರಟು ಹೋಗುತ್ತಿರಲು ಶತ್ರುಸಂಹಾರಕನಾದ ಪಾರ್ಥನು ದೇವರಾಜನಾದ ಇಂದ್ರನ ರಥದ ಆಗಮನವನ್ನು ನಿರೀಕ್ಷಿಸಿದನು.

**ತತಶ್ಚಿಂತಯಮಾನಸ್ಯ ಗುಡಾಕೇತಸ್ಯ ಧೀಮತಃ ।**
**ರಥೋ ಮಾತಲಿಸಂಯುಕ್ತ ಆಜಗಾಮ ಮಹಾಪ್ರಭಃ ॥೨॥**

**ನಭೋ ವಿತಿಮಿರಂ ಕುರ್ವನ್ ಜಲದಾನ್ ಪಾಟಯನ್ನಿವ ।**
**ದಿಶಃ ಸಂಪೂರಯನ್ ನಾದೈರ್ಮಹಾಮೇಘರವೋಪಮೈಃ ॥೩॥**

ಅನಂತರ ಹೀಗೆ ಚಿಂತಿಸುತ್ತಿದ್ದ ಮೇಧಾವಿಯಾದ ಅರ್ಜುನನೆಡೆಗೆ ಮಹಾಕಾಂತಿಯುಳ್ಳ ಮಾತಲಿಯಿಂದ ಕೂಡಿದ ರಥವು ಆಗಮಿಸಿತು. ಆಕಾಶದ

ಕತ್ತಲೆಯನ್ನು ಓಡಿಸುತ್ತಾ ಮೇಘಗಳನ್ನು ಸೀಳುವಂತೆ ಮತ್ತು ಮೇಘಗರ್ಜನೆಗೆ ಸದೃಶವಾದ ತನ್ನ ನಾದದಿಂದ ದಿಕ್ಕುಗಳನ್ನು ತುಂಬುತ್ತಾ ರಥವು ಬಂದಿತು.

ಅಸಯಃ ಶಕ್ತಯೋ ಭೀಮಾ ಗದಾಶ್ಚೋಗ್ರಪ್ರದರ್ಶನಾಃ ।
ದಿವ್ಯಪ್ರಭಾವಾಃ ಪ್ರಾಸಾಶ್ಚ ವಿದ್ಯುತಶ್ಚ ಮಹಾಪ್ರಭಾಃ ॥೪॥

ತಥೈವಾಶನಯಸ್ತತ್ರ ಚಕ್ರಯುಕ್ತಾ ಹುಲಾಹುಲಾಃ ।
ವಾಯುಸ್ಫೋಟಾಃ ಸನಿರ್ಘಾತಾಃ ಶಂಖಮೇಘನಿಭಾಸ್ತಥಾ ॥೫॥

ತತ್ರ ನಾಗಾ ಮಹಾಕಾಯಾ ಜ್ವಲಿತಾಸ್ಯಾಃ ಸುದಾರುಣಾಃ ।
ಸಿತಾಭ್ರಕೂಟಪ್ರತಿಮಾಃ ಸಂಹತಾಶ್ಚ ಯಥೋಪಲಾಃ ॥೬॥

ಆ ರಥದಲ್ಲಿ ಖಡ್ಗಗಳು ಭಯಂಕರವಾದ ಶಕ್ತ್ಯಾಯುಧಗಳು ಉಗ್ರವಾಗಿ ಕಾಣುವ ಗದೆಗಳು ದಿವ್ಯಪ್ರಭೆಯುಳ್ಳ ಪ್ರಾಸಗಳು ಮಹಾಪ್ರಭೆಯುಳ್ಳ ವಿದ್ಯುತ್‌ಗಳು ಹಾಗೆಯೇ ಅಶನಿಗಳು ಚಕ್ರಗಳು ಹುಲಾಹುಲಗಳು ಶಂಖ ಮೇಘ ಸದೃಶವಾದ ದೊಡ್ಡ ಶಬ್ದವುಳ್ಳ ವಾಯು ಸ್ಫೋಟಗಳು (ಇವೆಲ್ಲಾ ಯುದ್ಧದಲ್ಲಿ ಉಪಯೋಗಿಸುವ ಆಯುಧಗಳು) ಮತ್ತು ಉರಿಯುವ ಮುಖಗಳಿಂದ ಕೂಡಿದ ಭಯಂಕರವಾದ ಮಹಾಶರೀರವುಳ್ಳ ಬಿಳಿಯ ಮೋಡದ ಸಮುದಾಯದಂತೆ ಸಣ್ಣ ಕಲ್ಲುಗಳನ್ನು ಜೋಡಿಸಿದಂತೆ ಇದ್ದ ಸರ್ಪಗಳು ಕಂಡು ಬಂದವು.

ದಶವಾಜಿಸಹಸ್ರಾಣಿ ಹರೀಣಾಂ ವಾತರಂಹಸಾಮ್ ।
ವಹಂತಿ ಯಂ ನೇತ್ರಮುಷಂ ದಿವ್ಯಂ ಮಾಯಾಮಯಂ ರಥಮ್ ॥

ವಾಯುವೇಗವುಳ್ಳ ಹತ್ತು ಸಹಸ್ರ ಕುದುರೆಗಳು ಆ ದಿವ್ಯವಾದ ಮಾಯಾಮಯವಾದ ನೋಡಿದವರ ಕಣ್ಣನ್ನು ಕುಕ್ಕುವ ರಥವನ್ನು ಎಳೆಯುತ್ತವೆ.

ತತ್ರಾಪಶ್ಯನ್ಮಹೀಪಾಲೋ ವೈಜಯಂತಂ ಮಹಾಪ್ರಭಮ್ ।
ಧ್ವಜಮಿಂದೀವರಶ್ಯಾಮಂ ವಂಶಂ ಕನಕಭೂಷಿತಮ್ ॥೮॥

ಮಹೀಪಾಲನಾದ ಅರ್ಜುನನು ಆ ರಥದಲ್ಲಿ ಮಹಾಪ್ರಭೆಯುಳ್ಳ ಇಂದೀವರಕಾಂತಿಯನ್ನು ಹೊಂದಿದ್ದ ವೈಜಯಂತ ಧ್ವಜವನ್ನು ಮತ್ತು ಸುವರ್ಣಭೂಷಿತವಾದ ವಂಶ (ಸ್ತಂಭ)ವನ್ನು ನೋಡಿದನು.

ತಸ್ಮಿನ್ ರಥೇ ಸ್ಥಿತಂ ಸೂತಂ ಹೇಮಜಾಲವಿಭೂಷಿತಮ್ ।
ದೃಷ್ಟ್ವಾ ಪಾರ್ಥೋ ಮಹಾಬಾಹುರ್ದೇವರಾಜಮತರ್ಕಯತ್ ॥೯॥

ಆ ರಥದಲ್ಲಿ ಕುಳಿತಿದ್ದ ಸುವರ್ಣಭೂಷಿತನಾದ ಸಾರಥಿಯನ್ನು ನೋಡಿ ಮಹಾಬಾಹುವಾದ ಅರ್ಜುನನು ಅವನನ್ನು ದೇವರಾಜನಾದ ಇಂದ್ರನೆಂದು ಭಾವಿಸಿದನು.

ತಥಾ ತರ್ಕಯತಸ್ತಸ್ಯ ಫಲ್ಗುನಸ್ಯ ಸ ಮಾತಲಿಃ ।
ಸನ್ನತಃ ಪ್ರಶ್ರಿತೋ ಭೂತ್ವಾ ವಾಕ್ಯಮರ್ಜುನಮಬ್ರವೀತ್ ॥೧೦॥

ಹೀಗೆ ಚಿಂತಿಸುತ್ತಿರುವ ಅರ್ಜುನನನ್ನು ಕುರಿತು ಮಾತಲಿಯು ವಿನಯದಿಂದ ಬಾಗಿ ಈ ಮಾತನ್ನು ಆಡಿದನು.

ಭೋ ಭೋ ಶಕ್ರಾತ್ಮಜ ಶ್ರೀಮನ್ ಶಕ್ರಸ್ತ್ವಾಂ ದ್ರಷ್ಟುಮಿಚ್ಛತಿ ।
ಆರೋಹತು ಭವಾನ್ ಶೀಘ್ರಂ ರಥಮಿಂದ್ರಸ್ಯ ಸಮ್ಮತಮ್ ॥೧೧॥

ಎಲೈ ಕಾಂತಿಯುಕ್ತನಾದ ಶಕ್ರಪುತ್ರನೇ, ಇಂದ್ರನು ನಿನ್ನನ್ನು ನೋಡಲು ಬಯಸುತ್ತಾನೆ. ಇಂದ್ರನಿಗೆ ಪ್ರಿಯವಾದ ಈ ರಥವನ್ನು ನೀನು ಶೀಘ್ರವಾಗಿ ಏರು.

ಅಹ ಮಾಮರಶ್ರೇಷ್ಠಃ ಪಿತಾ ತವ ಶತಕ್ರತುಃ ।
ಕುಂತೀಮಾತರಿಹ ಪ್ರಾಪ್ತಂ ಪಶ್ಯಂತು ತ್ರಿದಶಾಲಯಾಃ ॥೧೨॥

ಎಲೈ ಕುಂತೀಪುತ್ರನೇ, ದೇವಶ್ರೇಷ್ಠನಾದ ನಿನ್ನ ತಂದೆಯಾದ ಇಂದ್ರನು ಇಲ್ಲಿಗೆ ಬಂದ ಅರ್ಜುನನನ್ನು ಸ್ವರ್ಗನಿವಾಸಿಗಳೆಲ್ಲಾ ನೋಡಲಿ ಎಂದು ನನಗೆ ಹೇಳಿದನು.

ಏಷ ಶಕ್ರಃ ಪರಿವೃತೋ ದೇವೈಃ ಸರ್ಷಿಗಣೈಸ್ತಥಾ ।
ಗಂಧರ್ವೈರಪ್ಸರೋಭಿಶ್ಚ ತ್ವಾಂ ದಿದೃಕ್ಷುಃ ಪ್ರತೀಕ್ಷತೇ ॥೧೩॥

ದೇವತೆಗಳಿಂದಲೂ ಋಷಿಗಣಗಳಿಂದಲೂ ಹಾಗೆಯೇ ಗಂಧರ್ವರಿಂದಲೂ ಮತ್ತು ಅಪ್ಸರೆಯರಿಂದಲೂ ಪರಿವೃತನಾದ ಈ ಇಂದ್ರನು ನಿನ್ನನ್ನು ನೋಡುವ ಆಸೆಯನ್ನು ಹೊಂದಿ ನಿನಗಾಗಿ ಕಾಯುತ್ತಿದ್ದಾನೆ.

ಅಸ್ಮಾಲ್ಲೋಕಾದ್ದೇವಲೋಕಂ ಪಾಕಶಾಸನಶಾಸನಾತ್ ।
ಆರೋಹ ತ್ವಂ ಮಯಾ ಸಾರ್ಧಂ ಲಬ್ಧಾಸ್ತ್ರಃ ಪುನರೇಷ್ಯಸಿ ॥೧೪॥

ಇಂದ್ರನ ಅಪ್ಪಣೆಯಂತೆ ನೀನು ನನ್ನ ಜೊತೆಯಲ್ಲಿ ಈ ಲೋಕದಿಂದ ದೇವಲೋಕವನ್ನು ಏರುವವನಾಗಿ ಅಲ್ಲಿ ಅಸ್ತ್ರಗಳನ್ನು ಪಡೆದು ನೀನು ಪುನಃ ಇಲ್ಲಿಗೆ ಬರುವಿ.

ಅರ್ಜುನಃ

ಮಾತಲೇ ಗಚ್ಛ ಶೀಘ್ರಂ ತ್ವಮಾರೋಹಸ್ವ ರಥೋತ್ತಮಮ್ ।
ರಾಜಸೂಯಾಶ್ವಮೇಧಾನಾಂ ಶತೈರಪಿ ಸುದುರ್ಲಭಮ್ ॥೧೫॥

ಪಾರ್ಥಿವೈಃ ಸುಮಹಾಭಾಗೈರ್ಯಜ್ವಭಿರ್ಭೂರಿದಕ್ಷಿಣೈಃ ।
ದೈವತೈರ್ವಾ ಸಮಾರೋಢುಂ ದಾನವೈರ್ವಾ ಮಹಾರಥಮ್ ।
ದ್ರಷ್ಟುಂ ವಾಽಪ್ಯಥವಾ ಸ್ಪಷ್ಟುಮಾರೋಢುಂ ಕುತ ಏವ ತತ್ ॥೧೬॥

ಮಾತಲಿಯೇ ನೀನು ಬೇಗ ರಥವನ್ನು ಏರು. ಈ ರಥವು ನೂರು ರಾಜಸೂಯ ಅಶ್ವಮೇಧಯಾಗವನ್ನುಮಾಡಿದರೂ ಬಹಳ ದುರ್ಲಭವಾದುದು. ಬಹಳ ದಕ್ಷಿಣೆಗಳನ್ನು ಕೊಟ್ಟು ಯಾಗಗಳನ್ನು ಮಾಡಿದ ಮಹಾನುಭಾವರಾದ ರಾಜರಿಂದಲಾಗಲೀ ದೇವತೆಗಳಿಂದಾಗಲೀ ದಾನವರಿಂದಲಾಗಲೀ ಈ ರಥವು ಏರಲ್ಪಟ್ಟಿಲ್ಲ. ಈ ರಥವನ್ನು ನೋಡುವುದೂ ಮುಟ್ಟುವುದೂ ದುರ್ಲಭ. ಇನ್ನು ಏರುವ ವಿಷಯ ಹಾಗಿರಲಿ.

ತ್ವಯಿ ಪ್ರತಿಷ್ಠಿತೇ ಸಾಧೋ ರಥಸ್ಥೇ ಸ್ಥಿರವಾಜಿನಿ ।
ಪಶ್ಚಾದಹಮಥಾರೋಕ್ಷ್ಯೇ ಸುಕೃತೀ ಸತ್ಪಥಂ ಯಥಾ ॥೧೭॥

ಎಲೈ ಸಜ್ಜನನೇ, ನೀನು ರಥವನ್ನು ಏರಿ ಕುದುರೆಗಳನ್ನು ಹಿಡಿದ ಮೇಲೆ ನಾನು ಪುಣ್ಯವನ್ನು ಮಾಡಿದವನು ಸ್ವರ್ಗಮಾರ್ಗವನ್ನು ಏರುವಂತೆ ರಥವನ್ನು ಏರುತ್ತೇನೆ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಮಾತಲಿಃ ಶಕ್ರಸಾರಥಿಃ ।
ಆರುರೋಹ ರಥಂ ಶೀಘ್ರಂ ಹಯಾನ್ ಜಗ್ರಾಹ ರಶ್ಮಿಭಿಃ ॥೧೮॥

ಅರ್ಜುನನ ಆ ಮಾತುಗಳನ್ನು ಕೇಳಿ ಇಂದ್ರನ ಸಾರಥಿಯಾದ ಮಾತಲಿಯು ಶೀಘ್ರವಾಗಿ ರಥವನ್ನು ಏರಿ ಕಡಿವಾಣಗಳಿಂದ ಅಶ್ವಗಳನ್ನು ಹಿಡಿದುಕೊಂಡನು.

ತತೋಽರ್ಜುನೋ ಹೃಷ್ಟಮನಾ ಗಂಗಾಯಾಮಾಪ್ಲುತಃ ಶುಚಿಃ ।
ಜಜಾಪ ಜಪ್ಯಂ ಕೌಂತೇಯ ವಿಧಿವತ್ ಕುರುನಂದನಃ ॥೧೯॥

ತತಃ ಪಿತೄನ್ ಯಥಾನ್ಯಾಯಂ ತರ್ಪಯಿತ್ವಾ ಯಥಾವಿಧಿ ।
ಮಂದರಂ ಶೈಲರಾಜಂ ತಮಾಪ್ರಷ್ಟುಮುಪಚಕ್ರಮೇ ॥೨೦॥

ಆಗ ಅರ್ಜುನನು ಸಂತೋಷದಿಂದ ಗಂಗೆಯಲ್ಲಿ ಸ್ನಾನಮಾಡಿ ಶುದ್ಧನಾಗಿ ಕುರುನಂದನನಾದ ಕುಂತೀಪುತ್ರನಾದ ಅವನು ವಿಧಿವತ್ತಾಗಿ ಜಪವನ್ನು ಮಾಡಿದನು. ಅನಂತರ ವಿಧಿಪೂರ್ವಕವಾಗಿ ಕ್ರಮವಾಗಿ ಪಿತೃಗಳಿಗೆ ತರ್ಪಣವನ್ನು ಕೊಟ್ಟು ಮಂದರಿಗೂ ಸಂತೋಷವನ್ನುಂಟುಮಾಡುವ ಅಥವಾ ಮಂದಾನಿಲವನ್ನು ಕೊಡುವ ಶೈಲರಾಜನಾದ ಇಂದ್ರಕೀಲನ ಅನುಮತಿಯನ್ನು ಕೇಳಲು ಉಪಕ್ರಮಿಸಿದನು.

ಅರ್ಜುನಃ

ಸಾಧೂನಾಂ ಪುಣ್ಯಶೀಲಾನಾಂ ಮುನೀನಾಂ ಪುಣ್ಯಕರ್ಮಣಾಮ್।
ತ್ವಂ ಸದಾ ಸಂಶ್ರಯಃ ಶೈಲ ತಥಾ ಸ್ವರ್ಗಾಭಿಕಾಂಕ್ಷಿಣಾಮ್ ॥೨೧॥

ಎಲೈ ಪರ್ವತವೇ, ನೀನು ಪುಣ್ಯಶೀಲರಾದ ಸಾಧುಗಳಿಗೂ ಪುಣ್ಯಕರ್ಮವನ್ನು ಮಾಡುವ ಮುನಿಗಳಿಗೂ ಮತ್ತು ಸ್ವರ್ಗವನ್ನು ಅಭಿಲಾಷೆಪಡುವವರಿಗೂ ಯಾವಾಗಲೂ ಆಶ್ರಯನಾಗಿದ್ದೀಯೆ.

ತತ್ಪ್ರಸಾದಾನ್ಮಹಾಶೈಲ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ಸ್ವರ್ಗಂ ಪ್ರಾಪ್ತಾಶ್ಚರಂತಿ ಸ್ಮ ದೇವೈಃ ಸಹ ಗತವ್ಯಥಾಃ ॥೨೨॥

ಎಲೈ ಮಹಾಶೈಲವೇ, ನಿನ್ನ ಅನುಗ್ರಹದಿಂದ ಬ್ರಾಹ್ಮಣರು ಕ್ಷತ್ರಿಯರು ಮತ್ತು ಶೂದ್ರರು ಸ್ವರ್ಗವನ್ನು ಹೊಂದಿ ದೇವತೆಗಳ ಜೊತೆಯಲ್ಲಿ ನಿರಾತಂಕವಾಗಿ ಸಂಚರಿಸುತ್ತಾರೆ.

ಅದ್ರಿರಾಜ ಮಹಾಶೈಲ ಮುನಿಸಂಶ್ರಯ ತೀರ್ಥವನ್ ।
ಗಚ್ಛಾಮ್ಯಾಮಂತ್ರಯಾಮಿ ತ್ವಾಂ ಸುಖಮಸ್ಮ್ಯುಷಿತಸ್ತ್ವಯಿ ॥೨೩॥

ಅದ್ರಿರಾಜನೇ, ಮುನಿಗಳಿಗೆ ಆಶ್ರಯವಾದ ಮಹಾಶೈಲವೇ, ಅನೇಕ ತೀರ್ಥಗಳನ್ನು ಧರಿಸಿದವನೇ, ನಾನು ನಿನ್ನಲ್ಲಿ ಸುಖವಾಗಿ ವಾಸಮಾಡಿದೆ, ಹೋಗಿಬರುತ್ತೇನೆ. ನಿನ್ನ ಅನುಮತಿಯನ್ನು ಕೇಳುತ್ತಿದ್ದೇನೆ.

ತವ ಸಾನೂನಿ ಕುಂಜಾಶ್ಚ ನದ್ಯಃ ಪ್ರಸ್ರವಣಾನಿ ಚ ।
ತೀರ್ಥಾನಿ ಚ ಸುಪುಣ್ಯಾನಿ ಮಯಾ ದೃಷ್ಟಾನ್ಯನೇಕಶಃ ॥೨೪॥

ನಾನು ನಿನ್ನ ಶಿಖರಗಳನ್ನೂ ತಪ್ಪಲುಗಳನ್ನೂ ನದಿಗಳನ್ನೂ ಝರಿಗಳನ್ನೂ ಪವಿತ್ರವಾದ ತೀರ್ಥಗಳನ್ನು ಅನೇಕಬಾರಿ ನೋಡಿದೆನು.

ಫಲಾನಿ ಚ ಸುಗಂಧೀನಿ ಭಕ್ಷಿತಾನಿ ತತಸ್ತ್ವಯಿ ।
ಸುಸುಗಂಧಾಶ್ಚ ವಾರ್ಯೋಘಾಃ ತ್ವಚ್ಛರೀರವಿನಿಸ್ಸೃತಾಃ ।
ಅಮೃತಾಸ್ವಾದನೀಯಾ ಮೇ ಪೀತಾಃ ಪ್ರಸ್ರವಣೋದಕಾಃ ॥೨೫॥

ನಿನ್ನಲ್ಲಿ ವಾಸಮಾಡಿ ಸುಗಂಧಯುಕ್ತ ಫಲಗಳನ್ನು ಭಕ್ಷಿಸಿದೆನು. ನಿನ್ನ ಶರೀರದಿಂದ ಹೊರಟ ಸುಗಂಧಯುಕ್ತವಾದ ಜಲಸಮೂಹಗಳನ್ನುಳ್ಳ ಅಮೃತದಂತೆ ಸ್ವಾದುವಾದ ನೀರಿನಿಂದ ಕೂಡಿದ ಝರಿಗಳ ನೀರು ನನ್ನಿಂದ ಕುಡಿಯಲ್ಪಟ್ಟಿತು.

ಶಿಶುರ್ಯಥಾ ಪಿತುಶ್ಚಾಂಕೇ ಸುಖಂ ಶೇತೇ ನಗೇ ತಥಾ ।
ಮಯಾ ಚೈವ ತವಾಂಕೇಽತ್ರ ಲಳಿತಂ ನಗಸತ್ತಮ ॥೨೬॥

ಎಲೈ ಪರ್ವತಶ್ರೇಷ್ಠನೇ, ಶಿಶುವು ತಂದೆಯ ತೊಡೆಯಮೇಲೆ ಸುಖವಾಗಿ ಮಲಗಿದಂತೆ ನಾನು ನಿನ್ನ ತೊಡೆಯಲ್ಲಿ ಸುಖವಾಗಿ ನಲಿದಾಡಿದೆ.

ಅಪ್ಸರೋಗಣಸಂಕೀರ್ಣೇ ಬ್ರಹ್ಮಘೋಷಾನುನಾದಿತೇ ।
ಸುಖಮಧ್ಯುಷಿತಃ ಶೈಲ ತವ ಸಾನುನಿ ನಿತ್ಯದಾ ॥೨೭॥

ಎಲೈ ಪರ್ವತವೇ, ಅಪ್ಸರೆಯರ ಗಣದಿಂದ ವೇದಘೋಷಗಳಿಂದ ಪ್ರತಿಧ್ವನಿಸುವ ನಿನ್ನ ಶಿಖರಗಳಲ್ಲಿ ಯಾವಾಗಲೂ ಸುಖವಾಗಿ ವಾಸಮಾಡಿದೆ.

ಏವಮುಕ್ತ್ವಾ ತ್ವರ್ಜುನಃ ಶೈಲಮಾಮಂತ್ರ್ಯ ಚ ಶತ್ರುಹಾ ।
ಆರುರೋಹ ರಥಂ ದಿವ್ಯಂ ದ್ಯೋತಯನ್ನಿವ ಭಾಸ್ಕರಃ ॥೨೮॥

ಹೀಗೆ ಹೇಳಿ ಶತ್ರುಸಂಹಾರಕನಾದ ಅರ್ಜುನನು ಪರ್ವತದ ಅಪ್ಪಣೆಯನ್ನು ಕೇಳಿ ಸೂರ್ಯನಂತೆ ಪ್ರಕಾಶಿಸುತ್ತಾ ಆ ದಿವ್ಯವಾದ ರಥವನ್ನು ಏರಿದನು.

ಸ ತೇನಾದಿತ್ಯವರ್ಣೇನ ದಿವ್ಯೇನಾದ್ಭುತಕರ್ಮಣಾ ।
ಊರ್ಧ್ವಮಾಚಕ್ರಮೇ ಧೀಮಾನ್ ಪ್ರಹೃಷ್ಟಃ ಕುರುನಂದನಃ ॥೨೯॥

ಆ ಮೇಧಾವಿಯಾದ ಕುರುನಂದನನು ಸಂತೋಷದಿಂದ ಕೂಡಿದವನಾಗಿ ಸೂರ್ಯಪ್ರಕಾಶವನ್ನು ಹೊಂದಿದ್ದ ದಿವ್ಯವಾದ ಮತ್ತು ಅದ್ಭುತವಾದ ಕರ್ಮಯುಕ್ತವಾದ ಆ ದಿವ್ಯವಾದ ರಥದಲ್ಲಿ ಕುಳಿತು ಊರ್ಧ್ವಮುಖವಾಗಿ ಹಾರಿದನು.

ಸೋಽದರ್ಶನಪಥಂ ಗತ್ವಾ ಮರ್ತ್ಯಾನಾಂ ಭೂಮಿಚಾರಿಣಾಮ್ ।
ದದರ್ಶಾದ್ಭುತರೂಪಾಣಿ ವಿಮಾನಾನಿ ಸಹಸ್ರಶಃ ॥೩೦॥

ಅವನು ಭೂಮಿಯಲ್ಲಿರುವ ಮರ್ತ್ಯರಿಗೆ ಅದೃಶ್ಯವಾದ ಮಾರ್ಗವನ್ನು ತಲುಪಿ ಅಲ್ಲಿ ಅದ್ಭುತಾಕಾರದ ವಿಮಾನಗಳನ್ನು ಸಹಸ್ರಸಂಖ್ಯೆಯಲ್ಲಿ ನೋಡಿದನು.

ನ ತತ್ರ ಸೂರ್ಯಃ ಸೋಮೋ ನ ದ್ಯೋತತೇ ನೋತ ಪಾವಕಃ ।
ಸ್ವಯೈವ ಪ್ರಭಯಾ ಯುಕ್ತಾ ದ್ಯೋತಂತೇ ಪುಣ್ಯಲಕ್ಷಣಾಃ ॥೩೧॥

ಅಲ್ಲಿ ಸೂರ್ಯನಾಗಲೀ ಚಂದ್ರನಾಗಲೀ ಅಥವಾ ಅಗ್ನಿಯಾಗಲೀ ಪ್ರಕಾಶಿಸುವುದಿಲ್ಲ. ಪುಣ್ಯವನ್ನು ಮಾಡಿದವರು ತಮ್ಮ ಸ್ವಂತ ಪ್ರಭೆಯಿಂದಲೇ ಪ್ರಕಾಶಿಸುತ್ತಾರೆ.

ತಾರಾರೂಪಾಣಿ ಯಾನೀಹ ದೃಶ್ಯಂತೇ ದ್ಯುತಿಮಂತಿ ವೈ ।
ದೀಪವದ್ ವಿಪ್ರಕೃಷ್ಟತ್ವಾದ್ ಅಣೂನಿ ಸುಮಹಾಂತ್ಯಪಿ ॥೩೨॥

ತಾನಿ ತತ್ರ ಚ ಭಾಸ್ವಂತಿ ರೂಪವಂತಿ ಚ ಪಾಂಡವಃ ।
ದದರ್ಶ ತೇಷು ಧಿಷ್ಣ್ಯೇಷು ದೀಪ್ತಿಮಂತಿ ಸ್ವಯಾರ್ಚಿಷಾ ॥೩೩॥

ಭೂಮಿಯಿಂದ ನೋಡಿದಾಗ ನಕ್ಷತ್ರಗಳಂತೆ ಕಾಣುವ ಪ್ರಕಾಶಮಾನವಾದ ಬಹಳದೊಡ್ಡದಾಗಿದ್ದರೂ ದೂರದಲ್ಲಿ ಇರುವುದರಿಂದ ಸಣ್ಣದೀಪಗಳಂತೆ ಕಾಣುವ ಆ ಪ್ರಕಾಶಮಾನವಾದ ರೂಪವನ್ನು ಧರಿಸಿದ ವಸ್ತುಗಳನ್ನು ಪಾಂಡವನು ನೋಡಿದನು. ತನ್ನ ಪ್ರಭೆಯಿಂದಲೇ ಬೆಳಗುವ ಅವುಗಳನ್ನು ಅವುಗಳ ಸ್ಥಾನದಲ್ಲಿ ನೋಡಿದನು.

ತತ್ರ ರಾಜರ್ಷಯಸ್ಸಿದ್ಧಾ ಧೀರಾಶ್ಚ ನಿಹತಾ ಯುಧಿ ।
ತಪಸಾ ಚ ಜಿತಸ್ವರ್ಗಾಃ ಸಂಪೇತುಃ ಶತಸಂಘಶಃ ॥೩೪॥

ಅಲ್ಲಿ ರಾಜರ್ಷಿಗಳೂ ಯುದ್ಧದಲ್ಲಿ ಹತರಾದ ಧೀರರೂ ತಪಸ್ಸಿನಿಂದ ಸ್ವರ್ಗವನ್ನು ಸಂಪಾದಿಸಿದ ಅನೇಕರೂ ನೂರಾರು ಸಂಖ್ಯೆಯಲ್ಲಿ ವಾಸವಾಗಿದ್ದರು.

ಗಂಧರ್ವಾಣಾಂ ಸಹಸ್ರಾಣಿ ಸೂರ್ಯಜ್ವಲಿತತೇಜಸಾಮ್ ।
ಗುಹ್ಯಕಾನಾಮೃಷೀಣಾಂ ಚ ತಥೈವಾಪ್ಸರಸಾಂ ಗಣಾನ್ ॥೩೫॥

ಲೋಕಾನಾತ್ಮಪ್ರಭಾನ್ ಪಶ್ಯನ್ ಫಲ್ಗುನೋ ವಿಸ್ಮಯಾನ್ವಿತಃ ।
ಪಪ್ರಚ್ಛ ಮಾತಲಿಂ ಪ್ರೀತ್ಯಾ ಸ ಚಾಪ್ಯೇನಮುವಾಚ ಹ ॥೩೬॥

ಸೂರ್ಯನ ಪ್ರಕಾಶದಿಂದ ಹೊಳೆಯುವ ಸಹಸ್ರಾರು ಗಂಧರ್ವರನ್ನೂ ಗುಹ್ಯಕರ ಋಷಿಗಳ ಮತ್ತು ಅಪ್ಸರೆಯರ ಅನೇಕ ಗಣಗಳನ್ನೂ ಸ್ವಯಂಪ್ರಕಾಶಿಸುವವ ಅನೇಕ ಲೋಕಗಳನ್ನೂ ನೋಡಿ ವಿಸ್ಮಯಾವಿಷ್ಟವಾದ ಫಲ್ಗುನನು ಪ್ರೀತಿಯಿಂದ ಮಾತಲಿಯನ್ನು ಕುರಿತು ಕೇಳಿದನು. ಮಾತಲಿಯಾದರೋ ಅವನಿಗೆ ಉತ್ತರವನ್ನು ಕೊಟ್ಟನು.

ಏತೇ ಸುಕೃತಿನಃ ಪಾರ್ಥ ಸ್ವೇಷು ಧಿಷ್ಣ್ಯೇಷು ವಿಷ್ಠಿತಾಃ ।
ಯಾನ್ ದೃಷ್ಟವಾನಸಿ ವಿಭೋ ತಾರಾರೂಪಾಣಿ ಭೂತಲೇ ॥೩೭॥

ವಿಭುವೇ ಪಾರ್ಥನೇ, ನೀನು ಭೂತಲದಿಂದ ಯಾವ ನಕ್ಷತ್ರದಂತೆ ಕಾಣುವ ವಸ್ತುವನ್ನು ನೋಡಿದೆಯೋ ಇವುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಅಧಿಷ್ಠಿತರಾದ ಪುಣ್ಯಶಾಲಿಗಳು.

ವೈಶಂಪಾಯನಃ

ತತೋಽಪಶ್ಯತ್ ಸ್ಥಿತಂ ದ್ವಾರಿ ಸಿತಂ ವಿಜಯಿನಂ ಗಜಮ್ ।
ಐರಾವತಂ ಚತುರ್ದಂತಂ ಕೈಲಾಸಮಿವ ಶೃಂಗಿಣಮ್ ॥೩೮॥

ಅನಂತರ ಅರ್ಜುನನು ಬಾಗಿಲಿನಲ್ಲಿನಿಂತಿದ್ದ, ಕೈಲಾಸಕ್ಕೆ ಶೃಂಗವು ಮೂಡಿದಂತೆ ತೋರುವ, ವಿಜಯಶಾಲಿಯಾದ, ನಾಲ್ಕುದಂತಗಳುಳ್ಳ ಐರಾವತಗಜವನ್ನು ನೋಡಿದನು.

ಸ ಸಿದ್ಧಮಾರ್ಗಮಾಕ್ರಮ್ಯ ಕುರುಪಾಂಡವಸತ್ತಮಃ ।
ವ್ಯರೋಚಯದ್ ಯಥಾಪೂರ್ವಂ ಮಾಂಧಾತಾ ಪಾರ್ಥಿವೋತ್ತಮಃ ॥

ಸಿದ್ಧಮಾರ್ಗವನ್ನು ತಲುಪಿದ ಕುರುಶ್ರೇಷ್ಠನಾದ ಅರ್ಜುನನು ಹಿಂದೆ ರಾಜಶ್ರೇಷ್ಠನಾದ ಮಾಂಧಾತೃವಿನಂತೆ ಶೋಭಿಸಿದನು.

ಅತಿಚಕ್ರಾಮ ಲೋಕಾನ್ ಸ ರಾಜ್ಞಾಂ ರಾಜೀವಲೋಚನಃ ।
ತತೋ ದದರ್ಶ ಶಕ್ರಸ್ಯ ಪುರೀಂ ನಾಮ್ನಾऽಮರಾವತೀಮ್ ॥೪೦॥

ರಾಜೀವಲೋಚನನಾದ ಅವನು ರಾಜರ ಲೋಕಗಳನ್ನು ಅತಿಕ್ರಮಿಸಿ ಅನಂತರ ಇಂದ್ರನ ಪಟ್ಟಣವಾದ ಅಮರಾವತಿಯನ್ನು ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟತ್ರಿಂಶೋऽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

## ಮೂವತ್ತೊಂಬತ್ತನೆಯ ಅಧ್ಯಾಯ

(ಅರ್ಜುನನಿಗೆ ಇಂದ್ರನಿಂದ ಬಹುಮಾನಪೂರ್ವಕವಾಗಿ ಅರ್ಧಾಸನ ದಾನ.)

ವೈಶಂಪಾಯನಃ

ಸ ದದರ್ಶ ಪುರೀಂ ರಮ್ಯಾಂ ಸಿದ್ಧಚಾರಣಸೇವಿತಾಮ್ ।
ಸರ್ವರ್ತುಕುಸುಮೈಃ ಪುಣ್ಯೈಃ ಪಾದಪೈರುಪಶೋಭಿತಾಮ್ ॥೧॥

ಅರ್ಜುನನು ಸಿದ್ಧ ಚಾರಣ ಸೇವಿತವಾದ, ಎಲ್ಲ ಋತುಗಳಲ್ಲಿಯೂ ಕುಸುಮಗಳಿಂದ ತುಂಬಿದ ಪವಿತ್ರವಾದ ವೃಕ್ಷಗಳಿಂದ ಶೋಭಿತವಾದ, ಮನೋಹರವಾದ ಆ ಅಮರಾವತಿ ಪಟ್ಟಣವನ್ನು ನೋಡಿದನು.

ತತ್ರ ಸೌಗಂಧಿಕಾನಾಂ ಸ ದ್ರುಮಾಣಾಂ ಪುಣ್ಯಗಂಧಿನಾಮ್ ।
ಉಪವೀಜ್ಯಮಾನೋ ಮಿಶ್ರೇಣ ವಾಯುನಾ ಪುಣ್ಯಗಂಧಿನಾ ॥೨॥

ನಂದನಂ ಚ ವನಂ ದಿವ್ಯಮಪ್ಸರೋಗಣಸೇವಿತಮ್ ।
ದದರ್ಶ ದಿವ್ಯಕುಸುಮೈರಾಹ್ವಯದ್ಭಿರಿವ ದ್ರುಮೈಃ ॥೩॥

ಅಲ್ಲಿ ಮನೋಹರವಾದ ಗಂಧವುಳ್ಳ ಸೌಗಂಧಿಕಾಗಂಧಯುಕ್ತವಾದ ವಾಯುವಿನಿಂದ ಬೀಸಿ ಸೇವಿಸಲ್ಪಟ್ಟವನಾಗಿ, ದಿವ್ಯವಾದ ಅಪ್ಸರೆಯರ ಸಮೂಹದಿಂದ ಸೇವಿತವಾದ ದಿವ್ಯಕುಸುಮಗಳನ್ನುಹೊಂದಿ ಆಹ್ವಾನ ಮಾಡುವ ವೃಕ್ಷಗಳಿಂದ ಕೂಡಿರುವ, ನಂದನವನವನ್ನು ನೋಡಿದನು.

ನಾತಪ್ತತಪಸಾ ಶಕ್ಯಂ ದ್ರಷ್ಟುಂ ನಾನಾಹಿತಾಗ್ನಿನಾ ।
ಸ ಲೋಕಃ ಪುಣ್ಯಕರ್ತೃಣಾಂ ನಾಪಿ ಯುದ್ಧಪಜ್ಮುಖೈಃ ॥೪॥

ನಾಯಜ್ವಭಿರ್ನಾನೃತಕೈರ್ನ ವೇದಶ್ರುತಿವರ್ಜಿತೈಃ ।
ನಾನಾಪ್ಲುತಾಂಗೈಸ್ತೀರ್ಥೇಷು ಯಜ್ಞದಾನವಬಹಿಷ್ಕೃತೈಃ ॥೫॥

ಪುಣ್ಯವನ್ನು ಮಾಡಿದವರಿಗೆ ದೊರಕುವ ಆ ಲೋಕವನ್ನು ತಪಸ್ಸನ್ನು ಮಾಡದಿದ್ದವನು ಅಗ್ನಿಯ ಆಧಾನವನ್ನು ಮಾಡದಿದ್ದವನು ಯುದ್ಧದಲ್ಲಿ ಹಿಮ್ಮೆಟ್ಟುವವನು ಯಾಗವನ್ನು ಮಾಡದವನು ಸುಳ್ಳು ಮಾತಾಡುವವನು ವೇದಹೀನನಾದವನು ತೀರ್ಥಗಳಲ್ಲಿ ಸ್ನಾನಮಾಡದವನು ಯಜ್ಞ ಮತ್ತು ದಾನಗಳಿಂದ ಬಹಿಷ್ಕೃತನಾದವನು ಕಣ್ಣಿನಿಂದ ನೋಡಲೂ ಸಾಧ್ಯವಿಲ್ಲ.

ನಾಪಿ ಯಜ್ಞಹನೈಃ ಕ್ಷುದ್ರೈರ್ದ್ರಷ್ಟುಂ ಶಕ್ಯಃ ಕಥಂಚನ ।
ಪಾನಪೈರ್ಗುರುತಲ್ಪೈಶ್ಚ ಮಾಂಸಾದೈರ್ವಾ ದುರಾತ್ಮಭಿಃ ॥೬॥

ಮತ್ತು ಮದ್ಯಪಾನಮಾಡುವವರಿಂದಲಾಗಲೀ, ಗುರುತಲ್ಪಗಾಮಿಗಳಿಂದಲಾಗಲೀ, ಮಾಂಸವನ್ನು ಭಕ್ಷಿಸುವ ದುರಾತ್ಮರಿಂದಲಾಗಲೀ, ಯಜ್ಞವನ್ನು ನಾಶಮಾಡುವವರಿಂದಲಾಗಲೀ, ನೀಚರಿಂದಲಾಗಲೀ, ಸಹ ಆ ಲೋಕವನ್ನು ನೋಡಲು ಸಾಧ್ಯವಿಲ್ಲ.

ಸ ತದ್ದಿವ್ಯವನಂ ಪಶ್ಯನ್ ದಿವ್ಯಗೀತವಿನಾದಿತಮ್ ।
ಪ್ರವಿವೇಶ ಮಹಾಬಾಹುಃ ಶಕ್ರಸ್ಯ ದಯಿತಾಂ ಪುರೀಮ್ ॥೭॥

ಮಹಾಬಾಹುವಾದ ಅವನು ದಿವ್ಯಗೀತಶಬ್ದದಿಂದ ಕೂಡಿದ್ದ ಆ ದಿವ್ಯ ವನವನ್ನು ನೋಡುತ್ತಾ ಶಕ್ರನಿಗೆ ಪ್ರಿಯವಾದ ಆ ಪಟ್ಟಣವನ್ನು ಪ್ರವೇಶಿಸಿದನು.

ತತ್ರ ದೇವವಿಮಾನಾನಿ ಕಾಮಗಾನಿ ಸಹಸ್ರಶಃ ।
ಸ್ಥಿತಾನ್ಯಭಿಪ್ರಯಾತಾನಿ ದದರ್ಶಾಯುತಶಸ್ತದಾ ॥೮॥

ಅಲ್ಲಿ ಸಹಸ್ರಸಂಖ್ಯೆಯಲ್ಲಿ ಇದ್ದ ಕಾಮಗಾಮಿಯಾದ ದೇವವಿಮಾನಗಳು ಹೋಗುತ್ತಿರುವುದನ್ನು ಮತ್ತು ಬರುತ್ತಿರುವುದನ್ನು ಸಹಸ್ರ ಸಂಖ್ಯೆಯಲ್ಲಿ ನೋಡಿದನು.

ಸಂಸ್ತೂಯಮಾನೋ ಗಂಧರ್ವೈರಪ್ಸರೋಭಿಶ್ಚ ಪಾಂಡವಃ ।
ಪುಷ್ಪಗಂಧವಹೈಃ ಪುಣ್ಯೈರ್ವಾಯುಭಿಶ್ಚಾನುಜೀವಿತಃ ॥೯॥

ಪಾಂಡವನಾದ ಅರ್ಜುನನು ಗಂಧರ್ವರಿಂದಲೂ ಮತ್ತು ಅಪ್ಸರೆಯರಿಂದಲೂ ಸ್ತೋತ್ರಮಾಡಲ್ಪಟ್ಟು ಪುಷ್ಪಗಂಧವನ್ನು ಹೊತ್ತ ಪುಣ್ಯವಾಯುಗಳಿಂದ ಬೀಸಿ ಸೇವಿಸಲ್ಪಟ್ಟನು.

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಹೃಷ್ಟಾಃ ಸಂಪೂಜಯಾಮಾಸುಃ ಪಾರ್ಥಮಕ್ಲಿಷ್ಟಕಾರಿಣಮ್ ॥೧೦॥

ಆಗ ಗಂಧರ್ವರ ಜೊತೆಯಲ್ಲಿ ಸೇರಿದ ದೇವತೆಗಳು ಸಿದ್ಧರು ಮತ್ತು ಪರಮ ಋಷಿಗಳು ಸಂತೋಷದಿಂದ ಅಕ್ಲಿಷ್ಟಕಾರಿಯಾದ ಅರ್ಜುನನನ್ನು ಸತ್ಕಾರದಿಂದ ಪೂಜಿಸಿದರು.

ಆಶೀರ್ವಾದೈಃ ಸ್ತೂಯಮಾನೋ ದಿವ್ಯವಾದಿತ್ರನಿಃಸ್ವನೈಃ ।
ಪ್ರತಿಪೇದೇ ಮಹಾಬಾಹುಃ ಶಂಖದುಂದುಭಿನಾದಿತಮ್ ॥೧೧॥

ನಕ್ಷತ್ರಮಾರ್ಗಂ ವಿಪುಲಂ ಸುರವೀಥೀತಿ ವಿಶ್ರುತಮ್ ।
ಇಂದ್ರಾಜ್ಞಯಾ ಯಯೌ ಪಾರ್ಥಃ ಸ್ತೂಯಮಾನಃ ಸಮಂತತಃ ॥೧೨॥

ಆಶೀರ್ವಾದಗಳಿಂದ ಸ್ತೋತ್ರಮಾಡಲ್ಪಟ್ಟ ಮಹಾಬಾಹುವಾದ ಅರ್ಜುನನು ದಿವ್ಯ ವಾದಿತ್ರ ಶಬ್ದಗಳಿಂದ ಶಂಖ ದುಂದುಭಿನಾದದಿಂದ ಕೂಡಿದ ಸುರವೀಥಿ ಎಂದು ಪ್ರಖ್ಯಾತವಾದ ವಿಸ್ತಾರವಾದ ನಕ್ಷತ್ರಮಾರ್ಗವನ್ನು ಪ್ರವೇಶಿಸಿದನು. ಇಂದ್ರನ ಅಪ್ಪಣೆಯಂತೆ ಎಲ್ಲೆಡೆಯಲ್ಲಿಯೂ ಸ್ತೋತ್ರಮಾಡಲ್ಪಟ್ಟವನಾಗಿ ಅರ್ಜುನನು ಮುಂದೆ ನಡೆದನು.

ತತ್ರ ಸಾಧ್ಯಾಸ್ತಥಾ ವಿಶ್ವೇ ಮರುತೋಽಥಾಶ್ವಿನಾವಪಿ ।
ಆದಿತ್ಯಾ ವಸವೋ ರುದ್ರಾಃ ತಥಾ ಬ್ರಹ್ಮರ್ಷಯೋಽಮಲಾ ॥೧೩॥

ರಾಜರ್ಷಯಶ್ಚ ತತ್ರಾಸನ್ ದಿಲೀಪನಹುಷಾದಯಃ ।
ತುಂಬುರುರ್ನಾರದಶ್ಚೈವ ಗಂಧರ್ವೌ ಚ ಹಹಾಹುಹೂ ॥೧೪॥

ಅಲ್ಲಿ ಸಾಧ್ಯರು ವಿಶ್ವೇದೇವತೆಗಳು ಮರುತ್‌ಗಳು ಅಶ್ವಿನೀದೇವತೆಗಳು ಆದಿತ್ಯರು ವಸುಗಳು ರುದ್ರರು ಹಾಗೆಯೇ ಪರಿಶುದ್ಧರಾದ ಬ್ರಹ್ಮರ್ಷಿಗಳು ರಾಜರ್ಷಿಗಳು ಮತ್ತು ಚಕ್ರವರ್ತಿಗಳಾದ ದಿಲೀಪ ನಹುಷಮೊದಲಾದವರು ಮತ್ತು ತುಂಬುರು ನಾರದರು ಹಹಾಹುಹೂ ಗಂಧರ್ವರು ಇದ್ದರು.

ತಾನ್ ಸ ಸರ್ವಾನ್ ಸಮಾಗಮ್ಯ ವಿಧಿವತ್ ಕುರುನಂದನಃ ।
ತತೋಽಪಶ್ಯದ್ ದೇವರಾಜಂ ಶತಕ್ರತುಮರಿಂದಮಮ್ ॥೧೫॥

ಆ ಕುರುನಂದನನು ಯಥಾ ಯೋಗ್ಯವಾಗಿ ಅವರೆಲ್ಲರನ್ನೂ ಸಂಧಿಸಿ ಅನಂತರ ಅರಿಂದಮನಾದ ದೇವರಾಜನಾದ ಇಂದ್ರನನ್ನು ನೋಡಿದನು.

ತತಃ ಪಾರ್ಥೋ ಮಹಾಬಾಹುರವತೀರ್ಯ ರಥೋತ್ತಮಾತ್ ।
ದದರ್ಶ ಸಾಕ್ಷಾದ್ ದೇವೇಂದ್ರಂ ಪಿತರಂ ಪಾಕಶಾಸನಮ್ ॥೧೬॥

ಆಗ ಮಹಾಬಾಹುವಾದ ಪಾರ್ಥನು ತನ್ನ ಶ್ರೇಷ್ಠವಾದ ರಥದಿಂದ ಇಳಿದು ತನ್ನ ತಂದೆಯೂ ಪಾಕನೆಂಬ ದೈತ್ಯನನ್ನು ಸಂಹರಿಸಿದವನೂ ಆದ ದೇವೇಂದ್ರನನ್ನು ಸಾಕ್ಷಾತ್ ನೋಡಿದನು.

ಪಾಂಡರೇಣಾತಪತ್ರೇಣ ಹೇಮದಂಡೇನ ಚಾರುಣಾ ।
ದಿವ್ಯಗಂಧಾಧಿವಾಸೇನ ವ್ಯಜನೇನ ಚ ವೀಜಿತಮ್ ॥೧೭॥

ವಿಶ್ವಾವಸುಪ್ರಭೃತಿಭಿರ್ಗಂಧರ್ವೈಃ ಸ್ತುತಿವಂದನೈಃ ।
ಸ್ತೂಯಮಾನಂ ದ್ವಿಜಾಗ್ರ್ಯೈಶ್ಚ ಋಗ್ಯಜುಃಸಾಮಸಂಸ್ತವೈಃ ॥೧೮॥

ಸುಂದರವಾದ ಸುವರ್ಣದಂಡದಿಂದ ಕೂಡಿದ ಶ್ವೇತಚ್ಛತ್ರದಿಂದ ಸೇವಿಸಲ್ಪಟ್ಟ, ದಿವ್ಯಗಂಧಸಿಕ್ತವಾದ ವ್ಯಜನಗಳಿಂದ ಬೀಸಲ್ಪಟ್ಟ, ವಿಶ್ವಾವಸು ಮೊದಲಾದ ಗಂಧರ್ವರಿಂದ ಸ್ತೋತ್ರ ಮತ್ತು ವಂದನೆಗಳಿಂದ ಹೊಗಲ್ಪಡುತ್ತಿದ್ದಂತಹ, ಋಗ್ವೇದ ಯರ್ಜುವೇದ ಮತ್ತು ಸಾಮವೇದದ ಸ್ತೋತ್ರಗಳನ್ನು ಪಠಿಸುತ್ತಿದ್ದ ಬ್ರಾಹ್ಮಣ ಶ್ರೇಷ್ಠರಿಂದ ಪರಿವೃತನಾದ ಇಂದ್ರನನ್ನು ನೋಡಿದನು.

ತತೋಽಭಿಗಮ್ಯ ಕೌಂತೇಯಃ ಶಿರಸಾ ಪ್ರಾಣಮದ್ ಬಲೀ ।
ಸ ಚೈನಂ ವೃತ್ತಪೀನಾಭ್ಯಾಂ ಭುಜಾಭ್ಯಾಂ ಪ್ರತ್ಯಗೃಹ್ಣತ ॥೧೯॥

ಆಗ ಬಲಿಷ್ಠನಾದ ಕೌಂತೇಯನು ಮುಂದೆಹೋಗಿ ಶಿರಸಾಪ್ರಣಾಮವನ್ನು ಮಾಡಿದನು. ಆಗ ಇಂದ್ರನಾದರೋ ತನ್ನ ವೃತ್ತ ಮತ್ತು ಪೀನವಾದ ಭುಜಗಳಿಂದ ಅರ್ಜುನನನ್ನು ಮೇಲೆಕ್ಕೆತ್ತಿ ಸ್ವೀಕರಿಸಿದನು.

ತತಃ ಶಕ್ರಾಸನೇ ಪುಣ್ಯೇ ದೇವರಾಜರ್ಷಿಪೂಜಿತೇ ।
ಶಕ್ರಃ ಪಾಣೌ ಗೃಹೀತ್ವೈನಮುಪಾವೇಶಯದಂತಿಕೇ ॥೨೦॥

ಅನಂತರ ಇಂದ್ರನು ಅರ್ಜುನನನ್ನು ಕೈಯಲ್ಲಿ ಹಿಡಿದು ದೇವತೆಗಳಿಂದಲೂ ರಾಜರ್ಷಿಗಳಿಂದಲೂ ಪೂಜಿತವಾದ ಪವಿತ್ರವಾದ ತನ್ನ ಆಸನದಲ್ಲಿ ತನ್ನ ಸಮೀಪದಲ್ಲಿ ಕುಳ್ಳಿರಿಸಿದನು.

ಮೂರ್ಧ್ನಿ ಚೈನಮುಪಾಘ್ರಾಯ ದೇವೇಂದ್ರಃ ಪರವೀರಹಾ ।
ಅಂಕಮಾರೋಪಯಾಮಾಸ ಪ್ರಶ್ರಯಾವನತಂ ತದಾ ॥೨೧॥

ಶತ್ರುವೀರರನ್ನು ಸಂಹರಿಸುವ ಅರ್ಜುನನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ವಿನಯದಿಂದ ಬಾಗಿದ್ದ ಅವನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡನು.

ಸಹಸ್ರಾಕ್ಷನಿಯೋಗಾತ್ ಸ ಪಾರ್ಥಃ ಶಕ್ರಾಸನಂ ತದಾ ।
ಆಧ್ಯಾಕ್ರಮದಮೇಯಾತ್ಮಾ ದ್ವಿತೀಯ ಇವ ವಾಸವಃ ॥೨೨॥

ಸಹಸ್ರಾಕ್ಷನಾದ ಇಂದ್ರನ ಅಪ್ಪಣೆಯಂತೆ ಅಪರಿಮಿತ ಮಹಿಮೆಯುಳ್ಳ ಆ ಪಾರ್ಥನು ಎರಡನೆಯ ಇಂದ್ರನಂತೆ ಆಗ ಶಕ್ರಾಸನವನ್ನು ಏರಿದನು.

ತತಃ ಪ್ರೇಮ್ಣಾ ವೃತ್ರಶತ್ರುರರ್ಜುನಸ್ಯ ಮುಖಂ ಶುಭಮ್ ।
ಪಸ್ಪರ್ಶ ಪುಣ್ಯಗಂಧೇನ ಕರೇಣ ಪರಿಸಾಂತ್ವಯನ್ ॥೨೩॥

ಅನಂತರ ವೃತ್ರಶತ್ರುವಾದ ಇಂದ್ರನು ಪ್ರೀತಿಯಿಂದ ಅರ್ಜುನನ ಶುಭವಾದ ಮುಖವನ್ನು ಸುಗಂಧಯುಕ್ತವಾದ ತನ್ನ ಹಸ್ತದಿಂದ ಸ್ಪರ್ಶಿಸಿ ಸಮಾಧಾನ ಗೊಳಿಸಿದನು.

ಪರಿಮಾರ್ಜಂಶ್ಚ ಶನಕೈರ್ಬಾಹೂ ಚಾಸ್ಯಾಯತೌ ಶುಭೌ ।
ಜ್ಯಾಶರಕ್ಷೇಪಕಠಿನೌ ಸ್ತಂಭಾವಿವ ಹಿರಣ್ಮಯೌ ॥೨೪॥

ವಜ್ರಗ್ರಹಣಚಿಹ್ನೇನ ಪಾಣಿನಾ ಬಲಸೂದನಃ ।
ಮುಹುರ್ಮುಹುರ್ವಜ್ರಧರೋ ಬಾಹೂ ಸಂಸ್ಪಾಲಯನ್ ಶನೈಃ॥೨೫॥

ಬಲಶತ್ರುವಾದ ಇಂದ್ರನು ವಜ್ರವನ್ನು ಹಿಡಿದು ಜಡ್ಡುಗಟ್ಟಿದ ತನ್ನ ಕೈಯಿಂದ ಅರ್ಜುನನ ದೀರ್ಘವಾದ ವೃತ್ತವಾದ ಶುಭವಾದ ಬಾಣಪ್ರಯೋಗದಿಂದ ಜಡ್ಡುಕಟ್ಟಿದ ಸುವರ್ಣಸ್ತಂಭಗಳಿಂತಿದ್ದ ಬಾಹುಗಳನ್ನು ನಿಧಾನವಾಗಿ ಸವರುತ್ತಾ ಪುನಃಪುನಃ ವಜ್ರಧರನು ಬಾಹುಗಳನ್ನು ಮೃದುವಾಗಿ ಅಲ್ಲಾಡಿಸಿದನು.

ಸ್ಮಯನ್ನಿವ ಗುಡಾಕೇಶಂ ಪ್ರೇಕ್ಷಮಾಣಃ ಸಹಸ್ರದೃಕ್ ।
ವಿಸ್ಮಯೋತ್ಫುಲ್ಲನಯನೋ ನ ತತರ್ಪ ಚ ವೃತ್ರಹಾ ॥೨೬॥

ಸಹಸ್ರಾಕ್ಷನಾದ ಇಂದ್ರನು ನಗುತ್ತಾ ಗುಡಾಕೇಶನಾದ ಅರ್ಜುನನ ಮುಖವನ್ನು ನೋಡಿ ವಿಸ್ಮಯದಿಂದ ಅರಳಿದ ಕಣ್ಣುಳ್ಳವನಾಗಿ ತೃಪ್ತಿಯನ್ನೇ ಹೊಂದಲಿಲ್ಲ.

ಏಕಾಸನೋಪವಿಷ್ಟೌ ತೌ ಶೋಭಯಾಂಚಕ್ರತುಃ ಸಭಾಮ್ ।
ಸೂರ್ಯಾಚಂದ್ರಮಸೌ ವ್ಯೋಮ್ನಿ ಪೌರ್ಣಮಾಸ್ಯಾಮಿವೋದಿತೌ ॥

ಏಕಾಸನದಲ್ಲಿ ಕುಳಿತ ಅವರಿಬ್ಬರೂ ಆಕಾಶದಲ್ಲಿ ಪೌರ್ಣಮಾಸಿಯಂದು ಸೂರ್ಯಚಂದ್ರರು ಒಟ್ಟಿಗೆ ಉದಯಿಸಿದಂತೆ ಆ ಸಭೆಗೆ ಶೋಭೆಯನ್ನು ಉಂಟುಮಾಡಿದರು.

ತತ್ರ ಸ್ಮ ಗಾಥಾ ಗಾಯಂತಿ ಸಾಮ್ನಾ ಪರಮಫಲ್ಗುನಾ ।
ಗಂಧರ್ವಾಸ್ತುಂಬುರುಶ್ರೇಷ್ಠಾಃ ಕುಶಲಾ ಗೀತಸಾಮಸು ॥೨೮॥

ಗಾನಪ್ರಭೇದಗಳಲ್ಲಿ ಕುಶಲರಾದ ತುಂಬುರು ಮೊದಲಾದ ಗಂಧರ್ವರು ಶ್ರೇಷ್ಠವಾದ ಸಾಮಗಳನ್ನು ಸೇರಿಸಿ ಗಾನವನ್ನು ಮಾಡಿದರು.

ಘೃತಾಚೀ ಮೇನಕಾ ರಂಭಾ ಪೂರ್ವಚಿತ್ತಿಃ ಸ್ವಯಂಪ್ರಭಾ ।
ಉರ್ವಶೀ ಮಿಶ್ರಕೇಶೀ ಚ ಚಂಡಾ ಗೌರೀ ವರೂಥಿನೀ ॥೨೯॥

ಗೋಪಾಲೀ ಸಹಜನ್ಯಾ ಚ ಕುಂಭಯೋನಿಃ ಪ್ರಜಾಗರಾ ।
ಚಿತ್ರಸೇನಾ ಚಿತ್ರಲೇಖಾ ಸಹಾ ಚ ಮಧುರಸ್ವನಾ ॥೩೦॥

ಏತಾಶ್ಚಾನ್ಯಾಶ್ಚ ನನೃತುಃ ತತ್ರ ತತ್ರ ಶುಭಾನನಾಃ ।
ಚಿತ್ತಪ್ರಸಾದನೇ ಯುಕ್ತಾಃ ಸಿದ್ಧಾನಾಂ ಪದ್ಮಲೋಚನಾಃ ॥೩೧॥

ಘೃತಾಚೀ ಮೇನಕೆ ರಂಭೆ ಪೂರ್ವಚಿತ್ತಿ ಸ್ವಯಂಪ್ರಭಾ ಉರ್ವಶೀ ಮಿಶ್ರಕೇಶಿ ಚಂಡಾ ಗೌರೀ ವರೂಥಿನೀ ಗೋಪಾಲೀ ಸಹಜನ್ಯಾ ಕುಂಭಯೋನಿ ಪ್ರಜಾಗರಾ ಚಿತ್ರಸೇನಾ ಚಿತ್ರಲೇಖಾ ಸಹಾ ಮಧುರಸ್ವನಾ ಇವರೂ ಮತ್ತು ಇನ್ನು ಅನೇಕ ಸುಂದರಿಯರಾದ ಪದ್ಮನೇತ್ರೆಯರಾದ ಅಪ್ಸರೆಯರೂ ಸಿದ್ಧರ ಮನಸ್ಸಿಗೆ ಸಂತೋಷವನ್ನು ಉಂಟುಮಾಡುತ್ತಾ ನರ್ತನವನ್ನು ಮಾಡಿದರು.

ಮಹಾಕಟಿತಟಶ್ರೋಣ್ಯಃ ಕಂಪಮಾನೈಃ ಪಯೋಧರೈಃ ।
ಕಟಾಕ್ಷಹಾಸಮಾಧುರ್ಯೈಶ್ಚೇತೋಬುದ್ಧಿಮನೋಹರಾಃ ॥೩೨॥

ಅವರು ವಿಸ್ತಾರವಾದ ಕಟಿತಟವುಳ್ಳ ಶ್ರೋಣಿಗಳಿಂದಲೂ ಅಲುಗಾಡುವ ಪಯೋಧರಗಳಿಂದಲೂ ಕಟಾಕ್ಷ ಮಂದಹಾಸ ಮತ್ತು ಮಾಧುರ್ಯಗಳಿಂದಲೂ ಮನಸ್ಸಿಗೂ ಮತ್ತು ಬುದ್ಧಿಗೂ ಬಹಳ ಹಿತವಾಗಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಏಕೋನಚತ್ವಾರಿಂಶೋऽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

# ನಲವತ್ತನೆಯ ಅಧ್ಯಾಯ

(ಅರ್ಜುನೋರ್ವಶೀ ಸಮಾಗಮ ಪ್ರಸಂಗ.)

## ವೈಶಂಪಾಯನಃ

ತತೋ ದೇವಾಃ ಸಗಂಧರ್ವಾಃ ಸಮಾದಾಯಾರ್ಘ್ಯಮುತ್ತಮಮ್ ।
ಶಕ್ರಸ್ಯ ಮತಮಾಜ್ಞಾಯ ಪಾರ್ಥಮಾನೇಮುರಂಜಸಾ ॥೧॥

ಆಗ ದೇವತೆಗಳು ಮತ್ತು ಗಂಧರ್ವರು ಇಂದ್ರನ ಅಭಿಪ್ರಾಯವನ್ನು ತಿಳಿದು ಉತ್ತಮವಾದ ಅರ್ಘ್ಯವನ್ನು ತೆಗೆದುಕೊಂಡು ಬಂದು ಅರ್ಜುನನಿಗೆ ಪ್ರಣಾಮವನ್ನು ಮಾಡಿದರು.

ಪಾದ್ಯಮಾಚಮನೀಯಂ ಚ ಪ್ರತಿಗೃಹ್ಯ ನೃಪಾತ್ಮಜಮ್ ।
ಪ್ರವೇಶಯಾಮಾಸುರಥೋ ಪುರಂದರನಿವೇಶನಮ್ ॥೨॥

ರಾಜಪುತ್ರನಾದ ಅವನಿಗೆ ಪಾದ್ಯ ಮತ್ತು ಆಚಮನೀಯಗಳನ್ನು ಕೊಟ್ಟನಂತರ ಇಂದ್ರಭವನಕ್ಕೆ ಪ್ರವೇಶಮಾಡಿಸಿದರು.

ಏವಂ ಸಂಪೂಜಿತೋ ಜಿಷ್ಣುರುವಾಸ ಭವನೇ ಪಿತುಃ ।
ಉಪಶಿಕ್ಷನ್ ಮಹಾಸ್ತ್ರಾಣಿ ಸಸಂಹಾರಾಣಿ ಪಾಂಡವಃ ॥೩॥

ಶಕ್ರಸ್ಯ ಹಸ್ತಾದ್ ದಯಿತಂ ವಜ್ರಮಸ್ತ್ರಂ ಸುದಾರುಣಮ್ ।
ಅಶನೀಶ್ಚ ಮಹಾನಾದಾ ಮೇಘಬರ್ಹಿಣಲಕ್ಷಣಾಃ ॥೪॥

ಹೀಗೆ ಪೂಜಿಸಲ್ಪಟ್ಟ ಅರ್ಜುನನು ತಂದೆಯಮನೆಯಲ್ಲಿ ವಾಸಮಾಡಿದನು. ಪಾಂಡವನು ಉಪಸಂಹಾರ ಪೂರ್ವಕವಾದ ಮಹಾಸ್ತ್ರಗಳನ್ನೂ ಮತ್ತು ಇಂದ್ರನ ಹಸ್ತಗಳಿಂದ ಅವನಿಗೆ ಪ್ರಿಯವಾದ ಘೋರವಾದ ವಜ್ರಾಸ್ತ್ರವನ್ನೂ ಮಹಾನಾದವನ್ನು ಮಾಡುವ ಮೇಘಗಳ ಮತ್ತು ನವಿಲುಗಳ ಬಣ್ಣವುಳ್ಳ ಅಶನಿಗಳನ್ನೂ ಸ್ವೀಕರಿಸಿ ಅಭ್ಯಾಸಮಾಡಿದನು.

ಗೃಹೀತಾಸ್ತ್ರಸ್ತು ಕೌಂತೇಯೋ ಭ್ರಾತೄನ್ ಸಸ್ಮಾರ ಪಾಂಡವಃ ।
ಪುರಂದರನಿಯೋಗಾಚ್ಚ ಪಂಚಾಬ್ದಮವಸತ್ ಸುಖೀ ॥೫॥

ಅಸ್ತ್ರಗಳನ್ನು ಸ್ವೀಕರಿಸಿದ ಮೇಲೆ ಕುಂತೀಪುತ್ರನಾದ ಪಾಂಡವನಾದ ಅರ್ಜುನನು ತನ್ನ ಸಹೋದರರನ್ನು ಸ್ಮರಿಸಿದನು. ಇಂದ್ರನ ಆದೇಶದಂತೆ ಐದು ವರ್ಷಗಳ ಕಾಲ ಅಲ್ಲಿ ಸುಖವಾಗಿ ವಾಸಿಸಿದನು.

ತತಃ ಶಕ್ರೋಽಬ್ರವೀತ್ ಪಾರ್ಥಂ ಕೃತಾಸ್ತ್ರಂ ಕಾಲ ಆಗತೇ ।
ನೃತ್ತಂ ಗೀತಂ ಚ ಕೌಂತೇಯ ಚಿತ್ರಸೇನಾದವಾಪ್ನುಹಿ ॥೬॥

ವಾದಿತ್ರಂ ದೇವವಿಹಿತಂ ನೃಲೋಕೇ ಯನ್ನ ವಿದ್ಯತೇ ।
ತದಾರ್ಜಯಸ್ವ ಕೌಂತೇಯ ಶ್ರೇಯೋ ವೈ ತೇ ಭವಿಷ್ಯತಿ ॥೭॥

ಅನಂತರ ಅರ್ಜುನನು ಅಸ್ತ್ರಗಳನ್ನು ಪಡೆದ ಮೇಲೆ ಒಂದು ಸೂಕ್ತಸಮಯದಲ್ಲಿ ಇಂದ್ರನು ಅರ್ಜುನನನ್ನು ಕರೆದು ಕೌಂತೇಯನೇ, ಚಿತ್ರಸೇನನಿಂದ ನೃತ್ಯವಿದ್ಯೆಯನ್ನು ಮತ್ತು ಗೀತವಿದ್ಯೆಯನ್ನು ಕಲಿ. ಮನುಷ್ಯಲೋಕದಲ್ಲಿ ಇಲ್ಲದಿರುವ ದೇವಲೋಕದ ವಾದಿತ್ರವನ್ನು ಸಂಪಾದಿಸು. ಕೌಂತೇಯನೇ, ಅದರಿಂದ ನಿನಗೆ ಶ್ರೇಯಸ್ಸು ಉಂಟಾಗುವುದು ಎಂದು ಹೇಳಿದನು.

ಸಖಾಯಂ ಪ್ರದದೌ ಚಾಸ್ಯ ಚಿತ್ರಸೇನಂ ಪುರಂದರಃ ।
ಸ ತೇನ ಸಹ ಸಂಗಮ್ಯ ರೇಮೇ ಪಾರ್ಥೋ ನಿರಾಮಯಃ ॥೮॥

ಅರ್ಜುನನಿಗೆ ಇಂದ್ರನು ಚಿತ್ರಸೇನನನ್ನು ಸ್ನೇಹಿತನನ್ನಾಗಿ ಕೊಟ್ಟನು. ಅರ್ಜುನನು ಚಿತ್ರಸೇನನ ಜೊತೆಯಲ್ಲಿ ಬೆರತು ನಿರಾತಂಕವಾಗಿ ಸಂತೋಷಪಟ್ಟನು.

ಕದಾಚಿತ್ ಸ ಹಿ ದೇವೇಂದ್ರಶ್ಚಿತ್ರಸೇನಂ ರಹೋಽಬ್ರವೀತ್ ।
ಪಾರ್ಥಸ್ಯ ತಸ್ಯ ವಿಜ್ಞಾಯ ಸಕ್ತಂ ಚಕ್ಷುಃ ಪ್ರಸಂಗತಃ ॥೯॥

ಒಮ್ಮೆ ಪಾರ್ಥನ ದೃಷ್ಟಿಯು ಎಲ್ಲಿ ನೆಟ್ಟಿದೆ ಎಂಬುದನ್ನು ತಿಳಿದ ದೇವೇಂದ್ರನು ಏಕಾಂತದಲ್ಲಿ ಚಿತ್ರಸೇನನನ್ನು ಕರೆದು ಹೀಗೆ ಹೇಳಿದನು.

ಗಂಧರ್ವರಾಜಾದ್ಯ ಮಯಾ ಪ್ರಹಿತಾಽಪ್ಸರಸಾಂ ವರಾ ।
ಕಟಾಕ್ಷೇಣ ಚ ಮಾಧುರ್ಯೈ ರೂಪಭಾವೈಃ ಸವಿಭ್ರಮೈಃ ॥೧೦॥

ಏಷಾದ್ಯ ಫಲ್ಗುನೇನೇಹ ನೃತ್ಯಂತೀ ಪ್ರೇಷಿತಾ ಕಿಲ ।
ಊರ್ವಶೀ ಪುರುಷವ್ಯಾಘ್ರಂ ಉಪತಿಷ್ಠತು ಫಲ್ಗುನಮ್ ॥೧೧॥

ಗಂಧರ್ವರಾಜನೇ ನಾನು ಈ ದಿನ ಅಪ್ಸರೆಯಾದ ಊರ್ವಶಿಯನ್ನು ಅರ್ಜುನನಬಳಿಗೆ ಕಳುಹಿಸುತ್ತಿದ್ದೇನೆ ಅವಳು ಈ ದಿನ ನೃತ್ಯಮಾಡುತ್ತಿರುವಾಗ ಅವಳ ಕಟಾಕ್ಷಗಳಿಗೂ ಮಾಧುರ್ಯಗಳಿಗೂ ಸೌಂದರ್ಯಗಳಿಗೂ ಮತ್ತು ವಿಲಾಸಗಳಿಗೂ ವಶನಾದ ಅರ್ಜುನನಿಂದ ಅವಳು ಬಹಳವಾಗಿ ನೋಡಲ್ಪಟ್ಟಳಷ್ಟೇ? ಊರ್ವಶಿಯು ಪುರುಷವ್ಯಾಘ್ರನಾದ ಅರ್ಜುನನ ಸಮೀಪಕ್ಕೆ ಹೋಗಲಿ.

ಯಥಾ ಚ ತಾಮಾಭಿಸೃತಾಂ ವಿದ್ಯಾದಸ್ಮನ್ನಿಯೋಗಗಾಮ್ ।
ತಥಾ ತ್ವಯಾ ವಿಧಾತವ್ಯಂ ಸ್ತ್ರೀಸಂಸರ್ಗವಿಶಾರದ ॥೧೨॥

ಎಲೈ ಸ್ತ್ರೀಸಂಗವಿಶಾರದನೇ, ನನ್ನ ಆದೇಶದಂತೆ ಊರ್ವಶಿಯು ತನ್ನ ಬಳಿಗೆ ಬಂದಿದ್ದಾಳೆ ಎಂದು ಅರ್ಜುನನು ತಿಳಿಯುವಂತೆ ನೀನು ಮಾಡಬೇಕು.

ಏವಮುಕ್ತಸ್ತಥೇತ್ಯುಕ್ತ್ವಾ ಸೋಽನುಜ್ಞಾಂ ಪ್ರಾಪ್ಯ ವಾಸವಾತ್ ।
ಗಂಧರ್ವರಾಜೋಽಪ್ಸರಸಮಭ್ಯಾಗಾದುರ್ವಶೀಂ ವರಾಮ್ ॥೧೩॥

ಹೀಗೆ ಹೇಳಲ್ಪಟ್ಟ ಗಂಧರ್ವರಾಜನಾದ ಚಿತ್ರಸೇನನು ಹಾಗೆಯೇ ಆಗಲಿ ಎಂದು ಹೇಳಿ ಇಂದ್ರನ ಅಪ್ಪಣೆಯನ್ನು ಪಡೆದು ಶ್ರೇಷ್ಠವಾದ ಅಪ್ಸರೆಯಾದ ಊರ್ವಶಿಯ ಸಮೀಪಕ್ಕೆ ಬಂದನು.

ತಾಂ ದೃಷ್ಟ್ವಾಽವಿದಿತೇ ಹೃಷ್ಟಃ ಸ್ವಾಗತೇನಾರ್ಚಿತಸ್ತಯಾ ।
ಸುಖಾಸೀನಾಂ ಸುಖಾಸೀನಃ ಸ್ಮಿತಪೂರ್ವಂ ವಚೋಽಬ್ರವೀತ್ ॥೧೪॥

ಏಕಾಂತದಲ್ಲಿ ಅವಳನ್ನು ನೋಡಿ ಸಂತೋಷಗೊಂಡು ಅವಳಿಂದ ಸ್ವಾಗತವನ್ನು ಕೋರಿ ಸತ್ಕರಿಸಿಲ್ಪಟ್ಟನು. ಅವಳು ಸುಖಾಸೀನಳಾದ ಮೇಲೆ ತಾನು ಸುಖವಾಗಿ ಕುಳಿತು ಮುಗುಳ್ನಗುತ್ತಾ ಮಾತನಾಡಿದನು.

ವಿದಿತಂ ತೇಽಸ್ತು ಸುಶ್ರೋಣಿ ಪ್ರೇಷಿತೋಽಹಮುಪಾಗತಃ ।
ತ್ರಿದಿವಸ್ಯೈಕರಾಜೇನ ತತ್ಪ್ರಸಾದಾಭಿನಂದಿನಾ ॥೧೫॥

ಎಲೌ ಸುಶ್ರೋಣಿಯೇ, ಮೂರು ಲೋಕಗಳಿಗೆ ಏಕಾಧಿಪತಿಯಾದ ನಿನಗೆ ಅನುಗ್ರಹವನ್ನು ಮಾಡಲು ಬಯಸುವ ಇಂದ್ರನಿಂದ ಪ್ರೇರಿತನಾಗಿ ನಾನು ನಿನ್ನ ಬಳಿಗೆ ಬಂದಿದ್ದೇನೆಂದು ನೀನು ತಿಳಿ.

ಯಃ ಸ ದೇವಮನುಷ್ಯೇಷು ಪ್ರಖ್ಯಾತಃ ಸಹಜೈರ್ಗುಣೈಃ ।
ಶ್ರಿಯಾ ಶೀಲೇನ ರೂಪೇಣ ಶ್ರುತೇನ ಚ ಬಲೇನ ಚ ॥೧೬॥

ಪ್ರಖ್ಯಾತಃ ಶೌರ್ಯವೀರ್ಯಾಭ್ಯಾಂ ಸಂಪನ್ನಃ ಪ್ರತಿಭಾನವಾನ್।
ತೇಜಸ್ವೀ ಸೌಮ್ಯಶೀಲಶ್ಚ ಕ್ಷಮಾವಾನ್ ಜಿತಮತ್ಸರಃ ॥೧೭॥

ಸಾಂಗೋಪನಿಷದಾನ್ ವೇದಾನ್ ಗುರುಶುಶ್ರೂಷುರಾತ್ಮವಾನ್।
ಯೋಽಧೀತೇ ಚತುರಃ ಸರ್ವಾನ್ ಮೇಧಾವೀ ಗುಣವಾನಿಹ ॥೧೮॥

ಬ್ರಹ್ಮಚರ್ಯೇಣ ದಾಕ್ಷ್ಯೇಣ ಪ್ರಶ್ರಯೈಃ ಸ್ವಧಿಯಾ ಚ ಯಃ ।
ಏಕೋ ಹಿ ರಕ್ಷಿತಾ ಚೈವ ತ್ರಿದಶಾನ್ ಮಘವಾನಿವ ॥೧೯॥

ಅಕತ್ಥನೋ ಮಾನಯಿತಾ ಸ್ಥೂಲಾಕ್ಷಃ ಪ್ರಿಯವಾಕ್ ಸುಹೃತ್ ।
ಸುಹೃದಶ್ಚಾನ್ನಪಾನೇನ ವಿವಿಧೇನಾಭಿವರ್ಷತಿ ॥೨೦॥

ಸತ್ಯವಾಗೂರ್ಜಿತೋ ವಕ್ತಾ ರೂಪವಾನನಹಂಕೃತಃ ।
ಭಕ್ತಾನುಕಂಪೀ ಕಾಂತಶ್ಚ ಪ್ರಿಯೋಽದ್ಯ ಸ್ಥಿರಸಂಗರಃ ॥೨೧॥

ಶ್ಲಾಘನೀಯೋ ಗುಣಗಣೈರ್ಮಹೇಂದ್ರವರುಣೋಪಮಃ ।
ವಿದಿತಸ್ತೇಽರ್ಜುನೋ ವೀರಃ ಸ ಸ್ವರ್ಗಫಲಮಾಪ್ತವಾನ್ ॥೨೨॥

ಮೇಧಾವಿಯೂ ಗುಣವಂತನೂ ಆದ ಯಾವನು ತನ್ನ ಸಹಜವಾದ ಗುಣಗಳಿಂದಲೂ ಕಾಂತಿಯಿಂದಲೂ ಶೀಲದಿಂದಲೂ ರೂಪದಿಂದಲೂ ವಿದ್ಯೆ ಮತ್ತು ಬಲಗಳಿಂದಲೂ ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿಯೂ ಪ್ರಖ್ಯಾತನಾಗಿದ್ದಾನೆಯೋ, ಶೌರ್ಯವೀರ್ಯಗಳಿಂದ ಯುಕ್ತನಾಗಿದ್ದಾನೆಯೋ, ಪ್ರತಿಭೆಯನ್ನು ಹೊಂದಿದವನಾಗಿ ತೇಜಸ್ವಿಯೂ ಸೌಮ್ಯಸ್ವಭಾವದವನೂ ಕ್ಷಮಾವುಳ್ಳವನೂ ಮತ್ತು ಮಾತ್ಸರ್ಯರಹಿತನೂ ಆಗಿದ್ದಾನೆಯೋ, ಯಾವನು ದೃಢಮನಸ್ಸಿನವನಾಗಿ ಗುರುಶುಶ್ರೂಷೆಯನ್ನು ಮಾಡಿ ಎಲ್ಲಾ ನಾಲ್ಕು ವೇದಗಳು ಅವುಗಳ ಅಂಗಗಳು ಮತ್ತು ಉಪನಿಷತ್‌ಗಳನ್ನು

ಅಧ್ಯಯನಮಾಡುತ್ತಾನೆಯೋ, ಯಾವನು ಬ್ರಹ್ಮಚರ್ಯದಿಂದಲೂ ದಕ್ಷತೆಯಿಂದಲೂ ವಿನಯದಿಂದಲೂ ಮತ್ತು ತನ್ನ ಬುದ್ಧಿಯಿಂದಲೂ ಇಂದ್ರನು ದೇವತೆಗಳನ್ನು ರಕ್ಷಿಸಿದಂತೆ ಒಬ್ಬನೇ ಎಲ್ಲರನ್ನೂ ರಕ್ಷಿಸುತ್ತಾನೆಯೋ, ಯಾವನು ತನ್ನ ಪ್ರತಾಪವನ್ನು ತಾನೇ ಹೇಳಿಕೊಳ್ಳುವುದಿಲ್ಲವೋ, ಇನ್ನೊಬ್ಬರಿಗೆ ಮರ್ಯಾದೆಯನ್ನು ಕೊಡುತ್ತಾನೆಯೋ, ವಿಸ್ತಾರವಾದ ಕಣ್ಣುಗಳನ್ನುಹೊಂದಿ ಪ್ರಿಯವಾಗಿ ಮಾತನಾಡುತ್ತಾನೆಯೋ, ಯಾವನು ಒಳ್ಳೆಯ ಹೃದಯವನ್ನು ಹೊಂದಿದ್ದಾನೆಯೋ, ತನ್ನ ಮಿತ್ರಬಾಂಧವರಿಗೆಲ್ಲ ವಿಧವಿಧವಾದ ಅನ್ನಪಾನಗಳಿಂದ ಅಭಿವರ್ಷಣೆಮಾಡುತ್ತಾನೆಯೋ, ಯಾವನು ಸತ್ಯವಚನನೋ ಉತ್ಕೃಷ್ಟನೋ ವಕ್ತೃತ್ವಗುಣವುಳ್ಳವನೋ ರೂಪವಂತನೋ ಅಂಹಕಾರರಹಿತನೋ ಭಕ್ತಾನುಕಂಪಿಯೋ ಮನೋಹರನೋ ಪ್ರಿಯನೋ ಮತ್ತು ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವನೋ, ಮತ್ತು ಯಾವನು ಮಹೇಂದ್ರನಿಗೂ ವರುಣನಿಗೂ ಸದೃಶನಾಗಿದ್ದು ತನ್ನ ಗುಣಗಣಗಳಿಂದ ಶ್ಲಾಘ್ಯನಾಗಿದ್ದಾನೆಯೋ, ಅಂತಹ ವೀರನಾದ ಅರ್ಜುನನನ್ನು ನೀನು ತಿಳಿದಿರುವೆಯಷ್ಟೆ? ಅವನು ಸ್ವರ್ಗಕ್ಕೆ ಬಂದು ಸ್ವರ್ಗಫಲವನ್ನು ಹೊಂದಿದ್ದಾನೆ.

ತವ ಶಕ್ರಾಭ್ಯನುಜ್ಞಾತಾ ಪಾದಾವದ್ಯ ಪ್ರಪದ್ಯತಾಮ್ ।
ತದೇವಂ ಕುರು ಕಲ್ಯಾಣಿ ಪ್ರಪನ್ನಸ್ತಾ ತ್ವಂ ಧನಂಜಯಃ ॥೨೩॥

ನೀನು ಶಕ್ರನ ಅಪ್ಪಣೆಯಿಂದ ಅವನ ಪಾದಗಳನ್ನು ಸೇವಿಸು. ಕಲ್ಯಾಣಿಯೇ, ನೀನು ಹೀಗೆ ಮಾಡು. ಧನಂಜಯನು ನಿನಗೆ ಪ್ರಪನ್ನನಾಗಿದ್ದಾನೆ.

ಏವಮುಕ್ತಾ ಸ್ಮಿತಂ ಕೃತ್ವಾ ಸನ್ಮಾನಂ ಬಹುಮಾನ್ಯ ಚ ।
ಪ್ರತ್ಯುವಾಚೋರ್ವಶೀ ಪ್ರೀತಾ ಚಿತ್ರಸೇನಮನಿಂದಿತಾ ॥೨೪॥

ಹೀಗೆ ಹೇಳಲ್ಪಟ್ಟವಳಾದ ಉರ್ವಶಿಯು ಮಂದಹಾಸವನ್ನು ಬೀರಿ ತನಗೆ ದೊರೆತ ಸನ್ಮಾನವನ್ನು ದೊಡ್ಡದೆಂದು ಭಾವಿಸಿ ಚಿತ್ರಸೇನನನ್ನುಕುರಿತು ಅನಿಂದಿತಳಾದ ಅವಳು ಸಂತೋಷದಿಂದ ಮಾತನಾಡಿದಳು

ಯಸ್ತಸ್ಯ ಕಥಿತಃ ಸತ್ಯೋ ಗುಣೋದ್ದೇಶಸ್ತ್ವಯಾऽನಘ ।
ತಂ ಶ್ರುತ್ವಾऽದ್ಯ ಪ್ರಿಯಂ ನಾರೀ ವೃಣುಯಾತ್ ಕಿಮತೋऽರ್ಜುನಮ್ ॥

ಎಲೈ ಅನಘನೇ, ಅವನ ಯಾವ ಗುಣಸಮೂಹಗಳನ್ನು ಹೇಳಿದೆಯೋ ಅದನ್ನು ಕೇಳಿ ಯಾವ ನಾರಿಯುತಾನೆ ಅರ್ಜುನನನ್ನು ಬಿಟ್ಟು ಇನ್ನೊಬ್ಬನನ್ನು ವರಿಸಬಹುದು?

ಮಹೇಂದ್ರಸ್ಯ ನಿಯೋಗೇನ ತ್ವತ್ತಃ ಸಂಪ್ರೇಷಣೇನ ಚ ।
ತಸ್ಯ ಚಾಹಂ ಗುಣೌಘೇನ ಫಲ್ಗುನೇ ಜಾತಮನ್ಮಥಾ ।
ಗಚ್ಛ ತ್ವಂ ಹಿ ಯಥಾಕಾಮಮಾಗಮಿಷ್ಯಾಮ್ಯಹಂ ಸಖೇ ॥೨೬॥

ದೇವೇಂದ್ರನ ಅಪ್ಪಣೆಯಿಂದ ಪ್ರೇರಿತಳಾದ ನಾನು ಮತ್ತು ನಿನ್ನನ್ನು ಕಳುಹಿಸಿಕೊಟ್ಟಿರುವುದರಿಂದ ಉತ್ತೇಜಿತಳಾಗಿ ಮತ್ತು ಅರ್ಜುನನ ಗುಣಸಮೂಹಗಳಿಂದ ನಾನು ಅವನಲ್ಲಿ ಕಾಮವನ್ನು ಹೊಂದಿದವಳಾಗಿದ್ದೇನೆ. ಸ್ನೇಹಿತನೇ ನಿನ್ನ ಇಷ್ಟಬಂದಂತೆ ನೀನು ಹೋಗು. ನಾನು ಅರ್ಜುನನಿದ್ದಲ್ಲಿಗೆ ಬರುವೆನು.

ವೈಶಂಪಾಯನಃ

ತತೋ ವಿಸೃಜ್ಯ ಗಂಧರ್ವಂ ಕೃತಕೃತ್ಯಂ ಶುಚಿಸ್ಮಿತಾ ।
ಉರ್ವಶೀ ಸಾऽಕರೋನ್ಮಾನಂ ಪಾರ್ಥಪ್ರಾರ್ಥನಲಾಲಸಾ ॥೨೭॥

ಆಗ ಉರ್ವಶಿಯು ಗಂಧರ್ವನನ್ನು ಕಳುಹಿಸಿ ತನ್ನನ್ನು ಕೃತಾರ್ಥಳೆಂದು ಭಾವಿಸಿ ಶುಚಿಸ್ಮಿತಳಾಗಿ ಪಾರ್ಥನನ್ನು ಹೊಂದುವ ಆಸೆಯುಳ್ಳವಳಾಗಿ ಅವಳು ತನ್ನನ್ನು ತಾನೇ ಸಮ್ಮಾನಿಸಿಕೊಂಡಳು. (ಶ್ರೇಷ್ಠಳೆಂದು ತಿಳಿದಳು.)

ಸ್ನಾನಾಲಂಕಾರನೇಪಥ್ಯೈರ್ಗಂಧಮಾಲ್ಯೈಶ್ಚ ಶೋಭನೈಃ ।
ಧನಂಜಯಸ್ಯ ರೂಪೇಣ ಶಕ್ರಸ್ಯಾಭ್ಯರ್ಥನೇನ ಚ ॥೨೮॥

ವಾಕ್ಯೈಶ್ಚ ಚಿತ್ರಸೇನಸ್ಯ ಮನ್ಮಥೇನ ಚ ಪೀಡಿತಾ ।
ದಿವ್ಯಾಸ್ತರಣಸಂಸ್ತೀರ್ಣೇ ವಿಸ್ತೀರ್ಣೇ ಶಯನೋತ್ತಮೇ ॥೨೯॥

ಚಿತ್ತಸಂಕಲ್ಪಭಾವೇನ ಸುಚಿತ್ತಾऽನನ್ಯಮಾನಸಾ ।
ಮನೋರಥೇನ ಸಂಪ್ರಾಪ್ತಂ ಕಾಮಯತ್ಯೇವ ಫಲ್ಗುನಮ್ ॥೩೦॥

ಸ್ನಾನ ವಸ್ತ್ರಾಲಂಕಾರ ಭೂಷಣಗಳು ಮನೋಹರವಾದ ಗಂಧಮಾಲ್ಯಗಳು ಇವುಗಳಿಂದ ಶೋಭಿತಳಾಗಿ ಅರ್ಜುನನ ರೂಪದಿಂದಲೂ ಶಕ್ರನ ಆದೇಶದಿಂದಲೂ

ಚಿತ್ರಸೇನನ ವಾಕ್ಯಗಳಿಂದಲೂ ಪ್ರೇರಿತಳಾಗಿ ಮನ್ಮಥನಿಂದ ಪೀಡಿತಳಾಗಿ ದಿವ್ಯವಾದ ಆಸ್ತರಣಗಳಿಂದ ಕೂಡಿದ ವಿಸ್ತಾರವಾದ ಶ್ರೇಷ್ಠವಾದ ಶಯನದಲ್ಲಿ ತನ್ನ ಮನಸ್ಸಿನ ಸಂಕಲ್ಪಗಳಿಗೆ ಅನುಸಾರವಾಗಿ ಕಲ್ಪನೆಗಳನ್ನು ಮಾಡುತ್ತಾ ಒಳ್ಳೆಯ ಮನಸ್ಸುಳ್ಳ ಅವಳು ಬೇರೆ ಏನನ್ನೂ ಯೋಚನೆಮಾಡದೆ ತನ್ನ ಮನೋರಥಕ್ಕೆ ಅನುಸಾರವಾಗಿ ಬಂದ ಅರ್ಜುನನ್ನೂ ಕಾಮಿಸಿದಳು.

ನಿಶಾಮ್ಯ ಚಂದ್ರೋದಯನಂ ವಿಗಾಢೇ ರಜನೀಮುಖೇ ।
ಪ್ರಸ್ಥಿತಾ ಸಾ ಪೃಥುಶ್ರೋಣೀ ಪಾರ್ಥಸ್ಯ ಭವನಂ ಪ್ರತಿ ॥೩೧॥

ರಾತ್ರಿಯು ಆವರಿಸುತ್ತಿರಲು ಚಂದ್ರೋದಯವನ್ನು ನೋಡಿ ಪೃಥುಶ್ರೋಣಿಯಾದ ಅವಳು ಅರ್ಜುನನ ನಿವೇಶನಕ್ಕೆ ಹೊರಟಳು.

ಮೃದುಕುಂಚಿತದೀರ್ಘೇಣ ಕುಸುಮೋತ್ತಮಧಾರಿಣಾ ।
ಕೇಶಪಾಶೇನ ಲಲನಾ ಗಚ್ಛಮಾನಾ ವ್ಯರಾಜತ ॥೩೨॥

ಅರ್ಜುನನ ನಿವೇಶನಕ್ಕೆ ಹೋಗುತ್ತಾ ಶ್ರೇಷ್ಠವಾದ ಕುಸುಮಗಳನ್ನು ಮುಡಿದ ದೀರ್ಘವಾದ ಗುಂಗುರುಕೂದಲುಗಳ ಕೇಶಪಾಶಗಳಿಂದ ಆ ವನಿತೆಯು ಶೋಭಿಸಿದಳು.

ಭ್ರೂಕ್ಷೇಪಾಲಾಪಮಾಧುರ್ಯೈಃ ಕಾಂತ್ಯಾ ಸೌಮ್ಯತಯಾಽಪಿ ಚ ।
ಶಶಿನಂ ವಕ್ತ್ರಚಂದ್ರೇಣ ಆಹ್ವಯಂತೀವ ಗಚ್ಛತೀ ॥೩೩॥

ಹುಬ್ಬಿನ ಚಲನೆಗಳಿಂದಲೂ ಮಾತಿನ ಮಾಧುರ್ಯದಿಂದಲೂ ದೇಹದ ಕಾಂತಿಯಿಂದಲೂ ಮತ್ತು ತನ್ನ ಸೌಮ್ಯಭಾವದಿಂದಲೂ ಚಂದ್ರನಂತಿರುವ ತನ್ನ ಮುಖದಿಂದ ಚಂದ್ರನನ್ನು ಆಹ್ವಾನಿಸುವಂತೆ ಅವಳು ಹೊರಟಳು.

ದಿವ್ಯಾಂಗರಾಗೌ ರುಚಿರೌ ದಿವ್ಯಚಂದನರೂಷಿತೌ ।
ಗಚ್ಛಂತ್ಯಾ ಹಾರವಿಕಚೌ ಸ್ತನೌ ತಸ್ಯಾ ವವಲ್ಗತುಃ ॥೩೪॥

ದಿವ್ಯಾಂಗರಾಗವನ್ನು ಧರಿಸಿ ದಿವ್ಯಚಂದನದಿಂದ ಲೇಪಿತವಾದ ಹಾರಗಳಿಂದ ಭೂಷಿತವಾಗಿ ಅರಳಿದ ಅವಳ ಕುಚಗಳು ಅವಳು ನಡೆದಂತೆ ಕಂಪಿಸಿದವು.

ಸ್ತನೋದ್ವಹನಸಂಕ್ಷೋಭಾತ್ ತಾಮ್ಯಮಾನಾ ಪದೇ ಪದೇ ।
ತ್ರಿವಲೀದಾಮಚಿತ್ರೇಣ ಮಧ್ಯೇನಾತೀವ ಶೋಭನಾ ॥೩೫॥

ಸ್ತನವನ್ನು ಹೊರುವ ಭಾರದಿಂದ ಕ್ಷೋಭೆಗೊಂಡ ಅವಳು ಹೆಜ್ಜೆ ಹೆಜ್ಜೆಗೆ ಬಳುಕುತ್ತಾ ಉದರದ ತ್ರಿವಳಿಯ ಮೇಲೆ ಧರಿಸಿದ ಕಾಂಚೀದಾಮದಿಂದ ಬಹುವಾಗಿ ಶೋಭಿಸಿದಳು.

ರಥಕೂಬರವಿಸ್ತೀರ್ಣಂ ನಿತಂಬೋನ್ನತಪೀವರಮ್ ।
ಮನ್ಮಥಾಯತನಂ ಶುಭ್ರರಶನಾದಾಮಶೋಭಿತಮ್ ॥೩೬॥

ರಥಪೀಠದಂತೆ ವಿಸ್ತಾರವಾದ ಉನ್ನತವೂ ಮತ್ತು ಪುಷ್ಟವೂ ಆದ ನಿತಂಬಸ್ಥಾನದಲ್ಲಿ ಇದ್ದ ಮನ್ಮಥಾಯತನವು ಶುಭ್ರವಾದ ಕಾಂಚೀರಶನಾದಾಮಗಳಿಂದ ಶೋಭಿಸಿತು.

ಋಷೀಣಾಮಪಿ ದಿವ್ಯಾನಾಂ ಮನೋವ್ಯಾಘಾತಕಾರಕಮ್ ।
ಸೂಕ್ಷ್ಮವಸ್ತ್ರಾವೃತಂ ಭಾತಿ ಜಘನಂ ಚಾನವದ್ಯಯಾ ॥೩೭॥

ದಿವ್ಯ ಋಷಿಗಳಿಗೂ ಮನಸ್ಸಿಗೆ ಚಾಂಚಲ್ಯವನ್ನು ಉಂಟುಮಾಡುವ ನಿರ್ದುಷ್ಟಳಾದ ಅವಳ ಜಘನವು ಸೂಕ್ಷ್ಮವಸ್ತ್ರದಿಂದ ಆವೃತ್ರವಾಗಿ ಶೋಭಿಸುತ್ತಿತ್ತು .

ಗೂಢಗುಲ್ಫಶಿರೌ ಪಾದೌ ತಾಮ್ರಾಯತತಳಾಂಗುಲೀ ।
ಕೂರ್ಮಪೃಷ್ಠೋನ್ನತೌ ಚಾಸ್ಯಾಃ ಶೋಭೇತೇ ಕಿಂಕಿಣೀಕಿಣೌ ॥೩೮॥

ಶೀಧುಪಾನೇನ ಚಾಲ್ಪೇನ ತುಷ್ಟಾ ಚ ಮದನೇನ ಚ ।
ವಿಲಾಸಿತೈಶ್ಚ ವಿವಿಧೈಃ ಪ್ರೇಕ್ಷಣೀಯತರಾऽಭವತ್ ॥೩೯॥

ಚರ್ಮದೊಳಗೆ ಸೇರಿದ ಮಣಿಗಂಟಿನ ಧಮನಿಗಳನ್ನುಳ್ಳ ತಾಮ್ರದ ಬಣ್ಣವನ್ನು ಹೊಂದಿದ ದೀರ್ಘವಾದ ಪಾದತಲ ಮತ್ತು ಆಯತ ಅಂಗುಲಿಗಳನ್ನು ಹೊಂದಿದ್ದ ಕೂರ್ಮ ಪೃಷ್ಠದಂತೆ ಮೇಲೆ ಉನ್ನತವಾಗಿದ್ದ ಗೆಜ್ಜೆಯ ಗುರುತುಗಳಿಂದ ಸ್ವಲ್ಪ ಗಟ್ಟಿಯಾಗಿದ್ದ ಅವಳ ಪಾದಗಳು ಶೋಭಿಸಿದವು. ಅವಳು ಅಲ್ಪವಾದ ಮದ್ಯಪಾನದಿಂದ ಮತ್ತು ಮನಸ್ಸಲ್ಲಿ ಉಂಟಾದ ಕಾಮದಿಂದ ಸಂತುಷ್ಟಳಾಗಿ ತನ್ನ ವಿವಿಧ ವಿಲಾಸಗಳಿಂದ ಬಹಳ ಸುಂದರಿಯಾಗಿ ತೋರಿದಳು.

ಸಿದ್ಧಚಾರಣಗಂಧರ್ವೈಃ ಸಾಗ್ರೈರ್ಯಾತಿ ವಿಲಾಸಿನೀ ।
ಬಹ್ವಾಶ್ಚರ್ಯಪದೇ ಸ್ವರ್ಗೇ ಸಾಽಽಶ್ಚರ್ಯಮಿವ ದೃಶ್ಯತೇ ॥೪೦॥

ಆ ವಿಲಾಸಿನಿಯು ಸಿದ್ಧಚಾರಣಗಂಧರ್ವರನ್ನು ಮುಂದೆಮಾಡಿಕೊಂಡು ನಡೆಯುತ್ತಾ ಅನೇಕ ಆಶ್ಚರ್ಯಗಳಿಗೆ ಆಸ್ಪದವಾದ ಸ್ವರ್ಗದಲ್ಲಿ ತಾನೂ ಒಂದು ಆಶ್ಚರ್ಯದಂತೆ ಕಾಣುತ್ತಿದ್ದಳು.

ಸುಸೂಕ್ಷ್ಮೋತ್ತರೀಯೇಣ ಮೇಘವರ್ಣೇನ ರಾಜತಾ ।
ತನ್ವಭ್ರಪ್ರಾವೃತಾ ವ್ಯೋಮ್ನಿ ಚಂದ್ರಲೇಖೇವ ಗಚ್ಛತಿ ॥೪೧॥

ಮೇಘವರ್ಣದ ತೆಳುವಾದ ಉತ್ತರೀಯದಿಂದ ಶೋಭಿಸುತ್ತಿದ್ದ ಅವಳು ಆಕಾಶದಲ್ಲಿ ತೆಳುವಾದ ಮೋಡಗಳಿಂದ ಆವೃತವಾದ ಚಂದ್ರಲೇಖೆಯಂತೆ ನಡೆದಳು.

ತತಃ ಪ್ರಾಪ್ತಾತಿದುಷ್ಪ್ರಾಪಾ ಮನಸಾಽಪಿ ವಿಕರ್ಮಭಿಃ ।
ಭವನಂ ಪಾಂಡುಪುತ್ರಸ್ಯ ಫಲ್ಗುನಸ್ಯ ಗುಣಾಧಿಕಾ ॥೪೨॥

ಅನಂತರ ದುಷ್ಕರ್ಮವನ್ನು ಮಾಡಿದವರು ಮನಸ್ಸಿನಿಂದಲೂ ಹೊಂದಲು ಸಾಧ್ಯವಾಗದ, ಪಾಂಡುಪುತ್ರನಾದ ಅರ್ಜುನನ ಭವನಕ್ಕೆ, ಗುಣಾಧಿಕಳಾದ ಅವಳು ಬಂದಳು.

ತತ್ರ ದ್ವಾರಮನುಪ್ರಾಪ್ತಾ ದ್ವಾರಸ್ಥೈಶ್ಚ ನಿವೇದಿತಾ ।
ಪರಮಾಽಪ್ಸರಸಾಂ ತತ್ರ ಪಾರ್ಥಾಯಾಯತಲೋಚನಾ ॥೪೩॥

ಅವಳು ಮನೆಯ ದ್ವಾರಕ್ಕೆ ಬಂದಾಗ ದ್ವಾರಸ್ಥರು ಒಳಗೆ ಹೋಗಿ ಅರ್ಜುನನಿಗೆ ಆಯತಲೋಚನೆಯಾದ ಅಪ್ಸರೆಯಾದ ಶ್ರೇಷ್ಠಳಾದ ಊರ್ವಶಿಯ ಆಗಮನವನ್ನು ತಿಳಿಸಿದರು.

ತಾಂ ದೃಷ್ಟ್ವಾ ಪಾಂಡುತನಯಃ ಶಯನಾದುತ್ಥಿತೋ ಬಲೀ ।
ಅಶಂಕಿತಮನಾ ರಾಜನ್ ಪ್ರತ್ಯಗಚ್ಛತ ತಾಂ ನಿಶಿ ॥೪೪॥

ಎಲೈ ರಾಜನೇ! ಅವಳನ್ನು ನೋಡಿದ ಬಲಿಷ್ಠನಾದ ಪಾಂಡುತನಯನು ಶಯನದಿಂದ ಎದ್ದು ಮನಸ್ಸಿನಲ್ಲಿ ಯಾವ ಶಂಕೆಯೂ ಇಲ್ಲದ ರಾತ್ರಿಯ ವೇಳೆಯಲ್ಲಿ ಅವಳನ್ನು ಎದುರುಗೊಳ್ಳಲು ಬಂದನು.

ದೃಷ್ಟ್ವೈವ ಚೋರ್ವಶೀಂ ಪಾರ್ಥೋ ಲಜ್ಜಾಸಂವೃತಲೋಚನಃ।
ಪಾದಾಭಿವಂದನಂ ಕೃತ್ವಾ ಗುರುಪೂಜಾಂ ಪ್ರಯುಕ್ತವಾನ್ ॥೪೫॥

ಅರ್ಜುನನು ಉರ್ವಶಿಯನ್ನು ನೋಡಿದ ತಕ್ಷಣ ನಾಚಿಕೆಯಿಂದ ಕಣ್ಣುಗಳನ್ನು ಮುಚ್ಚಿ ಅವಳ ಪಾದಗಳಿಗೆ ನಮಸ್ಕರಿಸಿ ಗುರುಪೂಜೆಯನ್ನು ಮಾಡಿದನು.

ಅರ್ಜುನಃ

ಅಭಿವಾದಯೇ ತ್ವಾಂ ಶಿರಸಾ ಪ್ರಮದೇಽಪ್ಸರಸಾಂ ವರೇ ।
ಕಿಂ ಚಾಗಮನಕೃತ್ಯಂ ತೇ ಬ್ರೂಹಿ ಸರ್ವಂ ಯಥಾತಥಮ್ ॥೪೬॥

ಅಪ್ಸರೆಯರಲ್ಲಿ ಶ್ರೇಷ್ಠಳಾದ ವನಿತೆಯೇ, ನಿನಗೆ ನಾನು ನಮಸ್ಕಾರವನ್ನು ಮಾಡುತ್ತೇನೆ. ನೀನು ಬಂದ ಉದ್ದೇಶವೇನು? ಎಲ್ಲವನ್ನೂ ನನಗೆ ಸತ್ಯವಾಗಿ ಹೇಳು.

ವೈಶಂಪಾಯನಃ

ಅಕಾಮಂ ಫಲ್ಗುನಂ ಜ್ಞಾತ್ವಾ ಇಂಗಿತಜ್ಞಾ ತದೋರ್ವಶೀ ।
ಗಂಧರ್ವವಚನಂ ಸರ್ವಂ ಶ್ರಾವಯಾಮಾಸ ಫಲ್ಗುನಮ್ ॥೪೭॥

ಇಂಗಿತಜ್ಞಳಾದ ಆ ಉರ್ವಶಿಯು ಆಗ ಅರ್ಜುನನು ಕಾಮರಹಿತನಾಗಿದ್ದಾನೆಂದು ತಿಳಿದು ಅರ್ಜುನನಿಗೆ ಚಿತ್ರರಥಗಂಧರ್ವನ ಎಲ್ಲ ಮಾತುಗಳನ್ನೂ ತಿಳಿಸಿದಳು.

ಉರ್ವಶೀ

ಯಥಾ ಮೇ ಚಿತ್ರಸೇನೇನ ಕಥಿತಂ ಮನುಜೋತ್ತಮ ।
ತತ್ತೇ ಸರ್ವಂ ಪ್ರವಕ್ಷ್ಯಾಮಿ ಯಥಾ ಚಾಹಮಿಹಾಗತಾ ॥೪೮॥

ಎಲೈ ಮನುಜೋತ್ತಮನೇ ಚಿತ್ರಸೇನನು ನನಗೆ ಹೇಳಿದುದಕ್ಕೆ ಅನುಗುಣವಾಗಿ ನಾನು ಇಲ್ಲಿಗೆ ಬಂದ ಕಾರಣವನ್ನೆಲ್ಲಾ ನಿನಗೆ ಸರಿಯಾಗಿ ಹೇಳುವೆನು.

ಉಪಸ್ಥಾನೇ ಮಹೇಂದ್ರಸ್ಯ ವರ್ತಮಾನೇ ಮನೋರಮೇ ।
ತ್ವದಾಗಮನತುಷ್ಟ್ಯಾ ಚ ಸ್ವರ್ಗಸ್ಯ ಪರಮೋತ್ಸವೇ ॥೪೯॥

ರುದ್ರಾಣಾಂ ಚೈವ ಸಾನ್ನಿಧ್ಯೇ ಆದಿತ್ಯಾನಾಂ ಚ ಸರ್ವಶಃ ।
ಸಮಾಗಮೇಽಶ್ವಿನೋಶ್ಚಾಪಿ ವಸೂನಾಂ ಚ ನರೋತ್ತಮ ॥೫೦॥

ಮಹರ್ಷೀಣಾಂ ಚ ಸಂಘೇಷು ರಾಜರ್ಷಿಪ್ರವರೇಷು ಚ ।
ಸಿದ್ಧಚಾರಣಯಕ್ಷೇಷು ಮಹೋರಗಗಣೇಷು ಚ ॥೫೧॥

ಉಪವಿಷ್ಟೇಷು ಹೃಷ್ಟೇಷು ಸ್ಥಾನಮಾನಪ್ರಭಾವತಃ ।
ಋದ್ಧ್ಯಾ ಪ್ರಜ್ವಲಮಾನೇಷು ಅಗ್ನೀಷೋಮಾರ್ಕವರ್ಷ್ಮಸು ॥೫೨॥

ವೀಣಾಸು ವಾದ್ಯಮಾನಾಸು ಗಂಧರ್ವೈಃ ಶಕ್ರನಂದನ ।
ದಿವ್ಯೇ ಮನೋರಮೇ ಗೀತೇ ಪ್ರವೃತ್ತೇ ಪೃಥುಲೋಚನ ॥೫೩॥

ಸರ್ವಾಪ್ಸರಸ್ಸಮಸ್ಯಾಸು ಪ್ರವೃತ್ತಾಸು ಕುರೂತ್ತಮ ।
ತ್ವಂ ಕಿಲಾನಿಮಿಷಃ ಪಾರ್ಥ ಮಾಮೇಕಾಂ ತತ್ರ ದೃಷ್ಟವಾನ್ ॥೫೪॥

ನೀನು ಸ್ವರ್ಗಕ್ಕೆ ಬಂದ ಸಂತೋಷದಿಂದ ಸ್ವರ್ಗದಲ್ಲಿ ಪರಮೋತ್ಸವವನ್ನು ನಡೆಸುತ್ತಾ ಮಹೇಂದ್ರನ ಮನೋಹರವಾದ ಒಡ್ಡೋಲಗವು ನಡೆಯುತ್ತಿರಲು, ರುದ್ರರು ಮತ್ತು ಎಲ್ಲ ಆದಿತ್ಯರು ಸನ್ನಿಹಿತರಾಗಿರಲು, ಎಲೈ ನರೋತ್ತಮನೇ! ವಸುಗಳು ಮತ್ತು ಅಶ್ವಿನಿಗಳು ಅಲ್ಲಿ ಸಮಾಗತರಾಗಿರಲು, ಮಹರ್ಷಿಗಳ ಸಮೂಹಗಳು ರಾಜರ್ಷಿಶ್ರೇಷ್ಠರು ಸಿದ್ಧಚಾರಣಶ್ರೇಷ್ಠರು ಮಹಾಸರ್ಪಗಣಗಳು ಅಲ್ಲಿಸಂತೋಷವಾಗಿ ಕುಳಿತುಕೊಂಡು ಅವರ ಸ್ಥಾನ ಮತ್ತು ಮಾನಗಳ ಪ್ರಭಾವದಿಂದ ಮತ್ತು ಸಂವೃದ್ಧಿಯ ಪ್ರಭಾವದಿಂದಲೂ ಅಗ್ನಿಯಂತೆ ಚಂದ್ರನಂತೆ ಸೂರ್ಯನಂತೆ ಪ್ರಕಾಶಿಸುತ್ತಿರಲು, ವೀಣೆಗಳು ಗಂಧರ್ವರಿಂದ ನುಡಿಸಲ್ಪಡುತ್ತಿರಲು, ಎಲೈ ಶಕ್ರಪುತ್ರನೇ, ಆಯತಲೋಚನನೇ, ದಿವ್ಯವಾದ ಮತ್ತು ಮನೋಹರವಾದ ಗಾನವು ಪ್ರವೃತ್ತವಾಗಿರಲು, ಎಲ್ಲ ಅಪ್ಸರೆಯರು ತಮ್ಮ ತಮ್ಮಲ್ಲಿ ಗೂಢಾರ್ಥವಾದ ಮಾತುಗಳನ್ನು ಆಡುತ್ತಿರಲು, ಎಲೈ ಕುರುಶ್ರೇಷ್ಠನಾದ ಪಾರ್ಥನೇ, ನೀನು ರೆಪ್ಪೆಯನ್ನು ಮುಚ್ಚದೆ ನನ್ನೊಬ್ಬನ್ನೇ ನೋಡುತ್ತಿದ್ದೆ.

ತತ್ರ ಚಾವಭೃಥೇ ತಸ್ಮಿನ್ನುಪಸ್ಥಾನೇ ದಿವೌಕಸಾಮ್ ।
ತವ ಪಿತ್ರಾಽಭ್ಯನುಜ್ಞಾತಾ ಗತಾಃ ಸ್ವನಿಲಯಾನ್ ಸುರಾಃ ॥೫೫॥

ಅಲ್ಲಿ ಆ ದೇವತೆಗಳ ಉತ್ಸವವು ಮುಗಿಯುತ್ತಿರಲು ನಿನ್ನ ತಂದೆಯಿಂದ ಅಪ್ಪಣೆಯನ್ನು ಪಡೆದು ದೇವತೆಗಳು ತಮ್ಮ ಮನೆಗೆ ಹೋದರು.

ತಥೈವಾಪ್ಸರಸಃ ಸರ್ವಾ ವಿಸೃಷ್ಟಾ ನಿಲಯಂ ಗತಾಃ ।
ಅಹಂ ಚಾನ್ಯಾಶ್ಚ ಶತ್ರುಘ್ನ ತವ ಪಿತ್ರಾ ವಿಸರ್ಜಿತಾಃ ॥೫೬॥

ಹಾಗೆಯೇ ಎಲ್ಲಾ ಅಪ್ಸರೆಯರು ಇಂದ್ರನಿಂದ ಬೀಳ್ಕೊಡಲ್ಪಟ್ಟವರಾಗಿ ತಮ್ಮ ಮನೆಗಳಿಗೆ ಹೋದರು. ಎಲೈ ಶತ್ರುಘ್ನನೇ! ನಾನೂ ಮತ್ತು ಉಳಿದ ಅಪ್ಸರೆಯರೂ ನಿನ್ನ ತಂದೆಯಿಂದ ಬೀಳ್ಕೊಡಲ್ಪಟ್ಟೆವು.

ತತಃ ಶಕ್ರೇಣ ಸಂದಿಷ್ಟಃ ಚಿತ್ರಸೇನೋ ಮಮಾಂತಿಕಮ್ ।
ಪ್ರಾಪ್ತಃ ಕಮಲಪತ್ರಾಕ್ಷ ಸ ಚ ಮಾಮಬ್ರವೀದಿದಮ್ ॥೫೭॥

ಎಲೈ ಕಮಲಪತ್ರಾಕ್ಷನೇ! ಅನಂತರ ಇಂದ್ರನ ಆದೇಶದಂತೆ ಚಿತ್ರಸೇನನು ನನ್ನ ಬಳಿಗೆ ಬಂದು ನನ್ನನ್ನು ಕುರಿತು ಈ ಮಾತುಗಳನ್ನು ಆಡಿದನು.

ತ್ವತ್ಕೃತೇಽಹಂ ಸುರೇಶೇನ ಪ್ರೇಷಿತೋ ವರವರ್ಣಿನಿ ।
ಪ್ರಿಯಂ ಕುರು ಮಹೇಂದ್ರಸ್ಯ ಮಮ ಚೈವಾತ್ಮನಶ್ಚ ಹ ॥೫೮॥

ಸುಂದರಿಯೇ, ನಿನ್ನ ಸಲುವಾಗಿ ನಾನು ದೇವೇಂದ್ರನಿಂದ ಕಳುಹಿಸಲ್ಪಟ್ಟಿದ್ದೇನೆ. ದೇವೇಂದ್ರನಿಗೂ ನನಗೂ ಮತ್ತು ನಿನಗೂ ಸಹ ಪ್ರಿಯವನ್ನು ಉಂಟುಮಾಡು.

ಶಕ್ರತುಲ್ಯಂ ರಣೇ ಶೂರಂ ರೂಪೌದಾರ್ಯಗುಣಾನ್ವಿತಮ್ ।
ಪಾರ್ಥಂ ಪ್ರಾರ್ಥಯ ಸುಶ್ರೋಣಿ ತ್ವಮಿತ್ಯೇವಂ ಸ ಮಾಽಬ್ರವೀತ್॥

ಎಲೌ ಸುಶ್ರೋಣಿಯೇ, ಯುದ್ಧದಲ್ಲಿ ಇಂದ್ರನಿಗೆ ಸಮಾನವಾದ ಶೂರನಾದ ರೂಪ ಔದಾರ್ಯಗುಣಗಳಿಂದ ಕೂಡಿದ ಪಾರ್ಥನನ್ನು ನೀನು ಪ್ರಾರ್ಥಿಸು ಎಂದು ಇಂದ್ರನು ನನಗೆ ಹೇಳಿಕಳುಹಿಸಿದ್ದಾನೆ.

ತತೋಽಹಂ ಸಮನುಜ್ಞಾತಾ ತೇನ ಪಿತ್ರಾ ಚ ತೇಽನಘ ।
ತವಾಂತಿಕಮನುಪ್ರಾಪ್ತಾ ಶುಶ್ರೂಷಿತುಮರಿಂದಮ ॥೬೦॥

ಅನಘನೇ, ಅರಿಂದಮನೇ, ಆದ್ದರಿಂದ ನಾನು ನಿನ್ನ ತಂದೆಯಿಂದ ಆದಿಷ್ಟಳಾಗಿ ನಿನ್ನ ಪಾದಸೇವೆಯನ್ನು ಮಾಡಲು ನಿನ್ನ ಬಳಿಗೆ ಬಂದಿದ್ದೇನೆ.

ನ ಕೇವಲಂ ಹಿ ಶಕ್ರೇಣ ಪ್ರೇಷಿತಾ ಚಾಹಮಾಗತಾ ।
ಚಿರಾಭಿಲಷಿತೋ ವೀರ ಮಮಾಪ್ಯೇಷ ಮನೋರಥಃ ॥೬೧॥

ಎಲೈ ವೀರನೇ, ಕೇವಲ ಶಕ್ರನ ಆದೇಶದಂತೆಯೇ ನಾನು ಬಂದಿರುವುದಲ್ಲ. ಬಹುಕಾಲದಿಂದಲೂ ನನಗೆ ಈ ಮನೋರಥವಿದ್ದಿತು.

ವೈಶಂಪಾಯನಃ

ತಾಂ ತಥಾ ಬ್ರುವತೀಂ ಶ್ರುತ್ವಾ ಭೃಶಂ ಲಜ್ಜಾನ್ವಿತೋಽರ್ಜುನಃ ।
ಉವಾಚ ಕರ್ಣೌ ಹಸ್ತಾಭ್ಯಾಂ ಪಿಧಾಯ ತ್ರಿದಶೋಪಮಃ ॥೬೨॥

ಅವಳ ಅಂತಹ ಮಾತುಗಳನ್ನು ಕೇಳಿದ ದೇವತೆಗಳಿಗೆ ಸಮಾನನಾದ ಅರ್ಜುನನು ಬಹಳ ಲಜ್ಜೆಯಿಂದ ಕೂಡಿದವನಾಗಿ ತನ್ನ ಹಸ್ತಗಳಿಂದ ಕಿವಿಗಳನ್ನು ಮುಚ್ಚಿಕೊಂಡು ಮಾತನಾಡಿದನು.

ಅಶ್ರುತಂ ಮೇಽಸ್ತು ಸುಭಗೇ ಯನ್ಮಾಂ ವದಸಿ ಭಾಮಿನಿ ।
ಗುರುದಾರೈಃ ಸಮಾನಾ ಹಿ ದೇವವಾರಾ ವರಾನನೇ ॥೬೩॥

ಸುಂದರಿಯಾದ ಭಾಮಿನಿಯೇ, ನಿನ್ನ ಮಾತುಗಳು ನನ್ನ ಕಿವಿಗಳಿಗೆ ಬೀಳದಿರಲಿ. ಸುಂದರ ಮುಖವುಳ್ಳವಳೇ, ದೇವತೆಯ ವಾರಾಂಗನೆಯರು ನಮಗೆ ಗುರುಪತ್ನಿಯರಿಗೆ ಸಮನಾದವರು.

ಯಚ್ಚೇಕ್ಷಿತಾ ಹಿ ವಿಸ್ಪಷ್ಟಂ ವಿಶೇಷೇಣ ಮಯಾ ಶುಭೇ ।
ತಚ್ಚ ಮೇ ಕಾರಣಂ ಸರ್ವಂ ಶೃಣು ಸತ್ಯೇನ ಸುಸ್ಮಿತೇ ॥೬೪॥

ಎಲೌ ಶುಭಳೇ, ಸುಸ್ಮಿತೆಯೇ, ನಾನು ನಿನ್ನನ್ನು ಸಭೆಯಲ್ಲಿ ವಿಶೇಷವಾಗಿ ಮತ್ತು ಸ್ಪಷ್ಟವಾಗಿ ನೋಡಿದುದರ ಎಲ್ಲಾ ಕಾರಣವನ್ನು ಹೇಳುತ್ತೇನೆ. ಅದನ್ನು ನನ್ನಿಂದ ಕೇಳು.

ಇಯಂ ಪೌರವವಂಶಸ್ಯ ಜನನೀ ಸುದತೀತಿ ಹ ।
ತ್ವಾಮಹಂ ದೃಷ್ಟವಾಂಸ್ತತ್ರ ವಿಸ್ಮಯೋತ್ಫುಲ್ಲಲೋಚನಃ ॥೬೫॥

ಈ ಸುಂದರಿಯು ಪೌರವವಂಶದ ಜನನಿಯೆಂದು ನಾನು ವಿಸ್ಮಯದಿಂದ ಅರಳಿದ ಕಣ್ಣುಳ್ಳವನಾಗಿ ಅಲ್ಲಿ ನಿನ್ನನ್ನು ನೋಡಿದೆ.

ನ ಮಾಮರ್ಹಸಿ ಕಲ್ಯಾಣಿ ಅನ್ಯಥಾ ಮಂತುಮಂಗನೇ ।
ಗುರೋರ್ಗುರುತರೀ ಮೇ ತ್ವಂ ಮಮ ವಂಶವಿವರ್ಧಿನೀ ॥೬೬॥

ಎಲೌ ಕಲ್ಯಾಣಿಯೇ ಎಲೌಸುಂದರಿಯೇ, ನೀನು ನನ್ನನ್ನು ಅನ್ಯಥಾ ಭಾವಿಸಬೇಡ. ನಮ್ಮ ವಂಶವರ್ಧನಿಯಾದ ನೀನು ತಾಯಿಗಿಂತಲೂ ಪೂಜ್ಯಳೆಂದು ಭಾವಿಸುತ್ತೇನೆ.

ಊರ್ವಶೀ

ಅನಾವೃತಾ ವಯಂ ಸರ್ವಾ ದೇವವಾರಾ ವರಾನನ ।
ಗುರುಸ್ಥಾನೇ ನ ಮಾಂ ವೀರ ನಿಯೋಕ್ತುಂ ತ್ವಮಿಹಾರ್ಹಸಿ ॥೬೭॥

ಎಲೈ ಸುಮುಖನೇ, ದೇವವಾರಾಂಗನೆಯರಾದ ನಾವು ಯಾವ ನಿರ್ಬಂಧಕ್ಕೂ ಒಳಪಟ್ಟವರಲ್ಲ. ವೀರನೇ, ನನ್ನನ್ನು ನೀನು ಗುರುಸ್ಥಾನದಲ್ಲಿ ಇಟ್ಟುನೋಡಬಾರದು.

ಪಿತರಃ ಸೋದರಾಃ ಪುತ್ರಾ ನಪ್ತಾರೋ ವಾऽऽಗತಾ ಇಹ ।
ತಪಸಾ ರಮಯಂತ್ಯಸ್ಮಾನ್ ನ ಚಾಸ್ಯೇಷಾಂ ವ್ಯತಿಕ್ರಮಃ ॥೬೮॥

ಪಿತೃಗಳಾಗಲೀ ಸಹೋದರರಾಗಲೀ ಪುತ್ರರಾಗಲೀ ಪೌತ್ರರಾಗಲೀ ತಪಸ್ಸನ್ನು ಮಾಡಿ ಇಲ್ಲಿಗೆ ಬಂದವರು ನಮ್ಮನ್ನು ರಮಿಸುತ್ತಾರೆ. ಅವರಿಗೆ ಯಾವ ದೋಷವೂ ಇಲ್ಲ.

ತತ್ ಪ್ರಸೀದ ನ ಮಾಮಾರ್ತಾಂ ವಿಸರ್ಜಯಿತುಮರ್ಹಸಿ ।
ಹೃಚ್ಛಯೇನ ಸುಸಂಪ್ರಾಪ್ತಾಂ ಭಕ್ತಾಂ ತ್ವಂ ಭಜ ಮಾऽನಘ ॥೬೯॥

ಆದ್ದರಿಂದ ಪ್ರಸನ್ನನಾಗು. ಆರ್ತಳಾಗಿ ಬಂದ ನನ್ನನ್ನು ನೀನು ಹಿಂದಕ್ಕೆ ಕಳುಹಿಸಬೇಡ. ಅನಘನೇ, ಕಾಮದಿಂದ ಸಂಪ್ರಾಪ್ತಳಾದ ನಿನ್ನಲ್ಲಿ ಅನುರಾಗವನ್ನು ಹೊಂದಿರುವ ನನ್ನನ್ನು ಸ್ವೀಕರಿಸು.

ಅರ್ಜುನಃ

ಶೃಣು ಸತ್ಯಂ ವರಾರೋಹೇ ಯತ್ತ್ವಾಂ ವಕ್ಷ್ಯಾಮ್ಯನಿಂದಿತೇ ।
ಶೃಣ್ವಂತು ಮೇ ದಿಶಶ್ಚೈವ ವಿದಿಶಶ್ಚ ಸದೇವತಾಃ ॥೭೦॥

ಸುಂದರಿಯೇ, ಅನಿಂದಿತೆಯೇ, ನಾನು ನಿನ್ನನ್ನು ಕುರಿತು ಹೇಳುವ ಸತ್ಯವಾದ ಮಾತುಗಳನ್ನು ಕೇಳು. ದಿಗ್‌ದೇವತೆಗಳು ಅವಾಂತರದಿಗ್‌ದೇವತೆಗಳು ಮತ್ತು ಉಳಿದ ದೇವತೆಗಳು ನನ್ನ ಮಾತನ್ನು ಕೇಳಲಿ.

ಯಥಾ ಕುಂತೀ ಚ ಮಾದ್ರೀ ಚ ಶಚೀ ಚೈವ ಸಮಾ ಇಹ ।
ತಥಾ ತ್ವಂ ವಂಶಜನನೀ ತ್ವಂ ಹಿ ಮೇಽದ್ಯ ಗರೀಯಸೀ ॥೭೧॥

ಹೇಗೆ ನನಗೆ ಕುಂತಿ ಮಾದ್ರಿ ಮತ್ತು ಶಚಿಯು ಸಮಾನರಾಗಿ ಪೂಜ್ಯರೋ ಹಾಗೆ ವಂಶಜನನಿಯಾದ ನೀನೂ ಸಹ ನನಗೆ ಪೂಜ್ಯಳಾದವಳು.

ಗಚ್ಛ ಮೂರ್ಧ್ನಾ ಪ್ರಪನ್ನೋಽಸ್ಮಿ ಪಾದೌ ತೇ ವರವರ್ಣಿನಿ ।
ತ್ವಂ ಹಿ ಮೇ ಮಾತೃವತ್ ಪೂಜ್ಯಾ ರಕ್ಷ್ಯೋಽಹಂ ಪುತ್ರವತ್ ತ್ವಯಾ ॥

ಸುಂದರಿಯೇ, ನಿನ್ನ ಪಾದಗಳಿಗೆ ನಾನು ನಮಸ್ಕರಿಸಿದ್ದೇನೆ. ನೀನು ನನಗೆ ತಾಯಿಯಂತೆ ಪೂಜ್ಯಳಾದವಳು. ನನ್ನನ್ನು ನೀನು ಮಗನಂತೆ ರಕ್ಷಿಸಬೇಕು. ನೀನು ಹೊರಡು.

ವೈಶಂಪಾಯನಃ

ತಥಾಽವಧೂತಾ ಪಾರ್ಥೇನ ಉರ್ವಶೀ ಕ್ರೋಧಮೂರ್ಚ್ಛಿತಾ ।
ವೇಪಂತೀ ಭ್ರುಕುಟೀಃ ಕೃತ್ವಾ ಶಶಾಪಾಥ ಧನಂಜಯಮ್ ॥೭೩॥

ಹಾಗೆ ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಊರ್ವಶಿಯು ಕ್ರೋಧಮೂರ್ಚ್ಛಿತಳಾಗಿ ನಡುಗುತ್ತಾ ಹುಬ್ಬುಗಳನ್ನು ಗಂಟಿಕ್ಕಿ ಅರ್ಜುನನಿಗೆ ಶಾಪವನ್ನು ಕೊಟ್ಟಳು.

ತವ ಪಿತ್ರಾಽಭ್ಯನುಜ್ಞಾತಾಂ ಸ್ವಯಂ ಚ ಗೃಹಮಾಗತಾಮ್ ।
ಯಸ್ಮಾನ್ನಾಂ ನಾಭಿನಂದೇಥಾಃ ಕಾಮಬಾಣವಶಂ ಗತಾಮ್ ॥೭೪॥

ತಸ್ಮಾತ್ತ್ವಂ ನರ್ತಕಃ ಪಾರ್ಥ ಸ್ತ್ರೀಮಧ್ಯೇ ಮಾನವರ್ಜಿತಃ ।
ಅಪುಮಾನಿತಿ ವಿಖ್ಯಾತಃ ಷಂಡವದ್ ವಿಚರಿಷ್ಯಸಿ ॥೭೫॥

ನಿನ್ನ ತಂದೆಯ ಅನುಮತಿಯನ್ನು ಪಡೆದು ಸ್ವತಃ ನಿನ್ನ ಮನೆಯ ಬಾಗಿಲಿಗೆ ಬಂದ ಕಾಮವಶಳಾದ ನನ್ನನ್ನು ಸ್ವೀಕರಿಸುತ್ತಿಲ್ಲವಾದ ಕಾರಣ ಪಾರ್ಥನೇ ನೀನು ಸ್ತ್ರೀಯರ

ಮಧ್ಯದಲ್ಲಿ ಮಾನವರ್ಜಿತನಾಗಿ ನರ್ತಕನಾಗಿ ನಪುಂಸಕನೆಂದು ಪ್ರಖ್ಯಾತನಾಗಿ ನಪುಂಸಕನಂತೆ ಸಂಚರಿಸುವಿ.

ವೈಶಂಪಾಯನಃ

ಏವಂ ದತ್ತ್ವಾ ತಮರ್ಜುನೇ ಶಾಪಂ ಸ್ಫುರಿತೋಷ್ಠೀ ಶ್ವಸಂತ್ಯಪಿ ।
ಪುನಃ ಪ್ರತ್ಯಾಗತಾ ಶೀಘ್ರಮುರ್ವಶೀ ಸ್ವಂ ನಿವೇಶನಮ್ ॥೭೬॥

ಪಾರ್ಥೋಽಪಿ ಲಬ್ಧ್ವಾ ಶಾಪಂ ತಂ ತಾಂ ನಿಶಾಂ ದುಃಖಿತೋಽವಸತ್ ।
ವಿವಕ್ಷುಶ್ಚಿತ್ರಸೇನಾಯ ಪ್ರಾತಃ ಸರ್ವಮಹೃಷ್ಟವತ್ ॥೭೭॥

ಹೀಗೆ ಅರ್ಜುನನಿಗೆ ಶಾಪವನ್ನು ಕೊಟ್ಟುನಿಟ್ಟುಸಿರನ್ನು ಬಿಡುತ್ತಾ ಅವಳ ತುಟಿಗಳು ಅದುರುತ್ತಿರಲು ಶೀಘ್ರವಾಗಿ ಉರ್ವಶಿಯು ತನ್ನ ಮನೆಗೆ ಹಿಂದಿರುಗಿದಳು. ಅರ್ಜುನನಾದರೂ ಕೂಡ ಆ ಶಾಪವನ್ನು ಪಡೆದು ಪ್ರಾತಃಕಾಲದಲ್ಲಿ ಚಿತ್ರಸೇನನಿಗೆ ಎಲ್ಲವನ್ನೂ ಹೇಳುತ್ತೇನೆ ಎಂದು ಚಿಂತಿಸಿ ಅಸಂತುಷ್ಟನಂತೆ ದುಃಖಿತನಾಗಿಯೇ ಆ ರಾತ್ರಿಯನ್ನು ಕಳೆದನು.

ತತಃ ಪ್ರಭಾತೇ ವಿಮಲೇ ಗಂಧರ್ವಸ್ಯ ಯಥಾತಥಮ್ ।
ನಿವೇದಯಾಮಾಸ ತದಾ ಚಿತ್ರಸೇನಸ್ಯ ಫಲ್ಗುನಃ ॥೭೮॥

ಅನಂತರ ಸುಂದರವಾದ ಪ್ರಾತಃಕಾಲವಾಗುತ್ತಿರಲು ಅರ್ಜುನನು ಚಿತ್ರಸೇನಗಂಧರ್ವನಿಗೆ ನಡೆದುದೆಲ್ಲವನ್ನೂ ಯಥಾರ್ಥವಾಗಿ ನಿವೇದಿಸಿದನು.

ತಚ್ಚ ಸರ್ವಂ ಯಥಾವೃತ್ತಂ ಶಾಪಂ ಚೈವ ಯಥಾತಥಮ್ ।
ಆವೇದಯಚ್ಚ ಶಕ್ರಸ್ಯ ಚಿತ್ರಸೇನೋಽಪಿ ಸರ್ವಶಃ ॥೭೯॥

ಚಿತ್ರಸೇನನೂ ಸಹ ನಡೆದ ಎಲ್ಲಾ ಘಟನೆಯನ್ನೂ ಮತ್ತು ಶಾಪದ ವೃತ್ತಾಂತವನ್ನೂ ಇಂದ್ರನಿಗೆ ಯಥಾರ್ಥವಾಗಿ ನಿವೇದಿಸಿದನು.

ತದಾ ತ್ವಾನಾಯ್ಯ ತನಯಂ ವಿವಿಕ್ತೇ ಹರಿವಾಹನಃ ।
ಸಾಂತ್ವಯಿತ್ವಾ ಶುಭೈರ್ವಾಕ್ಯೈಃ ಸ್ಮಯಮಾನೋಽಭ್ಯಭಾಷತ ॥೮೦॥

ಆಗ ಹರಿವಾಹನನಾದ ಇಂದ್ರನು ತನ್ನ ತನಯನಾದ ಅರ್ಜುನನನ್ನು ಏಕಾಂತದಲ್ಲಿ ಕರೆಸಿ ಸಮಾಧಾನಪಡಿಸಿ ನಗುತ್ತಾ ಶುಭವಾದ ವಾಕ್ಯಗಳನ್ನು ಮಾತನಾಡಿದನು.

ಸುಪುತ್ರಾऽದ್ಯ ಪೃಥಾ ತಾತ ತ್ವಯಾ ಪುರುಷಸತ್ತಮ ।
ಋಷಯೋऽಪಿ ಹಿ ಧೈರ್ಯೇಣ ಜಿತಾ ವೈ ತೇ ಮಹಾಭುಜ ॥೮೧॥

ಎಲೈ ಪುರುಷಶ್ರೇಷ್ಠನೇ! ನಿನ್ನಂತಹ ಪುತ್ರನನ್ನು ಪಡೆದ ಕುಂತಿಯು ಸುಪುತ್ರಳಾದವಳು. ಎಲೈ ಮಹಾಭುಜನೇ, ನಿನ್ನ ಮನೋಧೈರ್ಯದಿಂದ ಋಷಿಗಳೂ ಜಿತರಾಗಿದ್ದಾರೆ.

ಯಂ ಚ ದತ್ತವತೀ ಶಾಪಮುರ್ವಶೀ ತವ ಮಾನದ ।
ಸ ಚಾಪಿ ತೇऽರ್ಥಕೃತ್ತಾತ ಸಾಧಕಶ್ಚ ಭವಿಷ್ಯತಿ ॥೮೨॥

ಎಲೈ ಮಾನದನೇ, ನಿನಗೆ ಊರ್ವಶಿಯು ಏನು ಶಾಪವನ್ನು ಕೊಟ್ಟಿದ್ದಾಳೆಯೋ ಅದು ನಿನಗೆ ಶ್ರೇಯಸ್ಸನ್ನು ಉಂಟುಮಾಡಿ ಶುಭವನ್ನೇ ತಂದು ಕೊಡುತ್ತದೆ.

ಅಜ್ಞಾತವಾಸೋ ವಸ್ತವ್ಯೋ ಭವದ್ಭಿರ್ಭೂತಳೇऽನಘ ।
ವರ್ಷೇ ತ್ರಯೋದಶೇ ವೀರ ತತ್ರ ತ್ವಂ ಗಮಯಿಷ್ಯಸಿ ॥೮೩॥

ತೇನ ನರ್ತಕವೇಷೇಣ ಅಪುಂಸಾऽऽತ್ಮೇನ ವೈ ಭವ ।
ವರ್ಷಮೇಕಂ ವಿಹೃತ್ಯೈವಂ ತತಃ ಪುಂಸ್ತ್ವಮವಾಪ್ಸ್ಯಸಿ ॥೮೪॥

ಅನಘನೇ! ವೀರನೇ! ನೀನು ಭೂಮಿಯಲ್ಲಿ ಒಂದು ವರ್ಷ ಅಜ್ಞಾತವಾಸವನ್ನು ಮಾಡಬೇಕು. ಅಲ್ಲಿ ಹದಿಮೂರನೆಯ ವರ್ಷದಲ್ಲಿ ನೀನು ಈ ಶಾಪವನ್ನು ಕಳೆಯುತ್ತೀಯೆ. ನೀನು ನರ್ತಕವೇಷವನ್ನು ಧರಿಸಿ ನಪುಂಸಕವೇಷವನ್ನು ಧರಿಸುವವನಾಗು. ಒಂದು ವರ್ಷದ ಕಾಲ ಹೀಗೆ ವಿಹಾರಮಾಡಿ ಅನಂತರ ಪುನಃ ಪುರುಷತ್ವವನ್ನು ಪಡೆಯುವಿ.

ವೈಶಂಪಾಯನಃ

ಏವಮುಕ್ತಸ್ತು ಶಕ್ರೇಣ ಫಲ್ಗುನಃ ಪರವೀರಹಾ ।
ಮುದಂ ಪರಮಿಕಾಂ ಲೇಭೇ ನ ಚ ಶಾಪಮಚಿಂತಯತ್ ॥೮೫॥

ಇಂದ್ರನಿಂದ ಹೀಗೆ ಹೇಳಲ್ಪಟ್ಟ ಪರವೀರಘಾತಕನಾದ ಅರ್ಜುನನು ಬಹಳ ಸಂತೋಷವನ್ನು ಹೊಂದಿದನು. ಮತ್ತು ಶಾಪವನ್ನು ಕುರಿತು ಚಿಂತಿಸಲೇ ಇಲ್ಲ.

ಚಿತ್ರಸೇನೇನ ಸಹಿತೋ ಗಂಧರ್ವೇಣ ಯಶಸ್ವಿನಾ ।
ಕೃತವಾನ್ ಶಕ್ರಸದನೇ ಪಾಂಡುಪುತ್ರೋ ಧನಂಜಯಃ ।
ನೃತ್ತಂ ಗೇಯಂ ಚ ವಿವಿಧಂ ಶಿಕ್ಷಯಾಮಾಸ ಪಾಂಡವಃ ॥೮೬॥

ಕೀರ್ತಿವಂತನಾದ ಚಿತ್ರಸೇನಗಂಧರ್ವನಿಂದ ಪುಣ್ಯಶಾಲಿಯಾದ ಪಾಂಡುಪುತ್ರನಾದ ಧನಂಜಯನು ಇಂದ್ರನ ಮನೆಯಲ್ಲಿ ವಿವಿಧವಾದ ನೃತ್ತ ಮತ್ತು ಗಾನಗಳನ್ನು ಅಭ್ಯಾಸಮಾಡಿದನು.

ಯ ಇಮಾಂ ಶೃಣುಯಾನ್ನಿತ್ಯಂ ಧೃತಿಂ ಪಾಂಡುಸುತಸ್ಯ ವೈ ।
ನ ತಸ್ಯ ಕಾಮಃ ಕಾಮೇಷು ಪಾಪಕೇಷು ಪ್ರವರ್ತತೇ ॥೮೭॥

ಯಾವನು ಪಾಂಡುಪುತ್ರನ ಈ ಧೈರ್ಯದ ಕಥೆಯನ್ನು ನಿತ್ಯವೂ ಕೇಳುತ್ತಾನೋ ಅವನ ಕಾಮವು ನಿಷಿದ್ಧವಾದ ಕಾಮ್ಯ ವಸ್ತುಗಳಲ್ಲಿ ಪ್ರವರ್ತಿಸುವುದಿಲ್ಲ.

ಯ ಇದಮಮರವರಾತ್ಮಜಸ್ಯ ಘೋರಾಂ
ಧೃತಿಮಚಲಾಂ ಚ ಧನಂಜಯಸ್ಯ ಶ್ರುತ್ವಾ ।
ವ್ಯಪಗತಭಯದಂಭರಾಗದೋಷಾಃ
ತ್ರಿದಿವಗತಾ ರಮಯಂತಿ ಮಾನವೇಂದ್ರಾಃ ॥೮೮॥

ಯಾರು ಸುರೇಂದ್ರಪುತ್ರನಾದ ಧನಂಜಯನ ಈ ಧೈರ್ಯವನ್ನೂ ಕಾಮಜಯವನ್ನೂ ಮತ್ತು ಶಾಪಪ್ರಸಂಗವನ್ನೂ ಕೇಳುತ್ತಾರೋ ಅಂತಹ ಮಾನವೇಂದ್ರರು ಭಯ ಡಂಭ ರಾಗ ದೋಷಗಳನ್ನು ಕಳೆದುಕೊಂಡು ಸ್ವರ್ಗವನ್ನು ಹೊಂದಿ ಸುಖವನ್ನು ಪಡುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತ್ವಾರಿಂಶೋऽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

## ನಲವತ್ತೊಂದನೆಯ ಅಧ್ಯಾಯ

(ಲೋಮಶರ ಸ್ವರ್ಗಾಗಮನ. ಅರ್ಜುನನ ಸ್ವರೂಪವನ್ನು ತಿಳಿಸಿ ಇಂದ್ರನಿಂದ ಲೋಮಶರಿಗೆ ಕಾಮ್ಯಕವನಕ್ಕೆ ಹೋಗುವಂತೆ ಆದೇಶ.)

(ಗಮನಿಸಿ:- ೪೦ನೆಯ ಅಧ್ಯಾಯದಲ್ಲಿ ಮೊದಲ ಎಂಟುಶ್ಲೋಕಗಳು ೪೧ನೆಯ ಅಧ್ಯಾಯದಲ್ಲೂ ಪುನರುಕ್ತವಾಗಿವೆ. ಒಂದೆರಡುಶಬ್ದಗಳ ವ್ಯತ್ಯಾಸ ಬಿಟ್ಟರೆ ಉಳಿದ ವ್ಯತ್ಯಾಸವಿಲ್ಲ. ಆದರೆ ಎಲ್ಲಾ ಮುದ್ರಿತವಾದ ಪುಸ್ತಕಗಳಲ್ಲಿಯೂ ಇದೇ ಶ್ಲೋಕಗಳು ಮತ್ತೆ ಹೇಳಲ್ಪಟ್ಟಿವೆ.)

**ವೈಶಂಪಾಯನಃ**

ತತೋ ದೇವಾಃ ಸಗಂಧರ್ವಾಃ ಸಮಾದಾಯಾರ್ಘ್ಯಮುತ್ತಮಮ್ ।
ಶಕ್ರಸ್ಯ ಮತಮಾಜ್ಞಾಯ ಪಾರ್ಥಮಾನರ್ಚುರಂಜಸಾ ॥೧॥

ಅನಂತರ ಗಂಧರ್ವರಿಂದ ಕೂಡಿದ ದೇವತೆಗಳು ಇಂದ್ರನ ಅಭಿಪ್ರಾಯವನ್ನು ತಿಳಿದು ಶ್ರೇಷ್ಠವಾದ ಅರ್ಘ್ಯವನ್ನು ತೆಗೆದುಕೊಂಡು ಬಂದು ಅರ್ಜುನನನ್ನು ಚೆನ್ನಾಗಿ ಅರ್ಚಿಸಿದರು.

ಪಾದ್ಯಮಾಚಮನೀಯಂ ಚ ಪ್ರತಿಗೃಹ್ಯ ನೃಪಾತ್ಮಜಮ್ ।
ಪ್ರವೇಶಯಾಮಾಸುರಥೋ ಪುರಂದರನಿವೇಶನಮ್ ॥೨॥

ರಾಜಪುತ್ರನಾದ ಅವನಿಗೆ ಪಾದ್ಯ ಮತ್ತು ಆಚಮನೀಯಗಳನ್ನು ಕೊಟ್ಟು ಅನಂತರ ಇಂದ್ರಭವನಕ್ಕೆ ಪ್ರವೇಶವನ್ನು ಮಾಡಿಸಿದರು.

ಏವಂ ಸಂಪೂಜಿತೋ ಜಿಷ್ಣುರುವಾಸ ಭವನೇ ಪಿತುಃ ।
ಉಪಶಿಕ್ಷನ್ ಮಹಾಸ್ತ್ರಾಣಿ ಸಸಂಹಾರಾಣಿ ಪಾಂಡವಃ ॥೩॥

ಹೀಗೆ ಪೂಜಿಸಲ್ಪಟ್ಟ ಆ ಪಾಂಡುಪುತ್ರನಾದ ಅರ್ಜುನನು ತನ್ನ ತಂದೆಯಾದ ಇಂದ್ರನ ಮನೆಯಲ್ಲಿ ಮಹಾಸ್ತ್ರಗಳನ್ನೂ ಅವುಗಳ ಉಪಸಂಹಾರವನ್ನೂ ಕಲಿಯುತ್ತಾ ವಾಸಮಾಡಿದನು.

ಶಕ್ರಸ್ಯ ಹಸ್ತಾದ್ ದಯಿತಂ ವಜ್ರಮಸ್ತ್ರಂ ದುರುತ್ಸಹಮ್ ।
ಅಶನಿಂ ಚ ಮಹಾನಾದಾಂ ಮೇಘಬರ್ಹಿಣಲಕ್ಷಣಾಮ್ ॥೪॥

ಇಂದ್ರನ ಹಸ್ತದಿಂದ ಇಂದ್ರನಿಗೆ ಪ್ರಿಯವಾದ ಯಾರೂ ಸಹಿಸಲು ಸಾಧ್ಯವಿಲ್ಲದ ವಜ್ರಾಸ್ತ್ರವನ್ನೂ ಮಹಾನಾದವುಳ್ಳ ಮೇಘ ಮತ್ತು ನವಿಲುಗಳ ಬಣ್ಣವನ್ನು ಹೊಂದಿದ ಅಶನಿ ಎಂಬ ಅಸ್ತ್ರವನ್ನೂ ಸ್ವೀಕರಿಸಿದನು.

ಗೃಹೀತಾಸ್ತ್ರಸ್ತು ಕೌಂತೇಯೋ ಭ್ರಾತೄನ್ ಸಸ್ಮಾರ ಪಾಂಡವಃ ।
ಪಂಚಾಬ್ದಮವಸತ್ ತತ್ರ ಪಾಕಶಾಸನಶಾಸನಾತ್ ॥೫॥

ಕುಂತೀಪುತ್ರನಾದ ಪಾಂಡವನಾದ ಅರ್ಜುನನು ಅಸ್ತ್ರಗಳನ್ನು ಸಂಪಾದಿಸಿ ತನ್ನ ಸಹೋದರರನ್ನು ಸ್ಮರಿಸಿದನು. ಅವನು ಇಂದ್ರನ ಆಜ್ಞೆಯಂತೆ ಸ್ವರ್ಗದಲ್ಲಿ ಐದು ವರ್ಷಗಳ ಕಾಲ ವಾಸಮಾಡಿದನು.

ತತಃ ಶಕ್ರೋಽಬ್ರವೀತ್ ಪಾರ್ಥಂ ಕೃತಾಸ್ತ್ರಂ ಕಾಲ ಆಗತೇ ।
ನೃತ್ತಂ ಗೀತಂ ಚ ವಾದ್ಯಂ ಚ ಚಿತ್ರಸೇನಾದವಾಪ್ನುಹಿ ॥೬॥

ಅಸ್ತ್ರವಿದ್ಯೆಯನ್ನು ಪಡೆದ ಅರ್ಜುನನನ್ನು ಕುರಿತು ಇಂದ್ರನು ಒಂದು ಯೋಗ್ಯವಾದ ಕಾಲದಲ್ಲಿ ನೀನು ಚಿತ್ರಸೇನನಿಂದ ನೃತ್ಯ ಗೀತಾ ಮತ್ತು ವಾದ್ಯ ವಿದ್ಯೆಗಳನ್ನು ಕಲಿ ಎಂದು ಹೇಳಿದನು.

ವಾದಿತ್ರಂ ದೈವವಿಹಿತಂ ತ್ರಿಲೋಕೇ ಯನ್ನ ವಿದ್ಯತೇ ।
ತದಾಜ್ಞಾಯ ಚ ಕೌಂತೇಯ ಶ್ರೇಯೋ ವೈ ತೇ ಭವಿಷ್ಯತಿ ॥೭॥

ಎಲೈ ಕೌಂತೇಯನೇ! ದೇವಲೋಕದಲ್ಲಿರುವ ವಾದಿತ್ರವು ಮೂರು ಲೋಕಗಳಲ್ಲಿಯೂ ಇಲ್ಲ. ನೀನು ಅದನ್ನು ಸಂಪಾದಿಸಿದರೆ ನಿನಗೆ ಶ್ರೇಯಸ್ಸು ಉಂಟಾಗುವುದು.

ಸಖಾಯಂ ಪ್ರದದೌ ಚಾಸ್ಯ ಚಿತ್ರಸೇನಂ ಪುರಂದರಃ ।
ಸ ತೇನ ಸಹ ಸಂಗಮ್ಯ ರೇಮೇ ಪಾರ್ಥೋ ಧನಂಜಯಃ ॥೮॥

ಪುರಂದರನು ಅರ್ಜುನನಿಗೆ ಚಿತ್ರಸೇನ ಎಂಬ ಗಂಧರ್ವನನ್ನು ಸ್ನೇಹಿತನನ್ನಾಗಿ ಕೊಟ್ಟನು. ಕುಂತೀ ಪುತ್ರನಾದ ಧನಂಜಯನು ಅವನನ್ನು ಪಡೆದು ಅವನ ಜೊತೆಯಲ್ಲಿ ಸಂತೋಷದಿಂದಿದ್ದನು.

ಕದಾಚಿದಟಮಾನಸ್ತು ಮಹರ್ಷಿರಥ ಲೋಮಶಃ ।
ಜಗಾಮ ಶಕ್ರಭವನಂ ಪುರಂದರದಿದೃಕ್ಷಯಾ ॥೯॥

ಅನಂತರ ಒಮ್ಮೆ ಮಹರ್ಷಿಗಳಾದ ಲೋಮಶರು ಸಂಚಾರಮಾಡುತ್ತಾ ಇಂದ್ರನನ್ನು ನೋಡಲು ಬಯಸಿ ಇಂದ್ರಭವನಕ್ಕೆ ಬಂದರು.

ಸ ಸಮೇತ್ಯ ನಮಸ್ಕೃತ್ಯ ದೇವರಾಜಂ ಮಹಾಮುನಿಃ ।
ದದರ್ಶಾರ್ಧಾಸನಗತಂ ಪಾಂಡವಂ ವಾಸವಸ್ಯ ಹ ॥೧೦॥

ಆ ಮಹಾಮುನಿಗಳು ದೇವರಾಜನ ಸಮೀಪಕ್ಕೆ ಬಂದು ನಮಸ್ಕರಿಸಿ ಇಂದ್ರನ ಅರ್ಧಾಸನದಲ್ಲಿ ಕುಳಿತಿದ್ದ ಪಾಂಡುಪುತ್ರನಾದ ಅರ್ಜುನನನ್ನು ನೋಡಿದರು.

ತತಃ ಶಕ್ರಾಭ್ಯನುಜ್ಞಾತ ಆಸನೇ ಚಾಸ್ತತೋತ್ತರೇ ।
ನಿಷಸಾದ ಮುನಿಶ್ರೇಷ್ಠಃ ಪೂಜ್ಯಮಾನೋ ಮಹರ್ಷಿಭಿಃ ॥೧೧॥

ಅನಂತರ ಇಂದ್ರನ ಅಪ್ಪಣೆಯನ್ನು ಪಡೆದು ಒಳ್ಳೆಯ ಹಾಸನ್ನು ಹಾಸಿದ ಆಸನದಲ್ಲಿ ಆ ಮುನಿಶ್ರೇಷ್ಠರು ಮಹರ್ಷಿಗಳಿಂದ ಪೂಜಿತರಾಗಿ ಕುಳಿತುಕೊಂಡರು.

ತಸ್ಯ ದೃಷ್ಟ್ವಾऽಭವದ್‌ಬುದ್ಧಿಃ ಪಾರ್ಥಮಿಂದ್ರಾಸನೇ ಸ್ಥಿತಮ್ ।
ಕಥಂ ನು ಕ್ಷತ್ರಿಯಃ ಪಾರ್ಥಃ ಶಕ್ರಾಸನಮವಾಪ್ತವಾನ್ ॥೧೨॥

ಇಂದ್ರಾಸನದಲ್ಲಿ ಕುಳಿತಿದ್ದ ಪಾರ್ಥನನ್ನು ನೋಡಿ ಅವರಿಗೆ ಕ್ಷತ್ರಿಯನಾದ ಅರ್ಜುನನು ಹೇಗೆ ಶಕ್ರಾಸನವನ್ನು ಹೊಂದಿದ್ದಾನೆ ಎಂಬ ಬುದ್ಧಿಯುಂಟಾಯಿತು.

ಕಿಂ ತಸ್ಯ ಸುಕೃತಂ ಕರ್ಮ ಲೋಕಾ ವಾ ಕೇ ವಿನಿರ್ಜಿತಾಃ ।
ಯ ಏವಮುಪಸಂಪ್ರಾಪ್ತಃ ಸ್ಥಾನಂ ದೇವನಮಸ್ಕೃತಮ್ ॥೧೩॥

ದೇವತೆಗಳಿಂದಲೂ ನಮಸ್ಕೃತವಾದ ಸ್ಥಾನವನ್ನು ಯಾವ ಅರ್ಜುನನು ಹೀಗೆ ಪಡೆದಿದ್ದಾನೆಯೋ ಅವನು ಮಾಡಿದ ಸುಕೃತವಾದರೂ ಏನು? ಅಥವಾ ಯಾವ ಲೋಕಗಳು ಅವನಿಂದ ಜಯಿಸಲ್ಪಟ್ಟಿವೆ. (ಎಂದು ಯೋಚಿಸಿದರು.)

ತಸ್ಯ ವಿಜ್ಞಾಯ ಸಂಕಲ್ಪಂ ಶಕ್ರೋ ವೃತ್ರನಿಷೂದನಃ ।
ಲೋಮಶಂ ಪ್ರಹಸನ್ ವಾಕ್ಯಮಿದಮಾಹ ಶಚೀಪತಿಃ ॥೧೪॥

ವೃತ್ರನಿಷೂದನನಾದ ಶಚೀಪತಿಯಾದ ಇಂದ್ರನು ಅವರ ಮನಸ್ಸಿನ ಸಂಕಲ್ಪವನ್ನು ತಿಳಿದು ನಗುತ್ತಾ ಲೋಮಶರನ್ನು ಕುರಿತು ಹೀಗೆ ಮಾತನಾಡಿದನು.

ಬ್ರಹ್ಮರ್ಷೇ ಶ್ರೂಯತಾಂ ಯತ್ತೇ ಮನಸ್ಯೈತದ್ ವಿವಕ್ಷಿತಮ್ ।
ನಾಯಂ ಕೇವಲಮತ್ಯೋ೯ಽಭೂತ್ ಕ್ಷತ್ರಿಯತ್ವಮುಪಾಗತಃ ॥೧೫॥

ಬ್ರಹ್ಮರ್ಷಿಗಳೇ, ನಿಮ್ಮ ಮನಸ್ಸಿನಲ್ಲಿ ಕೇಳಬೇಕೆಂದಿರುವ ಈ ವಿಷಯವನ್ನು ಕೇಳಿ. ಇವನು ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ ಒಬ್ಬ ಸಾಮಾನ್ಯ ಮನುಷ್ಯನಲ್ಲ.

ಮಹರ್ಷೇ ಮಮ ಪುತ್ರೋಽಯಂ ಕುಂತ್ಯಾ ಜಾತೋ ಮಹಾಭುಜಃ ।
ಅಸ್ತ್ರಹೇತೋರಿಹ ಪ್ರಾಪ್ತಃ ಕಸ್ಮಾಚ್ಚಿತ್ ಕಾರಣಾಂತರಾತ್ ॥೧೬॥

ಅಹೋ ನೈನಂ ಭವಾನ್ ವೇತ್ತಿ ಪುರಾಣಮೃಷಿಸತ್ತಮಮ್ ।
ಶೃಣು ಮೇ ವದತೋ ಬ್ರಹ್ಮನ್ ಯೋಽಯಂ ಯಚ್ಚಾಸ್ಯ ಕಾರಣಮ್ ॥

ನರನಾರಾಯಣಾವೇತೌ ಪುರಾಣಾವೃಷಿಸತ್ತಮೌ ।
ತಾವಿಮಾವಭಿಜಾನೀಹಿ ಹೃಷೀಕೇಶಧನಂಜಯೌ ॥೧೮॥

ಸ ನ ಶಕ್ಯಃ ಸುರೈರ್ದ್ರಷ್ಟುಮೃಷಿಭಿರ್ವಾ ಮಹಾತ್ಮಭಿಃ ।
ತದಾಶ್ರಮಪದಂ ಪುಣ್ಯಂ ಬದರೀನಾಮ ವಿಶ್ರುತಮ್ ॥೧೯॥

ಮಹರ್ಷಿಗಳೇ, ಇವನು ನನ್ನ ಪುತ್ರ. ಕುಂತಿಯಲ್ಲಿ ಜನಿಸಿದ ಮಹಾಭುಜ. ಯಾವುದೋ ಕಾರಣಾಂತರದಿಂದ ಅಸ್ತ್ರವಿದ್ಯೆಯನ್ನು ಸಂಪಾದಿಸಲು ಇಲ್ಲಿಗೆ ಬಂದಿದ್ದಾನೆ. ಪುರಾತನ ಋಷಿಶ್ರೇಷ್ಠನಾದ ಇವನನ್ನು ನೀವು ತಿಳಿದಿಲ್ಲ. ಇದು ಆಶ್ಚರ್ಯ. ಬ್ರಾಹ್ಮಣರೇ ಇವನು ಯಾರು ಇವನ ಕಾರಣವೇನು ಎಲ್ಲವನ್ನು ನಾನು ಹೇಳುತ್ತೇನೆ ಕೇಳಿ. ಇವರಿಬ್ಬರೂ ಪುರಾಣ ಋಷಿಶ್ರೇಷ್ಠರಾದ ನರನಾರಾಯಣರೆಂದು ತಿಳಿದುಕೊಳ್ಳಿ. ಕೃಷ್ಣಾರ್ಜುನರಾದ ಬದರಿಯೆಂದು ಪ್ರಖ್ಯಾತವಾದ ಪವಿತ್ರವಾದ ಆಶ್ರಮವು ಮಹಾತ್ಮರಾದ ಋಷಿಗಳಿಂದಾಗಲೀ ಅಥವಾ ದೇವತೆಗಳಿಂದಾಗಲೀ ನೋಡಲು ಸಾಧ್ಯವಿಲ್ಲದುದು.

ಸ ನಿವಾಸೋಽಭವದ್ ವಿಪ್ರ ವಿಷ್ಣೋರ್ಜಿಷ್ಣೋಸ್ತಥೈವ ಚ ।
ಯತ್ರ ಪ್ರವವೃತೇ ಗಂಗಾ ಸಿದ್ಧಚಾರಣಸೇವಿತಾ ॥೨೦॥

ಬ್ರಾಹ್ಮಣರೇ ಸಿದ್ಧಚಾರಣಸೇವಿತಳಾದ ಗಂಗೆಯು ಎಲ್ಲಿಂದ ಹರಿದಳೋ ಆ ಸ್ಥಳವು (ಈಕೃಷ್ಣಾರ್ಜುನರಾದ) ವಿಷ್ಣುವಿಗೂ ಮತ್ತು ಜಿಷ್ಣುವಿಗೂ ನಿವಾಸಸ್ಥಾನವಾಗಿದ್ದಿತು.

ತೌ ಮನ್ನಿಯೋಗಾದ್ ಬ್ರಹ್ಮರ್ಷೇ ಕ್ಷಿತೌ ಜಾತೌ ಮಹಾದ್ಯುತೀ ।
ಭೂಮೇರ್ಭಾರಾವತರಣಂ ಮಹಾವೀರ್ಯೌ ಕರಿಷ್ಯತಃ ॥೨೧॥

ಎಲೈ ಬ್ರಹ್ಮರ್ಷಿಗಳೇ, ಅವರಿಬ್ಬರೂ ನನ್ನ ನಿಯೋಗದಂತೆ ಭೂಮಿಯಲ್ಲಿ ಮಹಾಕಾಂತಿಯುಕ್ತರಾಗಿ ಜನಿಸಿದ್ದಾರೆ. ಮಹಾಪರಾಕ್ರಮಿಗಳಾದ ಅವರು ಭೂಮಿಯಲ್ಲಿ ಭೂಭಾರವನ್ನು ಹರಣಮಾಡುವರು.

ಉದ್ಧತಾ ಹ್ಯಸುರಾಃ ಕೇಚಿನ್ನಿವಾತಕವಚಾ ಇತಿ ।
ವಿಪ್ರಿಯೇಷ್ವಾಸ್ಥಿತಾಽಸ್ಮಾಕಂ ವರದಾನೇನ ದರ್ಪಿತಾಃ ॥೨೨॥

ನಿವಾತಕವಚರೆಂಬ ಉದ್ಧತರಾದ ಅಸುರರು ವರದಾನದಿಂದ ದರ್ಪಿತರಾಗಿ ನಮಗೆ ವಿರೋಧಮಾಡುವುದರಲ್ಲಿ ತೊಡಗಿದ್ದಾರೆ.

ಅರ್ಥಯಂತೇ ಸುರಾನ್ ಹಂತುಂ ಬಲದರ್ಪಸಮನ್ವಿತಾಃ ।
ದೇವಾನ್ ನ ಗಣಯಂತೇ ಚ ತಥಾ ದತ್ತವರಾ ಹಿ ತೇ ॥೨೩॥

ಬಲದರ್ಪಗಳಿಂದ ಸಮನ್ವಿತರಾದ ಅವರು ದೇವತೆಗಳನ್ನು ಕೊಲ್ಲಲು ಆಶಿಸುತ್ತಿದ್ದಾರೆ. ಅವರು ದೇವತೆಗಳನ್ನೂ ಲೆಕ್ಕಿಸುವುದಿಲ್ಲ. ಏಕೆಂದರೆ ಅಂತಹ ವರಗಳನ್ನು ಪಡೆದಿದ್ದಾರೆ.

ಪಾತಾಳವಾಸಿನೋ ರೌದ್ರಾಃ ದನೋಃ ಪುತ್ರಾ ಮಹಾಬಲಾಃ ।
ಸರ್ವದೇವಸಹಾಯೋಽಪಿ ನಾಹಂ ಯೋಧಯಿತುಂ ಕ್ಷಮಃ ॥೨೪॥

ದನುವಿನ ಮಕ್ಕಳಾದ ಅವರೆಲ್ಲರೂ ಮಹಾಬಲಿಷ್ಠರಾದವರು ಮತ್ತು ಕ್ರೂರರಾದವರು. ಅವರು ಪಾತಾಳದಲ್ಲಿ ವಾಸಿಸುತ್ತಾರೆ. ಎಲ್ಲ ದೇವತೆಗಳ ಸಹಾಯವಿದ್ದರೂ ನಾನು ಅವರ ಜೊತೆಯಲ್ಲಿ ಯುದ್ಧ ಮಾಡಲಾರೆ.

ಯೋಽಸೌ ಭೂಮಿಗತಃ ಶ್ರೀಮಾನ್ ವಿಷ್ಣುರ್ಮಧುನಿಷೂದನಃ ।
ಕಪಿಲೋ ನಾಮ ದೇವೋಽಸೌ ಭಗವಾನಜಿತೋ ಹರಿಃ ॥೨೫॥

ಯೇನ ಪೂರ್ವಂ ಮಹಾತ್ಮಾನಃ ಖನಮಾನಾ ರಸಾತಳಮ್ ।
ದರ್ಶನಾದೇವ ನಿಹತಾಃ ಸಗರಸ್ಯಾತ್ಮಜಾ ವಿಭೋ ॥೨೬॥

ತೇನ ಕಾರ್ಯಂ ಮಹತ್ ಬ್ರಹ್ಮನ್ನಸ್ಮಾಕಂ ಹಿ ದ್ವಿಜೋತ್ತಮ ।
ಪಾರ್ಥೇನ ಚ ಮಹಾಯುದ್ಧೇ ಸಮೇತಾಭ್ಯಾಮಸಂಶಯಮ್ ॥೨೭॥

ಯಾವ ಮಧುಸೂದನನಾದ ಕಾಂತಿಯುಕ್ತನಾದ ಕಪಿಲನಾಮಕನಾದ ಅಜಿತನಾಮಕನಾದ ಭಗವಂತನಾದ ಹರಿ ಇದ್ದಾನೆಯೋ ಅವನೇ ಕೃಷ್ಣರೂಪದಿಂದ ಭೂಮಿಗೆ ಬಂದಿದ್ದಾನೆ. ಹಿಂದೆ ರಸಾತಳವನ್ನು ಅಗೆಯುತ್ತಿದ್ದ ಮಹಾಪ್ರಯತ್ನ ಶೀಲರಾದ ಸಗರನ ಮಕ್ಕಳು ಅವನ ದರ್ಶನಮಾತ್ರದಿಂದಲೇ ಹತರಾಗಿದ್ದಾರೆ. ಸಮರ್ಥರಾದ ದ್ವಿಜೋತ್ತಮರೇ ಬ್ರಹ್ಮರ್ಷಿಗಳೇ, ಅವನು ಮತ್ತು ಅರ್ಜುನನು ಸೇರಿ ಮಹಾಯುದ್ಧದಲ್ಲಿ ನಿಸ್ಸಂಶಯವಾಗಿ ನಮಗೆ ದೊಡ್ಡ ಹಿತವನ್ನು ಮಾಡುವವರಿದ್ದಾರೆ.

ಅಯಂ ತೇಷಾಂ ಸಮಸ್ತಾನಾಂ ಶಕ್ತಃ ಪ್ರತಿನಿವಾರಣೇ ।
ತಾನ್ ನಿಹತ್ಯ ರಣೇ ಶೂರಃ ಪುನರ್ಯಾಸ್ಯತಿ ಮಾನುಷಾನ್ ॥೨೮॥

ಭವಾಂಶ್ಚಾಸ್ಮನ್ನಿಯೋಗೇನ ಯಾತು ತಾವನ್ಮಹೀತಳಮ್ ।

ಈ ಅರ್ಜುನನು ಅವರೆಲ್ಲರನ್ನೂ ತಡೆಯಲು ಸಮರ್ಥನಾಗಿದ್ದಾನೆ. ಇವನು ಅವರೆಲ್ಲರನ್ನೂ ಸಂಹರಿಸಿ ಪುನಃ ಮನುಷ್ಯಲೋಕಕ್ಕೆ ಹೋಗುವನು. ನೀವು ಸಹ ನನ್ನ ಆದೇಶದಂತೆ ಭೂಮಿಗೆ ಹೋಗಿ ಕಾಮ್ಯಕವನದಲ್ಲಿ ವಾಸಮಾಡುತ್ತಿರುವ ವೀರನಾದ ಯುಧಿಷ್ಠಿರನನ್ನು ನೋಡುವಿರಿ.(ನೋಡಿ)

ಸ ವಾಚ್ಯೋ ಮಮ ಸಂದೇಶಾದ್ ಧರ್ಮಾತ್ಮಾ ಸತ್ಯಸಂಗರಃ ।
ನೋತ್ಕಂಠಾ ಫಲ್ಗುನೇ ಕಾರ್ಯಾ ಕೃತಾಸ್ತ್ರಃ ಶೀಘ್ರಮೇಷ್ಯತಿ ॥೩೦॥

ಧರ್ಮಾತ್ಮನೂ ಸತ್ಯಸಂಧನೂ ಆದ ಅವನಿಗೆ ನನ್ನ ಆದೇಶದಂತೆ ಅರ್ಜುನನ ವಿಷಯದಲ್ಲಿ ಚಿಂತೆಯು ಬೇಡ ಅವನು ಅಸ್ತ್ರಗಳನ್ನು ಪಡೆದು ಶೀಘ್ರವಾಗಿ ಹಿಂದಿರುಗುವನು ಎಂದು ನೀವು ಹೇಳಬೇಕು.

ಕೇವಲಂ ಭುಜವೀರ್ಯೇಣ ನಾಕೃತಾಸ್ತ್ರೇಣ ವಾ ರಣೇ ।
ಭೀಷ್ಮದ್ರೋಣಾದಯಃ ಶಕ್ಯಾ ಯುದ್ಧೇ ಪ್ರತಿಸಮಾಸಿತುಮ್ ॥೩೧॥

ಗೃಹೀತಾಸ್ತ್ರೋ ಮಹಾಬಾಹುರ್ಗುಡಾಕೇಶಃ ಪರಂತಪಃ ।
ನೃತ್ತವಾದಿತ್ರಗೀತಾನಾಂ ದಿವ್ಯಾನಾಂ ಪಾರಮೇಯಿವಾನ್ ॥೩೨॥

ಭವಾನಪಿ ವಿವಿಕ್ತಾನಿ ತೀರ್ಥಾನಿ ಮನುಜೇಶ್ವರ ।
ಭ್ರಾತೃಭಿಃ ಸಹಿತಃ ಸರ್ವೈರ್ದ್ರಷ್ಟುಮರ್ಹತ್ಯರಿಂದಮ ॥೩೩॥

ಅಸ್ತ್ರವಿದ್ಯೆಯನ್ನು ಸಂಪಾದಿಸದೆ ಕೇವಲ ಭುಜವೀರ್ಯದಿಂದ ಯುದ್ಧದಲ್ಲಿ ಭೀಷ್ಮದ್ರೋಣಾದಿಗಳ ಎದುರಿಗೆ ನಿಲ್ಲಲು ಸಾಧ್ಯವಿಲ್ಲ.

ಅಸ್ತ್ರವಿದ್ಯೆಯನ್ನು ಸಂಪಾದಿಸಿದ ಮಹಾಬಾಹುವೂ ಪರಂತಪನೂ ಗುಡಾಕೇಶನೂ ಆದ ಅರ್ಜುನನು ದೇವ ಲೋಕಸಂಬಂಧಿಯಾದ ನೃತ್ಯವಾದಿತ್ರ ಮತ್ತು ಸಂಗೀತಗಳಲ್ಲಿ ಪಾರಂಗತನಾಗಿದ್ದಾನೆ. ರಾಜನೇ ಅರಿಂದಮನೇ! ನೀನು ಸಹ ಎಲ್ಲ ತಮ್ಮಂದಿರ ಜೊತೆಯಲ್ಲಿ ತೀರ್ಥಯಾತ್ರೆಯನ್ನು ಮಾಡುವುದು ಯೋಗ್ಯವಾಗಿರುತ್ತದೆ.

ತೀರ್ಥೇಷ್ವಾಪ್ಲುತ್ಯ ಪುಣ್ಯೇಷು ವಿಪಾಪ್ಮಾ ವಿಗತಜ್ವರಃ ।
ರಾಜ್ಯಂ ಭೋಕ್ಷ್ಯಸಿ ಧರ್ಮೇಣ ಸುಖೀ ವಿಗತಕಲ್ಮಷಃ ॥೩೪॥

ಪವಿತ್ರವಾದ ತೀರ್ಥಗಳಲ್ಲಿ ಸ್ನಾನವನ್ನು ಮಾಡಿ ಪಾಪವನ್ನು ಮತ್ತು ಮನಸ್ಸಿನ ಚಿಂತೆಯನ್ನು ಕಳೆದುಕೊಂಡು ದೋಷ ರಹಿತನಾಗಿ ಸುಖಿಯಾಗಿ ಧರ್ಮದಿಂದ ರಾಜ್ಯವನ್ನು ಆಳುವಿ. (ಎಂದೂ ಧರ್ಮರಾಜನಿಗೆ ನನ್ನ ಆದೇಶದಂತೆ ಹೇಳಬೇಕು.)

ಭವಾಂಶ್ಚೈನಂ ದ್ವಿಜಶ್ರೇಷ್ಠ ಪರ್ಯಟಂತಂ ಮಹೀತಲೇ ।
ತ್ರಾತುಮರ್ಹತಿ ವಿಪ್ರಾಗ್ರ್ಯ ತಪೋಬಲಸಮನ್ವಿತಃ ॥೩೫॥

ದ್ವಿಜಶ್ರೇಷ್ಠರೇ ಬ್ರಾಹ್ಮಣೋತ್ತಮರೇ, ಅವನು ಭೂತಳದಲ್ಲಿ ತೀರ್ಥಯಾತ್ರೆಗಾಗಿ ಸಂಚಾರಮಾಡುವಾಗ ತಪೋಬಲ ಸಮನ್ವಿತರಾದ ನೀವೂ ಸಹ ಅವನನ್ನು ರಕ್ಷಿಸಬೇಕು.

ಗಿರಿದುರ್ಗೇಷು ಚ ಸದಾ ದೇಶೇಷು ವಿಷಮೇಷು ಚ ।
ವಸಂತಿ ರಾಕ್ಷಸಾ ರೌದ್ರಾಸ್ತೇಭ್ಯೋ ರಕ್ಷೇತ್ ಸದಾ ಭವಾನ್ ॥೩೬॥

ಗಿರಿದುರ್ಗಗಳಲ್ಲಿಯೂ ವಿಷಮಪ್ರದೇಶಗಳಲ್ಲಿಯೂ ಸದಾ ಕ್ರೂರರಾದ ರಾಕ್ಷಸರು ವಾಸಮಾಡುತ್ತಾರೆ. ಅವರಿಂದ ನೀವು ಧರ್ಮರಾಜನನ್ನು ಯಾವಾಗಲೂ ರಕ್ಷಿಸಬೇಕು.

ವೈಶಂಪಾಯನಃ

ತಥೇತ್ಯಥ ಪ್ರತಿಜ್ಞಾಯ ಲೋಮಶಃ ಸುಮಹಾತಪಾಃ ।
ಕಾಮ್ಯಕಂ ವನಮುದ್ದಿಶ್ಯ ಸಮುಪಾಯಾನ್ಮಹೀತಲಮ್ ॥೩೭॥

ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ ಮಹಾತಪಸ್ವಿಗಳಾದ ಲೋಮಶರು ಕಾಮ್ಯಕವನಕ್ಕೆ ಹೋಗಲು ಉದ್ದೇಶಿಸಿ ಭೂಮಿಗೆ ಬಂದರು.

ದದರ್ಶ ತತ್ರ ಕೌಂತೇಯಂ ಧರ್ಮರಾಜಮರಿಂದಮಮ್ ।
ತಾಪಸೈರ್ಭ್ರಾತೃಭಿಶ್ಚೈವ ಸರ್ವತಃ ಪರಿವಾರಿತಮ್ ॥೩೮॥

ಆ ಕಾಮ್ಯಕವನದಲ್ಲಿ ಸುತ್ತಲೂ ತಾಪಸರಿಂದಲೂ ಮತ್ತು ಸಹೋದರರಿಂದಲೂ ಪರಿವೃತನಾದ ಶತ್ರುದಮನನಾದ ಶ ಧರ್ಮರಾಜನನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

## ನಲವತ್ತೆರಡನೆಯ ಅಧ್ಯಾಯ

(ಅರ್ಜುನನ ಅದ್ಭುತ ಕರ್ಮಗಳನ್ನು ಕೇಳಿ ಸಂಜಯನ ಎದುರಿಗೆ ಧೃತರಾಷ್ಟ್ರನ ಶೋಕ.)

ಜನಮೇಜಯಃ

ಅತ್ಯದ್ಭುತಾನಿ ಕರ್ಮಾಣಿ ಪಾರ್ಥಸ್ಯಾಮಿತತೇಜಸಃ ।
ಧೃತರಾಷ್ಟ್ರೋ ಮಹಾತೇಜಾಃ ಶ್ರುತ್ವಾ ವಿಪ್ರ ಕಿಮಬ್ರವೀತ್ ॥೧॥

ವೈಶಂಪಾಯನರೇ, ಅಮಿತಪರಾಕ್ರಮಿಯಾದ ಅರ್ಜುನನ ಅತ್ಯದ್ಭುತವಾದ ಕರ್ಮಗಳನ್ನು ಕೇಳಿ ಮಹಾತೇಜಸ್ವಿಯಾದ ಧೃತರಾಷ್ಟ್ರನು ಏನು ಹೇಳಿದನು?

ವೈಶಂಪಾಯನಃ

ಶಕ್ರಲೋಕಗತಂ ಪಾರ್ಥಂ ಶ್ರುತ್ವಾ ರಾಜಾऽಂಬಿಕಾಸುತಃ ।
ದ್ವೈಪಾಯನಾದೃಷಿಶ್ರೇಷ್ಠಾತ್ ಸಂಜಯಂ ವಾಕ್ಯಮಬ್ರವೀತ್ ॥೨॥

ಅಂಬಿಕಾಸುತನಾದ ಧೃತರಾಷ್ಟ್ರನು ಅರ್ಜುನನು ಇಂದ್ರಲೋಕಕ್ಕೆ ಹೋದ ವಿಷಯವನ್ನು ಋಷಿಶ್ರೇಷ್ಠರಾದ ದ್ವೈಪಾಯನರಿಂದ ತಿಳಿದು ಸಂಜಯನನ್ನು ಕುರಿತು ಹೀಗೆ ಮಾತನಾಡಿದನು.

ಶ್ರುತಂ ಮೇ ಸೂತ ಕಾರ್ತ್ಸ್ನ್ಯೇನ ಕರ್ಮ ಪಾರ್ಥಸ್ಯ ಧೀಮತಃ ।
ಕಚ್ಚಿತ್ ತವಾಪಿ ವಿದಿತಂ ಯಾಥಾತಥ್ಯೇನ ಸಾರಥೇ ॥೩॥

ಪ್ರಮತ್ತೋ ಗ್ರಾಮ್ಯಧರ್ಮೇಷು ಮಂದಾತ್ಮಾ ಪಾಪನಿಶ್ಚಯಃ ।
ಮಮ ಪುತ್ರಃ ಸುದುರ್ಬುದ್ಧಿಃ ಪೃಥಿವೀಂ ನಾಶಯಿಷ್ಯತಿ ॥೪॥

ಸೂತನೇ, ನಾನು ಮೇಧಾವಿಯಾದ ಪಾರ್ಥನ ಕರ್ಮಗಳನ್ನು ಸಮಗ್ರವಾಗಿ ಕೇಳಿದೆ. ಎಲೈ ಸಾರಥಿಯೇ. ನಿನಗೂ ಸಹ ಅವು ಯಥಾರ್ಥವಾಗಿ ತಿಳಿದಿರಬಹುದು. ನನ್ನ ಪುತ್ರನು ಮಂದಾತ್ಮನೂ ಪಾಪನಿಶ್ಚಯನೂ ಮತ್ತು ಇಂದ್ರಿಯಭೋಗದಲ್ಲಿ ಆಸಕ್ತನೂ ಆಗಿ ಮಹಾದುರ್ಬುದ್ಧಿಯುಳ್ಳವನಾಗಿ ಭೂಮಿಯನ್ನು ನಾಶಮಾಡುವನು.

ಯಸ್ಯ ನಿತ್ಯಮೃತಾ ವಾಚಃ ಸ್ಮೈರೇಷ್ವಪಿ ಮಹಾತ್ಮನಃ ।
ತ್ರೈಲೋಕ್ಯಮಪಿ ತಸ್ಯ ಸ್ಯಾದ್ ಯೋದ್ಧಾ ಯಸ್ಯ ಧನಂಜಯಃ ॥೫॥

ಯಾವ ಮಹಾತ್ಮನಾದ ಧರ್ಮರಾಜನ ವಿನೋದದಲ್ಲಿ ಆಡಿದ ಮಾತುಗಳೂ ಸಹ ಸತ್ಯವಾಗಿವೆಯೋ ಯಾರಿಗೆ ಧನಂಜಯನು ಯೋಧನಾಗಿದ್ದಾನೆಯೋ ಅವನಿಗೆ ಮೂರುಲೋಕಗಳೂ ದೊರೆಯುತ್ತವೆ.

ಅಸ್ಯತಃ ಕರ್ಣಿನಾರಾಚಾನ್ ತೀಕ್ಷ್ಣಾಗ್ರಾಂಶ್ಚ ಶಿಲಾಶಿತಾನ್ ।
ನಾರ್ಜುನಸ್ಯಾಗ್ರತಸ್ತಿಷ್ಠೇದ್ ಅಪಿ ಮೃತ್ಯುಜರಾತಿಗಃ ॥೬॥

ಕಲ್ಲಿನಲ್ಲಿ ಸಾಣೆಯನ್ನು ಹಿಡಿದು ತೀಕ್ಷ್ಣವಾದ ತುದಿಯನ್ನು ಹೊಂದಿದ ಬಾಣಗಳನ್ನು ಅರ್ಜುನನು ಕಿವಿಯವರೆಗೂ ಎಳೆದು ಪ್ರಯೋಗಿಸುವಾಗ ಜರಾಮರಣರಹಿತನಾದ ವ್ಯಕ್ತಿಯು ಸಹ ಅರ್ಜುನನ ಎದುರಿಗೆ ನಿಲ್ಲಲಾರ.

ಮಮ ಪುತ್ರಾ ದುರಾತ್ಮಾನಃ ಸರ್ವೇ ಮೃತ್ಯುವಶಂ ಗತಾಃ ।
ಯೇಷಾಂ ಯುದ್ಧಂ ದುರಾಧರ್ಷೈಃ ಪಾಂಡವೈಃ ಸಮುಪಸ್ಥಿತಮ್ ॥೭॥

ಎಂದೂ ಸೋಲಿಸಲು ಸಾಧ್ಯವಿಲ್ಲದ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಸಂಪಾದನೆಮಾಡಿದ ನನ್ನ ಮಕ್ಕಳೆಲ್ಲರೂ ದುಷ್ಟರು. ಎಲ್ಲರೂ ಮೃತ್ಯುವಶರಾಗಿದ್ದಾರೆ.

ತಸ್ಯೈವ ಚ ನ ಪಶ್ಯಾಮಿ ಯುಧಿ ಗಾಂಡೀವಧನ್ವನಃ ।
ಅನಿಶಂ ಚಿಂತಯಾನೋಽಪಿ ಯ ಏನಮಭಿಯಾದ್ ಯುಧಿ ॥೮॥

ಗಾಂಡೀವಧನುಸ್ಸನ್ನು ಧರಿಸಿದ ಆ ಅರ್ಜುನನ ಜೊತೆಯಲ್ಲಿ ಯಾರು ಅವನಿಗೆ ಎದುರಾಗಿ ನಿಂತು ಯುದ್ಧವನ್ನು ಮಾಡುತ್ತಾರೆ ಎಂದು ಸತತವಾಗಿ ಚಿಂತನೆಯನ್ನು ಮಾಡಿದರೂ ನನಗೆ ಯಾರೂ ತೋರುತ್ತಿಲ್ಲ.

ದ್ರೋಣಕರ್ಣೌ ಪ್ರತೀಯಾತಾಂ ಯದಿ ಭೀಷ್ಮೋಽಪಿ ವಾ ರಣೇ ।
ಮಹಾನ್ ಸ್ಯಾತ್ ಸಂಶಯೋ ಲೋಕೇ ನ ತು ಪಶ್ಯಾಮಿ ನೋ ಜಯಮ್

ಒಂದು ಪಕ್ಷ ದ್ರೋಣಕರ್ಣರು ಅವನಿಗೆ ಎದುರಿಗೆ ನಿಲ್ಲಬಹುದು. ಅಥವಾ ಭೀಷ್ಮರು ಅವನ ಎದುರಿಗೆ ನಿಲ್ಲಬಹುದು. ಆದರೂ ಜಯದ ವಿಷಯದಲ್ಲಿ ದೊಡ್ಡ ಸಂಶಯವುಂಟಾಗುತ್ತದೆಯೇ ಹೊರತು ನಮಗೆ ನಿಶ್ಚಿತವಾಗಿ ಜಯವು ನನಗೆ ಕಾಣುವುದಿಲ್ಲ.

ಘೃಣೇ ಕರ್ಣಃ ಪ್ರಮಾದೀ ಚ ಆಚಾರ್ಯಃ ಸ್ಥವಿರೋ ಗುರುಃ ।
ಅಮರ್ಷೀ ಬಲವಾನ್ ಪಾರ್ಥಃ ಸಂರಂಭೀ ದೃಢವಿಕ್ರಮಃ ॥೧೦॥

ಕರ್ಣನು ದಯಾ ಶೀಲನಾದವನು. ದ್ರೋಣರು ಪ್ರಮಾದವುಳ್ಳವರು. ಭೀಷ್ಮರು ವೃದ್ಧರಾಗಿದ್ದಾರೆ. ಪಾರ್ಥನಾದರೋ ಬಲಿಷ್ಠನಾಗಿ ಸಿಟ್ಟಿನಿಂದಕೂಡಿ ದೃಢವಾದ ಪರಾಕ್ರಮವುಳ್ಳವನಾಗಿದ್ದಾನೆ.

ಭವೇತ್ ಸುತುಮುಲಂ ಯುದ್ಧಂ ಸರ್ವಸ್ಯಾಪ್ಯಪರಾಜಿತಮ್ ।
ಸರ್ವೇಪ್ಯಸ್ತ್ರವಿದಃ ಶೂರಾಃ ಸರ್ವೇ ಪ್ರಾಪ್ತಾ ಮಹದ್ಯಶಃ ॥೧೧॥

ಅಪಿ ಸರ್ವೇಶ್ವರತ್ವಂ ಹಿ ನ ವಾಂಛೇರನ್ ಪರಾಜಿತಾಃ ।
ವಧೇ ನೂನಂ ಭವೇಚ್ಛಾಂತಿಃ ತೇಷಾಂ ವಾ ಫಲ್ಗುನಸ್ಯ ವಾ ॥೧೨॥

ಘೋರವಾದ ಯುದ್ಧವು ನಡೆಯುತ್ತದೆ. ಪಾಂಡವರೆಲ್ಲರೂ ಎಂದೂ ಶತ್ರುಗಳಿಂದ ಪರಾಜಿತರಲ್ಲ ಎಲ್ಲರೂ ಅಸ್ತ್ರವಿದ್ಯೆಯನ್ನು ಬಲ್ಲವರು ಶೂರರು ಮಹಾಕೀರ್ತಿಯನ್ನು ಗಳಿಸಿದವರು. ಆದ್ದರಿಂದ ಪರಾಜಯವನ್ನು ಹೊಂದಿ ಅವರಲ್ಲಿ ಯಾರೊಬ್ಬರೂ ಸರ್ವೇಶ್ವರರಾಗುವುದನ್ನು ಯಾರೂ ಬಯಸುವುದಿಲ್ಲ. ಅವರು (ನನ್ನ ಮಕ್ಕಳ) ಅಥವಾ ಅರ್ಜುನನ ವಧೆಯಾದರೆ ಮಾತ್ರ ಶಾಂತಿ ಯುಂಟಾಗುತ್ತದೆ.

ನ ತು ಹಂತಾऽರ್ಜುನಸ್ಯಾಸ್ತಿ ಜೇತಾ ವಾऽಸ್ಯ ನ ವಿದ್ಯತೇ ।
ಮನ್ಯುಸ್ತಸ್ಯ ಕಥಂ ಶಾಮ್ಯೇನ್ಮಂದಾನ್ ಪ್ರತಿ ಸಮುತ್ಥಿತಃ ॥೧೩॥

ಆದರೆ ಅರ್ಜುನನನ್ನು ಕೊಲ್ಲುವವರಾಗಲೀ ಅಥವಾ ಜಯಿಸುವವರಾಗಲೀ ಯಾರೂ ಇಲ್ಲ. ಮಂದರಾದ ನನ್ನ ಪುತ್ರರ ಮೇಲೆ ಉಂಟಾದ ಅವನ ಕೋಪವು ಹೇಗೆ ಶಾಂತವಾದೀತು?

ತ್ರಿದಶೇಶಸಮೋ ವೀರಃ ಖಾಂಡವೇऽಗ್ನಿಮತರ್ಪಯತ್ ।
ಜಿಗಾಯ ಪಾರ್ಥಿವಾನ್ ಸರ್ವಾನ್ ರಾಜಸೂಯೇ ಮಹಾಕ್ರತೌ ॥೧೪॥

ಅರ್ಜುನನು ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನು. ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಪಡಿಸಿದನು. ರಾಜಸೂಯ- ಮಹಾಯಾಗದಲ್ಲಿ ಎಲ್ಲ ರಾಜರನ್ನೂ ಗೆದ್ದನು.

ಶೇಷಂ ಕುರ್ಯಾದ್ ಗಿರೇರ್ವಜ್ರಂ ನಿಪತನ್ ಮೂರ್ಧ್ನಿ ಸಂಜಯ ।
ನ ತು ಕುರ್ಯುಃ ಶರಾಃ ಶೇಷಂ ಕ್ಷಿಪ್ತಾಸ್ತಾತ ಕಿರೀಟಿನಾ ॥೧೫॥

ಎಲೈ ಸಂಜಯನೇ, ಪರ್ವತ ಶಿಖರದ ಮೇಲೆ ಬಿದ್ದ ವಜ್ರಾಯುಧವು ಪರ್ವತವನ್ನು ಉಳಿಸಬಹುದು ಆದರೆ ಪ್ರೀತಿಪಾತ್ರನೇ, ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಶತ್ರುಗಳಲ್ಲಿ ಯಾರನ್ನೂ ಉಳಿಸುವುದಿಲ್ಲ.

ಯಥಾ ಹಿ ಕಿರಣಾ ಭಾನೋಸ್ತಪಂತೀಹ ಚರಾಚರಮ್ ।
ತಥಾ ಪಾರ್ಥಕರೋತ್ಸೃಷ್ಟಾಃ ಶರಾಸ್ತಪ್ಯಂತಿ ಮೇ ಸುತಾನ್ ॥೧೬॥

ಹೇಗೆ ಸೂರ್ಯನ ಕಿರಣಗಳು ಮಧ್ಯಾಹ್ನಕಾಲದಲ್ಲಿ ಚರಾಚರವಾದ ಜಗತ್ತನ್ನು ದಹಿಸುತ್ತವೆಯೋ ಹಾಗೆ ಪಾರ್ಥನ ಕೈಯಿಂದ ಪ್ರೇರಿಸಲ್ಪಟ್ಟ ಬಾಣಗಳು ನನ್ನ ಪುತ್ರರನ್ನು ದಹಿಸುತ್ತವೆ.

ಅಪೀಮಾಂ ರಥಘೋಷೇಣ ಭಯಾರ್ತಾ ಸವ್ಯಸಾಚಿನಃ ।
ಪ್ರತಿಭಾತಿ ವಿದೀರ್ಣೇವ ಸರ್ವತೋ ಭಾರತೀ ಚಮೂಃ ॥೧೭॥

ಆ ಬಾಣಗಳು ಭೂಮಿಯನ್ನು ಬೇಕಾದರೂ ದಹಿಸುತ್ತವೆ. ಸವ್ಯಸಾಚಿಯ ರಥಘೋಷದಿಂದ ಭಯಾರ್ತವಾದ ಭರತಕುಲದವರಾದ ನಮ್ಮ ಸೈನ್ಯವು ಎಲ್ಲ ಕಡೆಗಳಲ್ಲಿಯೂ ಬಿರಿದುಹೋದಂತೆ ಕಾಣುತ್ತದೆ.

ಯ ಉದ್ಧರನ್ ಪ್ರವಪಂಶ್ಚೈವ ಬಾಣಾನ್
ತಥಾऽऽತತಾಯೀ ಸಮರೇ ಕಿರೀಟೀ ।
ಸೃಷ್ಟೋऽಂತಕಃ ಸರ್ವಹರೋ ವಿಧಾತ್ರಾ
ಭವೇದ್ಯಥಾ ತದ್ವದವಾರಣೀಯಃ ॥೧೮॥

ಕೈಯಲ್ಲಿ ಗಾಂಡೀವಧನುಸ್ಸನ್ನು ಹಿಡಿದ ಶತ್ರುವಧೋದ್ಯತನಾದ ಅರ್ಜುನನು ಯುದ್ಧದಲ್ಲಿ ಬಾಣಗಳನ್ನು ಪ್ರಯೋಗಿಸುವಾಗ ಬ್ರಹ್ಮದೇವರು ಸರ್ವನಾಶಕನಾಗಿ ಸರ್ವಸಂಹಾರಕನಾಗಿ ಸೃಷ್ಟಿಮಾಡಿದ ಯಮನಂತೆ ಇರುವ ಅರ್ಜುನನನ್ನು ಯಾರೂ ನಿವಾರಿಸಲು ಸಾಧ್ಯವಿಲ್ಲ.

ಸಂಜಯಃ

ಯದೇತತ್ ಕಥಿತಂ ರಾಜನ್ ತ್ವಯಾ ದುರ್ಯೋಧನಂ ಪ್ರತಿ ।
ಸರ್ವಮೇತದ್ ಯಥಾತಥ್ಯಂ ನ ತನ್ಮಿಥ್ಯಾ ಮಹೀಪತೇ ॥೧೯॥

ಮನ್ಯುನಾऽಭಿಸಮಾವಿಷ್ಟಾಃ ಪಾಂಡವಾಸ್ತ್ವಮಿತೌಜಸಃ ।
ದೃಷ್ಟ್ವಾ ನೀತಾಂ ಸಭಾಂ ಕೃಷ್ಣಾಂ ಧರ್ಮಪತ್ನೀಂ ಯಶಸ್ವಿನೀಮ್ ॥೨೦॥

ರಾಜನೇ! ನೀನು ದುರ್ಯೋಧನನನ್ನು ಕುರಿತು ಏನು ಹೇಳಿದೆಯೋ ಅದೆಲ್ಲವೂ ಸತ್ಯ. ಮಹಿಪತಿಯೇ, ಅದು ಸುಳ್ಳಲ್ಲ. ಧರ್ಮಪತ್ನಿಯೂ ಕೀರ್ತಿವಂತೆಯೂ ಆದ ದ್ರೌಪದಿಯನ್ನು ಸಭೆಗೆ ಎಳೆತಂದುದನ್ನು ನೋಡಿ ಅಮಿತಪರಾಕ್ರಮಿಗಳಾದ ಪಾಂಡವರು ಕೋಪದಿಂದ ತುಂಬಿಹೋಗಿದ್ದಾರೆ.

ದುಃಶಾಸನಸ್ಯ ತಾ ವಾಚಃ ಶ್ರುತ್ವಾ ವೈ ದಾರುಣೋದಯಾಃ ।
ಕರ್ಣಸ್ಯ ಚ ಮಹಾರಾಜ ನ ಸ್ವಪ್ಸ್ಯಂತೀತಿ ಮೇ ಮತಿಃ ॥೨೧॥

ಎಲೈ ಮಹಾರಾಜನೇ, ಭಯಂಕರ ಪರಿಣಾಮವುಳ್ಳ ದುಶ್ಶಾಸನನ ಮಾತುಗಳನ್ನು ಮತ್ತು ಕರ್ಣನ ಮಾತುಗಳನ್ನು ಕೇಳಿ ಅವರು ನಿದ್ರೆಯನ್ನು ಮಾಡುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರುತಂ ಹಿ ತೇ ಮಹಾರಾಜ ಯಥಾ ಪಾರ್ಥೇನ ಸಂಯುಗೇ ।
ಏಕಾದಶತನುಃ ಸ್ಥಾಣುರ್ಧನುಷಾ ಪರಿತೋಷಿತಃ ॥೨೨॥

ಮಹಾರಾಜನೇ, ಅರ್ಜುನನಿಂದ ಯುದ್ಧದಲ್ಲಿ ಏಕಾದಶಮೂರ್ತಿಯಾದ ಮಹೇಶ್ವರನು ಹೇಗೆ ಧನುಸ್ಸಿನಿಂದ ಸಂತೋಷಪಡಿಸಲ್ಪಟ್ಟನೆಂದು ನೀನು ಕೇಳಿದ್ದೀಯೆ.

ಕೈರಾತಂ ವೇಷಮಾಸ್ಥಾಯ ಯೋಧಯಾಮಾಸ ಫಲ್ಗುನಮ್ ।
ಜಿಜ್ಞಾಸುಃ ಸರ್ವದೇವೇಶಃ ಕಪರ್ದೀ ಭಗವಾನ್ ಸ್ವಯಮ್ ॥೨೩॥

ಸರ್ವದೇವೇಶನಾದ ಭಗವಂತನಾದ ಕಪರ್ದಿಯು ತಾನೇ ಅರ್ಜುನನ ಪರಾಕ್ರಮವನ್ನು ತಿಳಿಯುವ ಅಭಿಪ್ರಾಯದಿಂದ ಕಿರಾತವೇಷವನ್ನು ಧರಿಸಿ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತತ್ರೈನಂ ಲೋಕಪಾಲಾಸ್ತೇ ದರ್ಶಯಾಮಾಸುರರ್ಜುನಮ್ ।
ಅಸ್ತ್ರಹೇತೋಃ ಪರಾಕ್ರಾಂತಂ ತಪಸಾ ಕೌರವರ್ಷಭಮ್ ॥೨೪॥

ಅಸ್ತ್ರವನ್ನು ಸಂಪಾದಿಸಲು ತಪಸ್ಸಿನಲ್ಲಿ ಉದ್ಯುಕ್ತನಾದ ಕೌರವ ಶ್ರೇಷ್ಠನಾದ ಅರ್ಜುನನಿಗೆ ಅಲ್ಲಿಯೇ ಲೋಕಪಾಲಕರು ತಮ್ಮ ದರ್ಶನವನ್ನು ಕೊಟ್ಟರು.

ನೈತದುತ್ಸಹತೇಽನ್ಯೋ ಹಿ ಲಬ್ಧುಮನ್ಯತ್ರ ಫಲ್ಗುನಾತ್ ।
ಸಾಕ್ಷಾದ್ದರ್ಶನಮೇತೇಷಾಮೀಶ್ವರಾಣಾಂ ನರೋ ಭುವಿ ॥೨೫॥

ಭೂಮಿಯಲ್ಲಿ ಅರ್ಜುನನನ್ನು ಬಿಟ್ಟು ಬೇರೆಯಾವ ಮನುಷ್ಯನೂ ಅಧೀಶ್ವರರಾದ ಆ ಲೋಕಪಾಲಕರ ದರ್ಶನವನ್ನು ಪಡೆಯಲು ಪ್ರಯತ್ನಿಸಲಾರ (ಪಡೆಯುವುದಿಲ್ಲ.)

ಮಹೇಶ್ವರೇಣ ಯೋ ರಾಜನ್‌ನ ಜೀರ್ಣೋ ಗ್ರಸ್ತಮೂರ್ತಿಮಾನ್ ।
ಕಸ್ತಮುತ್ಸಹತೇ ವೀರೋ ಯುದ್ಧೇ ಜರಯಿತುಂ ಪುಮಾನ್ ॥೨೬॥

ರಾಜನೇ, ಯಾರು ಮಹೇಶ್ವರನ ಬಾಣಗಳಿಂದ ಆಚ್ಛಾದಿತನಾದರೂ ಸೋಲಲಿಲ್ಲವೋ ಅಂತಹ ವೀರನಾದ ಅರ್ಜುನನನ್ನು ಯಾವ ಪುರುಷನು ಯುದ್ಧದಲ್ಲಿ ಸೋಲಿಸಲು ನಾಶಗೊಳಿಸಲು ಬಯಸಬಹುದು?

ಆಸಾದಿತಮಿದಂ ಘೋರಂ ತುಮುಲಂ ರೋಮಹರ್ಷಣಮ್ ।
ದ್ರೌಪದೀಂ ಪರಿಕರ್ಷದ್ಭಿಃ ಕೋಪಯದ್ಭಿಶ್ಚ ಪಾಂಡವಾನ್ ॥೨೭॥

ಯತ್ರ ವಿಸ್ಫುರಮಾಣೌಷ್ಠೋ ಭೀಮಃ ಪ್ರಾಹ ವಚೋ ಮಹತ್ ।
ದೃಷ್ಟ್ವಾ ದುರ್ಯೋಧನೇನೋರೂ ದ್ರೌಪದ್ಯಾ ದರ್ಶಿತಾವುಭೌ ॥೨೮॥

ದ್ರೌಪದಿಯನ್ನು ಎಳೆದಾಡಿ ಪಾಂಡವರನ್ನು ಕೋಪಗೊಳಿಸಿದ ನಿನ್ನ ಮಕ್ಕಳಿಂದ ಘೋರವೂ ತೀವ್ರವೂ ರೋಮಾಂಚಕಾರಿಯೂ ಆದ ಈ ಯುದ್ಧವು ಸಂಪಾದಿಸಲ್ಪಟ್ಟಿತು. ಅಲ್ಲಿ ತುಟಿಗಳು ಅದರುತ್ತಿದ್ದ ಭೀಮಸೇನನು ದ್ರೌಪದಿಗೆ ತೋರಿಸಿದ ದುರ್ಯೋಧನನ ಎರಡು ತೊಡೆಗಳನ್ನು ನೋಡಿ ದೊಡ್ಡ ಮಾತುಗಳನ್ನು ಆಡಿದನಷ್ಟೆ.

ಊರುಂ ಭೇತ್ಸ್ಯಾಮಿ ತೇ ಪಾಪ ಗದಯಾ ವಜ್ರಕಲ್ಪಯಾ ।
ತ್ರಯೋದಶಾನಾಂ ವರ್ಷಾಣಾಮಂತೇ ದುರ್ದ್ಯೂತದೇವಿನಃ ॥೨೯॥

ಎಲೈ ಪಾಪಿಯೇ, ಹದಿಮೂರುವರ್ಷಗಳು ಕಳೆದಮೇಲೆ ಕೆಟ್ಟದ್ಯೂತವನ್ನು ಆಡಿದ ನಿನ್ನ ತೊಡೆಯನ್ನು ವಜ್ರಸದೃಶವಾದ ನನ್ನ ಗದೆಯಿಂದ ಮುರಿಯುವೆನು (ಎಂದು ಹೇಳಿದನಷ್ಟೆ).

ಸರ್ವೇ ಪ್ರಹರತಾಂ ಶ್ರೇಷ್ಠಾಃ ಸರ್ವೇ ಚಾಮಿತತೇಜಸಃ ।
ಸರ್ವಾಸ್ತ್ರನಿಪುಣಾಃ ಸರ್ವೇ ದೇವೈರಪಿ ಸುದುರ್ಜಯಾಃ ॥೩೦॥

ಎಲ್ಲರೂ ಶಸ್ತ್ರಾಸ್ತ್ರಪ್ರಯೋಗದಲ್ಲಿ ನಿಪುಣರು. ಎಲ್ಲರೂ ಅಮಿತಪರಾಕ್ರಮಿಗಳು. ಎಲ್ಲರೂ ಎಲ್ಲಾ ಅಸ್ತ್ರಗಳಲ್ಲಿಯೂ ಕುಶಲರು ಮತ್ತು ಎಲ್ಲರೂ ದೇವತೆಗಳಿಂದಲೂ ಅಜೇಯರು.

ಮನ್ಯೇ ಮನ್ಯುಸಮುದ್ಭೂತಾಃ ಪುತ್ರಾಣಾಂ ತವ ಸಂಗರೇ ।
ಅಂತಂ ಪಾರ್ಥಾಃ ಕರಿಷ್ಯಂತಿ ವೀರ್ಯಾಮರ್ಷಸಮನ್ವಿತಾಃ ॥೩೧॥

ವೀರ್ಯ ಮತ್ತು ಕೋಪಗಳಿಂದ ಕೂಡಿದ ಮಹಾಕೋಪದಿಂದ ಯುಕ್ತರಾದ ಪಾಂಡವರು ಯುದ್ಧದಲ್ಲಿ ನಿನ್ನ ಮಕ್ಕಳ ಅಂತ್ಯವನ್ನು ಮಾಡುವರು ಎಂದು ನಾನು ಭಾವಿಸುವೆನು.

ಧೃತರಾಷ್ಟ್ರಃ

ಕಿಂ ಕೃತಂ ಸೂತ ಕರ್ಣೇನ ವದತಾ ಪರುಷಂ ವಚಃ ।
ಪರ್ಯಾಪ್ತಂ ವೈರಮೇತಾವದ್ ಯತ್ ಕೃಷ್ಣಾ ಸಾ ಸಭಾಂ ಗತಾ ॥೩೨॥

ಅಪೀದಾನೀಂ ಮಮ ಸುತಾಃ ತಿಷ್ಠೇರನ್ ಮಂದಚೇತಸಃ ।
ಯೇಷಾಂ ಭ್ರಾತಾ ಗುರುರ್ಜ್ಯೇಷ್ಠೋ ವಿನಯೇ ನಾವತಿಷ್ಠತೇ ॥೩೩॥

ಎಲೈ ಸೂತನೇ, ಕರ್ಣನು ಒರಟಾದ ಮಾತುಗಳನ್ನು ಆಡಿ ಏನುಮಾಡಿದಂತಾಯಿತು? ದ್ರೌಪದಿಯನ್ನು ಸಭೆಗೆ ಎಳೆತಂದ ಒಂದು ವಿಷಯವು ಪಾಂಡವರಿಗೆ ಇಷ್ಟುವೈರವನ್ನು ಉಂಟುಮಾಡಲು ಸಾಕಾಗುತ್ತದೆ. ಯಾರ ಹಿರಿಯಣ್ಣನು ಎಂದೂ ವಿನಯದಿಂದ ನಡೆದುಕೊಳ್ಳಲಿಲ್ಲವೋ ಅಂತಹ ಅಣ್ಣನನ್ನು ಹೊಂದಿದ ಮಂದಪ್ರಜ್ಞೆಯುಳ್ಳ ನನ್ನ ಮಕ್ಕಳು ಈಗಲಾದರೂ ಒಳ್ಳೆಯ ಮಾರ್ಗದಲ್ಲಿ ಇರುತ್ತಾರೆಯೇ?

ಮಮಾಪಿ ವಚನಂ ಸೂತ ನ ಶುಶ್ರೂಷತಿ ಮಂದಭಾಕ್ ।
ದೃಷ್ಟ್ವಾ ಮಾಂ ಚಕ್ಷುಷಾ ಹೀನಂ ನಿರ್ವಿಚೇಷ್ಟಮಚೇತಸಮ್ ॥೩೪॥

ಸೂತನೇ, ದೃಷ್ಟಿಹೀನನಾದ ಚೇಷ್ಟಾರಹಿತನಾದ ಉದ್ಭ್ರಾಂತನಾದ ನನ್ನ ಮಾತುಗಳನ್ನು ಮಂದಭಾಗ್ಯನಾದ ದುರ್ಯೋಧನನು ಕೇಳುವುದಿಲ್ಲ.

ಯೇ ಚಾಸ್ಯ ಸಚಿವಾ ಮಂದಾಃ ಕರ್ಣಸೌಬಲಕಾದಯಃ ।
ತೇ ತಸ್ಯ ಭೂಯಸೋ ದೋಷಾನ್ ವರ್ಧಯಂತಿ ವಿಚೇತಸಃ ॥೩೫॥

ಇನ್ನು ಅವನ ಸಚಿವರೂ ಮಂದರೂ ಆದ ಕರ್ಣ ಶಕುನಿ ಮೊದಲಾದವರು ಯಾರು ಇದ್ದಾರೋ ಅವರು ಜ್ಞಾನವಿಲ್ಲದೆ ಅವನ ದೋಷಗಳನ್ನು ಇನ್ನೂ ಹೆಚ್ಚಿಸುತ್ತಿದ್ದಾರೆ.

ಸ್ವೈರಂ ಮುಕ್ತಾ ಅಪಿ ಶರಾಃ ಪಾರ್ಥೇನಾಮಿತತೇಜಸಾ ।
ನಿರ್ದಹೇಯುರ್ಮಮ ಸುತಾನ್ ಕಿಂಪುನರ್ಮನ್ಯುನೇರಿತಾಃ ॥೩೬॥

ಅಮಿತಪರಾಕ್ರಮಿಯಾದ ಅರ್ಜುನನು ವಿನೋದಕ್ಕಾಗಿ ಪ್ರಯೋಗಿಸಿದ ಬಾಣಗಳೂ ನನ್ನ ಮಕ್ಕಳನ್ನು ಸುಟ್ಟುಬಿಡುತ್ತವೆ. ಇನ್ನು ಸಿಟ್ಟಿನಿಂದ ಪ್ರಯೋಗಿಸಿದ ಬಾಣಗಳ ವಿಷಯದಲ್ಲಿ ಹೇಳುವುದೇನು?

ಪಾರ್ಥಬಾಹುಬಲೋತ್ಸೃಷ್ಟಾ ಮಹಾಚಾಪವಿನಿಃಸೃತಾಃ ।
ದಿವ್ಯಾಸ್ತ್ರಮಂತ್ರಚುದಿತಾಃ ಸಾದಯೇಯುಃ ಸುರಾನಪಿ ॥೩೭॥

ದಿವ್ಯಾಸ್ತ್ರಮಂತ್ರಗಳಿಂದ ಪ್ರೇರಿತವಾದ ಗಾಂಡೀವಚಾಪದಿಂದ ಹೊರಟ ಅವನ ಬಾಹುಬಲದಿಂದ ಪ್ರಯೋಗಿಸಲ್ಪಟ್ಟ ಬಾಣಗಳು ದೇವತೆಗಳನ್ನೂ ಕೊಲ್ಲಲು ಸಮರ್ಥವಾಗಿವೆ.

ಯಸ್ಯ ಮಂತ್ರೀ ಚ ಗೋಪ್ತಾ ಚ ಸುಹೃಚ್ಚೈವ ಜನಾರ್ದನಃ ।
ಹರಿಸ್ತ್ರಿಲೋಕ್ಯನಾಥಃ ಸ ಕಿಂನು ತೇನ ನ ನಿರ್ಜಿತಮ್ ॥೩೮॥

ಯಾರಿಗೆ ಮೂರುಲೋಕಕ್ಕೆ ಒಡೆಯನಾದ ಜನಾರ್ದನನಾದ ಹರಿಯು ಮಂತ್ರಿಯೂ ರಕ್ಷಕನೂ ಮತ್ತು ಹಿತೈಷಿಯೂ ಆಗಿದ್ದಾನೆಯೋ ಅವನು ಏನನ್ನು ಗೆಲ್ಲದೆ ಇರಲು ಸಾಧ್ಯ ?

ಇದಂ ಚ ಸುಮಹಚ್ಚಿತ್ರಮ್ ಅರ್ಜುನಸ್ಯೈವ ಸಂಜಯ ।
ಮಹಾದೇವೇನ ಬಾಹುಭ್ಯಾಂ ಯತ್ಸಮೇತ ಇತಿ ಶ್ರುತಿಃ ॥೩೯॥

ಸಂಜಯನೇ, ಅರ್ಜುನನು ಬಾಹುಗಳಿಂದ ಮಹೇಶ್ವರನ ಜೊತೆಯಲ್ಲಿ ಸಂಗತನಾದನು ಎಂದು ಏನು ಕೇಳಿದ್ದೇವೆಯೋ ಇದು ದೊಡ್ಡ ಆಶ್ಚರ್ಯದ ಸಂಗತಿ.

ಪ್ರತ್ಯಕ್ಷಂ ಸರ್ವಲೋಕಸ್ಯ ಖಾಂಡವೇ ಯತ್ಕೃತಂ ಪುರಾ ।
ಫಲ್ಗುನೇನ ಸಹಾಯೇನ ವಹ್ನೇರ್ದಾಮೋದರೇಣ ಚ ॥೪೦॥

ಖಾಂಡವವನದಲ್ಲಿ ಸರ್ವಲೋಕದ ಎದುರಿನಲ್ಲಿ ದಾಮೋದರನ ಸಹಾಯದಿಂದ ವಹ್ನಿಗೆ ಹಿಂದೆ ಅರ್ಜುನನು ಏನು ಸಾಧಿಸಿದನೆಂಬುದು (ಎಲ್ಲರಿಗೂ ತಿಳಿದವಿಷಯ)

ಸರ್ವಥಾ ನಾಸ್ತಿ ಮೇ ಪುತ್ರಃ ಸಾಮಾತ್ಯಃ ಸಹಬಾಂಧವಃ ।
ಕ್ರುದ್ಧೇ ಪಾರ್ಥೇ ಚ ಭೀಮೇ ಚ ವಾಸುದೇವೇ ಚ ಸಾತ್ಯಕೌ ॥೪೧॥

ಅರ್ಜುನನೂ ಭೀಮನೂ ಕೃಷ್ಣನೂ ಮತ್ತು ಸಾತ್ಯಕಿಯೂ ಕ್ರುದ್ಧರಾಗಿರುವಾಗ ತನ್ನ ಬಾಂಧವರು ಮತ್ತು ಅಮಾತ್ಯರೊಡನೆ ಕೂಡಿದ ನನ್ನ ಪುತ್ರನು ಸರ್ವಥಾ ಇಲ್ಲವೆಂದೇ ಭಾವಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಚತ್ವಾರಿಂಶೋऽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

# ನಲವತ್ತೂರನೆಯ ಅಧ್ಯಾಯ

(ಕಾಡಿನಲ್ಲಿ ಪಾಂಡವರ ಭೋಜ್ಯವಸ್ತು ಕಥನ.)

ಜನಮೇಜಯಃ

ಯದಿದಂ ಶೋಚಿತಂ ರಾಜ್ಞಾ ಧೃತರಾಷ್ಟ್ರೇಣ ವೈ ಮುನೇ ।
ಪ್ರವ್ರಾಜ್ಯ ಪಾಂಡವಾನ್ ವೀರಾನ್ ಸರ್ವಮೇತನ್ನಿರರ್ಥಕಮ್ ॥೧॥

ವೈಶಂಪಾಯನರೇ, ವೀರರಾದ ಪಾಂಡವರನ್ನು ವನಕ್ಕೆ ಕಳುಹಿಸಿ ರಾಜನಾದ ಧೃತರಾಷ್ಟ್ರನು ಏನು ಶೋಕಪಟ್ಟನೋ ಅದೆಲ್ಲವೂ ನಿರರ್ಥಕವಾದುದಷ್ಟೇ?

ಕಥಂ ಹಿ ರಾಜಾ ಪುತ್ರಂ ಸ್ವಮುಪೇಕ್ಷೇತಾಲ್ಪಚೇತಸಮ್ ।
ದುರ್ಯೋಧನಂ ಪಾಂಡುಪುತ್ರಾನ್ ಕೋಪಯಾನಂ ಮಹಾರಥಾನ್ ॥

ಮಹಾರಥರಾದ ಪಾಂಡುಪುತ್ರರನ್ನು ಕೋಪಗೊಳಿಸುವ ಅಲ್ಪಚೇತನನಾದ ತನ್ನ ಪುತ್ರನಾದ ದುರ್ಯೋಧನನನ್ನು ರಾಜನಾದ ಧೃತರಾಷ್ಟ್ರನು ಹೇಗೆ ಉಪೇಕ್ಷೆಮಾಡುತ್ತಾನೆ?

ಕಿಮಾಸೀತ್ ಪಾಂಡುಪುತ್ರಾಣಾಂ ವನೇ ಭೋಜನಮುಚ್ಯತಾಮ್ ।
ವನ್ಯಂ ವಾऽಪ್ಯಥವಾ ಕೃಷ್ಟಮೇತದಾಖ್ಯಾತು ಮೇ ಭವಾನ್ ॥೩॥

ಪಾಂಡುಪುತ್ರರಿಗೆ ವನದಲ್ಲಿ ಎಂತಹ ಭೋಜನವಾಯಿತು? ವನದಲ್ಲಿ ಸಹಜವಾಗಿ ದೊರೆಯುವ ಭೋಜನವೇ ಅಥವಾ ಕೃಷಿಯನ್ನು ಮಾಡಿ ಬೆಳೆದ ಧಾನ್ಯಗಳೇ ಎಂದು ನೀವು ನನಗೆ ತಿಳಿಸಿ.

ವೈಶಂಪಾಯನಃ

ವಾನೇಯಾಂಸ್ತು ಮೃಗಾಂಸ್ತೇ ತು ಶುದ್ಧೈರ್ಬಾಣೈರ್ನಿಪಾತಿತಾನ್।
ಬ್ರಾಹ್ಮಣಾನಾಂ ನಿವೇದ್ಯಾಗ್ರೇ ಭುಂಜತೇ ಭರತರ್ಷಭಾಃ ॥೪॥

ಆ ಭರತರ್ಷಭರು ಶುದ್ಧಬಾಣಗಳಿಂದ ಹೊಡೆಯಲ್ಪಟ್ಟ ವನ್ಯಮೃಗಗಳನ್ನು ಮೊದಲು ಬ್ರಾಹ್ಮಣರಿಗೆ ಸಮರ್ಪಿಸಿ ಅನಂತರ ಭುಂಜಿಸಿದರು.

ತಾಂಶ್ಚ ಶೂರಾನ್ ಮಹೇಷ್ವಾಸಾನ್ ತದಾ ನಿವಸತೋ ವನೇ ।
ಅನ್ವಯುರ್ಬ್ರಾಹ್ಮಣಾ ರಾಜನ್ ಸಾಗ್ನಯೋऽನಗ್ನಯಸ್ತಥಾ ॥೫॥

ಎಲೈ ರಾಜನೇ, ಶೂರರೂ ಮತ್ತು ಧನ್ರ್ಧಾರಿಗಳೂ ಆಗಿ ಕಾಡಿನಲ್ಲಿ ವಾಸಿಸುವ ಅವರನ್ನು ಅಗ್ನಿಯುಳ್ಳ ಮತ್ತು ಅಗ್ನಿ ಇರದ ಅನೇಕ ಬ್ರಾಹ್ಮಣರು ಹಿಂಬಾಲಿಸಿದರು.

ಬ್ರಾಹ್ಮಣಾನಾಂ ಸಹಸ್ರಾಣಿ ಸ್ನಾತಕಾನಾಂ ಮಹಾತ್ಮನಾಮ್ ।
ದಶ ಮೋಕ್ಷವಿದಾಂ ತದ್ವದ್ ಯಾನ್ ಬಿಭರ್ತಿ ಯುಧಿಷ್ಠಿರಃ ॥೬॥

ಯುಧಿಷ್ಠಿರನು ಮಹಾತ್ಮರಾದ ಸಹಸ್ರಸ್ನಾತಕಬ್ರಾಹ್ಮಣರನ್ನು ಅದರಂತೆ ಮೋಕ್ಷಾಪೇಕ್ಷಿಗಳಾದ ಹತ್ತುಸಹಸ್ರ ಸಂನ್ಯಾಸಿಗಳನ್ನು ಪೋಷಿಸಿದನು.

ರುರೂನ್ ಕೃಷ್ಣಮೃಗಾಂಶ್ಚೈವ ಮೇಧ್ಯಾಂಶ್ಚಾನ್ಯಾನ್ ಮನೋರಮಾನ್ ।
ಬಾಣೈರುನ್ಮಥ್ಯ ವಿಧಿವದ್ ಬ್ರಾಹ್ಮಣೇಭ್ಯೋ ನ್ಯವೇದಯತ್ ॥೭॥

ರುರುಗಳನ್ನು ಕೃಷ್ಣಮೃಗಗಳನ್ನು ಮತ್ತು ಮೇಧ್ಯವಾದ ಮನೋಹರವಾದ ಬೇರೆ ಮೃಗಗಳನ್ನು ಬಾಣಗಳಿಂದ ಸಂಹರಿಸಿ ವಿಧಿಪೂರ್ವಕವಾಗಿ ಧರ್ಮರಾಜನು ಬ್ರಾಹ್ಮಣರಿಗೆ ನಿವೇದಿಸಿದನು.

ನ ತತ್ರ ಕಶ್ಚಿದ್ ದುರ್ವರ್ಣೋ ವ್ಯಾಧಿತೋ ವಾऽಪಿ ದೃಶ್ಯತೇ ।
ಕೃಶೋ ವಾ ದುರ್ಬಲೋ ವಾऽಪಿ ದೀನೋ ಭೀತೋऽಪಿ ವಾ ನರಃ ।
ನ ತತ್ರಾವಿನಯಃ ಕಶ್ಚಿದ್ ಅದೃಶ್ಯತ ತದಾ ದ್ವಿಜಃ ॥೮॥

ಅಲ್ಲಿ ಯಾವನೂ ದುರ್ವರ್ಣದವನಾಗಲೀ ಅಥವಾ ರೋಗಗ್ರಸ್ತನಾಗಲೀ ಕಾಣುತ್ತಿರಲಿಲ್ಲ. ಕೃಶನಾದವನು ದುರ್ಬಲನಾದವನು ದೀನನಾದವನು ಭೀತನಾದವನು ಯಾವ ಮನುಷ್ಯನೂ ಇರಲಿಲ್ಲ. ಅಥವಾ ಅಲ್ಲಿ ಅವಿನೀತನಾದ ಒಬ್ಬ ದ್ವಿಜನೂ ಕಾಣಬರುತ್ತಿರಲಿಲ್ಲ.

ಪುತ್ರಾನಿವ ಪ್ರಿಯಾನ್ ಜ್ಞಾತೀನ್ ಭ್ರಾತೄ ನಿವ ಸಹೋದರಾನ್ ।
ಪುಪೋಷ ಕೌರವಶ್ರೇಷ್ಠೋ ಧರ್ಮರಾಜೋ ಯುಧಿಷ್ಠಿರಃ ॥೯॥

ಕೌರವಶ್ರೇಷ್ಠನಾದ ಧರ್ಮರಾಜನಾದ ಯುಧಿಷ್ಠಿರನು ತನಗೆ ಪ್ರಿಯರಾದದಾಯಾದಿಗಳನ್ನು ಮಕ್ಕಳಂತೆ ಮತ್ತು ಒಡಹುಟ್ಟಿದ ಸಹೋದರರಂತೆ ಪೋಷಿಸಿದನು.

ಪತೀಂಶ್ಚ ದ್ರೌಪದೀ ಸರ್ವಾನ್ ದ್ವಿಜಾತೀಂಶ್ಚ ಯಶಸ್ವಿನೀ ।
ಮಾತೇವ ಭೋಜಯಿತ್ವಾಽಗ್ರೇ ಶಿಷ್ಟಮಾಹಾರಯತ್ ತದಾ ॥೧೦॥

ಯಶಸ್ವಿನಿಯಾದ ದ್ರೌಪದಿಯು ತಾಯಿಯಂತೆ ಎಲ್ಲಾ ಬ್ರಾಹ್ಮಣರಿಗೂ ಮತ್ತು ಪತಿಗಳಿಗೂ ಮೊದಲು ಭೋಜನಗಳನ್ನು ಬಡಿಸಿ ಉಳಿದುದನ್ನು ತಾನು ಸ್ವೀಕರಿಸುತ್ತಿದ್ದಳು.

ಪ್ರಾಚೀಂ ರಾಜಾ ದಕ್ಷಿಣಾಂ ಭೀಮಸೇನೋ
ಯಮೌ ಪ್ರತೀಚೀಮಥವಾಽಪ್ಯುದೀಚೀಮ್ ।
ಧನುರ್ಧರಾ ಮಾಂಸಹೇತೋರ್ಮೃಗಾಣಾಂ
ಕ್ಷಯಂ ಚಕ್ರುರ್ನಿತ್ಯಮೇವೋಪಗಮ್ಯ ॥೧೧॥

ಧರ್ಮರಾಜನು ಪೂರ್ವದಿಕ್ಕಿಗೂ ಭೀಮಸೇನನು ದಕ್ಷಿಣದಿಕ್ಕಿಗೂ ನಕುಲಸಹದೇವರು ಪಶ್ಚಿಮ ಅಥವಾ ಉತ್ತರದಿಕ್ಕಿಗೂ ಬಿಲ್ಲನ್ನು ಹಿಡಿದು ಹೊರಟು ಮಾಂಸದ ಸಲುವಾಗಿ ಮೃಗಗಳನ್ನು ಸಮೀಪಿಸಿ ಬೇಟೆಯಾಡುತ್ತಿದ್ದರು.

ತಥಾ ತೇಷಾಂ ಮಮಾಂ ಕಾಮ್ಯಕೇ ವೈ
ವಿಹೀನಾನಾಮರ್ಜುನೇನೋತ್ಸುಕಾನಾಮ್ ।
ಪಂಚೈವ ವರ್ಷಾಣಿ ತಥಾ ವ್ಯತೀಯುಃ ।
ಅಧೀಯತಾಂ ಜಪತಾಂ ಜುಹ್ವತಾಂ ಚ ॥೧೨॥

ಹಾಗೆ ಅರ್ಜುನನಿಂದ ರಹಿತರಾಗಿ ಅರ್ಜುನನನ್ನು ನೋಡುವ ತವಕದಿಂದ ಕಾಮ್ಯಕವನದಲ್ಲಿ ಅಧ್ಯಯನವನ್ನೂ ಜಪವನ್ನೂ ಹೋಮವನ್ನೂ ಮಾಡುತ್ತಿದ್ದ ಅವರಿಗೆ ಐದು ವರ್ಷಗಳು ಕಳೆದುಹೋದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

## ನಲವತ್ತಾಲ್ಕನೆಯ ಅಧ್ಯಾಯ

(ಸಂಜಯನ ಎದುರಿನಲ್ಲಿ ಧೃತರಾಷ್ಟ್ರನ ಶೋಕ ಮತ್ತು ಸಂಜಯನ ಉತ್ತರ)

**ವೈಶಂಪಾಯನಃ**

ದೀರ್ಘಮುಷ್ಣಂ ಸುನಿಃಶ್ವಸ್ಯ ಧೃತರಾಷ್ಟ್ರೋಽಂಬಿಕಾಸುತಃ ।
ಅಬ್ರವೀತ್ ಸಂಜಯಂ ಸೂತಮಾಮಂತ್ರ್ಯ ಭರತರ್ಷಭ ॥೧॥

ಎಲೈ ಭರತರ್ಷಭನೇ ಅಂಬಿಕಾಸುತನಾದ ಧೃತರಾಷ್ಟ್ರನು ದೀರ್ಘವಾದ ಉಷ್ಣವಾದ ನಿಟ್ಟುಸಿರನ್ನು ಬಿಟ್ಟು ಸೂತನಾದ ಸಂಜಯನನ್ನು ಕರೆದು ಮಾತನಾಡಿದನು.

ದೇವಪುತ್ರೌ ಮಹಾಭಾಗೌ ದೇವರಾಜಸಮದ್ಯುತೀ ।
ನಕುಲಃ ಸಹದೇವಶ್ಚ ಪಾಂಡವೌ ಯುದ್ಧದುರ್ಮದೌ ॥೨॥

ದೃಢಾಯುಧೌ ದೂರಪಾತೌ ಯುದ್ಧೇ ಚ ಕೃತನಿಶ್ಚಯೌ ।
ಶೀಘ್ರಹಸ್ತೌ ದೃಢಕ್ರೋಧೌ ನಿತ್ಯಯುಕ್ತೌ ರಥೇ ಸ್ಥಿತೌ ॥೩॥

ದೇವರಾಜನಿಗೆ ಸಮಾನವಾದ ಕಾಂತಿಯುಳ್ಳ ದೇವಪುತ್ರರಾದ ಮಹಾನುಭಾವರಾದ ಪಾಂಡವರಾದ ನಕುಲಸಹದೇವರು ಯುದ್ಧದುರ್ಮದರಾಗಿದ್ದಾರೆ. ಅವರು ದೃಢವಾದ ಆಯುಧಗಳನ್ನು ಧರಿಸಿ ದೂರದ ಗುರಿಯನ್ನು ಭೇದಿಸುವ ವ್ಯಕ್ತಿತ್ವವುಳ್ಳವರು. ವೇಗನೇ ಬಾಣಗಳನ್ನು ಪ್ರಯೋಗಿಸುವ ಕೈಚಳಕವುಳ್ಳವರು. ದೃಢವಾದ ಕ್ರೋಧವನ್ನು ಹೊಂದಿದ್ದಾರೆ. ಯುದ್ಧವನ್ನು ಮಾಡುವುದೆಂದು ನಿಶ್ಚಯಿಸಿ ಯಾವಾಗಲೂ ರಥದಲ್ಲಿ ನಿರತರಾಗಿದಾರೆ.

ಭೀಮಾರ್ಜುನೌ ಪುರೋಧಾಯ ಯದಾ ತೌ ರಣಮೂರ್ಧನಿ ।
ಸ್ಥಾಸ್ಯೇತೇ ಸಿಂಹವಿಕ್ರಾಂತಾವಶ್ವಿನಾವಿವ ದುಸ್ಸಹೌ ।
ನ ಶೇಷಮನುಪಶ್ಯಾಮಿ ಮಮ ಸೈನ್ಯಸ್ಯ ಸಂಜಯ ॥೪॥

ಸಿಂಹವಿಕ್ರಮಶಾಲಿಗಳಾದ ದುಸ್ಸಹರಾದ ಅಶ್ವಿನೀದೇವತೆಗಳಂತೆ ಇರುವ ಅವರು ಭೀಮಾರ್ಜುನರನ್ನು ಮುಂದೆಮಾಡಿಕೊಂಡು ಯುದ್ಧದಲ್ಲಿ ಅಗ್ರಭಾಗದಲ್ಲಿ ನಿಂತಾಗ ಎಲೈ ಸಂಜಯನೇ, ನನ್ನ ಸೈನ್ಯವು ಉಳಿಯುವುದಿಲ್ಲವೆಂದು ನಾನು ಭಾವಿಸುತ್ತೇನೆ.

ತೌ ಹ್ಯಪ್ರತಿರಥೌ ಯುದ್ಧೇ ದೇವಪುತ್ರೌ ಮಹಾಬಲೌ ।
ದ್ರೌಪದ್ಯಾಸ್ತಂ ಪರಿಕ್ಲೇಶಂ ನ ಕ್ಷಂಸ್ಯೇತೇಽತ್ಯಮರ್ಷಿಣೌ ॥೫॥

ಯುದ್ಧದಲ್ಲಿ ಅಪ್ರತಿರಥರೂ ದೇವಪುತ್ರರೂ ಮಹಾಬಲಿಷ್ಠರೂ ಮಹಾಕೋಪವುಳ್ಳವರೂ ಆದ ಅವರಿಬ್ಬರೂ ದ್ರೌಪದಿಯ ಆ ಪರಿಕ್ಲೇಶವನ್ನು ಕ್ಷಮಿಸುವುದಿಲ್ಲ.

ವೃಷ್ಣಯೋಽಥ ಮಹೇಷ್ವಾಸಾಃ ಪಾಂಚಾಲಾಶ್ಚಾಮಿತೌಜಸಃ ।
ಯುಧಿ ಸತ್ಯಾಭಿಸಂಧೇನ ವಾಸುದೇವೇನ ರಕ್ಷಿತಾಃ ।
ಪ್ರಧಕ್ಷ್ಯಂತಿ ರಣೇ ಪಾರ್ಥಾಃ ಪುತ್ರಾಣಾಂ ಮಮ ವಾಹಿನೀಮ್ ॥

ಮಹಾಧನ್ರ್ಧಾರಿಗಳಾದ ವೃಷ್ಣಿಗಳು ಮತ್ತು ಅಮಿತಪರಾಕ್ರಮಿಗಳಾದ ಪಾಂಚಾಲರು ಯುದ್ಧದಲ್ಲಿ ಸತ್ಯಸಂಧನಾದ ಕೃಷ್ಣನಿಂದ ರಕ್ಷಿಸಲ್ಪಟ್ಟವರಾಗಿ ಪಾಂಡವರೂ ಸೇರಿ ನನ್ನ ಪುತ್ರರ ಸೈನ್ಯವನ್ನು ದಹಿಸುತ್ತಾರೆ.

ರಾಮಕೃಷ್ಣಪ್ರಣೀತಾನಾಂ ವೃಷ್ಣೀನಾಂ ಸೂತನಂದನ ।
ನ ಶಕ್ಯಃ ಸಹಿತುಂ ವೇಗಃ ಪರ್ವತೈರಪಿ ದುಸ್ಸಹಃ ॥೮॥

ಎಲೈ ಸೂತನಂದನನೇ, ರಾಮಕೃಷ್ಣರನ್ನು ನಾಯಕರಾಗುಳ್ಳ ವೃಷ್ಣಿಗಳ ವೇಗವು ಪರ್ವತಗಳಿಂದಲೂ ಸಹಿಸಲು ಅಸಾಧ್ಯವಾದುದು. ಅದನ್ನು ಯಾರೂ ಸಹಿಸಲಾರರು.

ತೇಷಾಂ ಮಧ್ಯೇ ಮಹೇಷ್ವಾಸೋ ಭೀಮೋ ಭೀಮಪರಾಕ್ರಮಃ ।
ಶೈಕ್ಯಯಾ ವೀರಘಾತಿನ್ಯಾ ಗದಯಾ ವಿಚರಿಷ್ಯತಿ ॥೯॥

ಅವರ ಮಧ್ಯದಲ್ಲಿ ಮಹಾಧನ್ರ್ಧಾರಿಯೂ ಭಯಂಕರ- ಪರಾಕ್ರಮವುಳ್ಳವನೂ ಆದ ಭೀಮನು ನೆಲುವಿನಲ್ಲಿ ತೂಗುಹಾಕಿರುವ ವೀರರನ್ನೂ ಸದೆಬಡಿಯುವ ತನ್ನ ಗದೆಯನ್ನು ಹಿಡಿದು ಸಂಚರಿಸುವನು.

ತಥಾ ಗಾಂಡೀವನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ಗದಾವೇಗಂ ಚ ಭೀಮಸ್ಯ ನಾಲಂ ಸೋಢುಂ ನರಾಧಿಪಾಃ ॥೧೦॥

ಹಾಗೆಯೇ ಸಿಡಿಲಿನ ಅಬ್ಬರದಂತಿರುವ ಗಾಂಡೀವದ ಘೋಷವನ್ನೂ ಭೀಮಸೇನನ ಗದಾವೇಗವನ್ನೂ ಯಾವ ರಾಜರೂ ಸಹಿಸಲಾರರು.

ತತೋಽಹಂ ಸುಹೃದಾಂ ವಾಚೋ ದುರ್ಯೋಧನವಶಾನುಗಃ ।
ಸ್ಮರಣೀಯಾಃ ಸ್ಮರಿಷ್ಯಾಮಿ ಮಯಾ ಯನ್ನ ಕೃತಂ ಪುರಾ ॥೧೧॥

ಆಗ ದುರ್ಯೋಧನನವಶನಾದ ನಾನು ಯಾರ ಮಾತನ್ನು ಹಿಂದೆ ನಡೆಸಲಿಲ್ಲವೋ ಅಂತಹ ಸ್ಮರಣೆಗೆ ಯೋಗ್ಯವಾದ ಹಿತೈಷಿಗಳ ಮಾತನ್ನು ಸ್ಮರಿಸಿಕೊಳ್ಳುವೆನು.

ಸಂಜಯಃ

ವ್ಯತಿಕ್ರಮೋಽಯಂ ಸುಮಹಾನ್ ತ್ವಯಾ ರಾಜನ್ನುಪೇಕ್ಷಿತಃ ।
ಸಮರ್ಥೇನಾಪಿ ಯನ್ಮೋಹಾತ್ ಪುತ್ರಸ್ತೇ ನ ನಿವಾರಿತಃ ॥೧೨॥

ರಾಜನೇ! ನೀನು ಸಮರ್ಥನಾಗಿದ್ದರೂ ಮೋಹದಿಂದ ನಿನ್ನ ಪುತ್ರನನ್ನು ನಿವಾರಿಸಲಿಲ್ಲ. ಈ ದೊಡ್ಡ ಧರ್ಮದ ಉಲ್ಲಂಘನೆಯು ನಿನ್ನಿಂದ ಉಪೇಕ್ಷಿಸಲ್ಪಟ್ಟಿತು.

ಶುತ್ವಾಽಯಂ ನಿರ್ಜಿತಾನ್ ದ್ಯೂತೇ ಪಾಂಡವಾನ್ ಮಧುಸೂದನಃ।
ತ್ವರಿತಃ ಕಾಮ್ಯಕೇ ಪಾರ್ಥಾನ್ ಸಮಭಾವಯದಚ್ಯುತಃ ॥೧೩॥

ದ್ಯೂತದಲ್ಲಿ ಪಾಂಡವರು ಪರಾಜಿತರಾದರೆಂದು ಕೇಳಿದ ಮಧುಸೂದನನಾದ ಅಚ್ಯುತನು ತಕ್ಷಣ ಕಾಮ್ಯಕ ವನಕ್ಕೆ ಬಂದು ಪಾಂಡವರನ್ನು ಸತ್ಕರಿಸಿದನು.

ದ್ರುಪದಸ್ಯ ತಥಾ ಪುತ್ರಾ ಧೃಷ್ಟದ್ಯುಮ್ನಪುರೋಗಮಾಃ ।
ವಿರಾಟೋ ಧೃಷ್ಟಕೇತುಶ್ಚ ಕೇಕಯಾಶ್ಚ ಮಹಾರಥಾಃ ॥೧೪॥

ಹಾಗೆಯೇ ದ್ರುಪದನ ಪುತ್ರನಾದ ಧೃಷ್ಟದ್ಯುಮ್ನ ಮೊದಲಾದವರು ಮತ್ತು ಮಹಾರಥರಾದ ವಿರಾಟ ಧೃಷ್ಟಕೇತು ಕೈಕೆಯ ರಾಜರುಗಳು (ಪಾಂಡವರನ್ನು) ಸತ್ಕರಿಸಿದರು.

ತೈಶ್ಚ ಯತ್ ಕಥಿತಂ ದೃಷ್ಟ್ವಾ ತತ್ರ ಪಾರ್ಥಾಂಸ್ತಥಾಗತಾನ್ ।
ಚಾರೇಣ ವಿದಿತಂ ಸರ್ವಂ ತನ್ಮಯಾ ವೇದಿತಂ ಚ ತೇ ॥೧೫॥

ಅವರು ಆ ಅವಸ್ಥೆಯಲ್ಲಿದ್ದ ಪಾಂಡವರನ್ನು ನೋಡಿ ಆಡಿದ ಮಾತುಗಳನ್ನು ನಾನು ಚಾರರ ಮೂಲಕ ತಿಳಿದು ಎಲ್ಲವನ್ನೂ ನಿನಗೆ ತಿಳಿಸಿದ್ದೇನೆ.

ಸಮಾಗಮ್ಯ ವೃತಸ್ತತ್ರ ಪಾಂಡವೈರ್ಮಧುಸೂದನಃ ।
ಸಾರಥ್ಯೇ ಫಲ್ಗುನಸ್ಯಾಜೌ ತಥೇತ್ಯಾಹ ಚ ತಾನ್ ಹರಿಃ ॥೧೬॥

ಅಲ್ಲಿ ಪಾಂಡವರ ಸಮಾಗಮವನ್ನು ಹೊಂದಿದ ಮಧುಸೂದನನು ಅರ್ಜುನನಿಂದ ಸಾರಥ್ಯದಲ್ಲಿ ಪ್ರಾರ್ಥಿಸಲ್ಪಟ್ಟವನಾಗಿ ಹಾಗೆಯೇ ಆಗಲಿ ಎಂದು ಅವರನ್ನು ಕುರಿತು ಹೇಳಿದನು.

ಪತೀಂಶ್ಚ ದ್ರೌಪದೀ ಸರ್ವಾನ್ ದ್ವಿಜಾತೀಂಶ್ಚ ಯಶಸ್ವಿನೀ ।
ಮಾತೇವ ಭೋಜಯಿತ್ವಾಽಗ್ರೇ ಶಿಷ್ಟಮಾಹಾರಯತ್ ತದಾ ॥೧೦॥

ಯಶಸ್ವಿನಿಯಾದ ದ್ರೌಪದಿಯು ತಾಯಿಯಂತೆ ಎಲ್ಲಾ ಬ್ರಾಹ್ಮಣರಿಗೂ ಮತ್ತು ಪತಿಗಳಿಗೂ ಮೊದಲು ಭೋಜನಗಳನ್ನು ಬಡಿಸಿ ಉಳಿದುದನ್ನು ತಾನು ಸ್ವೀಕರಿಸುತ್ತಿದ್ದಳು.

ಪ್ರಾಚೀಂ ರಾಜಾ ದಕ್ಷಿಣಾಂ ಭೀಮಸೇನೋ
ಯಮೌ ಪ್ರತೀಚೀಮಥವಾಽಪ್ಯುದೀಚೀಮ್ ।
ಧನುರ್ಧರಾ ಮಾಂಸಹೇತೋರ್ಮೃಗಾಣಾಂ
ಕ್ಷಯಂ ಚಕ್ರುರ್ನಿತ್ಯಮೇವೋಪಗಮ್ಯ ॥೧೧॥

ಧರ್ಮರಾಜನು ಪೂರ್ವದಿಕ್ಕಿಗೂ ಭೀಮಸೇನನು ದಕ್ಷಿಣದಿಕ್ಕಿಗೂ ನಕುಲಸಹದೇವರು ಪಶ್ಚಿಮ ಅಥವಾ ಉತ್ತರದಿಕ್ಕಿಗೂ ಬಿಲ್ಲನ್ನು ಹಿಡಿದು ಹೊರಟು ಮಾಂಸದ ಸಲುವಾಗಿ ಮೃಗಗಳನ್ನು ಸಮೀಪಿಸಿ ಬೇಟೆಯಾಡುತ್ತಿದ್ದರು.

ತಥಾ ತೇಷಾಂ ವಸತಾಂ ಕಾಮ್ಯಕೇ ವೈ
ವಿಹೀನಾನಾಮರ್ಜುನೇನೋತ್ಸುಕಾನಾಮ್ ।
ಪಂಚೈವ ವರ್ಷಾಣಿ ತಥಾ ವ್ಯತೀಯುಃ ।
ಅಧೀಯತಾಂ ಜಪತಾಂ ಜುಹ್ವತಾಂ ಚ ॥೧೨॥

ಹಾಗೆ ಅರ್ಜುನನಿಂದ ರಹಿತರಾಗಿ ಅರ್ಜುನನನ್ನು ನೋಡುವ ತವಕದಿಂದ ಕಾಮ್ಯಕವನದಲ್ಲಿ ಅಧ್ಯಯನವನ್ನೂ ಜಪವನ್ನೂ ಹೋಮವನ್ನೂ ಮಾಡುತ್ತಿದ್ದ ಅವರಿಗೆ ಐದು ವರ್ಷಗಳು ಕಳೆದುಹೋದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

## ನಲವತ್ನಾಲ್ಕನೆಯ ಅಧ್ಯಾಯ

(ಸಂಜಯನ ಎದುರಿನಲ್ಲಿ ಧೃತರಾಷ್ಟ್ರನ ಶೋಕ ಮತ್ತು ಸಂಜಯನ ಉತ್ತರ)

**ವೈಶಂಪಾಯನಃ**

ದೀರ್ಘಮುಷ್ಣಂ ಸುನಿಃಶ್ವಸ್ಯ ಧೃತರಾಷ್ಟ್ರೋಽಂಬಿಕಾಸುತಃ ।
ಅಬ್ರವೀತ್ ಸಂಜಯಂ ಸೂತಮಾಮಂತ್ರ್ಯ ಭರತರ್ಷಭ ॥೧॥

ಎಲೈ ಭರತರ್ಷಭನೇ ಅಂಬಿಕಾಸುತನಾದ ಧೃತರಾಷ್ಟ್ರನು ದೀರ್ಘವಾದ ಉಷ್ಣವಾದ ನಿಟ್ಟುಸಿರನ್ನು ಬಿಟ್ಟು ಸೂತನಾದ ಸಂಜಯನನ್ನು ಕರೆದು ಮಾತನಾಡಿದನು.

ದೇವಪುತ್ರೌ ಮಹಾಭಾಗೌ ದೇವರಾಜಸಮದ್ಯುತೀ ।
ನಕುಲಃ ಸಹದೇವಶ್ಚ ಪಾಂಡವೌ ಯುದ್ಧದುರ್ಮದೌ ॥೨॥

ದೃಢಾಯುಧೌ ದೂರಪಾತೌ ಯುದ್ಧೇ ಚ ಕೃತನಿಶ್ಚಯೌ ।
ಶೀಘ್ರಹಸ್ತೌ ದೃಢಕ್ರೋಧೌ ನಿತ್ಯಯುಕ್ತೌ ರಥೇ ಸ್ಥಿತೌ ॥೩॥

ದೇವರಾಜನಿಗೆ ಸಮಾನವಾದ ಕಾಂತಿಯುಳ್ಳ ದೇವಪುತ್ರರಾದ ಮಹಾನುಭಾವರಾದ ಪಾಂಡವರಾದ ನಕುಲಸಹದೇವರು ಯುದ್ಧ ದುರ್ಮದರಾಗಿದ್ದಾರೆ. ಅವರು ದೃಢವಾದ ಆಯುಧಗಳನ್ನು ಧರಿಸಿ ದೂರದ ಗುರಿಯನ್ನು ಭೇಧಿಸುವ ವ್ಯಕ್ತಿತ್ವವುಳ್ಳವರು. ಬೇಗನೇ ಬಾಣಗಳನ್ನು ಪ್ರಯೋಗಿಸುವ ಕೈಚಳಕವುಳ್ಳವರು, ದೃಢವಾದ ಕ್ರೋಧವನ್ನು ಹೊಂದಿದ್ದಾರೆ. ಯುದ್ಧವನ್ನು ಮಾಡುವುದೆಂದು ನಿಶ್ಚಯಿಸಿ ಯಾವಾಗಲೂ ರಥದಲ್ಲಿ ನಿರತರಾಗಿದಾರೆ.

ಭೀಮಾರ್ಜುನೌ ಪುರೋಧಾಯ ಯದಾ ತೌ ರಣಮೂರ್ಧನಿ ।
ಸ್ಥಾಸ್ಯೇತೇ ಸಿಂಹವಿಕ್ರಾಂತಾವಶ್ವಿನಾವಿವ ದುಸ್ಸಹೌ ।
ನ ಶೇಷಮನುಪಶ್ಯಾಮಿ ಮಮ ಸೈನ್ಯಸ್ಯ ಸಂಜಯ ॥೪॥

ಸಿಂಹವಿಕ್ರಮಶಾಲಿಗಳಾದ ದುಸ್ಸಹರಾದ ಅಶ್ವಿನೀದೇವತೆಗಳಂತೆ ಇರುವ ಅವರು ಭೀಮಾರ್ಜುನರನ್ನು ಮುಂದೆಮಾಡಿಕೊಂಡು ಯುದ್ಧದಲ್ಲಿ ಅಗ್ರಭಾಗದಲ್ಲಿ ನಿಂತಾಗ ಎಲೈ ಸಂಜಯನೇ, ನನ್ನ ಸೈನ್ಯವು ಉಳಿಯುವುದಿಲ್ಲವೆಂದು ನಾನು ಭಾವಿಸುತ್ತೇನೆ.

ತೌ ಹ್ಯಪ್ರತಿರಥೌ ಯುದ್ಧೇ ದೇವಪುತ್ರೌ ಮಹಾಬಲೌ ।
ದ್ರೌಪದ್ಯಾಸ್ತಂ ಪರಿಕ್ಲೇಶಂ ನ ಕ್ಷಂಸ್ಯೇತೇಽತ್ಯಮರ್ಷಿಣೌ ॥೫॥

ಯುದ್ಧದಲ್ಲಿ ಅಪ್ರತಿರಥರೂ ದೇವಪುತ್ರರೂ ಮಹಾಬಲಿಷ್ಠರೂ ಮಹಾಕೋಪವುಳ್ಳವರೂ ಆದ ಅವರಿಬ್ಬರೂ ದ್ರೌಪದಿಯ ಆ ಪರಿಕ್ಲೇಶವನ್ನು ಕ್ಷಮಿಸುವುದಿಲ್ಲ.

ವೃಷ್ಣಯೋಽಥ ಮಹೇಷ್ವಾಸಾಃ ಪಾಂಚಾಲಾಶ್ಚಾಮಿತೌಜಸಃ ।
ಯುಧಿ ಸತ್ಯಾಭಿಸಂಧೇನ ವಾಸುದೇವೇನ ರಕ್ಷಿತಾಃ ।
ಪ್ರಧಕ್ಷ್ಯಂತಿ ರಣೇ ಪಾರ್ಥಾಃ ಪುತ್ರಾಣಾಂ ಮಮ ವಾಹಿನೀಮ್ ॥

ಮಹಾಧನ್ರ್ಧಾರಿಗಳಾದ ವೃಷ್ಣಿಗಳು ಮತ್ತು ಅಮಿತಪರಾಕ್ರಮಿಗಳಾದ ಪಾಂಚಾಲರು ಯುದ್ಧದಲ್ಲಿ ಸತ್ಯಸಂಧನಾದ ಕೃಷ್ಣನಿಂದ ರಕ್ಷಿಸಲ್ಪಟ್ಟವರಾಗಿ ಪಾಂಡವರೂ ಸೇರಿ ನನ್ನ ಪುತ್ರರ ಸೈನ್ಯವನ್ನು ದಹಿಸುತ್ತಾರೆ.

ರಾಮಕೃಷ್ಣಪ್ರಣೀತಾನಾಂ ವೃಷ್ಣೀನಾಂ ಸೂತನಂದನ ।
ನ ಶಕ್ಯಃ ಸಹಿತುಂ ವೇಗಃ ಪರ್ವತೈರಪಿ ದುಸ್ಸಹಃ ॥೮॥

ಎಲೈ ಸೂತನಂದನನೇ, ರಾಮಕೃಷ್ಣರನ್ನು ನಾಯಕರಾಗುಳ್ಳ ವೃಷ್ಣಿಗಳ ವೇಗವು ಪರ್ವತಗಳಿಂದಲೂ ಸಹಿಸಲು ಅಸಾಧ್ಯವಾದುದು. ಅದನ್ನು ಯಾರೂ ಸಹಿಸಲಾರರು.

ತೇಷಾಂ ಮಧ್ಯೇ ಮಹೇಷ್ವಾಸೋ ಭೀಮೋ ಭೀಮಪರಾಕ್ರಮಃ ।
ಶೈಕ್ಯಯಾ ವೀರಘಾತಿನ್ಯಾ ಗದಯಾ ವಿಚರಿಷ್ಯತಿ ॥೯॥

ಅವರ ಮಧ್ಯದಲ್ಲಿ ಮಹಾಧನ್ರ್ಧಾರಿಯೂ ಭಯಂಕರ- ಪರಾಕ್ರಮವುಳ್ಳವನೂ ಆದ ಭೀಮನು ನೆಲುವಿನಲ್ಲಿ ತೂಗುಹಾಕಿರುವ ವೀರರನ್ನೂ ಸದೆಬಡಿಯುವ ತನ್ನ ಗದೆಯನ್ನು ಹಿಡಿದು ಸಂಚರಿಸುವನು.

ತಥಾ ಗಾಂಡೀವನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ಗದಾವೇಗಂ ಚ ಭೀಮಸ್ಯ ನಾಲಂ ಸೋಢುಂ ನರಾಧಿಪಾಃ ॥೧೦॥

ಹಾಗೆಯೇ ಸಿಡಿಲಿನ ಅಬ್ಬರದಂತಿರುವ ಗಾಂಡೀವದ ಘೋಷವನ್ನೂ ಭೀಮಸೇನನ ಗದಾವೇಗವನ್ನೂ ಯಾವ ರಾಜರೂ ಸಹಿಸಲಾರರು.

ತತೋಽಹಂ ಸುಹೃದಾಂ ವಾಚೋ ದುರ್ಯೋಧನವಶಾನುಗಃ ।
ಸ್ಮರಣೀಯಾಃ ಸ್ಮರಿಷ್ಯಾಮಿ ಮಯಾ ಯನ್ನ ಕೃತಂ ಪುರಾ ॥೧೧॥

ಆಗ ದುರ್ಯೋಧನನವಶನಾದ ನಾನು ಯಾರ ಮಾತನ್ನು ಹಿಂದೆ ನಡೆಸಲಿಲ್ಲವೋ ಅಂತಹ ಸ್ಮರಣೆಗೆ ಯೋಗ್ಯವಾದ ಹಿತೈಷಿಗಳ ಮಾತನ್ನು ಸ್ಮರಿಸಿಕೊಳ್ಳುವೆನು.

ಸಂಜಯಃ

ವ್ಯತಿಕ್ರಮೋಽಯಂ ಸುಮಹಾನ್ ತ್ವಯಾ ರಾಜನ್ನುಪೇಕ್ಷಿತಃ ।
ಸಮರ್ಥೇನಾಪಿ ಯನ್ಮೋಹಾತ್ ಪುತ್ರಸ್ಯೇ ನ ನಿವಾರಿತಃ ॥೧೨॥

ರಾಜನೇ! ನೀನು ಸಮರ್ಥನಾಗಿದ್ದರೂ ಮೋಹದಿಂದ ನಿನ್ನ ಪುತ್ರನನ್ನು ನಿವಾರಿಸಲಿಲ್ಲ. ಈ ದೊಡ್ಡ ಧರ್ಮದ ಉಲ್ಲಂಘನೆಯು ನಿನ್ನಿಂದ ಉಪೇಕ್ಷಿಸಲ್ಪಟ್ಟಿತು.

ಶ್ರುತ್ವಾಽಯಂ ನಿರ್ಜಿತಾನ್ ದ್ಯೂತೇ ಪಾಂಡವಾನ್ ಮಧುಸೂದನಃ।
ತ್ವರಿತಃ ಕಾಮ್ಯಕೇ ಪಾರ್ಥಾನ್ ಸಮಭಾವಯದಚ್ಯುತಃ ॥೧೩॥

ದ್ಯೂತದಲ್ಲಿ ಪಾಂಡವರು ಪರಾಜಿತರಾದರೆಂದು ಕೇಳಿದ ಮಧುಸೂದನನಾದ ಅಚ್ಯುತನು ತಕ್ಷಣ ಕಾಮ್ಯಕ ವನಕ್ಕೆ ಬಂದು ಪಾಂಡವರನ್ನು ಸತ್ಕರಿಸಿದನು.

ದ್ರುಪದಸ್ಯ ತಥಾ ಪುತ್ರಾ ಧೃಷ್ಟದ್ಯುಮ್ನಪುರೋಗಮಾಃ ।
ವಿರಾಟೋ ಧೃಷ್ಟಕೇತುಶ್ಚ ಕೇಕಯಾಶ್ಚ ಮಹಾರಥಾಃ ॥೧೪॥

ಹಾಗೆಯೇ ದ್ರುಪದನ ಪುತ್ರನಾದ ಧೃಷ್ಟದ್ಯುಮ್ನ ಮೊದಲಾದವರು ಮತ್ತು ಮಹಾರಥರಾದ ವಿರಾಟ ಧೃಷ್ಟಕೇತು ಕೈಕೆಯ ರಾಜರುಗಳು (ಪಾಂಡವರನ್ನು) ಸತ್ಕರಿಸಿದರು.

ತೈಶ್ಚ ಯತ್ ಕಥಿತಂ ದೃಷ್ಟ್ವಾ ತತ್ರ ಪಾರ್ಥಾಂಸ್ತಥಾಗತಾನ್ ।
ಚಾರೇಣ ವಿದಿತಂ ಸರ್ವಂ ತನ್ಮಯಾ ವೇದಿತಂ ಚ ತೇ ॥೧೫॥

ಅವರು ಆ ಅವಸ್ಥೆಯಲ್ಲಿದ್ದ ಪಾಂಡವರನ್ನು ನೋಡಿ ಆಡಿದ ಮಾತುಗಳನ್ನು ನಾನು ಚಾರರ ಮೂಲಕ ತಿಳಿದು ಎಲ್ಲವನ್ನೂ ನಿನಗೆ ತಿಳಿಸಿದ್ದೇನೆ.

ಸಮಾಗಮ್ಯ ವೃತಸ್ತತ್ರ ಪಾಂಡವೈರ್ಮಧುಸೂದನಃ ।
ಸಾರಥ್ಯೇ ಫಲ್ಗುನಸ್ಯಾಜೌ ತಥೇತ್ಯಾಹ ಚ ತಾನ್ ಹರಿಃ ॥೧೬॥

ಅಲ್ಲಿ ಪಾಂಡವರ ಸಮಾಗಮವನ್ನು ಹೊಂದಿದ ಮಧುಸೂದನನು ಅರ್ಜುನನಿಂದ ಸಾರಥ್ಯದಲ್ಲಿ ಪ್ರಾರ್ಥಿಸಲ್ಪಟ್ಟವನಾಗಿ ಹಾಗೆಯೇ ಆಗಲಿ ಎಂದು ಅವರನ್ನು ಕುರಿತು ಹೇಳಿದನು.

ಅಮರ್ಷೀ ಸಹಿ ಕೃಷ್ಣೋಽಪಿ ದೃಷ್ಟ್ವಾ ಪಾರ್ಥಾಂಸ್ತಥಾಗತಾನ್ ।
ಕೃಷ್ಣಾಜಿನೋತ್ತರಸಂಗಾನಬ್ರವೀಚ್ಚ ಯುಧಿಷ್ಠಿರಮ್ ॥೧೭॥

ಕೃಷ್ಣಾಜಿನದ ಉತ್ತರೀಯಗಳನ್ನು ಧರಿಸಿ ಅಂತಹ ಅವಸ್ಥೆಯಲ್ಲಿ ಇದ್ದ ಪಾಂಡವರನ್ನು ನೋಡಿ ಕ್ರೋಧವಶನಾದ ಕೃಷ್ಣನು ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು.

ಯಾ ಸಾ ಸಮೃದ್ಧಿಃ ಪಾರ್ಥಾನಾಮಿಂದ್ರಪ್ರಸ್ಥೇ ಬಭೂವ ಹ ।
ರಾಜಸೂಯೇ ಮಯಾ ದೃಷ್ಟ್ವಾ ನೃಪೈರನ್ಯೈಃ ಸುದುರ್ಲಭಾ ॥೧೮॥

ಯತ್ರ ಸರ್ವಾನ್ ಮಹೀಪಾಲಾನ್ ಶಸ್ತ್ರತೇಜೋಭಯಾರ್ದಿತಾನ್ ।
ಕಲಿಂಗಾಂಗಮರೂನ್ ಪೌಂಡ್ರಾನ್ ಸಚೋಲದ್ರಮಿಳಾಂಧ್ರಕಾನ್ ॥೧೯॥

ಸಾಗರಾನೂಪಕಾಂಶ್ಚೈವ ಯೇ ಚ ಪತ್ತನವಾಸಿನಃ ।
ಸಿಂಹಳಾನ್ ಬರ್ಬರಾನ್ ಮ್ಲೇಚ್ಛಾನ್ ಯೇ ಚ ಜಾಂಗಲವಾಸಿನಃ ॥

ಪಶ್ಚಿಮಾನಿ ಚ ರಾಜ್ಯಾನಿ ಶತಶಃ ಸಾಗರಾಂತಿಕಾನ್ ।
ಪಲ್ಲವಾನ್ ದರದಾನ್ ಸರ್ವಾನ್ ಕಿರಾತಾನ್ ಯವನಾನ್ ಶಕಾನ್ ॥

ಹಾರಹೂಣಾಂಶ್ಚ ಚೀರಾಂಶ್ಚ ತುಷಾರಾನ್ ಸೈಂಧವಾಂಸ್ತಥಾ ।
ವಂಗಾಂಶ್ಚ ಮಗಧಾನ್ ಪುಂಡ್ರಾನ್ ಸ್ತ್ರೀರಾಜ್ಯಾನಥ ತಂಕಣಾನ್ ॥೨೨॥

ಕೇಕಯಾನ್ ಮಾಳವಾಂಶ್ಚೈವ ತಥಾ ಕಾಶ್ಮೀರಕಾನಪಿ ।
ಏತೇ ಚಾನ್ಯೇ ಚ ಬಹವೋ ಯೇ ಚ ತೇ ಭರತರ್ಷಭ ।
ಆಗತಾನಹಮದ್ರಾಕ್ಷಂ ಯಜ್ಞೇ ತೇ ಪರಿವೇಷಕಾನ್ ॥೨೩॥

ರಾಜಸೂಯಯಾಗದಲ್ಲಿ ಇಂದ್ರಪ್ರಸ್ಥದಲ್ಲಿ ಸುದುರ್ಲಭವಾದ ಪಾಂಡವರ ಯಾವ ಸಮೃದ್ಧಿಯನ್ನು ನಾನು ನೋಡಿದ್ದನೋ ಎಲ್ಲಿ ಪಾಂಡವರ ಶಸ್ತ್ರ ಮತ್ತು ಪರಾಕ್ರಮಗಳ ಭಯದಿಂದ ಪೀಡಿತರಾದ ಕಳಿಂಗ ಅಂಗ ಮರು ಪೌಂಡ್ರ ಚೋಳ ದ್ರಮಿಳ ಆಂಧ್ರಕ ರಾಜರು ಸಾಗರತೀರವಾಸಿಗಳು ಪಟ್ಟಣವಾಸಿಗಳು ಸಿಂಹಳರಾಜರು ಬರ್ಬರರು ಮ್ಲೇಂಚ್ಛರು ಜಾಂಗಲವಾಸಿಗಳೂ ಆದ ರಾಜರುಗಳು ಪಶ್ಚಿಮದಿಕ್ಕಿನಲ್ಲಿ ಸಾಗದರ ಸಮೀಪದಲ್ಲಿ ಇರುವ ನೂರಾರು ರಾಜ್ಯದ ರಾಜರುಗಳು ಪಲ್ಲವರು ದರದರು ಎಲ್ಲಾ ಕಿರಾತರು ಯವನರು ಶಕರು ಹಾರಹೂಣರು ಚೀರರು ತುಷಾರರು ಸೈಂಧವರು ವಂಗರು ಮಗಧರು ಪುಂಡ್ರರು ಸ್ತ್ರೀರಾಜ್ಯಾಧಿಪತಿಗಳು ತಂಕಣರು ಕೇಕಯರು ಮಾಳವರು

ಕಾಶ್ಮೀರಕರು ಎಲೈ ಭರತರ್ಷಭನೇ, ಇವರೂ ಮತ್ತು ಇನ್ನೂ ಅನೇಕರೂ ನಿನ್ನ ಯಜ್ಞಕ್ಕೆ ಬಂದು ಬ್ರಾಹ್ಮಣರಿಗೆ ಬಡಿಸುತ್ತಿದ್ದುದನ್ನು ನಾನು ನೋಡಿದ್ದೆನೋ

ಸಾ ತೇ ಸಮೃದ್ಧಿರ್ಯೈರಾಪ್ತಾ ಚಪಲಾ ಪ್ರತಿಸಾರಿಣೀ ।
ಆದಾಯ ಜೀವಿತಂ ತೇಷಾಮಾಹರಿಷ್ಯಾಮಿ ತಾಮಹಮ್ ॥೨೪॥

ಆ ನಿನ್ನ ಯಾವಾಗಲೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವ ಚಂಚಲ ಸ್ವಭಾವವುಳ್ಳ ಸಮೃದ್ಧಿಯು ಯಾರನ್ನು ಸೇರಿತೋ ನಾನು ಅವರ ಪ್ರಾಣಗಳ ಜೊತೆಯಲ್ಲಿ ಆ ಸಂಪತ್ತನ್ನು ಹಿಂದೆ ತರುವೆನು.

ರಾಮೇಣ ಸಹ ಕೌರವ್ಯ ಭೀಮಾರ್ಜುನಯಮೈಸ್ತಥಾ ।
ಅಕ್ರೂರಗದಸಾಂಬೈಶ್ಚ ಪ್ರದ್ಯುಮ್ನೇನಾಹುಕೇನ ಚ ॥೨೫॥

ಧೃಷ್ಟದ್ಯುಮ್ನೇನ ವೀರೇಣ ಶಿಶುಪಾಲಾತ್ಮಜೇನ ಚ ।
ದುರ್ಯೋಧನಂ ರಣೇ ಹತ್ವಾ ಸದ್ಯಃ ಕರ್ಣಂ ಚ ಭಾರತ ।
ದುಃಶಾಸನಂ ಸೌಬಲೇಯಂ ಯಶ್ಚಾನ್ಯಃ ಪ್ರತಿಯೋತ್ಸ್ಯತಿ ॥೨೬॥

ಎಲೌ ಕೌರವ್ಯನೇ, ಬಲರಾಮನಿಂದಲೂ ಭೀಮಾರ್ಜುನ ನಕುಲಸಹದೇವರಿಂದಲೂ ಅಕ್ರೂರಗದಸಾಂಬರಿಂದಲೂ ಪ್ರದ್ಯುಮ್ನ ಮತ್ತು ಆಹುಕರಿಂದಲೂ ವೀರರಾದ ಧೃಷ್ಟದ್ಯುಮ್ನನಿಂದಲೂ ಶಿಶುಪಾಲನ ಪುತ್ರನಿಂದಲೂ ಕೂಡಿದವನಾಗಿ ಎಲೈ ಭಾರತನೇ, ದುರ್ಯೋಧನನನ್ನು ಕರ್ಣನನ್ನು ದುಶ್ಶಾಸನನನ್ನು ಸುಬಲಪುತ್ರನಾದ ಶಕುನಿಯನ್ನು ಮತ್ತು ಬೇರೆ ಯಾರಾದರೂ ಪ್ರತಿಯಾಗಿಯುದ್ಧವನ್ನು ಮಾಡಿದರೆ ಅವರನ್ನು ಸಹ ಯುದ್ಧದಲ್ಲಿ ಕೊಂದು (ಆ ಸಂಪತ್ತನ್ನು ನಿನಗೆ ಹಿಂದಿರುಗಿಸುವೆನು.)

ತತಸ್ತ್ವಂ ಹಸ್ತಿನಪುರೇ ಭ್ರಾತೃಭಿಃ ಸಹಿತೋ ವಸನ್ ।
ಧಾರ್ತರಾಷ್ಟ್ರೀಂ ಶ್ರಿಯಂ ಪ್ರಾಪ್ಯ ಪ್ರಶಾಧಿ ಪೃಥಿವೀಮಿಮಾಮ್ ॥೨೭॥

ಅನಂತರ ನೀನು ಈಗ ಧೃತರಾಷ್ಟ್ರನಲ್ಲಿರುವ ಸಂಪತ್ತನ್ನು ಹೊಂದಿ ತಮ್ಮಂದಿರಿಂದ ಸಹಿತನಾಗಿ ಹಸ್ತಿನಪುರದಲ್ಲಿ ನೆಲೆಸಿ ಈ ಭೂಮಿಯನ್ನು ಆಳು.

ಸಂಜಯಃ

ಅಥೈನಮಬ್ರವೀದ್ರಾಜಾ ತಸ್ಮಿನ್ ವೀರಸಮಾಗಮೇ ।
ಶೃಣ್ವತ್ಸು ತೇಷು ಸರ್ವೇಷು ಧೃಷ್ಟದ್ಯುಮ್ನಮುಖೇಷು ಚ ॥೨೮॥

ಆಗ ಆ ವೀರಸಮುದಾಯದಲ್ಲಿ ಧೃಷ್ಟದ್ಯುಮ್ನ ಮೊದಲಾದ ಎಲ್ಲರೂ ಕೇಳುತ್ತಿರುವಂತೆ ಧರ್ಮರಾಜನು ಕೃಷ್ಣನನ್ನು ಕುರಿತು ಮಾತನಾಡಿದನು.

ಪ್ರತಿಗೃಹ್ಣಾಮಿ ತೇ ವಾಚಂ ಸತ್ಯಾಮಭಿಹಿತೋ ಹ್ಯಸಿ ।
ಅಮಿತ್ರಾನ್ ಮೇ ಮಹಾಬಾಹೋ ಸಾನುಬಂಧಾನ್ ಹನಿಷ್ಯಸಿ ॥೨೯॥

ಮಹಾಬಾಹುವೇ ನೀನು ಆಡಿದ ಸತ್ಯವಾದ ಮಾತುಗಳನ್ನು ನಾನು ಸ್ವೀಕರಿಸುತ್ತೇನೆ. ನೀನು ನನ್ನ ಶತ್ರುಗಳನ್ನು ಅವರ ಪರಿವಾರಸಹಿತವಾಗಿ ಸಂಹರಿಸುವಿ.

ವರ್ಷಾತ್ ತ್ರಯೋದಶಾದೂರ್ಧ್ವಂ ಸತ್ಯಂ ಮಾಂ ಕುರು ಕೇಶವ ।
ಪ್ರತಿಜ್ಞಾತೋ ವನೇ ವಾಸೋ ರಾಜ್ಞಾಂ ಮಧ್ಯೇ ಮಯಾऽಪ್ಯಯಮ್ ॥

ಕೇಶವನೇ, ಹದಿಮೂರುವರ್ಷಗಳ ನಂತರ ನನ್ನನ್ನು ಸತ್ಯವಚನನ್ನಾಗಿ ಮಾಡು. ನಾನಾದರೋ ರಾಜರ ಮಧ್ಯದಲ್ಲಿ ಈ ವನವಾಸವನ್ನು ಪ್ರತಿಜ್ಞೆಮಾಡಿದ್ದೇನೆ.

ಧರ್ಮರಾಜಸ್ಯ ವಚನಂ ಶ್ರುತ್ವಾ ಸತ್ಯಂ ಸಭಾಸದಃ ।
ಧೃಷ್ಟದ್ಯುಮ್ನಪುರೋಗಾಸ್ತೇ ಶಮಯಾಮಾಸುರಂಜಸಾ ॥೩೧॥

ಕೇಶವಂ ಮಧುರೈರ್ವಾಕ್ಯೈಃ ಸಮಾಯುಕ್ತೈರಮರ್ಷಿತಮ್ ।
ಪಾಂಚಾಲೀಂ ಚಾಹ್ವಯಾಮಾಸ ವಾಸುದೇವಸ್ತು ಶೃಣ್ವತಾಮ್ ॥೩೨॥

ಧರ್ಮರಾಜನ ಸತ್ಯವಚನಗಳನ್ನು ಕೇಳಿದ ಧೃಷ್ಟದ್ಯುಮ್ನ ಮೊದಲಾದ ಸಭಾಸದರು ಸಿಟ್ಟಿನಿಂದ ಕೂಡಿದ್ದ ಕೃಷ್ಣನನ್ನು ಮಧುರವಾಕ್ಯಗಳಿಂದ ಕೂಡಿದ ಮಾತುಗಳಿಂದ ಸಮಾದಾನಗೊಳಿಸಿದರು. ಕೃಷ್ಣನು ಎಲ್ಲರೂ ಕೇಳುತ್ತಿರುವಂತೆ ದ್ರೌಪದಿಯನ್ನು ಕರೆಸಿದನು.

ಶ್ರೀಭಗವಾನ್

ದುರ್ಯೋಧನಸ್ತವ ಕ್ರೋಧಾತ್ ದೇವಿ ತ್ಯಕ್ಷ್ಯತಿ ಜೀವಿತಮ್ ।
ಸತ್ಯಂ ತೇ ಪ್ರತಿಜಾನೀಮೋ ಮಾ ಶುಚೋ ವರವರ್ಣಿನಿ ॥೩೩॥

ದೇವಿಯೇ, ನಿನ್ನ ಸಿಟ್ಟಿನಿಂದಾಗಿ ದುರ್ಯೋಧನನು ಪ್ರಾಣವನ್ನು ತೊರೆಯುವನು. ನಾನು ಪ್ರಮಾಣಮಾಡಿ ಹೇಳುತ್ತಿದ್ದೇನೆ. ಸುಂದರಿಯೇ, ಶೋಕಪಡಬೇಡ.

ಯೇ ತ್ವೇತೇ ಕುರವಃ ಕೃಷ್ಣೇ ದೃಷ್ಟ್ವಾ ತ್ವಾಂ ಪ್ರಾಹಸಂಸ್ತದಾ ।
ಮಾಂಸಾನಿ ತೇಷಾಂ ಖಾದಂತೋ ಹರಿಷ್ಯಂತಿ ಮೃಗದ್ವಿಜಾಃ ॥೩೨॥

ದ್ರೌಪದಿಯೇ, ಯಾವ ಕುರುಗಳು ಆಗ ನಿನ್ನನ್ನು ನೋಡಿ ಪರಿಹಾಸಮಾಡಿದರೋ ಅವರ ಮಾಂಸಗಳನ್ನು ಮೃಗಪಕ್ಷಿಗಳು ಎಳೆದಾಡುತ್ತಾ ತಿನ್ನುವುವು.

ಪಾಸ್ಯಂತಿ ರುಧಿರಂ ತೇಷಾಂ ಗೃಧ್ರಾ ಗೋಮಾಯವಸ್ತಥಾ ।
ಉತ್ತಮಾಂಗಾನಿ ಕರ್ಷಂತೋ ಯೈಸ್ತ್ವಂ ನೀತಾ ಸಭಾಂ ಪುರಾ ॥೩೩॥

ಹಿಂದೆ ನೀನು ಯಾರಿಂದ ಸಭೆಗೆ ತರಲ್ಪಟ್ಟಿಯೋ ಅವರ ತಲೆಗಳನ್ನು ಎಳೆದಾಡುತ್ತಾ ಹದ್ದುಗಳು ಮತ್ತು ನರಿಗಳು ಅವರ ರಕ್ತವನ್ನು ಪಾನಮಾಡುವುವು.

ತೇಷಾಂ ದ್ರಕ್ಷ್ಯಸಿ ಪಾಂಚಾಲಿ ಗಾತ್ರಾಣಿ ಪೃಥಿವೀತಳೇ ।
ಕ್ರವ್ಯಾದೈಃ ಕೃಷ್ಯಮಾಣಾನಿ ಭಕ್ಷ್ಯಮಾಣಾನಿ ಚಾಸಕೃತ್ ॥೩೬॥

ಪಾಂಚಾಲಿಯೇ, ಅವರ ಶರೀರಗಳು ಭೂಮಿಯಲ್ಲಿಯೇ ಬಿದ್ದು ಮಾಂಸಾಹಾರಿ ಪ್ರಾಣಿಗಳಿಂದ ಎಳೆದಾಡುತ್ತಾ ತಿನ್ನಲ್ಪಡುವುದನ್ನು ನೀನು ಅನೇಕ ಬಾರಿ ನೋಡುವಿ.

ಪರಿಕ್ಲಿಷ್ಟಾಸಿ ಯೈಸ್ತತ್ರ ಯೈಶ್ಚಾಸಿ ಸಮುಪೇಕ್ಷಿತಾ ।
ತೇಷಾಮುತ್ಕೃಷ್ಟಶಿರಸಾಂ ಭೂಮಿಃ ಪಾಸ್ಯತಿ ಶೋಣಿತಮ್ ॥೩೭॥

ಯಾರು ನಿನ್ನನ್ನು ಪರಿಕ್ಲೇಶ ಪಡಿಸಿದರೋ ಮತ್ತು ಉಪೇಕ್ಷೆಮಾಡಿದರೋ ಭೂಮಿಯು ತನ್ನ ಮೇಲೆ ಶಿರಶ್ಛೇದಹೊಂದಿ ಬಿದ್ದ ಅವರ ರಕ್ತವನ್ನು ಪಾನಮಾಡುವುದು.

ಸಂಜಯಃ

ಏವಂ ಬಹುವಿಧಾ ವಾಚಃ ತದೋಚುಃ ಪುರುಷರ್ಷಭಾಃ ।
ಸರ್ವೇ ತೇಜಸ್ವಿನಃ ಶೂರಾಃ ಸರ್ವೇ ಚಾಹವಲಕ್ಷಣಾಃ ॥೩೮॥

ಆಗ ಶೂರರೂ ತೇಜಸ್ವಿಗಳೂ ಯುದ್ಧಾಕಾಂಕ್ಷಿಗಳೂ ಪುರುಷರ್ಷಭರೂ ಆದ ಅವರೆಲ್ಲರೂ ಹೀಗೆ ಬಹುವಿಧವಾಗಿ ಮಾತನಾಡಿದರು.

ತೇ ಧರ್ಮರಾಜೇನ ವೃತಾ ವರ್ಷಾದೂರ್ಧ್ವಂ ತ್ರಯೋದಶಾತ್।
ಪುರಸ್ಕೃತ್ಯೋಪಯಾಸ್ಯಂತಿ ವಾಸುದೇವಂ ಮಹಾರಥಾಃ ॥೩೯॥

ಧರ್ಮರಾಜನಿಂದ ಸಹಾಯಕ್ಕಾಗಿ ಪ್ರಾರ್ಥಿತರಾದ ಆ ಮಹಾರಥರೆಲ್ಲರೂ ಹದಿಮೂರು ವರ್ಷಗಳ ನಂತರ ಕೃಷ್ಣನನ್ನು ಮುಂದೆಮಾಡಿಕೊಂಡು ಬರುವವರಿದ್ದಾರೆ.

ರಾಮಂ ಚ ಕೃಷ್ಣಂ ಚ ಧನಂಜಯಂ ಚ
ಪ್ರದ್ಯುಮ್ನಸಾಂಬೌ ಯುಯುಧಾನಭೀಮೌ ।
ಮಾದ್ರೀಪುತ್ರೌ ಕೇಕಯರಾಜಪುತ್ರಾನ್
ಪಾಂಚಾಲಪುತ್ರಾನ್ ಸಹ ಮದ್ರರಾಜ್ಞಾ ॥೪೦॥

ಏತಾನ್ ಸರ್ವಾನ್ ಲೋಕಧೀರಾನಜೇಯಾನ್
ಮಹಾತ್ಮನಃ ಸಾನುಬಂಧಾನ್ ಸಸೈನ್ಯಾನ್ ।
ಕೋ ಜೀವಿತಾರ್ಥೀ ಸಮರೇಽಭ್ಯುದೀಯಾತ್
ಕ್ರುದ್ಧಾನ್ ಸಿಂಹಾನ್ ಕೇಸರಿಣೋ ಯಥೈವ ॥೪೧॥

ಸರ್ವಲೋಕೈಕವೀರರು ಅಜೇಯರು ಮತ್ತು ಮಹಾತ್ಮರೂ ಆದ ಬಲರಾಮ ಕೃಷ್ಣ ಧನಂಜಯ ಪ್ರದ್ಯುಮ್ನ ಸಾಂಬರು ಯುಯುಧಾನ ಭೀಮ ಮಾದ್ರಿಪುತ್ರರು ಕೇಕಯರಾಜಕುಮಾರರು ಪಾಂಚಾಲ- ರಾಜಕುಮಾರರು ಮದ್ರರಾಜನಾದ ಶಲ್ಯ ಇವರೆಲ್ಲರೂ ತಮ್ಮ ಪರಿವಾರ ಮತ್ತು ಸೈನ್ಯದ ಜೊತೆಯಲ್ಲಿ ಒಟ್ಟಿಗೆ ದಂಡೆತ್ತಿ ಬಂದಾಗ ಅವರನ್ನು ಜೀವನವನ್ನು ಬಯಸುವ ಯಾವನು ತಾನೇ ಕೋಪದಿಂದ ಕೇಸರಗಳನ್ನು ಕೆದರಿಕೊಂಡು ಕ್ರುದ್ಧವಾದ ಸಿಂಹವನ್ನು ಎದುರಿಸಿದಂತೆ ಎದುರಿಸಬಹುದು?

ಧೃತರಾಷ್ಟ್ರಃ

ಯನ್ನಾಽಬ್ರವೀದ್ ವಿದುರೋ ದ್ಯೂತಕಾಲೇ
ತ್ವಂ ಪಾಂಡವಾನ್ ಜೇಷ್ಯಸಿ ಚೇನ್ನರೇಂದ್ರ ।
ಧ್ರುವಂ ಕುರೂಣಾಮಯಮಂತಕಾಲೋ
ಮಹಾಭಯೋ ಭವಿತಾ ಶೋಣಿತೌಘಃ ॥೪೨॥

ಮನ್ಯೇ ತಥಾ ತದ್ಭವಿತೇತಿ ಸೂತ
ಯಥಾ ಕ್ಷತ್ತಾ ಪ್ರಾಹ ವಚಃ ಪುರಾ ಮಾಮ್ ।

ಅಸಂಶಯಂ ಭವಿತಾ ಯುದ್ಧಮೇತದ್
ಗತೇ ಕಾಲೇ ಪಾಂಡವಾನಾಂ ಯಥೋಕ್ತಮ್ ॥೪೩॥

ದ್ಯೂತಕಾಲದಲ್ಲಿ ವಿದುರನು ನನ್ನನ್ನು ಕುರಿತು ನರೇಂದ್ರನೇ! ದ್ಯೂತದಲ್ಲಿ ನೀನು ಪಾಂಡವರನ್ನು ಏನಾದರೂ ಜಯಿಸಿದರೆ ಕುರುಗಳಿಗೆ ನಿಶ್ಚಯವಾಗಿ ಮಹಾಭಯವನ್ನು ಉಂಟುಮಾಡುವ ಅಂತಕಾಲವು ಉಂಟಾಗುತ್ತದೆ. ರಕ್ತದ ಪ್ರವಾಹವು ಹರಿಯುತ್ತದೆ ಎಂದು ಯಾವ ಮಾತುಗಳನ್ನು ಆಡಿದ್ದನೋ ಅದು ಹಾಗೆಯೇ ನಡೆಯುವುದೆಂದು ನನಗೆ ತೋರುತ್ತದೆ. ಎಲೈ ಸೂತನೇ, ಹಿಂದೆ ನನಗೆ ವಿದುರನು ಹೇಗೆ ಹೇಳಿದ್ದನೋ ಅದರಂತೆ ಪಾಂಡವರಿಗೆ ಹದಿಮೂರು ವರ್ಷಗಳು ಕಳೆದ ಮೇಲೆ ನಿಸ್ಸಂಶಯವಾಗಿ ವಿದುರನು ಹೇಳಿದಂತೆ ಈ ಯುದ್ಧವು ನಡೆಯುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಶ್ಚತ್ವಾರಿಂಶೋऽಧ್ಯಾಯಃ ॥
॥ ಇಂದ್ರಲೋಕಾಭಿಗಮನಪರ್ವಣಿ ಸಪ್ತಮೋऽಧ್ಯಾಯಃ ॥

**॥ ಇಂದ್ರಲೋಕಾಭಿಗಮನಪರ್ವ ಸಮಾಪ್ತಮ್ ॥**

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತಾ ನಾಲ್ಕನೆಯ ಅಧ್ಯಾಯ ಮುಗಿಯಿತು.

**ಇಲ್ಲಿಗೆ ಇಂದ್ರಲೋಕಾಭಿಗಮನಪರ್ವವು ಮುಗಿಯಿತು.**

★★★★★

## ೫. ತೀರ್ಥಯಾತ್ರಾಪರ್ವ

### ನಲವತ್ತೈದನೆಯ ಅಧ್ಯಾಯ

(ಕಾಮ್ಯಕವನಕ್ಕೆ ಬೃಹದಶ್ವರ ಆಗಮನ. ಯುಧಿಷ್ಠಿರನನ್ನು ಕುರಿತು ನಳ ಚರಿತ್ರೆಯ ಕಥನ.)

ಜನಮೇಜಯಃ

ಅಸ್ತ್ರಹೇತೋರ್ಗತೇ ಪಾರ್ಥೇ ಶಕ್ರಲೋಕಂ ಮಹಾತ್ಮನಿ ।
ಯುಧಿಷ್ಠಿರಪ್ರಭೃತಯಃ ಕಿಮಕುರ್ವತ ಪಾಂಡವಾಃ ॥೧॥

ಅಸ್ತ್ರವನ್ನು ಸಂಪಾದಿಸುವುದಕ್ಕಾಗಿ ಮಹಾತ್ಮನಾದ ಅರ್ಜುನನು ಇಂದ್ರಲೋಕಕ್ಕೆ ಹೋದಮೇಲೆ ಯುಧಿಷ್ಠಿರ ಮೊದಲಾದ ಪಾಂಡವರು ಏನು ಮಾಡಿದರು?

ವೈಶಂಪಾಯನಃ

ಅಸ್ತ್ರಹೇತೋರ್ಗತೇ ಪಾರ್ಥೇ ಶಕ್ರಲೋಕಂ ಮಹಾತ್ಮನಿ ।
ನ್ಯವಸನ್ ಕೃಷ್ಣಯಾ ಸಾರ್ಧಂ ಕಾಮ್ಯಕೇ ಪುರುಷರ್ಷಭಾಃ ॥೨॥

ಅಸ್ತ್ರವನ್ನು ಸಂಪಾದಿಸುವ ಸಲುವಾಗಿ ಅರ್ಜುನನು ಸ್ವರ್ಗಲೋಕಕ್ಕೆ ಹೋದಮೇಲೆ ಕಾಮ್ಯಕವನದಲ್ಲಿ ಪುರುಷ ಶ್ರೇಷ್ಠರಾದ ಪಾಂಡವರು ದ್ರೌಪದಿಯ ಜೊತೆಯಲ್ಲಿ ವಾಸಮಾಡಿದರು.

ತತಃ ಕದಾಚಿದೇಕಾಂತೇ ವಿವಿಕ್ತೇ ಮೃದುಶಾದ್ವಲೇ ।
ದುಃಖಾರ್ತಾ ಭರತಶ್ರೇಷ್ಠಾ ನಿಷೇದುಃ ಸಹ ಕೃಷ್ಣಯಾ ॥೩॥

ಅನಂತರ ಒಮ್ಮೆ ಆ ಭರತಶ್ರೇಷ್ಠರು ಏಕಾಂತವಾದ ವಿವಿಕ್ತವಾದ ಒಂದು ಮೃದು ಮತ್ತು ಶೀತಲವಾದ ಪ್ರದೇಶದಲ್ಲಿ ದ್ರೌಪದಿಯ ಜೊತೆಯಲ್ಲಿ ದುಃಖಾರ್ತರಾಗಿ ಕುಳಿತಿದ್ದರು.

ಧನಂಜಯಂ ಶೋಚಮಾನಾಃ ಸಾಸ್ರನೇತ್ರಾಃ ಸುದುಃಖಿತಾಃ ।
ತದ್ವಿಯೋಗಾತ್ ತು ಸರ್ವೇಷಾಂ ಶೋಕಃ ಸಮಭಿಪುಪ್ಲುವೇ ॥೪॥

ಅರ್ಜುನನನ್ನು ಕುರಿತು ಶೋಕಪಡುತ್ತಾ ಕಣ್ಣುಗಳಲ್ಲಿ ನೀರುತುಂಬಿಕೊಂಡು ದುಃಖಿತರಾದ ಅವರೆಲ್ಲರಿಗೂ ಅರ್ಜುನನ ವಿಯೋಗದಿಂದ ಶೋಕವು ಅಧಿಕವಾಯಿತು.

ಧನಂಜಯವಿಯೋಗಾಚ್ಚ ರಾಜ್ಯನಾಶಾಚ್ಚ ದುಃಖಿತಾಃ ।
ಅಥ ಭೀಮೋ ಮಹಾಬಾಹುರ್ಯುಧಿಷ್ಠಿರಮಭಾಷತ ॥೫॥

ಅರ್ಜುನನ ವಿಯೋಗದಿಂದಲೂ ಮತ್ತು ರಾಜ್ಯನಾಶದಿಂದಲೂ ಅವರು ದುಃಖಿತರಾದರು ಆಗ ಮಹಾಬಾಹುವಾದ ಭೀಮನು ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ನಿದೇಶಾತ್ ತೇ ಮಹಾರಾಜ ಗತೋಽಸೌ ಪುರುಷರ್ಷಭಃ ।
ಅರ್ಜುನಃ ಪಾಂಡುಪುತ್ರಾಣಾಂ ಯಸ್ಮಿನ್ ಪ್ರಾಣಾಃ ಪ್ರತಿಷ್ಠಿತಾಃ ॥೬॥

ಮಹಾರಾಜನೇ, ಯಾವ ಅರ್ಜುನನಲ್ಲಿ ಪಾಂಡವರಾದ ನಮ್ಮೆಲ್ಲರ ಪ್ರಾಣಗಳು ಪ್ರತಿಷ್ಠಿತವಾಗಿವೆಯೋ ಅಂತಹ ಪುರುಷಶ್ರೇಷ್ಠನಾದ ಅರ್ಜುನನು ನಿನ್ನ ಆದೇಶದಂತೆ ಹೋಗಿದ್ದಾನೆ.

ಯಸ್ಮಿನ್ ವಿನಷ್ಟೇ ಪಾಂಚಾಲಾಃ ಸಹ ಪುತ್ರೈಸ್ತಥಾ ವಯಮ್ ।
ಸಾತ್ಯಕಿರ್ವಾಸುದೇವೋಽಪಿ ವಿನಶ್ಯೇಯುರಸಂಶಯಃ ॥೭॥

ಅವನು ವಿನಾಶವನ್ನು ಹೊಂದಿದರೆ ತಮ್ಮ ಮಕ್ಕಳ ಜೊತೆಯಲ್ಲಿ ಪಾಂಚಾಲರು ಮತ್ತು ನಾವು ಸಾತ್ಯಕಿ ಮತ್ತು ಕೃಷ್ಣನೂ ನಾಶವಾಗುವುದರಲ್ಲಿ ಸಂಶಯವಿಲ್ಲ.

ಯೋಽಸೌ ಗಚ್ಛತಿ ತೇಜಸ್ವೀ ಬಹೂನ್ ಕ್ಲೇಶಾನ್ ವಿಚಿಂತಯನ್ ।
ಭವನ್ನಿಯೋಗಾದ್ ಬೀಭತ್ಸುಃ ತತೋ ದುಃಖತರಂ ನು ಕಿಮ್ ॥೮॥

ಈ ತೇಜಸ್ವಿಯಾದ ಅರ್ಜುನನು ಅನೇಕ ದೋಷಗಳನ್ನು ಪರಿಗಣಿಸದೆ ನಿನ್ನ ಆಜ್ಞೆಯಂತೆ ನಮ್ಮನ್ನು ಬಿಟ್ಟುಹೋಗಿದ್ದಾನೆ. ಇದಕ್ಕಿಂತ ಹೆಚ್ಚು ದುಃಖಕರವಾದುದ್ದು ಏನಿದೆ?

ಯಸ್ಯ ಬಾಹೂ ಸಮಾಶ್ರಿತ್ಯ ವಯಂ ಸರ್ವೇ ಮಹಾತ್ಮನಃ ।
ಮನ್ಯಾಮಹೇ ಜಿತಾನಾಜೌ ಪರಾನ್ ಪ್ರಾಪ್ತಾಂ ಚ ಮೇದಿನೀಮ್ ॥

ಯಸ್ಯ ಪ್ರಭಾವಾದ್ಧಿ ವಯಂ ಸಭಾಮಧ್ಯೇ ಧನುಷ್ಮತಃ ।
ಜಿತಾನ್ ಮನ್ಯಾಮಹೇ ಸರ್ವಾನ್ ಧಾರ್ತರಾಷ್ಟ್ರಾನ್ ಸಸೌಬಲಾನ್ ॥

ಯಸ್ಯ ಪ್ರಭಾವಾನ್ನ ಮಯಾ ಸಭಾಮಧ್ಯೇ ಮಹಾಬಲಾಃ ।
ನೀತಾ ಲೋಕಮಮುಂ ಸರ್ವೇ ಧಾರ್ತಾರಾಷ್ಟ್ರಾಃ ಸಸೌಬಲಾಃ ॥೧೧॥

ತೇ ವಯಂ ಬಾಹುಬಲಿನಃ ಕ್ರೋಧಮುತ್ಥಿತಮಾತ್ಮನಃ ।
ಸಹಾಮಹೇ ಭವನ್ಮೂಲಂ ವಾಸುದೇವೇನ ಪಾಲಿತಾಃ ॥೧೨॥

ಮಹಾತ್ಮನಾದ ಯಾರ ಬಾಹುಬಲವನ್ನು ಆಶ್ರಯಿಸಿ ಶತ್ರುಗಳನ್ನು ಪರಾಭವಗೊಳಿಸಿ ಭೂಮಿಯು ನಮ್ಮ ವಶಕ್ಕೆ ಬಂದಿದೆ ಎಂದು ಭಾವಿಸುತ್ತೇವೆಯೋ, ಯಾವನ ಪ್ರಭಾವದಿಂದ ನಾವು ಸಭಾಮಧ್ಯದಲ್ಲಿ ದುರ್ಯೋಧನ ಮತ್ತು ಶಕುನಿಯಿಂದ ಕೂಡಿದ ಎಲ್ಲಾ ಧನುರ್ಧಾರಿಗಳನ್ನು ಪರಾಭವಗೊಳಿಸಿದ್ದೇವೆ ಎಂದು ಭಾವಿಸಿದ್ದೆವೆಯೋ, ಯಾರ ಸಮಾಧಾನ ವಚನಗಳ ಸಾಮರ್ಥ್ಯದಿಂದಾಗಿ ಸಭಾಮಧ್ಯದಲ್ಲಿ ಮಹಾಬಲಿಷ್ಠರಾದ ಶಕುನಿಯಿಂದ ಸೇರಿದ ಎಲ್ಲಾ ಧೃತರಾಷ್ಟ್ರಪುತ್ರರನ್ನೂ ನಾನು ಯಮಲೋಕಕ್ಕೆ ಕಳುಹಿಸಲಿಲ್ಲವೋ, ಅಂತಹ ಬಾಹುಬಲವುಳ್ಳ ನಾವು ನಿನ್ನ ನಿಮಿತ್ತದಿಂದಾಗಿ ಮನಸ್ಸಿನಲ್ಲಿ ಉಂಟಾದ ಕ್ರೋಧವನ್ನು ಕೃಷ್ಣನಿಂದ ರಕ್ಷಿತರಾಗಿ ಸಹಿಸಿಕೊಂಡಿದ್ದೇವೆ.

ವಯಂ ಹಿ ಸಹ ಕೃಷ್ಣೇನ ಹತ್ವಾ ಕರ್ಣಮುಖಾನ್ ಪರಾನ್ ।
ಸ್ವಬಾಹುವಿಜಿತಾಂ ಕೃತ್ಸ್ನಾಂ ಪ್ರಶಾಸೇಮ ವಸುಂಧರಾಮ್ ॥೧೩॥

ನಾವು ಕೃಷ್ಣನ ಸಹಾಯದಿಂದ ಕರ್ಣಮೊದಲಾದ ಎಲ್ಲಾ ಶತ್ರುಗಳನ್ನೂ ಗೆದ್ದು ನಮ್ಮ ಬಾಹುಬಲದಿಂದಲೇ ಜಯಿಸಲ್ಪಡುವ ಸಮಗ್ರವಾದ ಭೂಮಿಯನ್ನು ಆಳೋಣ.

ಭವತೋ ದ್ಯೂತದೋಷೇಣ ಸರ್ವೇ ವಯಮವಪ್ಲುತಾಃ ।
ಅಹೀನಪೌರುಷಾ ರಾಜನ್ ಬಲಿಭಿರ್ಬಲವತ್ತರಾಃ ॥೧೪॥

ರಾಜನೇ! ನಿನ್ನ ದ್ಯೂತದೋಷದಿಂದ ಬಲವುಳ್ಳವರಿಗಿಂತಲೂ ಬಲಿಷ್ಠರಾದ ಮಹಾಪೌರುಷವನ್ನು ಹೊಂದಿದ ನಾವೆಲ್ಲರೂ ಅಧಃಪತನವನ್ನು ಹೊಂದಿದ್ದೇವೆ.

ಕ್ಷಾತ್ರಂ ಧರ್ಮಂ ಮಹಾರಾಜ ಸಮವೇಕ್ಷ್ಟುಮರ್ಹಸಿ ।
ನ ಹಿ ಧರ್ಮೋ ಮಹಾರಾಜ ಕ್ಷತ್ರಿಯಸ್ಯ ವನಾಶ್ರಯಃ ॥೧೫॥

ಮಹಾರಾಜನೇ! ನೀನು ಕ್ಷತ್ರಿಯ ಧರ್ಮವನ್ನು ಗಮನಿಸು. ಮಹಾರಾಜನೇ ಕ್ಷತ್ರಿಯನಿಗೆ ವನವಾಸವು ಧರ್ಮವಲ್ಲವಷ್ಟೇ ?

ರಾಜ್ಯಮೇವ ಪರಂ ಧರ್ಮಂ ಕ್ಷತ್ರಿಯಸ್ಯ ವಿದುರ್ಬುಧಾಃ ।
ಸ ಕ್ಷಾತ್ರಧರ್ಮವಿದ್ರಾಜನ್ ಮಾಽಸ್ಮಾನ್ ವಿನಶನಂ ಪಥಃ ॥೧೬॥

ಕ್ಷತ್ರಿಯನಿಗೆ ರಾಜ್ಯಪಾಲನವೇ ಧರ್ಮವೆಂದು ಜ್ಞಾನಿಗಳು ತಿಳಿದಿದ್ದಾರೆ. ರಾಜನೇ, ಕ್ಷತ್ರಿಯಧರ್ಮವನ್ನು ತಿಳಿದ ಅಂತಹ ನೀನು ನಮ್ಮನ್ನು ವಿನಾಶದ ದಾರಿಯಲ್ಲಿ ನಡೆಸಬೇಡ.

ಪ್ರಾಗ್‌ದ್ವಾದಶ ಸಮಾ ರಾಜನ್ ಧಾರ್ತರಾಷ್ಟ್ರಾನ್ ನಿಹನ್ಮಹಿ ।
ನಿವರ್ತ್ಯ ಚ ವನಾತ್ ಪಾರ್ಥಮಾನಾಯ್ಯ ಚ ಜನಾರ್ದನಮ್ ॥೧೭॥

ರಾಜನೇ, ನಾವು ಹನ್ನರಡು ವರ್ಷಕ್ಕಿಂತ ಮೊದಲೇ ಅರ್ಜುನನನ್ನು ಹಿಂದಕ್ಕೆ ಕರೆಸಿ ಮತ್ತು ಕೃಷ್ಣನನ್ನು ಕರೆಸಿ ಕಾಡಿನಿಂದ ಹಿಂದಿರುಗಿ ಧೃತರಾಷ್ಟ್ರಪುತ್ರರನ್ನು ಕೊಲ್ಲೋಣ.

ವ್ಯೂಢಾನೀಕಾ ಮಹಾರಾಜ ಜವೇನೈವ ಮಹಾಹವೇ ।
ಧಾರ್ತರಾಷ್ಟ್ರಾನಮುಂ ಲೋಕಂ ಗಮಯಾಮ ವಿಶಾಂಪತೇ ॥೧೮॥

ಎಲೈ ಮಹಾರಾಜನೇ ನರಾಧಿಪನೇ, ನಾವು ಸೈನ್ಯವನ್ನು ಸೇರಿಸಿ ಶೀಘ್ರವಾಗಿಯೇ ದೊಡ್ಡಯುದ್ಧದಲ್ಲಿ ಧೃತರಾಷ್ಟ್ರಪುತ್ರರನ್ನು ಪರಲೋಕಕ್ಕೆ ಕಳುಹಿಸೋಣ.

ಸರ್ವಾನಹಂ ಹನಿಷ್ಯಾಮಿ ಧಾರ್ತರಾಷ್ಟ್ರಾನ್ ಸಸೌಬಲಾನ್ ।
ದುರ್ಯೋಧನಂ ಚ ಕರ್ಣಂ ಚ ಯೋ ವಾಽನ್ಯಃ ಪ್ರತಿಯೋತ್ಸ್ಯತಿ ॥

ನಾನು ಧಾರ್ತರಾಷ್ಟ್ರರನ್ನು ಮತ್ತು ಶಕುನಿಯನ್ನು ಕೊಲ್ಲುವೆನು ದುರ್ಯೋಧನನನ್ನು ಕರ್ಣನನ್ನು ಮತ್ತು ನನ್ನ ಎದುರಿಗೆ ಯುದ್ಧಮಾಡುವ ಬೇರೆಯವರನ್ನೂ ಕೊಲ್ಲುವೆನು.

ಮಯಾ ಪ್ರಶಮಿತೇ ಪಶ್ಚಾತ್ ತ್ವಮೇಷ್ಯಸಿ ವನಾತ್ ತತಃ ।
ಏವಂ ಕೃತೇ ನ ತೇ ದೋಷೋ ಭವಿಷ್ಯತಿ ವಿಶಾಂಪತೇ ॥೨೦॥

ನಾನು ದುರ್ಯೋಧನನನ್ನು ಮತ್ತು ಎಲ್ಲರನ್ನೂ ಸಂಹರಿಸಿದ ಮೇಲೆ ನೀನು ವನದಿಂದ ಹಿಂದಿರುಗಿ ಬಾ. ನರಾಧಿಪನೇ, ಹೀಗೆ ಮಾಡಿದರೆ ನಿನಗೆ ದೋಷವುಂಟಾಗುವುದಿಲ್ಲ.

ಯಜ್ಞೈಶ್ಚ ವಿವಿಧೈಸ್ತಾತ ಕೃತಂ ಪಾಪಮರಿಂದಮ ।
ಅವಧೂಯ ಮಹಾಭಾಗ ಗಚ್ಛೇಮ ಸ್ವರ್ಗಮುತ್ತಮಮ್ ॥೨೧॥

ಪ್ರೀತಿಪಾತ್ರನೇ ಮಹಾನುಭಾವನೇ ಅರಿಂದಮನೇ, ಅನೇಕ ಯಜ್ಞಗಳನ್ನು ಆಚರಿಸಿ ನಮಗೆ ಉಂಟಾದ ಪಾಪಗಳನ್ನು ಕಳೆದುಕೊಂಡು ಶ್ರೇಷ್ಠವಾದ ಸ್ವರ್ಗವನ್ನು ಪಡೆಯೋಣ.

ಏವಮೇತದ್ ಭವೇದ್ರಾಜನ್ ಯದಿ ರಾಜಾ ನ ಬಾಲಿಶಃ ।
ಅಸ್ಮಾಕಂ ದೀರ್ಘಸೂತ್ರಃ ಸ್ಯಾದ್ ಭವಾನ್ ಧರ್ಮಪರಾಯಣಃ ॥

ರಾಜನೇ, ರಾಜನಾದ ನೀನು ಬಾಲಬುದ್ಧಿಯುಳ್ಳವನಾಗದಿದ್ದರೆ ಹೀಗೆಯೇ ನಡೆಯುತ್ತದೆ. ಇಲ್ಲದಿದ್ದರೆ ನೀನು ಧರ್ಮಪರಾಯಣನಾಗಿರುವುದರಿಂದ ನಮಗೆ ವಿಳಂಬಕಾರಿತ್ವದೋಷವು ಉಂಟಾಗುತ್ತದೆ.

ನಿಕೃತ್ಯಾ ನಿಕೃತಿಪ್ರಜ್ಞೋ ಹಂತವ್ಯಾ ಇತಿ ನಿಶ್ಚಯಃ ।
ನ ಹಿ ನೈಕೃತಿಕಂ ಹತ್ವಾ ನಿಕೃತ್ಯಾ ಪಾಪಮುಚ್ಯತೇ ॥೨೩॥

ಮೋಸದ ಪ್ರಜ್ಞೆಯುಳ್ಳವರನ್ನು ಮೋಸದಿಂದಲೇ ನಾಶಮಾಡಬೇಕೆಂಬುದು ನಿಶ್ಚಿತವಾದದ್ದು. ಮೋಸಮಾಡುವವನನ್ನು ಮೋಸದಿಂದ ಕೊಂದರೆ ಪಾಪವು ಉಂಟಾಗುವುದಿಲ್ಲವೆಂದು ಹೇಳಲ್ಪಡುತ್ತದೆ.

ತಥಾ ಭಾರತ ಧರ್ಮೇಷು ಸರ್ವಜ್ಞೈರಿತಿ ದೃಶ್ಯತೇ ।
ಅಹೋರಾತ್ರಂ ಮಹಾರಾಜ ತುಲ್ಯಂ ಸಂವತ್ಸರೇಣ ಹ ॥೨೪॥

ತಥೈವ ವೇದವಚನಂ ಶ್ರೂಯತೇ ನಿತ್ಯದಾ ವಿಭೋ ।
ಸಂವತ್ಸರೋ ಮಹಾರಾಜ ಪೂರ್ಣೋ ಭವತಿ ಕೃಚ್ಛ್ರತಃ ॥೨೫॥

ಎಲೈ ಭಾರತನೇ, ಧರ್ಮಶಾಸ್ತ್ರಗಳಲ್ಲಿ ಈ ವಿಷಯವನ್ನು ಸರ್ವಜ್ಞರಾದವರು ನೋಡುತ್ತಾರೆ. ಮಹಾರಾಜನೇ ಒಂದು ಹಗಲೂ ಮತ್ತು ರಾತ್ರಿಯೂ ಸೇರಿ ಒಂದು ಸಂವತ್ಸರಕ್ಕೆ ಸಮನಾಗುತ್ತದೆ. ವಿಭುವೇ ವೇದವಚನವು ಹಾಗೆಯೇ ನಿತ್ಯವೂ ಕೇಳಿಬರುತ್ತದೆ. ಮಹಾರಾಜನೇ, ಒಂದು ಕೃಚ್ಛ್ರವನ್ನು ಆಚರಿಸಿದರೂ ಸಂವತ್ಸರವು ಪೂರ್ಣವಾಗುತ್ತದೆ.

ಯದಿ ವೇದಾಃ ಪ್ರಮಾಣಂ ತೇ ದಿವಸಾದೂರ್ಧ್ವಮದ್ಯ ವೈ ।
ತ್ರಯೋದಶಾದಿತಃ ಕಾಲೋ ಜ್ಞಾಯತಾಂ ಪರಿನಿಷ್ಠಿತಃ ॥೨೬॥

ನಿನಗೆ ವೇದವು ಪ್ರಮಾಣವಾದರೆ ಹದಿಮೂರನೆಯ ದಿವಸವಾದ ಈ ದಿನದ ನಂತರ ವನವಾಸದ ಕಾಲವು ಪೂರ್ಣವಾಗುವುದೆಂದು ತಿಳಿ.

ಕಾಲೋ ದುರ್ಯೋಧನಂ ಹಂತುಂ ಸಾನುಬಂಧಮರಿಂದಮ ।
ಏಕಾಗ್ರಾಂ ಪೃಥಿವೀಂ ಕೃತ್ಸ್ನಾಂ ಪುರಾ ರಾಜನ್ ಕರೋತಿ ಸಃ ॥೨೭॥

ಅರಿಂದಮನೇ, ಇದು ದುರ್ಯೋಧನನ್ನು ಪರಿವಾರಸಹಿತನಾಗಿ ಕೊಲ್ಲಬೇಕಾದ ಕಾಲ. ಅವನು ಸಮಗ್ರವಾದ ಭೂಮಿಯನ್ನು ತನ್ನ ಅಧೀನವಾಗಿ ಮಾಡಿಕೊಳ್ಳುವುದಕ್ಕಿಂತ ಮೊದಲೇ ನಾವು ಅವನನ್ನು ಕೊಲ್ಲವೇಕು.

ವೈಶಂಪಾಯನಃ

ಏವಂ ಬ್ರುವಾಣಂ ಭೀಮಂ ತು ಧರ್ಮಪುತ್ರೋ ಯುಧಿಷ್ಠಿರಃ ।
ಉವಾಚ ಸಾಂತ್ವಯನ್ ರಾಜಾ ಮೂರ್ಧ್ನ್ಯುಪಾಘ್ರಾಯ ಪಾಂಡವಮ್ ॥

ಧರ್ಮಪುತ್ರನಾದ ಯುಧಿಷ್ಠಿರರಾಜನು ಹೀಗೆ ಮಾತನಾಡುತ್ತಿದ್ದ ಪಾಂಡುಪುತ್ರನಾದ ಭೀಮನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಅವನನ್ನು ಸಮಾಧಾನಮಾಡುತ್ತಾ ಮಾತನಾಡಿದನು.

ಅಸಂಶಯಂ ಮಹಾಬಾಹೋ ಹನಿಷ್ಯಸಿ ಸುಯೋಧನಮ್ ।
ವರ್ಷಾತ್ ತ್ರಯೋದಶಾದೂರ್ಧ್ವಂ ಸಹ ಗಾಂಡೀವಧನ್ವನಾ ॥೫೦॥

ಮಹಾಬಾಹುವೇ, ನೀನು ಹದಿಮೂರುವರ್ಷಗಳು ಕಳೆದಮೇಲೆ ಅರ್ಜುನನ ಸಹಾಯದಿಂದ ಖಂಡಿತವಾಗಿ ಸುಯೋಧನನನ್ನು ಕೊಲ್ಲುವಿ.

ಯದಿ ತ್ವಂ ಮನ್ಯಸೇ ಪಾರ್ಥ ಪ್ರಾಪ್ತಃ ಕಾಲ ಇತಿ ಪ್ರಭೋ ।
ಅನೃತಂ ನೋತ್ಸಹೇ ವಕ್ತುಂ ನ ಹ್ಯೇತನ್ಮಯಿ ವಿದ್ಯತೇ ॥೫೧॥

ಅಂತರೇಣಾಪಿ ಕೌಂತೇಯ ನಿಕೃತಂ ಪಾಪನಿಶ್ಚಯಮ್ ।
ಹಂತಾ ತ್ವಮಸಿ ದುರ್ಧರ್ಷ ಸಾನುಬಂಧಂ ಸುಯೋಧನಮ್ ॥೫೨॥

ಪ್ರಭುವೇ, ನೀನು ಅವನ ವಧೆಯ ಕಾಲವು ಪ್ರಾಪ್ತವಾಗಿದೆ ಎಂದು ತಿಳಿದರೂ ನಾನು ಸುಳ್ಳುಮಾತನಾಡಲಾರೆ. ಇದು ನನ್ನಲ್ಲಿಲ್ಲ. ಕೌಂತೇಯನೇ ದುರ್ಧರ್ಷನೇ, ಮೋಸಮಾರ್ಗವಿಲ್ಲದೆಯೂ ನೀನು ಮೋಸಗಾರನೂ ಪಾಪಬುದ್ಧಿಯುಳ್ಳವನೂ ಆದ ಸುಯೋಧನನನ್ನು ಪರಿವಾರಸಹಿತನಾಗಿ ಕೊಲ್ಲಲು ಶಕ್ತನಾಗಿದ್ದೀಯೆ.

ಏವಂ ಬ್ರುವತಿ ಭೀಮಂ ತು ಧರ್ಮರಾಜೇ ಯುಧಿಷ್ಠಿರೇ।
ಆಜಗಾಮ ಮಹಾಯೋಗೀ ಬೃಹದಶ್ವೋ ಮಹಾನೃಷಿಃ ॥೨೨॥

ಯಮಧರ್ಮರಾಜನ ಪುತ್ರನಾದ ಯುಧಿಷ್ಠಿರನು ಭೀಮನನ್ನು ಕುರಿತು ಹೀಗೆ ಮಾತನಾಡುತ್ತಿರಲು ಮಹಾಯೋಗಿಗಳೂ ದೊಡ್ಡ ಋಷಿಗಳೂ ಆದ ಬೃಹದಶ್ವರು ಅಲ್ಲಿಗೆ ಬಂದರು.

ತಮಭಿಪ್ರೇಕ್ಷ್ಯ ಧರ್ಮಾತ್ಮಾ ಸಂಪ್ರಾಪ್ತಂ ಧರ್ಮಚಾರಿಣಮ್ ।
ಶಾಸ್ತ್ರವನ್ಮಧುಪರ್ಕೇಣ ಪೂಜಯಾಮಾಸ ಧರ್ಮರಾಟ್ ॥೩೪॥

ಧರ್ಮಚಾರಿಗಳಾದ ಅವರು ಅಲ್ಲಿಗೆ ಬಂದುದನ್ನು ನೋಡಿ ಧರ್ಮಾತ್ಮನಾದ ಧರ್ಮರಾಜನು ಮಧುಪರ್ಕವನ್ನು ನೀಡಿ ಶಾಸ್ತ್ರೋಕ್ತರೀತಿಯಿಂದ ಪೂಜಿಸಿದನು.

ಆಶ್ವಸ್ತಂ ಚೈವಮಾಸೀನಮುಪಾಸೀನೋ ಯುಧಿಷ್ಠಿರಃ ।
ಅಭಿಪ್ರೇಕ್ಷ್ಯ ಮಹಾಬಾಹುಃ ಕೃಪಣಂ ಬಹ್ವಭಾಷತ ॥೩೫॥

ಅವರು ಕುಳಿತು ಸುಧಾರಿಸಿಕೊಂಡ ಮೇಲೆ ಮಹಾಬಾಹುವಾದ ಯುಧಿಷ್ಠಿರನು ಅವರ ಸಮೀಪದಲ್ಲಿ ಕುಳಿತು ಅವರನ್ನು ನೋಡುತ್ತಾ ದೈನ್ಯದಿಂದ ಬಹಳ ಮಾತನಾಡಿದನು.

ಅಕ್ಷದ್ಯೂತೇನ ಮಾಂ ಜಿತ್ವಾ ಧನಂ ರಾಜ್ಯಂ ಚ ಮೇ ಹೃತಮ್ ।
ಆಹೂಯ ನಿಕೃತಿಪ್ರಜ್ಞೈಃ ಕಿತವೈರಕ್ಷಕೋವಿದೈಃ ॥೩೬॥

ಮೋಸಬುದ್ಧಿಯುಳ್ಳವರೂ ಅಕ್ಷಕೋವಿದರೂ ಆದ ಕಿತವರು (ಧೂರ್ತರು) ಅಕ್ಷದ್ಯೂತಕ್ಕೆ ನನ್ನನ್ನು ಆಹ್ವಾನಿಸಿ ಸೋಲಿಸಿ ನನ್ನ ಧನವನ್ನು ಮತ್ತು ರಾಜ್ಯವನ್ನು ಅಪಹರಿಸಿದರು.

ಅನಕ್ಷಜ್ಞಸ್ಯ ಹಿ ತತೋ ನಿಕೃತ್ಯಾ ಪಾಪನಿಶ್ಚಯೈಃ ।
ಭಾರ್ಯಾ ಚ ಮೇ ಸಭಾಂ ನೀತಾ ಪ್ರಾಣೇಭ್ಯೋಽಪಿ ಗರೀಯಸೀ ॥

ಪಾಪಬುದ್ಧಿಯುಳ್ಳ ಅವರು ಮೋಸದಿಂದ ಅಕ್ಷವಿದ್ಯೆಯನ್ನು ತಿಳಿಯದ ನನ್ನನ್ನು ಸೋಲಿಸಿ ನನ್ನ ಪ್ರಾಣಗಳಿಂತಲೂ ಪ್ರಿಯಳಾದ ಪತ್ನಿಯನ್ನು ಸಭೆಗೆ ಎಳೆತಂದರು.

ಪುನರ್ದ್ಯೂತೇನ ಮಾಂ ಜಿತ್ವಾ ವನವಾಸಂ ಸುದಾರುಣಮ್ ।
ಪ್ರಾವ್ರಾಜಯನ್ ಮಹಾರಣ್ಯಮಜಿನೈಃ ಪರಿವಾರಿತಮ್ ॥೩೮॥

ಪುನಃ ಇನ್ನೊಮ್ಮೆ ದ್ಯೂತಕ್ಕೆ ಕರೆದು ನನ್ನನ್ನು ಸೋಲಿಸಿ ಕೃಷ್ಣಾಜಿನಗಳಿಂದ ಸಹಿತನಾಗಿರುವಂತೆ ಮಾಡಿ ಈ ಘೋರವಾದ ಮಹಾರಣ್ಯಕ್ಕೆ ಕಳುಹಿಸಿದರು.

ಸೋಽಹಂ ವನೇ ದುರ್ವಸತೀಃ ಶಯೇ ಪರಮದುಃಖಿತಃ ।
ಅಕ್ಷದ್ಯೂತಾನುಷಂಗೇಣ ಗಿರಃ ಶೃಣ್ವನ್ ಸುದಾರುಣಾಃ ॥೩೯॥

ಸಂಪ್ರಾಪ್ತಾನಾಂ ಚ ಸುಹೃದಾಂ ಶೃಣ್ವನ್ ಸತ್ಯಾಭಿಸಂಹಿತಾಮ್ ।
ದ್ಯೂತಾತ್ ಪ್ರಭೃತಿ ಧರ್ಮಜ್ಞ ರಾತ್ರೀಃ ಸರ್ವಾ ವಿಚಿಂತಯನ್ ॥

ಅಂತಹ ನಾನು ಪರಮದುಃಖದಿಂದ ಈ ಕಾಡಿನಲ್ಲಿ ಅಕ್ಷದ್ಯೂತದಿಂದ ಉಂಟಾದ ದಾರುಣವಾದ ಮಾತುಗಳನ್ನು ಕೇಳುತ್ತಾ ನನ್ನನ್ನು ನೋಡಲು ಇಲ್ಲಿಗೆ ಬಂದ ಹಿತೈಷಿಗಳ ಸತ್ಯಪ್ರತಿಜ್ಞೆಯನ್ನು ಕೇಳುತ್ತಾ ಕೆಟ್ಟವಾಸವನ್ನು ಮಾಡುತ್ತಿದ್ದೇನೆ. ಧರ್ಮಜ್ಞನೇ, ದ್ಯೂತದಿಂದ ಇಲ್ಲಿಯ ವರೆಗೆ ಎಲ್ಲಾ ರಾತ್ರಿಗಳನ್ನು ಚಿಂತೆಯಿಂದಲೇ ಕಳೆಯುತ್ತಿದ್ದೇನೆ.

ಯಸ್ಮಿಂಶ್ಚ ವಯಮಾಯತ್ತಾಃ ಸದಾ ಗಾಂಡೀವಧನ್ವನಿ ।
ಮಹಾತ್ಮನಾ ವಿನಾ ತೇನ ಗತಸತ್ತ್ವಾ ಇವಾಸ್ಮಹೇ ॥೪೧॥

ಕದಾ ದ್ರಕ್ಷ್ಯಾಮ ಬೀಭತ್ಸುಂ ಕೃತಾಸ್ತ್ರಂ ಪುನರಾಗತಮ್ ।
ಇತಿ ಸರ್ವೇ ಮಹೇಷ್ವಾಸಂ ಚಿಂತಯಾನಾ ಧನಂಜಯಮ್ ।
ಅನೇನ ತು ವಿಷಣ್ಣೋಽಹಂ ಕಾರಣೇನ ಸಹಾನುಜಃ ॥೪೨॥

ಯಾವ ಗಾಂಡೀವಧರ್ನುಧಾರಿಯಾದ ಮಹಾತ್ಮನಾದ ಅರ್ಜುನನನ್ನು ನಾವೆಲ್ಲರೂ ಆಶ್ರಯಿಸಿದ್ದೇವೆಯೋ ಅವನು ಇಲ್ಲದೆ ನಾವೆಲ್ಲರೂ ಅಸ್ತ್ರವಿದ್ಯೆಯನ್ನು ಸಂಪಾದಿಸಿ ಹಿಂದಿರುಗಿ ಬರುವ ಅರ್ಜುನನ್ನು ಯಾವಾಗ ನೋಡುವೆವು ಎಂದು ಯಾವಾಗಲೂ ಅರ್ಜುನನನ್ನೇ ಚಿಂತಿಸುತ್ತಾ ಪ್ರಾಣ ಇಲ್ಲದಂತೆ ಆಗಿದ್ದೇವೆ. ಈ ಕಾರಣದಿಂದ ನಾನು ಮತ್ತು ನನ್ನ ತಮ್ಮಂದಿರು ವಿಷಾದವನ್ನು ಹೊಂದಿದ್ದೇವೆ.

ವನವಾಸಾನ್ನಿವೃತ್ತಂ ಮಾಂ ಪುನಸ್ತೇ ಪಾಪಬುದ್ಧಯಃ ।
ಜಾನಂತಃ ಪ್ರೀಯಮಾಣಾ ವೈ ದೇವನೇ ಭ್ರಾತೃಭಿಃ ಸಹ ।
ದ್ಯೂತೇನೈವಾಹ್ವಯಿಷ್ಯಂತಿ ಬಲಾದಕ್ಷೇಷು ತದ್ವಿದಃ ॥೪೩॥

ನಾನು ವನವಾಸದಿಂದ ಹಿಂದಿರುಗಿದ ಮೇಲೆ ಅದನ್ನು ತಿಳಿದ ಪಾಪಬುದ್ಧಿಗಳಾದ ಅಕ್ಷಕೋವಿದರಾದ ಅವರು ಪುನಃ ತಮ್ಮಂದಿರ ಜೊತೆಯಲ್ಲಿ ನನ್ನನ್ನು ಬಲಾತ್ಕರಿಸಿ ಸಂತೋಷದಿಂದ ಅಕ್ಷದ್ಯೂತಕ್ಕೆ ಆಹ್ವಾನಮಾಡುವರು.

ಆಹೂತಶ್ಚ ಪುನರ್ದ್ಯೂತೇ ನಾಸ್ಮಿ ಶಕ್ತೋ ನಿವರ್ತಿತುಮ್ ।
ಪಣೇ ಚ ಮಮ ನಾತ್ಯರ್ಥಂ ವಿದ್ಯತೇ ವಸು ಕಿಂಚನ ॥೪೩॥

ನನ್ನನ್ನು ಪುನಃದ್ಯೂತಕ್ಕೆ ಆಹ್ವಾನಮಾಡಿದರೆ ನಾನು ಬರುವುದಿಲ್ಲವೆಂದು ಹೇಳಲಾರೆ. ಈ ಬಾರಿ ಪಣಕ್ಕೆ ಇಡಲು ನನ್ನ ಬಳಿ ಯಾವ ಧನವೂ ಇಲ್ಲ.

ಏತತ್ ಸರ್ವಮನುಧ್ಯಾಯನ್ ಚಿಂತಯಾಮಿ ದಿವಾನಿಶಮ್ ।
ನ ಮತ್ತೋ ದುಃಖಿತತರಃ ಪುಮಾನಸ್ತೀಹ ಕಶ್ಚನ ॥೪೪॥

ಈ ಎಲ್ಲವನ್ನು ಹಗಲೂ ರಾತ್ರಿಯೂ ಚಿಂತಿಸುತ್ತಿದ್ದೇನೆ. ನನಗಿಂತ ದುಃಖಿಯಾದ ಮನುಷ್ಯನು ಈ ಭೂಮಿಯಲ್ಲಿ ಇನ್ನೊಬ್ಬನಿಲ್ಲ.

ನಾಸ್ತಿ ರಾಜಾ ಮಯಾ ಕಶ್ಚಿದ್ ಅಲ್ಪಭಾಗ್ಯತರೋ ಭುವಿ ।
ಭವತಾ ದೃಷ್ಟಪೂರ್ವೋSಪಿ ಶ್ರುತಪೂರ್ವೋSಪಿ ವಾ ಭವೇತ್ ।
ನ ಮತ್ತೋ ದುಃಖಿತತರಃ ಪುಮಾನಸ್ತೀತಿ ಮೇ ಮತಿಃ ॥೪೫॥

ನನಗಿಂತ ದುರ್ಭಾಗ್ಯನಾದ ರಾಜನನ್ನು ಭೂಮಿಯಲ್ಲಿ ನೀವು ಹಿಂದೆ ನೋಡಲೂ ಇಲ್ಲ ಅಥವಾ ಕೇಳಲೂ ಇಲ್ಲ ಎಂದು ತೋರುತ್ತದೆ. ನನಗಿಂತ ದುಃಖಿಯಾದ ಇನ್ನೊಬ್ಬ ಮನುಷ್ಯನಿಲ್ಲವೆಂದು ನನ್ನ ಅಭಿಪ್ರಾಯ.

ಏವಂ ಬ್ರುವಂತಂ ರಾಜಾನಮುವಾಚ ಭಗವಾನೃಷಿಃ ।
ಶೋಕಂ ವ್ಯಪನುದನ್ ರಾಜ್ಞೋ ಧರ್ಮರಾಜಸ್ಯ ಧೀಮತಃ ॥೪೬॥

ಆಗ ಬೃಹದಶ್ವ ಋಷಿಗಳು ಹೀಗೆ ಮಾತನಾಡುತ್ತಿದ್ದ ಮೇಧಾವಿಯಾದ ಧರ್ಮರಾಜನ ಶೋಕವನ್ನು ಪರಿಹರಿಸುತ್ತಾ ಆ ರಾಜನನ್ನು ಕುರಿತು ಮಾತನಾಡಿದರು.

ನ ವಿಷಾದೇ ಮನಃ ಕಾರ್ಯಂ ತ್ವಯಾ ಬುದ್ಧಿಮತಾಂ ವರ ।
ಆಗಮಿಷ್ಯತಿ ಭೀಬತ್ಸುರಮಿತ್ರಾಂಶ್ಚ ವಿಜೇಷ್ಯತಿ ॥೪೭॥

ಮೇಧಾವಿಗಳಲ್ಲಿ ಶ್ರೇಷ್ಠನಾದವನೇ, ನೀನು ವಿಷಾದವನ್ನು ಹೊಂದಬಾರದು. ಅರ್ಜುನನು ಹಿಂದಿರುಗಿ ಬಂದು ಶತ್ರುಗಳನ್ನು ಗೆಲ್ಲುವನು.

ಯದ್ ಬ್ರವೀಷಿ ಮಹಾರಾಜ ನ ಮತ್ತೋ ವಿದ್ಯತೇ ಕ್ವಚಿತ್ ।
ಅಲ್ಪಭಾಗ್ಯತರಃ ಕಶ್ಚಿತ್ ಪುಮಾನಸ್ತೀತಿ ಪಾಂಡವ ॥೪೮॥

ಅತ್ರ ತೇ ಕಥಯಿಷ್ಯಾಮಿ ಯದಿ ಶುಶ್ರೂಷಸೇ ನೃಪ ।
ಯಸ್ತ್ವತ್ತೋ ದುಃಖಿತತರೋ ರಾಜಾऽऽಸೀತ್ ಪೃಥಿವೀಪತೇ ॥೪೯॥

ಎಲೈ ಮಹಾರಾಜನೇ, ನೀನು ನಿನಗಿಂತ ದುರ್ಭಾಗ್ಯಶಾಲಿಯಾದ ಒಬ್ಬ ಮನುಷ್ಯನು ಇಲ್ಲವೆಂದು ಹೇಳುತ್ತಿರುವೆಯಷ್ಟೆ. ಭಾರತನೇ ನೀನು ಕೇಳುವುದಾದರೆ ನಿನಗಿಂತ ದುಃಖಿಯಾದ ಒಬ್ಬ ರಾಜನ ಕಥೆಯನ್ನು ಹೇಳುತ್ತೇನೆ. ಪೃಥ್ವೀಪತಿಯೇ, ಅದನ್ನು ಕೇಳು.

ವೈಶಂಪಾಯನಃ

ಅಥೈನಮಬ್ರವೀದ್ ರಾಜಾ ಬ್ರವೀತು ಭಗವಾನಿತಿ ।
ಇಮಾಮವಸ್ಥಾಂ ಸಂಪ್ರಾಪ್ತಂ ಶ್ರೋತುಮಿಚ್ಛಾಮಿ ಪಾರ್ಥಿವಮ್ ॥೫೦॥

ಆಗ ರಾಜನು ಪೂಜ್ಯರು ಅವನ ಕಥೆಯನ್ನು ಹೇಳಬೇಕು, ಇಂತಹ ಅವಸ್ಥೆಯನ್ನು ಹೊಂದಿದ ರಾಜನ ಕಥೆಯನ್ನು ನಾನು ಕೇಳಲು ಬಯಸುತ್ತೇನೆ ಎಂದು ಹೇಳಿದನು.

ಬೃಹದಶ್ವಃ

ಶೃಣು ರಾಜನ್ನವಹಿತಃ ಸಹ ಭ್ರಾತೃಭಿರಚ್ಯುತ ।
ಯಸ್ತ್ವತ್ತೋ ದುಃಖಿತತರೋ ರಾಜಾऽऽಸೀತ್ ಪೃಥಿವೀಪತೇ ॥೫೧॥

ಎಲೈ ರಾಜನೇ, ಎಲೈ ಪೃಥಿವೀಪತಿಯೇ, ನಿನ್ನ ಗುಣಗಳಿಂದ ಚ್ಯುತನಾಗದವನೇ, ನಿನಗಿಂತ ಹೆಚ್ಚು ದುಃಖಿಯಾದ ರಾಜನು ಯಾವನಿದ್ದನೋ ಅಂತಹ ರಾಜನ ಕಥೆಯನ್ನು ನಿನ್ನ ತಮ್ಮಂದಿರ ಜೊತೆಯಲ್ಲಿ ಕೇಳು.

ನಿಷಧೇಷು ಮಹೀಪಾಲೋ ವೀರಸೇನ ಇತಿ ಸ್ಮ ಹ ।
ತಸ್ಯ ಪುತ್ರೋऽಭವನ್ನಾಮ್ನಾ ನಲೋ ಧರ್ಮಾರ್ಥದರ್ಶಿವಾನ್ ॥೫೨॥

ನಿಷಧದೇಶದಲ್ಲಿ ವೀರಸೇನನೆಂಬ ರಾಜನಿದ್ದನು. ಅವನಿಗೆ ಧರ್ಮಾರ್ಥಗಳನ್ನು ತಿಳಿದ ನಳನೆಂಬ ಒಬ್ಬ ಪುತ್ರನು ಜನಿಸಿದನು.

ಸ ನಿಕೃತ್ಯಾ ಜಿತೋ ರಾಜಾ ಪುಷ್ಕರೇಣೇತಿ ನಃ ಶ್ರುತಮ್ ।
ವನವಾಸಮದುಃಖಾರ್ಹೋ ಭಾರ್ಯಯಾ ನ್ಯವಸತ್ ಸಹ ॥೫೩॥

ಅವನು ತಮ್ಮನಾದ ಪುಷ್ಕರನಿಂದ ಮೋಸದಿಂದ ಅಕ್ಷದ್ಯೂತದಲ್ಲಿ ಜಯಿಸಲ್ಪಟ್ಟನು ಎಂದು ನಾವು ಕೇಳಿದ್ದೇವೆ. ದುಃಖಕ್ಕೆ ಅರ್ಹನಲ್ಲದ ಅವನು ಭಾರ್ಯೆಯ ಜೊತೆಯಲ್ಲಿ ವನವಾಸವನ್ನು ಮಾಡಿದನು.

ನ ತಸ್ಯ ದಾಸಾ ನ ರಥೋ ನ ಭ್ರಾತಾ ನ ಚ ಬಾಂಧವಾಃ ।
ವನೇ ನಿವಸತೋ ರಾಜನ್ನಶ್ರೂಯಂತ ಕದಾಚನ ॥೫೪॥

ರಾಜನೇ, ಅವನು ವನವಾಸವನ್ನು ಮಾಡುವಾಗ ಅವನಿಗೆ ದಾಸರಾಗಲೀ ರಥವಾಗಲೀ ಸಹೋದರರಾಗಲೀ ಬಾಂಧವರಾಗಲೀ ಎಂದೂ ಇರಲಿಲ್ಲವೆಂದು ನಾವು ಕೇಳಿದ್ದೇವೆ.

ಭವಾನ್ ಹಿ ಸಂವೃತೋ ವೀರೈರ್ಭ್ರಾತೃಭಿರ್ದೇವಸಮ್ಮಿತೈಃ ।
ಬ್ರಹ್ಮಕಲ್ಪೈರ್ದ್ವಿಜಾಗ್ರ್ಯೈಶ್ಚ ತಸ್ಮಾನ್ನಾರ್ಹಸಿ ಶೋಚಿತುಮ್ ॥೫೫॥

ನೀನಾದರೋ ವೀರರೂ ದೇವತೆಗಳಿಗೆ ಸಮಾನರೂ ಆದ ಸಹೋದರರಿಂದಲೂ ಬ್ರಹ್ಮನಿಗೆ ಸಮಾನರಾದ ಶ್ರೇಷ್ಠಬ್ರಾಹ್ಮಣರಿಂದಲೂ ಕೂಡಿದ್ದೀಯೆ. ಆದ್ದರಿಂದ ಶೋಕಪಡುವ ಕಾರಣವಿಲ್ಲ.

ಯುಧಿಷ್ಠಿರಃ

ವಿಸ್ತರೇಣಾಧಿಗಚ್ಛಾಮಿ ನಳಸ್ಯ ಸುಮಹಾತ್ಮನಃ ।
ಚರಿತಂ ವದತಾಂ ಶ್ರೇಷ್ಠ ತ್ವಂ ತದಾಖ್ಯಾತುಮರ್ಹಸಿ ॥೫೬॥

ಎಲೈ ಮಾತನಾಡುವವರಲ್ಲಿ ಶ್ರೇಷ್ಠರೇ, ಮಹಾತ್ಮನಾದ ನಳನ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಯಲು ಬಯಸುತ್ತೇನೆ. ನೀವು ಅದನ್ನು ಹೇಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಚತ್ವಾರಿಂಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

# ನಲವತ್ತಾರನೆಯ ಅಧ್ಯಾಯ

(ನಳಚರಿತೆ. ಹಂಸಸಂದೇಶ)

## ಬೃಹದಶ್ವಃ

ಆಸೀದ್ರಾಜಾ ನಳೋ ನಾಮ ವೀರಸೇನಸುತೋ ಬಲೀ ।
ಉಪಪನ್ನೋ ಗುಣೈರಿಷ್ಟೈ ರೂಪವಾನಶ್ವಕೋವಿದಃ ॥೧॥

ವೀರಸೇನನ ಸುತನಾದ ಪ್ರಬಲನಾದ ನಳನೆಂಬ ರಾಜನಿದ್ದನು. ಅವನು ರೂಪವಂತನೂ ಅಶ್ವವಿದ್ಯೆಯನ್ನು ಬಲ್ಲವನೂ ಮತ್ತು ಅಪೇಕ್ಷಿತವಾದ ಎಲ್ಲಾ ಗುಣಗಳಿಂದಲೂ ಕೂಡಿದವನೂ ಆಗಿದ್ದನು.

ಯಜ್ವಾ ದಾನಪತಿರ್ದಕ್ಷಃ ಸದಾ ಶೀಲಪುರಸ್ಕೃತಃ ।
ಅತಿಷ್ಠನ್ಮನುಜೇಂದ್ರಾಣಾಂ ಮೂರ್ಧ್ನಿ ದೇವಪತಿರ್ಯಥಾ ।
ಉಪರ್ಯುಪರಿ ಸರ್ವೇಷಾಮಾದಿತ್ಯ ಇವ ತೇಜಸಾ ॥೨॥

ಯಾಗವನ್ನು ಮಾಡುವವನೂ ದಾನಶೂರನೂ ದಕ್ಷನೂ ಯಾವಾಗಲೂ ಶೀಲಸಂಪನ್ನನೂ ಆದ ಅವನು ದೇವರಾಜನಾದ ಇಂದ್ರನಂತೆ ಎಲ್ಲ ರಾಜರ ತಲೆಯ ಮೇಲೆ ಇದ್ದನು. ಅವನು ತನ್ನ ತೇಜಸ್ಸಿನಿಂದ ಎಲ್ಲರ ಮೇಲೆ ಬೆಳಗುವ ಸೂರ್ಯನಂತೆ ಇದ್ದನು.

ಬ್ರಹ್ಮಣ್ಯೋ ವೇದವಿಚ್ಛೂರೋ ನಿಷಧೇಷು ಮಹೀಪತಿಃ ।
ಅಕ್ಷಪ್ರಿಯಃ ಸತ್ಯವಾದೀ ಮಹಾನಕ್ಷೌಹಿಣೀಪತಿಃ ॥೩॥

ನಿಷಧಾಧಿಪತಿಯಾದ ಆ ರಾಜನು ಬ್ರಾಹ್ಮಣರಿಗೆ ಶರಣ್ಯನಾದವನೂ ವೇದಗಳನ್ನು ಬಲ್ಲವನೂ ಶೂರನೂ ಸತ್ಯವಾದಿಯೂ ಅಕ್ಷಪ್ರಿಯನೂ ಮತ್ತು ದೊಡ್ಡ ಅಕ್ಷೌಹಿಣಿನಾಯಕನೂ ಆಗಿದ್ದನು.

ಈಪ್ಸಿತೋ ವರನಾರೀಣಾಮುದಾರಃ ಸಂಯತೇಂದ್ರಿಯಃ ।
ರಕ್ಷಿತಾ ಧನ್ವಿನಾಂ ಶ್ರೇಷ್ಠಃ ಸಾಕ್ಷಾದಿವ ಮನುಃ ಸ್ವಯಮ್ ॥೪॥

ಜಿತೇಂದ್ರಿಯನೂ ಉದಾರನೂ ಆದ ಅವನು ಎಲ್ಲ ಸುಂದರಿಯರಿಗೆ ಅಪೇಕ್ಷಿತನಾಗಿದ್ದನು. ಧನ್ವಿಧಾರಿಗಳಲ್ಲಿ ಶ್ರೇಷ್ಠನಾದ ಅವನು ಸಾಕ್ಷಾತ್ ಮನುವಿನಂತೆ ಭೂಮಿಯನ್ನು ರಕ್ಷಿಸಿದನು.

ತಥೈವಾಸೀದ್ ವಿದರ್ಭೇಷು ಭೀಮೋ ಭೀಮಪರಾಕ್ರಮಃ ।
ಶೂರಃ ಸರ್ವಗುಣೋಪೇತಃ ಪ್ರಜಾಕಾಮಃ ಸ ಚಾಪ್ರಜಃ ॥೫॥

ಹಾಗೆಯೇ ವಿದರ್ಭದೇಶದಲ್ಲಿ ಭಯಂಕರಪರಾಕ್ರಮವುಳ್ಳ ಭೀಮನೆಂಬ ರಾಜನಿದ್ದನು. ಸರ್ವಗುಣೋಪೇತನಾದ ಅವನು ಪ್ರಜಾಕಾಮನಾಗಿದ್ದನು ಅವನಿಗೆ ಮಕ್ಕಳಿರಲಿಲ್ಲ.

ಸ ಪ್ರಜಾರ್ಥೇ ಪರಂ ಯತ್ನಮಕರೋತ್ ಸುಸಮಾಹಿತಃ ।
ತಮಭ್ಯಗಚ್ಛದ್ ಬ್ರಹ್ಮರ್ಷಿರ್ದಮನೋ ನಾಮ ಭಾರತ ॥೬॥

ಅವನು ಸಮಾಧಾನದಿಂದ ಕೂಡಿದ ಮನಸ್ಸುಳ್ಳವನಾಗಿ ಪ್ರಜೆಯನ್ನು ಪಡೆಯುವ ಸಲುವಾಗಿ ಮಹಾಪ್ರಯತ್ನವನ್ನು ಮಾಡಿದನು. ಭಾರತನೇ! ಒಮ್ಮೆ ಬ್ರಹ್ಮರ್ಷಿಗಳಾದ ದಮನರು ಅವನನ್ನು ಸಮೀಪಿಸಿದರು.

ತಂ ಸ ಭೀಮಃ ಪ್ರಜಾಕಾಮಃ ತೋಷಯಾಮಾಸ ಧರ್ಮವಿತ್ ।
ಮಹಿಷ್ಯಾ ಸಹ ರಾಜೇಂದ್ರ ಸತ್ಕಾರೇಣ ಸುವರ್ಚಸಮ್ ॥೭॥

ಎಲೈ ರಾಜೇಂದ್ರನೇ, ಧರ್ಮಜ್ಞನಾದ ಪ್ರಜಾಕಾಮನಾದ ಭೀಮನು ತನ್ನ ರಾಣಿಯ ಜೊತೆಯಲ್ಲಿ ವರ್ಚಸ್ವಿಗಳಾದ ಆ ಋಷಿಗಳನ್ನು ಸತ್ಕಾರದಿಂದ ಸಂತೋಷಪಡಿಸಿದನು.

ತಸ್ಮೈ ಪ್ರಸನ್ನೋ ದಮನಃ ಸಭಾರ್ಯಾಯ ವರಂ ದದೌ ।
ಕನ್ಯಾರತ್ನಂ ಕುಮಾರಾಂಶ್ಚ ತ್ರೀನುದಾರಾನ್ ಮಹಾಯಶಾಃ ॥೮॥

ದಮಯಂತೀಂ ದಮಂ ದಾಂತಂ ದಮನಂ ಚ ಸುವರ್ಚಸಮ್ ।
ಉಪಪನ್ನಾನ್ ಗುಣೈಃ ಸರ್ವೈರ್ಭೀಮಾನ್ ಭೀಮಪರಾಕ್ರಮಾನ್ ॥

ಪ್ರಸನ್ನರಾದ ಮಹಾಯಶಸ್ವಿಗಳಾದ ದಮನರು ಭಾರ್ಯಾಸಹಿತನಾದ ರಾಜನಿಗೆ ಒಂದು ಕನ್ಯಾರತ್ನವನ್ನು ಮತ್ತು ಮೂರು ಪುತ್ರರನ್ನು ವರವನ್ನಾಗಿ ಕೊಟ್ಟು ಕರುಣಿಸಿದನು.

ದಮಯಂತಿ ದಮ ದಾಂತ ಮತ್ತು ದಮನ ಎಂಬ ವರ್ಚಸ್ವಿಗಳಾದ ಮಕ್ಕಳು. ಎಲ್ಲರೂ ಸರ್ವಗುಣಗಳಿಂದಲೂ ಕೂಡಿದ್ದರು. ಕುಮಾರರು ಮಹಾಪರಾಕ್ರಮವುಳ್ಳವರು ಮತ್ತು ಶತ್ರುಭಯಂಕರರೂ ಆಗಿದ್ದರು.

ದಮಯಂತೀ ತು ರೂಪೇಣ ತೇಜಸಾ ವಪುಷಾ ಶ್ರಿಯಾ ।
ಸೌಭಾಗ್ಯೇನ ಚ ಲೋಕೇಷು ಯಶಃ ಪ್ರಾಪ ಸುಮಧ್ಯಮಾ ॥೧೦॥

ಸುಮಧ್ಯಮಳಾದ ದಮಯಂತಿಯಾದರೂ ತನ್ನ ರೂಪದಿಂದ ತೇಜಸ್ಸಿನಿಂದ ಶರೀರದಿಂದ ಕಾಂತಿಯಿಂದ ಮತ್ತು ಸೌಭಾಗ್ಯದಿಂದ ಲೋಕಗಳಲ್ಲಿ ಕೀರ್ತಿಗಳನ್ನು ಪಡೆದಳು.

ಅಥೋ ತಾಂ ವಯಸಿ ಪ್ರಾಪ್ತೇ ದಾಸೀನಾಂ ಸಮಲಂಕೃತಮ್ ।
ಶತಂ ಸಖೀನಾಂ ಚ ತಥಾ ಪರ್ಯುಪಾಸ್ತೆ ಶಚೀಮಿವ ॥೧೧॥

ಅನಂತರ ಅವಳು ಪ್ರಾಪ್ತವಯಸ್ಕಳಾದಾಗ ಅವಳಿಗೆ ಅಲಂಕೃತರಾದ ನೂರು ಜನ ಸಖಿಯರು ಮತ್ತು ದಾಸಿಯರು ಶಚಿಯನ್ನು ಸೇವಿಸಿದಂತೆ ಸೇವೆಮಾಡುತ್ತಿದ್ದರು.

ತತಃ ಸಾ ಭ್ರಾಜತೇ ತಾಭಿಃ ಸರ್ವಾಭರಣಭೂಷಿತಾ ।
ಸಖೀಮಧ್ಯೇಽನವದ್ಯಾಂಗೀ ವಿದ್ಯುತ್ಸೌದಾಮಿನೀ ಯಥಾ ॥೧೨॥

ಆಗ ಅನವದ್ಯಾಂಗಿಯಾದ ಅವಳು ಸರ್ವಾಭರಣಭೂಷಿತಳಾಗಿ ಆ ಸಖೀಜನರ ಮಧ್ಯೆ ಮೋಡಗಳ ಮಧ್ಯೆ ಇರುವ ಮಿಂಚಿನಂತೆ ಕಂಗೊಳಿಸುತ್ತಿದ್ದಳು.

ಅತೀವ ರೂಪಸಂಪನ್ನಾ ಶ್ರೀರಿವಾಯತಲೋಚನಾ ।
ನ ದೇವೇಷು ನ ಯಕ್ಷೇಷು ತಾದೃಗ್ರೂಪವತೀ ಕ್ವಚಿತ್ ॥೧೩॥

ವಿಶಾಲನೇತ್ರೆಯಾದ ರೂಪಸಂಪನ್ನೆಯಾದ ಅವಳು ಲಕ್ಷ್ಮೀದೇವಿಯಂತೆ ಇದ್ದಳು. ದೇವತೆಗಳಲ್ಲಿಯಾಗಲೀ ಅಥವಾ ಯಕ್ಷರಲ್ಲಿಯಾಗಲೀ ಅಂತಹ ಸುಂದರಿಯು ಇರಲಿಲ್ಲ.

ಮಾನುಷೇಷ್ವಪಿ ನೈವಾನ್ಯಾ ದೃಷ್ಟಪೂರ್ವಾಽಥವಾ ಶ್ರುತಾ ।
ಚಿತ್ತಪ್ರಮಾಥಿನೀ ಬಾಲಾ ದೇವನಾಮಪಿ ಸುಂದರೀ ॥೧೪॥

ಮನುಷ್ಯರಲ್ಲಿಯೂ ಸಹ ಅಂತಹ ಸುಂದರಿಯನ್ನು ಹಿಂದೆ ನೋಡಿರಲಿಲ್ಲ. ಅಥವಾ ಕೇಳಿರಲಿಲ್ಲ. ಸುಂದರಿಯಾದ ಆ ಬಾಲೆಯು ದೇವತೆಗಳ ಮನಸ್ಸನ್ನೂ ಕಲಕುವವಳಾಗಿದ್ದಳು.

ನಳಶ್ಚ ರಾಜಶಾರ್ದೂಲೋ ರೂಪೇಣಾಪ್ರತಿಮೋ ಭುವಿ ।
ಕಂದರ್ಪ ಇವ ರೂಪೇಣ ಮೂರ್ತಿಮಾನಭವತ್ ಸ್ವಯಮ್ ॥೧೫॥

ರಾಜಶಾರ್ದೂಲನಾದ ನಳನು ಭೂಮಿಯಲ್ಲಿ ರೂಪದಲ್ಲಿ ಅಸದೃಶನಾಗಿದ್ದನು. ತನ್ನ ಸೌಂದರ್ಯದಿಂದ ಅವನು ಸ್ವಯಂ ಶರೀರವನ್ನು ಧರಿಸಿದ ಇನ್ನೊಬ್ಬ ಮನ್ಮಥನಂತೆ ಇದ್ದನು.

ತಸ್ಯಾಃ ಸಮೀಪೇ ತು ನಳಂ ಪ್ರಶಶಂಸುಃ ಕುತೂಹಲಾತ್ ।
ನೈಷಧಸ್ಯ ಸಮೀಪೇ ತು ದಮಯಂತೀಂ ಪುನಃ ಪುನಃ ॥೧೬॥

ಜನರು ದಮಯಂತಿಯ ಸಮೀಪದಲ್ಲಿ ಕುತೂಹಲದಿಂದ ನಳನನ್ನು ಪ್ರಸಂಶೆಮಾಡಿದರು. ನಳನ ಸಮೀಪದಲ್ಲಿ ದಮಯಂತಿಯನ್ನು ಸಹ ಪುನಃಪುನಃ ಪ್ರಶಂಸೆಮಾಡಿದರು.

ತಯೋರದೃಷ್ಟಃ ಕಾಮೋಽಭೂತ್ ಶೃಣ್ವತೋಃ ಸತತಂ ಗುಣಾನ್।
ಅನ್ಯೋನ್ಯಂ ಪ್ರತಿ ಕೌಂತೇಯ ಸೋಽಭ್ಯವರ್ಧತ ಹೃಚ್ಛಯಃ ॥೧೭॥

ಕೌಂತೇಯನೇ! ಒಬ್ಬರನ್ನೊಬ್ಬರು ನೋಡದೆ ಸತತವಾಗಿ ಪರಸ್ಪರಗುಣಗಳನ್ನು ಕೇಳುವ ಅವರಿಗೆ ಪರಸ್ಪರವಾಗಿ ಕಾಮವುಂಟಾಗಿ ಅದು ಹಾಗೆಯೆ ಬೆಳೆಯಿತು.

ಅಶಕ್ನುವನ್ನಳಃ ಕಾಮಂ ತದಾ ಧಾರಯಿತುಂ ಹೃದಾ ।
ಅಂತಃಪುರಸಮೀಪಸ್ಥೇ ವನ ಆಸ್ತೇ ರಹೋಗತಃ ॥೧೮॥

ತನ್ನ ಕಾಮದ ವೇಗವನ್ನು ತಡೆದುಕೊಳ್ಳಲಾಗದೆ ಆಗ ನಳನು ಅಂತಃಪುರದ ಸಮೀಪದ ವನದಲ್ಲಿ ಏಕಾಂತದಲ್ಲಿ ಇದ್ದನು.

ಸ ದದರ್ಶ ತದಾ ಹಂಸಾನ್ ಜಾತರೂಪಪರಿಚ್ಛದಾನ್ ।
ವನೇ ವಿಚರತಾಂ ತೇಷಾಮೇಕಂ ಜಗ್ರಾಹ ಪಕ್ಷಿಣಮ್ ॥೧೯॥

ಅವನು ಆ ವನದಲ್ಲಿ ಸಂಚರಿಸುವ ಸುವರ್ಣಮಯವಾದ ಪಕ್ಷಗಳನ್ನುಳ್ಳ ಹಂಸಗಳನ್ನು ನೋಡಿ ಅವುಗಳಲ್ಲಿ ಒಂದನ್ನು ಹಿಡಿದುಕೊಂಡನು.

ತತೋಽಂತರಿಕ್ಷಗೋ ವಾಚಂ ವ್ಯಾಜಹಾರ ತದಾ ನಳಮ್ ।
ನ ಹಂತವ್ಯೋಽಸ್ಮಿ ತೇ ರಾಜನ್ ಕರಿಷ್ಯಾಮಿ ಹಿ ವೈ ಪ್ರಿಯಮ್ ।
ದಮಯಂತೀಸಕಾಶೇ ತ್ವಾಂ ಕಥಯಿಷ್ಯಾಮಿ ನೈಷಧ ॥೨೦॥

ಆಗ ಅಂತರಿಕ್ಷದಲ್ಲಿ ಹಾರುವ ಆ ಪಕ್ಷಿಯು ನಳನನ್ನು ಕುರಿತು ರಾಜನೇ ನನ್ನನ್ನು ಕೊಲ್ಲಬೇಡ. ನಿನಗೆ ಪ್ರಿಯವನ್ನು ಉಂಟುಮಾಡುವೆನು. ನೈಷಧನೇ, ದಮಯಂತಿಯ ಸಮೀಪಕ್ಕೆ ಹೋಗಿ ನಿನ್ನನ್ನು ತಿಳಿಸುವೆನು ಎಂದು ಹೇಳಿತು.

ಯಥಾ ತ್ವದನ್ಯಂ ಪುರುಷಂ ನ ಸಾ ಮಂಸ್ಯತಿ ಕರ್ಹಿಚಿತ್ ।
ತವೈವ ಚ ಯಥಾ ಭಾರ್ಯಾ ಭವಿಷ್ಯತಿ ತಥಾಽನಘ ।
ವಿಧಾಸ್ಯಾಮಿ ನರವ್ಯಾಘ್ರ ಸೋಽನುಜಾನಾತು ಮಾಂ ಭವಾನ್ ॥

ನರವ್ಯಾಘ್ರನೇ, ನಿನ್ನನ್ನು ಬಿಟ್ಟು ಇನ್ನೊಬ್ಬ ಪುರುಷನನ್ನು ಅವಳು ಯೋಚನೆಮಾಡದಂತೆ ಮತ್ತು ನಿನ್ನ ಭಾರ್ಯೆಯೇ ಆಗುವಂತೆ ನಾನು ಮಾಡುವೆನು. ಅನಘನೇ ನನ್ನನ್ನು ಬಿಟ್ಟುಬಿಡು.

ಏವಮುಕ್ತಸ್ತತೋ ಹಂಸಮುತ್ಸಸರ್ಜ ಮಹೀಪತಿಃ ।
ತೇ ತು ಹಂಸಾಃ ಸಮುತ್ಪತ್ಯ ವಿದರ್ಭಾನಗಮಂಸ್ತತಃ ॥೨೨॥

ಹೀಗೆ ಹೇಳಲ್ಪಟ್ಟ ರಾಜನು ಆ ಹಂಸವನ್ನು ಬಿಟ್ಟನು. ಆಗ ಆ ಹಂಸಗಳು ಹಾರಿ ವಿದರ್ಭದೇಶಕ್ಕೆ ಬಂದವು.

ವಿದರ್ಭನಗರೀಂ ಗತ್ವಾ ದಮಯಂತ್ಯಾಸ್ತದಾಽಂತಿಕೇ ।
ನಿಪೇತುಸ್ತೇ ಗರುತ್ಮಂತಃ ಸಾ ದದರ್ಶಾಥ ತಾನ್ ಖಗಾನ್ ॥೨೩॥

ವಿದರ್ಭದೇಶದ ಪಟ್ಟಣಕ್ಕೆ ಹೋಗಿ ಆ ಪಕ್ಷಿಗಳು ದಮಯಂತಿಯ ಸಮೀಪದಲ್ಲಿ ಇಳಿದವು. ಆಗ ದಮಯಂತಿಯು ಆ ಪಕ್ಷಿಗಳನ್ನು ನೋಡಿದಳು.

ಸಾ ತಾನದ್ಭುತರೂಪಾನ್ ವೈ ದೃಷ್ಟ್ವಾ ಸಖಿಗಣಾವೃತಾ ।
ಹೃಷ್ಟಾ ಗ್ರಹೀತುಂ ಖಗಮಾನ್ ತ್ವರಮಾಣೋಪಚಕ್ರಮೇ ॥೩೪॥

ಅವಳೂ ಸಹ ಅದ್ಭುತರೂಪವುಳ್ಳ ಆ ಪಕ್ಷಿಗಳನ್ನು ನೋಡಿ ಸಖೀಗಣದಿಂದ ಸಹಿತಳಾಗಿ ಸಂತೋಷದಿಂದ ಆ ಪಕ್ಷಿಗಳನ್ನು ಹಿಡಿಯಲು ಶೀಘ್ರವಾಗಿ ಪ್ರಯತ್ನಿಸಿದಳು.

ಹಂಸಾ ವಿಸಸೃಪುಃ ಶೀಘ್ರಂ ಸರ್ವತಃ ಪ್ರಮದಾವನೇ ।
ಏಕೈಕಶಸ್ತದಾ ಕನ್ಯಾಃ ತಾನ್ ಹಂಸಾನ್ ಸಮುಪಾದ್ರವನ್ ॥೩೫॥

ಹಂಸಗಳು ಆ ಪ್ರಮದಾವನದಲ್ಲಿ ಅವರ ಕೈಗೆ ಸಿಲುಕದೆ ಎಲ್ಲ ಕಡೆಗಳಲ್ಲಿ ಓಡಾಡಿದವು. ಆ ಕನ್ಯೆಯರು ಒಬ್ಬೊಬ್ಬರು ಒಂದೊಂದರಂತೆ ಹಂಸಗಳನ್ನು ಹಿಂಬಾಲಿಸಿದರು.

ದಮಯಂತೀ ತು ಯಂ ಹಂಸಂ ಸಮುಪಾಧಾವದಂತಿಕಾತ್ ।
ಸ ಮಾನುಷೀಂ ಗಿರಂ ಕೃತ್ವಾ ದಮಯಂತೀಮಥಾಬ್ರವೀತ್ ॥೩೬॥

ದಮಯಂತಿಯು ಯಾವ ಹಂಸದ ಸಮೀಪಕ್ಕೆ ಹೋದಳೋ ಆ ಹಂಸವು ಮನುಷ್ಯರ ಮಾತಿನಿಂದ ದಮಯಂತಿಯನ್ನು ಕುರಿತು ಹೇಳಿತು.

ದಮಯಂತಿ ನಳೋ ನಾಮ ನಿಷಧೇಷು ಮಹೀಪತಿಃ ।
ಅಶ್ವಿನೋಃ ಸದೃಶೋ ರೂಪೇ ನ ಸಮೋऽಸ್ಯಸ್ಯ ಮಾನುಷಃ ॥೩೭॥

ದಮಯಂತಿಯೇ, ನಳನೆಂಬ ನೈಷಧರಾಜನಿದ್ದಾನೆ. ಅವನು ರೂಪದಲ್ಲಿ ಅಶ್ವಿನೀದೇವತೆಗಳಿಗೆ ಸದೃಶನಾಗಿದ್ದಾನೆ. ಅವನಿಗೆ ಸಮಾನನಾದ ಇನ್ನೊಬ್ಬ ಮನುಷ್ಯನಿಲ್ಲ.

ತಸ್ಯ ವೈ ಯದಿ ಭಾರ್ಯಾ ತ್ವಂ ಭವೇಥಾ ವರವರ್ಣಿನಿ ।
ಸಫಲಂ ತೇ ಭವೇಜ್ಜನ್ಮ ರೂಪಂ ಚೇದಂ ಸುಮಧ್ಯಮೇ ॥೩೮॥

ಸುಂದರಿಯೇ ಸುಮಧ್ಯಮೆಯೇ, ನೀನು ಅವನ ಭಾರ್ಯೆಯಾದರೆ ನಿನ್ನ ಜನ್ಮವು ಮತ್ತು ನಿನ್ನ ಸೌಂದರ್ಯವು ಸಾರ್ಥಕವಾಗುತ್ತದೆ.

ವಯಂ ಹಿ ದೇವಗಂಧರ್ವಮನುಷ್ಯೋರಗರಾಕ್ಷಸಾನ್ ।
ದೃಷ್ಟವಂತೋ ನ ಚಾಸ್ಮಾಭಿರ್ದೃಷ್ಟಪೂರ್ವಸ್ತಥಾವಿಧಃ ॥೨೯॥

ನಾವು ದೇವತೆಗಳನ್ನು ಗಂಧರ್ವರನ್ನು ಮನುಷ್ಯರನ್ನು ಉರಗಗಳನ್ನು ಮತ್ತು ರಾಕ್ಷಸರನ್ನು ನೋಡಿದ್ದೇವೆ. ಆದರೆ ನಳನಂತಹ ಪುರುಷನನ್ನು ಹಿಂದೆ ಎಂದೂ ನೋಡಲಿಲ್ಲ.

ತ್ವಂ ಚಾಪಿ ರತ್ನಂ ನಾರೀಣಾಂ ನರೇಷು ಚ ನಳೋ ವರಃ ।
ವಿಶಿಷ್ಟಾಯಾ ವಿಶಿಷ್ಟೇನ ಸಂಗಮೋ ಗುಣವಾನ್ ಭವೇತ್ ॥೩೦॥

ನೀನೂ ಸಹ ನಾರಿಯರಲ್ಲಿ ಶ್ರೇಷ್ಠಳಾಗಿದ್ದೀಯೆ. ನಳನು ಪುರುಷರಲ್ಲಿ ಶ್ರೇಷ್ಠನಾಗಿದ್ದಾನೆ. ಶ್ರೇಷ್ಠಳಾದವಳಿಗೆ ಶ್ರೇಷ್ಠನಾದವನ ಸಂಗವುವು ಶ್ಲಾಘನೀಯವಾಗುತ್ತದೆ.

ಏವಮುಕ್ತಾ ತು ಹಂಸೇನ ದಮಯಂತೀ ವಿಶಾಂಪತೇ ।
ಅಬ್ರವೀತ್ತತ್ರ ತಂ ಹಂಸಂ ತ್ವಮಪ್ಯೇವಂ ನಳಂ ವದ ॥೩೧॥

ಎಲೈ ರಾಜನೇ ಹೀಗೆ ಹಂಸದಿಂದ ಹೇಳಲ್ಪಟ್ಟ ದಮಯಂತಿಯು ಆಗ ಹಂಸವನ್ನು ಕುರಿತು ನೀನು ಹೀಗೆಯೇ ನಳನಿಗೂ ಹೇಳು ಎಂದು ಹೇಳಿದಳು.

ತಥೇತ್ಯುಕ್ತ್ವಾ ತ್ವಕಂಡಜಃ ಕನ್ಯಾಂ ವೈದರ್ಭಸ್ಯ ವಿಶಾಂಪತೇಃ ।
ಪುನರಾಗಮ್ಯ ನಿಷಧಾನ್ ನಳೇ ಸರ್ವಂ ನ್ಯವೇದಯತ್ ॥೩೨॥

ಆ ಹಂಸವು ವಿದರ್ಭರಾಕಜಕುಮಾರಿಯಾದ ದಮಯಂತಿಗೆ ಹಾಗೆಯೇ ಆಗಲಿ ಎಂದು ಹೇಳಿ ಪುನಃ ನಿಷಧ ದೇಶಕ್ಕೆ ಬಂದು ನಳನಿಗೆ ಎಲ್ಲವನ್ನೂ ನಿವೇದಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

## ನಲವತ್ತೇಳನೆಯ ಅಧ್ಯಾಯ

(ದಮಯಂತಿಯ ಸ್ವಯಂವರದ ಘೋಷಣೆ.
ದೇವತೆಗಳ ಆಗಮನ, ನಳನ ದೌತ್ಯ.)

### ಬೃಹದಶ್ವಃ

ದಮಯಂತೀ ತು ತಚ್ಛ್ರುತ್ವಾ ವಚೋ ಹಂಸಸ್ಯ ಭಾರತ ।
ತದಾ ಪ್ರಭೃತಿ ನಸ್ವಸ್ಥಾ ನಳಂ ಪ್ರತಿ ಬಭೂವ ಸಾ ॥೧॥

ಎಲೈ ಭಾರತನೇ ದಮಯಂತಿಯು ಹಂಸದ ಆ ಮಾತುಗಳನ್ನು ಕೇಳಿ ಆಗಿನಿಂದ ನಳನನ್ನು ಯೋಚಿಸುತ್ತಾ ಅಸ್ವಸ್ಥಳಾದಳು.

ತತಶ್ಚಿಂತಾಪರಾ ದೀನಾ ವಿವರ್ಣವದನಾ ಕೃಶಾ ।
ಬಭೂವ ದಮಯಂತೀ ತು ನಿಃಶ್ವಾಸಪರಮಾ ತದಾ ॥೨॥

ದಮಯಂತಿಯು ಚಿಂತಾಕ್ರಾಂತಳೂ ದೀನಳೂ ಕಳೆಗುಂದಿದ ಮುಖವುಳ್ಳವಳೂ, ಕೃಶಳೂ ಆಗಿ ಯಾವಾಗಲೂ ನಿಟ್ಟುಸಿರನ್ನು ಬಿಡುತ್ತಿದ್ದಳು.

ಊರ್ಧ್ವದೃಷ್ಟಿರ್ಧ್ಯಾನಪರಾ ಬಭೂವೋನ್ಮತ್ತದರ್ಶನಾ ।
ನ ಶಯ್ಯಾಸನಭೋಗೇಷು ರತಿಂ ವಿಂದತಿ ಕರ್ಹಿಚಿತ್ ॥೩॥

ಊರ್ಧ್ವದೃಷ್ಟಿಯುಳ್ಳವಳಾಗಿ ಚಿಂತಾಕ್ರಾಂತಳಾಗಿ ಹುಚ್ಚಿಯಂತೆ ಕಾಣುತ್ತಿದ್ದಳು. ಶಯನ ಆಸನ ಭೋಗಗಳಲ್ಲಿ ಆಸಕ್ತಿಯನ್ನೇ ಹೊಂದಲಿಲ್ಲ.

ನ ನಕ್ತಂ ನ ದಿವಾ ಶೇತೇ ಹಾಹೇತಿ ವದತೀ ಮುಹುಃ ।
ತಾಮಸ್ವಸ್ಥಾಂ ತದಾಕಾರಾಂ ಸಖ್ಯಸ್ತಾ ಜಜ್ಞುರಿಂಗಿತೈಃ ॥೪॥

ಹಗಲಾಗಲೀ ಅಥವಾ ರಾತ್ರಿಯಾಗಲೀ ನಿದ್ರೆಯನ್ನು ಮಾಡಲಿಲ್ಲ. ಪುನಃಪುನಃ ಹಾಹಾ ಎಂದು ಹೇಳುತ್ತಿದ್ದಳು. ಅವಳ ಆ ಅವಸ್ಥೆಯನ್ನು ಇಂಗಿತಜ್ಞರಾದ ಅವಳ ಸಖಿಯರು ತಿಳಿದರು.

ತತೋ ವಿದರ್ಭಪತಯೇ ದಮಯಂತ್ಯಾಃ ಸಖೀಗಣಃ ।
ನ್ಯವೇದಯತ ಚಾಸ್ವಸ್ಥಾಂ ದಮಯಂತೀಂ ನರೇಶ್ವರ ॥೫॥

ಎಲೈ ನರೇಶ್ವನೇ! ಆಗ ದಮಯಂತಿಯ ಸಖಿಯರ ಸಮೂಹವು ವಿದರ್ಭರಾಜನ ಬಳಿಗೆ ಹೋಗಿ ದಮಯಂತಿಯು ಅಸ್ವಸ್ಥಳಾಗಿದ್ದಾಳೆ ಎಂದು ತಿಳಿಸಿತು.

ತಚ್ಛ್ರುತ್ವಾ ನೃಪತಿರ್ಭೀಮೋ ದಮಯಂತೀಸಖೀಗಣಾತ್ ।
ಚಿಂತಯಾಮಾಸ ತತ್ ಕಾರ್ಯಂ ಸುಮಹತ್ ಸ್ವಾಂ ಸುತಾಂ ಪ್ರತಿ ।
ಕಿಮಸ್ಮದ್ದುಹಿತಾ ಮೇಽದ್ಯ ನಾತಿಸ್ವಸ್ಥೋಪಲಕ್ಷ್ಯತೇ ॥೬॥

ಅದನ್ನು ದಮಯಂತಿಯ ಸಖೀಗಣದಿಂದ ಕೇಳಿದ ಭೀಮರಾಜನು ತನ್ನ ಮಗಳ ವಿಷಯದಲ್ಲಿ ಈಗ ಮುಖ್ಯವಾಗಿ ಮಾಡಬೇಕಾದದ್ದು ಏನು? ನನ್ನ ಮಗಳು ಏತಕ್ಕೆ ಅಸ್ವಸ್ಥಳಾಗಿ ಕಾಣಿಸುತ್ತಿದ್ದಾಳೆ ಎಂದು ಚಿಂತಿಸಿದನು.

ಸ ಸಮೀಕ್ಷ್ಯ ಮಹೀಪಾಲಃ ಸ್ವಸುತಾಂ ಪ್ರಾಪ್ತಯೌವನಾಮ್ ।
ಅಪಶ್ಯದಾತ್ಮನಃ ಕಾರ್ಯಂ ದಮಯಂತ್ಯಾಃ ಸ್ವಯಂವರಮ್ ॥೭॥

ಆ ರಾಜನು ತನ್ನ ಮಗಳು ಯೌವನಸ್ಥಳಾಗಿದ್ದಾಳೆ ಎಂದು ತಿಳಿದು ತಾನು ದಮಯಂತಿಯ ಸ್ವಯಂವರವನ್ನು ಮಾಡುವುದು ಯೋಗ್ಯವಾದ ಕಾರ್ಯವೆಂದು ಭಾವಿಸಿದನು.

ಸ ಸನ್ನಿಮಂತ್ರ್ಯಯಾಮಾಸ ಮಹೀಪಾಲಾನ್ ವಿಶಾಂಪತೇ ।
ಏಷೋಽನುಭೂಯತಾಂ ವೀರಾಃ ಸ್ವಯಂವರ ಇತಿ ಸ್ಮ ಹ ॥೮॥

ಶ್ರುತ್ವಾ ತು ಪಾರ್ಥಿವಾಃ ಸರ್ವೇ ದಮಯಂತ್ಯಾಃ ಸ್ವಯಂವರಮ್ ।
ಅಭಿಜಗ್ಮುಸ್ತದಾ ಭೀಮಂ ರಾಜಾನೋ ಭೀಮಶಾಸನಾತ್ ॥೯॥

ಹಸ್ತ್ಯಶ್ವರಥಘೋಷೇಣ ನಾದಯಂತೋ ವಸುಂಧರಾಮ್ ।
ವಿಚಿತ್ರಮಾಲ್ಯಾಭರಣೈರ್ಬಲೈರ್ಭೂತ್ಯೈಃ ಸ್ವಲಂಕೃತಾಃ ॥೧೦॥

ಎಲೈ ರಾಜನೇ! ಅವನು ವೀರರೆಲ್ಲರೂ ಬಂದು ಈ ಸ್ವಯಂವರದಲ್ಲಿ ಭಾಗವಹಿಸಿ ಎಂದು ಎಲ್ಲ ರಾಜರುಗಳನ್ನೂ ಆಹ್ವಾನಿಸಿದನು. ಭೀಮರಾಜನ ಶಾಸನವನ್ನು ಕೇಳಿದ ರಾಜರೆಲ್ಲರೂ ದಮಯಂತಿಯ ಸ್ವಯಂವರವನ್ನು ಕೇಳಿ ಆಗ ಭೀಮರಾಜನ ಬಳಿಗೆ ಬಂದರು. ಗಜಗಳು ಅಶ್ವಗಳು ಮತ್ತು ರಥಗಳ ಘೋಷದಿಂದ ಭೂಮಿಯಲ್ಲಿ ದೊಡ್ಡ

ಶಬ್ದವನ್ನು ಉಂಟುಮಾಡುತ್ತಾ ವಿಚಿತ್ರಮಾಲ್ಯಾಭರಣಗಳನ್ನು ಧರಿಸಿ ಅಲಂಕೃತರಾಗಿ ತಮ್ಮ ಭೃತ್ಯ ಮತ್ತು ಸೈನ್ಯದ ಜೊತೆಯಲ್ಲಿ ಬಂದರು.

ಏತಸ್ಮಿನ್ನೇವ ಕಾಲೇ ತು ಪುರಾಣಾವೃಷಿಸತ್ತಮೌ ।
ಅಟಮಾನೌ ಮಹಾತ್ಮಾನಾವಿಂದ್ರಲೋಕಾನ್ಮಹೀಂ ಗತೌ ॥೧೧॥

ನಾರದಃ ಪರ್ವತಶ್ಚೈವ ಮಹಾಪ್ರಾಜ್ಞೌ ಮಹಾದ್ಯುತೀ ।
ದೇವರಾಜಸ್ಯ ಭವನಂ ವಿವಿಶಾತೇ ಸುಪೂಜಿತೌ ॥೧೨॥

ಈ ಸಮಯದಲ್ಲಿ ಋಷಿಶ್ರೇಷ್ಠರಾದ ಪ್ರಾಚೀನರಾದ ಮಹಾಪ್ರಾಜ್ಞರೂ ಮಹಾಕಾಂತಿಯುಕ್ತರೂ ಆದ ಮಹಾತ್ಮರಾದ ನಾರದ ಮತ್ತು ಪರ್ವತರು ಸಂಚಾರವನ್ನುಮಾಡುತ್ತಾ ಇಂದ್ರಲೋಕಕ್ಕೆ ಹೋಗಿ ದೇವರಾಜನ ಗೃಹವನ್ನು ಪ್ರವೇಶಿಸಿ ಅಲ್ಲಿ ಪೂಜಿಸಲ್ಪಟ್ಟರು.

ತಾವರ್ಚಿತ್ವಾ ಸಹಸ್ರಾಕ್ಷಸ್ತತಃ ಕುಶಲಮವ್ಯಯಮ್ ।
ಪಪ್ರಚ್ಛಾನಾಮಯಂ ಚಾಪಿ ತಯೋಃ ಸರ್ವಗತಂ ಪ್ರಭುಃ ॥೧೩॥

ಸಹಸ್ರಾಕ್ಷನೂ ಪ್ರಭುವೂ ಆದ ಇಂದ್ರನು ಅವರನ್ನು ಪೂಜಿಸಿ ಕುಶಲಪ್ರಶ್ನೆಯನ್ನುಮಾಡಿ ಅವರ ಸಾರ್ವತ್ರಿಕವಾದ ಯೋಗಕ್ಷೇಮವನ್ನು ವಿಚಾರಿಸಿದನು.

ನಾರದಃ

ಆವಯೋಃ ಕುಶಲಂ ದೇವ ಸರ್ವತ್ರ ಗತಮೀಶ್ವರ ।
ಲೋಕೇ ಚ ಭಗವನ್ ಕೃತ್ಸ್ನೇ ನೃಪಾಃ ಕುಶಲಿನೋ ವಿಭೋ ॥೧೪॥

ಪ್ರಭುವೇ ನಾವು ಕುಶಲಿಗಳು. ದೇವನೆ ನಾವು ಎಲ್ಲ ಕಡೆಯಲ್ಲಿಯೂ ತಿರುಗಾಡಿದೆವು. ವಿಭುವೇ ಪೂಜ್ಯನೇ, ಭೂಮಿಯಲ್ಲಿ ಎಲ್ಲರಾಜರೂ ಕ್ಷೇಮದಿಂದ ಇದ್ದಾರೆ.

ಬೃಹದಶ್ವಃ

ನಾರದಸ್ಯ ವಚಃ ಶ್ರುತ್ವಾ ಪಪ್ರಚ್ಛ ಬಲವೃತ್ರಹಾ ॥೧೫॥

ಧರ್ಮಜ್ಞಾಃ ಪೃಥಿವೀಪಾಲಾಃ ತ್ಯಕ್ತಜೀವಿತಯೋಧಿನಃ ।

ಶಸ್ತ್ರೇಣ ನಿಧನಂ ಕಾಲೇ ಯೇ ಗಚ್ಛಂತ್ಯಪರಾಙ್ಮುಖಾಃ ।
ಅಯಂ ಲೋಕೋಽಕ್ಷಯಸ್ತೇಷಾಂ ಯಥೈವ ಮಮ ಕಾಮಧೃಕ್ ॥೧೬॥

ಕ್ವ ನು ತೇ ಕ್ಷತ್ರಿಯಾಃ ಶೂರಾ ನ ಹಿ ಪಶ್ಯಾಮಿ ತಾನಹಮ್ ।
ಆಗಚ್ಛತ್ತೋ ಮಹೀಪಾಲಾನತಿಥೀನ್ ದಯಿತಾನ್ ಮಮ ॥೧೭॥

ನಾರದರಮಾತನ್ನು ಕೇಳಿ ಬಲವೃತ್ರಸೂದನನಾದ ಇಂದ್ರನು ಧರ್ಮಜ್ಞರಾದ ರಾಜರು ಮತ್ತು ರಣರಂಗದಿಂದ ಹಿಮ್ಮೆಟ್ಟದೆ ಶಸ್ತ್ರದಿಂದ ಹತರಾದ ಯೋಧರು ಬರುವ ಈ ಲೋಕವು ನನಗೆ ಹೇಗೆ ಅಕ್ಷಯ ಸುಖವನ್ನು ಕೊಡುತ್ತದೆಯೋ ಹಾಗೆಯೇ ಅವರಿಗೂ ಅಕ್ಷಯಸುಖವನ್ನು ಕೊಡುತ್ತದೆ. ಆದರೆ ಆ ಶೂರರಾದ ಕ್ಷತ್ರಿಯರೆಲ್ಲರೂ ಎಲ್ಲಿಗೆ ಹೋದರು? ನನಗೆ ಅತಿಥಿಗಳಾಗಿ ಬರುತ್ತಿದ್ದಂತಹ ನನಗೆ ಪ್ರಿಯರಾದ ಅವರನ್ನು ನಾನು ಕಾಣುತ್ತಿಲ್ಲ ಎಂದು ಕೇಳಿದನು.

ಏವಮುಕ್ತಸ್ತು ಶಕ್ರೇಣ ನಾರದಃ ಪ್ರತ್ಯುವಾಚ ಹ ।
ಶೃಣು ಮೇ ಭಗವನ್ ಯೇನ ನ ದೃಶ್ಯಂತೇ ಮಹೀಕ್ಷಿತಃ ॥೧೮॥

ಇಂದ್ರನಿಂದ ಹೀಗೆ ಕೇಳಲ್ಪಟ್ಟ ನಾರದರು ಉತ್ತರವನ್ನು ಕೊಟ್ಟರು. ಪೂಜ್ಯನೇ ಯಾವ ಕಾರಣದಿಂದ ರಾಜರು ಕಾಣುತ್ತಿಲ್ಲವೆಂದು ಹೇಳುತ್ತೇನೆ ಕೇಳು.

ವಿದರ್ಭರಾಜತನಯಾ ದಮಯಂತೀತಿ ವಿಶ್ರುತಾ ।
ರೂಪೇಣ ಸಮತಿಕ್ರಾಂತಾ ಪೃಥಿವ್ಯಾಂ ಸರ್ವಯೋಷಿತಃ ॥೧೯॥

ವಿದರ್ಭರಾಜಕುಮಾರಿಯಾದ ದಮಯಂತಿ ಎಂದು ಪ್ರಸಿದ್ಧಳಾದ ಕನ್ಯೆಯು ತನ್ನ ಸೌಂದರ್ಯದಿಂದ ಭೂಮಿಯಲ್ಲಿರುವ ಎಲ್ಲಾ ಸ್ತ್ರೀಯರನ್ನು ಮೀರಿದ್ದಾಳೆ.

ತಸ್ಯಾಃ ಸ್ವಯಂವರಃ ಶಕ್ರ ಭವಿತಾ ನಚಿರಾದಿವ ।
ತತ್ರ ಗಚ್ಛಂತಿ ರಾಜಾನೋ ರಾಜಪುತ್ರಾಶ್ಚ ಸರ್ವಶಃ ॥೨೦॥

ಎಲೈ ಇಂದ್ರನೇ ಸ್ವಲ್ಪಸಮಯದಲ್ಲಿಯೇ ಅವಳ ಸ್ವಯಂವರವು ಏರ್ಪಡುವುದಿದೆ ಎಲ್ಲ ರಾಜರು ಮತ್ತು ರಾಜಪುತ್ರರು ಅಲ್ಲಿಗೆ ಹೋಗುತ್ತಿದ್ದಾರೆ.

ತಾಂ ರತ್ನಭೂತಾಂ ಲೋಕಸ್ಯ ಪ್ರಾರ್ಥಯಂತೋ ಮಹೀಕ್ಷಿತಃ ।
ಕಾಂಕ್ಷಂತಿ ಸ್ಮ ವಿಶೇಷೇಣ ಬಲವೃತ್ರನಿಷೂದನ ॥೨೧॥

ಎಲೈ ಬಲವೃತ್ರನಿಷೂದನನೇ ಭೂಮಿಯಲ್ಲಿ ರತ್ನಪ್ರಾಯಳಾಗಿರುವ ಅವಳನ್ನು ಎಲ್ಲ ರಾಜರೂ ವಿಶೇಷವಾಗಿ ಪ್ರಾರ್ಥನೆಮಾಡುತ್ತಾ ಆಕಾಂಕ್ಷೆ ಪಡುತ್ತಿದ್ದಾರೆ.

ಬೃಹದಶ್ವಃ

ಏತೇಷು ಕಥ್ಯಮಾನೇಷು ಲೋಕಪಾಲಾಶ್ಚ ಸಾಗ್ನಿಕಾಃ ।
ಆಜಗ್ಮುರ್ದೇವರಾಜಸ್ಯ ಸಮೀಪಮಮರೋತ್ತಮಾಃ ॥೨೨॥

ಇವರು ಹೀಗೆ ಮಾತಾಡುತ್ತಿರುವಾಗ ಅಮರಶ್ರೇಷ್ಠರಾದ ಅಗ್ನಿ ಮೊದಲಾದ ಲೋಕಪಾಲಕರು ದೇವರಾಜನಾದ ಇಂದ್ರನ ಸಮೀಪಕ್ಕೆ ಬಂದರು.

ತತಸ್ತೇ ಶುಶ್ರುವುಃ ಸರ್ವೇ ನಾರದಸ್ಯ ವಚೋ ಮಹತ್ ।
ಶ್ರುತ್ವಾ ಚೈವಾಬ್ರುವನ್ ಸರ್ವೇ ಗಚ್ಛಾಮ ವಯಮಪ್ಯುತ ॥೨೩॥

ಅವರೆಲ್ಲರೂ ನಾರದರ ಶ್ರೇಷ್ಠವಾದ ಮಾತುಗಳನ್ನು ಕೇಳಿದರು. ಕೇಳಿದ ಮೇಲೆ ನಾವೆಲ್ಲರೂ ಅಲ್ಲಿಗೆ ಹೋಗೋಣ ಎಂದು ಹೇಳಿದರು.

ತತಃ ಸರ್ವೇ ಮಹಾರಾಜ ಸಗಣಾಃ ಸಹವಾಹನಾಃ ।
ವಿದರ್ಭಾನಭಿತೋ ಜಗ್ಮುರ್ಯತ್ರ ಸರ್ವೇ ಮಹೀಕ್ಷಿತಃ ॥೨೪॥

ಮಹಾರಾಜನೇ, ಅನಂತರ ಆ ದೇವತೆಗಳೆಲ್ಲರೂ ತಮ್ಮ ವಾಹನ ಮತ್ತು ಪರಿವಾರದೊಂದಿಗೆ ಎಲ್ಲಿ ರಾಜರೆಲ್ಲರೂ ಮೊದಲೇ ಸೇರಿದ್ದರೋ ಅಂತಹ ವಿದರ್ಭದೇಶಕ್ಕೆ ಹೊರಟರು.

ನಳೋಽಪಿ ರಾಜಾ ಕೌಂತೇಯ ಶ್ರುತ್ವಾ ರಾಜ್ಞಾಂ ಸಮಾಗಮಮ್।
ಅಭ್ಯಗಚ್ಛದದೀನಾತ್ಮಾ ದಮಯಂತೀಮನುವ್ರತಃ ॥೨೫॥

ಕೌಂತೇಯನೇ, ನಳನೂ ಸಹ ರಾಜರ ಸಮಾಗಮವನ್ನು ಕೇಳಿ ದಮಯಂತಿಯಲ್ಲಿ ಅನುರಕ್ತವಾದ ಮನಸ್ಸುಳ್ಳವನಾಗಿ ಧೀರನಾಗಿ ಅಲ್ಲಿಗೆ ಹೊದನು.

ಅಥ ದೇವಾಃ ಪಥಿ ನಳಂ ದದೃಶುರ್ಭೂತಳೇ ಸ್ಥಿತಮ್ ।
ಸಾಕ್ಷಾದಿವ ಸ್ಥಿತಂ ಮೂರ್ತ್ಯಾ ಮನ್ಮಥಂ ರೂಪಸಂಪದಾ ॥೨೬॥

ಆಗ ದೇವತೆಗಳು ತನ್ನರೂಪಸಂಪತ್ತಿನಿಂದ ಶರೀರವನ್ನು ಧರಿಸಿದ ಮನ್ಮಥನಂತೆ ಕಂಗೊಳಿಸುತ್ತಿದ್ದ ನಳನು ಭೂಮಿಯಲ್ಲಿ ನಿಂತಿರುವುದನ್ನು ನೋಡಿದರು.

ತಂ ದೃಷ್ಟ್ವಾ ಲೋಕಪಾಲಾಸ್ತೇ ಭ್ರಾಜಮಾನಂ ಯಥಾ ರವಿಮ್ ।
ತಸ್ಮಿರ್ವಿಗತಸಂಕಲ್ಪಾ ವಿಸ್ಮಿತಾ ರೂಪಸಂಪದಾ ॥೨೭॥

ಆ ಲೋಕಪಾಲಕರು ತನ್ನ ರೂಪಸಂಪತ್ತಿನಿಂದ ಸೂರ್ಯನಂತೆ ಬೆಳಗುತ್ತಿದ್ದ ಅವನನ್ನು ನೋಡಿ ವಿಸ್ಮಿತರಾಗಿ ಭಗ್ನಸಂಕಲ್ಪರಾದರು.

ತತೋಽಂತರಿಕ್ಷೇ ವಿಷ್ಟಭ್ಯ ವಿಮಾನಾನಿ ದಿವೌಕಸಃ ।
ಅಬ್ರುವನ್ ನೈಷಧಂ ರಾಜನ್ನವತೀರ್ಯ ನಭಸ್ತಲಾತ್ ॥೨೮॥

ರಾಜನೇ! ಆಗ ದೇವತೆಗಳು ಆಕಾಶದಲ್ಲಿ ತಮ್ಮ ವಿಮಾನಗಳನ್ನು ನಿಲ್ಲಿಸಿ ಕೆಳಗೆ ಇಳಿದುಬಂದು ನಳನನ್ನು ಕುರಿತು ಮಾತನಾಡಿದರು.

ಭೋ ಭೋ ನೈಷಧ ರಾಜೇಂದ್ರ ನಳ ಸತ್ಯವ್ರತೋ ಭವಾನ್ ।
ಅಸ್ಮಾಕಂ ಕುರು ಸಾಹಾಯ್ಯಂ ದೂತೋ ಭವ ನರೋತ್ತಮ ॥೨೯॥

ಎಲೈ ನೈಷಧರಾಜೇಂದ್ರನೇ, ನರೋತ್ತಮನಾದ ನಳನೇ ನೀನು ಸತ್ಯವ್ರತವುಳ್ಳವನು. ನಮಗೆ ಸಹಾಯವನ್ನು ಮಾಡು. ನಮ್ಮ ದೂತನಾಗು.

## ಬೃಹದಶ್ವಃ

ತೇಭ್ಯಃ ಪ್ರತಿಜ್ಞಾಯ ನಳಃ ಕರಿಷ್ಯ ಇತಿ ಭಾರತ ।
ಅಥೈತಾನ್ ಪರಿಪಪ್ರಚ್ಛ ಕೃತಾಂಜಲಿರುಪಸ್ಥಿತಃ ॥೩೦॥

ಕೇ ವೈ ಭವಂತಃ ಕಶ್ಚಾಸೌ ಯಸ್ಯಾಹಂ ದೂತ ಈಪ್ಸಿತಃ ।
ಕಿಂಚ ತತ್ರ ಮಯಾ ಕಾರ್ಯಂ ಕಥಯಧ್ವಂ ಯಥಾತಥಮ್ ॥೩೧॥

ಭಾರತನೇ! ನಳನು ಹಾಗೆಯೇ ಮಾಡುತ್ತೇನೆಂದು ಅವರಿಗೆ ಪ್ರತಿಜ್ಞೆಯನ್ನುಮಾಡಿ ಅನಂತರ ಕೈಗಳನ್ನು ಮುಗಿದು ಅವರನ್ನು ಕುರಿತು ಯಾವ ನಿಮಗೆ ನಾನು

ದೂತನಾಗಬೇಕೆಂದು ಇಚ್ಛೆ ಇದೆಯೋ ಅಂತಹ ನೀವು ಯಾರು ಈ ವ್ಯಕ್ತಿಯಾರು ಮತ್ತು ನಾನು ನಿಮಗಾಗಿ ಏನುಮಾಡಬೇಕಾಗಿದೆ ಎಲ್ಲವನ್ನೂ ಸರಿಯಾಗಿ ಹೇಳಿ ಎಂದು ಕೇಳಿದನು.

ಬೃಹದಶ್ವಃ

ಏವಮುಕ್ತೋ ನೈಷಧೇನ ಮಘವಾನಭ್ಯಭಾಷತ ।
ಅಮರಾನ್ ವೈ ನಿಬೋಧಾಸ್ಮಾನ್ ದಮಯಂತ್ಯರ್ಥಮಾಗತಾನ್ ॥೩೨॥

ನಳನಿಂದ ಹೀಗೆ ಕೇಳಲ್ಪಟ್ಟ ಇಂದ್ರನು ನಾವು ದೇವತೆಗಳು ದಮಯಂತಿಯ ಸಲುವಾಗಿ ಬಂದವರು ಎಂದು ನಮ್ಮನ್ನು ತಿಳಿ ಎಂದು ಹೇಳಿದನು.

ಅಹಮಿಂದ್ರೋಽಯಮಗ್ನಿಶ್ಚ ತಥೈವಾಯಮಪಾಂಪತಿಃ ।
ಶರೀರಾಂತಕರೋ ನೃಣಾಂ ಯಮೋಽಯಮಪಿ ಪಾರ್ಥಿವ ।
ಸ ವೈ ತ್ವಮಾಗತಾನಸ್ಮಾನ್ ದಮಯಂತ್ಯೈ ನಿವೇದಯ ॥೩೩॥

ನಾನು ಇಂದ್ರ ಇವನು ಅಗ್ನಿ ಅದರಂತೆ ಇವನು ವರುಣ. ಎಲೈ ರಾಜನೇ ಇವನೂ ಸಹ ಎಲ್ಲರ ಪ್ರಾಣಾಂತಕನಾದ ಯಮ. ನೀನು ಹೋಗಿ ದಮಯಂತಿಗೆ ನಾವೆಲ್ಲರೂ ಬಂದಿದ್ದೇವೆ ಎಂದು ಹೇಳು.

ಲೋಕಪಾಲಾಃ ಸಹೇಂದ್ರಾಸ್ತ್ವಾಂ ಸಮಾಯಾಂತಿ ದಿದೃಕ್ಷವಃ ।
ಪ್ರಾಪ್ತುಮಿಚ್ಛಂತಿ ದೇವಾಸ್ತ್ವಾಂ ಶಕ್ರೋಽಗ್ನಿರ್ವರುಣೋ ಯಮಃ ।
ತೇಷಾಮನ್ಯತಮಂ ದೇವಂ ಪತಿತ್ವೇ ವರಯೇತಿ ಹ ॥೩೪॥

ಇಂದ್ರನಿಂದ ಸಹಿತನಾದ ಲೋಕಪಾಲಕರು ನಿನ್ನನ್ನು ನೋಡುವ ಇಚ್ಛೆಯಿಂದ ಬರುತ್ತಿದ್ದಾರೆ. ದೇವತೆಗಳಾದ ಇಂದ್ರ ಅಗ್ನಿ ವರುಣ ಯಮ ಇವರು ನಿನ್ನನ್ನು ಪಡೆಯಲು ಬಯಸುತ್ತಾರೆ. ಅವರಲ್ಲಿ ಯಾರಾದರೂ ಒಬ್ಬರನ್ನು ನೀನು ಪತಿಯಾಗಿ ವರಿಸು. (ಎಂದು ನಿವೇದಿಸು)

ಏವಮುಕ್ತಃ ಸ ಶಕ್ರೇಣ ನಳಃ ಪ್ರಾಂಜಲಿರಬ್ರವೀತ್ ।
ಏಕಾರ್ಥಸಮವೇತಂ ಮಾಂ ನ ಪ್ರೇಷಯಿತುಮರ್ಹಥ ॥೩೫॥

ಇಂದ್ರನಿಂದ ಹೀಗೆ ಹೇಳಲ್ಪಟ್ಟ ನಳನು ಕೈಗಳನ್ನು ಮುಗಿದು ಅದೇ ಉದ್ದೇಶದಿಂದ ಬರುತ್ತಿರುವ ನನ್ನನ್ನು ನೀವು ಹೀಗೆ ಕಳುಹಿಸಬಾರದು ಎಂದು ಹೇಳಿದನು.

ಕಥಂ ಹಿ ಜಾತಸಂಕಲ್ಪಃ ಸ್ತ್ರಿಯಮುತ್ಸಹತೇ ನರಃ ।
ಪರಾರ್ಥಮೀದೃಶಂ ವಕ್ತುಂ ತದ್ವೈ ಪಶ್ಯ ಸುರೇಶ್ವರ ।
ಏವಮುಕ್ತೋ ನೈಷಧೇನ ಮಘವಾನ್ ಪುನರಬ್ರವೀತ್ ॥೩೬॥

ಸುರೇಶ್ವರನೇ, ತಾನು ಅನುರಾಗವನ್ನು ಹೊಂದಿದ ಸ್ತ್ರೀಯನ್ನು ಕುರಿತು ಯಾವ ಮನುಷ್ಯನು ಹೀಗೆ ಇನ್ನೊಬ್ಬರ ಪರವಾಗಿ ಹೇಳಲು ಸಾಧ್ಯ? ಇದನ್ನು ಗಮನಿಸು. ನಳನಿಂದ ಹೀಗೆ ಹೇಳಲ್ಪಟ್ಟ ಇಂದ್ರನು ಪುನಃ ಮಾತನಾಡಿದನು.

ಕರಿಷ್ಯ ಇತಿ ಸಂಶ್ರುತ್ಯ ಪೂರ್ವಮಸ್ಮಾಸು ನೈಷಧ ।
ನ ಕರಿಷ್ಯಸಿ ಕಸ್ಮಾತ್ ತ್ವಂ ವ್ರಜ ನೈಷಧ ಮಾಚಿರಮ್ ॥೩೭॥

ಸ ವೈ ತ್ವಮಾಗತಾನಸ್ಮಾನ್ ದಮಯಂತ್ಯೈ ನಿವೇದಯ ।

ನೈಷಧನೇ ಮೊದಲು ಮಾಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಈಗ ಹೇಗೆ ಮಾಡುವುದಿಲ್ಲ ಎಂದು ಹೇಳುತ್ತಿದ್ದೀಯೆ? ನೈಷಧನೇ ತಡಮಾಡದೆ ನೀನು ಹೊರಡು. ದಮಯಂತಿಗೆ ನಾವೆಲ್ಲರೂ ಬಂದಿದ್ದೇವೆ ಎಂದು ತಿಳಿಸು.

ಏವಮುಕ್ತಃ ಸ ದೇವೈಸ್ತೈರ್ನೈಷಧಃ ಪುನರಬ್ರವೀತ್ ।
ಸುರಕ್ಷಿತಾನಿ ವೇಶ್ಮಾನಿ ಪ್ರವೇಷ್ಟುಂ ಕಥಮುತ್ಸಹೇ ॥೩೮॥

ಹೀಗೆ ಹೇಳಲ್ಪಟ್ಟ ನಳನು ದೇವತೆಗಳನ್ನು ಕುರಿತು ಕನ್ಯಾಗೃಹಗಳು ಸುರಕ್ಷಿತವಾಗಿರುತ್ತವೆ. ನಾನು ಹೇಗೆ ಪ್ರವೇಶಿಸಲಿ ಎಂದು ಕೇಳಿದನು.

ಬೃಹದಶ್ವಃ

ಪ್ರವೇಕ್ಷ್ಯಸೀತಿ ತಂ ಶಕ್ರಃ ಪುನರೇವಾಭ್ಯಭಾಷತ ।
ಸ ಜಗಾಮ ತಥೇತ್ಯುಕ್ತ್ವಾ ದಮಯಂತ್ಯಾ ನಿವೇಶನಮ್ ॥೩೯॥

ನೀನು ನಿರ್ವಿಘ್ನವಾಗಿ ಪ್ರವೇಶಿಸುವಿ ಎಂದು ಇಂದ್ರನು ಪುನಃ ಅವನಿಗೆ ಹೇಳಿದನು. ನಳನು ಹಾಗೆಯೇ ಆಗಲಿ ಎಂದು ದಮಯಂತಿಯ ನಿವೇಶನಕ್ಕೆ ಹೋದನು.

ದದರ್ಶ ತತ್ರ ವೈದರ್ಭೀಂ ಸಖೀಗಣಸಮಾವೃತಾಮ್ ।
ದೇದೀಪ್ಯಮಾನಾಂ ವಪುಷಾ ಶ್ರಿಯಾ ಚ ವರವರ್ಣಿನೀಮ್ ॥೪೦॥

ಅಲ್ಲಿ ಅವನು ಸಖೀಗಣ ಸಹಿತಳಾಗಿದ್ದ ಸುಂದರಿಯಾದ ತನ್ನ ದೇಹದ ಕಾಂತಿಯಿಂದ ಬೆಳಗುತ್ತಿದ್ದ ದಮಯಂತಿಯನ್ನು ನೋಡಿದನು.

ಅತೀವ ಸುಕುಮಾರಾಂಗೀಂ ತನುಮಧ್ಯಾಂ ಸುಲೋಚನಾಮ್ ।
ಆಕ್ಷಿಪಂತೀಮಿವ ಚ ತಾಂ ಶಶಿನಂ ಸ್ವೇನ ತೇಜಸಾ ॥೪೧॥

ಬಹಳ ಸುಕುಮಾರಿಯಾಗಿ ಕೃಶವಾದ ಮಧ್ಯವನ್ನೂ ಸುಂದರವಾದ ಕಣ್ಣುಗಳನ್ನೂ ಹೊಂದಿ ತನ್ನ ಕಾಂತಿಯಿಂದ ಚಂದ್ರನನ್ನು ಧಿಕ್ಕರಿಸುವಂತಿದ್ದ ಅವಳನ್ನು ನೋಡಿದನು.

ತಸ್ಯ ದೃಷ್ಟ್ವೈವ ವವೃಧೇ ಕಾಮಸ್ತಾಂ ಚಾರುಹಾಸಿನೀಮ್ ।
ಸತ್ಯಂ ಚಿಕೀರ್ಷಮಾಣಸ್ತು ವಾರಯಾಮಾಸ ಹೃಚ್ಛಯಮ್ ॥೪೨॥

ಆ ಚಾರುಹಾಸಿನಿಯನ್ನು ನೋಡಿದ ತಕ್ಷಣವೇ ಅವನಿಗೆ ಕಾಮವು ಅಭಿವೃದ್ಧಿಯಾಯಿತು. ಆದರೆ ತನ್ನ ಸತ್ಯಪ್ರತಿಜ್ಞೆಯನ್ನು ಕಾಯ್ದುಕೊಳ್ಳಲು ಅವನು ತನ್ನ ಕಾಮವನ್ನು ತಡೆದುಕೊಂಡನು.

ತತಸ್ತಾ ನೈಷಧಂ ದೃಷ್ಟ್ವಾ ಸಂಭ್ರಾಂತಾಃ ಪರಮಾಂಗನಾಃ ।
ಆಸನೇಭ್ಯಃ ಸಮುತ್ಪೇತುಃ ತೇಜಸಾ ತಸ್ಯ ಧರ್ಷಿತಾಃ ॥೪೩॥

ಆಗ ನಳನನ್ನು ನೋಡಿ ಸಂಭ್ರಾಂತರಾದ ಆ ಸುಂದರಿಯರು ಅವನ ತೇಜಸ್ಸಿನಿಂದ ಧರ್ಷಿತರಾಗಿ ತಮ್ಮ ಆಸನಗಳಿಂದ ಬೇಗ ಮೇಲೆದ್ದರು.

ಪ್ರಶಶಂಸುಶ್ಚ ಸಂಪ್ರೀತಾ ನಳಂ ತಾ ವಿಸ್ಮಯಾನ್ವಿತಾಃ ।
ನ ಚೈನಮಭ್ಯಭಾಷಂತ ಮನೋಭಿಸ್ತ್ವಭ್ಯಚಿಂತಯನ್ ॥೪೪॥

ವಿಸ್ಮಿತರಾದ ಅವರು ಸಂತೋಷಗೊಂಡು ನಳನನ್ನು ಪ್ರಶಂಸಿಸಿದರು. ಅವನನ್ನು ಕುರಿತು ಮಾತನಾಡಲಿಲ್ಲ. ಆದರೆ ಮನಸ್ಸಿನಲ್ಲಿಯೇ ಯೋಚಿಸಿದರು.

ಅಹೋ ರೂಪಮಹೋ ಧೈರ್ಯಮಹೋ ಕಾಂತಿರ್ಮಹಾತ್ಮನಃ ।
ಕೋಽಯಂ ದೇವೋಽಥವಾ ಯಕ್ಷೋ ಗಂಧರ್ವೋ ನು ಭವಿಷ್ಯತಿ ॥

ಎಂತಹ ರೂಪ, ಎಂತಹ ಧೈರ್ಯ, ಈ ಮಹಾತ್ಮನಿಗೆ ಎಂತಹ ಕಾಂತಿ! ಇವನೊಬ್ಬ ದೇವತೆಯೋ ಅಥವಾ ಯಕ್ಷನೋ ಅಥವಾ ಗಂಧರ್ವನೋ ಯಾರಾಗಿರಬಹುದು?

ನ ತ್ವೇನಂ ಶಕ್ನುವಂತಿ ಸ್ಮ ವ್ಯಾಹರ್ತುಮಪಿ ಕಿಂಚನ ।
ತೇಜಸಾ ಧರ್ಷಿತಾಃ ಸರ್ವಾ ಲಜ್ಜಾವತ್ಯೋ ವರಾಂಗನಾಃ ॥೪೬॥

ಅವನ ತೇಜಸ್ಸಿನಿಂದ ಧರ್ಷಿತರಾದ ಲಜ್ಜಾವತಿಯರಾದ ಆ ವರಾಂಗನೆಯರು ಅವನ ಜೊತೆಯಲ್ಲಿ ಏನನ್ನೂ ಮಾತನಾಡಲು ಸಮರ್ಥರಾಗಲಿಲ್ಲ.

ಅಥೈನಂ ಸ್ಮಯಮಾನೇವ ಸ್ಮಿತಪೂರ್ವಾಭಿಭಾಷಿಣೀ ।
ದಮಯಂತೀ ನಳಂ ವೀರಮಭ್ಯಭಾಷತ ವಿಸ್ಮಿತಾ ॥೪೭॥

ಆಗ ಮಂದಹಾಸಪೂರ್ವಕವಾಗಿ ಮಾತನಾಡುವ ಸ್ವಭಾವವುಳ್ಳ ದಮಯಂತಿಯು ಮಂದಹಾಸವನ್ನು ಬೀರುತ್ತಾ ವಿಸ್ಮಿತಳಾಗಿ ವೀರನಾದ ನಳನನ್ನು ಕುರಿತು ಮಾತನಾಡಿದಳು.

ಕಸ್ತ್ವಂ ಸರ್ವಾನವದ್ಯಾಂಗ ಮಮ ಹೃಚ್ಛಯವರ್ಧನ ।
ಪ್ರಾಪ್ತೋಽಸ್ಯಮರವದ್ ವೀರ ಜ್ಞಾತುಮಿಚ್ಛಾಮಹೇಽನಘ ॥೪೮॥

ಸುಂದರಾಂಗನೇ, ನನ್ನ ಕಾಮವನ್ನು ವೃದ್ಧಿಪಡಿಸುತ್ತಿರುವ ನೀನು ಯಾರು? ವೀರನೇ, ದೇವತೆಯಂತೆ ಇಲ್ಲಿಗೆ ಬಂದಿದ್ದೀಯೆ. ಅನಘನೇ ನೀನು ಯಾರೆಂದು ತಿಳಿಯಲು ಬಯಸುತ್ತೇನೆ.

ಕಥಮಾಗಮನಂ ಚೇಹ ಕಥಂ ಚಾಪಿ ನ ಲಕ್ಷಿತಃ ।
ಸುರಕ್ಷಿತಂ ಚ ಮೇ ವೇಶ್ಮ ರಾಜಾ ಚೈವೋಗ್ರಶಾಸನಃ ॥೪೯॥

ನೀನು ಇಲ್ಲಿಗೆ ಹೇಗೆ ಬಂದೆ? ಹೇಗೆ ಯಾರೂ ನಿನ್ನನ್ನು ಗಮನಿಸಲಿಲ್ಲ? ನನ್ನ ಗೃಹವಾದರೂ ಸುರಕ್ಷಿತವಾಗಿದೆ ಮತ್ತು ರಾಜನು ಉಗ್ರಶಾಸನನಾಗಿದ್ದಾನೆ.

ಏವಮುಕ್ತಸ್ತು ವೈದರ್ಭ್ಯಾ ನಳಸ್ತಾಂ ಪ್ರತ್ಯಭಾಷತ ।
ನಳಂ ಮಾಂ ವಿದ್ಧಿ ಕಲ್ಯಾಣಿ ದೇವದೂತಮಿಹಾಗತಮ್ ॥೫೦॥

ಹೀಗೆ ಹೇಳಲ್ಪಟ್ಟ ನಳನು ದಮಯಂತಿಯನ್ನು ಕುರಿತು ಕಲ್ಯಾಣಿಯೇ, ನನ್ನನ್ನು ನಳನೆಂದು ತಿಳಿ. ನಾನು ದೇವದೂತನಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದನು.

ದೇವಾಸ್ತ್ವಾಂ ಪ್ರಾಪ್ತುಮಿಚ್ಛಂತಿ ಶಕ್ರೋಽಗ್ನಿರ್ವರುಣೋ ಯಮಃ ।
ತೇಷಾಮನ್ಯತಮಂ ದೇವಂ ಪತಿಂ ವರಯ ಶೋಭನೇ ॥೫೧॥

ಇಂದ್ರ ಅಗ್ನಿ ವರುಣ ಯಮ ಈ ದೇವತೆಗಳು ನಿನ್ನನ್ನು ಹೊಂದಲು ಬಯಸುತ್ತಾರೆ. ಶೋಭನಳೇ ಅವರಲ್ಲಿ ಒಬ್ಬರನ್ನು ಪತಿಯಾಗಿ ವರಿಸು.

ತೇಷಾಮೇವ ಪ್ರಭಾವೇಣ ಪ್ರವಿಷ್ಟೋಽಹಮಲಕ್ಷಿತಃ ।
ಪ್ರವಿಶಂತಂ ಹಿ ಮಾಂ ಕಶ್ಚಿತ್ ನಾಪಶ್ಯನ್ನಾಪ್ಯವಾರಯತ್ ॥೫೨॥

ಅವರ ಪ್ರಭಾವದಿಂದಲೇ ನಾನು ಯಾರಿಂದಲೂ ಗಮನಿಸಲ್ಪಡದೆ ಇಲ್ಲಿಗೆ ಬಂದಿದ್ದೇನೆ. ಇಲ್ಲಿಗೆ ಬರುವ ನನ್ನನ್ನು ಯಾರೂ ನೋಡಲಿಲ್ಲ. ಮತ್ತು ತಡೆಯಲಿಲ್ಲ.

ಏತದರ್ಥಮಹಂ ಭದ್ರೇ ಪ್ರೇಷಿತಃ ಸುರಸತ್ತಮೈಃ ।
ಏತಚ್ಛ್ರುತ್ವಾ ತು ಮೇ ವಾಕ್ಯಂ ಪ್ರಕುರುಷ್ವ ಯಥೇಚ್ಛಸಿ ॥೫೩॥

ಮಂಗಳಸ್ವರೂಪಳೇ ಈ ಉದ್ದೇಶದಿಂದ ನಾನು ಸುರಶ್ರೇಷ್ಠರಿಂದ ನಿನ್ನ ಬಳಿಗೆ ಕಳುಹಿಸಲ್ಪಟ್ಟಿದ್ದೇನೆ. ಈ ನನ್ನ ವಾಕ್ಯವನ್ನು ಕೇಳಿ ನಿನಗೆ ಇಷ್ಟಬಂದಂತೆ ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಚತ್ವಾರಿಂಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

# ನಲವತ್ತೆಂಟನೆಯ ಅಧ್ಯಾಯ

(ನಳದಮಯಂತಿ ಸಂವಾದ. ನಳನಿಂದ ದಮಯಂತಿಗೆ ಸಂದೇಶ ಹರಣ.)

## ಬೃಹದಶ್ವಃ

ಸಾ ನಮಸ್ಕೃತ್ಯ ದೇವೇಭ್ಯಃ ಪ್ರಹಸಂತೀದಮಬ್ರವೀತ್ ।
ಪ್ರಣಯಂ ಭಾವಯಂತ್ಯಸ್ಮಿನ್ ಕಿಂ ಕರವಾಣಿ ತೇ ॥೧॥

ಅಹಂ ಚೈವ ಹಿ ಯಚ್ಚಾನ್ಯನ್ಮಮಾಸ್ತಿ ವಸು ಕಿಂಚನ ।
ಸರ್ವಂ ತತ್ ತವ ವಿಸ್ರಬ್ಧಂ ಕುರು ಪ್ರಣಯಮೀಶ್ವರ ॥೨॥

ಹಂಸಾನಾಂ ವಚನಂ ಯತ್ತತ್ ತನ್ಮಾಂ ದಹತಿ ಪಾರ್ಥಿವ ।
ತ್ವತ್ಕೃತೇ ಹಿ ಮಯಾ ವೀರ ರಾಜಾನಃ ಸನ್ನಿಪಾತಿತಾಃ ॥೩॥

ಯದಿ ಚೇದ್ ಭಜಮಾನಾಂ ಮಾಂ ಪ್ರತ್ಯಾಖ್ಯಾಸ್ಯಸಿ ಮಾನದ ।
ವಿಷಮಗ್ನಿಂ ಜಲಂ ರಜ್ಜುಮಾಸ್ಥಾಸ್ಯೇ ತವ ಕಾರಣಾತ್ ।
ಏವಮುಕ್ತಸ್ತು ವೈದರ್ಭ್ಯಾ ನಳಸ್ತಾಂ ಪ್ರತ್ಯುವಾಚ ಹ ॥೪॥

ಆ ದಮಯಂತಿಯು ದೇವತೆಗಳಿಗೆ ನಮಸ್ಕರಿಸಿ ನಗುತ್ತಾ ನಳನಲ್ಲಿ ಪ್ರೀತಿಯನ್ನು ಹೊಂದುತ್ತಾ ಹೀಗೆ ಮಾತನಾಡಿದಳು. ನಾನು ನಿನಗೆ ಏನುಮಾಡಲಿ? ಪ್ರಭುವೇ, ನಾನು ಮತ್ತು ನನ್ನ ಬಳಿ ಏನು ಸಂಪತ್ತಿದೆಯೋ ಅದೆಲ್ಲವೂ ನಿನ್ನದೇ. ನನ್ನ ಮಾತನ್ನು ನಂಬಿ ನನ್ನಲ್ಲಿ ಪ್ರೀತಿಯನ್ನು ತೋರಿಸು. ಪಾರ್ಥಿವನೆ ಹಂಸಗಳು ಆಡಿದ ಮಾತುಗಳು ನನ್ನನ್ನು ದಹಿಸುತ್ತಿವೆ. ವೀರನೇ, ನಿನ್ನ ಸಲುವಾಗಿ ನಾನು ಅನೇಕ ರಾಜರನ್ನು ತಿರಸ್ಕರಿಸಿದ್ದೇನೆ. ಎಲೈ ಮಾನದನೇ, ನನ್ನ ಪ್ರೀತಿಯನ್ನು ನೀನು ನಿರಾಕರಿಸಿದರೆ ನಿನ್ನ ನಿಮಿತ್ತದಿಂದಾಗಿ ನಾನು ವಿಷವನ್ನಾಗಲೀ ಜಲವನ್ನಾಗಲೀ ಅಥವಾ ರಜ್ಜುವನ್ನಾಗಲೀ ಆಶ್ರಯಿಸುತ್ತೇನೆ ಎಂದು ಹೇಳಿದಳು. ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ನಳನು ಅವಳಿಗೆ ಉತ್ತರವನ್ನು ಕೊಟ್ಟನು.

ತಿಷ್ಠತ್ಸು ಲೋಕಪಾಲೇಷು ಕಥಂ ಮಾನುಷಮಿಚ್ಛಸಿ ।
ಯೇಷಾಮಹಂ ಲೋಕಪಾನಾಮೀಶ್ವರಾಣಾಂ ಮಹಾತ್ಮನಾಮ್।
ನ ಪಾದರಜಸಾ ತುಲ್ಯೋ ಮನಸ್ತೇ ತೇಷು ವರ್ತತಾಮ್ ॥೫॥

ಲೋಕಪಾಲರು ಇರುವಾಗ ಏಕೆ ಮನುಷ್ಯರನ್ನು ಇಚ್ಛಿಸುತ್ತೀಯೆ? ನಾನು ಮಹಾತ್ಮರಾದ ಪ್ರಭುಗಳಾದ ಆ ಲೋಕಪಾಲಕರ ಪಾದಧೂಳಿಗೂ ಸಮನಾದವನಲ್ಲ. ನಿನ್ನ ಮನಸ್ಸನ್ನು ಅವರಲ್ಲಿಯೇ ಇಡು.

ವಿಪ್ರಿಯಂ ಹ್ಯಾಚರನ್ ಮರ್ತ್ಯೋ ದೇವಾನಾಂ ಮೃತ್ಯುಮೃಚ್ಛತಿ ।
ತ್ರಾಹಿ ಮಾಮನವದ್ಯಾಂಗಿ ವರಯಸ್ವ ಸುರೋತ್ತಮಾನ್ ॥೬॥

ದೇವತೆಗಳಿಗೆ ಪ್ರತಿಕೂಲವನ್ನು ಮಾಡಿದ ಮನುಷ್ಯನು ಮರಣವನ್ನು ಹೊಂದುತ್ತಾನೆ. ಸರ್ವಾಂಗಸುಂದರಿಯೇ ನನ್ನನ್ನು ರಕ್ಷಿಸು. ದೇವತೆಗಳನ್ನು ವರಿಸು.

ತತೋ ಬಾಷ್ಪಾಕುಲಾಂ ವಾಚಂ ದಮಯಂತೀ ಶುಚಿಸ್ಮಿತಾ ।
ಪ್ರವ್ಯಾಹರಂತೀ ಶನಕೈರ್ನಳಂ ರಾಜಾನಮಬ್ರವೀತ್ ॥೭॥

ಆಗ ಶುಚಿಸ್ಮಿತೆಯಾದ ದಮಯಂತಿಯು ಕಣ್ಣುಗಳಲ್ಲಿ ನೀರು ತುಂಬಿ ಕೊಂಡು ರಾಜನನ್ನು ಕುರಿತು ನಿಧಾನವಾಗಿ ಮಾತನಾಡಿದಳು.

ಅಸ್ತ್ಯುಪಾಯೋ ಮಯಾ ದೃಷ್ಟೋ ನಿರಪಾಯೋ ನರೇಶ್ವರ ।
ಯೇನ ದೋಷೋ ನ ಭವಿತಾ ತವ ರಾಜನ್ ಕಥಂಚನ ॥೮॥

ನರೇಶ್ವರನೇ, ನನಗೆ ಕಾಣಿಸುವ ಒಂದು ಅಪಾಯರಹಿತವಾದ ಉಪಾಯವಿದೆ. ರಾಜನೇ! ಅದರಿಂದ ನಿನಗೆ ಯಾವ ರೀತಿಯಲ್ಲಿಯೂ ದೋಷವು ಬರುವುದಿಲ್ಲ.

ತ್ವಂ ಚೈವ ಹಿ ನರಶ್ರೇಷ್ಠ ದೇವಾಶ್ಚೇಂದ್ರಪುರೋಗಮಾಃ ।
ಆಯಾಂತು ಸಹಿತಾಃ ಸರ್ವೇ ಮಮ ಯತ್ರ ಸ್ವಯಂವರಃ ॥೯॥

ನರಶ್ರೇಷ್ಠನೇ, ನೀನೂ ಮತ್ತು ದೇವತೆಗಳೂ ಜೊತೆಯಲ್ಲಿಯೇ ನನ್ನ ಸ್ವಯಂವರವು ನಡೆಯುವ ಸ್ಥಳಕ್ಕೆ ಬನ್ನಿ.

ತತೋಽಹಂ ಲೋಕಪಾಲಾನಾಂ ಸನ್ನಿಧೌ ತ್ವಾಂ ನರೇಶ್ವರ ।
ವರಯಿಷ್ಯೇ ನರಶ್ರೇಷ್ಠ ನೈಷ ದೋಷೋ ಭವಿಷ್ಯತಿ ॥೧೦॥

ನರೇಶ್ವರನೇ, ಆಗ ನಾನು ಲೋಕಪಾಲಕರ ಸನ್ನಿಧಿಯಲ್ಲಿ ನಿನ್ನನ್ನು ವರಿಸುವೆನು. ನರಶ್ರೇಷ್ಠನೇ, ಆಗ ನಿನಗೆ ಈ ದೋಷವು ಉಂಟಾಗುವುದಿಲ್ಲ.

## ಬೃಹದಶ್ವಃ

ಏವಮುಕ್ತಸ್ತು ವೈದರ್ಭ್ಯಾ ನಳೋ ರಾಜಾ ವಿಶಾಂಪತೇ ।
ಆಜಗಾಮ ಪುನಸ್ತತ್ರ ಯತ್ರ ದೇವಾಃ ಸ ವಾಸವಾಃ ॥೧೨॥

ಎಲೈ ರಾಜನೇ, ದಮಯಂತಿಯಿಂದ ಹೀಗೆ ಹೇಳಲ್ಪಟ್ಟ ರಾಜನಾದ ನಳನು ಇಂದ್ರಸಹಿತರಾದ ದೇವತೆಗಳು ಇದ್ದಲ್ಲಿಗೆ ಪುನಃ ಬಂದನು.

ತಮಪಶ್ಯನ್ನಥಾಯಾಂತಂ ಲೋಕಪಾಲಾ ಮಹೇಶ್ವರಾಃ ।
ದೃಷ್ಟ್ವಾ ಚೈನಂ ತತೋಽಪೃಚ್ಛನ್ ವೃತ್ತಾಂತಂ ಸರ್ವಮೇವ ತತ್ ॥೧೩॥

ಕಚ್ಚಿದ್ ದೃಷ್ಟಾ ತ್ವಯಾ ರಾಜನ್ ದಮಯಂತೀ ಶುಚಿಸ್ಮಿತಾ ।
ಕಿಮಬ್ರವೀಚ್ಚ ನಃ ಸರ್ವಾನ್ ವದ ಭೂಮಿಪತೇಽನಘ ॥೧೪॥

ಲೋಕಪಾಲಕರಾದ ಆ ಮಹೇಶ್ವರರು ಅವನು ಹಿಂದಿರುಗುವುದನ್ನು ನೋಡಿ ಅವನನ್ನು ಕುರಿತು ನಡೆದ ಎಲ್ಲಾ ವೃತ್ತಾಂತವನ್ನೂ ಪ್ರಶ್ನೆಮಾಡಿದರು. ರಾಜನೇ! ಶುಚಿಸ್ಮಿತೆಯಾದ ದಮಯಂತಿಯನ್ನು ನೀನು ನೋಡಿದೆಯಾ? ಅವಳು ನಮ್ಮನ್ನು ಕುರಿತು ಏನು ಹೇಳಿದಳು? ಪರಿಶುದ್ಧರಾಜನೇ ಅದನ್ನು ನಮಗೆ ಹೇಳು.

ಭವದ್ಭಿರಹಮಾದಿಷ್ಟೋ ದಮಯಂತ್ಯಾ ನಿವೇಶನಮ್ ।
ಪ್ರವಿಷ್ಟಃ ಸುಮಹಾಕಕ್ಷ್ಯಂ ದಂಡಿಭಿಃ ಸ್ಥವಿರೈರ್ವೃತಮ್ ॥೧೫॥

ನಿಮ್ಮಿಂದ ಆದಿಷ್ಟನಾಗಿ ನಾನು ದೊಡ್ಡ ಪ್ರಾಕಾರಗಳಿಂದ ಕೂಡಿದ ಸೈನಿಕರಿಂದಲೂ ವೃದ್ಧರಿಂದಲೂ ರಕ್ಷಿತವಾದ ದಮಯಂತಿಯ ನಿವೇಶನವನ್ನು ಪ್ರವೇಶಿಸಿದೆನು.

ಪ್ರವಿಶಂತಂ ಚ ಮಾಂ ತತ್ರ ನ ಕಶ್ಚಿದ್ ದೃಷ್ಟವಾನ್ನರಃ ।
ಋತೇ ತಾಂ ಪಾರ್ಥಿವಸುತಾಂ ಭವತಾಮೇವ ತೇಜಸಾ ॥೧೬॥

ನಾನು ಅಲ್ಲಿ ಪ್ರವೇಶಿಸುವಾಗ ನಿಮ್ಮ ಪ್ರಭಾವದಿಂದ ಆ ದಮಯಂತಿ ಒಬ್ಬಳನ್ನು ಬಿಟ್ಟು ಬೇರೆಯಾರೂ ನನ್ನನ್ನು ನೋಡಲಿಲ್ಲ.

ಸಖ್ಯಿಶ್ಚಾಸ್ಯಾ ಮಯಾ ದೃಷ್ಟಾಃ ತಾಭಿಶ್ಚಾಪ್ಯುಪಲಕ್ಷಿತಃ ।
ವಿಸ್ಮಿತಾಶ್ಚಾಭವನ್ ದೃಷ್ಟ್ವಾ ಸರ್ವಾ ಮಾಂ ವಿಬುಧೇಶ್ವರಾಃ ॥೧೭॥

ಅವಳ ಸಖಿಯರು ನನ್ನನ್ನು ನೋಡಿದರು. ನಾನೂ ಅವರನ್ನು ನೋಡಿದೆ. ವಿಬುಧೇಶ್ವರರೇ ನನ್ನನ್ನು ನೋಡಿದ ಅವರೆಲ್ಲರೂ ವಿಸ್ಮಿತರಾದರು.

ವರ್ಣ್ಯಮಾನೇಷು ಚ ಮಯಾ ಭವತ್ಸು ರುಚಿರಾನನಾ ।
ಮಾಮೇವ ಗತಸಂಕಲ್ಪಾ ವೃಣೀತೇ ಸುರಸತ್ತಮಾಃ ॥೧೮॥

ಎಲೈ ಸುರಶ್ರೇಷ್ಠರೇ, ನಾನು ನಿಮ್ಮನ್ನು ಅವಳಿಗೆ ವರ್ಣಿಸುತ್ತಿರಲು ಸುಂದರಮುಖಿಯಾದ ಅವಳು ನನ್ನಲ್ಲೇ ಮನಃಸಂಕಲ್ಪವುಳ್ಳವಳಾಗಿ ನನ್ನನ್ನೇ ವರಿಸುತ್ತಾಳೆ.

ಅಬ್ರವೀಚ್ಚೈವ ಮಾಂ ಬಾಲಾ ಆಯಾಂತು ಸುರಸತ್ತಮಾಃ ।
ತ್ವಯಾ ಸಹ ನರಶ್ರೇಷ್ಠ ಮಮ ಯತ್ರ ಸ್ವಯಂವರಃ ॥೧೯॥

ತೇಷಾಮಹಂ ಸನ್ನಿಧೌ ತ್ವಾಂ ವರಯಿಷ್ಯೇ ನರೋತ್ತಮಮ್ ।
ಏವಂ ತವ ಮಹಾಬಾಹೋ ದೋಷೋ ನ ಭವಿತೇತಿ ಹ ॥೨೦॥

ಆ ಕನ್ಯೆಯು ನರಶ್ರೇಷ್ಠನೇ, ಸುರೋತ್ತಮರೆಲ್ಲರೂ ನಿನ್ನ ಜೊತೆಯಲ್ಲಿ ನನ್ನ ಸ್ವಯಂವರದ ಸ್ಥಳಕ್ಕೆ ಬರಲಿ. ಅವರ ಸನ್ನಿಧಿಯಲ್ಲಿ ನರಶ್ರೇಷ್ಠನಾದ ನಿನ್ನನ್ನು ವರಿಸುವೆನು. ಹಾಗೆಮಾಡಿದರೆ ಮಹಾಬಾಹುವೇ ನಿನಗೆ ದೋಷವು ಉಂಟಾಗುವುದಿಲ್ಲ ಎಂದು ಹೇಳಿದಳು.

ಏತಾವದೇವ ವಿಬುಧಾ ಯಥಾವೃತ್ತಮುದಾಹೃತಮ್ ।
ಮಯಾऽಶೇಷಂ ಪ್ರಮಾಣಂ ತು ಭವಂತಃ ಸುರಸತ್ತಮಾಃ ॥೨೧॥

ದೇವತೆಗಳೇ, ಅಲ್ಲಿ ನಡೆದ ಇಷ್ಟು ಘಟನೆಗಳನ್ನು ನಾನು ನಡೆದಂತೆ ಯಾವುದನ್ನೂ ಬಿಡದೆ ಹೇಳಿದ್ದೇನೆ. ದೇವೋತ್ತಮರೇ, ಇನ್ನು ಮುಂದಿನ ವಿಷಯದಲ್ಲಿ ನೀವೇ ಪ್ರಮಾಣಭೂತರಾದವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

# ನಲವತ್ತೊಂಬತ್ತನೆಯ ಅಧ್ಯಾಯ

(ಸ್ವಯಂವರದಲ್ಲಿ ದಮಯಂತಿಯಿಂದ ನಳನ ವರಣ ಮತ್ತು ಅವರ ವಿವಾಹ.)

## ಬೃಹದಶ್ವಃ

ಅಥ ಕಾಲೇ ಶುಭೇ ಪ್ರಾಪ್ತೇ ತಿಥೌ ಪುಣ್ಯೇ ಕ್ಷಣೇ ತಥಾ ।
ಆಜುಹಾವ ಮಹೀಪಾಲಾನ್ ಭೀಮೋ ರಾಜಾ ಸ್ವಯಂವರೇ ॥೧॥

ಅನಂತರ ಶುಭಕಾಲದಲ್ಲಿ ಪುಣ್ಯತಿಥಿ ಮತ್ತು ಒಳ್ಳೆಯ ಮುಹೂರ್ತವು ಪ್ರಾಪ್ತವಾದಾಗ ಭೀಮರಾಜನು ಸ್ವಯಂವರಮಂಟಪಕ್ಕೆ ಎಲ್ಲಾ ರಾಜರನ್ನೂ ಆಹ್ವಾನಿಸಿದನು.

ತಚ್ಛ್ರುತ್ವಾ ಪೃಥಿವೀಪಾಲಾಃ ಸರ್ವೇ ಹೃಚ್ಛಯಪೀಡಿತಾಃ ।
ತ್ವರಿತಾಃ ಸಮುಪಾಜಗ್ಮುರ್ದಮಯಂತೀಮಭೀಪ್ಸವಃ ॥೨॥

ಅದನ್ನು ಕೇಳಿದ ಕಾಮಪೀಡಿತರಾದ ಎಲ್ಲರಾಜರೂ ದಮಯಂತಿಯನ್ನು ಪಡೆಯುವ ಇಚ್ಛೆಯಿಂದ ಶೀಘ್ರವಾಗಿ ಅಲ್ಲಿಗೆ ಬಂದರು.

ಕನಕಸ್ತಂಭರುಚಿರಂ ತೋರಣೇನ ವಿರಾಜಿತಮ್ ।
ವಿವಿಶುಸ್ತೇ ಮಹಾರಂಗಂ ನೃಪಾಃ ಸಿಂಹಾ ಇವಾಚಲಮ್ ॥೩॥

ಚಿನ್ನದ ಕಂಬಗಳಿಂದ ಮನೋಹರವಾಗಿದ್ದ ತೋರಣಗಳಿಂದ ಅಲಂಕೃತವಾಗಿದ್ದ ದೊಡ್ಡ ರಂಗಮಂಟಪವನ್ನು ಆ ರಾಜರು ಸಿಂಹಗಳು ಪರ್ವತವನ್ನು ಪ್ರವೇಶಿಸುವಂತೆ ಪ್ರವೇಶಿಸಿದರು.

ತತ್ರಾಸನೇಷು ವಿವಿಧೇಷ್ವಾಸೀನಾಃ ಪೃಥಿವೀಕ್ಷಿತಃ ।
ಸುರಭಿಸ್ರಗ್ಧರಾಃ ಸರ್ವೇ ಪ್ರಮೃಷ್ಟಮಣಿಕುಂಡಲಾಃ ॥೪॥

ಅಲ್ಲಿ ವಿವಿಧವಾದ ಆಸನಗಳಲ್ಲಿ ಸುಗಂಧಯುಕ್ತವಾದ ಮಾಲೆಗಳನ್ನು ಧರಿಸಿದ ಹೊಳೆಯುವ, ಮಣಿಕುಂಡಲಗಳಿಂದ ಭೂಷಿತರಾದ, ಎಲ್ಲಾ ರಾಜರೂ ಕುಳಿತರು.

ತಾಂ ರಾಜಸಮಿತಿಂ ಪೂರ್ಣಾಂ ನಾಗೈರ್ಭೋಗವತೀಮಿವ ।
ಸಂಪೂರ್ಣಮೃಷಭಸ್ಕಂಧೈರ್ವ್ಯಾಘ್ರೈರ್ಗಿರಿಗುಹಾಮಿವ ॥೫॥

ನಾಗಗಳಿಂದ ಪೂರ್ಣವಾದ ಭೋಗವತಿ ಪಟ್ಟಣದಂತೆ ವ್ಯಾಘ್ರಗಳಿಂದ ತುಂಬಿದ ಪರ್ವತದ ಗುಹೆಯಂತೆ ಋಷಭಸ್ಕಂಧರಾದ, ರಾಜರಿಂದ ತುಂಬಿದ ಆ ಸಭೆಯನ್ನು (ದಮಯಂತಿಯು ಪ್ರವೇಶಿದಳು ಎಂದು ೮ನೆಯಶ್ಲೋಕದಿಂದ ಅನ್ವಯ)

ತತ್ರ ಸ್ಮ ಪೀನಾ ದೃಶ್ಯಂತೇ ಬಾಹವಃ ಪರಿಘೋಪಮಾಃ ।
ಆಕಾರವರ್ಣಸುಶ್ಲಕ್ಷ್ಣಾಃ ಪಂಚಶೀರ್ಷಾ ಇವೋರಗಾಃ ॥೬॥

ಸುಕೇಶಾಂತಾನಿ ಚಾರೂಣಿ ಸುನಾಸಾನಿ ಶುಭಾನಿ ಚ ।
ಮುಖಾನಿ ರಾಜ್ಞಾಂ ಶೋಭಂತೇ ನಕ್ಷತ್ರಾಣಿ ಯಥಾ ದಿವಿ ॥೭॥

ಅಲ್ಲಿ ಒನಕೆಯಂತೆ ಪುಷ್ಟವಾದ ಪೀನವಾದ ಐದು ಹೆಡೆಯ ಸರ್ಪಗಳಂತೆ ತೋರುವ ಆಕಾರ ಮತ್ತು ವರ್ಣಗಳಿಂದ ಕೂಡಿದ ಸುಂದರವಾದ ಬಾಹುಗಳು ಒಳ್ಳಯ ಬೈತಲೆಗಳುಳ್ಳ ಒಳ್ಳೆಯ ನಾಸಿಕಗಳು ರಾಜರ ಶುಭವಾದ ಮುಖಗಳು ಆಕಾಶದಲ್ಲಿ ನಕ್ಷತ್ರಗಳು ಹೊಳೆಯುವಂತೆ ಹೊಳೆಯುತ್ತಿದ್ದವು.

ದಮಯಂತೀ ತತೋ ರಂಗಂ ಪ್ರವಿವೇಶ ಶುಭಾನನಾ ।
ಮುಷ್ಣಂತೀ ಪ್ರಭಯಾ ರಾಜ್ಞಾಂ ಚಕ್ಷೂಂಷಿ ಚ ಮನಾಂಸಿ ಚ ॥೮॥

ಶುಭಾನನೆಯಾದ ದಮಯಂತಿಯು ತನ್ನ ಕಾಂತಿಯಿಂದ ರಾಜರ ಕಣ್ಣುಗಳನ್ನು ಮತ್ತು ಮನಸ್ಸನ್ನು ಸೆಳೆಯುತ್ತಾ ರಂಗವನ್ನು ಪ್ರವೇಶಿಸಿದಳು.

ತಸ್ಯಾ ಗಾತ್ರೇಷು ಪತಿತಾ ತೇಷಾಂ ದೃಷ್ಟಿರ್ಮಹಾತ್ಮನಾಮ್ ।
ತತ್ರ ತತ್ರೈವ ಸಕ್ತಾऽಭೂತ್ ನ ಚಚಾಲ ಚ ಪಶ್ಯತಾಮ್ ॥೯॥

ಅವಳ ಶರೀರದಲ್ಲಿ (ಶರೀರದ ಅವಯವಗಳಲ್ಲಿ) ಬಿದ್ದ ಮಹಾತ್ಮರಾದ ರಾಜರ ದೃಷ್ಟಿಯು ಅಲ್ಲಲ್ಲಿಯೇ ಸಕ್ತವಾಯಿತು (ನೆಟ್ಟು ಹೋಯಿತು). ಅಲುಗಾಡಲಿಲ್ಲ.

ತತಃ ಸಂಕೀರ್ತ್ಯಮಾನೇಷು ರಾಜ್ಞಾಂ ನಾಮಸು ಭಾರತ ।
ದದರ್ಶ ಭೈಮೀ ಪುರುಷಾನ್ ಪಂಚ ತುಲ್ಯಾಕೃತೀನಿಹ ॥೧೦॥

ಅನಂತರ ಎಲೈ ಭಾರತನೇ! ರಾಜರುಗಳ ಹೆಸರು ಹೇಳಲ್ಪಡುತ್ತಿರಲು ದಮಯಂತಿಯು ಸಮಾನಾಕೃತಿಯುಳ್ಳ ಐವರು ಪುರುಷರನ್ನು ಅಲ್ಲಿ ನೋಡಿದಳು.

ತಾನ್ ಸಂಲಕ್ಷ್ಯ ತತಃ ಸರ್ವಾನ್ ನಿರ್ವಿಶೇಷಾಕೃತೀನಿವ ।
ಸಂದೇಹಾದಥ ವೈದರ್ಭೀ ನಾಭ್ಯಜಾನಾನ್ನಳಂ ನೃಪಮ್ ॥೧೧॥

ಎಲ್ಲರೂ ಒಂದೇರೀತಿ ಆಕಾರವನ್ನು ಹೊಂದಿರುವುದನ್ನು ಗಮನಿಸಿದ ವೈದರ್ಭಿಯು ಆಗ ಸಂದೇಹದಿಂದ ನಳನನ್ನು ಗುರುತಿಸಲಾಗಲಿಲ್ಲ.

ನಿರ್ವಿಶೇಷವಯೋರೂಪಾನ್ ನಿರ್ವಿಶೇಷಾನ್ ಶುಭಾನನಾ ।
ಯಂ ಯಂ ಹಿ ದದೃಶೇ ತೇಷಾಂ ತಂ ತಂ ಮೇನೇ ನಳಂ ನೃಪಮ್ ॥

ಸಮಾನವಾದ ವಯಸ್ಸು ರೂಪ ಮತ್ತು ಎಲ್ಲರೀತಿಯಲ್ಲೂ ಸಮಾನವಾದ ಆಕಾರಗಳನ್ನು ಧರಿಸಿದ ಅವರ ಮಧ್ಯದಲ್ಲಿ ಶುಭಾನನೆಯಾದ ದಮಯಂತಿಯು ಯಾವಯಾವನನ್ನು ನೋಡಿದಳೋ ಅವನನ್ನು ನಳನೃಪನೆಂದೇ ತಿಳಿದಳು.

ಸಾ ಚಿಂತಯಂತೀ ಬುದ್ಧ್ಯಾऽಥ ತರ್ಕಯಾಮಾಸ ಭಾಮಿನೀ ।
ಕಥಂ ನು ದೇವಾನ್ ಜಾನೀಯಾಂ ಕಥಂ ವಿದ್ಯಾಮಹಂ ನಳಂ ॥೧೩॥

ಆ ಭಾಮಿನಿಯು ಬುದ್ಧಿಯಿಂದ ಚಿಂತಿಸುತ್ತಾ ಆಗ ನಾನು ಹೇಗೆ ದೇವತೆಗಳನ್ನು ತಿಳಿದೇನು ಹೇಗೆ ನಳನನ್ನು ಗುರುತಿಸಿಯೇನು ಎಂದು ತರ್ಕಿಸಿದಳು.

ಏವಂ ಸಂಚಿಂತಯಂತೀ ಸಾ ವೈದರ್ಭೀ ಭೃಶದುಃಖಿತಾ ।
ಶ್ರುತಾನಿ ದೇವಲಿಂಗಾನಿ ಚಿಂತಯಾಮಾಸ ಭಾರತ ॥೧೪॥

ಎಲೈ ಭಾರತನೇ, ಹೀಗೆ ಚಿಂತೆಯನ್ನು ಮಾಡುತ್ತಾ ಬಹಳ ದುಃಖದಿಂದ ಕೂಡಿದ ಆ ವೈದರ್ಭಿಯು ತಾನು ಕೇಳಿದ್ದ ದೇವತೆಗಳ ಚಿಹ್ನೆಗಳನ್ನು ಸ್ಮರಿಸಿಕೊಂಡಳು.

ದೇವಾನಾಂ ಯಾನಿ ಲಿಂಗಾನಿ ಸ್ಥವಿರೇಭ್ಯಃ ಶ್ರುತಾನಿ ಮೇ ।
ತಾನೀಹ ತಿಷ್ಠತಾಂ ಭೂಮಾವೇಕಸ್ಯಾಪಿ ನ ಲಕ್ಷಯೇ ॥೧೫॥

ನಾನು ಹಿರಿಯರಿಂದ ಯಾವ ದೇವತೆಗಳ ಚಿಹ್ನೆಗಳನ್ನು ಕೇಳಿದ್ದೇನೆಯೋ ಭೂಮಿಯಲ್ಲಿನಿಂತ ಇವರಲ್ಲಿ ನಾನು ಆಯಾವ ಚಿಹ್ನೆಯನ್ನೂ ಕಾಣುತ್ತಿಲ್ಲ.

ಏವಂ ವಿಚಿಂತ್ಯ ಬಹುಧಾ ವಿಚಾರ್ಯ ಚ ಪುನಃ ಪುನಃ ।
ಶರಣಂ ಪ್ರತಿ ದೇವಾನಾಂ ಪ್ರಾಪ್ತಕಾಲಮಮನ್ಯತ ॥೧೬॥

ಹೀಗೆ ಚಿಂತಿಸಿ ಪುನಃಪುನಃ ಅನೇಕರೀತಿಯಲ್ಲಿ ವಿಚಾರಮಾಡಿ ದೇವತೆಗಳನ್ನು ಶರಣುಹೊಂದುವುದೇ ಯೋಗ್ಯವಾದ ಮಾರ್ಗವೆಂದು ಭಾವಿಸಿದಳು.

ವಾಚಾ ಚ ಮನಸಾ ಚೈವ ನಮಸ್ಕಾರಂ ಪ್ರಯುಜ್ಯ ಸಾ ।
ದೇವೇಭ್ಯಃ ಪ್ರಾಂಜಲಿರ್ಭೂತ್ವಾ ವೇಪಮಾನೇದಮಬ್ರವೀತ್ ॥೧೭॥

ಮಾತಿನಿಂದಲೂ ಮತ್ತು ಮನಸ್ಸಿನಿಂದಲೂ ದೇವತೆಗಳಿಗೆ ನಮಸ್ಕಾರವನ್ನು ಮಾಡಿ ಅವಳು ಕೈಗಳನ್ನು ಮುಗಿದು ನಡುಗುತ್ತಾ ಈ ಮಾತನ್ನು ಆಡಿದಳು.

ಹಂಸಾನಾಂ ವಚನಂ ಶ್ರುತ್ವಾ ಯಥಾ ಮೇ ನೈಷಧೋ ವೃತಃ ।
ಪತಿತ್ವೇ ತೇನ ಸತ್ಯೇನ ದೇವಾಸ್ತಂ ಪ್ರದಿಶಂತು ಮೇ ॥೧೮॥

ಹಂಸಗಳ ಮಾತನ್ನು ಕೇಳಿ ನಾನು ಮನಸ್ಸಿನಲ್ಲಿ ನೈಷಧನನ್ನು ಪತಿಯಾಗಿ ವರಿಸಿದುದು ಸತ್ಯವಾದರೆ ಆ ಸತ್ಯದಿಂದ ದೇವತೆಗಳು ನನಗೆ ನೈಷಧನನ್ನು ತೋರಿಸಲಿ.

ಮನಸಾ ವಚಸಾ ಚೈವ ಯಥಾ ನಾತಿಚರಾಮ್ಯಹಮ್ ।
ತೇನ ಸತ್ಯೇನ ವಿಬುಧಾಸ್ತಮೇವ ಪ್ರದಿಶಂತು ಮೇ ॥೧೯॥

ನಾನು ಮನಸ್ಸಿನಿಂದಾಗಲೀ ಅಥವಾ ವಚನದಿಂದಾಗಲೀ ನಳನನ್ನು ಅತಿಕ್ರಮಿಸದಿದ್ದರೆ ಆ ಸತ್ಯದಿಂದ ದೇವತೆಗಳು ನನಗೆ ಆ ನಳನನ್ನು ತೋರಿಸಲಿ.

ಯಥಾ ದೇವೈಃ ಸ ಮೇ ಭರ್ತಾ ವಿಹಿತೋ ನಿಷಧಾಧಿಪಃ ।
ತೇನ ಸತ್ಯೇನ ಮೇ ದೇವಾಸ್ತಮೇವ ಪ್ರದಿಶಂತು ಮೇ ॥೨೦॥

ದೇವತೆಗಳು ನಿಷಧಾಧಿಪನಾದ ನಳನನ್ನು ನನಗೆ ಪತಿಯಾಗಿ ಸಂಕಲ್ಪಿಸಿದ್ದರೆ ಆ ಸತ್ಯದಿಂದ ದೇವತೆಗಳು ನನಗೆ ನಳನನ್ನು ತೋರಿಸಲಿ.

ಸ್ವಂ ಚೈವ ರೂಪಂ ಪುಷ್ಯಂತು ಲೋಕಪಾಲಾ ಮಹೇಶ್ವರಾಃ ।
ಯಥಾऽಹಮಭಿಜಾನೀಯಾಂ ಪುಣ್ಯಶ್ಲೋಕಂ ನರಾಧಿಪಮ್ ॥೨೧॥

ಮಹೇಶ್ವರರಾದ ಲೋಕಪಾಲಕರು ನಾನು ಪುಣ್ಯಶ್ಲೋಕನಾದ ರಾಜನಾದ ನಳನನ್ನು ಗುರುತಿಸುವಂತೆ ತಮ್ಮತಮ್ಮ ರೂಪಗಳನ್ನು ಪೋಷಿಸಿ(ಧರಿಸಿ) ಪ್ರದರ್ಶಿಸಲಿ.

## ಬೃಹದಶ್ವಃ

ನಿಶಮ್ಯ ದಮಯಂತ್ಯಾಸ್ತತ್ ಕರುಣಂ ಪರಿದೇವಿತಮ್ ।
ನಿಶ್ಚಯಂ ಪರಮಂ ತಸ್ಯಾ ಅನುರಾಗಂ ಚ ನೈಷಧೇ ॥೨೨॥

ಮನೋ ವಿಶುದ್ಧಾಂ ಬುದ್ಧಿಂ ಚ ಭಕ್ತಿಂ ರಾಗಂ ಚ ಭಾರತ ।
ಯಥೋಕ್ತಂ ಚಕ್ರಿರೇ ದೇವಾಃ ಸಮಸ್ತಂ ಲಿಂಗಧಾರಣಮ್ ॥೨೩॥

ಎಲೈ ಭಾರತನೇ! ದೇವತೆಗಳು ದಮಯಂತಿಯ ಆ ಕರುಣಾಜನಕ ವಿಲಾಪವನ್ನು ಕೇಳಿ ಅವಳ ಮನಸ್ಸಿನ ಶ್ರೇಷ್ಠವಾದ ನಿಶ್ಚಯವನ್ನೂ ನಳನಲ್ಲಿ ಅವಳಿಗಿರುವ ಪ್ರೀತಿಯನ್ನೂ ಅವಳ ಮನಸ್ಸನ್ನೂ ವಿಶುದ್ಧವಾದ ಬುದ್ಧಿಯನ್ನೂ ಭಕ್ತಿಯನ್ನೂ ಮತ್ತು ಪ್ರೇಮವನ್ನೂ ಗಮನಿಸಿ ಅವಳು ಕೇಳಿದಂತೆ ತಮ್ಮ ಎಲ್ಲಾ ಚಿಹ್ನೆಗಳನ್ನು ಧರಿಸಿದರು.

ಸಾऽಪಶ್ಯದ್ ವಿಬುಧಾನ್ ಸರ್ವಾನಸ್ವೇದಾನ್ ಸ್ತಬ್ಧಲೋಚನಾನ್ ।
ಹೃಷಿತಸ್ರಗ್ರಜೋಹೀನಾನ್ ಸ್ಥಿತಾನಸ್ಪೃಶತಃ ಕ್ಷಿತಿಮ್ ॥೨೪॥

ಆಗ ದಮಯಂತಿಯು ಎಲ್ಲಾ ದೇವತೆಗಳು ಸ್ವೇದ(ಬೆವರು)ರಹಿತರಾಗಿ ಕಣ್ಣನ್ನು ಮಿಟುಕಿಸದೆ ಅರಳಿದ ಮಾಲೆಗಳನ್ನು ಹೊಂದಿರುವುದನ್ನೂ ರಜೋಹೀನರಾಗಿ ಭೂಮಿಯನ್ನು ಸ್ಪರ್ಶಮಾಡದೆ ನಿಂತಿರುವುದನ್ನೂ ಗಮನಿಸಿದಳು.

ಛಾಯಾದ್ವಿತೀಯೋ ಮ್ಲಾನಸ್ರಗ್ರಜಸ್ವೇದಸಮನ್ವಿತಃ ।
ಭೂಮಿಷ್ಠೋ ನೈಷಧಶ್ಚೈವ ನಿಮೇಷೇಣೈವ ಸೂಚಿತಃ ॥೨೫॥

ಆಯಾಸಸಹಿತನಾಗಿ ಸ್ವಲ್ಪ ಬಾಡಿದ ಹೂವಿನಮಾಲೆಯುಳ್ಳವನಾಗಿ ದೂಳು ಮತ್ತು ಬೆವರುಗಳಿಂದ ಕೂಡಿದವನಾಗಿ ಭೂಮಿಯನ್ನು ಸ್ಪರ್ಶಮಾಡಿ ನಿಂತ ನಳನು ಒಂದು ನಿಮಿಷದಲ್ಲಿ ಸೂಚಿಸಲ್ಪಟ್ಟನು.

ಸಾ ಸಮೀಕ್ಷ್ಯ ತತೋ ದೇವಾನ್ ಪುಣ್ಯಶ್ಲೋಕಂ ಚ ಭಾಮಿನೀ ।
ನೈಷಧಂ ವರಯಾಮಾಸ ಭೈಮೀ ಧರ್ಮೇಣ ಭಾರತ ॥೨೬॥

ಎಲೈ ಭಾರತನೇ! ಆ ಭೀಮಪುತ್ರಿಯಾದ ಭಾಮಿನಿಯು ಆ ದೇವತೆಗಳನ್ನು ಮತ್ತು ಪುಣ್ಯಶ್ಲೋಕನಾದ ನಳನನ್ನು ಚೆನ್ನಾಗಿ ನೋಡಿ ಧರ್ಮದಿಂದ ನಳನನ್ನು ವರಿಸಿದಳು.

ವಿಲಜ್ಜಮಾನಾ ವಸ್ತ್ರಾಂತೇ ಜಗ್ರಾಹಾಯತಲೋಚನಾ ।
ಸ್ಕಂಧದೇಶೇ ಸ್ರಜಂ ಚಾಸ್ಯ ನಿಕ್ಷಿಪ್ಯ ವರವರ್ಣಿನೀ ॥೨೭॥

ಸುಂದರಿಯೂ ವಿಶಾಲ ಲೋಚನೆಯೂ ಆದ ಅವಳು ಅವನ ಕೊರಳಿಗೆ ಮಾಲೆಯನ್ನು ಹಾಕಿ ನಾಚಿಕೆಯಿಂದ ಅವನ ಉತ್ತರೀಯದ ತುದಿಯನ್ನು ಹಿಡಿದುಕೊಂಡಳು.

ವರಯಾಮಾಸ ಚೈವೈನಂ ಪತಿತ್ವೇ ವರವರ್ಣಿನೀ ।
ತತೋ ಹಾಹೇತಿ ಸಂಜಜ್ಞೇ ಶಬ್ದೋ ಮುಕ್ತೋ ನರಾಧಿಪೈಃ ॥೨೮॥

ಆ ಸುಂದರಿಯು ನಳನನ್ನು ಪತಿಯಾಗಿ ವರಿಸಿದಳು. ಆಗ ಎಲ್ಲಾ ರಾಜರೂ ಉಚ್ಚರಿಸಿದ ಹಾಹಾಕಾರಶಬ್ದವು ಉಂಟಾಯಿತು.

ದೇವೈರ್ಮಹರ್ಷಿಭಿಶ್ಚೈವ ಸಾಧುಸಾಧ್ವಿತಿ ಭಾರತ ।
ವಿಸ್ಮಿತೈರೀರಿತಃ ಶಬ್ದಃ ಪ್ರಶಂಸದ್ಭಿರ್ನಳಂ ನೃಪಮ್ ॥೨೯॥

ಭಾರತನೇ! ವಿಸ್ಮಿತರಾದ ದೇವತೆಗಳು ಮತ್ತು ಮಹರ್ಷಿಗಳಿಂದ ಉಚ್ಚರಿಸಲ್ಪಟ್ಟ ನಳನನ್ನು ಪ್ರಶಂಸೆಮಾಡುವಂತಹ ಸಾಧುಸಾಧು ಎಂಬ ಶಬ್ದವು ಕೇಳಿಬಂದಿತು.

ವೃತೇ ತು ನೈಷಧೇ ಭೈಮ್ಯಾ ಲೋಕಪಾಲಾ ಮಹೌಜಸಃ ।
ಪ್ರಹೃಷ್ಟಮನಸಃ ಸರ್ವೇ ನಳಾಯಾಷ್ಟೌ ವರಾನ್ ದದುಃ ॥೩೦॥

ದಮಯಂತಿಯಿಂದ ನೈಷಧನು ವರಿಸಲ್ಪಡುತ್ತಿರಲು ಮಹಾಸಾಮರ್ಥ್ಯಶಾಲಿಗಳಾದ ದೇವತೆಗಳು ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ನಳನಿಗೆ ಎಂಟು ವರಗಳನ್ನು ಕೊಟ್ಟರು.

ಪ್ರತ್ಯಕ್ಷದರ್ಶನಂ ಯಜ್ಞೇ ಗತಿಂ ಚಾನುತ್ತಮಾಂ ಶುಭಾಮ್ ।
ನೈಷಧಾಯ ದದೌ ಶಕ್ರಃ ಪ್ರೀಯಮಾಣಃ ಶಚೀಪತಿಃ ॥೩೧॥

ಅಗ್ನಿರಾತ್ಮಭವಂ ಪ್ರಾದಾದ್ ಯತ್ರ ವಾಂಛತಿ ನೈಷಧಃ ।
ಲೋಕಾನಾತ್ಮಭವಾಂಶ್ಚೈವ ದದೌ ತಸ್ಮೈ ಹುತಾಶನಃ ॥೩೨॥

ಯಜ್ಞದಲ್ಲಿ ಪ್ರತ್ಯಕ್ಷದರ್ಶನವನ್ನೂ ಮತ್ತು ಶ್ರೇಷ್ಠವಾದ ಶುಭಗತಿಯನ್ನೂ ಶಚೀಪತಿಯಾದ ಇಂದ್ರನು ಸಂತೋಷಗೊಂಡು ನಳನಿಗೆ ಕೊಟ್ಟನು. ಅಗ್ನಿಯು ನಳನು ಇಚ್ಛಿಸಿದಲ್ಲಿ ತನ್ನ ಪ್ರಾದುರ್ಭಾವವನ್ನು ವರವಾಗಿ ಕೊಟ್ಟನು ಮತ್ತು ಹುತಾಶನನು ತನ್ನ ಲೋಕಗಳನ್ನು ಅವನಿಗೆ ನೀಡಿದನು.

ಯಮಸ್ತ್ವನ್ನರಸಂ ಪ್ರಾದಾದ್ ಧರ್ಮೇ ಚ ಪರಮಾಂ ಸ್ಥಿತಿಮ್ ।
ಅಪಾಂಪತಿರಪಾಂ ಭಾವಂ ಯತ್ರ ವಾಂಛತಿ ನೈಷಧಃ ॥೩೩॥

ಯಮನು ಅನ್ನವಿಲ್ಲದಿದ್ದರೂ ಭೋಜನಜನ್ಯಬಲವನ್ನು ಅಥವಾ ರುಚಿಕರವಾದ ಆನ್ನವನ್ನು ಮಾಡುವ ಸಾಮರ್ಥ್ಯವನ್ನು ಮತ್ತು ಧರ್ಮದಲ್ಲಿ ಪರಮ ನಿಷ್ಠೆಯನ್ನು ಕೊಟ್ಟನು. ಜಲಪತಿಯಾದ ವರುಣನು ನೈಷಧನು ಇಚ್ಛಿಸಿದಲ್ಲಿ ಜಲದ ಪ್ರಾದುರ್ಭಾವವನ್ನು ವರವಾಗಿ ಕೊಟ್ಟನು.

ಸ್ರಜಶ್ಚೋತ್ತಮಗಂಧಾಢ್ಯಾಃ ಸರ್ವೇ ಚ ಮಿಥುನಂ ದದುಃ ।
ವರಾನೇವಂ ಪ್ರದಾಯಾಸ್ಯ ದೇವಾಸ್ತೇ ತ್ರಿದಿವಂ ಯಯುಃ ॥೩೪॥

ಏತತ್ ಸರ್ವಂ ನಳೋಽಪಶ್ಯದ್ ದಮಯಂತೀ ಚ ಭಾರತ ।
ಯಥಾ ಸ್ವಪ್ನಂ ಮಹಾರಾಜ ತಥೈವ ದದೃಶುರ್ಜನಾಃ ॥೩೫॥

ಎಲೈ ರಾಜನೇ, ಉತ್ತಮ ಸುಗಂಧದಿಂದ ಕೂಡಿದ ಮಾಲೆಗಳನ್ನು ಮತ್ತು ಅವಳಿಮಕ್ಕಳನ್ನು ಎಲ್ಲರೂ ನೀಡಿದರು. ನಳನಿಗೆ ಹೀಗೆ ವರಗಳನ್ನು ಕೊಟ್ಟು ದೇವತೆಗಳು ಸ್ವರ್ಗಕ್ಕೆ ಹೊರಟು ಹೋದರು. ಇದೆಲ್ಲವನ್ನೂ ನಳದಯಂತಿಯರು ನೋಡಿದರು. ಎಲೈ ಮಹಾರಾಜನೇ, ಎಲ್ಲಾ ಜನರಿಗೆ ಇದೊಂದು ಸ್ವಪ್ನದಂತೆ ತೋರಿತು.

ತತಃ ಸ್ವಯಂವರೇ ಚಕ್ರೇ ಭೀಮೋ ರಾಜಾಽತಿಮಾನುಷಮ್ ।
ಸಮಾಗತೇಷು ಸರ್ವೇಷು ಭೂಪಾಲೇಷು ವಿಶಾಂಪತೇ ॥೩೬॥

ಎಲೈ ರಾಜನೇ, ಅನಂತರ ಸ್ವಯಂವರದಲ್ಲಿ ಭೀಮರಾಜನು ಸಮಾಗತರಾದ ರಾಜರುಗಳಿಗೆ ಮನುಷ್ಯರಿಗೆ ಮೀರಿದ ಸತ್ಕಾರ್ಯಗಳನ್ನು ಮಾಡಿದನು.

ದಮಯಂತ್ಯಪಿ ತತ್ಸೈಷಾ ರಾಜಮಂಡಲಮೃದ್ಧಿಮತ್ ।
ಅನ್ವೀಕ್ಷ್ಯ ನೈಷಧಂ ವವ್ರೇ ಭೈಮೀ ಧರ್ಮೇಣ ಭಾರತ ॥೩೭॥

ಎಲೈ ಭಾರತನೇ ಈ ದಮಯಂತಿಯೂ ಸಹ ಸಮೃದ್ಧಿಯಿಂದ ಕೂಡಿದ ಆ ರಾಜಸಮೂಹವನ್ನು ನೋಡಿ ನಳನನ್ನೇ ಧರ್ಮದಿಂದ ಪತಿಯಾಗಿ ವರಿಸಿದಳು.

ವೃತೇ ಚ ನೈಷಧೇ ಭೈಮ್ಯಾ ನಿವೃತ್ತೇ ಚ ಸ್ವಯಂವರೇ ।
ಸರ್ವ ಏವ ಮಹೀಪಾಲಾಃ ಪ್ರತಿಜಗ್ಮುರ್ಯಥಾಗತಮ್ ॥೩೮॥

ದಮಯಂತಿಯು ನೈಷಧನನ್ನು ವರಿಸಿ ಸ್ವಯಂವರವೂ ಪೂರ್ಣವಾಗುತ್ತಿರಲು ಎಲ್ಲ ರಾಜರೂ ಬಂದದಾರಿಗಳಲ್ಲಿ ಹಿಂದಿರುಗಿದರು.

ಗತೇಷು ಪಾರ್ಥಿವೇಂದ್ರೇಷು ಭೀಮಃ ಪ್ರೀತೋ ಮಹಾಮನಾಃ ।
ವಿವಾಹಂ ಕಾರಯಾಮಾಸ ದಮಯಂತ್ಯಾ ನಳಸ್ಯ ಚ ॥೩೯॥

ಎಲ್ಲ ರಾಜರೂ ಹೀಗೆ ಹೊರಟುಹೋದ ಮೇಲೆ ಉದಾರಿಯಾದ ಭೀಮನು ಸಂತೋಷದಿಂದ ನಳದಮಯಂತಿಯರಿಗೆ ವಿವಾಹವನ್ನು ಮಾಡಿಸಿದನು.

ಅವಾಪ್ಯ ನಾರೀರತ್ನಂ ತು ಪುಣ್ಯಶ್ಲೋಕೋಽಪಿ ಪಾರ್ಥಿವಃ ।
ರೇಮೇ ಸಹ ತಯಾ ರಾಜನ್ ಶಚ್ಯೇವ ಬಲವೃತ್ರಹಾ ॥೪೦॥

ಎಲೈ ರಾಜನೇ, ಪುಣ್ಯಶ್ಲೋಕನಾದ ನಳನೂ ಸಹ ನಾರೀರತ್ನವನ್ನು ಪಡೆದು ಶಚಿಯ ಜೊತೆಯಲ್ಲಿ ಬಲವೃತ್ರಸೂದನನಾದ ಇಂದ್ರನಂತೆ ಅವಳ ಜೊತೆಯಲ್ಲಿ ಸುಖಪಟ್ಟನು.

ಅತೀವ ಮುದಿತೋ ರಾಜಾ ಭ್ರಾಜಮಾನೋಂಽಶುಮಾನಿವ ।
ರಂಜಯನ್ ವಸುಧಾಂ ವೀರೋ ಧರ್ಮೇಣ ಪರಿಪಾಲಯನ್ ॥೪೧॥

ಈಜೇ ಚಾಪ್ಯಶ್ವಮೇಧೇನ ಯಯಾತಿರಿವ ನಾಹುಷಃ ।
ಅನ್ಯೈಶ್ಚ ಬಹುಭಿಃ ಶ್ರೀಮಾನ್ ಕ್ರತುಭಿಶ್ಚಾಪ್ತದಕ್ಷಿಣೈಃ ॥೪೨॥

ಬಹಳ ಸಂತೋಷದಿಂದ ಯುಕ್ತನಾದ ರಾಜನಾದ ನಳನು ಸೂರ್ಯನಂತೆ ಬೆಳಗುತ್ತಾ ಭೂಮಿಯನ್ನೆಲ್ಲಾ ಸಂತೋಷಪಡಿಸುತ್ತಾ ಧರ್ಮದಿಂದ ಭೂಮಿಯನ್ನು

ಆಳುತ್ತಾ ವೀರನಾದ ಅವನು ನಹುಷಪುತ್ರನಾದ ಯಯಾತಿಯಂತೆ ಅಶ್ವಮೇಧ ಯಾಗವನ್ನು ಮಾಡಿದನು. ಮೇಧಾವಿಯಾದ ಅವನು ಬಹಳ ದಕ್ಷಿಣೆಗಳಿಂದ ಕೂಡಿದ ಇನ್ನೂ ಅನೇಕ ಯಾಗಗಳನ್ನು ಮಾಡಿದನು.

ಪುನಶ್ಚ ರಮಣೀಯೇಷು ವನೇಷೂಪವನೇಷು ಚ ।
ದಮಯಂತ್ಯಾ ಸಹ ನಳೋ ವಿಜಹಾರಾಮರೋಪಮಃ ॥೪೩॥

ಪುನಃ ರಮಣೀಯವಾದ ವನಗಳಲ್ಲಿಯೂ ಮತ್ತು ಉಪವನಗಳಲ್ಲಿಯೂ ದೇವತೆಗಳಿಗೆ ಸದೃಶನಾಗಿದ್ದ ನಳನು ದಮಯಂತಿಯ ಜೊತೆಯಲ್ಲಿ ವಿಹಾರವನ್ನು ಮಾಡಿದನು.

ಜನಯಾಮಾಸ ಚ ನಳೋ ದಮಯಂತ್ಯಾಂ ಮಹಾಮನಾಃ ।
ಇಂದ್ರಸೇನಂ ಕುಮಾರಂಚ ಇಂದ್ರಸೇನೀಂ ಕುಮಾರಿಕಾಮ್ ॥೪೪॥

ಮಹಾಮನನಾದ ನಳನು ದಮಯಂತಿಯಲ್ಲಿ ಇಂದ್ರಸೇನನೆಂಬ ಪುತ್ರನನ್ನೂ ಮತ್ತು ಇಂದ್ರಸೇನೆ ಎಂಬ ಪುತ್ರಿಯನ್ನೂ ಅವಳಿ ಮಕ್ಕಳಾಗಿ ಪಡೆದನು.

ಏವಂ ಸ ಯಜಮಾನಶ್ಚ ವಿಹರಂಶ್ಚ ನರಾಧಿಪಃ ।
ರರಕ್ಷ ವಸುಸಂಪೂರ್ಣಾಂ ವಸುಧಾಂ ವಸುಧಾಧಿಪಃ ॥೪೫॥

ಹೀಗೆ ಆ ನರಾಧಿಪನೂ ವಸುಧಾಧಿಪನೂ ಆದ ನಳನು ಯಾಗವನ್ನು ಮಾಡುತ್ತಾ ಮತ್ತು ವಿಹಾರವನ್ನುಮಾಡುತ್ತಾ ಸಂಪತ್ತಿನಿಂದ ಪೂರ್ಣವಾದ ಭೂಮಿಯನ್ನು ರಕ್ಷಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಪಂಚಾಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತನೆಯ ಅಧ್ಯಾಯ

(ದೇವತೆಗಳ ಮತ್ತು ಕಲಿಯ ಸಂವಾದ. ಕಲಿಯ ದುಷ್ಪ್ರತಿಜ್ಞೆ ಮತ್ತು ದ್ವಾಪರನ ಸಹಾಯಯಾಚನೆ.)

### ಬೃಹದಶ್ವಃ

ವೃತೇ ತು ನೈಷಧೇ ಭೈಮ್ಯಾ ಲೋಕಪಾಲಾ ಮಹೌಜಸಃ ।
ಯಾಂತೋ ದದೃಶುರಾಯಾಂತಂ ದ್ವಾಪರಂ ಕಲಿನಾ ಸಹ ॥೧॥

ಭೀಮಕುಮಾರಿಯಾದ ದಮಯಂತಿಯು ನಳನನ್ನು ವರಿಸುತ್ತಿರಲು ಮಹಾಸಾಮರ್ಥ್ಯಶಾಲಿಗಳಾದ ಲೋಕಪಾಲಕರು ಹಿಂದಿರುಗಿ ಹೋಗುತ್ತಾ ಕಲಿಯ ಜೊತೆಯಲ್ಲಿ ಬರುತ್ತಿದ್ದ ದ್ವಾಪರನನ್ನು ನೋಡಿದರು.

ಅಥಾಬ್ರವೀತ್ ಕಲಿಂ ಶಕ್ರಃ ಸಂಪ್ರೇಕ್ಷ್ಯ ಬಲವೃತ್ರಹಾ ।
ದ್ವಾಪರೇಣ ಸಹಾಯೇನ ಕಲೇ ಬ್ರೂಹಿ ಕ್ವ ಯಾಸ್ಯಸಿ ॥೨॥

ಆಗ ಬಲವೃತ್ರಸೂದನನಾದ ಇಂದ್ರನು ಕಲಿಯನ್ನು ನೋಡಿ ಕಲಿಯೇ ದ್ವಾಪರನ ಜೊತೆಯಲ್ಲಿ ನೀನು ಎಲ್ಲಿಗೆ ಹೋಗುತ್ತಿರುವೆ ಎಂದು ಪ್ರಶ್ನಿಸಿದನು.

ತತೋಽಬ್ರವೀತ್ ಕಲಿಃ ಶಕ್ರಂ ದಮಯಂತ್ಯಾಃ ಸ್ವಯಂವರಮ್ ।
ಗತ್ವಾಽಹಂ ವರಯಿಷ್ಯೇ ತಾಂ ಮನೋ ಹಿ ಮಮ ತದ್ಗತಮ್ ॥೩॥

ಆಗ ಕಲಿಯು ಇಂದ್ರನನ್ನು ಕುರಿತು ನಾನು ದಮಯಂತಿಯ ಸ್ವಯಂವರಕ್ಕೆ ಹೋಗಿ ಅವಳನ್ನು ವರಿಸುವೆನು. ನನ್ನ ಮನಸ್ಸು ಅವಳಲ್ಲಿ ನೆಟ್ಟಿದೆ ಎಂದು ಹೇಳಿದನು.

ತತೋಽಬ್ರವೀತ್ ಪ್ರಹಸ್ಯೇಂದ್ರೋ ನಿವೃತ್ತಃ ಸ ಸ್ವಯಂವರಃ ।
ವೃತಸ್ತಯಾ ನಳೋ ರಾಜಾ ಪತಿತ್ವೇಽಸ್ಮತ್ಸಮೀಪತಃ ॥೪॥

ಆಗ ಇಂದ್ರನು ನಕ್ಕು ಸ್ವಯಂವರವು ಮುಗಿದು ಹೋಯಿತು. ನಮ್ಮ ಸನ್ನಿಧಿಯಲ್ಲಿ ಅವಳು ರಾಜನಾದ ನಳನನ್ನು ಪತಿಯಾಗಿ ವರಿಸಿದಳು ಎಂದು ಹೇಳಿದನು.

ಏವಮುಕ್ತಸ್ತು ಶಕ್ರೇಣ ಕಲಿಃ ಕೋಪಸಮನ್ವಿತಃ ।
ದೇವಾನಾಮಂತ್ರ್ಯ ತಾನ್ ಸರ್ವಾನ್ ಉವಾಚೇದಂ ವಚಸ್ತದಾ ॥೫॥

ಇಂದ್ರನಿಂದ ಹೀಗೆ ಹೇಳಲ್ಪಟ್ಟ ಕಲಿಯು ಕೋಪಾವಿಷ್ಟನಾಗಿ ದೇವತೆಗಳನ್ನು ಆಹ್ವಾನಿಸಿ ಅವರೆಲ್ಲರಿಗೂ ಈ ಮಾತನ್ನು ಹೇಳಿದನು.

ದೇವಾನಾಂ ಮಾನುಷಂ ಮಧ್ಯೇ ಯತ್ ಸಾ ಪತಿಮವಿಂದತ ।
ನನು ತಸ್ಯಾ ಭವೇನ್ನ್ಯಾಯ್ಯಂ ವಿಪುಲಂ ದಂಡಧಾರಣಮ್ ।
ಏವಮುಕ್ತಾಸ್ತು ಕಲಿನಾ ಪ್ರತ್ಯೂಚುಸ್ತೇ ದಿವೌಕಸಃ ॥೬॥

ದೇವತೆಗಳ ಮಧ್ಯೆ ಅವಳು ಮನುಷ್ಯನನ್ನು ವರಿಸಿದುದಕ್ಕೆ ಅವಳಿಗೆ ವಿಪುಲವಾದ ಶಿಕ್ಷೆಯನ್ನು ಕೊಡುವುದೇ ನ್ಯಾಯವಾಗುತ್ತದೆ. ಕಲಿಯಿಂದ ಈ ಮಾತನ್ನು ಕೇಳಿದ ಆ ದೇವತೆಗಳು ಅವನಿಗೆ ಉತ್ತರವನ್ನು ಕೊಟ್ಟರು.

ಅಸ್ಮಾಭಿಃ ಸಮನುಜ್ಞಾತೋ ದಮಯಂತ್ಯಾ ನಳೋ ವೃತಃ ।
ಯೋ ವೇದ ಧರ್ಮಾನಖಿಲಾನ್ ಯಥಾವಚ್ಚರಿತವ್ರತಃ ॥೭॥

ಯಾವ ನಳನು ಎಲ್ಲ ಧರ್ಮಗಳನ್ನೂ ತಿಳಿದಿದ್ದಾನೆಯೋ ಎಲ್ಲ ವ್ರತಗಳನ್ನೂ ಸಾಂಗವಾಗಿ ಆಚರಿಸಿದ್ದಾನೆಯೋ ಅಂತಹ ನಳನನ್ನು ವರಿಸಲು ನಾವು ದಮಯಂತಿಗೆ ಅನುಮತಿಯನ್ನು ಕೊಟ್ಟಿದ್ದೇವೆ.

ಕಶ್ಚ ಸರ್ವಗುಣೋಪೇತಂ ನಾಶ್ರಯೇತ ನಳಂ ನೃಪಮ್ ।
ಯೋಽಧೀತೇ ಚತುರೋ ವೇದಾನ್ ಸರ್ವಾನಾಖ್ಯಾನಪಂಚಮಾನ್ ॥

ನಿತ್ಯಂ ತೃಪ್ತಾ ಗೃಹೇ ವಿಪ್ರಾ ದೇವಾ ಯಜ್ಞೇಷು ಧರ್ಮತಃ ।
ಅಹಿಂಸಾಪರಮೋ ಯಶ್ಚ ಸತ್ಯವಾದೀ ದೃಢವ್ರತಃ ॥೯॥

ಯಾವ ನಳನು ನಾಲ್ಕು ವೇದಗಳನ್ನೂ ಮತ್ತು ಎಲ್ಲಾ ಪಂಚರಾತ್ರಾದಿಗಳನ್ನೂ ಅಧ್ಯಯನಮಾಡುತ್ತಾನೆಯೋ ಸರ್ವಗುಣಯುಕ್ತನಾದ ರಾಜನಾದ ಆ ನಳನನ್ನು ಯಾರು ಆಶ್ರಯಿಸುವುದಿಲ್ಲ? ಅವನ ಮನೆಯಲ್ಲಿ ಬ್ರಾಹ್ಮಣರು ಯಾವಾಗಲೂ ತೃಪ್ತರಾಗಿದ್ದಾರೆ. ಯಜ್ಞಗಳಲ್ಲಿ ದೇವತೆಗಳು ತೃಪ್ತರಾಗಿದ್ದಾರೆ. ಅವನು ಅಹಿಂಸಾವ್ರತಧಾರಿಯಾದವನು ಸತ್ಯವಾದಿ ಮತ್ತು ದೃಢವ್ರತ.

ಯಸ್ಮಿನ್ ಸತ್ಯಂ ಧೃತಿರ್ದಾನಂ ತಪಃ ಶೌಚಂ ತಥಾ ಕ್ಷಮಾ ।
ಗುಣಾ ಹಿ ಪುರುಷವ್ಯಾಘ್ರೇ ಲೋಕಪಾಲಸಮೇ ನಳೇ ॥೧೦॥

ಆತ್ಮಾನಂ ಸ ಶಪೇನ್ಮೂಢೋ ಹನ್ಯಾಚ್ಚಾತ್ಮಾನಮಾತ್ಮನಾ ।
ಏವಂಗುಣಂ ನಳಂ ಯೋ ಹಿ ಕಾಮಯೇಚ್ಛಾಸಿತುಂ ಕಲೇ ।
ಅಸಕೃನ್ನರಕೇ ಮಜ್ಜೇದ್ ಅಗಾಧೇ ವಿಪುಲೇऽಪ್ಲವೇ ॥೧೧॥

ಲೋಕಪಾಲರಿಗೆ ಸದೃಶನಾದ ಪುರುಷವ್ಯಾಘ್ರನಾದ ಯಾವ ನಳನಲ್ಲಿ ಸತ್ಯ ಧೈರ್ಯ ದಾನ ತಪಸ್ಸು ಶೌಚ ಸಹನೆ ಈ ಎಲ್ಲಾಗುಣಗಳೂ ಇವೆಯೋ ಅವನು ತಾನು ಮೌಢ್ಯದಿಂದ ಅಪರಾಧವನ್ನು ಮಾಡಿದರೆ ತನ್ನನ್ನೇ ಶಪಿಸಿಕೊಳ್ಳುತ್ತಾನೆಯೋ ಅಥವಾ ತನ್ನನ್ನೇ ತಾನು ಹನನ- ಮಾಡಿಕೊಳ್ಳುತ್ತಾನೆಯೋ ಇಂತಹ ಗುಣವುಳ್ಳ ನಳನನ್ನು ಯಾರಾದರೂ ಶಿಕ್ಷಿಸಲು ಬಯಸಿದರೆ ಎಲೈ ಕಲಿಯೇ, ಅವನು ಅಗಾಧವಾದ ಪರಿಹಾರವಿಲ್ಲದ ನರಕದಲ್ಲಿ ಬಹಳ ಕಾಲ ಮುಳುಗುತ್ತಾನೆ.

ಏವಮುಕ್ತ್ವಾ ಕಲಿಂ ದೇವಾ ದ್ವಾಪರಂ ಚ ದಿವಂ ಯಯುಃ ।
ತತೋ ಗತೇಷು ದೇವೇಷು ಕಲಿರ್ದ್ವಾಪರಮಬ್ರವೀತ್ ॥೧೨॥

ಸಂಯಂತುಂ ನೋತ್ಸಹೇ ಕೋಪಂ ನಳೇ ವತ್ಸ್ಯಾಮಿ ದ್ವಾಪರ ।
ಭ್ರಂಶಯಿಷ್ಯಾಮಿ ತಂ ರಾಜ್ಯಾನ್ನ ಭೈಮ್ಯಾ ಸಹ ರಂಸ್ಯತೇ ॥೧೩॥

ತ್ವಮಪ್ಯಕ್ಷಾನ್ ಸಮಾವಿಶ್ಯ ಕರ್ತುಂ ಮೇ ಸಾಹ್ಯಮರ್ಹಸಿ ।
ಮಮ ಪ್ರಿಯೇಕೃತೇ ತಸ್ಮಿನ್ ಕೃತವಾಂಶ್ಚ ಭವಿಷ್ಯಸಿ ॥೧೪॥

ಕಲಿ ಮತ್ತು ದ್ವಾಪರರನ್ನು ಕುರಿತು ಹೀಗೆ ಹೇಳಿ ದೇವತೆಗಳು ಸ್ವರ್ಗಕ್ಕೆ ಹೋದರು. ದೇವತೆಗಳು ಹೋದ ಮೇಲೆ ಕಲಿಯು ದ್ವಾಪರನನ್ನು ಕುರಿತು ನನಗೆ ಕೋಪವನ್ನು ತಡೆಯಲು ಸಾಧ್ಯವಿಲ್ಲ. ದ್ವಾಪರನೇ ನಾನು ನಳನಲ್ಲಿ ವಾಸಮಾಡಿ ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ದಮಯಂತಿಯ ಜೊತೆಯಲ್ಲಿ ಸುಖದಿಂದ ಇರದಂತೆ ಮಾಡುತ್ತೇನೆ. ನೀನೂ ಸಹ ದಾಳಗಳನ್ನು ಆಶ್ರಯಿಸಿ ನನಗೆ ಸಹಾಯವನ್ನು ಮಾಡು. ನನಗೆ ಸಹಾಯವನ್ನು ಮಾಡಿದರೆ ನೀನು ಕೃತಕೃತ್ಯನಾಗುವಿ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★★★★★

# ಐವತ್ತೊಂದನೆಯ ಅಧ್ಯಾಯ

(ಅಕ್ಷದ್ಯೂತ ಮತ್ತು ನಳನ ಪರಾಜಯ.)

## ಬೃಹದಶ್ವಃ

ಏವಂ ಸ ಸಮಯಂ ಕೃತ್ವಾ ದ್ವಾಪರೇಣ ಕಲಿಸ್ತದಾ ।
ಆಜಗಾಮ ತತಸ್ತತ್ರ ಯತ್ರ ರಾಜಾ ಸ ನೈಷಧಃ ॥೧॥

ಸ ನಿತ್ಯಮಂತರಪ್ರೇಕ್ಷೀ ನಿಷಧೇಷ್ವವಸಚ್ಚಿರಮ್ ।
ಅಥಾಸ್ಯ ದ್ವಾದಶೇ ವರ್ಷೇ ದದರ್ಶ ಕಲಿರಂತರಮ್ ॥೨॥

ಹೀಗೆ ಕಲಿಯು ದ್ವಾಪರನ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡು ನೈಷಧರಾಜನಾದ ನಳನಿದ್ದಲ್ಲಿಗೆ ಬಂದನು. ಅವನು ನಿತ್ಯವೂ ನಳನನ್ನು ಪ್ರವೇಶಿಸುವುದಕ್ಕೆ ಅವನ ಒಂದು ಧರ್ಮಲೋಪವನ್ನು ನಿರೀಕ್ಷಿಸುತ್ತಾ ನಿಷಧ ದೇಶದಲ್ಲಿ ಬಹುಕಾಲ ವಾಸಿಸಿದನು. ಅನಂತರ ಹನ್ನೆರಡನೆಯ ವರ್ಷದಲ್ಲಿ ಅವನಿಗೆ ಅಂತಹ ಒಂದು ಅವಕಾಶವು ದೊರೆಯಿತು.

ಕೃತ್ವಾ ಮೂತ್ರಮುಪಸ್ಪೃಶ್ಯ ಸಂಧ್ಯಾಮಾಸ್ತೇ ಸ್ಮ ನೈಷಧಃ ।
ಅಕೃತ್ವಾ ಪಾದಯೋಃ ಶೌಚಂ ತತ್ರೈನಂ ಕಲಿರಾವಿಶತ್ ॥೩॥

ನಳನು ಮೂತ್ರೋತ್ಸರ್ಗವನ್ನು ಮಾಡಿ ಕೈಗಳನ್ನು ತೊಳೆದು ಪಾದಗಳನ್ನು ಸರಿಯಾಗಿ ತೊಳೆದುಕೊಳ್ಳದೆ ಸಂಧ್ಯೋಪಾಸನೆಯನ್ನು ಮಾಡುತ್ತಿದ್ದನು. ಆಗ ಕಲಿಯು ಅವನನ್ನು ಪ್ರವೇಶಿಸಿದನು.

ಸ ಸಮಾವಿಶ್ಯ ಚ ನಳಂ ಸಮೀಪಂ ಪುಷ್ಕರಸ್ಯ ಹ ।
ಗತ್ವಾ ಪುಷ್ಕರಮಾಹೇದಮೇಹಿ ದೀವ್ಯ ನಳೇನ ವೈ ॥೪॥

ಅವನು ನಳನನ್ನು ಪ್ರವೇಶಿಸಿ ಅವನ ತಮ್ಮನಾದ ಪುಷ್ಕರನ ಬಳಿಗೆ ಹೋಗಿ ಪುಷ್ಕರನನ್ನು ಕುರಿತು ಬಾ ನಳನ ಜೊತೆಯಲ್ಲಿ ದ್ಯೂತವಾಡು ಎಂದು ಕರೆದನು.

ಅಕ್ಷದ್ಯೂತೇ ನಳಂ ಜೇತಾ ಭವಾನ್ ಹಿ ಸಹಿತೋ ಮಯಾ ।
ನಿಷಧಾನ್ ಪ್ರತಿಪದ್ಯಸ್ಯ ಜಿತ್ವಾ ರಾಜನ್ ನಳಂ ನೃಪಮ್ ॥೫॥

ರಾಜನೇ! ಅಕ್ಷದ್ಯೂತದಲ್ಲಿ ನಳನೃಪನನ್ನು ಗೆದ್ದು ನೀನು ನನ್ನ ಜೊತೆಯಲ್ಲಿ ನಿಷಧ ರಾಜ್ಯವನ್ನು ಹೊಂದುವವನಾಗು.

ವಿವಮುಕ್ತಸ್ತು ಕಲಿನಾ ಪುಷ್ಕರೋ ನಳಮಭ್ಯಗಾತ್ ।
ಕಲಿಶ್ಚೈವ ವೃಷೋ ಭೂತ್ವಾ ಗವಾಂ ಪುಷ್ಕರಮಮಬ್ರವೀತ್ ॥೬॥

ಕಲಿಯಿಂದ ಹೇಳಲ್ಪಟ್ಟ ಪುಷ್ಕರನು ನಳನ ಸಮೀಪಕ್ಕೆ ಹೋದನು. ಕಲಿಯೂ ಸಹ ಒಂದು ಎತ್ತಾಗಿ ಪುಷ್ಕರನನ್ನು ಕುರಿತು ಮಾತನಾಡಿದನು.

( ತನ್ನ ಬಳಿ ಪಣಕ್ಕಿಡಲು ಯಾವ ಧನವೂ ಇಲ್ಲ ಎಂದು ಪುಷ್ಕರನು ಹೇಳಲು ನಾನು ಒಳ್ಳೆಯ ವೃಷಭನಾಗುತ್ತೇನೆ. ನನ್ನನ್ನೇ ಪಣಕ್ಕಿಡು ಎಂದು ಹೇಳಿ ಕಲಿಯು ವೃಷಭನಾದನು ಎಂದು ಪಾಠಾಂತರಗಳಲ್ಲಿ ದೊರೆಯುತ್ತದೆ. ಗವಾಧಿಪತಿಯಾದ ದ್ವಾಪರನಿಗೂ ಪುಷ್ಕರನೆಂದು ಹೆಸರು ಎಂದು ಲಕ್ಷಾಲಂಕಾರದಲ್ಲಿ ಹೇಳಿದ್ದಾರೆ. ಆದ್ದರಿಂದ ಕಲಿಯು ದ್ವಾಪರನ ಜೊತೆಯಲ್ಲಿ ಮಾತನಾಡುವಾಗಲೇ ಧನವಿಲ್ಲದ ನಳನ ತಮ್ಮನಾದ ಪುಷ್ಕರನಿಗೆ ನಾನು ಪಣಕ್ಕಿಡುವ ಶ್ರೇಷ್ಠ ವೃಷಭನಾಗುತ್ತೇನೆ ಎಂದು ಕಲಿಯು ಹೇಳಿದನೆಂದು ಅರ್ಥವನ್ನು ಮಾಡಬೇಕೆಂದು ತೋರುತ್ತದೆ.)

ಆಸಾದ್ಯ ತು ನಳಂ ವೀರಂ ಪುಷ್ಕರಃ ಪರವೀರಹಾ ।
ದೀವ್ಯಾವೇತ್ಯಬ್ರವೀದ್ ಭ್ರಾತಾ ವೃಷೇಣೇತಿ ಪುನಃ ಪುನಃ ॥೭॥

ಪರವೀರಘಾತಕನಾದ ಪುಷ್ಕರನು ವೀರನಾದ ನಳನನ್ನು ಸಮೀಪಿಸಿ ಈ ವೃಷಭಶ್ರೇಷ್ಠವನ್ನು ಪಣವಾಗಿಟ್ಟು ದ್ಯೂತವನ್ನು ಆಡೋಣ ಎಂದು ಮತ್ತೆ ಮತ್ತೆ ಹೇಳಿದನು.

ನ ಚಕ್ಷಮೇ ತತೋ ರಾಜಾ ಸಮಾಹ್ವಾನಂ ಮಹಾಯಶಾಃ ।
ವೈದರ್ಭ್ಯಾಃ ಪ್ರೇಕ್ಷಮಾಣಾಯಾಃ ಪ್ರಾಪ್ತಕಾಲಮಮನ್ಯತ ।
ತತಃ ಸ ರಾಜಾ ಸಹಸಾ ದೇವಿತುಂ ಸಂಪ್ರಚಕ್ರಮೇ ॥೮॥

ಮಹಾಕೀರ್ತಿವಂತನಾದ ರಾಜನು ತನ್ನ ಈ ಆಹ್ವಾನವನ್ನು ಸಹಿಸಲಿಲ್ಲ. ವೈದರ್ಭಿಯು ನೋಡುತ್ತಿರುವಂತೆಯೇ ಅವನು ದ್ಯೂತವನ್ನು ಆಡುವುದು

ಯೋಗ್ಯವೆಂದು ಭಾವಿಸಿದನು. ರಾಜನು ತಕ್ಷಣವೇ ದ್ಯೂತವನ್ನು ಆಡಲು ಉಪಕ್ರಮಿಸಿದನು.

ಭ್ರಾತ್ರಾ ದೈವಾಭಿಭೂತೇನ ದೈವಾವಿಷ್ಟೋ ಜನಾಧಿಪಃ ।
ಹಿರಣ್ಯಸ್ಯ ಸುವರ್ಣಸ್ಯ ಯಾನಯುಗ್ಯಸ್ಯ ವಾಸಸಾಮ್ ॥೯॥

ದೈವಾಭಿಭೂತನಾದ ತಮ್ಮನ ಜೊತೆಯಲ್ಲಿ ದೇವತಾ ಸನ್ನಿಧಾನ ಪಾತ್ರನಾಗಿದ್ದರೂ ಕಲಿಯಿಂದ ಆವಿಷ್ಟವಾದ ನಳನು ದ್ಯೂತವನ್ನು ಆಡಿ ಶ್ರೇಷ್ಠವಾದ ಸುವರ್ಣಗಳು ರಥದ ಕುದುರೆಗಳು ಶ್ರೇಷ್ಠವಾದ ವಸ್ತ್ರಗಳು ಎಲ್ಲವನ್ನೂ ಸೋತು ಕಳೆದುಕೊಂಡನು.

ಆವಿಷ್ಟಃ ಕಲಿನಾ ದ್ಯೂತೇ ಜೀಯತೇ ಸ್ಮ ನಳಸ್ತದಾ ॥೧೦॥

ತಮಕ್ಷಮದಸಮ್ಮತ್ತಂ ಸುಹೃದಾಂ ನತು ಕಶ್ಚನ ।
ನಿವಾರಣೇऽಭವಚ್ಛಕ್ತೋ ದೀವ್ಯಮಾನಮಚೇತಸಮ್ ॥೧೧॥

ಕಲಿಯಿಂದ ಆವಿಷ್ಟನಾಗಿ ನಳನು ಪ್ರತಿಯೊಂದು ಆಟದಲ್ಲಿಯೂ ಸೋಲುತ್ತಿದ್ದನು. ಅಕ್ಷಮದಕ್ಕೆ ಒಳಗಾಗಿ ಎಚ್ಚರಿಕೆಯಿಲ್ಲದೆ ದ್ಯೂತವನ್ನು ಆಡುವ ಆ ನಳನನ್ನು ನಿವಾರಿಸಲು ಹಿತೈಷಿಗಳಲ್ಲಿ ಯಾರೂ ಶಕ್ತರಾಗಲಿಲ್ಲ.

ತತಃ ಪೌರಜನಾಃ ಸರ್ವೇ ಮಂತ್ರಿಭಿಃ ಸಹ ಭಾರತ ।
ರಾಜಾನಂ ದ್ರಷ್ಟುಮಾಗಚ್ಛನ್ ನಿವಾರಯಿತುಮಾತುರಮ್ ।
ತತಃ ಸೂತ ಉಪಾಗಮ್ಯ ದಮಯಂತ್ಯೈ ನ್ಯವೇದಯತ್ ॥೧೨॥

ಭಾರತನೇ! ಆಗ ಪೌರಜನರೆಲ್ಲರೂ ಮಂತ್ರಿಗಳ ಜೊತೆಯಲ್ಲಿ ಈ ಚಟದಲ್ಲಿ ಬಿದ್ದ ರಾಜನನ್ನು ತಡೆಯುವ ಉದ್ದೇಶದಿಂದ ರಾಜನನ್ನು ನೋಡಲು ಬಂದರು. ನಂತರ ಸೂತನು ದಮಯಂತಿಯ ಹತ್ತಿರ ಹೋಗಿ ನಡೆದಿದ್ದನ್ನು ಅವಳಿಗೆ ತಿಳಿಸಿದನು.

ಪೌರಜಾನಪದಃ ಸರ್ವೋ ದ್ವಾರಿ ತಿಷ್ಠತಿ ಕಾರ್ಯವಾನ್ ॥೧೩॥

ನಿವೇದ್ಯತಾಂ ನೈಷಧಾಯ ಸರ್ವಾಃ ಪ್ರಕೃತಯಃ ಸ್ಥಿತಾಃ ।
ಅಮೃಷ್ಯಮಾಣಾ ವ್ಯಸನಂ ರಾಜ್ಞೋ ಧರ್ಮಾರ್ಥದರ್ಶಿನಃ ॥೧೪॥

ಪೌರಜಾನಪದರೆಲ್ಲರೂ ನಳನನ್ನು ನೋಡುವ ಉದ್ದೇಶದಿಂದ ಬಾಗಿಲಿನಲ್ಲಿ ನಿಂತಿದ್ದಾರೆ. ಎಲ್ಲಾ ಪ್ರಜೆಗಳು ಧರ್ಮಾರ್ಥದರ್ಶಿಯಾದ ರಾಜನ ಈ ವ್ಯಸನವನ್ನು ಸಹಿಸಲಾಗದೆ ಬಾಗಿಲಿನಲ್ಲಿ ನಿಂತಿದ್ದಾರೆ ಎಂದು ನಳನಿಗೆ ನಿವೇದಿಸು ಎಂದು ಹೇಳಿದರು.

ತತಃ ಸಾ ಬಾಷ್ಪಕಲಯಾ ವಾಚಾ ದುಃಖೇನ ಕರ್ಶಿತಾ ।
ಉವಾಚ ನೈಷಧಂ ಭೈಮೀ ಶೋಕೋಪಹತಚೇತನಾ ॥೧೫॥

ಆಗ ದುಃಖದಿಂದ ಕರ್ಶಿತಳಾದ ಆ ದಮಯಂತಿಯು ಕಣ್ಣೀರಿನಿಂದ ಕೂಡಿದ ಮಾತುಗಳಲ್ಲಿ ಶೋಕದಿಂದ ಉಪದ್ರುತವಾದ ಮನಸ್ಸಿನಿಂದ ಕೂಡಿದವಳಾಗಿ ನಳನನ್ನು ಕುರಿತು ಹೇಳಿದಳು.

ರಾಜನ್ ಪೌರಜನೋ ದ್ವಾರಿ ತ್ವಾಂ ದಿದೃಕ್ಷುರುಪಸ್ಥಿತಃ ।
ಮಂತ್ರಿಭಿಃ ಸಹಿತಃ ಸರ್ವೈ ರಾಜಭಕ್ತಿಪುರಸ್ಕೃತಃ ॥೧೬॥

ವೃದ್ಧೈರ್ಬ್ರಾಹ್ಮಣಮುಖ್ಯೈಶ್ಚ ವಣಿಗ್ಭಿಶ್ಚ ಸಮನ್ವಿತಃ ।
ಆಗತಾಃ ಸಹಿತಾ ರಾಜನ್ ತ್ವತ್ಪ್ರಸಾದಾವಲಂಬಿನಃ ।
ತಾನ್ ದ್ರಷ್ಟುಮರ್ಹಸೀತ್ಯೇವಂ ಪುನಃ ಪುನರಭಾಷತ ॥೧೭॥

ರಾಜನೇ! ಪೌರಜಾನಪದರೆಲ್ಲರೂ ರಾಜಭಕ್ತಿಯಿಂದ ಕೂಡಿದವರಾಗಿ ಎಲ್ಲಾ ಮಂತ್ರಿಗಳಿಂದಲೂ ವೃದ್ಧರಾದ ಶ್ರೇಷ್ಠ ಬ್ರಾಹ್ಮಣರಿಂದಲೂ ವೈಶ್ಯರಿಂದಲೂ ಸಹಿತರಾಗಿ ಎಲ್ಲರೂ ಜೊತೆಯಲ್ಲಿ ಬಂದು ನಿನ್ನನ್ನು ನೋಡಲು ಬಾಗಿಲಿನಲ್ಲಿ ನಿಂತಿದ್ದಾರೆ. ರಾಜನೇ ನಿನ್ನ ಅನುಗ್ರಹೋಪಜೀವಿಗಳಾದ ಅವರನ್ನು ನೀನು ನೋಡಬೇಕು ಎಂದು ಪುನಃಪುನಃ ಹೇಳಿದಳು.

ತಾಂ ತಥಾ ರುಚಿರಾಪಾಂಗೀಂ ವಿಲಪಂತೀಂ ಶುಚಿಸ್ಮಿತಾಮ್ ।
ಆವಿಷ್ಟಃ ಕಲಿನಾ ರಾಜಾ ನೈವ ಕಿಂಚಿದಭಾಷತ ॥೧೮॥

ಆ ರುಚಿರಕಟಾಕ್ಷವುಳ್ಳ ಶುಚಿಸ್ಮಿತೆಯಾದ ದಮಯಂತಿಯು ಹೀಗೆ ವಿಲಾಪವನ್ನು ಮಾಡುತ್ತಿದ್ದರೂ ಕಲಿಯಿಂದ ಆವಿಷ್ಟನಾದ ರಾಜನು ಏನನ್ನೂ ಮಾತನಾಡಲಿಲ್ಲ.

ತತಸ್ತೇ ಮಂತ್ರಿಣಃ ಸರ್ವೇ ತೇ ಚೈವ ಪುರವಾಸಿನಃ ।
ನಾಯಮಸ್ತೀತಿ ದುಃಖಾರ್ತಾ ವ್ರೀಡಿತಾ ಜಗ್ಮುರಾಲಯಮ್ ॥೧೯॥

ಆಗ ಆ ಮಂತ್ರಿಗಳು ಮತ್ತು ಪೌರಜನರೆಲ್ಲರೂ ರಾಜನು ಮಾಡಬೇಕಾದ ಕಾರ್ಯವು ಇದಲ್ಲ ಎಂದು ಹೇಳುತ್ತಾ ದುಃಖದಿಂದ ಆರ್ತರಾಗಿ ನಾಚಿಕೆಯಿಂದ ಕೂಡಿದವರಾಗಿ ತಮ್ಮ ಮನೆಗಳಿಗೆ ಹಿಂದಿರುಗಿದರು.

ತಥಾ ತದಭವದ್ ದ್ಯೂತಂ ಪುಷ್ಕರಸ್ಯ ನಳಸ್ಯ ಚ ।
ಯುಧಿಷ್ಠಿರ ಬಹೂನ್ ಮಾಸಾನ್ ಪುಣ್ಯಶ್ಲೋಕಸ್ತ್ವಜೀಯತ ॥೨೦॥

ಯುಧಿಷ್ಠಿರನೇ, ಹೀಗೆ ಪುಷ್ಕರನಿಗೂ ಮತ್ತು ನಳನಿಗೂ ಅನೇಕ ತಿಂಗಳುಗಳವರೆಗೆ ದ್ಯೂತವು ಜರುಗಿತು. ಪುಣ್ಯಶ್ಲೋಕನಾದ ನಳನು ಎಲ್ಲದರಲ್ಲೂ ಸೋತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೆರಡನೆಯ ಅಧ್ಯಾಯ

(ದ್ಯೂತದಲ್ಲಿ ನಳನ ಪರಾಜಯವನ್ನು ನೋಡಿ ದಮಯಂತಿಯಿಂದ ತನ್ನ ತೌರುಮನೆಗೆ ಯಮಳರ ಪ್ರೇಷಣ.)

### ಬೃಹದಶ್ವಃ

ದಮಯಂತೀ ತು ತಂ ದೃಷ್ಟ್ವಾ ಪುಣ್ಯಶ್ಲೋಕಂ ನರಾಧಿಪಮ್ ।
ಉನ್ಮತ್ತಪದನುನ್ಮತ್ತಾ ದೈವೇನ ಗತಚೇತಸಮ್ ॥೧॥

ಭಯಶೋಕಸಮಾವಿಷ್ಟಾ ರಾಜನ್ ಭೀಮಸುತಾ ತತಃ ।
ಚಿಂತಯಾಮಾಸ ತತ್ ಕಾರ್ಯಂ ಸುಮಹಾಪಾರ್ಥಿವಂ ಪ್ರತಿ ॥೨॥

ಎಲೈ ರಾಜನೇ! ಭೀಮಸುತೆಯಾದ ದಮಯಂತಿಯು ಪುಣ್ಯಶ್ಲೋಕನಾದ ಆ ರಾಜನು ದೈವದಿಂದ ಪ್ರಜ್ಞಾಹೀನನಾಗಿ ಉನ್ಮತ್ತನಂತೆ ಇರುವುದನ್ನು ನೋಡಿ ತಾನು

ಅನುನ್ಮತ್ತಳಾಗಿ ಭಯಶೋಕಗಳಿಂದ ಕೂಡಿದವಳಾಗಿ ಆ ದೊಡ್ಡ ರಾಜನ ವಿಷಯದಲ್ಲಿ ಪ್ರಕೃತದಲ್ಲಿ ಮಾಡಬೇಕಾದ ಕಾರ್ಯವನ್ನು ಚಿಂತಿಸಿದಳು.

ಸಾ ಶಂಕಮಾನಾ ತತ್ಪಾಪಂ ಚಿಕೀರ್ಷಂತೀ ಚ ತತ್ಪ್ರಿಯಮ್ ।
ನಳಂ ಚ ಹೃತಸರ್ವಸ್ವಮುಪಲಭ್ಯೇದಮಬ್ರವೀತ್ ॥೩॥

ಬೃಹತ್ಸೇನೇ ವ್ರಜಾಮಾತ್ಯಮಾನಾಯ್ಯ ನಳಶಾಸನಾತ್ ।
ಆಚಕ್ಷ್ವ ಯದ್ ಹೃತಂ ದ್ರವ್ಯಮವಶಿಷ್ಟಂ ಚ ಯದ್ವಸು ॥೪॥

ಅವಳು ನಳನು ಮಾಡಬಹುದಾದ ಪಾಪವನ್ನು ಶಂಕಿಸಿ ಅವನಿಗೆ ಪ್ರಿಯವನ್ನು ಉಂಟುಮಾಡಲು ಬಯಸಿ ನಳನು ಸರ್ವಸ್ವವನ್ನೂ ಕಳೆದುಕೊಂಡುದನ್ನು ನೋಡಿ ಧಾತ್ರಿಯಾದ ಬೃಹತ್ಸೇನೆಯನ್ನು ಕರೆದು ಬೃಹತ್ಸೇನೆಯೇ ಹೋಗಿ ನಳಶಾಸನದಂತೆ ಅಮಾತ್ಯನನ್ನು ಕರೆದುಕೊಂಡು ಬಂದು ಎಷ್ಟು ಧನವು ನಷ್ಟವಾಗಿದೆ ಎಷ್ಟುಧನವು ಉಳಿದಿದೆ ಎಂದು ಹೇಳು.

ಇತ್ಯೇವಂ ಸಾ ಸಮಾದಿಷ್ಟಾ ಬೃಹತ್ಸೇನಾ ನರೇಶ್ವರ ।
ಉವಾಚ ದೇವ್ಯಾ ವಚನಂ ಮಂತ್ರಿಣಾಂ ಸಾ ಸಮೀಪತಃ ॥೫॥

ರಾಜನೇ! ಹೀಗೆ ದಮಯಂತಿಯ ಆದೇಶವನ್ನು ಪಡೆದ ಬೃಹತ್ಸೇನೆಯು ಅವಳ ಮಾತುಗಳನ್ನು ಮಂತ್ರಿಗಳ ಎದುರಿನಲ್ಲಿ ಹೇಳಿದಳು.

ತತಸ್ತೇ ಮಂತ್ರಿಣಃ ಸರ್ವೇ ವಿಜ್ಞಾಯ ನಳಶಾಸನಮ್ ।
ಅಪಿ ನೋ ಭಾಗಧೇಯಂ ಸ್ಯಾದಿತ್ಯುಕ್ತ್ವಾ ಪುನರಾವ್ರಜನ್ ॥೬॥

ಆಗ ಆ ಮಂತ್ರಿಗಳೆಲ್ಲರೂ ನಳನ ಆಜ್ಞೆಯನ್ನು ತಿಳಿದು ನಮಗಿನ್ನೂ ಪುಣ್ಯಶೇಷವಿದೆ ಎಂದು ಹೇಳುತ್ತಾ ಪುನಃ ಬಂದರು.

ಪ್ರಕೃತೀಸ್ತಾಸ್ತಥಾ ದೃಷ್ಟ್ವಾ ದ್ವಿತೀಯಮುಪಸಂಸ್ಥಿತಾಃ ।
ನ್ಯವೇದಯದ್ ಭೀಮಸುತಾ ನ ಚ ಸ ಪ್ರತ್ಯನಂದತ ॥೭॥

ವಾಕ್ಯಮಪ್ರತಿನಂದಂತಂ ಭರ್ತಾರಮಭಿವೀಕ್ಷ್ಯ ಸಾ ।
ದಮಯಂತೀ ಪುನರ್ವೇಶ್ಮ ವ್ರೀಡಿತಾ ಪ್ರವಿವೇಶ ಹ ॥೮॥

ಪ್ರಜೆಗಳು ಹಾಗೆ ಬಂದುದನ್ನು ನೋಡಿದ ಭೀಮಸುತೆಯಾದ ದಮಯಂತಿಯು ಎರಡನೆಯಬಾರಿಗೆ ನಳನ ಬಳಿಯಲ್ಲಿ ನಿಂತು ನಿವೇದಿಸಿದಳು. ರಾಜನು ಅವಳನ್ನು ಗಮನಿಸಲೇ ಇಲ್ಲ. ತನ್ನ ವಾಕ್ಯವನ್ನು ಪ್ರತಿನಂದಿಸದಿರುವ ಪತಿಯನ್ನು ನೋಡಿ ಆ ದಮಯಂತಿಯು ನಾಚಿಕೆಗೊಂಡವಳಾಗಿ ಪುನಃ ತನ್ನ ನಿವಾಸವನ್ನು ಪ್ರವೇಶಿಸಿದಳು.

ನಿಶಾಮ್ಯ ಸತತಂ ಚಾಕ್ಷಾನ್ ಪುಣ್ಯಶ್ಲೋಕಪರಾಙ್ಮುಖಾನ್ ।
ನಳಂ ಚ ಹೃತಸರ್ವಸ್ವಂ ಧಾತ್ರೀಂ ಪುನರುವಾಚ ಹ ॥೯॥

ಬೃಹತ್ಸೇನೇ ಪುನರ್ಗಚ್ಛ ವಾರ್ಷ್ಣೇಯಂ ನಳಶಾಸನಾತ್ ।
ಸೂತಮಾನಯ ಕಲ್ಯಾಣಿ ಮಹತ್ ಕಾರ್ಯಮುಪಸ್ಥಿತಮ್ ॥೧೦॥

ದಾಳಗಳು ಪುಣ್ಯಶ್ಲೋಕನಾದ ನಳನಿಗೆ ವಿಮುಖವಾಗಿರುವುದನ್ನೂ ಮತ್ತು ನಳನು ತನ್ನ ಸರ್ವಸ್ವವನ್ನೂ ಕಳೆದುಕೊಂಡಿದ್ದನ್ನೂ ನೋಡಿದ ಅವಳು ಪುನಃ ಧಾತ್ರಿಯನ್ನು ಕುರಿತು ಬೃಹತ್ಸೇನೇಯೇ ಪುನಃ ಹೋಗಿ ವೃಷ್ಣಿಕುಲದಲ್ಲಿ ಹುಟ್ಟಿದ ನಳನ ಸಾರಥಿಯನ್ನು ನಳನ ಶಾಸನದಂತೆ ಕರೆದುಕೊಂಡು ಬಾ. ಕಲ್ಯಾಣಿಯೇ, ದೊಡ್ಡ ಕರ್ತವ್ಯವು ಉಪಸ್ಥಿತವಾಗಿದೆ (ಕರ್ತವ್ಯವನ್ನು ಮಾಡಬೇಕಾಗಿದೆ.) ಎಂದು ಹೇಳಿದಳು.

ಬೃಹತ್ಸೇನಾ ತು ಸಾ ಶ್ರುತ್ವಾ ದಮಯಂತ್ಯಾಃ ಪ್ರಭಾಷಿತಮ್ ।
ವಾರ್ಷ್ಣೇಯಮಾನಯಾಮಾಸ ಪುರುಷೈರಾಪ್ತಕಾರಿಭಿಃ ॥೧೧॥

ಬೃಹತ್ಸೇನೆಯಾದರೂ ದಮಯಂತಿಯ ಆ ಮಾತುಗಳನ್ನು ಕೇಳಿ ತನ್ನ ಆಪ್ತಪುರುಷರ ಮೂಲಕ ವಾರ್ಷ್ಣೇಯನಾದ ಸೂತನನ್ನು ಕರೆತರಿಸಿದಳು.

ವಾರ್ಷ್ಣೇಯಂ ಚ ತತೋ ಭೈಮೀ ಶಕ್ಷ್ಣಯಾ ಮಧುರಂ ಗಿರಾ ।
ಉವಾಚ ದೇಶಕಾಲಜ್ಞಾ ಪ್ರಾಪ್ತಕಾಲಮನಿಂದಿತಾ ॥೧೨॥

ಅನಂತರ ದೇಶಕಾಲಗಳನ್ನು ತಿಳಿದ ಅನಿಂದಿತಳಾದ ದಮಯಂತಿಯು ತನ್ನ ವಿವೇಕದ ಮಾತುಗಳಿಂದ ಆ ಸೂತನನ್ನು ಕುರಿತು ಆ ಕಾಲಕ್ಕೆ ಯೋಗ್ಯವಾದ ಕರ್ತವ್ಯವನ್ನು ಮಧುರವಾಗಿ ಹೇಳಿದಳು.

ಜಾನೀಷೇ ತ್ವಂ ಯಥಾ ರಾಜಾ ಸಮ್ಯಗ್ವೃತ್ತಃ ಸದಾ ತ್ವಯಿ ।
ತಸ್ಯ ತ್ವಂ ವಿಷಮಸ್ಥಸ್ಯ ಸಾಹಾಯ್ಯಂ ಕರ್ತುಮರ್ಹಸಿ ॥೧೩॥

ರಾಜನು ನಿನ್ನ ವಿಷಯದಲ್ಲಿ ಯಾವಾಗಲೂ ಹೇಗೆ ಚೆನ್ನಾಗಿ ನಡೆದುಕೊಂಡಿದ್ದಾನೆಂದು ನೀನೇ ತಿಳಿದಿರುತ್ತೀಯೆ. ಈಗ ಸಂಕಟದಲ್ಲಿ ಸಿಲುಕಿದ ಅವನಿಗೆ ಸಹಾಯವನ್ನು ಮಾಡಬೇಕು.

ಯಥಾ ಯಥಾ ಹಿ ನೃಪತಿಃ ಪುಷ್ಕರೇಣ ಹಿ ಜೀಯತೇ ।
ತಥಾ ತಥಾಽಸ್ಯ ದ್ಯೂತೇ ವೈ ರಾಗೋ ಭೂಯೋಽಭಿವರ್ಧತೇ ॥೧೪॥

ರಾಜನು ಪುಷ್ಕರನಿಂದ ಸೋತಂತೆ ಸೋತಂತೆ ಅವನಿಗೆ ದ್ಯೂತದ ಅಭಿಲಾಷೆಯು ಇನ್ನೂ ಹೆಚ್ಚಾಗುತ್ತಿದೆ.

ಯಥಾ ಹಿ ಪುಷ್ಕರಸ್ಯಾಕ್ಷಾಃ ವರ್ತಂತೇ ವಶವರ್ತಿನಃ ।
ತಥಾ ವಿಪರ್ಯಯಶ್ಚಾಪಿ ನಳಸ್ಯಾಕ್ಷೇಷು ದೃಶ್ಯತೇ ॥೧೫॥

ಸುಹೃತ್ಸ್ವಜನವಾಕ್ಯಾನಿ ಯಥಾಽಯಂ ನ ಶೃಣೋತಿ ಚ ।
ಮಮಾಪಿ ಚ ತಥಾ ವಾಕ್ಯಂ ನಾಭಿನಂದತಿ ಮೋಹಿತಃ ॥೧೬॥

ಪುಷ್ಕರನಿಗೆ ಹೇಗೆ ದಾಳಗಳು ವಶವರ್ತಿಗಳಾಗಿವೆಯೋ ಹಾಗೆ ನಳನಿಗೆ ದಾಳಗಳ ವಿಷಯದಲ್ಲಿ ಅವು ವಿರುದ್ಧವಾಗಿರುವುದು ಕಂಡುಬರುತ್ತಿವೆ. ಹಿತೈಷಿಗಳ ಮತ್ತು ಸ್ವಜನರ ಹಿತವಾದ ವಾಕ್ಯಗಳನ್ನು ಅವನು ಕೇಳುತ್ತಿಲ್ಲ. ಅವನು ಮೋಹಕ್ಕೆ ಒಳಗಾದವನಾಗಿ ನನ್ನ ಮಾತುಗಳನ್ನೂ ಸ್ವೀಕರಿಸುತ್ತಿಲ್ಲ.

ತಥಾ ಹಿ ರಾಜ್ಞೋಃ ಭಾಗ್ಯಾನಾಂ ದೀಪ್ತಾನಾಮದ್ಯ ಸಾರಥೇ ।
ನೂನಂ ಮನ್ಯೇ ನ ಶೇಷೋಽಸ್ತಿ ನೈಷಧಸ್ಯ ಮಹಾತ್ಮನಃ ॥೧೭॥

ಸಾರಥಿಯೇ ಅದರಂತೆ ಮಹಾತ್ಮನಾದ ನೈಷಧರಾಜನ ಉಜ್ಜ್ವಲವಾದ ಭಾಗ್ಯಗಳಲ್ಲಿ ಇನ್ನು ಏನೂ ಉಳಿದಿಲ್ಲವೆಂದು ಭಾವಿಸುತ್ತೇನೆ.

ತತ್ರ ಮೇ ವಚನಂ ರಾಜಾ ನಾಭಿನಂದತಿ ಮೋಹಿತಃ ।
ಶರಣಂ ತ್ವಾಂ ಪ್ರಪನ್ನಾಽಸ್ಮಿ ಸಾರಥೇ ಕುರುಮೇವಚಃ ।
ನಹಿ ಮೇ ಶುಧ್ಯತೇ ಭಾವೋ ವಿನಾಶಂ ಪ್ರತಿ ಸಾರಥೇ ॥೧೮॥

ಈಗ ನನ್ನ ಮಾತುಗಳನ್ನು ಮೋಹಿತನಾದ ರಾಜನು ಅಭಿನಂದಿಸುತ್ತಿಲ್ಲ. ಸಾರಥಿಯೇ ನಿನಗೆ ಶರಣಾಗತಳಾಗಿದ್ದೇನೆ. ನನ್ನ ಮಾತನ್ನು ನಡೆಸಿಕೊಡು. ಸಾರಥಿಯೇ ವಿನಾಶದ ವಿಷಯದಲ್ಲಿ ನನ್ನ ಮನಸ್ಸಿಗೆ ಶುದ್ಧಿಯೇ ಇಲ್ಲ. (ಇನ್ನೂ ಹೆಚ್ಚು ವಿನಾಶವನ್ನು ಶಂಕಿಸುತ್ತದೆ.)

ನಳಸ್ಯ ದಯಿತಾನಶ್ವಾನ್ ಯೋಜಯಿತ್ವಾ ಮಹಾಜವಾನ್ ।
ರಥಮಾರೋಪ್ಯ ಮಿಥುನಂ ಕುಂಡಿನಂ ಯಾತುರ್ಮಹಸಿ ॥೧೯॥

ನೀನು ನಳನಿಗೆ ಪ್ರಿಯವಾದ ಮಹಾವೇಗವುಳ್ಳ ಅಶ್ವಗಳನ್ನು ರಥಕ್ಕೆ ಹೂಡಿ ನಮ್ಮ ಅವಳಿಮಕ್ಕಳನ್ನು ಕುಂಡಿನ ಪುರಕ್ಕೆ ಕರೆದುಕೊಂಡು ಹೋಗು.

ಮಮ ಜ್ಞಾತಿಷು ನಿಕ್ಷಿಪ್ಯ ದಾರಕೌ ಸ್ಯಂದನಂ ತಥಾ ।
ಅಶ್ವಾಂಶ್ಚೈವ ಯಥಾಕಾಮಂ ವಸ ವಾऽನ್ಯತ್ರ ಗಚ್ಛ ವಾ ॥೨೦॥

ನನ್ನ ತವರುಮನೆಯ ಬಂಧುಗಳಲ್ಲಿ ಮಕ್ಕಳನ್ನು ರಥವನ್ನು ಮತ್ತು ಅಶ್ವಗಳನ್ನು ಇಟ್ಟು ನಿನ್ನ ಮನಸ್ಸಿಗೆ ಬಂದಂತೆ ಅಲ್ಲಿಯೇ ಇರು ಅಥವಾ ಬೇರ ಕಡೆಗೆ ಹೋಗು (ಎಂದು ಹೇಳಿದಳು)

ದಮಯಂತ್ಯಾಸ್ತು ತಚ್ಛ್ರುತ್ವಾ ವಾರ್ಷ್ಣೇಯೋ ನಳಸಾರಥಿಃ ।
ನ್ಯವೇದಯದಶೇಷೇಣ ನಳಾಮಾತ್ಯೇಷು ಮುಖ್ಯಶಃ ॥೨೧॥

ನಳಸಾರಥಿಯಾದ ವಾರ್ಷ್ಣೇಯನು ದಮಯಂತಿಯ ಆ ಮಾತುಗಳನ್ನೂ ಕೇಳಿ ಎಲ್ಲವನ್ನೂ ಅಮಾತ್ಯಮುಖ್ಯರಿಗೆ ತಿಳಿಸಿದನು.

ತೈಃ ಸಮೇತ್ಯ ವಿನಿಶ್ಚಿತ್ಯ ಸೋऽನುಜ್ಞಾತೋ ಮಹೀಪತೇ ।
ಯಯೌ ಮಿಥುನಮಾರೋಪ್ಯ ವಿದರ್ಭಾಂಸ್ತೇನ ವಾಹಿನಾ ॥೨೨॥

ಸೂತನು ಅವರ ಜೊತೆಯಲ್ಲಿ ಸೇರಿ ವಿಷಯವನ್ನು ನಿಶ್ಚಯಿಸಿ ಅವರ ಅನುಜ್ಞೆಯನ್ನು ಪಡೆದು ಅವಳಿಮಕ್ಕಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಆ ರಥದಿಂದ ವಿದರ್ಭದೇಶಕ್ಕೆ ಹೋದನು.

ಹಯಾಂಸ್ತತ್ರ ವಿನಿಕ್ಷಿಪ್ಯ ಸೂತೋ ರಥವರಂ ಚ ತಮ್ ।
ಇಂದ್ರಸೇನಾಂ ಚ ತಾಂ ಕನ್ಯಾಮಿಂದ್ರಸೇನಂ ಚ ಬಾಲಕಮ್ ॥೨೩॥

ಆಮಂತ್ರ್ಯ ಭೀಮಂ ರಾಜಾನಮಾರ್ತಃ ಶೋಚನ್ ನಳಂ ನೃಪಮ್।
ಅಟಮಾನಸ್ತತೋಽಯೋಧ್ಯಾಂ ಜಗಾಮ ನಗರೀಂ ತದಾ ॥೨೪॥

ಸೂತನು ಕುದುರೆಗಳನ್ನೂ ಶ್ರೇಷ್ಠವಾದ ರಥವನ್ನೂ ಕುಮಾರನಾದ ಇಂದ್ರಸೇನನನ್ನೂ ಕುಮಾರಿಯಾದ ಇಂದ್ರಸೇನೆಯನ್ನೂ ಅಲ್ಲಿ ಬಿಟ್ಟು ರಾಜನಾದ ಭೀಮನ ಅನುಮತಿಯನ್ನು ಪಡೆದು ದುಃಖಯುಕ್ತನಾಗಿ ನಳನನ್ನು ಕುರಿತು ಶೋಕಪಡುತ್ತಾ ಅಲ್ಲಿಂದ ಹೊರಟು ಆಗ ಅಯೋಧ್ಯಾನಗರವನ್ನು ಸೇರಿದನು.

ಋತುಪರ್ಣಂ ಸ ರಾಜಾನಮುಪತಸ್ಥೇ ಸುದುಃಖಿತಃ ।
ಭೃತಿಂ ಚ ಸ ದದೌ ಚಾಸ್ಯ ಸಾರಥ್ಯೇನ ನಿಯೋಜಿತಃ ॥೨೫॥

ಬಹಳ ದುಃಖದಿಂದ ಕೂಡಿದ ಸೂತನು ಋತುಪರ್ಣರಾಜನನ್ನು ಸಮೀಪಿಸಿದನು. ಅವನು ಸೂತನನ್ನು ತನ್ನ ಸಾರಥಿಯನ್ನಾಗಿ ಮಾಡಿಕೊಂಡು ಅವನಿಗೆ ವೇತನವನ್ನು ನೀಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೊರನೆಯ ಅಧ್ಯಾಯ

(ನಳದಮಯಂತಿಯರ ವನಗಮನ, ದಿಗಂಬರನಾದ ನಳನಜೊತೆಯಲ್ಲಿ ದಮಯಂತಿಯ ಸಂವಾದ.)

### ಬೃಹದಶ್ವಃ

ತತಸ್ತು ಯಾತೇ ವಾರ್ಷ್ಣೇಯೇ ಪುಣ್ಯಶ್ಲೋಕಸ್ಯ ದೀವ್ಯತಃ ।
ಪುಷ್ಕರೇಣ ಹೃತಂ ರಾಜ್ಯಂ ಯಚ್ಚಾಪಿ ವಸು ಕಿಂಚನ ॥೧॥

ಅನಂತರ ಸೂತನು ಹೊರಟುಹೋದ ಮೇಲೆ ಪುಣ್ಯ ಶ್ಲೋಕನಾದ ನಳನು ಇನ್ನೂ ದ್ಯೂತವಾಡುತ್ತಿರಲು ಪುಷ್ಕರನು ನಳನ ರಾಜ್ಯವನ್ನೂ ಮತ್ತು ಉಳಿದುಳಿದ ಧನವನ್ನೂ ಅಪಹರಿಸಿದನು.

ಹೃತರಾಜ್ಯಂ ನಳಂ ರಾಜನ್ ಪ್ರಹಸನ್ ಪುಷ್ಕರೋಽಬ್ರವೀತ್ ।
ದ್ಯೂತಂ ಪ್ರವರ್ತತಾಂ ಭೂಯಃ ಪ್ರತಿಪಾಣೋಽಸ್ತಿ ಕಸ್ತವ ॥೨॥

ಶಿಷ್ಟಾ ತೇ ದಮಯಂತ್ಯೇಕಾ ಸರ್ವಮನ್ಯದ್ ಹೃತಂ ಮಯಾ ।
ದಮಯಂತ್ಯಾಃ ಪಣಃ ಸಾಧು ವರ್ತತಾಂ ಯದಿ ಮನ್ಯಸೇ ॥೩॥

ರಾಜನೇ ರಾಜ್ಯವನ್ನು ಕಳೆದುಕೊಂಡ ರಾಜನನ್ನು ಕುರಿತು ಪುಷ್ಕರನು ನಗುತ್ತಾ ದ್ಯೂತವು ಪುನಃ ಮುಂದುವರಿಯಲಿ. ಇನ್ನು ನಿನ್ನ ಬಳಿ ಪಣಕ್ಕಿಡುವವಸ್ತು ಯಾವುದು? ದಮಯಂತಿ ಒಬ್ಬಳು ಉಳಿದಿದ್ದಾಳೆ. ಉಳಿದೆಲ್ಲವನ್ನೂ ನಾನು ಗೆದ್ದಿದ್ದೇನೆ. ನಿನ್ನ ಅಭಿಪ್ರಾಯವಿದ್ದರೆ ದಮಯಂತಿಯನ್ನು ಪಣವಾಗಿ ಇಡು ಎಂದು ಹೇಳಿದನು.

ಪುಷ್ಕರೇಣೈವಮುಕ್ತಸ್ಯ ಪುಣ್ಯಶ್ಲೋಕಸ್ಯ ಮನ್ಯುನಾ ।
ವ್ಯದೀರ್ಯತೇವ ಹೃದಯಂ ನ ಚೈನಂ ಕಿಂಚಿದಬ್ರವೀತ್ ॥೪॥

ಪುಷ್ಕರನಿಂದ ಹೀಗೆ ಹೇಳಲ್ಪಟ್ಟ ಪುಣ್ಯಶ್ಲೋಕನಾದ ನಳನ ಹೃದಯವು ಕೋಪದಿಂದ ಬಿರಿಯುವಂತೆ ಕಂಡಿತು. ನಳನು ಪುಷ್ಕರನನ್ನು ಕುರಿತು ಏನೂ ಮಾತನಾಡಲಿಲ್ಲ.

ತತಃ ಪುಷ್ಕರಮಾಲೋಕ್ಯ ನಳಃ ಪರಮಮನ್ಯುಮಾನ್ ।
ಉತ್ತರೀಯಂ ತಥಾ ವಸ್ತ್ರಂ ತಸ್ಯಾಶ್ಚಾಭರಣಾನಿ ಚ ॥೫॥

ಉದ್ಧೃತ್ಯ ಸರ್ವಗಾತ್ರೇಭ್ಯೋ ಭೂಷಣಾನಿ ಮಹಾಯಶಾಃ ।
ಏಕವಾಸಃ ಪರೀಧಾನೋ ಸುಹೃದಾಂ ಶೋಕವರ್ಧನಃ ॥೬॥

ನಿಶ್ಚಕ್ರಾಮ ನಳೋ ರಾಜಾ ತ್ಯಕ್ತ್ವಾ ತು ವಿಪುಲಾಂ ಶ್ರಿಯಮ್ ।
ದಮಯಂತ್ಯೇಕವಸ್ತ್ರಾ ತಂ ಗಚ್ಛಂತಂ ಪೃಷ್ಠತೋಽನ್ವಗಾನ್ ॥೭॥

ಸ ತಯಾ ನಗರಾಭ್ಯಾಶೇ ತ್ರಿರಾತ್ರಂ ನೈಷಧೋಽವಸನ್ ॥೮॥

ಅನಂತರ ಪುಷ್ಕರನನ್ನು ನೋಡಿ ಪರಮಕೋಪವನ್ನು ಹೊಂದಿದ ನಳನು ತನ್ನ ಉತ್ತರೀಯವನ್ನೂ ವಸ್ತ್ರವನ್ನೂ ದಮಯಂತಿಯ ಆಭರಣಗಳನ್ನೂ ಉಳಿದ ಅಲಂಕಾರ

ಸಾಮಾಗ್ರಿಗಳನ್ನೂ ತನ್ನ ದೇಹದ ಎಲ್ಲಾ ಕಡೆಗಳಿಂದಲೂ ತೆಗೆದು ಒಂದೇ ವಸ್ತ್ರವನ್ನು ಉತ್ತರೀಯವನ್ನಾಗಿಯೂ ಮಾಡಿಕೊಂಡು ಅವನ ಪ್ರೀತಿಪಾತ್ರರಿಗೆಲ್ಲಾ ಶೋಕವನ್ನು ಹೆಚ್ಚಿಸುವವನಾಗಿ ವಿಪುಲವಾದ ಸಂಪತ್ತನ್ನು ತೊರೆದು ಮಹಾಕೀರ್ತಿವಂತನಾದ ಅವನು ಪಟ್ಟಣದಿಂದ ಹೊರಗೆ ನಡೆದನು. ಹಾಗೆ ಹೊರಟ ಅವನನ್ನು ಏಕವಸ್ತ್ರವನ್ನು ಉಟ್ಟ ದಮಯಂತಿಯು ಹಿಂಬಾಲಿಸಿದಳು. ನಳನು ಅವಳ ಜೊತೆಯಲ್ಲಿ ನಗರದ ಸಮೀಪದಲ್ಲಿ ಮೂರು ರಾತ್ರಿಗಳನ್ನು ಕಳೆದನು.

ಪುಷ್ಕರಸ್ತು ಮಹಾರಾಜ ಘೋಷಯಾಮಾಸ ವೈ ಪುರೇ ।
ನಳೇ ಯಃ ಸಮ್ಯಗಾತಿಷ್ಠೇತ್ ಸ ಗಚ್ಛೇದ್ ವಧ್ಯತಾಮಿತಿ ॥೯॥

ಮಹಾರಾಜನೇ, ಪುಷ್ಕರನು ನಳನಲ್ಲಿ ಯಾರು ನಿಷ್ಠೆಯನ್ನು ಹೊಂದಿದ್ದಾರೆಯೋ ಅವರನ್ನು ನಾನು ಕೊಲ್ಲುತ್ತೇನೆ ಎಂದು ಪಟ್ಟಣದಲ್ಲಿ ಘೋಷಣೆಯನ್ನು ಮಾಡಿಸಿದನು.

ಪುಷ್ಕರಸ್ಯ ತು ವಾಕ್ಯೇನ ತಸ್ಯ ವಿದ್ವೇಷಣೇನ ಚ ।
ಪೌರಾ ನಾಸ್ಮಿನ್ ಧರ್ಮಕಾರಂ ಕೃತವಂತೋ ಯುಧಿಷ್ಠಿರ ॥೧೦॥

ಯುಧಿಷ್ಠಿರನೇ, ಪುಷ್ಕರನ ವಾಕ್ಯವನ್ನು ಮತ್ತು ಅವನಿಗೆ ನಳನ ಮೇಲೆ ಇದ್ದ ದ್ವೇಷವನ್ನು ಗಮನಿಸಿ ಪೌರರು ಯಾರೂ ನಳನಿಗೆ ಧರ್ಮಯುಕ್ತವಾದ ಸತ್ಕಾರವನ್ನು ಮಾಡಲಿಲ್ಲ.

ಸ ತದಾ ನಗರಾಭ್ಯಾಶೇ ಸತ್ಕಾರಾರ್ಹೋ ನ ಸತ್ಕೃತಃ ।
ತ್ರಿರಾತ್ರಮುಷಿತೋ ರಾಜಾ ಜಲಮಾತ್ರೇಣ ವರ್ತಯನ್ ॥೧೧॥

ಕ್ಷುಧಯಾ ಪೀಡ್ಯಮಾನಸ್ತು ನಳೋ ಬಹುತಿಥೇಽಹನಿ ।
ಅಪಶ್ಯಚ್ಛಕುನಾನ್ ಕಾಂಶ್ಚಿದ್ವಿರಣ್ಯಸದೃಶಚ್ಛದಾನ್ ॥೧೨॥

ಸತ್ಕಾರಾರ್ಹನಾದ ರಾಜನು ನಗರಸಮೀಪದಲ್ಲಿ ಮೂರು ದಿನಗಳು ಇದ್ದು ಸತ್ಕೃತನಾಗದೆ ಹಸಿವಿನಿಂದ ಬಳಲಿ ಕೇವಲ ನೀರನ್ನು ಕುಡಿದು ಮೂರು ರಾತ್ರಿಗಳನ್ನು ಕಳೆದನು. ಅನಂತರ ಎಷ್ಟೋದಿನಗಳಾದ ಮೇಲೆ ಚಿನ್ನದ ರೆಕ್ಕೆಗಳನ್ನು ಹೊಂದಿದ್ದ ಪಕ್ಷಿಗಳನ್ನು ನೋಡಿದನು.

ಸ ಚಿಂತಯಾಮಾಸ ತದಾ ನಿಷಧಾಧಿಪತಿರ್ಬಲೀ ।
ಅಸ್ತಿ ಭಕ್ಷೋ ಮಮಾದ್ಯಾಪಿ ವಸು ಚೇದಂ ಭವಿಷ್ಯತಿ ॥೧೩॥

ನಿಷಧಾಧಿಪತಿಯೂ ಬಲಿಷ್ಠನೂ ಆದ ಆ ರಾಜನು ಈ ದಿನ ನನಗೆ ಭಕ್ಷದ ಯೋಗವಿದೆ. ಈ ಪಕ್ಷಿಗಳ ರೆಕ್ಕೆಯಲ್ಲಿರುವ ಚಿನ್ನವು ನನಗೆ ಧನವೂ ಆಗುವುದು ಎಂದು ಚಿಂತಿಸಿದನು.

ತತಸ್ತಾನುತ್ತರೀಯೇಣ ವಾಸಸಾ ಸಮವಾಸ್ಯಣೋತ್ ।
ತಸ್ಯೋತ್ತರೀಯಮಾದಾಯ ಸರ್ವೇ ಜಗ್ಮುರ್ವಿಹಾಯಸಾ ॥೧೪॥

ಉತ್ಪತಂತಃ ಖಗಾಸ್ತೇ ತು ವಾಕ್ಯಮಾಹುಸ್ತದಾ ನಳಮ್ ।
ದೃಷ್ಟ್ವಾ ದಿಗ್ವಾಸಸಂ ಭೂಮೌ ಸ್ಥಿತಂ ದೀನಮಧೋಮುಖಮ್ ॥೧೫॥

ವಯಮಕ್ಷಾಃ ಸುದುರ್ಬುದ್ಧೇ ತವ ವಾಸೋ ಜಿಹೀರ್ಷವಃ ।
ಆಗತಾ ನ ಹಿ ನಃ ಪ್ರೀತಿಃ ಸವಾಸಸಿ ಗತೇ ತ್ವಯಿ ॥೧೬॥

ಅನಂತರ ಅವನು ತನ್ನ ಏಕವಸ್ತ್ರದಲ್ಲಿ ಉತ್ತರೀಯವಾಗಿ ಮಾಡಿಕೊಂಡಿದ್ದ ಭಾಗವನ್ನು ಆ ಪಕ್ಷಿಗಳ ಮೇಲೆ ಬೀಸಿದನು. ಆ ಪಕ್ಷಿಗಳು ಅವನ ಉತ್ತರೀಯವನ್ನು ಎಳೆದುಕೊಂಡು ಆಕಾಶಮಾರ್ಗದಲ್ಲಿ ಹಾರಿಹೋದವು. ಹಾಗೆ ಹಾರಿಹೋಗುತ್ತಾ ಆ ಪಕ್ಷಿಗಳು ಭೂಮಿಯಲ್ಲಿ ದಿಗಂಬರನಾಗಿ ಮುಖವನ್ನು ಕೆಳಗೆಮಾಡಿ ದೀನನಾಗಿ ನಿಂತ ನಳನನ್ನು ನೋಡಿ ದುರ್ಬುದ್ಧಿಯೇ ನಾವೇ ದಾಳಗಳು. ನಿನ್ನ ವಸ್ತ್ರವನ್ನು ಅಪಹರಿಸುವ ಇಚ್ಛೆಯಿಂದ ಬಂದಿದ್ದೆವು. ನೀನು ವಸ್ತ್ರ ಸಹಿತನಾಗಿ ಕಾಡಿಗೆ ಹೋದರೆ ನಮಗೆ ಸಂತೋಷವಿಲ್ಲ ಎಂದು ಹೇಳಿದವು.

ಬೃಹದಶ್ವಃ

ತಾನ್ ಸಮೀಕ್ಷ್ಯ ಗತಾನಕ್ಷಾನಾತ್ಮಾನಂ ಚ ವಿವಾಸಸಮ್ ।
ಪುಣ್ಯಶ್ಲೋಕಸ್ತದಾ ರಾಜಾ ದಮಯಂತೀಮಥಾಬ್ರವೀತ್ ॥೧೭॥

ಯೇಷಾಂ ಪ್ರಕೋಪಾದ್ದೈಶ್ವರ್ಯಾತ್ ಪ್ರಚ್ಯುತೋಽಹಮನಿಂದಿತೇ ।
ಪ್ರಾಣಯಾತ್ರಾಂ ನ ವಿಂದೇ ಚ ದುಃಖಿತಃ ಕ್ಷುಧಿತೋಽರ್ದಿತಃ ॥೧೮॥

ಯೇಷಾಂ ಕೃತೇ ನ ಸತ್ಕಾರಮಕುರ್ವನ್ ಮಮ ನೈಷಧಾಃ ।
ತ ಇಮೇ ಶಕುನಾ ಭೂತ್ವಾ ವಾಸಶ್ಚಾಪಹರಂತಿ ಮೇ ॥೧೯॥

ಆ ಅಕ್ಷಗಳು ಹಾಗೆ ಹೋದುದನ್ನೂ ತಾನು ದಿಗಂಬರನಾಗಿರುವುದನ್ನೂ ಗಮನಿಸಿದ ಪುಣ್ಯಶ್ಲೋಕನಾದ ರಾಜನು ದಮಯಂತಿಯನ್ನು ಅನಿಂದಿತೆಯೇ, ಯಾರ ಪ್ರಕೋಪದಿಂದ ನಾನು ಐಶ್ವರ್ಯದಿಂದ ಭ್ರಂಶಿತನಾಗಿದ್ದೇನೋ ಮತ್ತು ಹಸಿವಿನಿಂದ ಬಳಲಿ ದುಃಖಿತನಾಗಿ ಜೀವನೋಪಾಯದ ಆಹಾರವನ್ನು ಹೊಂದುತ್ತಿಲ್ಲವೊ ಮತ್ತು ಯಾರಸಲುವಾಗಿ ನನ್ನ ಪ್ರಜೆಗಳು ನನಗೆ ಸತ್ಕಾರವನ್ನು ಮಾಡಲಿಲ್ಲವೋ ಅಂತಹ ಈ ದಾಳಗಳು ಪಕ್ಷಿಗಳಾಗಿ ನನ್ನ ವಸ್ತ್ರವನ್ನು ಅಪಹರಿಸುತ್ತಿವೆ ಎಂದು ಹೇಳಿದನು.

ವೈಷಮ್ಯಂ ಪರಮಂ ಪ್ರಾಪ್ತೋ ದುಃಖಿತೋ ಗತಚೇತನಃ ।
ಭರ್ತಾ ತೇ ಸನ್ನಿಬೋಧೇದಂ ವಚನಂ ಹಿತಮಾತ್ಮನಃ ॥೨೦॥

ನಿನ್ನ ಪತಿಯು ಪರಮವಿಷಮಸ್ಥಿತಿಯನ್ನು ಹೊಂದಿ ದುಃಖಿತನಾಗಿ ಪ್ರಜ್ಞೆಯನ್ನು ಕಳೆದುಕೊಂಡಿದ್ದಾನೆ. ನಿನಗೆ ಹಿತವಾದ ಈ ಮಾತುಗಳನ್ನು ಕೇಳಿ ತಿಳಿ.

ಏತೇ ಗಚ್ಛಂತಿ ಬಹವಃ ಪಂಥಾನೋ ದಕ್ಷಿಣಾಪಥಮ್ ।
ಅವಂತೀಮೃಕ್ಷವಂತಂ ಚ ಸಮತಿಕ್ರಮ್ಯ ಪರ್ವತಮ್ ॥೨೧॥

ಈ ಅನೇಕ ದಾರಿಹೋಕರು ಅವಂತಿದೇಶವನ್ನು ಋಕ್ಷವಂತ ಪರ್ವತವನ್ನು ದಾಟಿ ದಕ್ಷಿಣಾಪಥಕ್ಕೆ ಹೋಗುತ್ತಿದ್ದಾರೆ.

ಏಷ ವಿಂಧ್ಯೋ ಮಹಾಶೈಲಃ ಪಯೋಷ್ಣೀ ಚ ಸಮುದ್ರಗಾ ।
ಆಶ್ರಮಾಶ್ಚ ಮಹರ್ಷೀಣಾಂ ಬಹುಮೂಲಫಲಾನ್ವಿತಾಃ ॥೨೨॥

ಇದು ವಿಂಧ್ಯಮಹಾಪರ್ವತ. ಇದು ಸಮುದ್ರವನ್ನು ಸೇರುವ ಪಯೋಷ್ಣೀನದಿ. ಇವು ಅನೇಕ ಹಣ್ಣು ಮತ್ತು ಗೆಣಸುಗಳಿರುವ ಮಹರ್ಷಿಗಳ ಆಶ್ರಮಗಳು.

ಏಷ ಪಂಥಾ ವಿದರ್ಭಾಣಾಮೇಷ ಗಚ್ಛತಿ ಕೋಸಲಾನ್ ।
ತತಃ ಪರಮದೇಶೋಽಯಂ ದಕ್ಷಿಣೋ ದಕ್ಷಿಣಾಪಥಃ ॥೨೩॥

ಇದು ವಿದರ್ಭಕ್ಕೆ ಹೋಗುವ ಮಾರ್ಗ. ಈ ಮಾರ್ಗವು ಕೋಸಲ ದೇಶಕ್ಕೆ ಹೋಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಇರುವುದು ಪರಮ ಶ್ರೇಷ್ಠವಾದ ದಕ್ಷಿಣಾಪಥ.(ಎಂದು ಹೇಳಿದನು,)

ತತಃ ಸಾ ಬಾಷ್ಪಕಲಯಾ ವಾಚಾ ದುಃಖೇನ ಕರ್ಶಿತಾ ।
ಉವಾಚ ದಮಯಂತೀ ತಂ ನೈಷಧಂ ಕರುಣಂ ವಚಃ ॥೨೪॥

ಆಗ ಆ ದಮಯಂತಿಯು ದುಃಖದಿಂದ ಕರ್ಶಿತಳಾಗಿ ಕಣ್ಣುಗಳಲ್ಲಿ ನೀರುಗಳನ್ನು ತುಂಬಿಕೊಂಡು ನಳನನ್ನು ಕುರಿತು ಕರುಣಾಮಯವಾದ ಮಾತುಗಳನ್ನು ಆಡಿದಳು.

ಉದ್ವೇಪತೇ ಮೇ ಹೃದಯಂ ಸೀದಂತ್ಯಂಗಾನಿ ಸರ್ವಶಃ ।
ತವ ಪಾರ್ಥಿವ ಸಂಕಲ್ಪಂ ಚಿಂತಯಂತ್ಯಾಃ ಪುನಃ ಪುನಃ ॥೨೫॥

ರಾಜನೇ! ನಿನ್ನ ಸಂಕಲ್ಪವನ್ನು ಪುನಃಪುನಃ ಚಿಂತಿಸಿ ನನಗೆ ಹೃದಯವು ನಡುಗುತ್ತಿದೆ. ನನ್ನ ಅವಯವಗಳು ಎಲ್ಲ ಕಡೆಗಳಲ್ಲಿ ಕುಸಿಯುತ್ತಿವೆ.

ಹೃತರಾಜ್ಯಂ ಹೃತದ್ರವ್ಯಂ ವಿವಸ್ತ್ರಂ ಕ್ಷುಚ್ಛ್ರಮಾನ್ವಿತಮ್ ।
ಕಥಮುತ್ಸೃಜ್ಯ ಗಚ್ಛೇಯಮಹಂ ತ್ವಾಂ ವಿಜನೇ ವನೇ ॥೨೬॥

ರಾಜ್ಯವನ್ನು ಕಳೆದುಕೊಂಡು ದ್ರವ್ಯವನ್ನು ಕಳೆದುಕೊಂಡು ವಸ್ತ್ರವನ್ನು ಕಳೆದುಕೊಂಡು ಹಸಿವು ಮತ್ತು ಶ್ರಮದಿಂದ ಕೂಡಿರುವ ನಿನ್ನನ್ನು ನಿರ್ಜನವಾದ ಕಾಡಿನಲ್ಲಿ ಬಿಟ್ಟು ನಾನು ಹೇಗೆ ಹೋಗಲಿ?

ಶ್ರಾಂತಸ್ಯ ತೇ ಕ್ಷುಧಾರ್ತಸ್ಯ ಚಿಂತಯಾನಸ್ಯ ತತ್ಸುಖಮ್ ।
ವನೇ ಘೋರೇ ಮಹಾರಾಜ ಶಮಯಿಷ್ಯಾಮಿ ತೇ ಕ್ಲಮಮ್ ॥೨೭॥

ಹಸಿವೆಯಿಂದ ಬಳಲಿ ದಣಿದು ಹಿಂದಿನ ಸುಖವನ್ನು ಸ್ಮರಿಸುವ ನಿನಗೆ ಎಲೈ ಮಹಾರಾಜನೇ! ನಾನು ಈ ಘೋರವಾದ ವನದಲ್ಲಿ ನಿನ್ನ ಆಯಾಸವನ್ನು ಪರಿಹರಿಸುವೆನು.

ನಚ ಭಾರ್ಯಾಸಮಂ ಕಿಂಚಿದ್ ವಿದ್ಯತೇ ಭೈಷಜಂ ಮತಮ್ ।
ನಿತ್ಯಂ ಹಿ ಸರ್ವದುಃಖೇಷು ಸತ್ಯಮೇತದ್ ಬ್ರವೀಮಿ ತೇ ॥೨೮॥

ಎಲ್ಲ ದುಃಖಿಗಳಲ್ಲಿಯೂ ಭಾರ್ಯೆಗೆ ಸಮಾನವಾದ ಇನ್ನೊಂದು ಔಷಧವಿಲ್ಲವೆಂದು ಎಲ್ಲ ಸಜ್ಜನರಿಗೂ ಅಭಿಪ್ರೇತವಾಗಿದೆ. ಈ ಮಾತು ಸತ್ಯವೆಂದು ನಿನಗೆ ಹೇಳುತ್ತಿದ್ದೇನೆ.

ನಳ

ಏವಮೇತದ್ಯಥಾSSತ್ಥ ತ್ವಂ ದಮಯಂತಿ ಸುಮಧ್ಯಮೇ ।
ನಾಸ್ತಿ ಭಾರ್ಯಾಸಮಂ ಮಿತ್ರಂ ನರಸ್ಯಾರ್ತಸ್ಯ ಭೇಷಜಮ್ ॥೨೯॥

ಸುಮಧ್ಯಮೆಯಾದ ದಮಯಂತಿಯೇ, ನೀನು ಹೇಳುತ್ತಿರುವಂತೆಯೇ ಎಲ್ಲವೂ ಸರಿ. ದುಃಖಿತನಾದ ಮನುಷ್ಯನಿಗೆ ಭಾರ್ಯೆಗೆ ಸಮಾನರಾದ ಮಿತ್ರರೂಪವಾದ ಔಷಧವು ಯಾವುದೂ ಇಲ್ಲ.

ನ ಚಾಹಂ ತ್ಯಕ್ತುಕಾಮಸ್ತ್ವಾಂ ಕಿಮೇತದ್ ಭೀರು ಶಂಕಸೇ ।
ತ್ಯಜೇಯಮಹಮಾತ್ಮಾನಂ ನ ಚೈವ ತ್ವಾಮನಿಂದಿತೇ ॥೩೦॥

ನಾನು ನಿನ್ನನ್ನು ತೊರೆಯುವ ಅಪೇಕ್ಷೆಯುಳ್ಳವನಲ್ಲ. ಭೀರುವೆ ಏಕೆ ಹೀಗೆ ಶಂಕಿಸುತ್ತಿದ್ದೀಯೆ? ನಾನು ನನ್ನನ್ನು ಬೇಕಾದರೂ ತೊರೆಯಬಹುದು ಆದರೆ ಅನಿಂದಿತೆಯೇ ನಿನ್ನನ್ನು ಮಾತ್ರ ತೊರೆಯಲಾರೆ.

ದಮಯಂತೀ

ಯದಿ ಮಾಂ ತ್ವಂ ಮಹಾರಾಜ ನ ವಿಹಾತುಮಿಹೇಚ್ಛಸಿ ।
ತತ್ಕಿಮರ್ಥಂ ವಿದರ್ಭಾಣಾಂ ಪಂಥಾಃ ಸಮುಪದಿಶ್ಯತೇ ॥೩೧॥

ಮಹಾರಾಜನೇ! ನೀನು ನನ್ನನ್ನು ಪರಿತ್ಯಾಗಮಾಡಲು ಬಯಸದಿದ್ದರೆ ವಿದರ್ಭದೇಶದ ಮಾರ್ಗವನ್ನು ಏಕೆ ಉಪದೇಶಮಾಡುತ್ತಿದ್ದೀಯೆ?

ಅವೈಮಿ ಚಾಹಂ ನೃಪತೇ ನತು ಮಾಂ ತ್ಯಕ್ತುಮರ್ಹಸಿ ।
ಚೇತಸಾ ತ್ವಪ್ರಹೃಷ್ಟೇನ ಮಾಂ ತ್ಯಜೇಥಾ ಮಹೀಪತೇ ॥೩೨॥

ರಾಜನೇ ನೀನು ನನ್ನನ್ನು ಪರಿತ್ಯಜಿಸಲಾರೆ ಎಂದು ನಾನು ತಿಳಿದಿದ್ದೇನೆ. ಮಹೀಪತಿಯೇ ದುಃಖಕ್ಕೆ ಒಳಗಾದ ಮನಸ್ಸಿನಿಂದ ನೀನು ನನ್ನನ್ನು ತ್ಯಜಿಸಬಹುದು. (ಎಂದು ಶಂಕಿಸುತ್ತೇನೆ.)

ಪಂಥಾನಂ ಹಿ ಮಮಾಭೀಕ್ಷ್ಣಮಾಖ್ಯಾಸಿ ನರಸತ್ತಮ ।
ಅತೋ ನಿಮಿತ್ತಂ ಶೋಕಂ ಮೇ ವರ್ಧಯಸ್ಯಮರಪ್ರಭ ॥೩೩॥

ಎಲೈ ನರಶ್ರೇಷ್ಠನೇ ನನಗೆ ಸತತವಾಗಿ ನೀನು ದಾರಿಗಳನ್ನು ಹೇಳುತ್ತಿದ್ದೀಯೆ. ದೇವತಾ ಸದೃಶನೇ, ಆ ನಿಮಿತ್ತದಿಂದ ನನ್ನ ದುಃಖವನ್ನು ಹೆಚ್ಚಿಸುತ್ತಿದ್ದೀಯೆ.

ಯದಿ ಚಾಯಮಭಿಪ್ರಾಯಸ್ತವ ರಾಜನ್ ಭವಿಷ್ಯತಿ ।
ಸಹಿತಾವೇವ ಗಚ್ಛಾವೋ ವಿದರ್ಭಾನ್ ಯದಿ ಮನ್ಯಸೇ ॥೩೪॥

ರಾಜನೇ! ನಿನಗೆ ಹೀಗೆ ಅಭಿಪ್ರಾಯವಿರುವುದಾದರೆ ನಿನ್ನ ಸಮ್ಮತಿಯಿದ್ದರೆ ನಾವಿಬ್ಬರೂ ಜೊತೆಯಲ್ಲಿಯೇ ವಿದರ್ಭಕ್ಕೆ ಹೋಗೋಣ.

ತತಃ ಸ ರಾಜಾ ತ್ವಾಂ ದೃಷ್ಟ್ವಾ ಪೂಜಯಿಷ್ಯತಿ ಮಾನದ ।
ತೇನ ತ್ವಂ ಪೂಜಿತೋ ರಾಜನ್ ಸುಖಂ ವತ್ಸ್ಯಸಿ ನೋ ಗೃಹೇ ॥೩೫॥

ಎಲೈ ಮಾನದನೇ! ಅನಂತರ ಆ ರಾಜನು ನಿನ್ನನ್ನು ನೋಡಿ ಪೂಜಿಸುವನು. ರಾಜನೇ! ಅವನಿಂದ ಪೂಜಿತನಾಗಿ ನಮ್ಮ ಮನೆಯಲ್ಲಿ ಸುಖವಾಗಿ ವಾಸಮಾಡುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಪಂಚಾಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ನಾಲ್ಕನೆಯ ಅಧ್ಯಾಯ

(ನಿದ್ರಿಸುತ್ತಿದ್ದ ದಮಯಂತಿಯನ್ನು ಬಿಟ್ಟು ನಳನ ಗಮನ.)

### ಬೃಹದಶ್ವಃ

ಇತ್ಯುಕ್ತಃ ಸ ತದಾ ದೇವ್ಯಾ ನಳೋ ವಚನಮಬ್ರವೀತ್ ॥೧॥

ದಮಯಂತಿಯಿಂದ ಹೀಗೆ ಹೇಳಲ್ಪಟ್ಟ ನಳನು ಆಗ ಅವಳನ್ನು ಕುರಿತು ಮಾತನಾಡಿದನು.

ಯಥಾ ರಾಜ್ಯಂ ಪಿತುಸ್ತೇ ತತ್ ತಥಾ ಮಮ ನ ಸಂಶಯಃ ।
ನತು ತತ್ರ ಗಮಿಷ್ಯಾಮಿ ವಿಷಮಸ್ಥಃ ಕಥಂಚನ ॥೨॥

ಕಥಂ ಸಮೃದ್ಧೋ ಗತ್ವಾಽಹಂ ತವ ಹರ್ಷವಿವರ್ಧನಃ ।
ಕೃಪಣೋಽದ್ಯ ಗಮಿಷ್ಯಾಮಿ ತವ ಶೋಕವಿವರ್ಧನಃ ॥೩॥

ನಿನ್ನ ತಂದೆಯ ರಾಜ್ಯವು ನಿನ್ನ ತಂದೆಗೆ ಹೇಗೆ ಸೇರಿದುದೋ ಹಾಗೆಯೇ ನನಗೂ ಸೇರಿದುದು. ಇದರಲ್ಲಿ ಸಂಶಯವಿಲ್ಲ. ಆದರೆ ಸಂಕಟಕ್ಕೆ ಒಳಗಾದ ನಾನು ಮಾತ್ರ ಅಲ್ಲಿಗೆ ಹೋಗುವುದಿಲ್ಲ. ಐಶ್ವರ್ಯಸಂಪನ್ನನಾಗಿ ನಿನಗೆ ಸಂತೋಷವುಂಟುಮಾಡುವವನಾಗಿ ಹಿಂದೆ ಹೋಗಿದ್ದನಾನು ಈಗ ಕೃಪಣನಾಗಿ ನಿನ್ನ ಶೋಕವನ್ನು ಹೆಚ್ಚಿಸುತ್ತಾ ಹೇಗೆ ಅಲ್ಲಿಗೆ ಹೋಗಲಿ?

ಇತಿ ಬ್ರುವನ್ನಳೋ ರಾಜಾ ದಮಯಂತೀಂ ಪುನಃ ಪುನಃ ।
ಸಾಂತ್ವಯಾಮಾಸ ಕಲ್ಯಾಣೀಂ ವಾಸಸೋಽರ್ಧೇನ ಸಂವೃತಃ ॥೪॥

ಹೀಗೆ ಹೇಳುತ್ತಾ ನಳನು ಅರ್ಧವಸ್ತ್ರದಿಂದ ಆವೃತನಾಗಿ ಪುನಃಪುನಃ ಕಲ್ಯಾಣಿಯಾದ ಆ ದಮಯಂತಿಯನ್ನು ಸಮಾಧಾನಮಾಡಿದನು.

ತಾವೇಕವಸ್ತ್ರಸಂವೀತಾವಟಮಾನಾವಿತಸ್ತತಃ ।
ಕ್ಷುತ್ಪಿಪಾಸಾಪರಿಶ್ರಾಂತೌ ಸಭಾಂ ಕಾಂಚಿದುಪೇಯತುಃ ॥೫॥

ಒಂದೇ ವಸ್ತ್ರವನ್ನು ಇಬ್ಬರೂ ಸುತ್ತಿಕೊಂಡು ಕಾಡಿನಲ್ಲಿ ಅಲ್ಲಿಂದಿಲ್ಲಿಗೆ ಸಂಚರಿಸುತ್ತಾ ಹಸಿವು ಮತ್ತು ನೀರಡಿಕೆಗಳಿಂದ ಬಳಲಿ ಅವರು ಅಲ್ಲಿ ಒಂದು ಮಂಟಪದ ಸಮೀಪಕ್ಕೆ ಬಂದರು.

ತಾಂ ಸಭಾಮುಪಸಂಪ್ರಾಪ್ಯ ವನಮಧ್ಯೇ ಖಿಲೀಕೃತಾಮ್ ।
ವೈದರ್ಭ್ಯಾ ಸಹಿತೋ ರಾಜಾ ನಿಷಸಾದ ಮಹೀತಳೇ ॥೬॥

ಸ ವೈ ವಿವಸ್ತ್ರೋ ವಿಕಚೋ ಮಲಿನಃ ಪಾಂಸುಗುಂಠಿತಃ ।
ದಮಯಂತ್ಯಾ ಸಹ ಶ್ರಾಂತಃ ಸುಷ್ವಾಪ ಧರಣೀತಳೇ ॥೭॥

ದಮಯಂತಿಯಿಂದ ಸಹಿತನಾದ ನಳನು ಕಾಡಿನ ಮಧ್ಯದಲ್ಲಿ ಆ ಮುರಿದ ಮಂಟಪಕ್ಕೆ ಬಂದು ನೆಲದ ಮೇಲೆ ಕುಳಿತುಕೊಂಡನು. ವಿವಸ್ತ್ರನಾಗಿ ತಲೆಯ ಕೂದಲುಗಳನ್ನು ಕೆದರಿಕೊಂಡು ಮೈಯೆಲ್ಲಾ ಕೊಳೆಯಾಗಿ ಧೂಳಿನಿಂದ ಆವೃತನಾಗಿದ್ದ ಅವನು ದಣಿದು ದಮಯಂತಿಯ ಜೊತೆಯಲ್ಲಿ ಭೂಮಿಯ ಮೇಲೆ ಮಲಗಿ ನಿದ್ರಿಸಿದನು.

ದಮಯಂತ್ಯಪಿ ಕಲ್ಯಾಣೀ ನಿದ್ರಯಾऽಪಹೃತಾ ತತಃ ।
ಸಹಸಾ ದುಃಖಮಾಸಾದ್ಯ ಸುಕುಮಾರೀ ತಪಸ್ವಿನೀ ॥೮॥

ಕಲ್ಯಾಣಿಯಾದ ದಮಯಂತಿಯೂ ಸಹ ಸುಕುಮಾರಿಯಾಗಿ ಬೆಳೆದ ಅವಳು ಈಗ ಇದ್ದಕ್ಕಿಂದ್ದಂತೆ ದುಃಖವನ್ನು ಹೊಂದಿ ಶೋಚನೀಯಳಾಗಿ ಅಲ್ಲಿ ನಿದ್ರಾವಶಳಾದಳು.

ಸುಪ್ತಾಯಾಂ ದಮಯಂತ್ಯಾಂ ತು ನಳೋ ರಾಜಾ ವಿಶಾಂಪತೇ ।
ಶೋಕೋನ್ಮಥಿತಚಿತ್ತಃ ಸನ್ ನ ಸ್ಮ ಶೇತೇ ಯಥಾ ಪುರಾ ॥೯॥

ಎಲೈ ರಾಜನೇ ದಮಯಂತಿಯು ನಿದ್ರಿಸಿದ ಮೇಲೆ ನಳರಾಜನು ದುಃಖದಿಂದ ವ್ಯಗ್ರವಾದ ಮನಸ್ಸುಳ್ಳವನಾಗಿ ಮೊದಲಿನಂತೆ ನಿದ್ರೆಯನ್ನು ಮಾಡಲಿಲ್ಲ.

ಸ ತದ್ರಾಜ್ಯಾಪಹರಣಂ ಸುಹೃತ್ತ್ಯಾಗಂ ಚ ಸರ್ವಶಃ ।
ವನೇ ಚ ತಂ ಪರಿಧ್ವಂಸಂ ಪ್ರೇಕ್ಷ್ಯ ಚಿಂತಾಮುಪೇಯಿವಾನ್ ॥೧೦॥

ಅವನು ತನ್ನ ರಾಜ್ಯಾಪಹರಣವನ್ನೂ ಬಂದುತ್ಯಾಗವನ್ನೂ ಎಲ್ಲಾ ಐಶ್ವರ್ಯತ್ಯಾಗವನ್ನೂ ಕಾಡಿನಲ್ಲಿ ಉಂಟಾದ ಈ ವಿನಾಶವನ್ನೂ ನೋಡಿ ಚಿಂತಾಕ್ರಾಂತನಾದನು.

ಕಿಂ ನು ಮೇ ಸ್ಯಾದಿದಂ ಕೃತ್ವಾ ಕಿಂ ನು ಮೇ ಸ್ಯಾದಕುರ್ವತಃ ।
ಕಿಂ ನು ಮೇ ಮರಣಂ ಶ್ರೇಯಃ ಪರಿತ್ಯಾಗೋ ಜನಸ್ಯ ವಾ ॥೧೧॥

ನಾನು ಹೀಗೆ ಮಾಡಿದರೆ ಏನಾಗುತ್ತದೆ ನಾನು ಹೀಗೆ ಮಾಡದಿದ್ದರೆ ಏನಾಗುತ್ತದೆ? ನಾನು ಮರಣ ಹೊಂದುವುದೇ ಒಳ್ಳೆಯದೇ ಅಥವಾ ದಮಯಂತಿಯ ಪರಿತ್ಯಾಗಮಾಡುವುದು ಒಳ್ಳೆಯದೆ?

ಮಾಮಿಯಂ ತ್ವನುರಕ್ತಾ ವೈ ದುಃಖಮಾಪ್ನೋತಿ ಮತ್ಕೃತೇ ।
ಮದ್ವಿಹೀನಾ ತ್ವಿಯಂ ಗಚ್ಛೇತ್ ಕದಾಚಿತ್ ಸ್ವಜನಂ ಪ್ರತಿ ॥೧೨॥

ನನ್ನಲ್ಲಿ ಅನುರಕ್ತಳಾದ ಇವಳು ನನ್ನ ನಿಮಿತ್ತದಿಂದ ದುಃಖವನ್ನು ಅನುಭವಿಸುತ್ತಾಳೆ. ನಾನಿಲ್ಲದಿದ್ದರೆ ಇವಳು ಒಂದುಪಕ್ಷ ತನ್ನ ತವರು ಮನೆಗಾದರೂ ಹೋಗಬಹುದು.

ಮಯಾ ನಿಃಸಂಶಯಂ ದುಃಖಮಿಯಂ ಪ್ರಾಪ್ಸ್ಯತ್ಯನಿಂದಿತಾ ।
ಉತ್ಸರ್ಗೇ ಸಂಶಯಃ ಸ್ಯಾತ್ತು ವಿಂದೇತಾಪಿ ಸುಖಂ ಕ್ವಚಿತ್ ॥೧೩॥

ನನ್ನ ಜೊತೆಯಲ್ಲಿ ಇದ್ದರೆ ಅನಿಂದಿತಳಾದ ಇವಳು ದುಃಖವನ್ನು ಹೊಂದುವ ವಿಷಯದಲ್ಲಿ ಸಂಶಯವಿಲ್ಲ. ನಾನು ಪರಿತ್ಯಾಗವನ್ನು ಮಾಡಿದರೆ ದುಃಖವನ್ನು ಹೊಂದುವುದರಲ್ಲಿ ಸಂಶಯವು ಉಂಟಾಗುತ್ತದೆ. ಒಂದು ಪಕ್ಷದಲ್ಲಿ ಸುಖವನ್ನೂ ಹೊಂದಬಹುದು.

ಸ ವಿನಿಶ್ಚಿತ್ಯ ಬಹುಧಾ ವಿಚಾರ್ಯ ಚ ಪುನಃ ಪುನಃ ।
ಉತ್ಸರ್ಗೇऽಮನ್ಯತ ಶ್ರೇಯೋ ದಮಯಂತ್ಯಾ ನರಾಧಿಪಃ ॥೧೪॥

ಆ ರಾಜನು ಪುನಃಪುನಃ ವಿಚಾರಮಾಡಿ ಒಂದು ನಿಶ್ಚಯಕ್ಕೆ ಬಂದನು. ದಮಯಂತಿಯನ್ನು ಪರಿತ್ಯಾಗಮಾಡುವುದೇ ಶ್ರೇಷ್ಠವೆಂದು ನಿರ್ದರಿಸಿದನು.

ಸೋऽವಸ್ತ್ರತಾಮಾತ್ಮನಶ್ಚ ತಸ್ಯಾಶ್ಚಾಪ್ಯೇಕವಸ್ತ್ರತಾಮ್ ।
ಚಿಂತಯಿತ್ವಾऽಧ್ಯಗಾದ್ ರಾಜಾ ವಸ್ತ್ರಾರ್ಧಸ್ಯಾವಕರ್ತನಮ್ ॥೧೫॥

ಆ ರಾಜನು ತನ್ನ ಶರೀರದ ಮೇಲೆ ವಸ್ತ್ರವಿಲ್ಲದಿರುವುದನ್ನೂ ದಮಯಂತಿಯ ಶರೀರದ ಮೇಲೆ ಒಂದೇ ವಸ್ತ್ರವಿರುವುದನ್ನೂ ನೋಡಿ ವಸ್ತ್ರವನ್ನು ಅರ್ಧಕ್ಕೆ ಕತ್ತರಿಸಲು ನಿಶ್ಚಯಿಸಿದನು.

ಕಥಂ ವಾಸೋऽವಕರ್ತೇಯಂ ನ ಚ ಬುದ್ಧ್ಯೇತ ಮೇ ಪ್ರಿಯಾ ।
ಚಿಂತ್ಯೈವಂ ನೈಷಧೋ ರಾಜಾ ಸಭಾಂ ಪರ್ಯಚರನ್ನೃಪಃ ॥೧೬॥

ನಾನು ವಸ್ತ್ರವನ್ನು ಹೇಗೆ ಕತ್ತರಿಸಲಿ? ನನ್ನ ಪ್ರಿಯೆಯು ಎಚ್ಚರ ಗೊಳ್ಳಬಾರದು ಹೀಗೆ ಚಿಂತಿಸಿ ನೈಷಧರಾಜನು ಆ ಮಂಟಪದಲ್ಲಿ ತಿರುಗಾಡಿದನು.

ಪರಿಧಾವನ್ನಥ ನಳ ಇತಶ್ಚೇತಶ್ಚ ಭಾರತ ।
ಆಸಸಾದ ಸಭೋದ್ದೇಶೇ ವಿಕೋಶಂ ಖಡ್ಗಮುತ್ತಮಮ್ ॥೧೭॥

ಎಲೈ ಭಾರತನೇ! ನಳನು ಆ ಮಂಟಪದಲ್ಲಿ ಅಲ್ಲಿಂದಿಲ್ಲಿಗೆ ತಿರುಗಾಡುತ್ತಾ ಮಂಟಪ ಒಂದು ಎತ್ತರ ಪ್ರದೇಶದಲ್ಲಿ ಒರೆಯಿಂದ ತೆಗೆದ ಒಂದು ಶ್ರೇಷ್ಠವಾದ ಖಡ್ಗವು ಬಿದ್ದಿರುವುದನ್ನು ನೋಡಿದನು.

ತೇನಾರ್ಧಂ ವಾಸಸಶ್ಛಿತ್ತ್ವಾ ನಿವಸ್ಯ ಚ ಪರಂತಪಃ ।
ಸುಪ್ತಾಮುತ್ಸೃಜ್ಯ ವೈದರ್ಭೀಂ ಪ್ರಾದ್ರವದ್ ಗತಚೇತನಃ ॥೧೮॥

ಪರಂತಪನಾದ ರಾಜನು ಆ ಖಡ್ಗದಿಂದ ವಸ್ತ್ರವನ್ನು ಅರ್ಧಕ್ಕೆ ಕತ್ತರಿಸಿ ಅದನ್ನು ತಾನು ಉಟ್ಟುಕೊಂಡು ನಿದ್ರಿಸುತ್ತಿದ್ದ ದಮಯಂತಿಯನ್ನು ಬಿಟ್ಟು ಪ್ರಜ್ಞಾಹೀನನಾಗಿ ಓಡಿದನು.

ತತೋ ನಿಬದ್ಧಹೃದಯಃ ಪುನರಾಗಮ್ಯ ತಾಂ ಸಭಾಮ್ ।
ದಮಯಂತೀಂ ತಥಾ ದೃಷ್ಟ್ವಾ ರುರೋದ ಸ ನರಾಧಿಪಃ ॥೧೯॥

ಅನಂತರ ಅವಳಲ್ಲಿ ನೆಟ್ಟ ಮನಸ್ಸುಳ್ಳವನಾಗಿ ಪುನಃ ಆ ಮಂಟಪಕ್ಕೆ ಬಂದು ನಿದ್ರಿಸುತ್ತಿದ್ದ ದಮಯಂತಿಯನ್ನು ನೋಡಿ ರಾಜನು ರೋದಿಸಿದನು.

ಯಾಂ ನ ವಾಯುರ್ನ ಚಾದಿತ್ಯಃ ಪುರಾ ಪಶ್ಯತಿ ಮೇ ಪ್ರಿಯಾಮ್ ।
ಸೇಯಮದ್ಯ ಸಭಾಮಧ್ಯೇ ಶೇತೇ ಭೂಮಾವನಾಥವತ್ ॥೨೦॥

ಯಾವ ನನ್ನ ಪ್ರಿಯೆಯನ್ನು ವಾಯುವಾಗಲೀ ಆದಿತ್ಯನಾಗಲೀ ಹಿಂದೆ ನೋಡಿರಲಿಲ್ಲವೋ ಅಂತಹ ಇವಳು ಈ ಮಂಟಪದ ಮಧ್ಯದಲ್ಲಿ ನೆಲದ ಮೇಲೆ ಅನಾಥಳಂತೆ ಮಲಗಿದ್ದಾಳೆ.

ಇಯಂ ವಸ್ತ್ರಾವಕರ್ತೇನ ಸಂವೀತಾ ಚಾರುಹಾಸಿನೀ ।
ಉನ್ಮತ್ತೇವ ಮಯಾ ಹೀನಾ ಕಥಂ ಬುದ್ಧ್ವಾ ಭವಿಷ್ಯತಿ ॥೨೧॥

ಅರ್ಧವಸ್ತ್ರದಿಂದ ಆವೃತಳಾದ ಈ ಚಾರುಹಾಸಿನಿಯು ನಾನಿಲ್ಲದೆ ಎಚ್ಚರಗೊಂಡು ಹುಚ್ಚಳಂತೆ ಹೇಗಿರಬಹುದು?

ಕಥಮೇಕಾಕಿನೀ ಭೈಮೀ ಮಯಾ ವಿರಹಿತಾ ಶುಭಾ ।
ಚರಿಷ್ಯತಿ ವನೇ ಘೋರೇ ಮೃಗವ್ಯಾಲಸಮಾಕುಲೇ ॥೨೨॥

ಏಕಾಕಿನಿಯೂ ಭೀಮರಾಜಕುಮಾರಿಯೂ ಶುಭಳೂ ಆದ ಇವಳು ನಾನಿಲ್ಲದೆ ಈ ಘೋರವಾದ ಮೃಗಸರ್ಪಗಳು ತುಂಬಿರುವ ಕಾಡಿನಲ್ಲಿ ಹೇಗೆ ಸಂಚರಿಸುವಳು?

**ಬೃಹದಶ್ವಃ**

ಗತ್ವಾ ಗತ್ವಾ ನಳೋ ರಾಜಾ ಮುಹುರೇತಿ ಸಭಾಂ ಪ್ರತಿ ।
ಆಕೃಷ್ಯಮಾಣಃ ಕಲಿನಾ ಸೌಹೃದೇನಾಪಕೃಷ್ಯತೇ ॥೨೩॥

ರಾಜನಾದ ನಳನು ಪುನಃಪುನಃ ಹೋಗಿ ಪುನಃಪುನಃ ಮಂಟಪಕ್ಕೆ ಹಿಂದಿರುಗಿ ಬರುತ್ತಾನೆ. ಒಂದುಕಡೆ ಕಲಿಯಿಂದ ಮಂಟಪದ ಹೊರಗೆ ಎಳೆಯಲ್ಪಡುತ್ತಾನೆ. ದಮಯಂತಿಯ ಮೇಲಿನ ಪ್ರೀತಿಯಿಂದ ಪುನಃ ಒಳಗೆ ಎಳೆಯಲ್ಪಡುತ್ತಾನೆ.

ದ್ವಿಧೇವ ಹೃದಯಂ ತಸ್ಯ ದುಃಖಿತಸ್ಯಾಭವತ್ ತದಾ ।
ದೋಲೇವ ಮುಹುರಾಯಾತಿ ಯಾತಿ ಚೈವ ಸಭಾಂ ಮುಹುಃ ॥೨೪॥

ದುಃಖಿತನಾದ ಆ ನಳನ ಹೃದಯವು ಆಗ ಎರಡು ಭಾಗವಾದಂತಾಯಿತು. ತೊಟ್ಟಿಲಿನಂತೆ ಅವನು ಆ ಮಂಟಪದ ಹತ್ತಿರ ಬರುತ್ತಾನೆ. ಮತ್ತು ಪುನಃ ದೂರಹೋಗುತ್ತಾನೆ.

ಸೋಽಪಕೃಷ್ಟಸ್ತು ಕಲಿನಾ ಮೋಹಿತಃ ಪ್ರಾದ್ರವನ್ ನಳಃ ।
ಸುಪ್ತಾಮುತ್ಸೃಜ್ಯ ತಾಂ ಭಾರ್ಯಾಂ ವಿಲಪ್ಯ ಕರುಣಂ ಬಹು ॥೨೫॥

ಕೊನೆಗೆ ಕಲಿಯಿಂದ ಎಳೆಯಲ್ಪಟ್ಟ ಆ ನಳನು ಮೋಹಿತನಾಗಿ ಬಹಳ ಕರುಣಾಜನಕವಾಗಿ ವಿಲಾಪವನ್ನು ಮಾಡಿ ನಿದ್ರಿಸುತ್ತಿದ್ದ ತನ್ನ ಪತ್ನಿಯನ್ನು ಬಿಟ್ಟು ಅಲ್ಲಿಂದ ಓಡಿದನು.

ನಷ್ಟಾತ್ಮಾ ಕಲಿನಾऽऽವಿಷ್ಟಃ ತತ್ತದ್ವಿಗಣಯನ್ ಮುಹುಃ ।
ಜಗಾಮೈವ ವನೇ ಶೂನ್ಯೇ ಭಾರ್ಯಾಮುತ್ಸೃಜ್ಯ ದುಃಖಿತಃ ॥೨೬॥

ಕಲಿಯಿಂದ ಆವಿಷ್ಟನಾಗಿ ತನ್ನ ಮನಸ್ಸಿನ ನಿಯಂತ್ರಣವನ್ನೇ ಕಳೆದುಕೊಂಡು ಹಿಂದೆ ನಡೆದ ಘಟನೆಗಳನ್ನು ಮತ್ತೆ ಮತ್ತೆ ಎಣಿಸುತ್ತಾ ದುಃಖದಿಂದ ಕೂಡಿದವನಾಗಿ ನಿರ್ಜನವಾದ ಕಾಡಿನಲ್ಲಿ ತನ್ನ ಭಾರ್ಯೆಯನ್ನು ಬಿಟ್ಟು ಅವನು ಹೊರಟೇ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೈದನೆಯ ಅಧ್ಯಾಯ

(ದಮಯಂತಿಯ ರೋದನ. ಅಜಗರದಿಂದ ಅವಳ ಗ್ರಹಣ. ವ್ಯಾಧನಿಂದ ಮೋಚನ ಮತ್ತು ವ್ಯಾಧನ ಮರಣ.)

### ಬೃಹದಶ್ವಃ

ಅಪಕ್ರಾಂತೇ ನಳೇ ರಾಜನ್ ದಮಯಂತೀ ಗತಕ್ಲಮಾ ।
ಅಬುಧ್ಯತ ವರಾರೋಹಾ ಸಂತ್ರಸ್ತಾ ವಿಜನೇ ವನೇ ॥೧॥

ಎಲೈ ರಾಜನೇ! ನಳನು ಹೊರಟು ಹೋದಮೇಲೆ ಸುಂದರಿಯಾದ ದಮಯಂತಿಯು ಆಯಾಸ ಪರಿಹಾರಗೊಂಡವಳಾಗಿ ಎಚ್ಚರಗೊಂಡು ನಿರ್ಜನವಾದ ವನದಲ್ಲಿ ಹೆದರಿದಳು.

ಭರ್ತಾರಂ ಸಾ ತ್ವಪಶ್ಯಂತೀ ಶೋಕದುಃಖಸಮನ್ವಿತಾ ।
ಪ್ರಾಕ್ರೋಶದುಚ್ಚೈಃ ಸಂತ್ರಸ್ತಾ ಹಾ ರಾಜನ್ನಿತಿ ಭಾರತ ॥೨॥

ಎಲೈ ಭಾರತನೇ! ಅವಳು ತನ್ನ ಪತಿಯನ್ನು ಕಾಣದೆ ದುಃಖಶೋಕಸಮನ್ವಿತಳಾಗಿ ಹೆದರಿಕೆಯಿಂದ ಹಾ ರಾಜನೇ! ಎಂದು ಗಟ್ಟಿಯಾಗಿ ಕಿರುಚಿದಳು.

ಹಾ ನಾಥ ಹಾ ಮಹಾರಾಜ ಹಾ ಸ್ವಾಮಿನ್ ಕಿಂ ಜಹಾಸಿ ಮಾಮ್।
ಹಾ ಹತಾಽಸ್ಮಿ ವಿನಷ್ಟಾಽಸ್ಮಿ ಭೀತಾಽಸ್ಮಿ ವಿಜನೇ ವನೇ ॥೩॥

ಹಾ ನಾಥನೇ, ಹಾ ಮಹಾರಾಜನೇ ಹಾ ಸ್ವಾಮಿಯೇ ಏತಕ್ಕೆ ನನ್ನನ್ನು ಬಿಡುತ್ತಿದ್ದೀಯೆ? ಅಯ್ಯೋ ನಾನು ಸತ್ತೆ. ನಾನು ನಾಶವನ್ನು ಹೊಂದಿದೆ. ಈ ನಿರ್ಜನವಾದ ಅರಣ್ಯದಲ್ಲಿ ಭೀತಳಾಗಿದ್ದೇನೆ.

ನನು ನಾಮ ಮಹಾರಾಜ ಧರ್ಮಜ್ಞ ಇತಿ ವಿಶ್ರುತಃ ।
ಕಥಂ ತಥಾವಿಧಸ್ತ್ವಂ ಹಿ ಸುಪ್ತಾಮುತ್ಸೃಜ್ಯ ಮಾಂ ಗತಃ ॥೪॥

ಎಲೈ ಮಹಾರಾಜನೇ, ನೀನು ಧರ್ಮಜ್ಞನೆಂದು ಪ್ರಖ್ಯಾತನಾಗಿದ್ದೀಯಷ್ಟೆ? ಅಂತಹ ನೀನು ನಿದ್ರಿಸುತ್ತಿದ್ದ ನನ್ನನ್ನು ಬಿಟ್ಟು ಹೇಗೆ ಹೋದೆ?

ಕಥಮುತ್ಸೃಜ್ಯ ಗಂತಾಸಿ ವಶ್ಯಾಂ ಭಾರ್ಯಾಮನುವ್ರತಾಮ್ ।
ವಿಶೇಷತೋ ನಾಪಕೃತಃ ಪರೇಣಾಪಕೃತೇ ಸತಿ ॥೫॥

ನನ್ನಿಂದ ನಿನಗೆ ಯಾವ ಅಪಕಾರವೂ ಇಲ್ಲದೆ ಬೇರೆಯವರಿಂದ ಅಪಕೃತನಾದ ನೀನು ನಿನಗೆ ಅಧೀನಳೂ ನೀನು ಹೇಳಿದಂತೆ ನಡೆಯುವವಳೂ ಆದ ಪತ್ನಿಯಾದ ನನ್ನನ್ನು ತೊರೆದು ಹೇಗೆ ಹೋದೆ?

ವದಸ್ವ ತಾ ಗಿರಃ ಸತ್ಯಾಃ ಸಾಂಪ್ರತಂ ಚ ಮಯಾ ಸಹ ।
ಶಕ್ಷ್ಯಸೇ ತಾ ಗಿರಃ ಸತ್ಯಾಃ ಕರ್ತುಂ ಮಯಿ ನರೇಶ್ವರ ।
ಯಾಸ್ತ್ವಯಾ ಲೋಕಪಾಲಾನಾಂ ಸನ್ನಿಧೌ ಕಥಿತಾಃ ಪುರಾ ॥೬॥

ಎಲೈ ನರೇಶ್ವರನೇ ನೀನು ಹಿಂದೆ ಲೋಕಪಾಲಕರ ಸನ್ನಿಧಿಯಲ್ಲಿ ಯಾವ ಮಾತುಗಳನ್ನು ಆಡಿದ್ದೀಯೋ ಆ ಮಾತುಗಳನ್ನು ನನ್ನ ಜೊತೆಯಲ್ಲಿ ಇನ್ನೊಮ್ಮೆ ಆಡು. ನರೇಶ್ವರನೇ, ನನ್ನ ವಿಷಯದಲ್ಲಿ ಆಡಿದ ನಿನ್ನ ಮಾತುಗಳನ್ನು ಸತ್ಯವನ್ನಾಗಿ ಮಾಡಲು ನೀನು ಸಮರ್ಥನಾಗಿದ್ದೀಯೆ.

ಪರ್ಯಾಪ್ತಃ ಪರಿಹಾಸೋಽಯಮೇತಾವಾನ್ ಪುರುಷರ್ಷಭ ।
ಭೀತಾಽಹಮಸ್ಮಿ ದುರ್ಧರ್ಷ ದರ್ಶಯಾತ್ಮಾನಮೀಶ್ವರ ॥೭॥

ಪುರುಷಶ್ರೇಷ್ಠನೇ, ಇಷ್ಟು ವಿನೋದವು ಸಾಕು. ನಾನು ಹೆದರಿದ್ದೇನೆ. ಎಲೈ ದುರ್ಧರ್ಷನೇ ಪ್ರಭುವೇ ನಿನ್ನನ್ನು ನನಗೆ ತೋರಿಸು.

ದೃಶ್ಯಸೇ ದೃಶ್ಯಸೇ ರಾಜನ್ ಏಷ ತಿಷ್ಠಸಿ ನೈಷಧ ।
ಆವಾರ್ಯ ಗುಲ್ಮೈರಾತ್ಮಾನಂ ಕಿಂ ಮಾಂ ನ ಪ್ರತಿಭಾಷಸೇ ॥೮॥

ಎಲೈ ರಾಜನೇ, ಕಾಣುತ್ತಿದ್ದೀಯೆ ಕಾಣುತ್ತಿದ್ದೀಯೆ ನೈಷಧನೇ, ಲತೆಗಳಿಂದ ನಿನ್ನನ್ನು ಮುಚ್ಚಿಕೊಂಡು ಇಲ್ಲಿಯೇ ನಿಂತಿದ್ದೀಯೆ. ನನಗೆ ಏಕೆ ಉತ್ತರವನ್ನು ಕೊಡುವುದಿಲ್ಲ?

ನೃಶಂಸಂ ಬತ ರಾಜೇಂದ್ರ ಯನ್ಮಾಮೇವಂಗತಾಮಿಹ ।
ವಿಲಪಂತೀಂ ಸಮಾಲಿಂಗ್ಯ ನಾಶ್ವಾಸಯಸಿ ಪಾರ್ಥಿವ ॥೯॥

ಎಲೈ ರಾಜೇಂದ್ರನೇ ಇಂತಹ ದುರವಸ್ಥೆಗೆ ತುತ್ತಾಗಿ ವಿಲಾಪಮಾಡುತ್ತಿರುವ ನನ್ನನ್ನು ಆಲಿಂಗಿಸಿ ಸಮಾಧಾನ ಪಡಿಸದೆ ಇರುವುದು ಬಹಳ ಕ್ರೂರವಾದುದು.

ನ ಶೋಚಾಮ್ಯಹಮಾತ್ಮಾನಂ ನ ಚಾನ್ಯದಪಿ ಕಿಂಚನ ।
ಕಥಂ ನು ಭವಿತಾಸ್ಯೇಕ ಇತಿ ತ್ವಾಂ ನೃಪ ಶೋಚಯೇ ॥೧೦॥

ಎಲೈ ರಾಜನೇ ನನ್ನ ವಿಷಯದಲ್ಲಿ ನಾನು ಏನೂ ಶೋಕಪಡುತ್ತಿಲ್ಲ. ಅಥವಾ ಬೇರೆ ಚಿಂತೆಯೂ ಇಲ್ಲ. ನನ್ನನ್ನು ಬಿಟ್ಟು ನೀನು ಒಬ್ಬನೇ ಹೇಗೆ ಇರುತ್ತೀಯೆ ಎಂದು ನಿನ್ನನ್ನೇ ಕುರಿತು ಶೋಕಿಸುತ್ತಿದ್ದೇನೆ.

ಕಥಂ ನು ರಾಜಂಸ್ತೃಷಿತಃ ಕ್ಷುಧಿತಃ ಶ್ರಮಕರ್ಶಿತಃ ।
ಸಾಯಾಹ್ನೇ ವೃಕ್ಷಮೂಲೇಷು ಮಾಮಪಶ್ಯನ್ ನಿವತ್ಸ್ಯಸಿ ॥೧೧॥

ರಾಜನೇ ಹಸಿದು ನೀರಡಿಕೆಯಿಂದಲೂ ಬಳಲಿಕೆಯಿಂದಲೂ ಶ್ರಮದಿಂದಲೂ ಬಳಲಿ ಸಾಯಂಕಾಲದಲ್ಲಿ ನನ್ನನ್ನು ಕಾಣದೆ ನೀನು ಒಂದು ವೃಕ್ಷ ಮೂಲದಲ್ಲಿ ಕುಳಿತು ಹೇಗೆ ವಾಸಿಸುವಿ?

ಬೃಹದಶ್ವಃ

ಏವಂ ಸಾऽತೀವಶೋಕಾರ್ತಾ ಪ್ರದೀಪ್ತೇವ ಚ ಮನ್ಯುನಾ ।
ಇತಶ್ಚೇತಶ್ಚ ರುದತೀ ಪರ್ಯಧಾವತ ದುಃಖಿತಾ ॥೧೨॥

ಹೀಗೆ ಬಹಳ ಶೋಕಕ್ಕೆ ಒಳಗಾಗಿ ಸಿಟ್ಟಿನಿಂದ ಉರಿಯುತ್ತಿರುವಂತೆ ದುಃಖಿತಳಾದ ದಮಯಂತಿಯು ಅಳುತ್ತಾ ಅಲ್ಲಿಂದಿಲ್ಲಿಗೆ ಓಡಿದಳು.

ಮುಹುರುತ್ಪತತೇ ಬಾಲಾ ಮುಹುಃ ಪತತಿ ವಿಹ್ವಲಾ ।
ಮುಹುರಾಲೀಯತೇ ಭೀತಾ ಮುಹುಃ ಕ್ರೋಶತಿ ರೋದಿತಿ ॥೧೩॥

ಬಾಲೆಯು ಮತ್ತೆ ಏಳುತ್ತಾಳೆ. ದುಃಖದಿಂದ ವಿಹ್ವಲಳಾಗಿ ಮತ್ತೆ ಬೀಳುತ್ತಾಳೆ. ಭಯದಿಂದ ಮತ್ತೆ ಅಡಗಿಕೊಳ್ಳುತ್ತಾಳೆ ಮತ್ತು ಮತ್ತೆ ಮತ್ತೆ ಕಿರುಚುತ್ತಾಳೆ ಮತ್ತು ಅಳುತ್ತಾಳೆ.

ಸಾऽತೀವ ಶೋಕಸಂತಪ್ತಾ ಮುಹುರ್ನಿಶ್ವಸ್ಯ ವಿಹ್ವಲಾ ।
ಉವಾಚ ಭೈಮೀ ನಿಷ್ಕಮ್ಯ ರೋದಮಾನಾ ಪತಿವ್ರತಾ ॥೧೪॥

ಬಹಳ ಶೋಕಸಂತಪ್ತಳಾದ ಪತಿವ್ರತೆಯಾದ ಆ ದಮಯಂತಿಯು ದುಃಖದಿಂದ ವಿಹ್ವಲಳಾಗಿ ಮತ್ತೆ ಮತ್ತೆ ನಿಟ್ಟುಸಿರನ್ನು ಬಿಡುತ್ತಾ ಆ ಮಂಟಪದಿಂದ ಹೊರಗೆ ಬಂದು ಅಳುತ್ತಾ ಮಾತನಾಡಿದಳು.

ಯಸ್ಯಾಭಿಶಾಪಾದ್ ದುಃಖಾರ್ತೋ ದುಃಖಂ ವಿಂದತಿ ನೈಷಧಃ ।
ತಸ್ಯ ಭೂತಸ್ಯತದ್ದುಃಖಾದ್ ದುಃಖಮಭ್ಯಧಿಕಂ ಭವೇತ್ ॥೧೫॥

ಅಪಾಪಚೇತಸಂ ಪಾಪೋ ಯ ಏವಂ ಕೃತವಾನ್ ನಳಮ್ ।
ತಸ್ಮಾದ್ ದುಃಖತರಂ ಪ್ರಾಪ್ಯ ಜೀವತ್ವಸುಖಜೀವಿಕಾಮ್ ॥೧೬॥

ಯಾರ ಅಭಿಶಾಪದಿಂದ ನಳನು ದುಃಖಾರ್ತನಾಗಿ ಇಷ್ಟು ದುಃಖವನ್ನು ಅನುಭವಿಸುತ್ತಿದ್ದಾನೋ ಆ ವ್ಯಕ್ತಿಗೆ ನಳನ ದುಃಖಕ್ಕಿಂತ ಅಧಿಕವಾದ ದುಃಖವಾಗಲಿ. ಪಾಪಬುದ್ಧಿಯಿಲ್ಲದ ನಳನನ್ನು ಯಾವ ಪಾಪಿಯು ಇಂತಹ ದುರವಸ್ಥೆಗೆ ತಂದನೋ ಅವನು ಇದಕ್ಕಿಂತ ಹೆಚ್ಚಿನ ದುಃಖವನ್ನು ಹೊಂದಿ ದುಃಖಜೀವನವನ್ನು ನಡೆಸಲಿ.

ಏವಂ ತು ವಿಲಪಂತೀ ಸಾ ರಾಜ್ಞೋ ಭಾರ್ಯಾ ಮಹಾತ್ಮನಃ ।
ಅನ್ವೇಷತಿ ಸ್ಮ ಭರ್ತಾರಂ ವನೇ ಶ್ವಾಪದಸೇವಿತೇ ॥೧೭॥

ಹೀಗೆ ವಿಲಾಪವನ್ನು ಮಾಡುತ್ತಾ ಮಹಾತ್ಮನಾದ ನಳಮಹಾರಾಜನ ಭಾರ್ಯೆಯಾದ ದಮಯಂತಿಯು ಕ್ರೂರಮೃಗಗಳಿಂದ ಸೇವಿತವಾದ ಆ ಕಾಡಿನಲ್ಲಿ ತನ್ನ ಪತಿಯನ್ನು ಹುಡುಕಿದಳು.

ಉನ್ಮತ್ತವದ್ ಭೀಮಸುತಾ ವಿಲಪಂತೀ ತತಸ್ತತಃ ।
ಹಾಹಾ ರಾಜನ್ನಿತಿ ಮುಹುರಿತಶ್ಚೇತಶ್ಚ ಧಾವತಿ ॥೧೮॥

ಭೀಮಸುತೆಯಾದ ದಮಯಂತಿಯು ಹುಚ್ಚಿಯಂತೆ ಮಾತನಾಡುತ್ತಾ ಅಯ್ಯೋ ರಾಜನೇ ಎಂದು ಮತ್ತೆ ಮತ್ತೆ ಕಿರುಚುತ್ತಾ ಇಲ್ಲಿಂದಲ್ಲಿಗೆ ಓಡಾಡಿದಳು.

ಸಂಶುಷ್ಯಮಾಣಾಮತ್ಯರ್ಥಂ ಕುರರೀಮಿವ ವಾಶತೀಮ್ ।
ಕರುಣಂ ಬಹು ಶೋಚಂತೀಂ ವಿಲಪಂತೀಂ ಸುಮಧ್ಯಮಾಮ್ ॥೧೯॥

ಸಹಸೈವಾನವದ್ಯಾಂಗೀಮಭ್ಯಾಶೇ ಪರಿವರ್ತಿನೀಮ್ ।
ಜಗ್ರಾಹಾಜಗರೋ ಗ್ರಾಹೋ ಮಹಾಕಾಯಃ ಕ್ಷುಧಾऽನ್ವಿತಃ ॥೨೦॥

ಹೀಗೆ ಒಣಗಿ ಹೋಗುತ್ತಿದ್ದ ಮತ್ತು ಕುರರಿಯಂತೆ ಕಿರುಚುತ್ತಿದ್ದ ಕರುಣಾಜನಕವಾಗಿ ಬಹಳವಾಗಿ ಶೋಕಪಡುತ್ತಿದ್ದ ಬಾಯಿಂದ ಬಹಳ ಮಾತನಾಡುತ್ತಿದ್ದ ತನ್ನ ಸಮೀಪದಲ್ಲೇ ಇದ್ದ ಅನವದ್ಯಾಂಗಿಯಾದ ಆ ಸುಂದರಿಯನ್ನು ದೊಡ್ಡ ಶರೀರವನ್ನು ಹೊಂದಿದ್ದ ಒಂದು ಅಜಗರವು ಹಸಿವೆಯಿಂದ ಕೂಡಿದುದಾಗಿ ಇದ್ದಕ್ಕಿದ್ದಂತೆ ಹಿಡಿಯಿತು.

ಸಾ ಗೃಹ್ಯಮಾಣಾ ಗ್ರಾಹೇಣ ಶೋಕೇನ ಚ ಪರಾಜಿತಾ ।
ನಾತ್ಮಾನಂ ಶೋಚತಿ ತಥಾ ಯಥಾ ಶೋಚತಿ ನೈಷಧಮ್ ॥೨೧॥

ಶೋಕದಿಂದ ಪರಾಜಿತಳಾಗಿ ಹೆಬ್ಬಾವಿನಿಂದ ಹಿಡಿಯಲ್ಪಟ್ಟಿದ್ದರೂ ದಮಯಂತಿಯು ನಳನನ್ನು ಕುರಿತು ಶೋಕಪಟ್ಟಳೇ ಹೊರತು ತನ್ನನ್ನು ಕುರಿತು ಹಾಗೆ ಶೋಕವನ್ನು ಪಡಲಿಲ್ಲ.

ಹಾ ನಾಥ ಮಾಮಿಹ ವನೇ ಗೃಹ್ಯಮಾಣಾಮನಾಗಸೀಮ್ ।
ಗ್ರಾಹೇಣಾನೇನ ವಿಪಿನೇ ಕಿಮರ್ಥಂ ನಾಭಿಧಾವಸಿ ॥೨೨॥

ಅಯ್ಯೋ ಸ್ವಾಮಿಯೇ ಈ ಕಾಡಿನಲ್ಲಿ ನಿರಪರಾಧಿಯಾಗಿ ನನ್ನನ್ನು ಈ ಅಜಗರವು ಹಿಡಿಯುತ್ತಿರುವಾಗ ನೀನು ಏಕೆ ನನ್ನ ರಕ್ಷಣೆಗೆ ಓಡಿಬರುತ್ತಿಲ್ಲ?

ಕಥಂ ಭವಾನ್ ಜಗಾಮಾಥ ಮಾಮಿಹೋತ್ಸೃಜ್ಯ ನೈಷಧ ।
ಕಥಂ ಭವಿಷ್ಯಸಿ ಪುನರ್ಮಾಮನುಸ್ಮೃತ್ಯ ನೈಷಧ ।
ಶಾಪಾನ್ಮುಕ್ತಃ ಪುನರ್ಲಬ್ಧ್ವಾ ಬುದ್ಧಿಂ ಚೇತೋ ಧನಾನಿ ಚ ॥೨೩॥

ನೈಷಧನೇ ನನ್ನನ್ನು ಇಲ್ಲಿ ತೊರೆದು ನೀನು ಹೇಗೆ ಹೊರಟುಹೋದೆ? ನೀನು ಶಾಪದಿಂದ ಮುಕ್ತನಾಗಿ ಪುನಃ ನಿನ್ನ ಪ್ರಜ್ಞೆಯನ್ನು ಮನಸ್ಸನ್ನು ಮತ್ತು ಸಂಪತ್ತನ್ನು ಪಡೆದ ಮೇಲೆ ನನ್ನನ್ನು ಸ್ಮರಿಸಿ ಹೇಗೆ ಇರುತ್ತೀಯೆ?

ಶ್ರಾಂತಸ್ಯ ತೇ ಕ್ಷುಧಾರ್ತಸ್ಯ ಪರಿಗ್ಲಾನಸ್ಯ ನೈಷಧ ।
ಕಾ ಶ್ರಮಂ ರಾಜಶಾರ್ದೂಲ ನಾಶಯಿಷ್ಯತಿ ತೇಽನಘ ॥೨೪॥

ಎಲೈ ನೈಷಧನೇ ಹಸಿವೆಯಿಂದ ಬಳಲಿ ಸೊರಗಿದ ನಿನಗೆ ಎಲೈ ರಾಜಶಾರ್ದೂಲನೇ ಎಲೈ ಅನಘನೇ ಯಾವಳು ನಿನ್ನ ಶ್ರಮವನ್ನು ಪರಿಹಾರಮಾಡುತ್ತಾಳೆ?

ತಾಮಕಸ್ಮಾನ್ಮೃಗವ್ಯಾಧೋ ವಿಚರನ್ ಗಹನೇ ವನೇ ।
ಆಕ್ರಂದತೀಮುಪಶ್ರುತ್ಯ ಜವೇನಾಭಿಸಸಾರ ಹ ॥೨೫॥

ಆ ದಟ್ಟವಾದ ಕಾಡಿನಲ್ಲಿ ಆಕಸ್ಮಿಕವಾಗಿ ಸಂಚರಿಸುತ್ತಿದ್ದ ಒಬ್ಬ ಮೃಗವ್ಯಾಧನು ಹೀಗೆ ಗೋಳಾಡುತ್ತಿದ್ದ ದಮಯಂತಿಯ ಮಾತುಗಳನ್ನು ಕೇಳಿ ಶೀಘ್ರವಾಗಿ ಅವಳ ಬಳಿಗೆ ಬಂದನು.

ತಾಂ ಸ ದೃಷ್ಟ್ವಾ ತಥಾ ಗ್ರಸ್ತಾಮುರಗೇಣಾಯತೇಕ್ಷಣಾಮ್ ।
ತ್ವರಮಾಣೋ ಮೃಗವ್ಯಾಧಃ ಸಂಚರನ್ ಗಹನೇ ವನೇ ॥೨೬॥

ಸಮತಿಕ್ರಮ್ಯ ವೇಗೇನ ಸತ್ವರಃ ಸ ವನೇಚರಃ ।
ಮುಖಿತಃ ಪಾಟಯಾಮಾಸ ಶಸ್ತ್ರೇಣ ನಿಶಿತೇನ ಚ ॥೨೭॥

ಆ ವಿಶಾಲನೇತ್ರೆಯು ಹಾಗೆ ಸರ್ಪದಿಂದ ಹಿಡಿಯಲ್ಪಟ್ಟಿದ್ದನ್ನು ನೋಡಿದ ಆ ಮೃಗವ್ಯಾಧನು ಆ ದಟ್ಟವಾದ ಅರಣ್ಯದಲ್ಲಿ ಶೀಘ್ರವಾಗಿ ಆ ಸರ್ಪವನ್ನು ಮೆಟ್ಟಿ ತನ್ನ ಬಳಿಯಲ್ಲಿದ್ದ ಹರಿತವಾದ ಶಸ್ತ್ರದಿಂದ ಅದರ ಬಾಯಿಯನ್ನು ಸೀಳಿದನು.

ನಿರ್ವಿಚೇಷ್ಟಂ ಭುಜಂಗಂ ತಂ ವಿಶಸ್ಯ ಮೃಗಜೀವಿಕಃ ।
ಮೋಕ್ಷಯಿತ್ವಾ ಚ ತಾಂ ವ್ಯಾಧಃ ಪ್ರಕ್ಷಾಲ್ಯ ಸಲಿಲೇನ ಚ ।
ಸಮಾಶ್ವಾಸ್ಯ ಕೃತಾಹಾರಾಮಥ ಪಪ್ರಚ್ಛ ಭಾರತ ॥೨೮॥

ಎಲೈ ಭಾರತನೇ ಆ ಮೃಗಜೀವನವನ್ನು ಮಾಡುವ ವ್ಯಾಧನು ಆ ಸರ್ಪವನ್ನು ಸೀಳಿಹಾಕಿ ನಿಷ್ಕ್ರಿಯವನ್ನಾಗಿ ಮಾಡಿ ದಮಯಂತಿಯನ್ನು ಬಿಡಿಸಿ ತಾನು ನೀರಿನಿಂದ ತೊಳೆದುಕೊಂಡು ದಮಯಂತಿಗೆ ಸಮಾಧಾನವನ್ನು ಮಾಡಿ ಅವಳು ಸ್ವಲ್ಪ ಆಹಾರವನ್ನು ಸ್ವೀಕರಿಸಿದ ಮೇಲೆ ಅವಳನ್ನು ಕೇಳಿದನು.

ಕಸ್ಯ ತ್ವಂ ಮೃಗಶಾವಾಕ್ಷಿ ಕಥಂ ಚಾಸ್ಯಾಗತಾ ವನಮ್ ।
ಕಥಂ ಚೇದಂ ಮಹತ್ ಕೃಚ್ಛ್ರಂ ಪ್ರಾಪ್ತವತ್ಯಸಿ ಭಾಮಿನಿ ॥೨೯॥

ಎಲೌ ಹರಿಣಾಕ್ಷಿಯೇ ನೀನು ಯಾರಿಗೆ ಸೇರಿದವಳು? ಈ ಕಾಡಿಗೆ ಹೇಗೆ ಬಂದೆ? ಭಾಮಿನಿಯೇ ನಿನಗೆ ಇಂತಹ ದೊಡ್ಡ ಕಷ್ಟವು ಹೇಗೆ ಪ್ರಾಪ್ತವಾಯಿತು?

ಬೃಹದಶ್ವಃ

ದಮಯಂತೀ ತಥಾ ತೇನ ಪೃಚ್ಛ್ಯಮಾನಾ ವಿಶಾಂಪತೇ ।
ಸರ್ವಮೇತದ್ಯಥಾವೃತ್ತಮಾಚಚಕ್ಷೇಽಸ್ಯ ಭಾರತ ॥೩೦॥

ಎಲೈ ರಾಜನೇ ಭಾರತನೇ ಹಾಗೆ ಅವನಿಂದ ಕೇಳಲ್ಪಟ್ಟ ದಮಯಂತಿಯು ಅವನಿಗೆ ಎಲ್ಲಾವೃತ್ತಾಂತವನ್ನೂ ಯಥಾರ್ಥವಾಗಿ ಹೇಳಿದಳು.

ತಾಮರ್ಧವಸ್ತ್ರಸಂವೀತಾಂ ಪೀನಶ್ರೋಣಿಪಯೋಧರಾಮ್ ।
ಸುಕುಮಾರಾನವದ್ಯಾಂಗೀಂ ಪೂರ್ಣಚಂದ್ರನಿಭಾನನಾಮ್ ॥೩೧॥

ಮೃಣಾಳಪತ್ರನಯನಾಂ ತಥಾ ಮಧುರಭಾಷಿಣೀಮ್ ।
ಲಕ್ಷಯಿತ್ವಾ ಮೃಗವ್ಯಾಧಃ ಕಾಮಸ್ಯ ವಶಮೇಯಿವಾನ್ ॥೩೨॥

ಅರ್ಧವಸ್ತ್ರವನನ್ನು ಸುತ್ತಿಕೊಂಡಿದ್ದ ಪೀನವಾದ ನಿತಂಬ ಮತ್ತು ಸ್ತನಗಳನ್ನು ಹೊಂದಿದ್ದ ಸುಕುಮಾರವಾದ ಮತ್ತು ನಿರ್ದುಷ್ಟವಾದ ಅವಯವಗಳನ್ನು ಹೊಂದಿದ್ದ ಪೂರ್ಣಚಂದ್ರನಂತೆ ಮುಖವನ್ನು ಹೊಂದಿದ್ದ ಕಮಲಪತ್ರದಂತೆ ಆಯತ

ಲೋಚನೆಯಾದ ಮಧುರಭಾಷಿಣಿಯಾದ ಅವಳನ್ನು ಗಮನಿಸಿ ಮೃಗವ್ಯಾಧನು ಕಾಮವಶನಾದನು.

ತಾಮಥ ಶ್ಲಕ್ಷ್ಣಯಾ ವಾಚಾ ಲುಬ್ಧಕೋ ಮೃದುಪೂರ್ವಯಾ ।
ಸಾಂತ್ವಯಾಮಾಸ ಕಾಮಾರ್ತಃ ತದಬುಧ್ಯತ ಭಾಮಿನೀ ॥೩೩॥

ಆನಂತರ ಆ ಬೇಡನು ಕಾಮಾರ್ತನಾಗಿ ಮೃದುಪೂರ್ವವಾದ ಮಧುರಮಾತುಗಳಿಂದ ಅವಳನ್ನು ಸಮಾಧಾನಗೊಳಿಸಿದನು. ದಮಯಂತಿಯು ಅವನ ಇಂಗಿತವನ್ನು ತಿಳಿದಳು.

ದಮಯಂತೀ ಚ ತಂ ದುಷ್ಟಂ ವಿಜ್ಞಾಯಾಥ ಪತಿವ್ರತಾ ।
ತೀವ್ರರೋಷಸಮಾವಿಷ್ಟಾ ಪ್ರಜಜ್ವಾಲೇವ ಮನ್ಯುನಾ ॥೩೪॥

ಪತಿವ್ರತೆಯಾದ ದಮಯಂತಿಯು ಅವನನ್ನು ದುಷ್ಟನೆಂದು ತಿಳಿದು ಆಗ ತೀವ್ರಕೋಪದಿಂದ ಕೂಡಿದವಳಾಗಿ ಸಿಟ್ಟಿನಿಂದ ಉರಿದಳು.

ಸ ತು ಪಾಪಮತಿಃ ಕ್ಷುದ್ರಃ ಪ್ರಧರ್ಷಯಿತುಮಾತುರಃ ।
ದುರ್ಧರ್ಷಾಂ ತರ್ಕಯಾಮಾಸ ದೀಪ್ತಾಮಗ್ನಿಶಿಖಾಮಿವ ॥೩೫॥

ಪಾಪಮತಿಯೂ ಕ್ಷುದ್ರಮತಿಯೂ ಆದ ಆ ವ್ಯಾಧನು ಅವಳ ಮೇಲೆ ಎರಗಲು ಆತುರನಾಗಿದ್ದರೂ. ಅವಳು ಉರಿಯುವ ಅಗ್ನಿಯ ಶಿಖೆಯಂತೆ ಮುಟ್ಟಲು ಅಸಾಧ್ಯಳೆಂದು ಚಿಂತಿಸಿದನು.

ದಮಯಂತೀ ತು ದುಃಖಾರ್ತಾ ಪತಿರಾಜ್ಯವಿನಾಕೃತಾ ।
ಅತೀತವಾಕ್ಪಥೇ ಕಾಲೇ ಶಶಾಪೈನಂ ರುಷಾ ಕಿಲ ॥೩೬॥

ಪತಿಯನ್ನೂ ರಾಜ್ಯವನ್ನೂ ಕಳೆದುಕೊಂಡು ದುಃಖದಿಂದ ಕೂಡಿದ್ದ ದಮಯಂತಿಯು ಮಾತುಗಳಿಗೂ ಮೀರಿದ ದುಃಖದ ಆ ಕಾಲದಲ್ಲಿ ಕೋಪದಿಂದ ಅವನಿಗೆ ಶಾಪವನ್ನು ಕೊಟ್ಟಳಷ್ಟೆ.

ಯಥಾಽಹಂ ನೈಷಧಾದನ್ಯಂ ಮನಸಾಽಪಿ ನ ಚಿಂತಯೇ ।
ತಥಾಽಯಂ ಪತತಾಂ ಕ್ಷುದ್ರಃ ಪರಾಸುರ್ಮೃಗಜೀವನಃ ॥೩೭॥

ನಾನು ನೈಷಧನನ್ನು ಬಿಟ್ಟು ಮನಸ್ಸಿನಲ್ಲಿಯೂ ಸಹ ಇನ್ನೊಬ್ಬನನ್ನು ಚಿಂತಿಸದಿದ್ದರೆ ಈ ಕ್ಷುದ್ರನಾದ ಮೃಗವ್ಯಾಧನು ಸತ್ತು ಬೀಳಲಿ.

**ಬೃಹದಶ್ವಃ**

ಉಕ್ತಮಾತ್ರೇ ತು ವಚನೇ ತಯಾ ಸ ಮೃಗಜೀವನಃ ।
ವ್ಯಸುಃ ಪಪಾತ ಮೇದಿನ್ಯಾಮಗ್ನಿದಗ್ಧ ಇವ ದ್ರುಮಃ ॥೩೮॥

ದಮಯಂತಿಯು ಆ ಮಾತುಗಳನ್ನು ಹೇಳುತ್ತಿರುವಂತೆಯೇ ಆ ಮೃಗಜೀವನನು ಅಗ್ನಿಯಲ್ಲಿ ದಗ್ಧವಾದ ವೃಕ್ಷದಂತೆ ಪ್ರಾಣವನ್ನು ಕಳೆದುಕೊಂಡು ಭೂಮಿಯಮೇಲೆ ಬಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತಾರನೆಯ ಅಧ್ಯಾಯ

(ಅರಣ್ಯದಲ್ಲಿ ದಮಯಂತಿಯ ವಿಲಾಪ. ತಾಪಸಾಶ್ರಮ ದರ್ಶನ.
ವರ್ತಕರ ಗುಂಪಿನಲ್ಲಿ ಪ್ರವೇಶ.)

**ಬೃಹದಶ್ವಃ**

ಸಾ ನಿಹತ್ಯ ಮೃಗವ್ಯಾಧಂ ಪ್ರತಸ್ಥೇ ಕಮಲೇಕ್ಷಣಾ ।
ವನಂ ಪ್ರತಿಭಯಂ ಶೂನ್ಯಂ ಝಿಲ್ಲಿಕಾಗಣನಾದಿತಮ್ ॥೧॥

ಸಿಂಹವ್ಯಾಘ್ರಮೃಗದ್ವೀಪಿವರಾಹರ್ಕ್ಷಮೃಗಾಯುತಮ್ ।
ನಾನಾಪಕ್ಷಿಸಮಾಕೀರ್ಣಂ ಮ್ಲೇಚ್ಛತಸ್ಕರಸೇವಿತಮ್ ॥೨॥

ಸಾಲವೇಣುಧರಾಶ್ವತ್ಥತಿಂದುಕೇಂದುಕಕಿಂಶುಕೈಃ ।
ಅರ್ಜುನಾರಿಷ್ಟಸಂಛನ್ನಂ ಸ್ಯಂದನೈಶ್ಚ ಸಶಾಲ್ಮಲೈಃ ॥೩॥

ಜಂಬ್ವಾಮ್ರಲೋಧ್ರಖದಿರಶಾಕವೇತ್ರಸಮಾಕುಲಮ್ ।
ಕಾಶ್ಮರ್ಯಾಮಲಕಪ್ಲಕ್ಷಕದಂಬೋದುಂಬರಾವೃತಮ್ ॥೪॥

ಕಮಲಲೋಚನೆಯಾದ ಅವಳು ಮೃಗವ್ಯಾಧನನ್ನು ಸಂಹರಿಸಿ ಮುಂದೆ ಹೊರಟಳು. ಆ ಕಾಡು ಭಯಂಕರವಾಗಿ ನಿರ್ಜನವಾಗಿ ಅನೇಕ ಕ್ರಿಮಿಕೀಟಗಳ ನಾದಗಳಿಂದ ಕೂಡಿದ್ದಿತು. ಸಿಂಹ ವ್ಯಾಘ್ರ ಜಿಂಕೆ ಹುಲಿ ವರಾಹ ಕರಡಿ ಮೊದಲಾದ ಮೃಗಗಳಿಂದ ಕೂಡಿದ್ದಿತು. ನಾನಾ ಪಕ್ಷಿಗಳಿಂದ ನಿಬಿಡವಾಗಿ ಮ್ಲೇಚ್ಛರಿಗೂ ಮತ್ತು ಚೋರರಿಗೂ ಅವಾಸಸ್ಥಾನವಾಗಿದ್ದಿತು. ತಾಲ ವೇಣು ಧರ ಅಶ್ವತ್ಥ ಇಂದುಕ ಕಿಂಶುಕ ಅರ್ಜುನ ಅರಿಷ್ಟ ಈ ವೃಕ್ಷಗಳಿಂದಲೂ ಚಂದನ ಶಾಲ್ಮಲ ಜಂಬು ಆಮ್ರ ಲೋಧ್ರ ಖದಿರ ಶಾಕ ವೇತ್ರ ಕಾಶ್ಮರಿ ಆಮಲಕ ಪ್ಲಕ್ಷ ಕದಂಬ ಉದುಂಬರ ಮೊದಲಾದ ವೃಕ್ಷಗಳಿಂದಲೂ ತುಂಬಿಹೋಗಿದ್ದಿತು.

ಬದರೀಬಿಲ್ವಸಂಛನ್ನಂ ನ್ಯಗ್ರೋಧೈಶ್ಚ ಸಮಾಕುಲಮ್ ।
ಪ್ರಿಯಾಲತಾಲಖರ್ಜೂರಹರೀತಕವಿಭೀತಕೈಃ ॥೫॥

ನಾನಾಧಾತುಶತೈರ್ನದ್ಧಾನ್ ವಿವಿಧಾನಪಿ ಚಾಚಲಾನ್ ।
ಸಿಂಹರ್ಕ್ಷವ್ಯಾಘ್ರಸಂಘುಷ್ಟಾನ್ ದರೀಶ್ಚಾದ್ಭುತದರ್ಶನಾಃ ॥೬॥

ನದೀಃ ಸರಾಂಸಿ ವಾಪೀಶ್ಚ ವಿವಿಧಾಂಶ್ಚ ಮೃಗದ್ವಿಜಾನ್ ।
ಸುಬಹೂನ್ ಭೀಮರೂಪಾಂಶ್ಚ ಪಿಶಾಚೋರಗರಾಕ್ಷಸಾನ್ ॥೭॥

ಪಲ್ವಲಾನಿ ತಟಾಕಾನಿ ಗಿರಿಕೂಟಾನಿ ಸರ್ವಶಃ ।
ಸರಿತ್ಸರಾಂಸಿ ಚ ತಥಾ ದದರ್ಶಾದ್ಭುತದರ್ಶನಾನ್ ॥೮॥

ಬದರಿ, ಬಿಲ್ವವೃಕ್ಷಗಳಿಂದಲೂ ನ್ಯಗ್ರೋಧವೃಕ್ಷಗಳಿಂದಲೂ ಪ್ರಿಯಾಲ ತಾಲ ಖರ್ಜೂರ ಹರೀತಕ ವಿಭೀತಕ ಮೊದಲಾದ ವೃಕ್ಷಗಳಿಂದಲೂ ಸಂಕುಲವಾಗಿದ್ದಿತು. ದಮಯಂತಿಯು ಅನೇಕ ಧಾತುಗಳಿಂದ ಕೂಡಿದ ವಿವಿಧ ಪರ್ವತಗಳನ್ನೂ ಅದ್ಭುತವಾಗಿ ತೋರುವ ಸಿಂಹ ಕರಡಿ ವ್ಯಾಘ್ರಗಳ ನಾದದಿಂದ ಕೂಡಿದ ಗುಹೆಗಳನ್ನೂ ನದೀ ಸರೋವರ ಭಾವಿಗಳನ್ನೂ ಅನೇಕ ವಿಧವಾದ ಮೃಗಪಕ್ಷಿಗಳನ್ನೂ ಭಯಂಕರರೂಪವುಳ್ಳ ಅನೇಕ ಪಿಶಾಚೋರಂಗ ರಾಕ್ಷಸರನ್ನೂ ಜೌಗುಪ್ರದೇಶಗಳನ್ನೂ

ಕೆರೆಗಳನ್ನೂ ಪರ್ವತ ಶಿಖರಗಳನ್ನೂ ಮತ್ತು ಅದ್ಭುತವಾಗಿ ಕಾಣುವ ನದಿ ಮತ್ತು ಸರೋವರಗಳನ್ನೂ ನೋಡಿದಳು.

ಯೂಥಶೋ ದದೃಶೇ ಚಾತ್ರ ವಿದರ್ಭಾಧಿಪನಂದಿನೀ ।
ಮಹಿಷಾನ್ ವರಾಹಾನ್ ಗೋಮಾಯೂನ್ ಋಕ್ಷಪನ್ನಗವಾನರಾನ್ ॥

ವಿದರ್ಭರಾಜ ನಂದಿನಿಯಾದ ದಮಯಂತಿಯು ಅಲ್ಲಿ ಮಹಿಷಗಳು ವರಾಹಗಳು ನರಿಗಳು ಕರಡಿಗಳು ಸರ್ಪಗಳು ಕಪಿಗಳು ಇವುಗಳನ್ನು ಗುಂಪುಗಟ್ಟಲೆಯಲ್ಲಿ ನೋಡಿದಳು.

ತೇಜಸಾ ಚೈವ ಲಕ್ಷ್ಮ್ಯಾ ಚ ಕಾಂತ್ಯಾ ಚ ಪರಯಾ ವೃತಾ ।
ವೈದರ್ಭೀ ವಿಚಚಾರೈಕಾ ನಳಮನ್ವೇಷತೀ ತದಾ ॥೧೦॥

ತೇಜಸ್ಸಿನಿಂದಲೂ ಸೌಭಾಗ್ಯದಿಂದಲೂ ಶ್ರೇಷ್ಠವಾದ ಕಾಂತಿಯಿಂದಲೂ ಕೂಡಿದ ವಿದರ್ಭ ರಾಜಕುಮಾರಿಯು ನಳನನ್ನು ಹುಡುಕುತ್ತಾ ಆಗ ಒಬ್ಬಳೇ ತಿರುಗಾಡಿದಳು.

ನಾಬಿಭ್ಯತ್ ಸಾ ನೃಪಸುತಾ ಭೈಮೀ ತತ್ರಾಥ ಕಸ್ಯಚಿತ್ ।
ದಾರುಣಾಮಟವೀಂ ಪ್ರಾಪ್ಯ ಭರ್ತೃವ್ಯಸನಕರ್ಶಿತಾ ॥೧೧॥

ರಾಜಕುಮಾರಿಯಾದ ಆ ದಮಯಂತಿಯು ಪತಿಯ ವ್ಯಸನದಿಂದ ಪೀಡಿತಳಾಗಿ ಭಯಂಕರವಾದ ಕಾಡನ್ನು ಸೇರಿದರೂ ಅಲ್ಲಿ ಯಾವುದಕ್ಕೂ ಹೆದರಲಿಲ್ಲ.

ವಿದರ್ಭರಾಜತನಯಾ ವಿಲಲಾಪ ಸುದುಃಖಿತಾ ।
ಭರ್ತೃಶೋಕಪರೀತಾಂಗೀ ಶಿಲಾತಳಸಮಾಶ್ರಿತಾ ॥೧೨॥

ವಿದರ್ಭರಾಜಕುಮಾರಿಯಾದ ದಮಯಂತಿಯು ದುಃಖದಿಂದ ಕೂಡಿದವಳಾಗಿ ಭರ್ತೃಶೋಕದಿಂದ ತುಂಬಿಹೋದ ಅವಯವಗಳುಳ್ಳವಳಾಗಿ ಒಂದು ಶಿಲಾತಳದಲ್ಲಿ ಕುಳಿತು ವಿಲಾಪವನ್ನು ಮಾಡಿದಳು.

ಸಿಂಹೋರಸ್ಕ ಮಹಾಬಾಹೋ ನಿಷಧಾಧಿಪತೇ ಪ್ರಭೋ ।
ಕ್ವನು ರಾಜನ್ ಗತೋಽಸಿ ತ್ವಂ ಮಾಂ ನಿರ್ಜನೇ ವನೇ ॥೧೩॥

ಅಶ್ವಮೇಧಾದಿಭಿರ್ವೀರ ಕ್ರತುಭಿಶ್ಚಾಪ್ತದಕ್ಷಿಣೈಃ ।
ಕಥಮಿಷ್ಟ್ವಾ ನರವ್ಯಾಘ್ರ ಮಯಿ ಮಿಥ್ಯಾ ಪ್ರವರ್ತಸೇ ॥೧೪॥

ಸಿಂಹೋರಸ್ಕನಾದ ಮಹಾಬಾಹುವೇ ನಿಷಧಾಧಿಪತಿಯಾದ ಪ್ರಭುವೇ ರಾಜನೇ ನಿರ್ಜನವಾದ ವನದಲ್ಲಿ ನನ್ನನ್ನು ಬಿಟ್ಟು ಎಲ್ಲಿಗೆ ಹೋಗಿದ್ದೀಯೆ? ಎಲೈ ನರವ್ಯಾಘ್ರನೇ ಎಲೈ ವೀರನೇ ಬಹಳ ದಕ್ಷಿಣೆಗಳಿಂದಕೂಡಿದ ಅಶ್ವಮೇಧಯಾಗಗಳನ್ನು ಮಾಡಿ ನನ್ನ ವಿಷಯದಲ್ಲಿ ಏಕೆ ಅನುಚಿತವಾಗಿ ನಡೆದುಕೊಳ್ಳುತ್ತಿದ್ದೀಯೆ?

ಯತ್ತ್ವಯೋಕ್ತಂ ಮಹಾರಾಜ ಮತ್ಸಮಕ್ಷಂ ಮಹಾದ್ಯುತೇ ।
ಸ್ಮರ್ತುಮರ್ಹಸಿ ಕಲ್ಯಾಣ ತತ್ ಸರ್ವಂ ಪಾರ್ಥಿವರ್ಷಭ ॥೧೫॥

ಯಥೋಕ್ತಂ ವಿಹಗೈರ್ಹಂಸೈಃ ಸಮೀಪೇ ತವ ಭೂಮಿಪ ।
ಮತ್ಸಕಾಶೇ ಚ ತೈರುಕ್ತಂ ತದವೇಕ್ಷಿತುಮರ್ಹಸಿ ॥೧೬॥

ಮಹಾರಾಜನೇ, ಮಹಾದ್ಯುತಿಯೇ, ಕಲ್ಯಾಣರೂಪನೇ, ಪಾರ್ಥಿವಶ್ರೇಷ್ಠನೇ, ನನ್ನ ಎದುರಿನಲ್ಲಿ ನೀನು ಏನು ಮಾತನಾಡಿದ್ದೀಯೋ ಅವೆಲ್ಲವನ್ನು ಈಗ ಸ್ಮರಿಸಿಕೋ. ಎಲೈ ರಾಜನೇ, ನಿನ್ನ ಸಮೀಪದಲ್ಲಿ ಹಂಸಪಕ್ಷಿಗಳು ಏನನ್ನು ಹೇಳಿದವೋ ಮತ್ತು ನನ್ನ ಸಮೀಪಕ್ಕೆ ಬಂದು ಏನನ್ನು ಹೇಳಿದವೋ ಅದೆಲ್ಲವನ್ನೂ ನೀನು ಗಮನಿಸು.

ಏಕತಶ್ಚತುರೋ ವೇದಾಃ ಸಾಂಗೋಪಾಂಗಾಃ ಸವಿಸ್ತರಾಃ ।
ಅಧೀತಾಃ ಪುರಷವ್ಯಾಘ್ರ ಸತ್ಯಮೇಕಂ ಕಿಲೈಕತಃ ॥೧೭॥

ತಸ್ಮಾದರ್ಹಸಿ ಶತ್ರುಘ್ನ ಸತ್ಯಂ ಕರ್ತುಂ ನರೇಶ್ವರ ।
ಉಕ್ತವಾನಸಿ ಯದ್ವೀರ ಮತ್ಸಕಾಶೇ ಪುರಾ ವಚಃ ॥೧೮॥

ಪುರುಷವ್ಯಾಘ್ರನೇ ಒಂದುಕಡೆ ಅಧ್ಯಯನಮಾಡಿದ ನಾಲ್ಕುವೇದಗಳು ಮತ್ತು ಅವುಗಳ ವಿಸ್ತಾರವಾದ ವೇದಾಂಗಗಳು ಮತ್ತು ಉಪಾಂಗಗಳು ಇನ್ನೊಂದುಕಡೆ ಸತ್ಯವೊಂದೇ ಅದಕ್ಕೆ ಸಮನಾಗಿರುತ್ತದೆಯಷ್ಟೆ. ಆದ್ದರಿಂದ ಎಲೈ ಶತ್ರುಘ್ನನೇ ನರೇಶ್ವರನೇ ವೀರನೇ ನನ್ನ ಸಮೀಪದಲ್ಲಿ ಹಿಂದೆ ಏನು ಮಾತನಾಡಿದ್ದೆಯೋ ಅದನ್ನು ಸತ್ಯವನ್ನಾಗಿ ಮಾಡು.

ಹಾ ವೀರ ನನು ನಾಮಾಹಮಿಷ್ಟಾ ಕಿಲ ತವಾನಘ ।
ಅಸ್ಯಾಮಟವ್ಯಾಂ ಘೋರಾಯಾಂ ಕಿಂ ಮಾಂ ನ ಪ್ರತಿಭಾಷಸೇ ॥೧೯॥

ಭಕ್ಷಯತ್ಯೇಷ ಮಾಂ ರೌದ್ರೋ ವ್ಯಾತ್ತಾಸ್ಯೋ ದಾರುಣಾಕೃತಿಃ ।
ಅರಣ್ಯರಾಟ್ ಕ್ಷುಧಾವಿಷ್ಟಃ ಕಿಂ ಮಾಂ ನ ತ್ರಾತುಮರ್ಹಸಿ ॥೨೦॥

ನ ಮೇ ತ್ವದನ್ಯಾ ಸುಭಗೇ ಪ್ರಿಯಾ ಇತ್ಯಬ್ರವೀಸ್ತದಾ ।
ತಾಮೃತಾಂ ಕುರು ಕಲ್ಯಾಣ ಪುರೋಕ್ತಾಂ ಭಾರತೀಂ ನಳ ॥೨೧॥

ಉನ್ಮತ್ತವದ್ವಿಲಪತೀಂ ಭಾರ್ಯಾಮಿಷ್ಟಾಂ ನರಾಧಿಪ ।
ಈಪ್ಸಿತಾಮೀಪ್ಸಿತೇನಾಥ ಕಿಂ ಮಾಂ ನ ಪ್ರತಿನಂದಸೇ ॥೨೨॥

ಕೃಶಾಂ ದೀನಾಂ ವಿವರ್ಣಾಂ ಮಾಂ ಮಲಿನಾಂ ವಸುಧಾಧಿಪ ।
ವಸ್ತ್ರಾರ್ಧಪ್ರಾವೃತಾಮೇಕಾಂ ವಿಲಪಂತೀಮನಾಥವತ್ ॥೨೩॥

ಯೂಥಭ್ರಷ್ಟಾಮಿವೈಕಾಂ ಮಾಂ ಹರಿಣೀಂ ಪೃಥುಲೋಚನ ।
ನ ಮಾನಯಸಿ ಮಾಂ ನಾಥ ರುದಂತೀಮರಿಕರ್ಶನ ॥೨೪॥

ಮಹಾರಾಜ ಮಹಾರಣ್ಯೇ ಮಾಮಿಹೈಕಾಕಿನೀಂ ಸತೀಮ್ ।
ತ್ವತ್ತತ್ತೀಮಭಿಭಾಷಂತೀಂ ಕಿಂ ಮಾಂ ನ ಪ್ರತಿಭಾಷಸೇ ॥೨೫॥

ಅನುವ್ರತಾಂ ಮಹಾರಾಜ ಕಿಂ ಮಾಂ ನ ಪ್ರತಿಭಾಷಸೇ ।
ಕುಲಶೀಲೋಪಸಂಪನ್ನಾಂ ಚಾರುಸರ್ವಾಂಗಶೋಭನಾಮ್ ॥೨೬॥

ನಾದ್ಯ ತ್ವಾಮನುಪಶ್ಯಾಮಿ ಗಿರಾವಸ್ಮಿನ್ ನರೋತ್ತಮ ।
ವನೇ ಚಾಸ್ಮಿನ್ ಮಹಾಘೋರೇ ಸಿಂಹವ್ಯಾಘ್ರನಿಷೇವಿತೇ ॥೨೭॥

ಶಯಾನಮುಪವಿಷ್ಟಂ ವಾ ಸ್ಥಿತಂ ವಾ ಮನುಜಾಧಿಪ ।
ಪ್ರಸ್ಥಿತಂ ವಾ ನರಶ್ರೇಷ್ಠ ಮಮ ಶೋಕವಿವರ್ಧನ ॥೨೮॥

ಅಯ್ಯೋ ವೀರನೇ ಅನಘನೇ ನಾನು ನಿನಗೆ ತುಂಬಾ ಇಷ್ಟವಾದವಳಲ್ಲವೆ? ಈ ಘೋರವಾದ ಅರಣ್ಯದಲ್ಲಿ ಏಕೆ ನನಗೆ ಉತ್ತರವನ್ನು ಕೊಡುತ್ತಿಲ್ಲ? ಈ ಉಗ್ರವಾದ ಭಯಂಕರ ಆಕೃತಿಯನ್ನು ಹೊಂದಿದ ಅರಣ್ಯರಾಜನಾದ ಸಿಂಹವು ಹಸಿವಿನಿಂದ

ಕೂಡಿರುವುದಾಗಿ ಬಾಯಿಯನ್ನು ದೊಡ್ಡದಾಗಿ ತೆರೆದು ನನ್ನನ್ನು ತಿನ್ನಲು ಬರುತ್ತಿದೆ. ನೀನು ಏಕೆ ನನ್ನನ್ನು ರಕ್ಷಿಸುವುದಿಲ್ಲ? ಕಲ್ಯಾಣನೇ, ಸುಂದರಿಯೇ, ನಿನ್ನನ್ನು ಬಿಟ್ಟು ನನಗೆ ಬೇರೆ ಪ್ರಿಯಳಾದ ಯಾವ ಸ್ತ್ರೀಯೂ ಇಲ್ಲ ಎಂದು ಆಗ ಹೇಳಿದ್ದೆಯಷ್ಟೆ. ಎಲೈ ನಳನೇ ಹಿಂದೆ ಹೇಳಿದ ಆ ಮಾತನ್ನು ನಿಜವನ್ನಾಗಿಮಾಡು ಎಲೈ ನರಾಧಿಪನೇ ಎಲೈ ಸ್ವಾಮಿಯೇ ಹುಚ್ಚಿಯಂತೆ ಬಡಬಡಿಸುತ್ತಿರುವ ನೀನು ಬಯಸಿದ ನಿನಗೆ ಇಷ್ಟವಾದ ಪತ್ನಿಯನ್ನು ಅವಳಿಗೆ ಇಷ್ಟವಾದ ರೀತಿಯಲ್ಲಿ ಈಗ ಏಕೆ ಅಭಿನಂದಿಸುತ್ತಿಲ್ಲ? ಎಲೈ ವಸುಧಾಧಿಪನೇ, ವಿಶಾಲನೇತ್ರನೇ ನಾಥನೇ ಅರಿಕರ್ಶನನೇ ಕೃಶಳೂ ದೀನಳೂ ಕಾಂತಿಹೀನಳೂ ಮಲಿನಳೂ ಅರ್ಧವಸ್ತ್ರವನ್ನು ಸುತ್ತಿಕೊಂಡಿರುವವಳೂ ಅನಾಥಳಂತೆ ಏಕಾಕಿಯಾಗಿ ವಿಲಾಪವನ್ನು ಮಾಡುತ್ತಿರುವವಳೂ, ಗುಂಪಿನಿಂದ ಬದುರಿದ ಹೆಣ್ಣು ಜಿಂಕೆಯಂತೆ ಇರುವವಳೂ ಆದ ನನ್ನನ್ನು ನಾನು ಅಳುತ್ತಿದ್ದರೂ ನೀನು ಏಕೆ ಸನ್ಮಾನಿಸುತ್ತಿಲ್ಲ? ಮಹಾರಾಜನೇ! ಈ ಮಹಾರಣ್ಯದಲ್ಲಿ ಏಕಾಕಿಯಾಗಿ ನಿನ್ನನ್ನು ಮಾತನಾಡಿಸುತ್ತಿರುವ ಸಾಧ್ವಿಯಾದ ನಿನ್ನ ಪತ್ನಿಗೆ ಏಕೆ ಉತ್ತರವನ್ನು ಕೊಡುತ್ತಿಲ್ಲ? ಕುಲಶೀಲಸಂಪನ್ನಳಾದ ಸುಂದರವಾದ ಸರ್ವಾಂಗಗಳಿಂದ ಶೋಭಿತಳಾದ ನಿನ್ನನ್ನೇ ಅನುಸರಿಸಿ ನಡೆಯುವ ನನಗೆ, ಮಹಾರಾಜನೇ ಏಕೆ ಉತ್ತರವನ್ನು ಕೊಡುತ್ತಿಲ್ಲ? ಎಲೈ ನರೋತ್ತಮನೇ ಸಿಂಹವ್ಯಾಘ್ರಗಳಿಂದ ತುಂಬಿದ ಈ ಮಹಾಘೋರವಾದ ಕಾಡಿನಲ್ಲಿ ಮಲಗಿರುವ ಅಥವಾ ಕುಳಿತಿರುವ ಅಥವಾ ನಿಂತಿರುವ ಅಥವಾ ನಡೆಯುತ್ತಿರುವ ನಿನ್ನನ್ನು ನಾನು ಕಾಣುತ್ತಿಲ್ಲ. ಎಲೈ ಮನುಜಾಧಿಪನೇ ನರಶ್ರೇಷ್ಠನೇ ನೀನು ನನ್ನ ಶೋಕವನ್ನು ಪರಿಹರಿಸು. (ನಿನ್ನನ್ನು ನಾನು ಕಾಣುತ್ತಿಲ್ಲ.)

ಕಿಂ ನು ಪೃಚ್ಛಾಮಿ ದುಃಖಾರ್ತಾ ತ್ವದರ್ಥೇ ಶೋಕಕರ್ಶಿತಾ ।
ಕಚ್ಚಿದ್ದೃಷ್ಟಸ್ತ್ವಯಾಽರಣ್ಯೇ ಸಂಗಮ್ಯೇಹ ನಳೋ ನೃಪಃ ॥೨೯॥

ನೀನು ಈ ಅರಣ್ಯದಲ್ಲಿ ನಳನನ್ನು ಸಂಧಿಸಿ ಆ ರಾಜನನ್ನು ನೋಡಿದ್ದೀಯಾ ಎಂದು ನಿನ್ನ ಸಲುವಾಗಿ ದುಃಖದಿಂದಲೂ ಮತ್ತು ಶೋಕದಿಂದಲೂ ಪೀಡಿತಳಾದ ನಾನು ಯಾರನ್ನು ಕೇಳಲಿ?

ಕೋ ನು ಮೇ ಕಥಯೇದದ್ಯ ವನೇಽಸ್ಮಿನ್ ವಿಷ್ಠಿತಂ ನಳಮ್ ।
ಮಹಾಬಲಂ ಮಹಾತ್ಮಾನಂ ಪರವ್ಯೂಹವಿನಾಶನಮ್ ॥೩೦॥

ಯಮನ್ವೇಷಸಿ ರಾಜಾನಂ ಬಾಲೇ ಪದ್ಮನಿಭೇಕ್ಷಣಮ್ ।
ಅಯಂ ನು ಇತಿ ಕಸ್ಯಾದ್ಯ ಶ್ರೋಷ್ಯಾಮಿ ಮಧುರಾಂ ಗಿರಮ್ ॥೩೧॥

ಅರಣ್ಯರಾಡಯಂ ಶ್ರೀಮಾನ್ ಚತುರ್ದಂಷ್ಟ್ರೋ ಮಹಾಹನುಃ ।
ಶಾರ್ದೂಲೋಽಭಿಮುಖೋ ಯಾತಿ ಪೃಚ್ಛಾಮ್ಯೇನಮಶಂಕಿತಾ ॥೩೨॥

ಈ ದಿನ ಮಹಾಬಲನೂ ಮಹಾತ್ಮನೂ ಪರವ್ಯೂಹನಾಶಕನೂ ಆದ ಪದ್ಮನೇತ್ರನಾದ ರಾಜನಾದ ಯಾವ ನಳನನ್ನು ಹುಡುಕುತ್ತಿದ್ದೆಯೋ ಎಲೌ ಬಾಲೆಯೇ ಅವನೇ ಇವನು ಎಂದು ಮಧುರವಾದ ಮಾತುಗಳನ್ನು ಆಡಿ ಈ ಅರಣ್ಯದಲ್ಲಿರುವ ನಳನನ್ನು ನನಗೆ ಈ ದಿನ ಯಾರು ಹೇಳುತ್ತಾರೆ? (ತೋರಿಸುತ್ತಾರೆ?)ಅರಣ್ಯರಾಜನಾದ ನಾಲ್ಕು ಕೋರೆಯ ಹಲ್ಲುಗಳನ್ನು ಹೊಂದಿದ ದೊಡ್ಡ ಹನುವನ್ನು ಹೊಂದಿದ ಕಾಂತಿಯುಕ್ತನಾದ ಈ ಶಾರ್ದೂಲನು ನನ್ನ ಎದುರಿಗೆ ಬರುತ್ತಿದ್ದಾನೆ. ಯಾವ ಹೆದರಿಕೆಯೂ ಇಲ್ಲದೆ ಇವನನ್ನು ಕೇಳುತ್ತೇನೆ.

ಭವಾನ್ ಮೃಗಾಣಾಮಧಿಪಃ ತ್ವಮಸ್ಮಿನ್ ಕಾನನೇ ಪ್ರಭುಃ ।
ವಿದರ್ಭರಾಜತನಯಾಂ ದಮಯಂತೀತಿ ವಿದ್ಧಿ ಮಾಮ್ ॥೩೩॥

ನಿಷಧಾಧಿಪತೇರ್ಭಾರ್ಯಾಂ ನಳಸ್ಯಾಮಿತ್ರಘಾತಿನಃ ।
ಪತಿಮನ್ವೇಷಣೇಮೇಕಾಂ ಕೃಪಣಾಂ ಶೋಕಕರ್ಶಿತಾಮ್ ॥೩೪॥

ಆಶ್ವಾಸಯ ಮೃಗೇಂದ್ರೇಹ ಯದಿ ದೃಷ್ಟಸ್ತ್ವಯಾ ನಳಃ ।
ಸಿಂಹಸ್ಕಂಧೋ ಮಹಾಬಾಹುಃ ಪದ್ಮಪತ್ರನಿಭೇಕ್ಷಣಃ ॥೩೫॥

ನೀನು ಮೃಗಗಳಿಗೆ ಒಡೆಯ. ಈ ಕಾನನಕ್ಕೆ ಪ್ರಭುವಾದವನು. ನನ್ನನ್ನು ವಿದರ್ಭರಾಜ ಕುಮಾರಿಯಾದ ದಮಯಂತಿ ಎಂದು ತಿಳಿ. ನಿಷಧಾಧಿಪತಿಯಾದ ಶತ್ರುಘಾತಿಯಾದ ನಳನ ಭಾರ್ಯೆಯಾದ , ಪತಿಯನ್ನು ಹುಡುಕುತ್ತಿರುವ ಏಕಾಕಿನಿಯಾದ, ಶೋಕ ಕರ್ಶಿತಳಾದ, ಕಾರ್ಪಣ್ಯದಿಂದ ಕೂಡಿದ ನನ್ನನ್ನು ಸಮಾಧಾನಪಡಿಸು. ಮೃಗೇಂದ್ರನೇ ಸಿಂಹಸ್ಕಂಧನೂ ಮಹಾಬಾಹುವೂ ಪದ್ಮಪತ್ರನೇತ್ರನೂ ಆದ ನಳನನ್ನು ಈ ಕಾಡಿನಲ್ಲಿ ನೀನೇನಾದಾರೂ ನೋಡಿದೆಯಾ?

ಅಥವಾऽರಣ್ಯನೃಪತೇ ನಳಂ ಯದಿ ನ ಪಶ್ಯಸಿ ।
ಮಾಂ ಭಕ್ಷಯಿತ್ವಾ ಶಾರ್ದೂಲ ವಿಶೋಕಾಂ ಕುರು ದುಃಖಿತಾಮ್ ॥

ಅಥವಾ ಅರಣ್ಯರಾಜನೇ ನೀನು ನಳನನ್ನು ನೋಡದಿದ್ದರೆ ನನ್ನನ್ನಾದರೂ ಭಕ್ಷಿಸು. ಎಲೈ ಶಾರ್ದೂಲನೇ ದುಃಖಿತಳಾದ ನನ್ನನ್ನು ದುಃಖದಿಂದ ಬಿಡುಗಡೆಮಾಡು.

ಶ್ರುತ್ವಾ ರಣ್ಯೇ ವಿಲಪಿತಾಂ ಮಾಮೇವಂ ಮೃಗರಾಟ್ ಸ್ವಯಮ್ ।
ಯಾತ್ಯೇತಾಂ ಮೃಷ್ಟಸಲಿಲಾಮಾಪಗಾಂ ಸಾಗರೋಪಮಾಮ್ ॥೩೭॥

ಈ ಅರಣ್ಯದಲ್ಲಿ ಮೃಗರಾಜನಾದ ಶಾರ್ದೂಲನು ನನ್ನ ಈ ವಿಲಾಪವನ್ನು ಕೇಳಿ ಸಾಗರದಂತೆ ಇರುವ ಸ್ವಚ್ಛ ನೀರಿರುವ ಈ ನದಿಯ ಕಡೆಗೆ ಹೋಗುತ್ತಿದ್ದಾನೆ.

ಇಮಂ ಶಿಲೋಚ್ಚಯಂ ಪುಣ್ಯಂ ಶೃಂಗೈರ್ಬಹುಭಿರುಚ್ಛ್ರಿತೈಃ ।
ವಿರಾಜದ್ಭಿರ್ದಿವಿಸ್ಪೃಗ್ಭಿರ್ನೈಕವರ್ಣೈರ್ಮನೋಹರೈಃ ॥೩೮॥

ನಾನಾಧಾತುಸಮಾಕೀರ್ಣಂ ವಿವಿಧೋಪಲಶೋಭಿತಮ್ ।
ಅಸ್ಯಾರಣ್ಯಸ್ಯ ಮಹತಃ ಕೇತುಭೂತಮಿವ ಸ್ಥಿತಮ್ ॥೩೯॥

ಸಿಂಹಶಾರ್ದೂಲಮಾತಂಗವರಾಹರ್ಕ್ಷಸಮಾಕುಲಮ್ ।
ಪತತ್ರಿಭಿರ್ಬಹುವಿಧೈಃ ಸಮಂತಾದನುನಾದಿತಮ್ ॥೪೦॥

ಕಿಂಶುಕಾಶೋಕಬಕುಳೈಃ ಪುನ್ನಾಗೈರುಪಶೋಭಿತಮ್ ।
ಸರಿದ್ಭಿಃ ಸವಿಹಂಗಾಭಿಃ ಶಿಖರೈಶ್ಚಾಪಿ ಶೋಭಿತಮ್ ।
ಪೃಥಿವ್ಯಾಂ ರುಚಿರಾಕಾರಂ ಚೂಡಾಮಣಿರಿವ ಸ್ಥಿತಮ್ ॥೪೧॥

ಗಿರಿರಾಜಮಿಮಂ ತಾವತ್ ಪೃಚ್ಛಾಮಿ ನೃಪತಿಂ ಪ್ರತಿ ॥೪೨॥

ಈ ಪರ್ವತವು ಎತ್ತರವಾದ ಕಂಗೊಳಿಸುವ ಆಕಾಶವನ್ನು ಮುಟ್ಟುವ ಅನೇಕವರ್ಣದ ಮನೋಹರವಾದ ಅನೇಕ ಶಿಖರಗಳಿಂದ ಕೂಡಿ ಪವಿತ್ರವಾಗಿದೆ. ಅನೇಕ ಧಾತುಗಳಿಂದ ಕೂಡಿ ಅನೇಕ ವಿಧವಾದ ಶಿಲೆಗಳಿಂದ ಶೋಭಿತವಾಗಿ ಈ ದೊಡ್ಡ ಅರಣ್ಯಕ್ಕೆ ಧ್ವಜರೂಪದಲ್ಲಿದೆ. ಸಿಂಹ ಶಾರ್ದೂಲ ಮಾತಂಗ ವರಾಹ ಋಕ್ಷ

ಮೊದಲಾದ ಪ್ರಾಣಿಗಳಿಂದ ಕೂಡಿ ಅನೇಕ ವಿಧವಾದ ಪಕ್ಷಿಗಳ ನಾದದಿಂದ ಎಲ್ಲ ಕಡೆಗಳಿಂದಲೂ ತುಂಬಿದೆ. ಕಿಂಶುಕ ಅಶೋಕ ಬಕುಳ ಪುನ್ನಾಗ ಮೊದಲಾದ ವೃಕ್ಷಗಳಿಂದ ಶೋಭಿತವಾಗಿದೆ. ಪಕ್ಷಿಗಳಿಂದ ನದಿಗಳಿಂದ ಮತ್ತು ಅನೇಕ ಶಿಖರಗಳಿಂದಲೂ ಶೋಭಿತವಾಗಿದೆ. ಭೂಮಿಯಲ್ಲಿ ಮನೋಹರವಾಗಿದ್ದ ಆಕಾಶವನ್ನುಹೊಂದಿ ಚೂಡಾಮಣಿಯಂತೆ ನಿಂತಿದೆ. ನಳನ ವಿಷಯದಲ್ಲಿ ಈಗ ಈ ಗಿರಿರಾಜನನ್ನು ಕೇಳುತ್ತೇನೆ.

ಭಗವನ್ನಚಲಶ್ರೇಷ್ಠ ದಿವ್ಯದರ್ಶನವಿಶ್ರುತ ।
ಶರಣ್ಯ ಬಹುಕಲ್ಯಾಣ ನಮಸ್ತೇಽಸ್ತು ಮಹೀಧರ ॥೪೩॥

ಪ್ರಣಮೇ ತ್ವಾಽಭಿಗಮ್ಯಾಹಂ ರಾಜಪುತ್ರೀಂ ನಿಬೋಧ ಮಾಮ್ ।
ರಾಜಸ್ನುಷಾಂ ರಾಜಭಾರ್ಯಾಂ ದಮಯಂತೀತಿ ವಿಶ್ರುತಾಮ್ ॥೪೪॥

ಪೂಜ್ಯನಾದ ಪರ್ವತಶ್ರೇಷ್ಠನೇ, ದಿವ್ಯದರ್ಶನನೇ, ಪ್ರಖ್ಯಾತನಾದವನೇ, ಶರಣ್ಯನಾದವನೇ, ಬಹುಕಲ್ಯಾಣರೂಪನಾದ ಎಲೈ ಪರ್ವತನೇ, ನಿನಗೆ ಸಮಸ್ಕಾರ. ನಿನ್ನನ್ನು ಸಮೀಪಿಸಿ ನಾನು ನಮಸ್ಕರಿಸುತ್ತೇನೆ. ನಾನು ದಮಯಂತಿಯೆಂದೂ ಪ್ರಸಿದ್ಧಳಾದ ರಾಜಕುಮಾರಿ ರಾಜನ ಸೊಸೆ ಮತ್ತು ರಾಜನ ಪತ್ನಿಯೆಂದೂ ನನ್ನನ್ನು ತಿಳಿ.

ರಾಜಾ ವಿದರ್ಭಾಧಿಪತಿಃ ಪಿತಾ ಮಮ ಮಹಾರಥಃ ।
ಭೀಮೋ ನಾಮ ಕ್ಷಿತಿಪತಿಃ ಚಾತುರ್ವರ್ಣ್ಯಸ್ಯ ರಕ್ಷಿತಾ ॥೪೫॥

ರಾಜಸೂಯಾಶ್ವಮೇಧಾನಾಂ ಕ್ರತೂನಾಂ ದಕ್ಷಿಣಾವತಾಮ್ ।
ಆಹರ್ತಾ ಪಾರ್ಥಿವಶ್ರೇಷ್ಠಃ ಪೃಥುಚಾರ್ವಂಚಿತೇಕ್ಷಣಃ ॥೪೬॥

ಬ್ರಹ್ಮಣ್ಯಃ ಸಾಧುವೃತ್ತಶ್ಚ ಸತ್ಯವಾಗನಸೂಯಕಃ ।
ಶೀಲವಾನ್ ಸತ್ಯವಾನ್ ಶೂರಃ ಪೃಥುಶ್ರೀರ್ಧರ್ಮವಿಚ್ಛುಚಿಃ ॥೪೭॥

ಸಮ್ಯಗ್ಗೋಪ್ತಾ ವಿದರ್ಭಾಣಾಂ ನಿರ್ಜಿತಾರಿಗಣಃ ಪ್ರಭುಃ ।
ತಸ್ಯ ಮಾಂ ವಿದ್ಧಿ ತನಯಾಂ ಭಗವನ್ ಸಮುಪಸ್ಥಿತಾಮ್ ॥೪೮॥

ವಿದರ್ಭಾಧಿಪತಿಯಾದ ಮಹಾರಥನಾದ ಭೀಮನೆಂಬ ರಾಜನು ನನ್ನ ತಂದೆ. ಅವನು ಚಾತುರ್ವರ್ಣ್ಯವನ್ನು ರಕ್ಷಿಸುವವನು. ರಾಜಸೂಯ ಅಶ್ವಮೇಧ ಮೊದಲಾದ

ಪೂರ್ಣದಕ್ಷಿಣೆಯಿಂದ ಕೂಡಿದ ಅನೇಕ ಯಾಗಗಳನ್ನು ಮಾಡಿದವನು. ರಾಜರಲ್ಲಿ ಶ್ರೇಷ್ಠನಾದವನು. ವಿಸ್ತಾರವಾದ ಮನೋಹರವಾದ ನೇತ್ರವುಳ್ಳವನು. ಬ್ರಾಹ್ಮಣರಿಗೆ ಶರಣ್ಯನಾದವನು. ಸಾಧುಸ್ವಭಾವವನ್ನು ಹೊಂದಿದವನು. ಸತ್ಯವಂತನು. ಧರ್ಮಜ್ಞನು. ಶುಚಿಯು. ವಿದರ್ಭವನ್ನು ಚೆನ್ನಾಗಿ ರಕ್ಷಿಸುವವನು. ಶತ್ರುಗಳನ್ನು ಗೆದ್ದವನು. ಸ್ವಾಮಿಯೂ ಆಗಿದ್ದಾನೆ. ಪೂಜ್ಯನೇ ನನ್ನನ್ನು ನಿನ್ನ ಬಳಿಗೆ ಬಂದಿರುವ ಅವನ ಮಗಳೆಂದು ತಿಳಿ.

ನಿಷಧೇಷು ಮಹೀಪಾಲಃ ಶ್ವಶುರೋ ಮೇ ನೃಪೋತ್ತಮಃ ।
ಗೃಹೀತನಾಮಾ ವಿಖ್ಯಾತೋ ವೀರಸೇನ ಇತಿ ಸ್ಮ ಹ ॥೪೯॥

ತಸ್ಯ ರಾಜ್ಞಃ ಸುತೋ ವೀರಃ ಶ್ರೀಮಾನ್ ಸತ್ಯಪರಾಕ್ರಮಃ ।
ಕ್ರಮಪ್ರಾಪ್ತಂ ತು ಯೋ ರಾಜ್ಯಂ ಪಿತುಃ ಸಮುಪಶಾಸತಿ ॥೫೦॥

ನಳೋ ನಾಮಾರಿದಮನಃ ಪುಣ್ಯಶ್ಲೋಕ ಇತಿ ಶ್ರುತಃ ।
ಬ್ರಹ್ಮಣ್ಯೋ ವೇದವಿದ್ ವಾಗ್ಮೀ ಪುಣ್ಯಕೃತ್ ಸೋಮಪೋऽಗ್ನಿಚಿತ್ ॥

ಯಷ್ಟಾ ದಾತಾ ಚ ಯೋದ್ಧಾ ಚ ಸಮ್ಯಕ್ಚೈವ ಪ್ರಶಾಸಿತಾ ।
ತಸ್ಯ ಮಾಮಚಲಶ್ರೇಷ್ಠ ವಿದ್ಧಿ ಭಾರ್ಯಾಮುಪಸ್ಥಿತಾಮ್ ॥೫೨॥

ತ್ಯಕ್ತಾಂ ಶ್ರಿಯಾ ಭರ್ತೃಹೀನಾಮನಾಥಾಂ ವ್ಯಸನಾನ್ವಿತಾಮ್ ।
ಅನ್ವೇಷಮಾಣಾಂ ಭರ್ತಾರಂ ನಳಂ ನರವರೋತ್ತಮಮ್ ॥೫೩॥

ನಿಷಧದೇಶಾಧಿಪತಿಯಾದ ಸುಗೃಹೀತನಾಮನಾದ ಪ್ರಖ್ಯಾತನಾದ ವೀರಸೇನನು ನನ್ನ ಮಾವ. ಅವನ ಪುತ್ರನಾದ ನಳನು ವೀರನಾದವನು ಸಂಪದ್ಯುಕ್ತನಾದವನು ಸತ್ಯಪರಾಕ್ರಮನು. ತಂದೆಯಿಂದ ಕ್ರಮವಾಗಿ ಬಂದ ರಾಜ್ಯವನ್ನು ಆಳುತ್ತಿದ್ದಾನೆ. ಶತ್ರು ಸಂಹಾರಕನಾದ ಅವನಿಗೆ ಪುಣ್ಯಶ್ಲೋಕನೆಂದೂ ಹೆಸರು ಅವನು ಬ್ರಾಹ್ಮಣರಿಗೆ ಶರಣ್ಯನಾದವನು ವೇದವನ್ನು ತಿಳಿದವನು. ವಾಗ್ಮಿ. ಪುಣ್ಯವನ್ನು ಮಾಡುವವನು. ಸೋಮಪಾನ ಮಾಡಿದವನು. ಅಗ್ನಿಯನ್ನು ಚಯನಮಾಡಿ ಅನೇಕ ಯಜ್ಞಗಳನ್ನು ಮಾಡಿದವನು. ದೊಡ್ಡದಾನಿ. ಯೋಧ. ಚೆನ್ನಾಗಿ ರಾಜ್ಯವಾಳುವವನು. ಎಲೈ ಪರ್ವತ ಶ್ರೇಷ್ಠನೇ ನಿನ್ನನ್ನು ಸಮೀಪಿಸಿರುವ ನನ್ನನ್ನು ಅವನ ಭಾರ್ಯೆಯೆಂದು ತಿಳಿ. ಸಂಪತ್ತನ್ನು ಕಳೆದುಕೊಂಡು ಪತಿಹೀನಳಾಗಿ ಅನಾಥಳಾಗಿ ವ್ಯಸನದಿಂದ ಕೂಡಿ ನರಶ್ರೇಷ್ಠರಲ್ಲಿ ಶ್ರೇಷ್ಠನಾದ ಪತಿಯನ್ನು ಹುಡುಕುತ್ತಿರುವ ಅವನ ಪತ್ನಿ ಎಂದು ತಿಳಿ.

ಖಮುಲ್ಲಿಖದ್ಭಿರೇತೈರ್ಹಿ ತ್ವಯಾ ಶೃಂಗಶತೈರ್ನೃಪಃ ।
ಕಚ್ಚಿದ್ದೃಷ್ಟೋಽಚಲಶ್ರೇಷ್ಠ ವನೇಽಸ್ಮಿನ್ ದಾರುಣೇ ನಳಃ ॥೫೪॥

ಆಕಾಶವನ್ನು ಮುಟ್ಟುವಂತೆ ಉನ್ನತವಾದ ನೂರಾರು ಶೃಂಗಗಳಿಂದ ಕೂಡಿದ ಎಲೈ ಪರ್ವತಶ್ರೇಷ್ಠನೇ ಈ ದಾರುಣವಾದ ವನದಲ್ಲಿ ನಳನನ್ನು ನೀನೇನಾದರೂ ನೋಡಿದೆಯಾ?

ಗಜೇಂದ್ರವಿಕ್ರಮೋ ಧೀಮಾನ್ ದೀರ್ಘಬಾಹುರರಿಂದಮಃ ।
ವಿಕ್ರಾಂತಃ ಸತ್ಯವಾನ್ ಧೀರೋ ಭರ್ತಾ ಮಮ ಮಹಾಯಶಾಃ ॥೫೫॥

ಮಹೀಧರಸಮೋ ಧೈರ್ಯೇ ಮಹೀಧರ ಮಹೀಪತಿಃ ।
ನಿಷಧಾನಾಮಧಿಪತಿಃ ಕಚ್ಚಿದ್ ದೃಷ್ಟಸ್ತ್ವಯಾ ನಳಃ ॥೫೬॥

ನನ್ನ ಪತಿಯಾದ ನಳನು ಗಜರಾಜನ ವಿಕ್ರಮವುಳ್ಳವನು ಮೇಧಾವಿಯಾದವನು ದೀರ್ಘಬಾಹುವು ಅರಿಂದಮನು ವಿಕ್ರಮವುಳ್ಳವನು ಸತ್ಯವುಳ್ಳವನು ಧೀರನಾದವನು ಮಹಾಕೀರ್ತಿಶಾಲಿಯಾದವನು. ಎಲೈ ಪರ್ವತಶ್ರೇಷ್ಠನೇ ಆ ರಾಜನು ಧೈರ್ಯದಲ್ಲಿ ಪರ್ವತಕ್ಕೆ ಸಮಾನಾದವನು. ನಿಷಧದೇಶದ ಅಧಿಪತಿಯಾದ ಅಂತಹ ನಳನನ್ನು ನೀನೇನಾದರೂ ನೋಡಿದೆಯಾ?

ಕಿಂ ಮಾಂ ವಿಲಪತೀಮೇಕಾಂ ಪರ್ವತಶ್ರೇಷ್ಠ ದುಃಖಿತಾಮ್ ।
ಗಿರಾ ನಾಶ್ವಾಸಯಸ್ಯದ್ಯ ಸ್ವಾಂ ಸುತಾಮಿವ ಮಾನದ ॥೫೭॥

ಎಲೈ ಪರ್ವತಶ್ರೇಷ್ಠನೇ ಎಲೈ ಮಾನದನೇ, ಏಕಾಕಿನಿಯಾದ ದುಃಖದಿಂದ ವಿಲಾಪವನ್ನು ಮಾಡುತ್ತಿರುವ ನನ್ನನ್ನು ನಿನ್ನ ಮಗಳನ್ನು ಸಂತೈಸಿದಂತೆ ನಿನ್ನ ಮಾತುಗಳಿಂದ ಈಗ ಏಕೆ ಸಂತೈಸುತ್ತಿಲ್ಲ?

ವೀರ ವಿಕ್ರಾಂತ ಧರ್ಮಜ್ಞ ಸತ್ಯಸಂಧ ಮಹೀಪತೇ ।
ಯದ್ಯಸ್ಮಿನ್ ವೈ ವನೇ ರಾಜನ್ ದರ್ಶಯಾತ್ಮಾನಮಾತ್ಮನಾ ॥೫೮॥

ವೀರನಾದ ವಿಕ್ರಾಂತನಾದ ಧರ್ಮಜ್ಞನಾದ ಸತ್ಯಸಂಧನಾದ ರಾಜನೇ, ನೀನು ಈ ಕಾಡಿನಲ್ಲಿ ಇದ್ದರೆ ನಿನ್ನನ್ನು ನೀನೇ ನನಗೆ ತೋರಿಸು.

ಕದಾ ನು ಸ್ನಿಗ್ಧಗಂಭೀರಾಂ ಜೀಮೂತಸ್ವನಸನ್ನಿಭಾಮ್ ।
ಶ್ರೋಷ್ಯಾಮಿ ನೈಷಧಸ್ಯಾಹಂ ವಾಚಂ ತಾಮಮೃತೋಪಮಾಮ್ ॥೫೯॥

ಸ್ನಿಗ್ಧಗಂಭೀರವಾದ, ಮೇಘನಾದಕ್ಕೆ ಸದೃಶನಾದ ಅಮೃತಸದೃಶವಾದ ನಳನ ವಾಣಿಯನ್ನು ನಾನು ಯಾವಾಗ ಕೇಳುವೆನು.

ವೈದರ್ಭೀತ್ಯೇವ ಕಥಿತಾಂ ಶುಭಾಂ ರಾಜ್ಞೋ ಮಹಾತ್ಮನಃ ।
ಆತ್ಮಾಭಿಸಾರಿಣೀಮದ್ಯಾಂ ಮಮ ಶೋಕನಿಬರ್ಹಣೀಮ್ ॥೬೦॥

ವೈದರ್ಭಿ ಎಂದು ಕರೆಯುತ್ತಾ ನನ್ನ ಬಳಿಗೆ ಬರುತ್ತಿರುವ ಮಹಾತ್ಮನಾದ ಆ ರಾಜನ ಶುಭವಾದ ನನ್ನ ಶೋಕವಿನಾಶಕವಾದ ಸಮೃದ್ಧವಾದ ವಾಣಿಯನ್ನು ಯಾವಾಗ ಕೇಳುವೆನು?

## ಬೃಹದಶ್ವಃ

ಇತಿ ಸಾ ತಂ ಗಿರಿಶ್ರೇಷ್ಠಮುಕ್ತ್ವಾ ಪಾರ್ಥಿವನಂದಿನೀ ।
ದಮಯಂತೀ ತತೋ ಭೂಯೋ ಜಗಾಮ ದಿಶಮುತ್ತರಾಮ್ ॥೬೧॥

ಆ ರಾಜಕುಮಾರಿಯಾದ ದಮಯಂತಿಯು ಆ ಪರ್ವತಶ್ರೇಷ್ಠನಿಗೆ ಹೀಗೆ ಹೇಳಿ ಪುನಃ ಅಲ್ಲಿಂದ ಉತ್ತರದಿಕ್ಕಿಗೆ ಹೊರಟಳು.

ಸಾ ಗತ್ವಾ ತ್ರೀನಹೋರಾತ್ರಾನ್ ದದರ್ಶ ಪರಮಾಂಗನಾ ।
ತಾಪಸಾರಣ್ಯಮತುಲಂ ದಿವ್ಯಕಾನನಶೋಭಿತಮ್ ॥೬೨॥

ವಸಿಷ್ಠಭೃಗ್ವತ್ರಿಸಮೈಃ ತಾಪಸೈರುಪಶೋಭಿತಮ್ ।
ನಿಯತೈರ್ನಿಯತಾಹಾರೈರ್ದಮಶೌಚಸಮನ್ವಿತೈಃ ॥೬೩॥

ಅಬ್ಭಕ್ಷೈರ್ವಾಯುಭಕ್ಷೈಶ್ಚ ಪತ್ರಾಹಾರೈಸ್ತಥೈವ ಚ ।
ಜಿತೇಂದ್ರಿಯೈರ್ಮಹಾಭಾಗೈಃ ಸ್ವರ್ಗಮಾರ್ಗದಿದೃಕ್ಷುಭಿಃ ॥೬೪॥

ವಲ್ಕಲಾಜಿನಸಂವೀತೈರ್ಮುನಿಭಿಃ ಸಂಯತೇಂದ್ರಿಯೈಃ ।
ತಾಪಸಾಧ್ಯುಷಿತಂ ರಮ್ಯಂ ದದರ್ಶಾಶ್ರಮಮಂಡಲಮ್ ॥೬೫॥

ಸಾ ಚ ದೃಷ್ಟ್ವಾ ತಮಾಶ್ರಮಪದಂ ನಾನಾಮೃಗನಿಷೇವಿತಮ್ ।
ಶಾಖಾಮೃಗಗಣೈಶ್ಚೈವ ತಾಪಸೈಶ್ಚ ಸಮನ್ವಿತಮ್ ॥೬೬॥

ಸುಭ್ರೂಃ ಸುಕೇಶೀ ಸುಶ್ರೋಣೀ ಸುಕುಚಾ ಸುದ್ವಿಜಾನನಾ ।
ವರ್ಚಸ್ವಿನೀ ಸುಪ್ರತಿಷ್ಠಾ ಸ್ವಂಚತೋದ್ಯತಗಾಮಿನೀ ॥೬೭॥

ಸಾ ದೃಷ್ಟ್ವೈವಾಶ್ರಮಪದಂ ವೀರಸೇನಸುತಪ್ರಿಯಾ ।
ಯೋಷಿದ್ರತ್ನಂ ಮಹಾಭಾಗಾ ದಮಯಂತೀ ತಪಸ್ವಿನೀ ॥೬೮॥

ತಾಪಸೈಃ ಸಮುಪೇತಂ ಚ ಸಾ ದೃಷ್ಟ್ವೈವ ಸಮಾಶ್ವಸತ್ ।
ಸಾಽಭಿವಾದ್ಯ ತಪೋವೃದ್ಧಾನ್ ವಿನಯಾವನತಾ ಸ್ಥಿತಾ ॥೬೯॥

ಆ ಸುಂದರಿಯು ಮೂರುದಿವಸ ಹಗಲೂ ರಾತ್ರಿಯೂ ಪ್ರಯಾಣವನ್ನು ಮಾಡಿ ದಿವ್ಯಕಾನನದಿಂದ ಶೋಭಿತವಾದ ನಿಯಮಗಳನ್ನು ಅನುಷ್ಠಾನಮಾಡುವ ನಿಯತಾಹಾರರಾದ ದಮ ಮತ್ತು ಶೌಚಗಳಿಂದ ಕೂಡಿದ ಅಬ್ಭಕ್ಷರೂ ವಾಯುಭಕ್ಷರೂ ಮತ್ತು ಪರ್ಣಭಕ್ಷರೂ, ಸ್ವರ್ಗಮಾರ್ಗವನ್ನು ಸೇರುವ ಇಚ್ಛೆಯುಳ್ಳವರೂ, ಮಹಾನುಭಾವರೂ, ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿದವರೂ ಜಿತೇಂದ್ರಿಯರೂ ಆದ ತಪಸ್ವಿಗಳುವಾಸಿಸುವ ಒಂದು ಸುಂದರವಾದ ಅಸದೃಶವಾದ ದಿವ್ಯಕಾನನ ಶೋಭಿತವಾದ ತಪೋವನವನ್ನು ನೋಡಿದಳು. ಒಳ್ಳೆಯ ಹುಬ್ಬುಗಳನ್ನು ಕೇಶಗಳನ್ನು ಕಟಿಪ್ರದೇಶವನ್ನು ಸ್ತನಗಳನ್ನು ದಂತಪಂಕ್ತಿಗಳನ್ನು ಮುಖವನ್ನು ಕಾಂತಿಯನ್ನು ಪ್ರತಿಷ್ಠೆಯನ್ನು ಮತ್ತು ಒಳ್ಳೆಯ ನಡಿಗೆಯನ್ನು ಹೊಂದಿದ್ದ ವೀರಸೇನ ಸುತನಾದ ನಳನಿಗೆ ಪ್ರಿಯಳಾದ, ಯೋಶಿದ್ರತ್ನಳೂ, ಮಹಾನುಭಾವಳೂ, ಶೋಚನೀಯಳೂ ಆದ ಆ ದಮಯಂತಿಯು ನಾನಾ ತಾಪಸರಿಂದಲೂ ಕೂಡಿದ ಆ ಆಶ್ರಮ ಸ್ಥಳವನ್ನು ನೋಡಿದ ತಕ್ಷಣವೇ ಸ್ವಲ್ಪ ಸಮಾಧನಾವನ್ನು ತಂದು ಕೊಂಡಳು. ಅವಳು ವಿನಯದಿಂದ ಆ ತಪೋವೃದ್ಧರಿಗೆ ಬಾಗಿ ನಮಸ್ಕಾರವನ್ನು ಮಾಡಿ ನಿಂತಳು.

ಸ್ವಾಗತಂ ತ ಇತಿ ಪ್ರೋಕ್ತಾ ತೈಃ ಪ್ರಯತೇಂದ್ರಿಯಮಾನಸಾಃ ।
ಪೂಜಾಂ ಚಕ್ರೇ ಯಥಾನ್ಯಾಯಮೃಷೀಣಾಂ ಸಾ ಮನಸ್ವಿನೀ ॥೭೦॥

ಆ ಎಲ್ಲ ಜಿತಮನಸ್ಕರೂ, ಜಿತೇಂದ್ರಿಯರೂ ಆದ ತಾಪಸರಿಂದಲೂ ನಿನಗೆ ಸ್ವಾಗತವೆಂದು ಹೇಳಲ್ಪಟ್ಟವಳಾಗಿ ಧೈರ್ಯಶಾಲಿನಿಯಾದ ಆವಳು ಆ ಋಷಿಗಳಿಗೆ ವಿಧಿವತ್ತಾಗಿ ಪೂಜೆಯನ್ನು ಮಾಡಿದಳು.

ತತಸ್ತೇ ಪೂಜಿತಾ ವಿಪ್ರಾಃ ಪ್ರಯತೇಂದ್ರಿಯಮಾನಸಾಃ
ಆಸ್ಯತಾಮಿತ್ಯಥೋಚುಸ್ತೇ ಬ್ರೂಹಿ ಕಿಂ ಕರವಾಮಹೇ ॥೭೧॥

ಅವಳಿಂದ ಪೂಜಿತರಾದ ಜಿತೇಂದ್ರಿಯರೂ ಜಿತಮನಸ್ಕರೂ ಆದ ಆ ವಿಪ್ರರು ಕುಳಿತುಕೋ ನಮ್ಮಿಂದ ಏನು ಆಗಬೇಕಾಗಿದೆ ಎಂದು ಅವಳನ್ನು ಕೇಳಿದರು.

ತಾನುವಾಚ ವರಾರೋಹಾ ಕಚ್ಚಿದ್ ಭಗವತಾಮಿಹ ।
ತಪಃಸ್ವಗ್ನಿಷು ಧರ್ಮೇ ಚ ಸರ್ವೇಷು ಮೃಗಪಕ್ಷಿಷು ॥೭೨॥

ಅಪಿ ಸ್ವಾಧ್ಯಾಯಯೋಗೇಷು ಧರ್ಮಯೋಗೇಷು ವಾ ಪುನಃ ।
ಕುಶಲಂ ವಃ ಪ್ರಿಯತಪಾಃ ಸ್ವಧರ್ಮಾಚರಣೇಷು ಚ ॥೭೩॥

ಅವರನ್ನು ಕುರಿತು ಪೂಜ್ಯರಾದ ತಮಗೆ ಇಲ್ಲಿ ತಪಸ್ಸು ಅಗ್ನಿಕಾರ್ಯಗಳು ಎಲ್ಲಾ ಧರ್ಮಗಳು ಸ್ವಾಧ್ಯಾಯ ಪ್ರವಚನಗಳು ಯೋಗಾಭ್ಯಾಸಗಳು ಮೃಗಪಕ್ಷಿಗಳು ಎಲ್ಲವೂ ಕುಶಲವೇ? ತಪಸ್ಸಿನಲ್ಲೇ ಪ್ರೀತಿಯುಳ್ಳ ಎಲೈ ಋಷಿಗಳೇ ನಿಮ್ಮ ಧರ್ಮಾಚರಣೆಗಳೆಲ್ಲಾ ನಿರ್ವಿಘ್ನವಾಗಿ ನಡೆಯುತ್ತಿವೆಯೇ ಎಂದು ಕೇಳಿದಳು.

ತೈಶ್ಚೋಕ್ತಂ ಕುಶಲಂ ಭದ್ರೇ ಸರ್ವತ್ರೇತಿ ತಪಸ್ವಿಭಿಃ ।
ಬ್ರೂಹಿ ಸರ್ವಾನವದ್ಯಾಂಗಿ ಕಾ ತ್ವಂ ಕಿಂಚ ಚಿಕೀರ್ಷಸಿ ॥೭೪॥

ಆ ತಪಸ್ವಿಗಳೂ ಸಹ ಮಂಗಳಸ್ವರೂಪಳೇ ಎಲ್ಲವೂ ಕ್ಷೇಮವಾಗಿದೆ. ಸರ್ವಾಂಗಸುಂದರಿಯೇ ನೀನು ಯಾರು ಏತಕ್ಕೆ ಇಲ್ಲಿಗೆ ಬಂದಿದ್ದೀಯೆ ಎಂದು ಹೇಳು ಎಂದು ಹೇಳಿದರು.

ದೃಷ್ಟ್ವೈವ ತೇ ಪರಂ ರೂಪಂ ದ್ಯುತಿಂ ಚ ಪರಮಾಮಿಹ ।
ವಿಸ್ಮಯೋ ನಃ ಸಮುತ್ಪನ್ನಃ ಸಮಾಶ್ವಾಸಿಹಿ ಮಾ ಶುಚಃ ॥೭೫॥

ನಿನ್ನ ಶ್ರೇಷ್ಠವಾದ ರೂಪವನ್ನು ಮತ್ತು ಶ್ರೇಷ್ಠವಾದ ಕಾಂತಿಯನ್ನು ನೋಡಿ ನಮಗೆ ವಿಸ್ಮಯವುಂಟಾಗಿದೆ. ಸಮಾಧಾನವನ್ನು ತಂದುಕೋ ಶೋಕಪಡಬೇಡ.

ಅಸ್ಯಾರಣ್ಯಸ್ಯ ಮಹತೀ ದೇವತಾ ವಾ ಮಹೀಭೃತಃ ।
ಅಸ್ಯಾ ಹಿ ನದ್ಯಾಃ ಕಲ್ಯಾಣಿ ವದ ಸತ್ಯಮನಿಂದಿತೇ ॥೭೬॥

ಕಲ್ಯಾಣಿಯೇ ನೀನು ಈ ಅರಣ್ಯದ ದೊಡ್ಡ ದೇವತೆಯೇ ಅಥವಾ ಪರ್ವತದ ಅಥವಾ ಈ ನದಿಯ ದೇವತೆಯೇ, ಅನಿಂದಿತೆಯೇ, ಸತ್ಯವನ್ನು ಹೇಳು ಎಂದು ಹೇಳಿದರು.

ಸಾऽಬ್ರವೀತ್ ತಾನೃಷೀನ್ ನಾಹಮರಣ್ಯಸ್ಯಾಸ್ಯ ದೇವತಾ ।
ನ ಚಾಪ್ಯಸ್ಯ ಗಿರೇರ್ವಿಪ್ರಾ ನ ನದ್ಯಾ ದೇವತಾऽಪ್ಯಹಮ್ ॥೭೭॥

ಮಾನುಷೀಂ ಮಾಂ ವಿಜಾನೀತ ಯೂಯಂ ಸರ್ವೇ ತಪೋಧನಾಃ ।
ವಿಸ್ತರೇಣಾಭಿಧಾಸ್ಯಾಮಿ ತನ್ಮೇ ಶೃಣುತ ಸರ್ವಶಃ ॥೭೮॥

ನಾನು ಈ ಅರಣ್ಯದ ದೇವತೆಯಲ್ಲ. ಎಲೈ ಬ್ರಾಹ್ಮಣರೇ, ನದಿಯ ದೇವತೆಯೂ ಅಲ್ಲ. ಪರ್ವತದೇವತೆಯೂ ಅಲ್ಲ. ತಪೋಧನರೇ ನಾನೊಬ್ಬ ಮನುಷ್ಯಳು ಎಂದು ನೀವೆಲ್ಲರೂ ತಿಳಿಯಿರಿ. ನನ್ನ ಕಥೆಯನ್ನು ವಿಸ್ತಾರವಾಗಿ ಹೇಳುತ್ತೇನೆ. ಕೇಳಿ.

ದಮಯಂತೀ

ವಿದರ್ಭೇಷು ಮಹೀಪಾಲೋ ಭೀಮೋ ನಾಮ ಮಹಾದ್ಯುತಿಃ ।
ತಸ್ಯ ಮಾಂ ತನಯಾಂ ಸರ್ವೇ ಜಾನೀತ ದ್ವಿಜಸತ್ತಮಾಃ ॥೭೯॥

ವಿದರ್ಭದೇಶದಲ್ಲಿ ಮಹಾತೇಜಸ್ವಿಯಾದ ಭೀಮನೆಂದು ರಾಜನಿದ್ದಾನೆ. ಎಲೈ ದ್ವಿಜಶ್ರೇಷ್ಠರೇ ನೀವೆಲ್ಲರೂ ನನ್ನನ್ನು ಅವನ ಮಗಳೆಂದು ತಿಳಿಯಿರಿ.

ನಿಷಧಾಧಿಪತಿಃ ಶ್ರೀಮಾನ್ ನಳೋ ನಾಮ ಮಹಾಯಶಾಃ ।
ವೀರಃ ಸಂಗ್ರಾಮಜಿದ್ ವಿದ್ವಾನ್ ಮಮ ಭರ್ತಾ ವಿಶಾಂಪತಿಃ ॥೮೦॥

ದೇವತಾಭ್ಯರ್ಚನಪರೋ ದ್ವಿಜಾತಿಜನವತ್ಸಲಃ ।
ಗೋಪ್ತಾ ನಿಷಧವಂಶಸ್ಯ ಮಹಾಭಾಗೋ ಮಹಾದ್ಯುತಿಃ ॥೮೧॥

ಸತ್ಯವಾಗ್ ಧರ್ಮವಿತ್ ಪ್ರಾಜ್ಞೋ ವಿಕ್ರಾಂತಃ ಶತ್ರುಸೂದನಃ ।
ಬ್ರಹ್ಮಣ್ಯೋ ದೈವತಪರಃ ಶ್ರೀಮಾನ್ ಪರಪುರಂಜಯಃ ॥೮೨॥

ನಿಷಧದೇಶಾಧಿಪತಿಯಾದ ಸಂಪದ್ಯುಕ್ತನಾದ ಮಹಾಯಶಸ್ವಿಯಾದ ಧೀರನೂ ಯುದ್ಧಗಳನ್ನು ಗೆಲ್ಲುವವನೂ ಮೇಧಾವಿಯೂ ಆದ ನಳನು ನನ್ನ ಪತಿ. ಅವನು

ದೇವತಾರ್ಚನಶೀಲವುಳ್ಳವನು ಬ್ರಾಹ್ಮಣರಿಗೆ ವತ್ಸಲನಾದವನು ನಿಷಧವಂಶವನ್ನು ರಕ್ಷಿಸುವವನು ಮಹಾನುಭಾವನು ಮಹಾತೇಜಸ್ವಿಸತ್ಯವಚನವುಳ್ಳವನು ಧರ್ಮಜ್ಞನು ಪ್ರಾಜ್ಞನು ವಿಕ್ರಮಶಾಲಿಯು ಶತ್ರು ಸಂಹಾರಕನು. ಇಂದ್ರನಿಗೆ ಸಮಾನವಾದ ಕಾಂತಿಯುಳ್ಳವನು. ಅಂತಹ ನೃಪಶ್ರೇಷ್ಠನಾದ ನಳನು ನನ್ನ ಪತಿ

ನಳೋ ನಾಮ ನೃಪಶ್ರೇಷ್ಠೋ ದೇವರಾಜಸಮದ್ಯುತಿಃ ।
ಮಮ ಭರ್ತಾ ವಿಶಾಲಾಕ್ಷಃ ಪೂರ್ಣೇಂದುವದನೋಽರಿಹಾ ॥೮೩॥

ಆಹರ್ತಾ ಕ್ರತುಮುಖ್ಯಾನಾಂ ವೇದವೇದಾಂಗಪಾರಗಃ ।
ಸಪತ್ನಾನಾಂ ಮೃಧೇ ಹಂತಾ ರವಿಸೋಮಸಮಪ್ರಭಃ ॥೮೪॥

ಸ ಕೈಶ್ಚಿನ್ನಿಕೃತಿಪ್ರಜ್ಞೈರಕಲ್ಯಾಣೈರ್ನರಾಧಮೈಃ ।
ಆಹೂಯ ಪೃಥಿವೀಪಾಲಃ ಸತ್ಯಧರ್ಮಪರಾಯಣಃ ॥೮೫॥

ದೇವನೇ ಕುಶಲೈರ್ಜಿಹ್ಮೈರ್ಜಿತೋ ರಾಜ್ಯಂ ವಸೂನಿ ಚ ।
ವಿವಾಸಿತಶ್ಚ ನಗರಾದ್ ವನವಾಸಮುಪೇಯಿವಾನ್ ॥೮೬॥

ಶ್ರೇಷ್ಠವಾದ ಯಾಗಗಳನ್ನು ಆಚರಿಸುವವನೂ ವೇದ ವೇದಾಂಗ ಪಾರಂಗತನಾದವನೂ ಶತ್ರುಗಳನ್ನು ಯುದ್ಧದಲ್ಲಿ ಸಂಹರಿಸುವವನೂ ಸೂರ್ಯಚಂದ್ರರಿಗೆ ಸಮಾನವಾದ ಕಾಂತಿಯುಳ್ಳವನೂ. ರಾಜನೂ ಸತ್ಯಧರ್ಮಪರಾಯಣನೂ ಆದ ಅವನನ್ನು ಮೋಸದ ಬುದ್ಧಿಯುಳ್ಳ ಅಶುಭರಾದ ಕೆಲವು ನರಾಧಮರು ಅಕ್ಷ ಕ್ರೀಡೆಯಲ್ಲಿ ಕುಶಲರಾದ ಕೆಲವು ಮೋಸಗಾರರು ದ್ಯೂತಕ್ಕೆ ಕರೆದು ಅವನನ್ನು ಸೋಲಿಸಿದರು. ಅವರು ಅವನ ರಾಜ್ಯವನ್ನೂ ಸಂಪತ್ತನ್ನೂ ಕಸಿದುಕೊಂಡು ನಗರದಿಂದ ಹೊರಗೆ ಕಳುಹಿಸಿದರು. ಅವನು ಈಗ ವನವಾಸವನ್ನು ಹೊಂದಿದ್ದಾನೆ.

ತಸ್ಯ ಮಾಮವಗಚ್ಛಧ್ವಂ ಭಾರ್ಯಾಂ ರಾಜರ್ಷಭಸ್ಯ ವೈ ।
ದಮಯಂತೀತಿ ವಿಖ್ಯಾತಾಂ ಭರ್ತುರ್ದರ್ಶನಲಾಲಸಾಮ್ ॥೮೭॥

ನನ್ನನ್ನು ದಮಯಂತಿಯೆಂದೂ ಪ್ರಸಿದ್ಧಳಾದ ಪತಿಯನ್ನು ನೋಡುವ ಮಹದಾಸೆಯನ್ನು ಹೊಂದಿರುವ ಆ ರಾಜಶ್ರೇಷ್ಠನ ಪತ್ನಿಯೆಂದೂ ನೀವು ತಿಳಿಯಿರಿ.

ಸಾ ವನಾನಿ ಗಿರೀಂಶ್ಚೈವ ಸರಾಂಸಿ ಸರಿತಸ್ತಥಾ ।
ಪಲ್ವಲಾನಿ ಚ ಸರ್ವಾಣಿ ತಥಾಽರಣ್ಯಾನಿ ಸರ್ವಶಃ ॥೮೮॥

ಅನ್ವೇಷಂತೀ ಸ್ವಭರ್ತಾರಂ ನಳಂ ರಣವಿಶಾರದಮ್ ।
ಮಹಾತ್ಮಾನಂ ಕೃತಾಸ್ತ್ರಂ ಚ ವಿಚರಾಮೀಹ ದುಃಖಿತಾ ॥೮೯॥

ಅಂತಹ ನಾನು ರಣವಿಶಾರದನಾದ ಮಹಾತ್ಮನಾದ ಅಸ್ತ್ರವಿದ್ಯೆಗಳನ್ನು ಬಲ್ಲನನ್ನ ಪತಿಯನ್ನು ಹುಡುಕುತ್ತಾ ದುಃಖಿತಳಾಗಿ ವನಗಳನ್ನು ಪರ್ವತಗಳನ್ನೂ ಸರೋವರಗಳನ್ನೂ ನದಿಗಳನ್ನೂ ಜೌಗುಗಳನ್ನೂ ಎಲ್ಲ ಅರಣ್ಯಗಳನ್ನೂ ಸಂಚರಿಸುತ್ತಿದ್ದೇನೆ.

ಕಚ್ಚಿದ್ ಭಗವತಾಂ ಪುಣ್ಯಂ ತಪೋವನಮಿದಂ ಮಹತ್ ।
ಭವೇತ್ ಪ್ರಾಪ್ತೋ ನಳೋ ನಾಮ ನಿಷಧಾನಾಂ ಜನಾಧಿಪಃ ॥೯೦॥

ಯತ್ಕೃತೇಽಹಮಿದಂ ದುರ್ಗಂ ಪ್ರಪನ್ನಾ ಭೃಶದಾರುಣಮ್ ।
ವನಂ ಪ್ರತಿಭಯಂ ಘೋರಂ ಶಾರ್ದೂಲಮೃಗಸೇವಿತಮ್ ॥೯೧॥

ಯಾವ ನಳನ ಸಲುವಾಗಿ ನಾನು ದುರ್ಗಮವಾದ ಬಹಳ ದಾರುಣವಾದ ಭಯಜನಕವಾದ ಶಾರ್ದೂಲ ಮೊದಲಾದ ಮೃಗಗಳಿಂದ ಕೂಡಿದ ಈ ಅರಣ್ಯಕ್ಕೆ ಬಂದಿದ್ದೇನೆಯೋ ಅಂತಹ ನಿಷಧಾಧಿಪತಿಯಾದ ನಳನು ಪೂಜ್ಯರಾದ ತಮ್ಮ ಈ ಶ್ರೇಷ್ಠವಾದ ಮತ್ತು ಪವಿತ್ರವಾದ ತಪೋವನಕ್ಕೆ ಎಂದಾದರೂ ಪ್ರಾಪ್ತನಾಗಿದ್ದಾನೆಯೇ?

ಯದಿ ಕೈಶ್ಚಿದಹೋರಾತ್ರೈರ್ನ ದ್ರಕ್ಷ್ಯಾಮಿ ನಳಂ ನೃಪಮ್ ।
ಆತ್ಮಾನಂ ಶ್ರೇಯಸಾ ಯೋಕ್ಷ್ಯೇ ದೇಹಸ್ಯಾಸ್ಯ ವಿಮೋಕ್ಷಣಾತ್ ॥೯೨॥

ಕೋ ನು ಮೇ ಜೀವಿತೇನಾರ್ಥಸ್ತಮೃತೇ ಪುರುಷರ್ಷಭಮ್ ।
ಕಥಂ ಭವಿಷ್ಯಾಮ್ಯದ್ಯಾಹಂ ಭರ್ತೃಶೋಕಾಭಿಪೀಡಿತಾ ॥೯೩॥

ಇನ್ನು ಕೆಲವು ಹಗಲು ರಾತ್ರಿಗಳಲ್ಲಿ ನಾನು ರಾಜನಾದ ನಳನನ್ನು ನೋಡದಿದ್ದರೆ ದೇಹತ್ಯಾಗವನ್ನುಮಾಡಿ ನನಗೆ ಶ್ರೇಯಸ್ಸನ್ನು ಮಾಡಿಕೊಳ್ಳುವೆನು. ಆ ಪುರುಷಶ್ರೇಷ್ಠನಿಲ್ಲದೆ ನಾನು ಬದುಕಿರುವುದಕ್ಕೆ ಏನು ಪ್ರಯೋಜನವಿದೆ? ಭರ್ತೃಶೋಕದಿಂದ ಪೀಡಿತಳಾದ ನಾನು ಈ ದಿನ ಹೇಗೆ ಬದುಕುವೆನು?

ತಥಾ ವಿಲಪತೀಮೇಕಾಮರಣ್ಯೇ ಭೀಮನಂದಿನೀಮ್ ।
ದಮಯಂತೀಮಥೋಚುಸ್ತೇ ತಾಪಸಾಃ ಸತ್ಯವಾದಿನಃ ॥೯೪॥

ಹೀಗೆ ಅರಣ್ಯದಲ್ಲಿ ಏಕಾಕಿಯಾಗಿ ವಿಲಾಪವನ್ನು ಮಾಡುತ್ತಿದ್ದ ಭೀಮರಾಜಕುಮಾರಿಯಾದ ದಮಯಂತಿಯನ್ನು ಕುರಿತು ಸತ್ಯವಾದಿಗಳಾದ ಆ ತಪಸ್ವಿಗಳು ಮಾತನಾಡಿದರು.

ಉದರ್ಕಸ್ತವ ಕಲ್ಯಾಣಿ ಕಲ್ಯಾಣೋ ಭವಿತಾ ಶುಭೇ ।
ವಯಂ ಪಶ್ಯಾಮ ತಪಸಾ ಕ್ಷಿಪ್ರಂ ದ್ರಕ್ಷ್ಯಸಿ ನೈಷಧಮ್ ॥೯೫॥

ನಿಷಧಾನಾಮಧಿಪತಿಂ ನಳಂ ರಿಪುನಿಘಾತಿನಮ್ ।
ಭೈಮಿ ಧರ್ಮಭೃತಾಂ ಶ್ರೇಷ್ಠಂ ದ್ರಷ್ಟಾಸಿ ವಿಗತಜ್ವರಮ್ ॥೯೬॥

ಕಲ್ಯಾಣಿಯೇ ಶುಭಳಾದವಳೇ ನಿನಗೆ ಶ್ರೇಷ್ಠವಾದ ಕಲ್ಯಾಣವು ಉಂಟಾಗುವುದನ್ನು ತಪೋದೃಷ್ಟಿಯಿಂದ ನಾವು ನೋಡುತ್ತಿದ್ದೇವೆ. ನೀನು ಬೇಗ ನೈಷಧನನ್ನು ನೋಡುವಿ. ಎಲೌ ಭೀಮರಾಜಕುಮಾರಿಯೇ ನಿಷಧದೇಶಾಧಿಪತಿಯಾದ ಶತ್ರುಸಂಹಾರಕನಾದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ನಳನು ನಿಶ್ಚಿಂತೆಯಿಂದ ಇರುವುದನ್ನು ನೀನು ನೋಡುವಿ.

ವಿಮುಕ್ತಂ ಸರ್ವಪಾಪೇಭ್ಯಃ ಸರ್ವರತ್ನವಿಭೂಷಿತಮ್ ।
ತದೇವ ನಗರಂ ಶ್ರೇಷ್ಠಂ ಪ್ರಶಾಸಂತಮರಿಂದಮಮ್ ॥೯೭॥

ದ್ವಿಷತಾಂ ಭಯಕರ್ತಾರಂ ಸುಹೃದಾಂ ಶೋಕನಾಶನಮ್ ।
ಪತಿಮೇಷ್ಯಸಿ ಕಲ್ಯಾಣಿ ಕಲ್ಯಾಣಾಭಿಜನಂ ನೃಪಮ್ ॥೯೮॥

ಎಲ್ಲ ಪಾಪಗಳಿಂದ ಮತ್ತು ದುಃಖಗಳಿಂದ ಮುಕ್ತನಾಗಿ ಸರ್ವರತ್ನವಿಭೂಷಿತನಾಗಿ ಶತ್ರುಗಳಿಗೆ ಭಯಂಕರನಾಗಿ ಹಿತೈಷಿಗಳಿಗೆ ಶೋಕನಾಶಕನಾಗಿ ಆದೇ ಶ್ರೇಷ್ಠವಾದ ನಗರವನ್ನು ಆಳುವ ಅರಿಂದಮನಾದ ಕಲ್ಯಾಣಕುಲದಲ್ಲಿ ಪ್ರಸೂತನಾದ ರಾಜನಾದ ನಿನ್ನ ಪತಿಯನ್ನು ಎಲೌ ಕಲ್ಯಾಣಿಯೇ, ನೀನು ಬೇಗ ಸೇರುವಿ.

ಏವಮುಕ್ತ್ವಾ ನಳಸ್ಯೇಷ್ಟಾಂ ಮಹಿಷೀಂ ಪಾರ್ಥಿವಾತ್ಮಜಾಮ್ ।
ಅಂತರ್ಹಿತಾಸ್ತಾಪಸಾಸ್ತೇ ಸಾಗ್ನಿಹೋತ್ರಾಶ್ರಮಾಸ್ತಥಾ ॥೯೯॥

ಸಾ ವನಾನಿ ಗಿರೀಂಶ್ಚೈವ ಸರಾಂಸಿ ಸರಿತಸ್ತಥಾ ।
ಪಲ್ವಲಾನಿ ಚ ಸರ್ವಾಣಿ ತಥಾಽರಣ್ಯಾನಿ ಸರ್ವಶಃ ॥೮೮॥

ಅನ್ವೇಷಂತೀ ಸ್ವಭರ್ತಾರಂ ನಳಂ ರಣವಿಶಾರದಮ್ ।
ಮಹಾತ್ಮಾನಂ ಕೃತಾಸ್ತ್ರಂ ಚ ವಿಚರಾಮೀಹ ದುಃಖಿತಾ ॥೮೯॥

ಅಂತಹ ನಾನು ರಣವಿಶಾರದನಾದ ಮಹಾತ್ಮನಾದ ಅಸ್ತ್ರವಿದ್ಯೆಗಳನ್ನು ಬಲ್ಲ ನನ್ನ ಪತಿಯನ್ನು ಹುಡುಕುತ್ತಾ ದುಃಖಿತಳಾಗಿ ವನಗಳನ್ನು ಪರ್ವತಗಳನ್ನೂ ಸರೋವರಗಳನ್ನೂ ನದಿಗಳನ್ನೂ ಜೌಗುಗಳನ್ನೂ ಎಲ್ಲ ಅರಣ್ಯಗಳನ್ನೂ ಸಂಚರಿಸುತ್ತಿದ್ದೇನೆ.

ಕಚ್ಚಿದ್ ಭಗವತಾಂ ಪುಣ್ಯಂ ತಪೋವನಮಿದಂ ಮಹತ್ ।
ಭವೇತ್ ಪ್ರಾಪ್ತೋ ನಳೋ ನಾಮ ನಿಷಧಾನಾಂ ಜನಾಧಿಪಃ ॥೯೦॥

ಯತ್ಕೃತೇಽಹಮಿದಂ ದುರ್ಗಂ ಪ್ರಪನ್ನಾ ಭೃಶದಾರುಣಮ್ ।
ವನಂ ಪ್ರತಿಭಯಂ ಘೋರಂ ಶಾರ್ದೂಲಮೃಗಸೇವಿತಮ್ ॥೯೧॥

ಯಾವ ನಳನ ಸಲುವಾಗಿ ನಾನು ದುರ್ಗಮವಾದ ಬಹಳ ದಾರುಣವಾದ ಭಯಜನಕವಾದ ಶಾರ್ದೂಲ ಮೊದಲಾದ ಮೃಗಗಳಿಂದ ಕೂಡಿದ ಈ ಅರಣ್ಯಕ್ಕೆ ಬಂದಿದ್ದೇನೆಯೋ ಅಂತಹ ನಿಷಧಾಧಿಪತಿಯಾದ ನಳನು ಪೂಜ್ಯರಾದ ತಮ್ಮ ಈ ಶ್ರೇಷ್ಠವಾದ ಮತ್ತು ಪವಿತ್ರವಾದ ತಪೋವನಕ್ಕೆ ಎಂದಾದರೂ ಪ್ರಾಪ್ತನಾಗಿದ್ದಾನೆಯೇ?

ಯದಿ ಕೈಶ್ಚಿದಹೋರಾತ್ರೈರ್ನ ದ್ರಕ್ಷ್ಯಾಮಿ ನಳಂ ನೃಪಮ್ ।
ಆತ್ಮಾನಂ ಶ್ರೇಯಸಾ ಯೋಕ್ಷ್ಯೇ ದೇಹಸ್ಯಾಸ್ಯ ವಿಮೋಕ್ಷಣಾತ್ ॥೯೨॥

ಕೋ ನು ಮೇ ಜೀವಿತೇನಾರ್ಥಸ್ತಮೃತೇ ಪುರುಷರ್ಷಭಮ್ ।
ಕಥಂ ಭವಿಷ್ಯಾಮ್ಯದ್ಯಾಹಂ ಭರ್ತೃಶೋಕಾಭಿಪೀಡಿತಾ ॥೯೩॥

ಇನ್ನು ಕೆಲವು ಹಗಲು ರಾತ್ರಿಗಳಲ್ಲಿ ನಾನು ರಾಜನಾದ ನಳನನ್ನು ನೋಡದಿದ್ದರೆ ದೇಹತ್ಯಾಗವನ್ನುಮಾಡಿ ನನಗೆ ಶ್ರೇಯಸ್ಸನ್ನು ಮಾಡಿಕೊಳ್ಳುವೆನು. ಆ ಪುರುಷಶ್ರೇಷ್ಠನಿಲ್ಲದೆ ನಾನು ಬದುಕಿರುವುದಕ್ಕೆ ಏನು ಪ್ರಯೋಜನವಿದೆ? ಭರ್ತೃಶೋಕದಿಂದ ಪೀಡಿತಳಾದ ನಾನು ಈ ದಿನ ಹೇಗೆ ಬದುಕುವೆನು?

ತಥಾ ವಿಲಪತೀಮೇಕಾಮರಣ್ಯೇ ಭೀಮನಂದಿನೀಮ್ ।
ದಮಯಂತೀಮಥೋಚುಸ್ತೇ ತಾಪಸಾಃ ಸತ್ಯವಾದಿನಃ ॥೯೪॥

ಹೀಗೆ ಅರಣ್ಯದಲ್ಲಿ ಏಕಾಕಿಯಾಗಿ ವಿಲಾಪವನ್ನು ಮಾಡುತ್ತಿದ್ದ ಭೀಮರಾಜಕುಮಾರಿಯಾದ ದಮಯಂತಿಯನ್ನು ಕುರಿತು ಸತ್ಯವಾದಿಗಳಾದ ಆ ತಪಸ್ವಿಗಳು ಮಾತನಾಡಿದರು.

ಉದರ್ಕಸ್ತವ ಕಲ್ಯಾಣಿ ಕಲ್ಯಾಣೋ ಭವಿತಾ ಶುಭೇ ।
ವಯಂ ಪಶ್ಯಾಮ ತಪಸಾ ಕ್ಷಿಪ್ರಂ ದ್ರಕ್ಷ್ಯಸಿ ನೈಷಧಮ್ ॥೯೫॥

ನಿಷಧಾನಾಮಧಿಪತಿಂ ನಳಂ ರಿಪುನಿಘಾತಿನಮ್ ।
ಭೈಮಿ ಧರ್ಮಭೃತಾಂ ಶ್ರೇಷ್ಠಂ ದ್ರಷ್ಟಾಸಿ ವಿಗತಜ್ವರಮ್ ॥೯೬॥

ಕಲ್ಯಾಣಿಯೇ ಶುಭಳಾದವಳೇ ನಿನಗೆ ಶ್ರೇಷ್ಠವಾದ ಕಲ್ಯಾಣವು ಉಂಟಾಗುವುದನ್ನು ತಪೋದೃಷ್ಟಿಯಿಂದ ನಾವು ನೋಡುತ್ತಿದ್ದೇವೆ. ನೀನು ಬೇಗ ನೈಷಧನನ್ನು ನೋಡುವಿ. ಎಲೌ ಭೀಮರಾಜಕುಮಾರಿಯೇ ನಿಷಧದೇಶಾಧಿಪತಿಯಾದ ಶತ್ರುಸಂಹಾರಕನಾದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ನಳನು ನಿಶ್ಚಿಂತೆಯಿಂದ ಇರುವುದನ್ನು ನೀನು ನೋಡುವಿ.

ವಿಮುಕ್ತಂ ಸರ್ವಪಾಪೇಭ್ಯಃ ಸರ್ವರತ್ನವಿಭೂಷಿತಮ್ ।
ತದೇವ ನಗರಂ ಶ್ರೇಷ್ಠಂ ಪ್ರಶಾಸಂತಮರಿಂದಮಮ್ ॥೯೭॥

ದ್ವಿಷತಾಂ ಭಯಕರ್ತಾರಂ ಸುಹೃದಾಂ ಶೋಕನಾಶನಮ್ ।
ಪತಿಮೇಷ್ಯಸಿ ಕಲ್ಯಾಣಿ ಕಲ್ಯಾಣಾಭಿಜನಂ ನೃಪಮ್ ॥೯೮॥

ಎಲ್ಲ ಪಾಪಗಳಿಂದ ಮತ್ತು ದುಃಖಗಳಿಂದ ಮುಕ್ತನಾಗಿ ಸರ್ವರತ್ನವಿಭೂಷಿತನಾಗಿ ಶತ್ರುಗಳಿಗೆ ಭಯಂಕರನಾಗಿ ಹಿತೈಷಿಗಳಿಗೆ ಶೋಕನಾಶಕನಾಗಿ ಆದೇ ಶ್ರೇಷ್ಠವಾದ ನಗರವನ್ನು ಆಳುವ ಅರಿಂದಮನಾದ ಕಲ್ಯಾಣಕುಲದಲ್ಲಿ ಪ್ರಸೂತನಾದ ರಾಜನಾದ ನಿನ್ನ ಪತಿಯನ್ನು ಎಲೌ ಕಲ್ಯಾಣಿಯೇ, ನೀನು ಬೇಗ ಸೇರುವಿ.

ಏವಮುಕ್ತ್ವಾ ನಳಸ್ಯೇಷ್ಟಾಂ ಮಹಿಷೀಂ ಪಾರ್ಥಿವಾತ್ಮಜಾಮ್ ।
ಅಂತರ್ಹಿತಾಸ್ತಾಪಸಾಸ್ತೇ ಸಾಗ್ನಿಹೋತ್ರಾಶ್ರಮಾಸ್ತಥಾ ॥೯೯॥

ಆ ತಾಪಸರು ನಳನಿಗೆ ಪ್ರೀತಿಪಾತ್ರಳಾದ ರಾಜಕುಮಾರಿಯಾದ ಆ ರಾಣಿಗೆ ಹೀಗೆ ಹೇಳಿ ತಮ್ಮ ಅಗ್ನಿಹೋತ್ರ ಮತ್ತು ಆಶ್ರಮಗಳ ಜೊತೆಯಲ್ಲಿ ಅಂತರ್ಧಾನವನ್ನು ಹೊಂದಿದರು.

ಸಾ ದೃಷ್ಟ್ವಾ ಮಹದಾಶ್ಚರ್ಯಂ ವಿಸ್ಮಿತಾ ತ್ವಭವತ್ ತತಃ ।
ದಮಯಂತ್ಯನವದ್ಯಾಂಗೀ ವೀರಸೇನನೃಪಸ್ನುಷಾ ॥೧೦೦॥

ವೀರಸೇನನ ಸೊಸೆಯಾದ ಸುಂದರಾಂಗಿಯಾದ ಆ ದಮಯಂತಿಯು ಆ ಮಹದಾಶ್ಚರ್ಯವನ್ನು ನೋಡಿ ವಿಸ್ಮಿತಳಾದಳು.

ಚಿಂತಯಾಮಾಸ ವೈದರ್ಭೀ ಕಿಮೇತದ್ ದೃಷ್ಟವತ್ಯಹಮ್ ।
ಕಿಂ ನು ಸ್ವಪ್ನೋ ಮಯಾ ದೃಷ್ಟಃ ಕೋಽಯಂ ವಿಧಿರಿಹಾಗತಃ ।
ಕ್ವ ನು ತೇ ತಾಪಸಾಃ ಸರ್ವೇ ಕ್ವ ತದಾಶ್ರಮಮಂಡಲಮ್ ॥೧೦೧॥

ಕ್ವ ಸಾ ಪುಣ್ಯಜಲಾ ರಮ್ಯಾ ನಾನಾದ್ವಿಜನಿಷೇವಿತಾ ।
ನದೀ ತೇ ಚ ನಗಾ ಹೃದ್ಯಾಃ ಫಲಪುಷ್ಪೋಪಶೋಭಿತಾಃ ॥೧೦೨॥

ದಮಯಂತಿಯು ನಾನು ಏನನ್ನು ನೋಡಿದೆ? ನಾನು ನೋಡಿದುದು ಇದೇನು ಸ್ವಪ್ನವೋ? ಇದು ಎಂತಹ ಒಂದು ಸಂದರ್ಭವಿಲ್ಲಿ ಬಂದಿತು? ಆ ತಪಸ್ವಿಗಳೆಲ್ಲಾ ಎಲ್ಲಿ? ಆ ತಪೋವನವೆಲ್ಲಿ? ನಾನಾ ಪಕ್ಷಿಗಳಿಂದ ಕೂಡಿದ ಪವಿತ್ರವಾದ ಜಲದಿಂದ ಕೂಡಿದ ಮನೋಹರವಾದ ನದಿಯೆಲ್ಲಿ? ಫಲಪುಷ್ಪಗಳಿಂದ ಭರಿತವಾದ ಮನೋಹರವಾದ ಆ ಪರ್ವತಗಳೆಲ್ಲಿ? ಎಂದು ಚಿಂತಿಸಿದಳು.

ಇತ್ಯೇತನ್ನರಶಾರ್ದೂಲ ವಿಸ್ಮಿತಾ ಕಮಲೇಕ್ಷಣಾ ।
ಧ್ಯಾತ್ವಾ ಚಿರಂ ಭೀಮಸುತಾ ದಮಯಂತೀ ಶುಚಿಸ್ಮಿತಾ ।
ಭರ್ತೃಶೋಕಕೃಶಾ ದೀನಾ ವಿವರ್ಣವದನಾಽಭವತ್ ॥೧೦೩॥

ಎಲೈ ರಾಜಶಾರ್ದೂಲನೇ ಆ ಕಮಲನೇತ್ರೆಯಾದ ಭೀಮಸುತೆಯಾದ ಶುಚಿಸ್ಮಿತೆಯಾದ ಭರ್ತೃಶೋಕದಿಂದ ಕೃಶಳಾದ ದಮಯಂತಿಯು ವಿಸ್ಮಯಗೊಂಡು

ಬಹಳ ಸಮಯದವರೆಗೆ ಇದನ್ನೇ ಚಿಂತಿಸಿ ಪುನಃ ದೈನ್ಯದಿಂದಲೂ ಮತ್ತು ಕಾಂತಿಹೀನ ಮುಖದಿಂದಲೂ ಕೂಡಿದವಳಾದಳು.

ಸಾ ಗತಾ ಚಾಪರಾಂ ಭೂಮಿಂ ಬಾಷ್ಪಸಂದಿಗ್ಧಯಾ ಗಿರಾ ।
ವಿಲಲಾಪಾಶ್ರುಪೂರ್ಣಾಕ್ಷೀ ದೃಷ್ಟ್ವಾ ऽಶೋಕತರುಂ ತತಃ ॥೧೦೪॥

ಅವಳು ಇನ್ನೊಂದು ದಿಕ್ಕಿಗೆ ಹೋಗಿ ಒಂದು ಅಶೋಕವೃಕ್ಷವನ್ನು ನೋಡಿ ಕಣ್ಣುಗಳಲ್ಲಿ ನೀರುತುಂಬಿಕೊಂಡು ಕಣ್ಣೀರಿನಿಂದ ಗದ್ಗದವಾದ ಕಂಠದಿಂದ ವಿಲಾಪವನ್ನು ಮಾಡಿದಳು.

ಉಪಗಮ್ಯ ತರುಶ್ರೇಷ್ಠಮಶೋಕಂ ಪುಷ್ಪಿತಂ ವನೇ ।
ಪಲ್ಲವಾಪೀಡಿತಂ ಹೃದ್ಯಂ ವಿಹಂಗೈರಪಿ ನಾದಿತಮ್ ॥೧೦೫॥

ಆ ಕಾಡಿನಲ್ಲಿ ಪುಷ್ಪಗಳು ಮತ್ತು ಚಿಗುರುಗಳಿಂದ ಕೂಡಿದ್ದ ಪಕ್ಷಿಗಳನಾದದಿಂದ ಕೂಡಿದ್ದ ಮನೋಹರವಾದ ಮತ್ತು ಶ್ರೇಷ್ಠವಾದ ಒಂದು ಅಶೋಕವೃಕ್ಷವನ್ನು ಸಮೀಪಿಸಿದಳು. (ವಿಲಾಪವನ್ನು ಮಾಡಿದಳು.)

ದಮಯಂತೀ

ಅಹೋ ವನತರುಃ ಶ್ರೀಮಾನ್ ಶೋಭತೇಸ್ಮಿನ್ ವನಾಂತರೇ ।
ಆಪೀಡೈರ್ಬಹುಭಿರ್ಭಾತಿ ಶ್ರೀಮಾನ್ ದ್ರಮಿಳರಾಡಿವ ॥೧೦೬॥

ಓಹೋ ಈ ವನವೃಕ್ಷವು ಈ ವನಪ್ರದೇಶದಲ್ಲಿ ಅನೇಕ ಆಲಂಕಾರಗಳಿಂದ ಕೂಡಿದ ಸಂಪದ್ಯುಕ್ತನಾದ ದ್ರಮಿಳರಾಜನಂತೆ ಶೋಭಿಸುತ್ತಿದೆ.

ಅಶೋಕ ಶೋಕಾಪನುದ ಶೋಕೋಪಹತಚೇತಸಮ್ ।
ತ್ವನ್ನಾಮ್ನೀಂ ವೈ ಕುರು ಕ್ಷಿಪ್ರಂ ಪ್ರಿಯಸಂದರ್ಶನಾದ್ಧಿ ಮಾಮ್ ॥೧೦೭॥

ಅಶೋಕಾಂ ಕುರು ಮಾಂ ಕ್ಷಿಪ್ರಮಶೋಕ ಪ್ರಿಯದರ್ಶನ ।
ವೀತಶೋಕಭಯಾಬಾಧಂ ಕಚ್ಚಿತ್ತ್ವಂ ದೃಷ್ಟವಾನ್ ನೃಪಮ್ ॥೧೦೮॥

ಎಲೈ ಅಶೋಕವೃಕ್ಷವೇ, ಶೋಕನಾಶಕನೇ, ಶೋಕದಿಂದ ಪೀಡಿತವಾದ ಮನಸ್ಸುಳ್ಳ ನನಗೆ ನನ್ನ ಪ್ರಿಯನಾದ ನಳನನ್ನು ಬೇಗ ತೋರಿಸಿ ನನ್ನನ್ನು ನಿನ್ನ ಹೆಸರನ್ನೇ ಉಳ್ಳವಳನ್ನಾಗಿ

ಮಾಡು. ಎಲೈ ಅಶೋಕನೇ ಎಲೈ ಪ್ರಿಯದರ್ಶನನೇ ಬೇಗ ನನ್ನ ಶೋಕವನ್ನು ಪರಿಹರಿಸು. ಶೋಕಭಯ ಮುಕ್ತನಾದ ರಾಜನನ್ನು ನೀನೇನಾದರೂ ನೋಡಿದೆಯಾ!

ನಳಂ ನಾಮಾರಿದಮನಂ ದಮಯಂತ್ಯಾಃ ಪ್ರಿಯಂ ಪತಿಮ್ ।
ನಿಷಧಾನಾಮಧಿಪತಿಂ ದೃಷ್ಟವಾನಸಿ ಮೇ ಪ್ರಿಯಮ್ ॥೧೦೯॥

ಏಕವಸ್ತ್ರಾರ್ಧಸಂವೀತಂ ಸುಕುಮಾರತನುತ್ವಚಮ್ ।
ವ್ಯಸನೇನಾರ್ದಿತಂ ವೀರಮರಣ್ಯಮಿದಮಾಗತಮ್ ॥೧೧೦॥

ಒಂದು ವಸ್ತ್ರದ ತುಂಡನ್ನು ಸುತ್ತಿಕೊಂಡು ಸುಕುಮಾರ ಶರೀರವನ್ನು ಹೊಂದಿರುವ ದುಃಖದಿಂದ ಪೀಡಿತನಾದ ಈ ಅರಣ್ಯಕ್ಕೆ ಬಂದಂತಹ ವೀರನೂ ಪ್ರಿಯನೂ ಶತ್ರುದಮನನೂ ದಮಯಂತಿಯ ಪ್ರಿಯಪತಿಯೂ ಆದ ನಿಷಧರಾಜನಾದ ನಳನನ್ನು ನೀನು ನೋಡಿದೆಯಾ?

ಯಥಾ ವಿಶೋಕಾ ಗಚ್ಛೇಯಮಶೋಕವರ ತತ್ ಕುರು ।
ಸತ್ಯನಾಮಾ ಭವಾಶೋಕ ಮಮ ಶೋಕವಿನಾಶನಾತ್ ॥೧೧೧॥

ಎಲೈ ಅಶೋಕಶ್ರೇಷ್ಠನೇ ನಾನು ಇಲ್ಲಿಂದ ಶೋಕರಹಿತಳಾಗಿ ಹೋಗುವಂತೆ ಮಾಡು. ನನ್ನ ಶೋಕವನ್ನು ನಾಶಮಾಡಿ ನಿನ್ನ ಅಶೋಕವೆಂಬ ಹೆಸರನ್ನು ಸಾರ್ಥಕವನ್ನಾಗಿ ಮಾಡಿಕೋ.

ಏವಂ ಸಾऽಶೋಕವೃಕ್ಷಂ ತಮಾರ್ತಾ ತ್ರಿರುಪಗಮ್ಯ ಸಾ ।
ಜಗಾಮ ದಾರುಣಂ ದೇಶಂ ವೈದರ್ಭೀ ಕಮಲೇಕ್ಷಣಾ ॥೧೧೨॥

ಹೀಗೆ ಕಮಲನೇತ್ರೆಯಾದ ಆ ವೈದರ್ಭಿಯು ಆರ್ತಳಾಗಿ ಆ ಅಶೋಕವೃಕ್ಷಕ್ಕೆ ಮೂರು ಪ್ರದಕ್ಷಿಣೆಯನ್ನು ಮಾಡಿ ಅಲ್ಲಿಂದ ದಾರುಣವಾದ ಇನ್ನೊಂದು ದೇಶಕ್ಕೆ ಹೊರಟಳು.

ಸಾ ದದರ್ಶ ನಗಾನ್ ನೈಕಾನ್ ಸರಾಂಸಿ ಸರಿತಸ್ತಥಾ ।
ನೈಕಾಂಶ್ಚ ಪರ್ವತಾನ್ ರಮ್ಯಾನ್ ನೈಕಾಂಶ್ಚ ಮೃಗಪಕ್ಷಿಣಃ ॥೧೧೩॥

ಕಂದರಾಂಶ್ಚ ನಿತಂಬಾಂಶ್ಚ ಪರ್ವತಾಂಶ್ಚ ಸಕಿಂಶುಕಾನ್ ।
ದದರ್ಶ ಸಾ ಭೀಮಸುತಾ ಪತಿಮನ್ವೇಷತೀ ತದಾ ॥೧೧೪॥

ಪತಿಯನ್ನು ಹುಡುಕುತ್ತಾ ಹೊರಟ ಆ ಭೀಮಸುತೆಯು ಅನೇಕ ಪರ್ವತಗಳನ್ನೂ ಸರೋವರಗಳನ್ನೂ ನದಿಗಳನ್ನೂ ಸುಂದರವಾದ ಅನೇಕ ಮೃಗಪರ್ವತಗಳನ್ನೂ ಅನೇಕ ಮೃಗಪಕ್ಷಿಗಳನ್ನೂ ಗುಹೆಗಳನ್ನೂ ಪರ್ವತದ ತಪ್ಪಲು ಪ್ರದೇಶಗಳನ್ನೂ ಕಿಂಶುಕ ವೃಕ್ಷಗಳಿಂದ ಕೂಡಿದ ಅನೇಕ ಭೂಪ್ರದೇಶಗಳನ್ನೂ ನೋಡಿದಳು.

ಸಾ ಗತ್ವಾ ದೂರಮಧ್ವಾನಂ ದಮಯಂತೀ ಶುಚಿಸ್ಮಿತಾ ।
ದದರ್ಶಾಥ ಮಹಾಸಾರ್ಥಂ ಹಸ್ತ್ಯಶ್ವರಥಸಂಕುಲಮ್ ॥೧೧೫॥

ಉತ್ತರಂತಂ ನದೀಂ ರಮ್ಯಾಂ ಪ್ರಸನ್ನಸಲಿಲಾಂ ಶುಭಾಮ್ ।
ಸುಶೀತತೋಯಾಂ ವಿಸ್ತೀರ್ಣಾಂ ಹ್ಲಾದಿನೀಂ ಪಾದಪೈರ್ವೃತಾಮ್ ॥

ಪ್ರೋದ್ಘುಷ್ಟಾಂ ಕ್ರೌಂಚಕುರರೈಶ್ಚಕ್ರವಾಕೈಶ್ಚ ಶೋಭಿತಾಮ್ ।
ಕೂರ್ಮಗ್ರಾಹಝಷಾಕೀರ್ಣಾಂ ಪುಲಿನದ್ವೀಪಶೋಭಿತಾಮ್ ॥೧೧೭॥

ಆ ಶುಚಿಸ್ಮಿತೆಯಾದ ದಮಯಂತಿಯು ಬಹಳ ದೂರನಡೆದು ಹಸ್ತ್ಯಶ್ವರಥಗಳಿಂದ ಕೂಡಿದ್ದ ಒಂದು ವರ್ತಕರ ಸಮುದಾಯವನ್ನು ನೋಡಿದಳು ಆ ಗುಂಪು ಸ್ವಚ್ಛವಾದ ಶುಭವಾದ ಶೀತಲವಾದ ನೀರಿನಿಂದ ಕೂಡಿದ ವಿಸ್ತಾರವಾದ ಹರಿಯುವ ನೀರಿನ ಘೋಷದಿಂದ ಶೋಭಿತವಾದ, ಕೀರವೃಕ್ಷಗಳಿಂದ ಆವೃತವಾದ, ಆಮೆ ಮೀನು ಮೊಸಳೆಗಳಿಂದ ತುಂಬಿದ, ಮಧ್ಯದಲ್ಲಿ ಮರಳಿನ ಸಣ್ಣ ದ್ವೀಪಗಳಿರುವ, ನದಿಯನ್ನು ದಾಟುತ್ತಿತ್ತು.

ಸಾ ದೃಷ್ಟ್ವೈವ ಮಹಾಸಾರ್ಥಂ ದಮಯಂತೀ ಯಶಸ್ವಿನೀ ।
ಉಪಸಸ್ಪರ್ಶ ವರಾರೋಹಾ ಜನಮಧ್ಯಂ ವಿವೇಶ ಹ ॥೧೧೮॥

ಉನ್ಮತ್ತರೂಪಾ ಶೋಕಾರ್ತಾ ತಥಾ ವಸ್ತ್ರಾರ್ಧಸಂವೃತಾ ।
ಕೃಶಾ ವಿವರ್ಣವದನಾ ಪಾಂಸುಧ್ವಸ್ತಶಿರೋರುಹಾ ॥೧೧೯॥

ಆ ಸಮುದಾಯವನ್ನು ನೋಡಿದ ಕೂಡಲೇ ಹುಚ್ಚಿಯಂತಿದ್ದ ಶೋಕಾರ್ತಳಾದ ಅರ್ಧವಸ್ತ್ರವನ್ನು ಧರಿಸಿದ್ದ ಕೃಶಳೂ ಕಾಂತಿಹೀನಳೂ ಧೂಳಿನಿಂದ ತುಂಬಿಸ ಕೇಶಪಾಶವುಳ್ಳವಳೂ ಸುಂದರಿಯೂ ಕೀರ್ತಿವಂತಳೂ ಆದ ದಮಯಂತಿಯು ಅದನ್ನು ಸಮೀಪಿಸಿ ಜನಗಳ ಮಧ್ಯದಲ್ಲಿ ಸೇರಿದಳು.

ತಾಂ ದೃಷ್ಟ್ವಾ ತತ್ರ ಮನುಜಾಃ ಕೇಚಿದ್ ಭೀತಾಃ ಪ್ರದುದ್ರುವುಃ ।
ಕೇಚಿಚ್ಚಿಂತಾಪರಾಸ್ತಸ್ಥುಃ ಕೇಚಿತ್ ತತ್ರ ವಿಚುಕ್ರುಶುಃ ॥೧೨೦॥

ಪ್ರಹಸಂತಿ ಸ್ಮ ತಾಂ ಕೇಚಿನ್ನ ಹ್ಯಸೂಯಂತಿ ಚಾಪರೇ ।
ಕುರ್ವಂತ್ಯಸ್ಯಾಂ ದಯಾಂ ಕೇಚಿತ್ ಪಪ್ರಚ್ಛುಶ್ಚಾಪಿ ಭಾರತ ॥೧೨೧॥

ಅವಳನ್ನು ನೋಡಿ ಅಲ್ಲಿದ್ದ ಕೆಲವು ಜನರು ಭಯದಿಂದ ಓಡಿ ಹೋದರು. ಕೆಲವರು ಚಿಂತಾಕ್ರಾಂತರಾಗಿ ಅಲ್ಲಿಯೇ ನಿಂತರು. ಕೆಲವರು ಕಿರುಚಿಕೊಂಡರು. ಕೆಲವರು ಗಟ್ಟಿಯಾಗಿ ನಕ್ಕರು. ಇನ್ನು ಕೆಲವರು ಅವಳನ್ನು ನೋಡಿ ಅಸೂಯೆಯನ್ನು ಪಡಲಿಲ್ಲ. ಇನ್ನು ಕೆಲವರು ಅವಳಲ್ಲಿ ದಯೆಯನ್ನು ಮಾಡಿದರು ಎಲೈ ಭಾರತನೇ ಕೆಲವರು ಅವಳನ್ನು ಕುರಿತು ಹೀಗೆ ಕೇಳಿದರು.

ಕಾಽಸಿ ಕಸ್ಯಾಸಿ ಕಲ್ಯಾಣಿ ಕಿಂ ವಾ ಮೃಗಯಸೇ ವನೇ ।
ತ್ವಾಂ ದೃಷ್ಟ್ವಾ ವ್ಯಥಿತಾಶ್ಚೈಕೇ ನರಾಃ ಸಾರ್ಥನಿವಾಸಿನಃ ॥೧೨೨॥

ಕಲ್ಯಾಣಿಯೇ, ನೀನು ಯಾರು? ಯಾರಪತ್ನಿ? ಈ ಕಾಡಿನಲ್ಲಿ ಏನನ್ನು ಹುಡುಕುತ್ತಿದ್ದೀಯೆ? ನಿನ್ನನ್ನು ನೋಡಿ ಈ ಗುಂಪಿನಲ್ಲಿರುವ ಜನರು ವ್ಯಥಿತರಾಗಿದ್ದಾರೆ.

ವದ ಸತ್ಯಂ ವನಸ್ಯಾಸ್ಯ ಪರ್ವತಸ್ಯಾಥವಾ ದಿಶಃ ।
ದೇವತಾ ತ್ವಂ ಹಿ ಕಲ್ಯಾಣಿ ತ್ವಾಂ ವಯಂ ಶರಣಂ ಗತಾಃ ॥೧೨೩॥

ಕಲ್ಯಾಣಿಯೇ, ಸತ್ಯವನ್ನು ಹೇಳು ನೀನು ಈ ವನದ ದೇವತೆಯೆ ಅಥವಾ ಪರ್ವತದ ದೇವತೆಯೆ ಅಥವಾ ದಿಗ್‌ದೇವತೆಯೇ? ನಾವು ನಿನಗೆ ಶರಣಾಗತರಾಗಿದ್ದೇವೆ.

ಯಕ್ಷೀ ವಾ ರಾಕ್ಷಸೀ ವಾ ತ್ವಮುತಾಹೋಽಸಿ ಸುರಾಂಗನಾ ।
ಸರ್ವಥಾ ಕುರು ನಃ ಸ್ವಸ್ತಿ ರಕ್ಷ ಚಾಸ್ಮಾನನಿಂದಿತೇ ॥೧೨೪॥

ಎಲೈ ಅನಿಂದಿತೆಯೇ ನೀನು ಯಕ್ಷಿಯಾಗಿದ್ದರೂ ರಾಕ್ಷಸಿಯಾಗಿದ್ದರೂ ಅಥವಾ ದೇವತಾ ಸ್ತ್ರೀಯಾಗಿದ್ದರೂ ಸರ್ವಥಾ ನಮಗೆ ಕ್ಷೇಮವನ್ನುಂಟುಮಾಡಿ ನಮ್ಮನ್ನು ರಕ್ಷಿಸು.

ಯಥಾಽಯಂ ಸರ್ವಥಾ ಸಾರ್ಥಃ ಕ್ಷೇಮೀ ಶೀಘ್ರಮಿತೋ ವ್ರಜೇತ್ ।
ತಥಾ ವಿಧತ್ಸ್ವ ಕಲ್ಯಾಣಿ ಯಥಾ ಶ್ರೇಯೋ ಹಿ ನೋ ಭವೇತ್ ॥೧೨೫॥

ಎಲೌ ಕಲ್ಯಾಣಿಯೇ ಈ ವರ್ತಕರ ಸಮುದಾಯವು ಕ್ಷೇಮದಿಂದ ಇಲ್ಲಿಂದ ಬೇಗ ಹೋಗುವಂತೆ ಮತ್ತು ನಮಗೆ ಶ್ರೇಯಸ್ಸುಂಟಾಗುವಂತೆ ನೀನು ಅನುಗ್ರಹಿಸು.

ಯಥೋಕ್ತಾ ತೇನ ಸಾರ್ಥೇನ ದಮಯಂತೀ ನೃಪಾತ್ಮಜಾ ।
ಪ್ರತ್ಯುವಾಚ ತತಃ ಸಾಧ್ವೀ ಭರ್ತೃಶೋಕೇನ ಪೀಡಿತಾ ॥೧೨೬॥

ಆ ಗುಂಪಿನಿಂದ ಹೀಗೆ ಹೇಳಲ್ಪಟ್ಟ ಸಾಧ್ವಿಯಾದ ಭರ್ತೃಶೋಕದಿಂದ ಪೀಡಿತಳಾದ ರಾಜಕುಮಾರಿಯಾದ ದಮಯಂತಿಯು ಆಗ ಅವರಿಗೆ ಉತ್ತರವನ್ನು ಕೊಟ್ಟಳು.

ಸಾರ್ಥವಾಹಶ್ಚ ಸಾರ್ಥಶ್ಚ ಜನಾ ಯೇ ಚಾತ್ರ ಕೇಚನ ।
ಯುವಸ್ಥವಿರಬಾಲಾಶ್ಚ ಸಾರ್ಥಸ್ಯಾಸ್ಯ ಪುರೋಗಮಾಃ ॥೧೨೭॥

ಮಾನುಷೀಂ ಮಾಂ ವಿಜಾನೀತ ಮನುಜಾಧಿಪತೇಃ ಸುತಾಮ್ ।
ನೃಪಸ್ನುಷಾಂ ರಾಜಭಾರ್ಯಾಂ ಭರ್ತೃದರ್ಶನಲಾಲಸಾಮ್ ॥೧೨೮॥

ಈ ಗುಂಪಿನನಾಯಕರು ಮತ್ತು ಇಲ್ಲಿರುವ ಗುಂಪಿನ ಮುಂದೆ ಹೋಗುವ ಯುವಕರು ವೃದ್ಧರು ಬಾಲಕರು ಆದ ಜನರೆಲ್ಲರೂ ತಿಳಿಯಿರಿ. ಎಲ್ಲರೂ ನನ್ನನ್ನು ರಾಜಕುಮಾರಿ ಎಂದೂ ರಾಜನ ಸೊಸೆಯೆಂದೂ ರಾಜನ ಭಾರ್ಯೆಯೆಂದೂ ಪತಿಯದರ್ಶನದ ಹೆಬ್ಬಯಕೆಯನ್ನು ಹೊಂದಿರುವ ಮನುಷ್ಯಸ್ತ್ರೀಯೆಂದೂ ತಿಳಿಯಿರಿ.

ವಿದರ್ಭರಾಜ್ಞಮ ಪಿತಾ ಭರ್ತಾ ರಾಜಾ ಚ ನೈಷಧಃ ।
ನಳೋ ನಾಮ ಮಹಾಭಾಗಸ್ತಂ ಮಾರ್ಗಾಮ್ಯಪರಾಜಿತಮ್ ॥೧೨೯॥

ವಿದರ್ಭರಾಜನು ನನ್ನ ತಂದೆ. ನೈಷಧರಾಜನು ನನ್ನ ಪತಿ. ಅಪರಾಜಿತನಾದ ಮಹಾನುಭಾವನಾದ ನಳನನ್ನು ಹುಡುಕುತ್ತಿದ್ದೇನೆ.

ಯದಿ ಜಾನೀತ ನೃಪತಿಂ ಕ್ಷಿಪ್ರಂ ಶಂಸತ ಮೇ ಪ್ರಿಯಮ್ ।
ನಳಂ ಪುರುಷಶಾರ್ದೂಲಮಮಿತ್ರಗಣಸೂದನಮ್ ॥೧೩೦॥

ಒಂದು ಪಕ್ಷ ನನ್ನ ಪ್ರಿಯನೂ ಪುರುಷಶಾರ್ದೂಲನೂ ಶತ್ರುಗಳ ಸಂಹಾರಕನೂ ಆದ ನಳನನ್ನು ನೋಡಿದ್ದರೆ ಬೇಗ ನನಗೆ ಹೇಳಿ.

ತಾಮುವಾಚಾನವದ್ಯಾಂಗೀಂ ಸಾರ್ಥಸ್ಯ ಚ ಮಹಾಪ್ರಭುಃ ।
ಸಾರ್ಥವಾಹಃ ಶುಚಿರ್ನಾಮ ದಮಯಂತೀಂ ನರಾಧಿಪ ॥೧೩೧॥

ಎಲೈ ರಾಜನೇ, ಆ ಗುಂಪಿನ ನಾಯಕನಾದ ಶುಚಿ ಎಂಬ ಪುರುಷನು ಸುಂದರಿಯಾದ ಆ ದಮಯಂತಿಯನ್ನು ಕುರಿತು ಹೇಳಿದನು.

ಅಹಂ ಸಾರ್ಥಸ್ಯ ನೇತಾ ವೈ ಸಾರ್ಥವಾಹಃ ಶುಚಿಸ್ಮಿತೇ ।
ಮನುಷ್ಯಂ ನಳನಾಮಾನಂ ನ ಪಶ್ಯಾಮಿ ಯಶಸ್ವಿನಿ ॥೧೩೨॥

ಗೋಮಾಯುಕುಂಜರದ್ವೀಪಿಮಹಿಷರ್ಕ್ಷಮೃಗಾನಪಿ ।
ಪಶ್ಯಾಮ್ಯಸ್ಮಿನ್ ವನೇ ದುರ್ಗೇ ಹ್ಯಮನುಷ್ಯನಿಷೇವಿತೇ ॥೧೩೩॥

ಶುಚಿಸ್ಮಿತೆಯೇ, ನಾನು ಈ ಗುಂಪಿನ ನಾಯಕನಾದ ಸಾರ್ಥವಾಹ. ಯಶಸ್ವಿನಿಯೇ ನಳನೆಂಬ ಮನುಷ್ಯನನ್ನು ನಾನು ನೋಡಲಿಲ್ಲ. ಈ ದುರ್ಗಮವಾದ ಮನುಷ್ಯವರ್ಜಿತವಾದ ಕಾಡಿನಲ್ಲಿ ನರಿಗಳನ್ನು ಆನೆಗಳನ್ನು ದ್ವೀಪಿಗಳನ್ನು ಕಾಡೆಮ್ಮೆಗಳನ್ನು ಕರಡಿಗಳನ್ನು ಮತ್ತು ಜಿಂಕೆಗಳನ್ನು ಮಾತ್ರ ನೋಡುತ್ತಿದ್ದೇನೆ.

ಯಥಾ ವಯಂ ತಂ ಪಶ್ಯಾಮೋ ನಳಂ ಪಾರ್ಥಿವಮತ್ರ ವೈ ।
ತತೋ ವೈ ಯಕ್ಷರಾಜಃ ಸ ಮಣಿಭದ್ರಃ ಪ್ರಸೀದತು ॥೧೩೪॥

ನಾವು ಇಲ್ಲಿಯೇ ಆ ಪಾರ್ಥಿವನಾದ ರಾಜನಾದ ನಳನನ್ನು ನೋಡುವಂತೆ ಯಕ್ಷರಾಜನಾದ ಮಣಿಭದ್ರನು ನಮ್ಮನ್ನು ಅನುಗ್ರಹಿಸಲಿ.

ಸಾಽಬ್ರವೀದ್ ವಣಿಜಃ ಸರ್ವಾನ್ ಸಾರ್ಥವಾಹಂ ಚ ತಂ ತತಃ।
ಕ್ವನು ಯಾಸ್ಯತಿ ಸಾರ್ಥೋಽಯಮೇತದಾಖ್ಯಾತುಮರ್ಹಥ ॥೧೩೫॥

ಆಗ ದಮಯಂತಿಯು ಆ ವರ್ತಕರನ್ನು ಮತ್ತು ಆ ವರ್ತಕರ ಗುಂಪಿನಲ್ಲಿದ್ದ ಎಲ್ಲರನ್ನು ಕುರಿತು ಈ ಗುಂಪು ಎಲ್ಲಿಗೆ ಹೋಗುತ್ತಿದೆಯೆಂದು ನನಗೆ ಹೇಳಿ ಎಂದು ಕೇಳಿದಳು.

ಸಾರ್ಥವಾಹಃ

ಸಾರ್ಥೋಽಯಂ ಚೇದಿರಾಜಸ್ಯ ಸುಬಾಹೋಃ ಸತ್ಯವಾದಿನಃ ।
ಕ್ಷಿಪ್ರಂ ಜನಪದಂ ಗಂತಾ ಲಾಭಾಯ ಮನುಜಾತ್ಮಜೇ ॥೧೩೫॥

ಎಲೌ ಕುಮಾರಿಯೇ, ಈ ಗುಂಪು ಸತ್ಯವಾದಿಯಾದ ಚೇದಿರಾಜನಾದ ಸುಬಾಹುವಿನ ದೇಶಕ್ಕೆ ಲಾಭವನ್ನು ಗಳಿಸುವುದಕ್ಕೋಸ್ಕರ ಶೀಘ್ರವಾಗಿ ಹೋಗುವುದು ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೇಳನೆಯ ಅಧ್ಯಾಯ

(ವರ್ತಕರ ಗುಂಪಿನ ಮೇಲೆ ರಾತ್ರಿಯಲ್ಲಿ ಆನೆಗಳ ದಾಳಿ.
ದಮಯಂತಿಯಮೇಲೆ ಆ ವರ್ತಕರ ಆಕ್ರೋಶ.
ಅಲ್ಲಿಂದ ದಮಯಂತಿಯ ಪಲಾಯನ.)

ಬೃಹದಶ್ವ

ಸಾ ತಚ್ಛ್ರುತ್ವಾನವದ್ಯಾಂಗೀ ಸಾರ್ಥವಾಹವಚಸ್ತದಾ ।
ಅಗಚ್ಛದ್ ರಾಜಶಾರ್ದೂಲ ವಿದ್ಯುಲ್ಲೇಖೇವ ಶಾರದೀ ।
ಸಾರ್ಥೇ ಮಹತಿ ದುಃಖಾರ್ತಾ ಭರ್ತೃದರ್ಶನಲಾಲಸಾ ॥೧॥

ರಜಸಾ ಸಮವಚ್ಛನ್ನಾ ಸಾರ್ಥಜೇನ ಶುಚಿಸ್ಮಿತಾ ।
ಅನಭಿಜ್ಞಾಯಮಾನೈವ ಗಚ್ಛಂತೀ ಸುಮಹದ್ವನಮ್ ॥೨॥

ಆಸಸಾದ ಸರೋ ರಮ್ಯಂ ಭಾಸ್ಕರಸ್ಯಾಸ್ತಸಂಗಮೇ ।
ಶೀತತೋಯಂ ಸುವಿಪುಳಂ ನಿರ್ಮಲಂ ನೈಕಯೋಜನಮ್ ॥೩॥

ಎಲೈ ರಾಜಶಾರ್ದೂಲನೇ! ಸುಂದರಾಂಗಿಯಾದ ಅವಳು ಆ ಸಾರ್ಥನಾಯಕನ ಮಾತನ್ನು ಕೇಳಿ ಪತಿಯನ್ನು ನೋಡುವ ಹೆಬ್ಬಯಕೆಯಿಂದ ದುಃಖಾರ್ತಳಾಗಿ ದೊಡ್ಡಗುಂಪಿನ ಮಧ್ಯದಲ್ಲಿ ಶರತ್‌ಕಾಲದ ಮಿಂಚಿನ ಬಳ್ಳಿಯಂತೆ ನಡೆದಳು. ಶುಚಿಸ್ಮಿತೆಯಾದ ಅವಳು ಗುಂಪಿನಿಂದ ಎದ್ದು ಧೂಳಿನಿಂದ ಆವೃತಳಾಗಿ ಯಾರಿಂದಲೂ ತಿಳಿಯಲ್ಪಡದೆ ಕಾಡಿನಲ್ಲಿ ನಡೆದು ಸೂರ್ಯನು ಅಸ್ತಂಗತನಾಗುವ ಸಮಯದಲ್ಲಿ ಶೀತಲಜಲವಿದ್ದ ಅನೇಕ ಯೋಜನ ವಿಸ್ತಾರವಾದ ಒಂದು ನಿರ್ಮಲವಾದ ಮತ್ತು ಮನೋಹರವಾದ ಸರೋವರವನ್ನು ತಲುಪಿದಳು.

ಕಲ್ಹಾರೈಃ ಸಮವಚ್ಛನ್ನಂ ಪದ್ಮೋತ್ಪಲವಿರಾಜಿತಮ್ ।
ಹಂಸಕಾರಂಡವಾಕೀರ್ಣಂ ಚಕ್ರವಾಕೋಪಶೋಭಿತಮ್ ॥೪॥

ತೀರಜೈಸ್ತರುಭಿರ್ನದ್ಯೈಃ ಫಲಪುಷ್ಪೋಪಶೋಭಿತೈಃ ।
ವ್ಯರಾಜತ ಯಥಾ ರಾಜಾ ಸುಭೃತ್ಯೈಃ ಪರಿವಾರಿತಃ ॥೫॥

ಸರೋವರವು ಕಲ್ಹಾರ ಕಮಲ ಉತ್ಪಲಪುಷ್ಪಗಳಿಂದ ವಿರಾಜಿತವಾಗಿ ಹಂಸ ಕಾರಂಡವಾದಿ ಪಕ್ಷಿಗಳಿಂದ ನಿಬಿಡವಾಗಿ ಚಕ್ರವಾಕಾದಿ ಪಕ್ಷಿಗಳಿಂದ ಶೋಭಿತವಾಗಿ ತೀರದಲ್ಲಿ ಫಲಪುಷ್ಪ ಭರಿತವಾದ ಮನೋಹರವಾದ ಅನೇಕ ವೃಕ್ಷಗಳಿಂದ ಸುತ್ತುವರಿಯಲ್ಪಟ್ಟು ಒಳ್ಳೆಯ ಸೇವಕರಿಂದ ಸುತ್ತುವರಿಯಲ್ಪಟ್ಟ ರಾಜನಂತೆ ಕಂಗೊಳಿಸುತ್ತಿದ್ದಿತು.

ತದಾಸ್ರಿತ್ಯ ಸ ಸಾರ್ಥಸ್ತು ನಿವಾಸಾಯೋಪಜಗ್ಮಿವಾನ್ ।
ಭಾರಾರ್ತಾಃ ಸೌರಭೇಯಾಶ್ಚ ಕ್ಷುತ್ತೃಷಾ ಚ ಪ್ರಪೀಡಿತಾಃ ।
ಅವರೋಪಿತಭಾರಾಸ್ತು ಲೇಭಿರೇ ಪರಮಂ ಸುಖಮ್ ॥೬॥

ಆ ಸರೋವರವನ್ನು ಆಶ್ರಯಿಸಿ ಆ ವರ್ತಕರ ಗುಂಪು ಅಲ್ಲಿಯೇ ಬೀಡುಬಿಡಲು ಸಮೀಪಕ್ಕೆ ಬಂದಿತು. ಭಾರವನ್ನು ಹೊತ್ತಿದ್ದ ವೃಷಭಗಳು ಹಸಿವೆ ಮತ್ತು ನೀರಡಿಕೆಗಳಿಂದ ಬಳಲಿದ್ದವು. ಭಾರಗಳನ್ನು ಇಳಿಸಿದ ಮೇಲೆ ಅವುಗಳಿಗೆ ಸಂತೋಷವಾಯಿತು.

ತಥಾಶ್ವಾ ವಾರಣಾಶ್ಚೈವ ರಾಸಭಾಃ ಕಳಭೈಃ ಸಹ ।
ದೃಷ್ಟ್ವೈವ ತತ್ಸರೋ ರಮ್ಯಮಾಶ್ವಾಸಂ ಪರಮಂ ಯಯುಃ ॥೭॥

ಹಾಗೆಯೇ ಅಶ್ವಗಳು, ಭಾರವನ್ನು ಹೊರಲು ಸಾಕಿದ ಆನೆಗಳು, ರಾಸಭಗಳು ಮತ್ತು ಮರಿಯಾನೆಗಳು ಆ ಸುಂದರವಾದ ಸರೋವರವನ್ನು ನೋಡಿದ ತಕ್ಷಣವೇ ಬಹಳ ಸಮಾಧಾನವನ್ನು ಹೊಂದಿದವು.

ಅಥಾನಂತರಮೇವೇಹ ವಣಿಜಃ ಪಥಿಕಾಸ್ತಥಾ ।
ಯಥಾಯೋಗಂ ಯಥಾಸ್ಥಾನಂ ಸ್ವಾವಾಸಂ ಪ್ರತಿಪೇದಿರೇ ॥೮॥

ಅನಂತರ ವರ್ತಕರು ಮತ್ತು ಪಥಿಕರು ತಮ್ಮ ತಮಗೆ ಯೋಗ್ಯವಾದ ರೀತಿಯಲ್ಲಿ ಅಲ್ಲಿ ತಮ್ಮ ಬಿಡಾರಗಳನ್ನು ಕಲ್ಪಿಸಿಕೊಂಡರು.

ಯಥಾಸ್ಥಿತಿಸಮಾಚಾರಮಾಹಾರಂ ಸ್ಥಾನಮೇವ ಚ ।
ಅವತೀರ್ಯಾವಸನ್ನಾನಾಂ ಚಕ್ರುಶ್ಚೈವ ಪ್ರವೇಕ್ಷಣಮ್ ॥೯॥

ಆ ಕಾಲಕ್ಕೆ ಯೋಗ್ಯವಾದ ಆಹಾರವನ್ನು ಸೇವಿಸಿ ತಮ್ಮ ತಮ್ಮ ಸ್ಥಾನಗಳನ್ನು ಕಲ್ಪಿಸಿ ಸಮೀಪದಲ್ಲಿದ್ದ ಇನ್ನೊಬ್ಬರ ಬಿಡಾರವನ್ನು ಸಮೀಪಿಸಿ ಅವುಗಳನ್ನು ನೋಡಿದರು.

ಚಕ್ರುಃ ಕಥಾಶ್ಚ ವಿವಿಧಾಃ ಕ್ರಯವಿಕ್ರಯಸಂಶ್ರಿತಾಃ ।
ಪ್ರಶಂಸಂತ್ಯಪರೇ ಕಷ್ಟಾಮಟವೀಂ ಶ್ವಾಪದಾವೃತಮ್ ।
ಸ್ಮರಂತೋ ಗೃಹಭೋಗಾಂಶ್ಚ ಜ್ಞಾತೀನಾಂ ಚ ಸಮಾಗಮಮ್ ॥೧೦॥

ಪುತ್ರಮಿತ್ರಕಲತ್ರಾಣಿ ಸರ್ವೇ ನಿದ್ರಾವಶಂ ಯಯುಃ ।
ಸಂವಾಹನೇನ ಭಾರಾಣಾಂ ಬಹುವಾಸರಜೇನ ತೇ ॥೧೧॥

ಕೆಲವರು ಕ್ರಮವಿಕ್ರಯಗಳಿಗೆ ಸಂಬಂಧಿಸಿದ ಅನೇಕ ಮಾತುಗಳನ್ನು ಆಡಿದರು. ಇನ್ನು ಕೆಲವರು ಮನೆಯ ಸುಖವನ್ನೂ ಬಂಧುಗಳ ಸಮಾಗಮವನ್ನೂ ಪುತ್ರಮಿತ್ರಕಲತ್ರರನ್ನೂ ಸ್ಮರಿಸುತ್ತಾ ಕ್ರೂರಮೃಗಗಳಿಂದ ಆವೃತವಾದ ಈ ಅಡವಿಯು ಕಷ್ಟಕರವಾದುದು ಎಂದು ಮಾತನಾಡಿದರು. ಅನೇಕ ದಿನಗಳವರೆಗೆ ಭಾರವನ್ನು ಹೊತ್ತ ಕಾರಣದಿಂದ ಎಲ್ಲರೂ ನಿದ್ರಾವಶರಾದರು.

ಖಿನ್ನಾಃ ಪತಿತಗಾತ್ರಾಸ್ತು ನಿದ್ರಯಾಪಹೃತಾ ಭೃಶಮ್ ।
ಪ್ರಸಾರಿತಾಂಗಾಃ ಖಿನ್ನಾಶ್ಚ ಮೃತಕಲ್ಪಾ ಇವಾಸತೇ ॥೧೨॥

ಎಲ್ಲರೂ ಖಿನ್ನರಾಗಿ ದಣಿದ ಶರೀರವುಳ್ಳವರಾಗಿ ಕೈಕಾಲುಗಳನ್ನು ಚಾಚಿ ದಣಿವಿನಿಂದ ನಿದ್ರಾವಶರಾಗಿ ಶವಗಳಂತೆ ಇದ್ದರು.

ಅಥಾರ್ಧರಾತ್ರಸಮಯೇ ಗಜಯೂಥಂ ಮಹತ್ತದಾ ।
ಆಜಗಾಮ ಸರೋ ಯತ್ರ ಪಿಪಾಸುಸ್ತತ್ಸರೋಜಲಮ್ ॥೧೩॥

ಅಥಾಪಶ್ಯತ ತಂ ಸಾರ್ಥಂ ಸಾರ್ಥಜಾನ್ ಸುಬಹೂನ್ ಗಜಾನ್ ।
ತೇ ತಾನ್ ಗ್ರಾಮ್ಯಗಜಾನ್ ದೃಷ್ಟ್ವಾ ಸರ್ವೇ ವನಗಜಾಸ್ತದಾ ।
ಸಮಾದ್ರವಂತ ವೇಗೇನ ಜಿಘಾಂಸಂತೋ ಮದೋತ್ಕಟಾಃ ॥೧೪॥

ಅನಂತರ ಅರ್ಧರಾತ್ರಿಯ ಸಮಯದಲ್ಲಿ ಆನೆಗಳ ದೊಡ್ಡಹಿಂಡು ಆ ಸರೋವರದ ನೀರನ್ನು ಕುಡಿಯಲು ಬಯಸಿ ಆ ಸರೋವರಕ್ಕೆ ಬಂದಿತು. ಆ ಕಾಡಾನೆಗಳು ಆ ಜನರ ಗುಂಪನ್ನೂ ಆ ಗುಂಪಿನಲ್ಲಿದ್ದ ಅನೇಕ ಪಳಗಿದ ಆನೆಗಳನ್ನೂ ನೋಡಿದವು. ವರ್ತಕರ ಆ ಗ್ರಾಮ್ಯಗಜಗಳನ್ನು ನೋಡಿ ಆ ಎಲ್ಲಾ ವನಗಜಗಳು ಆಗ ಮದೋತ್ಕಟವಾಗಿ ಅವುಗಳನ್ನು ಕೊಲ್ಲಲು ವೇಗದಿಂದ ಮುನ್ನುಗ್ಗಿದವು.

ತೇಷಾಮಾಪತತಾಂ ವೇಗಃ ಕರೀಣಾಂ ದುಃಸಹೋऽಭವತ್ ।
ನಗಾಗ್ರಾದಿವ ಶೀರ್ಣಾನಾಂ ಶೃಂಗಾಣಾಂ ಪತತಾಂ ಕ್ಷಿತೌ ॥೧೫॥

ನದತಾಮಪಿ ನಾಗಾನಾಂ ನಾಲಂ ಸ್ಥಾತುಂ ವನೋದ್ಭವೈಃ ।
ಕರಿಭಿಃ ಕರಿಣಃ ಸರ್ವೇ ನೀತಾ ಮೃತ್ಯುವಶಂ ಕ್ಷಣಾತ್ ॥೧೬॥

ಗ್ರಾಮ್ಯಗಜಗಳ ಮೇಲೆ ಎರಗುವ ವನಗಜಗಳ ವೇಗವು ಪರ್ವತದ ಉರುಳಿ ತುದಿಯಿಂದ ಭೂಮಿಯ ಮೇಲೆ ಬೀಳುವ ಶಿಖರಗಳಂತೆ ದುಃಸಹವಾಗಿದ್ದಿತು. ಆಗ ಗರ್ಜಿಸುವ ಆನೆಗಳ ಸಮೀಪದಲ್ಲಿ ವನಚಾರಿಗಳು ನಿಲ್ಲಲು ಸಾಧ್ಯವಿರಲಿಲ್ಲ. ಆ ವನಗಜಗಳಿಂದ ಗ್ರಾಮ್ಯಗಜಗಳೆಲ್ಲವೂ ಒಂದೇ ಕ್ಷಣದಲ್ಲಿ ಕೊಲ್ಲಲ್ಪಟ್ಟವು.

ಸ ಚ ಸಾರ್ಥೋ ವಿಮಥಿತಃ ಸಸ್ತ್ರೀಬಾಲಗಜಾನ್ವಿತಃ ।
ಆರಾವಃ ಸುಮಹಾನಾಸೀತ್ ತ್ರೈಲೋಕ್ಯಭಯಕಾರಕಃ ॥೧೭॥

ಸ್ತ್ರೀಯರು ಬಾಲರು ಮತ್ತು ಗ್ರಾಮ್ಯಗಜಗಳಿಂದ ಕೂಡಿದ ವರ್ತಕರ ಸಮುದಾಯವು ಗಜಗಳಿಂದ ಮರ್ದನಕ್ಕೆ ಒಳಗಾಯಿತು. ಮೂರುಲೋಕಗಳಿಗೂ ಭಯವನ್ನು ಉಂಟುಮಾಡುವಂತೆ ದೊಡ್ಡ ಆರ್ತನಾದವು ಅಲ್ಲಿ ಹೊರ ಹೊಮ್ಮಿತು.

ವಾಜಿಭಿಃ ಪ್ರದ್ರುತೈಶ್ಚೈವ ಮಹಾದಂಷ್ಟ್ರೈಶ್ಚ ರಾಸಭೈಃ ।
ಅನ್ಯೋನ್ಯಂ ನಾಭಿರಕ್ಷಂತ ಮಥ್ಯಮಾನಾ ವನದ್ವಿಪೈಃ ॥೧೮॥

ಅಶ್ವಗಳು ಮತ್ತು ಮಹಾದಂಷ್ಟ್ರಗಳುಳ್ಳ ರಾಸಭಗಳು ಓಡಿ ಹೋಗುತ್ತಿರಲು ವನಗಜಗಳ ತುಳಿತಕ್ಕೆ ಸಿಕ್ಕಿದ ವರ್ತಕರು ಒಬ್ಬರನೊಬ್ಬರು ರಕ್ಷಿಸಲು ಸಾಧ್ಯವಾಗಲಿಲ್ಲ.

ಹತೋ ಭ್ರಾತಾ ಹತಃ ಪುತ್ರೋ ಹತಃ ಸ್ವಾಮೀ ಹತೋ ಗುರುಃ ।
ಏಷೋಽಗ್ನಿರುತ್ಥಿತಃ ಕಷ್ಟಂ ತ್ರಾಯಧ್ವಂ ಧಾವತಾಧುನಾ ॥೧೯॥

ರತ್ನರಾಶಿರ್ವಿಶೀರ್ಣೋಽಯಂ ಗೃಹ್ಣೀಧ್ವಂ ಕಿಂ ಪ್ರಧಾವತ ।
ಸಾಮಾನ್ಯಮೇತದ್ ದ್ರವಿಣಂ ನ ಮಿಥ್ಯಾ ವಚನಂ ಮಮ ॥೨೦॥

ಏವಮೇವಾಭಿಭಾಷಂತೋ ವಿದ್ರವಂತಿ ಭಯಾರ್ತತಃ ।
ಪುನರೇವಾಭಿಧಾವಂತಿ ವಿತ್ತಪ್ರಧ್ವಂಸಕಾತರಾಃ ॥೨೧॥

ನನ್ನ ತಮ್ಮನು ಹತನಾದನು ನನ್ನ ಪುತ್ರನು ಹತನಾದನು ನನ್ನ ಸ್ವಾಮಿಯು ಹತನಾದನು. ನನ್ನ ಗುರುವು ಹತನಾದನು ಇಲ್ಲಿ ಅಗ್ನಿಯು ಮೇಲೆ ಬೀಳುತ್ತಿದೆ. ದೊಡ್ಡ ಕಷ್ಟವು ಉಂಟಾಯಿತು. ಯಾರಾದರೂ ರಕ್ಷಿಸಿ. ಈಗ ಓಡಿಹೋಗಿ. ಈ ರತ್ನರಾಶಿಯು ಚಲ್ಲಾಪಿಲ್ಲಿಯಾಗಿದೆ. ಅದನ್ನು ತೆಗೆದು ಕೊಳ್ಳಿ. ಏಕೆ ಓಡುತ್ತಿದ್ದೀರಿ? ಈ ಧನವು ಎಲ್ಲರಿಗೂ ಸೇರಿದುದು. ನನ್ನ ಮಾತುಸುಳ್ಳಲ್ಲ. ಹೀಗೆಲ್ಲಾ ಮಾತನಾಡುತ್ತಾ ಜನಗಳು ಅಲ್ಲಿಂದ ಓಡುತ್ತಾರೆ. ತಮ್ಮ ಧನವು ನಾಶವಾಯಿತೆಂಬ ಕಾತುರದಿಂದ ಪುನಃ ಅಲ್ಲಿಗೆ ಓಡಿಬರುತ್ತಾರೆ.

ತಸ್ಮಿಂಸ್ತಥಾ ವರ್ತಮಾನೇ ದಾರುಣೇ ಜನಸಂಕ್ಷಯೇ ।
ದಮಯಂತೀ ಚ ಬುಬುಧೇ ಭಯಸಂತ್ರಸ್ತಮಾನಸಾ ॥೨೨॥

ಹೀಗೆ ಅಲ್ಲಿ ಘೋರವಾದ ಜನನಾಶವು ಉಂಟಾಗುತ್ತಿರಲು ಭಯದಿಂದ ಕೂಡಿದ ಮನಸ್ಸನ್ನು ಹೊಂದಿದ್ದ ದಮಯಂತಿಯು ಎಚ್ಚರಗೊಂಡಳು.

ಅಪಶ್ಯದ್ ವೈಶಸಂ ತಚ್ಚ ಸರ್ವಲೋಕಭಯಂಕರಮ್ ।
ಅದೃಷ್ಟಪೂರ್ವಂ ತದ್ ದೃಷ್ಟ್ವಾ ಬಾಲಾ ಪದ್ಮನಿಭೇಕ್ಷಣಾ ।
ಸಂತ್ರಸ್ತಮನಸಾ ತಸ್ಮಿಂಸ್ತಸ್ಥೌ ಶಶಿನಿಭಾನನಾ ॥೨೩॥

ಸರ್ವಲೋಕಭಯಂಕರವಾದ ಆ ಹಿಂಸೆಯನ್ನು ಅವಳು ನೋಡಿದಳು. ಪದ್ಮಲೋಚನೆಯಾದ ಚಂದ್ರಮುಖಿಯಾದ ಬಾಲೆಯಾದ ಅವಳು ಹಿಂದೆಂದೂ ನೋಡದಿದ್ದ ಅಂತಹ ದುರ್ಘಟನೆಯನ್ನು ನೋಡಿ ಮನಸ್ಸಿನಲ್ಲಿ ಹೆದರಿ ಅಲ್ಲಿ ನಿಂತಳು.

ಸರ್ವೈರ್ವಿಧ್ವಂಸಿತೈರ್ಭಗ್ನೈಸ್ತರುಭಿಶ್ಚಂದನಾದಿಭಿಃ ।
ವಿಕ್ಷಿಪ್ತೈರ್ಭಾತಿ ಭೂಃ ಸರ್ವಾ ದ್ಯೌರ್ಯುಕ್ತೈರಿವ ಶಾರದೀ ॥೨೪॥

ಪತದ್ಭಿಃ ಪಾತ್ಯಮಾನೈಶ್ಚ ಪತಿತೈಶ್ಚ ತತಸ್ತತಃ ।
ಭೀಷಣೇಯಂ ವನಂ ತದ್ಧಿ ಬಭೌ ತತ್ರ ಸಮಂತತಃ ॥೨೫॥

ವಿಮುಕ್ತನಾದಸಂತ್ರಸ್ತಂ ಹಾಹಾಕಾರವಿನಾದಿತಮ್ ।
ಬಭೌ ತತ್ತ್ವ ಸಂಬಾಧಂ ಮಹಾರಣಮಿವಾಪರಮ್ ॥೨೬॥

ಮುರಿದು ನಾಶಗೊಳಿಸಲ್ಪಟ್ಟ ಭೂಮಿಯ ಮೇಲೆ ಬಿದ್ದ ಚಂದನಾದಿ ವೃಕ್ಷಗಳಿಂದ ಕೂಡಿದ ಭೂಮಿಯು ಶರತ್‌ಕಾಲದಲ್ಲಿ ನಕ್ಷತ್ರಗಳಿಂದ ಕೂಡಿದ ಆಕಾಶದಂತೆ ಇದ್ದಿತು. ಅಲ್ಲಲ್ಲಿ ಬೀಳುತ್ತಿರುವ, ಇನ್ನೊಬ್ಬರಿಂದ ಬೀಳಿಸಲ್ಪಡುವ, ಮತ್ತು ಬೀಳುತ್ತಿರುವ ಗಜಗಳಿಂದ ಬೀಳಿಸಲ್ಪಡುತ್ತಿರುವ, ಮತ್ತು ಬಿದ್ದಿರುವ ವೃಕ್ಷಗಳಿಂದ ಆ ಕಾನನವು ಎಲ್ಲ ಕಡೆಗಳಲ್ಲಿಯೂ ಭಯಂಕರವಾಗಿ ಕಾಣುತ್ತಿತ್ತು ಕಿರುಚುವ ಧ್ವನಿಗಳಿಂದಲೂ ಹಾಹಾಕಾರಗಳಿಂದಲೂ ಕೂಡಿದ ಆ ಜನಸಮೂಹವು ಇನ್ನೊಂದು ದೊಡ್ಡ ಯುದ್ಧದಂತೆ ಇದ್ದಿತು.

ಯೇ ತು ತತ್ರ ವಿನಿರ್ಮುಕ್ತಾಃ ಸಾರ್ಥಾಃ ಕೇಚಿದವಿಕ್ಷತಾಃ ।
ತೇಽಬ್ರುವನ್ ಸಹಿತಾಃ ಸರ್ವೇ ಕಸ್ಯೇದಂ ಕರ್ಮಣಃ ಫಲಮ್ ॥೨೭॥

ಯಾವ ಕೆಲವರು ಗಾಯಗೊಳ್ಳದೆ ಆ ವಿಮರ್ದದಿಂದ ಮುಕ್ತರಾದರೋ ಅವರು ಒಟ್ಟಿಗೆ ಸೇರಿ ಇದು ಯಾವ ಕರ್ಮದ ಫಲ ಎಂದು ಚಿಂತಿಸಿದರು.

ನೂನಂ ನ ಪೂಜಿತೋಽಸ್ಮಾಭಿರ್ಮಣಿಭದ್ರೋ ಮಹಾಯಶಾಃ।
ತಥಾ ಯಕ್ಷಾಧಿಪಃ ಶ್ರೀಮಾನ್ ಸ ಚ ವೈಶ್ರವಣಃ ಪ್ರಭುಃ ॥೨೮॥

ಖಂಡಿತವಾಗಿ ನಾವು ಮಹಾಕೀರ್ತಿವಂತನಾದ ಮಣಿಭದ್ರನನ್ನಾಗಲೀ ಅಥವಾ ಯಕ್ಷಾಧಿಪತಿಯಾದ ಕಾಂತಿಯುಕ್ತನಾದ ಪ್ರಭುವಾದ ಕುಬೇರನನ್ನಾಗಲೀ ಪೂಜಿಸಲಿಲ್ಲ.

ನ ಪೂಜಾ ವಿಘ್ನಕರ್ತ್ರೂಣಾಮಥ ವಾ ಸಾರ್ಥಿಕೈಃ ಕೃತಾ ।
ಶಕುನಾನಾಂ ಫಲಂ ಚಾಥ ವಿಪರೀತಮಿದಂ ಧ್ರುವಮ್ ॥೨೯॥

ವಿಘ್ನವನ್ನು ಮಾಡುವ ಶಕ್ತಿಗಳಿಗೆ ವರ್ತಕರಾದ ನಾವು ಪೂಜೆಯನ್ನು ಮಾಡಲಿಲ್ಲ. ಶಕುನಗಳ ಫಲವು ವಿಪರೀತವಾಗಿದೆ.

ಗ್ರಹಾ ವಾ ವಿಪರೀತಾಸ್ತು ಕಿಮನ್ಯದಿದಮಾಗತಮ್ ।
ಅಪರೇ ತ್ವಬ್ರುವನ್ ದೀನಾ ಜ್ಞಾತಿದ್ರವ್ಯವಿನಾಕೃತಾಃ ॥೩೦॥

ಅಥವಾ ಗ್ರಹಗಳೇ ನಮಗೆ ವಿರುದ್ಧವಾಗಿವೆ. ಇಲ್ಲದಿದ್ದರೆ ಈ ವಿಪತ್ತು ಹೇಗೆ ಬರುತ್ತದೆ? ಇನ್ನು ಕೆಲವರು ಬಂಧುಗಳನ್ನೂ ದ್ರವ್ಯವನ್ನೂ ಕಳೆದುಕೊಂಡು ದೀನರಾಗಿ ಹೀಗೆ ಮಾತನಾಡಿದರು.

ಯಾಸಾವದ್ಯ ಮಹಾಸಾರ್ಥೇ ನಾರೀ ಹ್ಯುನ್ಮತ್ತದರ್ಶನಾ ।
ಪ್ರವಿಷ್ಟಾ ವಿಹಿತಾಕಾರಾ ಕೃತ್ವಾ ರೂಪಮಮಾನುಷಮ್ ।
ತಯೇಯಂ ವಿಹಿತಾ ಪೂರ್ವಂ ಮಾಯಾ ಪರಮದಾರುಣಾ ॥೩೧॥

ರಾಕ್ಷಸೀ ವಾ ಧ್ರುವಂ ಯಕ್ಷೀ ಪಿಶಾಚೀ ವಾ ಭಯಂಕರೀ ।
ತಸ್ಯಾಃ ಸರ್ವಮಿದಂ ಪಾಪಂ ನಾತ್ರ ಕಾರ್ಯಾ ವಿಚಾರಣಾ ॥೩೨॥

ಈ ದೊಡ್ಡಗುಂಪಿನಲ್ಲಿ ಈ ದಿನ ಹುಚ್ಚಿಯಂತಿರುವ ಆಕಾರವನ್ನು ಧರಿಸಿದ ಮತ್ತು ಅಮಾನುಷರೂಪವನ್ನು ಧರಿಸಿದ ಒಬ್ಬ ನಾರಿಯು ಪ್ರವೇಶಿಸಿದಳಷ್ಟೇ. ಅವಳು ಪರಮಘೋರವಾದ ಮಾಯಾವಿನಿ. ಇದು ಅವಳು ಮಾಡಿದ ಕೆಲಸ. ಅವಳು ರಾಕ್ಷಸಿ ಇರಬಹುದು ಅಥವಾ ಯಕ್ಷಿಯಿರಬಹುದು. ಅಥವಾ ಭಯಂಕರವಾದ ಪಿಶಾಚಿ ಇರಬಹುದು. ಈ ಪಾಪಕಾರ್ಯವೆಲ್ಲ ಅವಳದೇ. ಬೇರೆ ವಿಚಾರಮಾಡುವ ಅಗತ್ಯವಿಲ್ಲ.

ಯದಿ ಪಶ್ಯಾಮ ತಾಂ ಪಾಪಾಂ ಸಾರ್ಥಘ್ನೀಂ ನೈಕದುಷ್ಕೃತಾಮ್ ।
ಲೋಷ್ಟಭಿಃ ಪಾಂಸುಭಿಶ್ಚೈವ ತೃಣೈಃ ಕಾಷ್ಠೈಶ್ಚ ಮುಷ್ಟಿಭಿಃ ।
ಅವಶ್ಯಮೇವ ಹಿಂಸ್ಯಾಮಃ ಸಾ ತು ಸಾರ್ಥಸ್ಯ ಕೃತ್ಯದಾ ॥೩೩॥

ಈಗ ಆ ಪಾಪಿಯಾದ ನಮ್ಮ ಸಮುದಾಯವನ್ನು ನಾಶಮಾಡಿದಂತಹ ಅನೇಕ ದುಷ್ಕರ್ಮಗಳನ್ನು ಮಾಡಿದ ಅವಳನ್ನು ನೋಡಿದರೆ ಅವಳನ್ನು ಮಣ್ಣಿನ ಹೆಂಟೆಗಳಿಂದಲೂ ಕೋಲುಗಳಿಂದಲೂ ತೃಣಗಳಿಂದಲೂ ಮುಷ್ಟಿಗಳಿಂದಲೂ ಹೊಡೆದು ಅವಶ್ಯವಾಗಿ ಹಿಂಸಿಸುವೆವು. ಅವಳೇ ಈ ವರ್ತಕ ಸಮೂದಾಯಕ್ಕೆ ಅನ್ಯಾಯವನ್ನು ಮಾಡಿದವಳು.

ದಮಯಂತೀ ತು ತಚ್ಛ್ರುತ್ವಾ ವಾಕ್ಯಂ ತೇಷಾಂ ಸುದಾರುಣಮ್ ।
ಭೀತಾ ತ್ರಸ್ತಾ ಚ ಸಂವಿಗ್ನಾ ಪ್ರಾದ್ರವದ್ ಯತ್ರ ಕಾನನಮ್ ॥೩೪॥

ದಮಯಂತಿಯು ಅವರ ಘೋರವಾದ ವಾಕ್ಯವನ್ನು ಕೇಳಿ ಹೆದರಿಕೆಯಿಂದ ನಡುಗುತ್ತಾ ಅಲ್ಲಿಂದ ಕಾಡಿನಕಡೆಗೆ ಓಡಿದಳು.

ಆಶಂಕಮಾನಾ ತತ್ಪಾಪಮಾತ್ಮಾನಂ ಪರ್ಯದೇವಯತ್ ।
ಅಹೋ ಮಮೋಪರಿ ವಿಧೇಃ ಸಂರಂಭೋ ದಾರುಣೋ ಮಹಾನ್ ।
ನಾನುಬಧ್ನಾತಿ ಕುಶಲಂ ಕಸ್ಯೇದಂ ಕರ್ಮಣಃ ಫಲಮ್ ॥೩೫॥

ಆ ಪಾಪವನ್ನು ತನ್ನ ನಿಮಿತ್ತದಿಂದ ಉಂಟಾದುದೆಂದು ಶಂಕಿಸಿ ಅವಳು ಗೋಳಾಡಿದಳು. ಅಯ್ಯೋ ನನ್ನ ಮೇಲೆ ವಿಧಿಗೆ ಎಂತಹ ಪರಮಕೋಪ? ವಿಧಿಯು ನನಗೆ ಯಾವ ಕ್ಷೇಮವನ್ನೂ ಉಂಟುಮಾಡುವುದಿಲ್ಲ. ಇದು ಯಾವ ಕರ್ಮದ ಫಲ?

ನ ಸ್ಮರಾಮ್ಯಶುಭಂ ಕಿಂಚಿತ್‌ಕೃತಂ ಕಸ್ಯಚಿದಣ್ವಪಿ ।
ಕರ್ಮಣಾ ಮನಸಾ ವಾಚಾ ಕಸ್ಯೇದಂ ಕರ್ಮಣಃ ಫಲಮ್ ॥೩೬॥

ನಾನು ಎಂದೂ ಯಾರಿಗೂ ಮನಸ್ಸಿನಿಂದಲಾಗಲೀ ಮಾತಿನಿಂದಲಾಗಲೀ ಅಥವಾ ದೇಹದಿಂದಲಾಗಲೀ ಯಾವ ಅನ್ಯಾಯವನ್ನು ಮಾಡಿರುವುದನ್ನೂ ಸ್ಮರಿಸಲಾರೆ. ಇದು ಯಾವ ಕರ್ಮದ ಫಲ?

ನೂನಂ ಜನ್ಮಾಂತರಕೃತಂ ಪಾಪಮಾಪತಿತಂ ಮಹತ್ ।
ಅಪಶ್ಚಿಮಾಮಿಮಾಂ ಕಷ್ಟಾಮಾಪದಂ ಪ್ರಾಪ್ತವತ್ಯಹಮ್ ॥೩೭॥

ಖಂಡಿತವಾಗಿ ಇದು ಜನ್ಮಾಂತರದಲ್ಲಿ ಮಾಡಿದ ದೊಡ್ಡ ಪಾಪದಫಲ. ಹಿಂದೆಂದೂ ಅನುಭವಿಸದ ಇಂತಹ ಘೋರವಾದ ಆಪತ್ತನ್ನು ನಾನು ಹೊಂದಿದ್ದೇನೆ.

ಭರ್ತೃರಾಜ್ಯಾಪಹರಣಂ ಸ್ವಜನಾಚ್ಚ ಪರಾಭವಃ ।
ಭರ್ತ್ರಾ ಸಹ ವಿಯೋಗಂ ಚ ತನಯಾಭ್ಯಾಂ ಚ ವಿಚ್ಯುತಿಃ ।
ವಿವಸ್ತ್ರತಾ ವನೇ ವಾಸೋ ಬಹುವ್ಯಾಳನಿಷೇವಿತೇ ॥೩೮॥

ಪತಿಯ ರಾಜ್ಯದ ಅಪಹಾರ, ಸ್ವಜನರ ಪರಾಭವ, ಪತಿಯಿಂದ ಮತ್ತು ಮಕ್ಕಳಿಂದ ವಿಯೋಗ, ವಿವಸ್ತ್ರತೆ, ಕ್ರೂರಮೃಗಗಳಿರುವ ಕಾಡಿನಲ್ಲಿವಾಸ, (ಇವೆಲ್ಲವೂ ಪೂರ್ವಜನ್ಮದ ಪಾಪದ ಫಲ.)

ಯೋಽಪ್ಯಕಸ್ಮಾನ್ಮಯಾ ಪ್ರಾಪ್ತೋ ನಿರ್ಜನೇ ಗಹನೇ ವನೇ ।
ಸೋಽಪಿ ಸಾರ್ಥಃ ಪರಾಭೂತೋ ದೈವೇನ ವಿಧಿನಾ ಧ್ರುವಮ್ ॥೩೯॥

ನಾನು ಅಕಸ್ಮಾತ್ತಾಗಿ ಈ ನಿರ್ಜನವಾದ ಮತ್ತು ದಟ್ಟವಾದ ಅರಣ್ಯದಲ್ಲಿ ಸೇರಿಕೊಂಡವರ್ತಕರ ಸಮೂಹವೂ ಖಂಡಿತವಾಗಿಯೂ ದೈವಸಂಕಲ್ಪದಿಂದಲೇ ಪರಾಭವವನ್ನು ಹೊಂದಿತು.

ಆಶಂಕತೇ ಚ ಮಾಂ ಪಾಪಾಂ ಕೃತ್ಯಾಂ ವೈ ರಾಕ್ಷಸೀಮಪಿ ।
ಸಾಹಮೇವಂವಿಧಾ ನೂನಂ ಧ್ರುವಂ ನಾಸ್ತ್ಯತ್ರ ಸಂಶಯಃ ॥೪೦॥

ನನ್ನನ್ನು ಪಾಪಿ ಎಂದೂ ಪಿಶಾಚಿಯೆಂದೂ ರಾಕ್ಷಸಿಯೆಂದೂ ಶಂಕಿಸುತ್ತಾರೆ. ನಾನು ಅಂತಹವಳೇ ಆಗಿದ್ದೇನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಮಂದಾಯಾ ಹಿ ಮಮಾಭಾಗ್ಯೈಃ ಸಾರ್ಥೋ ನೂನಂ ನಿಪಾತಿತಃ ।
ಕುತ್ರಾತ್ಮಾನಂ ಪಾತಯೇಯಂ ಯಾಮಿ ಕಂ ಶರಣಂ ವನೇ ।
ಮರಣೇನ ಭವೇಚ್ಛಾಂತಿರ್ಧಿಗಿದಂ ದುಃಖಜೀವಿತಮ್ ॥೪೧॥

ದುರದೃಷ್ಟಶಾಲಿಯಾದ ನನ್ನ ದುಷ್ಕರ್ಮದಿಂದ ಈ ವರ್ತಕರ ಗುಂಪು ಹೊಡೆದುರುಳಿಸಿಲ್ಪಟ್ಟಿತು. ನಾನು ಎಲ್ಲಿ ಹೋಗಿ ಬೀಳಲಿ? ಯಾರನ್ನು ಶರಣುಹೊಂದಲಿ? ಈ ದುಃಖಜೀವನಕ್ಕೆ ಧಿಕ್ಕಾರವಿರಲಿ. ಮರಣದಿಂದ ಶಾಂತಿಯುಂಟಾದೀತು.

ಹಾ ನಾಥ ಹಾ ಮಹಾರಾಜ ಹಾ ಸ್ವಾಮಿನ್ ಜೀವಿತೇಶ್ವರ ।
ಕಿಂ ಮಾಂ ವಿಲಪತೀಮೇವಂ ನಾಭಿಜಲ್ಪಸಿ ಮಾನದ ॥೪೨॥

ಹಾ ನಾಥ ಹಾ ಮಹಾರಾಜ ಹಾ ರಾಜ ಹಾ ಸ್ವಾಮಿ ಹಾ ಜೀವಿತೇಶ್ವರ ಮಾನದನೇ ಹೀಗೆ ಗೋಳಾಡುತ್ತಿರುವ ನನ್ನನ್ನು ಕುರಿತು ನೀನು ಏಕೆ ಮಾತನಾಡುವುದಿಲ್ಲ?

ಏವಮಾದಿ ಬಹೂನನ್ಯಾನ್ವಿಲಾಪಾನ್ ಬಾಷ್ಪವಿಹ್ವಲಾ ।
ಕುರ್ವತೀ ಪರ್ಯಧಾವಚ್ಚ ವಿಜನಂ ಗಹನಂ ವನಮ್ ॥೪೩॥

ಹೀಗೆ ಮತ್ತು ಇನ್ನೂ ಅನೇಕ ರೀತಿಯಲ್ಲಿ ವಿಲಾಪವನ್ನು ಮಾಡುತ್ತಾ ಕಣ್ಣೀರಿನಿಂದ ಕೂಡಿದವಳಾಗಿ ಆ ನಿರ್ಜನವಾದ ಅರಣ್ಯದಲ್ಲಿ ಅವಳು ಓಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಪಂಚಾಶೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೆಂಟನೆಯ ಅಧ್ಯಾಯ

(ವ್ಯಾಪಾರಿಜನಗಳ ಜೊತೆಯಲ್ಲಿ ದಮಯಂತಿಯ ಗಮನ. ರಾತ್ರಿಯಲ್ಲಿ ಗಜಗಳಿಂದ ಉಪದ್ರವ. ಚೇದಿರಾಜ ಪುರಕ್ಕೆ ಹೋಗಿ ಅಂತಃಪುರದಲ್ಲಿ ನಿವಾಸ.)

### ಬೃಹದಶ್ವ

ಸಾ ತಚ್ಚ್ರುತ್ವಾನವದ್ಯಾಂಗೀ ಸಾರ್ಥವಾಹವಚಸ್ತದಾ ।
ಜಗಾಮ ತೇನ ಸಾರ್ಧೇನ ಭರ್ತೃದರ್ಶನಲಾಲಸಾ ॥೧॥

ಆ ಸುಂದರಾಂಗಿಯು ಆ ಗುಂಪಿನಗಾಯಕನ ಮಾತನ್ನು ಕೇಳಿ ಪತಿಯನ್ನು ನೋಡಲು ಆಸೆಯನ್ನು ಹೊತ್ತುಕೊಂಡು ಆ ಗುಂಪಿನ ಜೊತೆಯಲ್ಲಿ ಹೋದಳು.

ಅಥ ಕಾಲೇ ಬಹುತಿಥೇ ವನೇ ಮಹತಿ ದಾರುಣೇ ।
ತಟಾಕಂ ಸರ್ವತೋಭದ್ರಂ ಪದ್ಮಸೌಗಂಧಿಕಾಯುತಮ್ ॥೨॥

ದದೃಶುರ್ವಣಿಜೋ ರಮ್ಯಂ ಪ್ರಭೂತಯವಸೇಂಧನಮ್ ।
ಬಹುಮೂಲಫಲೋಪೇತಂ ನಾನಾಪಕ್ಷಿಗಣೈರ್ವೃತಮ್ ॥೩॥

ಎಷ್ಟೋದಿನಗಳು ಕಳೆದ ಮೇಲೆ ಆ ದಾರುಣವಾದ ಕಾಡಿನ ಮಧ್ಯದಲ್ಲಿ ಆ ವರ್ತಕರು ಪದ್ಮ ಮತ್ತು ಸೌಗಂಧಿಕಪುಷ್ಪಗಳ ಸೌರಭದಿಂದ ಯುಕ್ತವಾದ ಸುತ್ತಲೂ ಬಹಳ ಹುಲ್ಲು ಮತ್ತು ಕಟ್ಟಿಗೆಗಳಿದ್ದ ಸುತ್ತಲೂ ಅನೇಕ ಫಲಮೂಲಗಳನ್ನು ಹೊಂದಿದ್ದ ಅನೇಕ ಪಕ್ಷಿಗಳ ಸಮೂಹದಿಂದ ಆವೃತವಾದ ಒಂದು ಸುಂದರವಾದ ಸರೋವರವನ್ನು ನೋಡಿದರು.

ತಂ ದೃಷ್ಟ್ವಾ ಮೃಷ್ಟಸಲಿಲಂ ಮನೋಹರಸುಖಾವಹಮ್ ।
ಸುಪರಿಶ್ರಾಂತವಾಹಾಸ್ತೇ ನಿವೇಶಾಯ ಮನೋ ದಧುಃ ॥೪॥

ಸ್ವಚ್ಛವಾದ ನೀರನ್ನು ಹೊಂದಿದ್ದ ಮನಸ್ಸಿಗೆ ಸುಖವನ್ನು ಕೊಡುವ ಆ ಸರೋವರವನ್ನು ನೋಡಿ ದಣಿದ ವಾಹನಗಳುಳ್ಳ ಅವರು ಅಲ್ಲಿ ತಂಗಲು ನಿರ್ದರಿಸಿದರು.

ಸಮ್ಮತೇ ಸಾರ್ಥವಾಹಸ್ಯ ವಿವಿಶುರ್ವನಮುತ್ತಮಮ್ ।
ಉವಾಸ ಸಾರ್ಥಃ ಸುಮಹಾನ್ ನಿಶಾಮಾಸಾದ್ಯ ಪದ್ಮಿನೀಮ್ ॥೫॥

ಆ ಗುಂಪಿನ ನಾಯಕನ ಸಮ್ಮತಿಯನ್ನು ಪಡೆದು ಶ್ರೇಷ್ಠವಾದ ವನವನ್ನು ಪ್ರವೇಶಿಸಿ ಆ ದೊಡ್ಡ ಸಮುದಾಯವು ರಾತ್ರಿಯವೇಳೆಗೆ ಆ ಪದ್ಮಸರೋವರದ ಬಳಿಯಲ್ಲಿ ಬೀಡುಬಿಟ್ಟಿತು.

ಅಥಾರ್ಧರಾತ್ರಸಮಯೇ ನಿಃಶಬ್ದೇ ಸ್ತಿಮಿತೇ ತದಾ ।
ಸುಪ್ತೇ ಸಾರ್ಥೇ ಪರಿಶ್ರಾಂತೇ ಹಸ್ತಿಯೂಥಮುಪಾಗಮತ್ ॥೬॥

ಪಾನೀಯಾರ್ಥಂ ಗಿರಿತಟಾನ್ಮದಪ್ರಸ್ರವಣಾವಿಲಮ್ ।

ಅನಂತರ ಅರ್ಧರಾತ್ರಿಯ ಸಮಯದಲ್ಲಿ ಎಲ್ಲವೂ ನಿಶಬ್ದವೂ ನಿಶ್ಚಲವೂ ಆಗಿರಲು ದಣಿದ ಎಲ್ಲಾ ವರ್ತಕರು ನಿದ್ರಿಸುತ್ತಿರಲು ಮದಿಸಿದ ಗಜಗಳ ಒಂದು ಹಿಂಡು ಪರ್ವತದ ಮೇಲ್ಭಾಗದಿಂದ ನೀರನ್ನು ಕುಡಿಯಲು ಅಲ್ಲಿಗೆ ಬಂದಿತು.

ಮಾರ್ಗಂ ಸಂರುದ್ಧ್ಯ ಸಂಸುಪ್ತಂ ಪದ್ಮಿನ್ಯಾಃ ಸಾರ್ಥಮುತ್ತಮಮ್ ।
ಸುಪ್ತಂ ಮಮರ್ದ ಸಹಸಾ ವೇಷ್ಟಮಾನಂ ಮಹೀತಲೇ ॥೭॥

ತಮ್ಮ ಮಾರ್ಗಕ್ಕೆ ಅಡ್ಡವಾಗಿ ಸರೋವರದ ಸುತ್ತಲೂ ನಿದ್ರಿಸುತ್ತಿದ್ದ ಆ ಶ್ರೇಷ್ಠವಾದ ಸಮುದಾಯವು ಭೂಮಿಯಲ್ಲಿ ಹೊರಳಾಡುತ್ತಿರುವುದನ್ನು ನೋಡಿ ಇದ್ದಕ್ಕಿದಂತೆ ಅವು ನಿದ್ರಿಸುತ್ತಿದ್ದವರನ್ನು ತುಳಿದವು.

ಮಹಾರವಂ ಪ್ರಮುಂಚಂತೋ ವಧ್ಯಂತೇ ಶರಣಾರ್ಥಿನಃ ।
ವನಗುಲ್ಮಾಂಶ್ಚ ಧಾವಂತೋ ನಿದ್ರಯಾ ಮಹತೋ ಭಯಾತ್ ।
ಕೇಚಿದ್ದಂತೈಃ ಕರೈಃ ಕೇಚಿತ್ ಕೇಚಿತ್ ಪದ್ಭ್ಯಾಂ ನರಾ ಹತಾಃ ॥೮॥

ರಕ್ಷಣೆಯನ್ನು ಬಯಸುವವರು ದೊಡ್ಡ ಆರ್ತನಾದವನ್ನು ಉಚ್ಚರಿಸುತ್ತಾ ಕೊಲ್ಲಲ್ಪಟ್ಟರು. ದೊಡ್ಡ ಭಯದಿಂದ ಕೆಲವರು ಅಲ್ಪನಿದ್ರೆಯಿಂದಲೇ ಯುಕ್ತರಾಗಿ ಕಾಡಿನ ಪೊದೆಗಳ ಕಡೆಗೆ ಓಡಿದರು. ಕೆಲವರು ದಂತಗಳಿಂದಲೂ ಕೆಲವರು ಸೊಂಡಿಲುಗಳಿಂದಲೂ ಕೆಲವರು ಅವುಗಳ ಪಾದಗಳಿಂದಲೂ ಹತರಾದರು.

ಗೋಖರೋಷ್ಟ್ರಾಶ್ವ ಬಹುಲಂ ಪದಾತಿಜನಸಂಕುಲಮ್ ।
ಭಯಾರ್ತಂ ಧಾವಮಾನಂ ಚ ಪರಸ್ಪರಹತಂ ತಥಾ ॥೯॥

ಘೋರಂ ನಾದಂ ವಿಮುಂಚಂತೋ ನಿಪೇತುರ್ಧರಣೀತಳೇ ।

ಪದಾತಿಸಂಕುಲಗಳಿಂದ ಕೂಡಿದ್ದ ಗೋವುಗಳು ರಾಸಭಗಳು ಮತ್ತು ಒಂಟೆಗಳಿಂದ ಕೂಡಿದ್ದ ಆ ಸಮೂಹವು ಭಯದಿಂದ ಓಡುತ್ತಾ ಪರಸ್ಪರವಾಗಿ ಹತವಾಗಿ ಘೋರವಾದ ನಾದವನ್ನು ಮಾಡುತ್ತಾ ಭೂಮಿಯಮೇಲೆ ಉರುಳಿತು.

ವೃಕ್ಷೇಷ್ವಾಸಜ್ಯ ಸಂಭಗ್ನಾಃ ಪತಿತಾ ವಿಷಮೇಷು ಚ ।
ತಥಾ ವಿನಿಹತಂ ಸರ್ವಂ ಸಮೃದ್ಧಂ ಸಾರ್ಥಮಂಡಲಮ್ ॥೧೦॥

ಕೆಲವರು ಮರಗಳನ್ನು ಹಿಡಿದುಕೊಂಡು ಆ ಮರಗಳು ಮುರಿಯುತ್ತಿರಲು ವಿಷಮಪ್ರದೇಶಗಳಲ್ಲಿ ಬಿದ್ದರು. ಹಾಗೆ ಆ ಸಮೃದ್ಧವಾದ ವರ್ತಕರ ಮತ್ತು ಪಥಿಕರ ಸಮೂಹವೆಲ್ಲವೂ ಆಘಾತಕ್ಕೆ ಈಡಾಯಿತು.

ಅಥಾಪರೇದ್ಯುಃ ಸಂಪ್ರಾಪ್ತೇ ಹತಶಿಷ್ಟಾ ಜನಾಸ್ತದಾ ।
ಬಹುಗುಲ್ಮಾದ್ ವಿನಿಷ್ಕಮ್ಯ ಶೋಚಂತೇ ವೈಶಸಂ ಕೃತಮ್ ।
ಭ್ರಾತರಂ ಪಿತರಂ ಪುತ್ರಂ ಸಖಾಯಂ ಚ ಜನಾಧಿಪ ॥೧೧॥

ಎಲೈ ರಾಜನೇ ಅನಂತರ ಮರುದಿನವು ಬರುತ್ತಿರಲು ಉಳಿದುಳಿದ ಜನಗಳು ಪೊದೆಗಳಿಂದ ಹೊರಗೆಬಂದು ರಾತ್ರಿನಡೆದ ಹಿಂಸೆಯನ್ನು ನೋಡಿ ತಮ್ಮ ಸಹೋದರರನ್ನೂ ಪಿತೃಗಳನ್ನೂ ಪುತ್ರರನ್ನೂ ಮತ್ತು ಸ್ನೇಹಿತರನ್ನೂ ಕುರಿತು ಶೋಕಪಟ್ಟರು.

ಹನ್ಯಮಾನೇ ತಥಾ ಸಾರ್ಥೇ ದಮಯಂತೀ ಶುಚಿಸ್ಮಿತಾ ।
ಬ್ರಾಹ್ಮಣೈಃ ಸಹಿತಾ ತತ್ರ ವನೇ ತು ನ ವಿನಾಶಿತಾ ।
ಅಶೋಚತ್ ತತ್ರ ವೈದರ್ಭೀ ಕಿಂನು ಮೇ ದುಷ್ಕೃತಂ ಕೃತಮ್ ॥೧೨॥

ಸೋಽಪಿ ಮೇ ನಿರ್ಜನೇಽರಣ್ಯೇ ಸಂಪ್ರಾಪ್ತೋಽಯಂ ಜನಾರ್ಣವಃ ।
ಹತೋಽಯಂ ಹಸ್ತಿಯೂಥೇನ ಮಂದಭಾಗ್ಯಾನ್ಮಮೈವ ತು ।
ಪ್ರಾಪ್ತವ್ಯಂ ಸುಚಿರಂ ದುಃಖಂ ಮಯಾ ನೂನಮಸಂಶಯಮ್ ॥೧೩॥

ಹಾಗೆ ಆ ಗುಂಪು ಅಪಘಾತಕ್ಕೆ ಸಿಕ್ಕುತ್ತಿರಲು ಆ ವನದಲ್ಲಿ ಬ್ರಾಹ್ಮಣರಿಂದ ಸಹಿತಳಾದ ಶುಚಿಸ್ಮಿತೆಯಾದ ದಮಯಂತಿಯು ಯಾವ ಅಪಾಯಕ್ಕೂ ಸಿಗಲಿಲ್ಲ. ನಾನು ಎಂತಹ

ಪಾಪವನ್ನು ಮಾಡಿದ್ದೇನೆ ಎಂದು ಚಿಂತಿಸುತ್ತಾ ಅವಳು ಶೋಕಪಟ್ಟಳು. ನಾನಾದರೋ ಈ ನಿರ್ಜನವಾದ ಅರಣ್ಯದಲ್ಲಿ ಈ ಜನರಗುಂಪನ್ನು ಸೇರಿದೆ ನನ್ನ ದೌರ್ಭಾಗ್ಯದಿಂದ ಈ ಜನ ಸಮೂಹವು ಗಜಗಳ ಹಿಂಡಿನಿಂದ ತುಳಿಯಲ್ಪಟ್ಟಿತು. ನಾನು ನಿಸ್ಸಂಶಯವಾಗಿ ಇನ್ನೂ ಬಹುಕಾಲ ದುಃಖವನ್ನು ಅನುಭವಿಸಬೇಕೆಂದು ತೋರುತ್ತದೆ.

ನಾನಾಪ್ತಕಾಲೋ ಮ್ರಿಯತೇ ಶ್ರುತಂ ವೃದ್ಧಾನುಶಾಸನಮ್ ।
ಯಾ ನಾಹಮದ್ಯ ಮೃದಿತಾ ಹಸ್ತಿಯೂಥೇನ ದುಃಖಿತಾ ।
ನಾದ್ಯ ದೈವಕೃತಂ ಕಿಂಚಿನ್ನರಾಣಾಮಿಹ ವಿದ್ಯತೇ ॥೧೪॥

ಆಯುಷ್ಯವು ಪೂರ್ಣವಾಗದೆ ಮೃತ್ಯುವುಂಟಾಗುವುದಿಲ್ಲವೆಂದು ನಾನು ದೊಡ್ಡವರ ಉಪದೇಶವನ್ನು ಕೇಳಿದ್ದೇನೆ. ಏಕೆಂದರೆ ಇಷ್ಟು ದುಃಖಿತಳಾದ ನಾನು ಈ ದಿನ ಆ ಗಜಮರ್ದನಕ್ಕೆ ಒಳಗಾಗಲಿಲ್ಲ. ಮನುಷ್ಯರಿಗೆ ವಿಧಿ ವಿಹಿತವಾದುದಲ್ಲದೆ ಇಲ್ಲಿ ಬೇರೆ ಏನೂ ಉಂಟಾಗುವುದಿಲ್ಲ.

ನ ಚ ಮೇ ಬಾಲಭಾವೇಽಪಿ ಕಿಂಚಿತ್ ಪಾಪಕೃತಂ ಕೃತಮ್ ।
ಕರ್ಮಣಾ ಮನಸಾ ವಾಚಾ ಯದಿದಂ ದುಃಖಮಾಗತಮ್ ॥೧೫॥

ನಾನು ಈಗ ಒದಗಿರುವ ದುಃಖಕ್ಕೆ ಕಾರಣವಾಗಿ ಬಾಲ್ಯದಲ್ಲಿಯೂ ಸಹ ಮನಸ್ಸಿನಿಂದ ಆಗಲೀ ಮಾತಿನಿಂದಲಾಗಲೀ ಅಥವಾ ಕಾರ್ಯದಿಂದಲಾಗಲೀ ಯಾವ ಪಾಪಕಾರ್ಯವನ್ನೂ ಮಾಡಿಲ್ಲ.

ಮನ್ಯೇ ಸ್ವಯಂವರಕೃತೇ ಲೋಕಪಾಲಾಃ ಸಮಾಗತಾಃ ।
ಪ್ರತ್ಯಾಖ್ಯಾತಾ ಮಯಾ ತತ್ರ ನಳಸ್ಯಾರ್ಥಾಯ ದೇವತಾಃ ।
ನೂನಂ ತೇಷಾಂ ಪ್ರಭಾವೇಣ ವಿಯೋಗಂ ಪ್ರಾಪ್ತವತ್ಯಹಮ್ ॥೧೬॥

ನಾನು ಸ್ವಯಂವರದ ಸಂದರ್ಭದಲ್ಲಿ ನಳನನ್ನು ವರಿಸಬೇಕೆಂಬ ಇಚ್ಛೆಯಿಂದ ಆಗಮಿಸಿದ ಲೋಕಪಾಲಕರಾದ ದೇವತೆಗಳನ್ನು ನಿರಾಕರಿಸಿದೆ. ನಿಶ್ಚಯವಾಗಿ ಅವರ ಪ್ರಭಾವದಿಂದಲೇ ನಾನು ಪತಿವಿಯೋಗವನ್ನು ಪಡೆದಿದ್ದೇನೆ.

ಏವಮಾದೀನಿ ದುಃಖಾರ್ತಾ ಸಾ ವಿಲಪ್ಯ ವರಾಂಗನಾ ।
ಹತಶೇಷೈಃ ಸಹ ತದಾ ಬ್ರಾಹ್ಮಣೈರ್ವೇದಪಾರಗೈಃ ।
ಅಗಚ್ಛದ್ ರಾಜಶಾರ್ದೂಲ ದುಃಖಶೋಕಸಮನ್ವಿತಾ ॥೧೭॥

ಎಲೈ ರಾಜಶಾರ್ದೂಲನೇ ದುಃಖಾರ್ತಳಾದ ಆ ಸುಂದರಿಯು ಹೀಗೆಲ್ಲಾ ಬಹಳವಾಗಿ ವಿಲಾಪವನ್ನು ಮಾಡಿ ಅಳಿದುಳಿದ ವೇದಪಾರಂಗತರಾದ ಬ್ರಾಹ್ಮಣರ ಜೊತೆಯಲ್ಲಿ ದುಃಖಶೋಕ ಸಮನ್ವಿತಳಾಗಿ ಮುಂದೆ ನಡೆದಳು.

ಗಚ್ಛಂತೀ ಸಾ ಚಿರಾತ್ ಬಾಲಾ ಪುರಮಾಸಾದಯನ್ಮಹತ್ ।
ಸಾಯಾಹ್ನೇ ಚೇದಿರಾಜಸ್ಯ ಸುಬಾಹೋಃ ಸತ್ಯವಾದಿನಃ ॥೧೮॥

ಹೀಗೆ ಬಹಳ ದೂರನಡೆದ ಆ ಬಾಲೆಯು ಸಾಯಂಕಾಲದವೇಳೆಗೆ ಚೇದಿರಾಜನಾದ ಸತ್ಯವಾದಿಯಾದ ಸುಬಾಹುವಿನ ದೊಡ್ಡನಗರವನ್ನು ತಲುಪಿದಳು.

ಸಾ ತು ತಚ್ಚಾರುಸರ್ವಾಂಗೀ ಸುಬಾಹೋಸ್ತುಂಗಗೋಪುರಮ್ ।
ನಿಕೃತ್ತವಸ್ತ್ರಸಂವೀತಾ ಪ್ರವಿವೇಶ ಪುರೋತ್ತಮಮ್ ॥೧೯॥

ತಾಂ ವಿವರ್ಣಾಂ ಕೃಶಾಂ ದೀನಾಂ ಮಲಿನಾಂ ಮುಕ್ತಮೂರ್ಧಜಾಮ್।
ಉನ್ಮತ್ತಾಮಿವ ಗಚ್ಛಂತೀಂ ದದೃಶುಃ ಪುರವಾಸಿನಃ ॥೨೦॥

ಪ್ರವಿಶಂತೀಂ ತು ತಾಂ ದೃಷ್ಟ್ವಾ ಚೇದಿರಾಜಪುರೀಂ ತದಾ ।
ಅನುಜಗ್ಮುಸ್ತತೋ ಬಾಲಾ ರಾಜಪುತ್ರ್ಯಃ ಕುತೂಹಲಾತ್ ॥೨೧॥

ಸರ್ವಾವಯವ ಸುಂದರಿಯಾದ ಅವಳು ಕತ್ತರಿಸಿದ ಅರ್ಧವಸ್ತ್ರದಿಂದ ತನ್ನನ್ನು ಮುಚ್ಚಿಕೊಂಡು ಎತ್ತರವಾದ ಗೋಪುರಗಳಿದ್ದ ಸುಬಾಹುವಿನ ಶ್ರೇಷ್ಠವಾದ ಪಟ್ಟಣವನ್ನು ಪ್ರವೇಶಿಸಿದಳು. ವರ್ಣಹೀನಳೂ ಕೃಶಳೂ ದೀನಳೂ ಮಲಿನಳೂ ತಲೆಯನ್ನು ಕೆದರಿಕೊಂಡಿರುವವಳೂ ಆದ ಹುಚ್ಚಿಯಂತೆ ನಡೆಯುತ್ತಿರುವ ಅವಳನ್ನು ಪುರವಾಸಿಜನರು ನೋಡಿದರು. ಚೇದಿರಾಜ ಪುರವನ್ನು ಪ್ರವೇಶಿಸುತ್ತಿದ್ದ ಅವಳನ್ನು ನೋಡಿ ಆಗ ಆ ರಾಜಕುಮಾರಿಯ ಮೇಲಿನ ಕುತೂಹಲದಿಂದ ಬಾಲಕರು ಅವಳನ್ನು ಹಿಂಬಾಲಿಸಿದರು.

ಸಾ ತೈಃ ಪರಿವೃತಾऽಗಚ್ಛತ್ ಸಮೀಪಂ ರಾಜವೇಶ್ಮನಃ ।
ತಾಂ ಪ್ರಾಸಾದಗತಾऽಪಶ್ಯದ್ ರಾಜಮಾತಾ ಜನೈರ್ವೃತಾಮ್ ॥೨೨॥

ಅವಳು ಆ ಬಾಲಕರಿಂದ ಪರಿವೃತಳಾಗಿ ಅರಮನೆಯ ಸಮೀಪಕ್ಕೆ ಬಂದಳು. ರಾಜಮಾತೆಯು ಅರಮನೆಯ ಉಪ್ಪರಿಗೆಯಿಂದ ಅವಳು ಜನಗಳಿಂದ ಸುತ್ತುವರಿಯಲ್ಪಟ್ಟಿದ್ದನ್ನು ನೋಡಿದಳು.

ಸಾ ಜನಂ ವಾರಯಿತ್ವಾ ತಂ ಪ್ರಾಸಾದತಳಮುತ್ತಮಮ್ ।
ಆರೋಪ್ಯ ವಿಸ್ಮಿತಾ ರಾಜನ್ ದಮಯಂತೀಮಪೃಚ್ಛತ ॥೨೩॥

ಎಲೈ ರಾಜನೇ ರಾಜಮಾತೆಯು ಆ ಜನಗಳನ್ನು ದೂರಕಳುಹಿಸಿ ಉಪ್ಪರಿಗೆಯ ಮೇಲೆ ದಮಯಂತಿಯನ್ನು ಕರೆಸಿ ದಮಯಂತಿಯನ್ನು ವಿಸ್ಮಯದಿಂದ ಪ್ರಶ್ನಿಸಿದಳು.

ಏವಮಪ್ಯಸುಖಾವಿಷ್ಟಾ ಬಿಭರ್ಷಿ ಪರಮಂ ವಪುಃ ।
ಭಾಸಿ ವಿದ್ಯುದಿವಾಭ್ರೇಷು ಶಂಸ ಮೇ ಕಾऽಸಿ ಕಸ್ಯ ವಾ ॥೨೪॥

ಇಷ್ಟು ದುಃಖದಲ್ಲಿ ಮುಳುಗಿದ್ದರೂ ನೀನು ಶ್ರೇಷ್ಠವಾದ ಸುಂದರವಾದ ಶರೀರವನ್ನು ಧರಿಸಿದ್ದೀಯೆ. ಮೋಡಗಳ ಮಧ್ಯದಲ್ಲಿರುವ ಮಿಂಚಿನಂತೆ ಕಂಗೊಳಿಸುತ್ತಿದ್ದೀಯೆ. ನೀನು ಯಾರು? ಯಾರಿಗೆ ಸೇರಿದವಳು ಎಂದು ನನಗೆ ಹೇಳು.

ನ ಚ ತೇ ಮಾನುಷಂ ರೂಪಂ ಭೂಷಣೈರಪಿ ವರ್ಜಿತಾ ।
ಅಸಹಾಯಾ ನರೇಭ್ಯಶ್ಚ ನೋದ್ವಿಜಸ್ಯಮರಪ್ರಭೇ ।
ಸ್ತ್ರಿಯೋ ಹಿ ದೃಷ್ಟ್ವಾ ಕಾಮಾರ್ತಾಃ ಕಾ ನ ಪುಂಸೋ ರತಿರ್ಭವೇತ್ ॥

ನೀನು ಭೂಷಣಗಳಿಂದ ರಹಿತಳಾಗಿದ್ದರೂ ಈ ನಿನ್ನ ರೂಪವು ಮಾನುಷರೂಪವಲ್ಲ. ಎಲೌ ದೇವತೆಯಕಾಂತಿಯುಳ್ಳವಳೇ ಯಾವ ಮನುಷ್ಯರ ಸಹಾಯವಿಲ್ಲದಿದ್ದರೂ ನೀನು ಉದ್ವೇಗ ಪಡುತ್ತಿಲ್ಲ. ಕಾಮಾರ್ತರಾದ ಸ್ತ್ರೀಯರನ್ನು ನೋಡಿ ಪುರುಷರಿಗೆ ಏಕೆ ಸಂತೋಷವುಂಟಾಗುವುದಿಲ್ಲ?

ತಚ್ಛ್ರುತ್ವಾ ವಚನಂ ತಸ್ಯಾ ಭೈಮೀ ವಚನಮಬ್ರವೀತ್ ।
ಮಾನುಷೀಂ ಮಾಂ ವಿಜಾನೀಹಿ ಭರ್ತಾರಂ ಮಾಮನುವ್ರತಾಮ್ ।
ಸೈರಂಧ್ರೀಜಾತಿಸಂಪನ್ನಾಂ ಭುಜಿಷ್ಯಾಂ ಕಾಮವಾಸಿನೀಮ್ ॥೨೬॥

ಆ ಮಾತುಗಳನ್ನು ಕೇಳಿದ ದಮಯಂತಿಯು ಉತ್ತರವನ್ನು ಕೊಟ್ಟಳು. ನನ್ನನ್ನು ಒಬ್ಬ ಮನುಷ್ಯಳೆಂದು ತಿಳಿ. ನಾನು ನನ್ನ ಪತಿಗೆ ಅನುವ್ರತಳಾದವಳು. ಸೈರಂಧ್ರಿ ಜಾತಿಯಲ್ಲಿ ಹುಟ್ಟಿ ನಾನು ಭುಜಿಷ್ಯೆ (ಸೇವಕಿಯಾಗಿದ್ದೇನೆ) ನಾನು ನನ್ನ ಮನಸ್ಸಿಗೆ ಬಂದಕಡೆ ಇರುತ್ತೇನೆ.

ಫಲಮೂಲಾಶನಾಮೇಕಾಂ ಯತ್ರಸಾಯಂಪ್ರತಿಶ್ರಯಾಮ್ ।
ಅಸಂಖ್ಯೇಯಗುಣೋ ಭರ್ತಾ ಮಾಂ ಚ ನಿತ್ಯಮನುವ್ರತಃ ।
ಭರ್ತಾರಂ ಪಿತರಂ ವೀರಂ ಛಾಯೇವಾನಪಗಾ ಸದಾ ॥೨೭॥

ನಾನು ಏಕಾಕಿಯಾಗಿದ್ದೇನೆ. ಫಲಮೂಲಗಳನ್ನು ಆಹಾರವಾಗಿ ಸ್ವೀಕರಿಸಿ ಎಲ್ಲಿ ಸಾಯಂಕಾಲವಾಗುತ್ತದೆಯೊ ಅಲ್ಲಿಯೇ ವಾಸಮಾಡುತ್ತೇನೆ. ನನ್ನ ಗಂಡನು ಬಹಳ ಗುಣಗಳನ್ನು ಹೊಂದಿದ್ದಾನೆ. ನನ್ನನ್ನು ಹಿಂಬಾಲಿಸುತ್ತಾನೆ. ನನ್ನ ಮಕ್ಕಳಿಗೆ ತಂದೆಯಾದ ವೀರನಾದ ನನ್ನ ಪತಿಯನ್ನು ನೆರಳಿನಂತೆ ಯಾವಾಗಲೂ ಹಿಂಬಾಲಿಸುತ್ತೇನೆ.

ತಸ್ಯ ದೈವಾತ್ ಪ್ರಸಂಗೋಽಭೂದತಿಮಾತ್ರಂ ಹಿ ದೇವನೇ ।
ಸ ಕೇನಚಿದಮೇಯಾತ್ಮಾ ಕಾರಣೇನ ವರಾನನೇ ।
ದುಃಖಿತಃ ಸರ್ವಮುತ್ಸೃಜ್ಯ ಪ್ರವಿವೇಶ ಮಹಾವನಮ್ ॥೨೮॥

ಅಂತಹ ನನ್ನ ಪತಿಗೆ ದೈವಪ್ರೇರಣೆಯಿಂದ ಅಕ್ಷದ್ಯೂತದಲ್ಲಿ ಬಹಳ ಆಸಕ್ತಿಯುಂಟಾಯಿತು. ಎಲೌ ಸುಂದರಾನನೆಯೇ ಆ ಮಹಾತ್ಮನಾದ ಅವನು ಯಾವುದೋ ಒಂದು ಕಾರಣದಿಂದ ದುಃಖಿತನಾಗಿ ಎಲ್ಲವನ್ನು ತೊರೆದು ದೊಡ್ಡ ಕಾಡನ್ನು ಪ್ರವೇಶಿಸಿದನು.

ದ್ಯೂತೇಽಯಂ ನಿರ್ಜಿತಶ್ಚೈವ ವನಮೇಕೋಽಭ್ಯುಪೇಯಿವಾನ್ ।
ತಂ ಚೈಕವಸನಂ ವೀರಂ ಉನ್ಮತ್ತ ಇವ ವಿಹ್ವಲಮ್ ॥೨೯॥

ಅವನು ದ್ಯೂತದಲ್ಲಿ ಸೋತು ಒಬ್ಬನೇ ವನವನ್ನು ಪ್ರವೇಶಿಸಿದನು. ಒಂದೇ ವಸ್ತ್ರವನ್ನು ಧರಿಸಿ ಉನ್ಮತ್ತನಂತೆ ವಿಹ್ವಲನಾದ ಆ ವೀರನನ್ನು ನಾನು ಛಾಯೆಯಂತೆ ಸದಾ ಅನುಸರಿಸುತ್ತೇನೆ.

ತತಸ್ತಂ ದುಃಖಿತಂ ದೃಷ್ಟ್ವಾ ಪ್ರವಿಶಂತಂ ಚ ಕಾನನಮ್ ।
ಆಶ್ವಾಸಯಂತೀ ಭರ್ತಾರಮಹಮನ್ವಗಮಂ ತದಾ ॥೩೦॥

ಆಗ ದುಃಖಿತನಾದ ಅವನು ಕಾಡಿಗೆ ಹೋಗುತ್ತಿರುವುದನ್ನು ನೋಡಿ ಆ ನನ್ನ ಪತಿಯನ್ನು ಸಮಾಧಾನಪಡಿಸುತ್ತಾ ನಾನು ಅವನ ಹಿಂದೆ ಅನುಸರಿಸಿ ಬಂದೆನು.

ಸ ಕದಾಚಿತ್ ಪುನರ್ವೀರಃ ಕಸ್ಮಿಂಶ್ಚಿತ್ ಕಾರಣಾಂತರೇ ।
ಕುತ್ಸರೀತಶ್ಚ ವಿಮನಾ ವಾಸಶ್ಚೈಕಂ ವ್ಯಸರ್ಜಯತ್ ॥೩೧॥

ಪುನಃ ಆ ವೀರನು ಒಮ್ಮೆ ಯಾವುದೋ ಒಂದುಕಾರಣಕ್ಕಾಗಿ ಹಸಿವಿನಿಂದ ಬಳಲಿ ಬೇಸರಗೊಂಡು ಇದ್ದ ಒಂದು ವಸ್ತ್ರವನ್ನು ತೊರೆದನು.

ತಮೇಕವಸನಂ ನಗ್ನಮುನ್ಮತ್ತಗತಚೇತಸಮ್ ।
ಅನುವ್ರಜಂತೀ ಬಹುಲಾ ನ ಸ್ವಪಾಮಿ ನಿಶಾಃ ಸದಾ ॥೩೨॥

ಏಕವಸ್ತ್ರವನ್ನು ಧರಿಸಿ ಹೊರಟ ಅವನು ನಗ್ನನೂ ಉನ್ಮತ್ತನಂತೆ ಪ್ರಜ್ಞಾಶೂನ್ಯನೂ ಆಗಿರುವುದನ್ನು ನೋಡಿ ಅವನನ್ನೇ ಹಿಂಬಾಲಿಸುತ್ತಾ ನಾನು ಎಷ್ಟು ರಾತ್ರಿಗಳಾದರೂ ನಿದ್ರೆಯನ್ನೇ ಮಾಡುವುದಿಲ್ಲ.

ತತೋ ಬಹುತಿಥೇ ಕಾಲೇ ಸುಪ್ತಾಮುತ್ಸೃಜ್ಯ ಮಾಂ ಕ್ವಚಿತ್ ।
ವಾಸಸೋಽರ್ಧಂ ಪರಿಚ್ಛಿದ್ಯ ತ್ಯಕ್ತವಾನ್ ಮಾಮನಾಗಸೀಮ್ ॥೩೩॥

ತಂ ಮಾರ್ಗಮಾಣಾ ಭರ್ತಾರಂ ದಹ್ಯಮಾನಾ ದಿನಕ್ಷಪಮ್ ।
ನ ವಿಂದಾಮ್ಯಮರಪ್ರಖ್ಯಂ ಪ್ರಿಯಂ ಪ್ರಾಣೇಶ್ವರಂ ಪ್ರಭುಮ್ ॥೩೪॥

ಅನಂತರ ಎಷ್ಟೋದಿನಗಳು ಕಳೆದ ಮೇಲೆ ಒಮ್ಮೆ ನಾನು ನಿದ್ರಿಸುತ್ತಿದಾಗ ನನ್ನ ವಸ್ತ್ರದ ಅರ್ಧಭಾಗವನ್ನು ಕತ್ತರಿಸಿ ನಿರಪರಾಧಿಯಾದ ನನ್ನನ್ನು ಪರಿತ್ಯಜಿಸಿದನು. ಅವನನ್ನು ಹುಡುಕುತ್ತಿದ್ದರೂ. ಹಗಲೂ ರಾತ್ರಿಯೂ ದುಃಖದಿಂದ ಬೆಂದುಹೋಗುತ್ತಾ ದೇವತೆಗಳ ಸಮಾನವಾದ ಕಾಂತಿಯುಳ್ಳ ಪ್ರಿಯನಾದ ನನ್ನ ಪ್ರಾಣೇಶ್ವರನಾದ ಪ್ರಭುವಾದ ಆ ಪತಿಯನ್ನು ನಾನು ಕಾಣುತ್ತಿಲ್ಲ.

ಬೃಹದಶ್ವಃ

ಇತ್ಯುಕ್ತ್ವಾ ಸಾऽನವದ್ಯಾಂಗೀ ರಾಜಮಾತರಮಪ್ಯುತ ।
ಸ್ಥಿತಾऽಕ್ಷಿಪರಿಪೂರ್ಣಾಶ್ರುರ್ವೇಪಮಾನಾ ಸುದುಃಖಿತಾ ॥೩೫॥

ಆ ಸುಂದರಾಂಗಿಯು ರಾಜಮಾತೆಯನ್ನು ಕುರಿತು ಹೀಗೆ ಮಾತನಾಡಿ ಕಣ್ಣುಗಳಲ್ಲಿ ನೀರುಗಳನ್ನು ತುಂಬಿಕೊಂಡು ಬಹಳ ದುಃಖದಿಂದ ನಡುಗುತ್ತಾ ಅವಳೆದುರಿಗೆ ನಿಂತಳು.

ತಾಮಶ್ರುಪರಿಪೂರ್ಣಾಕ್ಷೀಂ ವಿಲಪಂತೀಮನಾಥವತ್ ।
ರಾಜಮಾತಾऽಬ್ರವೀದಾರ್ತಾ ಭೈಮೀಮಾರ್ತಸ್ವರಾ ಸ್ವಯಮ್ ॥೩೬॥

ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅನಾಥಳಂತೆ ಬಹಳವಾಗಿ ಮಾತನಾಡುವ ಆ ಆರ್ತಳಾದ ದಮಯಂತಿಯನ್ನು ನೋಡಿ ರಾಜಮಾತೆಯು ತಾನೇ ಆರ್ತಸ್ವರದಿಂದ ಕೂಡಿದವಳಾಗಿ ದಮಯಂತಿಯನ್ನು ಕುರಿತು ಮಾತನಾಡಿದಳು.

ವಸ ತ್ವಮಿಹ ಕಲ್ಯಾಣಿ ಪ್ರೀತಿರ್ಮೇ ತ್ವಯಿ ವರ್ತತೇ ।
ಮೃಗಯಿಷ್ಯಂತಿ ತೇ ಭದ್ರೇ ಭರ್ತಾರಂ ಪುರುಷಾ ಮಮ ॥೩೭॥

ಕಲ್ಯಾಣಿಯೇ ನೀನು ಇಲ್ಲಿ ವಾಸಮಾಡು. ನಿನ್ನಲ್ಲಿ ನನಗೆ ಪ್ರೀತಿಯಿದೆ. ಭದ್ರೆಯೇ ನಿನ್ನ ಪತಿಯನ್ನು ನನ್ನ ಪುರುಷರು ಹುಡುಕುವರು.

ಅಪಿ ವಾ ಸ್ವಯಮಾಗಚ್ಛೇತ್ ಪರಿಧಾವನ್ನಿತಸ್ತತಃ ।
ಇಹೈವ ವಸತೀ ಭದ್ರೇ ಭರ್ತಾರಮುಪಲಪ್ಸ್ಯತೇ ।
ರಾಜಮಾತುರ್ವಚಃ ಶ್ರುತ್ವಾ ದಮಯಂತೀ ವಚೋऽಬ್ರವೀತ್ ॥೩೮॥

ಅಥವಾ ಅಲ್ಲಿಂದಿಲ್ಲಿಗೆ ಓಡಾಡುತ್ತಾ ನಿನ್ನ ಪತಿಯು ತಾನಾಗಿಯೇ ಇಲ್ಲಿಗೆ ಬರಬಹುದು. ಭದ್ರೆಯೇ ನೀನು ಇಲ್ಲಿಯೇ ವಾಸವನ್ನುಮಾಡುತ್ತಾ ಪತಿಯನ್ನು ಹೊಂದುವಿ. ರಾಜಮಾತೆಯ ಮಾತುಗಳನ್ನು ಕೇಳಿ ದಮಯಂತಿಯು ಮಾತನಾಡಿದಳು.

ಸಮಯೇನೋತ್ಸಹೇ ವಸ್ತುಂ ತ್ವಯಿ ವೀರಪ್ರಜಾಯಿನಿ ।
ಉಚ್ಛಿಷ್ಟಂ ನೈವ ಭುಂಜೀಯಾಂ ನ ಕುರ್ಯಾಂ ಪಾದಧಾವನಮ್ ॥೩೯॥

ನ ಚಾಹಂ ಪುರುಷಾನನ್ಯಾನ್ ಸಂಭಾಷೇಯಂ ಕದಾಚನ ।
ಪ್ರಾರ್ಥಯೇದ್ಯದಿ ಮಾಂ ಕಶ್ಚಿದ್ ದಂಡ್ಯಸ್ತೇ ಸ ಪುಮಾನ್ ಭವೇತ್ ।
ಭರ್ತುರನ್ವೇಷಣಾರ್ಥಂ ತು ಪಶ್ಯೇಯಂ ಬ್ರಾಹ್ಮಣಾನಹಮ್ ॥೪೦॥

ಎಲೌ ವೀರಸುತರನ್ನು ಪಡೆದವಳೇ ಒಂದು ಶರತ್ತಿನ ಮೇರೆಗೆ (ಒಪ್ಪಂದದ ಮೇರೆಗೆ) ನಾನು ನಿನ್ನಲ್ಲಿ ವಾಸಮಾಡುತ್ತೇನೆ. ನಾನು ಉಚ್ಛಿಷ್ಟವನ್ನು ಎಂದೂ ಭುಂಜಿಸುವುದಿಲ್ಲ. ನನ್ನ ಪಾದಗಳನ್ನು ನಾನೇ ತೊಳೆದುಕೊಳ್ಳುವುದಿಲ್ಲ. ನಾನು ಅನ್ಯಪುರುಷನ ಜೊತೆಯಲ್ಲಿ ಎಂದೂ ಮಾತನಾಡುವುದಿಲ್ಲ. ನನ್ನನ್ನು ಯಾವನಾದರೂ ಪುರುಷನು ಅಪೇಕ್ಷಿಸಿದರೆ ನೀನು ಅವನಿಗೆ ಶಿಕ್ಷೆಯನ್ನು ಕೊಡಬೇಕು. ಪತಿಯನ್ನು ಹುಡುಕುವ ಸಲುವಾಗಿ ನಾನು ಬ್ರಾಹ್ಮಣರನ್ನು ಮಾತ್ರ ನೋಡುವೆನು.

ಯದ್ಯೇವಮಿಹ ವಸ್ತವ್ಯಂ ವತ್ಸ್ಯಾಮ್ಯಹಮಸಂಶಯಮ್ ।
ಅತೋಽನ್ಯಥಾ ನ ಮೇ ವಾಸೋ ವರ್ತತೇ ಹೃದಯೇ ಕ್ವಚಿತ್ ॥೪೧॥

ಹೀಗೆ ಇಲ್ಲಿ ವಾಸಮಾಡಲು ಸಾಧ್ಯವಾಗುವುದಾದರೆ ಖಂಡಿತವಾಗಿ ನಾನು ವಾಸಮಾಡುವೆನು. ಹಾಗಿಲ್ಲದಿದ್ದರೆ ನನಗೆ ಇಲ್ಲಿ ವಾಸಮಾಡಬೇಕೆಂಬ ಅಭಿಪ್ರಾಯವಿಲ್ಲ.

ಇತ್ಯುಕ್ತಾ ದಮಯಂತ್ಯಾ ತು ರಾಜಮಾತೇದಮಬ್ರವೀತ್ ।
ಸರ್ವಮೇತತ್ ಕರಿಷ್ಯಾಮಿ ದಿಷ್ಟ್ಯಾ ತೇ ವ್ರತಮೀದೃಶಮ್ ॥೪೨॥

ಹೀಗೆ ದಮಯಂತಿಯಿಂದ ಹೇಳಲ್ಪಟ್ಟವಳಾಗಿ ಆ ರಾಜಮಾತೆಯು ದೇವರ ದಯೆಯಿಂದ ನಿನಗೆ ಇಂತಹ ವ್ರತವಿದೆ. ನೀನು ಹೇಳುವುದೆಲ್ಲವನ್ನೂ ಮಾಡುವೆನು ಎಂದು ಅವಳಿಗೆ ಹೇಳಿದಳು.

ಏವಮುಕ್ತ್ವಾ ತತೋ ಭೈಮೀಂ ರಾಜಮಾತಾ ವಿಶಾಂಪತೇ ।
ಉವಾಚೇದಂ ದುಹಿತರಂ ಸುನಂದಾಂ ನಾಮ ಭಾರತ ॥೪೩॥

ಎಲೈ ರಾಜನೇ ರಾಜಮಾತೆಯು ದಮಯಂತಿಯನ್ನು ಕುರಿತು ಹೀಗೆ ಹೇಳಿ ಅನಂತರ ತನ್ನ ಮಗಳಾದ ಸುನಂದೆಯನ್ನು ಕುರಿತು ಹೀಗೆ ಮಾತನಾಡಿದಳು.

ಸೈರಂಧ್ರೀಮಭಿಜಾನೀಷ್ವ ಸುನಂದೇ ದೇವರೂಪಿಣೀಮ್ ।
ಅನಯಾ ಸಹ ಮೋದಸ್ವ ನಿರುದ್ವಿಗ್ನಮನಾಃ ಸ್ವಯಮ್ ।
ವಯಸಾ ತುಲ್ಯತಾಂ ಪ್ರಾಪ್ತಾ ಸಖೀ ತವ ಭವತ್ವಿಯಮ್ ॥೪೪॥

ಸುನಂದೆಯೇ ಇವಳು ದೇವತೆಯ ರೂಪವನ್ನು ಧರಿಸಿರುವ ಸೈರಂಧ್ರಿಯೆಂದು ತಿಳಿ. ಇವಳ ಜೊತೆಯಲ್ಲಿ ನಿರಾತಂಕವಾಗಿ ಸಂತೋಷದಿಂದಿರು. ನಿನಗೆ ಸಮಾನವಾದ ವಯಸ್ಸುಳ್ಳ ಇವಳು ನಿನ್ನ ಸಖಿಯಾಗುವಳು.

ತತಃ ಪರಮಸಂಹೃಷ್ಟಾ ಸುನಂದಾ ಸಾ ಮನಸ್ವಿನೀ ।
ದಮಯಂತೀಮುಪಾದಾಯ ಸಖೀಭಿಃ ಪರಿವಾರಿತಾ ॥೪೫॥

ಆಗ ಪರಮ ಸಂತುಷ್ಟಳಾದ ಮನಸ್ವಿನಿಯಾದ ಆ ಸುನಂದೆಯು ದಮಯಂತಿಯನ್ನು ಕರೆದುಕೊಂಡು ತನ್ನ ಸಖಿಯರಿಂದ ಸುತ್ತುವರಿಯಲ್ಪಟ್ಟಳು.

ಸಹಸಾ ನ್ಯವಸದ್ರಾಜನ್ ರಾಜಪುತ್ರ್ಯಾ ಸುನಂದಯಾ ।
ಚಿಂತಯಂತೀ ನಳಂ ವೀರಮನಿಶಂ ವಾಮಲೋಚನಾ ॥೪೬॥

ಆ ವಾಮಲೋಚನೆಯಾದ ದಮಯಂತಿಯೂ ಸಹ ರಾಜಪುತ್ರಿಯಾದ ಸುನಂದೆಯ ಜೊತೆಯಲ್ಲಿ ವೀರನಾದ ನಳನನ್ನು ಯಾವಾಗಲೂ ಚಿಂತಿಸುತ್ತಾ ವಾಸಮಾಡಿದಳು.

ಸಾ ತತ್ರ ಪೂಜ್ಯಮಾನಾ ವೈ ದಮಯಂತ್ಯಾವಸತ್ ಸುಖಮ್ ।
ಸರ್ವಕಾಮೈಃ ಸಮುದಿತಾ ನಿರುದ್ವಿಗ್ನಾ ಹ್ಯನಾಮಯಾ ॥೪೭॥

ಅಲ್ಲಿ ದಮಯಂತಿಯು ಎಲ್ಲ ಕಾಮಗಳಿಂದಲೂ ಸತ್ಕರಿಸಲ್ಪಟ್ಟು ಉದ್ವೇಗರಹಿತಳಾಗಿ ಕ್ಷೇಮದಿಂದ ಸುಖವಾಗಿ ವಾಸಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

## ಐವತ್ತೊಂಬತ್ತನೆಯ ಅಧ್ಯಾಯ

(ನಳನಿಗೆ ಕಾರ್ಕೋಟಕನ ದಂಶನ. ಕಾರ್ಕೋಟಕನಿಂದ ಆಶ್ವಾಸನ ಮತ್ತು ವಸ್ತ್ರ ಪ್ರದಾನ.)

### ಬೃಹದಶ್ವಃ

ಉತ್ಸೃಜ್ಯ ದಮಯಂತೀಂ ತು ನಳೋ ರಾಜಾ ವಿಶಾಂಪತೇ ।
ದದರ್ಶ ದಾವಂ ದಹ್ಯಂತಂ ಮಹಾಂತಂ ವಿಜನೇ ವನೇ ॥೧॥

ಎಲೈ ರಾಜನೇ, ರಾಜನಾದ ನಳನು ದಮಯಂತಿಯನ್ನು ಬಿಟ್ಟು ಹೋಗುತ್ತಾ ನಿರ್ಜನವಾದ ಅರಣ್ಯದಲ್ಲಿ ಒಂದು ದೊಡ್ಡ ಕಾಡ್ಗಿಚ್ಚನ್ನು ಕಂಡನು.

ತತ್ರ ಶುಶ್ರಾವ ಮಧ್ಯೇಽಗ್ನೇಃ ಶಬ್ದಂ ಭೂತಸ್ಯ ಕಸ್ಯಚಿತ್ ।
ಅಭಿಧಾವ ನಳೇತ್ಯುಚ್ಚೈಃ ಪುಣ್ಯಶ್ಲೋಕೇತಿ ಚಾಸಕೃತ್ ॥೨॥

ಆ ಅಗ್ನಿಯ ಮಧ್ಯದಿಂದ ಪುಣ್ಯಶ್ಲೋಕನಾದ ನಳನೇ ಬೇಗ ನನ್ನ ಬಳಿಗೆ ಬಾ ಎಂದು ಅನೇಕಬಾರಿ ಹೇಳಿದ ಯಾವುದೋ ಒಂದು ಪ್ರಾಣಿಯ ಮಾತನ್ನು ಕೇಳಿದನು.

ಮಾ ಭೈರಿತಿ ನಳಶ್ಚೋಕ್ತ್ವಾ ಮಧ್ಯಮಗ್ನೇಃ ಪ್ರವಿಶ್ಯ ಸಃ ।
ದದರ್ಶ ನಾಗರಾಜಾನಂ ಶಯಾನಂ ಕುಂಡಲೀಕೃತಮ್ ॥೩॥

ಹೆದರಬೇಡ ಎಂದು ಹೇಳಿ ನಳನು ಅಗ್ನಿಯ ಮಧ್ಯವನ್ನು ಪ್ರವೇಶಮಾಡಿ ಅಲ್ಲಿ ಕುಂಡಲಾಕಾರವಾಗಿ ಮಲಗಿದ್ದ ನಾಗರಾಜನನ್ನು ನೋಡಿದನು.

ತಂ ನಾಗಃ ಪ್ರಾಂಜಲಿರ್ಭೂತ್ವಾ ವೇಪಮಾನೋ ನಳಂ ತದಾ ।
ಉವಾಚ ವಿದ್ಧಿ ಮಾಂ ನಾಮ್ನಾ ನಾಗಂ ಕಾರ್ಕೋಟಕಂ ನೃಪ ॥೪॥

ಆ ನಾಗನು ನಳನಿಗೆ ಕೈಗಳನ್ನು ಮುಗಿದು ನಡುಗುತ್ತಾ ಆಗ ಎಲೈರಾಜನೇ ನನ್ನನ್ನು ಕಾರ್ಕೋಟಕ ನಾಗನೆಂದು ತಿಳಿ ಎಂದು ಹೇಳಿದನು.

ಮಯಾ ಪ್ರಲಬ್ಧೋ ಬ್ರಹ್ಮರ್ಷಿರನಾಗಾಃ ಸುಮಹಾತಪಾಃ ।
ತೇನ ಮನ್ಯುಪರೀತೇನ ಶಪ್ತೋಽಸ್ಮಿ ಮನುಜಾಧಿಪ ॥೫॥

ನಾನು ಮಹಾತಪಸ್ವಿಗಳಾದ ನಿರಪರಾಧಿಗಳಾದ ಒಬ್ಬ ಬ್ರಹ್ಮರ್ಷಿಗಳಿಗೆ ವಂಚನೆಯನ್ನು ಮಾಡಿದೆ. ಎಲೈ ಮನುಜಾಧಿಪನೇ ಅವರು ಕೋಪವಶರಾಗಿ ನನಗೆ ಶಾಪವನ್ನು ಕೊಟ್ಟರು.

ತಸ್ಯ ಶಾಪಾನ್ನ ಶಕ್ನೋಮಿ ಪದಾದ್ಧಿ ಚಲಿತುಂ ಪದಮ್ ।
ಉಪದೇಕ್ಷ್ಯಾಮಿ ತೇ ಶ್ರೇಯಃ ತ್ರಾತುಮರ್ಹತಿ ಮಾಂ ಭವಾನ್ ॥೬॥

ಆ ಶಾಪದ ಪ್ರಭಾವದಿಂದ ನನಗೆ ಒಂದು ಹೆಜ್ಜೆಯನ್ನೂ ಚಲಿಸಲು ಸಾಧ್ಯವಿಲ್ಲ. ನಿನಗೆ ನಾನು ಶ್ರೇಯಸ್ಸನ್ನು ಉಪದೇಶಿಸುವೆನು. ನೀನು ನನ್ನನ್ನು ರಕ್ಷಿಸು.

ಸಖಾಽಹಂ ತೇ ಭವಿಷ್ಯಾಮಿ ಮತ್ಸಮೋ ನಾಸ್ತಿ ಪನ್ನಗಃ ।
ಲಘುಶ್ಚ ತೇ ಭವಿಷ್ಯಾಮಿ ಶೀಘ್ರಮಾದಾಯ ಗಚ್ಛ ಮಾಮ್ ॥೭॥

ನಾನು ನಿನಗೆ ಸ್ನೇಹಿತನಾಗುತ್ತೇನೆ. ನನಗೆ ಸಮಾನನಾದ ನಾಗನು ಇಲ್ಲ. ನಾನು ಹಗುರವಾಗುತ್ತೇನೆ. ನನ್ನನ್ನು ತೆಗೆದುಕೊಂಡು ಬೇಗ ಹೊರಗೆ ಹೋಗು.

ಏವಮುಕ್ತ್ವಾ ಸ ನಾಗೇಂದ್ರೋ ಬಭೂವಾಂಗುಷ್ಠಮಾತ್ರಕಃ ।
ತಂ ಗೃಹೀತ್ವಾ ನಳಃ ಪ್ರಾಯಾದ್ ದೇಶಂ ದಾವವಿವರ್ಜಿತಮ್ ॥೮॥

ಹೀಗೆ ಹೇಳಿ ಆ ನಾಗೇಂದ್ರನು ಒಂದು ಅಂಗುಷ್ಠಪರಿಮಾಣದಷ್ಟೇ ಹ್ರಸ್ವವಾದನು. ಅವನನ್ನು ಕೈಯಲ್ಲಿ ತೆಗೆದುಕೊಂಡು ನಳನು ಅಗ್ನಿರಹಿತವಾದ ಪ್ರದೇಶಕ್ಕೆ ಬಂದನು.

ಶೀತಳಂ ದೇಶಮಾಸಾದ್ಯ ವಿಮುಕ್ತಂ ಕೃಷ್ಣವರ್ತ್ಮನಾ ।
ಉತ್ಸೃಷ್ಟುಕಾಮಂ ನೃಪತಿಂ ನಾಗೋ ವಚನಮಬ್ರವೀತ್ ॥೯॥

ಅಗ್ನಿರಹಿತವಾದ ಒಂದು ತಂಪಾದ ಪ್ರದೇಶಕ್ಕೆ ಬಂದು ತನ್ನನ್ನು ಬಿಡಲು ಉದ್ಯುಕ್ತನಾದ ರಾಜನನ್ನು ಕುರಿತು ನಾಗನು ಹೀಗೆ ಹೇಳಿದನು.

ಪದಾನಿ ಗಣಯನ್ ಗಚ್ಛ ಸ್ವಾನಿ ನೈಷಧ ಕಾನಿ ಚಿತ್ ।
ತತ್ರ ತೇಽಹಂ ಮಹಾರಾಜ ಶ್ರೇಯೋ ಧಾಸ್ಯಾಮಿ ವೈ ಪರಮ್ ॥೧೦॥

ನೈಷಧನೇ, ನೀನು ಹೆಜ್ಜೆಗಳನ್ನು ಎಣಿಸುತ್ತಾ ಕೆಲವು ಹೆಜ್ಜೆಗಳನ್ನು ಹಾಕು. ಮಹಾರಾಜನೇ ನಾನು ನಿನಗೆ ಶ್ರೇಷ್ಠವಾದ ಶ್ರೇಯಸ್ಸನ್ನು ಉಂಟುಮಾಡುವೆನು.

ತತಃ ಸಂಖ್ಯಾತುಮಾರಬ್ಧಮದಶದ್ ದಶಮೇ ಪದೇ ।
ತಸ್ಯ ದಷ್ಟಸ್ಯ ತದ್ರೂಪಂ ಕ್ಷಿಪ್ರಮಂತರಧೀಯತ ॥೧೧॥

ನಳನು ಎಣಿಸಿ ಹೆಜ್ಜೆ ಇಡುತ್ತಿರುವಷ್ಟರಲ್ಲಿ ಹತ್ತನೆಯ ಹೆಜ್ಜೆಯಲ್ಲಿ ಕಾರ್ಕೋಟಕನು ಅವನನ್ನು ಕಡಿದನು. ಕಾರ್ಕೋಟಕದಂಶಕ್ಕೆ ಒಳಗಾದ ನಳನ ಆ ರೂಪವು ತಕ್ಷಣದಲ್ಲಿ ಅದೃಶ್ಯವಾಯಿತು.

ಸ ದೃಷ್ಟ್ವಾ ವಿಸ್ಮಿತಸ್ತಸ್ಮಾದಾತ್ಮಾನಂ ವಿಕೃತಂ ನಳಃ ।
ಸ್ವರೂಪಧಾರಿಣಂ ನಾಗಂ ದದರ್ಶ ಸ ಮಹೀಪತಿಃ ॥೧೨॥

ತನ್ನ ವಿಕೃತರೂಪವನ್ನು ನೋಡಿ ಆಶ್ಚರ್ಯಗೊಂಡ ನಳಮಹಾರಾಜನು ತನ್ನ ನಿಜವಾದ ರೂಪವನ್ನು ಧರಿಸಿದ ಆ ನಾಗನನ್ನು ನೋಡಿದನು.

ತತಃ ಕರ್ಕೋಟಕೋ ನಾಗಃ ಸಾಂತ್ವಯನ್ ನಳಮಬ್ರವೀತ್ ।
ಮಯಾ ತೇऽಂತರ್ಹಿತಂ ರೂಪಂ ನ ತ್ವಾಂ ವಿದ್ಯುರ್ಜನಾ ಇತಿ ॥೧೩॥

ಆಗ ಕಾರ್ಕೋಟಕನಾಗನು ನಳನನ್ನು ಸಮಾಧಾನಪಡಿಸುತ್ತಾ ಮಾತನಾಡಿದನು. ನಿನ್ನನ್ನು ಜನರು ಗುರುತಿಸದಿರಲಿ ಎಂದು ನಾನು ನಿನ್ನ ರೂಪವನ್ನು ಅಂತರ್ಧಾನಮಾಡಿದ್ದೇನೆ.

ಯತ್ಕೃತೇ ಚಾಸಿ ವಿಕೃತೋ ದುಃಖೇನ ಮಹತಾ ನಳಃ ।
ವಿಷೇಣ ತು ಮದೀಯೇನ ದುಃಖಂ ತ್ವಯಿ ನಿವತ್ಸ್ಯತಿ ॥೧೪॥

ಎಲೈ ನಳನೇ, ಯಾರ ನಿಮಿತ್ತದಿಂದ ನೀನು ಬಹಳ ದುಃಖದಿಂದ ಈ ವಿಕಾರವನ್ನು ಹೊಂದಿದೆಯೋ ಅವನು (ಕಲಿಯು) ನನ್ನ ವಿಷದಿಂದ ಬಹಳ ದುಃಖವನ್ನು ಅನುಭವಿಸುತ್ತಾ ನಿನ್ನ ಶರೀರದಲ್ಲಿ ವಾಸಿಸುವನು.

ವಿಷೇಣ ಸಂವೃತೈರ್ಗಾತ್ರೈರ್ಯಾವತ್ತ್ವಾಂ ನ ವಿಮೋಕ್ಷ್ಯತಿ ।
ತಾವತ್ಸ ತು ಮಹಾರಾಜ ಕ್ಲೇಶೇऽಸ್ಮಿನ್ನ ಸ ಮೋಕ್ಷ್ಯತೇ ॥೧೫॥

ಎಲೈ ಮಹಾರಾಜನೇ, ವಿಷದಿಂದಪೂರ್ಣವಾದ ನಿನ್ನ ಶರೀರವನ್ನು ಎಲ್ಲಿಯವರೆಗೆ ಅವನು ಬಿಡುವುದಿಲ್ಲವೋ ಅಲ್ಲಿಯವರೆಗೆ ಅವನು ನನ್ನ ವಿಷದಬಾಧೆಯಿಂದಲೂ ಮುಕ್ತನಾಗುವುದಿಲ್ಲ.

ಅನಾಗಾ ಯೇನ ನಿಕೃತಃ ತ್ವಮನೇನ ನರಾಧಿಪ ।
ಕ್ರೋಧಾದಸೂಯಯಿತ್ವಾ ತ್ವಾಂ ರಕ್ಷಾ ಮೇ ಭವತಃ ಕೃತಾ ॥೧೬॥

ಎಲೈ ರಾಜನೇ, ನಿರಪರಾಧಿಯಾದ ನಿನ್ನನ್ನು ಅವನು ಕ್ರೋಧದಿಂದಲೂ ಅಸೂಯೆಯಿಂದಲೂ ವಂಚಿಸಿದ್ದಾನೆ. ನಾನು ನಿನಗೆ ರಕ್ಷಣೆಯನ್ನು ನೀಡಿದ್ದೇನೆ.

ನ ತೇ ಭಯಂ ನರವ್ಯಾಘ್ರ ದಂಷ್ಟಿಭ್ಯಃ ಶತ್ರುತೋಽಪಿ ವಾ ।
ಬ್ರಹ್ಮವಿದ್ಧ್ಯೈವ (ಚೈವ) ಭವಿತಾ ಮತ್ಪ್ರಸಾದಾನ್ನರಾಧಿಪ ॥೧೭॥

ಎಲೈ ನರವ್ಯಾಘ್ರನೇ, ನಿನಗೆ ಕ್ರೂರಮೃಗಗಳಿಂದಲಾಗಲೀ ಅಥವಾ ಶತ್ರುಗಳಿಂದಲಾಗಲೀ ಭಯವುಂಟಾಗುವುದಿಲ್ಲ. ಎಲೈ ನರಾಧಿಪನೇ ನನ್ನ ಅನುಗ್ರಹದಿಂದ ನೀನು ಬ್ರಹ್ಮಜ್ಞಾನಿಯಾಗುವಿ.

ರಾಜನ್ ವಿಷನಿಮಿತ್ತಾ ಚ ನ ತೇ ಪೀಡಾ ಭವಿಷ್ಯತಿ ।
ಸಂಗ್ರಾಮೇಷು ಚ ರಾಜೇಂದ್ರ ಶಶ್ವಜ್ಜಯಮವಾಪ್ನುಹಿ ॥೧೮॥

ಎಲೈ ರಾಜನೇ, ನನ್ನ ವಿಷದ ನಿಮಿತ್ತವಾಗಿ ನಿನಗೆ ಯಾವ ಪೀಡೆಯೂ ಉಂಟಾಗುವುದಿಲ್ಲ. ರಾಜೇಂದ್ರನೇ ಯುದ್ಧಗಳಲ್ಲಿ ಯಾವಾಗಲೂ ಜಯವನ್ನು ಹೊಂದುವವನಾಗು.

ಗಚ್ಛ ರಾಜನ್ನಿತಃ ಸೂತೋ ಬಾಹುಕೋಽಹಮಿತಿ ಬ್ರುವನ್ ।
ಸಮೀಪಮೃತುಪರ್ಣಸ್ಯ ಸ ಹಿ ವೇದಾಕ್ಷನೈಪುಣಮ್ ॥೧೯॥

ಅಯೋಧ್ಯಾಂ ನಗರೀಂ ರಮ್ಯಾಮದ್ಯೈವ ನಿಷಧಾಧಿಪ ।
ಸ ತೇಽಕ್ಷಹೃದಯಂ ದಾತಾ ರಾಜಾಽಶ್ವಹೃದಯೇನ ವೈ ॥೨೦॥

ಎಲೈ ರಾಜನೇ, ನೀನು ಇಲ್ಲಿಂದ ನಾನು ಬಾಹುಕನೆಂಬ ಸೂತ ಎಂದು ಹೇಳಿಕೊಂಡು ಋತುಪರ್ಣನ ಸಮೀಪಕ್ಕೆ ಹೋಗು. ಅವನು ಅಕ್ಷಹೃದಯವನ್ನು

ಬಲ್ಲವನು. ಎಲೈ ನಿಷಧಾಧಿಪನೇ ನೀನು ಈ ದಿನವೇ ಅವನ ರಾಜಧಾನಿಯಾದ ಮನೋಹರವಾದ ಅಯೋಧ್ಯೆನಗರಿಗೆ ಹೋಗು. ಅವನು ನಿನ್ನಿಂದ ಅಶ್ವವಿದ್ಯೆಯನ್ನು ಪಡೆದು ನಿನಗೆ ಅಕ್ಷವಿದ್ಯೆಯನ್ನು ಕೊಡುತ್ತಾನೆ.

ಇಕ್ಷ್ವಾಕುಕುಲಜಃ ಶ್ರೀಮಾನ್ ಸ ತೇ ಮಿತ್ರೋ ಭವಿಷ್ಯತಿ ।
ಭವಿಷ್ಯಸಿ ಯದಾಽಕ್ಷಜ್ಞಃ ಶ್ರೇಯಸಾ ಯೋಕ್ಷ್ಯಸೇ ಭವಾನ್ ॥೨೧॥

ಇಕ್ಷ್ವಾಕುಕುಲದಲ್ಲಿ ಹುಟ್ಟಿದ ಸಂಪದ್ಯುಕ್ತನಾದ ಅವನು ನಿನಗೆ ಮಿತ್ರನಾಗುವನು. ನೀನು ಯಾವಾಗ ಅಕ್ಷಹೃದಯವನ್ನು ತಿಳಿದವನಾಗುವೆಯೋ ಆಗ ನಿನಗೆ ಶ್ರೇಯಸ್ಸುಂಟಾಗುವುದು.

ಸಮೇಷ್ಯಸಿ ಚ ದಾರೈಸ್ತ್ವಂ ಮಾ ಚ ಶೋಕೇ ಮನಃ ಕೃಥಾಃ ।
ರಾಜ್ಯೇನ ತನಯಾಭ್ಯಾಂ ಚ ಸತ್ಯಮೇತದ್ ಬ್ರವೀಮಿ ತೇ ॥೨೨॥

ನೀನು ನಿನ್ನ ಪತ್ನಿಯ ಜೊತೆಯಲ್ಲಿಯೂ ಮಕ್ಕಳ ಜೊತೆಯಲ್ಲಿಯೂ ಸಮಾಗಮವನ್ನು ಹೊಂದಿ ರಾಜ್ಯವನ್ನು ಮರಳಿಪಡೆಯುವಿ. ಮನಸ್ಸಿನಲ್ಲಿ ಶೋಕವನ್ನು ಮಾಡಬೇಡ. ನಾನು ಸತ್ಯವಾದ ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ.

ಸ್ವಂ ರೂಪಂ ಚ ಯದಾ ದ್ರಷ್ಟುಮಿಚ್ಛೇಥಾಸ್ತ್ವಂ ನರಾಧಿಪ ।
ಸಂಸ್ಮರ್ತವ್ಯಸ್ತ್ವಯಾ ಚಾಹಂ ವಾಸಶ್ಚೇದಂ ನಿವಾಸಯ ।
ಅನೇನ ವಾಸಸಾ ಚ್ಛನ್ನಃ ಸ್ವಂ ರೂಪಂ ಪ್ರತಿಪತ್ಸ್ಯಸೇ ॥೨೩॥

ಎಲೈ ರಾಜನೇ ನಿನ್ನ ಮೊದಲಿನ ರೂಪವನ್ನು ಪಡೆಯಲು ಇಚ್ಚಿಸಿದಾಗ ನನ್ನನ್ನು ಸ್ಮರಿಸಿ ಈ ವಸ್ತ್ರವನ್ನು ಹೊದ್ದುಕೋ. ಈ ವಸ್ತ್ರವನ್ನು ಹೊದ್ದ ತಕ್ಷಣ ನಿನಗೆ ನಿನ್ನ ಮೊದಲಿನ ರೂಪವು ಉಂಟಾಗುವುದು.

ಇತ್ಯುಕ್ತ್ವಾ ಪ್ರದದೌ ತಸ್ಮೈ ದಿವ್ಯಂ ವಾಸೋಯುಗಂ ತದಾ ।
ಏವಂ ನಳಂ ಸಮಾದಿಶ್ಯ ವಾಸೋ ದತ್ತ್ವಾ ಚ ಕೌರವ ।
ನಾಗರಾಜಸ್ತತೋ ರಾಜನ್ ತತ್ರೈವಾಂತರಧೀಯತ ॥೨೪॥

ಹೀಗೆ ಹೇಳಿ ಕಾರ್ಕೋಟಕನು ಅವನಿಗೆ ದಿವ್ಯವಾದ ಒಂದು ವಸ್ತ್ರದ ಜೊತೆಯನ್ನು ಕೊಟ್ಟನು. ಎಲೈ ಕೌರವನೇ ನಾಗರಾಜನಾದ ಕಾರ್ಕೋಟಕನು ಹೀಗೆ ನಳನನ್ನು ಸಮಾಧಾನಮಾಡಿ ವಸ್ತ್ರಗಳನ್ನು ಕೊಟ್ಟು ಅಲ್ಲಿಯೇ ಅದೃಶ್ಯನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತನೆಯ ಅಧ್ಯಾಯ

(ಕಾರ್ಕೋಟಕವಚನದಂತೆ ನಳನಿಂದ ಋತುಪರ್ಣಸಾರಥ್ಯ ಸ್ವೀಕಾರ.)

### ಬೃಹದಶ್ವಃ

ತಸ್ಮಿನ್ನಂತರ್ಹಿತೇ ನಾಗೇ ಪ್ರಯಯೌ ನೈಷಧೋ ನಳಃ ।
ಋತುಪರ್ಣಸ್ಯ ನಗರಂ ಪ್ರಾವಿಶದ್ ದಶಮೇಽಹನಿ ॥೧॥

ಕಾರ್ಕೋಟಕನು ಅಂತರ್ಧಾನವನ್ನು ಹೊಂದುತ್ತಿರಲು ನಿಷಧಾಧಿಪತಿಯಾದ ನಳನು ಹತ್ತನೆಯ ದಿವಸದಲ್ಲಿ ಋತುಪರ್ಣನಗರವನ್ನು ಪ್ರವೇಶಿಸಿದನು.

ಸ ರಾಜಾನಮುಪಾತಿಷ್ಠದ್ ಬಾಹುಕೋಽಹಮಿತಿ ಬ್ರುವನ್ ।
ಅಶ್ವಾನಾಂ ವಾಹನೇ ಯುಕ್ತಃ ಪೃಥಿವ್ಯಾಂ ನಾಸ್ತಿ ಮತ್ಸಮಃ ॥೨॥

ಅವನು ನಾನು ಬಾಹುಕನೆಂಬ ಸೂತ. ರಥಗಳಿಗೆ ಹೂಡಿದ ಅಶ್ವಗಳನ್ನು ನಡೆಸುವುದರಲ್ಲಿ ನನಗೆ ಸಮಾನನಾದವನು ಭೂಮಿಯಲ್ಲಿ ಯಾವನೂ ಇಲ್ಲ ಎಂದು ಹೇಳುತ್ತಾ ರಾಜನನ್ನು ಸಮೀಪಿಸಿದನು.

ಅರ್ಥಕೃಚ್ಛ್ರೇಷು ಚೈವಾಹಂ ಪ್ರಷ್ಟವ್ಯೋ ನೈಪುಣೇಷು ಚ ।
ಅನ್ನಸಂಸ್ಕಾರಮಪಿ ಚ ಜಾನಾಮ್ಯನ್ಯೈರ್ವಿಶೇಷತಃ ॥೩॥

ಅರ್ಥಸಂಕಟದಲ್ಲಿಯೂ ಮತ್ತು ಕುಶಲಕರ್ಮದ ವಿಷಯದಲ್ಲಿಯೂ ನನ್ನ ಸಲಹೆಯನ್ನು ಪಡೆಯಬಹುದು. ಉಳಿದೆಲ್ಲರಿಗಿಂತಲೂ ಅನ್ನವನ್ನು ಸಂಸ್ಕಾರಮಾಡುವ ವಿಷಯವನ್ನು ಎಂದರೆ ಪಾಕವಿದ್ಯೆಯನ್ನು ಚೆನ್ನಾಗಿ ತಿಳಿದಿದ್ದೇನೆ.

ಯಾನಿ ಶಿಲ್ಪಾನಿ ಲೋಕೇಸ್ಮಿನ್ ಯಚ್ಚಾಪ್ಯನ್ಯೈಃ ಸುದುಷ್ಕರಮ್ ।
ಸರ್ವಂ ಯತಿಷ್ಯೇ ತತ್ ಕರ್ತುಮೃತುಪರ್ಣ ಭರಸ್ವ ಮಾಮ್ ॥೪॥

ಎಲೈ ಋತುಪರ್ಣನೇ ಲೋಕದಲ್ಲಿ ಎಷ್ಟು ಕುಶಲ ಕಲೆಗಳಿವೆಯೋ ಅಥವಾ ಉಳಿದವರು ಎಂತಹ ದುಷ್ಕರವಾದ ಕಾರ್ಯಗಳನ್ನು ಮಾಡುತ್ತಾರೋ ಅವೆಲ್ಲವನ್ನೂ ನಾನು ಮಾಡಲು ಪ್ರಯತ್ನಿಸುವೆನು. ನನ್ನನ್ನು ಪೋಷಿಸು.

ಇತ್ಯುಕ್ತಃ ಸ ನಳೇನಾಥ ಋತುಪರ್ಣೋ ನರಾಧಿಪಃ ।
ಉವಾಚ ಸುಪ್ರೀತಮನಾ ನಳಂ ಪ್ರೇಕ್ಷ್ಯ ಮಹೀಪತೇ ॥೫॥

ಎಲೈ ರಾಜನೇ ನಳನಿಂದ ಹೀಗೆ ಹೇಳಲ್ಪಟ್ಟ ಋತುಪರ್ಣರಾಜನು ಸಂತುಷ್ಟ ಮನಸ್ಸುಳ್ಳವನಾಗಿ ನಳನನ್ನು ನೋಡಿ ಹೀಗೆ ಮಾತನಾಡಿದನು.

ವಸ ಬಾಹುಕ ಭದ್ರಂ ತೇ ಸರ್ವಮೇತತ್ ಕರಿಷ್ಯಸಿ ।
ಶೀಘ್ರ್ಯಾನೇ ಸದಾ ಬುದ್ಧಿರ್ಧ್ರಿಯತೇ ಮೇ ವಿಶೇಷತಃ ॥೬॥

ಎಲೈ ಬಾಹುಕನೇ ನಿನಗೆ ಮಂಗಳವಾಗಲೀ ನನ್ನಲ್ಲಿ ವಾಸಮಾಡು. ನೀನು ಹೇಳುದೆಲ್ಲವನ್ನೂ ನೀನು ಮಾಡುವಿ. ನನಗೆ ವಿಶೇಷವಾಗಿ ವೇಗವಾಗಿ ರಥವನ್ನು ನಡೆಸುವುದರಲ್ಲಿ ಯಾವಾಗಲೂ ಬುದ್ಧಿಯು ಓಡುತ್ತದೆ.

ಸ ತ್ವಮಾತಿಷ್ಠ ಯೋಗಂ ತಂ ಯೇನ ಶೀಘ್ರಾ ಹಯಾ ಮಮ ।
ಭವೇಯುರಶ್ವಾಧ್ಯಕ್ಷೋಽಸಿ ವೇತನಂ ತೇ ಶತಂ ಶತಮ್ ॥೭॥

ನೀನು ನನ್ನ ಅಶ್ವಾಧ್ಯಕ್ಷನಾಗು. ಯಾವ ಮಾರ್ಗವನ್ನು ಅನುಸರಿಸಿದರೆ ನನ್ನ ಅಶ್ವಗಳು ಶೀಘ್ರಗಾಮಿಗಳಾಗುತ್ತವೆಯೋ ಅಂತಹ ಉಪಾಯವನ್ನು ಮಾಡು. ನಿನಗೆ ಹತ್ತು ಸಹಸ್ರ ಸುವರ್ಣಗಳು ವೇತನ.

ತ್ವಾಮುಪಸ್ಥಾಸ್ಯತಶ್ಚೇಮೌ ನಿತ್ಯಂ ವಾರ್ಷ್ಣೇಯಜೀವಲೌ ।
ಏತಾಭ್ಯಾಂ ರಂಸ್ಯಸೇ ಸಾರ್ಧಂ ವಸ ವೈ ಮಯಿ ಬಾಹುಕ ॥೮॥

ಈ ವಾರ್ಷ್ಣೇಯ ಮತ್ತು ಜೀವಲ ಇವರಿಬ್ಬರು ನಿನಗೆ ಯಾವಾಗಲೂ ಸಹಾಯಕರಾಗಿರುತ್ತಾರೆ. ಇವರ ಜೊತೆಯಲ್ಲಿ ನೀನು ಸಂತೋಷಪಡುವಿ. ಬಾಹುಕನೇ ನನ್ನಲ್ಲಿ ವಾಸಮಾಡು.

ಏವಮುಕ್ತೋ ನಳಸ್ತೇನ ನ್ಯವಸತ್ ತತ್ರ ಪೂಜಿತಃ ।
ಋತುಪರ್ಣಸ್ಯ ನಗರೇ ಸಹವಾರ್ಷ್ಣೇಯಜೀವಲಃ ॥೯॥

ಋತುಪರ್ಣನಿಂದ ಹೀಗೆ ಹೇಳಲ್ಪಟ್ಟ ನಳನು ಅವನಿಂದ ಸತ್ಕೃತನಾಗಿ ವಾರ್ಷ್ಣೇಯ ಜೀವಲರ ಜೊತೆಯಲ್ಲಿ ಆ ನಗರದಲ್ಲಿ ವಾಸವನ್ನು ಮಾಡಿದನು.

ಸ ತತ್ರ ಸ್ಮ ವಸನ್ ರಾಜಾ ವೈದರ್ಭೀಮನುಚಿಂತಯನ್ ।
ಸಾಯಂಸಾಯಂ ಸದಾ ಸ್ಮೈನಂ ಶ್ಲೋಕಮೇಕಂ ಜಗಾದ ಹ ॥೧೦॥

ಆ ರಾಜನು ಅಲ್ಲಿ ವಾಸಮಾಡಿ ದಮಯಂತಿಯನ್ನು ಚಿಂತಿಸುತ್ತಾ ಪ್ರತಿರಾತ್ರಿಯಲ್ಲಿ ಯಾವಾಗಲೂ ಈ ಶ್ಲೋಕವನ್ನು ಹಾಡುತ್ತಿದ್ದನು.

ಕ್ವ ನು ಸಾ ಕ್ಷುತ್ತೃಷಾಸಾರ್ತಾ ಶ್ರಾಂತಾ ಶೇತೇ ತಪಸ್ವಿನೀ ।
ಸ್ಮರಂತೀ ತಸ್ಯ ಮಂದಸ್ಯ ಕಂ ವಾಸಾಯೋಪತಿಷ್ಠತೇ ॥೧೧॥

ಹಸಿವು ಮತ್ತು ಬಾಯಾರಿಕೆಯಿಂದ ಬಳಲಿದ ಆ ಶೋಚನೀಯ ವನಿತೆಯು ಆ ಮಂದನನ್ನು ಸ್ಮರಿಸುತ್ತಾ ಎಲ್ಲಿ ಮಲಗಿದ್ದಾಳೆ? ತನ್ನ ವಾಸಕ್ಕಾಗಿ ಯಾರನ್ನು ಸಮೀಪಿಸುತ್ತಾಳೆ?

ಏವಂ ಬ್ರುವಂತಂ ರಾಜಾನಂ ನಿಶಾಯಾಂ ಜೀವಲೋಽಬ್ರವೀತ್ ।
ಕಾಮೇನಾಂ ಶೋಚಸೇ ನಿತ್ಯಂ ಶ್ರೋತುಮಿಚ್ಛಾಮಿ ಬಾಹುಕ ॥೧೨॥

ಹೀಗೆ ರಾತ್ರಿಯ ವೇಳೆಯಲ್ಲಿ ಹೇಳುತ್ತಿದ್ದ ರಾಜನನ್ನು ಕುರಿತು ಜೀವಲನು ಬಾಹುಕನೇ, ಯಾವ ಈ ವನಿತೆಯನ್ನು ಕುರಿತು ನಿತ್ಯವೂ ಶೋಕಪಡುತ್ತಿದ್ದೀಯೆ ಅದನ್ನು ಕೇಳಲು ಇಚ್ಛಿಸುತ್ತೇನೆ ಎಂದು ಹೇಳಿದನು.

ತಮುವಾಚ ತತೋ ರಾಜಾ ಮಂದಪ್ರಜ್ಞಸ್ಯ ಕಸ್ಯಚಿತ್ ।
ಆಸೀದ್ ಬಹುಮತಾ ನಾರೀ ತಸ್ಯಾಃ ಪ್ರಿಯತಮಶ್ಚ ಸಃ ॥೧೩॥

ಅವನನ್ನು ಕುರಿತು ನಳನು ಹೀಗೆ ಹೇಳಿದನು. ಮಂದಪ್ರಜ್ಞನಾದ ಒಬ್ಬ ಪುರುಷನಿಗೆ ಬಹಳ ಗೌರವಪಾತ್ರಳಾದ ಒಬ್ಬ ಪತ್ನಿಯಿದ್ದಳು. ಆ ಪುರುಷನೂ ಸಹ ಅವಳಿಗೆ ಅತ್ಯಂತ ಪ್ರಿಯನಾಗಿದ್ದನು.

ಸ ವೈ ಕೇನಚಿದರ್ಥೇನ ತಯಾ ಮಂದೋ ವ್ಯಯುಜ್ಯತ ।
ವಿಪ್ರಯುಕ್ತಶ್ಚ ಮಂದಾತ್ಮಾ ಭ್ರಮತ್ಯಸುಖಪೀಡಿತಃ ॥೧೪॥

ಆ ಮಂದನು ಯಾವುದೋ ಒಂದು ನಿಮಿತ್ತದಿಂದ ಅವಳಿಂದ ವಿಯೋಗವನ್ನು ಹೊಂದಿದನು. ವಿಯುಕ್ತನಾದ ಆ ಮಂದಾತ್ಮನು ದುಃಖದಿಂದ ಪೀಡಿತನಾಗಿ ಅಲೆದಾಡುತ್ತಿದ್ದಾನೆ.

ದಹ್ಯಮಾನಃ ಸ ಶೋಕೇನ ದಿವಾರಾತ್ರಮತಂದ್ರಿತಃ ।
ನಿಶಾಕಾಲೇ ಸ್ಮರಂಸ್ತಸ್ಯಾಃ ಶ್ಲೋಕಮೇಕಂ ಸ್ಮ ಗಾಯತಿ ॥೧೫॥

ಆ ತೀವ್ರವಾದ ಶೋಕದಿಂದ ಬೆಂದುಹೋಗುತ್ತಾ ಹಗಲೂ ರಾತ್ರಿಯೂ ಆಲಸ್ಯವಿಲ್ಲದೆ ಅವಳನ್ನು ಸ್ಮರಿಸುತ್ತಾ ಅವಳನ್ನು ಕುರಿತು ಈ ಒಂದು ಶ್ಲೋಕವನ್ನು ಗಾನಮಾಡುತ್ತಾನೆ.

ಸ ವೈ ಭ್ರಮನ್ ಮಹೀಂ ಕೃತ್ಸ್ನಾಂ ಕ್ವಚಿನ್ನಾಸಾದ್ಯ ಕಿಂಚನ ।
ವಸತ್ಯನರ್ಹಸ್ತದ್ದುಃಖಂ ಭೂಯ ಏವಾಭಿಸಂಸ್ಮರನ್ ॥೧೬॥

ಅಂತಹ ದುಃಖಕ್ಕೆ ಅನರ್ಹನಾದ ಅವನು ಭೂಮಿಯಲ್ಲೆಲ್ಲಾ ಸಂಚರಿಸುತ್ತಾ ಎಲ್ಲೂ ಏನನ್ನೂ ಹೊಂದದೆ ಅವಳ ವಿಯೋಗದ ದುಃಖವನ್ನೇ ಮತ್ತೆಮತ್ತೆ ಚಿಂತಿಸುತ್ತಾ ವಾಸಿಸುತ್ತಿದ್ದಾನೆ.

ಸಾ ತು ತಂ ಪುರುಷಂ ನಾರೀ ಕೃಚ್ಛ್ರೇಽಪ್ಯನುಗತಾ ವನೇ ।
ತ್ಯಕ್ತಾ ತೇನಾಲ್ಪಪುಣ್ಯೇನ ದುಷ್ಕರಂ ಯದಿ ಜೀವತಿ ॥೧೭॥

ಆ ನಾರಿಯಾದರೋ ವಿಷಮಪರಿಸ್ಥಿತಿಯಲ್ಲೂ ಕಾಡಿನಲ್ಲಿ ಆ ಪುರುಷನನ್ನು ಅನುಸರಿಸಿದವಳು. ಅಲ್ಪಪುಣ್ಯನಾದ ಅವನಿಂದ ಪರಿತ್ಯಜಿಸಲ್ಪಟ್ಟಿದ್ದಾಳೆ. ಅವಳು ಜೀವಿಸುವುದೇ ದುಷ್ಕರವಾಗಿದೆ.

ಏಕಾ ಬಾಲಾಽನಭಿಜ್ಞಾ ಚ ಮಾರ್ಗಮಾಣಾಽತಥೋಚಿತಾ ।
ಕ್ಷುತ್ಪಿಪಾಸಾಪರೀತಾ ಚ ದುಷ್ಕರಂ ಯದಿ ಜೀವತಿ ॥೧೮॥

ಏಕಾಕಿನಿಯಾದ ಆ ಬಾಲೆಯು ಏನೂ ತಿಳಿಯದವಳು. ಅಂತಹ ದುಃಖಕ್ಕೆ ಅನರ್ಹಳಾದವಳು ಆ ಪತಿಯನ್ನು ಹುಡುಕುತ್ತಾ ಹಸಿವು ನೀರಡಿಕೆಗಳಿಂದ ಬಳಲಿದ್ದಾಳೆ. ಅವಳು ಬದುಕಿರುವುದು ಕಷ್ಟವೇ ಸರಿ.

ಶ್ವಾಪದಾಚರಿತೇ ನಿತ್ಯಂ ವನೇ ಮಹತಿ ದಾರುಣೇ ।
ತ್ಯಕ್ತಾ ತೇನಾಲ್ಪಪುಣ್ಯೇನ ಮಂದಪ್ರಜ್ಞೇನ ಮಾರಿಷ ॥೧೯॥

ಎಲೈ ಸ್ನೇಹಿತನೇ, ನಿತ್ಯವೂ ಕ್ರೂರಪ್ರಾಣಿಗಳು ಸಂಚರಿಸುವ ದೊಡ್ಡದಾದ ಮತ್ತು ಘೋರವಾದ ಕಾಡಿನಲ್ಲಿ ಅಲ್ಪಪುಣ್ಯನೂ ಮಂದಪ್ರಜ್ಞನೂ ಆದ ಪುರುಷನು ಅವಳನ್ನು ಪರಿತ್ಯಜಿಸಿದನು.

ಇತ್ಯೇವಂ ನೈಷಧೋ ರಾಜಾ ದಮಯಂತೀಮನುಸ್ಮರನ್ ।
ಅಜ್ಞಾತವಾಸಮವಸದ್ ರಾಜ್ಞಸ್ತಸ್ಯ ನಿವೇಶನೇ ॥೨೦॥

ಹೀಗೆ ನೈಷಧರಾಜನು ದಮಯಂತಿಯನ್ನು ಸ್ಮರಿಸುತ್ತಾ ಋತುಪರ್ಣರಾಜನ ಮನೆಯಲ್ಲಿ ಅಜ್ಞಾತವಾಸವನ್ನು ಆಚರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೊಂದನೆಯ ಅಧ್ಯಾಯ

(ನಳದಮಯಂತಿರನ್ನು ಹುಡುಕಲು ಭೀಮರಾಜನಿಂದ ಬ್ರಾಹ್ಮಣರ ಪ್ರೇಷಣ. ಅಯೋಧ್ಯೆಯಲ್ಲಿ ಸುದೇವನಿಂದ ದಮಯಂತಿಯ ದರ್ಶನ ಮತ್ತು ಅವರ ಸಂವಾದ.)

### ಬೃಹದಶ್ವಃ

ಹೃತರಾಜ್ಯೇ ನಳೇ ಭೀಮಃ ಸಭಾರ್ಯೇ೭ದರ್ಶನಂ ಗತೇ ।
ದ್ವಿಜಾನ್ ಪ್ರಸ್ಥಾಪಯಾಮಾಸ ನಳದರ್ಶನಕಾಂಕ್ಷಯಾ ॥೧॥

ನಳನು ರಾಜ್ಯವನ್ನು ಕಳೆದುಕೊಂಡು ತನ್ನ ಪತ್ನಿಯ ಜೊತೆಯಲ್ಲಿ ಕಣ್ಣಿಗೆ ಕಾಣಿಸದಿರಲು ಭೀಮರಾಜನು ನಳನನ್ನು ಹುಡುಕುವ ಸಲುವಾಗಿ ಬ್ರಾಹ್ಮಣರನ್ನು ಕಳುಹಿಸಿದನು.

ಸಂದಿದೇಶ ಚ ತಾನ್ ಭೀಮೋ ವಸು ದತ್ತ್ವಾ ಚ ಪುಷ್ಕಲಮ್ ।
ಮೃಗಯಧ್ವಂ ನಳಂ ಚೈವ ದಮಯಂತೀಂ ಚ ಮೇ ಸುತಾಮ್ ॥೨॥

ಭೀಮನು ಅವರಿಗೆ ಪುಷ್ಕಲವಾದ ಧನವನ್ನು ಕೊಟ್ಟು ನಳನನ್ನು ಮತ್ತು ನನ್ನ ಮಗಳಾದ ದಮಯಂತಿಯನ್ನು ಹುಡುಕಿ. ಎಂದು ಸಂದೇಶವನ್ನು ನೀಡಿದನು.

ಅಸ್ಮಿನ್ ಕರ್ಮಣಿ ನಿಷ್ಪನ್ನೇ ವಿಜ್ಞಾತೇ ನಿಷಧಾಧಿಪೇ ।
ಗವಾಂ ಸಹಸ್ರಂ ದಾಸ್ಯಾಮಿ ಯೋ ವಸ್ತಾವಾನಯಿಷ್ಯತಿ ॥೩॥

ನಳನು ದೊರೆತು ಈ ಕಾರ್ಯವು ಕೈಗೂಡಿದರೆ ಯಾರು ಅವರಿಬ್ಬರನ್ನು ಹಿಂದಕ್ಕೆ ಕರೆತರುವರೋ ಅವರಿಗೆ ಒಂದು ಸಹಸ್ರಗೋವುಗಳನ್ನು ಕೊಡುವೆನು.

ಅಗ್ರಹಾರಾಂಶ್ಚ ದಾಸ್ಯಾಮಿ ನದ್ಯಾಸ್ತೀರೇ ದ್ವಿಜೋತ್ತಮಾಃ ।
ಹಿರಣ್ಯಂ ಚ ಸುವರ್ಣಂ ಚ ದಾಸೀದಾಸಂ ತಥೈವ ಚ ॥೪॥

ಎಲೈ ಬ್ರಾಹ್ಮಣಶ್ರೇಷ್ಠರೇ ನದಿಯ ತೀರದಲ್ಲಿ ಅಗ್ರಹಾರಗಳನ್ನೂ ಒಳ್ಳೆಯ ಬಣ್ಣದ ಚಿನ್ನವನ್ನೂ ದಾಸರನ್ನೂ ಮತ್ತು ದಾಸಿಯರನ್ನೂ ಕೊಡುವೆನು.

ನ ಚೇಚ್ಚಕ್ಯಾವಿಹಾನೇತುಂ ದಮಯಂತೀ ನಳೋಽಪಿ ವಾ ।
ಜ್ಞಾತಮಾತ್ರೇಽಪಿ ದಾಸ್ಯಾಮಿ ಗವಾಂ ದಶಶತಂ ಧನಮ್ ॥೫॥

ಒಂದುಪಕ್ಷ ದಮಯಂತಿಯನ್ನಾಗಲೀ ನಳನನ್ನಾಗಲೀ ಇಲ್ಲಿಗೆ ಕರೆತರುವುದು ಸಾಧ್ಯವಿಲ್ಲದಿದ್ದರೂ ಅವರನ್ನು ಗುರುತಿಸಿದವರಿಗೆ ಒಂದು ಸಹಸ್ರ ಗೋವುಗಳನ್ನು ಕೊಡುವೆನು.

ಇತ್ಯುಕ್ತಾಸ್ತೇ ಯಯುರ್ಹೃಷ್ಟಾ ಬ್ರಾಹ್ಮಣಾಃ ಸರ್ವತೋದಿಶಮ್ ।
ಪುರರಾಷ್ಟ್ರಾಣಿ ಚಿನ್ವಂತೋ ನೈಷಧಂ ಸಹ ಭಾರ್ಯಯಾ ॥೬॥

ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣರು ಪರಮಸಂತೋಷದಿಂದ ನೈಷಧನನ್ನು ಮತ್ತು ದಮಯಂತಿಯನ್ನು ಹುಡುಕಲು ಎಲ್ಲ ದಿಕ್ಕುಗಳಿಗೂ ಹೋಗಿ ಪಟ್ಟಣಗಳಲ್ಲಿಯೂ ಮತ್ತು ರಾಷ್ಟ್ರಗಳಲ್ಲಿಯೂ ಹುಡುಕುತ್ತಾ ಹೋದರು.

ಯಾತಶ್ಚೇದಿಪುರೀಂ ತಸ್ಯಾಂ ಸುದೇವೋ ನಾಮ ವೈ ದ್ವಿಜಃ ।
ವಿಚಿನ್ವಾನೋಽಥ ವೈದರ್ಭೀಮಪಶ್ಯದ್ ರಾಜವೇಶ್ಮನಿ ॥೭॥

ಕೃಶಾಂ ವಿವರ್ಣಾಂ ಮಲಿನಾಂ ಭರ್ತೃಶೋಕಪರಾಯಣಾಮ್ ।
ಪುಣ್ಯಾಹವಾಚನೇ ರಾಜ್ಞಃ ಸುನಂದಾಸಹಿತಾಂ ಸ್ಥಿತಾಮ್ ॥೮॥

ಮಂದಂ ಪ್ರಖ್ಯಾಯಮಾನೇನ ರೂಪೇಣಾಪ್ರತಿಮೇನ ತಾಮ್ ।
ಪಿನದ್ಧಾಂ ಧೂಮಜಾಲೇನ ಪ್ರಭಾಮಿವ ವಿಭಾವಸೋಃ ॥೯॥

ಅವರಲ್ಲಿ ಸುದೇವನೆಂಬ ಬ್ರಾಹ್ಮಣನು ಅವರಿಬ್ಬರನ್ನೂ ಹುಡುಕುತ್ತಾ ಚೇದಿಪುರಕ್ಕೆ ಹೋಗಿ ರಾಜನ ಅರಮನೆಯಲ್ಲಿ ದಮಯಂತಿಯನ್ನು ನೋಡಿದನು. ಕೃಶಳೂ ವರ್ಣಹೀನಳೂ ಮಲಿನಳೂ ಪತಿಶೋಕಪರಾಯಣಳೂ ಆದ ಅವಳು ಸುನಂದೆಯ ಜೊತೆಯಲ್ಲಿ ಇರುವುದನ್ನು ರಾಜನ ಪುಣ್ಯಹವಾಚನ ಸಮಯದಲ್ಲಿ ನೋಡಿದನು. ಅಲ್ಪವಾಗಿ ತೋರುತ್ತಿದ್ದ ಅಪ್ರತಿಮರೂಪಳಾದ ಅವಳು ಧೂಮಜಾಲದಿಂದ ಆವೃತವಾದ ಅಗ್ನಿಶಿಖೆಯಂತೆ ಇರುವುದನ್ನು ನೋಡಿದನು.

ತಾಂ ಸಮೀಕ್ಷ್ಯ ವಿಶಾಲಾಕ್ಷೀಮಧಿಕಂ ಮಲಿನಾಂ ಕೃಶಾಮ್ ।
ತರ್ಕಯಾಮಾಸ ಭೈಮೀತಿ ಕಾರಣೈರುಪಪಾದಯನ್ ॥೧೦॥

ಅಧಿಕವಾಗಿ ಮಲಿನಳೂ ಕೃಶಳೂ ಆದ ಆ ವಿಶಾಲಾಕ್ಷಿಯನ್ನು ನೋಡಿ ಅವಳು ದಮಯಂತಿಯೆಂದು ಅನೇಕ ಕಾರಣಗಳಿಂದ ಊಹಿಸಿದನು.

ಸುದೇವಃ

ಯಥೇಯಂ ಮೇ ಪುರಾ ದೃಷ್ಟಾ ತಥಾರೂಪೇಯಮಂಗನಾ ।
ಕೃತಾರ್ಥೋಽಸ್ಮ್ಯದ್ಯ ದೃಷ್ಟ್ವೇಮಾಂ ಲೋಕಕಾಂತಾಮಿವ ಶ್ರಿಯಮ್ ॥

ನಾನು ಹಿಂದೆ ಇವಳನ್ನು ಹೇಗೆ ನೋಡಿದ್ದೆನೊ ಈ ಅಂಗನೆಯು ಅಂತಹ ರೂಪವನ್ನೇ ಹೊಂದಿದ್ದಾಳೆ. ಲೋಕಕ್ಕೆ ಪ್ರಿಯಳಾದ ಲಕ್ಷ್ಮಿಯಂತೆ ಇರುವ ಇವಳನ್ನು ನೋಡಿ ನಾನು ಈ ದಿನ ಕೃತಾರ್ಥನಾಗಿದ್ದೇನೆ.

ಪೂರ್ಣಚಂದ್ರಾನನಾಂ ಶ್ಯಾಮಾಂ ಚಾರುವೃತ್ತಪಯೋಧರಾಮ್ ।
ಕುರ್ವಂತೀಂ ಪ್ರಭಯಾ ದೇವೀಂ ಸರ್ವಾ ವಿತಿಮಿರಾ ದಿಶಃ ॥೧೨॥

ಇವಳು ಪೂರ್ಣಚಂದ್ರನಂತೆ ಮುಖವುಳ್ಳವಳೂ ಶ್ಯಾಮವರ್ಣದವಳೂ ಸುಂದರವಾದ ಮತ್ತು ಸುವೃತ್ತವಾದ ಸ್ತನಗಳುಳ್ಳವಳೂ ಆಗಿ ತನ್ನ ಕಾಂತಿಯಿಂದ ಎಲ್ಲ ದಿಕ್ಕುಗಳನ್ನೂ ತನ್ನ ಪ್ರಭೆಯಿಂದ ಬೆಳಗುತ್ತಿದ್ದಾಳೆ.

ಚಾರುಪದ್ಮವಿಶಾಲಾಕ್ಷೀಂ ಮನ್ಮಥಸ್ಯೇವ ತಾಂ ರತಿಮ್ ।
ಇಷ್ಟಾಂ ಸರ್ವಸ್ಯ ಜಗತಃ ಪೂರ್ಣಚಂದ್ರಪ್ರಭಾಮಿವ ॥೧೩॥

ಮನ್ಮಥನಿಗೆ ರತಿಯಂತೆ ಎಲ್ಲಾ ಜನರಿಗೂ ಇಷ್ಟವಾದ ಈ ಚಾರುಪದ್ಮ ವಿಶಾಲನೇತ್ರೆಯು ಪೂರ್ಣಚಂದ್ರನ ಪ್ರಭೆಯಂತೆ ಇದ್ದಾಳೆ.

ವಿದರ್ಭಸರಸಸ್ತಸ್ಮಾದ್ ದೈವದೋಷಾದಿವೋದ್ಯತಾಮ್ ।
ಮಲಪಂಕಾನುಲಿಪ್ತಾಂಗೀಂ ವ್ಯಾಕುಲಾಂ ಪದ್ಮಿನೀಮಿವ ॥೧೪॥

ದೈವದೋಷದಿಂದ ವಿದರ್ಭಕುಲವೆಂಬ ಸರೋವರದಲ್ಲಿ ಮಲಪಂಕಾನುಲಿಪ್ತಳಾಗಿ ವ್ಯಾಕುಲಳಾದ ಲಕ್ಷ್ಮಿಯೇ ಉದಿಸಿದಂತೆ ಕಾಣುತ್ತಿದ್ದಾಳೆ.

ಪೌರ್ಣಮಾಸ್ಯಾಮಿವ ನಿಶಾಂ ರಾಹುಗ್ರಸ್ತನಿಶಾಕರಾಮ್ ।
ಪತಿಶೋಕಾಕುಲಾಂ ದೀನಾಂ ಶುಷ್ಕಸ್ರೋತಾಂ ನದೀಮಿವ ॥೧೫॥

ಪೌರ್ಣಮಾಸಿಯ ರಾತ್ರಿಯಲ್ಲಿ ರಾಹುಗ್ರಸ್ತನಾದ ಚಂದ್ರನಂತೆಮ ಮೂಲವು ಬತ್ತಿಹೋದ ನದಿಯಂತೆ, ಪತಿಶೋಕದಿಂದ ಪೀಡಿತಳಾಗಿ ದೀನಳಾಗಿದ್ದಾಳೆ.

ವಿಧ್ವಸ್ತಪತ್ರಕಮಲಾಂ ವಿತ್ರಾಸಿತವಿಹಂಗಮಾಮ್ ।
ಹಸ್ತಿಹಸ್ತಪರಿಕ್ಲಿಷ್ಟಾಂ ವ್ಯಾಕುಲಾಮಿವ ಪದ್ಮಿನೀಮ್ ॥೧೬॥

ಆನೆಗಳ ಸೊಂಡಿಲಿನ ಆಘಾತಕ್ಕೆ ಸಿಕ್ಕಿನಾಶವನ್ನು ಹೊಂದಿದ ಪದ್ಮಪತ್ರ ಮತ್ತು ಪದ್ಮಪುಷ್ಪಗಳಿರುವ ಪಕ್ಷಿಗಳು ಚದುರಿಹೋದ ಅಸ್ತವ್ಯಸ್ತವಾದ ಪದ್ಮಸರೋವರದಂತೆ ಇದ್ದಾಳೆ.

ಸುಕುಮಾರೀಂ ಸುಜಾತಾಂಗೀಂ ರತ್ನಗರ್ಭಗೃಹೋಚಿತಾಮ್ ।
ದಹ್ಯಮಾನಾಮಿವೋಷ್ಣೇನ ಮೃಣಾಲೀಮಚಿರೋದ್ಧೃತಾಮ್ ॥೧೭॥

ಸುಕುಮಾರಿಯೂ ಚೆನ್ನಾಗಿ ಹೊರಹೊಮ್ಮಿದ ಅವಯವಯುಳ್ಳವಳೂ ಆದ ಇವಳು ರತ್ನಗರ್ಭಗೃಹದಲ್ಲಿ ವಾಸಿಸಲು ಯೋಗ್ಯವಾಗಿದ್ದಾಳೆ. ಆಗ ತಾನೇ ಕಿತ್ತು ಉಷ್ಣದ ಮೇಲೆ ಇಟ್ಟ ಕಮಲದಂತೆ ಬೆಂದು ಹೋಗುತ್ತಿದ್ದಾಳೆ.

ರೂಪೌದಾರ್ಯಗುಣೋಪೇತಾಂ ಮಂಡನಾರ್ಹಾಮಮಂಡಿತಾಮ್ ।
ಚಂದ್ರಲೇಖಾಮಿವ ನವಾಂ ವ್ಯೋಮ್ನಿ ನೀಲಾಭ್ರಸಂವೃತಾಮ್ ॥೧೮॥

ರೂಪ ೌದಾರ್ಯಗುಣಗಳಿಂದ ಕೂಡಿ ಅಲಂಕಾರಕ್ಕೆ ಅರ್ಹಳಾದ ಏನೂ ಅಲಂಕಾರಮಾಡಿಕೊಳ್ಳದೆ ಆಕಾಶದಲ್ಲಿ ನೀಲಮೇಘಗಳ ಜೊತೆಯಲ್ಲಿ ಬೆರೆತ ಚಂದ್ರಲೇಖೆಯಂತೆ ಕಾಣುತ್ತಿದ್ದಾಳೆ.

ಕಾಮಭೋಗೈಃ ಪ್ರಿಯೈರ್ಹೀನಾಂ ಹೀನಾಂ ಬಂಧುಜನೇನ ಚ ।
ದೇಹಂ ಧಾರಯತೀಂ ದೀನಂ ಭರ್ತೃದರ್ಶನಕಾಂಕ್ಷಯಾ ॥೧೯॥

ತನಗೆ ಪ್ರಿಯವಾದ ಕಾಮಭೋಗಗಳಿಂದ ರಹಿತಳಾಗಿ ಬಂಧುಜನರಿಂದಲೂ ರಹಿತಳಾಗಿ ಪತಿಯನ್ನು ನೋಡುವ ಆಸೆಯಿಂದ ದೀನಳಾಗಿ ಶರೀರವನ್ನು ಧರಿಸಿದ್ದಾಳೆ.

ಭರ್ತಾ ನಾಮ ಪರಂ ನಾರ್ಯಾ ಭೂಷಣಂ ಭೂಷಣಾದಪಿ ।
ವಿಷಾ ವಿರಹಿತಾ ತೇನ ಶೋಭನಾऽಪಿ ನ ಶೋಭತೇ ॥೨೦॥

ಪತಿಯೆಂದರೆ ನಾರಿಯರಿಗೆ ಎಲ್ಲ ಭೂಷಣಗಳಿಂತಲೂ ಶ್ರೇಷ್ಠವಾದ ಭೂಷಣವಷ್ಟೇ. ಅಂತಹ ಪತಿಯಿಂದ ವಿರಹಿತಳಾದ ಇವಳು ಸುಂದರಿಯಾಗಿದ್ದರೂ ಶೋಭಿಸುತ್ತಿಲ್ಲ.

ದುಷ್ಕರಂ ಕುರುತೇऽತ್ಯರ್ಥಂ ಹೀನೋ ಯದನಯಾ ನಳಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥೨೧॥

ಇವಳನ್ನು ತೊರೆದ ನಳನು ದೊಡ್ಡ ದುಸ್ಸಾಹಸವನ್ನು ಮಾಡುತ್ತಿದ್ದಾನೆ. ಅವನು ಶೋಕದಿಂದ ನಾಶವನ್ನು ಹೊಂದದೆ ಶರೀರವನ್ನು ಧರಿಸಿರುವುದೇ ದೊಡ್ಡದು.

ಇಮಾಮಸಿತಕೇಶಾಂತಾಂ ಶತಪತ್ರಾಯತೇಕ್ಷಣಾಮ್ ।
ಸುಖಾರ್ಹಾಂ ದುಃಖಿತಾಂ ದೃಷ್ಟ್ವಾ ಮಮಾಪಿ ವ್ಯಥತೇ ಮನಃ ॥೨೨॥

ಕೃಷ್ಣಕೇಶಗಳಿಂದ ಕೂಡಿರುವ ಕಮಲದಲಾಯತಾಕ್ಷಿಯಾದ ಸುಖೋಚಿತಳಾದ ಇವಳು ದುಃಖದಿಂದ ಕೂಡಿರುವುದನ್ನು ನೋಡಿ ನನ್ನ ಮನಸ್ಸಿಗೂ ವ್ಯಥೆಯಾಗುತ್ತಿದೆ.

ಕದಾ ನು ಖಲು ದುಃಖಸ್ಯ ಪಾರಂ ಯಾಸ್ಯತಿ ವೈ ಶುಭಾ ।
ಭರ್ತುಃ ಸಮಾಗಮಾತ್ ಸಾಧ್ವೀ ರೋಹಿಣೀ ಶಶಿನೋ ಯಥಾ ॥೨೩॥

ಈ ಸಾಧ್ವಿಯೂ ಮತ್ತು ಪವಿತ್ರಳಾದವಳೂ ಯಾವಾಗ ಪತಿಯ ಸಮಾಗಮವನ್ನು ಹೊಂದಿ ರೋಹಿಣಿಯು ಚಂದ್ರನ ಜೊತೆಯಲ್ಲಿ ಬೆರೆತಂತೆ ದುಃಖದದಡವನ್ನು ದಾಟಿ ಸುಖವಾಗಿರುತ್ತಾಳೆ?

ಅಸ್ಯಾ ನೂನಂ ಪುನರ್ಲಾಭಾನ್ನೈಷಧಃ ಪ್ರೀತಿಮೇಷ್ಯತಿ ।
ರಾಜಾ ರಾಜ್ಯಪರಿಭ್ರಷ್ಟಃ ಪುನರ್ಲಬ್ಧ್ವೇವ ಮೇದಿನೀಮ್ ॥೨೪॥

ರಾಜ್ಯಪರಿಭ್ರಷ್ಟನಾದ ರಾಜನು ಪುನಃ ರಾಜ್ಯವನ್ನು ಮರಳಿಪಡೆದಂತೆ ಇವಳನ್ನು ಪಡೆದತಕ್ಷಣ ಖಂಡಿತವಾಗಿ ನಳನು ಸಂತೋಷವನ್ನು ಹೊಂದುವನು.

ತುಲ್ಯಶೀಲವಯೋರೂಪಾಂ ತುಲ್ಯಾಭಿಜನಸಂಯುತಾಮ್ ।
ನೈಷಧೋಽರ್ಹತಿ ವೈದರ್ಭೀಂ ತಂ ಚೇಯಮಸಿತೇಕ್ಷಣಾ ॥೨೫॥

ಸಮಾನವಾದ ಶೀಲವಯೋರೂಪಗಳುಳ್ಳ ಮತ್ತು ಸಮಾನವಾದ ಉತ್ಕೃಷ್ಟಕುಲದಲ್ಲಿ ಜನಿಸಿದ ದಮಯಂತಿಯನ್ನು ಪಡೆಯಲು ನೈಷಧನು ಅರ್ಹನಾಗಿದ್ದಾನೆ. ನೈಷಧನನ್ನು ಪಡೆಯಲು ಈ ಕೃಷ್ಣನೇತ್ರೆಯಾದ ದಮಯಂತಿಯೂ ಅರ್ಹಳಾಗಿದ್ದಾಳೆ.

ಯುಕ್ತಂ ತದ್ಧ್ಯಾಪ್ರಮೇಯಸ್ಯ ವೀರ್ಯಸತ್ತ್ವವತೋ ಮಯಾ ।
ಸಮಾಶ್ವಾಸಯಿತುಂ ಭಾರ್ಯಾಂ ಪತಿದರ್ಶನಲಾಲಸಾಮ್ ॥೨೬॥

ಈದಿನ ಅಪ್ರಮೇಯನಾದ ಬಲಪರಾಕ್ರಮಗಳನ್ನು ಹೊಂದಿದ ನಳನ ಪತ್ನಿಯಾದ ಪತಿದರ್ಶನಾಕಾಂಕ್ಷಿಯಾದ ದಮಯಂತಿಯನ್ನು ಸಮಾಧಾನಪಡಿಸುವುದು ಯುಕ್ತವಾಗುತ್ತದೆ.

ಅಹಮಾಶ್ವಾಸಯಾಮ್ಯೇನಾಂ ಪೂರ್ಣಚಂದ್ರನಿಭಾನನಾಮ್ ।
ಅದೃಷ್ಟಪೂರ್ವಾಂ ದುಃಖಸ್ಯ ದುಃಖಾರ್ತಾಂ ಧ್ಯಾನತತ್ಪರಾಮ್ ॥೨೭॥

ಏವಂ ವಿಮೃಶ್ಯ ವಿವಿಧೈಃ ಕಾರಣೈರ್ಲಕ್ಷಣೈಶ್ಚ ತಾಮ್ ।
ಉಪಗಮ್ಯ ತತೋ ಭೈಮೀಂ ಸುದೇವೋ ವಾಕ್ಯಮಬ್ರವೀತ್ ॥೨೮॥

ಹಿಂದೆ ಎಂದೂ ದುಃಖವನ್ನು ಕಾಣದೆ ಈಗ ದುಃಖಾರ್ತಳಾಗಿ ಚಿಂತಾಕ್ರಾಂತಳಾಗಿರುವ ಈ ಪೂರ್ಣಚಂದ್ರಮುಖಿಯಾದ ದಮಯಂತಿಯನ್ನು ನಾನು ಸಮಾಧಾನಪಡಿಸುತ್ತೇನೆ. ಸುದೇವನು ಹೀಗೆ ಅನೇಕ ಕಾರಣಗಳಿಂದಲೂ ಮತ್ತು ಅವಳ ಲಕ್ಷಣಗಳಿಂದಲೂ ವಿಮರ್ಶೆಯನ್ನು ಮಾಡಿ ಅನಂತರ ಅವಳನ್ನು ಸಮೀಪಿಸಿ ಅವಳನ್ನು ಕುರಿತು ಮಾತನಾಡಿದನು.

ಅಹಂ ಸುದೇವೋ ವೈದರ್ಭಿ ಭ್ರಾತುಸ್ತೇ ದಯಿತಃ ಸಖಾ ।
ಭೀಮಸ್ಯ ವಚನಾದ್ ರಾಜ್ಞಃ ತ್ವಾಮನ್ವೇಷ್ಟುಮಿಹಾಗತಃ ॥೨೯॥

ಎಲೌ ದಮಯಂತಿಯೇ ನಾನು ಸುದೇವ. ನಿನ್ನ ಸಹೋದರನಿಗೆ ಪ್ರಿಯನಾದ ಸ್ನೇಹಿತ. ಭೀಮರಾಜನ ವಚನದಂತೆ ನಿನ್ನನ್ನು ಹುಡುಕಲು ಇಲ್ಲಿಗೆ ಬಂದಿದ್ದೇನೆ.

ಕುಶಲೀ ತೇ ಪಿತಾ ರಾಜಾ ಜನಿತ್ರೀ ಭ್ರಾತರಶ್ಚ ತೇ ।
ಆಯುಷ್ಮಂತೌ ಕುಶಲಿನೌ ತತ್ರಸ್ಥೌ ದಾರಕೌ ಚ ತೇ ॥೩೦॥

ನಿನ್ನ ತಂದೆಯಾದ ರಾಜನು ಕ್ಷೇಮದಿಂದ ಇದ್ದಾನೆ. ನಿನ್ನ ತಾಯಿಯು ನಿನ್ನ ಸಹೋದರರು ಕ್ಷೇಮದಿಂದ ಇದ್ದಾರೆ. ಅಲ್ಲಿರುವ ಚಿರಂಜೀವಿಗಳಾದ ನಿನ್ನ ಮಕ್ಕಳು ಕ್ಷೇಮದಿಂದ ಇದ್ದಾರೆ.

ಕಿಂತು ರಾಜಾ ದೃಢೋ ಭೀಮೋ ಜನನೀ ಭ್ರಾತರಶ್ಚ ತೇ ।
ತ್ವತ್ಕೃತೇ ಬಂಧುವರ್ಗಶ್ಚ ಗತಸತ್ತ್ವಾ ಇವಾಸತೇ ॥೩೧॥

ಆದರೆ ನಿನ್ನ ಸಲುವಾಗಿ ಭೀಮರಾಜನೂ ನಿನ್ನ ತಾಯಿಯೂ ನಿನ್ನ ಸಹೋದರರೂ ಮತ್ತು ಬಂಧುವರ್ಗಗಳೂ ಪ್ರಾಣಹೋದವರಂತೆ ಇದ್ದಾರೆ.

ಅಭಿಜ್ಞಾಯ ಸುದೇವಂ ತು ದಮಯಂತೀ ಯುಧಿಷ್ಠಿರ ।
ಪರ್ಯಪೃಚ್ಛತ ತಾನ್ ಸರ್ವಾನ್ ಕ್ರಮೇಣ ಸುಹೃದಃ ಸ್ವಕಾನ್ ॥೩೨॥

ಎಲೈ ಯುಧಿಷ್ಠಿರನೇ, ದಮಯಂತಿಯು ಸುದೇವನನ್ನು ಗುರುತಿಸಿ ಕ್ರಮವಾಗಿ ತನ್ನ ಆ ಎಲ್ಲ ಬಂಧುಗಳ ವಿಷಯದಲ್ಲಿ ಕುಶಲಪ್ರಶ್ನೆಯನ್ನು ಮಾಡಿದಳು.

ರುರೋದ ಚ ಭೃಶಂ ರಾಜನ್ ವೈದರ್ಭೀ ಶೋಕಕರ್ಶಿತಾ ।
ದೃಷ್ಟ್ವಾ ಸುದೇವಂ ಸಹಸಾ ಭ್ರಾತುರಿಷ್ಟಂ ದ್ವಿಜೋತ್ತಮಮ್ ॥೩೩॥

ಎಲೈ ರಾಜನೇ, ತನ್ನ ಸಹೋದರನಿಗೆ ಪ್ರಿಯನಾದ ದ್ವಿಜಶ್ರೇಷ್ಠನಾದ ಸುದೇವನನ್ನು ಇದ್ದಕ್ಕಿದ್ದಂತೆ ನೋಡಿ ಶೋಕಕರ್ಶಿತಳಾದ ದಮಯಂತಿಯು ಬಹಳವಾಗಿ ಅತ್ತಳು.

ರುದಂತೀಂ ತಾಂ ತಥಾ ದೃಷ್ಟ್ವಾ ಸುನಂದಾ ಶೋಕಕರ್ಶಿತಾ ।
ಸುದೇವೇನ ಸಹೈಕಾಂತೇ ಕಥಯಂತೀಂ ಚ ಭಾರತ ॥೩೪॥

ಜನಿತ್ರ್ಯೈ ಕಥಯಾಮಾಸ ಸೈರಂಧ್ರೀಂ ರುದತೀಂ ಭೃಶಮ್ ।
ಬ್ರಾಹ್ಮಣೇನ ಸಹಾಗಮ್ಯ ತಾಂ ವಿದ್ಧಿ ಯದಿ ಮನ್ಯಸೇ ॥೩೫॥

ಎಲೈ ಭಾರತನೇ, ದಮಯಂತಿಯು ಏಕಾಂತದಲ್ಲಿ ಸುದೇವನ ಜೊತೆಯಲ್ಲಿ ಮಾತನಾಡುತ್ತಿರುವುದನ್ನು ಮತ್ತೆ ಹಾಗೆ ಅಳುತ್ತಿರುವುದನ್ನು ಗಮನಿಸಿದ ಸುನಂದೆಯು ದುಃಖಪೀಡಿತಳಾಗಿ ರಾಜಮಾತೆಗೆ ಸೈರಂಧ್ರಿಯು ಬ್ರಾಹ್ಮಣನ ಜೊತೆಯಲ್ಲಿ ಬಹಳವಾಗಿ ಅಳುತ್ತಿದ್ದಾಳೆ. ಇಲ್ಲಿಗೆ ಬಂದು ಆ ವಿಷಯವು ಏನೆಂದು ತಿಳಿ ಎಂದು ಹೇಳಿದಳು.

ಅಥ ಚೇದಿಪತೇರ್ಮಾತಾ ರಾಜ್ಞಶ್ಚಾಂತಃಪುರಾತ್ ತದಾ ।
ಜಗಾಮ ಯತ್ರ ಸಾ ಬಾಲಾ ಬ್ರಾಹ್ಮಣೇನ ಸಹಾಭವತ್ ॥೩೬॥

ಆಗ ಚೇದಿರಾಜನ ಮಾತೆಯು ರಾಜನ ಅಂತಃಪುರದಿಂದ ಹೊರಗೆ ಬಂದು ಆ ಬ್ರಾಹ್ಮಣನ ಜೊತೆಯಲ್ಲಿ ದಮಯಂತಿಯು ಇದ್ದಲ್ಲಿಗೆ ಬಂದಳು.

ತತಃ ಸುದೇವಮಾನಾಯ್ಯ ರಾಜಮಾತಾ ವಿಶಾಂಪತೇ ।
ಪಪ್ರಚ್ಛ ಭಾರ್ಯಾ ಕಸ್ಯೇಯಂ ಸುತಾ ವಾ ಕಸ್ಯ ಭಾಮಿನೀ ॥೩೭॥

ಕಥಂ ಚ ನಷ್ಟಾ ಜ್ಞಾತಿಭ್ಯೋ ಭರ್ತುರ್ಭಾರ್ಯಾ ಸುಲೋಚನಾ ।
ತ್ವಯಾ ಚ ವಿದಿತಾ ವಿಪ್ರ ಕಥಮೇವಂಗತಾ ಸತೀ ॥೩೮॥

ಏತದಿಚ್ಛಾಮ್ಯಹಂ ತ್ವತ್ತೋ ಜ್ಞಾತುಂ ಸರ್ವಮಶೇಷತಃ ।
ತತ್ತ್ವೇನ ಹಿ ಮಮಾಚಕ್ಷ್ವ ಪೃಚ್ಛಂತ್ಯಾ ದೇವರೂಪಿಣೀಮ್ ॥೩೯॥

ರಾಜನೇ ಅನಂತರ ರಾಜಮಾತೆಯು ಸುದೇವನನ್ನು ಕರೆಸಿ ಇವಳು ಯಾರ ಪತ್ನಿ ಈ ಭಾಮಿನಿಯು ಯಾರ ಮಗಳು ಇಂತಹ ಸುಲೋಚನೆಯು ಚಿಕ್ಕವಯಸ್ಸಿನವಳಾದ ಇವಳು ಪತಿಯಿಂದಲೂ ಮತ್ತು ಬಂಧುಗಳಿಂದಲೂ ಹೇಗೆ ವಿಯೋಗವನ್ನು ಹೊಂದಿದಳು? ಎಲೈ ಬ್ರಾಹ್ಮಣನೇ ಈ ಅವಸ್ಥೆಯಲ್ಲಿರುವ ಇವಳನ್ನು ನೀನು ಹೇಗೆ ಗುರುತಿಸಿದೆ? ಇವುಗಳನ್ನು ನಾನು ಸಂಪೂರ್ಣವಾಗಿ ಯಥಾರ್ಥವಾಗಿ ನಿನ್ನಿಂದ ತಿಳಿಯಲು ಅಪೇಕ್ಷಿಸುತ್ತೇನೆ. ನಿನ್ನನ್ನು ಕೇಳುತ್ತಿರುವ ನನಗೆ ದೇವರೂಪಿಣಿಯಾದ ಇವಳು ಯಾರೆಂದುತಿಳಿಸು ಎಂದು ಹೇಳಿದಳು.

ಏವಮುಕ್ತಸ್ತತೋ ರಾಜನ್ ಸುದೇವೋ ದ್ವಿಜಸತ್ತಮಃ ।
ಸುಖೋಪವಿಷ್ಟ ಆಚಷ್ಟ ದಮಯಂತೀಂ ಯಥಾತಥಮ್ ॥೪೦॥

ಎಲೈ ರಾಜನೇ ಹೀಗೆ ಹೇಳಲ್ಪಟ್ಟ ಆ ದ್ವಿಜಶ್ರೇಷ್ಠನಾದ ಸುದೇವನು ಸುಖಾಸನದಲ್ಲಿ ಕುಳಿತು ದಮಯಂತಿಯ ನಿಜ ಸ್ವರೂಪವನ್ನು ತಿಳಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೆರಡನೆಯ ಅಧ್ಯಾಯ

(ರಾಜಮಾತೆಗೆ ಸುದೇವನಿಂದ ದಮಯಂತಿಯ ಸ್ವರೂಪಕಥನ.)

ಸುದೇವಃ

ವಿದರ್ಭರಾಜೋ ಧರ್ಮಾತ್ಮಾ ಭೀಮೋ ಭೀಮಪರಾಕ್ರಮಃ ।
ಸುತೇಯಂ ತಸ್ಯ ಕಲ್ಯಾಣೀ ದಮಯಂತೀತಿ ವಿಶ್ರುತಾ ॥೧॥

ವಿದರ್ಭರಾಜನಾದ ಧರ್ಮಾತ್ಮನಾದ ಭೀಮನು ಮಹಾಪರಾಕ್ರಮಶಾಲಿಯಾಗಿದ್ದಾನೆ. ಈ ಸುಂದರಿಯು ದಮಯಂತಿಯೆಂದು ಪ್ರಖ್ಯಾತಳಾದ ಅವನ ಮಗಳು.

ರಾಜಾ ತು ನೈಷಧೋ ಧೀಮಾನ್ ಸಾರ್ವಭೌಮಶ್ಚ ವೈ ನಳಃ ।
ವೀರಸೇನಸುತಃ ಸೋऽಪಿ ಯದಿ ತೇ ಶ್ರೋತ್ರಮಾಗತಃ ।
ಭಾರ್ಯೇಯಂ ತಸ್ಯ ಕಲ್ಯಾಣೀ ಪುಣ್ಯಶ್ಲೋಕಸ್ಯ ವಿಶ್ರುತಾ ॥೨॥

ಸ ದ್ಯೂತೇ ನಿರ್ಜಿತೋ ಭ್ರಾತ್ರಾ ಹೃತರಾಜ್ಯೋ ಮಹಾಮನಾಃ ।
ದಮಯಂತ್ಯಾ ಚ ಸಹಿತೋ ಗತೋ ನ ಜ್ಞಾಯತೇ ನಳಃ ॥೩॥

ನಿಷಧರಾಜನೂ ಸಾರ್ವಭೌಮನೂ ಮೇಧಾವಿಯೂ ವೀರಸೇನನ ಪುತ್ರನೂ ಆದ ನಳನನ್ನು ನೀನು ಕೇಳಿದ್ದರೆ ಈ ಕಲ್ಯಾಣಿಯು ಆ ಪುಣ್ಯಶ್ಲೋಕನ ಪ್ರಖ್ಯಾತಳಾದ ಪತ್ನಿ. ಆ ಉದಾರಿಯಾದ ನಳನು ತಮ್ಮನ ಜೊತೆಯಲ್ಲಿ ದ್ಯೂತದಲ್ಲಿ ನಿರ್ಜಿತನಾಗಿ ರಾಜ್ಯವನ್ನು ಕಳೆದುಕೊಂಡು ದಮಯಂತಿಯ ಜೊತೆಯಲ್ಲಿ ಹೋಗಿ ಈಗ ಎಲ್ಲಿದ್ದಾನೆಂದು ತಿಳಿಯುವುದಿಲ್ಲ.

ತೇ ವಯಂ ದಮಯಂತ್ಯರ್ಥೇ ಚರಾಮಃ ಪೃಥಿವೀಮಿಮಾಮ್ ।
ಸೇಯಮಾಸಾದಿತಾ ಬಾಲಾ ತವ ದೇವಿ ನಿವೇಶನೇ ॥೪॥

ಅಂತಹ ನಾವು ದಮಯಂತಿಯ ಸಲುವಾಗಿ ಈ ಭೂಮಿಯಲ್ಲಿ ಸಂಚರಿಸುತ್ತಿದ್ದೇವೆ. ದೇವಿಯೇ ನಿನ್ನ ಮನೆಯಲ್ಲಿ ಈ ಬಾಲೆಯು ದೊರೆತಳು.

ತಸ್ಯಾ ರೂಪೇಣ ಸದೃಶೀ ಮಾನುಷೀ ನೈವ ವಿದ್ಯತೇ ।
ಅಸ್ಯಾಶ್ಚೈವ ಭ್ರುವೋರ್ಮಧ್ಯೇ ಸಹಜಾ ವಿಪ್ಲುಡುತ್ತಮಾ ॥೫॥

ಅವಳ ರೂಪಕ್ಕೆ ಸಮಾನವಾದ ರೂಪವುಳ್ಳವಳು ಮನುಷ್ಯಲೋಕದಲ್ಲಿ ಯಾರೂ ಇಲ್ಲ. ಇವಳ ಹುಬ್ಬುಗಳ ಮಧ್ಯದಲ್ಲಿ ಹುಟ್ಟಿನಿಂದಲೇ ಇರುವ ತಿಲಕಾಕಾರದ ಒಂದು ಸಣ್ಣ ಕೆಂಪು ಮಚ್ಚೆಯಿದೆ.

ಶ್ಯಾಮಾಯಾಃ ಪದ್ಮಸಂಕಾಶೋ ಲಕ್ಷಿತೋಽಂತರ್ಹಿತೋ ಮಯಾ ।
ಮಲೇನ ಸಂವೃತೋ ಹ್ಯಸ್ಯಾಃ ಘನೋಽಭ್ರೇಣೇವ ಚಂದ್ರಮಾಃ ॥೬॥

ಮಧ್ಯವಯಸ್ಸಿನ ಈ ಯುವತಿಯ ಪದ್ಮದಂತೆ ಹೊಳೆಯುವ ಮುಚ್ಚಿಕೊಂಡಿರುವ ಆ ಚಿಹ್ನೆಯು ನನ್ನಿಂದ ಗಮನಿಸಲ್ಪಟ್ಟಿತು. ಮೋಡದಿಂದ ಚಂದ್ರನು ಮರೆಯಾದಂತೆ ಆ ಚಿಹ್ನೆಯು ದೇಹದ ಮೇಲಿನ ಕೊಳೆಯಿಂದ ಮರೆಯಾಗಿದೆ.

ಚಿಹ್ನಭೂತೋ ವಿಭೂತ್ಯರ್ಥಮಿಯಂ ಧಾತ್ರಾ ವಿನಿರ್ಮಿತಾ ।
ಪ್ರತಿಪತ್ಕಲುಷಾ ಚೇಂದೋರ್ಲೇಖೇವ ನ ವಿರಾಜತೇ ॥೭॥

ಇವಳ ಸೌಭಾಗ್ಯದ ಸಲುವಾಗಿ ಈ ಮಚ್ಚೆಯು ದೇವರಿಂದ ನಿರ್ಮಿಸಲ್ಪಟ್ಟಿದೆ. ಪ್ರತಿಪದ್ ದಿವಸ ಮಲಿನವಾದ ಚಂದ್ರಲೇಖೆಯಂತೆ ಇದು ಪ್ರಕಾಶಿಸುತ್ತಿಲ್ಲ.

ನ ಚಾಸ್ಯಾ ದೃಶ್ಯತೇ ರೂಪಂ ವಪುರ್ಮಲಸಮಾಚಿತಮ್ ।
ಅಸಂಸ್ಕೃತಮಿವ ವ್ಯಕ್ತಂ ಭಾತಿ ಕಾಂಚನಸನ್ನಿಭಮ್ ॥೮॥

ಕೊಳೆಯಿಂದ ಕೂಡಿದ ಇವಳ ದೇಹದ ರೂಪವೂ ಸಹ ಸ್ಪಷ್ಟವಾಗಿ ಕಂಡುಬರುತ್ತಿಲ್ಲ. ಚಿನ್ನದ ಕಾಂತಿಯುಳ್ಳ ಇವಳ ದೇಹವು ಉಪಚಾರವನ್ನು ಹೊಂದಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತಿದೆ.

ಅನಯಾ ವಿಪ್ಲುಷಾ ಬಾಲಾ ವಪುಷಾऽನೇನ ಚೈವ ಹಿ ।
ಲಕ್ಷಿತೇಯಂ ಮಯಾ ದೇವೀ ಪಿಹಿತೋऽಗ್ನಿರಿವೋಷ್ಮಣಾ ॥೯॥

ಮುಚ್ಚಿದ ಅಗ್ನಿಯನ್ನು ಶಾಖದಿಂದ ತಿಳಿಯುವಂತೆ ನಾನು ಈ ದೇವಿಯನ್ನು ಈ ಮಚ್ಚೆ ಮತ್ತು ದೇಹಗಳಿಂದ ಗಮನಿಸಿದೆ.

ತಚ್ಛ್ರುತ್ವಾ ವಚನಂ ತಸ್ಯ ಸುದೇವಸ್ಯ ವಿಶಾಂಪತೇ ।
ಸುನಂದಾ ಶೋಧಯಾಮಾಸ ವಿಪ್ಲುಡಾಚ್ಛಾದನಂ ಮಲಮ್ ॥೧೦॥

ಎಲೈ ರಾಜನೇ ಸುದೇವನ ಆ ಮಾತುಗಳನ್ನು ಕೇಳಿ ಸುನಂದೆಯು ಆ ಮಚ್ಚೆಗೆ ಆವರಕವಾಗಿದ್ದ ಕಶ್ಮಲವನ್ನು ಶೋಧಿಸಿದಳು.

ಸ ಮಲೇನಾಪಕೃಷ್ಟೇನ ವಿಪ್ಲುಡಸ್ಯಾ ವ್ಯರೋಚತ ।
ದಮಯಂತ್ಯಾಸ್ತಥಾ ವ್ಯಭ್ರೇ ನಭಸೀವ ನಿಶಾಕರಃ ॥೧೧॥

ಕೊಳೆಯು ಹೋಗುತ್ತಿದ್ದಂತೆಯೇ ದಮಯಂತಿಯ ಆ ಮಚ್ಚೆಯು ಮೋಡವಿಲ್ಲದ ಆಕಾಶದಲ್ಲಿ ಚಂದ್ರನು ಪ್ರಕಾಶಿಸುವಂತೆ ಪ್ರಕಾಶಿಸಿತು.

ಸುನಂದಾ ವಿಪ್ಲುಷಂ ದೃಷ್ಟ್ವಾ ರಾಜಮಾತಾ ಚ ಭಾರತ ।
ರುದಂತ್ಯೌ ತಾಂ ಪರಿಷ್ವಜ್ಯ ಮುಹೂರ್ತಮಿವ ತಸ್ಥತುಃ ॥೧೨॥

ಎಲೈ ಭಾರತನೇ! ರಾಣಿಯಾದ ಸುನಂದೆಯು ಮತ್ತು ರಾಜಮಾತೆಯು ಸಹ ಆ ಮಚ್ಚೆಯನ್ನು ನೋಡಿ ಅಳುತ್ತಾ ದಮಯಂತಿಯನ್ನು ಆಲಿಂಗಿಸಿ ಒಂದು ಮುಹೂರ್ತಕಾಲ ಹಾಗೆಯೇ ಇದ್ದರು.

ಉತ್ಸೃಜ್ಯ ಬಾಷ್ಪಂ ಶನಕೈ ರಾಜಮಾತೇದಮಬ್ರವೀತ್ ।
ಭಗಿನ್ಯಾ ದುಹಿತಾ ಮೇಽಸಿ ಸೂಚಿತಾ ವಿಷ್ಣುಪಾಽನಯಾ ॥೧೩॥

ಅನಂತರ ಆ ರಾಜಮಾತೆಯು ಕಣ್ಣೀರನ್ನು ಒರೆಸಿಕೊಂಡು ನಿಧಾನವಾಗಿ ಈ ಮಾತನ್ನು ಆಡಿದಳು. ನೀನು ನನ್ನ ತಂಗಿಯ ಮಗಳು ಈ ಮಚ್ಚೆಯಿಂದ ನಾನು ನಿನ್ನನ್ನು ಗುರುತಿಸಿದೆ.

ಅಹಂ ತು ತವ ಮಾತಾ ಚ ರಾಜನ್ಯಸ್ಯ ಮಹಾತ್ಮನಃ ।
ಸುತೇ ದಶಾರ್ಣಾಧಿಪತೇಃ ಸುದಾಮ್ನಶ್ಚಾರುಲೋಚನೇ ॥೧೪॥

ಎಲೌ ಚಾರುಲೋಚನೆಯೇ ನಾನು ಮತ್ತು ನಿನ್ನ ತಾಯಿ ದಶಾರ್ಣಾಧಿಪತಿಯಾದ ಮಹಾತ್ಮನಾದ ಸುದಾಮರಾಜನ ಮಕ್ಕಳು.

ಭೀಮಸ್ಯ ರಾಜ್ಞಃ ಸಾ ದತ್ತಾ ವೀರಬಾಹೋರಹಂ ಪುನಃ ।
ತ್ವಂ ತು ಜಾತಾ ಮಯಾ ದೃಷ್ಟಾ ದಶಾರ್ಣೇಷು ಗೃಹೇ ಪಿತುಃ ॥೧೫॥

ಅವಳನ್ನು ಭೀಮರಾಜನಿಗೆ ಕೊಡಲಾಯಿತು. ನನ್ನನ್ನು ವೀರಬಾಹುವಿಗೆ ಕೊಟ್ಟರು. ನೀನು ದಶಾರ್ಣದಲ್ಲಿ ನಮ್ಮ ತಂದೆಯ ಮನೆಯಲ್ಲಿ ಜನಿಸಿದಾಗ ನಾನು ನಿನ್ನನ್ನು ನೋಡಿದ್ದೆ.

ಯಥೈವ ತೇ ಪಿತುರ್ಗೇಹಂ ತಥೇದಮಪಿ ಭಾಮಿನಿ ।
ಯಥೈವ ಚ ಮಮೈಶ್ವರ್ಯಂ ದಮಯಂತಿ ತಥಾ ತವ ॥೧೬॥

ಭಾಮಿನಿಯೇ ಈ ಮನೆಯೂ ನಿನ್ನ ತಂದೆಯ ಮನೆ ಇದ್ದಂತೆಯೇ. ದಮಯಂತಿಯೇ ಈ ಐಶ್ವರ್ಯವು ನನ್ನದಾದಂತೆ ನಿನ್ನದೂ ಆಗಿದೆ.

ಸಂಪ್ರಹೃಷ್ಟೇನ ಮನಸಾ ದಮಯಂತೀ ವಿಶಾಂಪತೇ ।
ಪ್ರಣಮ್ಯ ಮಾತುರ್ಭಗಿನೀಮಿದಂ ವಚನಮಬ್ರವೀತ್ ॥೧೮॥

ಎಲೈ ರಾಜನೇ! ಆಗ ದಮಯಂತಿಯು ಮನಸ್ಸಿನಲ್ಲಿ ಹರ್ಷಗೊಂಡವಳಾಗಿ ತಾಯಿಯ ಸಹೋದರಿಗೆ ನಮಸ್ಕಾರವನ್ನು ಮಾಡಿ ಈ ಮಾತನ್ನು ಆಡಿದಳು.

ಅಜ್ಞಾಯಮಾನಾऽಪಿ ಸತೀ ಸುಖಮಧ್ಯುಷಿತೇಹ ವೈ ।
ಸರ್ವಕಾಮೈಃ ಸುವಿಹಿತಾ ರಕ್ಷ್ಯಮಾಣಾ ಸದಾ ತ್ವಯಾ ॥೧೯॥

ನಾನು ಯಾರೆಂದು ತಿಳಿಯದಿದ್ದರೂ ಈ ಮನೆಯಲ್ಲಿ ಸುಖವಾಗಿ ವಾಸಿಸಿದ್ದೇನೆ. ನಿನ್ನಿಂದ ಯಾವಾಗಲೂ ರಕ್ಷಿತಳಾಗಿ ಎಲ್ಲ ಕಾಮಗಳನ್ನೂ ಅನುಭವಿಸಿದ್ದೇನೆ.

ಸುಖಾತ್ ಸುಖತರೋ ವಾಸೋ ಭವಿಷ್ಯತಿ ನ ಸಂಶಯಃ ।
ಚಿರವಿಪ್ರೋಷಿತಾಂ ಮಾತರ್ಮಾಮನುಜ್ಞಾತುಮರ್ಹಸಿ ॥೨೦॥

ತಾಯಿಯೇ ಅತ್ಯಂತ ಸುಖಕರವಾದ ವಾಸವು ನಿನ್ನ ಮನೆಯಲ್ಲಿ ನನಗೆ ಉಂಟಾಗಿದೆ. ಅದರಲ್ಲಿ ಸಂಶಯವಿಲ್ಲ. ನಾನು ನನ್ನ ತಂದೆಯ ಮನೆಯನ್ನು ಬಿಟ್ಟು ಬಹಳ ಸಮಯವಾಗಿದೆ. ಹೊರಡಲು ಅನುಮತಿಯನ್ನು ಕೊಡಬೇಕು.

ದಾರಕೌ ಚೈವ ಮೇ ನೀತೌ ವಸತಸ್ತತ್ರ ಬಾಲಕೌ ।
ಪಿತ್ರಾ ವಿಹೀನೌ ಶೋಕಾರ್ತೌ ಮಯಾ ಚಾಪಿ ಕಥಂ ನು ತೌ ॥೨೧॥

ನನ್ನ ಎರಡು ಚಿಕ್ಕ ಮಕ್ಕಳು ನನ್ನ ಸೂತನಿಂದ ಅಲ್ಲಿಗೆ ಕರೆದೊಯ್ಯಲ್ಪಟ್ಟು ಅಲ್ಲಿ ವಾಸಮಾಡುತ್ತಿದ್ದಾರೆ. ತಂದೆಯನ್ನು ಕಳೆದುಕೊಂಡು ನಾನೂ ಇಲ್ಲದೆ ಶೋಕಾರ್ತರಾಗಿ ಅವರು ಹೇಗಿರಬಹುದು?

ಯದಿ ವಾಪಿ ಪ್ರಿಯಂ ಕಿಂಚಿತ್ ಮಮ ಕರ್ತುಮಿಹೇಚ್ಛಸಿ ।
ವಿದರ್ಭಾನ್ ಯಾತುಮಿಚ್ಛಾಮಿ ಯಾನಂ ಮೇ ಶೀಘ್ರಮಾದಿಶ ॥೨೨॥

ನನಗೆ ಏನಾದರೂ ಹಿತವನ್ನು ಮಾಡುವ ಅಭಿಪ್ರಾಯವಿದ್ದರೆ ನಾನು ವಿದರ್ಭಕ್ಕೆ ಹೊಗಲು ಬಯಸುತ್ತೇನೆ. ನನಗೆ ಶೀಘ್ರವಾಗಿ ಒಂದು ಯಾನದ ವ್ಯವಸ್ಥೆಯನ್ನು ಮಾಡು.

ಬಾಢಮಿತ್ಯೇವಮುಕ್ತ್ವಾ ತಾಂ ಹೃಷ್ಟಾ ಮಾತೃಷ್ವಸಾ ನೃಪ ।
ಗುಪ್ತಾಂ ಬಲೇನ ಮಹತಾ ಪುತ್ರಸ್ಯಾನುಮತೇ ತತಃ ॥೨೩॥

ಪ್ರಾಸ್ಥಾಪಯದ್ ರಾಜಮಾತಾ ಶ್ರೀಮತಾ ನರವಾಹಿನಾ ।
ಯಾನೇನ ಭರತಶ್ರೇಷ್ಠ ಸ್ವನ್ನಪಾನಪರಿಚ್ಛದಾಮ್ ॥೨೪॥

ಎಲೈ ಭರತಶ್ರೇಷ್ಠನೇ, ರಾಜನೇ, ತಾಯಿಯ ಸೋದರಿಯಾದ ರಾಜಮಾತೆಯು ಸಂತೋಷಗೊಂಡವಳಾಗಿ ಹಾಗೆಯೇ ಆಗಲಿ ಎಂದು ಹೇಳಿ ಮಗನ ಅನುಮತಿಯನ್ನು ಪಡೆದು ಒಂದು ಒಳ್ಳೆಯ ನರವಾಹನದಲ್ಲಿ (ಪಲ್ಲಕ್ಕಿಯಲ್ಲಿ) ಸೈನ್ಯದಿಂದ ರಕ್ಷಿತಳನ್ನಾಗಿ ಮಾಡಿ ಅನ್ನಪಾನಾದಿ ಪಾಥೇಯಗಳನ್ನು ಕೊಟ್ಟು ಕಳುಹಿಸಿಕೊಟ್ಟಳು.

ತತಃ ಸಾ ನಚಿರಾದೇವ ವಿದರ್ಭಾನಗಮತ್‌ಶುಭಾ ।
ತಾಂ ತು ಬಂಧುಜನಸಃ ಸರ್ವೋ ಪ್ರಹೃಷ್ಟಃ ಪ್ರತ್ಯಪೂಜಯತ್ ॥೨೫॥

ಅನಂತರ ಶುಭಳಾದ ಆ ದಮಯಂತಿಯು ಅಲ್ಪಕಾಲದಲ್ಲಿಯೇ ವಿದರ್ಭವನ್ನು ತಲುಪಿದಳು. ಬಂಧುಜನರೆಲ್ಲರೂ ಅವಳನ್ನು ನೋಡಿ ಸಂತೋಷಗೊಂಡು ಸತ್ಕರಿಸಿದರು.

ಸರ್ವಾನ್ ಕುಶಲಿನೋ ದೃಷ್ಟ್ವಾ ಬಾಂಧವಾನ್ ದಾರಕೌ ಚ ತೌ ।
ಮಾತರಂ ಪಿತರಂ ಚೋಭೌ ಸರ್ವಂ ಚೈವ ಸಖೀಗಣಮ್ ॥೨೬॥

ದೇವತಾಃ ಪೂಜಯಾಮಾಸ ಬ್ರಾಹ್ಮಣಾಂಶ್ಚ ಯಶಸ್ವಿನೀ ।
ವಿಧಿನಾऽನೇನ ಕಲ್ಯಾಣೀ ದಮಯಂತೀ ವಿಶಾಂಪತೇ ॥೨೭॥

ತಮ್ಮ ಬಂಧುಗಳೆಲ್ಲರೂ ಮಕ್ಕಳೂ ತಂದೆತಾಯಿಯರೂ ತನ್ನ ಸಖೀಗಣವು ಎಲ್ಲರೂ ಕ್ಷೇಮದಿಂದ ಇರುವುದನ್ನು ನೋಡಿ ಯಶಸ್ವಿನಿಯೂ ಕಲ್ಯಾಣಿಯೂ ಆದ ದಮಯಂತಿಯು ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ವಿಧಿಪೂರ್ವಕವಾಗಿ ಪೂಜಿಸಿದಳು.

ಅತರ್ಪಯತ್ ಸುದೇವಂ ಚ ಗೋಸಹಸ್ರೇಣ ಪಾರ್ಥಿವಃ ।
ಪ್ರೀತೋ ದೃಷ್ಟ್ವೈವ ತನಯಾಂ ಗ್ರಾಮೇಣ ದ್ರವಿಣೇನ ಚ ॥೨೮॥

ಭೀಮರಾಜನಾದರೋ ಮಗಳನ್ನು ನೋಡಿದುದರಿಂದಲೇ ಸಂತೋಷಗೊಂಡು ಸುದೇವನಿಗೆ ಸಹಸ್ರಗೋವುಗಳನ್ನೂ ಗ್ರಾಮವನ್ನೂ ಮತ್ತು ಧನವನ್ನೂ ಕೊಟ್ಟು ಅವನನ್ನು ತೃಪ್ತಿಪಡಿಸಿದನು.

ಸಾ ವ್ಯುಷ್ಟಾ ರಜನೀಂ ತತ್ರ ಪಿತುರ್ವೇಶ್ಮನಿ ಭಾಮಿನೀ ।
ವಿಶ್ರಾಂತಾ ಮಾತರಂ ರಾಜನ್ನಿದಂ ವಚನಮಬ್ರವೀತ್ ॥೨೯॥

ಎಲೈ ರಾಜನೇ ಆ ರಾತ್ರಿಯು ದಮಯಂತಿಗೆ ತಂದೆಯ ಮನೆಯಲ್ಲಿ ಕಳೆಯಿತು. ವಿಶ್ರಾಂತಿಯನ್ನು ಪಡೆದ ದಮಯಂತಿಯು (ಪ್ರಾತಃಕಾಲದಲ್ಲಿ) ತಾಯಿಯನ್ನು ಕುರಿತು ಮಾತನಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ಮೂರನೆಯ ಅಧ್ಯಾಯ

(ತಾಯಿಯನ್ನು ಸಮಾಧಾನ ಪಡಿಸಿ ದಮಯಂತಿಯಿಂದ ಸ್ವಯಂವರವನ್ನು ಘೋಷಣೆಮಾಡುವಂತೆ ಪ್ರಾರ್ಥನೆ.)

### ದಮಯಂತೀ

ಮಾಂ ಚೇದಿಚ್ಛಸಿ ಜೀವಂತೀಂ ಮಾತಃ ಸತ್ಯಂ ಬ್ರವೀಮಿ ತೇ ।
ನಳಸ್ಯಾನ್ವೇಷಣೇ ಯತ್ನಃ ಕ್ರಿಯತಾಮಿತಿ ಸಾಂಪ್ರತಮ್ ॥೧॥

ತಾಯಿಯೇ ನಾನು ಬದುಕಿರುವುದನ್ನು ನೀನು ಬಯಸುವುದಾದರೆ ತಕ್ಷಣವೇ ನಳನನ್ನು ಹುಡುಕುವ ಪ್ರಯತ್ನವನ್ನುಮಾಡು. ನಾನು ಸತ್ಯವಾಗಿ ಈ ಮಾತನ್ನು ಹೇಳುತ್ತಿದ್ದೇನೆ.

### ಬೃಹದಶ್ವಃ

ದಮಯಂತ್ಯಾ ತಥೋಕ್ತಾ ತು ಸಾ ದೇವೀ ಭೃಶದುಃಖಿತಾ ।
ಬಾಷ್ಪೇಣಾಪಿಹಿತಾ ರಾಜನ್ ನೋತ್ತರಂ ಕಿಂಚಿದಬ್ರವೀತ್ ॥೨॥

ದಮಯಂತಿಯಿಂದ ಹೀಗೆ ಹೇಳಲ್ಪಟ್ಟ ಅವಳ ತಾಯಿಯು ಬಹಳ ದುಃಖಿತಳಾಗಿ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಉತ್ತರರೂಪವಾಗಿ ಏನನ್ನೂ ಮಾತನಾಡಲಿಲ್ಲ.

ತದವಸ್ಥಾಂ ತು ತಾಂ ದೃಷ್ಟ್ವಾ ಸರ್ವಮಂತಃಪುರಂ ತದಾ ।
ಹಾಹಾಭೂತಮತೀವಾಸೀದ್ ಭೃಶಂ ತತ್ರ ರುರೋದ ಹ ।
ತತೋ ಭೀಮಂ ಮಹಾರಾಜಂ ಭಾರ್ಯಾ ವಚನಮಬ್ರವೀತ್ ॥೩॥

ಆ ಅವಸ್ಥೆಯಲ್ಲಿರುವ ರಾಣಿಯನ್ನು ನೋಡಿ ಅಂತಃಪುರದಲ್ಲಿ ಆಗ ಹಾಹಾಕಾರವು ಉಂಟಾಯಿತು. ಅಂತಃಪುರಜನರೆಲ್ಲರೂ ಬಹಳವಾಗಿ ರೋದನಮಾಡಿದರು. ಅನಂತರ ಭಾರ್ಯೆಯಾದ ಅವಳು ಭೀಮಮಹಾರಾಜನನ್ನು ಕುರಿತು ಮಾತನಾಡಿದಳು.

ದಮಯಂತೀ ತವ ಸುತಾ ಭರ್ತಾರಮನುಶೋಚತಿ ।
ಅಪಕೃತ್ಯ ಚ ಲಜ್ಜಾಂ ಮಾಂ ಸ್ವಯಮುಕ್ತವತೀ ನೃಪ ।
ಪ್ರಯತಂತಾಂ ತವ ಪ್ರೇಷ್ಯಾಃ ಪುಣ್ಯಶ್ಲೋಕಸ್ಯ ದರ್ಶನೇ ॥೪॥

ತಯಾ ಪ್ರಚೋದಿತೋ ರಾಜಾ ಬ್ರಾಹ್ಮಣಾನ್ ವಶವರ್ತಿನಃ ।
ಪ್ರಾಸ್ಥಾಪಯದ್ ದಿಶಃ ಸರ್ವಾ ಯತಧ್ವಂ ನಳದರ್ಶನೇ ॥೫॥

ರಾಜನೇ, ನಿನ್ನ ಮಗಳಾದ ದಮಯಂತಿಯು ಪತಿಯನ್ನು ಕುರಿತು ಶೋಕಪಡುತ್ತಿದ್ದಾಳೆ. ನಾಚಿಕೆಯನ್ನು ಬಿಟ್ಟು ನನ್ನ ಜೊತೆಯಲ್ಲಿ ತಾನೇ ಈ ಮಾತುಗಳನ್ನು ಹೇಳಿದಳು. ನಿನ್ನ ಸೇವಕರು ಪುಣ್ಯಶ್ಲೋಕನಾದ ನಳನನ್ನು ಹುಡುಕಲು ಪ್ರಯತ್ನವನ್ನು ಮಾಡಲಿ. (ಎಂದು ಹೇಳಿದಳು) ಅವಳಿಂದ ಪ್ರೇರಿಸಲ್ಪಟ್ಟ ರಾಜನು ತನ್ನ ವಶವರ್ತಿಗಳಾದ ಬ್ರಾಹ್ಮಣರನ್ನು ಕರೆದು ನಳನನ್ನು ಹುಡುಕುವುದಕ್ಕೆ ಪ್ರಯತ್ನಪಡಿ ಎಂದು ಹೇಳಿ ಅವರನ್ನು ಎಲ್ಲ ದಿಕ್ಕುಗಳಿಗೂ ಕಳುಹಿಸಿದನು.

ತತೋ ವಿದರ್ಭಾಧಿಪತೇರ್ನಿಯೋಗಾದ್ ಬ್ರಾಹ್ಮಣಾಸ್ತು ತೇ ।
ದಮಯಂತೀಮಥಾಪೃಚ್ಛ್ಯ ಪ್ರಸ್ಥಿತಾಸ್ಮೇತ್ಯಥಾಬ್ರುವನ್ ॥೬॥

ಆಗ ಆ ಬ್ರಾಹ್ಮಣರು ವಿದರ್ಭರಾಜನ ಆಜ್ಞೆಯಂತೆ ದಮಯಂತಿಯ ಅನುಜ್ಞೆಯನ್ನು ಪಡೆದು ನಾವು ಹೊರಟಿದ್ದೇವೆ ಎಂದು ಹೇಳಿದರು.

ಅಥ ತಾನಬ್ರವೀದ್ ಭೈಮೀ ಸರ್ವರಾಷ್ಟ್ರೇಷ್ವಿದಂ ವಚಃ ।
ಬ್ರೂತ ವೈ ಜನಸಂಸತ್ಸು ತತ್ರ ತತ್ರ ಪುನಃ ಪುನಃ ॥೭॥

ಆಗ ಅವರನ್ನು ಕುರಿತು ದಮಯಂತಿಯು ಎಲ್ಲ ರಾಷ್ಟ್ರಗಳಲ್ಲಿಯೂ ಮತ್ತು ಅಲ್ಲಲ್ಲಿ ಜನಸಮುದಾಯವಿರುವಕಡೆಯಲ್ಲಿಯೂ ಮತ್ತೆಮತ್ತೆ ಈ ಮಾತುಗಳನ್ನು ಹೇಳಿ.

ಕ್ವನು ತ್ವಂ ಕಿತವ ಚ್ಛಿತ್ತ್ವಾ ವಸ್ತ್ರಾರ್ಧಂ ಪ್ರಸ್ಥಿತೋ ಮಮ ।
ಉತ್ಸೃಜ್ಯ ವಿಪಿನೇ ಸುಪ್ತಾಮನುರಕ್ತಾಂ ಪ್ರಿಯಾಂ ಪ್ರಿಯ ॥೮॥

ಪ್ರಿಯನೇ ಮೋಸಗಾರನೇ ನಿದ್ದೆಮಾಡುತ್ತಿದ್ದ ನಿನ್ನಲ್ಲಿ ಅನುರಕ್ತಳಾದ, ಪ್ರಿಯೆಯಾದ ನನ್ನನ್ನು ಬಿಟ್ಟು ಅರ್ಧವಸ್ತ್ರವನ್ನು ಹರಿದು ಎಲ್ಲಿಗೆ ಹೋದೆ?

ಸಾ ವೈ ಯಥಾ ಸಮಾದಿಷ್ಟಾ ತಥಾऽऽಸ್ತೇ ತ್ವತ್ಪ್ರತೀಕ್ಷಣೇ ।
ದಹ್ಯಮಾನಾ ಭೃಶಂ ಬಾಲಾ ವಸ್ತ್ರಾರ್ಧೇನಾಭಿಸಂವೃತಾ ॥೯॥

ಆ ಬಾಲೆಯಾದರೂ ನೀನು ಆದೇಶಮಾಡಿದಂತೆ ದುಃಖದಿಂದ ಬೇಯುತ್ತಾ ಅರ್ಧವಸ್ತ್ರದಿಂದ ಆವೃತಳಾಗಿ ನಿನ್ನ ನಿರೀಕ್ಷಣೆಯಲ್ಲಿಯೇ ಇದ್ದಾಳೆ.

ತಸ್ಯಾ ರುದಂತ್ಯಾಃ ಸತತಂ ತೇನ ಶೋಕೇನ ಪಾರ್ಥಿವ ।
ಪ್ರಸಾದಂ ಕುರು ವೈ ವೀರ ಪ್ರತಿವಾಕ್ಯಂ ಪ್ರಯಚ್ಛ ಚ ॥೧೦॥

ಎಲೈ ರಾಜನೇ, ಶೋಕದಿಂದ ಸತತವಾಗಿ ಅಳುತ್ತಿರುವ ಅವಳಿಗೆ ಅನುಗ್ರಹವನ್ನುಮಾಡು. ವೀರನೇ, ಪ್ರತ್ಯುತ್ತರವನ್ನು ಕೊಡು.

ಏತದನ್ಯಚ್ಚ ವಕ್ತವ್ಯಂ ಕೃಪಾಂ ಕುರ್ಯಾದ್ಯಥಾ ಮಯಿ ।
ವಾಯುನಾ ಧೂಯಮಾನೋ ಹಿ ವನಂ ದಹತಿ ಪಾವಕಃ ॥೧೧॥

ಈ ಮಾತುಗಳನ್ನೂ ಮತ್ತು ಅವನು ನನ್ನ ಮೇಲೆ ಕೃಪೆಯನ್ನು ಮಾಡುವಂತೆ ಇನ್ನೂ ಹೆಚ್ಚಿನ ಮಾತುಗಳನ್ನೂ ನೀವು ಆಡಬೇಕು. ವಾಯುವಿನಿಂದ ಪ್ರೇರಿತವಾದ ಅಗ್ನಿಯು ವನವನ್ನು ಸುಡುತ್ತಿದೆ.

ಭರ್ತವ್ಯಾ ರಕ್ಷಿತವ್ಯಾ ಚ ಪತ್ನೀ ಹಿ ಪತಿನಾ ಸದಾ ।
ತನ್ನಷ್ಟಮುಭಯಂ ಕಸ್ಮಾದ್ ಧರ್ಮಜ್ಞಸ್ಯ ಸತಸ್ತವ ॥೧೨॥

ಪತಿಯಾದವನು ಪತ್ನಿಯನ್ನು ಯಾವಾಗಲೂ ರಕ್ಷಿಸಬೇಕು. ಮತ್ತು ಪೋಷಿಸಬೇಕು. ಧರ್ಮಜ್ಞನಾದ ನಿನಗೆ ಪತ್ನಿಯ ರಕ್ಷಣೆ ಮತ್ತು ಪೋಷಣೆ ಈ ಎರಡು ಏಕೆ ನಷ್ಟವಾಯಿತು?

ಖ್ಯಾತಃ ಪ್ರಾಜ್ಞಃ ಕುಲೀನಶ್ಚ ಸಾನುಕ್ರೋಶಶ್ಚ ವೈ ಸದಾ ।
ಸಂವೃತ್ತೋ ನಿರನುಕ್ರೋಶಃ ಶಂಕೇ ಮದ್ಭಾಗ್ಯಸಂಕ್ಷಯಾತ್ ॥೧೩॥

ಯಾವಾಗಲೂ ದಯಾಪರನೆಂದೂ ಸತ್ಕುಲಪ್ರಸೂತನೆಂದೂ ಪ್ರಾಜ್ಞನೆಂದೂ ಪ್ರಸಿದ್ಧನಾದ ನೀನು ನನ್ನ ದೌರ್ಭಾಗ್ಯದಿಂದ ನಿರ್ದಯನಾಗಿರುವಿಯೆಂದು ಭಾವಿಸುತ್ತೇನೆ.

ಪ್ರಕುರುಷ್ವ ಮಹೇಷ್ವಾಸ ದಯಾಂ ಮಯಿ ನರರ್ಷಭ ।
ಆನೃಶಂಸ್ಯಂ ಪರೋ ಧರ್ಮಃ ತ್ವತ್ತ ಏವ ಶ್ರುತೋ ಮಯಾ ॥೧೪॥

ಎಲೈ ಮಹಾಧನ್ವುಧಾರಿಯೇ, ಎಲೈ ನರಶ್ರೇಷ್ಠನೇ, ನನ್ನಲ್ಲಿ ದಯೆಯನ್ನು ಮಾಡು. ದಯೆಯು (ಮಾರ್ದವವು) ದೊಡ್ಡ ಧರ್ಮವೆಂದು ನಿನ್ನಿಂದಲೇ ನಾನು ಕೇಳಿ ತಿಳಿದಿದ್ದೇನೆ. (ಹೀಗೆಲ್ಲಾ ಹೇಳಬೇಕು.)

ಏವಂ ಬ್ರುವಾಣಾನ್ ಯದಿ ವಃ ಪ್ರತಿಬ್ರೂಯಾಚ್ಚ ಕಶ್ಚನ ।
ಸ ನರಃ ಸರ್ವಥಾ ಜ್ಞೇಯಃ ಕಶ್ಚಾಸೌ ಕ್ವ ಚ ವರ್ತತೇ ॥೧೫॥

ಹೀಗೆ ಮಾತನಾಡುವ ನಿಮಗೆ ಯಾವನಾದರೂ ಪ್ರತ್ಯುತ್ತರವನ್ನು ಕೊಟ್ಟರೆ ಅವನು ಯಾರು ಅವನು ಎಲ್ಲಿದ್ದಾನೆ ಎಂದು ಅವನ ವಿಷಯವನ್ನು ಎಲ್ಲ ರೀತಿಯಲ್ಲಿ ತಿಳಿಯಬೇಕು.

ಯಚ್ಚ ವೋ ವಚನಂ ಶ್ರುತ್ವಾ ಬ್ರೂಯಾತ್ ಪ್ರತಿವಚೋ ನರಃ ।
ತದಾದಾಯ ವಚಸ್ತಸ್ಯ ಮಮಾವೇದ್ಯಂ ದ್ವಿಜೋತ್ತಮಾಃ ॥೧೬॥

ಎಲೈ ಬ್ರಾಹ್ಮಣಶ್ರೇಷ್ಠರೇ, ನಿಮಗೆ ಅವನು ಏನಾದರೂ ಪ್ರತಿವಚನವನ್ನು ಕೊಟ್ಟರೆ ಆ ಮಾತುಗಳನ್ನು ನನಗೆ ಒಪ್ಪಿಸಬೇಕು.

ಯಥಾ ಚ ವೋ ನ ಜಾನೀಯಾತ್ ಚರತೋ ಭೀಮಶಾಸನಾತ್ ।
ಪುನರಾಗಮನಂ ಚೇಹ ತಥಾ ಕಾರ್ಯಮತಂದ್ರಿತೈಃ ॥೧೭॥

ನೀವು ಭೀಮಶಾಸನದಂತೆ ಸಂಚರಿಸುತ್ತಿದ್ದೀರೆಂದು ಮತ್ತು ಅವನು ಸಿಕ್ಕಿದ ಸ್ಥಳದಿಂದ ಪುನಃ ವಿದರ್ಭದೇಶಕ್ಕೆ ಬರುತ್ತಿದ್ದೀರೆಂದು ಅವನಿಗೆ ತಿಳಿಯದಂತೆ ಎಚ್ಚರಿಕೆಯಿಂದ ಕಾರ್ಯವನ್ನು ಮಾಡಬೇಕು.

ಯದಿ ವಾಽಸೌ ಸಮೃದ್ಧಃ ಸ್ಯಾದ್ ಯದಿ ವಾಽಪ್ಯಧನೋ ಭವೇತ್ ।
ಯದಿವಾಽಪ್ಯರ್ಥಕಾಮಃಸ್ಯಾತ್ ಜ್ಞೇಯಮಸ್ಯ ಚಿಕೀರ್ಷಿತಮ್ ॥೧೮॥

ಅವನು ಧನಸಮೃದ್ಧನಾಗಿದ್ದಾನೆಯೇ ಅಥವಾ ನಿರ್ಧನನಾಗಿದ್ದಾನೆಯೆ ಅಥವಾ ಧನವನ್ನು ಬಯಸುತ್ತಿದ್ದಾನೆಯೇ? ಅವನು ಏನುಮಾಡಬೇಕೆಂದು ಯೋಚಿಸಿದ್ದಾನೆ ಎಲ್ಲವನ್ನೂ ನೀವು ತಿಳಿಯಬೇಕು.

ಏವಮುಕ್ತಾಸ್ತುಗಚ್ಛಂಸ್ತೇ ಬ್ರಾಹ್ಮಣಾಃಸರ್ವತೋದಿಶಮ್ ।
ನಳಂ ಮೃಗಯಿತುಂ ರಾಜನ್ ತದಾ ವ್ಯಸನಿನಂ ತಥಾ ॥೧೯॥

ಎಲೈ ರಾಜನೇ ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣರು ವ್ಯಸನಕ್ಕೆ ಸಿಲುಕಿದ ಆ ನಳನನ್ನು ಹುಡುಕಲು ಎಲ್ಲದಿಕ್ಕುಗಳಿಗೂ ಹೊರಟರು.

ತೇ ಪುರಾಣಿ ಸರಾಷ್ಟ್ರಾಣಿ ಗ್ರಾಮಾನ್ ಘೋಷಾಂಸ್ತಥಾಽಽಶ್ರಮಾನ್ ।
ಅನ್ವೇಷಂತೋ ನಳಂ ರಾಜನ್ ನಾಧಿಜಗ್ಮುರ್ದ್ವಿಜಾತಯಃ ॥೨೦॥

ಎಲೈ ರಾಜನೇ ಆ ಬ್ರಾಹ್ಮಣರು ಪಟ್ಟಣಗಳನ್ನೂ ರಾಷ್ಟ್ರಗಳನ್ನೂ ಗ್ರಾಮಗಳನ್ನೂ ಘೋಷಗಳನ್ನೂ ಆಶ್ರಮಗಳನ್ನೂ ಹುಡುಕಿದರು. ನಳನನ್ನು ಎಲ್ಲಿಯೂ ಕಾಣಲಿಲ್ಲ.

ತಚ್ಚ ವಾಕ್ಯಂ ತಥಾ ಸರ್ವೇ ತತ್ರ ತತ್ರ ವಿಶಾಂಪತೇ ।
ಶ್ರಾವಯಾಂಚಕ್ರಿರೇ ಸರ್ವೇ ದಮಯಂತ್ಯಾ ಯಥೋದಿತಮ್ ॥೨೧॥

ಎಲೈ ರಾಜನೇ ದಮಯಂತಿಯು ಹೇಳಿದ ಆ ಮಾತುಗಳನ್ನು ಇನ್ನೊಬ್ಬರಿಗೆ ಕೇಳುವಂತೆ ಅವರೆಲ್ಲರೂ ಅಲ್ಲಲ್ಲಿ ಆಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

# ಅರವತ್ತನಾಲ್ಕನೆಯ ಅಧ್ಯಾಯ

(ಪರ್ಣಾದನೆಂಬ ಬ್ರಾಹ್ಮಣನಿಂದ ದಮಯಂತಿಗೆ ನಳನ ವಾರ್ತಾಕಥನ.)

## ಬೃಹದಶ್ವಃ

ಅಥ ದೀರ್ಘಸ್ಯ ಕಾಲಸ್ಯ ಪರ್ಣಾದೋ ನಾಮ ವೈ ದ್ವಿಜಃ ।
ಪ್ರತ್ಯೇತ್ಯ ನಗರಂ ಭೈಮೀಮಿದಂ ವಚನಮಬ್ರವೀತ್ ॥೧॥

ಅನಂತರ ಎಷ್ಟೋಕಾಲವು ಕಳೆದ ಮೇಲೆ ಪರ್ಣಾದನೆಂಬ ಬ್ರಾಹ್ಮಣನು ಕುಂಡಿನಪುರಕ್ಕೆ ಹಿಂದಿರುಗಿ ದಮಯಂತಿಯನ್ನು ಕುರಿತು ಹೀಗೆ ಮಾತನಾಡಿದನು.

ನೈಷಧಂ ಮೃಗಯಾನೇನ ದಮಯಂತಿ ದಿವಾನಿಶಮ್ ।
ಅಯೋಧ್ಯಾಂ ನಗರೀಂ ಗತ್ವಾ ಭಾರ್ಗವಸ್ತ್ವರಿರುಪಸ್ಥಿತಃ ॥೨॥

ಎಲೌ ದಮಯಂತಿಯೇ, ಹಗಲೂ ರಾತ್ರಿಯೂ ನಳನನ್ನು ಹುಡುಕುತ್ತಾ ಅಯೋಧ್ಯಾನಗರಕ್ಕೆ ಹೋಗಿ ಭರ್ಗವಸ್ತ್ವರರಾಜನ ಮಗನಾದ ಋತುಪರ್ಣನನ್ನು ನೋಡಿದೆನು.

ಶ್ರಾವಿತಂ ಚ ಮಯಾ ವಾಕ್ಯಂ ತ್ವದೀಯಂ ಭೀಮನಂದಿನಿ ।
ಸಭಾಯಾಮೃತುಪರ್ಣಸ್ಯ ಚಾತುರ್ವರ್ಣ್ಯಸಮಾಗಮೇ ।
ಶ್ರಾವಿತಂ ಚ ಮಯಾ ವಾಕ್ಯಂ ತ್ವದೀಯಂ ಚ ಮಹಾಜನೇ ॥೩॥

ಭೀಮನಂದಿನಿಯೇ, ನಾನು ನಿನ್ನ ಮಾತುಗಳನ್ನು ಋತುಪರ್ಣನ ಸಭೆಯಲ್ಲಿ ಎಲ್ಲರೂ ಕೇಳುವಂತೆ ಹೇಳಿದೆ ಮತ್ತು ನಾಲ್ಕು ವರ್ಣದ ಜನರು ಸೇರುವ ಕಡೆಗಳಲ್ಲೆಲ್ಲಾ ಮತ್ತು ಬಹಳ ಜನಗಳು ಇರುವಲ್ಲೆಲ್ಲಾ ನಿನ್ನವಾಕ್ಯಗಳನ್ನು ಹೇಳಿದೆ.

ತಚ್ಛ್ರುತ್ವಾ ನಾಬ್ರವೀತ್ ಕಿಂಚಿದ್ ಋತುಪರ್ಣೋ ನರಾಧಿಪಃ ।
ನ ಚ ಪಾರಿಷದಃ ಕಶ್ಚಿದ್ ಭಾಷ್ಯಮಾಣೋ ಮಯಾऽಸಕೃತ್ ॥೪॥

ನನ್ನ ಮಾತುಗಳನ್ನು ಕೇಳಿದ ಋತುಪರ್ಣನು ಏನನ್ನೂ ಮಾತನಾಡಲಿಲ್ಲ. ನಾನು ಋತುಪರ್ಣನ ಸಭಾಸದರನ್ನು ಮತ್ತೆಮತ್ತೆ ಮಾತನಾಡಿಸಿದರೂ ಅವರೂ ಸಹ ಏನೂ ಮಾತನಾಡಲಿಲ್ಲ.

ಅನುಜ್ಞಾತಂ ತು ಮಾಂ ರಾಜ್ಞಾ ವಿಜನೇ ಕಶ್ಚಿದಬ್ರವೀತ್ ।
ಋತುಪರ್ಣಸ್ಯ ಪುರುಷೋ ಬಾಹುಕೋ ನಾಮ ನಾಮತಃ ॥೫॥

ರಾಜನ ಅಪ್ಪಣೆಯನ್ನು ಪಡೆದು ನಾನು ಹೊರಗೆ ಬಂದಮೇಲೆ ಋತುಪರ್ಣನ ಸೇವಕನಾದ ಬಾಹುಕ ಎಂಬ ಪುರುಷನು ಏಕಾಂತದಲ್ಲಿ ನನ್ನ ಬಳಿಗೆ ಬಂದು ಈ ಮಾತನಾಡಿದನು.

ಸೂತಸ್ತಸ್ಯ ನರೇಂದ್ರಸ್ಯ ವಿರೂಪೋ ಹ್ರಸ್ವಬಾಹುಕಃ ।
ದೀರ್ಘಯಾನೇ ಸುಕುಶಲೋ ಮೃಷ್ಟಕರ್ತಾ ಚ ಭೋಜನೇ ॥೬॥

ಅವನು ಋತುಪರ್ಣನ ಸೂತ. ಕುರೂಪಿಯಾದವನು ಮತ್ತು ಗಿಡ್ಡಬಾಹುಗಳುಳ್ಳವನು. ಒಳ್ಳೆಯ ಅಡುಗೆಯನ್ನುಮಾಡುವುದರಲ್ಲಿಯೂ ಮತ್ತು ರಥವನ್ನು ದೀರ್ಘವಾಗಿ ನಡೆಸುವುದರಲ್ಲಿಯೂ ಬಹಳ ಕುಶಲನಾದವನು.

ಸ ವಿನಿಃಶ್ವಸ್ಯ ಬಹುಶೋ ರುದಿತ್ವಾ ಚ ಮುಹುರ್ಮುಹುಃ ।
ಕುಶಲಂ ಸ ಚ ಮಾಂ ಪೃಷ್ಟ್ವಾ ಪಶ್ಚಾದಿದಮಭಾಷತ ॥೭॥

ವೈಷಮ್ಯಮಪಿ ಸಂಪ್ರಾಪ್ತಾ ಗೋಪಾಯಂತಿ ಕುಲಸ್ತ್ರಿಯಃ ।
ಆತ್ಮಾನಮಾತ್ಮನಾ ಸತ್ಯೋ ಜಿತಃಸ್ವರ್ಗೋ ನ ಸಂಶಯಃ ॥೮॥

ಅವನು ಬಹಳ ನಿಟ್ಟುಸಿರನ್ನು ಬಿಟ್ಟು ಮತ್ತೆಮತ್ತೆ ರೋದನವನ್ನು ಮಾಡಿ ನನ್ನ ಕುಶಲಪ್ರಶ್ನೆಯನ್ನುಮಾಡಿ ಅನಂತರ ಹೀಗೆ ಹೇಳಿದನು. ಸಂಕಟಕ್ಕೆ ಸಿಲುಕಿದ ಪತಿವ್ರತೆಯಾದ ಕುಲಸ್ತ್ರೀಯರು ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಾರೆ. ಅವರಿಂದ ಸ್ವರ್ಗವು ಜಿತವಾಗುತ್ತದೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ರಹಿತಾ ಭರ್ತೃಭಿಃ ಸಾಧ್ವ್ಯೋ ನ ಕ್ರುದ್ಧ್ಯಂತಿ ಕದಾಚನ ।
ಪ್ರಾಣಾಶ್ಚಾರಿತ್ರಕವಚಾ ಧಾರಯಂತೀಹ ಸತ್ ಸ್ತ್ರಿಯಃ ॥೯॥

ಪತಿಯಿಂದ ವಿವಿಕ್ತರಾದರೂ ಸಾಧ್ವಿಯರು ಎಂದೂ ಕ್ರೋಧವನ್ನು ಮಾಡುವುದಿಲ್ಲ. ಪತಿವ್ರತೆಯಾದವರು ತಮ್ಮ ಚಾರಿತ್ರ್ಯದಿಂದ ತಾವೇ ರಕ್ಷಿತರಾಗಿ ಪ್ರಾಣವನ್ನು ಧರಿಸುತ್ತಾರೆ.

ವಿಷಮಸ್ಥೇನ ಮೂಢೇನ ಪರಿಭ್ರಷ್ಟಸುಖೇನ ಚ ।
ಯತ್ ಸಾ ತೇನ ಪರಿತ್ಯಕ್ತಾ ತತ್ರ ನ ಕ್ರೋದ್ಧುಮರ್ಹತಿ ॥೧೦॥

ಸಂಕಟಕ್ಕೆ ಸಿಲುಕಿದ ಸುಖಭ್ರಷ್ಟನಾದ ಬುದ್ಧಿಹೀನನಾದ ಅವನಿಂದ ಅವಳು ಪರಿತ್ಯಜಿಸಲ್ಪಟ್ಟಿದ್ದಾಳೆ. ಆ ವಿಷಯದಲ್ಲಿ ಕೋಪವನ್ನು ಮಾಡಬಾರದು.

ಪ್ರಾಣಯಾತ್ರಾಂ ಪರಿಪ್ರೇಪ್ಸೋಃ ಶಕುನೈರ್ಹೃತವಾಸಸಃ ।
ಆಧಿಭಿರ್ದಹ್ಯಮಾನಸ್ಯ ಶ್ಯಾಮಾ ನ ಕ್ರೋದ್ಧುಮರ್ಹತಿ ॥೧೧॥

ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೆ ಪಕ್ಷಿಗಳನ್ನು ಹಿಡಿಯಲು ಹೋಗಿ ಅರ್ಧವಸ್ತ್ರವನ್ನು ಕಳೆದುಕೊಂಡು ಮನಃಕ್ಲೇಶಕ್ಕೆ ಗುರಿಯಾಗಿರುವ ಅವನ ಮೇಲೆ ಮಧ್ಯಯೌವನ ಸುಂದರಿಯಾದ ಅವಳು ಕ್ರೋಧಗೊಳ್ಳಬಾರದು.

ಸತೃತಾऽಸತೃತಾ ವಾऽಪಿ ಪತಿಂ ದೃಷ್ಟ್ವಾ ತಥಾಗತಮ್ ।
ಭ್ರಷ್ಟರಾಜ್ಯಂ ಶ್ರಿಯಾ ಹೀನಂ ಶ್ಯಾಮಾ ನ ಕ್ರೋದ್ಧುಮರ್ಹತಿ ॥೧೨॥

ಅವಳು ಸತ್ಕರಿಸಲ್ಪಡಲಿ ಇಲ್ಲದಿರಲಿ, ರಾಜ್ಯವನ್ನು ಕಳೆದುಕೊಂಡು ಧನಹೀನನಾಗಿ ಸಂಕಟಕ್ಕೆ ಸಿಲುಕಿರುವ ಪತಿಯನ್ನು ಗಮನಿಸಿ ಆ ಸುಂದರಿಯು ಕೋಪವನ್ನು ಮಾಡಬಾರದು.

ತಸ್ಯ ತದ್ವಚನಂ ಶ್ರುತ್ವಾ ತ್ವರಿತೋऽಹಮಿಹಾಗತಃ ।
ಶ್ರುತ್ವಾ ಪ್ರಮಾಣಂ ಭವತೀ ರಾಜ್ಞಶ್ಚೈವ ನಿವೇದಯ ॥೧೩॥

ಅವನ ಆ ಮಾತುಗಳನ್ನು ಕೇಳಿ ನಾನು ಶೀಘ್ರವಾಗಿ ಇಲ್ಲಿಗೆ ಬಂದೆ. ಈ ಮಾತುಗಳನ್ನು ಕೇಳಿದ ಮೇಲೆ ಮುಂದಿನ ಕಾರ್ಯವು ನಿನ್ನನ್ನು ಅವಲಂಬಿಸಿದೆ. ರಾಜನಿಗೂ ಈ ವಿಷಯಗಳನ್ನು ತಿಳಿಸು.

ಏವಂ ಶ್ರುತ್ವಾऽಶ್ರುಪೂರ್ಣಾಕ್ಷೀ ಪರ್ಣಾದಸ್ಯ ವಚಸ್ತದಾ ।
ದಮಯಂತೀ ರಹೋऽಭ್ಯೇತ್ಯ ಮಾತರಂ ಪ್ರತ್ಯಭಾಷತ ॥೧೪॥

ಹೀಗೆ ಪರ್ಣಾದನ ಈ ಮಾತುಗಳನ್ನು ಕೇಳಿದ ದಮಯಂತಿಯು ಕಣ್ಣುತುಂಬಾ ನೀರನ್ನು ತುಂಬಿಕೊಂಡು ಏಕಾಂತದಲ್ಲಿ ತಾಯಿಯನ್ನು ಸಮೀಪಿಸಿ ಮಾತನಾಡಿದಳು.

## ದಮಯಂತೀ

ಅಯಮರ್ಥೋ ನ ಸಂವೇದ್ಯಃ ಪಿತ್ರೇ ಮಾತಃ ಕಥಂಚನ ।
ತ್ವತ್ಸನ್ನಿಧೌ ಸಮಾದೇಕ್ಷ್ಯೇ ಸುದೇವಂ ದ್ವಿಜಸತ್ತಮಮ್ ॥೧೫॥

ತಾಯಿಯೇ ಈ ವಿಷಯವನ್ನು ರಾಜನಿಗೆ ಹೇಳಬಾರದು ನಿನ್ನ ಸನ್ನಿಧಿಯಲ್ಲಿ ದ್ವಿಜಶ್ರೇಷ್ಠನಾದ ಸುದೇವನಿಗೆ ನಾನು ಒಂದು ಆದೇಶವನ್ನು ನೀಡುವೆನು.

ಯಥಾ ನ ನೃಪತಿರ್ಭೀಮಃ ಪ್ರತಿಪದ್ಯೇತ ಮೇ ಮತಮ್ ।
ತಥಾ ತ್ವಯಾ ಚ ಕರ್ತವ್ಯಂ ಮಮ ಚೇದಿಚ್ಛಸಿ ಪ್ರಿಯಮ್ ॥೧೬॥

ನನಗೆ ನೀನು ಪ್ರಿಯವಾದುದನ್ನು ಬಯಸುವುದಾದರೆ ನನ್ನ ಈ ಸೂಚನೆಯನ್ನು ರಾಜನಾದ ಭೀಮನು ತಿಳಿಯದಂತೆ ನೀನು ಮಾಡಬೇಕು.

ಯಥಾ ಚಾಹಂ ಸಮಾನೀತಾ ಸುದೇವೇನೇಹ ಬಾಂಧವಾನ್ ।
ತೇನೈವ ಮಂಗಲೇನ ಶ್ವಃ ಸುದೇವೋ ಯಾತು ಮಾಚಿರಮ್ ॥೧೭॥

ಸಮಾನೇತುಂ ನಳಂ ಮಾತರಯೋಧ್ಯಾಂ ನಗರೀಂ ಪ್ರತಿ ।
ಋತುಪರ್ಣಸ್ಯ ಭವನೇ ನಿವಸಂತಮರಿಂದಮಮ್ ॥೧೮॥

ಯಾವ ರೀತಿಯಲ್ಲಿ ನಾನು ಸುದೇವನಿಂದ ಬಾಂಧವರ ಬಳಿಗೆ ಇಲ್ಲಿಗೆ ಕರೆತರಲ್ಪಟ್ಟೆನೋ ಅದೇ ಮಂಗಳದಿಂದ ಸುದೇವನು ಶೀಘ್ರವಾಗಿ ಋತುಪರ್ಣನ ಮನೆಯಲ್ಲಿ ವಾಸಿಸುತ್ತಿರುವ ಅರಿಂದಮನಾದ ನಳನನ್ನು ಕರೆತರಲು ಅಯೋಧ್ಯಾನಗರಕ್ಕೆ ಹೋಗಲಿ.

ವಿಶ್ರಾಂತಂ ತು ತತಃ ಪಶ್ಚಾತ್ ಪರ್ಣಾದಂ ದ್ವಿಜಸತ್ತಮಮ್ ।
ಅರ್ಚಯಾಮಾಸ ವೈದರ್ಭೀ ಧನೇನಾತೀವ ಭಾಮಿನೀ ॥೧೯॥

ಅನಂತರ ದ್ವಿಜಶ್ರೇಷ್ಠನಾದ ಪರ್ಣಾದನು ವಿಶ್ರಾಂತಿಯನ್ನು ಪಡೆದಮೇಲೆ ಭಾಮಿನಿಯಾದ ದಮಯಂತಿಯು ಅವನನ್ನು ಬಹಳ ಧನಗಳಿಂದ ಸತ್ಕರಿಸಿದಳು.

ನಳೇ ಚೇಹಾಗತೇ ವಿಪ್ರ ಭೂಯೋ ದಾಸ್ಯಾಮಿ ತೇ ವಸು ।
ತ್ವಯಾ ಹಿ ಮೇ ಬಹುಕೃತಂ ಯಥಾ ನಾನ್ಯಃ ಕರಿಷ್ಯತಿ ॥೨೦॥

ಯದ್ಭರ್ತಾಽಹಂ ಸಮೇಷ್ಯಾಮಿ ಶೀಘ್ರಮೇವ ದ್ವಿಜೋತ್ತಮ ॥೨೧॥

ಬ್ರಾಹ್ಮಣರೇ, ನಳನು ಇಲ್ಲಿಗೆ ಬಂದಮೇಲೆ ಪುನಃ ನಿಮಗೆ ಇನ್ನೂ ಹೆಚ್ಚು ಧನವನ್ನು ಕೊಡುವೆನು. ಯಾರೂಮಾಡದಿದ್ದ ಉಪಕಾರವನ್ನು ನೀವು ನನಗೆ ಮಾಡಿದ್ದೀರಿ. ದ್ವಿಜೋತ್ತಮರೇ, ನಿಮ್ಮ ಅನುಗ್ರಹದಿಂದ ನಾನು ಶೀಘ್ರವಾಗಿ ನನ್ನ ಪತಿಯ ಜೊತೆಯಲ್ಲಿ ಸಮಾಗಮವನ್ನು ಹೊಂದುವೆನು.

ಸ ಏವಮುಕ್ತಶ್ಚಾಶ್ವಾಸ್ಯ ಹ್ಯಾಶೀರ್ವಾದೈಃ ಸಮಂಗಳೈಃ ।
ಗೃಹಾನಥ ಯಯೌ ಸೋಽಪಿ ಕೃತಾರ್ಥಶ್ಚ ಮಹಾಮನಾಃ ॥೨೨॥

ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಪರ್ಣಾದನು ಅವಳನ್ನು ಅನೇಕ ಮಂಗಳ ಆಶೀರ್ವಾದಗಳಿಂದ ಸಮಾಧಾನಪಡಿಸಿ ಕೃತಾರ್ಥನಾಗಿ ಸಂತೋಷದಿಂದ ತನ್ನ ಮನೆಗೆ ಹಿಂದಿರುಗಿದನು.

ತತಃ ಸುದೇವಮಾನಾಯ್ಯ ದಮಯಂತೀ ಯುಧಿಷ್ಠಿರ ।
ಅಬ್ರವೀತ್ ಸನ್ನಿಧೌ ಮಾತುರ್ದುಃಖಶೋಕಸಮನ್ವಿತಾ ॥೨೩॥

ಎಲೈ ಯುಧಿಷ್ಠಿರನೇ, ಅನಂತರ ದಮಯಂತಿಯು ಸುದೇವನನ್ನು ಕರೆಸಿ ತಾಯಿಯ ಸನ್ನಿಧಿಯಲ್ಲಿ ದುಃಖಶೋಕಸಮನ್ವಿತಳಾಗಿ ಈ ಮಾತನ್ನು ಆಡಿದಳು.

ಗತ್ವಾ ಸುದೇವ ನಗರೀಮಯೋಧ್ಯಾವಾಸಿನಂ ನೃಪಮ್ ।
ಋತುಪರ್ಣಂ ವಚೋ ಬ್ರೂಹಿ ಪತಿಮನ್ಯಂ ಚಿಕೀರ್ಷತೀ ॥೨೪॥

ಆಸ್ಥಾಸ್ಯತಿ ಪುನರ್ಭೈಮೀ ದಮಯಂತೀ ಸ್ವಯಂವರಮ್ ।
ತತ್ರ ಗಚ್ಛಂತಿ ರಾಜಾನೋ ರಾಜಪುತ್ರಾಶ್ಚ ಸರ್ವಶಃ ॥೨೫॥

ಎಲೈ ಸುದೇವನೇ, ಅಯೊಧ್ಯಾನಗರಿಗೆ ಹೋಗಿ ಅಲ್ಲಿವಾಸಿಸುವ ಋತುಪರ್ಣರಾಜನಿಗೆ ಹೀಗೆ ಹೇಳು. ದಮಯಂತಿಯು ಇನ್ನೊಬ್ಬ ಪತಿಯನ್ನು ಹೊಂದಲು ಬಯಸುತ್ತಿದ್ದಾಳೆ. ಆ ಕಾರಣದಿಂದ ಪುನಃ ದಮಯಂತಿಯು ಸ್ವಯಂವರವನ್ನು ಮಾಡಿಕೊಳ್ಳುತ್ತಿದ್ದಾಳೆ. ಅಲ್ಲಿಗೆ ಎಲ್ಲಾ ರಾಜರೂ ಮತ್ತು ರಾಜಕುಮಾರರೂ ಬರುತ್ತಿದ್ದಾರೆ.

ತಥಾ ಚ ಗಣಿತಃ ಕಾಲಃ ಶ್ವೋಭೂತೇ ಸ ಭವಿಷ್ಯತಿ ।
ಯದಿ ಸಂಭಾವನೀಯೂ ತೇ ಗಚ್ಛ ಶೀಘ್ರಮರಿಂದಮ ॥೨೬॥

ಸ್ವಯಂವರಕ್ಕಾಗಿ ನಿರ್ದಿಷ್ಟವಾದ ಕಾಲವು ನಾಳೆಯ ಪ್ರಾತಃಕಾಲದಲ್ಲಿ ಇದೆ. ಅರಿಂದಮನೆ ನಿನಗೆ ಅವಳ ಮೇಲೆ ಏನಾದರೂ ಆಸೆಯಿದ್ದರೆ ನೀನು ಶೀಘ್ರವಾಗಿ ಹೋಗು.

ಸೂರ್ಯೋದಯೇ ದ್ವಿತೀಯಂ ಸಾ ಭರ್ತಾರಂ ವರಯಿಷ್ಯತಿ ।
ನ ಹಿ ಸ ಜ್ಞಾಯತೇ ವೀರೋ ನಳೋ ಜೀವನ್ಮೃತೋಽಪಿ ವಾ ॥೨೭॥

ನಾಳೆ ಸೂರ್ಯೋದಯಕ್ಕೆ ಸರಿಯಾಗಿ ಅವಳು ಇನ್ನೊಬ್ಬ ಪತಿಯನ್ನು ವರಿಸುವಳು. ವೀರನಾದ ನಳನು ಜೀವಿಸಿದ್ದಾನೆಯೋ ಇಲ್ಲವೋ ಎಂದು ತಿಳಿಯುವುದಿಲ್ಲ.

ಏವಂ ತಯಾ ಯಥೋಕ್ತಂ ವೈ ಗತ್ವಾ ರಾಜಾನಮಬ್ರವೀತ್ ।
ಋತುಪರ್ಣಂ ಮಹಾರಾಜ ಸುದೇವೋ ಬ್ರಾಹ್ಮಣಸ್ತದಾ ॥೨೮॥

ಎಲೈ ಮಹಾರಾಜನೇ ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಆ ಬ್ರಾಹ್ಮಣನು ಋತುಪರ್ಣನ ಸಮೀಪಕ್ಕೆ ಹೋಗಿ ರಾಜನನ್ನು ಕುರಿತು ಎಲ್ಲವನ್ನೂ ಹಾಗೆಯೇ ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೈದನೆಯ ಅಧ್ಯಾಯ

(ಸುದೇವನ ಮಾತುಗಳನ್ನು ಕೇಳಿ ನಳಸಾರಥ್ಯದಲ್ಲಿ ಋತುಪರ್ಣನಿಂದ ವಿದರ್ಭದೇಶಕ್ಕೆ ಆಗಮನ.)

### ಬೃಹದಶ್ವಃ

ಶ್ರುತ್ವಾ ವಚಃ ಸುದೇವಸ್ಯ ಋತುಪರ್ಣೋ ಜನಾಧಿಪಃ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಬಾಹುಕಂ ಪ್ರತ್ಯಭಾಷತ ॥೧॥

ಸುದೇವನ ಮಾತುಗಳನ್ನು ಕೇಳಿ ರಾಜನಾದ ಋತುಪರ್ಣನು ಮಧುರವಾದ ಮಾತುಗಳಿಂದ ಬಾಹುಕನನ್ನು ಸಮಾಧಾನಪಡಿಸುತ್ತಾ ಅವನನ್ನು ಕುರಿತು ಮಾತನಾಡಿದನು.

ವಿದರ್ಭಾನ್ ಯಾತುಮಿಚ್ಛಾಮಿ ದಮಯಂತ್ಯಾಃ ಸ್ವಯಂವರಮ್ ।
ಏಕಾಹ್ನಾ ಹಯತತ್ತ್ವಜ್ಞ ಮನ್ಯಸೇ ಯದಿ ಬಾಹುಕ ॥೨॥

ಅಶ್ವವಿದ್ಯೆಯನ್ನು ಹೊಂದಿದ ಎಲೈ ಬಾಹುಕನೇ ನಿನ್ನ ಸಹಾಯವಿದ್ದರೆ ನಾನು ದಮಯಂತಿಯ ಸ್ವಯಂವರಕ್ಕಾಗಿ ಒಂದೇ ದಿನದಲ್ಲಿ ವಿದರ್ಭದೇಶಕ್ಕೆ ಹೋಗಲು ಬಯಸುತ್ತೇನೆ.

ಏವಮುಕ್ತಸ್ಯ ಕೌಂತೇಯ ತೇನ ರಾಜ್ಞಾ ನಳಸ್ಯ ಹ ।
ವ್ಯದೀರ್ಯತ ಮನೋ ದುಃಖಾತ್ ಪ್ರದಧ್ಯೌ ಚ ಮಹಾಯಶಾಃ ॥೩॥

ಎಲೈ ಕೌಂತೇಯನೇ ರಾಜನಿಂದ ಹೀಗೆ ಹೇಳಲ್ಪಟ್ಟ ನಳನ ಹೃದಯವು ದುಃಖದಿಂದ ಬಿರಿಯಿತು. ಮಹಾಕೀರ್ತಿಶಾಲಿಯಾದ ಅವನು ಚಿಂತಿಸಿದನು.

### ನಳಃ

ದಮಯಂತೀ ಭವೇದೇತತ್ ಕುರ್ಯಾದ್ ದುಃಖೇನ ಮೋಹಿತಾ ।
ಅಸ್ಮದರ್ಥಂ ಭವೇದ್ವಾಽಯಮುಪಾಯಶ್ಚಿಂತಿತೋ ಮಹಾನ್ ॥೪॥

ಇದೇನು? ದುಃಖದಿಂದ ಮೋಹಿತಳಾಗಿ ದಮಯಂತಿಯು ಇಂತಹ ಕಾರ್ಯವನ್ನು ಮಾಡುತ್ತಾಳೆಯೇ? ಅಥವಾ ನನ್ನನ್ನು ಹೊಂದಲು ಅವಳು ಮಾಡಿದ ದೊಡ್ಡ ಉಪಾಯವಿರಬಹುದೆ?

ನೃಶಂಸಂ ಸಾ ತು ವೈದರ್ಭೀ ಕರ್ತುಕಾಮಾ ಯಶಸ್ವಿನೀ ।
ಮಯಾ ಕ್ಷುದ್ರೇಣ ನಿಕೃತಾ ಪಾಪೇನಾಕೃತಬುದ್ಧಿನಾ ।
ಸ್ತ್ರೀಸ್ವಭಾವಶ್ಚಲೋ ಲೋಕೇ ಮಮ ದೋಷಶ್ಚ ದಾರುಣಃ ॥೫॥

ಕೀರ್ತಿಶಾಲಿನಿಯಾದ ವಿದರ್ಭರಾಜಕುಮಾರಿಯಾದ ದಮಯಂತಿಯು ಕ್ಷುದ್ರನಾದ ಪಾಪಿಯಾದ ಮತ್ತು ಬುದ್ಧಿಹೀನನಾದ ನನ್ನಿಂದ ವಂಚನೆಗೆ ಒಳಗಾಗಿ ಇಂತಹ ಕ್ರೂರವಾದ ಕರ್ಮವನ್ನು ಮಾಡುತ್ತಾಳೆಯೇ? ಲೋಕದಲ್ಲಿ ಸ್ತ್ರೀಯರ ಸ್ವಭಾವವು ಚಂಚಲವಾದುದು ಮತ್ತು ನನ್ನ ಅಪರಾಧವು ಘೋರವಾದುದು.

ಸ್ಯಾದೇವಮಪಿ ಕುರ್ಯಾತ್ ಸಾ ವಿವಶಾ ಗತಸೌಹೃದಾ ।
ಮಮ ದೋಷೇಣ ಸಂವಿಗ್ನಾ ನೈರಾಶ್ಯಾತ್ ತನುಮಧ್ಯಮಾ ॥೬॥

ನ ಚೈವಂ ಕರ್ಹಿಚಿತ್ ಕುರ್ಯಾತ್ ಸಾಪತ್ಯಾ ಚ ವಿಶೇಷತಃ ॥೭॥

ಇರಬಹುದು. ನನ್ನ ಅಪರಾಧದಿಂದ ಸಂವಿಗ್ನಳಾದ ಆ ಸುಂದರಿಯು ನಿರಾಶೆಯನ್ನು ಹೊಂದಿದವಳಾಗಿ ನನ್ನಲ್ಲಿ ಸ್ನೇಹವನ್ನು ಕಳೆದುಕೊಂಡು ವಿವಶಳಾಗಿ ಹೀಗೆಯೂ ಮಾಡಬಹುದು. ಆದರೆ ಮಕ್ಕಳನ್ನು ಹೊಂದಿದವಳು ವಿಶೇಷವಾಗಿ ಈ ರೀತಿಯಿಂದ ಯಾವ ಕಾರಣದಿಂದಲೂ ಮಾಡದೆಯೂ ಇರಬಹುದು.

ಯದತ್ರ ತಥ್ಯಂ ಚ ಪುನರ್ಗತ್ವಾ ವೇತ್ಸ್ಯಾಮಿ ನಿಶ್ಚಯಮ್ ।
ಋತುಪರ್ಣಸ್ಯ ವೈ ಕಾಮಮಾತ್ಮಾರ್ಥಂ ಚ ಕರೋಮ್ಯಹಮ್ ॥೮॥

ಇವೆರಡರಲ್ಲಿ ಯಾವುದು ನಿಜವೆಂದು ಅಲ್ಲಿಗೆ ಹೋಗಿಯೇ ನಿಶ್ಚಯವನ್ನು ಮಾಡುವೆನು. ನನ್ನ ಸ್ವಾರ್ಥದ ಸಲುವಾಗಿ ಋತುಪರ್ಣನ ಈ ಆಸೆಯನ್ನು ಈಡೇರಿಸುತ್ತೇನೆ.

ಇತಿ ನಿಶ್ಚಿತ್ಯ ಮನಸಾ ಬಾಹುಕೋ ದೀನಮಾನಸಃ ।
ಕೃತಾಂಜಲಿರುವಾಚೇದಮೃತುಪರ್ಣಂ ನರಾಧಿಪಮ್ ॥೯॥

ಹೀಗೆ ಮನಸ್ಸಿನಲ್ಲಿ ನಿಶ್ಚಯಿಸಿ ದೀನಮನಸ್ಸಿನಿಂದ ಕೂಡಿದ ಬಾಹುಕನು ಕೈಗಳನ್ನು ಮುಗಿದು ಋತುಪರ್ಣರಾಜನನ್ನು ಕುರಿತು ಹೀಗೆ ಮಾತನಾಡಿದನು.

ಪ್ರತಿಜಾನಾಮಿ ತೇ ಸತ್ಯಂ ಗಮಿಷ್ಯಸಿ ನರಾಧಿಪ ।
ಏಕಾಹ್ನಾ ಪುರುಷವ್ಯಾಘ್ರ ವಿದರ್ಭನಗರೀಂ ಧ್ರುವಮ್ ॥೧೦॥

ಎಲೈ ರಾಜನೇ, ನೀನು ಒಂದೇದಿನದಲ್ಲಿ ವಿದರ್ಭನಗರಕ್ಕೆ ಖಂಡಿತವಾಗಿ ಹೋಗುವಿ. ಪುರುಷವ್ಯಾಘ್ರನೇ, ಇದನ್ನು ನಾನು ಪ್ರಮಾಣಮಾಡಿ ಹೇಳುತ್ತಿದೇನೆ.

ಏವಮುಕ್ತೋಽಬ್ರವೀದ್ ರಾಜಾ ಬಾಹುಕಂ ಹೃಷ್ಟಮಾನಸಃ ।
ಯದ್ಯೇವಂ ಭವಿತಾ ತ್ವೋ ವೈ ಕಂ ತೇ ಕಾಮಂ ಕರೋಮ್ಯಹಮ್ ।
ಪ್ರತಿಗೃಹ್ಣಾಮಿ ತೇ ವಾಕ್ಯಂ ಸರ್ವಂ ಕಾಮಂ ಕರೋಮ್ಯಹಮ್ ॥೧೧॥

ಹೀಗೆ ಹೇಳಲ್ಪಟ್ಟರಾಜನು ಮನಸ್ಸಿನಲ್ಲಿ ಸಂತೋಷವನ್ನು ಹೊಂದಿದವನಾಗಿ ಬಾಹುಕನನ್ನು ಕುರಿತು ನೀನು ಹೇಳಿದಂತೆಯೇ ನಾಳೆ ನಡೆಯುವುದಾದರೆ ನಿನ್ನ ಯಾವ ಇಚ್ಛೆಯನ್ನು ನಾನು ಪೂರೈಸಲಿ? ನಿನ್ನ ಮಾತನ್ನು ನಾನು ಸ್ವೀಕರಿಸುತ್ತೇನೆ (ನಂಬುತ್ತೇನೆ) ನಿನಗೆ ಅಪೇಕ್ಷಿತವಾದುದೆಲ್ಲವನ್ನೂ ಕೊಡುತ್ತೇನೆ ಎಂದು ಹೇಳಿದನು.

ತತಃ ಪರೀಕ್ಷಾ ಮಶ್ವಾನಾಂ ಚಕ್ರೇ ರಾಜ್ಞಃ ಸ ಬಾಹುಕಃ ।
ಅಶ್ವಶಾಲಾಮುಪಾಗಮ್ಯ ಭಾರ್ಗವರ್ತಿನೃಪಾಜ್ಞಯಾ ॥೧೨॥

ಆಗ ಋತುಪರ್ಣನ ಆಜ್ಞೆಯಿಂದ ಬಾಹುಕನು ಅಶ್ವಶಾಲೆಗೆ ಹೋಗಿ ರಾಜನ ಅಶ್ವಗಳ ಪರೀಕ್ಷೆಯನ್ನು ಮಾಡಿದನು.

ಸ ತ್ವರ್ಯಮಾಣೋ ಬಹುಶ ಋತುಪರ್ಣೇನ ಬಾಹುಕಃ ।
ಅಧ್ಯಗಚ್ಛತ್ ಕೃಶಾನಶ್ವಾನ್ ಸುವೇಗಾನಧ್ವನಿ ಕ್ಷಮಾನ್ ॥೧೩॥

ಅನೇಕಬಾರಿ ಋತುಪರ್ಣನಿಂದ ತ್ವರೆಮಾಡಲ್ಪಡುತ್ತಿದ್ದ ಆ ಬಾಹುಕನು ಆಲ್ಲಿದ್ದ ಕೃಶವಾದ ಅಶ್ವಗಳನ್ನು ಒಳ್ಳೆಯವೇಗವುಳ್ಳವುಗಳೆಂದೂ ದೂರದಾರಿಯನ್ನು ಹೋಗುವ ಸಾಮರ್ಥ್ಯವುಳ್ಳವುಗಳೆಂದೂ ನಿಶ್ಚಯಿಸಿದನು.

ತೇಜೋಬಲಸಮಾಯುಕ್ತಾನ್ ಕುಲಶೀಲಸಮನ್ವಿತಾನ್ ।
ವರ್ಜಿತಾಂಲ್ಲಕ್ಷಣೈರ್ಹೀನೈಃ ಪೃಥುಪ್ರೋಥಾನ್ ಮಹಾಹನೂನ್ ॥೧೪॥

ಶುದ್ಧಾನ್ ದಶಭಿರಾವರ್ತ್ಯೈಃ ಸಿಂಧುಜಾನ್ ವಾತರಂಹಸಃ ।
ದೃಶ್ಯಮಾನಾನ್ ಕೃಶಾನಂಗೈರ್ಜವೇನಾಪ್ರತಿಮಾನ್ ಪಥಿ ॥೧೫॥

ತೇಜೋಬಲಸಮಾಯುಕ್ತವಾದ ಕುಲಶೀಲಗಳಿಂದ ಕೂಡಿದ ಹೀನಲಕ್ಷಣಗಳಿಂದ ರಹಿತವಾದ ವಿಸ್ತಾರವಾದ ಕಟಿಯನ್ನು ಮತ್ತು ದೊಡ್ಡ ಹನುವನ್ನು ಹೊಂದಿದ ಹತ್ತು ಸುಳಿಗಳಿಂದಕೂಡಿದ ಸಿಂಧುದೇಶದ ವಾತವೇಗವುಳ್ಳ ಶುದ್ಧವಾದ ಅಂಗಗಳು ಕೃಶವಾದರೂ ವೇಗದಲ್ಲಿಯೂ ಮತ್ತು ಮಾರ್ಗದಲ್ಲಿಯೂ ಅಸದೃಶವಾದ ಕುದುರೆಗಳನ್ನು ಆರಿಸಿದನು.

ದೃಷ್ಟ್ವಾ ತಾನಬ್ರವೀದ್ ರಾಜಾ ಕಿಂಚಿತ್ ಕೋಪಸಮಾನ್ವಿತಃ ।
ಕಿಮಿದಂ ಪ್ರಾರ್ಥಿತಂ ಕರ್ತುಂ ಪ್ರಲಬ್ಧವ್ಯಾ ಹಿ ತೇ ವಯಮ್ ॥೧೬॥

ಕಥಮಲ್ಪಬಲಪ್ರಾಣಾ ವಕ್ಷ್ಯಂತೀಮೇ ಹಯಾ ರಥಮ್ ।
ಮಹಾಂತಮಪಿ ಚಾಧ್ವಾನಂ ಗಂತವ್ಯಂ ಕಥಮೀದೃಶೈಃ ॥೧೭॥

ಅವುಗಳನ್ನು ನೋಡಿದ ರಾಜನು ಸ್ವಲ್ಪಕೋಪದಿಂದ ಕೂಡಿದವನಾಗಿ ನೀನು ಏನು ಮಾಡಲು ಹೊರಟಿರುವೆ? ನನಗೆ ಮೋಸಮಾಡಲು ಉದ್ಯುಕ್ತನಾಗಿಲ್ಲವಷ್ಟೇ? ಅಲ್ಪಬಲಪ್ರಾಣವುಳ್ಳ ಈ ಕುದುರೆಗಳು ಬಹಳ ದೂರ ಹೇಗೆ ರಥವನ್ನು ಹೊರುತ್ತವೆ? ಇಂತಹ ಕುದುರೆಗಳು ದೀರ್ಘವಾದ ಮಾರ್ಗವನ್ನು ಹೇಗೆ ಪ್ರಯಾಣಮಾಡುತ್ತವೆ? ಎಂದು ಕೇಳಿದನು.

ಬಾಹುಕಃ

ಏತೇ ಹಯಾ ಗಮಿಷ್ಯಂತಿ ವಿದರ್ಭಾನ್ ನಾತ್ರ ಸಂಶಯಃ ।
ಅಶ್ವಾನ್ಯಾನ್ ಮನ್ಯಸೇ ರಾಜನ್ ಬ್ರೂಹಿ ತಾನ್ ಯೋಜಯಾಮಿ ತೇ ॥

ಈ ಅಶ್ವಗಳು ವಿದರ್ಭವನ್ನು ತಲುಪುತ್ತವೆ ಇದರಲ್ಲಿ ಸಂಶಯವಿಲ್ಲ. ರಾಜನೇ ಇಲ್ಲದಿದ್ದರೆ ಯಾವ ಅಶ್ವಗಳು ನಿನಗೆ ಸರಿಯಾಗಿ ತೋರುತ್ತವೆ ಎಂದು ಹೇಳು ಅವುಗಳನ್ನೇ ರಥಕ್ಕೆ ಹೂಡುತ್ತೇನೆ.

ತ್ವಮೇವ ಹಯತತ್ತ್ವಜ್ಞಃ ಕುಶಲಶ್ಚಾಸಿ ಬಾಹುಕ ।
ಯಾನ್ ಮನ್ಯಸೇ ಸಮರ್ಥಾನ್ ತ್ವಂ ಕ್ಷಿಪ್ರಂ ತಾನೇವ ಯೋಜಯ ॥

ನೀನೇ ಹಯತತ್ತ್ವವನ್ನು ತಿಳಿದವನೂ ಕುಶಲನೂ ಆಗಿದ್ದೀಯೆ. ಬಾಹುಕನೇ, ಯಾವ ಅಶ್ವಗಳು ಸಮರ್ಥವಾಗಿವೆಯೆಂದು ನೀನು ಭಾವಿಸುವಿಯೋ ಅವುಗಳನ್ನು ಬೇಗ ರಥಕ್ಕೆ ಹೂಡು ಎಂದು ಋತುಪರ್ಣನು ಹೇಳಿದನು.

ತತಸ್ತದಶ್ವಾಂಶ್ಚತುರಃ ಕುಲಶೀಲಸಮನ್ವಿತಾನ್ ।
ಯೋಜಯಾಮಾಸ ಕುಶಲೋ ಜವಯುಕ್ತಾನ್ ರಥೇ ನಳಃ ॥೨೦॥

ಆಗ ಕುಶಲನಾದ ನಳನು ಕುಲಶೀಲಸಮನ್ವಿತವಾದ ವೇಗಯುಕ್ತವಾದ ನಾಲ್ಕುಕುದುರೆಗಳನ್ನು ರಥದಲ್ಲಿ ಹೂಡಿದನು.

ತತೋ ಯುಕ್ತಂ ರಥಂ ರಾಜಾ ಸಮಾರೋಹತ್ ತ್ವರಾನ್ವಿತಃ ।
ಅತಃ ಪರ್ಯಪತನ್ ರಾಜನ್ ಜಾನುಭಿಸ್ತೇ ಹಯೋತ್ತಮಾಃ ॥೨೧॥

ಆಗ ರಾಜನು ತ್ವರೆಯಿಂದ ಹೂಡಿದ ರಥವನ್ನು ಏರಿದನು. ರಾಜನೇ ಆ ಶ್ರೇಷ್ಠವಾದ ಅಶ್ವಗಳು ತಮ್ಮ ಮಂಡಿಯಿಂದ ಭೂಮಿಯನ್ನು ಮುಟ್ಟುತ್ತಾ ನೆಗೆದವು.

ತತೋ ನರವರಃಶ್ರೀಮಾನ್ ನಳೋ ರಾಜಾ ವಿಶಾಂಪತೇ ।
ಸಾಂತ್ವಯಾಮಾಸ ತಾನಶ್ವಾನ್ ತೇಜೋಬಲಸಮನ್ವಿತಾನ್ ॥೨೨॥

ಎಲೈ ರಾಜನೇ, ಆಗ ಪುರುಷಶ್ರೇಷ್ಠನೂ ಶ್ರೀಮಂತನೂ ರಾಜನೂ ಆದ ನಳನು ತೇಜೋಬಲಸಮನ್ವಿತವಾದ ಆ ಕುದುರೆಗಳನ್ನು ಸಮಾಧಾನ ಪಡಿಸಿದನು.

ರಶ್ಮಿಭಿಶ್ಚ ಸಮುದ್ಯಮ್ಯ ನಳೋ ಯಾತುಮಿಯೇಷ ಸಃ ।
ಸೂತಮಾರೋಪ್ಯ ವಾರ್ಷ್ಣೇಯಂ ಜವಮಾಸ್ಥಾಯ ವೈ ಪರಮ್ ॥೨೩॥

ನಳನು ಕಡಿವಾಣಗಳನ್ನು ಹಿಡಿದು ವೃಷ್ಣಿಕುಲದಲ್ಲಿ ಜನಿಸಿದ ಇನ್ನೊಬ್ಬ ಮನುಷ್ಯನನ್ನು (ವಾರ್ಷ್ಣೇಯನನ್ನು) ಸೂತನನ್ನಾಗಿ ಮಾಡಿಕೊಂಡು ಶ್ರೇಷ್ಠವಾದ ಜವವನ್ನುಹೊಂದಿ ರಥವನ್ನು ನಡೆಸಲು ಉದ್ಯುಕ್ತನಾದನು.

ತೇ ಚೋದ್ಯಮಾನಾ ಬಹುಧಾ ಬಾಹುಕೇನ ಹಯೋತ್ತಮಾಃ ।
ಸಮುತ್ಪೇತುರಿವಾಕಾಶಂ ರಥಿನಂ ಮೋಹಯಂತಿ ಚ ॥೨೪॥

ಬಾಹುಕನಿಂದ ಅನೇಕರೀತಿಯಿಂದ ಪ್ರೇರಿಸಲ್ಪಟ್ಟ ಆ ಶ್ರೇಷ್ಠವಾದ ಅಶ್ವಗಳು ರಥಿಕನಾದ ಋತುಪರ್ಣನಿಗೆ ಮೋಹವನ್ನು ಉಂಟುಮಾಡುತ್ತಾ ಆಕಾಶದಲ್ಲಿ ನೆಗೆದಂತೆ ಓಡಿದವು.

ತಥಾ ತು ದೃಷ್ಟ್ವಾ ತಾನಶ್ವಾನ್ ವಹತೋ ವಾತರಂಹಸಃ ।
ಅಯೋಧ್ಯಾಧಿಪತಿಃ ಶ್ರೀಮಾನ್ ವಿಸ್ಮಯಂ ಪರಮಂ ಯಯೌ ॥೨೫॥

ಅಯೋಧ್ಯಾಧಿಪತಿಯಾದ ಶ್ರೀಮಂತನಾದ ಋತುಪರ್ಣನು ವಾಯುವೇಗದಿಂದ ಹಾಗೆ ರಥವನ್ನು ಎಳೆಯುವ ಆ ಅಶ್ವಗಳನ್ನು ನೋಡಿ ಬಹಳ ವಿಸ್ಮಯವನ್ನು ಹೊಂದಿದನು.

ರಥಘೋಷಂ ಚ ತಂ ಶ್ರುತ್ವಾ ಹಯಾನಾಂ ಗ್ರಹಣಂ ಚ ತತ್ ।
ವಾರ್ಷ್ಣೇಯಶ್ಚಿಂತಯಾಮಾಸ ಬಾಹುಕಸ್ಯ ಹಯಜ್ಞತಾಮ್ ॥೨೬॥

ರಥಘೋಷವನ್ನು ಕೇಳಿ ಮತ್ತು ಅಶ್ವಗಳ ಕಡಿವಾಣಗಳನ್ನು ಹಿಡಿಯುವ ಸಾಮಾರ್ಥ್ಯವನ್ನು ನೋಡಿ ವಾರ್ಷ್ಣೇಯನಾದ ಸೂತನು ಬಾಹುಕನ ಅಶ್ವವಿದ್ಯಾಪರಿಣತಿಯನ್ನು ಕುರಿತು ಚಿಂತಿಸಿದನು.

ಕಿಂ ನು ಸ್ಯಾನ್ಮಾತಲಿರಯಂ ದೇವರಾಜಸ್ಯ ಸಾರಥಿಃ ।
ತಥಾ ಹಿ ಲಕ್ಷಣಂ ವೀರೇ ಬಾಹುಕೇ ದೃಶ್ಯತೇ ಮಹತ್ ॥೨೭॥

ಇವನೇನು ದೇವರಾಜನಾದ ಇಂದ್ರನ ಮಾತಲಿಯೇ? ವೀರನಾದ ಈ ಬಾಹುಕನಲ್ಲಿ ಅಂತಹ ಲಕ್ಷಣವು ಕಂಡುಬರುತ್ತಿದೆ.

ಶಾಲಿಹೋತ್ರೋಽಪಿ ಕಿಂನು ಸ್ಯಾದ್ಧಯಾನಾಂ ಕುಲತತ್ತ್ವವಿತ್ ।
ಮಾನುಷಂ ಪರಮಂ ಪ್ರಾಪ್ತೋ ವಪುಃ ಪರಮಶೋಭನಮ್ ॥೨೮॥

ಅಥವಾ ಹಯಗಳ ಕುಲಗಳ ವಿಷಯದಲ್ಲಿ ಪರಿಣತನಾದ ಪರಮ ಶೋಭನವಾದ ಮನುಷ್ಯದೇಹವನ್ನು ಧರಿಸಿದ ಶಾಲಿಹೋತ್ರ ಋಷಿಯಿರಬಹುದೆ?

ಉತಾಹೋಸ್ವಿದ್ ಭವೇದ್ರಾಜಾ ನಳಃ ಪರಪುರಂಜಯಃ ।
ಸೋಽಯಂ ನೃಪತಿರಾಯಾತ ಇತ್ಯೇವಂ ಸಮಚಿಂತಯತ್ ॥೨೯॥

ಅಥವಾ ಇವನು ಪರಪುರಂಜಯನಾದ ನಳನಾಗಿ ಇಲ್ಲಿಗೆ ಬಂದಿರಬಹುದೆ ಎಂದೂ ಈ ರೀತಿಯಾಗಿ ಆಲೋಚಿಸಿದನು.

ಅಥವಾऽಯಂ ನಳಾದ್ ವೇದ ವಿದ್ಯಾಂ ತಾಮೇವ ಬಾಹುಕಃ ।
ತುಲ್ಯಂ ಹಿ ಲಕ್ಷಯೇ ಜ್ಞಾನಂ ಬಾಹುಕಸ್ಯ ನಳಸ್ಯ ಚ ॥೩೦॥

ಅಥವಾ ಈ ಬಾಹುಕನು ನಳನಿಂದ ಅವನು ತಿಳಿದಿರುವ ಅಶ್ವವಿದ್ಯೆಯನ್ನೇ ಸಂಪಾದಿಸಿದ್ದಾನೆಯೇ? ಬಾಹುಕ ಮತ್ತು ನಳ ಇವರಿಬ್ಬರ ಅಶ್ವಜ್ಞಾನವು ಸಮಾನವೆಂದು ತೋರುತ್ತಿದೆ.

ಅಪಿ ಚೇದಂ ಪಚಸ್ತುಲ್ಯಮಸ್ಯ ಮನ್ಯೇ ನಳಸ್ಯ ಚ ।
ನಾಯಂ ನಳೋ ಮಹಾವೀರ್ಯಃ ತದ್ವಿದ್ಯಶ್ಚ ಭವಿಷ್ಯತಿ ॥೩೧॥

ಪ್ರಚ್ಛನ್ನಾ ಹಿ ಮಹಾತ್ಮಾನಃ ಚರಂತಿ ಪೃಥಿವೀಮಿಮಾಮ್ ।
ದೈವೇನ ವಿಧಿನಾ ಯುಕ್ತಾಃ ಶಕ್ತಾಶ್ಚೈವ ವಿರೂಪಿಣಃ ॥೩೨॥

ಮತ್ತು ಬಾಹುಕನು ಆಡುವ ಮಾತುಗಳೂ ಸಹ ನಳನಮಾತುಗಳಿಗೆ ಸಮಾನವಾಗಿವೆ. ಇವನು ಮಹಾಪರಾಕ್ರಮಿಯಾದ ನಳನಲ್ಲ. ಆದರೆ ನಳನ ವಿದ್ಯೆಯನ್ನು ಮಾತ್ರ ಹೊಂದಿದ್ದಾನೆ. ಮಹಾತ್ಮರು ದೈವವಿಧಿಗೆ ವಶರಾಗಿ ಶಕ್ತರಾಗಿದ್ದರೂ ಸಹ ವಿರೂಪವನ್ನು ಧರಿಸಿ ಈ ಭೂಮಿಯಲ್ಲಿ ಪ್ರಚ್ಛನ್ನರಾಗಿ ಸಂಚರಿಸುತ್ತಾರೆ.

ಭವೇತ್ತು ಮತಿಭೇದೋ ಮೇ ಗಾತ್ರವೈರೂಪ್ಯಕಂ ಪ್ರತಿ ।
ಪ್ರಮಾಣಾತ್ ಪರಿಹೀನಸ್ತು ಭವೇದಿತಿ ಹಿ ಮೇ ಮತಿಃ ॥೩೩॥

ವಯಃಪ್ರಮಾಣಂ ತತ್ತುಲ್ಯಂ ರೂಪೇಣ ತು ವಿಪರ್ಯಯಃ ।
ನಳಂ ಸರ್ವಗುಣೈರ್ಯುಕ್ತಂ ಮನ್ಯೇ ಬಾಹುಕಮಂತತಃ ॥೩೪॥

ಏವಂ ವಿಚಾರ್ಯ ಬಹುಶೋ ವಾರ್ಷ್ಣೇಯಃ ಪರ್ಯಚಿಂತಯತ್ ।
ಹೃದಯೇನ ಮಹಾರಾಜ ಪುಣ್ಯಶ್ಲೋಕಸ್ಯ ಸಾರಥಿಃ ॥೩೫॥

ಈ ಶರೀರದ ವ್ಯತ್ಯಾಸವನ್ನು ನೋಡಿ ನನಗೆ ಏನಾದರೂ ಬುದ್ಧಿಭೇದ ಉಂಟಾಗಿರಬಹುದು. ಇವನು ಪ್ರಮಾಣದಿಂದ ಹೀನನಾದ (ಎತ್ತರದಲ್ಲಿ

ಕಡಿಮೆಯಾದ ) ನಳನೇ ಇರಬಹುದು ಎಂದು ನನ್ನ ಬುದ್ಧಿ. ವಯಸ್ಸಿನ ಪ್ರಮಾಣವು ನಳನ ವಯಸ್ಸಿಗೆ ಸಮಾನವಾಗಿದೆ. ರೂಪವು ಮಾತ್ರ ವಿಪರೀತವಾಗಿದೆ. ಎಷ್ಟು ಯೋಚಿಸಿದರೂ ಈ ಬಾಹುಕನನ್ನು ಸರ್ವಗುಣಯುಕ್ತನಾದ ನಳನೆಂದೇ ನಾನು ಭಾವಿಸುತ್ತೇನೆ. ಹೀಗೆ ಎಲೈ ಮಹಾರಾಜನೇ! ಪುಣ್ಯಶ್ಲೋಕನಾದ ಋತುಪರ್ಣನ ಸಾರಥಿಯಾದ ವಾರ್ಷ್ಣೇಯನು ಮನಸ್ಸಿನಲ್ಲಿಯೇ ಹೀಗೆ ಅನೇಕಬಾರಿ ವಿಚಾರಮಾಡಿದನು.

ಋತುಪರ್ಣಸ್ತು ದೃಷ್ಟ್ವೈವ ಬಾಹುಕಸ್ಯ ಹಯಜ್ಞತಾಮ್ ।
ಚಿಂತಯನ್ ಮುಮುದೇ ವೀರಃ ಸಹವಾರ್ಷ್ಣೇಯಸಾರಥಿಃ ॥೩೬॥

ವೀರನಾದ ಋತುಪರ್ಣನಾದರೋ ಬಾಹುಕನ ಅಶ್ವಕೌಶಲವನ್ನು ನೋಡಿಯೇ ಅವನ ವಿದ್ಯೆಯನ್ನು ಚಿಂತಿಸುತ್ತಾ ಆ ಸೂತ ಮತ್ತು ಸಾರಥಿಯ ಜೊತೆಯಲ್ಲಿ ಸಂತೋಷಪಟ್ಟನು.

ಬಲಂ ಶೌರ್ಯಂ ತಥೋತ್ಸಾಹಂ ಹಯಾನಾಂ ಗ್ರಹಣಂ ಚ ತತ್ ।
ಪರಂ ಯತ್ನಂ ಚ ಸಂಪ್ರೇಕ್ಷ್ಯ ಪರಾಂ ಮುದಮವಾಪ ಸಃ ॥೩೭॥

ಅವನು ಬಾಹುಕನ ಬಲವನ್ನೂ ಶೌರ್ಯವನ್ನೂ ಉತ್ಸಾಹವನ್ನೂ ಅಶ್ವಗಳನ್ನು ಹಿಡಿಯುವ ಶ್ರೇಷ್ಠವಾದ ಪ್ರಯತ್ನವನ್ನೂ ನೋಡಿ ಬಹಳ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತಾರನೆಯ ಅಧ್ಯಾಯ

(ಬಾಹುಕನ ಸಾರಥ್ಯ. ಋತುಪರ್ಣನಿಂದ ಅಶ್ವಹೃದಯಪ್ರಾಪ್ತಿ. ನಳದೇಹದಿಂದ ಕಲಿಯ ನಿರ್ಗಮನ ನಳನ ಪ್ರಕೃತಿಸ್ಥಿತಿ.)

### ಬೃಹದಶ್ವಃ

ಸ ನದೀಃ ಪರ್ವತಾಂಶ್ಚೈವ ವನಾನಿ ಚ ಸರಾಂಸಿ ಚ ।
ಅತಿಚಕ್ರಾಮ ವೇಗೇನ ಖೇಚರಃ ಖೇ ಚರನ್ನಿವ ॥೧॥

ಗಗನಚರನಾದವನು ಗಗನದಲ್ಲಿ ಸಂಚರಿಸುವಂತೆ ಬಾಹುಕನು ನದಿಗಳನ್ನು ಪರ್ವತಗಳನ್ನು ವನಗಳನ್ನು ಮತ್ತು ಸರೋವರಗಳನ್ನು ದಾಟಿ ಸಾಗಿದನು.

ತಥಾ ಪ್ರಯಾತೇ ತು ರಥೇ ತದಾ ಭಾರ್ಗಸ್ತರಿರ್ನೃಪಃ ।
ಉತ್ತರೀಯಮಥಾಪಶ್ಯದ್ ಭ್ರಷ್ಟಂ ಪರಪುರಂಜಯಃ ॥೨॥

ತತಃ ಸ ತ್ವರಮಾಣಸ್ತು ಪಟೇ ನಿಪತಿತೇ ತದಾ ।
ಗ್ರಹೀಷ್ಯಾಮೀತಿ ತಂ ರಾಜನ್ ನಳಮಾಹ ಮಹಾಮನಾಃ ॥೩॥

ರಥವು ಹಾಗೆ ಸಾಗುತ್ತಿರಲು ಆಗ ಪರಪುರಂಜಯನಾದ ಋತುಪರ್ಣರಾಜನು ತನ್ನ ಉತ್ತರೀಯವು ಬಿದ್ದುಹೋದುದನ್ನು ಗಮನಿಸಿದನು. ಮಹಾಮನನಾದ ಅವನು ಉತ್ತರೀಯವು ಬಿದ್ದುಹೋಗುತ್ತಿರಲು ಅದನ್ನು ತೆಗೆದುಕೊಳ್ಳುವೆನೆಂದು ತ್ವರೆಯಿಂದ ನಳನನ್ನು ಕುರಿತು ಹೇಳಿದನು.

ನಿಗೃಹ್ಣೀಷ್ವ ಮಹಾಬುದ್ಧೇ ಹಯಾನೇತಾನ್ ಮಹಾಜವಾನ್ ।
ವಾರ್ಷ್ಣೇಯೋ ಯಾವದೇತನ್ಮೇ ಪಟಮಾನಯತಾಮಿತಿ ॥೪॥

ಎಲೈ ಮಹಾಬುದ್ಧಿಯುಳ್ಳವನೇ, ಈ ಮಹಾವೇಗವನ್ನು ಹೊಂದಿರುವ ಅಶ್ವಗಳನ್ನು ನಿಲ್ಲಿಸು ಅಷ್ಟರಲ್ಲಿ ವಾರ್ಷ್ಣೇಯನು ನನ್ನ ಉತ್ತರೀಯವನ್ನು ತರಲಿ.

ನಳಸ್ತಂ ಪ್ರತ್ಯುವಾಚಾಥ ದೂರೇ ಭ್ರಷ್ಟಃ ಪಟಸ್ತವ ।
ಯೋಜನಂ ಸಮತಿಕ್ರಾಂತೋ ನ ಚ ಶಕ್ಯಸ್ತ್ವಯಾ ಪುನಃ ॥೫॥

ನಳನು ಅವನನ್ನು ಕುರಿತು ನಿನ್ನ ಉತ್ತರೀಯವು ಬಹಳ ದೂರದಲ್ಲಿ ಬಿದ್ದುಹೋಯಿತು. ನಾವು ಅದನ್ನು ದಾಟಿ ಒಂದುಯೋಜನ ಬಂದಿದ್ದೇವೆ. ನೀನು ಅದನ್ನು ಪುನಃತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಉತ್ತರವನ್ನು ಕೊಟ್ಟನು.

ವಿವಮುಕ್ತೋ ನಳೇನಾಥ ತಥಾ ಭಾರ್ಗವಸ್ತರ್ನ್ಯಪಃ ।
ಆಸಸಾದ ವನೇ ರಾಜನ್ ಫಲವಂತಂ ವಿಭೀತಕಮ್ ॥೬॥

ನಳನಿಂದ ಹೀಗೆ ಹೇಳಲ್ಪಟ್ಟ ಋತುಪರ್ಣರಾಜನು ಮುಂದೆ ಹಣ್ಣುಗಳನ್ನು ಬಿಟ್ಟಿರುವ ಒಂದು ತಾರಿಯ ಮರವನ್ನು ಸಮೀಪಿಸಿದನು.

ತಂ ದೃಷ್ಟ್ವಾ ಬಾಹುಕಂ ರಾಜಾ ತ್ವರಮಾಣೋಽಭ್ಯಭಾಷತ ।
ಮಮಾಪಿ ಸೂತ ಪಶ್ಯ ತ್ವಂ ಸಂಖ್ಯಾನೇ ಪರಮಂ ಬಲಮ್ ॥೭॥

ಅದನ್ನು ನೋಡಿ ಆ ರಾಜನು ಶೀಘ್ರವಾಗಿ ಬಾಹುಕನನ್ನು ಕುರಿತು ಸೂತನೇ ಎಣಿಸುವುದರಲ್ಲಿನನ್ನ ಶ್ರೇಷ್ಠಸಾಮರ್ಥ್ಯವನ್ನು ನೋಡು ಎಂದು ಹೇಳಿದನು.

ಸರ್ವಃ ಸರ್ವಂ ನ ಜಾನಾತಿ ಸರ್ವಜ್ಞೋ ನಾಸ್ತಿ ಕಶ್ಚನ ।
ನೈಕತ್ರ ಪರಿನಿಷ್ಠಾಽಸ್ತಿ ಜ್ಞಾನಸ್ಯ ಪುರುಷೇ ಕ್ವಚಿತ್ ॥೮॥

ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ. ಯಾವನೂ ಸರ್ವಜ್ಞನಲ್ಲ. ಜ್ಞಾನವು ಯಾವುದೇ ಪುರುಷನಲ್ಲಿಪರಿಪೂರ್ಣವಾಗಿರುವುದಿಲ್ಲ.

ವೃಕ್ಷೇಽಸ್ಮಿನ್ ಯಾನಿ ಪರ್ಣಾನಿ ಫಲಾನ್ಯಪಿ ಚ ಬಾಹುಕ ।
ಪತಿತಾನಿ ಚ ಯಾನ್ಯತ್ರ ತತ್ಸೈಕಮಧಿಕಂ ಕೃತಮ್ ॥೯॥

ಏಕಪತ್ರಾಧಿಕಂ ಪತ್ರಂ ಫಲಮೇಕಂ ಚ ಬಾಹುಕ ।
ಪಂಚಕೋಟ್ಯೋಽಥ ಪರ್ಣಾನಾಂ ದ್ವಯೋರಪಿ ಚ ಶಾಖಿಯೋಃ ॥೧೦॥

ಬಾಹುಕನೇ, ಈ ವೃಕ್ಷದಲ್ಲಿ ಎಷ್ಟು ಎಲೆಗಳು ಮತ್ತು ಫಲಗಳಿವೆಯೋ ಮತ್ತು ವೃಕ್ಷದಿಂದ ನೆಲದ ಮೇಲೆ ಎಷ್ಟು ಎಲೆಗಳು ಮತ್ತು ಫಲಗಳು ಬಿದ್ದಿವೆಯೋ ಅದರಲ್ಲಿ ನೆಲದಮೇಲೆ ಬಿದ್ದಿರುವುದಕ್ಕಿಂತ ವೃಕ್ಷದಲ್ಲಿ ಒಂದು ಪತ್ರವು ಮತ್ತು ಒಂದು ಫಲವೂ ಅಧಿಕವಾಗಿದೆ. ಈ ಎರಡು ಕೊಂಬೆಗಳಲ್ಲಿ ಒಟ್ಟು (ಐದುಕೋಟಿ ಪತ್ರಗಳಿವೆ)

ಪ್ರಚಿನುಹ್ಯಸ್ಯ ಶಾಖೇ ದ್ವೇ ಯಾಶ್ಚಾನ್ಯಾಃ ಪ್ರತಿಶಾಖಿಕಾಃ ।
ಆಭ್ಯಾಂ ಫಲಸಹಸ್ರೇ ದ್ವೇ ಪಂಚಾನಾಂ ಶತಮೇವ ಚ ।
ತತೋ ರಥಾದವಪ್ಲುತ್ಯ ರಾಜಾನಂ ಬಾಹುಕೋಽಬ್ರವೀತ್ ॥೧೧॥

ಈ ಎರಡು ಶಾಖೆಗಳಲ್ಲಿ ಮತ್ತು ಅವುಗಳಿಗೆ ಇರುವ ರೆಂಬೆಗಳಲ್ಲಿ ಇರುವ ಫಲಗಳನ್ನು ಕಿತ್ತುಕೋ ಅವು ಒಟ್ಟು ಎರಡುಸಾವಿರದ ಐದುನೂರು ಫಲಗಳಾಗುತ್ತವೆ. (ಎಂದು ಹೇಳಿದನು.)

ಪರೋಕ್ಷಮಿವ ಮೇ ರಾಜನ್ ಕತ್ಥಸೇ ಶತ್ರುಕರ್ಶನ ।
ಅಥ ತೇ ಗಣಿತೇ ರಾಜನ್ ವಿಜಾನಾಮ್ಯಪರೋಕ್ಷತಾಮ್ ॥೧೨॥

ಆಗ ಬಾಹುಕನು ರಥದಿಂದ ಕೆಳಗೆ ಹಾರಿ ರಾಜನನ್ನು ಕುರಿತು ಹೇಳಿದನು ಶತ್ರುಕರ್ಶನನಾದ ರಾಜನೇ ನನಗೆ ಏನೂ ತಿಳಿಯುವುದಿಲ್ಲವೆಂಬಂತೆ ಮಾತನಾಡುತ್ತಿದ್ದೀಯೆ, ಈಗ ನಾನು ಆ ಫಲಗಳನ್ನು ಎಣಿಸಿ ಪ್ರತ್ಯಕ್ಷವಾಗಿ ತಿಳಿಯುತ್ತೇನೆ.

ಪ್ರತ್ಯಕ್ಷಂ ತೇ ಮಹಾರಾಜ ಗಣಯಿಷ್ಯೇ ವಿಭೀತಕಮ್ ।
ಅಹಂ ಹಿ ನಾಭಿಜಾನಾಮಿ ಭವೇದೇವಂ ನವೇತಿ ಚ ॥೧೩॥

ಮಹಾರಾಜನೇ ನೀನು ಹೇಳಿದುದು ಸರಿಯೋ ಅಲ್ಲವೋ ಎಂದು ನನಗೆ ತಿಳಿದಿಲ್ಲ. ನಿನ್ನ ಎದುರಿಗೆ ಆ ತಾರಿಯ ಫಲಗಳನ್ನು ಎಣಿಸುವೆನು.

ಸಂಖ್ಯಾಸ್ಯಾಮಿ ಫಲಾನ್ಯಸ್ಯ ಪಶ್ಯತಸ್ತೇ ಜನಾಧಿಪ ।
ಮುಹೂರ್ತಮಿವ ವಾರ್ಷ್ಣೇಯೋ ರಶ್ಮೀನ್ ಯಚ್ಛತು ವಾಜಿನಾಮ್ ॥

ಎಲೈ ಜನಾಧಿಪನೇ, ನೀನು ನೋಡುತ್ತಿರುವಂತೆಯೇ ಈ ಕೊಂಬೆಯ ಫಲಗಳನ್ನು ಎಣಿಸುತ್ತೇನೆ. ಈ ವಾರ್ಷ್ಣೇಯನು ಒಂದು ಮುಹೂರ್ತಕಾಲ ಕುದುರೆಗಳ ಕಡಿವಾಣವನ್ನು ಹಿಡಿದುಕೊಂಡಿರಲಿ.

ತಮಬ್ರವೀನ್ನೃಪಃ ಸೂತಂ ನಾಯಂ ಕಾಲೋ ವಿಲಂಬಿತುಮ್ ।
ಬಾಹುಕಸ್ತ್ವಬ್ರವೀದೇನಂ ಪರಂ ಯತ್ನಂ ಸಮಾಸ್ಥಿತಃ ॥೧೫॥

ಪ್ರತೀಕ್ಷಸ್ವ ಮುಹೂರ್ತಂ ತ್ವಮಥವಾ ತ್ವರತೇ ಭವಾನ್ ।
ಏಷ ಯಾತಿ ಶಿವಃ ಪಂಥಾ ಯಾಹಿ ವಾರ್ಷ್ಣೇಯಸಾರಥಿಃ ॥೧೬॥

ಅವನನ್ನು ಕುರಿತು ರಾಜನು ಇದು ವಿಳಂಬಮಾಡುವುದಕ್ಕೆ ಸಮಯವಲ್ಲ ಎಂದು ಹೇಳಿದನು. ಬಾಹುಕನಾದರೋ ಅವನನ್ನು ಕುರಿತು ಮಹಾಪ್ರಯತ್ನವನ್ನು ಮಾಡುತ್ತಲೇ ಒಂದು ಮುಹೂರ್ತನಿರೀಕ್ಷಿಸು. ಇಲ್ಲದಿದ್ದರೆ ನೀನು ತ್ವರೆಮಾಡುತ್ತಿದ್ದೀಯೆ, ಈ ಮಂಗಳವಾದ ಮಾರ್ಗವು ಮುಂದೆ ಹೋಗುತ್ತದೆ. ವಾರ್ಷ್ಣೇಯನನ್ನು ಸಾರಥಿಯನ್ನಾಗಿ ಮಾಡಿಕೊಂಡು ಮುಂದೆಹೋಗು ಎಂದು ಹೇಳಿದನು.

## ಬೃಹದಶ್ವಃ

ಅಬ್ರವೀದೃತುಪರ್ಣಸ್ತಂ ಸಾಂತ್ವಯನ್ ಕುರುನಂದನ ॥೧೭॥

ತ್ವಮೇವ ಯಂತಾ ನಾನ್ಯೋಽಸ್ತಿ ಪೃಥಿವ್ಯಾಮಪಿ ಬಾಹುಕ ।
ತ್ವತ್ಕೃತೇ ಯಾತುಮಿಚ್ಛಾಮಿ ವಿದರ್ಭಾನ್ ಹಯಕೋವಿದ ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ನ ವಿಘ್ನಂ ಕರ್ತುಮರ್ಹಸಿ ॥೧೮॥

ಕುರುನಂದನನೇ, ಆಗ ಋತುಪರ್ಣನು ಅವನನ್ನು ಸಮಾಧಾನಪಡಿಸುತ್ತಾ ಬಾಹುಕನೇ ನೀನೇ ಶ್ರೇಷ್ಠನಾದ ಸಾರಥಿ. ನಿನ್ನಂತಹ ಇನ್ನೊಬ್ಬ ಸಾರಥಿಯು ಭೂಮಿಯಲ್ಲಿಲ್ಲ. ಅಶ್ವಕೋವಿದನೇ ನಿನ್ನ ನಿಮಿತ್ತದಿಂದ ನಾನು ವಿದರ್ಭವನ್ನು ಸೇರಲು ಬಯಸುತ್ತೇನೆ. ನಿನಗೆ ಶರಣಾಗತನಾಗಿದ್ದೇನೆ. ನನಗೆ ವಿಘ್ನವನ್ನು ಮಾಡಬೇಡ ಎಂದು ಹೇಳಿದನು.

ಕಾಮಂ ಚ ತೇ ಕರಿಷ್ಯಾಮಿ ಯನ್ಮಾಂ ವಕ್ಷ್ಯಸಿ ಬಾಹುಕ ।
ವಿದರ್ಭಾನ್ ಯದಿ ಯಾತ್ಯದ್ಯ ಸೂರ್ಯಂ ದರ್ಶಯಿತಾಸಿ ಮೇ ॥

ಬಾಹುಕನೇ, ನೀನು ಈ ದಿನ ಪ್ರಯಾಣವನ್ನುಮಾಡಿ ವಿದರ್ಭದೇಶದಲ್ಲಿನನಗೆ ಸೂರ್ಯಾಸ್ತದ ವೇಳೆಯಲ್ಲಿಸೂರ್ಯನನ್ನು ತೋರಿಸಿದರೆ ನೀನು ಕೇಳಿದ ಕಾಮವನ್ನು ನಿನಗೆ ಪೂರೈಸುವೆನು ಎಂದು ಹೇಳಿದನು.

ಅಥಾಬ್ರವೀದ್‌ಬಾಹುಕಸ್ತಂ ಸಂಖ್ಯಾಯೇಮಂ ವಿಭೀತಕಮ್ ।
ತತೋ ವಿದರ್ಭಾನ್ ಯಾಸ್ಯಾಮಿ ನತೇ ವಿಘ್ನೋ ಭವಿಷ್ಯತಿ ॥೨೦॥

ಅಕಾಮ ಇವ ತಂ ರಾಜಾ ಗಣಯಸ್ವೇತ್ಯುವಾಚ ಹ ॥೨೧॥

ಸೋಽವತೀರ್ಯ ರಥಾತ್ ತೂರ್ಣಂ ಗಣಯಾಮಾಸ ವೈ ದ್ರುತಮ್ ।
ತತಃ ಸ ವಿಸ್ಮಯಾವಿಷ್ಟೋ ರಾಜಾನಮಿದಮಬ್ರವೀತ್ ॥೨೨॥

ಗಣಯಿತ್ವಾ ಯಥೋಕ್ತಾನಿ ತಾವಂತ್ಯೇವ ಫಲಾನಿ ತು ।
ಅತ್ಯದ್ಭುತಮಿದಂ ರಾಜನ್ ದೃಷ್ಟವಾನಸ್ಮಿ ತೇ ಬಲಮ್ ।
ಶ್ರೋತುಮಿಚ್ಛಾಮಿ ತಾಂ ವಿದ್ಯಾಂ ಯಯೈತಜ್ಜ್ಞಾಯತೇ ನೃಪ ॥೨೩॥

ಆಗ ಬಾಹುಕನು ಅವನನ್ನು ಕುರಿತು ಈ ತಾರಿಯಫಲಗಳನ್ನು ಎಣಿಸಿ ಅನಂತರ ವಿದರ್ಭವನ್ನು ತಲುಪುವೆನು ನಿನಗೆ ವಿಘ್ನವುಂಟಾಗುವುದಿಲ್ಲ ಎಂದು ಹೇಳಿದನು. ರಾಜನು ಇಷ್ಟವಿಲ್ಲದೆಯೇ ಎಣಿಸು ಎಂದು ಹೇಳಿದನು. ಬಾಹುಕನು ಬೇಗ ರಥದಿಂದ ಇಳಿದು ಶೀಘ್ರವಾಗಿ ಎಣಿಸಿದನು. ಅನಂತರ ವಿಸ್ಮಯಾವಿಷ್ಟನಾದ ಆಬಾಹುಕನು ರಾಜನನ್ನು ಕುರಿತು ಹೀಗೆ ಹೇಳಿದನು. ಎಲೈ ರಾಜನೇ ನಾನು ಫಲಗಳನ್ನು ಎಣಿಸಿ ನೀನು ಹೇಳಿದಷ್ಟೇ ಇವೆ ಎಂದು ನೋಡಿ ಈ ನಿನ್ನ ಅತ್ಯದ್ಭುತವಾದ ಸಾಮರ್ಥ್ಯವನ್ನು ನೋಡುತ್ತಿದ್ದೇನೆ. ರಾಜನೇ ಯಾವ ವಿದ್ಯೆಯಿಂದ ಇದು ತಿಳಿಯುತ್ತದೆಯೋ ಅಂತಹ ವಿದ್ಯೆಯನ್ನು ನಿನ್ನಿಂದ ಉಪದೇಶಪಡೆಯಲು ಬಯಸುತ್ತೇನೆ.

ತಮುವಾಚ ತತೋ ರಾಜಾ ತ್ವರಿತೋ ಗಮನೇ ತದಾ ।
ವಿದ್ಧ್ಯಕ್ಷಹೃದಯಜ್ಞಂ ಮಾಂ ಸಂಖ್ಯಾನೇ ಚ ವಿಶಾರದಮ್ ॥೨೪॥

ಆಗ ರಾಜನು ಅವನಿಗೆ ತ್ವರೆಮಾಡುತ್ತಾ ನನ್ನನ್ನು ಅಕ್ಷವಿದ್ಯಾವಿಶಾರದನೆಂದೂ ಮತ್ತು ಸಂಖ್ಯಾವಿದ್ಯಾವಿಶಾರದನೆಂದೂ ತಿಳಿ ಎಂದು ಹೇಳಿದನು.

ಬಾಹುಕಸ್ತಮುವಾಚಾಥ ದೇಹಿ ವಿದ್ಯಾಮಿಮಾಂ ಮಮ ।
ಮತ್ತೋಽಪಿ ಚಾಶ್ವಹೃದಯಂ ಗೃಹಾಣ ಪುರುಷರ್ಷಭ ॥೨೫॥

ಋತುಪರ್ಣಸ್ತತೋ ರಾಜಾ ಬಾಹುಕಂ ಕಾರ್ಯಗೌರವಾತ್ ।
ಹಯಜ್ಞಾನಸ್ಯ ಲೋಭಾಚ್ಚ ತಂ ತಥೇತ್ಯಬ್ರವೀದ್ ವಚಃ ॥೨೬॥

ಆಗ ಬಾಹುಕನು ಅವನನ್ನು ಕುರಿತು ಎಲೈ ಪುರುಷರ್ಷಭನೇ ಈ ವಿದ್ಯೆಯನ್ನು ನನಗೆ ಕೊಡು ಮತ್ತು ನನ್ನಿಂದ ಅಶ್ವವಿದ್ಯೆಯನ್ನು ಸ್ವೀಕರಿಸು ಎಂದು ಹೇಳಿದನು. ಆಗ

ಋತುಪರ್ಣನು ಕಾರ್ಯಗೌರವದಿಂದಲೂ ಮತ್ತು ಅಶ್ವವಿದ್ಯೆಯ ಮೇಲಿನ ಮಹದಾಸೆಯಿಂದಲೂ ಬಾಹುಕನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

ಯಥೋಕ್ತಂ ವೈ ಗೃಹಾಣೇದಮಕ್ಷಾಣಾಂ ಹೃದಯಂ ಪರಮ್ ।
ನಿಕ್ಷೇಪೋ ಮೇಽಶ್ವಹೃದಯಂ ತ್ವಯಿ ತಿಷ್ಠತು ಬಾಹುಕ ॥೨೭॥

ದದಾಮ್ಯೇಕಮನಾ ಭೂಯಾಃ ಶುಚಿಃ ಪುರುಷಸತ್ತಮ ।
ಏವಮುಕ್ತ್ವಾ ದದೌ ವಿದ್ಯಾಮ್ ಋತುಪರ್ಣೋ ನಳಾಯ ವೈ ॥

ತಸ್ಯಾಕ್ಷಹೃದಯಜ್ಞಸ್ಯ ಶರೀರಾನ್ನಿಃಸೃತಃ ಕಲಿಃ ।
ಕರ್ಕೋಟಕವಿಷಂ ತೀಕ್ಷ್ಣಂ ಮುಖಾತ್ ಸ ತು ಸಮುದ್ವಮನ್ ॥೨೯॥

ಬಾಹುಕನೇ ನಾನು ಹೇಳಿದಂತೆ ಈ ಶ್ರೇಷ್ಠವಾದ ಅಕ್ಷಹೃದಯವನ್ನು ನನ್ನಿಂದ ಸ್ವೀಕರಿಸು. ಅಶ್ವಹೃದಯವು (ನನಗೆ ಕೊಡಬೇಕಾದ ಅಶ್ವವಿದ್ಯೆಯ) ಸದ್ಯಕ್ಕೆ ನಿನ್ನಲ್ಲಿ ನಿಕ್ಷೇಪವಾಗಿರಲಿ. ಪುರುಷಶ್ರೇಷ್ಠನೇ ಶುಚಿಯಾಗಿ ಏಕಾಗ್ರ ಮನಸ್ಸಳ್ಳವನಾಗು. ನಿನಗೆ ವಿದ್ಯೆಯನ್ನು ಉಪದೇಶಿಸುತ್ತೇನೆ ಎಂದು ಹೇಳಿ ಋತುಪರ್ಣನು ನಳನಿಗೆ ಅಕ್ಷವಿದ್ಯೆಯನ್ನು (ಮತ್ತು ಸಂಖ್ಯಾವಿದ್ಯೆಯನ್ನು) ನೀಡಿದನು. ಬಾಹುಕನು ಅಕ್ಷವಿದ್ಯೆಯನ್ನು ಸ್ವೀಕರಿಸಿದ ತಕ್ಷಣ ಅವನ ಶರೀರದಿಂದ ಕಲಿಯು ಹೊರಗೆಬಂದನು. ಮತ್ತು ಬಾಹುಕನು ತನ್ನ ಮುಖದಿಂದ ತೀಕ್ಷ್ಣವಾದ ಕಾರ್ಕೋಟಕ ವಿಷವನ್ನು ವಮನ ಮಾಡಿದನು.

ಕಲೇಸ್ತತಸ್ತದಾರ್ತಸ್ಯ ಶಾಪಾಗ್ನಿಃಸ ವಿನಿಃಸೃತಃ ।
ಸ ತೇನ ಕರ್ಶಿತೋ ರಾಜಾ ದೀರ್ಘಕಾಲಮನಾತ್ಮವಾನ್ ॥೩೦॥

ಆಗ ಆರ್ತನಾದ ಕಲಿಯಿಂದ ಆ ಶಾಪಾಗ್ನಿಯು ಹೊರಬಂದಿತು. ದುಷ್ಟನಾದ ಅವನು ನಳಶರೀರದಲ್ಲಿ ಇದ್ದು ದೀರ್ಘಕಾಲದವರೆಗೆ ಆ ವಿಷದ ಬಾಧೆಯಿಂದ ದುಃಖಿತನಾಗಿದ್ದನು.

ತತೋ ವಿಷಾದ್ವಿಮುಕ್ತಾತ್ಮಾ ಸ್ವಂ ರೂಪಮಕರೋತ್ ಕಲಿಃ ।
ತಂ ಶಪ್ತುಮೈಚ್ಛತ್ ಕುಪಿತೋ ನಿಷಧಾಧಿಪತಿರ್ನಳಃ ॥೩೧॥

ಆನಂತರ ವಿಷದಿಂದ ವಿಮೋಚನೆಗೊಂಡ ಕಲಿಯು ತನ್ನ ನಿಜವಾದ ರೂಪವನ್ನು ಧರಿಸಿದನು. ನಿಷಧಾಧಿಪತಿಯಾದ ನಳನು ಕೋಪಗೊಂಡು ಅವನಿಗೆ ಶಾಪವನ್ನು ಕೊಡಲು ಬಯಸಿದನು.

ತಮುವಾಚ ಕಲಿರ್ಭೀತೋ ವೇಪಮಾನಃ ಕೃತಾಂಜಲಿಃ ।
ಕೋಪಂ ಸಂಯಚ್ಛ ನೃಪತೇ ಪ್ರತಿದಾಸ್ಯಾಮಿ ತೇ ವರಮ್ ॥೩೨॥

ಆ ಕಲಿಯು ಭಯದಿಂದ ನಡುಗುತ್ತಾ ಕೈಗಳನ್ನು ಮುಗಿದು ಎಲೈರಾಜನೇ ನಿನ್ನ ಕೋಪವನ್ನು ಶಮನಮಾಡಿಕೋ. ನಾನು ನಿನಗೆ ಪ್ರತಿಯಾಗಿ ವರವನ್ನು ಕೊಡುವೆನು ಎಂದು ಹೇಳಿದನು.

ಇಂದ್ರಸೇನಸ್ಯ ಜನನೀ ಕುಪಿತಾ ಮಾಽಶಪತ್ ಪುರಾ ।
ಯದಾ ತ್ವಯಾ ಪರಿತ್ಯಕ್ತಾ ತೇನಾಹಂ ಭೃಶಪೀಡಿತಃ ॥೩೩॥

ಇಂದ್ರಸೇನನ ತಾಯಿಯಾದ ದಮಯಂತಿಯು ನೀನು ಅವಳನ್ನು ಪರಿತ್ಯಜಿಸಿದಾಗ ಹಿಂದೆ ನನಗೆ ಕೋಪದಿಂದ ಶಾಪವನ್ನು ಕೊಟ್ಟಳು ಆ ಶಾಪದಿಂದ ನಾನು ಬಹಳ ಪೀಡಿತನಾಗಿದ್ದೆ.

ಅವಸಂ ತ್ವಯಿ ರಾಜೇಂದ್ರ ಸುದುಃಖಮಪರಾಜಿತ ।
ವಿಷೇಣ ನಾಗರಾಜಸ್ಯ ದಹ್ಯಮಾನೋ ದಿವಾನಿಶಮ್ ॥೩೪॥

ಎಲೈ ರಾಜೇಂದ್ರನೇ ಎಲೈ ಅಪರಾಜಿತನೇ ಆ ಸರ್ಪರಾಜನ ವಿಷದ ಬಾಧೆಯಿಂದ ಹಗಲೂ ರಾತ್ರಿಯು ಉರಿಯುತ್ತಾ ಮತ್ತು ದುಃಖವನ್ನು ಅನುಭವಿಸುತ್ತಾ ನಾನು ನಿನ್ನಲ್ಲಿ ವಾಸವಾಗಿದ್ದೆನು.

ಯೇ ಚ ತ್ವಾಂ ಮನುಜಾ ಲೋಕೇ ಕೀರ್ತಯಿಷ್ಯಂತ್ಯತಂದ್ರಿತಾಃ ।
ಮತ್ಪ್ರಸೂತಂ ಭಯಂ ತೇಷಾಂ ನ ಕದಾಚಿದ್ ಭವಿಷ್ಯತಿ ॥೩೫॥

ನ ಚೈಷಾಂ ಮಾನಸಂ ಕಿಂಚಿತ್ ಶಾರೀರಂ ವಾ ನೃಪೋತ್ತಮ ।
ಭವಿಷ್ಯತಿ ನೃಣಾಂ ರಾಜನ್ ಕೀರ್ತಯಿಷ್ಯಂತಿ ಯೇ ನಳಮ್ ।
ಭಯಾರ್ತಂ ಶರಣಂ ಯಾತಂ ಯದಿ ಮಾಂ ತ್ವಂ ನ ಶಪ್ಸ್ಯಸೇ ॥೩೬॥

ಯಾವ ಮನುಷ್ಯರು ಲೋಕದಲ್ಲಿ ಆಲಸ್ಯವಿಲ್ಲದೆ ನಿನ್ನ ಹೆಸರನ್ನು ಕೀರ್ತಿಸುತ್ತಾರೋ ಅವರಿಗೆ ನನ್ನಿಂದ ಉಂಟಾಗುವ ಯಾವ ಭಯವೂ ಇರುವುದಿಲ್ಲ. ಎಲೈ ರಾಜಶ್ರೇಷ್ಠನೇ ಭಯಾರ್ತನಾಗಿ ಶರಣಾಗತನಾದ ನನಗೆ ನೀನು ಶಾಪವನ್ನು ಕೊಡದಿದ್ದರೆ ರಾಜನೇ ನೃಪೋತ್ತಮನೇ ಯಾರು ನಳನನ್ನು ಕೀರ್ತಿಸುವರೋ ಅವರಿಗೆ ಶಾರೀರಕವಾದ ಅಥವಾ ಮಾನಸಿಕವಾದ ಪೀಡೆಯು ಉಂಟಾಗದಿರಲಿ. (ಎಂದು ವರವನ್ನು ಕೊಡುತ್ತೇನೆ.)

ಏವಮುಕ್ತೋ ನಳೋ ರಾಜಾ ನ್ಯಯಚ್ಛತ್ ಕ್ರೋಧಮಾತ್ಮನಃ ।
ತತೋ ಭೀತಃ ಕಲಿಃ ಕ್ಷಿಪ್ರಂ ಪ್ರವಿವೇಶ ವಿಭೀತಕಮ್ ॥೩೭॥

ಕಲಿಸ್ತತ್ರೈಷ ಸೋಽದೃಶ್ಯಃ ಕಥಯನ್ ನೈಷಧೇನ ವೈ ॥೩೮॥

ಹೀಗೆ ಹೇಳಲ್ಪಟ್ಟ ನಳರಾಜನು ತನ್ನ ಕೋಪವನ್ನು ತಡೆದುಕೊಂಡನು. ಕಲಿಯು ನೈಷಧನಜೊತೆಯಲ್ಲಿ ಮಾತನಾಡುತ್ತಲೇ ಅದೃಶ್ಯನಾಗಿ ಅಲ್ಲಿಯೇ ಭಯದಿಂದ ಶೀಘ್ರವಾಗಿ ಆ ತಾರಿಯಮರವನ್ನು ಪ್ರವೇಶಿಸಿದನು.

ತತೋ ಗತಜ್ವರೋ ರಾಜಾ ನೈಷಧಃ ಪರವೀರಹಾ ।
ಸಂಪ್ರನಷ್ಟೇ ಕಲೌ ರಾಜಾ ಸಂಖ್ಯಾಯಾಥ ಫಲಾನ್ಯುತ ॥೩೯॥

ಮುದಾ ಪರಮಯಾ ಯುಕ್ತಃ ತೇಜಸಾಽಥ ಬಲೇನ ಚ ।
ರಥಮಾರುಹ್ಯ ತೇಜಸ್ವೀ ಪ್ರಯಯೌ ಜವನೈರ್ಹಯೈಃ ।
ವಿಭೀತಕಶ್ಚಾಪ್ರಶಸ್ತಃ ಸಂವೃತ್ತಃ ಕಲಿಸಂಶ್ರಯಾತ್ ॥೪೦॥

ಆಗ ಕಲಿಯು ನಾಶವನ್ನು ಹೊಂದುತ್ತಿರಲು ಪರವೀರಘಾತಕನಾದ ನಳಮಹಾರಾಜನು ಸ್ವಸ್ಥಮನಸ್ಸಿನಿಂದ ಕೂಡಿದವನಾದನು. ರಾಜನು ಆ ಹಣ್ಣುಗಳನ್ನು ಎಣಿಸಿ ಬಹಳ ಸಂತೋಷದಿಂದ ಕೂಡಿದವನಾಗಿ ತನ್ನ ಸಾಮರ್ಥ್ಯದಿಂದಲೂ ಮತ್ತು ಬಲದಿಂದಲೂ ಬೆಳಗುತ್ತಿದ್ದ ಅವನು ರಥವನ್ನು ಏರಿ ವೇಗಯುಕ್ತವಾದ ಹಯಗಳಿಂದ ಹೊರಟನು. ಮತ್ತು ವಿಭೀತಕ ವೃಕ್ಷವಾದರೂ (ತಾರಿಮರ) ಕಲಿಯ ಪ್ರವೇಶದಿಂದಾಗಿ ಅಮಂಗಳವಾಯಿತು.

ಹಯೋತ್ತಮಾನುತ್ವತತೋ ದ್ವಿಜಾನಿವ ಪುನಃಪುನಃ ।
ನಳಃ ಸಂಚೋದಯಾಮಾಸ ಪ್ರಹೃಷ್ಟೇನಾಂತರಾತ್ಮನಾ ॥೪೧॥

ಪಕ್ಷಿಗಳಂತೆ ಪುನಃಪುನಃ ಹಾರುತ್ತಿದ್ದ ಆ ಶ್ರೇಷ್ಠವಾದ ಅಶ್ವಗಳನ್ನು ನಳನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಮುಂದೆ ನಡೆಸಿದನು.

ವಿದರ್ಭಾಭಿಮುಖೋ ರಾಜಾ ಪ್ರಯಯೌ ಸ ಮಹಾಮನಾಃ ।
ನಳೇ ತು ಸಮತಿಕ್ರಾಂತೇ ಕಲಿರಪ್ಯಗಮದ್ ಗೃಹಾನ್ ॥೪೨॥

ಮಹಾಮನನಾದ ಆ ರಾಜನು ವಿದರ್ಭಾಭಿಮುಖವಾಗಿ ಹೊರಟನು ನಳನು ಮುಂದೆ ಹೋದ ಮೇಲೆ ಕಲಿಯು ಸಹ ತನ್ನ ಮನೆಗೆ ಹೋದನು.

ತತೋ ಗತಜ್ವರೋ ರಾಜಾ ನಳೋ ವೈ ಪೃಥಿವೀಪತಿಃ ।
ವಿಮುಕ್ತಃ ಕಲಿನಾ ರಾಜನ್ ರೂಪಮಾತ್ರವಿಯೋಜಿತಃ ॥೪೩॥

ರಾಜನೇ ಅನಂತರ ಪೃಥ್ವಿಯಪತಿಯಾದ ನಳನು ಕಲಿಯಿಂದ ವಿಮುಕ್ತನಾಗಿಸ್ವಸ್ಥ ಚಿತ್ತನಾದನು. ನಳನ ಮೊದಲಿನ ರೂಪವು ಮಾತ್ರ ಇನ್ನೂ ಉಂಟಾಗಿರಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೇಳನೆಯ ಅಧ್ಯಾಯ

(ಋತುಪರ್ಣನ ಕುಂಡಿನ ಪ್ರವೇಶ. ನಳರಥಘೋಷದಂತೆ ಇದ್ದ ರಥಘೋಷವನ್ನು ಕೇಳಿ ದಮಯಂತಿಯ ಊಹೆ.)

### ಬೃಹದಶ್ವಃ

ತತೋ ವಿದರ್ಭಾನ್ ಸಂಪ್ರಾಪ್ತಂ ಸಾಯಾಹ್ನೇ ಸತ್ಯವಿಕ್ರಮ ।
ಋತುಪರ್ಣಂ ಜನಾ ರಾಜನ್ ಭೀಮಾಯ ಪ್ರತ್ಯವೇದಯನ್ ॥೧॥

ಎಲೈ ಸತ್ಯವಿಕ್ರಮನಾದ ರಾಜನೇ ಅನಂತರ ಸಾಯಾಂಕಾಲದ ಸಮಯಕ್ಕೆ ವಿದರ್ಭಕ್ಕೆ ಆಗಮಿಸಿದ ಋತುಪರ್ಣನನ್ನು ರಾಜಭಟರು ಭೀಮನಿಗೆ ನಿವೇದಿಸಿದರು.

ಸ ಭೀಮವಚನಾದ್ ರಾಜಾ ಕುಂಡಿನಂ ಪ್ರಾವಿಶತ್ ಪುರೀಮ್ ।
ನಾದಯನ್ ರಥಘೋಷೇಣ ಸರ್ವಾಶ್ಚಾಪಿ ದಿಶೋ ದಶ ॥೨॥

ಋತುಪರ್ಣರಾಜನು ಭೀಮನ ಅನುಮತಿಯಿಂದ ತನ್ನ ರಥಘೋಷದಿಂದ ಎಲ್ಲ ದಿಕ್ಕುಗಳನ್ನು ಪ್ರತಿಧ್ವನಿಸುತ್ತಾ ಕುಂಡಿನ ಪುರವನ್ನು ಪ್ರವೇಶಮಾಡಿದನು.

ತತಸ್ತಂ ರಥನಿರ್ಘೋಷಂ ನಳಾಶ್ವಾಸ್ತತ್ರ ಶುಶ್ರುವುಃ ।
ಶ್ರುತ್ವಾ ಚ ಸಮಹೃಷ್ಯಂತ ಪುರೇವ ನಳಸನ್ನಿಧೌ ॥೩॥

ಆಗ ಅಲ್ಲಿದ್ದ ನಳನ ಅಶ್ವಗಳು ಆ ರಥಘೋಷವನ್ನು ಕೇಳಿದವು ಮತ್ತು ಕೇಳಿ ಹಿಂದೆ ನಳನ ಸನ್ನಿಧಿಯಲ್ಲಿ ಸಂತೋಷಪಟ್ಟಂತೆ ಸಂತೋಷಪಟ್ಟವು.

ದಮಯಂತೀ ಚ ಶುಶ್ರಾವ ರಥಘೋಷಂ ನಳಸ್ಯ ವೈ ।
ಯಥಾ ಮೇಘಸ್ಯ ನದತೋ ಗಂಭೀರಂ ಜಲದಾಗಮೇ ॥೪॥

ದಮಯಂತಿಯೂ ಕೂಡ ಮಳೆಗಾಲದಲ್ಲಿ ಮೇಘಗಳ ನಾದದಂತೆ ಗಂಭೀರವಾಗಿದ್ದ ನಳನ ಆ ರಥಘೋಷವನ್ನು ಕೇಳಿದಳು.

ಪರಂ ವಿಸ್ಮಯಮಾಪನ್ನಾ ಶ್ರುತ್ವಾ ನಾದಂ ಮಹಾಸ್ವನಮ್ ।
ನಳೇನ ಸಂಗೃಹೀತೇಷು ಪುರೇವ ನಳವಾಜಿಷು ।
ಸದೃಶಂ ರಥನಿರ್ಘೋಷಂ ಮೇನೇ ಭೈಮೀ ತಥಾ ಹಯಾಃ ॥೫॥

ಪ್ರಾಸಾದಸ್ಥಾಶ್ಚ ಶಿಖಿನಃ ಶಾಲಾಸ್ಥಾಶ್ಚೈವ ವಾರಣಾಃ ।
ಹಯಾಶ್ಚ ಶುಶ್ರುವುಸ್ತಸ್ಯ ರಥಘೋಷಂ ಮಹೀಪತೇಃ ॥೬॥

ಹಿಂದೆ ನಳನು ತನ್ನ ಅಶ್ವಗಳನ್ನು ಹಿಡಿದಾಗ ಉಂಟಾಗುವ ರಥನಿರ್ಘೋಷಕ್ಕೆ ಸದೃಶವಾದ ಆ ಮಹಾಶಬ್ದವನ್ನು ಕೇಳಿ ದಮಯಂತಿಯ ಮತ್ತು ಅಶ್ವಗಳೂ ನಳನ ನಿರ್ಘೋಷವೆಂದೇ ತಿಳಿದರು. ಉಪ್ಪರಿಗೆಯಲ್ಲಿದ್ದ ನವಿಲುಗಳು ಗಜಶಾಲೆಯಲ್ಲಿದ್ದ ಗಜಗಳು ಮತ್ತು ಅಶ್ವಶಾಲೆಯಲ್ಲಿದ್ದ ಅಶ್ವಗಳು ಆ ರಾಜನ ರಥಘೋಷವನ್ನು ಕೇಳಿದವು.

ತಚ್ಛ್ರುತ್ವಾ ರಥನಿರ್ಘೋಷಂ ವಾರಣಾಃ ಶಿಖಿನೋ ಹಯಾಃ ।
ಪ್ರಣೇದುರುನ್ಮುಖಾ ರಾಜನ್ ಮೇಘನಾದಮವೇಕ್ಷ್ಯ ವಾ ॥೭॥

ರಾಜನೇ ರಥನಿರ್ಘೋಷವನ್ನು ಕೇಳಿ ಗಜಗಳು ಅಶ್ವಗಳು ಮತ್ತು ನವಿಲುಗಳು ಗುಡುಗಿನ ಶಬ್ದವನ್ನು ಕೇಳಿದಂತೆ ಮುಖವನ್ನು ಮೇಲಕ್ಕೆ ಎತ್ತಿ ನಾದವನ್ನುಮಾಡಿದವು.

ದಮಯಂತೀ

ತಥೈವ ರಥನಿರ್ಘೋಷಂ ಪೂರಯನ್ನಿವ ಮೇದಿನೀಮ್ ।
ಮಮಾಹ್ಲಾದಯತೇ ಚೇತೋ ನಳ ಏಷ ಮಹೀಪತಿಃ ॥೮॥

ಈ ನಳಮಹಾರಾಜನು ಭೂಮಿಯನ್ನೆಲ್ಲಾ ತುಂಬುವಂತೆ ಮೊದಲಿನಂತೆಯೇ ರಥನಿರ್ಘೋಷವನ್ನು ಮಾಡಿ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿದ್ದಾನೆ.

ಅಥ ಚಂದ್ರಾಭವಕ್ತ್ರಂ ತಂ ನ ಪಶ್ಯಾಮಿ ನಳಂ ಯದಿ ।
ಅಸಂಖ್ಯೇಯಗುಣಂ ವೀರಂ ವಿನಶ್ಯಾಮಿ ನಸಂಶಯಃ ॥೯॥

ಇನ್ನು ಆ ಚಂದ್ರವದನನಾದ ಅಪರಿಮಿತವಾದ ಗುಣಗಳನ್ನು ಹೊಂದಿರುವ ವೀರನಾದ ನಳನನ್ನು ನಾನು ನೋಡದಿದ್ದರೆ ನಾನು ಖಂಡಿತವಾಗಿ ನಾಶವನ್ನು ಹೊಂದುವೆನು.

ಯದಿ ವೈ ತಸ್ಯ ವೀರಸ್ಯ ಬಾಹ್ವೋರ್ನಾದ್ಯಾಹಮಂತರಮ್ ।
ಪ್ರವಿಶಾಮಿ ಸುಖಸ್ಪರ್ಶಂ ವಿನಶಿಷ್ಯಾಮ್ಯಸಂಶಯಮ್ ॥೧೦॥

ಈ ದಿನ ಆ ವೀರನಾದ ನಳನ ಸುಖಸ್ಪರ್ಶವುಳ್ಳ ಬಾಹುಗಳ ಮಧ್ಯವನ್ನು ಸೇರದಿದ್ದರೆ ನಿಸ್ಸಂಶಯವಾಗಿ ನಾಶವನ್ನು ಹೊಂದುವೆನು.

ಯದಿ ಮಾಂ ಮೇಘನಿರ್ಘೋಷೋ ನೋಪಗಚ್ಛತಿ ನೈಷಧಃ ।
ಅದ್ಯ ಚಾಮೀಕರಪ್ರಖ್ಯೋ ಪ್ರವೇಕ್ಷ್ಯಾಮಿ ಹುತಾಶನಮ್ ॥೧೧॥

ಮೇಘಗಂಭೀರಸ್ವರವುಳ್ಳ ಸುವರ್ಣವರ್ಣನಾದ ನೈಷಧನು ಈ ದಿನ ನನ್ನ ಬಳಿಗೆ ಬರದಿದ್ದರೆ ನಾನು ಅಗ್ನಿಯನ್ನು ಪ್ರವೇಶಿಸುವೆನು.

ಯದಿ ಮಾಂ ಸಿಂಹವಿಕ್ರಾಂತೋ ಮತ್ತವಾರಣವಾರಣಃ ।
ನಾಭಿಗಚ್ಛತಿ ರಾಜೇಂದ್ರೋ ವಿನಶಿಷ್ಯಾಮ್ಯಸಂಶಯಮ್ ॥೧೨॥

ಸಿಂಹವಿಕ್ರಮನಾಗಿ ಮದಗಜವನ್ನು ತಡೆಯುವ ಸಾಮರ್ಥ್ಯವುಳ್ಳ ಆ ರಾಜೇಂದ್ರನು ನನ್ನ ಎದುರಿಗೆ ಬರದಿದ್ದರೆ ನಿಸ್ಸಂಶಯವಾಗಿ ನಾಶವನ್ನು ಹೊಂದುವೆನು.

ನ ಸ್ಮರಾಮ್ಯನೃತಂ ಕಿಂಚಿನ್ನ ಸ್ಮರಾಮ್ಯನುಪಾಕೃತಮ್ ।
ನ ಚ ಪರ್ಯುಷಿತಂ ವಾಕ್ಯಂ ಸ್ವೈರೇಷ್ವಪಿ ಮಹಾತ್ಮನಃ ॥೧೩॥

ಆ ಮಹಾತ್ಮನು ವಿನೋದದಲ್ಲಿಯೂ ಕೂಡ ಒಂದು ಸುಳ್ಳುಮಾತನ್ನಾಗಲೀ ಅಥವಾ ಅಸಂಗತವಾದ ಮಾತನ್ನಾಗಲೀ ಅಥವಾ ವ್ಯರ್ಥವಾದ ಮಾತನ್ನಾಗಲೀ ಆಡಿದುದು ನನ್ನ ಸ್ಮರಣೆಯಲ್ಲಿಲ್ಲ.

ಪ್ರಭುಃ ಕ್ಷಮಾವಾನ್ ವೀರಶ್ಚ ಮೃದುರ್ದಾಂತೋ ಜಿತೇಂದ್ರಿಯಃ ।
ಅಹೋ ನೀಚಾನುವರ್ತೀ ಚ ಕ್ಲೀಬವನ್ಮಮ ನೈಷಧಃ ॥೧೪॥

ನೈಷಧನು ಪ್ರಭು, ಕ್ಷಮೆಯುಳ್ಳವನು, ವೀರ, ಮೃದು, ಆತ್ಮಸಂಯಮವುಳ್ಳವನು, ಜಿತೇಂದ್ರಿಯನಾದವನು, ನನ್ನ ಬಳಿಯಂತೂ ನಪುಂಸಕನಂತೆ ನನ್ನನ್ನು ಅನುಸರಿಸುವವನು.

ಗುಣಾಂಸ್ತಸ್ಯ ಸ್ಮರಂತ್ಯಾ ಮೇ ತತ್ಪರಾಯಾ ದಿವಾನಿಶಮ್ ।
ಹೃದಯಂ ದೀರ್ಯತ ಇದಂ ಶೋಕಾತ್ ಪ್ರಿಯವಿನಾಕೃತಮ್ ॥೧೫॥

ಹಗಲೂ ರಾತ್ರಿಯೂ ಅವನಲ್ಲೇ ಮನೋನಿಷ್ಠೆಯುಳ್ಳವಳಾಗಿ ಅವನ ಗುಣಗಳನ್ನು ಸ್ಮರಿಸುವ ನನಗೆ ಪ್ರಿಯನಾದ ಅವನ ವಿಯೋಗದಿಂದ ಈ ನನ್ನ ಹೃದಯವು ಶೋಕದಿಂದ ಬಿರಿಯುತ್ತಿದೆ.

ಏವಂ ವಿಲಪಮಾನಾ ಸಾ ನಷ್ಟಸಂಜ್ಞೇವ ಭಾರತ ।
ಆರುರೋಹ ಮಹದ್ದೇಶ್ಮ ಪುಣ್ಯಶ್ಲೋಕದಿದೃಕ್ಷಯಾ ॥೧೬॥

ಭಾರತನೇ ಹೀಗೆ ಪ್ರಜ್ಞೆಯಿಲ್ಲದವಳಂತೆ ವಿಲಾಪವನ್ನು ಮಾಡುತ್ತಾ ಅವಳು ಪುಣ್ಯಶ್ಲೋಕನಾದ ನಳನನ್ನು ನೋಡುವ ಆಸೆಯಿಂದ ಆ ದೊಡ್ಡಮನೆಯ ಉಪ್ಪರಿಗೆಯನ್ನು ಏರಿದಳು.

ಆಲೋಕಯಂತೀ ದದೃಶೇ ಭೈಮೀ ರಾಜನ್ ಮನಸ್ವಿನೀ ।
ತತೋ ಮಧ್ಯಮಕಕ್ಷಾಯಾಂ ದದರ್ಶ ರಥಮಾಸ್ಥಿತಮ್ ।
ಋತುಪರ್ಣಂ ಮಹೀಪಾಲಂ ಸವಾರ್ಷ್ಣೇಯಂ ಸಬಾಹುಕಮ್ ॥೧೭॥

ರಾಜನೇ ಆ ಧೈರ್ಯಶಾಲಿನಿಯಾದ ದಮಯಂತಿಯು ಎಲ್ಲಕಡೆಯೂ ನೋಡುತ್ತಾ ಆಗ ಮಧ್ಯಪ್ರಾಕಾರದಲ್ಲಿನಿಂತ ರಥವನ್ನೂ ಬಾಹುಕ ಮತ್ತು ಸೂತರಿಂದ ಸಹಿತನಾದ ಋತುಪರ್ಣರಾಜನನ್ನೂ ನೋಡಿದಳು.

ತತೋಽವತೀರ್ಯ ವಾರ್ಷ್ಣೇಯೋ ಬಾಹುಕಶ್ಚ ರಥೋತ್ತಮಾತ್।
ಹಯಾಂಸ್ತಾನವಮುಚ್ಯಾಥ ಸ್ಥಾಪಯಾಮಾಸ ತಂ ರಥಮ್ ॥೧೮॥

ಅನಂತರ ಸೂತ ಮತ್ತು ವಾರ್ಷ್ಣೇಯರು ಆ ಶ್ರೇಷ್ಠವಾದ ರಥದಿಂದ ಇಳಿದು ಕುದುರೆಗಳನ್ನು ಬಿಚ್ಚಿ ಆ ರಥವನ್ನು ನಿಲ್ಲಿಸಿದರು.

ಸೋಽವತೀರ್ಯ ರಥೋಪಸ್ಥಾದ್ ಋತುಪರ್ಣೋ ನರಾಧಿಪಃ।
ಉಪತಸ್ಥೇ ಮಹಾರಾಜಂ ಭೀಮಂ ಭೀಮಪರಾಕ್ರಮಮ್ ॥೧೯॥

ಆ ಋತುಪರ್ಣರಾಜನು ರಥದ ಪೀಠದಿಂದ ಇಳಿದು ಮಹಾಪರಾಕ್ರಮವುಳ್ಳ ಭೀಮಮಹಾರಾಜನನ್ನು ಸಮೀಪಿಸಿದನು.

ತಂ ಭೀಮಃ ಪ್ರತಿಜಗ್ರಾಹ ಪೂಜಯಾ ಪರಯಾ ತತಃ ।
ಅಕಸ್ಮಾತ್ ಸಹಸಾ ಪ್ರಾಪ್ತಂ ಸ್ತ್ರೀಮಂತ್ರಂ ನಾಭ್ಯವಿಂದತ ॥೨೦॥

ಆ ಭೀಮಮಹಾರಾಜನು ಏನೂ ಕಾರಣವಿಲ್ಲದೆ ಇದ್ದಕ್ಕಿದ್ದಂತೆಯೇ ಬಂದ ಆ ಋತುಪರ್ಣನನ್ನು ಶ್ರೇಷ್ಠವಾದ ಪೂಜೆಯಿಂದ ಸ್ವೀಕರಿಸಿದನು. ಸ್ತ್ರೀಯರು ಮಾಡಿದ ಮಂತ್ರಾಲೋಚನೆಯು ಅವನಿಗೆ ತಿಳಿದಿರಲಿಲ್ಲ.

ಕಿಂ ಕಾರ್ಯಂ ಸ್ವಾಗತಂ ತೇಽಸ್ತು ರಾಜ್ಞಾ ಪೃಷ್ಟಶ್ಚ ಭಾರತ ।
ನಾಭಿಜಜ್ಞೇ ಸ ನೃಪತಿರ್ದುಹಿತೃಹೇ ಸಮಾಗತಮ್ ॥೨೧॥

ಎಲೈ ಭಾರತನೇ ನಿನಗೆ ಸ್ವಾಗತ, ಯಾವ ಉದ್ದೇಶದಿಂದ ಬಂದಿದ್ದೀಯೆ ಎಂದು ಕೇಳಿದನು. ತನ್ನ ಮಗಳಸಲುವಾಗಿ ಅವನು ಬಂದಿದ್ದಾನೆಂದು ಭೀಮನಿಗೆ ತಿಳಿಯಲಿಲ್ಲ.

ಋತುಪರ್ಣೋಽಪಿ ರಾಜಾ ಸ ಧೀಮಾನ್ ಸತ್ಯಪರಾಕ್ರಮಃ ।
ರಾಜಾನಂ ರಾಜಪುತ್ರಂ ವಾ ನ ಸ್ಮ ಪಶ್ಯತಿ ಕಂಚನ ॥೨೨॥

ಮೇಧಾವಿಯೂ ಸತ್ಯಪರಾಕ್ರಮನೂ ಆದ ಋತುಪರ್ಣರಾಜನೂ ಸಹ ಅಲ್ಲಿ ಬೇರೆಯಾವ ರಾಜನನ್ನಾಗಲೀ ಅಥವಾ ರಾಜಪುತ್ರನನ್ನಾಗಲೀ ಕಾಣಲಿಲ್ಲ.

ನೈವ ಸ್ವಯಂವರಕಥಾಂ ನ ಚ ವಿಪ್ರಸಮಾಗಮಮ್ ।
ನ ಚಾನ್ಯಂ ಕಂಚಿದಾರಂಭಂ ಸ್ವಯಂವರವಿಧಿಂ ಪ್ರತಿ ॥೨೩॥

ಅಲ್ಲಿ ಸ್ವಯಂವರವಾರ್ತೆಯನ್ನಾಗಲೀ ಬ್ರಾಹ್ಮಣರ ಸಮಾಗಮವನ್ನಾಗಲೀ ಅಥವಾ ಸ್ವಯಂವರದ ವಿಧಾನವನ್ನು ಕುರಿತು ಯಾವುದೇ ಸಿದ್ಧತೆಯನ್ನಾಗಲೀ ಅಲ್ಲಿ ಅವನು ಕಾಣಲಿಲ್ಲ.

ತತೋ ವಿಗಣಯನ್ ರಾಜಾ ಮನಸಾ ಕೋಸಲಾಧಿಪಃ ।
ಆಗತೋಽಸ್ಮೀತ್ಯುವಾಚೈನಂ ಭವಂತಮಭಿವಾದಕಃ ॥೨೪॥

ಆಗ ಕೋಸಲಾಧಿಪತಿಯಾದ ಋತುಪರ್ಣನು ಮನಸ್ಸಿನಲ್ಲಿ ಅದಾವುದನ್ನೂ ಚಿಂತಿಸದೆ ನಿನಗೆ ನಮಸ್ಕಾರವನ್ನುಮಾಡಲು ಬಂದಿದ್ದೇನೆ ಎಂದು ಭೀಮರಾಜನನ್ನು ಕುರಿತು ಹೇಳಿದನು.

ರಾಜಾಪಿ ಚ ಸ್ವಯಂ ಭೀಮೋ ಮನಸಾ ಸಮಚಿಂತಯತ್ ।
ಅಧಿಕಂ ಯೋಜನಶತಂ ತಸ್ಯಾಗಮನಕಾರಣಮ್ ।
ಗ್ರಾಮಾನ್ ಬಹೂನತಿಕ್ರಮ್ಯ ನಾಧ್ಯಗಚ್ಛದ್ಯಥಾತಥಮ್ ॥೨೫॥

ಭೀಮರಾಜನೂ ಸಹ ಮನಸ್ಸಿನಲ್ಲಿಯೇ ಅವನ ಆಗಮನದ ಕಾರಣವನ್ನು ಚಿಂತಿಸಿದನು. ಅನೇಕ ಗ್ರಾಮಗಳನ್ನು ದಾಟಿ ನೂರುಯೋಜನಗಳಿಗಿಂತಲೂ ಹೆಚ್ಚು ಪ್ರಯಾಣಮಾಡಿ ಬರುವುದಕ್ಕೆ ಸರಿಯಾದ ಕಾರಣವನ್ನು ಅವನು ತಿಳಿಯಲಿಲ್ಲ.

ಅಲ್ಪಕಾರ್ಯಂ ವಿನಿರ್ದಿಷ್ಟಂ ತಸ್ಯಾಗಮನಕಾರಣಮ್ ।
ನೈತದೇವಂ ಸಂಭವತಿ ತಂ ಸತ್ಕೃತ್ಯ ವ್ಯಸರ್ಜಯತ್ ॥೨೬॥

ವಿಶ್ರಾಮ್ಯತಾಮಿತಿ ತದಾ ಶ್ರಾಂತೋಽಸೀತಿ ಪುನಃಪುನಃ ।

ಅವನು ತಾನು ಇಲ್ಲಿಗೆ ಬಂದ ಉದ್ದೇಶವನ್ನು ತಿಳಿಸಲು ಒಂದು ಸಣ್ಣ ಕಾರ್ಯವನ್ನು ಹೇಳಿದ್ದಾನೆ. ಅದು ಹೀಗಿರಲು ಸಾಧ್ಯವಿಲ್ಲ. ಎಂದು ಯೋಚಿಸಿ ಅವನನ್ನು ಸತ್ಕರಿಸಿ ಮತ್ತೆಮತ್ತೆ ಬಹಳದಣಿದಿದ್ದೀರಿ ವಿಶ್ರಮಿಸಿಕೊಳ್ಳಿ ಎಂದು ಹೇಳಿ ಅವನನ್ನು ಬೀಳ್ಕೊಟ್ಟನು.

ಸ ಸತ್ಕೃತಃ ಪ್ರಹೃಷ್ಟಾತ್ಮಾ ಪ್ರೀತಃ ಪ್ರೀತೇನ ಪಾರ್ಥಿವಃ ।
ರಾಜಪ್ರೇಷ್ಯೈರನುಗತೋ ದಿಷ್ಟಂ ವೇಶ್ಮ ಸಮಾವಿಶತ್ ॥೨೭॥

ತನ್ನ ಆಗಮನದಿಂದ ಸಂತೋಷಗೊಂಡ ಭೀಮನಿಂದ ಸತ್ಕೃತನಾಗಿ ಸಂತೋಷಗೊಂಡ ಋತುಪರ್ಣನು ರಾಜಸೇವಕರಿಂದ ಹಿಂಬಾಲಿಸಲ್ಪಟ್ಟು ತನ್ನ ನಿರ್ದಿಷ್ಟವಾದ ವಾಸಸ್ಥಾನಕ್ಕೆ ಹೋದನು.

ಋತುಪರ್ಣೋ ಗತೋ ರಾಜಾ ವಾರ್ಷ್ಣೇಯಸಹಿತಸ್ತದಾ ।
ಬಾಹುಕೋ ರಥಮಾದಾಯ ರಥಶಾಲಾಮುಪಾಗಮತ್ ॥೨೮॥

ಋತುಪರ್ಣರಾಜನು ವಾರ್ಷ್ಣೇಯನ ಜೊತೆಯಲ್ಲಿ ಹೋದಮೇಲೆ ಬಾಹುಕನು ರಥವನ್ನು ರಥಶಾಲೆಯ ಸಮೀಪಕ್ಕೆ ತೆಗೆದುಕೊಂಡು ಬಂದನು.

ಸ ಮೋಕ್ಷಯಿತ್ವಾ ತಾನಶ್ವಾನ್ ಪರಿಚರ್ಯ ಯಥಾವಿಧಿ ।
ಸ್ವಯಂ ಚೈತಾನ್ ಸಮಾಶ್ವಾಸ್ಯ ರಥೋಪಸ್ಥ ಉಪಾವಿಶತ್ ॥೨೯॥

ಅವನು ಆ ಕುದುರೆಗಳನ್ನು ಬಿಚ್ಚಿ ಶಾಸ್ತ್ರವಿಧಾನದಂತೆ ಅವುಗಳನ್ನು ಉಪಚರಿಸಿ ತಾನೇ ಸ್ವತಃ ಅವುಗಳಿಗೆ ಸಮಾಧಾನವನ್ನು ಮಾಡಿ ರಥಪೀಠದಲ್ಲಿ ಕುಳಿತನು.

ದಮಯಂತೀ ತು ಶೋಕಾರ್ತಾ ದೃಷ್ಟ್ವಾ ಭಾರ್ಗವಸ್ತರಿಂ ನೃಪ ।
ಸೂತಪುತ್ರಂ ಚ ವಾರ್ಷ್ಣೇಯಂ ಬಾಹುಕಂ ಚ ತಥಾವಿಧಮ್ ॥೩೦॥

ಚಿಂತಯಾಮಾಸ ವೈದರ್ಭೀ ಕಸ್ಯೈಷ ರಥನಿಃಸ್ವನಃ ।
ನಳಸ್ಯೇವ ಮಹಾನಾಸೀನ್ನ ಪಶ್ಯಾಮಿ ಚ ನೈಷಧಮ್ ॥೩೧॥

ಶೋಕಾರ್ತಳಾದ ದಮಯಂತಿಯು ಋತುಪರ್ಣರಾಜನನ್ನೂ ಸೂತಪುತ್ರನಾದ ವಾರ್ಷ್ಣೇಯನನ್ನೂ ಮತ್ತು ಅಂತಹ ವೇಶದಲ್ಲಿದ್ದ ಬಾಹುಕನನ್ನೂ ನೋಡಿ ನಳನ ರಥದ

ಘೋಷದಂತೆ ಇದ್ದ ಈ ರಥಘೋಷವು ಯಾರದು? ನಳನ ರಥಘೋಷದಂತೆ ಇದ್ದಿತು. ಆದರೆ ನಾನು ನಳನನ್ನು ಕಾಣುತ್ತಿಲ್ಲ. ಎಂದು ಚಿಂತಿಸಿದಳು.

ವಾರ್ಷ್ಣೇಯೇನ ಭವೇನ್ನೂನಂ ವಿದ್ಯಾ ಸೈವೋಪಪಾದಿತಾ ।
ತೇನಾಸ್ಯ ರಥನಿರ್ಘೋಷೋ ನಳಸ್ಯೇವ ಮಹಾನಭೂತ್ ॥೩೨॥

ಬಹುಶಃ ವಾರ್ಷ್ಣೇಯನು ಆ ನಳನ ವಿದ್ಯೆಯನ್ನೇ ಸಂಪಾದಿಸಿರಬಹುದು. ಆದ್ದರಿಂದ ಈ ರಥದ ನಿರ್ಘೋಷವು ನಳರಥದ ನಿರ್ಘೋಷದಂತೆಯೇ ದೊಡ್ಡದಾಗಿದ್ದಿತು.

ಅಹೋಸ್ವಿದ್ ಋತುಪರ್ಣೋಽಪಿ ಯಥಾ ರಾಜಾ ನಳಸ್ತಥಾ ।
ತಥಾಽಯಂ ರಥನಿರ್ಘೋಷೋ ನೈಷಧಸ್ಯೇವ ಲಕ್ಷ್ಯತೇ ॥೩೩॥

ಅಥವಾ ಋತುಪರ್ಣನು ಸಹ ನಳನಂತೆಯೇ ಆ ವಿದ್ಯೆಯನ್ನುಕಲಿತಿರಬಹುದು. ಆದ್ದರಿಂದ ಈ ರಥನಿರ್ಘೋಷವು ನಳನ ರಥನಿರ್ಘೋಷದಂತೆಯೇ ಇದೆ.

ಏವಂ ಚ ತರ್ಕಯಿತ್ವಾ ತು ದಮಯಂತೀ ವಿಶಾಂಪತೇ ।
ದೂತೀಂ ಪ್ರಸ್ಥಾಪಯಾಮಾಸ ನೈಷಧಾನ್ವೇಷಣೇ ನೃಪ ॥೩೪॥

ಹೀಗೆ ಊಹಿಸಿ ಎಲೈ ರಾಜನೇ ದಮಯಂತಿಯು ತನ್ನ ದೂತಿಯನ್ನು ನಳನನ್ನು ಹುಡುಕುವ ಉದ್ದೇಶದಿಂದ ಬಾಹುಕನ ಎಡೆಗೆ ಕಳುಹಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಯೋಪಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೆಂಟನೆಯ ಅಧ್ಯಾಯ

(ಕೇಶಿನಿ ಬಾಹುಕರ ಸಂವಾದ)

### ದಮಯಂತೀ

ಗಚ್ಚ ಕೇಶಿನಿ ಜಾನೀಹಿ ಕ ಏಷ ರಥಸಾರಥಿಃ ।
ಉಪವಿಷ್ಟೋ ರಥೋಪಸ್ಥೇ ವಿಕೃತೋ ಹ್ರಸ್ವ ಬಾಹುಕಃ ॥೧॥

ಅಭ್ಯೇತ್ಯ ಕುಶಲಂ ಭದ್ರೇ ಮೃದುಪೂರ್ವಂ ಸಮಾಹಿತಾ ।
ಪೃಚ್ಛೇಥಾಃ ಪುರುಷಂ ಹ್ಯೇನಂ ಯಥಾತತ್ತ್ವಮನಿಂದಿತೇ ॥೨॥

ಎಲೌ ಕೇಶಿನಿಯೇ, ಈ ವಿಕೃತ ಶರೀರವುಳ್ಳವನೂ ಹ್ರಸ್ವಬಾಹುವುಳ್ಳವನೂ ಆದ ರಥಸಾರಥಿಯು ರಥಪೀಠದಲ್ಲಿ ಕುಳಿತಿದ್ದಾನಷ್ಟೇ. ಶುಭಳೇ, ನೀನು ಅವನ ಬಳಿಗೆ ಹೋಗಿ ಸಮಾಧಾನದಿಂದ ಮೃದುವಾಗಿ ಮಾತನಾಡಿ ಎಲೌ ಅವನು ಯಾರೆಂದು ಸರಿಯಾಗಿ ಕೇಳಿ ತಿಳಿ.

ಅತ್ರ ಮೇ ಮಹತೀ ಶಂಕಾ ಭವೇದೇಷ ನಳೋ ನೃಪಃ ।
ತಥಾ ಮನಸಿ ಮೇತುಷ್ಟಿರ್ಹೃದಯಸ್ಯ ಚ ನಿರ್ವೃತಿಃ ॥೩॥

ಇವನು ನಳನಿರಬಹುದೆಂದು ನನಗೆ ದೊಡ್ಡ ಶಂಕೆಯಿದೆ. ಹಾಗೆ ಮನಸ್ಸಿನಲ್ಲಿ ತೃಪ್ತಿಯೂ ಮತ್ತು ಹೃದಯದಲ್ಲಿ ಆನಂದವೂ ಉಂಟಾಗುತ್ತಿದೆ.

ಬ್ರೂಯಾಶ್ಚೈನಂ ಕಥಾಂತೇ ತ್ವಂ ಪರ್ಣಾದವಚನಂ ಯಥಾ ।
ಪ್ರತಿವಾಕ್ಯಂ ಚ ಸುಶ್ರೋಣಿ ಬುದ್ಧ್ಯೇಥಾಸ್ತ್ವಮನಿಂದಿತೇ ॥೪॥

ಎಲೌ ಸುಶ್ರೋಣಿಯೇ, ಸ್ವಲ್ಪಮಾತನಾಡಿದ ಮೇಲೆ ನೀನು ಪರ್ಣಾದವಚನಗಳನ್ನು ಅವನ ಎದುರಿಗೆ ಹೇಳು ಅನಿಂದಿತೆಯೇ ಪ್ರತಿವಾಕ್ಯದಲ್ಲಿಯೂ ಅವನ ಪ್ರತಿಕ್ರಿಯೆಯನ್ನು ಗಮನಿಸು.

ಏವಂ ಸಮಾಹಿತಾ ಗತ್ವಾ ದೂತೀ ವಾಕ್ಯಮಥಾಬ್ರವೀತ್ ।
ದಮಯಂತ್ಯಪಿ ಕಲ್ಯಾಣೀ ಪ್ರಾಸಾದಸ್ಥಾನ್ವವೈಕ್ಷತ ॥೫॥

ಹೀಗೆ ಸಮಾಧಾನ ಪಡಿಸಸ್ಪಟ್ಟ ದೂತಿಯು ಬಾಹುಕನ ಬಳಿಗೆ ಹೋಗಿ ಅವನನ್ನು ಮಾತನಾಡಿಸಿದಳು. ಕಲ್ಯಾಣಿಯಾದ ದಮಯಂತಿಯೂ ಸಹ ಉಪ್ಪರಿಗೆಯನ್ನು ಏರಿ ಅವರನ್ನು ನೋಡಿದಳು.

ಸ್ವಾಗತಂ ತೇ ಮನುಷ್ಯೇಂದ್ರ ಕುಶಲಂ ತೇ ಬ್ರವೀಮ್ಯಹಮ್ ।
ದಮಯಂತ್ಯಾ ವಚಃ ಸೌಮ್ಯ ನಿಬೋಧ ಭರತರ್ಷಭ ॥೬॥

ಮನುಷ್ಯೇಂದ್ರನೇ, ನಿನಗೆ ಸ್ವಾಗತ. ನಿನಗೆ ನಾನು ಕುಶಲವನ್ನು ಕೋರುತ್ತಿದ್ದೇನೆ. ಭರತರ್ಷಭನೇ ಸಜ್ಜನನೇ ದಮಯಂತಿಯ ಮಾತುಗಳನ್ನು ಕೇಳು.

ಕದಾ ವೈ ಪ್ರಸ್ಥಿತಾ ಯೂಯಂ ಕಿಮರ್ಥಮಿಹ ಚಾಗತಾಃ ।
ತತ್ತ್ವಂ ಬ್ರೂಹಿ ಯಥಾನ್ಯಾಯಂ ವೈದರ್ಭೀ ಶ್ರೋತುಮಿಚ್ಛತಿ ॥೭॥

ನೀವು ಯಾವಾಗ ಹೊರಟಿರಿ ಏತಕ್ಕಾಗಿ ಇಲ್ಲಿಗೆ ಬಂದಿರಿ? ನಿಜವನ್ನು ಹೇಳು. ದಮಯಂತಿಯು ಕೇಳಲು ಬಯಸುತ್ತಾಳೆ.(ಎಂದು ಹೇಳಿದಳು.)

ಶ್ರುತಃ ಸ್ವಯಂವರೋ ರಾಜ್ಞಾ ಕೌಸಲೇನ ಯಶಸ್ವಿನಾ ।
ದ್ವಿತೀಯೋ ದಮಯಂತ್ಯಾ ವೈ ಶ್ವೋಭೂತ ಇತಿ ಭಾಮಿನಿ ॥೮॥

ಶ್ರುತ್ವಾ ತಂ ಪ್ರಸ್ಥಿತೋ ರಾಜಾ ಶತಯೋಜನಯಾಯಿಭಿಃ ।
ಹಯೈರ್ವಾತಜವೈರ್ಮುಖ್ಯೈರಹಮಸ್ಯ ಚ ಸಾರಥಿಃ ॥೯॥

ಕೀರ್ತಿಶಾಲಿಯಾದ ಕೋಸಲಾಧಿಪತಿಯಾದ ಋತುಪರ್ಣನು ನಾಳೆಯ ದಿವಸ ದಮಯಂತಿಯ ಎರಡನೆಯ ಸ್ವಯಂವರವೆಂಬ ವಾರ್ತೆಯನ್ನು ಕೇಳಿದನು. ಎಲೌ ಭಾಮಿನಿಯೇ ಅದನ್ನು ಕೇಳಿ ರಾಜನು ನೂರು ಯೋಜನ ಹೋಗಬಲ್ಲ ವಾಯುವೇಗವುಳ್ಳ ಅಶ್ವಗಳನ್ನು ಹೂಡಿದ ರಥದಲ್ಲಿ ಇಲ್ಲಿಗೆ ಬಂದಿದ್ದಾನೆ. ನಾನು ಅವನ ಸಾರಥಿ(ಎಂದು ಬಾಹುಕನು ಹೇಳಿದನು.)

ಕೇಶಿನೀ

ಅಥ ಯೋಽಸೌ ತೃತೀಯೋ ವಃ ಸ ಕೃತಃ ಕಸ್ಯ ವಾ ಪುನಃ ।
ತ್ವಂ ಚ ಕಸ್ಯ ಕುತಶ್ಚೇದಂ ತ್ವಯಿ ಕರ್ಮ ಸಮಾಹಿತಮ್ ॥೧೦॥

ನಿಮ್ಮ ಜೊತೆಯಲ್ಲಿದ್ದ ಮೂರನೆಯನಾದ ವ್ಯಕ್ತಿಯು ಎಲ್ಲಿಂದ ಬಂದಿದ್ದಾನೆ ಮತ್ತು ಅವನು ಯಾರ ಪುತ್ರ ನೀನು ಸಹಯಾರ ಪುತ್ರ ಎಲ್ಲಿಂದ ಬಂದಿದ್ದೀಯೆ? ನೀನು ಏಕೆ ಈ ಸಾರಥ್ಯವನ್ನು ಮಾಡುತ್ತಿದ್ದೀಯೆ?

ಬಾಹುಕಃ

ಪುಣ್ಯಶ್ಲೋಕಸ್ಯ ವೈ ಸೂತೋ ವಾಷ್ಣೇ ರ್ಯಾಯ ಇತಿ ವಿಶ್ರುತಃ ।
ಸ ನಳೇ ವಿದ್ಯುತೇ ಭದ್ರೇ ಭಾರ್ಗಸ್ತರಿಮುಪಸ್ಥಿತಃ ॥೧೧॥

ಮೂರನೆಯ ವ್ಯೆಕ್ತಿಯು ಪುಣ್ಯಶ್ಲೋಕನಾದ ನಳನ ಸೂತ. ಅವನು ವಾರ್ಷ್ಣೇಯನೆಂದು ಪ್ರಖ್ಯಾತನಾದ್ದಾನೆ. ಭದ್ರೆಯೇ ನಳನು ಓಡಿಹೋದಮೇಲೆ ಅವನು ಋತುಪರ್ಣನನ್ನು ಆಶ್ರಯಿಸಿದ್ದಾನೆ.

ಅಹಮಪ್ಯನ್ನಕುಶಲಃ ಸೂತತ್ವೇ ಚ ವಿನಿಷ್ಠಿತಃ ।
ಋತುಪರ್ಣೇನ ಸಾರಥ್ಯೇ ಭೋಜನೇ ಚ ವೃತಃ ಸ್ವಯಮ್ ॥೧೨॥

ನಾನು ಸಹ ಪಾಕವನ್ನು ಮಾಡುವುದರಲ್ಲಿಯೂ ಮತ್ತು ಸೂತಕಾರ್ಯದಲ್ಲಿಯೂ ಪರಿಣತನಾದವನು. ಋತುಪರ್ಣನು ತಾನಾಗಿಯೇ ನನ್ನನ್ನು ತನ್ನ ಸಾರಥ್ಯದಲ್ಲಿಯೂ ಮತ್ತು ಭೋಜನದಲ್ಲಿಯೂ ನಿಯೋಜಿಸಿದ್ದಾನೆ.

ಕೇಶಿನೀ

ಅಥ ಜಾನಾತಿ ವಾಷ್ಣೇ ರ್ಯಾಯಃ ಕ್ವನು ರಾಜಾ ಗತೋ ನಳಃ ।
ಕಥಂ ಚ ತ್ವಯಿ ವೈ ತೇನ ಕಥಿತಂ ಸ್ಯಾತ್ ತು ಬಾಹುಕ ॥೧೩॥

ಆ ವಾರ್ಷ್ಣೇಯನಿಗಾದರೂ ನಳಮಹಾರಾಜನು ಎಲ್ಲಿಗೆ ಹೋದನೆಂದು ತಿಳಿದಿದಿಯೇ? ಬಾಹುಕನೇ ನಿನಗಾದರೂ ಆ ವಾರ್ಷ್ಣೇಯನು ಈ ವಿಷಯವನ್ನು ಹೇಗೆ ತಿಳಿಸಿದ್ದಾನೆ?

ಬಾಹುಕಃ

ಇಹೈವ ಪುತ್ರೌ ನಿಕ್ಷಿಪ್ಯ ನಳಸ್ಯ ಶುಭಕರ್ಮಣಃ ।
ಗತಸ್ತತೋ ಯಥಾಕಾಮಂ ನೈಷ ಜಾನಾತಿ ನೈಷಧಮ್ ॥೧೪॥

ಶುಭಕರ್ಮನಾದ ನಳನ ಇಬ್ಬರು ಮಕ್ಕಳನ್ನು ಇಲ್ಲಿಯೇ ಬಿಟ್ಟು ವಾರ್ಷ್ಣೇಯನು ತನಗೆ ಇಷ್ಟ ಬಂದಂತೆ ಹೊರಟುಹೋದನು. ಅವನಿಗೆ ನಳನ ಪರಿಸ್ಥಿತಿಯು ತಿಳಿದಿಲ್ಲ.

ನ ಚಾನ್ಯಃ ಪುರುಷಃ ಕಶ್ಚಿತ್ ನಳಂ ವೇತ್ತಿ ಯಶಸ್ವಿನಿ ।
ಗೂಢಶ್ಚರತಿ ಲೋಕೇಶಸ್ಮಿನ್ ನಷ್ಟರೂಪೋ ಮಹೀಪತಿಃ ॥೧೫॥

ಯಶಸ್ವಿನಿಯೇ ಬೇರೆ ಯಾವ ಪುರುಷನೂ ಈ ನಳನನ್ನು ತಿಳಿದಿಲ್ಲ. ಆ ರಾಜನು ತನ್ನ ರೂಪವನ್ನು ಕಳೆದುಕೊಂಡು ಈ ಲೋಕದಲ್ಲಿ ಯಾರಿಗೂ ತಿಳಿಯದಂತೆ ಸಂಚರಿಸುತ್ತಿದ್ದಾನೆ.

ಆತ್ಮೈವ ತು ನಳಂ ವೇತ್ತಿ ಯಾ ಚ ಸಾ ತದನಂತರಾ ।
ನ ಚೈವ ತಾನಿ ಲಿಂಗಾನಿ ನಳಂ ಶಂಸಂತಿ ಕರ್ಹಿಚಿತ್ ॥೧೬॥

ನಳನು ತಾನೇ ತನ್ನನ್ನು ತಿಳಿದಿದ್ದಾನೆ. ನಳನ ಆಂತರಿಕವಾದ ಬುದ್ಧಿಯು ನಳನನ್ನು ತಿಳಿದಿದೆ. ನಳನ ಚಿಹ್ನೆಗಳು ಅವನು ನಳನೆಂದು ಯಾವ ರೀತಿಯಿಂದಲೂ ತೋರಿಸಿಕೊಡುವುದಿಲ್ಲ.

ಕೇಶಿನೀ

ಯೋಽಸಾವಯೋಧ್ಯಾಂ ಗತವಾನ್ ಪ್ರಥಮಂ ಬ್ರಾಹ್ಮಣಸ್ತದಾ ।
ಇಮಾನಿ ನಾರೀವಾಕ್ಯಾನಿ ಕಥಯಾನಃ ಪುನಃ ಪುನಃ ॥೧೭॥

ಮೊದಲು ಅಯೋಧ್ಯೆಗೆ ಬಂದ ಬ್ರಾಹ್ಮಣನು ಈ ನಾರೀ ವಾಕ್ಯಗಳನ್ನು ಪುನಃಪುನಃ ಹೇಳುತ್ತಿದ್ದನಷ್ಟೆ.

ಕ್ವನು ತ್ವಂ ಕಿತವಚ್ಛಿತ್ತ್ವಾ ವಸ್ತ್ರಾರ್ಧಂ ಪ್ರಸ್ಥಿತೋ ಮಮ ।
ಉತ್ಸೃಜ್ಯ ವಿಪಿನೇ ಸುಪ್ತಾಮನುರಕ್ತಾಂ ಪ್ರಿಯಾಂ ಪ್ರಿಯ ॥೧೮॥

ಎಲೈ ಪ್ರಿಯನೇ ವಂಚಕನೇ ನನ್ನ ಅರ್ಧವಸ್ತ್ರವನ್ನು ಹರಿದುಕೊಂಡು ನಿನ್ನಲ್ಲಿ ಅನುರಕ್ತಳಾದ ನಿದ್ರಿಸುತ್ತಿದ್ದ ನನ್ನನ್ನು ಕಾಡಿನಲ್ಲಿ ಬಿಟ್ಟು ಎಲ್ಲಿಗೆ ಹೋದೆ?

ಸಾ ವೈ ಯಥಾ ಸಮಾದಿಷ್ಟಾ ತತ್ರಾऽऽಸ್ತೇ ತ್ವತ್ಪ್ರಿಯೈಷಿಣೀ ।
ದಹ್ಯಮಾನಾ ದಿವಾರಾತ್ರಂ ವಸ್ತ್ರಾರ್ಧೇನಾಭಿಸಂವೃತಾ ॥೧೯॥

ಅವಳಾದರೋ ನಿನ್ನ ಆದೇಶದಂತೆ ನಿನ್ನ ಪ್ರಿಯವನ್ನೇ ಬಯಸುತ್ತಾ ಅರ್ಧವಸ್ತ್ರದಿಂದ ಆವೃತಳಾಗಿ ಹಗಲೂ ರಾತ್ರಿಯೂ ದುಃಖದಿಂದ ಬೇಯುತ್ತಾ ನೀನು ಹೇಳಿದ ಕಡೆಯಲ್ಲಿಯೇ ಇದ್ದಾಳೆ.

ತಸ್ಯಾ ರುದಂತ್ಯಾಃ ಸತತಂ ತೇನ ದುಃಖೇನ ಪಾರ್ಥಿವ ।
ಪ್ರಸಾದಂ ಕುರು ವೈ ವೀರ ಪ್ರತಿವಾಕ್ಯಂ ಪ್ರಯಚ್ಛ ಚ ॥೨೦॥

ಎಲೈ ರಾಜನೇ ಯಾವಾಗಲೂ ದುಃಖದಿಂದ ಅಳುತ್ತಿರುವ ಅವಳಿಗೆ ಅನುಗ್ರಹವನ್ನುಮಾಡು. ಎಲೈ ವೀರನೇ ಉತ್ತರವನ್ನು ನೀಡು.

ತಸ್ಯಾಸ್ತತ್ಪ್ರಿಯಮಾಖ್ಯಾನಂ ಪ್ರಬ್ರವೀಹಿ ಮಹಾಮತೇ ।
ತದೇವ ವಾಕ್ಯಂ ವೈದರ್ಭೀ ಶ್ರೋತುಮಿಚ್ಛತ್ಯನಿಂದಿತಾ ॥೨೧॥

ಮಹಾಮೇಧಾವಿಯೇ ಅವಳಿಗೆ ಪ್ರಿಯವಾದ ಆ ಮಾತುಗಳನ್ನು ಹೇಳು. ಅನಿಂದಿತಳಾದ ವೈದರ್ಭಿಯು ಆ ಮಾತುಗಳನ್ನೇ ಕೇಳಲು ಇಷ್ಟಪಡುತ್ತಾಳೆ.

ಏತಚ್ಛ್ರುತ್ವಾ ಪ್ರತಿವಚಸ್ತಸ್ಯ ದತ್ತಂ ತ್ವಯಾ ಕಿಲ ।
ಯತ್ಪುರಾ ತತ್ಪುನಸ್ತ್ವತ್ತೋ ವೈದರ್ಭೀ ಶ್ರೋತುಮಿಚ್ಛತಿ ॥೨೨॥

ಎಲೈ ಬಾಹುಕನೇ ಈ ನಾರೀವಾಕ್ಯಗಳನ್ನು ಕೇಳಿ ನೀನು ಉತ್ತರವನ್ನು ಕೊಟ್ಟೆಯಷ್ಟೆ? ಆ ಉತ್ತರವನ್ನು ದಮಯಂತಿಯು ಇನ್ನೊಮ್ಮೆ ನಿನ್ನಿಂದ ಕೇಳಲು ಬಯಸುತ್ತಾಳ.

## ಬೃಹದಶ್ವಃ

ಏವಮುಕ್ತಸ್ಯ ಕೇಶಿನ್ಯಾ ನಳಸ್ಯ ಕುರುನಂದನ ।
ಹೃದಯಂ ವ್ಯಥಿತಂ ಚಾಸೀದ್ ಅಶ್ರುಪೂರ್ಣೇ ಚ ಲೋಚನೇ ॥೨೩॥

ಎಲೈ ಕುರುನಂದನನೇ ಕೇಶಿನಿಯಿಂದ ಹೀಗೆ ಹೇಳಲ್ಪಟ್ಟ ನಳನ ಹೃದಯವು ದುಃಖದಿಂದ ತುಂಬಿತು. ಅವನ ಕಣ್ಣುಗಳು ಕಣ್ಣೀರಿನಿಂದ ತುಂಬಿದವು.

ಸ ನಿಗೃಹ್ಯಾತ್ಮನೋ ದುಃಖಂ ದಹ್ಯಮಾನೋ ಮಹೀಪತಿಃ ।
ಬಾಷ್ಪಸಂದಿಗ್ಧಯಾ ವಾಚಾ ಪುನರೇವೇದಮಬ್ರವೀತ್ ॥೨೪॥

ಆ ರಾಜನು ತನ್ನ ದುಃಖವನ್ನು ನಿಗ್ರಹಿಸಿಕೊಂಡು ಮನಸ್ಸಿನಲ್ಲಿಯೇ ದುಃಖದಿಂದ ಬೇಯುತ್ತಾ ಬಾಷ್ಪಸಂದಿಗ್ಧವಾದ ಮಾತುಗಳಿಂದ ಪುನಃ ಹೀಗೆ ಮಾತನಾಡಿದನು.

ಬಾಹುಕಃ

ವೈಷಮ್ಯಮಪಿ ಸಂಪ್ರಾಪ್ತಾ ಗೋಪಯಂತಿ ಕುಲಸ್ತ್ರಿಯಃ ।
ಆತ್ಮಾನಮಾತ್ಮನಾ ಸತ್ಯೋ ಜಿತಃ ಸ್ವರ್ಗೋ ನ ಸಂಶಯಃ ॥೨೫॥

ಕುಲಸ್ತ್ರೀಯರಾದ ಸಾಧ್ವಿಯರು ಸಂಕಟದಲ್ಲಿ ಸಿಲುಕಿದರೂ ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಾರೆ. ಅವರು ಸ್ವರ್ಗವನ್ನು ಜಯಸಿದ್ದಾರೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ರಹಿತಾ ಭರ್ತೃಭಿಶ್ಚಾಪಿ ನ ಕ್ರುಧ್ಯಂತಿ ಕದಾಚನ ।
ಪ್ರಾಣಾಂಶ್ಚಾರಿತ್ರಕವಚಾ ಧಾರಯಂತೀಹ ಸತ್ಸ್ತ್ರಿಯಃ ॥೨೬॥

ಅವರು ತಮ್ಮ ಪತಿಗಳಿಂದ ವಿಯೋಗವನ್ನು ಪಡೆದರೂ ಎಂದೂ ಸಿಟ್ಟುಮಾಡುವುದಿಲ್ಲ. ಸಾಧ್ವಿಸ್ತ್ರೀಯರು ತಮ್ಮ ಶೀಲದಿಂದಲೇ ರಕ್ಷಿತರಾಗಿ ಇಲ್ಲಿ ಪ್ರಾಣವನ್ನು ಧರಿಸಿರುತ್ತಾರೆ.

ವಿಷಮಸ್ಥೇನ ಮೂಢೇನ ಪರಿಭ್ರಷ್ಟಸುಖೇನ ಚ ।
ಯತ್ ಸಾ ತೇನ ಪರಿತ್ಯಕ್ತಾ ತತ್ರ ನ ಕ್ರೋದ್ಧುಮರ್ಹತಿ ॥೨೭॥

ಸಂಕಟಕ್ಕೆ ಸಿಲುಕಿದವನೂ ಮೂಢನೂ ಸುಖಭ್ರಷ್ಟನೂ ಆದ ಅವನಿಂದ ಪರಿತ್ಯಕ್ತಳಾದ ಅವಳು ಆ ವಿಷಯದಲ್ಲಿ ಕೋಪವನ್ನು ಮಾಡಬಾರದು.

ಪ್ರಾಣಯಾತ್ರಾಂ ಪರಿಪ್ರೇಪ್ಸೋಃ ಶಕುನೈರ್ಹೃತವಾಸಸಃ ।
ಆಧಿಭಿರ್ದಹ್ಯಮಾನಸ್ಯ ಶ್ಯಾಮಾ ನ ಕ್ರೋದ್ಧುಮರ್ಹತಿ ॥೨೮॥

ಶರೀರಯಾತ್ರೆಯನ್ನು ಪರಿರಕ್ಷಿಸಲು ಪ್ರಯತ್ನಪಟ್ಟುಹೊಂದ್ದಿದ್ದ ವಸ್ತ್ರವನ್ನು ಪಕ್ಷಿಗಳಿಂದ ಕಳೆದುಕೊಂಡು ಮನೋವ್ಯಥೆಯಿಂದ ಬೆಂದುಹೋಗುತ್ತಿರುವ ಅವನ ಮೇಲೆ ಮಧ್ಯವಯಸ್ಸಿನ ಯುವತಿಯಾದ ಅವಳು ಕ್ರೋಧವನ್ನು ಮಾಡಬಾರದು.

ಸತೃತಾऽಸತೃತಾ ವಾऽಪಿ ಪತಿಂ ದೃಷ್ಟ್ವಾ ತಥಾಗತಮ್ ।
ಭ್ರಷ್ಟರಾಜ್ಯಂ ಶ್ರಿಯಾ ಹೀನಂ ಕ್ಷುಧಿತಂ ವ್ಯಸನಾಪ್ಲುತಮ್ ॥೨೯॥

ಸತ್ಕೃತಳಾಗಲಿ ಅಥವಾ ಇಲ್ಲದಿರಲಿ, ರಾಜ್ಯವನ್ನು ಕಳೆದುಕೊಂಡು ಸಂಪತ್ತಿನಿಂದ ಹೀನನಾಗಿ ಹಸಿವಿನಿಂದ ಬಳಲಿ ವ್ಯಸನದಲ್ಲಿ ಮುಳುಗಿಹೋದ ಅಂತಹ ಪತಿಯನ್ನು ನೋಡಿ ಎಂದೂ ಕ್ರೋಧವನ್ನು ಮಾಡಬಾರದು.

ಏವಂ ಬ್ರುವಾಣಸ್ತದ್ವಾಕ್ಯಂ ನಳಃ ಪರಮದುಃಖಿತಃ ।
ನ ಬಾಷ್ಪಮಶಕತ್ ಸೋಢುಂ ಪ್ರರುರೋದ ಚ ಭಾರತ ॥೩೦॥

ಎಲೈ ಭಾರತನೇ ಪರಮದುಃಖಿತನಾದ ನಳನು ಹೀಗೆ ಮಾತನಾಡುತ್ತಾ ತನ್ನ ಕಣ್ಣೀರನ್ನು ತಡೆಯಲು ಶಕ್ತನಾಗದೆ ಗಟ್ಟಿಯಾಗಿ ಅತ್ತನು.

ತತಃ ಸಾ ಕೇಶಿನೀ ಗತ್ವಾ ದಮಯಂತ್ಯೈ ನ್ಯವೇದಯತ್ ।
ತತ್ ಸರ್ವಂ ಕಥಿತಂ ಚೈವ ವಿಕಾರಂ ಚೈವ ಭಾಮಿನೀ ॥೩೧॥

ಅನಂತರ ಆ ಭಾಮಿನಿಯಾದ ಕೇಶಿನಿಯು ಹೋಗಿ ದಮಯಂತಿಗೆ ನಡೆದ ಎಲ್ಲಾ ವಿಷಯವನ್ನು ಮತ್ತು ಬಾಹುಕನ ಪ್ರತಿಕ್ರಿಯೆಯನ್ನು (ವಿಕಾರವನ್ನು) ತಿಳಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಷಷ್ಟಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

## ಅರವತ್ತೊಂಬತ್ತನೆಯ ಅಧ್ಯಾಯ

(ದಮಯಂತಿಯಿಂದ ಕೇಶಿನಿಯ ಮೂಲಕ ಬಾಹುಕನ ಪರೀಕ್ಷೆ)

### ಬೃಹದಶ್ವಃ

ದಮಯಂತೀ ತು ತಚ್ಛ್ರುತ್ವಾ ಭೃಶಂ ಶೋಕಪರಾಯಣಾ ।
ಶಂಕಮಾನಾ ನಳಂ ತಂ ವೈ ಕೇಶಿನೀಮಿದಮಬ್ರವೀತ್ ॥೧॥

ದಮಯಂತಿಯು ಆ ಮಾತುಗಳನ್ನು ಕೇಳಿ ಬಹಳ ಶೋಕದಿಂದ ಕೂಡಿದವಳಾಗಿ ಬಾಹುಕನು ನಳನೆಂದು ಶಂಕಿಸಿತ್ತಾ ಪುನಃ ಕೇಶಿನಿಯನ್ನು ಕುರಿತು ಹೀಗೆ ಮಾತಮಾಡಿದಳು.

ಗಚ್ಛ ಕೇಶಿನಿ ಭೂಯಸ್ತ್ವಂ ಪರೀಕ್ಷಾಂ ಕುರು ಬಾಹುಕೇ ।
ಅಬ್ರುವಾಣಾ ಸಮೀಪಸ್ಥಾ ಚರಿತಾನ್ಯಸ್ಯ ಲಕ್ಷಯ ॥೨॥

ಕೇಶಿನಿಯೆ ನೀನು ಮತ್ತೆ ಹೋಗಿ ಬಾಹುಕನ ಸಮೀಪದಲ್ಲಿ ಇದ್ದು ಏನೂ ಮಾತನ್ನಾಡದೆ ಅವನ ಚೇಷ್ಟೆಗಳನ್ನು ಗಮನಿಸಿ ಅವನನ್ನು ಗಮನಿಸು.

ಯದಾ ಚ ಕಿಂಚಿತ್ ಕುರ್ಯಾತ್ ಸ ಕಾರಣಂ ತತ್ರ ಭಾಮಿನಿ ।
ತತ್ರ ಸಂಚೇಷ್ಟಮಾನಸ್ಯ ಸಂಲಕ್ಷ್ಯಂ ತೇ ಹಿ ಚೇಷ್ಟಿತಮ್ ॥೩॥

ಎಲೌ ಭಾಮಿನಿಯೇ, ಅವನು ಏನು ಮಾಡಿದರೂ ಅದಕ್ಕೆ ಕಾರಣವನ್ನು ತಿಳಿ. ಮತ್ತು ಅವನು ಏನೇನು ಮಾಡುತ್ತಾನೆಂದು ಎಲ್ಲವನ್ನೂ ಗಮನಿಸು.

ನ ಚಾಸ್ಯ ಪ್ರತಿಬಂಧೇನ ದೇಯೋಽಗ್ನಿರಪಿ ಭಾಮಿನಿ ।
ಯಾಚತೇ ನ ಜಲಂ ದೇಯಂ ಸತ್ಯಮತ್ವರಮಾಣಯಾ ॥೪॥

ಭಾಮಿನಿಯೇ ಅವನು ಒತ್ತಾಯಮಾಡಿದರೂ ಅವನಿಗೆ ಅಗ್ನಿಯನ್ನು ಕೊಡಬಾರದು. ಮತ್ತು ಅವನು ಜಲವನ್ನು ಯಾಚಿಸಿದರೂ ಶೀಘ್ರವಾಗಿ ಅವನಿಗೆ ಜಲವನ್ನು ಕೊಡಬಾರದು.

ಏತತ್ ಸರ್ವಂ ಸಮೀಕ್ಷ್ಯ ತ್ವಂ ಚರಿತಂ ಮೇ ನಿವೇದಯ ।
ಯಚ್ಚಾನ್ಯದಪಿ ಪಶ್ಯೇಥಾಃ ತಚ್ಚಾಖ್ಯೇಯಂ ತ್ವಯಾ ಮಮ ॥೫॥

ಇವೆಲ್ಲವನ್ನೂ ಗಮನಿಸಿ ನನಗೆ ಅವನಚೇಷ್ಟೆಗಳನ್ನು ನಿವೇದಿಸು ಮತ್ತು ಬೇರೆ ಏನನ್ನು ನೋಡುತ್ತೀಯೋ ಅದನ್ನು ನನಗೆ ತಿಳಿಸಬೇಕು.

ದಮಯಂತ್ಯೈವಮುಕ್ತಾ ಸಾ ಜಗಾಮಾಥಾಶು ಕೇಶಿನೀ ।
ನಿಶಾಮ್ಯ ಚ ಹಯಜ್ಞಸ್ಯ ಲಿಂಗಾನಿ ಪುನರಾಗಮತ್ ॥೬॥

ದಮಯಂತಿಯಿಂದ ಹೀಗೆ ಹೇಳಲ್ಪಟ್ಟ ಆ ಕೇಶಿನಿಯು ಅವನಬಳಿಗೆ ಹೋಗಿ ಅಶ್ವವಿದ್ಯೆಯನ್ನು ಬಲ್ಲ ಅವನ ಚೇಷ್ಟೆಗಳನ್ನು ಗಮನಿಸಿ ಪುನಃ ದಮಯಂತಿಯ ಬಳಿಗೆ ಬಂದಳು.

ಸಾ ತತ್ ಸರ್ವಂ ಯಥಾವೃತ್ತಂ ದಮಯಂತ್ಯೈ ನ್ಯವೇದಯತ್ ।
ನಿಮಿತ್ತಂ ಯತ್ತದಾದಿಷ್ಟಂ ಬಾಹುಕೇ ದಿವ್ಯಮಾನುಷಮ್ ॥೭॥

ಅವಳು ತನಗೆ ಕೊಟ್ಟ ಆದೇಶಕ್ಕೆ ಅನುಗುಣವಾಗಿ ಬಾಹುಕನಲ್ಲಿ ದಿವ್ಯ ಮತ್ತು ಮಾನುಷ ಚೇಷ್ಟೆಗಳನ್ನು ಗಮನಿಸಿ ದಮಯಂತಿಗೆ ನಡೆದುದೆಲ್ಲವನ್ನೂ ಯಥಾರ್ಥವಾಗಿ ಹೇಳಿದಳು.

ದೃಢಂ ಶುಚ್ಯುಪಚಾರೋಽಸೌ ನ ಮಯಾ ಮಾನುಷಃ ಕ್ವಚಿತ್ ।
ದೃಷ್ಟಪೂರ್ವಃ ಶ್ರುತೋ ವಾಽಪಿ ದಮಯಂತಿ ತಥಾವಿಧಃ ॥೮॥

ಅವನು ದಿವ್ಯವಾದ ಸಲಕರಣೆಗಳಿಂದ ಕೂಡಿದವನು. ದಮಯಂತಿಯೇ ನಾನು ಅಂತಹ ಮನುಷ್ಯನನ್ನು ಹಿಂದೆ ನೋಡಲೂ ಇಲ್ಲ ಅಥವಾ ಕೇಳಲೂ ಇಲ್ಲ.

ಹ್ರಸ್ವಮಾಸಾದ್ಯ ಸಂಚಾರಂ ನಾಸೌ ವಿನಮತೇ ಕ್ವಚಿತ್ ।
ತಂ ತು ದೃಷ್ಟ್ವಾ ಯಥಾಸಂಗಮುತ್ಸರ್ಪತಿ ಯಥಾಸುಖಮ್ ।
ಸಂಕಟೇಽಪ್ಯಸ್ಯ ಸುಮಹದ್ ವಿವರಂ ಕುರುತೇಽಧಿಕಮ್ ॥೯॥

ಅವನು ಸಣ್ಣಬಾಗಿಲಿನ ಬಳಿಗೆ ಹೋದರೂ ಬಗ್ಗುವುದಿಲ್ಲ. ಅವನು ಹತ್ತಿರಕ್ಕೆ ಬಂದತಕ್ಷಣ ಅವನು ಸುಖವಾಗಿ ಪ್ರವೇಶಿಸುವಂತೆ ಬಾಗಿಲಿನ ಮೇಲ್ಭಾಗವೇ ಮೇಲಕ್ಕೆ ಹೊಗಿ ಅವನು ಪ್ರವೇಶಿಸುವುದಕ್ಕೆ ಬೇಕಾದಷ್ಟು ದೊಡ್ಡ ವಿವರವನ್ನು ಕೊಡುತ್ತದ.

ಋತುಪರ್ಣಸ್ಯ ಚಾರ್ಥಾಯ ಭೋಜನೀಯಮನೇಕಶಃ ।
ಪ್ರೇಷಿತಂ ತತ್ರ ಚಾಜ್ಞಾಯ ಮಾಂಸಂ ಸುಬಹು ಪಾಶವಮ್ ॥೧೦॥

ಋತುವರ್ಣನಿಗೆ ಅನೇಕ ವಿಧವಾದ ಭೋಜನವನ್ನು ತಯಾರಿಸಲು ಆಜ್ಞಾಪಿಸಲ್ಪಟ್ಟು ಅವನಿಗೆ ಅನೇಕ ವಿಧವಾದ ಪಶುಗಳಮಾಂಸವು ಕಳುಹಿಸಲ್ಪಟ್ಟಿತು.

ತಸ್ಯ ಪ್ರಕ್ಷಾಲನಾರ್ಥಾಯ ಕುಂಭಸ್ತತ್ರೋಪಕಲ್ಪಿತಃ ।
ಸ ತೇನಾವೇಕ್ಷಿತಃ ಕುಂಭಃ ಪೂರ್ಣ ಏವಾಭವತ್ ತದಾ ॥೧೧॥

ಅವನಿಗೆ ಅಲ್ಲಿ ಮಾಂಸವನ್ನು ತೊಳೆಯಲು ಒಂದು ಕುಂಭವು ಇಡಲ್ಪಟ್ಟಿತ್ತು. ಅವನು ನೋಡಿದ ತಕ್ಷಣವೇ ಆಕುಂಭವು ಜಲದಿಂದ ಪೂರ್ಣವಾಯಿತು.

ತತಃ ಪ್ರಕ್ಷಾಲನಂ ಕೃತ್ವಾ ಸಮಧಿಶ್ರಿತ್ಯ ಬಾಹುಕಃ ।
ತೃಣಮುಷ್ಟಿಂ ಸಮಾದಾಯ ಆವಿದ್ಧ್ಯೈನಂ ಸಮಾದಧತ್ ॥೧೨॥

ಅನಂತರ ಮಾಂಸವನ್ನು ತೊಳೆದು ಬಾಹುಕನು ಅದನ್ನು ಪಾತ್ರೆಯಲ್ಲಿ ಒಲೆಯಮೇಲೆ ಇಟ್ಟು ಒಂದು ಹಿಡಿಹುಲ್ಲನ್ನು ತೆಗೆದುಕೊಂಡು ಅವನ್ನು ಕೊಡವಿ ಒಲೆಯಲ್ಲಿಟ್ಟನು.

ಅಥ ಪ್ರಜ್ವಲಿತಸ್ತತ್ರ ಸಹಸಾ ಹವ್ಯವಾಹನಃ ।
ಏತಾನ್ಯದ್ಭುತಲಿಂಗಾನಿ ದೃಷ್ಟ್ವಾಽಹಂ ಭೃಶವಿಸ್ಮಿತಾ ॥೧೩॥

ಆಗ ತಕ್ಷಣ ಅಲ್ಲಿ ಅಗ್ನಿಯು ಪ್ರಜ್ವಲಿಸಿದನು. ಇಂತಹ ಅದ್ಭುತ ಚಿಹ್ನೆಗಳನ್ನು ನೋಡಿ ನಾನು ಬಹಳ ಆಶ್ಚರ್ಯಗೊಂಡೆನು.

ಚೇಷ್ಟಿತಾನಿ ವಿಶಾಲಾಕ್ಷಿ ಬಾಹುಕಸ್ಯ ವಿಶೇಷತಃ ।
ತಮದ್ಭುತತಮಂ ದೃಷ್ಟ್ವಾ ವಿಸ್ಮಿತಾಽಹಮಿಹಾಗತಾ ॥೧೪॥

ಎಲೌ ವಿಶಾಲಾಕ್ಷಿಯೇ ಆ ಬಾಹುಕನ ವಿಶೇಷವಾದ ಅತ್ಯದ್ಭುತವಾದ ಚೇಷ್ಟೆಗಳನ್ನೂ ಅವನನ್ನೂ ಗಮನಿಸಿ ವಿಸ್ಮಯಗೊಂಡು ನಾನು ಇಲ್ಲಿಗೆ ಬಂದೆನು.

ಅನ್ಯಚ್ಚ ತಸ್ಮಿನ್ ಸುಮಹದಾಶ್ಚರ್ಯಂ ಲಕ್ಷಿತಂ ಮಯಾ ।
ಯದಗ್ನಿಮಪಿ ಸಂಸ್ಪೃಶ್ಯ ನೈವ ದಹ್ಯತ್ಯಸೌ ಶುಭೇ ॥೧೫॥

ಅವನಲ್ಲಿ ಇನ್ನೊಂದು ಮಹಾಶ್ಚರ್ಯವನ್ನು ಗಮನಿಸಿದೆನು. ಎಲೌ ಶುಭಳಾದವಳೇ ಅವನು ಕೈಯಿಂದ ಅಗ್ನಿಯನ್ನು ಮುಟ್ಟಿದರೂ ಅಗ್ನಿಯು ಅವನನ್ನು ಸುಡುವುದಿಲ್ಲ.

ಛಂದೇನ ಚೋದಕಂ ತಸ್ಯ ಭವತ್ಯಾವರ್ಜಿತಂ ಧ್ರುವಮ್ ।
ಅತೀವ ಚಾನ್ಯತ್ ಸುಮಹದಾಶ್ಚರ್ಯಂ ದೃಷ್ಟವತ್ಯಹಮ್ ॥೧೬॥

ಒಂದು ಹನಿಯೂ ನೀರಿಲ್ಲದ ಪಾತ್ರೆಯು ಅವನ ಸಂಕಲ್ಪದಿಂದಲೇ ನೀರಿನಿಂದ ಪೂರ್ಣವಾಗುತ್ತದೆ. ನಾನು ಇನ್ನೂ ಒಂದು ಮಹದಾಶ್ಚರ್ಯವನ್ನು ನೋಡಿದೆ.

ಯತ್ ಸ ಪುಷ್ಪಾಣ್ಯುಪಾದಾಯ ಹಸ್ತಾಭ್ಯಾಂ ಮಮ್ಮದೇ ಶನೈಃ ।
ಮೃದ್ಯಮಾನಾನಿ ಪುಷ್ಪಾಣಿ ಪಾಣಿಭ್ಯಾಂ ತೇನ ಭಾಮಿನಿ ॥೧೭॥

ಭೂಯ ಏವ ಸುಗಂಧೀನಿ ಹೃಷಿತಾನಿ ಭವಂತಿ ಚ ॥೧೮॥

ಅವನು ಪುಷ್ಪಗಳನ್ನು ತೆಗೆದುಕೊಂಡು ಎರಡು ಕೈಗಳಿಂದಲೂ ನಿಧಾನವಾಗಿ ಉಜ್ಜಿದರೂ ಸಹ ಎಲೌ ಭಾಮಿನಿಯೇ, ಅವನು ಕೈಗಳಿಂದ ಉಜ್ಜಿದ ಪುಷ್ಪಗಳು ಇನ್ನೂ ಹೆಚ್ಚು ಸುಗಂಧಯುಕ್ತವಾಗುತ್ತವೆ. ಮತ್ತು ಅರಳುತ್ತವೆ.

ದಮಯಂತೀ ತು ತಚ್ಛ್ರುತ್ವಾ ಪುಣ್ಯಶ್ಲೋಕಸ್ಯ ಚೇಷ್ಟಿತಮ್ ।
ಅಮನ್ಯತ ನಳಂ ಪ್ರಾಪ್ತಂ ಕರ್ಮಚೇಷ್ಟಾಭಿಸೂಚಿತಮ್ ॥೧೯॥

ದಮಯಂತಿಯಾದರೋ ಆ ಪುಣ್ಯಶ್ಲೋಕನ ಚೇಷ್ಟೆಗಳನ್ನು ಕೇಳಿ ಆ ಕರ್ಮಗಳಿಂದ ಮತ್ತು ಚೇಷ್ಟೆಗಳಿಂದ ಸೂಚಿತವಾದಂತೆ ನಳನೇ ಬಂದಿದ್ದಾನೆ ಎಂದು ಭಾವಿಸಿದಳು.

ಸಾ ಶಂಕಮಾನಾ ಭರ್ತಾರಂ ನಳಂ ಬಾಹುಕರೂಪಿಣಮ್ ।
ಕೇಶಿನೀಂ ಶ್ಲಕ್ಷ್ಣಯಾ ವಾಚಾ ರುದಂತೀ ಪುನರಬ್ರವೀತ್ ॥೨೦॥

ಅವಳು ತನ್ನ ಪತಿಯಾದ ನಳನೇ ಬಾಹುಕರೂಪದಲ್ಲಿ ಬಂದಿದ್ದಾನೆಂದು ಶಂಕಿಸುತ್ತಾ ಕೇಶಿನಿಯನ್ನು ಕುರಿತು ಅಳುತ್ತಾ ಮಧುರವಾದ ಮಾತುಗಳಿಂದ ಪುನಃ ಹೀಗೆ ಮಾತನಾಡಿದಳು.

ಪುನರ್ಗಚ್ಛ ಪ್ರಮತ್ತಸ್ಯ ಬಾಹುಕಸ್ಯ ಸುಸಂಸ್ಕೃತಮ್ ।
ಮಹಾನಸಾಚ್ಛೃತಂ ಮಾಂಸಂ ಸಮಾದಾಯೈಹಿ ಭಾಮಿನಿ ॥೨೧॥

ಎಲೌ ಭಾಮಿನಿಯೇ ಪುನಃ ಹೋಗಿ ಬಾಹುಕನು ಅಡುಗೆಯ ಮನೆಯಲ್ಲಿ ಬೇಯಿಸಿರುವ ಮಾಂಸವನ್ನು ಅವನಿಗೆ ತಿಳಿಯದಂತೆ ತೆಗೆದುಕೊಂಡು ಇಲ್ಲಿಗೆ ಬಾ.

ಸಾ ಗತ್ವಾ ಬಾಹುಕೇ ವ್ಯಗ್ರೇ ತನ್ಮಾಂಸಮಪಕೃಷ್ಯ ಚ ।
ಅತ್ಯುಷ್ಣಮೇವ ತ್ವರಿತಾ ತತ್‌ಕ್ಷಣಂ ಪ್ರಿಯಕಾರಿಣೀ ।
ದಮಯಂತ್ಯೈ ತತಃ ಪ್ರಾದಾತ್ ಕೇಶಿನೀ ಕುರುನಂದನ ॥೨೨॥

ಎಲೈ ಕುರುನಂದನನೇ, ಕೇಶಿನಿಯಾದರೋ ಅಡುಗೆ ಮನೆಗೆ ಹೋಗಿ ಬಾಹುಕನು ಅನ್ಯಮನಸ್ಕನಾಗಿದ್ದಾಗ ಬಿಸಿಯಾದ ಆ ಮಾಂಸದ ಸ್ವಲ್ಪಭಾಗವನ್ನು ತೆಗೆದುಕೊಂಡು ಶೀಘ್ರವಾಗಿ ದಮಯಂತಿಗೆ ಪ್ರಿಯವನ್ನು ಮಾಡುವವಳಾಗಿ ತಕ್ಷಣದಲ್ಲಿಯೇ ಬಂದು ದಮಯಂತಿಗೆ ಕೊಟ್ಟಳು.

ಸೋಚಿತಾ ನಳಸಿದ್ಧಸ್ಯ ಮಾಂಸಸ್ಯ ಬಹುಶಃ ಪುರಾ ।
ಪ್ರಾಶ್ಯ ಮತ್ವಾ ನಳ ಸೂತಂ ಪ್ರಾಕ್ರೋಶದ್ ಭೃಶದುಃಖಿತಾ ॥೨೩॥

ನಳನು ಮಾಡಿದ ಪಾಕವನ್ನು ಹಿಂದೆ ಅನೇಕ ಬಾರಿ ಸವಿದಿದ್ದ ಅವಳು ಆ ಮಾಂಸವನ್ನು ತಿಂದು ಆ ಬಾಹುಕನೇ ನಳನೆಂದು ನಿಶ್ಚಯಿಸಿ ದುಃಖದಿಂದ ವಿಲಾಪವನ್ನು ಮಾಡಿದಳು.

ವೈಕ್ಲಬ್ಯಂ ಪರಮಂ ಗತ್ವಾ ಪ್ರಕ್ಷಾಲ್ಯ ಚ ಮುಖಂ ತತಃ ।
ಮಿಥುನಂ ಪ್ರೇಷಯಾಮಾಸ ಕೇಶಿನ್ಯಾ ಸಹ ಭಾರತ ॥೨೪॥

ಎಲೈ ಭಾರತನೇ ಬಹಳ ಸಂಕಟವನ್ನು ಹೊಂದಿ ಅನಂತರ ಮುಖವನ್ನು ತೊಳೆದುಕೊಂಡು ಕೇಶಿನಿಯ ಜೊತೆಯಲ್ಲಿ ತನ್ನ ಅವಳಿ ಮಕ್ಕಳನ್ನು ಬಾಹುಕನ ಬಳಿಗೆ ಕಳುಹಿಸಿದಳು.

ಇಂದ್ರಸೇನಾಂ ಸಹ ಭ್ರಾತ್ರಾ ಸಮಭಿಜ್ಞಾಯ ಬಾಹುಕಃ ।
ಅಭಿದ್ರುತ್ಯ ತತೋ ರಾಜಾ ಪರಿಷ್ವಜ್ಯಾಂಕಮಾನಯತ್ ॥೨೫॥

ಬಾಹುಕನು ಇಂದ್ರಸೇನನನ್ನು ಮತ್ತು ಇಂದ್ರಸೇನೆಯನ್ನು ಗುರುತಿಸಿ ಓಡಿಬಂದು ಅವರನ್ನು ಆಲಿಂಗಿಸಿ ತನ್ನ ತೊಡೆಯಮೇಲೆ ಕೂಡಿಸಿಕೊಂಡನು.

ಬಾಹುಕಸ್ತು ಸಮಾಸಾದ್ಯ ಸುತೌ ಸುರಸುತೋಪಮೌ ।
ಭೃಶಂ ದುಃಖಪರೀತಾತ್ಮಾ ಸುಸ್ವರಂ ಪ್ರರುರೋದ ಹ ॥೨೬॥

ಬಾಹುಕನು ದೇವತೆಯ ಮಕ್ಕಳಂತೆ ಇದ್ದ ಆ ಮಕ್ಕಳನ್ನು ಹೊಂದಿ ಬಹಳ ದುಃಖದಿಂದ ಪೀಡಿತನಾಗಿ ಸುಸ್ವರದಿಂದ ಅತ್ತನು.

ನೈಷಧೋ ದರ್ಶಯಿತ್ವಾ ತು ವಿಕಾರಮಸಕೃತ್ ತದಾ ।
ಉತ್ಸೃಜ್ಯ ಸಹಸಾ ಪುತ್ರೌ ಕೇಶಿನೀಮಿದಮಬ್ರವೀತ್ ॥೨೭॥

ನಳನು ಹೀಗೆ ತನ್ನ ವಿಕಾರಗಳನ್ನು ಅನೇಕಬಾರಿ ತೋರಿಸಿ ತನ್ನು ಮಕ್ಕಳನ್ನು ತಕ್ಷಣ ದೂರನಿಲ್ಲಿಸಿ ಕೇಶಿನಿಯನ್ನು ಕುರಿತು ಹೀಗೆ ಹೇಳಿದನು.

ಇದಂ ಸುಸದೃಶಂ ಭದ್ರೇ ಮಿಥುನಂ ಮಮ ಪುತ್ರಯೋಃ ।
ತತೋ ದೃಷ್ಟ್ವೈವ ಸಹಸಾ ಬಾಷ್ಪಮುತ್ಸೃಷ್ಟವಾನಹಮ್ ॥೨೮॥

ಭದ್ರೆಯೇ ಈ ಅವಳಿ ಮಕ್ಕಳು ನನ್ನ ಮಕ್ಕಳನ್ನು ಬಹುವಾಗಿ ಹೋಲುತ್ತಾರೆ. ಆದ್ದರಿಂದ ಅವರನ್ನು ನೋಡಿದ ತಕ್ಷಣ ನಾನು ಬಾಷ್ಪವನ್ನು ಸುರಿಸಿದೆ.

ಬಹುಶಃ ಸಂಪತಂತೀಂ ತ್ವಾಂ ಜನಃ ಶಂಕೇತ ದೋಷತಃ ।
ವಯಂ ಚ ದೇಶಾತಿಥಯೋ ಗಚ್ಛ ಭದ್ರೇ ಯಥಾಸುಖಮ್ ॥೨೯॥

ನೀನು ಪುನಃಪುನಃ ನನ್ನ ಬಳಿಗೆ ಬರುತ್ತಿದ್ದೀಯೆ. ಜನರು ನಮ್ಮಲ್ಲಿ ದೋಷ ಶಂಕೆಯನ್ನು ಮಾಡಬಹುದು. ನಾವು ದೇಶಾತಿಥಿಗಳಾಗಿ ಬಂದವರು. ಆದ್ದರಿಂದ ಇಲ್ಲಿರಬೇಡ ಹೊರಟು ಹೋಗು. (ಎಂದು ಹೇಳಿದನು.)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಸಪ್ತತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★★★★★

## ಎಪ್ಪತ್ತನೆಯ ಅಧ್ಯಾಯ

(ದಮಯಂತಿಯ ಮರ್ಮವಚನಗಳು, ಬಾಹುಕ ದಮಯಂತಿ ಸಮಾಗಮ.)

### ಬೃಹದಶ್ವಃ

ಸರ್ವಂ ವಿಕಾರಂ ದೃಷ್ಟ್ವಾ ತು ಪುಣ್ಯಶ್ಲೋಕಸ್ಯ ಧೀಮತಃ ।
ಆಗತ್ಯ ಕೇಶಿನೀ ಕ್ಷಿಪ್ರಂ ದಮಯಂತ್ಯೈ ನ್ಯವೇದಯತ್ ॥೧॥

ಕೇಶಿನಿಯು ಪುಣ್ಯಶ್ಲೋಕನೂ ಮತ್ತು ಮೇಧಾವಿಯೂ ಆದ ಬಾಹುಕನ ಆ ಎಲ್ಲಾ ವಿಕಾರಗಳನ್ನೂ ನೋಡಿ ಬೇಗ ಹಿಂದಿರುಗಿ ಬಂದು ದಮಯಂತಿಗೆ ಎಲ್ಲವನ್ನೂ ತಿಳಿಸಿದಳು.

ದಮಯಂತೀ ತತೋ ಭೂಯಃ ಪ್ರೇಷಯಾಮಾಸ ಕೇಶಿನೀಮ್ ।
ಮಾತುಃ ಸಕಾಶಂ ದುಃಖಾರ್ತಾ ನಳಶಂಕಾಸಮುತ್ಸುಕಾ ॥೨॥

ಅನಂತರ ದಮಯಂತಿಯು ನಳನೆಂಬ ಆಶಂಕೆಯಿಂದ ಸಮುತ್ಸುಕಳಾಗಿ ದುಃಖದಿಂದ ಕೂಡಿದವಳಾಗಿ ಕೇಶಿನಿಯನ್ನು ತನ್ನ ತಾಯಿಯಬಳಿಗೆ ಕಳುಹಿಸಿದಳು.

ಪರೀಕ್ಷಿತೋ ಮೇ ಬಹುಶೋ ಬಾಹುಕೋ ನಳಶಂಕಯಾ ।
ರೂಪೇಮೇ ಸಂಶಯಸ್ತ್ವೇಕಃ ಸ್ವಯಮಿಚ್ಛಾಮಿ ವೇದಿತುಮ್ ॥೩॥

ಬಾಹುಕನು ನಳನೆಂಬ ಶಂಕೆಯಿಂದ ನಾನು ಅನೇಕ ರೀತಿಯಿಂದ ಪರೀಕ್ಷೆಮಾಡಿದೆ. ನನಗೆ ರೂಪದ ವಿಷಯದಲ್ಲಿಮಾತ್ರ ಸಂಶಯವಿದೆ. ನಾನೇ ಹೋಗಿ ತಿಳಿದುಕೊಳ್ಳಲು ಬಯಸುತ್ತೇನೆ.

ಸ ವಾ ಪ್ರವೇಶ್ಯತಾಂ ಮಾತರ್ಮಾಂ ವಾಽನುಜ್ಞಾತುಮರ್ಹಸಿ ।
ವಿದಿತಂ ವಾಽಥವಾಽಜ್ಞಾತಂ ಪಿತುರ್ಮೇ ಸಂವಿಧೀಯತಾಮ್ ॥೪॥

ತಾಯಿಯೇ ಅವನಾದರೂ ನನ್ನ ಬಳಿಗೆ ಬರುವಂತೆಮಾಡು ಅಥವಾ ನನಗಾದರೂ ಅವನ ಬಳಿಗೆ ಹೋಗುವಂತೆ ಅನುಮತಿಯನ್ನು ಕೊಡು. ಇದು ನನ್ನ ತಂದೆಗೆ ತಿಳಿಯದಂತೆ ಅಥವಾ ತಿಳಿಯುವಂತೆ ಬೇಕಾದರೂ ಇದರ ವ್ಯವಸ್ಥೆಯನ್ನು ಮಾಡು.

ಏವಮುಕ್ತಾ ತು ವೈದರ್ಭ್ಯಾ ಸಾ ದೇವೀ ಭೀಮಮಬ್ರವೀತ್ ।
ದುಹಿತುಸ್ತಮಭಿಪ್ರಾಯಮನ್ವಜಾನಾಚ್ಚ ಪಾರ್ಥಿವಃ ॥೫॥

ಹೀಗೆ ದಮಯಂತಿಯಿಂದ ಹೇಳಲ್ಪಟ್ಟ ಅವಳ ತಾಯಿಯು ಭೀಮರಾಜನಿಗೆ ತಮ್ಮ ಮಗಳ ಅಭಿಪ್ರಾಯವನ್ನು ತಿಳಿಸಿದಳು. ರಾಜನು ಅದಕ್ಕೆ ತಮ್ಮ ಅನುಮತಿಯನ್ನು ನೀಡಿದನು.

ಸಾ ವೈ ಪಿತ್ರಾऽಭ್ಯನುಜ್ಞಾತಾ ಮಾತ್ರಾ ಚ ಕುರುನಂದನ ।
ನಳಂ ಪ್ರವೇಶಯಾಮಾಸ ಯತ್ರ ತಸ್ಯಾಃ ಪ್ರತಿಶ್ರಯಃ ॥೬॥

ಕುರುನಂದನನೇ ತಂದೆಯಿಂದಲೂ ಮತ್ತು ತಾಯಿಯಿಂದಲೂ ಅನುಮತಿಯನ್ನು ಪಡೆದ ದಮಯಂತಿಯು ತಾನು ಇರುವ ಸ್ಥಳಕ್ಕೆ ನಳನು ಪ್ರವೇಶಿಸುವಂತೆ ಮಾಡಿದಳು.

ತಾಂ ಚ ದೃಷ್ಟ್ವೈವ ಸಹಸಾ ದಮಯಂತೀಂ ನಳೋ ನೃಪಃ ।
ಆವಿಷ್ಟೋ ದುಃಖಶೋಕಾಭ್ಯಾಂ ಬಭೂವಾಶ್ರುಪರಿಪ್ಲುತಃ ॥೭॥

ದಮಯಂತಿಯನ್ನು ನೋಡಿದ ತಕ್ಷಣವೇ ನಳಮಹಾರಾಜನು ಒಮ್ಮೆಯೇ ದುಃಖಶೋಕಗಳಿಂದ ಕೂಡಿದವನಾಗಿ ಅಶ್ರುಗಳಿಂದ ತುಂಬಿದ ಕಣ್ಣುಗಳುಳ್ಳವನಾದನು.

ತತಃ ಕಾಷಾಯವಸನಾ ಜಟಿಲಾ ಮಲಪಂಕಿನೀ ।
ದಮಯಂತೀ ಮಹಾರಾಜ ಬಾಹುಕಂ ವಾಕ್ಯಮಬ್ರವೀತ್ ॥೮॥

ಎಲೈ ಮಹಾರಾಜನೇ ಆಗ ಕಾಷಾಯವನ್ನು ಧರಿಸಿದ ಜಟಿಲಳಾದ ಕಶ್ಮಲಸಹಿತ ಶರೀರದಿಂದ ಕೂಡಿದ್ದ ದಮಯಂತಿಯು ಬಾಹುಕನನ್ನು ಕುರಿತು ಮಾತನಾಡಿದಳು.

ದೃಷ್ಟಪೂರ್ವಸ್ತ್ವಯಾ ಕಶ್ಚಿದ್ ಧರ್ಮಜ್ಞೋ ನಾಮ ಬಾಹುಕ ।
ಸುಪ್ತಾಮುತ್ಸೃಜ್ಯ ವಿಪಿನೇ ಗತೋ ಯಃ ಪುರುಷಃ ಸ್ತ್ರಿಯಮ್ ॥೯॥

ಎಲೈ ಬಾಹುಕನೇ ನೀನು ಕಾಡಿನಲ್ಲಿ ಮಲಗಿದ ತನ್ನ ಹೆಂಡತಿಯನ್ನು ತೊರೆದು ಹೊರಟ ಧರ್ಮಜ್ಞನೆಂಬ ಪುರುಷನನ್ನು ಹಿಂದೆ ಎಂದಾದರೂ ನೋಡಿರುವೆಯಾ?

ಅನಾಗಸೀಂ ಪ್ರಿಯಾಂ ಭಾರ್ಯಾಂ ವಿಪಿನೇ ಶೋಕಕರ್ಶಿತಾಮ್ ।
ಅಪಹಾಯ ತು ಕೋ ಗಚ್ಛೇತ್ ಪುಣ್ಯಶ್ಲೋಕಾದೃತೇ ನಳಾತ್ ॥೧೦॥

ನಿರಪರಾಧಿನಿಯಾದ ಪ್ರಿಯಳಾದ ಶೋಕಕರ್ಶಿತಳಾದ ಪತ್ನಿಯನ್ನು ಕಾಡಿನಲ್ಲಿ ಬಿಟ್ಟು ಪುಣ್ಯಶೋಕನಾದ ನಳನಲ್ಲದೆ ಬೇರೆ ಯಾರು ಹೋಗಬಹುದು?

ಕಿಂನು ತಸ್ಯ ಮಯಾ ಬಾಲ್ಯಾದಪರಾದ್ಧಂ ಮಹೀಪತೇಃ ।
ಯೋ ಮಾಮುತ್ಸೃಜ್ಯ ವಿಪಿನೇ ಗತವಾನ್ ನಿದ್ರಯಾ ಹೃತಾಮ್ ॥೧೧॥

ನಿದ್ದೆ ಮಾಡುತ್ತಿದ್ದ ನನ್ನನ್ನು ಕಾಡಿನಲ್ಲಿ ತೊರೆದು ಹೋದ ಆ ರಾಜನಿಗೆ ನಾನು ಬಾಲ್ಯದಿಂದಲಾದರೂ ಏನು ಅಪರಾಧವನ್ನು ಮಾಡಿದ್ದೆ?

ಸಾಕ್ಷಾದ್ ದೇವಾನಪಾಹಾಯ ವೃತೋ ಯಃ ಸ ಮಯಾ ಕಿಲ ।
ಅನುವ್ರತಾಂ ಪತಿಪ್ರಾಣಾಂ ಪುತ್ರಿಣೀಂ ತ್ಯಕ್ತವಾನ್ ಕಥಮ್ ॥೧೨॥

ಸಾಕ್ಷಾದ್ ದೇವತೆಗಳನ್ನು ತಿರಸ್ಕರಿಸಿ ನಾನು ಅವನನ್ನು ವರಿಸಿದೆನಷ್ಟೇ. ಅನುವ್ರತಳಾಗಿದ್ದ ಅವನಲ್ಲಿಯೇ ಪ್ರಾಣಗಳನ್ನು ಇಟ್ಟುಕೊಂಡಿದ್ದ ಅವನಿಂದ ಮಕ್ಕಳನ್ನು ಪಡೆದ ನನ್ನನ್ನು ಅವನು ಹೇಗೆ ತ್ಯಜಿಸಿದನು?

ಅಗ್ನೌ ಪಾಣಿಗೃಹೀತಾಂ ಚ ಹಂಸಾನಾಂ ವಚನೇ ಸ್ಥಿತಾಮ್ ।
ಭರಿಷ್ಯಾಮೀತಿ ಸತ್ಯಂ ಚ ಪ್ರತಿಶ್ರುತ್ಯ ಕ್ವ ತದ್ಗತಮ್ ॥೧೩॥

ಹಂಸಗಳ ವಚನದಂತೆ ಅಗ್ನಿಯ ಸನ್ನಿಧಿಯಲ್ಲಿ ಪಾಣಿಗ್ರಹಣವನ್ನು ಮಾಡಿ ನಿನ್ನನ್ನು ಬಿಡುವುದಿಲ್ಲವೆಂದು ಸತ್ಯಪ್ರತಿಜ್ಞೆಯನ್ನು ಮಾಡಿದ ಆ ಅವನು ಎಲ್ಲಿಗೆ ಹೋದನು?

ಬೃಹದಶ್ವಃ

ದಮಯಂತ್ಯಾ ಬ್ರುವಂತ್ಯಾಸ್ತು ಸರ್ವಮೇತದರಿಂದಮ ।
ಶೋಕಜಂ ವಾರಿ ನೇತ್ರಾಭ್ಯಾಮತ್ಯುಷ್ಣಂ ಪ್ರಾಸ್ರವದ್‌ಬಹು ॥೧೪॥

ಎಲೈ ಅರಿಂದಮನೇ, ದಮಯಂತಿಯು ಹೀಗೆಲ್ಲಾ ಮಾತನಾಡುತ್ತಿರಲು ಬಾಹುಕನ ಕಣ್ಣಿನಿಂದ ಶೋಕದಿಂದ ಉತ್ಪನ್ನವಾದ ಉಷ್ಣವಾದ ಕಣ್ಣೀರು ಬಹುವಾಗಿ ಸುರಿಯಿತು.

ಅತೀವ ಕೃಷ್ಣತಾರಾಭ್ಯಾಂ ರಕ್ತಾಭ್ಯಾಂ ಸಲಿಲಂ ತು ತತ್ ।
ಪರಿಸ್ರವನ್ನಳೋ ದೃಷ್ಟ್ವಾ ಶೋಕಾರ್ತ ಇದಮಬ್ರವೀತ್ ॥೧೫॥

ತನ್ನ ಕಪ್ಪಾದ ಮತ್ತು ತುದಿಯಲ್ಲಿ ಕೆಂಪಾದ ಕಣ್ಣುಗಳಿಂದ ಬಹಳವಾಗಿ ಸುರಿಯುತ್ತಿದ್ದ ಆ ಕಣ್ಣೀರನ್ನು ಗಮನಿಸಿ ಶೋಕಾರ್ತನಾದ ನಳನು ಹೀಗೆ ಮಾತನಾಡಿದನು.

ನಳಃ

ಮಮ ರಾಜ್ಯಂ ಪ್ರನಷ್ಟಂ ಯನ್ನಾಹಂ ತತ್ ಕೃತವಾನ್ ಸ್ವಯಮ್ ।
ಕಲಿನಾऽಪ ಕೃತಂ ಭೀರು ಯಚ್ಚ ತ್ವಾಮಹಮತ್ಯಜಮ್ ॥೧೬॥

ನನ್ನ ರಾಜ್ಯವು ನಷ್ಟವಾಯಿತು. ಅದನ್ನು ನಾನು ಸ್ವತಃ ಮಾಡಲಿಲ್ಲ. ಎಲೌ ಭೀರುವೇ ಅದು ಕಲಿಯಿಂದ ಮಾಡಲ್ಪಟ್ಟಿತು. ನಾನು ನಿನ್ನನ್ನು ತೊರೆದುದು ಸಹ ಕಲಿಯ ಪ್ರಭಾವದಿಂದಲೇ.

ತ್ವಯಾ ತು ಧರ್ಮಕೃಚ್ಛ್ರೇ ತು ಶಾಪೇನಾಭಿಹತಃ ಪುರಾ ।
ವನಸ್ಥಯಾ ದುಃಖಿತಯಾ ಶೋಚಂತ್ಯಾ ಮಾಂ ವಿವಾಸಸಮ್ ॥೧೭॥

ನೀನು ಧರ್ಮಸಂಕಟಕ್ಕೆ ಸಿಲುಕಿದಾಗ ಕಾಡಿನಲ್ಲಿ ದಿಗಂಬರನಾದ ನನ್ನನ್ನು ನೋಡುತ್ತಾ ದುಃಖದಿಂದ ಹಿಂದೆ ಅವನಿಗೆ ಶಾಪವನ್ನು ಕೊಟ್ಟಿಯಷ್ಟೇ?

ಸ ಮಚ್ಛರೀರೇ ತ್ವಚ್ಛಾಪಾದ್ ದಹ್ಯಮಾನೋऽವಸತ್ ಕಲಿಃ ।
ತ್ವಚ್ಛಾಪದಗ್ಧಃ ಸತತಮಗ್ನಾವಿವ ಸಮಾಹಿತಃ ॥೧೮॥

ಅವನು ನಿನ್ನ ಶಾಪದಿಂದ ಬೆಂದು ಹೋಗುತ್ತಾ ನನ್ನ ಶರೀರದಲ್ಲಿ ವಾಸವಾಗಿದ್ದನು. ಅಗ್ನಿಯಲ್ಲಿ ಹಾಕಿದ ವಸ್ತುವು ಸುಡುವಂತೆ ಸತತವಾಗಿ ಅವನು ಶಾಪದ ದಾಹವನ್ನು ಅನುಭವಿಸುತ್ತಿದ್ದನು.

ಮಮ ಚ ವ್ಯವಸಾಯೇನ ತಪಸಾ ಚೈವ ನಿರ್ಜಿತಃ ।
ದುಃಖಸ್ಯಾಂತೇನ ಚಾನೇನ ಭವಿತವ್ಯಂ ಹಿ ಶೋಭನೇ ॥೧೯॥

ನನ್ನ ದೃಢನಿಶ್ಚಯದಿಂದಲೂ ಮತ್ತು ತಪಸ್ಸಿನಿಂದಲೂ ಅವನು ನಿರ್ಜಿತನಾಗಿದ್ದಾನೆ. ಎಲೌ ಶೋಭನೆಯೇ ಈ ದುಃಖಕ್ಕೆ ಖಂಡಿತವಾಗಿಯೂ ಒಂದು ಅಂತ್ಯವು ಉಂಟಾಗಬೇಕು.

ವಿಮುಚ್ಯ ಮಾಂ ಗತಃ ಪಾಪಃ ತತೋऽಹಮಿಹ ಚಾಗತಃ ।
ತದರ್ಥಂ ವಿಪುಲಶ್ರೋಣಿ ನ ಹಿ ಮೇऽನ್ಯತ್ ಪ್ರಯೋಜನಮ್ ॥೨೦॥

ಆ ಪಾಪಿಯಾದ ಕಲಿಯು ನನ್ನನ್ನು ಬಿಟ್ಟು ಹೋದನು. ಎಲೌ ವಿಪುಲಶ್ರೋಣಿಯೇ ನಾನು ನಿನ್ನ ಸಲುವಾಗಿ ಆ ಕಾರಣದಿಂದ ಇಲ್ಲಿಗೆ ಬಂದಿದ್ದೇನೆ. ಇದನ್ನು ಬಿಟ್ಟು ನನಗೆ ಬೇರೆ ಪ್ರಯೋಜನವಿಲ್ಲ.

ಕಥಂ ನು ನಾರೀ ಭರ್ತಾರಮನುರಕ್ತಮನುವ್ರತಮ್ ।
ಉತ್ಸೃಜ್ಯ ವರಯೇದನ್ಯಂ ಯಥಾ ತ್ವಂ ಭೀರು ಕರ್ಹಿಚಿತ್ ॥೨೧॥

ಎಲೌ ಭೀರುವೇ, ತನ್ನಲ್ಲೇ ಅನುರಕ್ತನಾದ ಮತ್ತು ತನ್ನನ್ನು ಅನುಸರಿಸುವ ಪತಿಯನ್ನು ಬಿಟ್ಟು ನಿನ್ನಂತೆ ಯಾವ ನಾರಿಯು ಯಾವ ಕಾರಣದಿಂದಲಾದರೂ ಇನ್ನೊಬ್ಬ ಪತಿಯನ್ನು ಹೇಗೆ ವರಿಸುತ್ತಾಳೆ?

ದೂತಾಶ್ಚರಂತಿ ಪೃಥಿವೀಂ ಕೃತ್ಸ್ನಾಂ ನೃಪತಿಶಾಸನಾತ್ ।
ಭೈಮೀ ಕಿಲಾದ್ಯ ಭರ್ತಾರಂ ದ್ವಿತೀಯಂ ವರಯಿಷ್ಯತಿ ॥೨೨॥

ದಮಯಂತಿಯು ಎರಡನೆಯ ಸ್ವಯಂವರವನ್ನು ಮಾಡಿಕೊಳ್ಳುತ್ತಿದ್ದಾಳೆ ಎಂದು ಹೇಳುತ್ತಾ ರಾಜಶಾಸನಕ್ಕೆ ಅನುಗುಣವಾಗಿ ದೂತರು ಭೂಮಿಯಲ್ಲೆಲ್ಲಾ ಸಂಚರಿಸುತ್ತಿದ್ದಾರೆ.

ಸ್ವೈರವೃತ್ತ್ಯಾ ಯಥಾಕಾಮಮನುರೂಪಮಿವಾತ್ಮನಃ ।
ಶ್ರುತ್ವೈವ ಚೈವಂ ತ್ವರಿತೋ ಭಾರ್ಗವಸ್ತ್ವರಿರುಪಸ್ಥಿತಃ ॥೨೩॥

ಋತುಪರ್ಣನು ತನ್ನ ಸ್ವಚ್ಛಂದವೃತ್ತಿಗೆ ಅನುಗುಣವಾಗಿ ನಿನ್ನನ್ನು ತನಗೆ ಅನುರೂಪಳೆಂದು ಭಾವಿಸಿ ಈ ವಾರ್ತೆಯನ್ನು ಕೇಳಿದ ತಕ್ಷಣ ಇಲ್ಲಿಗೆ ಬಂದಿದ್ದಾನೆ.

ದಮಯಂತೀ ತು ತಚ್ಛ್ರುತ್ವಾ ನಳಸ್ಯ ಪರಿದೇವಿತಮ್ ।
ಪ್ರಾಂಜಲಿರ್ವೇಪಮಾನಾ ಚ ಭೀತಾ ವಚನಮಬ್ರವೀತ್ ॥೨೪॥

ದಮಯಂತಿಯು ಆ ನಳನ ಶೋಕವನ್ನು ಕೇಳಿ ಕೈಗಳನ್ನು ಮುಗಿದು ನಡುಗುತ್ತಾ ಭಯದಿಂದ ಮಾತನಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಷಡ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★

## ಎಪ್ಪತ್ತೊಂದನೆಯ ಅಧ್ಯಾಯ

(ನಳದಯಮಯಂತಿಯರ ಸಮಾಗಮ)

### ದಮಯಂತೀ

ನ ಮಾಮರ್ಹಸಿ ಕಲ್ಯಾಣ ಪಾಪೇನ ಪರಿಶಂಕಿತುಮ್ ।
ಮಯಾ ಹಿ ದೇವಾನುತ್ಸೃಜ್ಯ ವೃತಸ್ತ್ವಂ ನಿಷಧಾಧಿಪ ॥೧॥

ಎಲೌ ಕಲ್ಯಾಣನೇ ನಾನು ಪಾಪವನ್ನು ಮಾಡುವೆನೆಂದು ನನ್ನನ್ನು ಶಂಕಿಸಬೇಡ. ಎಲೈ ನಿಷಧಾಧಿಪನೇ ನಾನು ದೇವತೆಗಳನ್ನು ತಿರಸ್ಕರಿಸಿ ನಿನ್ನನ್ನು ವರಿಸಿದೆ.

ತವಾಭಿಗಮನಾರ್ಥಾಯ ಸರ್ವತೋ ಬ್ರಾಹ್ಮಣಾ ಗತಾಃ ।
ವಾಕ್ಯಾನಿ ಮಮ ಗಾಥಾಭಿರ್ಗಾಯಮಾನಾ ದಿಶೋ ದಶ ॥೨॥

ನಿನ್ನನ್ನು ತಿಳಿಯುವುದಕೋಸ್ಕರ ನಾನು ರಚಿಸಿದ ಗೀತೆಗಳನ್ನು ಹಾಡುವಂತೆ ಹೇಳಿ ಎಲ್ಲ ಹತ್ತುದಿಕ್ಕುಗಳಿಗೂ ಬ್ರಾಹ್ಮಣರನ್ನು ಕಳುಹಿಸಿದೆ.

ತತಸ್ತ್ವಂ ಬ್ರಾಹ್ಮಣೋ ವಿದ್ವಾನ್ ಪರ್ಣಾದೋ ನಾಮ ಪಾರ್ಥಿವ ।
ಅಭ್ಯಗಚ್ಛತ್ ಕೋಸಲಾಯಾಮೃತುಪರ್ಣನಿವೇಶನೇ ॥೩॥

ಎಲೈ ಪಾರ್ಥಿವನೇ ಅನಂತರ ಪರ್ಣಾದನೆಂಬ ಮೇಧಾವಿಯಾದ ಬ್ರಾಹ್ಮಣನು ಕೋಸಲದೇಶದಲ್ಲಿ ಋತುವರ್ಣನ ಮನೆಯಲ್ಲಿ ನಿನ್ನನ್ನು ಗುರುತಿಸಿದನು.

ತೇನ ವಾಕ್ಯೇ ಹೃತೇ ಸಮ್ಯಕ್ ಪ್ರತಿವಾಕ್ಯೇ ತು ವ್ಯಾಹೃತೇ ।
ಉಪಾಯೋಽಯಂ ಮಯಾ ದೃಷ್ಟೋ ನೈಷಧಾನಯನೇ ತವ ॥೪॥

ಅವನು ನನ್ನ ವಾಕ್ಯವನ್ನು ಸರಿಯಾಗಿ ನಿನ್ನ ಮುಂದೆ ಹೇಳಿ ನಿನ್ನ ಉತ್ತರವನ್ನು ನನಗೆ ತಲುಪಿಸಿದ ಮೇಲೆ ಎಲೈ ನೈಷಧನೇ, ಇದೇ ನಿನ್ನನ್ನು ಕರೆತರಲು ಉಪಾಯವೆಂದು ನಾನು ಭಾವಿಸಿದೆ.

ತ್ವದೃತೇ ನ ಹಿ ಲೋಕೇಽನ್ಯ ಏಕಾಹ್ನಾ ಪೃಥಿವೀಪತೇ ।
ಸಮರ್ಥೋ ಯೋಜನಶತಂ ಗಂತುಮಶ್ವೈರ್ನರಾಧಿಪ ॥೫॥

ಎಲೈ ನರಾಧಿಪನೇ, ನಿನ್ನನ್ನು ಬಿಟ್ಟು ಈ ಲೋಕದಲ್ಲಿ ಬೇರೆ ಯಾವನೂ ಒಂದು ಹಗಲಿನಲ್ಲಿ ನೂರುಯೋಜನ ದೂರವನ್ನು ಅಶ್ವಹೂಡಿದ ರಥದಲ್ಲಿ ಕ್ರಮಿಸಲು ಸಮರ್ಥನಲ್ಲ.

ಸ್ಪೃಶೇಯಂ ತೇನ ಸತ್ಯೇನ ಪಾದಾವೇತೌ ಮಹೀಪತೇ ।
ಯಥಾ ನಾಸತ್ಕೃತಂ ಕಿಂಚಿನ್ ಮನಸಾऽಪಿ ಚರಾಮ್ಯಹಮ್ ॥೬॥

ಎಲೈ ಮಹೀಪತಿಯೇ, ನಿನ್ನ ಈ ಪಾದವನ್ನು ಮುಟ್ಟಿ ನಾನು ಪ್ರಮಾಣಮಾಡಿ ಹೇಳುತ್ತೇನೆ. ನಾನು ಮನಸ್ಸಿನಿಂದಲೂ ಸಹ ಸ್ವಲ್ಪವಾದರೂ ಅಸತ್ಕಾರ್ಯವನ್ನು ಮಾಡಿಲ್ಲ.

ಅಯಂ ಚರತಿ ಲೋಕೇऽಸ್ಮಿನ್ ಭೂತಸಾಕ್ಷೀ ಸದಾಗತಿಃ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಈ ಸರ್ವಜೀವ ಸಾಕ್ಷಿಯಾದ ವಾಯುವು ಈ ಲೋಕದಲ್ಲಿ ಎಲ್ಲ ಕಡೆಯಲ್ಲಿಯೂ ಸಂಚರಿಸುತ್ತಿದ್ದಾನೆ. ನಾನೇನಾದರೂ ಪಾಪವನ್ನು ಮಾಡಿದ್ದರೆ ವಾಯುವು ನನಗೆ ಪ್ರಾಣವಿಯೋಗವನ್ನು ಉಂಟುಮಾಡಲಿ.

ತಥಾ ಚರತಿ ತಿಗ್ಮಾಂಶುಃ ಕರೇಣ ಭುವನಂ ಸದಾ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಈ ಚಂಡಕಿರಣನಾದ ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಪವಿತ್ರೀಕರಿಸುತ್ತಾ ಯಾವಾಗಲೂ ತಿರುಗುತ್ತಿದ್ದಾನೆ. ನಾನೇನಾದರೂ ಅನ್ಯಾಯವನ್ನು ಮಾಡಿದ್ದರೆ ನನಗೆ ಅವನು ಪ್ರಾಣವಿಯೋಗವನ್ನು ಉಂಟುಮಾಡಲಿ.

ಚಂದ್ರಮಾಃ ಸರ್ವಭೂತಾನಾಮಂತಶ್ಚರತಿ ಸಾಕ್ಷಿವತ್ ।
ಸ ವಿಮುಂಚತು ಮೇ ಪ್ರಾಣಾನ್ ಯದಿ ಪಾಪಂ ಚರಾಮ್ಯಹಮ್ ॥

ಎಲ್ಲ ಜೀವರೊಳಗೆ ಚಂದ್ರನು ಸಾಕ್ಷಿಯಂತೆ ತಿರುಗುತ್ತಿದ್ದಾನೆ. ನಾನೇನಾದರೂ ಪಾಪವನ್ನು ಮಾಡಿದ್ದರೆ ಅವನು ನನಗೆ ಪ್ರಾಣವಿಯೋಗವನ್ನು ಉಂಟುಮಾಡಲಿ.

ಏತೇ ದೇವಾಸ್ತ್ರಯಃ ಕೃತ್ಸ್ನಂ ತ್ರೈಲೋಕ್ಯಂ ಧಾರಯಂತಿ ವೈ ।
ವಿಬ್ರುವಂತು ಯಥಾ ಸತ್ಯಮೇತದ್ದೇವಾಸ್ಯಜಂತು ಮಾಂ ॥೧೦॥

ಈ ಮೂರುದೇವತೆಗಳು ಸಮಸ್ತವಾದ ಈ ಮೂರು ಲೋಕಗಳನ್ನು ಧರಿಸಿದ್ದಾರೆ. ಈ ದೇವತೆಗಳು ನಾನು ಹೇಳಿದುದು ಸತ್ಯವೇ ಅಲ್ಲವೇ ಎಂದು ಹೇಳಲಿ. ನಾನು ಸುಳ್ಳನ್ನು ಮಾತನಾಡಿದ್ದರೆ ಆ ದೇವತೆಗಳು ನನ್ನನ್ನು ತ್ಯಜಿಸಲಿ.

ಬೃಹದಶ್ವಃ

ಏವಮುಕ್ತೇ ತತೋ ವಾಯುರಂತರಿಕ್ಷಾದಭಾಷತ ॥೧೧॥

ನೈಷಾ ಕೃತವತೀ ಪಾಪಂ ನಳ ಸತ್ಯಂ ಬ್ರವೀಮಿ ತೇ ।
ರಾಜನ್‌ಶೀಲನಿಧಿಃ ಸ್ಫೀತೋ ದಮಯಂತ್ಯಾ ಸುರಕ್ಷಿತಃ ॥೧೨॥

ದಮಯಂತಿಯು ಹೀಗೆ ಹೇಳುತ್ತಿರಲು ಆಗ ವಾಯುವು ಅಂತರಿಕ್ಷದಿಂದ ಹೀಗೆ ಮಾತನಾಡಿದನು. ಎಲೈ ನಳನೇ ನಾನು ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ಇವಳು ಯಾವ ಪಾಪವನ್ನೂ ಮಾಡಿಲ್ಲ. ರಾಜನೇ ದಮಯಂತಿಯ ಪರಿಶುದ್ಧವಾದ ಶೀಲನಿಧಿಯು ಚೆನ್ನಾಗಿ ರಕ್ಷಿಸಲ್ಪಟ್ಟಿದೆ.

ಸಾಕ್ಷಿಣೋ ರಕ್ಷಿಣಶ್ಚಾಸ್ಯಾ ವಯಂ ತ್ರೀನ್ ಪರಿವತ್ಸರಾನ್ ।
ಉಪಾಯೋ ವಿಹಿತಶ್ಚಾಯಂ ತ್ವದರ್ಥಮತುಲೋಽನಯಾ ॥೧೩॥

ಈ ಮೂರುವರ್ಷಗಳಕಾಲದಲ್ಲಿ ನಾವು ಅವಳ ಶೀಲಕ್ಕೆ ರಕ್ಷಕರೂ ಮತ್ತು ಸಾಕ್ಷಿಗಳೂ ಆಗಿದ್ದೇವೆ. ನಿನ್ನನ್ನು ಪಡೆಯುವ ಸಲುವಾಗಿ ಅವಳು ಈ ಅಸದೃಶವಾದ ಉಪಾಯವನ್ನು ಚಿಂತಿಸಿದಳು.

ನ ಹ್ಯೇಕಾಹ್ನಾ ಶತಂ ಗಂತಾ ತ್ವದೃತೇಽನ್ಯಃ ಪುಮಾನಿಹ ।
ಉಪಪನ್ನಾ ತ್ವಯಾ ಭೈಮೀ ತ್ವಂ ಚ ಭೈಮ್ಯಾ ಮಹೀಪತೇ ।
ನಾತ್ರ ಶಂಕಾ ತ್ವಯಾ ಕಾರ್ಯಾ ಸಂಗಚ್ಛ ಸಹ ಭಾರ್ಯಯಾ ॥೧೪॥

ಒಂದೇ ಒಂದು ಹಗಲಿನಲ್ಲಿ ನಿನ್ನನ್ನು ಬಿಟ್ಟು ಯಾರೂ ಈ ಭೂಮಿಯಲ್ಲಿ ನೂರು ಯೋಜನಗಳನ್ನು ಪ್ರಯಾಣವನ್ನು ಮಾಡಲಾರರು. ಮಹೀಪತಿಯೇ ದಮಯಂತಿಯು

ನಿನ್ನ ಜೊತೆಯಲ್ಲಿ ಸೇರಿದ್ದಾಳೆ. ನೀನೂ ಸಹ ದಮಯಂತಿಯ ಜೊತೆಯಲ್ಲಿ ಸೇರಿದ್ದೀಯೇ. ನೀನು ಅವಳನ್ನು ಶಂಕಿಸಬಾರದು. ನಿನ್ನ ಪತ್ನಿಯ ಜೊತೆಯಲ್ಲಿ ಸಮಾಗಮವನ್ನು ಹೊಂದು.

ತಥಾ ಬ್ರುವತಿ ವಾಯೌ ತು ಪುಷ್ಪವೃಷ್ಟಿಃ ಪಪಾತ ಹ ।
ದೇವದುಂದುಭಯೋ ನೇದುರ್ವವೌ ಚ ಪವನಃ ಶುಭಃ ॥೧೫॥

ವಾಯುವು ಹಾಗೆ ಮಾತನಾಡುತ್ತಿರಲು ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದವು. ಸುಖಸ್ಪರ್ಶವುಳ್ಳ ವಾಯುವು ಮಂದವಾಗಿ ಬೀಸಿತು.

ತದದ್ಭುತತಮಂ ದೃಷ್ಟ್ವಾ ನಳೋ ರಾಜಾऽಥ ಭಾರತ ।
ದಮಯಂತ್ಯಾಂ ವಿಶಂಕಾಂ ತಾಂ ವ್ಯಪಾಕರ್ಷದರಿಂದಮಃ ॥೧೬॥

ಎಲೈ ಭಾರತನೇ ಈ ಅತ್ಯದ್ಭುತವಾದ ಘಟನೆಯನ್ನು ನೋಡಿ ಅರಿಂದಮನಾದ ನಳಮಹಾರಾಜನು ಆಗ ತನಗೆ ದಮಯಂತಿಯಲ್ಲಿದ್ದ ಶಂಕೆಯನ್ನು ತೊರೆದನು.

ತತಸ್ತದ್ವಸ್ತ್ರಮರಜಃ ಪ್ರಾವೃಣೋದ್ವಸುಧಾಧಿಪಃ ।
ಸಂಸ್ಮೃತ್ಯ ನಾಗರಾಜಾನಂ ತತೋ ಲೇಭೇ ವಪುಃ ಸ್ವಕಮ್ ॥೧೭॥

ಆಗ ಆ ರಾಜನು ನಾಗರಾಜನಾದ ಕಾರ್ಕೋಟಕನನ್ನು ಸ್ಮರಿಸಿ ಅವನು ಕೊಟ್ಟಿದ್ದ ಶುಭ್ರವಾದ ವಸ್ತ್ರವನ್ನು ಹೊದ್ದುಕೊಂಡನು. ತಕ್ಷಣ ನಳನ ಹಿಂದಿನ ರೂಪವು ಅವನಿಗೆ ಮರಳಿಬಂದಿತು.

ಸ್ವರೂಪೇಣ ತು ಭರ್ತಾರಂ ದೃಷ್ಟ್ವಾ ಭೀಮಸುತಾ ತತಃ ।
ಪ್ರಾಕ್ರೋಶದುಚ್ಚೈರಾಲಿಂಗ್ಯ ಪುಣ್ಯಶ್ಲೋಕಮನಿಂದಿತಾ ॥೧೮॥

ಹಿಂದಿನ ರೂಪದಲ್ಲಿಯೇ ಇದ್ದ ತನ್ನ ಪತಿಯನ್ನು ನೋಡಿದ ಅನಿಂದಿತಳಾದ ದಮಯಂತಿಯು ಆ ಪುಣ್ಯಶ್ಲೋಕನನ್ನು ಆಲಿಂಗಿಸಿ ಗಟ್ಟಿಯಾಗಿ ಕಿರುಚಿದಳು.

ಭೈಮೀಮಪಿ ನಳೋ ರಾಜಾ ಭ್ರಾಜಮಾನೋ ಯಥಾ ರವಿಃ ।
ಸಸ್ವಜೇ ಸ್ವಸುತೌ ಚಾಪಿ ಯಥಾವತ್ ಪ್ರತ್ಯನಂದತ ॥೧೯॥

ನಳಮಹಾರಾಜನೂ ಸಹ ಸೂರ್ಯನಂತೆ ಕಂಗೊಳಿಸುತ್ತಾ ದಮಯಂತಿಯನ್ನು ಮತ್ತು ತನ್ನ ಎರಡು ಮಕ್ಕಳನ್ನು ಆಲಿಂಗಿಸಿದನು. ಯಥಾಯೋಗ್ಯವಾಗಿ ಅವರನ್ನು ಅಭಿನಂದಿಸಿದನು.

ತತಃ ಸ್ವೋರಸಿ ವಿನ್ಯಸ್ಯ ವಕ್ತ್ರಂ ತಸ್ಯ ಶುಭಾನನಾ ।
ಪರಿಶ್ರಾಂತೇವ ದುಃಖೇನ ನಿಶಶ್ವಾಸಾಯತೇಕ್ಷಣಾ ॥೨೦॥

ಆನಂತರ ಆ ವಿಶಾಲನೇತ್ರೆಯೂ ಸುಂದರಮುಖಿಯೂ ಆದ ದಮಯಂತಿಯು ತನ್ನ ಎದೆಯಲ್ಲಿ ನಳನ ಮುಖವನ್ನು ಇಟ್ಟುಕೊಂಡು ಬಹಳ ದಣಿದವಳಂತೆ ದುಃಖದಿಂದ ನಿಟ್ಟುಸಿರನ್ನು ಬಿಟ್ಟಳು.

ತಥೈವ ಮಲದಿಗ್ಧಾಂಗೀ ಪರಿಷ್ವಜ್ಯ ಶುಚಿಸ್ಮಿತಾ ।
ಸುಚಿರಂ ಪುರುಷವ್ಯಾಘ್ರಂ ತಸ್ಥೌ ಶೋಕಪರಿಪ್ಲುತಾ ॥೨೧॥

ಆ ಶುಚಿಸ್ಮಿತೆಯಾದ ದಮಯಂತಿಯು ಅಸಂಸ್ಕೃತ ದೇಹದಿಂದ ಶೋಕಪೂರ್ಣಳಾಗಿ ಪುರುಷವ್ಯಾಘ್ರನಾದ ನಳನನ್ನು ಆಲಿಂಗಿಸಿ ಬಹಳ ಸಮಯ ಹಾಗೆಯೇ ಇದ್ದಳು.

ತತಸ್ಸರ್ವಂ ಯಥಾವೃತ್ತಂ ದಮಯಂತ್ಯಾ ನಳಸ್ಯ ಚ ।
ಭೀಮಾಯಾಕಥಯತ್ ಪ್ರೀತ್ಯಾ ವೈದರ್ಭ್ಯಾ ಜನನೀ ನೃಪ ॥೨೨॥

ಆಗ ಎಲೈ ರಾಜನೇ ದಮಯಂತಿಯ ತಾಯಿಯು ದಮಯಂತಿಗೂ ಮತ್ತು ನಳನಿಗೂ ನಡೆದ ಎಲ್ಲಾವೃತ್ತಾಂತವನ್ನೂ ಸಂತೋಷದಿಂದ ಭೀಮರಾಜನಿಗೆ ತಿಳಿಸಿದಳು.

ತತೋಽಬ್ರವೀನ್ಮಹಾರಾಜಃ ಕೃತಶೌಚಮಹಂ ನಳಮ್ ।
ದಮಯಂತ್ಯಾ ಸಹೋಪೇತಂ ಕಾಲ್ಯಂ ದ್ರಷ್ಟಾ ಸುಖೋಷಿತಮ್ ॥೨೩॥

ಆಗ ಮಹಾರಾಜನಾದ ಭೀಮನು ಶುಭ್ರನಾಗಿ ಈ ರಾತ್ರಿ ಸುಖವಾಗಿ ಕಾಲವನ್ನು ಕಳೆದ ನಳನನ್ನು ನಾಳೆಯ ಪ್ರಾತಃಕಾಲ ದಮಯಂತಿಯ ಜೊತೆಯಲ್ಲಿ ನಾನು ನೋಡುವೆನು ಎಂದು ಹೇಳಿದನು.

ತತಸ್ತೌ ಸಹಿತೌ ರಾತ್ರಿಂ ಕಥಯಂತೌ ಪುರಾತನಮ್ ।
ವನೇ ವಿಚರಿತಂ ಸರ್ವಮೂಷತುರ್ಮುದಿತೌ ನೃಪ ॥೨೪॥

ಎಲೈ ರಾಜನೇ ಅನಂತರ ನಳದಮಯಂತಿಯರು ಒಂದಾಗಿ ರಾತ್ರಿಯಲ್ಲಿ ಹಿಂದೆ ಕಾಡಿನಲ್ಲಿ ನಡೆದ ಘಟನೆಗಳನ್ನೆಲ್ಲಾ ಪರಸ್ಪರವಾಗಿ ಹೇಳುತ್ತಾ ಸುಖದಿಂದ ಕಳೆದರು.

ಸ ಚತುರ್ಥೇ ತತೋ ವರ್ಷೇ ಸಂಗಮ್ಯ ಸಹ ಭಾರ್ಯಯಾ ।
ಸರ್ವಕಾಮಸಮೃದ್ಧಾರ್ಥೋ ಲಬ್ಧವಾನ್ ಪರಮಾಂ ಮುದಮ್ ॥

ನಳನು ವಿಯೋಗವಾದ ನಾಲ್ಕನೆಯ ವರ್ಷದಲ್ಲಿ ತನ್ನ ಪತ್ನಿಯ ಸಮಾಗಮವನ್ನು ಹೊಂದಿ ಸರ್ವಕಾಮಪೂರ್ಣನಾಗಿ ಶ್ರೇಷ್ಠವಾದ ಆನಂದವನ್ನು ಹೊಂದಿದನು.

ದಮಯಂತ್ಯಪಿ ಭರ್ತಾರಮವಾಪ್ಯಾಪ್ಯಾಯಿತಾ ಭೃಶಮ್ ।
ಅರ್ಧಸಂಜಾತಸಸ್ಯೇವ ತೋಯಂ ಪ್ರಾಪ್ಯ ವಸುಂಧರಾ ॥೨೬॥

ದಮಯಂತಿಯೂ ಕೂಡ ಅರ್ಧಸಸ್ಯವು ಬೆಳೆದ ಭೂಮಿಯು ಮಳೆಯನ್ನು ಪಡೆದು ಸಂತೋಷಪಡುವಂತೆ ಪತಿಯನ್ನು ಪಡೆದು ಬಹಳ ಸಂತೋಷಗೊಂಡಳು.

ಸಾ ತಂ ಸಮೇತ್ಯ ವ್ಯಪನೀತನಿದ್ರಾ
ಶಾಂತಜ್ವರಾ ಹರ್ಷವಿವೃದ್ಧಸತ್ತ್ವಾ ।
ರರಾಜ ಭೈಮೀ ಸುಸಮಾಪ್ತಕಾಮಾ
ಶೀತಾಂಶುನಾ ರಾತ್ರಿರಿವೋದಿತೇನ ॥೨೭॥

ಅವಳು ಅವನನ್ನು ಹೊಂದಿ ನಿದ್ರೆಯನ್ನು ತೊರೆದು ಮನಸ್ಸಿನ ಆತಂಕಗಳನ್ನೆಲ್ಲಾ ನಾಶಮಾಡಿ ಸಂತೋಷದಿಂದ ಹೆಚ್ಚಾದ ಸತ್ವಗುಣವುಳ್ಳವಳಾಗಿ ತನ್ನ ಎಲ್ಲಾ ಕಾಮಗಳನ್ನೂ ಪಡೆದು ರಾತ್ರಿಯು ಉದಯಿಸಿದ ಚಂದ್ರನ ಜೊತೆಯಲ್ಲಿ ವಿರಾಜಿಸುವಂತೆ ನಳನ ಜೊತೆಯಲ್ಲಿ ವಿರಾಜಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

## ಎಪ್ಪತ್ತೆರಡನೆಯ ಅಧ್ಯಾಯ

(ಭೀಮನಿಂದ ನಳನಿಗೆ ಸತ್ಕಾರ. ಪ್ರೀತಿಯ ಮಾತುಗಳನ್ನಾಡಿ ಋತುಪರ್ಣನ ಪ್ರಯಾಣ.)

### ಬೃಹದಶ್ವಃ

ಅಥ ರಾತ್ರ್ಯಾಂ ವ್ಯತೀತಾಯಾಂ ನಳೋ ರಾಜಾ ವಿಶಾಂಪತೇ ।
ವೈದರ್ಭ್ಯಾ ಸಹಿತಃ ಕಾಲ್ಯಂ ದದರ್ಶ ವಸುಧಾಧಿಪಮ್ ॥೧॥

ತತೋಽಭಿವಾದಯಾಮಾಸ ಪ್ರಯತಃ ಶ್ವಶುರಂ ನಳಃ ।
ತಸ್ಯಾನು ದಮಯಂತೀ ಚ ವವಂದೇ ಪಿತರಂ ಶುಭಾ ॥೨॥

ಎಲೈ ರಾಜನೇ ಆ ರಾತ್ರಿಯು ಕಳೆಯುತ್ತಿರಲು ನಳರಾಜನು ದಮಯಂತಿಯ ಜೊತೆಯಲ್ಲಿ ಪ್ರಾತಃಕಾಲದಲ್ಲಿ ಭೀಮರಾಜನನ್ನು ನೋಡಿದನು. ಅನಂತರ ನಳನು ವಿನಯದಿಂದ ಮಾವನಿಗೆ ನಮಸ್ಕಾರವನ್ನು ಮಾಡಿದನು. ಅವನ ಅನಂತರ ಶುಭಳಾದ ದಮಯಂತಿಯೂ ಸಹ ತಂದೆಯನ್ನು ನಮಸ್ಕರಿಸಿದಳು.

ತಂ ಭೀಮಃ ಪ್ರತಿಜಗ್ರಾಹ ಪುತ್ರವತ್ ಪರಯಾ ಮುದಾ ।
ಯಥಾರ್ಹಂ ಪೂಜಯಿತ್ವಾ ತಂ ಸಮಾಶ್ವಾಸಯತ ಪ್ರಭುಮ್ ॥೩॥

ಭೀಮನು ನಳನನ್ನು ತನ್ನ ಮಗನಂತೆ ಬಹಳ ಸಂತೋಷದಿಂದ ಸ್ವೀಕರಿಸಿದನು. ಯಥಾಯೋಗ್ಯವಾಗಿ ಅವನನ್ನು ಸತ್ಕರಿಸಿ ಪ್ರಭುವಾದ ಅವನಿಗೆ ಸಮಾಧಾನವನ್ನು ಮಾಡಿದನು.

ನಳೇನ ಸಹಿತಾಂ ತತ್ರ ದಮಯಂತೀಂ ಪತಿವ್ರತಾಮ್ ।
ಅನುಜಗ್ರಾಹ ಮಹತಾ ಸತ್ಕಾರೇಣ ಕ್ಷಿತೀಶ್ವರಃ ॥೪॥

ಆ ಕ್ಷಿತೀಶ್ವರನು ಪತಿಯ ಜೊತೆಯಲ್ಲಿದ್ದ ಪತಿವ್ರತೆಯಾದ ದಮಯಂತಿಗೂ ಬಹಳ ಸತ್ಕಾರವನ್ನು ಮಾಡಿ ಅನುಗ್ರಹಿಸಿದನು.

ತಾಮರ್ಹಣಾಂ ನಳೋ ರಾಜಾ ಪ್ರತಿಗೃಹ್ಯ ಯಥಾವಿಧಿ ।
ಪರಿಚರ್ಯಾಂ ಸ್ವಕಾಂ ತಸ್ಮೈ ಯಥಾವತ್ ಪ್ರತ್ಯವೇದಯತ್ ॥೫॥

ನಳರಾಜನು ಮಾವನು ತನಗೆ ಕೊಟ್ಟ ಸತ್ಕಾರವನ್ನು ವಿಧಿವತ್ತಾಗಿ ಸ್ವೀಕರಿಸಿ ಅವನಿಗೆ ತಾನು ಮಾಡಬೇಕಾದ ಪರಿಚರ್ಯೆಯನ್ನು ವಿಧಿಪೂರ್ವಕವಾಗಿ ಮಾಡಿದನು.

ತತೋ ಬಭೂವ ನಗರೇ ಸುಮಹಾನ್ ಹರ್ಷನಿಸ್ವನಃ ।
ಜನಸ್ಯ ಸಂಪ್ರಹೃಷ್ಟಸ್ಯ ನಳಂ ದೃಷ್ಟ್ವಾ ತಥಾಽಗತಮ್ ॥೬॥

ಅನಂತರ ಹಾಗೆ ಹಿಂದಿರುಗಿ ಬಂದ ನಳನನ್ನು ನೋಡಿ ಸಂತೋಷಗೊಂಡ ಪ್ರಜೆಗಳು ನಗರದಲ್ಲಿ ದೊಡ್ಡ ಹರ್ಷೋದ್ಗಾರಗಳನ್ನು ಮಾಡಿದರು.

ಅಶೋಭಯಚ್ಚ ನಗರೀಂ ಪತಾಕಾಧ್ವಜಮಾಲಿನೀಮ್ ।
ಸಿಕ್ತಾಃ ಸುಮೃಷ್ಟಪುಷ್ಪಾಢ್ಯಾ ರಾಜಮಾರ್ಗಾಸ್ತಥಾಕೃತಾಃ ॥೭॥

ದ್ವಾರಿದ್ವಾರಿ ಚ ಪೌರಾಣಾಂ ಪುಷ್ಪಭಂಗಃ ಪ್ರಕಲ್ಪಿತಃ ।
ಅರ್ಚಿತಾನಿ ಚ ವೇಶ್ಮಾನಿ ದೈವತಾಯತಾನಿ ಚ ॥೮॥

ಆ ನಗರವನ್ನೆಲ್ಲಾ ಪತಾಕೆಗಳಿಂದಲೂ ಧ್ವಜಗಳಿಂದಲೂ ಮತ್ತು ಪುಷ್ಪಮಾಲೆಗಳಿಂದಲೂ ಅಲಂಕರಿಸಿದರು. ರಾಜಮಾರ್ಗಗಳೆಲ್ಲವೂ ಸುಗಂಧಯುಕ್ತವಾದ ಜಲದಿಂದ ಸಿಂಪಡಿಸಲ್ಪಟ್ಟು ಪುಷ್ಪಗಳು ಹರಡಿ ಸುಂದರವಾಗಿ ಮಾಡಲ್ಪಟ್ಟವು. ಪೌರರ ಪ್ರತಿಯೊಂದು ಮನೆಯಬಾಗಿಲುಗಳಲ್ಲಿ ಪುಷ್ಪವಿನ್ಯಾಸಗಳು ಮಾಡಲ್ಪಟ್ಟವು. ಮನೆಗಳು ಮತ್ತು ದೇವಾಲಯಗಳು ಅಲಂಕರಿಸಲ್ಪಟ್ಟವು.

ಋತುಪರ್ಣೋಽಪಿ ಶುಶ್ರಾವ ಬಾಹುಕಚ್ಛದ್ಮಿನಂ ನಳಮ್ ।
ದಮಯಂತ್ಯಾ ಸಮಾಯುಕ್ತಂ ಜಹೃಷೇ ಚ ಪರಂತಪಃ ॥೯॥

ಪರಂತಪನಾದ ಋತುಪರ್ಣನೂ ಕೂಡ ಬಾಹುಕನ ಛದ್ಮವೇಷದಲ್ಲಿದ್ದ ನಳನು ದಮಯಂತಿಯ ಸಮಾಗಮವನ್ನು ಹೊಂದಿದನೆಂದು ಕೇಳಿ ಸಂತೋಷಪಟ್ಟನು.

ತಮಾನಾಯ್ಯ ನಳಂ ರಾಜಾ ಕ್ಷಮಯಾಮಾಸ ಪಾರ್ಥಿವಮ್ ।
ಸ ಚ ತಂ ಕ್ಷಮಯಾಮಾಸ ಹೇತುಭಿರ್ಬುದ್ಧಿಸಮ್ಮತೈಃ ॥೧೦॥

ಋತುಪರ್ಣರಾಜನು ನಳನನ್ನು ಕರೆಸಿ ಅವನ ಕ್ಷಮೆಯನ್ನು ಕೇಳಿದನು. ನಳನೂ ಸಹ ಬುದ್ಧಿಗೆ ಒಪ್ಪುವಕಾರಣಗಳನ್ನು ಹೇಳಿ ಅವನನ್ನು ಕ್ಷಮಿಸಿದನು.

ಸ ಸತ್ಕೃತೋ ಮಹೀಪಾಲೋ ನೈಷಧಂ ವಿಸ್ಮಿತಾನನಃ ।
ದಿಷ್ಟ್ಯಾ ಸಮೇತೋ ದಾರೈಸ್ತ್ವಮಿತ್ಯುವಾಚ ನಳಂ ನೃಪಃ ॥೧೧॥

ಹೀಗೆ ಸತ್ಕೃತನಾದ ಆ ಋತುಪರ್ಣರಾಜನು ವಿಸ್ಮಯದಿಂದ ಕೂಡಿದ ಮುಖವುಳ್ಳವನಾಗಿ ನೈಷಧರಾಜನಾದ ನಳನನ್ನು ಕುರಿತು ದೇವರ ದಯೆಯಿಂದ ನೀನು ನಿನ್ನ ಪತ್ನಿಯನ್ನು ಸೇರಿದೆ ಎಂದು ಹೇಳಿದನು.

ಕಚ್ಚಿನ್ನ ನಾಪರಾಧಂ ತೇ ಕೃತವಾನಸ್ಮಿ ನೈಷಧ ।
ಅಜ್ಞಾತವಾಸಂ ವಸತೋ ಮದ್ಗೃಹೇ ನಿಷಧಾಧಿಪ ॥೧೨॥

ಎಲೈ ನೈಷಧನೇ, ನೀನು ನನ್ನ ಮನೆಯಲ್ಲಿ ಅಜ್ಞಾತವಾಸವನ್ನು ಮಾಡುವಾಗ ನಾನು ನಿನಗೆ ಯಾವ ಅಪರಾಧವನ್ನೂ ಮಾಡಿಲ್ಲವಷ್ಟೇ?

ಯದಿ ವಾऽಬುದ್ಧಿಪೂರ್ವಾಣಿ ಯದಿ ಬುದ್ಧ್ಯಾऽಪಿ ಕರ್ಹಿಚಿತ್।
ಮಯಾ ಕೃತಾನ್ಯಕಾರ್ಯಾಣಿ ತಾನಿ ತ್ವಂ ಕ್ಷಂತುಮರ್ಹಸಿ ॥೧೩॥

ನಾನು ತಿಳಿದಾಗಲೀ ಅಥವಾ ತಿಳಿಯದೇ ಆಗಲೀ ಏನಾದರೂ ಅಪರಾಧವನ್ನು ಮಾಡಿದ್ದರೆ ನೀನು ಆ ಅಪರಾಧಗಳನ್ನು ಕ್ಷಮಿಸಬೇಕು ಎಂದು ಹೇಳಿದನು.

ನಳಃ

ನ ಮೇऽಪರಾಧಂ ಕೃತವಾನ್ ತ್ವಂ ಸ್ವಲ್ಪಮಪಿ ಪಾರ್ಥಿವ ।
ಕೃತೇऽಪಿ ಚ ನ ಮೇ ಕೋಪಃ ಕ್ಷಂತವ್ಯಂ ಹಿ ಮಯಾ ತವ ॥೧೪॥

ಎಲೈ ರಾಜನೇ ನೀನು ನನಗೆ ಅಲ್ಪವಾದ ಅಪರಾಧವನ್ನೂ ಮಾಡಿಲ್ಲ. ಮಾಡಿದ್ದರೂ ಸಹ ನನಗೆ ಕೋಪವು ಬರುತ್ತಿರಲಿಲ್ಲ. ನೀನು ಯಾವಾಗಲೂ ನನ್ನಿಂದ ಕ್ಷಮಿಸಲ್ಪಡಬೇಕಾದವನು.

ಪೂರ್ವಂ ಹ್ಯಪಿ ಸಖಾ ಚಾಸಿ ಸಂಬಂಧೀ ಚ ನರಾಧಿಪ ।
ಅತ ಊರ್ಧ್ವಂ ಚ ಭೂಯಸ್ತ್ವಂ ಪ್ರೀತಿಮಾಹರ್ತುಮರ್ಹಸಿ ॥೧೫॥

ಎಲೈ ರಾಜನೇ ನೀನು ಮೊದಲೇ ನನ್ನ ಸ್ನೇಹಿತನೂ ಮತ್ತು ಬಂಧುವೂ ಆಗಿದ್ದಿ. ಇನ್ನು ಮುಂದೆ ನೀನು ನನ್ನ ಮೇಲೆ ಮೊದಲಿಗಿಂತಲೂ ಹೆಚ್ಚು ಪ್ರೀತಿಯನ್ನು ಮಾಡಬೇಕು.

ಸರ್ವಕಾಮೈಃ ಸುವಿಹಿತಃ ಸುಖಮಸ್ಮ್ಯುಷಿತಸ್ತ್ವಯಿ ।
ನ ತಥಾ ಸ್ವಗೃಹೇ ರಾಜನ್ ಯಥಾ ತವ ಗೃಹೇ ಸದಾ ॥೧೬॥

ನಾನು ನಿನ್ನ ಮನೆಯಲ್ಲಿ ಎಲ್ಲ ಕಾಮಗಳಿಂದಲೂ ಪೂರ್ಣನಾಗಿ ಸುಖವಾಗಿ ವಾಸಮಾಡಿದೆ. ಎಲೈ ರಾಜನೇ ನಿನ್ನ ಮನೆಯಲ್ಲಿ ಎಷ್ಟು ಸೌಖ್ಯವನ್ನು ನೀಡಿದೆಯೋ ಅಷ್ಟು ನನ್ನ ಮನೆಯಲ್ಲಿಯೇ ಇಲ್ಲ.

ಇದಂ ಚೈವ ಹಯಜ್ಞಾನಂ ತ್ವದೀಯಂ ಮಮ ತಿಷ್ಠತಿ ।
ತದುಪಾಕರ್ತುಮಿಚ್ಛಾಮಿ ಮನ್ಯಸೇ ಯದಿ ಪಾರ್ಥಿವ ॥೧೭॥

ನೀನು ನನ್ನಲ್ಲಿ ನ್ಯಾಸವಾಗಿ ಇಟ್ಟಿದ್ದ ಅಶ್ವವಿದ್ಯೆಯು ನನ್ನಲ್ಲಿಯೇ ಇದೆ. ಎಲೈ ರಾಜನೇ ನೀನು ಇಚ್ಛಿಸುವುದಾದರೆ ಅದನ್ನು ನಿನಗೆ ಹಿಂದಿರುಗಿಸಲು ಬಯಸುತ್ತೇನೆ.

ಏವಮುಕ್ತ್ವಾ ದದೌ ವಿದ್ಯಾಮೃತುಪರ್ಣಾಯ ನೈಷಧಃ ।
ಸ ಚ ತಾಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ ॥೧೮॥

ಹೀಗೆ ಹೇಳಿ ನಳನು ಋತುಪರ್ಣನಿಗೆ ಅಶ್ವವಿದ್ಯೆಯನ್ನು ಉಪದೇಶಿಸಿದನು. ಆ ಋತುಪರ್ಣನಾದರೂ ವಿಧಿಪೂರ್ವಕವಾಗಿ ಕರ್ಮವನ್ನು ಮಾಡಿ ಆ ವಿದ್ಯೆಯನ್ನು ಸ್ವೀಕರಿಸಿದನು.

ತತೋ ಗೃಹ್ಯಾಶ್ವಹೃದಯಂ ಪ್ರೀತೋ ಭಾರ್ಗವರಿರ್ನೃಪ ।
ಸೂತಮನ್ಯಮುಪಾದಾಯ ಪ್ರಯಯೌ ಸ್ವಾಂ ಪುರೀಂ ಪ್ರತಿ ॥೧೯॥

ಎಲೈ ರಾಜನೇ ಅಶ್ವಹೃದಯವನ್ನು ಸ್ವೀಕರಿಸಿ ಸಂತೋಷಗೊಂಡ ಋತುಪರ್ಣನು ಇನ್ನೊಬ್ಬ ಸೂತನನ್ನು ಕರೆದುಕೊಂಡು ತನ್ನ ಪಟ್ಟಣಕ್ಕೆ ಪ್ರಯಾಣಮಾಡಿದನು.

ಋತುಪರ್ಣೇ ಪ್ರತಿಗತೇ ನಳೋ ರಾಜಾ ವಿಶಾಂಪತೇ ।
ನಗರೇ ಕುಂಡಿನೇ ಕಾಲಂ ನಾತಿದೀರ್ಘಮಿವಾವಸತ್ ॥೨೦॥

ಎಲೈ ರಾಜನೇ ಋತುಪರ್ಣನು ಹಿಂದಿರುಗಿದ ಮೇಲೆ ನಳಮಹಾರಾಜನು ಕುಂಡಿನಿ ನಗರದಲ್ಲಿ ಸ್ವಲ್ಪಕಾಲದವರೆಗೆ ವಾಸಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಸಪ್ತತಿತಮೋऽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

## ಎಪ್ಪತ್ಮೂರನೆಯ ಅಧ್ಯಾಯ

(ತನ್ನ ಪಟ್ಟಣಕ್ಕೆ ಹಿಂದಿರುಗಿ ಪುಷ್ಕರನನ್ನು ದ್ಯೂತದಲ್ಲಿ
ಸೋಲಿಸಿ ಅವನಿಗೆ ನಳನಿಂದ ಪ್ರಾಣದಾನ.)

### ಬೃಹದಶ್ವಃ

ಸ ಮಾಸಮುಷ್ಯ ಕೌಂತೇಯ ಭೀಮಮಾಮಂತ್ರ್ಯ ನೈಷಧಃ ।
ಪುರಾದಲ್ಪಪರೀವಾರೋ ಜಗಾಮ ನಿಷಧಾನ್ ಪ್ರತಿ ॥೧॥

ಎಲೈ ಕೌಂತೇಯನೇ, ನೈಷಧನು ಒಂದುತಿಂಗಳಕಾಲ ವಿದರ್ಭದೇಶದಲ್ಲಿ ವಾಸಮಾಡಿ ಭೀಮರಾಜನ ಅನುಮತಿಯನ್ನು ಪಡೆದು ಅಲ್ಪಪರಿವಾರ ಸಹಿತನಾಗಿ ಅಲ್ಲಿಂದ ನಿಷಧ ದೇಶಕ್ಕೆ ಬಂದನು.

ರಥೇನೈಕೇನ ಶುಭ್ರೇಣ ದಂತಿಭಿಃ ಪರಿಷೋಡಶೈಃ ।
ಪಂಚಾಶದ್ಭಿರ್ಹಯೈಶ್ಚಾಪಿ ಷಟ್‌ಶತೈಶ್ಚ ಪದಾತಿಭಿಃ ॥೨॥

ಸ ಕಂಪಯನ್ನಿವ ಮಹೀಂ ತ್ವರಮಾಣೋ ಮಹೀಪತಿಃ ।
ಪ್ರವಿವೇಶಾತಿಸಂರಬ್ಧಸ್ತರಸೈವ ಮಹಾಮನಾಃ ॥೩॥

ಒಂದು ಶುಭ್ರವಾದ ರಥ ಹದಿನಾರು ಆನೆಗಳು ಐವತ್ತು ಕುದುರೆಗಳು ಮತ್ತು ಆರುನೂರು ಪದಾತಿಗಳೊಡನೆ ಮಹಾಮನನಾದ ಆ ಮಹೀಪತಿಯು ಭೂಮಿಯನ್ನು ನಡುಗಿಸುತ್ತಾ ಶೀಘ್ರವಾಗಿ ಬಹಳ ಕೋಪದಿಂದಲೇ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ತತಃ ಪುಷ್ಕರಮಾಸಾದ್ಯ ವೀರಸೇನಸುತೋ ಬಲೀ ।
ಉವಾಚ ದೀವ್ಯಾವ ಪುನರ್ಬಹುವಿತ್ತಂ ಮಯಾऽऽರ್ಜಿತಮ್ ॥೪॥

ಅನಂತರ ಬಲಿಷ್ಠನೂ ವೀರಸೇನಸುತನೂ ಆದ ಅವನು ಪುಷ್ಕರನನ್ನು ಸಮೀಪಿಸಿ ನಾನು ಬಹಳ ಧನವನ್ನು ಗಳಿಸಿದ್ದೇನೆ ಪುನಃ ದ್ಯೂತವನ್ನು ಆಡೋಣ ಎಂದು ಹೇಳಿದನು.

ದಮಯಂತೀ ಚ ಯಚ್ಚಾನ್ಯನ್ ಮಯಾ ವಸು ಸಮಾರ್ಜಿತಮ್ ।
ಏಷ ವೈ ಮಮ ಸಂನ್ಯಾಸಸ್ತವ ರಾಜ್ಯಂ ತು ಪುಷ್ಕರ ॥೫॥

ಪುಷ್ಕರನೇ ದಮಯಂತಿ ಮತ್ತು ನಾನು ಸಂಪಾದಿಸಿದ ಧನ ಇದು ನಾನು ಪಣಕ್ಕಿಡುವ ವಸ್ತು. ನೀನು ರಾಜ್ಯವನ್ನು ಪಣಕ್ಕಿಡಬೇಕು.

ಪುನಃ ಪ್ರವರ್ತತಾಂ ದ್ಯೂತಮಿತಿ ಮೇ ನಿಶ್ಚಿತಾ ಮತಿಃ ।
ಏಕಪಾಣೇನ ಭದ್ರಂ ತೇ ಪಣಯೋಶ್ಚ ಪಣಾವಹೇ ॥೬॥

ಪುನಃ ದ್ಯೂತವನ್ನು ಆಡಬೇಕೆಂದು ನನ್ನ ನಿಶ್ಚಿತವಾದ ಅಭಿಪ್ರಾಯ. ನಿನಗೆ ಮಂಗಳವಾಗಲಿ ಈ ಪಣಗಳನ್ನು ಇಟ್ಟು ಒಂದೇ ಬಾರಿಗೆ ದ್ಯೂತವಾಡೋಣ.

ಜಿತ್ವಾ ಪರಸ್ವಮಾಹೃತ್ಯ ರಾಜ್ಯಂ ವಾ ಯದಿ ವಾ ವಸು ।
ಪ್ರತಿಪಾಣಃ ಪ್ರದಾತವ್ಯಃ ವರಂ ಹಿ ಧನಮುಚ್ಯತೇ ॥೭॥

ಗೆದ್ದವರು ಇನ್ನೊಬ್ಬರ ಪಣವನ್ನು ಸ್ವೀಕರಿಸುತ್ತಾರೆ. ರಾಜ್ಯವಾಗಲೀ ಅಥವಾ ಧನವಾಗಲೀ ಪಣವಷ್ಟೇ. ಪಣಕ್ಕೆ ಇಟ್ಟ ವಸ್ತುಗಳನ್ನು ಕೊಡಲೇಬೇಕು. ಅದರಲ್ಲಿ ಧನವೇ ಶ್ರೇಷ್ಠವೆಂದು ಹೇಳಲ್ಪಡುತ್ತದೆ.

ನ ಚೇದ್ವಾಂಛಸಿ ತದ್ದ್ಯೂತಂ ಯುದ್ಧದ್ಯೂತಂ ಪ್ರವರ್ತತಾಮ್।
ದ್ವೈರಥೇನಾಪಿ ವೈ ಶಾಂತಿಸ್ತವ ವಾ ಮಮ ವಾ ನೃಪ ॥೮॥

ಈ ಅಕ್ಷದ್ಯೂತವನ್ನು ನೀನು ಬಯಸದಿದ್ದರೆ ಯುದ್ಧದ್ಯೂತವೇ ನಡೆಯಲಿ. ಎಲೈ ರಾಜನೇ, ದ್ವೈರಥಯುದ್ಧದಲ್ಲಿ (ಇಬ್ಬರು ರಥದಲ್ಲಿ ಕುಳಿತು ಯುದ್ಧಮಾಡುವುದು) ನಿನ್ನ ಅಥವಾ ನನ್ನ ಅವಸಾನವಾಗಲಿ.

ವಂಶಭೋಜ್ಯಮಿದಂ ರಾಜ್ಯಮಾರ್ಜಿತವ್ಯಂ ಯಥಾಗತಮ್ ।
ಯೇನ ಕೇನಾಪ್ಯುಪಾಯೇನ ವೃದ್ಧಾನಾಮಿತಿ ಶಾಸನಮ್ ॥೯॥

ನಮ್ಮ ವಂಶದವರಿಂದ ಭೋಗಿಸಲ್ಪಡಬೇಕಾದ ಈ ರಾಜ್ಯವನ್ನು ಯಾವುದಾದರೂ ಉಪಾಯದಿಂದ ಚೆನ್ನಾಗಿ ಸಂಪಾದಿಸಬೇಕೆಂಬುದು ದೊಡ್ಡವರ ಅನುಶಾಸನ.

ದ್ವಯೋರೇಕತರೇ ಬುದ್ಧಿಃ ಕ್ರಿಯತಾಮದ್ಯ ಪುಷ್ಕರ ।
ಕೈತವೇನಾಕ್ಷವತ್ಯಾಂ ವಾ ಯುದ್ಧೇ ವಾ ನಮ್ಯತಾಂ ಧನುಃ ॥೧೦॥

ಪುಷ್ಕರನೇ ಈ ದಿನ ಈ ಎರಡರಲ್ಲಿ ಒಂದನ್ನು ನಿಶ್ಚಯಿಸು. ಪಣವನ್ನು ಒಡ್ಡಿ ದ್ಯೂತವನ್ನು ಆಡು. ಅಥವಾ ಯುದ್ಧದಲ್ಲಿ ಬಿಲ್ಲನ್ನು ಬಗ್ಗಿಸು.

ನೈಷಧೇನೈವಮುಕ್ತಸ್ತು ಪುಷ್ಕರಃ ಪ್ರಹಸನ್ನಿವ ।
ಧ್ರುವಮಾತ್ಮಜಯಂ ಮತ್ವಾ ಪ್ರತ್ಯಾಹ ಪೃಥಿವೀಪತಿಮ್ ॥೧೧॥

ದಿಷ್ಟ್ಯಾ ತ್ವಯಾऽऽರ್ಜಿತಂ ದ್ರವ್ಯಂ ಪ್ರತಿಪಾಣಾಯ ನೈಷಧ ।
ದಿಷ್ಟ್ಯಾ ಚ ದುಷ್ಕೃತಂ ಕರ್ಮ ದಮಯಂತ್ಯಾಃ ಕ್ಷಯಂ ಗತಮ್ ॥೧೨॥

ನಳನಿಂದ ಹೀಗೆ ಹೇಳಲ್ಪಟ್ಟ ಪುಷ್ಕರನು ನಗುತ್ತಾ ತನ್ನ ಜಯವು ನಿಶ್ಚಯವೆಂದು ತಿಳಿದು ರಾಜನನ್ನು ಕುರಿತು ಹೇಳಿದನು. ನೈಷಧನೇ ಅದೃಷ್ಟವಶಾತ್ ನೀನು ಪಣವನ್ನು ಇಡುವುದಕ್ಕಾಗಿ ಧನವನ್ನುಗಳಿಸಿದ್ದೀಯೆ. ಅದೃಷ್ಟವಶದಿಂದಲೇ ದಮಯಂತಿಯ ಪಾಪಕರ್ಮವು (ದುರವಸ್ಥೆಯು) ನಾಶವನ್ನು ಹೊಂದಿದೆ.

ದಿಷ್ಟ್ಯಾ ವೈ ಪ್ರೀಯಸೇ ರಾಜನ್ ಸದಾರೋऽರಿನಿಬರ್ಹಣ ।
ಪುನರ್ದ್ಯೂತೇ ಚ ತೇ ಬುದ್ಧಿರ್ದಿಷ್ಟ್ಯಾ ಪುರುಷಸತ್ತಮ ॥೧೩॥

ರಾಜನೇ ಅದೃಷ್ಟವಶದಿಂದಲೇ ನೀನು ಪತ್ನಿಯ ಜೊತೆಯಲ್ಲಿ ಸುಖವಾಗಿದ್ದೀಯೆ ಶತ್ರುಸಂಹಾರಕನಾದ ಪುರುಷಶ್ರೇಷ್ಠನೇ ಅದೃಷ್ಟವಶವಾಗಿಯೇ ನಿನಗೆ ಪುನಃ ದ್ಯೂತವನ್ನು ಆಡುವ ಬುದ್ಧಿಯುಂಟಾಗಿದೆ.

ಜಿತೇನಾನೇನ ವೈದರ್ಭೀ ಧನೇನ ಸಮಲಂಕೃತಾ ।
ಮಾಮುಪಸ್ಥಾಸ್ಯತಿ ವ್ಯಕ್ತಂ ದಿವಿ ಶಕ್ರಂ ಶಚೀ ಯಥಾ ॥೧೪॥

ನಿತ್ಯಶೋ ಹಿ ಸ್ಮರಾಮಿ ತ್ವಾಂ ಪ್ರತೀಕ್ಷಾಮಿ ಚ ನೈಷಧ ।
ದೇವನೇ ಚ ಮಮ ಪ್ರೀತಿರ್ನ ಭವತ್ಯಸುಹೃದ್ಗಣೈಃ ॥೧೫॥

ನಾನು ಈ ದ್ಯೂತವನ್ನು ಗೆದ್ದರೆ ನೀನು ಗಳಿಸಿದ ಧನದಿಂದ ಚೆನ್ನಾಗಿ ಅಲಂಕೃತಳಾದ ದಮಯಂತಿಯು ಸ್ವರ್ಗದಲ್ಲಿ ಶಚಿಯು ಇಂದ್ರನನ್ನು ಒಲೈಸಿದಂತೆ ಸ್ಪಷ್ಟವಾಗಿ ನನ್ನನ್ನು ಒಲೈಸುತ್ತಾಳೆ. ನೈಷಧನೇ ನಾನು ಯಾವಾಗಲೂ ನಿನ್ನನ್ನೇ ಸ್ಮರಿಸುತ್ತಾ ನಿರೀಕ್ಷಿಸುತ್ತಿದ್ದೇನೆ. ನನಗೆ ಅಕ್ಷದ್ಯೂತದಲ್ಲಿಯೇ ಪ್ರೀತಿ. ಶತ್ರುಗಳ ಜೊತೆಯಲ್ಲಿ ಯುದ್ಧಮಾಡುವುದರಲ್ಲಿ ಪ್ರೀತಿಯಿಲ್ಲ.

ಜಿತ್ವಾಽದ್ಯೈವ ವರಾರೋಹಾಂ ದಮಯಂತೀಮನಿಂದಿತಾಮ್ ।
ಕೃತಕೃತ್ಯೋ ಭವಿಷ್ಯಾಮಿ ಸಾ ಹಿ ಮೇ ನಿತ್ಯಶೋ ಹೃದಿ ॥೧೬॥

ಈ ದಿನವೇ ಅನಿಂದಿತಳಾದ ಸುಂದರಿಯಾದ ದಮಯಂತಿಯನ್ನು ಗೆದ್ದು ನಾನು ಕೃತಕೃತ್ಯನಾಗುವೆನು. ಅವಳೇ ಯಾವಾಗಲೂ ನನ್ನ ಮನಸ್ಸಿನಲ್ಲಿ ಇದ್ದಾಳಷ್ಟೆ?

ಶ್ರುತ್ವಾ ತು ತಸ್ಯ ತಾಂ ವಾಚಂ ಬಹ್ವಬದ್ಧಪ್ರಲಾಪಿನಃ ।
ಇಯೇಷ ಸ ಶಿರಶ್ಚೇತ್ತುಂ ಖಡ್ಗೇನ ಕುಪಿತೋ ನಳಃ ॥೧೭॥

ಹೀಗೆ ಬಹಳ ಅಬದ್ಧವಾಗಿ ಬಡಬಡಿಸುತ್ತಿದ್ದ ಅವನ ಆ ಮಾತುಗಳನ್ನು ಕೇಳಿ ಕೋಪಗೊಂಡ ನಳನು ಅವನ ಶಿರಸ್ಸನ್ನು ಖಡ್ಗದಿಂದ ಕತ್ತರಿಸಲು ಬಯಸಿದನು.

ಸ್ಮಯಂಸ್ತು ಕ್ರೋಧತಾಮ್ರಾಕ್ಷಸ್ತಮುವಾಚ ನಳೋ ನೃಪಃ ।
ಪಣಾವಃ ಕಿಂ ವ್ಯಾಹರಸೇ ಜಿತೋ ನ ವ್ಯಾಹರಿಷ್ಯಸಿ ॥೧೮॥

ಕೋಪಗೊಂಡ ನಳಮಹಾರಾಜನು ಕ್ರೋಧದಿಂದ ಕೆಂಪಾದ ಕಣ್ಣುಳ್ಳವನಾಗಿ ಅವನನ್ನು ಕುರಿತು ನಗುತ್ತಲೇ ದ್ಯೂತವನ್ನು ಆಡೋಣ ಏಕೆ ಮಾತನಾಡುತ್ತಿದ್ದೀಯೆ? ನೀನು ಪರಾಜಿತನಾಗುವಿ. ಅನಂತರ ಮಾತನಾಡುವುದಿಲ್ಲ ಎಂದು ಹೇಳಿದನು.

ತತಃ ಪ್ರಾವರ್ತತ ದ್ಯೂತಂ ಪುಷ್ಕರಸ್ಯ ನಳಸ್ಯ ಚ ।
ಏಕಪಾಣೇನ ಭದ್ರಂ ತೇ ನಳೇನ ಸ ಪರಾಜಿತಃ ॥೧೯॥

ಅನಂತರ ಪುಷ್ಕರನಿಗೂ ಮತ್ತು ನಳನಿಗೂ ದ್ಯೂತವು ಜರುಗಿತು. ಧರ್ಮರಾಜನೇ ನಿನಗೆ ಮಂಗಳವಾಗಲಿ ಒಂದೇ ಆಟದಲ್ಲಿ ಪುಷ್ಕರನು ನಳನಿಗೆ ಎಲ್ಲವನ್ನೂ ಸೋತನು.

ಸರತ್ನಕೋಶನಿಚಯಂ ಸಹ ಪ್ರಾಣೇನ ನೈಷಧಃ ।
ಜಿತ್ವಾ ಚ ಪುಷ್ಕರಂ ರಾಜಾ ಪ್ರಹಸನ್ನಿದಮಬ್ರವೀತ್ ॥೨೦॥

ನಳನು ಪುಷ್ಕರನನ್ನು ಅವನ ರಾಜ್ಯ ರತ್ನಕೋಶಗಳು ಮತ್ತು ಪ್ರಾಣಗಳ ಜೊತೆಯಲ್ಲಿ ಗೆದ್ದು ನಗುತ್ತಾ ಹೀಗೆ ಮಾತನಾಡಿದನು.

ಜಿತಂ ಸರ್ವಮಿದಂ ರಾಜ್ಯಮವ್ಯಗ್ರಂ ಹತಕಂಟಕಮ್ ।
ವೈದರ್ಭೀ ನ ತ್ವಯಾ ಶಕ್ಯಾ ರಾಜಾಪಶದ ವೀಕ್ಷಿತುಮ್ ।
ತಸ್ಯಾಸ್ತ್ವಂ ಸಪರೀವಾರೋ ಮೂಢ ದಾಸತ್ವಮಾಗತಃ ॥೨೧॥

ಈ ನಿನ್ನ ರಾಜ್ಯವು ನಿರಾತಂಕವಾಗಿ ಶತ್ರುರಹಿತರಾಗಿರುವಂತೆ ನನ್ನಿಂದ ಗೆಲ್ಲಲ್ಪಟ್ಟಿದೆ. ರಾಜಾಧಮನೇ ನೀನು ದಮಯಂತಿಯನ್ನು ಕಣ್ಣಿನಿಂದಲೂ ನೋಡಲು ಶಕ್ತನಲ್ಲ. ಮೂಢನೇ ನೀನು ನಿನ್ನ ಪರಿವಾರದ ಜೊತೆಯಲ್ಲಿ ಅವಳಿಗೆ ದಾಸನಾಗಿದ್ದೀಯೆ.

ನ ತತ್ ತ್ವಯಾ ಕೃತಂ ಕರ್ಮ ಯೇನಾಹಂ ವಿಜಿತಸ್ತ್ವಯಾ ।
ಕಲಿನಾ ತತ್ ಕೃತಂ ಕರ್ಮ ತ್ವಂ ತು ಮೂಢ ನ ಬುಧ್ಯಸೇ ॥೨೨॥

ನೀನು ನನ್ನನ್ನು ದ್ಯೂತದಲ್ಲಿ ಜಯಿಸಿದುದು ನಿನ್ನ ಸಾಧನೆಯಲ್ಲ. ಕಲಿಯು ಆ ಕಾರ್ಯವನ್ನು ಮಾಡಿದನು. ಮೂಢನೇ, ನಿನಗೆ ಅದರ ಜ್ಞಾನವಿಲ್ಲ.

ನಾಹಂ ಪರಕೃತಂ ದೋಷಂ ತ್ವಯ್ಯಾಧಾಸ್ಯೇ ಕಥಂಚನ ।
ಯಥಾಸುಖಂ ವೈ ತ್ವಂ ಜೀವ ಪ್ರಾಣಾನವಸೃಜಾಮಿ ತೇ ॥೨೩॥

ಇನ್ನೊಬ್ಬರಿಂದ ಉಂಟಾದ ದೋಷವನ್ನು ನಾನು ಯಾವ ಕಾರಣದಿಂದಲೂ ನಿನ್ನ ಮೇಲೆ ಹೇರುವುದಿಲ್ಲ. ನಿನ್ನ ಪ್ರಾಣಗಳನ್ನು ಬಿಟ್ಟುಕೊಟ್ಟಿದ್ದೇನೆ. ನೀನು ಸುಖವಾಗಿ ಜೀವನವನ್ನು ಮಾಡು.

ತಥೈವ ಚ ಮಮ ಪ್ರೀತಿಃ ತ್ವಯಿ ವೀರ ನ ಸಂಶಯಃ ।
ಸೌಭ್ರಾತ್ರಂ ಚೈವ ಮೇ ತತ್ತೋ ನ ಕದಾಚಿತ್ ಪ್ರಹಾಸ್ಯತಿ ॥೨೪॥

ಪುಷ್ಕರ ತ್ವಂ ಹಿ ಮೇ ಭ್ರಾತಾ ಸಂಜೀವ ಶರದಃ ಶತಂ ॥೨೫॥

ಎಲೈ ವೀರನೇ, ನಿನಗೆ ನಾಶವಿಲ್ಲದ ಕೀರ್ತಿಯು ಇರಲಿ. ನನಗೆ ನಿನ್ನಲ್ಲಿ ಮೊದಲಿದ್ದಂತೆ ಪ್ರೀತಿಯಿರುತ್ತದೆ. ಇದರಲ್ಲಿ ಸಂಶಯವಿಲ್ಲ. ನಿನ್ನ ಜೊತೆಯಲ್ಲಿರುವ ಒಳ್ಳೆಯ ಸೋದರಸಂಬಂಧವು ಎಂದೂ ನಾಶವನ್ನು ಹೊಂದುವುದಿಲ್ಲ. ಪುಷ್ಕರನೇ, ನೀನು ನನ್ನ ತಮ್ಮ. ನೂರುವರ್ಷಗಳಕಾಲ ಬಾಳು.

ಏವಂ ನಳಃ ಸಾಂತ್ವಯಿತ್ವಾ ಭ್ರಾತರಂ ಸತ್ಯವಿಕ್ರಮಃ ।
ಪುಷ್ಕರಂ ಕ್ಷಮಯಾಮಾಸ ಸಾಂತ್ವಯಿತ್ವಾ ಪುನಃ ಪುನಃ ॥೨೬॥

ಹೀಗೆ ಸತ್ಯವಿಕ್ರಮನಾದ ನಳನು ತನ್ನ ತಮ್ಮನನ್ನು ಪುನಃಪುನಃ ಸಮಾಧಾನಪಡಿಸಿ ಅವನನ್ನು ಕ್ಷಮಿಸಿದನು.

ಸಾಂತ್ವಿತೋ ನೈಷಧೇನೈವಂ ಪುಷ್ಕರಃ ಪ್ರತ್ಯುವಾಚ ಹ ।
ಪುಣ್ಯಶ್ಲೋಕಂ ತದಾ ರಾಜನ್ನಭಿವಾದ್ಯ ಕೃತಾಂಜಲಿಃ ॥೨೭॥

ಎಲೈ ರಾಜನೇ ಹೀಗೆ ನೈಷಧನಿಂದ ಕ್ಷಮಿಸಿ ಸಮಾಧಾನಗೊಳಿಸಲ್ಪಟ್ಟ ಪುಷ್ಕರನು ಆ ಪುಣ್ಯಶ್ಲೋಕನನ್ನು ನಮಸ್ಕರಿಸಿ ಕೈಗಳನ್ನು ಮುಗಿದು ಮಾತನಾಡಿದನು.

ಕೀರ್ತಿರಸ್ತು ತವಾಕ್ಷಯ್ಯಾ ಜೀವ ವರ್ಷಾಯುತಂ ಸುಖೀ ।
ಯೋ ಮೇ ವಿತರಸಿ ಪ್ರಾಣಾನ್ ಅಧಿಷ್ಠಾನಂ ಚ ಪಾರ್ಥಿವ ॥೨೮॥

ಎಲೈ ರಾಜನೇ ನನಗೆ ಪ್ರಾಣಗಳನ್ನು ಮತ್ತು ವಾಸಸ್ಥಾನವನ್ನು ದಾನಮಾಡಿದ ನೀನು ಹತ್ತು ಸಾವಿರವರ್ಷ ಸುಖವಾಗಿ ಬದುಕು.

ಸ ತಥಾ ಸಾಂತ್ವಿತೋ ರಾಜ್ಞಾ ಮಾಸಮುಷ್ಯ ತದಾ ನೃಪಃ ।
ಪ್ರಯಯೌ ಸ್ವಪುರೀಂ ಹೃಷ್ಟಃ ವಿನೀತೈಃ ಪರಿಚಾರಕೈಃ ।
ಭ್ರಾಜಮಾನ ಇವಾದಿತ್ಯೋ ವಪುಷಾ ಕುರುನಂದನ ॥೨೯॥

ಎಲೈ ಕುರುನಂದನನೇ ನಳನಿಂದ ಹೀಗೆ ಸಮಾಧಾನಮಾಡಲ್ಪಟ್ಟ ಪುಷ್ಕರನು ನಳನ ಜೊತೆಯಲ್ಲಿ ಒಂದು ತಿಂಗಳುವಾಸಮಾಡಿ ಸಂತೋಷದಿಂದ ತನ್ನ ಜನಗಳಿಂದ ಕೂಡಿಕೊಂಡು ದೊಡ್ಡಸೇನೆಯಿಂದಲೂ ವಿನಯಶಾಲಿಗಳಾದ ಪರಿಚಾರಕರಿಂದಲೂ ಕೂಡಿಕೊಂಡು ಸೂರ್ಯನಂತೆ ತನ್ನ ದೇಹಕಾಂತಿಯಿಂದ ಬೆಳಗುತ್ತಾ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

ಪ್ರಸ್ಥಾಪ್ಯ ಪುಷ್ಕರಂ ರಾಜನ್ ವಿತ್ತವಂತಮನಾಮಯಮ್ ।
ಪ್ರವಿವೇಶ ಪುರಂ ರಮ್ಯಮತ್ಯರ್ಥಮುಪಶೋಭಿತಮ್ ॥೩೦॥

ರಾಜನೇ ಪುಷ್ಕರನನ್ನು ಅವನ ಧನದ ಜೊತೆಯಲ್ಲಿ ಏನೂ ಅಪಾಯವಾಗದಂತೆ ಹಿಂದಕ್ಕೆ ಕಳುಹಿಸಿ ನಳನು ಬಹಳವಾಗಿ ಅಲಂಕರಿಸಿಲ್ಪಟ್ಟಿದ್ದ ತನ್ನ ಸುಂದರವಾದ ಪಟ್ಟಣವನ್ನು ಪ್ರವೇಶಿಸಿದನು.

ಪ್ರವಿಶ್ಯ ಸಾಂತ್ವಯಾಮಾಸ ಪೌರಾನ್ ಸ ನಿಷಧಾಧಿಪಃ ।
ಹಿತೇಷು ಚೈಷಾಂ ಸತತಂ ಪಿತೇವಾವಹಿತೋಽಭವತ್ ॥೩೧॥

ಆ ನಿಷಧಾಧಿಪನು ತನ್ನ ಪಟ್ಟಣವನ್ನು ಪ್ರವೇಶಿಸಿ ಪೌರರನ್ನು ಸಮಾಧಾನಗೊಳಿಸಿದನು. ಮತ್ತು ತಂದೆಯಂತೆ ಸತತವಾಗಿ ಅವರ ಹಿತದಲ್ಲಿ ಆಸಕ್ತನಾಗಿದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

## ಎಪ್ಪತ್ನಾಲ್ಕನೆಯ ಅಧ್ಯಾಯ

(ನಳಚರಿತೆಸಮಾಪ್ತಿ. ಯುಧಿಷ್ಠಿರನನ್ನು ಸಮಾಧಾನಪಡಿಸಿ ಬೃಹದಶ್ವಗಮನ. ಯುಧಿಷ್ಠಿರನಿಗೆ ಅರ್ಜುನನನ್ನು ನೋಡಿವ ತವಕ.)

### ಬೃಹದಶ್ವಃ

ಪ್ರಯಾತೇ ಪುಷ್ಕರೇ ಹೃಷ್ಟೇ ವಸನ್ ಹೃಷ್ಟಮಹೋತ್ಸವೇ ।
ಮಹತ್ಯಾ ಸೇನಯಾ ರಾಜಾ ಧನೇನ ಚ ಸುತೈಃ ಸಹ ॥೧॥

ಸುತಾಂ ಪ್ರಸ್ಥಾಪಯಾಮಾಸ ಪುಣ್ಯಶ್ಲೋಕಾಯ ಧೀಮತೇ ।

ಪುಷ್ಕರನು ಪ್ರಯಾಣಮಾಡಿದ ಮೇಲೆ ಪುಷ್ಟವಾದ ನಗರದಲ್ಲಿ ನಳನು ಮಹೋತ್ಸವಗಳ ಜೊತೆಯಲ್ಲಿ ವಾಸಮಾಡುತ್ತಿರಲು, ಮಹೋತ್ಸವಗಳ ಜೊತೆ ವಾಸ ಮಾಡುವವನು ಯಾರು? ಭೀಮರಾಜನು ಮೇಧಾವಿಯಾದ ಪುಣ್ಯಶ್ಲೋಕನಾದ ನಳನಿಗೆ ದೊಡ್ಡಸೈನ್ಯದ ಜೊತೆಯಲ್ಲಿ ತನ್ನ ಮಕ್ಕಳನ್ನು ಜೊತೆಮಾಡಿ ದಮಯಂತಿಯನ್ನು ಕಳುಹಿಸಿಕೊಟ್ಟನು.

ದಮಯಂತೀಮಪಿ ಪಿತಾ ಸತ್ಕೃತ್ಯ ಪರವೀರಹಾ ।
ಪ್ರಾಸ್ಥಾಪಯದಮೇಯಾತ್ಮಾ ಭೀಮೋ ಭೀಮಪರಾಕ್ರಮಃ ॥೨॥

ಶತ್ರುಸಂಹಾರಕನೂ ಭಯಂಕರ ಪರಾಕ್ರಮವುಳ್ಳವನೂ ಅಮೇಯಾತ್ಮನೂ ಆದ ತಂದೆಯಾದ ಭೀಮನು ಮಗಳಾದ ದಮಯಂತಿಯನ್ನು ಸತ್ಕರಿಸಿ ಕಳುಹಿಸಿಕೊಟ್ಟನು.

ಆಗತಾಯಾಂ ತು ವೈದರ್ಭ್ಯಾಂ ಸಪುತ್ರಾಯಾಂ ನಳೋ ನೃಪಃ ।
ವರ್ತಯಾಮಾಸ ಮುದಿತೋ ದೇವರಾಡಿವ ನಂದನೇ ॥೩॥

ದಮಯಂತಿಯು ಮಕ್ಕಳಜೊತೆಯಲ್ಲಿ ಹಿಂದಿರುಗಿದ ಮೇಲೆ ನಳಮಹಾರಾಜನು ನಂದನವನದಲ್ಲಿ ಇಂದ್ರನಂತೆ ಸಂತೋಷದಿಂದ ಇದ್ದನು.

ತಥಾ ಪ್ರಕಾಶತಾಂ ಯಾತೋ ಜಂಬೂದ್ವೀಪೇ ಚ ರಾಜಸು ।
ಪುನಃ ಸ್ವೇ ನ್ಯವಸದ್ರಾಜ್ಯೇ ಪ್ರತ್ಯಾಹೃತ್ಯ ಮಹಾಯಶಾಃ ॥೪॥

ಜಂಬೂದ್ವೀಪದ ರಾಜರುಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಮಹಾಕೀರ್ತಿಶಾಲಿಯಾದ ಅವನು ತನ್ನ ರಾಜ್ಯದಲ್ಲಿ ಪುನಃವಾಸಮಾಡಿದನು.

ಈಜೇ ಚ ವಿವಿಧೈರ್ಯಜ್ಞೈರ್ವಿಧಿವತ್ ಸಾಪ್ತದಕ್ಷಿಣೈಃ ।
ತಥಾ ತ್ವಮಪಿ ರಾಜೇಂದ್ರ ಸಸುಹೃದ್‌ದ್ರಕ್ಷ್ಯಸೇಽಚಿರಾತ್ ॥೫॥

ಬಹಳ ದಕ್ಷಿಣೆಗಳನ್ನುಕೊಟ್ಟು ವಿಧಿಪೂರ್ವಕವಾಗಿ ಅನೇಕ ಯಜ್ಞಗಳನ್ನು ಆಚರಿಸಿದನು. ರಾಜೇಂದ್ರನಾದ ಯುಧಿಷ್ಠಿರನೇ ನೀನೂ ಸಹ ಅಲ್ಪಸಮಯದಲ್ಲಿಯೇ ನಿನ್ನ ಆಪ್ತರ ಜೊತೆಯಲ್ಲಿ ಅರ್ಜುನನನ್ನು ನೋಡುವಿ.

ದುಃಖಮೇತಾದೃಶಂ ಪ್ರಾಪ್ತೋ ನಳಃ ಪರಪುರಂಜಯಃ ।
ದೇವನೇನ ನರಶ್ರೇಷ್ಠಃ ಸಭಾಯೋ೯ ಭರತರ್ಷಭ ॥೬॥

ಭರತರ್ಷಭನೇ ನರಶ್ರೇಷ್ಠನೂ ಪರಪುರಂಜಯನೂ ಆದ ನಳನು ದ್ಯೂತವನ್ನು ಆಡಿ ತನ್ನ ಪತ್ನಿಯ ಜೊತೆಯಲ್ಲಿ ಇಂತಹ ದುಃಖಕ್ಕೆ ಈಡಾದನು.

ಏಕಾಕಿನೈವ ಸುಮಹನ್ನಳೇನ ಪೃಥಿವೀಪತೇ ।
ದುಃಖಮಾಸಾದಿತಂ ಘೋರಂ ಪ್ರಾಪ್ತಶ್ಚಾಭ್ಯುದಯಃ ಪುನಃ ॥೭॥

ಪೃಥ್ವೀಪತಿಯೇ ನಳನು ಏಕಾಕಿಯಾಗಿಯೇ ಇಂತಹ ಘೋರವಾದ ಮತ್ತು ದೊಡ್ಡದಾದ ದುಃಖವನ್ನು ಹೊಂದಿ ಪುನಃ ಅಭ್ಯುದಯವನ್ನು ಪಡೆದನು.

ತ್ವಂ ಪುನರ್ಭ್ರಾತೃಸಹಿತಃ ಕೃಷ್ಣಯಾ ಚೈವ ಪಾಂಡವ ।
ರಮಸೇಽಸ್ಮಿನ್ ಮಹಾರಣ್ಯೇ ಧರ್ಮಮೇವಾನುಚಿಂತಯನ್ ॥೮॥

ಎಲೈ ಪಾಂಡವನೇ ನೀನಾದರೂ ಈ ದೊಡ್ಡ ಅರಣ್ಯದಲ್ಲಿ ಸಹೋದರರಿಂದ ಸಹಿತನಾಗಿ ದ್ರೌಪದಿಯಿಂದ ಸಹಿತನಾಗಿ ಧರ್ಮವನ್ನೇ ಆಚರಿಸುತ್ತಾ ಮತ್ತು ಚಿಂತಿಸುತ್ತಾ ಸುಖದಿಂದ ಇದ್ದೀಯೆ.

ಬ್ರಾಹ್ಮಣೈಶ್ಚ ಮಹಾಭಾಗೈರ್ವೇದವೇದಾಂಗಪಾರಗೈಃ ।
ನಿತ್ಯಮನ್ವಾಸ್ಯಸೇ ರಾಜನ್ ತತ್ರ ಕಾ ಪರಿದೇವನಾ ।
ಇತಿಹಾಸಮಿಮಂ ಚಾಪಿ ಕಲಿನಾಶನಮುಚ್ಯತೇ ॥೯॥

ಎಲೈ ರಾಜನೇ, ವೇದವೇದಾಂಗಪಾರಂಗತರಾದ ಮಹಾನುಭಾವರಾದ ಬ್ರಾಹ್ಮಣರು ನಿತ್ಯವೂ ನಿನ್ನನ್ನು ಸೇವಿಸುತ್ತಿದ್ದಾರೆ. ನೀನು ಸಂತಾಪಪಡುವುದಕ್ಕೆ ಏನು ಕಾರಣವಿದೆ? ಈ ನಳನ ಇತಿಹಾಸವನ್ನು ಕಲಿನಾಶನವೆಂದು ಹೇಳುತ್ತಾರೆ.

ಶಕ್ಯ ಮಾಶ್ವಸಿತುಂ ಶ್ರುತ್ವಾ ತದ್ವಿಧೇನ ವಿಶಾಂಪತೇ ।
ಅಸ್ಥಿರತ್ವಂ ಚ ಸಂಚಿಂತ್ಯ ಪುರುಷಾರ್ಥಸ್ಯ ನಿತ್ಯದಾ ॥೧೦॥

ತಸ್ಯಾಪಾಯೇ ವ್ಯಯೇ ಚೈವ ತದಾಶ್ವಾಸಿತುಮರ್ಹಸಿ ।

ಎಲೈ ರಾಜನೇ, ಈ ಕಥೆಯನ್ನು ಕೇಳಿ ನಿನ್ನಂತಹವನು ಸಮಾಧಾನವನ್ನು ತಂದುಕೊಳ್ಳಬೇಕು. ಸಂಪತ್ತು ಯಾವಾಗಲೂ ಅಸ್ಥಿರವೆಂದೂ ಅದು ನಾಶವಾದರೂ ಅಥವಾ ಹ್ರಾಸವಾದರೂ ಸಂತಾಪಕಾರಕವೆಂದೂ ತಿಳಿದು ಸಮಾಧಾನವನ್ನು ತಂದುಕೊಳ್ಳಬೇಕು.

ಯೇ ಚೈತತ್ ಕಥಯಿಷ್ಯಂತಿ ನಳಸ್ಯ ಚರಿತಂ ಮಹತ್ ।
ಶ್ರೋಷ್ಯಂತಿ ಚಾಪ್ಯಭೀಕ್ಷ್ಣಂ ಯೇ ನಾಲಕ್ಷ್ಮೀಸ್ತಾನ್ ಭಜಿಷ್ಯತಿ ।
ಅರ್ಥಾಶ್ಚಾಸ್ಯೋಪಪದ್ಯಂತೇ ಧನ್ಯತಾಂ ಚ ಗಮಿಷ್ಯತಿ ॥೧೧॥

ಯಾರು ಈ ನಳನ ದೊಡ್ಡ ಚರಿತ್ರೆಯನ್ನು ಹೇಳುವರೋ ಮತ್ತು ಯಾರು ಸತತವಾಗಿ ಕೇಳುವರೋ ಅವರಿಗೆ ಅಲಕ್ಷ್ಮಿಯು ಬಂದು ಸೇರುವುದಿಲ್ಲ. ಧನವು ಬಂದು ಅವರನ್ನು ಸೇರುತ್ತದೆ. ಅವರು ಧನ್ಯರಾಗುವರು.

ಕಾರ್ಕೋಟಕಸ್ಯ ನಾಗಸ್ಯ ದಮಯಂತ್ಯಾ ನಳಸ್ಯ ಚ ।
ಋತುಪರ್ಣಸ್ಯ ರಾಜರ್ಷೇಃ ಕೀರ್ತನಂ ಕಲಿನಾಶನಮ್ ॥೧೨॥

ಕಾರ್ಕೋಟಕನಾಗನ ದಮಯಂತಿಯ ನಳನ ಮತ್ತು ರಾಜರ್ಷಿಯಾದ ಋತುಪರ್ಣನ ಕೀರ್ತನೆಯು ಕಲಿನಾಶನವಾದುದು.

ಇತಿಹಾಸಮಿಮಂ ಶ್ರುತ್ವಾ ಪುರಾಣಂ ಶಶ್ವದುತ್ತಮಮ್ ।
ಪುತ್ರಾನ್ ಪೌತ್ರಾನ್ ಪಶೂಂಶ್ಚಾಪಿ ವೇತ್ಸ್ಯತೇ ನೃಷು ಚಾಗ್ರ್ಯತಾಮ್ ॥

ಆರೋಗಾಃ ಪ್ರೀತಿಮಂತಶ್ಚ ಭವಿಷ್ಯಂತಿ ನ ಸಂಶಯಃ ॥೧೪॥

ಈ ಶ್ರೇಷ್ಠವಾದ ಪ್ರಾಚೀನವಾದ ಇತಿಹಾಸವನ್ನು ಯಾವಾಗಲೂ ಕೇಳಿದರೆ ಪುತ್ರರನ್ನೂ ಪೌತ್ರರನ್ನೂ ಪಶುಗಳನ್ನೂ ಮನುಷ್ಯರಲ್ಲಿ ಶ್ರೇಷ್ಠತ್ವವನ್ನೂ ಪಡೆಯುವನು. ಕೇಳುವವರು ರೋಗರಹಿತರೂ ಸಂತೋಷಯುಕ್ತರೂ ಆಗುವರು. ಇದರಲ್ಲಿ ಸಂಶಯವಿಲ್ಲ.

ಭಯಂ ಪಶ್ಯಸಿ ಯಚ್ಚ ತ್ವಮಾಹ್ವಯಿಷ್ಯಂತಿ ಮಾಂ ಪುನಃ ।
ಅಕ್ಷಜ್ಞ ಇತಿ ತತ್ತೇಽಹಂ ನಾಶಯಿಷ್ಯಾಮಿ ಪಾರ್ಥಿವ ॥೧೫॥

ಎಲೈ ರಾಜನೇ, ನೀನು ಅಕ್ಷಜ್ಞನಾದ ಶಕುನಿಯು ಪುನಃ ನನ್ನನ್ನು ದ್ಯೂತಕ್ಕೆ ಕರೆಯುವನು ಎಂದು ಯಾವ ಭಯವನ್ನು ಪಡುತ್ತಿದ್ದೀಯೊ ಅದನ್ನು ನಾನು ನಾಶಮಾಡುವೆನು.

ವೇದಾಕ್ಷಹೃದಯಂಕೃತ್ಸ್ನಮಹಂ ಸತ್ಯಪರಾಕ್ರಮ ।
ಉಪಪದ್ಯಸ್ವ ಕೌಂತೇಯ ಪ್ರಸನ್ನೋಽಹಂ ವದಾನಿ ತೇ ॥೧೬॥

ಎಲೈ ಸತ್ಯಪರಾಕ್ರಮನೇ, ನಾನು ಸಮಗ್ರವಾದ ಅಕ್ಷಹೃದಯವನ್ನು ತಿಳಿದಿದ್ದೇನೆ ಕೌಂತೇಯನೇ ಸಿದ್ಧನಾಗು ನಾನು ಪ್ರಸನ್ನನಾಗಿ ನಿನಗೆ ಅದನ್ನು ಉಪದೇಶಿಸುತ್ತೇನೆ.

ವೈಶಂಪಾಯನಃ

ತತೋ ಹೃಷ್ಟಮನಾ ರಾಜಾ ಬೃಹದಶ್ವಮುವಾಚ ಹ ।
ಭಗವನ್ನಕ್ಷಹೃದಯಂ ಜ್ಞಾತುಮಿಚ್ಛಾಮಿ ತತ್ತ್ವತಃ ॥೧೭॥

ಆಗ ಮನಸ್ಸಂತೋಷವನ್ನು ಹೊಂದಿದ ಯುಧಿಷ್ಠಿರನು ಬೃಹದಶ್ವರನ್ನು ಕುರಿತು ಪೂಜ್ಯರೇ ಅಕ್ಷಹೃದಯವನ್ನು ನಾನು ಚೆನ್ನಾಗಿ ತಿಳಿಯಲು ಇಷ್ಟಪಡುತ್ತೇನೆ ಎಂದು ಹೇಳಿದನು.

ತದಾಽಕ್ಷಹೃದಯಂ ಪ್ರಾದಾತ್ ಪಾಂಡವಾಯ ಮಹಾತ್ಮನೇ ।
ಲಬ್ಧ್ವಾ ಚ ಪಾಂಡವೋ ರಾಜಾ ವಿಶೋಕಃ ಸಮಪದ್ಯತ ॥೧೮॥

ಆಗ ಮಹಾತ್ಮನಾದ ಪಾಂಡವನಿಗೆ ಬೃಹದಶ್ವನು ಅಕ್ಷಹೃದಯವನ್ನು ಉಪದೇಶಿಸಿದನು. ಆ ಉಪದೇಶವನ್ನು ಪಡೆದ ಪಾಂಡವನಾದ ಧರ್ಮರಾಜನು ಶೋಕರಹಿತನಾದನು.

ಕಥಾಮೇವಂ ತಥಾ ಕೃತ್ವಾ ನಳಸ್ಯ ಚರಿತಾಶ್ರಯಾಮ್ ।
ಆಮಂತ್ರ್ಯ ಪಾಂಡವಾನ್ ಸರ್ವಾನ್ ಬೃಹದಶ್ವೋ ಜಗಾಮ ಹ ॥

ನಳನಿಗೆ ಸಂಬಂಧಿಸಿದ ಈ ಚರಿತ್ರೆಯನ್ನು ಈ ರೀತಿಯಲ್ಲಿ ಹೇಳಿ ಬೃಹದಶ್ವರು ಎಲ್ಲಾ ಪಾಂಡವರ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟರು.

ಬೃಹದಶ್ವೇ ಗತೇ ಪಾರ್ಥಮಪ್ರೌಷೀತ್ ಸವ್ಯಸಾಚಿನಮ್ ।
ವರ್ತಮಾನಂ ತಪಸ್ಯುಗ್ರೇ ವಾಯುಭಕ್ಷಂ ಮನೀಷಿಣಮ್ ॥೨೦॥

ಬ್ರಾಹ್ಮಣೇಭ್ಯಸ್ತಪಸ್ವಿಭ್ಯಃ ಸಂಪತದ್ಭ್ಯಸ್ತತಸ್ತತಃ ।
ತೀರ್ಥಶೈಲವರೇಭ್ಯಶ್ಚ ಸಮೇತೇಭ್ಯೋ ದೃಢವ್ರತಃ ॥೨೧॥

ಬೃಹದಶ್ವರು ಹೊರಟು ಹೋದಮೇಲೆ ದೃಢವ್ರತನಾದ ಧರ್ಮರಾಜನು ಅಲ್ಲಲ್ಲಿ ಸಂಚರಿಸುವ ತೀರ್ಥ ಮತ್ತು ಪರ್ವತಗಳಲ್ಲಿ ಒಂದುಗೂಡುವ ತಪಸ್ವಿಗಳಾದ ಬ್ರಾಹ್ಮಣರಿಂದ ಮೇಧಾವಿಯಾದ ಅರ್ಜುನನು ಉಗ್ರವಾದ ತಪಸ್ಸಿನಲ್ಲಿ ನಿರತನಾಗಿದ್ದಾನೆ ಎಂದೂ ವಾಯುಭಕ್ಷನಾಗಿದ್ದಾನೆ ಎಂದೂ ಕೇಳಿ ತಿಳಿದನು.

ಇತಿ ಪಾರ್ಥೋ ಮಹಾಬಾಹುರುದಾರಂ ತಪ ಆಸ್ಥಿತಃ ।
ತಥಾ ನ ದೃಷ್ಟಪೂರ್ವೋನ್ಯಃ ಕಶ್ಚಿದುಗ್ರತಪಾ ಇತಿ ॥೨೨॥

ಮಹಾಬಾಹುವಾದ ಪಾರ್ಥನು ಹಿಂದೆ ಬೇರೆ ಯಾರೂ ಮಾಡದಿದ್ದಂತೆ ಉಗ್ರವಾದ ಮತ್ತು ಉತ್ಕೃಷ್ಟವಾದ ತಪಸ್ಸನ್ನು ಮಾಡುತ್ತಿದ್ದಾನೆ ಎಂದು ಕೇಳಿದನು.

ಯಥಾ ಧನಂಜಯಃ ಪಾರ್ಥಃ ತಪಸ್ವೀ ನಿಯತವ್ರತಃ ।
ಮುನಿವೇಷಧರಃ ಶ್ರೀಮಾನ್ ಧರ್ಮೋ ವಿಗ್ರಹವಾನಿವ ॥೨೩॥

ಹಾಗೆಯೇ ಧನಂಜಯನಾದ ಪಾರ್ಥನು ನಿಯತವ್ರತನಾಗಿ ತಪಸ್ವಿಯಾಗಿ ಕಾಂತಿಯುಕ್ತನಾಗಿ ಮುನಿವೇಷವನ್ನು ಧರಿಸಿ ಶರೀರವನ್ನು ಧರಿಸಿದ ಧರ್ಮದಂತೆಯೇ ಕಾಣುತ್ತಿದ್ದಾನೆ ಎಂದೂ ಕೇಳಿದನು.

ತಂ ಶ್ರುತ್ವಾ ಪಾಂಡವೋ ರಾಜನ್ ತಪ್ಯಮಾನಂ ಮಹಾವನೇ ।
ಅನ್ವಶೋಚತ ಕೌಂತೇಯಃ ಪ್ರಿಯಂ ವೈ ಭ್ರಾತರಂ ಜಯಮ್ ॥೨೪॥

ಎಲೈ ಜನಮೇಜಯನೇ ಮಹಾರಣ್ಯದಲ್ಲಿ ತಪಸ್ಸಿನಲ್ಲಿ ನಿರತನಾಗಿದ್ದ ಅರ್ಜುನನನ್ನು ಕೇಳಿ ಕುಂತೀಪುತ್ರನಾದ ಧರ್ಮರಾಜನು ತನ್ನ ಪ್ರಿಯ ಸಹೋದರನಾದ ಅರ್ಜುನನನ್ನು ಕುರಿತು ಚಿಂತಿಸಿ ಶೋಕಪಟ್ಟನು.

ದಹ್ಯಮಾನೇನ ತು ಹೃದಾ ಶರಣಾರ್ಥೀ ಮಹಾವನೇ ।
ಬ್ರಾಹ್ಮಣಾನ್ ವಿವಿಧಜ್ಞಾನಾನ್ ಪರ್ಯಪೃಚ್ಛದ್ಯುಧಿಷ್ಠಿರಃ ॥೨೫॥

ಮಹಾರಣ್ಯದಲ್ಲಿ ಶರಣಾರ್ಥಿಯಾದ ಧರ್ಮರಾಜನು ಭ್ರಾತೃಶೋಕದಿಂದ ದುಃಖಪಡುತ್ತಿದ್ದ ಮನಸ್ಸಿನಿಂದ ಕೂಡಿದವನಾಗಿ ಬಹುವಿಧಜ್ಞಾನವುಳ್ಳ ಬ್ರಾಹ್ಮಣರಲ್ಲಿ ಅರ್ಜುನನ ಕ್ಷೇಮವನ್ನು ವಿಚಾರಿಸಿದನು.

ಪ್ರತಿಗೃಹ್ಯಾಕ್ಷಹೃದಯಂ ಕುಂತೀಪುತ್ರೋ ಯುಧಿಷ್ಠಿರಃ ।
ಆಸೀದ್ಧೃಷ್ಟಮನಾ ರಾಜಾ ಭೀಮಸೇನಾದಿಭಿರ್ಯುತಃ ॥೨೬॥

ಕುಂತೀಪುತ್ರನಾದ ಯುಧಿಷ್ಠಿರರಾಜನು ಅಕ್ಷಹೃದಯವನ್ನು ಸ್ವೀಕರಿಸಿ ಭೀಮಸೇನಾದಿಗಳ ಜೊತೆಯಲ್ಲಿ ಸಂತೋಷದಿಂದ ಇದ್ದನು.

ಸ್ವಭ್ರಾತೄನ್ ಸಹಿತಾನ್ ಪಶ್ಯನ್ ಕುಂತೀಪುತ್ರೋ ಯುಧಿಷ್ಠಿರಃ ।
ಅಪಶ್ಯನ್ನರ್ಜುನಂ ತತ್ರ ಬಭೂವಾಶ್ರುಪರಿಪ್ಲುತಃ ।
ಸಂತಪ್ಯಮಾನಃ ಕೌಂತೇಯೋ ಭೀಮಸೇನಮುವಾಚ ಹ ॥೨೭॥

ಕುಂತೀಪುತ್ರನಾದ ಯುಧಿಷ್ಠಿರನು ತನ್ನ ಉಳಿದ ತಮ್ಮಂದಿರನ್ನು ತನ್ನ ಜೊತೆಯಲ್ಲಿ ನೋಡಿ ಅರ್ಜುನನನ್ನು ಕಾಣದೆ ಅಶ್ರುಪೂರ್ಣನಯನನಾದನು. ಕೌಂತೇಯನಾದ ಧರ್ಮರಾಜನು ಸಂತಾಪವನ್ನು ಪಡುತ್ತಾ ಭೀಮಸೇನನನ್ನು ಕುರಿತು ಮಾತನಾಡಿದನು.

ಕದಾ ದ್ರಕ್ಷ್ಯಾಮಿ ವೈ ಭೀಮ ಕುಂತೀಪುತ್ರಂ ಧನಂಜಯಮ್ ।
ಮತ್ಕೃತೇ ಹಿ ಕುರುಶ್ರೇಷ್ಠಃ ತಪ್ಯತೇ ದುಶ್ಚರಂ ತಪಃ ॥೨೮॥

ಎಲೈ ಭೀಮನೇ ಕುಂತೀಪುತ್ರನಾದ ಧನಂಜಯನನ್ನು ನಾನು ಯಾವಾಗ ನೋಡುವೆನು? ಕುರುಶ್ರೇಷ್ಠನಾದ ಅವನು ನನ್ನ ಸಲುವಾಗಿ ದುಶ್ಚರವಾದ ತಪಸ್ಸನ್ನು ಆಚರಿಸುತ್ತಿದ್ದಾನೆ.

ತಸ್ಯಾಕ್ಷಹೃದಯಜ್ಞಾನಮಾಖ್ಯಾಸ್ಯಾಮಿ ಕದಾ ನ್ವಹಮ್ ।
ಸ ಹಿ ಶ್ರುತ್ವಾಽಕ್ಷಹೃದಯಂ ಸಮುಪಾತ್ತಂ ಮಯಾ ಪ್ರಭುಃ ।
ಪ್ರಹೃಷ್ಟಃ ಪುರುಷವ್ಯಾಘ್ರೋ ಭವಿಷ್ಯತಿ ನ ಸಂಶಯಃ ॥೨೯॥

ನಾನು ಅಕ್ಷಹೃದಯವನ್ನು ಯಾವಾಗ ಅವನಿಗೆ ಹೇಳುವೆನು? ಪ್ರಭುವೂ ಪುರುಷವ್ಯಾಘ್ರನೂ ಆದ ಅವನು ಅಕ್ಷಹೃದಯವನ್ನು ನನ್ನಿಂದ ಕೇಳಿ ಚೆನ್ನಾಗಿಸ್ವೀಕರಿಸಿ ಸಂತೋಷಯುಕ್ತನಾಗುವನು ಎಂಬ ವಿಷಯದಲ್ಲಿ ಸಂಶಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಸಪ್ತತಿತಮೋಽಧ್ಯಾಯಃ ॥
॥ ತೀರ್ಥಯಾತ್ರಾಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★